ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ಟ್ ಆದ್ದು. [ನಂ. 1.

ಬೆಂಗಳೂರು, ಗುರುವಾರ, ಜನವರಿ ತಾ|| 9, ಸನ್ 1896

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಜ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆವಿನ್ಯೂ.

ತಾರೀಖು 9ನೇ ಡಿಸೆಂಬರ್ 1895.

ನಂ. 5300.—ರೆ. 2057.—1888ನೇ ಇಸವಿ IVನೇ ರೆಗ್ಯುಲೇಷನ್ ಆದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಮೈಸೂರು ಸರ್ಕಾರದವರು, ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳು ಮದ್ದಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿಗೆ ಸೇರಿದ ಸರ್ವಮಾನ್ಯ ಗೊಲ್ಲಹಳ್ಳಿ ಗ್ರಾಮಕ್ಕೆ ಲಗಾವು ಮಾಡಲ್ಪಡತಕ್ಕದ್ದೆಂದು ಆಜ್ಞಾಪಿಸುತ್ತಾರೆ.

ತಾರೀಖು 10ನೇ ಡಿಸೆಂಬರ್ 1895.

ನಂ. 5364.—ಫೈ. 294.—ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ,—ಇದರಡಿ ಬರುವ ಜಾಸ್ತಿ ಅಂಶಗಳು ಮತ್ತು ಬದಲಾವಣೆಗಳು ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳಲ್ಲಿ ದಾಖಲ್ ಮಾಡಲ್ಪಡತಕ್ಕದ್ದು.

I. 518ನೇ ಆರ್ಟಿಕಲ್‌ಗೆ ಬದಲಾಗಿ ಸೇರಿಸಲ್ಪಡತಕ್ಕದ್ದೇನಂದರೆ,—"ಆರ್ಟಿಕಲ್ 518 ಯ. ಕೌನ್ಸಲಿನ ಯಾವ ಮೆಂಬರಾದರೂ ರೈಲ್ ಮೇಲೆ 20 ಮೈಲಿಗಳಿಗೆ ಕಮ್ಮಿ ಯಿಲ್ಲದೆ ವಂದೇ ಪ್ರಯಾಣ ಮಾಡಬೇಕಾಗಿದ್ದು ಅಂಥಾ ಪ್ರಯಾಣದ ಆಖೈರಿನಲ್ಲಿ ಅವರ ಉಪಯೋಗಕ್ಕೋಸ್ಕರವಾಗಿ ಬೇಕಾದ ವಾಹನ ಸಾಧನಗಳನ್ನು ಕಳುಹಿಸಿದಾಗ ಅವರಿಗೆ 525. ಯ. ಆರ್ಟಿಕಲ್ ಅನುಸರಿಸಿ ಸಲ್ಲಬೇಕಾದ ಸಾಧಾರಣ ಅಲೋವೆನ್ಸ್ ದೇಖೀಲ್ ಅಂಥಾ ವಾಹನ ಸಾಧನವೆಂದರೆ ವಂದು ಗಾಡಿ ಯರಡು ಜೋಡಿ ಕುದರೆಗಳನ್ನು ಕಳುಹಿಸುವ ಬಗ್ಗ್ಯಾಗಿ ತಗಲುವ ಕರಾರುವಾಕಾ ಲಾಗವಡು ಸುದಾ ಪಡಿಯುವ ಬಗ್ಗೆ ಅರ್ಹರಾಗಿರತಕ್ಕದ್ದು.

"518 ಬಿ. ಯಾವದಾದರೂ ವಬ್ಬ ಆಫಿಸರು, ಅವರ ಮೇಲ್‌ದರ್ಜೆ ಆಫಿಸರರ ಜನರಲ್ ಅಥವಾ ಸ್ಪೆಷಲ್ ಮಂಜೂರಾತಿಗೆ ವಳಪಟ್ಟು ರೈಲ್ ಮಾರ್ಗವಾಗಿ 20 ಮೈಲಿಗಳಿಗೆ ಕಮ್ಮಿ ಇಲ್ಲದೆ ವಂದೇ ಪ್ರಯಾಣ ಮಾಡಬೇಕಾಗಿದ್ದು ಅಂಥಾ ಪ್ರಯಾಣದ ಆಖೈರಿನಲ್ಲಿ ಅವರ ಉಪಯೋಗಕ್ಕೋಸ್ಕರವಾಗಿ ಬೇಕಾದ ವಾಹನ ಸಾಧನಗಳನ್ನು ಕಳುಹಿಸಿದಾಗ ಅವರಿಗೆ 522ನೇ ಆರ್ಟಿಕಲ್ ಅನುಸರಿಸಿ ಸಲ್ಲಬೇಕಾದ ಸಾಧಾರಣ ಅಲೋವೆನ್ಸ್ ದೇಖೀಲ್ ಅಂಥಾ ವಾಹನ ಸಾಧನವನ್ನು ಕಳುಹಿಸುವ ಬಗ್ಗ್ಯಾಗಿ ತಗಲುವ ಕರಾರುವಾಕ ಲಾಗವಡು ಸುದಾ ಪಡಿಯುವ ಬಗ್ಗೆ ಅರ್ಹರಾಗಿರತಕ್ಕದ್ದು.

ಈ ಸಬ್ ಆರ್ಟಿಕಲ್‌ನಲ್ಲಿ "ವಾಹನ ಸಾಧನ" ಅಂದರೆ—

(1) ಡಿಸ್ಟ್ರಿಕ್ಟ್ ಜಡ್ಜಿಗಳು, ಡೆಪ್ಯುಟಿ ಕಮಿಷನರಗಳು ಮತ್ತು ಎಗ್ಜಿಕ್ಯೂಟಿವ್ ಇಂಜನೀಯರ್‌ಗಳು ಅಥವಾ ರೆವಿನ್ಯೂ, ಜುಡಿಷಿಯಲ್ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳಲ್ಲಿ ಇವರುಗಳಿಗೆ ಮೇಲ್ಪಟ್ಟ ದರ್ಜೆವುಳ್ಳ ಆಫಿಸರರು ಅಥವಾ ಯಾವದಾದರೂ ಇತರ ಗೊತ್ತಾದ ಆಫಿಸರ್‌ಗಳು, ಇವರುಗಳ ವಿಷಯದಲ್ಲಿ, ವಂದು ಗಾಡಿ ಯರಡು ಕುದರೆಗಳು ಯಂದು ಅನ್ವಯಿಸತಕ್ಕದ್ದು.

(2) ಇತರರ ವಿಷಯದಲ್ಲಿ, ವಂದು ಸವಾರಿ ಕುದರೆಯಂದು ಅನ್ವಯಿಸತಕ್ಕದ್ದು.

ಷರಾ 1.—ವಾಹೆಯಾನಾ ಸರ್ಕಿಟ್ ಭತ್ಯವನ್ನು ಖಾಯಂ ಆಗಿ ಪಡಿಯುವ ಯಾವ ಆಫಿಸರಾಗಲಿ ಈ ಸಬ್ ಆರ್ಟಿಕಲಿನ ಪ್ರಯೋಜನಗಳಿಗೆ ಅರ್ಹರಾಗಿರುವದಿಲ್ಲವು.

ಷರಾ 2.—ಈ ಸಬ್ ಆರ್ಟಿಕಲ್ ಅನುಸರಿಸಿ ಮೇಲ್ ದರ್ಜೆ ಆಫಿಸರರ ಮಂಜೂರಾತಿಯು ಸರ್ಕಾರದ ಕೆಲಸಗಳ ಅನುಕೂಲ್ಯತೆಗಳಿಗೋಸ್ಕರವೇ ಕೊಡಲ್ಪಡತಕ್ಕದ್ದು, ಹಾಗೆ ಕೊಟ್ಟಾಗ ಕಾರಣಗಳ ಸಮೇತವಾಗಿ ಗವರ್ನಮೆಂಟಿಗೆ ಜನರಲ್ ಇಲಾಖೆಯಲ್ಲಿ ತಕ್ಷಣ ತಿಳಿಸಲ್ಪಡಬೇಕು."

II. 525 ಯ. ಆರ್ಟಿಕಲ್‌ಗೆ ಬದಲಾಗಿ ಸೇರಿಸಲ್ಪಡಬೇಕಾದ್ದೇನಂದರೆ:—

"525 ಯ. ಕೌನ್ಸಲ್ಲಿನ ವೊಬ್ಬ ಮೆಂಬರು ರೈಲ್ ಮಾರ್ಗವಾಗಿ ಸರ್ಕಾರ್ ಕೆಲಸದ ಮೇಲೆ ಪ್ರಯಾಣ ಮಾಡಿದಾಗ ಅಂಥಾ ರೈಲ್ವೆ ಪ್ರಯಾಣಕ್ಕೋಸ್ಕರ ಅವರಿಗೆ ಸಲ್ಲಬೇಕಾದ್ದೇನಂದರೆ,—

(1) ಅವರಿಗೋಸ್ಕರ ಫಸ್ಟ್ ಕ್ಲಾಸ್ ಭಂಡಿಯು ವಂದು ಕಂಪಾರ್ಟ್‌ಮೆಂಟ್;

(2) ಖಾಸ್ ನೌಕರರಿಗೋಸ್ಕರ ನಾಲ್ಕು ಥರ್ಡ್ ಕ್ಲಾಸ್ ಚಾರ್ಜು; ಮತ್ತು

(3) ಖಾಸ್ ಸಾಮಾನಿಗೋಸ್ಕರ ಹತ್ತು ಮಣಕ್ಕೆ ಮೀರದ ತೇದಾದಿಗೆ ರೈಲ್ವೆ ಚಾರ್ಜು."

III. ಆರ್ಟಿಕಲ್ 528ರಲ್ಲಿ ನಮೂದಾದ ಯರಡನೇ ನಂಬರ್ ಅಪೆಂಡಿಕ್ಸಿನಲ್ಲಿ ಸೇರಿಸಲ್ಪಡಬೇಕಾದ್ದೇನಂದರೆ—"ಕೌನ್ಸಲ್ ಮೆಂಬರುಗಳಿಗೆ–ಭತ್ತ ಹತ್ತು ರೂಪಾಯಿ, ಮೈಲಿಭತ್ತ–ಮೈಲಿ ವಂದಕ್ಕೆ ಯಂಟಾಣೆ."

IV. ಆರ್ಟಿಕಲ್ 552ಕ್ಕೆ ಸೇರಿಸಲ್ಪಡಬೇಕಾದ್ದೇನಂದರೆ—"ಷರಾ—ಈ ಆರ್ಟಿಕಲ್ ಕೌನ್ಸಲಿನ ಮೆಂಬರುಗಳಿಗೆ ಅನ್ವಯಿಸತಕ್ಕದ್ದಲ್ಲವು."

ತಾರೀಖು 14ನೇ ಡಿಸೆಂಬರ್ 1895.

ತಪ್ಪು ತಿದ್ದುವಿಕೆ.

ನಂ. 5584.—ಫಾ. ಫೈ. 36—95; 1895ನೇ ಇಸವಿ ಜೂನ್ 19ನೇ ಮಾರ್ಕಂ 23538—ರೆ. 3437ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯೊಡನೆ ಛಾಯಿಷ್ಮಾಡಲ್ಪಟ್ಟು ಮೈಸೂರು ಗೆಜೆಟ್ಟಿನ 394ನೇ ಪುಟದಲ್ಲಿ ಛಾಪಿಸಲ್ಪಟ್ಟ ವುಂಬಳಿ ಬೈಲ್ ಸ್ಟೇಟ್ ಫಾರೆಸ್ಟ್‌ಗೆ ಸೇರಿದ 17ನೇ ನಂಬರ್ ಚೋರನಾಯಕಹಳ್ಳಿ ಬ್ಲಾಕಿನ ಚಕ್ಕು ಬಂದಿಗೆ ಬದಲಾಗಿ ಇದರಡಿ ಬರುವದನ್ನ ಸೇರಿಸತಕ್ಕದ್ದು:—

"ಉತ್ತರಕ್ಕೆ.—ತುಂಗಾನದಿಯ ಬಂದು ಶಾಖೆಯಾದ ಯಳೆಸಲು ಬಳಿಯಣ ಹಾಲಲಕ್ಕು ವೈದ್ಯ 18ನೇ ಸರ್ವೆ ನಂಬರಿನಿಂದ ಬಂದು ಸಾಫ್ ಮಾಡಿದ ಲೈನು ಹೊರಟು ಶಿವಮೊಗ್ಗಾ ಯಡೆಹಳ್ಳಿ ರಸ್ತೆಯ 7ನೇ ಮೈಲಿ 5ನೇ ಫರ್ಲಾಂಗ್ ವರಿಗೆ ಹೋಗುತ್ತದೆ.

"ಪೂರ್ವಕ್ಕೆ.—ಮೇಲಿನ ಪಾಯಿಂಟಿನಿಂದ ಸದರೀ ಲೈನ್ ಶಿವಮೊಗ್ಗಾ ಯಡೆಹಳ್ಳಿ ಮಾರ್ಗವಾಗಿ ಹೊರಟು 10ನೇ ಮೈಲಿ 5ನೇ ಫರ್ಲಾಂಗ್ ವರಿಗೆ ಹೋಗುತ್ತದೆ.

"ದಕ್ಷಿಣಕ್ಕೆ.—ಬಂದು ಸಾಫ್ ಮಾಡಿದ ಲೈನ್ ಶಿವಮೊಗ್ಗಾ ಯಡೆಹಳ್ಳಿ ರಸ್ತೆಯ 10ನೇ ಮೈಲಿ 5ನೇ ಫರ್ಲಾಂಗಿನಿಂದ ಹೊರಟು ಸಮುದ್ರಹಳ್ಳಿಯ 59ನೇ ಸರ್ವೇ ನಂಬರ್‌ವರಿಗೆ ಹೋಗುತ್ತದೆ.

"ಪಶ್ಚಿಮಕ್ಕೆ.—ಸದರೀ 59ನೇ ಸರ್ವೇ ನಂಬರಿನಿಂದ ಲೈನ್ ಹೊರಟು ಶುರುವಾದ ಸ್ಥಳಕ್ಕೆ ಬಂದು ಸೇರುತ್ತದೆ."

58

ತಾರೀಖು 18ನೇ ಡಿಸೆಂಬರ್ 1895.

ಕ್ಯಾಂಪ್ ನಂ. 46.—ರೆ.—ಮೈಸೂರು ಸರ್ವಿಸ್ ರೆಗ್ಯುಲೇಷರ್ಗಳ 172ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ ಕಮ್ಮಿಷನರ್ ಮೆಸ್ಟರ್ ಯಂ. ಚಂಗಯ್ಯಶೆಟ್ಟಿ ಬಿ. ಎ. ಯವರು, 1895ನೇ ಇಸವಿ ಡಿಸೆಂಬರ್ 19ನೇ ತಾರೀಖು ಲಾಗಾಯ್ತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಹನ್ನೆರಡು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 50.—ರೆ.—ಗುಂಡ್ಲುಪೇಟೆ ತಾಲ್ಲೂಕು ಕಸಬಾ ಹೋಬಳೀಗೆ ಹಾಲಿ ಶೇರಿರುವ ಇದರಡಿ ಕಂಡ ಗ್ರಾಮಗಳು ಅದೇ ತಾಲ್ಲೂಕು ತೆಲಸೂರು ಹೋಬಳಿಗೆ ವರ್ಗ ಮಾಡಲ್ಪಟ್ಟಿರುತ್ತೆ.—

1. ಹಳ್ಳದಪುರ
2. ಕಲ್ಲಹಳ್ಳಿ
3. ಕಬ್ಬಹಳ್ಳಿ
4. ಸಂಪಿಗೇಪುರ
5. ಪಡಗೂರು

ತಾರೀಖು 21ನೇ ಡಿಸೆಂಬರ್ 1895.

ನಂ. 5706.—ಫಾ. ಫೈ. 90—95.—ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕನ್ಸರವೇಟರ್ ಮೆಸ್ಟರ್ ಟಿ. ಅಬ್ದುಲ್ ಕರೀಂಯವರಿಗೆ, 1895ನೇ ಇಸವಿ ಅಕ್ಟೋಬರ್ 27ನೇ ಮೆ॥ ನಂ. 4055.—ಫಾ. 241ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಒಂದು ತಿಂಗಳು ಇಪ್ಪತ್ತು ದಿವಸಗಳ ಪ್ರಿವಿಲೀಜ್ ರಜಾವನ್ನ ಅವರು 1895ನೇ ಇಸವಿ ನವೆಂಬರ್ 8ನೇ ಮರ್ಸ್ಕಂ ಲಗಾಯ್ತು ಅದೇ ಇಸವಿ ಡಿಸೆಂಬರ್ 4ನೇ ಮರ್ಸ್ಕಂ ಪರಿಯಂತ ಅಂದರೆ 27 ದಿವಸಗಳು ಮಾತ್ರ ಉಪಯೋಗಿಸಿಕೊಂಡಿರುತ್ತಾರಾಗಿ ಉಳಿದ ಭಾಗ ಅಂದರೆ 23 ದಿವಸಗಳ ರಜಾ ಇದರ ದೆಶೆಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 23ನೇ ಡಿಸೆಂಬರ್ 1895.

ನಂ. 5768.—ರೆ. 2256.—ಶಿವಮೊಗ್ಗಾ ತಾಲ್ಲೂಕು ಅಮಲ್‌ದಾರ್ ಪಿ. ನಂಜುಂಡನಾಯಿಡುಯವರಿಗೆ, 1895ನೇ ಇಸವಿ ಅಕ್ಟೋಬರ್ 25ನೇ ಮರ್ಸ್ಕಂ 4065.—ರೆ. 1570ನೇ ನಂಬರ್ ಗವರ್ನಮೆಂಟ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ 40 ದಿವಸಗಳ ಪ್ರಿವಿಲೀಜ್ ರಜಾವನ್ನ, ಅವರು 1895ನೇ ಇಸವಿ ನವಂಬರ್ 8ನೇ ಮರ್ಸ್ಕು ಮಿನ ಮಧ್ಯಾನ್ಹಾತ್ಪರದಾರಭ್ಯ ಉಪಯೋಗಿಸಿಕೊಂಡು ಅದೇ ಇಸವಿ ಡಿಸೆಂಬರ್ 9ನೇ ಮರ್ಸ್ಕು ಮಿನ ಮಧ್ಯಾನ್ಹಾತ್ಪರ ಕೆಲಸದಮೇಲೆ ಹಾಜರಾಗಿರುತ್ತಾರಾಗಿ ಅವರಿಗೆ ಕೊಡಲ್ಪಟ್ಟ ರಜಾ ಪೈಕಿ ಉಳಿದಭಾಗ ಅಂದರೆ 9 ದಿವಸಗಳ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 28ನೇ ಡಿಸೆಂಬರ್ 1895.

ನಂ. 5736.—ರೆ. 2235.—ಘನತನ್ನು ಹೊಂದಿದ ಶ್ರೀಮನ್ಮ ಮಹಾರಾಣಿ ರೀಜಂಟರವರು, ಮೆಸ್ಟರ್ ಯಂ. ಶಾಮರಾವ್ ಯಂ. ಎ. ಯವರನ್ನೂ ಮತ್ತು ಮೆಸ್ಟರ್ ಅಂಬಳೆ ಸುಬ್ರಹ್ಮಣ್ಣಯ್ಯ ಬಿ. ಎ. ಯವರನ್ನೂ ಸುದಾ ಬಿ. ಷೆಡ್ಯೂಲಿನ ಪ್ರೊಬೇಷನರಿ ಅಸಿಸ್ಟೆಂಟ ಕಮ್ಮಿಷನರಾಗಿ ನೊಕರ್ರು ಮಾಡಿರುತ್ತಾರೆ.

ತಾರೀಖು 29ನೇ ಡಿಸೆಂಬರ್ 1895.

ನಂ. 5741.—ಫಾ. 380.—ಮೈಸೂರು ಸರ್ವಿಸ್ ರೆಗ್ಯುಲೇಷರ್ಗಳ 221ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕನ್ಸರವೇಟರ್ ಮೆಸ್ಟರ್ ಸಿ. ಇ. ಯಂ. ರಸ್ಸೆಲ್ ಯವರಿಗೆ, 1896ನೇ ಇಸವಿ ಜನವರಿ 16ನೇ ತಾರೀಖು ಲಾಗಾಯ್ತು ಯಾ ಅವರು ಅದನ್ನು ಉಪಯೋಗಿಸಿಕೊಂಡ ತಾರೀಖು ಮೊದಲು ಬಗರ ತಲಬ್ ಒಂದು ವರುಷದ ವಿಶೇಷ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 4ನೇ ಜನವರಿ 1896.

ನಂ. 5779.—ರೆ. 2263.—ಮೈಸೂರು ಸರ್ವಿಸ್ ರೆಗ್ಯುಲೇಷರ್ಗಳ 172ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟಿನ ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರಾದ ಮೆಸ್ಟರ್ ಯಂ. ನಾರಾಯಣರಾಯರು ಮಾಹೆ ಮಜಕೂರ್ 6ನೇ ತಾರೀಖು ಲಾಗಾಯ್ತು 4 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಮೆಸ್ಟರ್ ಯಂ. ನಾರಾಯಣರಾಯರವರು ರಜಾದಮೇಲೆ ಇರುವ ಕಾಲವಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಸೀನಿಯರ್ ಅಸಿಸ್ಟೆಂಟ ಕಮ್ಮಿಷನರವರು ಡಿಸ್ಟ್ರಿಕ್ಟು ಛಾರ್ಜನ್ನು ವಹಿಸಿ ಯಿರತಕ್ಕದ್ದು.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಸೆಕ್ರೆಟರಿ.

ಜನರಲ್.

ತಾರೀಖು 23ನೇ ಡಿಸೆಂಬರ 1895.

ನಂ. 7319.—ಲೋ. ಫಂ. 125—92.—ಅಜ್ಜಂಪುರದ ಮ್ಯುನಿಸಿಪೆಲ್ ಬೋರ್ಡಿನ ನಾಲ್ಕು ಮೀಟಿಂಗುಗಳಲ್ಲಿ ಅವಿಚ್ಛಿನ್ನವಾಗಿ ಗೈರ ಹಾಜರಾದ ಸಬಬ್ ವಜಾ ಮಾಡಲ್ಪಟ್ಟ ಮೆಸ್ಟರ್ ರುದ್ರಪ್ಪ ಶೆಟ್ಟರಿಗೆ ಬದಲಾಗಿ ಮೆಸ್ಟರ್ ಮಲ್ಲಶೆಟ್ಟಿಸುಬ್ಬಣ್ಣನವರು ಸದರೀ ಬೋರ್ಡಿನ ಮೆಂಬರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

2. ರೆವೆರೆಂಡ್ ಫಾದರ ಗ್ರ್ಯಾಂಡ್ಜಿಯವರು, ವರ್ಗಾಯಿಸಲ್ಪಟ್ಟ ಹಿಡಿ ಮಾಸ್ಟರ ಮೆಸ್ಟರ ಸಿ. ಕೃಷ್ಣರಾಯರಿಗೆ ಬದಲಾಗಿ ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

3. ಮೆಸ್ಟರ್ ಕುಪ್ಪುಸಾಮಿ ಪಿಳ್ಳೆಯವರು ತರೀಕೆರೆ ಮ್ಯುನಿಸಿಪಾಲಿಟಿಯ ಜಾಸ್ತೀ ಮೆಂಬರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ನಂ. 7333.—ಜ. 807.—ಪೊಲೀಸ್ ಅಸಿಸ್ಟೆಂಟ್ ಸೂಪರ್ಇಂಟೆಂಡೆಂಟ್ ಮೆಸ್ಟರ್ ನಂಜರಾಜ ಅರಸಿನವರು, ಅವರಿಗೆ 1895ನೇ ಇಸವಿ ಅಕ್ಟೋಬರ್ 8ನೇ ಮರ್ಕುಂ 50ನೇ ನಂಬರ್ ಇಸ್ತಿಹಾರನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೇಜ್ ರಜಾವನ್ನು; ಅದೇ ಇಸವಿ ಅಕ್ಟೋಬರ 14ರ ಲಗಾಯತು ಉಪಯೋಗಿಸಿಕೊಂಡು, 1895ನೇ ಇಸವಿ ಡಿಸೆಂಬರ 14ನೇ ಮರ್ಕುಮಿನ ಮಧ್ಯಾಹ್ನಾತ್ಪರ ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ನಿನ ಚಾರ್ಜನ್ನು ಮೆಸ್ಟರ ಮಹಮ್ಮದಜಾಫರ ಯವರಿಂದ ತಗದುಕೊಂಡಿರುತ್ತಾರೆ.

ನಂ. 7337.—ಲೋ. ಫಂ. 90—92.—ಮೆಸ್ಟರ್ ರಾಮಾನುಜಯ್ಯಂಗಾರ್ರು ತುಮಕೂರು ಡಿಸ್ಟ್ರಿಕ್ಟಿನ ಕಡಬದ ಮ್ಯುನಿಸಿಪಾಲಿಟಿಗೆ ಒಬ್ಬ ಜಾಸ್ತೀ ಮೆಂಬರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ನಂ. 7338.—ಲೋ. ಫಂ. 90—92.—ತುಮಕೂರು ಡಿಸ್ಟ್ರಿಕ್ಟಿನ ಕಡಬ ಮ್ಯುನಿಸಿಪಾಲಿಟಿಯಲ್ಲಿನ ವಾಯಿದೆ ಪೂರೈಸಿದ ಇದರಡಿ ಕಂಡ ಮೆಂಬರುಗಳು ಇನ್ನೂ ಐದು ವರುಷಗಳ ಪರಿಯಂತ ಮೆಂಬರಾಗಿ ಮರಳಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ:—

1. ಮೆಸ್ಟರ್ ಕಾದಂಬಿ ಗರುಡಾಚಾರ್ರು.
2. ಮೆಸ್ಟರ ವೆಂಕಟಾಚಾರ್ರು.
3. ಮೆಸ್ಟರ ಗುಬ್ಬೀರಾಯಸ್ವಾಮಯ್ಯಂಗಾರ್ರು.
4. ಮೆಸ್ಟರ್ ಅನಂತರಾಮಯ್ಯಂಗಾರ್ರು.
5. ಮೆಸ್ಟರ್ ರಂಗಪ್ಪನವರು.
6. ಮೆಸ್ಟರ್ ವೆಂಕಟರಾಮಶೆಟ್ಟರು.
7. ಮೆಸ್ಟರ್ ಪಾಪಯ್ಯ ಶೆಟ್ಟರು.

ನಂ. 7343.—ಲೋ. ಫಂ. 372—92.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಇದರಡಿ ಕಂಡ ಆಯಾ ಮ್ಯುನಿಸಿಪಾಲಿಟಿಗಳ ಮೆಂಬರುಗಳು ಅವರ ಐದು ವರುಷಗಳ ಕಾಲ ಪೂರೈಸುತ್ತಾರಾಗಿ ಅವರು ಇನ್ನೂ ಐದು ವರುಷಗಳ ಪರಿಯಂತ ಪುನಃ ಮೊಕರರ್ರು ಮಾಡಲ್ಪಟ್ಟಿರುತ್ತಾರೆ:—

ಮ್ಯುನಿಸಿಪಾಲಿಟಿಯ ಹೆಸರು.	ಮೆಂಬರುಗಳ ಹೆಸರು.
ಚಿತ್ರದುರ್ಗ	ಮೆಸ್ಟರ ಮಹಲಿಂಗಪ್ಪ
ಹಿರಿಯೂರು	ಮೆಸ್ಟರ ಬರ್ರಾಸಾಬ
ಹೊಸದುರ್ಗ	ಮೆಸ್ಟರ್ ಬಿ. ನಂಜಪ್ಪ
ಚಳ್ಳಕೆರೆ	ಮೆಸ್ಟರ ಮಹಮ್ಮದಅಲ್ಲಿ
ಡಿಟೋ	ಮೆಸ್ಟರ ಮಲ್ಲಪ್ಪನಾಯಕ

ನಂ. 7344.—ಲೋ. ಫಂ. 372—92.—ಮೆಸ್ಟರ ತುಪ್ಪದ ಉಸಮಾನಸಾಬರು, ವಾಯಿದೆ ಗತಿಸಿದ ಸಬಬ್ ನಿವೃತ್ತರಾದ ಮೆಸ್ಟರ ಸೈದಹುಸೇನಸಾಬರ ಬದಲಾಗಿ ಹರಿಹರ ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ತಾರೀಖು 26ನೇ ಡಿಸೆಂಬರ 1895.

ನಂ. 7434.—ಮಿ. 1074.—ಮೈಸೂರಿನ ಸಿವಿಲ್ ಸರ್ಜನರಾದ ಸರ್ಜನ ಲೆಫ್ಟಿನೆಂಟ್ ಕರ್ನಲ್ ಪಿ. ಹೆಚ್. ಬೆನ್ಸನಯವರು, ಮೈಸೂರು ಸಿವಿಲ್ ಸರ್ಜನ ಆಫೀಸು ಮತ್ತು ಶ್ರೀಮನ್ ಮಹಾರಾಣಿಯವರ ಆಸಪತ್ರೆಯ ಸೂಪರಿಂಟೆಂಡೆಂಟರ ಆಫೀಸು ವ ಮೈಸೂರು ಗವರ್ನಮೆಂಟಿನ ಕೆಮಿಕಲ್ ಯಗ್ಜಾಮಿನರ ಆಫೀಸು ಇವುಗಳ ಚಾರ್ಜನ್ನು 1895ನೇ ಇಸವಿ ಡಿಸೆಂಬರ 12ನೇ ಮರ್ಕುಮಿನ ಪೂರ್ವಾಹ್ನದಲ್ಲಿ ಅಸಿಸ್ಟೆಂಟ್ ಸರ್ಜನ ಮೆಸ್ಟರ ಟಿ. ವಿ. ಆರಮುಗಂ ಮೊದಲಿಯಾರ್ರಿಗೆ ಒಪ್ಪಿಸಿರುತ್ತಾರೆ.

ನಂ. 7113—ಲೋ, ಫ. 102—95. 1894ನೇ [illegible]

-ರು 57·18 ಎಕರೆವುಳ್ಳ ಜಮೀನುಗಳು ಸರ್ಕಾರದ ಕೆಲಸಕ್ಕೆ ಅಂದರೆ ಕಡೂರು ಡಿಸ್ಟ್ರಿಕ್ಟು ಕಡೂರು ತಾಲ್ಲೂಕಿನ ಬೀರೂರು ಟವನನ್ನು ಉಡಾಯಿಸುವ ಬಗ್ಗೆ ಬೇಕಾಗಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳೆದಾರನ ಹೆಸರು.	ಜಮೀನಿನ ತಪ್ಶೀಲು.					ಚಕ್ಕುಬಂದಿ.
				ಸರ್ವೇ ನಂಬರು.	ವಿವರಣೆ.	ವಿಸ್ತೀರ್ಣ.		ಕಂದಾಯ.	
ಕಡೂರು.	ಕಡೂರು.	ಬೀರೂರು.	ವಿರೂಪಯ್ಯನ ರುದ್ರಯ್ಯ ಖರೀದಿ ನಿಂಗಪ್ಪ	ಪೈಕಿ ನಂ 36 ಡಿಟೋ 36	ಖುಷ್ಕಿ ಡಿಟೋ	4 7	17 ..	5—8—0 8—8—0	ಪೂರ್ವಕ್ಕೆ—ಸರ್ವೆ ನಂಬರು 32, ಪಶ್ಚಿಮಕ್ಕೆ ಸರ್ವೇ ನಂಬರು 37, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ನಂಬರು 138, ಪಬ್ಲಿಕ ರಸ್ತೆ.
			ಕಷ್ಣಿ ಬಿನ್ ನಿಂಗಪ್ಪ ಬ್ಯಾಲಿಗ ಬಿನ್ ತಿರುಮಲಯ್ಯ	ಡಿಟೋ 37 ಡಿಟೋ 37	ಡಿಟೋ ಡಿಟೋ	3 3	30 26	4—8—0 4—8—0	ಪೂರ್ವಕ್ಕೆ—ಸರ್ವೇ ನಂಬರು 36, ಪಶ್ಚಿಮಕ್ಕೆ ಸರ್ವೇನಂಬರು 38, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ಪಬ್ಲಿಕ ರಸ್ತೆ.
			ಸಯ್ಯದ್ ಇಬ್ರಾಹಿಂಸಾಬ್	38	ಡಿಟೋ	4	15	5—0—0	ಪೂರ್ವಕ್ಕೆ—ನಂಬರು 37, ಪಶ್ಚಿಮಕ್ಕೆ ಪಬ್ಲಿಕ ರಸ್ತೆ, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ನಂಬರು 138.
			ವೆಂಕಟಪ್ಪಯ್ಯ ವಿರೂಪಯ್ಯನ ರುದ್ರಯ್ಯ	ಪೈಕಿ ನಂ 39 ಡಿಟೋ 39	ಡಿಟೋ ಡಿಟೋ	.. ..	28 27	1—0—0 0—12—0	ಪೂರ್ವಕ್ಕೆ—ಸರ್ವೇ ನಂಬರು 38, ಪಶ್ಚಿಮಕ್ಕೆ ಸರ್ವೇ ನಂಬರು 39, (ಕಟ್ಟೆ), ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ಸರ್ವೇ ನಂಬರು 40.
			ನಾಗಯ್ಯ ರಾಮಣ್ಣ	41	ಡಿಟೋ	6	37	8—8—0	ಪೂರ್ವಕ್ಕೆ—ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸರ್ವೇ ನಂಬರು 40, ದಕ್ಷಿಣಕ್ಕೆ ರಸ್ತೆ.
			ಈರಯ್ಯ	31	ಡಿಟೋ	8	38	12—0—0	ಪೂರ್ವಕ್ಕೆ—ಕಾವಲು, ಪಶ್ಚಿಮಕ್ಕೆ ಬೀರೂರು ಟವನು, ಉತ್ತರಕ್ಕೆ ಕಾವಲು, ದಕ್ಷಿಣಕ್ಕೆ ಸರ್ವೆ ನಂಬರು 32.
			ಹಾಲಪ್ಪ ವೀರತ್ತಯ್ಯ	ಪೈಕಿ ನಂ 32 ಡಿಟೋ 33	ಡಿಟೋ ಡಿಟೋ	6 6	5 15	8—0—0 8—0—0	ಪೂರ್ವಕ್ಕೆ—ಕಾವಲು, ಪಶ್ಚಿಮಕ್ಕೆ ಸರ್ವೇ ನಂಬರು 36, ಉತ್ತರಕ್ಕೆ ಸರ್ವೇ ನಂಬರು 31, ದಕ್ಷಿಣಕ್ಕೆ ಕಾವಲು.
			ಸಪ್ಪಾರಿ ಬಂಜರು	53	ಡಿಟೋ	4	20	4—0—0	ಪೂರ್ವಕ್ಕೆ—ರೈಲ್ ರಸ್ತೆ, ಪಶ್ಚಿಮಕ್ಕೆ ಪಬ್ಲಿಕ ರಸ್ತೆ, ಉತ್ತರಕ್ಕೆ ಸರ್ವೇ ನಂಬರು 105, ದಕ್ಷಿಣಕ್ಕೆ ಸರ್ವೇ ನಂಬರು 49 (ಕಟ್ಟೆ).
						57	18	70—4—0	

58

ತಾರೀಖು 26ನೇ ಡಿಸೆಂಬರ್ 1895.

ನಂ. 209.—ಡಿ. ಸಿ.—ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಗವರ್ನಮೆಂಟ್ ಮಿಲಿಟರಿ ಸೆಕ್ರೆಟರಿ ವ ಮೈಸೂರು ಫೌಜಿನ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಎ. ಹೆಚ್. ಮೆಕ್ಕಿಂಟಯರ್ ಯವರಿಗೆ, 1896ನೇ ಇಸವಿ ಜನವರಿ 6ನೇ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 211.—ಡಿ. ಸಿ. ಶ್ರೀಮನ್ ಮಹಾರಾಣಿ ರೀಜಂಟರವರು, ಮೈಸೂರು ಯಿಂಪೀರಿಯಲ್ ಸರವಿಸ್ ಕ್ಯಾವೆಲ್ರಿ ಫೌಜಿನ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜ ಅರಸಿನವರಿಗೆ, ಲೆಫ್ಟಿನೆಂಟ್ ಕರ್ನಲ್ ಎ. ಹೆಚ್. ಮೆಕ್ಕಿಂಟಯರ್ಯವರು ಪ್ರಿವಿಲೇಜ್ ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಅವರ ಕೆಲಸಗಳೊಂದಿಗೆ ಮಿಲಿಟರಿ ಸೆಕ್ರೆಟರಿಯಾಗಿಯೂ, ಮೈಸೂರು ಫೌಜಿನ ಕಮ್ಯಾಂಡೆಂಟರಾಗಿಯೂ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದೆಂದು ನಿಯಮಿಸಿರುತ್ತಾರೆ.

ತಾರೀಖು 3ನೇ ಜನವರಿ 1896.

ನಂ. 7464.—ಜು. 834.—ಮೈಸೂರು ದೇಶದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾದ ಮೆಸ್ಟರ್ ವಿ. ಪಿ. ಮಾಧವರಾಯರವರು, 1896ನೇ ಇಸವಿ ಜನವರಿ 6ನೇ ಮುಕ್ಕಾಂ ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಮೆಸ್ಟರ್ ಮಾಧವರಾಯರ ಗೈರಹಾಜರಿಯಲ್ಲಿ, ಪೊಲೀಸ್ ಸೂಪರಿಂಟೆಂಡೆಂಟರಾದ ಮೆಸ್ಟರ್ ಕೆ. ಪಿ. ಪುಟ್ಟಣಶೆಟ್ಟಿಯವರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಚಾಲತಿ ಕೆಲಸದ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 6ನೇ ಜನವರಿ 1896.

ನಂ. 7500.—ಜು. 839.—ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರಿನ ಮುನಸಿಫ್ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 203 ವ 204ನೇ ಆರ್ಟಿಕಲ್‌ಗಳನುಸರಿಸಿ, 1896ನೇ ಇಸವಿ ಜನವರಿ 6ನೇ ತಾರೀಖಿನಾರಭ್ಯ ಪೂರಾ ತಲಬಿನ ಮೇಲೆ 11 ದಿವಸಗಳು ಮತ್ತು ಅರ್ಧ ತಲಬಿನ ಮೇಲೆ 19 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆಸ್ಟರ್ ಶ್ರೀನಿವಾಸರಾಯರ ಗೈರ್ ಹಾಜರೀ ಕಾಲದಲ್ಲಿ, ನಗರ ಡಿವಿಜನ್ ಡಿಸ್ಟ್ರಿಕ್ಟು ವ ಸೆಷನ್ ಕೋರ್ಟಿನ ಶಿರಸ್ತೇದಾರ್ ಮೆಸ್ಟರ್ ರಾಮಾನುಜಯ್ಯಂಗಾರ್ರು ಕಡೇದರ್ಜೇ ಮುನಸಿಫರಾಗಿ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದು.

ತಾರೀಖು 7ನೇ ಜನವರಿ 1896.

ನಂ. 7570.—ಮಿ. 1096—ಫೆಬ್ರುವರಿ ಗುರ್ರೇ ತಾರೀಖು ಮೈಸೂರು ಶ್ರೀಮನ್ ಮಹಾರಾಜರವರು ಪಟ್ಟಾಭಿಷಿಕ್ತರಾದ ಶುಭದಿನವಾದುದರಿಂದ ಆ ದಿವಸ ಸಂಸ್ಥಾನಾಮುಳ್ ವಟ್ಟು ರಜಾ ದಿವಸವೆಂದು ಆಚರಿಸಲ್ಪಡತಕ್ಕದ್ದು.

ನಂ. 7549.—ಮಿ. ಫೈ. 153—92—ಮೈಸೂರು ಶ್ರೀಮನ್ ಮಹಾರಾಣಿಯವರ ಆಸ್ಪತ್ರೆಯ ಮೂರನೇ ಗ್ರೇಡ್ ಅಸಿಸ್ಟೆಂಟ್ ಸರ್ಜನ್ ಮಿಸ್. ಆರ್. ಗೋವಿಂದ ರಾಜಲುಯವರಿಗೆ, 1884ನೇ ಇಸವಿ ಮೇ 5ನೇ ಮುಕ್ಕಾಂ 885—7ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸಿನ ಷರತ್ತುಗಳನುಸರಿಸಿ ಅವರು ಮೂರನೇ ಗ್ರೇಡಿನಲ್ಲಿ ಏಳುವರುಷಗಳ ನೌಕರಿ ಪೂರೈಸಿದ ತಾರೀಖು ಅಂದರೆ 1894ನೇ ಇಸವಿ ಆಕ್ಟೋಬರ್ ಗುರ್ರೇ ತಾರೀಖು ಮೊದಲು ಯರಡನೇ ಗ್ರೇಡ್ ಅಸಿಸ್ಟೆಂಟ್ ಸರ್ಜನ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟರಿ.

ಮಿಲಿಟರಿ.

ತಾರೀಖು 31ನೇ ಡಿಸೆಂಬರ್ 1895.

ಶ್ರೀಮನ್ ಮಹಾರಾಣಿ ರೀಜಂಟ್ ಸಿ. ಐ. ಯವರು, ಜಮಾದಾರ್ ಲಿಂಗರಾಜ ಅರಸಿನವರನ್ನು, ಪೆನ್ಷನ್ ಮೇಲೆ ಕೆಲಸದಿಂದ ನಿವೃತ್ತರಾದ ಖಾನ್‌ಬಹದೂರ್ ಬುದರುದ್ದೀನ್ ಯವರಿಗೆ ಬದಲಾಗಿ, 1896ನೇ ಇಸವಿ ಜನವರಿ 1ನೇ ತಾರೀಖಿನಾರಭ್ಯ ಶ್ರೀಮನ್ ಮಹಾರಾಜರವರ ಖಾಸ್ ಬಾಡೀಗಾರ್ಡಿನ ಕಮ್ಯಾಂಡೆಂಟರಾಗಿ ಮೊಕರರ್ಮಾಡಿರುತ್ತಾರೆ.

ಹುಕುಂ ಬಮೋಜಿಬ್,
ಜೆ. ದೇಶರಾಜ್ ಅರಸ್,
ಲೆ॥ ಕರ್ನಲ್ ವ ಆ॥ ಮಿಲಿಟರಿ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂಪುಟ XXXI.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 1

ಬೆಂಗಳೂರು, ಗುರುವಾರ, ಜನವರಿ ತಾ॥ 9, ಸನ್ 1896.

II ನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಅಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲ್ಯಾಂಡ್ ಪೋರ್ಟರು ಬ್ರದರನ್ಸರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ನ್ಯಾಮರವರ ಡಿಟೋ	,, 85

ಖರೀದಿದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ 12½ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ವಿದ್ಯಾಭ್ಯಾಸದ ಇಲಾಖೆ.

ಇಸ್ತಿಹಾರ್‌ನಾಮೆ.

ಡಿ. ನಂ. 33. 14ನೇ ಡಿಸೆಂಬರ್ 1895ನೆಯ ಇಸವಿ.

ಗ್ರಾಮ ಪಾಠಶಾಲೆ ಮತ್ತು ರಾತ್ರಿಯ ಪಾಠಶಾಲೆಗಳನ್ನು ರಿಜಿಸ್ಟರು ಮಾಡಿಕೊಳ್ಳುವುದಕ್ಕಾಗಿ ಸ್ಕೂಲ್‌ಗಳ ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಡೆಪ್ಯುಟಿ ಇನ್ಸ್‌ಪೆಕ್ಟರುಗಳಿಗೆ ದರಖಾಸ್ತು ಬರೆದುಕೊಳ್ಳುವವರು ಈ ಪಾಠಶಾಲೆಗಳಿಗಾಗಿ ಏರ್ಪಟ್ಟಿರುವ ನಿಬಂಧನೆಗಳಲ್ಲಿ ಮೂರನೆಯ ನಿಬಂಧನೆಯಲ್ಲಿ ಕೊಟ್ಟಿರುವ ಜೂನ್ 30ನೆಯ ತಾರೀಖಿಗೆ ಬದಲಾಗಿ ಮೇ 31ನೆಯ ತಾರೀಖನ್ನು ಕೊನೆಯ ದಿವಸವೆಂದು ತಿಳಿಯತಕ್ಕದ್ದು.

ಎಚ್. ಜೆ. ಭಾಭಾ, ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

(ನಂ. 4.) ತಾರೀಖು 10ನೇ ಡಿಸೆಂಬರ್ 1895.

ಇದರಿಂದ ಇನಾಂದಾರರಿಗೆ ತಿಳಿಯಪಡಿಸುವದೇನಂದರೆ,—ಹಾಸನ ತಾಲ್ಲೂಕಿನಲ್ಲಿ ಇರತಕ್ಕ ಧರ್ಮಾದಾಯದ ಇನಾಂಗಳ ಬಾಬತು (3) ಫೈನಲ್ ಟೈಟಲ್ ಡೀಡ್‌ಯಾನೆ ಕಾಯಂ ಪಟ್ಟೆಗಳು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರ್ರು ಖರ್ಚ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟಿಸ್‌ಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಯಿರುತ್ತೆಂದು ಇದರಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರ್ಯಾಂಟ್, ಇನಾಂ ಸೂಪರ್‌ಟೆಂಡೆಂಟ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 13ನೇ ಡಿಸೆಂಬರ್ 1895.

ಇದರಿಂದ ತಿಳಿಯಪಡಿಸುವದೇನಂದರೆ,—1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಲ್ಪಟ್ಟ ಬೆಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟ್ ವ ಪ್ಲಾಂಟೇಷನ್‌ಗಳು ಷಿಕಾರಿ ಮತ್ತು ಇತರ ಬ್ಯಾಟಿಗಳಿಗೆ 1896ನೇ ಇಸವಿ ಮೇ ಆಖೈರ್ ವರೆಗೆ ಬಂದ್ ಮಾಡಲ್ಪಟ್ಟಿರುತ್ತದೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರೀ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

ತಾಲ್ಲೂಕು.	ಫಾರೆಸ್ಟ್ ವ ಪ್ಲಾಂಟೇಷನ್‌ಗಳ ಹೆಸರು.
ಹುಣಸೂರು ತಾಲ್ಲೂಕು ..	ವೀರನಹೊಸಹಳ್ಳಿ ಫಾರೆಸ್ಟ್
	ನಾಯಿಹಳ್ಳ ಸಂದಲ್ ಪ್ಲಾಂಟೇಷನ್
	ಗುರುಪುರ ಡಿಟೋ
	ಪಂಚವಳ್ಳಿ ಡಿಟೋ
	ದೊಡ್ಡಹರವೆ ಪ್ರೊಡಕ್ಷನ್ ಬ್ಲಾಕ್
	ಆನೇಚೌಕೂರು ಡಿಟೋ
	ವೀರನಹೊಸಹಳ್ಳಿ ಡಿಟೋ
ಹೆಗ್ಗಡದೇವನಕೋಟೆ ತಾಲ್ಲೂಕು.	ಮೇಟಿಕುಪ್ಪೆ ಫಾರೆಸ್ಟ್
	ಕಾಕನಕೋಟೆ ಡಿಟೋ
	ಬೇಗೂರು ಡಿಟೋ
	ಐನೂರು ಮಾರೀಗುಡಿ ಡಿಟೋ
	ಕಾಕನಕೋಟೆ ಪ್ಲಾಂಟೇಷನ್
	ಮಾಸ್ತಿಗುಡಿ ಡಿಟೋ
	ಮಂಚೆಗವುಡನಹಳ್ಳಿ ಡಿಟೋ
	ಹಂಪಾಪುರ ಡಿಟೋ
ಗುಂಡ್ಲು ತಾಲ್ಲೂಕು	ಬೇರಂಬಾಡಿ ಫಾರೆಸ್ಟ್
	ಬಂಡಿಪುರ ಡಿಟೋ
	ಮದ್ದೂರು ಅಳಲೇ ಪ್ಲಾಂಟೇಷನ್
	ಹೊಂಗಹಳ್ಳಿ ಸಂದಲ್ ಪ್ಲಾಂಟೇಷನ್
ಚಾಮರಾಜನಗರದ ತಾಲ್ಲೂಕು ..	ಚಾಮರಾಜನಗರದ ಫಾರೆಸ್ಟ್

ಟಿ. ಅಬ್ದುಲ್‌ಕರೀಂ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಬೆಂಗಳೂರು ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 1ನೇ ಜನವರಿ 1896.

ಸರ್ 1890ನೇ ಫೆಬ್ರುವರಿ 1ನೇ ತಾರೀಖಿನ ಮೈಸೂರ ಗೆಜೆಟ 2ನೇ ಪಾರ್ಟ 26ನೇ ಪುಟದಲ್ಲಿ ಫಾಯಿಷ್ ಆಗಿರುವ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ 22—1—90ನೇ ನೋಟಿಫಿಕೇಷನ್ ಅನುಸರಿಸಿ ಯಲ್ಲರಿಗೂ ತಿಳಿಸುವದೇನಂದರೆ, ಈ ಕೆಳಗೆ ಕಂಡ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟಗಳು ಮತ್ತು ಪ್ಲಾಂಟೇಷನ್‌ಗಳು ಬೇಸಿಗೆ ಕಾಲಕ್ಕೋಸ್ಕರ ಸರ್ 1896ನೇ ಫೆಬ್ರುವರಿ ಗುರ್ರೇ ತಾರೀಖು ಲಾಗಾಯತು ಮೇ 31ನೇ ತಾರೀಖು ವರಿಗೂ ಬಂದ್ ಮಾಡಲ್ಪಟ್ಟು ಯಿವೆ, ಇವುಗಳಲ್ಲಿ ಷಿಕಾರಿ ವಗ್ಯೆರೆ ಬಗ್ಯೆ ಪ್ರವೇಸಿಸಕೂಡದು. ಅತಿಕ್ರಮ ಪ್ರವೇಶ ಮಾಡಿದವರನ್ನ ಪ್ರಾಸಿಕ್ಯೂಷನ್ ಮಾಡುತ್ತೆ.

	ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್.	ತಾಲ್ಲೂಕು.
1	ರಾಗಿಹಳ್ಳಿ ಸ್ಟೇಟ್ ಫಾರೆಸ್ಟ್	ಆನೇಕಲ್
2	ಬಿಳಿಕಲ್ಲು ಡಿಟೋ	ಕಾನಕಾನಹಳ್ಳಿ
3	ಚಿಲ್ಲಂದಾಜಿ ಮತ್ತು ಮುಗ್ಗೂರು ಡಿಟೋ	ಡಿಟೋ
4	ಕಬ್ಬಾಳು ಡಿಟೋ	ಡಿಟೋ
5	ಬಸವನಬೆಟ್ಟ ಡಿಟೋ	ಡಿಟೋ ಮತ್ತು ಮಳವಳ್ಳಿ
6	ತೆಂಗಿನಕಲ್ಲು ಮತ್ತು ಬಾಣಂತಿಮಾರಿ ಡಿಟೋ	ಕಾನಕಾನಹಳ್ಳಿ ಮತ್ತು ಕ್ಲೋಸಪೇಟೆ
7	ಮುದಿಗೆರೆ ಪ್ಲಾಂಟೇಷನ್	ಚನ್ನಪಟ್ಣ
8	ಯಂಗ್ಯೆಯನಕೆರೆ ಪ್ಲಾಂಟೇಷನ್	ಡಿಟೋ
9	ಮಾಕಳಿ ಸ್ಟೇಟ್ ಫಾರೆಸ್ಟ್	ಕ್ಲೋಸಪೇಟೆ
10	ಚಿಕ್ಕಮಂಣುಗುಡ್ಡೆ	ಡಿಟೋ.
11	ದೊಡ್ಡಮಂಣುಗುಡ್ಡೆ	ಡಿಟೋ
12	ಹಂದಿಗೊಂದಿ ಮತ್ತು ಹುಲ್ತಾರ್ ಸ್ಟೇಟ್ ಫಾರೆಸ್ಟ್	ಡಿಟೋ
13	ಕಲ್ಲುಗೋಪನಹಳ್ಳಿ ಪ್ಲಾಂಟೇಷನ್	ಡಿಟೋ
14	ಅಚ್ಚಲ್ ಸ್ಟೇಟ್ ಫಾರೆಸ್ಟ್	ಡಿಟೋ
15	ಗುಂಬಳಗೊಡು ಸ್ಟೇಟ್ ಫಾರೆಸ್ಟ್	ಡಿಟೋ
16	ಸಾವಂದುರ್ಗ ಡಿಟೋ	ಮಾಗಡಿ
17	ನೈಜನಿ, ಹುಲಕಡಿ, ಮಾಕಳಿ—ಸ್ಟೇಟ್ ಫಾರೆಸ್ಟ್	ದೊಡ್ಡಬಳ್ಳಾಪುರ
18	ಬಳ್ಳಿಗೆರೆ ಸಂಡಲ್ ರಿಜರ್ವ್	ನೆಲವಂಗಲ
19	ನಿಜಗಲ್ ಫಾರೆಸ್ಟ್	ಡಿಟೋ
20	ಗೊಲ್ಲಹಳ್ಳಿ ಪ್ಲಾಂಟೇಷನ್	ಹೊಸಕೋಟೆ
21	ಮಾದಪ್ಪನಹಳ್ಳಿ ಡಿಟೋ	ದೊಡ್ಡಬಳ್ಳಾಪುರ
22	ಗರಳಾಪುರ ಸಂಡಲ್ ರಿಜರ್ವ್	ಕಾನಕಾನಹಳ್ಳಿ
23	ಕೃಷ್ಣಾಪುರ ದೊಡ್ಡಿ ರೆವಿನ್ಯೂ ಪ್ಲಾಂಟೇಷನ್	ಕ್ಲೋಸಪೇಟೆ
24	ಗಂಟಿಗಾನಹಳ್ಳಿ ಮತ್ತು ಜಕ್ಕೂರು ರೆವಿನ್ಯೂ ಪ್ಲಾಂಟೇಷನ್‌ಗಳು	ಬೆಂಗಳೂರು
25	ಬಮ್ಮನಹಳ್ಳಿ ಮತ್ತು ಭೈರಶಟ್ಟಿಹಳ್ಳಿ ಡಿಟೋ	ನೆಲವಂಗಲ

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ.

ನೋಟಿಸ್.

ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟಮೆಂಟ.

ತಾರೀಖು 26ನೇ ಡಿಸೆಂಬರ್ 1895ನೇ ಇಸವಿ.

1890ನೇ ಇಸವಿ ಫೆಬ್ರುವರಿ 1ನೇ ತಾರೀಖಿನ ಮೈಸೂರ ಗೆಜೆಟ 2ನೇ ಭಾಗ 26ನೇ ಪುಟದಲ್ಲಿ ಫಾಯಿಷ್ ಮಾಡಿರುವ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,

ಈ ಕೆಳಗೆ ನಮೂದಿಸಿರುವ ತುಮಕೂರು ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳನ್ನ 1896ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು ಮೇ ಆಖೈರುವರಿಗೂ ಬಂದ ಮಾಡಲ್ಪಟ್ಟಿರುತ್ತೆ.

ಅಂಬುಗಾರರಿಗೂ ಷಿಕಾರಿಗಳಿಗೂ ಬೇಟೆಗಾರರಿಗೂ ಸಹ ಲೈಸೆನ್ಸು ಕೊಡಲ್ಪಡುವದಿಲ್ಲಾ. ರೂಲ್ ಅತಿಕ್ರಮಿಸಿ ಪ್ರವೇಸಿಸುವವರನ್ನ ಕ್ರಮವಾಗಿ ಸಿಕ್ಷಿಸಲ್ಪಡುವದು.

	ಫಾರೆಸ್ಟ್ ಯಾ ಪ್ಲಾಂಟೇಷನ ಹೆಸರು.	ತಾಲ್ಲೂಕು ಹೆಸರು.
1.	ದೇವರಾಯದುರ್ಗ ಸ್ಟೇಟ್ ಫಾರೆಸ್ಟ್	ತುಮಕೂರು ತಾಲ್ಲೂಕು
2.	ಮದ್ದಗಿರಿ ಸ್ಟೇಟ್ ಫಾರೆಸ್ಟು, ಕೊಳಿಕಲ್ ಬ್ಲಾಕು ಶೇರಿ ..	ಮದ್ದಗಿರಿ ಡಿಟೋ
3.	ಹುಲಿಯೂರ್ ದುರ್ಗ ಸ್ಟೇಟ್ ಫಾರೆಸ್ಟ್, ಕಂಪ್ಲಾಪುರ ಬ್ಲಾಕು ಶೇರೀ	ಕುಣಿಗಲ್ ಡಿಟೋ
4.	ಬುಕ್ಕಾಪಟ್ಣ ಕುಚಲದೊರೆ ಸ್ಟೇಟ್ ಫಾರೆಸ್ಟ್	ಶಿರಾ ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಮತ್ತು ಗುಬ್ಬೀ ತಾಲ್ಲೂಕು
5.	ಕುದರೆಕಣವೆ ಸ್ಟೇಟ್ ಫಾರೆಸ್ಟ್	ಹುಳಿಯಾರ ಸಬ್ ತಾಲ್ಲೂಕು
6.	ಸೂಳೇಕೆರೆ ಪ್ಲಾಂಟೇಷನ	ಕೊರಟಗೆರೆ ಡಿಟೋ
7.	ದಾಸರಹಳ್ಳಿ ಡಿಟೋ ..	ತುಮಕೂರು ತಾಲ್ಲೂಕು
8.	ಗೊಲ್ಲಹಳ್ಳಿ ಮಲ್ಲಸಂದ್ರ ಡಿಟೋ ..	ತುಮಕೂರು ತಾಲ್ಲೂಕು
9.	ಲಿಂಗೇನಹಳ್ಳಿ ಡಿಟೋ ..	ತುಮಕೂರು ತಾಲ್ಲೂಕು
10.	ಬಳ್ಳಾಪುರ ಡಿಟೋ ..	ತುಮಕೂರು ತಾಲ್ಲೂಕು
11.	ಅಡಗೂರು ಡಿಟೋ ..	ಗುಬ್ಬೀ ತಾಲ್ಲೂಕು
12.	ಗಂಟೆಗಾನಹಳ್ಳಿ ಡಿಟೋ	ಕೊರಟಗೆರೆ ಸಬ್ ತಾಲ್ಲೂಕು

ಯಂ. ವೆಂಕಟನಾರಣಪ್ಪ,
ಅಸಿಸ್ಟೆಂಟ್ ಕನಸರ್ವೇಟರ್ ಆಫ್ ಫಾರೆಸ್ಟ್ಸ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

1895ನೇ ಇಸವಿ ಡಿಸೆಂಬರ ತಾರೀಖು 12.

ಸರ್ಕ 1867ನೇ ಇಸವಿ ಏಪ್ರಿಲ್ 17ನೇ ಮುಕ್ಕಾಂ 6ನೇ ನಂಬರ ಗವರ್ನಮೆಂಟ್ ನೋಟಿಫಿಕೇಷನ 3ನೇ ರೂಲ್ ಪ್ರಕಾರ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕುಣಿಗಲ್ ತಾಲ್ಲೂಕು ಕುಣಿಗಲ್ ಟವನಿನಲ್ಲಿರುವ ಹೇರೂರ್ ಅಪ್ಪಣಯ್ಯ ನವರ ಜಮೀನಿನಲ್ಲಿ ಕೆಲವು ಕೂಲಿಗಳು 1890ನೇ ಅಕ್ಟೋಬರ 3ನೇ ತಾರೀಖಿನ ದಿವಸ ಮಣ್ಣು ಅಗೆಯುತ್ತಿರುವಾಗ ಇದರಡಿ ಕಂಡ ನಿಕ್ಷೇಪಗಳು ಅಡಗಿದ್ದ ಒಂದು ಪಾತ್ರೆಯು ದೊರೆಯಿತು. ಸದರೀ ನಿಕ್ಷೇಪ ಯಾ ಅದರಲ್ಲಿ ವಂದು ಭಾಗಕ್ಕೆ ಹಕ್ಕುದಾರರಾಗಿರುವ ಸಮಸ್ತ ಜನಗಳೂ ಖುದ್ದಾಗಿಯಾಗಲಿ ಅಥವಾ ವಕೀಲರ ಮೂಲಕವಾಗಿಯಾಗಲಿ ಬರುವ 1896ನೇ ಜೂನ 29ನೇ ತಾರೀಖಿನ ದಿವಿ 12 ಘಂಟೆಗೆ ಸರಿಯಾಗಿ ತುಮಕೂರು ಮೊಕ್ಕಾಂನಲ್ಲಿ ಡೆಪ್ಯುಟಿ ಕಮಿಷನರವರ ರೂಬರು ಹಾಜರಾಗಿ ಅವರವರ ಹಕ್ಕನ್ನು ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

ನಿಕ್ಷೇಪದ ತಪ್ಸೀಲ್.

ಕಂಠೀರಾಯ ಹಣ	24	ಕಂಚು	1
ಬಂಗಾರದ ತಾಳಿಗಳು	2	ಕಂಚಿನ ಹಣತೆ	1
ಡಿಟೋ ಗುಂಡುಗಳು ..	4	ಶಂಖ ..	1
ಬೆಳ್ಳಿ ರೂಪಾಯಿ	1	ಸಣ್ಣ ಸಾಣೇಕಲ್ಲು ..	1
ಬೆಳ್ಳಿ ವುಂಗುರಗಳು ಚಿಕ್ಕವು ..	2	ಕಂಚಿನ ಗುಂಡು ..	1

ಎಂ. ನಾರಾಯಣರಾವ್,
ಆಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ.

ಮೈಸೂರ ಡಿಸ್ಟ್ರಿಕ್ಟ ಜಡ್ಜಿಯವರ ಕೋರ್ಟಿನಲ್ಲಿ.

ಸರ್ಕ 1895ನೇ ಇಸವಿ ಅರ್ಜೀ ನಂಬರ 186.

ಮೃತಪಟ್ಟ ರಾಮಾಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೇವರಭಟ್ಟರು, ಮೃತಪಟ್ಟ ಸದರೀ ರಾಮಾಭಟ್ಟರಿಗೆ ತಮ್ಮನ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಶ್ರೀರಾಂಪೇಟೆ ಸ್ಥಳದ ಸದರೀ ದೇವರಭಟ್ಟರು, ಸದರೀ ವಾಸಸ್ಥರಾಗಿ ಮೃತಪಟ್ಟ ರಾಮಾಭಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 400

ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದೇವರಭಟ್ಟರ ಅರ್ಜಿಯನ್ನು ಸನ್ 1896ನೇ ಇಸವಿ ಜನವರಿ ತಿಂಗಳ ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಾಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 201.

ಮೃತಪಟ್ಟ ಪೋಲೆಪಲ್ಲಿ ಸೂರಶಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಪೋಲೆಪಲ್ಲಿ ರಾಮಶಟ್ಟಿ, ಮೃತಪಟ್ಟ ಸದರೀ ಸೂರಶಟ್ಟರಿಗೆ ದತ್ತು ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ಕಸಬಾ ಸ್ಥಳದ ಸದರೀ ರಾಮಶಟ್ಟರು, ಸದರೀ ವಾಸಸ್ಥರಾಗಿ ಮೃತಪಟ್ಟ ಸೂರಶಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಶಟ್ಟರ ಅರ್ಜಿಯನ್ನು ಸನ್ 1896ನೇ ಇಸವಿ ಜನವರಿ ತಿಂಗಳ ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೂರಶಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895–96ನೇ ಇಸವಿ ಅರ್ಜೀ ನಂಬರ್ 203.

ಮೃತಪಟ್ಟ ಲಕ್ಷ್ಮೀಪತಿಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಗಂಗಾಧರಭಟ್ಟರು, ಮೃತಪಟ್ಟ ಸದರೀ ಲಕ್ಷ್ಮೀಪತಿಭಟ್ಟರಿಗೆ ಮಂಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ಗಂಗಾಧರಭಟ್ಟರು, ಸದರೀ ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮೀಪತಿಭಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗಂಗಾಧರಭಟ್ಟರ ಅರ್ಜಿಯನ್ನು ಸನ್ 1896ನೇ ಇಸವಿ ಜನವರಿ ತಿಂಗಳ ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮೀಪತಿಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 205.

ಮೃತಪಟ್ಟ ಚನ್ನಬಸವಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಬಸಮ್ಮನು, ಮೃತಪಟ್ಟ ಸದರೀ ಚನ್ನಬಸವಯ್ಯನವರಿಗೆ ರಖಾವದಾರಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ದೇವರಾಜಮೊಹಲಾ ಸ್ಥಳದ ಸದರೀ ಬಸಮ್ಮನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಚನ್ನಬಸವಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸಮ್ಮನವರ ಅರ್ಜಿಯನ್ನು ಸನ್ 1896ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಬಸವಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895—96ನೇ ಇಸವಿ ಅರ್ಜೀ ನಂಬರ್ 246.

ಮೃತಪಟ್ಟ ಸುಡುಗಾಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ನಂಜಯ್ಯನವರು, ಮೃತಪಟ್ಟ ಸದರೀ ಸುಡುಗಾಡಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಯಿಟ್ಟಿಗೆ ಗೂಡು ಸ್ಥಳದ ಸದರೀ ನಂಜಯ್ಯನವರು, ಸದರೀ ವಾಸಸ್ಥರಾಗಿ ಮೃತಪಟ್ಟ ಸುಡುಗಾಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಯ್ಯನವರ ಅರ್ಜಿಯನ್ನು ಸನ್ 1896ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಡುಗಾಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1895–96ನೇ ಇಸವಿ ಅರ್ಜೀ ನಂಬರ್ 248.

ಮೃತಪಟ್ಟ ಶ್ರೀನಿವಾಸಯ್ಯಂಗಾರು ಆಸ್ತೀ ವಿಷಯದಲ್ಲಿ—

ಅರ್ಜೀದಾರು) ವೆಂಕಟಾಚಾರು, ಮೃತಪಟ್ಟ ಸದರೀ ಶ್ರೀನಿವಾಸಯ್ಯಂಗಾರ್ರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮುಳಂದೂರು ಕಸಬಾ ಸ್ಥಳದ ಸದರೀ ವೆಂಕಟಾಚಾರು, ಸದರೀ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ

200 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ಕ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ವೆಂಕಟಾಚಾರ್ರ ಅರ್ಜಿಯನ್ನು ಸರ್ಕ 1896ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಗ್ಗೆ ಖ್ಯಾತಿಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂಥು ಇದರಿಂದ ತಿಳಿಯಪಡಿಸಿ ಇಧೆ.

ಸರ್ಕ 1895ನೇ ಇಸವಿ ಡಿಸೆಂಬರ್ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್, ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಪ್ರಕಟನೆ.

ತಾರೀಖು 1ನೇ ಜನವರಿ 1896.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿಯಲ್ಲಿ ಕಂಡ ಹೋಬಳಿಗಳಲ್ಲಿ ಸಂದಲ್ ಮರಗಳನ್ನು ಬೇರು ಸಮೇತವಾಗಿ ಕೀಳಿಸಿ ಪೊರಟ ಕೆತ್ತನೆ ಮಾಡಿ ಆಯಾಯ ಹೋಬಳಿಗಳಿಗೆ ಬಾಜೂದಲ್ಲಿ ತೋರಿಸಿರುವ ಕೋಠಿಗಳಿಗೆ 1896ನೇ ಇಸವಿ ಅಕ್ಟೋಬರ್ ಆಖೈರ್ ವಳಗಾಗಿ ಸಾಗಿಸುವದಕ್ಕೋಸ್ಕರ ದರಖಾಸ್ತುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು 1896ನೇ ಇಸವಿ ಜನವರಿ ತಾರೀಖು 31ರ ವರಿಗೆ ತೆಗದುಕೊಳ್ಳುತ್ತಾರೆ.

ತಾಲ್ಲೂಕು.	ಹೋಬಳಿ.	ಕೋಠಿ.	ಮೊತ್ತ.
ಹುಣಸೂರು	ಬೆಟ್ಟದಪುರ	ಹುಣಸೂರು	50 ಟನ್
ಹೆಗ್ಗಡದೇವನಕೋಟೆ	ಚನ್ನಹಳ್ಳಿ	ಡಿಟ್ಟೋ	50 ಟನ್
ಗುಂಡ್ಲು	ರಾಘವಾಪುರ	ಶ್ರೀರಂಗಪಟ್ಣ	25 ಟನ್
ಚಾಮರಾಜನಗರ	ಸಂತೆಮಾರಹಳ್ಳಿ	ಡಿಟ್ಟೋ	25 ಟನ್
ಮೈಸೂರು	ಸಿಂದವಳ್ಳಿ	ಡಿಟ್ಟೋ	25 ಟನ್

2. ತವಸೀಲ್ ದರಖಾಸ್ತುಗಳೂ "ಫಲಾನಾ ಕೋಠಿಗೆ ಫಲಾನಾ ಹೋಬಳಿಯಿಂದ ಸಂದಲ್ ಮರಗಳನ್ನ ಕೀಳಿಸಿ ಪೊರಟ ಕೆತ್ತನೆಯಿಂದ ಸಾಗಿಸಲು ದರಖಾಸ್ತು" ಯಂಬದಾಗಿ ಮೇಲ್ ವಿಳಾಸ ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಪ್ರತಿ ಒಂದು ಹೋಬಳಿಗೂ 100 ರೂಪಾಯಿ ಮತ್ತು ಇತರ ತಾಲ್ಲೂಕು ಪ್ರತಿ ಒಂದು ಹೋಬಳಿಗೂ 50 ರೂಪಾಯಿ ಬೆಲೆಯುಳ್ಳ ಕರ್ರೆನ್ಸೀ ನೋಟಾಗಲಿ ಯಾ ಪ್ರೋನೋಟಾಗಲಿ ರವಾನಿಸಬೇಕು. ದರಖಾಸ್ತುಗಳು 1896ನೇ ಇಸವಿ ಜನವರಿ 31ನೇ ತಾರೀಖಿನಲ್ಲಿ ಹಾಜರು ಇರತಕ್ಕ ದರಖಾಸ್ತುದಾರ್ರ ಯದುರಿಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಪಡೆಯಲ್ಪಟ್ಟು ಕರ್ರೆನ್ಸೀ ನೋಟುಗಳು ವಾಪಸು ಮಾಡಲ್ಪಡುವವು.

3. ಪ್ರತಿ ದರಖಾಸ್ತಿನಲ್ಲಿಯೂ ಮರಗಳನ್ನ ಕೀಳಿಸಿ ಪೊರಟು ಕತ್ತನೆ ಮಾಡಿಸುವದಕ್ಕೆ ಸರಮರಕ್ಕೆ ಮತ್ತು ತಲೆ ಕೊನೆಗಳಿಗೆ ಪ್ರತ್ಯೇಕವಾಗಿ ದರ ಟನ್ ಒಂದಕ್ಕೆ ಇಷ್ಟೆಂದು ದರ ನಮೂದಿಸಬೇಕು. ಮತ್ತು ಕೋಠಿಗೆ ರವಾನೆಗೆ ದರ ಟನ್ ಒಂದಕ್ಕೆ ಜಂಗಲ್ ಮೈಲಿ ಒಂದಕ್ಕೆ ಇಷ್ಟುದರವೆಂತಲೂ ಮತ್ತು ಹೈ ರೋಡ್ ಮೈಲಿ ಒಂದಕ್ಕೆ ಇಷ್ಟುದರವೆಂತಲೂ ಪ್ರತ್ಯೇಕವಾಗಿ ನಮೂದಿಸಬೇಕು.

4. ಯಲ್ಲಾ ಮರಗಳೂ ತಾಯಿಬೇರು ಕಾಲುಬೇರು ಮತ್ತು ಪಕ್ಕದ ಬೇರುಗಳ ಪೊಂದಿಗೆ ಕೀಳಿಸಲ್ಪಡಬೇಕು. ಜಮೀನಿನಲ್ಲಿ ಚೆಗ ಇರತಕ್ಕ ಮರಗಳು ಯಾವದೂ ಬಿಡಲ್ಪಡಕೂಡದು. ಮರಗಳ ರೆಂಬೆಗಳು ಕೊಡ್ಲಿಯಿಂದ ಕತ್ತರಿಸಲ್ಪಡಕೂಡದು. ಗರಗಸದಿಂದ ಕೊಯ್ಯಲ್ಪಡಬೇಕು. ಬೇರಿನಲ್ಲಿ ಇರತಕ್ಕ ಮಣ್ಣು ಮತ್ತು ಕಲ್ಲುಚನ್ನಾಗಿ ತೆಗಿಯಲ್ಪಡಬೇಕು. ಮರಗಳ ಶಿಪ್ಪೆ ಮತ್ತು ಬಿಳಿ ಚಕ್ಕೆ ಯನ್ನು ಬಹಳ ಹುಷಾರಿನಿಂದ ಮೊದಲು ಮಚ್ಚುಕತ್ತಿಯಿಂದ ಕೆತ್ತಿ ನಂತರ ವೊಳಗಿನ ಚೆಗು ಪೋಲುಗದಂತೆ ಬಾಚಿಯಿಂದ ಕೆತ್ತಬೇಕು. ಮರದ ಚೇಗಿನ ಮೇಲೆ ಯಾವ ಸಂದರ್ಭದಲ್ಲೂ ಕಾಲಂಗುಲ ದಪ್ಪಕ್ಕಿಂತ ಜಾಸ್ತಿಯಾಗಿ ಬಿಳಿ ಮರ ಬಿಡಕೂಡದು. ಬುಕಣಿ ಮತ್ತು ಚೆಗ ಇರತಕ್ಕ ಚೆಕ್ಕೆ ಮರಗಳಜೊತೇಲೇ ಸಾಗಿಸಲ್ಪಡಬೇಕು.

5. ಒಂದು ಅಂಗುಲಕ್ಕಿಂತ ಜಾಸ್ತಿಯಾಗಿ ಚೆಗವುಳ್ಳ ಶಿಪ್ಪೆ ತಲೆಗಳು ಜಂಗಲ್‌ಗಳಲ್ಲಿ ಬಿಡಕೂಡದು. ಪೊರಟ ಕೆತ್ತನೆ ಮಾಡದೆ ಹಾಗೆಯೇ ಕೋಠಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಚಾರ್ಜ್ ಮಾತ್ರ ಪಾವತಿ ಮಾಡಲ್ಪಡುತ್ತೆ.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಪ್ರತಿ ಮಾಹೆಯಲ್ಲೂ ಯಷ್ಟು ಮೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕ ಮಾಡುತ್ತಾರೋ ಅಷ್ಟು ಮೊತ್ತವನ್ನ ಖಂಡಿತವಾಗಿ ಕೋಠಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಮೊಕರ್ರರ್ಮಾಡಲ್ಪಡುವ ಪೆನಾಲಿಟಿಗೆ ಗುರಿಯಾಗತಕ್ಕದ್ದು.

7. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡೆದುಕೊಳ್ಳುವ ಬಗ್ಯೆ ಜಾಮೀನ್ ತರೀಕ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಪ್ರತಿ ಒಂದು ಹೋಬಳಿಗೆ 200 ರೂಪಾಯಿನ ಡಿಪಾಜಿಟ್ ಮತ್ತು ಇತರ ತಾಲ್ಲೂಕುಗಳ ಪ್ರತಿ ಒಂದು ಹೋಬಳಿಗೆ 100 ರೂಪಾಯಿನ ಡಿಪಾಜಿಟ್ ಕಟ್ಟಬೇಕು. ಮೇಲ್ಕಂಡ ಷರತ್ತುಗಳ ಮೇರೆ ನಡೆಯಲೂ ತಪ್ಪಿದಲ್ಲಿ ಠೇವಣೀ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಛಾಪಾ ಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

9. ಸಂದಲ್ ಮರಗಳ ಚುನಾಯಿಸೋಣ, ಕೀಳುವಿಕೆ ಪೊರಟ ಕೆತ್ತನೆ ಮತ್ತು ಅದೇ ವಿಷಯಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮಾಡುವ ರೂಲ್‌ಸ್ ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿ ಇರತಕ್ಕದ್ದು.

10. ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರು ತಮ್ಮ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕನ್‌ಸರ್‌ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

11. ಉದ್ದೇಶಿಸುವ ಕಂಟ್ರಾಕ್ಟುದಾರನು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಬ್ದುಲ್‌ಕರೀಮು, ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್.

ಹಾಸನ ಡಿಸ್ಟ್ರಿಕ್ಟು.

ಬೇಲೂರು ತಾಲ್ಲೂಕು.

ಇಸ್ತಿಹಾರ್‌ನಾಮಾ.

ತಾರೀಖು 11ನೇ ಡಿಸೆಂಬರ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಶಿರಗೂರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ 1896ನೇ ಇಸವಿ ಫೆಬ್ರುವರಿ ತಾರೀಖು 17ನೇ ಸೋಮವಾರ ಹಗಲು 11 ಘಂಟೆಗೆ ಹಾಸನ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಡಿಸಿ ಬೇಲೂರು ತಾಲ್ಲೂಕು ಅಮಲ್‌ದಾರ್ರ ರೂಬರೂ ಬೇಲೂರು ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ (25) ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಬ್ಯೆರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಖಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ ಸವಾಲ್ ಮೊಬಲಗಿನಲ್ಲಿ ಸರ್ವೇ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ಒಳಪಟ್ಟು ಆಬ್ಯೆರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯ್ಯಾಸ್ತಮಯಕ್ಕೆ ಮುಂಚೆಯೇ ಆಬ್ಯೆರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಪೂರಾ ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತಿ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜು ದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೇ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ, ವಿಸ್ತೀರ್ಣ.	ದರಖಾಸ್ತು ಜಮೀನಿನ, ಆಕಾರ.	ಷರಾ.
83	ಕೋಗೋಡು ನಂಜುಂಡಶೆಟ್ಟರು, ಹಾಸನದಲ್ಲಿರುವ ಹಾಜಿ ಗೌಸ್‌ಮೊ ಹದರ್ದೀಷರೀಫ್ ಸಾಹೇಬ್.	ಅರೇಹಳ್ಳಿ ಹೋಬಳಿ ಶಿರಗೂರು ಗ್ರಾಮ.	ಪೂರ್ವ ಮತ್ತು ದಕ್ಷಿಣ ಸರ್ವೇ ನಂಬರು 82 ಮತ್ತು ಪ್ಲೋಡು ನಂಬರು 129 ಪಶ್ಚಿಮ ಸರ್ವೇ 4½ ಉತ್ತರ ಹಳ್ಳ.	ಎಕರೆ 70 ಗುಂಟೆ 32	..	

ತಿಳುವಳಿಕೆ ಷರಾ,—ಬಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೇ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತಿ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೇ ಆಗಲಿ ಜಮೀನ್ ಹಿಡುವಳೀ ದಾರನು ಬದ್ಧನ ಅರ್ಹನಾಗಿರಬೇಕು.

ನೋಟಿಫಿಕೇಷನ್.

ತಾರೀಖು 17ನೇ ಡಿಸೆಂಬರ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ತಾಲ್ಲೂಕು ಬಾಣಾವಾರದ ಹೋಬಳಿ ಬೇಚಿರಾಖ್ ಚಿಕ್ಕ ಬಾಣಾವಾರ ಗ್ರಾಮದಲ್ಲಿ 146 ರೂಪಾಯಿ ಆಕಾರವುಳ್ಳ 196 ಎಕರೆ 32 ಗುಂಟೆ ಜಮೀನನ್ನು ಪೂರಾ ಆಕಾರಕ್ಕೆ ಸಾಗುವಳಿಗೆ ಹರಾಜಿಲ್ಲದೆ ಕೊಡಿಸಬೇಕು ಯಂತ ಬಾಣಾವಾರದಲ್ಲಿರುವ ಜಾವಗಲ್ಲು ವೆಂಕಟೇಶಯ್ಯ ದರಖಾಸ್ತು ಮಾಡಿದ್ದಾನೆ.

ಈ ಜಮೀನುಗಳಲ್ಲಿ 540 ದೊಡ್ಡ ಕೇಂದೀ ಮರಗಳು 543 ಈಚಲುಗುಂಬ ಸೊಸಿಗಳು 872 ಈಚಲು ಸಣ್ಣ ಸೊಸಿಗಳು 6 ಇತರ ಜಾತಿ ಮರಗಳು ಇರುವಂತೆಯೂ ಇವುಗಳಿಗೆ ಒಟ್ಟು ರೂ. 522—6—0 ಕಿಮ್ಮತ್ತು ಆಗುವದಾಗಿ ತಿಳಿಯಬರುತ್ತೆ, ಈ ಜಮೀನುಗಳನ್ನು ಮಾಲಿಕೆ ಹರಾಜ್ ಇಲ್ಲದೇನೇ ತನಿಗೆ ಕೊಡಿಸಬೇಕು. ಹಾಗೆ ಕೊಟ್ಟದ್ದೇ ಆದರೆ ಜಮೀನು ಸ್ವಾಧೀನವಾದ ಲಾಗಾಯತು ಒಂದು ವರುಷದಲ್ಲಿ (10) ಒಕ್ಕಲು ಇರಲು ತಕ್ಕ ಮನೆಗಳನ್ನ ಕಟ್ಟಿ ಒಕ್ಕಲನ್ನು ತಂದು ಇಟ್ಟು ಗ್ರಾಮ ಆಬಾದು ಮಾಡುವದಾಗಿಯೂ, ಮೇಲ್ಕಂಡ ವಾಯಿದೆ ಒಳಗೆ ಗ್ರಾಮ ಆಬಾದು ಮಾಡಲು ಖಾತರೆ ಬಗ್ಗೆ ನೂರು ರೂಪಾಯಿಗಳನ್ನು ಹಾಜರ್ಮಾಡುವದಾಗಿಯೂ, ವಾಯಿದೆ ಅಂದರ್‌ವಾರಿ ಗ್ರಾಮಕಟ್ಟ 10 ಒಕ್ಕಲು ತಂದು ಇಡಲು ತಪ್ಪಿದರೆ ಡಿಪಾಜಿಟ್ ಇಡುವ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಬಹುದೆಂದು ದರಖಾಸ್ತುದಾರ ಬಯಾನ್ ಮಾಡುತ್ತಾನೆ. ಈ ದರಖಾಸ್ತುದಾರನ ಸವಾಲಿಗಿಂತ ಸರಕಾರಕ್ಕೆ ಫಾಯಿದೆ ಮತ್ತು ಅನುಕೂಲವಾದ ಸವಾಲ್ ಮಾಡಿ ಜಮೀನು ಪಡಿಯಲು ಇಚ್ಛೆಯುಳ್ಳವರು ಈ ಇಸ್ತಿಹಾರ್ ಹುಟ್ಟಿದ ತಾರೀಖು ಲಾಗಾಯತು 3 ತಿಂಗಳೊಳಗೆ ಅರಸೀಕೆರೆ ತಾಲ್ಲೂಕು ಅಮಲ್ದಾರರಲ್ಲಿ ದರಖಾಸ್ತು ಮಾಡಬಹುದು.

ಈ ಮೇರೆ ಹಾಲಿ ಬಂದಿರುವ ದರಖಾಸ್ತಿಗಿಂತ ಅನುಕೂಲವಾದ ಸವಾಲುಗಳು ಮೇಲ್ಕಂಡ 3 ತಿಂಗಳೊಳಗಾಗಿ ಬಾರದೆ ಇದ್ದರೆ ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸಿನ XXನೇ ರೂಲ್ 18ನೇ ಪ್ಯಾರಾ ಪ್ರಕಾರ ದರಖಾಸ್ತುಗಳು ಅವುಗಳ ಯೋಗ್ಯತಾನುಸಾರವಾಗಿ ಫೈಸಲ್ಮಾಡಲ್ಪಡುವವು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಕಚೇರಿಯಿಂದ.

ತಾರೀಖು 10ನೇ ಡಿಸೆಂಬರ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗಾ ತಾಲ್ಲೂಕು ಹಿರಿಯೂರು ಮಾಗಣಿ ಪುಜನಿಪುರವೆಂಬ ಬೇಚಿರಾಖ್ ಗ್ರಾಮದಲ್ಲಿ ಬಂಜರನಲ್ಲಿರುವ ಯಕರೆ 82—31 ಆಕಾರ ರೂಪಾಯಿ 154—8—0 ಉಳ್ಳ ಸಾಗುವಳಿ ಲಾಯಖು ವಿಶಿಷ್ಟ ಜಮೀನುಗಳನ್ನೂ ಬಾಜೂದಲ್ಲಿ ಕಾಣಿಸಿರುವ ಆಳವೆ ಕಂದಾಯದ ಮೇಲೆ ಸಾಗುವಳಿಗೆ ಕೊಡಿಸಬೇಕೆಂತಲೂ ಸದರೀ ಜಮೀನುಗಳ ಮೇಲಿನ ಅಂದಾಜಾ ರೂಪಾಯಿ 25—7—0 ಪೆಡನೆ ಕೊಡುವದಾಗಿಯೂ ಸದರೀ

			ರೂ. ಅ. ಪೈ.
1ನೇ ಸಾಲಿಗೆ	...	ಕಂದಾಯ.	.. 15—8—0
2ನೇ ಸಾಲಿಗೆ	..	ಡಿಟೋ	.. 31—0—0
3ನೇ ಸಾಲಿಗೆ	..	ಡಿಟೋ	.. 46—8—0
4ನೇ ಸಾಲಿಗೆ	..	ಡಿಟೋ	.. 62—0—0
5ನೇ ಸಾಲಿಗೆ	..	ಡಿಟೋ	.. 77—8—0
6ನೇ ಸಾಲಿಗೆ	..	ಡಿಟೋ	.. 93—0—0
7ನೇ ಸಾಲಿಗೆ	..	ಡಿಟೋ	.. 108—8—0
8ನೇ ಸಾಲಿಗೆ	..	ಡಿಟೋ	.. 124—0—0
9ನೇ ಸಾಲಿಗೆ	..	ಡಿಟೋ	.. 139—8—0
10ನೇ ಸಾಲಿಗೆ	..	ಡಿಟೋ	.. 154—8—0

10 ಸಾಲ್ ಆಳವೆ ಕಾಲದಲ್ಲಿ ವರ್ಷ ಸಾಲ್ 10ನೇ ಒಂದು ಭಾಗದ ಮೇಲೆ ಆಳವೆ ಆಖೈರ್ ವಾಯಿದೆ ಒಳಗೆ ಪೂರಾ ಜಮೀನ್ ಕಿರ್ದಿಗೆ ತಂದು ಸಾಗುವಳಿ ಮಾಡುವದಾಗಿಯೂ ತಪ್ಪಿದರೆ ಸದರೀ ಜಮೀನುಗಳಿಗೆ ಷುರೂ ಸಾಲ್ ಲಾಗಾಯತು ಸರಕಾರಕ್ಕೆ ಭರ ಆಕಾರ ಕೊಡುವದಾಗಿಯೂ ಈ ಷರತ್ತುಗಳ ಮೇಲೆ ಸಾಗುವಳಿಗೆ ಕೊಡಿಸಬೇಕೆಂದು ಹಿರಿಯೂರ ಶಾನುಭೋಗ ಸೀತಾರಾಮಪ್ಪ 1 ಪಟೇಲ್ ಜಗನ್ನಾಥಪ್ಪನಾಯ್ 1 ಇವರಿಬ್ಬರೂ ದರಖಾಸ್ತು ಕೊಟ್ಟಿರುತ್ತಾರೆ. ಆದ್ದರಿಂದ ದರಖಾಸ್ತು ಮಾಡಲ್ಪಟ್ಟ ಜಮೀನುಗಳನ್ನು ಭರ ಆಕಾರದ ಮೇಲಾಗಲಿ ಅಥವಾ ಮೇಲೆ ಕಂಡ ದರಖಾಸ್ತುದಾರರು ನಮೂದಿಸುವ ಆಳವೆ ಕಾಲ ಮತ್ತು ಷರತ್ತುಗಳಿಗಿಂತಲೂ ಕಮ್ಮಿಯಾದ ಕಾಲ (ವ ಷರತ್ತುಗಳ ಮೇಲಾಗಲಿ) ಅಥವಾ ಸರಕಾರಕ್ಕೆ ಲಾಭಕರವಾದ ಇತರ ಷರತ್ತು ವಗೈರೆ ಮೇಲಾಗಲಿ ದರಖಾಸ್ತು ಮಾಡಲಪೇಕ್ಷೆಯುಳ್ಳವರು ಈ ತಾರೀಖು ಲಾಗಾಯತು 3 ತಿಂಗಳೊಳಗೆ ದರಖಾಸ್ತು ಕೊಡಬಹುದು. ಆ ಪ್ರಕಾರ ದರಖಾಸ್ತುಗಳು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ 20ನೇ ಕಲಂ 18ನೇ ಪ್ಯಾರಾ ಪ್ರಕಾರ ಯುಕ್ತ ಕಂಡ ರೀತಿ ವ್ಯವಸ್ಥೆ ಪಡಿಸಿಕೊಡಲಾಗುಥೀತು.

ಎ. ರಂಗಸ್ವಾಮಯ್ಯಂಗಾರ್, ಡೆಪ್ಯುಟಿ ಕಮ್ಮಿಷನರ್.

ಚಹರೇಪಟ್ಟಿ.

ತಾರೀಖು 11ನೇ ಡಿಸೆಂಬರ್ 1895.

ಶಿವಮೊಗ್ಗಾ ಟೌನಿನಲ್ಲಿ ರಾಮಚಂದ್ರಾಚಾರ್ಯರವರ ಮನೆಯಲ್ಲಿ 1895ನೇ ಇಸವಿ ಜನವರಿ ತಾರೀಖು 14ನೇ ರಾತ್ರೆ ಕನ್ನಾಕಳವು ಕೃತ್ಯನಡಿಸಿ ಫರಾರಿ ಆಗಿರತಕ್ಕವನ ಚಹರೆಪಟ್ಟಿ—ಶಿವಮೊಗ್ಗಾ ಡಿಸ್ಟ್ರಿಕ್ಟು 2ನೇ ಅಸಿಸ್ಟೆಂಟ್ ಕಮ್ಮಿಷನರ್ ಮತ್ತು 1ನೇ ಕ್ಲಾಸ್ ಮೇಜಿಸ್ಟ್ರೇಟರವರ ಕೋರ್ಟಿನಿಂದ ವಾರಂಟು ಹುಟ್ಟಿರುತ್ತದೆ.

(ಶಿವಮೊಗ್ಗಾ ಟರ್ವ ಕ್ರೈಂ ನಂಬರ 14—1894—95.

ಹೆಸರು–ಬಾರಾಯಿಮಾಂ, ತಂದೆ ಹೆಸರು—ಬುಡ್ಡಸಾಬ್, ಜಾತಿ—ವುಸಲರ್ವಾ, ವಾಸಸ್ಥಾನ—ಶಿವಮೊಗ್ಗಾ ತಾಲ್ಲೂಕು ಮದಾರಿಪಾಳ್ಯ, ವಯಸ್ಸು—45 ವರುಷ, ಯತ್ರ—5 ಅಡಿ 4 ಅಂಗುಲ, ವರ್ಣ—ಯಣಿಗೆಂಪು, ಗುರ್ತು–ಸತಕ್ಕ ಇತರ ಗುರ್ತುಗಳು.

ಚೂರುವುಖ—ವಿಾಸೆ ಬಿಟ್ಟಿದ್ದಾನೆ, ವಯಸ್ಸು ಆದಹಾಗೆ ಕಾಣುತ್ತಾನೆ ಯಡಗಡೆ ತೊಡೆಮೇಲೆ ಬರೆಹಾಕಿದ ಗುರ್ತು ಇದೆ, ಮೊಣಕಾಲು ಚಿಪ್ಪಿನ ಮೇಲೆ ಘಾಯದ ಕಲೆಗಳು ಇರುತ್ತವೆ. ಮುಸಲ್ಮಾನಿ ಮತ್ತು ಕನ್ನಡ ವಾತು ಆಡುತ್ತಾನೆ, 1882ನೇ ಇಸವಿ ಯಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು 1ನೇ ಅಸಿಸ್ಟೆಂಟ್ ಕಮಿಶ್ನರ ಮತ್ತು 1ನೇ ಕ್ಲಾಸ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ ಇದೇ ತರ ವಾದ ತಕ್ಸೀರಿಗೆ 2 ವರುಷ ಕಠಿಣ ಸಜಾ ಆಗಿರುತ್ತದೆ, ಸಂಬಂಧೀಕರು ಚೀಲೂರು ಹತ್ತರದ (ತಾಲ್ಲೂಕ್ ಹೊನ್ನಾಳಿ) ಗ್ರಾಮಗಳಲ್ಲಿ ರುತ್ತಾರೆ, ಹೆಂಡರು ಮಕ್ಕಳು ಶಿವಮೊಗ್ಗಾ ತಾಲ್ಲೂಕು ಮದಾರಿಪಾಳ್ಯದಲ್ಲಿ ವಾಸವಾಗಿದ್ದಾರೆ.

ಆರ್. ಬಿ. ಪ್ಲೂಮರ,
ಅಸಿಸ್ಟೆಂಟ ಕಮಿಶ್ನರ ಇಂಚಾರ್ಜ್ ಆಫ್ ಶಿವಮೊಗ್ಗಾ ಡಿಸ್ಟ್ರಿಕ್ಟ ಪೊಲೀಸ.

ಫಾರೆಸ್ಟು ಇಲಾಖಾ.

ತಾರೀಖು 13ನೇ ಡಿಸೆಂಬರ 1895ನೇ ಇಸವಿ.

ಸ್ನ 1890ನೇ ಇಸವಿ ಫೆಬ್ರವರಿ ತಾರೀಖು 15ನೇ ವೈಸೂರು ಗೆಜೆಟ 2ನೇ ಭಾಗದ ಪುಟದಲ್ಲಿ ಪ್ರಾಯಿಷ್‌ಮಾಡಿರುವ ಫಾರೆಸ್ಟ್ ಇನ್ಸ್‌ಪೆಕ್ಟರ ಜನರಲ್ ಸಾಹೇಬರವರ ನೋಟಿಫಿಕೇಷನ ಅನುಸರಿಸಿ, ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಬೆಂಕಿಯಿಂದ ರಕ್ಷಿಸಲ್ಪಟ್ಟ ಸ್ಟೇಟ್ ಫಾರಸ್ಟು ಮತ್ತು ಪ್ಲಾಂಟೇಷನಗಳನ್ನ 1896ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು ಮೇ ಆಖೈರುವರಿಗೂ ಬಂದ್‌ಮಾಡಲ್ಪಟ್ಟಿರುತ್ತೆ. ಅಂಬುಗಾರರಿಗೂ, ಷಿಕಾರಿಗಳಿಗೂ, ಜೇಟಿಗಾರರಿಗೂ ಸಹ ಲೈಸೆನ್ಸು ಕೊಡಲ್ಪಡುವದಿಲ್ಲ. ರೂಲ್ಸ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಶಿಕ್ಷಿಸಲ್ಪಡುತ್ತೆ.

ನಂಬರು.	ಫಾರೆಸ್ಟುಗಳ ಹೆಸರು.	ತಾಲ್ಲೂಕುಗಳ ಹೆಸರು.
1	ಶಂಕರಗುಡ್ಡಾ, ಭೂತನಬೈಲಿ ಫಾರೆಸ್ಟ್	ಶಿವಮೊಗ್ಗಾ ತೀರ್ಥಹಳ್ಳಿ
2	ಪುರದಹಾಳ್	ಶಿವಮೊಗ್ಗಾ
3	ಕುಂಚೇನಹಳ್ಳಿ	ಡಿಟೋ
4	ಅನುಪಿನಕಟ್ಟೆ ಪ್ಲಾಂಟೇಷನ	ಡಿಟೋ
5	ಸಕ್ರೆಬೈಲು ಫಾರೆಸ್ಟ್	ಡಿಟೋ ತೀರ್ಥಹಳ್ಳಿ
6	ಡಿಟೋ ಪ್ಲಾಂಟೇಷನ	ಶಿವಮೊಗ್ಗಾ
7	ಚೋರನಡಿಹಳ್ಳಿ	ಡಿಟೋ
8	ಆಯನೂರು ಪ್ಲಾಂಟೇಷನ	ಡಿಟೋ
9	ಆಲಕೊಳ ಡಿಟೋ	ಡಿಟೋ
10	ಕರ್ಲಕೊಪ್ಪ ಸಂಡಲ ಪ್ಲಾಂಟೇಷನ	ಡಿಟೋ
11	ವುಂಬಳಿ ಬೈಲು ಹುಣಸೆಕಟ್ಟೆ	ಡಿಟೋ
12	ಆಲರಹಾರ	ಡಿಟೋ
13	ಕುಂಶಿ	ಡಿಟೋ
14	ಮಸರೂರು	ನಗರ
15	ಕುಕ್ಕವಾಡಾ ವೊಬ್ರಾಣಿ	ಶಿವಮೊಗ್ಗಾ ಚನ್ನಗಿರಿ, ತರೀಕೆರೆ
16	ಚನ್ನಗಿರಿ ಪ್ಲಾಂಟೇಷನ	ಚನ್ನಗಿರಿ
17	ತೆಲ್ಲಗಡೆ, ಆರ ತೆಲಗಡೆ	ಸೊರಬ
18	ಬೆಟ್ಟದ ಕುರ್ಲಿ	ಡಿಟೋ
19	ಶಿದ್ದೆಹಳ್ಳಿ ಪ್ಲಾಂಟೇಷನ	ಡಿಟೋ
20	ಹಳೆಸೊರಬ ಡಿಟೋ	ಡಿಟೋ
21	ಚಂದ್ರಗುತ್ತಿ	ಡಿಟೋ
22	ಕವಡಿ	ಡಿಟೋ
23	ಕವಲಿ	ಶಿಕಾರಿಪುರ
24	ತೋಗರಸಿ	ಡಿಟೋ
25	ಬಸವನಂದಿಹಳ್ಳಿ	ಡಿಟೋ
26	ಕಾಳೆನಹಳ್ಳಿ ಪ್ಲಾಂಟೇಷನ	ಡಿಟೋ
27	ಗಂಗವನಸರ ಸ್ಟೇಟ್ ಫಾರೆಸ್ಟು ಮತ್ತು ಹಾರೋಗೊಪ್ಪಾ ಯರೆಕಟ್ಟೆ ಕಾಪಿಸು ಜಾಗಾ	ಡಿಟೋ ಹೊನ್ನಾಳಿ
28	ಕರಡಿಬೆಟ್ಟ	ಡಿಟೋ ಶಿವಮೊಗ್ಗಾ
29	ಚಂದ್ರಕಲ	ಶಿಕಾರಿಪುರ
30	ಬೆಳಂದೂರು	ಡಿಟೋ
31	ಮಾಲಂದೂರು	ಸಾಗರ
32	ಮಲೆಬೆಂನೂರು	ಹೊನ್ನಾಳಿ, ದಾವಣಗೆರೆ

ಸಿ. ನಾರಾಯಣರಾವ್,
ಡೆಪುಟಿ ಕನ್ಸರ್ವೇಟರ

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಿಷ ಮಾಹೀ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು.	

ಚಾಲ್ತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷರ್ಸ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ. 0 8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್ ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮುಲ್ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ 21ನೇ ಮರ್ಕುಂ 24205—6—ಜಿ. 6200ನೇ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೋಲ್ಕಂಡ ರಿಯಾಯತಿ ದರವು ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

			ರೂ.	ಆ.
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಅಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು:—				
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)			2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ :—				
	ಮೊದಲನೇ ಸಲಕ್ಕೆ		5	0
	ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ		2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತವೆ.				
ಡ್ಯೂಪ್ಲಿಕೇಟ ಕಾಫೀ ಪಟ್ಟಿ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—				
	ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
	ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—				
	ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0	8
	ಎರಡನೇ ದಫಾ ಡಿಟೋ	ಡಿಟೋ	0	6
	ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರಡರ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರು ಗವರ್ನಮೆಂಟ ಜನರಲ್ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಯಿಲ್ಲ.

ಟಿ. ಟಿ. ಲೆನಾರಡ್,
ಮೈಸೂರ ಗೆಜೆಟ ಕಂಪೈಲರ.

MYSORE GOVERNMENT CENTRAL PRESS, BANGALORE—1896.

13

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಪ್ಪ್ ಆದ್ದು. [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ॥ 16, ಸ್ನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಹೊರೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‍ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷ್ರ ವ ಎಡ್ಯುಕೇಷ್ರ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ರ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ರ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಹೊರೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟ್ಸ್‌ಗಳು; ಪೋಸ್ಟಾಫಿಸ್ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ರಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಹೊರೋಣಾದ ಇಸ್ತಿಹಾರ್‌ನಾಮೆಗಳು.

ರೆವಿನ್ಯೂ.

ತಾರೀಖು 10ನೇ ಡಿಸೆಂಬರ್ 1895.

ನಂ. 5364.—ಫೈ. 294.—ಗವರ್ರಮೆಂಟನವರು ಆಜ್ಞಾಪಿಸುವದೇನಂದರೆ,—ಇದರಡಿ ಬರುವ ಜಾಸ್ತಿ ಅಂಶಗಳು ಮತ್ತು ಬದಲಾವಣಿಗಳು ಮೈಸೂರ್ ಸರ್ವಿಸ್ ರೆಗ್ಯುಲೇಷ್ರಗಳಲ್ಲಿ ದಾಖಲ್ ಮಾಡಲ್ಪಡತಕ್ಕದ್ದು.

1. 518ನೇ ಆರ್ಟಿಕಲ್‌ಗೆ ಬದಲಾಗಿ ಸೇರಿಸಲ್ಪಡತಕ್ಕದ್ದೇನಂದರೆ,—"ಆರ್ಟಿಕಲ್ 518 ಯೆ. ಕೌನ್ಸೆಲಿನ ಯಾವ ಮೆಂಬರಾದರೂ ರೈಲ್ ಮೇಲೆ 20 ಮೈಲಿಗಳಿಗೆ ಕಮ್ಮಿ ಯಿಲ್ಲದೆ ಒಂದೇ ಪ್ರಯಾಣ ಮಾಡಬೇಕಾಗಿದ್ದು ಅಂಥಾ ಪ್ರಯಾಣದ ಆಖೈರಿನಲ್ಲಿ ಅವರ

ಉಪಯೋಗಕ್ಕೋಸ್ಕರವಾಗಿ ಬೇಕಾದ ವಾಹನ ಸಾಧನಗಳನ್ನು ಕಳುಹಿಸಿದಾಗ ಅವರಿಗೆ 525, ಬಿ. ಆರ್ಟಿಕಲ್ ಅನುಸರಿಸಿ ಸಲ್ಲಬೇಕಾದ ಸಾಧಾರಣ ಅಲೋಅರ್ವೆನ್ಸ್ ದೇಖೀಲ್ ಅಂಥಾ ವಾಹನ ಸಾಧನವೆಂದರೆ ವಂದು ಗಾಡಿ ಯರಡು ಜೋಡಿ ಕುದರೆಗಳನ್ನು ಕಳುಹಿಸುವ ಬಗ್ಗ್ಯಾಗಿ ತಗಲುವ ಕರಾರುವಾಕಾ ಲಾಗವಷು ಸುದಾ ಪಡಿಯುವ ಬಗ್ಯೆ ಅರ್ಹರಾಗಿರತಕ್ಕದ್ದು.

"518 ಬಿ. ಯಾವದಾದರೂ ವಬ್ಬ ಆಫಿಸರು, ಅವರ ಮೇಲ್‌ದರ್ಜೆ ಆಫಿಸರರ ಜನರಲ್ ಅಥವಾ ಸ್ಪೆಷಲ್ ಮಂಜೂರಾತಿಗೆ ವಳಪಟ್ಟು, ರೈಲ್ ಮಾರ್ಗವಾಗಿ 20 ಮೈಲಿಗಳಿಗೆ ಕಮ್ಮಿ ಇಲ್ಲದೆ ವಂದೇ ಪ್ರಯಾಣ ಮಾಡಬೇಕಾಗಿದ್ದು ಅಂಥಾ ಪ್ರಯಾಣದ ಆಖೈರಿನಲ್ಲಿ ಅವರ ಉಪಯೋಗಕ್ಕೋಸ್ಕರವಾಗಿ ಬೇಕಾದ ವಾಹನ ಸಾಧನಗಳನ್ನು ಕಳುಹಿಸಿದಾಗ ಅವರಿಗೆ 522ನೇ ಆರ್ಟಿಕಲ್ ಅನುಸರಿಸಿ ಸಲ್ಲಬೇಕಾದ ಸಾಧಾರಣ ಅಲೋಅರ್ವೆನ್ಸ್ ದೇಖೀಲ್ ಅಂಥಾ ವಾಹನ ಸಾಧನವನ್ನು ಕಳುಹಿಸುವ ಬಗ್ಗ್ಯಾಗಿ ತಗಲುವ ಕರಾರುವಾಕಾ ಲಾಗವಷು ಸುದಾ ಪಡಿಯುವ ಬಗ್ಯೆ ಅರ್ಹರಾಗಿರತಕ್ಕದ್ದು.

ಈ ಸಬ್ ಆರ್ಟಿಕಲ್‌ನಲ್ಲಿ "ವಾಹನ ಸಾಧನ" ಅಂದರೆ—

(1) ಡಿಸ್ಟ್ರಿಕ್ಟ್ ಜಡ್ಜಿಗಳು, ಡೆಪ್ಯುಟಿ ಕಮ್ಮಿಷನರ್‌ಗಳು ಮತ್ತು ಎಗ್ಸಿಕ್ಯೂಟಿವ್ ಇಂಜನೀಯರ್‌ಗಳು ಅಥವಾ ರವಿನ್ಯೂ, ಜುಡಿಷ್ಯಿಯಲ್ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಗಳಲ್ಲಿ ಇವರುಗಳಿಗೆ ಮೇಲ್ಪಟ್ಟ ದರ್ಜೆವುಳ್ಳ ಆಫಿಸರರು ಅಥವಾ ಯಾವದಾದರೂ ಇತರ ಗೊತ್ತಾದ ಆಫಿಸರ್‌ಗಳು, ಇವರುಗಳ ವಿಷಯದಲ್ಲಿ, ವಂದು ಗಾಡಿ ಯರಡು ಕುದರೆಗಳು ಯಂದು ಅನ್ವಯಿಸತಕ್ಕದ್ದು.

(2) ಇತರರ ವಿಷಯದಲ್ಲಿ, ವಂದು ಸವಾರಿ ಕುದರೆಯೆಂದು ಅನ್ವಯಿಸತಕ್ಕದ್ದು.

ಷರಾ 1.—ಮಾಹೆಯಾನಾ ಸರ್ಕೀಟ್ ಭತ್ಯವನ್ನು ಖಾಯಂ ಆಗಿ ಪಡಿಯುವ ಯಾವ ಆಫಿಸರಾಗಲಿ ಈ ಸಬ್ ಆರ್ಟಿಕಲಿನ ಪ್ರಯೋಜನಗಳಿಗೆ ಅರ್ಹರಾಗಿರುವದಿಲ್ಲವು.

ಷರಾ 2.—ಈ ಸಬ್ ಆರ್ಟಿಕಲ್ ಅನುಸರಿಸಿ ಮೇಲ್ ದರ್ಜೆ ಆಫಿಸರರ ಮಂಜೂರಾತಿಯು ಸರ್ಕಾರದ ಕೆಲಸಗಳ ಅನುಕೂಲ್ಯತೆಗಳಿಗೋಸ್ಕರವೇ ಕೊಡಲ್ಪಡತಕ್ಕದ್ದು, ಹಾಗೆ ಕೊಟ್ಟಾಗ ಕಾರಣಗಳ ಸಮೇತವಾಗಿ ಗವರ್ನಮೆಂಟಿಗೆ ಜನರಲ್ ಇಲಾಖೆಯಲ್ಲಿ ತಕ್ಷಣ ತಿಳಿಸಲ್ಪಡಬೇಕು."

II. 525 ಯೆ. ಆರ್ಟಿಕಲಿಗೆ ಬದಲಾಗಿ ಸೇರಿಸಲ್ಪಡಬೇಕಾದ್ದೇನಂದರೆ:—

"525 ಯೆ. ಕೌನ್ಸಲ್ಲಿನ ವೊಬ್ಬ ಮೆಂಬರು ರೈಲ್ ಮಾರ್ಗವಾಗಿ ಸರ್ಕಾರ ಕೆಲಸದ ಮೇಲೆ ಪ್ರಯಾಣ ಮಾಡಿದಾಗ ಅಂಥಾ ರೈಲ್ವೆ ಪ್ರಯಾಣಕ್ಕೋಸ್ಕರ ಅವರಿಗೆ ಸಲ್ಲಬೇಕಾದ್ದೇನಂದರೆ,—

(1) ಅವರಿಗೋಸ್ಕರ ಫಸ್ಟ್‌ಕ್ಲಾಸ್ ಬಂಡಿಯ ವಂದು ಕಂಪಾರ್ಟ್‌ಮೆಂಟ್;

(2) ಖಾಸ ನೌಕರರಿಗೋಸ್ಕರ ನಾಲ್ಕು ಥರ್ಡ್‌ಕ್ಲಾಸ್ ಚಾರ್ಜು; ಮತ್ತು

(3) ಖಾಸ ಸಾಮಾನಿಗೋಸ್ಕರ ಹತ್ತು ಮಣಕ್ಕೆ ಮೀರದ ತೇದಾದಿಗೆ ರೈಲ್ವೆ ಚಾರ್ಜು."

III. ಆರ್ಟಿಕಲ್ 528ರಲ್ಲಿ ನಮೂದಾದ ಯರಡನೇ ನಂಬರ್ ಅಪೆಂಡಿಕ್ಸಿನಲ್ಲಿ ಸೇರಿಸಲ್ಪಡಬೇಕಾದ್ದೇನಂದರೆ—"ಕೌನ್ಸಿಲ್ ಮೆಂಬರುಗಳಿಗೆ–ಭತ್ತ ಹತ್ತು ರೂಪಾಯಿ, ಮೈಲಿಭತ್ತ–ಮೈಲಿ ವಂದಕ್ಕೆ ಯಂಟಾಣೆ."

IV. ಆರ್ಟಿಕಲ್ 552ಕ್ಕೆ ಸೇರಿಸಲ್ಪಡಬೇಕಾದ್ದೇನಂದರೆ—"ಷರಾ–ಈ ಆರ್ಟಿಕಲ್ ಕೌನ್ಸಲಿನ ಮೆಂಬರುಗಳಿಗೆ ಅನ್ವಯಿಸತಕ್ಕದ್ದಲ್ಲವು."

ತಾರೀಖು 11ನೇ ಡಿಸೆಂಬರ್ 1895.

ನಂ. 5508.—ಎಕ್ಸೈಸ್. 182.—ಮೈಸೂರು ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ, 1892ನೇ ಇಸವಿ ಮಾರ್ಚಿ 30ನೇ ಮಾರ್ಕಂ 495ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ ರೂಲ್‌ಗಳ 21ನೇ ರೂಲಿನ 5ನೇ ಕ್ಲಾಜಿಗೆ ಕೇರಿದ (2) ವ (3)ನೇ ಸಬ್ ಕ್ಲಾಜ್‌ಗಳಿಗೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು.

(2) ಸದರೀ ಸ್ವಾತಂತ್ರಿಯವನ್ನು ಖರೀದಿಗೆ ಪಡೆದುಕೊಂಡಂಥಾ ಮೊಬಲಗು ಸದರೀ ಕಾಂಟ್ರಾಕ್ಟಿನ ಮೊದಲನೇ ತಿಂಗಳಾರಭ್ಯ ಮಾಹೆಯಾನ ಸಮನಾದ ಖಿಸ್ತುಗಳಾಗಿ ಸ್ಥಳಿಕ ತಾಲ್ಲೂಕು ಟ್ರೆಜರೀಗೆ ವಿಧಿಸಲ್ಪಟ್ಟ ಅಚ್ಚಿನ ಚಲಾನ್ ಮುಖಾಂತ್ರ ಪಾವತಿಮಾಡಲ್ಪಡಬೇಕು. ಪ್ರತಿ ಖಿಸ್ತು ಅದು ಪಾವತಿ ಮಾಡಲ್ಪಡಬೇಕಾದ ತಿಂಗಳಿನ ಇಜಾರೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್‌ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಲೈಸೆನ್ಸು ದಂಡವಾಗಿ ಕಳೆದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ರಿಕಾರ್ಡು ಮಾಡಿ ಮಾಹೆ ಆಖೈರ್ ಆದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ ಇಜಾರೆಯನ್ನು ಮರಳಿ ಹರಾಜು ಮಾಡತಕ್ಕದ್ದು. ಪರಂತು ಮೇಲ್ಕಂಡಂತೆ ಇಜಾರೆಯನ್ನು ಪುನಃ ವಿಕ್ರಯಿಸುವದಕ್ಕೆ ಬದಲಾಗಿ ಡೆಪ್ಯುಟಿ ಕಮ್ಮಿಷನರವರು ಅವರ ಯುಕ್ತಾನುಸಾರ ಹಾಗೆ ತಪ್ಪಿಹೋದ ಇಜಾರೆಯನ್ನು ಹಾಲಿ ಇರತಕ್ಕ ಅದಕ್ಕೆ ಕೇರಿದ ದುಕಾನುವಾರಾಗಿ ವಿಂಗಡಿಸಲ್ಪಟ್ಟ ಪ್ರತಿ ಬೇರೆಬೇರೆ ದುಕಾನುದಾರನಿಗೂ ಅವನು ಪಾವತಿ ಮಾಡುವದಕ್ಕೆ ವಪ್ಪುವ ಗುತ್ತಿಗೆ ಮೊಬಲಗಿಗೋಸ್ಕರ ಬಂದು ಲೈಸೆನ್ಸ್ ಕೊಡುವಂತೆ ಅಮಲ್‌ದಾರರಿಗೆ ಹುಕುಂ ಕೊಡಬಹುದು. ಪರಂತು ಹೀಂಗೆ ಕೊಡೋಣಾದ ಗುತ್ತಿಗೆಯು ವಟ್ಟು ಮೊಬಲಗು ತಪ್ಪಿಹೋದ ಇಜಾರೆದಾರನು ಪಾವತಿ ಮಾಡುವದಕ್ಕೆ ವಪ್ಪಿ ಇದ್ದ ಮೊಬಲಗಿಗಿಂತಲೂ ಕಮ್ಮಿ ಆಗಿರಕೂಡದು. ಚಲಾನ್‌ಗಳು ಇದಕ್ಕೆ ಲಗತು ಮಾಡಿರುವ ಈ ನಮೂನೆಯಲ್ಲಿ ಮೂರು ಪ್ರತಿಗಳಾಗಿರತಕ್ಕದ್ದು. ಇವರ ವರಿಜನಲ್ ಕಾಪಿಯು ಟ್ರೆಜರಿಯ ರೋಜ್‌ನಾಮೆ ಲೆಖ್ಖ ಮೊಂದಿಗೆ ಡಿಸ್ಟ್ರಿಕ್ಟ್ ಟ್ರಜರೀಗೆ ಕಳುಹಿಸಲ್ಪಡತಕ್ಕದ್ದು. ಎರಡನೇ ಪ್ರತಿಯು ತಾಲ್ಲೂಕು ಟ್ರೆಜರಿ ಆಫಿಸರರಿಂದ ಎಕ್ಸೈಜ್ ಕಮ್ಮಿಷನರ ಆಫಿ

ಸಿಗೆ ಕಳುಹಿಸಲ್ಪಡತಕ್ಕದ್ದು, ಮೂರನೇ ಪ್ರತಿಯು ಇಜಾರೆದಾರನ ಬಳಿ ಇಡಲ್ಪಡತಕ್ಕದ್ದು. ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿರತಕ್ಕ ದುಕಾನುಗಳಿಗೋಸ್ಕರ ಪಾವತಿ ಮಾಡಲ್ಪಡಬೇಕಾದ ಮೊಬಲಗು ಸದರೀ ಸಿವಿಲ್ ವ ಮಿಲಿಟರಿ ಸ್ಟೇಷನಿನ ಕಲೆಕ್ಟರಿಂದ ದುಕಾನುದಾರರಿಗೆ ಕೊಡಲ್ಪಡುವ ಅಚ್ಚಿನ ಚರ್ಲಾಗಳ ಮುಖಾಂತರ ರೆಸಿಡೆಂಟರ ಟ್ರೆಜರಿಯಲ್ಲಿ ಪಾವತಿಮಾಡಲ್ಪಡಬೇಕು.

(3) ಲೈಸೆನ್ಸದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಇಜಾರೆ ವಾಯಿದೆಯ ಆಖೈರ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಮೇಲ್ಕಂಡಂತೆ ಎರಡನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಅಥವಾ ವಿಂಗಡಿಸಲ್ಪಟ್ಟಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮಿಶ್ನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದವನಿಂದ ಬರಪೇಕಾದ ಬಾಕಿಗೋಸ್ಕರವೂ ಇಜಾರೆಯು ದುಸರೇ ಹರಾಜು ಮಾಡಿದ್ದರಿಂದ ವುಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತಿ ಮಾಡುವ ಬಗ್ಯೆ ವುಪಯೋಗಿಸಲ್ಪಡಬಹುದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳೂ ಸುದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಶೇಕಡ ಸಾಲಿಯಾನ ಆರ್ರಂತೆ ಆಗುವ ಬಡ್ಡಿ ದೇಖಿಲ್ ಲೈಸೆನ್ಸದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಯೆ ಅಥವಾ ಈಡು ಮೊಬಲಗು ಪಡೆಯುವ ಬಗ್ಯೆ ಕೇಳಲ್ಪಡಕೂಡದು.

2. ಕರಾರ್ ಮತ್ತು ಲೈಸೆನ್ಸ್ ವಗೈರೆಗಳ ಷರತ್ತುಗಳು ಬದಸ್ತೂರ್ ಬದಲಾಯಿಸಲ್ಪಡತಕ್ಕದ್ದು.

ನಂ. 5512.—ಎಕ್ಸ್. —183.—1893ನೇ ಇಸವಿ ಜನವರಿ 14ನೇ ಮುಕ್ಕಾಂ 11739—10—ರೆ. ಫೈ. 233—92ನೇ ನಂಬರ್ ಪ್ರೊಸಿಡಿಂಗ್ಸಿನಲ್ಲಿ ಮಂಜೂರ್ಮಾಡಲ್ಪಟ್ಟ 11813—ರೆ. ಫೈ. 233—92ನೇ ನಂಬರ್ ಇಶ್ತಿಹಾರ್ನಾಮೆಯೊಡನೆ ಪ್ರಾಯಿಷ್ಮಾಡಲ್ಪಟ್ಟ ರೂಲ್ಸ್‌ಗಳ Vನೇ ರೂಲಿನ 6ನೇ ಕ್ಲಾಜ್ (2) ವ (3)ನೇ ಸಬ್ ಕ್ಲಾಜ್‌ಗಳಿಗೆ ಇದರಡಿ ಬರುವದನ್ನ ಸೇರಿಸತಕ್ಕದ್ದೆಂದು ಮೈಸೂರು ಗವರ್ನಮೆಂಟಿನವರು ಅಜ್ಞಾಪಿಸುತ್ತಾರೆ:—

(2) ಬಟ್ಟು ಸ್ವಾತಂತ್ರ್ಯವು ಖರೀದಿಗೆ ಪಡೆದುಕೊಂಡಂಥಾ ಮೊಬಲಗು ಖಿಸ್ತುಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ದೇಖಿಲ್, ಲೈಸೆನ್ಸದಾರನಿಂದ ಸ್ಥಳಿಕ ಖಜಾನೆಗೆ ಆ ಬಗ್ಯಾಗಿ ಗವರ್ನಮೆಂಟಿನಿಂದ ಒದಗಿಸಲ್ಪಡುವ ವಿಧಿಸೋಣಾದ ಅಚ್ಚಿನ ಚರ್ಲಾ ಮೇಲೆ, ಗುತ್ತಿಗೆಯ ಮೊದಲನೇ ತಿಂಗಳಿನಾರಭ್ಯಸಮನಾದ ಮಾಹೆವಾರಿ ಖಿಸ್ತುಗಳಾಗಿ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿ ಖಿಸ್ತು ಮೊಬಲಗೂ ಅದು ಪಾವತಿ ಮಾಡಲ್ಪಡಬೇಕಾದ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಗುತ್ತಿಗೆ ಮೊಬಲಗು ಅದರ ಮೇಲಿನ ಲೋಕಲ್‌ಸೆಸ್ ದೇಖಿಲ್ ಅದೇ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಂಗೆ ಪಾವತಿ ಆಗುವ ದಕ್ಕೆ ತಪ್ಪಿದರೆ, ಸದರೀ ಅಮಲ್‌ದಾರರು, ಡೆಪ್ಯುಟಿ ಕಮಿಶ್ನರವರ ಮಂಜೂರಾತಿಯನ್ನು ಪಡೆದು, ಸದರೀ ಗುತ್ತಿಗೆಯು ರದ್ದಾಗಿರುತ್ತೆಂದು ಬರಹ ಮೂಲಕ ರೆಕಾರ್ಡು ಮಾಡಿ, ಸದರೀ ಮಾಹೆ ಆಖೈರಾದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ, ಇಜಾರೆಯನ್ನು ಮರಳಿ ಹರಾಜ್ ಮಾಡುವದಕ್ಕೆ ಉದ್ಯುಕ್ತರಾಗತಕ್ಕದ್ದು. ಪರಂತು ಸದರೀ ಇಜಾರೆಯನ್ನು ಮೇಲ್ಕಂಡಂತೆ ದುಸರೇ ಹರಾಜು ಮಾಡುವದಕ್ಕೆ ಬದಲಾಗಿ, ಡೆಪ್ಯುಟಿ ಕಮಿಶ್ನರವರು ತಮ್ಮ ಯುಕ್ತಾನುಸಾರ, ಅಂಥಾ ರದ್ದಾದ ಇಜಾರೆಗೆ ಸೇರಿರತಕ್ಕ ದುಕಾನುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ಪ್ರತಿ ದುಕಾನುದಾರನಿಗೂ ಅವನು ಕೊಡುವದಕ್ಕೆ ಒಪ್ಪುವಂಥಾ ಗುತ್ತಿಗೆ ಮೊಬಲಗ್ಯೆ ಬೇರೆ ಬೇರೆ ಲೈಸೆನ್ಸ್ ಕೊಡುವಂತೆ ಹುಕುಂ ಮಾಡಬಹುದು; ಪರಂತು ಅಂಥಾ ಗುತ್ತಿಗೆಯ ಒಟ್ಟು ಮೊಬಲಗು, ತಪ್ಪಿಹೋದ ಕಂಟ್ರಾಕ್ಟುದಾರನು ಪಾವತಿ ಮಾಡುವದಾಗಿ ಒಪ್ಪಿ ಇದ್ದದ್ದಕ್ಕಿಂತಲೂ ಕಮ್ಮಿಯಾಗಿರಕೂಡದು. ಚರ್ಲಾಗಳು ಲಗತ್ತಿರುವ ಸಿ. ನಮೂನೆಯಲ್ಲಿ ತ್ರಿಪ್ರತಿಗಳಾಗಿ ಇರತಕ್ಕದ್ದು. ಇದರ ಒರಿಜನಲ್ ಭಾಗವು ಟ್ರೆಜರಿ "ಲೋಜ್ ಕ್ಯಾಷ್" ಲೆಕ್ಕದೊಂದಿಗೆ ಡಿಸ್ಟ್ರಿಕ್ಟ್ ಟ್ರೆಜರಿಗೆ ರವಾನಿಸಲ್ಪಡತಕ್ಕದ್ದು. ಎರಡನೇ ಭಾಗವು ತಾಲ್ಲೂಕು ಟ್ರೆಜರಿ ಆಫಿಸರಿಂದ ಡೆಪ್ಯುಟಿ ಕಮಿಶ್ನರವರ ಆಫೀಸಿಗೆ ಕಳುಹಿಸಲ್ಪಡತಕ್ಕದ್ದು. ಮತ್ತು ಮೂರನೇ ಭಾಗವು ಲೈಸೆನ್ಸದಾರನಲ್ಲಿ ಇಡಲ್ಪಡತಕ್ಕದ್ದು.

(3) ಲೈಸೆನ್ಸದಾರನಿಂದ ಹಾಜರಾಡಲ್ಪಟ್ಟ ಠೇವಣಿ ಮೊಬಲಗು, ಗುತ್ತಿಗೆ ವಾಯಿದೆಯ ಆಖೈರ್ ಮಾಹೆ ಯಾ ಮಾಹೆಗಳ ಖಿಸ್ತುಗಳಿಗೋಸ್ಕರ ವಸೂಲ್ ಹಾಕಲ್ಪಡಬೇಕು. ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜ್ ಅನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಯಾ ರದ್ದು ಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮಿಶ್ನರವರ ಯುಕ್ತಾನುಸಾರ ದಂಡವಾಗಿ ತೆಗದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು ಇಜಾರೆಯು ಮರಳಿ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಸುದಾ ಉಪಯೋಗಿಸಲ್ಪಡಬಹುದು. ಹಾಂಗೆ ಬರಬೇಕಾದ್ದ ಬಾಕಿ ಮೊಬಲಗು ವ ನಷ್ಟದ ಮೊಬಲಗು ಸುದಾ ಲೈಸೆನ್ಸದಾರನಿಂದಾಗಲಿ ಅವನ ಜಾಮೀನ್‌ದಾರ್ ಯಾ ಜಾಮೀನ್‌ದಾರರಿಂದಲಾಗಲಿ ಯಾ ಪ್ರೈವೆಟ ಯತ್ರರಿಂದಾಗಲಿ, ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯಾಗಿ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, ಶೇಕಡಾ ಸಾಲಿಯಾನಾ 6ರ ಪ್ರಕಾರ ಆಗುವ ಬಡ್ಡಿ ದೇಖಿಲ್ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಬಬಿನ ಮೇಲಾಗಲಿ, ಗುತ್ತಿಗೆ ಮೊಬಲಗಿನ ಯಾವ ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಅಥವಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು.

2. ಒಡಂಬಡಿಕೆ, ಲೈಸೆನ್ಸ್ ವಗೈರೆಗಳ ಷರತ್ತುಗಳು ಬದಸ್ತೂರ್ ಬದಲಾಯಿಸಲ್ಪಡತಕ್ಕದ್ದು, ಮತ್ತು ತೆಗದುಕೊಳ್ಳಬೇಕಾದ ಜಾಮೀನೀ ವಿಷಯದಲ್ಲಿ, 1895ನೇ ಇಸವಿ ಮಾರ್ಚಿ 29ನೇ ಮುಕ್ಕಾಂ 15931—ರೆ. ಫೈ. 210—92ನೇ ನಂಬರ್ ಇಶ್ತಿಹಾರ್ನಾ

ಮೆಯ 3ನೇ ಪ್ಯಾರಾದಲ್ಲಿ ಅಡಗಿರುವದಕ್ಕೆ ಬದಲಾಗಿ 1893ನೇ ಇಸವಿ ಜನವರಿ 14ನೇ ಮರ್ಸ್ಕುಂ 11813—ರೆ. ಫೈ. 233—92ನೇ ನಂಬರ್ ಇಸ್ತಿಹಾರನಾಮೆಯ Vನೇ ರೂಲ್ 2ನೇ ಕ್ಲಾಜಿನಲ್ಲಿ ವಿಧಿಸೋಣಾದ ಷರತ್ತುಗಳು, ಆಚರಿಸಲ್ಪಡತಕ್ಕದ್ದು.

ತಾರೀಖು 14ನೇ ಡಿಸೆಂಬರ 1895.

ತಪ್ಪು ತಿದ್ದುವಿಕೆ.

ನಂ. 5584.—ಫಾ. ಫೈ. 36—95, 1895ನೇ ಇಸವಿ ಜೂನ್ 19ನೇ ಮರ್ಸ್ಕುಂ 23538—ರೆ. 3437ನೇ ನಂಬರ ಗವರ್ನಮೆಂಟ್ ಇಸ್ತಿಹಾರನಾಮೆಯೊಡನೆ ಫಾಯಿಷ್ಮಾಡಲ್ಪಟ್ಟು ಮೈಸೂರು ಗೆಜೆಟ್ಟಿನ 394ನೇ ಪುಟದಲ್ಲಿ ಛಾಪಿಸಲ್ಪಟ್ಟ ಪುಂಬಳಿ ಬೈಲ್ ಸ್ಟೇಟ್ ಫಾರೆಸ್ಟಿಗೆ ಸೇರಿದ 17ನೇ ನಂಬರ ಚೌರನಾಯಕನಹಳ್ಳಿ ಬ್ಲಾಕಿನ ಚಕ್ಕುಬಂದಿಗೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು:—

"ಉತ್ತರಕ್ಕೆ.—ತುಂಗಾನದಿಯ ಒಂದು ಶಾಖೆಯಾದ ಮಳೆಸಲು ಬಳಿಯಣ ಹಾಲಲಕ್ಕುವಳ್ಳಿಯ 18ನೇ ಸರ್ವೇ ನಂಬರಿನಿಂದ ಒಂದು ಸಾಫ್ ಮಾಡಿದ್ದ ಲೈನು ಹೊರಟು ಶಿವಮೊಗ್ಗಾ ಯಡೆಹಳ್ಳಿರಸ್ತೆಯ 7ನೇ ಮೈಲಿ 5ನೇ ಫರ್‌ಲಾಂಗ್ ವರೆಗೆ ಹೋಗುತ್ತದೆ.

"ಪೂರ್ವಕ್ಕೆ.—ಮೇಲಿನ ಪಾಯಿಂಟಿನಿಂದ ಸದರೀ ಲೈನ್ ಶಿವಮೊಗ್ಗಾ ಯಡೆಹಳ್ಳಿ ಮಾರ್ಗವಾಗಿ ಹೊರಟು 10ನೇ ಮೈಲಿ 5ನೇ ಫರ್ಲಾಂಗ್ ವರೆಗೆ ಹೋಗುತ್ತದೆ.

"ದಕ್ಷಿಣಕ್ಕೆ.—ಒಂದು ಸಾಫ್ ಮಾಡಿದ ಲೈನ್ ಶಿವಮೊಗ್ಗಾ ಯಡೆಹಳ್ಳಿ ರಸ್ತೆಯ 10ನೇ ಮೈಲಿ 5ನೇ ಫರ್‌ಲಾಂಗಿನಿಂದ ಹೊರಟು ಸಮುದ್ರಹಳ್ಳಿಯ 59ನೇ ಸರ್ವೇ ನಂಬರಿವರಿಗೆ ಹೋಗುತ್ತದೆ.

"ಪಶ್ಚಿಮಕ್ಕೆ.—ಸದರೀ 59ನೇ ಸರ್ವೇ ನಂಬರಿನ್ನಿಂದ ಲೈನ್ ಹೊರಟು ಷುರುವಾದ ಸ್ಥಳಕ್ಕೆ ಬಂದು ಸೇರುತ್ತದೆ."

ತಾರೀಖು 23ನೇ ಡಿಸೆಂಬರ 1895.

ನಂ. 5817.—ಫಾ. ಫೈ. 54—95.—1889ನೇ ಇಸವಿ ಆಗಸ್ಟ್ 7ನೇ ಮರ್ಸ್ಕುಂ 113ನೇ ನಂಬರ ಮತ್ತು 1894ನೇ ಇಸವಿ ಮೇ 5ನೇ ಮರ್ಸ್ಕುಂ 19171.—ರೆ. ಫೈ. 303—92ನೇ ನಂಬರ ಇಸ್ತಿಹಾರನಾಮೆಗಳನುಸರಿಸಿ, ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ಡಿಪೋಗಳಲ್ಲಿ ತೇಗದ ಮರವು ಆಯಾಯ ಡಿಪೋಗಳಿಗೆ ಬಾಜಾದಲ್ಲಿ ಕಾಣಿಸಿ ಇರುವ ತಿದ್ದುಪಾಟಾದ ದರಗಳ ಪ್ರಕಾರ ಬಿಕರಿ ಮಾಡಲ್ಪಡುವದು:—

ಡಿಪೋ ಹೆಸರು.	ಮರದ ವಿವರಣೆ.	ಅವ್ವಲ್ ರಖಮಿಗೆ ದರ.	ದುಯ್ಯಂ ರಖಮಿಗೆ ದರ.	ಶಿಯ್ಯಂ ರಖಮಿಗೆ ದರ.	ಚಹರಂ ರಖಮಿಗೆ ದರ.
		ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಕಡೂರು ಡಿಪೋ ..	ತೇಗದಮರ	1—14—0	1—10—0	1—6—0	1—4—0
ತರೀಕೆರೆ ಡಿಪೋ ..	ಡಿಟೋ	1—12—0	1—8—0	1—4—0	0—0—0
ಲಕ್ಕುವಳ್ಳಿ ಡಿಪೋ ..	ಡಿಟೋ	1—10—0	1—6—0	1—2—0	0—0—0

ತಾರೀಖು 6ನೇ ಜನವರಿ 1896.

ನಂ. 5838.—ರೆ. 2275.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 221ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟು ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಸಿ. ದೇವರಾಜ ಅರಸಿನವರಿಗೆ, 1895ನೇ ಇಸವಿ ನವಂಬರ 28ನೇ ಮರ್ಸ್ಕುಂ ಲಾಗಾಯತು ಬಗರ ತಲಬ್ ಒಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 5854.—ರೆ. 2285.—1888ನೇ ಇಸವಿ IVನೇ ನಂಬರ ರೆಗ್ಯುಲೇಷನ್ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಮೈಸೂರು ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ, ಸದರೀ ಕೋಡಿನ VIII ಮತ್ತು IXನೇ ಅಧ್ಯಾಯಗಳ ನಿಯಮಗಳು ಮಂಡ್ಯ ತಾಲ್ಲೂಕಿನ ಕಾಯಂಗುತ್ತಾ ಅಂಕುಶಾಪುರ ಗ್ರಾಮಕ್ಕೆ ಲಗಾವ್ ಮಾಡಲ್ಪಡತಕ್ಕದ್ದು.

ನಂ. 5871.—ರೆ. 2294.—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಚಳ್ಳಕೆರೆ ಅಮಲ್‌ದಾರ ಜೆ. ಶ್ರೀನಿವಾಸರಾಯರಿಗೆ, 1895ನೇ ಇಸವಿ ಅಕ್ಟೋಬರ 25ನೇ ಮರ್ಸ್ಕುಂ 4060—ರೆ. 1566ನೇ ನಂಬರ ಇಸ್ತಿಹಾರನಾಮೆಯಿಂದ ಕೊಡಲ್ಪಟ್ಟ ಎರಡು ತಿಂಗಳೂ ಏಳು ದಿವಸಗಳ ಪ್ರಿವಿಲೇಜ್ ರಜಾ 1896ನೇ ಇಸವಿ ಜನವರಿ 27ನೇ ತಾರೀಖು ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ನಂ. 5918.—ಫೈ. 349.—ಗವರ್ನಮೆಂಟಿನವರು, 1891ನೇ ಇಸವಿ ಅಕ್ಟೋಬರ 27ನೇ ಮರ್ಸ್ಕುಂ 305ನೇ ನಂಬರ ಇಸ್ತಿಹಾರನಾಮೆಯೊಡನೆ ಫಾಯಿಷ್ಮಾಡಲ್ಪಟ್ಟ ಮೈಸೂರು ಸ್ಟೇಟ್ ಲೈಫ್ ಇನ್ಸ್ಯೂರೆನ್ಸ ರೂಲ್ಸಿನ 21ನೇ ರೂಲಿಗೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದೆಂದು ಆಜ್ಞಾಪಿಸುತ್ತಾರೆ:—

2. ತಮ್ಮ ದರಖಾಸ್ತುಗಳೂ "ಫಲಾನಾ ಕೋಠಿಗೆ ಫಲಾನಾ ಹೋಬಳಿಯಿಂದ ಸಂದಲ್ ಮರಗಳನ್ನ ಕೀಳಿಸಿ ಪೊರಟ ಕೆತ್ತನೆಯಿಂದ್ಧ ಸಾಗಿಸಲು ದರಖಾಸ್ತು" ಯಂಬದಾಗಿ ಮೇಲ್ ವಿಳಾಸ ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಪ್ರತಿ ಒಂದು ಹೋಬಳಿಗೂ 100 ರೂಪಾಯಿ ಮತ್ತು ಇತರ ತಾಲ್ಲೂಕು ಪ್ರತಿ ಒಂದು ಹೋಬಳಿಗೂ 50 ರೂಪಾಯಿ ಬೆಲೆಯುಳ್ಳ ಕರ್ರೆನ್ಸೀ ನೋಟುಗಲಿ ಯಾ ಪ್ರೋನೋಟಾಗಲಿ ರವಾನಿಸಬೇಕು. ದರಖಾಸ್ತುಗಳು 1896ನೇ ಇಸವಿ ಜನವರಿ 31ನೇ ತಾರೀಖಿನಲ್ಲಿ ಹಾಜರು ಇರತಕ್ಕ ದರಖಾಸ್ತುದಾರ್ರ ಯದುರಿಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಪಡೆಯಲ್ಪಟ್ಟ ಕರ್ರೆನ್ಸೀ ನೋಟುಗಳು ವಾಪಸು ಮಾಡಲ್ಪಡುವವು.

3. ಪ್ರತಿ ದರಖಾಸ್ತಿನಲ್ಲಿಯೂ ಮರಗಳನ್ನ ಕೀಳಿಸಿ ಪೊರಟು ಕೆತ್ತನೆ ಮಾಡಿಸುವದಕ್ಕೆ ಸರಮರಕ್ಕೆ ಮತ್ತು ತಲೆ ಕೊನೆಗಳಿಗೆ ಪ್ರತ್ಯೇಕವಾಗಿ ದರ ಟನ್ ಒಂದಕ್ಕೆ ಇಷ್ಟೆಂದು ದರ ನಮೂದಿಸಬೇಕು. ಮತ್ತು ಕೋಠಿಗೆ ರವಾನೆಗೆ ದರ ಟನ್ ಒಂದಕ್ಕೆ ಜಂಗಲ್ ಮೈಲಿ ಒಂದಕ್ಕೆ ಇಷ್ಟುದರವೆಂತಲೂ ಮತ್ತು ಹೈ ರೋಡ್ ಮೈಲಿ ಒಂದಕ್ಕೆ ಇಷ್ಟುದರವೆಂತಲೂ ಪ್ರತ್ಯೇಕವಾಗಿ ನಮೂದಿಸಬೇಕು.

4. ಯಲ್ಲಾ ಮರಗಳೂ ತಾಯಿಬೇರು ಕಾಲುಬೇರು ಮತ್ತು ಪಕ್ಕದ ಬೇರುಗಳ ಪೊಂದಿಗೆ ಕೀಳಿಸಲ್ಪಡಬೇಕು. ಜಮೀನಿನಲ್ಲಿ ಚೆಗ ಇರತಕ್ಕ ಮರಗಳು ಯಾವದೂ ಬಿಡಲ್ಪಡಕೂಡದು. ಮರಗಳ ರೆಂಬೆಗಳು ಕೊಡಲಿಯಿಂದ ಕತ್ತರಿಸಲ್ಪಡಕೂಡದು. ಗರಗಸದಿಂದ ಕೊಯ್ಯಲ್ಪಡಬೇಕು. ಬೇರಿನಲ್ಲಿ ಇರತಕ್ಕ ಮಣ್ಣು ಮತ್ತು ಕಲ್ಲುಚನ್ನಾಗಿ ತೆಗಿಯಲ್ಪಡಬೇಕು. ಮರಗಳ ಶಿಪ್ಪೆ ಮತ್ತು ಬಿಳಿ ಚಕ್ಕೆಯನ್ನು ಬಹಳ ಹುಷಾರಿನಿಂದ ಮೊದಲು ಮಚ್ಚು ಕತ್ತಿಯಿಂದ ಕೆತ್ತಿ ನಂತರ ಪೊಳಗಿನ ಚೆಗು ಪೋಲಾಗದಂತೆ ಬಾಚಿಯಿಂದ ಕೆತ್ತಬೇಕು. ಮರದ ಚೇಗಿನ ಮೇಲೆ ಯಾವ ಸಂದರ್ಭದಲ್ಲೂ ಕಾಲಂಗುಲ ದಪ್ಪಕ್ಕಿಂತ ಜಾಸ್ತಿಯಾಗಿ ಬಿಳಿ ಮರ ಬಿಡಕೂಡದು. ಬುಕಣಿ ಮತ್ತು ಚೆಗ ಇರತಕ್ಕ ಚಕ್ಕೆ ಮರಗಳಜೊತೇಲೇ ಸಾಗಿಸಲ್ಪಡಬೇಕು.

5. ಒಂದು ಅಂಗುಲಕ್ಕಿಂತ ಜಾಸ್ತಿಯಾಗಿ ಚೆಗವುಳ್ಳ ಶಿಪ್ಪೆ ತಲೆಗಳು ಜಂಗಲ್‌ಗಳಲ್ಲಿ ಬಿಡಕೂಡದು. ಪೊರಟ ಕೆತ್ತನೆ ಮಾಡದೆ ಹಾಗೆಯೇ ಕೋಠಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಚಾರ್ಜ್ ಮಾತ್ರ ಪಾವತಿ ಮಾಡಲ್ಪಡುತ್ತೆ.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಪ್ರತಿ ಮಾಹೆಯಲ್ಲೂ ಯಷ್ಟು ಮೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕ ಮಾಡುತ್ತಾರೋ ಅಷ್ಟು ಮೊತ್ತವನ್ನ ಖಂಡಿತವಾಗಿ ಕೋಠಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಮೊಕರರ್ಮಾಡಲ್ಪಡುವ ಪೆನಾಲಿಟಿಗೆ ಗುರಿಯಾಗತಕ್ಕದ್ದು.

7. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರೆದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡೆದುಕೊಳ್ಳುವ ಬಗ್ಯೆ ಜಾಮೀನ್ ತರೀಕ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಪ್ರತಿ ಒಂದು ಹೋಬಳಿಗೆ 200 ರೂಪಾಯಿನ ಡಿಪಾಜಿಟ್ ಮತ್ತು ಇತರ ತಾಲ್ಲೂಕುಗಳ ಪ್ರತಿ ಒಂದು ಹೋಬಳಿಗೆ 100 ರೂಪಾಯಿನ ಡಿಪಾಜಿಟ್ ಕಟ್ಟಬೇಕು. ಮೇಲ್ಕಂಡ ಷರತ್ತುಗಳ ಮೇರೆ ನಡೆಯಲೂ ತಪ್ಪಿದಲ್ಲಿ ಠೇವಣೀ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಛಾಪಾ ಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

9. ಸಂದಲ್ ಮರಗಳ ಚುನಾಯಿಸೋಣ, ಕೀಳುವಿಕೆ ಪೊರಟ ಕೆತ್ತನೆ ಮತ್ತು ಅದೇ ವಿಷಯಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮಾಡುವ ರೂಲ್ಸ್ ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿ ಇರತಕ್ಕದ್ದು.

10. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ತಮ್ಮ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕನ್ಸರ್ವೇಟರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

11. ಪುದ್ದೇಶಿಸುವ ಕಂಟ್ರಾಕ್ಟುದಾರನು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಬ್ದುಲ್‌ಕರೀಂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 17ನೇ ಡಿಸೆಂಬರ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ತಾಲ್ಲೂಕು ಬಾಣಾವಾರದ ಹೋಬಳಿ ಬೇಚಿರಾಖ್ ಚಿಕ್ಕ ಬಾಣಾವಾರ ಗ್ರಾಮದಲ್ಲಿ 146 ರೂಪಾಯಿ ಅಕಾರವುಳ್ಳ 196 ಎಕರೆ 32 ಗುಂಟೆ ಜಮೀನನ್ನು ಪೂರಾ ಅಕಾರಕ್ಕೆ ಸಾಗುವಳಿಗೆ ಹರಾಜಿಲ್ಲದೆ ಕೊಡಿಸಬೇಕು ಯಂತ ಬಾಣಾವಾರದಲ್ಲಿರುವ ಜಾವಗಲ್ಲು ವೆಂಕಟೇಶಯ್ಯ ದರಖಾಸ್ತು ಮಾಡಿದ್ದಾನೆ. ಈ ಜಮೀನುಗಳಲ್ಲಿ 540 ದೊಡ್ಡ ಹೊಂದೀ ಮರಗಳು 543 ಈಚಲುಗುಂಬು ಸೊಸಿಗಳು 872 ಈಚಲು ಸಣ್ಣ ಸೊಸಿಗಳು 6 ಇತರ ಜಾತಿ ಮರಗಳು ಇರುವಂತೆಯೂ ಇವುಗಳಿಗೆ ಒಟ್ಟು ರೂ. 522-6—0 ಕಿಮ್ಮತು ಆಗುವದಾಗಿ ತಿಳಿಯಬರುತ್ತೆ. ಈ ಜಮೀ

ನುಗಳನ್ನು ಮಾಲಕಿ ಹರಾಜ್ ಇಲ್ಲದೇನೇ ತನಿಗೆ ಕೊಡಿಸಬೇಕು. ಹಾಗೆ ಕೊಟ್ಟದ್ದೇ ಆದರೆ ಜಮೀನು ಸ್ವಾಧೀನವಾದ ಲಾಗಾಯತು ಒಂದು ವರುಷದಲ್ಲಿ (10) ಒಕ್ಕಲು ಇರಲು ತಕ್ಕ ಮನೆಗಳನ್ನ ಕಟ್ಟಿ ಒಕ್ಕಲನ್ನು ತಂದು ಇಟ್ಟು ಗ್ರಾಮ ಆಬಾದು ಮಾಡುವದಾಗಿಯೂ, ಮೇಲ್ಕಂಡ ವಾಯಿದೆ ಒಳಗೆ ಗ್ರಾಮ ಆಬಾದು ಮಾಡಲು ಖಾತರೆ ಬಗ್ಗೆ ನಂದನೂರು ರೂಪಾಯಿಗಳನ್ನು ಹಾಜರ್ಮಾಡುವದಾಗಿಯೂ, ವಾಯಿದೆ ಅಂದರವಾರ್ ಗ್ರಾಮುಕಟ್ಟೆ 10 ಒಕ್ಕಲು ತಂದು ಇಡಲು ತಪ್ಪಿದರೆ ಡಿಪಾಜಿಟ್ ಇಡುವ ಮೊಬಲಗನ್ನು ಸರಕಾರಕೆ ದಂಡವಾಗಿ ತೆಗದುಕೊಳ್ಳಬಹುದೆಂದು ದರಖಾಸ್ತುದಾರ ಬಯರ್ಜಿ ಮಾಡುತ್ತಾನೆ. ಈ ದರಖಾಸ್ತುದಾರನ ಸವಾಲಿಗಿಂತ ಸರಕಾರಕ್ಕೆ ಫಾಯಿದೆ ಮತ್ತು ಅನುಕೂಲವಾದ ಸವಾಲ್ ಮಾಡಿ ಜಮೀನ್ ಪಡಿಯಲು ಇಚ್ಛೆಯುಳ್ಳವರು ಈ ಇಸ್ತಹಾರ್ ಹುಟ್ಟಿದ ತಾರೀಖು ಲಾಗಾಯತು 3 ತಿಂಗಳೊಳಗೆ ಅರಶೀಕೆರೆ ತಾಲ್ಲೂಕು ಅಮಲ್ದಾರ್ರಲ್ಲಿ ದರಖಾಸ್ತು ಮಾಡಬಹುದು.

ಈ ಮೇರೆ ಹಾಲಿ ಬಂದಿರುವ ದರಖಾಸ್ತಿಗಿಂತ ಅನುಕೂಲವಾದ ಸವಾಲುಗಳು ಮೇಲ್ಕಂಡ 3 ತಿಂಗಳೊಳಗಾಗಿ ಬಾರದೆ ಇದ್ದರೆ ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸಿನ XXನೇ ರೂಲ್ 18ನೇ ಪ್ಯಾರಾ ಪ್ರಕಾರ ದರಖಾಸ್ತುಗಳು ಅವುಗಳ ಯೋಗ್ಯತಾನುಸಾರವಾಗಿ ಫೈಸಲ್ಮಾಡಲ್ಪಡುವವು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜ್.

ಇಸ್ತಿಹಾರ್ನಾಮೆ.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಅಖೈರ್ ಜಡ ಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈದಾದ ಕೂಡ್ಲೆ ಜಡ ಸವಾಲ್ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ, ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್ದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯುಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ, ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್ದಾರನು ಅಮಲ್ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪೀಲುಗಳು ಏನಾದರೂ ಆದರೆ ಅವುಗಳಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೇ ಮೇಲೆ ಷರತ್ ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ — ಜಮೀನ್ — ಸರ್ವೇ ನಂಬರು.	ಬಾಬು ಖುಷ್ಕೀ ತರೀ. ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.	ಆಕಾರ.	ಮರಗಳು ಭಾವಿಗಳು ವಗೈರೆ — ಕೂಡಿದ ಮಟ್ಟಗೂ ಕರಾರ್ವಾಕಾ ತಪಸೀಲ್.	ಹರಾಜು ಸ್ಥಳ, ತಾರೀಖು ಮತ್ತು ಕಾಲ.	ಹರಾಜು ನಡಿಸತಕ್ಕವರ ಹೆಸರು.	ಕ್ಲಿಪ್ತವಾಗಿದ್ದಲ್ಲಿ ಗರ್ಲ್ಯಾರದ ಸವಾಲ್ ವೊಬ್ಲಿಗು ಮತ್ತು ಇತರ ಷರಾ.
1.	2	3	4	5	6	7	8	9	10	11
ಚನ್ನರಾಯಪಟ್ಟಣ.	ಕಸಬಾ.	ಬಿಸಲಹಳ್ಳಿ.	51	ತರೀ	1—24			ಜಮೀನು ಬಳಿ, ದಿವಿ ಘಂಟೆ ಹನ್ನೊಂದಕ್ಕೆ ಷುರೂ, ತಾರೀಖು 5—2—96.	ಅಮಲ್ದಾರು ಯಾ ಶಿರಸ್ತೇದಾರು.	ಹರಾಜಿನಲ್ಲಿ ಪಡವವರು ಸರ್ವೇ ಇಲಾಖೆಯಿಂದ ಮೊಕರೂರಾಗುವ ದರದಂತೆ ಕಂದಾಯವು ಅದುವರಿಗೂ ಹಂಗಾಮಿ ದರದಂತೆ ಕಂದಾಯವು ಬಾಂದು ಲಾಗವಡು ಮತ್ತು ಕಲ್ಲುಗಳ ಕಿಮ್ಮತು ಸಹ ಕೊಡಬೇಕು. 1896—97ನೇ ಇಸವಿ ಲಾಗಾಯತು ತರೀ ಕಂದಾಯ ವಸೂಲ್ ಮಾಡುತ್ತೆ.
			5 ಡಿ 6	ಡಿಟೋ	2— 1					
			9	ಡಿಟೋ	2— 3					
			10	ಡಿಟೋ	2—21					
			11	ಡಿಟೋ	1—21					
			34	ಡಿಟೋ	0— 5					
			1/46	ಡಿಟೋ	1—16					
			1/47	ಡಿಟೋ	0— 4					
			4/51	ಡಿಟೋ	1— 4					
			4/52	ಡಿಟೋ	0— 5					
			2/57	ಖುಷ್ಕಿ	0—30					
		ಚೋಳೇನಹಳ್ಳಿ.	257	ತರೀ	1—37					
			1/257/2	ಡಿಟೋ	2—33					
					18—4					

ಜೆ. ಡಬ್ಳಿಯು. ನೈಟ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ನೋಟಿಫಿಕೇಷನ್.

ತಾರೀಖು 21ನೇ ಡಿಸೆಂಬರ್ 1895.

1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಕಲಂ ಅನುಸರಿಸಿ, ಇದರಡಿ ನಮೂದಾಗುವ ಸರ್ಕಾರೀ ಜಂಗಲ್‌ಗಳು, ಪ್ಲಾಂಟೇಷನ್‌ಗಳು ಮತ್ತು ಸಂಡಲ್ ರಿಜರ್ವ್‌ಗಳು ಸಹ ಬಿಸಲು ಕಾಲಕ್ಕಾಗಿ 1896ನೇ ಇಸವಿ ಫಿಬ್ರುವರಿ ಗುರ್ರೇ ಲಾಗಾಯತು ಮೇ ಆಖೈರ್ ವರಿಗೆ ಬಂದ್ ಮಾಡಲ್ಪಡುವವು. ಬೇಟೆಗಾರರೂ ಮತ್ತು ಇತರ ಜನಗಳೂ ಅಪ್ಪಣೆ ಇಲ್ಲದೆ ಮೇಲ್ಕಂಡ ಫಾರೆಸ್ಟ್ ಪ್ಲಾಂಟೇಷನ್ ಮತ್ತು ಸಂಡಲ್ ರಿಜರ್ವ್‌ಗಳಲ್ಲಿ ಪ್ರವೇಶ ಮಾಡಿದರೆ ಪ್ರಾಸಿಕ್ಯೂಷನಿಗೆ ಗುರಿಯಾಗುವರು.

ನಂಬರು.	ಫಾರೆಸ್ಟು ಪ್ಲಾಂಟೇಷನ್ ವ ಸಂದಲ್ ರಿಜರ್ವ್.	ತಾಲ್ಲೂಕು.
1	ಬುರ್ಡಾಳುಬೋರೆ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಹಾಸನ
2	ಮಲ್ಲಪ್ಪನಬೆಟ್ಟ ಸಂದಲ್ ರಿಜರ್ವ್	ಡಿಟೋ
3	ಗೆಂಡೆಕಟ್ಟೆ ಪ್ಲಾಂಟೇಷನ್	ಡಿಟೋ
4	ಟ್ಯಾಬ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಡಿಟೋ
5	ನಾಕಲಗೂಡು ಸಂದಲ್ ರಿಜರ್ವ್ ಪ್ಲಾಂಟೇಷನ್	ಡಿಟೋ
6	ದೊಡ್ಡಬೆಟ್ಟದ ಗ್ರೂಫ್ ಫಾರೆಸ್ಟಿನಲ್ಲಿ ಸೇರಲ್ಪಟ್ಟಿರುವ ಚಿಕ್ಕಬೆಟ್ಟ ದೊಡ್ಡಬೆಟ್ಟ ತವಕಿಮಲ್ಲಪ್ಪನಬೆಟ್ಟ ಮತ್ತು ಕೊಡಗತವಳ್ಳಿ ಸ್ಟೇಟ್ ಫಾರೆಸ್ಟ್.	ಡಿಟೋ
7	ಹೊಂಗೆರೆ ಕಾವಲ್ ಸಂದಲ್ ರಿಜರ್ವ್	ಡಿಟೋ
8	ಭಕ್ತರವಳ್ಳಿ ಪ್ಲಾಂಟೇಷನ್	ಡಿಟೋ
9	ಕೇಗೇದಗುಡ್ಡ ಫಾರೆಸ್ಟ್	ಡಿಟೋ
10	ರಾಮೇದೇವರಹಳ್ಳಿ ಸ್ಟೇಟ್ ಫಾರೆಸ್ಟ್	ಡಿಟೋ
11	ಹಗರೆ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಬೇಲೂರು
12	ಕಬ್ಬಿಬೋರೆಕಾವಲ್ ಸಂದಲ್ ರಿಜರ್ವ್	ಡಿಟೋ
13	ಕಬ್ಬಿನಾಲೆ ಘಾಟ್ ಫಾರೆಸ್ಟ್	ಮಂಜರಾಬಾದ್
14	ಕೆಂಪುಹೊಳೆ ಘಾಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಡಿಟೋ
15	ಕಾಗನೇರಿ ಘಾಟ್ ಫಾರೆಸ್ಟ್	ಡಿಟೋ
16	ನಡಕೊಪ್ಪಲ್ ಇಲಾಚಿ ಪ್ಲಾಂಟೇಷನ್	ಡಿಟೋ
17	ಬಿಸಲೆ ಘಾಟ್ ಫಾರೆಸ್ಟ್	ಡಿಟೋ
18	ಕೆಂಪುಮಣಬೋರೆ ಅಥವಾ ಕೆಂದಿಂಣೆ ಸಂದಲ್ ರಿಜರ್ವ್	ಅರಕಲಗೂಡು
19	ವಿಜಯಾಪುರದ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	ಡಿಟೋ
20	ಬೈಸೂರು ಸ್ಟೇಟ್ ಫಾರೆಸ್ಟ್	ಡಿಟೋ
21	ಗುಬ್ಬಿ ಸ್ಟೇಟ್ ಫಾರೆಸ್ಟ್	ಡಿಟೋ
22	ಗಬ್ಲಿ ಸಂದಲ್ ರಿಜರ್ವ್	ಡಿಟೋ
23	ಹಿರಿಕಲಗುಡ್ಡ ಸ್ಟೇಟ್ ಫಾರೆಸ್ಟ್	ಅರಸೀಕೆರೆ
24	ಬೆಂಡೆಕೆರೆ ಪ್ಲಾಂಟೇಷನ್	ಡಿಟೋ
25	ಜಾಜೂರು ಪ್ಲಾಂಟೇಷನ್	ಡಿಟೋ
26	ಗೌಡಗೆರೆ ಸ್ಟೇಟ್ ಫಾರೆಸ್ಟ್	ಚನ್ನರಾಯಪಟ್ಣ
27	ವೊಂಟೇಗುಡ್ಡದ ಸಂದಲ್ ರಿಜರ್ವ್	ಹೊಳೇನರಸೀಪುರ

ಎಸ್. ಎ. ಬಾಪುರಾವ್,
ಫಾರೆಸ್ಟ್ ಅಸಿಸ್ಟೆಂಟ್ ಕನ್ಸರವೇಟರ್.

ಶಿವಮೊಗ್ಗಾ ಸಬ್ ಡಿವಿಜನ್ ಮುನ್ಸಿಫ್ ಕೋರ್ಟು.

1895—96ನೇ ಇಸವಿ ಅಸಲ್ ನಂಬರ್ 772.

ವಾದಿ.	ಪ್ರತಿವಾದಿಗಳು.
ಗೌಸ್ ಷರೀಫ್ ಸಾಹೆಬ್, ಶಿವಮೊಗ್ಗಾ ವಾಸಿ.	1ನೇ ಸೈದ ಮೊಹದೀನ್ ಸಾಬ್, ಶಿಕಾರಿಪುರ ವಾಸಿ. 2ನೇ ಮೂಸಬಾ, ಶಿವಮೊಗ್ಗಾ ವಾಸಿ.

ನೋಟಿಸ್.

ಷಿಕಾರಿಪುರದ ಪೋಲೀಸ್ ಇನ್ಸ್‌ಪೆಕ್ಟರ್ ಸಯ್ಯದ್ ಮೊಹದ್ದೀನ್ ಸಾಹೆಬ್ ಬಿನ್ ಸಯ್ಯದ್ ಜಾಫರ್ ಸಾಹೆಬ್ ಎಂಬವರು ಶಿವಮೊಗ್ಗಾದಲ್ಲಿ ಇರುವ ಜುಮ್ಮಾ ಮಶೀತಿಗೆ ಸೇರಿದ ಮತ್ತು ಮಹಮ್ಮದ್ ಜನಗಳ ಉಪಯೋಗಕ್ಕೋಸ್ಕರ ಶಿವಮೊಗ್ಗಾದಲ್ಲಿರುವ ಗೌಷರೀಫ್ ಸಾಹೆಬರು ಧರ್ಮಾರ್ಥವಾಗಿ ಕಟ್ಟಿದ ಮನೆಯನ್ನು ಸಾಲೀಯಾನಾ 60 ರೂಪಾಯಿ ಬಾಡಿಗೆ ಕೊಡುವ ಷರತ್ತಿನ ಮೇಲೆ ಸದರೀ ಗೌಷರೀಫ್ ಸಾಹೆಬರಿಂದ ಪಡದುಕೊಂಡವರು ಬಾಡಿಗೆ ಬಾಬತು 180 ರೂಪಾಯಿ ಕೊಡದೇನೂ ಮತ್ತು ಮನೆಯನ್ನೂ ಸಹ ಬಿಟ್ಟು ಕೊಡದೆ ಇರುವದ್ದರಿಂದ ಅಲ್ಲೀಷರಿಫ್ ಸಾಹೆಬರ ಮಗ ಸಾಹುಕಾರು ಮತ್ತು ವರ್ತಕ ಗೌಸ್‌ಷರೀಫ್ ಸಾಹೆಬರು ಮನೆಯನ್ನೂ ಮತ್ತು ಬಾಡಿಗೆಯನ್ನೂ ಬರಮಾಡಿಕೊಳ್ಳಲು ಶಿವಮೊಗ್ಗಾ ಮುನ್ಸಿಫ್ ಕೋರ್ಟಿನಲ್ಲಿ ಮಹಮ್ಮದ್ ಜನಗಳಿಗೋಸ್ಕರ ದಾವಾ ತಂದು ಇರುವದ್ದರಿಂದ ಈ ದಾವಾ ಸ್ವತ್ತಿನಲ್ಲಿ ಹಕ್ಕು ಇರತಕ್ಕ ತಮಾಂ ಮಹಮ್ಮದ್ ಜನಗಳೂ 1896ನೇ ಇಸವಿ ಫಿಬ್ರವರಿ ತಾರೀಖು 25ನೇ ದಿವಿ 11 ಘಂಟೆಗೆ ಕೋರ್ಟಿನ ರೂಬರೂ ಹಾಜರಾಗಿ ದಾವಾ ನಡಿಸಬೇಕೆಂತಲೂ ಅಥವಾ ಸದರೀ ಗೌಸ್‌ಷರೀಫ್ ಸಾಹೆಬರು ಎಲ್ಲರಿಗೋಸ್ಕರ ದಾವಾ ನಡಿಸಲಿಕ್ಕೆ ಸಮ್ಮತಿ ಪಡಬೇಕೆಂತ ಸಹ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸಿ ಇದೆ.

ಪಿ. ಸಿಂಗರಾಚಾರ್,
ಮುನ್ಸಿಫ್.

ನೋಟಿಫಿಕೇಷನ್.

ಕಡೂರು ಡಿಸ್ಟ್ರಿಕ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿ ಇರುವ ರಿಜಸ್ಟರಾದ ದಸ್ತಾವೇಜುಗಳು ಯರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಿಸಿ ಇರುವ ಸಬ್ ರಿಜಿಸ್ಟ್ರೀ ಆಫೀಸುಗಳಲ್ಲಿ ವಾರಸುದಾರರು ಹಾಜರಾಗಿ ವಾಪಸ್ ಪಡಿಯದೆ ನಿಂತುಯಿರುತ್ತವೆ. ಈ ತಾರೀಖು ಲುಗಾಯಿತು ಒಂದು ತಿಂಗಳವೊಳಗಾಗಿ ಸದರೀ ತಮಸೂಕುಗಳನ್ನು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ತಮಸೂಕುಗಳಿಗೆ ಬಾಧ್ಯತೆವುಳ್ಳವರಾಗಲಿ ಸಬ್ ರಿಜಿಸ್ಟ್ರೀ ಆಫೀಸುಗಳಲ್ಲಿ ಹಾಜರಾಗಿ ತಮ್ಮ ದಸ್ತಾವೇಜುಗಳನ್ನು ವಾಪಸ್ ಪಡಿಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ಸದರೀ ದಸ್ತೈವಜುಗಳನ್ನು ನಾಶಪಡಿಸಲ್ಪಡುತ್ತವೆ.

ಆಫೀಸಿನ ಹೆಸರು.	ಬುಕ್ಕು ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ತಾರೀಖು.	ರಿಜಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
ಚಿಕ್ಕಮಗಳೂರು ಸ್ಪೆಷಲ್ ಸಬ್ ರಿಜಿಸ್ಟ್ರಾರ್ ಆಫೀಸು.	ಬುಕ್ಕು I 799 / 1892—93	ಪಾಯಗೊಂಡನಹಳ್ಳಿಲಿ ಇರುವ ಹಾಲುಮರದ ಹೊಳಮಲ್ಲನ ಕರಿಯಮ್ಮನ ಮಗ ಮಲ್ಲ	ಜೋಡಿಮಂಚನಹಳ್ಳಿಲಿ ಇರುವ ಹಾಲುಮರದ ದೊಡ್ಡೀಗವುಡನ ಮಗ ಕಾಳೀಗವುಡ	8—2—93	15—2—93	100—0—0 ಕಿಮ್ಮತಿನ ಸ್ಥಿರಸೊತ್ತು ಕ್ರಯ ಪತ್ರ
	1101 / 1892—93	ಮಾವಿನಕೆರೆಯಲ್ಲಿ ಇರುವ ತೊಟ್ಟೀ ಸಿದ್ದಪ್ಪಶೆಟ್ಟಿ ಮಗ ಕಲ್ಲಪ್ಪಶೆಟ್ಟಿ	ಬಸವನಹಳ್ಳೀಲಿ ಇರುವ ಕೊತ್ವಾಲ್ ಚನ್ನಪ್ಪನವರ ಮಗ ಸೂರ್ಯನಾರಣಪ್ಪ	18—5—93	20—5—93	ಗೇಣೀಕರಾರು
	1103 / 1892—93	ಮಾವಿನಕೆರೆಯಲ್ಲಿ ಇರುವ ಸಿದ್ದಪ್ಪನ ಮಕ್ಕಳು 1ನೇ ಹಾಲಪ್ಪಶೆಟ್ಟಿ 2ನೇ ರುದ್ರಪ್ಪಶೆಟ್ಟಿ	ಬಸವನಹಳ್ಳೀಲಿ ಇರುವ ಕೊತ್ವಾಲ್ ಚನ್ನಪ್ಪನವರ ಮಗ ಸೂರ್ಯನಾರಣಪ್ಪ	18—5—93	20—5—93	ಗೇಣೀಕರಾರು
	140 / 1893—94	ಹೊಸಕೋಟೆ ರಾಮನಹಳ್ಳಿಲಿ ಇರುವ ಹಿರೇಖಾನ್ ಮಠದ ಚನ್ನವೀರಪ್ಪನವರ ಮಗ ಕಾನಯ್ಯ	ಬಸವನಹಳ್ಳೀಲಿ ಇರುವ ಚನ್ನರಾಯ ದುರ್ಗದ ಕೃಷ್ಣಪ್ಪನವರ ಮಕ್ಕಳು ಕಾಫೀಪ್ಲಾಂಟರ್ ಶ್ರೀನಿವಾಸರಾಯರು	30—7—93	12—8—93	20—0—0 ಕಿಮ್ಮತಿನ ಸ್ಥಿರಸೊತ್ತಿನ ಕ್ರಯ ಪತ್ರ
	ಬುಕ್ಕು IV 15 / 1893—94	ಹಿರೇಮಗಳೂರಲ್ಲಿ ಇರುವ ಹೊಸಮನೆ ಚನ್ನಯ್ಯಂಗಾರ್ರು ಮಗ ಶ್ರೀನಿವಾಸಯ್ಯಂಗಾರ್ರು	ಚಿಕ್ಕಮಗಳೂರು ಕೋಟೇಲಿ ಇರುವ ಲೇಟ್ ಸ್ಕೂಲ್‌ಮಾಸ್ಟರ್ ರಾಮಯ್ಯಂಗಾರ್ರು	4—9—93	7—9—93	ಯರಡು ಡಿಕ್ರಿಗಳನ್ನು 190 ರೂಪಾಯಿನ ಕ್ರಯಪತ್ರ
	23 / 1893—94	ಚಿಕ್ಕಮಗಳೂರಲ್ಲಿ ಇರುವ ಮಂಗಳೂರು ತಾಲ್ಲೂಕು ಕಡೆಂದಲೆಮಾಗಣಿ ಬೀರಪಟ್ಟ ಗ್ರಾಮದ ಮಾರಿ ಹೊಲೇರು 1 ಪಿಜನಾ 2 ದೊಗರ 3 ಕುಂಜರ 4 ಅಂಗಾರ 5 ತುಕ್ಯಾ 6 ತನಿಯ	ನಿಡುಗೋಡಲ್ಲಿ ಇರುವ ದೇವೇಗವುಡರ ಮಗ ಕಾಫಿ ಪ್ಲಾಂಟರು ಮಲ್ಲೀಗವುಡ	28—11—93	29—11—93	1,386—0—0ನ ವಕರಾರು
ಮೂಡಿಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸು.	ಬುಕ್ಕು I 189 / 1892—93	ಮಾವಿನಕೆರೆಯಲ್ಲಿ ಇರುವ ತಿಪ್ಪಮ್ಮ	ಅಂಬಿನ ಕೊಡಗ್ಗಿ ವಾಸಸ್ಥ ಸಿಂಗಯ್ಯ ಹೆಬ್ಬಾರ	7—4—93	7—4—93	50—0—0 ಸ್ಥಿರಸೊತ್ತಿನ ಕ್ರಯಪತ್ರ
	38 / 1893—94	ತಲಗೋಡು ಕುರಿಕುಮರೀ ವಾಸಸ್ಥ ಕಳಸಯ್ಯನ ಮಗ ಕೃಷ್ಣಯ್ಯ	ಅಂಬಿನಕೊಡಗಿ ವಾಸಸ್ಥ ಮಂಜಯ್ಯ ಹೆಬ್ಬಾರ್ರ ಮಗ ರಂಗಯ್ಯ ಹೆಬ್ಬಾರ್ರು	9—8—93	31—8—93	200—0—0 ಸ್ಥಿರಸೊತ್ತಿನ ಕ್ರಯಪತ್ರ
	ಬುಕ್ಕು IV 41 / 1892—93	ಕಳಸದ ಮಾಗಣಿ ಹೊರನಾಡು ವಾಸಸ್ಥ ದೇವಪ್ಪಗವುಡ, ಚನ್ನಪ್ಪಗವುಡ	ಅಂಬಿನಕೊಡಗಿ ವಾಸಸ್ಥ ರಾಮಕೃಷ್ಣಪ್ರಭು	10—6—93	10—6—93	100—0—0 ಚರಸೊತ್ತಿನ ಆಧಾರ ಪತ್ರ

ಆಫೀಸಿನ ಹೆಸರು.	ಬುಕ್ಕು ನಂಬರು.	ದಸ್ತಾವೇಜು ಬರೆದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ತಾರೀಖು.	ರಿಜಸ್ಟರಾದ ತಾರೀಖು.	ದಸ್ತಾವೇಜಿನ ಸ್ವಾಭಾವ ಮತ್ತು ಕಿಮ್ಮತ್ತು.
ಮೂಡಿಗೆರೆ ತಾ|| ಸಬ್ ರಿಜಿಸ್ಟ್ರಾರ್ ಆಫೀಸು	44 / 92—93	ಚನ್ನಗಿರಿ ತಾಲ್ಲೂಕು ರಾಂಡುಮಟ್ಟ ಗ್ರಾಮದ ವಾಸಸ್ಥ ಮೇಸ್ತ್ರಿ ರಾಮಜೀ ನಾಯಿಕ	ಅಂಬಿನಕೊಡಗಿ ವಾಸಸ್ಥ ಕಾಫೀಪ್ಲ್ಯಾಂಟರ ರಂಗಯ್ಯ ಹೆಬ್ಬಾರ	21—6—93	21—6—93	ನವಕರಿಗೆ ಆಳುಗಳನ್ನು ತಂದುಕೊಡುವದಾಗಿ 1,000 ಕರಾರು.
	45 / 92—93	ಬೇಲೂರು ತಾಲ್ಲೂಕು ಸೂಲೇದೇವರಹಳ್ಳಿಲಿರುವ ಶಿವನಂಜೇಗೌಡ	ಅಂಬಿನಕೊಡಗಿ ವಾಸಸ್ಥ ಕಾಫಿ ಪ್ಲ್ಯಾಂಟರ ರಂಗಯ್ಯ ಹೆಬ್ಬಾರ	21—6—93	21—6—93	ಡಿಟೋ 200 ಕರಾರು
ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸು	ಬುಕ್ಕು I 279 / 1892—93	ಹೊನ್ನಗೊಡು ವೆಂಕಟಾಚಲಯ್ಯ ಬಿನ್ ಕೊಲ್ಲಯ್ಯ	ಬಿನ್ ಕಂಮಾರವಳ್ಳಿ ಕಾಳಯ್ಯ ವೆಂಕಟರಮಣಯ್ಯ	9—2—93	9—2—93	100 ಸಿರಸೊತ್ತು ಕ್ರಯಪತ್ರ
	1 / 1893—94	ಹುಲುಗಾರು ಶಂಕರಯ್ಯ ಬಿನ್ ಸುಬ್ಬಯ್ಯ	ಕುಣಿಮಕ್ಕಿ ಶೀತಾರಾಮಯ್ಯ ಬಿನ್ ವೆಂಕಟೇಶಯ್ಯ	29—6—93	1—7—93	650 ಸ್ಥಿರಸೊತ್ತು ಕ್ರಯಪತ್ರ
	2 / 1893—94	ಹುಲುಗಾರು ಶಂಕರಯ್ಯ ಬಿನ್ ಸುಬ್ಬಯ್ಯ	ಕುಣಿಮಕಿ ಶೀತಾರಾಮಯ್ಯ ಬಿನ್ ವೆಂಕಟೇಶಯ್ಯ	29—6—93	1—7—93	650 ಸಂದರಶೀತಿ
	ಬುಕ್ಕು IV 29 / 1892—93	ಭಂಡೀಗಡಿ ವೆಂಕಪ್ಪಯ್ಯ ಬಿನ್ ಮಂಜಪ್ಪಯ್ಯ	ಭಂಡೀಗಡಿ ರಾಘವೇಂದ್ರ ತೀರ್ಥಸ್ವಾಮಿಗಳು	25—9—92	18—10—92	50 ಕಂತು ಪತ್ರ
	41 / 1892—93	ಮಲಿಗೆಮನೆ ಮಂಜಣಯಾನೆ ತಮ್ಮಯ್ಯ	ಹಳುಗುಡಿಗೆ ಪುಟ್ಟಣಗವುಡ ಬಿನ್ ಐಯ್ಯಣಗವುಡ	1—12—92	26—12—92	95 ಚರಸೊತ್ತು ಕ್ರಯಪತ್ರ
ಶಿಕಾರಿಪುರ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸು	ಬುಕ್ಕು I 644 / 1892—93	ಲಕ್ಕವಳ್ಳಿಯಲ್ಲಿ ಇರುವ ಕ್ಷಾತ್ರಿ ಹುಚ್ಚರಾಯರ ಹೆಂಡತಿ ನಾಗಮ್ಮ	ಶಿವಮೊಗ್ಗಾ ಷಾಪ್‌ಕೀಪರ್ ವೆಂಕಟರಾವ್	26—6—93	27—6—93	40 ಆಧಾರ ಪತ್ರ
	197 / 1893—94	ಸೊಕೆ ಗ್ರಾಮದ ಮಾಜಿ ಶಿಲೇದಾರು ವೆಂಕಟರಾವ್	ಸೊಕೆಸಿದ್ದಹಳ್ಳಿ ಪ್ರಪಂಣ	31—7—93	15—12—93	75 ಸ್ಥಿರಸೊತ್ತಿನ ಕ್ರಯಪತ್ರ
	ಬುಕ್ಕು IV 24 / 1892—93	ಲಕ್ಕವಳ್ಳಿ ಮೊಳಕಟ್ಟೆ ಬೋಯಿ ಬಿನ್ ತಿಮ್ಮಬೋಯಿ ಯಾನೆ ದಾಸಬೋಯಿ	ದೇವರಹಳ್ಳಿ ತಿಪ್ಪಂಣ ಬಿನ್ ಮಲ್ಲಯ್ಯ ಹಲಸೂರು ವಾಸ	23—2—93	1—3—93	400 ಲೇವಾದೇವಿ ಪತ್ರ
	1 / 1893—94	ಶಾಂತಪುರದಲ್ಲಿರುವ ಆರೇರ ಕಾಳಪ್ಪನ ಮಗ 1ನೇ ಭರಮಾಜಿ 2ನೇ ಧೋಂಡಿಬಾ	ಶಾಂತಪುರದಲ್ಲಿರುವ ವೆಂಕಟಯ್ಯ ವೆಂಕಟಾಪುರದಲ್ಲಿ ಇರುವ ಯಿಮಾಮುಖಾ	22—7—93	22—7—93	200 ಕರಾರು
	2 / 1893—94	ಬಳ್ಳಾರಿಜಿಲ್ಲಾ ಹರ್‍ಯನಹಳ್ಳಿ 1 ಬಾವಾಸಾಬಿ 2ನೇ ಅವನ ತಮ್ಮ ಹುಸೇನಸಾಬಿ 3ನೇ ಮೊಹರ್ದೀಸಾಬಿ 4ನೇ ಮದ್ದಾರಸಾಬಿ	ಕಾಫೀಪ್ಲ್ಯಾಂಟರು ತೊಗರಿಹಂಕಲು ಮೊಹರ್ದಿಸಾಬಿ	29—7—93	31—7—93	200 ಕರಾರು

ಆಫೀಸಿನ ಹೆಸರು.	ಬುಕ್ಕು ನಂಬರ.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ತರೀಕೆರೆ ತಾ|| ಸಬ್ ರಿಜಿಸ್ಟ್ರಾರ್ ಆಫೀಸ್.	ಬುಕ್ಕು IV 3 —— 1893—94	ಲಕ್ಕವಳ್ಳಿ ಮಾಗಣಿ ಶಿರ್ಣಪುರ ವಾಸಸ್ಥ ಯಿಟ್ಟಿಗೆ ಚಿಕ್ಕಪ್ಪನ ಮಗ ಶಿದ್ಧಲಿಂಗಣ್ಣ	ತರೀಕೆರೆಯಲ್ಲಿರುವ ಹಾಲುಮರದ ಹಲಗಪ್ಪನ ಸಿದ್ಧಣ್ಣ	4—8—93	15—8—93	100 ಕರಾರು
	ಬುಕ್ಕು II 2 —— 1893—94	ಶಿವನೆ ಹೋಬಳಿ ಕೆಂಚಾಪುರದ ಚಿಕ್ಕಣ್ಣನ ಮಕ್ಕಳು 1ನೇ ಹಲಗಣ್ಣ 2ನೇ ಇವನ ತಮ್ಮ ಚನ್ನವೀರಣ್ಣ 3ನೇ ರುದ್ರಣ್ಣ.	ಶಿವನೆ ಹೋಬಳಿ ಕೆಂಚಾಪುರ ಈರಣ್ಣನ ಮಗ ರುದ್ರಣ್ಣ	1—8—93	25—11—93	32 ಸ್ಥಿರಸ್ವತ್ತಿನ ಕ್ರಯಪತ್ರ
	ಬುಕ್ಕು I. 338 —— 1892—93	ಸಖ್ರೆಪಟ್ಣದಲ್ಲಿ ಇರುವ ಪರುವತಪ್ಪನ ಮಗ ನೆಲ್ಲೂರು ನಂಜಪ್ಪ	ಸಖ್ರೆಪಟ್ಣದಲ್ಲಿ ಇರುವ ಸಂಕಮ್ಮನ ಮಗ ತಾಕ	4—2—93	4—2—93	44 ಕ್ರಯಪತ್ರ
	403 —— 92—93	ಬೀರೂರಲ್ಲಿ ಇರುವ ಲೋಕಣ್ಣನ ಮಗ ಯಲ್ಲಪ್ಪ	ಬೀರೂರಲ್ಲಿರುವ ಚಿಂಡೂಪರಿಗೆ ರುದ್ರಪ್ಪನ ಮಗ ಈರಪ್ಪ	16—[illegible]—93	20—4—93	25 ಕ್ರಯಪತ್ರ
	ಬುಕ್ಕು II 2 —— 1893—94	ತರೀಕೆರೆ ತಾಲ್ಲೂಕು ಹುಣಸಘಟ್ಟದಲ್ಲಿ ಇರುವ ಮರುಳಯ್ಯನವರ ಹಿರೇ ಹೆಂಡತಿ ಮಗ ನಂಜಯ್ಯ.	ಕಡೂರು ತಾಲ್ಲೂಕು ಮಾಚಪುರದಲ್ಲಿ ಇರುವ ಬೀರೂರು ಮರುಳಯ್ಯನ ಮಗ ಮಹದಯ್ಯ.	2—4—93	23—12—93	200 ಕ್ರಯಪತ್ರ

ಹೆಚ್. ಹೆಚ್. ಸ್ಪಾರ್ಕ್ಸ್, ರಿಜಿಸ್ಟ್ರಾರ್.

ಫಾರೆಸ್ಟ್ ಇಲಾಖಾ.

ತಾರೀಖು 6ನೇ ಜನವರಿ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ 1878ನೇ ಇಸವಿ 8ನೇ ಜೂನ್ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟು ಬಾಬತು ಈ ಕೆಳಗೆ ಕಾಣಿಸಿರುವ ಸ್ಟೇಟ್ ಫಾರೆಸ್ಟ್‌ಗಳು, ಪ್ಲ್ಯಾಂಟೇಷನ್‌ಗಳು, ಮತ್ತು ಸಂದಲ್ ರಿಜರ್ವ್‌ಗಳು ಷಿಕಾರಿ ಬೇಟೆ ಮುಂತಾದವುಗಳಿಗೆ ಅವಕಾಶವಿಲ್ಲದ ರೀತಿ 1896ನೇ ಇಸವಿ ಜನವರಿ 15ರ ಲಾಗಾಯತು ಮೇ ಆಖೈರ್ ವರಿಗೆ ಬಂದ್ ಮಾಡಿ ಬೆಂಕಿ ವುಸ್ತುವಾರಿ ಬಗ್ಯೆ ಕಾಪಾಡಲ್ಪಡುತ್ತೆ.

ರೂಲ್ಸ್ ಅತಿಕ್ರಮಿಸಿ ಪ್ರವೇಶಿಸುವವರನ್ನ ಕ್ರಮವಾಗಿ ಪ್ರಾಸಿಕ್ಯೂಟ್ ಮಾಡಲ್ಪಡುತ್ತೆ.

ಜಂಜರ್ ನಂಬರ್.	ತಾಲ್ಲೂಕು ಹೆಸರು.	ಫಾರೆಸ್ಟ್ ವ ಪ್ಲ್ಯಾಂಟೇಷನ್‌ಗಳ ಹೆಸರು.
1	ತರೀಕೆರೆ ಮತ್ತು ಎಡೆಹಳ್ಳಿ ಸಬ್ ತಾಲ್ಲೂಕು ..	ಲಕ್ಕವಳ್ಳಿ ಸ್ಟೇಟ್ ಫಾರೆಸ್ಟ್ ಮತ್ತು ಟೀಕ್ ಪ್ಲ್ಯಾಂಟೇಷನ್
2	ಕೊಪ್ಪ ..	ತೇಗೂರಗುಡ್ಡ ಸ್ಟೇಟ್ ಫಾರೆಸ್ಟ್
3	ಚಿಕ್ಕಮಗಳೂರು ..	ಬಸವನಕೋಟೆ ಫಾರೆಸ್ಟ್
4	ಡಿಟೋ ..	ಮುತ್ತೋಡಿ ಸ್ಟೇಟ್ ಫಾರೆಸ್ಟ್
5	ಡಿಟೋ ..	ಕೆಳಗಣೆ ಸಂದಲ್ ರಿಜರ್ವ್
6	ಡಿಟೋ ..	ಮತ್ತಾವಾರ ಡಿಟೋ
7	ಕೊಪ್ಪ ..	ಹೆಬ್ಬೆ ಟೀಕ್ ಪ್ಲ್ಯಾಂಟೇಷನ್
8	ಕಡೂರು ..	ಯಮ್ಮೇದೊಡ್ಡಿ ಸಂದಲ್ ಪ್ಲ್ಯಾಂಟೇಷನ್
9	ತರೀಕೆರೆ ..	ಶಂಕರಗಟ್ಟ ಸಂದಲ್ ಪ್ಲ್ಯಾಂಟೇಷನ್
10	ಕಡೂರು ..	ಬುಕ್ಕಸಾಗರ ಪ್ಲ್ಯಾಂಟೇಷನ್
11	ಚಿಕ್ಕಮಗಳೂರು ..	ಹಂಗಾಜನಹಳ್ಳಿ ಸಂದಲ್ ರಿಜರ್ವ್
12	ಡಿಟೋ ..	ನೇರಡಿ ಡಿಟೋ
13	ಕೊಪ್ಪ ..	ಕರಡಿಮಟ್ಟ ರಿಜರ್ವ್ಡ್ ಫಾರೆಸ್ಟ್

ಸಿ. ಇ. ಯಂ. ರಸಲ್, ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್.

ಚಿತ್ರದುರ್ಗದ ಡಿಸ್ಟ್ರಿಕ್ಟು.

ತಾರೀಖು 6ನೇ ಜನವರಿ 1896.

ಇದರಿಂದ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿ ಇರುವ ರಿಜಸ್ಟರಾದ ದಸ್ತೈವಜುಗಳು ಯರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ಸಬ್ ರಿಜಸ್ಟ್ರೀ ಆಫಿಸುಗಳಲ್ಲಿ ವಾರಸದಾರು ಹಾಜರಾಗಿ ವಾಪಸ್ ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯತು ವಂದು ತಿಂಗಳ ವಳಗಾಗಿ ಸದರೀ ತಂಸೂಕು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ತಂಸೂಕುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ್ ರಿಜಸ್ಟ್ರೀ ಆಫಿಸುಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನ ವಾಪಸ್ ಪಡಿಯಬೇಕು. ತಪ್ಪಿದರೆ ರಿಜಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ಸದರೀ ದಸ್ತೈವಜು ನಾಶ ಪಡಿಸಲ್ಪಡುತ್ತೆ.

ಸಬ್ ರಿಜಸ್ಟ್ರೀ ಆಫೀಸ್ ಹೆಸರು.	ಬುಕ್ಕು ಮತ್ತು ರಿಜಸ್ಟರ ನಂಬರು.	ಕಕ್ಷಿಗಾರರು ಹೆಸರು ವಗ್ಯೆರೆ.		ದಸ್ತೈವಜು ತಾರೀಖು.	ರಿಜಸ್ಟ್ರಾದ ತಾರೀಖು.	ದಸ್ತೈವಜಿನ ಸ್ವಭಾವ.
		ತಂಸೂಕು ಬರದುಕೊಟ್ಟವ.	ತಂಸೂಕು ಬರಸಿಕೊಂಡವ.			
ಚೆಳ್ಳಕೆರೆ ಸಬ್ ರಿಜಸ್ಟ್ರಿ ಆಫಿಸ್	1ನೇ ಬುಕ್ಕು ನಂಬರ್ 71	ಗೋಣಿಕೆರೆ ವಾಸಸ್ಥ ಪಟೇಲ್ ಮುದ್ದಯ್ಯ	ಗೋಣಿಕೆರೆ ವಾಸಸ್ಥ ಚನ್ನಯ್ಯನ ಮಗ ಪಟೇಲಯ್ಯ.	24—1—93	24—1—93	150 ರೂಪಾಯಿನ ಕ್ರಯಪತ್ರ.
ಡಿಟೋ	ಡಿಟೋ ನಂ. 1	ರೇಣಕಾಪುರದ ಜಂಗಮರ ರಾಚಯ್ಯನ ಮಗ ತಿಪ್ಪಯ್ಯ	ರೇಣಕಾಪುರದ ಜಂಗಮರ ರಾಚಯ್ಯನಮಗ ರಾಚೋಟಪ್ಪ	3—7—93	3—7—93	155 ರೂಪಾಯಿನ ಕ್ರಯಪತ್ರ.
ಡಿಟೋ	ಡಿಟೋ ನಂ. 27	ಮಂಗ್ನೆ ಕೋಟೆ ವಾಸಸ್ಥ ವೋಬಯ್ಯನ ಮಗ ನೀರಗಂಟಿ ತಿಪ್ಪಯ್ಯ	ಚಿಕ್ಕ ವುಳ್ಳರ್ತಿ ವಾಸಸ್ಥ ನಾಯಕರ, ಯರಿ ಗುರಯ್ಯನಮಗ ಗುರಯ್ಯ	28—9—93	28—9—93	300 ರೂಪಾಯಿನ ತೋರಾಧಾರ ಪತ್ರ.
ಹೊಸದುರ್ಗದ ಸಬ್ ರಿಜಸ್ಟ್ರಿ ಆಫಿಸ್	1ನೇ ಬುಕ್ಕು ನಂಬರ್ 1	ಆನಿವಾಳದ ವಾಸಸ್ಥ ಮಾಡಿಮನೆ ಮುದ್ವೀರಪ್ಪ	ಆನಿವಾಳದ ವಾಸಸ್ಥ ಮುದ್ದಪ್ಪನ ಮಗ ಮರುಳು ಸಿದ್ದಪ್ಪ	25-11-93	25-11-93	23 ರೂಪಾಯಿನ ಕ್ರಯಪತ್ರ.
ಜಗಲೂರು ಸಬ್ ರಿಜಸ್ಟ್ರಿ ಆಫಿಸ್.	1ನೇ ಬುಕ್ಕು ನಂಬರ್ 47	ಬೂದಾಳು, ಬುಳ್ಳಪ್ಪನ ಮಗ ಬಸಪ್ಪ	ನಿಬಗೂರು ಮಾವಿನ ಹಳ್ಳೆಪ್ಪನಮಗ ಮಲ್ಲಪ್ಪ	27-6-92	27-6-92	96 ರೂಪಾಯಿನ ಕ್ರಯಪತ್ರ.
ಡಿಟೋ	ಡಿಟೋ ನಂ. 61	ಹಿರೇ ಅರಕೆರೆ ವುಪ್ಪಾರ ಮಲ್ಲಪ್ಪ.	ಹಿರೇ ಅರಕೆರೆ ವುಪ್ಪಾರ ನಿಂಗ	2—8—93	2—9—93	30 ರೂಪಾಯಿನ ಕ್ರಯಪತ್ರ.
ಡಿಟೋ	ಡಿಟೋ ನಂ. 173	ಅಸಗೋಡು ವುಪ್ಪಾರ ಭರಮ	ಅಸಗೋಡು ವುಪ್ಪಾರ ಗುಡ್ಡಗ	16—5—93	17—5—93	72 ರೂಪಾಯಿನ ಕ್ರಯಪತ್ರ.
ದಾವಣಗೆರೆ ಸಬ್ ರಿಜಸ್ಟ್ರಿ ಆಫಿಸ್	ಬುಕ್ಕು ನಂ. 1 ರಿಜಸ್ಟರ್ ನಂಬರ್ 144	ದಾವಣಗೆರೆ ವಾಸಸ್ಥ 1ನೇ ಫಕೀರಸಾಬಿ, 2ನೇ ಸಬೀಸಾಬಿ		26—5—93	31—5—93	200 ರೂಪಾಯಿನ ಫಾರಿಖತ್ತು.
ಡಿಟೋ	ಡಿಟೋ ನಂ. 471	ದಾವಣಗೆರೆ ವಾಸಸ್ಥ ದುರುಗಪ್ಪ	ದಾವಣಗೆರೆ ಗವಿಯಪ್ಪ	29—6—93	29—6—93	75 ರೂಪಾಯಿನ ಕ್ರಯಪತ್ರ.
ಡಿಟೋ	ಡಿಟೋ ನಂ. 22	ಹರಿಹರದ ಕಾಶಪ್ಪ	ಹರಿಹರದ ಮಲ್ಲಪ್ಪ	23-10-93	23-10-93	ಖುಲಾಸೆಪತ್ರ.
ಡಿಟೋ	ಬುಕ್ಕು ನಂ.1 ರಿಜಸ್ಟರ್ ನಂ. 110	ಹದಡಿ ವಾಸಸ್ಥ 1ನೇ ಮಲ್ಲಣ್ಣ, 2ನೇ ಹನುಮಂಣ	ಹದಡಿ ವಾಸಸ್ಥ ಮಂಕಂಣ	5—11—93	26-11-93	192 ರೂಪಾಯಿನ ಕ್ರಯಪತ್ರ.
ಡಿಟೋ	ಡಿಟೋ ನಂ. 148	ದಾವಣಗೆರೆ ವಾಸಸ್ಥ 1 ಮೂಗಂಣ, 2 ದೊಡ್ಡಪಂಪಂಣ, 3 ಸಂಕಂಣ, 4 ಸಣಪಂಪಂಣ, 5 ವಿರುಪಾಕ್ಷಪ್ಪ		14-12-93	19-12-93	980 ರೂಪಾಯಿನ ಫಾರಿಖತ್ತು.

ಎಂ. ಎಸ್. ನಾರಾಯಣರಾವ್, ರಿಜಸ್ಟ್ರಾರ್.

ನಂದೀದುರ್ಗದ ಡಿವಿಜರ್ಸ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 215.

ಮೃತಪಟ್ಟ ಕೋಲಾರ ಡಿಸ್ಟ್ರಿಕ್ಟು ಆಫೀಸ್ ಕ್ಯಾಂಪು ರೈಟರ ನರಸಿಂಗರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕೋಲಾರದಲ್ಲಿ ಇರುವ ಸಾಯೂಬಾಯಿಯವರು ಮೃತಪಟ್ಟ ಸದರೀ ನರಸಿಂಗರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರ ಸ್ಥಳದ ಸಾಯೂಬಾಯಿಯವರು ಕೋಲಾರ ವಾಸಸ್ಥರಾಗಿ ಮೃತಪಟ್ಟ ನರಸಿಂಗರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸ್ಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಾಯೂಬಾಯಿಯವರು ಅರ್ಜಿಯನ್ನು ಸರ್ 1896ನೇ ಇಸವಿ ಫೆಬ್ರುವರಿ ತಿಂಗಳ ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಿಂಗರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 263.

ಮೃತಪಟ್ಟ ದೇವರಂಟೆ ಗುರಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಮನವಾರ್ತೆಪೇಟೆಯಲ್ಲಿ ಇರುವ ದೇವರಂಟೆ ಗುರಂಣನಮಗ ಅಪ್ಪಂಣ ಮೈನರ್, ಗಾರ್ಡಿಯನ್ ಮತ್ತು ದೊಡ್ಡಪ್ಪ ದೇವರಂಟೆ ಮುನಿಯಲ್ಲಪ್ಪನು, ಮೃತಪಟ್ಟ ಸದರೀ ದೇವರಂಟೆ ಗುರಂಣನಿಗೆ ಮಗನು ಮತ್ತು ಅಂಣನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಮನವಾರ್ತೆಪೇಟೆ ಸ್ಥಳದ ಅಪ್ಪಂಣ ಮೈನರ ಗಾರ್ಡಿಯನ್ ಮುನಿಯಲ್ಲಪ್ಪನು, ಡಿಟೋ ಪೇಟೆ ವಾಸಸ್ಥನಾಗಿ ಮೃತಪಟ್ಟ ಗುರಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಪ್ಪಂಣ ಮೈನರ ಗಾರ್ಡಿಯನ್ ಮುನಿಯಲ್ಲಪ್ಪನ ಅರ್ಜಿಯನ್ನು ಸರ್ 1896ನೇ ಇಸವಿ ಫೆಬ್ರುವರಿ ತಿಂಗಳ ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವರಂಟೆ ಗುರಂಣನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1896ನೇ ಇಸವಿ ಜನವರಿ ತಿಂಗಳ 16ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ಸಹಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ನಗರ ಡಿವಿಜರ್ಸ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 219.

ಮೃತಪಟ್ಟ ನವಲೆಪ್ಪ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಿವಮೊಗ್ಗಾ ತಾಲ್ಲೂಕು ಸನ್ಯಾಸಿ ಕೊಡಮಗ್ಗಿಯಲ್ಲಿರುವ 1ನೇ ಹಾಲಪ್ಪ, 2ನೇ ನವಲಪ್ಪ ಮೈನರ ಗಾರ್ಡಿಯನ್ ತಾಯಿ ದೇವೀರಕ್ಕ ಮೃತಪಟ್ಟ ಸದರೀ ನವಲೆಪ್ಪ ಎಂಬುವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಸನ್ಯಾಸಿ ಕೊಡಮಗ್ಗಿ ಸ್ಥಳದ 1ನೇ ಹಾಲಪ್ಪ, 2ನೇ ನವಲೆಪ್ಪ ಮೈನರ ಗಾರ್ಡಿಯನ್ ತಾಯಿ ದೇವೀರಕ್ಕ ಎಂಬುವರು ಸನ್ಯಾಸಿ ಕೊಡಮಗ್ಗಿ ವಾಸಸ್ಥರಾಗಿ ಮೃತಪಟ್ಟ ನವಲೆಪ್ಪ ಎಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಹಾಲಪ್ಪ, 2ನೇ ನವಲೆಪ್ಪ ಮೈನರ ಗಾರ್ಡಿಯನ್ ತಾಯಿ ದೇವೀರಕ್ಕ ಎಂಬುವರ ಅರ್ಜಿಯನ್ನು ಸರ್ 1896ನೇ ಇಸವಿ ಜನವರಿ ತಿಂಗಳ ತಾರೀಖು 31ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನವಲೆಪ್ಪ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1895—96ನೇ ಇಸವಿ ಜಾರಿ ಅರ್ಜೀ ನಂಬರ 221.

ಮೃತಪಟ್ಟ ಕೂಡ್ಲಿ ಸುಬ್ರಾಯ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶಿವಮೊಗ್ಗಾದಲ್ಲಿರುವ ಊರಗಡೂರು ಕಾಳಪ್ಪ ಬಿನ್ ರಾಮಪ್ಪ ಎಂಬುವರು, ಮೃತಪಟ್ಟ ಸದರೀ ಕೂಡ್ಲಿ ಸುಬ್ರಾಯರಿಗೆ ಅವಿಭಕ್ತ ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಊರಗಡೂರು ಕಾಳಪ್ಪ ಬಿನ್ ರಾಮಪ್ಪ ಎಂಬುವರು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಕೂಡ್ಲಿ ಸುಬ್ರಾಯರ ಜಿಂದಗಿ ಬಗ್ಯಾಗಿ ಬರತಕ್ಕ 250 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಊರಗಡೂರು ಕಾಳಪ್ಪ ಬಿನ್ ರಾಮಪ್ಪ ಎಂಬುವರ ಅರ್ಜಿಯನ್ನು ಸರ್ 1896ನೇ ಇಸವಿ ಜನವರಿ ತಿಂಗಳ ತಾರೀಖು 31ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೂಡ್ಲಿ ಸುಬ್ರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1895ನೇ ಇಸವಿ ಡಿಸೆಂಬರ ತಿಂಗಳ 28ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಸಹಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಹೆಚ್. ವಿ. ನಂಜುಂಡಯ್ಯ,
ಆ|| ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರ ಗೆಜೆಟ ಚಂದಾ ದರ ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಷ್ಪ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು.	
ಚಾಲತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜ ಕೇಳಿ, ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕೂಂ 155ನೇ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಶೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್,ಶಾನುಭೋಗರುಗಳು ಆಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ವಂದು ಸರಟಿಫಿಕೇಟನ್ನ ಪಡೆದು ಹಾಜರ್‍ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ 21ನೇ ಮರ್ಕೂಂ 24205—6—ಜಿ. 6200ನೇ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯುತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

	ರೂ.	ಆ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಫಿಕೇಟ ಬಗ್ಯೆ ನೋಟಿಸಗಳು:—		
ಮೊದಲನೇ ದಫಾ ಘಾಯಿಷ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ ..	1	4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೇ ಸೆಕ್ಷನ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ ..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ ..	2	8

ಸಿವಿಲ ಪ್ರೊಸಿಡ್ಯೂರ ಕೋಡಿನ 354ನೇ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತವೆ.

		ರೂ.	ಆ.
ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	,,	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ	ಡಿಟೋ	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರಡರ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರು ಗವರ್ನಮೆಂಟ ಜನರಲ ಸೆಕ್ರೆಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದ್‌ಗಳು ಇದರಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್ಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಯಿಲ್ಲ.

ಟಿ. ಟಿ. ಲೆನಾರಡ್,
ಮೈಸೂರ ಗೆಜೆಟ ಕಂಪೈಲರ.

50

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಛಾಯಿಸ್ಪ್ ಆದ್ದು. [ನಂ. 4.

ಬೆಂಗಳೂರು, ಗುರುವಾರ, ಜನವರಿ ತಾ॥ 30, ಸನ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾವೆುಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‍ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರ್‌ಗಳು, ಫಾರೆಸ್ಟು, ರಜಿಸ್ಟ್ರೇಷನ ವ ಎಡ್ಯುಕೇಷನ ಇನ್‍ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟೆ ಜಡ್ಜೀರು, ಪೋಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾವೆುಗಳು.

ರೆವಿನ್ಯೂ.

ತಾರೀಖು 11ನೇ ಡಿಸೆಂಬರ್ 1895.

ನಂ. 5508.—ಎಕ್ಸೈಸ್. 182.—ಮೈಸೂರು ಗವರ್ನಮೆಂಟನವರು ಆಜ್ಞಾಪಿಸುವದೇನಂದರೆ, 1892ನೇ ಇಸವಿ ಮಾರ್ಚಿ 30ನೇ ಮರ್ಕುಂ 495ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪ್ರಕಟಸಲ್ಪಟ್ಟ ರೂಲ್‌ಗಳ 21ನೇ ರೂಲಿನ 5ನೇ ಕ್ಲಾಜಿಗೆ ಸೇರಿದ (2) ವ (3)ನೇ ಸಬ್ ಕ್ಲಾಜ್‌ಗಳಿಗೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು.

(2) ಸದರೀ ಸ್ವಾತಂತ್ರ್ಯವನ್ನು ಖರೀದಿಗೆ ಪಡೆದುಕ್ಕೊಂಡಂಥಾ ಮೊಬಲಗು ಸದರೀ ಕಾಂಟ್ರಾಕ್ಟಿನ ಮೊದಲನೇ ತಿಂಗಳಾರಭ್ಯ ಮಾಹೆಯಾನ ಸಮನಾದ ಖಿಸ್ತುಗಳಾಗಿ ಸ್ಥಳಿಕ ತಾಲ್ಲೂಕು ಟ್ರೆಜರೀಗೆ ವಿಧಿಸಲ್ಪಟ್ಟ ಅಚ್ಚಿನ ಚಲನ ಮುಖಾಂತ್ರ ಪಾವತಿ ಮಾಡ

ಲ್ಪಡಬೇಕು. ಪ್ರತಿ ಖಿಸ್ತು ಅದು ಪಾವತಿ ಮಾಡಲ್ಪಡಬೇಕಾದ ತಿಂಗಳಿನ ಇಜಾರೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಂಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್‌ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಲೈಸೆನ್ಸು ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ರಿಕಾರ್ಡು ಮಾಡಿ ಮಾಹೆ ಆಖೈರ್ ಆದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ ಇಜಾರೆಯನ್ನು ಮರಳಿ ಹರಾಜು ಮಾಡತಕ್ಕದ್ದು. ಪರಂತು ಮೇಲ್ಕಂಡಂತೆ ಇಜಾರೆಯನ್ನು ಪುನಃ ವಿಕ್ರಯಿಸುವದಕ್ಕೆ ಬದಲಾಗಿ ಡೆಪ್ಯುಟಿ ಕಮ್ಮಿಷನರವರು ಅವರ ಯುಕ್ತಾನುಸಾರ ಹಾಂಗೆ ತಪ್ಪಿಹೋದ ಇಜಾರೆಯನ್ನು ಹಾಲಿ ಇರತಕ್ಕ ಅದಕ್ಕೆ ಸೇರಿದ ದುಕಾನವಾರಾಗಿ ವಿಂಗಡಿಸಲ್ಪಟ್ಟ ಪ್ರತಿ ಬೇರೆ ಬೇರೆ ದುಕಾನದಾರನಿಗೂ ಅವನು ಪಾವತಿ ಮಾಡುವದಕ್ಕೆ ಒಪ್ಪುವ ಗುತ್ತಿಗೆ ಮೊಬಲಗಿಗೋಸ್ಕರ ಬಂದು ಲೈಸೆನ್ಸ್ ಕೊಡುವಂತೆ ಅಮಲ್‌ದಾರರಿಗೆ ಹುಕುಂ ಕೊಡಬಹುದು. ಪರಂತು ಹೀಂಗೆ ಕೊಡೋಣಾದ ಗುತ್ತಿಗೆಯ ಒಟ್ಟು ಮೊಬಲಗು ತಪ್ಪಿಹೋದ ಇಜಾರೆದಾರನು ಪಾವತಿ ಮಾಡುವದಕ್ಕೆ ಒಪ್ಪಿ ಇದ್ದ ಮೊಬಲಗಿಗಿಂತಲೂ ಕಮ್ಮಿ ಆಗಿರಕೂಡದು. ಚಲನ್‌ಗಳು ಇದಕ್ಕೆ ಲಗತಃ ಮಾಡಿರುವ ಈ ನಮೂನೆಯಲ್ಲಿ ಮೂರು ಪ್ರತಿಗಳಾಗಿರತಕ್ಕದ್ದು. ಇದರ ಒರಿಜನಲ್ ಕಾಪಿಯು ಟ್ರೆಜರಿಯ ರೋಜ್‌ನಾಮೆ ಲೆಖ್ಖದೊಂದಿಗೆ ಡಿಸ್ಟ್ರಿಕ್ಟ್ ಟ್ರಜರೀಗೆ ಕಳುಹಿಸಲ್ಪಡತಕ್ಕದ್ದು. ಎರಡನೇ ಪ್ರತಿಯು ತಾಲ್ಲೂಕು ಟ್ರೆಜರಿ ಆಫಿಸರರಿಂದ ಎಕ್ಸೈಜ್ ಕಮ್ಮಿಷನರ ಆಫಿಸಿಗೆ ಕಳುಹಿಸಲ್ಪಡತಕ್ಕದ್ದು, ಮೂರನೇ ಪ್ರತಿಯು ಇಜಾರೆದಾರನ ಬಳಿ ಇಡಲ್ಪಡತಕ್ಕದ್ದು. ಸಿವಿಲ್ ವ ಮಿಲಿಟೆರಿ ಸ್ಟೇಷನಿನಲ್ಲಿರತಕ್ಕ ದುಕಾನಗಳಿಗೋಸ್ಕರ ಪಾವತಿ ಮಾಡಲ್ಪಡಬೇಕಾದ ಮೊಬಲಗು ಸದರೀ ಸಿವಿಲ್ ವ ಮಿಲಿಟೆರಿ ಸ್ಟೇಷನಿನ ಕಲೆಕ್ಟರಿಂದ ದುಕಾನದಾರರಿಗೆ ಕೊಡಲ್ಪಡುವ ಅಜ್ಞೆನ ಚಲನ್‌ಗಳ ಮುಖಾಂತರ ರೆಸಿಡೆಂಟರ ಟ್ರೆಜರಿಯಲ್ಲಿ ಪಾವತಿಮಾಡಲ್ಪಡಬೇಕು.

(3) ಲೈಸೆನ್ಸ್‌ದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಇಜಾರೆ ಮಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಮೇಲ್ಕಂಡಂತೆ ಎರಡನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಅಥವಾ ವಿಂಗಡಿಸಲ್ಪಟ್ಟಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗದುಕೊಳ್ಳಲ್ಪಡಬಹುದು. ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಇಜಾರೆಯು ದುಸರೇ ಹರಾಜು ಮಾಡಿದ್ದರಿಂದ ವುಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತೀ ಮಾಡುವ ಬಗ್ಗೆ ವುಪಯೋಗಿಸಲ್ಪಡಬಹುದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳೂ ಸುದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಶೇಕಡ ಸಾಲಿಯಾನ ಆರ್ರಂತೆ ಆಗುವ ಬಡ್ಡಿ ದೇಖೀಲ್ ಲೈಸೆನ್ಸ್‌ದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸ್‌ದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಗೆ ಅಥವಾ ಈಡು ಮೊಬಲಗು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

2. ಕರಾರ್ ಮತ್ತು ಲೈಸೆನ್ಸ್ ವಗೈರೆಗಳ ಷರತ್ತುಗಳು ಬದಸ್ತೂರ್ ಬದಲಾಯಿಸಲ್ಪಡತಕ್ಕದ್ದು.

ನಂ. 5512.—ಎಕ್ಸ್.—183.—1893ನೇ ಇಸವಿ ಜನವರಿ 14ನೇ ಮರ್ಕುಂ 11739—10—ರೆ. ಫೈ. 233—92ನೇ ನಂಬರಿ ಪ್ರೊಸಿಡಿಂಗ್ಸಿನಲ್ಲಿ ಮಂಜೂರ್ಮಾಡಲ್ಪಟ್ಟ 11813—ರೆ. ಫೈ. 233—92ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಫಾಯಿಸ್ಮಾಡಲ್ಪಟ್ಟ ರೂಲ್ಸ್‌ಗಳ Vನೇ ರೂಲಿನ 6ನೇ ಕ್ಲಾಜ್ (2) ವ (3)ನೇ ಸಬ್ ಕ್ಲಾಜ್‌ಗಳಿಗೆ ಇದರಡಿ ಬರುವದನ್ನ ಸೇರಿಸತಕ್ಕದ್ದೆಂದು ಮೈಸೂರು ಗವರ್ನಮೆಂಟಿನವರು ಆಜ್ಞಾಪಿಸುತ್ತಾರೆ:—

(2) ಒಟ್ಟು ಸ್ವಾತಂತ್ರ್ಯವು ಖರೀದಿಗೆ ಪಡೆದುಕೊಂಡಂಥಾ ಮೊಬಲಗು ಖಿಸ್ತು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ದೇಖೀಲ್, ಲೈಸೆನ್ಸ್‌ದಾರನಿಂದ ಸ್ಥಳಿಕ ಖಜಾನೆಗೆ ಆ ಬಗ್ಯಾಗಿ ಗವರ್ನಮೆಂಟಿನಿಂದ ಒದಗಿಸಲ್ಪಡುವ ವಿಧಿಸೋಣಾದ ಅಜ್ಞೆನ ಚಲನ್ ಮೇಲೆ, ಗುತ್ತಿಗೆಯ ಮೊದಲನೇ ತಿಂಗಳಿನಾರಭ್ಯ ಸಮನಾದ ಮಾಹೆವಾರಿ ಖಿಸ್ತುಗಳಾಗಿ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿ ಖಿಸ್ತು ಮೊಬಲಗೂ ಅದು ಪಾವತಿ ಮಾಡಲ್ಪಡಬೇಕಾದ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಗುತ್ತಿಗೆ ಮೊಬಲಗು ಅದರ ಮೇಲಿನ ಲೋಕಲ್‌ಸೆಸ್ ದೇಖೀಲ್ ಅದೇ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಂಗೆ ಪಾವತಿ ಆಗುವದಕ್ಕೆ ತಪ್ಪಿದರೆ, ಸದರೀ ಅಮಲ್‌ದಾರರು, ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಯನ್ನು ಪಡೆದು, ಸದರೀ ಗುತ್ತಿಗೆಯು ರದ್ದಾಗಿರುತ್ತೆಂದು ಬರಹ ಮೂಲಕ ರೆಕಾರ್ಡು ಮಾಡಿ, ಸದರೀ ಮಾಹೆ ಆಖೈರಾದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ, ಇಜಾರೆಯನ್ನು ಮರಳಿ ಹರಾಜ್ ಮಾಡುವದಕ್ಕೆ ಉದ್ಯುಕ್ತರಾಗತಕ್ಕದ್ದು. ಪರಂತು ಸದರೀ ಇಜಾರೆಯನ್ನು ಮೇಲ್ಕಂಡಂತೆ ದುಸರೇ ಹರಾಜು ಮಾಡುವದಕ್ಕೆ ಬದಲಾಗಿ ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಅಂಥಾ ರದ್ದಾದ ಇಜಾರೆಗೆ ಸೇರಿರತಕ್ಕ ದುಕಾನುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ಪ್ರತಿ ದುಕಾನದಾರನಿಗೂ ಅವನು ಕೊಡುವದಕ್ಕೆ ಒಪ್ಪುವಂಥಾ ಗುತ್ತಿಗೆ ಮೊಬಲಗ್ಯೆ ಬೇರೆ ಬೇರೆ ಲೈಸೆನ್ಸ್ ಕೊಡುವಂತೆ ಹುಕುಂ ಮಾಡಬಹುದು; ಪರಂತು ಅಂಥಾ ಗುತ್ತಿಗೆಯ ಒಟ್ಟು ಮೊಬಲಗು, ತಪ್ಪಿಹೋದ ಕಂಟ್ರಾಕ್ಟುದಾರನು ಪಾವತಿ ಮಾಡುವದಾಗಿ ಒಪ್ಪಿ ಇದ್ದದ್ದಕ್ಕಿಂತಲೂ ಕಮ್ಮಿಯಾಗಿರಕೂಡದು. ಚಲನ್‌ಗಳು ಲಗತ್ತಿರುವ ಸಿ. ನಮೂನೆಯಲ್ಲಿ ತ್ರಿಪ್ರತಿಗಳಾಗಿ ಇರತಕ್ಕದ್ದು. ಇದರ ಒರಿಜನಲ್ ಭಾಗವು ಟ್ರೆಜರಿ "ರೋಜ್ ಕ್ಯಾಷ್" ಲೆಖ್ಖದೊಂದಿಗೆ ಡಿಸ್ಟ್ರಿಕ್ಟ್ ಟ್ರೆಜರಿಗೆ ರವಾನಿಸಲ್ಪಡತಕ್ಕದ್ದು. ಎರಡನೇ ಭಾಗವು ತಾಲ್ಲೂಕು ಟ್ರೆಜರಿ ಆಫಿಸರಿಂದ ಡೆಪ್ಯುಟಿ ಕಮ್ಮಿಷನರವರ ಆಫಿಸಿಗೆ ಕಳುಹಿಸಲ್ಪಡತಕ್ಕದ್ದು. ಮತ್ತು ಮೂರನೇ ಭಾಗವು ಲೈಸೆನ್ಸ್‌ದಾರನಲ್ಲಿ ಇಡಲ್ಪಡತಕ್ಕದ್ದು.

(3) ಲೈಸೆನ್ಸ್‌ದಾರನಿಂದ ಹಾಜರಾಡಲ್ಪಟ್ಟ ಠೇವಣಿ ಮೊಬಲಗು, ಗುತ್ತಿಗೆ ಮಾಯಿದೆಯ ಆಖೈರ್ ಮಾಹೆ ಯಾ ಮಾಹೆಗಳ ಖಿಸ್ತುಗಳಿಗೋಸ್ಕರ ವಸೂಲ್ ಹಾಕಲ್ಪಡಬೇಕು, ಪರಂತು ಮೇಲ್ಕಂಡ (2)ನೇ ಸಬ್ ಕ್ಲಾಜ್ ಅನುಸರಿಸಿ, ಇಜಾರೆಯು

ದುಸರೇ ಹರಾಜ್ ಮಾಡಲ್ಪಟ್ಟಾಗ ಯಾ ರದ್ದು ಮಾಡಲ್ಪಟ್ಟಾಗ, ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು ಇಜಾರೆಯು ಮರಳಿ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಸುದಾ ಉಪಯೋಗಿಸಲ್ಪಡಬಹುದು. ಹಾಂಗೆ ಬರಬೇಕಾದ ಬಾಕಿ ಮೊಬಲಗು ವ ನಷ್ಟದ ಮೊಬಲಗು ಸುದಾ ಲೈಸೆನ್ಸದಾರನಿಂದಾಗಲಿ ಅವನ ಜಾಮೀನ್ದಾರ್ ಯಾ ಜಾಮೀನ್ದಾರರಿಂದಲಾಗಲಿ ಯಾ ವುಭಯತ್ರರಿಂದಾಗಲಿ, ರವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯಾಗಿ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, ಶೇಕಡಾ ಸಾಲಿಯಾನಾ 6ರ ಪ್ರಕಾರ ಆಗುವ ಬಡ್ಡಿ ದೇಖೀಲ್ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಬಬಿನ ಮೇಲಾಗಲಿ, ಗುತ್ತಿಗೆ ಮೊಬಲಗಿನ ಯಾವ ರಿಮಿಷನ್ ಅಥವಾ ಕಮ್ಮಿ ಮಾಡುವಣವಾಗಲಿ ಅಥವಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು.

2. ಬಡಂಬಡಿಕೆ, ಲೈಸೆನ್ಸ್ ವಗೈರೆಗಳ ಷರತ್ತುಗಳು ಬದಸ್ತೂರ್ ಬದಲಾಯಿಸಲ್ಪಡತಕ್ಕದ್ದು, ಮತ್ತು ತೆಗೆದುಕೊಳ್ಳಬೇಕಾದ ಜಾಮೀನೀ ವಿಷಯದಲ್ಲಿ, 1895ನೇ ಇಸವಿ ಮಾರ್ಚಿ 29ನೇ ಮುರ್ಕ್ಕಂ 15931—ರೆ. ಫೈ. 210—92ನೇ ನಂಬರ್ ಇಸ್ತಿಹಾರ್‌ನಾಮೆಯ 3ನೇ ಪ್ಯಾರಾದಲ್ಲಿ ಅಡಗಿರುವದಕ್ಕೆ ಬದಲಾಗಿ 1893ನೇ ಇಸವಿ ಜನವರಿ 14ನೇ ಮುರ್ಕ್ಕಂ 11813—ರೆ. ಫೈ. 233—92ನೇ ನಂಬರ್ ಇಸ್ತಿಹಾರ್‌ನಾಮೆಯ Vನೇ ರೂಲ್ 2ನೇ ಕ್ಲಾಜಿನಲ್ಲಿ ವಿಧಿಸೋಣಾದ ಷರತ್ತುಗಳು ಆಚರಿಸಲ್ಪಡತಕ್ಕದ್ದು.

ತಾರೀಖು 23ನೇ ಡಿಸೆಂಬರ್ 1895.

ನಂ. 5817.—ಫಾ. ಫೈ. 54—95.—1889ನೇ ಇಸವಿ ಆಗಸ್ಟ್ 7ನೇ ಮುರ್ಕ್ಕಂ 113ನೇ ನಂಬರ್ ಮತ್ತು 1894ನೇ ಇಸವಿ ಮೇ 5ನೇ ಮುರ್ಕ್ಕಂ 19171.—ರೆ. ಫೈ. 303—92ನೇ ನಂಬರ್ ಇಸ್ತಿಹಾರ್‌ನಾಮೆಗಳನುಸರಿಸಿ, ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ಡಿಪೋಗಳಲ್ಲಿ ತೇಗದ ಮರವು ಆಯಾಯ ಡಿಪೋಗಳಿಗೆ ಬಾಜೂದಲ್ಲಿ ಕಾಣಿಸಿ ಇರುವ ತಿದ್ದುಪಾಟಾದ ದರಗಳ ಪ್ರಕಾರ ಬಿಕರಿ ಮಾಡಲ್ಪಡುವದು:—

ಡಿಪೋ ಹೆಸರು.	ಮರದ ವಿವರಣೆ.	ಅವ್ವಲ್ ರಖಮಿಗೆ ದರ.	ದುಯ್ಯಂ ರಖಮಿಗೆ ದರ.	ಸಿಯ್ಯಂ ರಖಮಿಗೆ ದರ.	ಚಹರಂ ರಖಮಿಗೆ ದರ.
		ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಕಡೂರು ಡಿಪೋ ..	ತೇಗದಮರ.	1—14—0	1—10—0	1—6—0	1—4—0
ತರೀಕೆರೆ ಡಿಪೋ ..	ಡಿಟೋ	1—12—0	1—8—0	1—4—0	0—0—0
ಲಕ್ಕವಳ್ಳಿ ಡಿಪೋ ..	ಡಿಟೋ	1—10—0	1—6—0	1—2—0	0—0—0

ತಾರೀಖು 6ನೇ ಜನವರಿ 1896.

ನಂ. 5854.—ರೆ. 2285.—1888ನೇ ಇಸವಿ IVನೇ ನಂಬರ್ ರೆಗ್ಯುಲೇಷನ್ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ, ಮೈಸೂರು ಗವರ್ನಮೆಂಟಿನವರು ಅಜ್ಞಾಪಿಸುವದೇನಂದರೆ, ಸದರೀ ಕೋಡಿನ VIII ಮತ್ತು IXನೇ ಅಧ್ಯಾಯಗಳ ನಿಯಮಗಳು ಮಂಡ್ಯ ತಾಲ್ಲೂಕಿನ ಕಾಯಂಗುತ್ತಾ ಅಂಕುಶಾಪುರ ಗ್ರಾಮಕ್ಕೆ ಲಗಾವ್ ಮಾಡಲ್ಪಡತಕ್ಕದ್ದು.

ನಂ. 5918.—ಫೈ. 349.—ಗವರ್ನಮೆಂಟಿನವರು, 1891ನೇ ಇಸವಿ ಆಕ್ಟೋಬರ್ 27ನೇ ಮುರ್ಕ್ಕಂ 305ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪ್ರಸಿದ್ಧಿಪಡಿಸಲ್ಪಟ್ಟ ಮೈಸೂರು ಸ್ಟೇಟ್ ಲೈಫ್ ಇನ್ಶೂರೆನ್ಸ್ ರೂಲ್ಸಿನ 21ನೇ ರೂಲಿಗೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದೆಂದು ಅಜ್ಞಾಪಿಸುತ್ತಾರೆ:—

21 "ಸಕ್ರೆಟರಿಯವರು, ಪಾಲಿಸಿ ಪತ್ರವನ್ನು ಭೀಮಾದಾರನಿಗೆ ಮೊದಲನೇ ಪ್ರಿಮಿಯಂಯಾನೆ ಚಂದಾ ಪಾವತಿ ಮಾಡಿದ ತರುವಾಯ ಕೊಡುವ ಬಗ್ಯಾಗಿ ಸದರೀ ಭೀಮಾದಾರನು ವಾಸವಾಗಿರುವಂಥಾ ಡಿಸ್ಟ್ರಿಕ್ಟಿನ ಟ್ರೆಜರಿ ಆಫಿಸರ್ ಬಳಿಗೆ ಕಳುಹಿಸತಕ್ಕದ್ದು. ಮೊದಲನೇ ಚಂದಾ ಮೊಬಲಗು ಪಾವತಿ ಮಾಡಿದ ತಾರೀಖು ಭೀಮಾ ಪತ್ರದ ತಾರೀಖಾಗಿ ಇರತಕ್ಕದ್ದು ಮತ್ತು ಭೀಮಾ ಪತ್ರವನ್ನ ಕೊಡುವದಕ್ಕೆ ಮುಂಚಿತವಾಗಿ ಸದರೀ ತಾರೀಖು ಭೀಮಾ ಪತ್ರದಲ್ಲಿ ಟ್ರೆಜರಿ ಆಫೀಸರಿಂದ ನಮೂದಿಸಲ್ಪಡತಕ್ಕದ್ದು. ಒಂದು ಭೀಮಾ ಪತ್ರವು ಡಿಸ್ಟ್ರಿಕ್ಟು ಟ್ರೆಜರಿಯಿಂದಲಾಗಲಿ ಅಥವಾ ಅದು ಪಾವತಿ ಬಗ್ಯೆ ಕಳುಹಿಸಲ್ಪಟ್ಟಿರಬಹುದಾದಂಥಾ ತಾಲ್ಲೂಕು ಟ್ರೆಜರಿಯಿಂದಲಾಗಲಿ ಅದು ತಲಪಿದ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ತೆಗೆದುಕೊಳ್ಳಲ್ಪಡದಿದ್ದರೆ ಆ ಸಂಗತಿಯು ಸಕ್ರೆಟರಿಯವರಿಗೆ ರಿಪೋರ್ಟು ಮಾಡಲ್ಪಡತಕ್ಕದ್ದು; ಅವರು ವರಿಜನಲ್ ಮೆಡಿಕಲ್ ಸರ್ಟಿಫಿಕೇಟ್ ಹಾಜರ್ಮಾಡಲ್ಪಟ್ಟ ಕಾಲದಿಂದ ಆರು ತಿಂಗಳ ವಳಗಾಗಿ ಇದ್ದ ಪಕ್ಷದಲ್ಲಿ ಒಂದು ಸಾಧಾರಣ ಮೆಡಿಕಲ್ ಸರ್ಟಿಫಿಕೇಟ್ ಪುನಃ ಹಾಜರ್ಮಾಡುವಂತೆ ಭೀಮಾದಾರನಿಗೆ ಎಚ್ಚರಿಸತಕ್ಕದ್ದು.

ತಾರೀಖು 9ನೇ ಜನವರಿ 1896.

ನಂ. 6128.—ರೆ. 2275.—1888ನೇ ಇಸವಿ IVನೇ ನಂಬರ್ ರೆಗ್ಯುಲೇಷನ್ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ ಮೈಸೂರು ಗವರ್ನಮೆಂಟಿನವರು ಅಜ್ಞಾಪಿಸುವದೇನಂದರೆ, ಸದರೀ ಕೋಡಿನ VIII

ವ IXನೇ ಅಧ್ಯಾಯಗಳ ನಿಯಮಗಳು, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಸರ್ವ ಯಿನಾಂ ಬಸವನಹಳ್ಳಿ ಗ್ರಾಮಕ್ಕೆ ಲಗಾವ್‌ಮಾಡಲ್ಪಡತಕ್ಕದ್ದು.

ನಂ. 6154.—ಫೈ. 366.—ಮೈಸೂರು ಗವರ್ನ್‌ಮೆಂಟಿನವರು ಆಜ್ಞಾಪಿಸುವದೇನಂದರೆ, 1891ನೇ ಇಸವಿ ಅಕ್ಟೋಬರ 27ನೇ ಮರ್ಸ್ಕಾಂ 305ನೇ ನಂಬರ್ ಇಸ್ತಿಹಾರ್‌ನಾಮೆಯೊಡನೇ ಶಾಯಿಷ್ ಮಾಡಲ್ಪಟ್ಟು 1892ನೇ ಇಸವಿ ಮೇ 16ನೇ ಮರ್ಸ್ಕಾಂ 67ನೇ ನಂಬರು ಮತ್ತು 1895ನೇ ಇಸವಿ ಜೂನ್ 19ನೇ ಮರ್ಸ್ಕಾಂ 23838.—ರೆ. 3466ನೇ ನಂಬರು ಮತ್ತು 1896ನೇ ಇಸವಿ ಜನವರಿ 6ನೇ ಮರ್ಸ್ಕಾಂ 5918.—ಫೈ. 349ನೇ ನಂಬರ್ ಈ ಇಸ್ತಿಹಾರ್‌ನಾಮೆಗಳಿಂದ ತಿದ್ದುಪಾಟಾದ ಮೈಸೂರು ಸ್ಟೇಟ್ ಲೈಫ್ ಇನ್‌ಸ್ಯೂರೆನ್ಸ್ ರೂಲಿನ 21ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು.

ಪ್ಯಾರಾ 21. "ಸೆಕ್ರೆಟರಿಯವರು, ಪಾಲಿಸಿ ಪತ್ರವನ್ನು ಭೀಮಾದಾರನಿಗೆ ಮೊದಲನೇ ಪ್ರಿಮಿಯಂ ಯಾನೆ ಚಂದಾಪಾವತಿ ಮಾಡಿ "ದ ತರುವಾಯ ಕೊಡುವ ಬಗ್ಗ್ಯಾಗಿ, ಸದರೀ ಭೀಮಾದಾರನು ವಾಸವಾಗಿರುವಂಥಾ ಡಿಸ್ಟ್ರಿಕ್ಟಿನ ಟ್ರೆಜರಿ ಆಫಿಸರ ಬಳಿಗೆ ಕಳುಹಿಸತ "ಕ್ಕದ್ದು. ಮೊದಲನೇ ಚಂದಾ ಮೊಬಲಗು ಪಾವತಿ ಮಾಡಿದ ತಾರೀಖು ಭೀಮಾ ಪತ್ರದತಾರೀಖಾಗಿ ಇರತಕ್ಕದ್ದು, ಮತ್ತು "ಭೀಮಾ ಪತ್ರವನ್ನ ಕೊಡುವದಕ್ಕೆ ಮುಂಚಿತವಾಗಿ ಸದರೀ ತಾರೀಖು ಭೀಮಾ ಪತ್ರದಲ್ಲಿ ಟ್ರೆಜರಿ ಆಫಿಸರಿಂದ ನಮೂದಿಸತಕ್ಕದ್ದು.

"ಒಂದು ಭೀಮಾ ಪತ್ರವು ಡಿಸ್ಟ್ರಿಕ್ಟು ಟ್ರೆಜರಿಯಿಂದಲಾಗಲಿ ಅಥವಾ ಅದು ಪಾವತಿ ಬಗ್ಗೆ ಕಳುಹಿಸಲ್ಪಟ್ಟಿರಬಹುದಾದಂಥಾ ತಾಲ್ಲೂ "ಕು ಟ್ರೆಜರಿಯಿಂದಲಾಗಲಿ ಅದು ಅಲ್ಲಿಗೆ ತಲಪಿದ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ತೆಗದುಕೊಳ್ಳಲ್ಪಡದಿದ್ದರೆ ಆ "ಸಂಗತಿಯು ಸೆಕ್ರೆಟರಿಯವರಿಗೆ ರಿಪೋರ್ಟು ಮಾಡಲ್ಪಡತಕ್ಕದ್ದು; ಅವರು ಭೀಮಾದಾರನಿಗೆ ತನ್ನ ಆರೋಗ್ಯ ಸ್ಥಿತಿ ಕುರಿತು ಒಂದು "ಸಾಧಾರಣವಾದ ಮೆಡಿಕಲ್ ಸರ್ಟಿಫಿಕೇಟ್ ಹಾಜರ್ಮಾಡುವಂತೆ ತಗಾದೆ ಮಾಡತಕ್ಕದ್ದು, ಅಂಥಾ ಸರಟಿಫಿಕೇಟ್ ಪಡೆಯುವ ಬಗ್ಗ್ಯಾಗಿ "ಭೀಮಾದಾರನು, ಒರಿಜಿನಲ್ ಮೆಡಿಕಲ್ ಸರಟಿಫಿಕೇಟಿನ ತಾರೀಖು ಲಾಗಾಯತು ಆರು ತಿಂಗಳೊಳಗಾಗಿ ಇದ್ದಪಕ್ಷದಲ್ಲಿ ಆತನ "ತಲಬಿನ ಮೇಲೆ ಶೇಕಡಾ ಐದರಂತೆ ಆಗುವ ಮೊಬಲಗು ಅಂದರೆ ವಂದು ರೂಪಾಯಿಗೆ ಕಮ್ಮಿ ಯಿಲ್ಲದಂತೆಯೂ ಐದು ರೂಪಾ "ಯಿಗಳಿಗೆ ಜಾಸ್ತಿ ಆಗದಂತೆಯೂ ಆಗುವ ಫೀಜನ್ನು ಮೆಡಿಕಲ್ ಆಫಿಸರಿಗೆ ಪಾವತಿ ಮಾಡತಕ್ಕದ್ದು; ಆರುತಿಂಗಳಿಗೆ ಮೀರಿ ಯಿದ್ದ "ಸಂದರ್ಭದಲ್ಲಿ ಭೀಮಾದಾರನ ತಲಬಿನ ಮೇಲೆ ಶೇಕಡಾ ಹತ್ತರ ಪ್ರಕಾರ ಅಂದರೆ ಮೂರು ರೂಪಾಯಿಗೆ ಕಮ್ಮಿಯಿಲ್ಲದೆಯೂ "ಹದಿನೈದು ರೂಪಾಯಿಗಳಿಗೆಜಾಸ್ತಿ ಆಗದೆಯೂ ಇರುವ ಫೀಜ್ ಮೊಬಲಗನ್ನು ಮೆಡಿಕಲ್ ಆಫಿಸರಿಗೆ ಪಾವತಿಮಾಡಿ ಹೊಸದಾಗಿ "ಒಂದು ತಪಶೀಲ್ ಸರಟಿಫಿಕೇಟನ್ನು ಪಡೆಯತಕ್ಕದ್ದು".

ತಾರೀಖು 18ನೇ ಜನವರಿ 1896.

ನಂ. 6433.—ಆರ್. 2471.-1888ನೇ ಇಸವಿ IVನೇ ನಂಬರ್ ರೆಗ್ಯುಲೇಷನ್ ಯಾನೇ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳು ಹೊಸಕೋಟೆ ತಾಲ್ಲೂಕು ಗುಬ್ಬಿ ಹೋಬಳಿಗೆ ಸೇರಿದ ಜೋಡಿ ನಾಡಗವುಡ ಗೊಲ್ಲಹಳ್ಳಿಗೆ ಲಗಾವಾಗತಕ್ಕದ್ದಾಗಿ ಮೈಸೂರು ಸರ್ಕಾರದವರು ಆಜ್ಞಾಪಿಸುತ್ತಾರೆ.

ತಾರೀಖು 21ನೇ ಜನವರಿ 1896.

ನಂ. 6538.—ರೆ. 2518.—ಬವರಿಂಗ್‌ಪೇಟೇ ತಾಲ್ಲೂಕು ಅಮಲ್‌ದಾರ್ ಪಿ. ಸೀತಾರಾಮಯ್ಯನವರಿಗೆ, 1896ನೇ ಇಸವಿ ಜನವರಿ ಗುರ್‍ರೇ ತಾರೀಖಿನ ದಿನ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ನಂ. 6588.—ರೆ. 2540.—ಬೆಂಗಳೂರು ಡಿಸ್ಟ್ರಿಕ್ಟು 1ನೇ ಜನರಲ್ ಅ॥ ಕಮ್ಮಿಷನರ್ ಮೆಸ್ಟರ್ ಎಲ್. ನರಸಿಹ್ಮಯ್ಯಂಗಾರ್‍ರಿಗೆ 1895ನೇ ಡಿಸೆಂಬರ್ 10ನೇ ಮರ್ಸ್ಕಾಂ 5385ನೇ ರೆ. 2092ನೇ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಒಂದು ವಾರದ ಕ್ಯಾಜುಯಲ್ ರಜಾ ಪೈಕಿ 6 ದಿವಸಗಳನ್ನು ಮಾತ್ರ 1895ನೇ ಇಸವಿ ಡಿಸೆಂಬರ್ 10ನೇ ಮರ್ಸ್ಕಾಂ ಲಾಗಾಯತು 15ನೇ ಮರ್ಸ್ಕಾಂ ವರಿಗೆ ಉಪಯೋಗಿಸಿಕೊಂಡಿರುತ್ತಾರಾಗಿ ಉಳಿದ ಭಾಗವಂದರೆ ಒಂದು ದಿವಸವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 22ನೇ ಜನವರಿ 1896.

ನಂ. 6601.—ರೆ. 2545.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೇಸ್ಟರ್ ಸಿ. ಕೃಷ್ಣರಾಯರಿಗೆ 1896ನೇ ಇಸವಿ ಜನವರಿ 25ನೇ ಮರ್ಸ್ಕಾಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖು ಮೊದಲು 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಜನವರಿ 1896.

ನಂ. 6563.—ರೆ. 2531.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಮೇರೆ, ಚನ್ನರಾಯಪಟ್ಣ ತಾಲ್ಲೂಕು ಅಮಲ್‌ದಾರ್ ಎ. ಕೃಷ್ಣೋಅರಸಿನವರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖಿನಿಂದ ಯರಡು ತಿಂಗಳು 16 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಸೆಕ್ರೆಟರಿ.

54

ಜ ನ ರ ಲ್

ತಾರೀಖು 15ನೇ ಜನವರಿ 1896.

ನಂ. 7853.—ಲೋ. ಫಂ. 257—92.—1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವೆಜಿಷನ್ ರೆಗ್ಯುಲೇಷನಿನ ನಿಯಮಗಳನುಸರಿಸಿ, ಇದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಣಗಳು ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗದ ಡಿಸ್ಟ್ರಿಕ್ಟು ಹರಿಹರ ಮ್ಯುನಿಸಿಪಾಲಿಟಿಯಲ್ಲಿ ಕುಂಬಾರಕೇರಿಗೆ ಹೋಗುವ ರಸ್ತೆಯನ್ನೂ ಮತ್ತು ನಡುವಾಲಪೇಟೆ ರಸ್ತೆಯನ್ನೂ ಸುಧಾ ಬಡಾಯಿಸುವ ಬಗ್ಗೆ ಬೇಕಾಗಿರುತ್ತೆ.

ಕ್ರಮ ನಂಬರು.	ಬೀದಿಯ ಹೆಸರು.	ಬಾಗಿಲು ನಂಬರು.	ಸ್ವಾಂತಗಾರರ ಹೆಸರು.	ಬೇಕಾದ ವಿಸ್ತೀರ್ಣ. ಉದ್ದ (ಗಜಗಳು.)	ಅಗಲ	ವಿವರಣೆ.	ಚಕ್ಕುಬಂದಿ. ಉತ್ತರಕ್ಕೆ.	ದಕ್ಷಿಣಕ್ಕೆ.	ಪೂರ್ವಕ್ಕೆ.	ಪಶ್ಚಿಮಕ್ಕೆ.
1	..	127	ಪ್ರಟ್ಟನರಸಪ್ಪ ಬಿನ್ ರಾಮಪ್ಪ	10	7	ಹಂಚಿನ ಮನೆ	ಶ್ರೀನಿವಾಸರಾಯರ ಮನೆ	ಸ್ವಾಂತಗಾರರ ಮನೆಯ ಉಳಿದ ಭಾಗ	ನೀಲಿ ಹಯಾತಸಾಬರ ಮನೆ	ಹೊಸದಾಗಿ ಬಡಾಯಿಸ ಬೇಕಾದ ರಸ್ತೆ
2	..	695	ಸೊಲ್ಲಾಪುರದ ಹಾಲಪ್ಪ	24	8	ಹಂಚು, ಮಂಣು ಮಾಳಿಗೆ ಸೇರಿರುವ ಭಾಗ	ಸ್ವಾಂತಗಾರರ ಮನೆಯ ಉಳಿದ ಭಾಗ	ಸಾಬನೂರು ಶಿವಲಿಂಗಪ್ಪನವರ ಮನೆ	ಗವುಡಗೆರೆ ಮುನಿಯನ ಮನೆ	ರಸ್ತೆ

ತಾರೀಖು 16ನೇ ಜನವರಿ 1896.

ನಂ. 7967.—ಮಿ. 1125.—ಮೈಸೂರು ಗವರ್ನಮೆಂಟಿನ ಮಿಲಿಟರಿ ಸೆಕ್ರೆಟರಿ ಮತ್ತು ಮೈಸೂರು ಫೌಜಿನ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಎ. ಹೆಚ್. ಮೆಕ್ಕಿಂಟಯರ್ ಯವರು, 1896ನೇ ಇಸವಿ ಜನವರಿ 6ನೇ ಮಧ್ಯಮಿನ ಪೂರ್ವಾಹ್ನದಲ್ಲಿ ಮೈಸೂರು ಗವರ್ನಮೆಂಟ್ ಮಿಲಿಟರಿ ಸೆಕ್ರೆಟರಿ ಆಫೀಸ್ ಮತ್ತು ಮೈಸೂರು ಫೌಜಿನ ಕಮ್ಯಾಂಡೆಂಟರ ಛಾರ್ಜನ್ನು, ಮೈಸೂರು ಇಂಪೀರಿಯಲ್ ಸರ್ವಿಸ್ ಕೋರಿನ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಸೀರಾಜ್ ಅರಸಿನವರಿಗೆ ಒಪ್ಪಿಸಿ ಇರುತ್ತಾರೆ.

ತಾರೀಖು 22ನೇ ಜನವರಿ 1896.

ನಂ. 8428.—ಲೋ. ಫಂ. 257–92.—1894ನೇ ಇಸವಿ VIIನೇ ನಂಬರ್ ಉಳ್ಳ ಲ್ಯಾಂಡ್ ಅಕ್ವೆಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟ ಪಡಿಸುವದೇನಂದರೆ,—ಚಿತ್ರದುರ್ಗದ ಮ್ಯುನಿಸಿಪಾಲಿಟಿಯಲ್ಲಿ ಕಾಶೀ ವೆಂಕಟರಮಣಪ್ಪನವರ ಮನೆ ಮುಂದೆ ಚರಂಡೀ ಮೇಲೆ ಇರತಕ್ಕ ಹಂಚಿನ ವಪ್ಪಾರವು ಸರ್ಕಾರ್ ಕೆಲಸಕ್ಕೆ ಅಂದರೆ ಚರಂಡಿಗಳನ್ನು ತೊಳಿಯುವ ವಗೈರೆ ಕೆಲಸಗಳಿಗೋಸ್ಕರ ಬೇಕಾಗಿರುತ್ತೆ:—

ಪ್ರದೇಶದ ಹೆಸರು.	ವಿವರಣೆ.	ವಿಸ್ತೀರ್ಣ. ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಜುಮ್ಲಾ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.	ಷರಾ.
ದೊಡ್ಡ ಪೇಟೆ	ಚರಂಡಿ ಮೇಲಿರತಕ್ಕ ನಾಲ್ಕು ಮರದ ಕಂಭಗಳ ಮೇಲಿನ ಸಾಧಾರಣ ಹಂಚಿನ ವಪ್ಪಾರ	ಆರು ಗಜಗಳು	ಒಂದು ಗಜ	ಆರು ಚದರಗಜಗಳು	ಚರಂಡಿ	ಚರಂಡಿ	ಸ್ವಂತಗಾರರ ಮನೆ	ಉಚ್ಚಂಗಿ ದೇವಸ್ಥಾನದಿಂದ ರಂಗಯ್ಯನ ಬಾಗಲಿಗೆ ಹೋಗುವ ರಸ್ತೆ	

ತಾರೀಖು 23ನೇ ಜನವರಿ 1896.

ನಂ. 8505.—ಮಿ. ಫೈ. 48—92.—ಯಿದರಿಂದ ಪ್ರಕಟಪಡಿಸುವದೇನಂದರೆ,—ಅರಶೀಕೆರೆಯಲ್ಲಿನ ಪೋಸ್ಟು ವ ಟೆಲಿಗ್ರಾಫ್ ಸೇರಿದ ಆಫೀಸು ಮಾಹೆವಾರು 6ನೇ ತಾರೀಖು ಲಾಗಾಯತು 3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ ದರ್ಜೆಬಡಾಯಿಸಲ್ಪಟ್ಟಿರುತ್ತೆ.

ನಂ. 8510.—ಜು. 921.—ಹಾಸನದ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ವ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರಾದ ಮಿಸ್ಟರ್ ಜೆ. ಡಬ್ಲಿಯು. ನೈಟ್ ಯವರಿಗೆ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 37ನೇ ಸೆಕ್ಷನ್ ಅನುಸರಿಸಿ, ಸದರೀ ಕ್ಲಾಸಿನ ಮಾಜಿಸ್ಟ್ರೇಟರುಗಳಿಗೆ ಗವರ್ನಮೆಂಟಿನವರು ಉಂಟುಮಾಡಹುದಾದ ನಾಲ್ಕನೇ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಇದರಡಿ ಕಂಡ ಜಾಸ್ತೀ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

(1) ನೇಕಚಾಲ್ ಜಾಮಿನೀ ಅಪೇಕ್ಷಿಸುವ ಜಗ್ಯೆ ಅಧಿಕಾರ, ಸೆಕ್ಷನ್ 110.

(2) ಸ್ಥಳಿಕ ಹೇಸಿಕೆಗಳ ವಿಷಯದಲ್ಲಿ ಹುಕುಂ ಕೊಡಲು ಅಧಿಕಾರ, ಸೆ. 133.

ನಂ. 8453.—ಲೋ. ಫಂ. 257—92.—1894ನೇ ಇಸವಿ VIIನೇ ನಂಬರ್ ಉಳ್ಳ ಲ್ಯಾಂಡ್ ಅಕ್ವೈಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಕಡೂರು ಡಿಸ್ಟ್ರಿಕ್ಟು ತರೀಕೆರೇ ತಾಲ್ಲೂಕು ಅಜ್ಜಂಪುರದಲ್ಲಿ ವಂದು ಆಸ್ಪತ್ರೆಯನ್ನು ಕಟ್ಟುವ ಬಗ್ಯಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನಿನ ತಪ್ಸೀಲ್.							ಚಕ್ಕು ಬಂದಿ.
				ವಿವರಣೆ.	ಸರ್ವೇನಂ.	ಜೇಕಾದ ವಿಸ್ತೀರ್ಣ.		ಕಂದಾಯ.			
ಕಡೂರು	ತರೀಕೆರೆ	ಅಜ್ಜಂಪುರ	ಬಾಣೇದಾರ ತಿಂಗಾಚಾರ್ಯ	ತರೀ	ಪೈ² ನಂ. 112	1	20	5	4	0	ಉತ್ತರಕ್ಕೆ—ಜಮೀನಿನ ಉಳಿದ ಭಾಗ ದಕ್ಷಿಣಕ್ಕೆ—ಮ್ಯುನಿಸಿಪಲ್‌ರಸ್ತೆ ಪೂರ್ವಕ್ಕೆ—ಹೊಲೇರ ಹಟ್ಟಿ ಪಶ್ಚಿಮಕ್ಕೆ—ಜಮೀನಿನ ಉಳಿದ ಭಾಗ

ತಾರೀಖು 24ನೇ ಜನವರಿ 1896.

ನಂ. 8529.—ಮೈ. 112.—ಮೈಸೂರು ಸರ್ವಿಸ್ ರೆಗ್ಯೂಲೇಷನಿನ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಗವರ್ನ ಮೆಂಟಿನ ಜಿಯಾಲಾಜಿಸ್ಟ್ ಮೆಸ್ಟರ್ ಆರ್. ಬ್ರೂಸ್ ಫುಟ್ ಯಫ್. ಜಿ. ಯಸ್. ಯವರಿಗೆ, 1896ನೇ ಇಸವಿ ಫೆಬ್ರವರಿ 3ನೇ ಮೊದಲ್ಗೊಂಡು ಲಾಗಾಯತು ಯಾ ಅವರು ಅದನ್ನ ಉಪಯೋಗಿಸಿಕೊಂಡ ಇತರ ತಾರೀಖು ಮೊದಲು ಒಂದು ತಿಂಗಳೂ ಯೇಳು ದಿವಸಗಳ ಪ್ರಿವಿ ಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 27ನೇ ಜನವರಿ 1896.

ನಂ. 8601.—ಲೋ. ಫಂ. 197—92.—ಮೈಸೂರು ಷಹರ್ ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರಾದ ಮೆಸ್ಟರ್ ಹೆಚ್. ನಂಜುಂಡರಾಜಅರಸ್ ಯವರಿಗೆ, 1895ನೇ ಇಸವಿ ಜನವರಿ 20ನೇ ತಾರೀಖಿನಾರಭ್ಯ ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ಹುಕುಂ ಬಮೋಜೀಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರೆಟೆರಿ.

ಮರಾಮತ್ ಇಲಾಖಾ.

ತಾರೀಖು 17ನೇ ಜನವರಿ 1886.

ನಂ. 44—194.—ಸರ್ಕಾರ್ ಕೆಲಸದ ಅನುಕೂಲ್ಯತೆಗೋಸ್ಕರ ಇದರಡಿ ಕಂಡ ವರ್ಗಾವರ್ಗಿಯು ಹುಕುಂ ಮಾಡಲ್ಪಟ್ಟಿರುತ್ತೆ:—

1ನೇ ಗ್ರೇಡ್ ಸಬ್ ಅಸಿಸ್ಟೆಂಟ್ ಇಂಜನಿಯರ್ ಮೆಸ್ಟರ್ ಹೆಚ್. ಡಿ. ರೈಸ್ ಯವರಿಗೆ ಸ್ಯಾನಿಟೆರಿ ಇಂಜನಿಯರ್ ಇಲಾಖೆಯಿಂದ ಕಡೂರು ಡಿವಿಜನ್ನಿಗೆ.

ಹುಕುಂ ಬಮೋಜೆಬ್,
ಡಬ್ಲಿಯು. ಮೆಕ್ಕರ್ಚಿ,
ಅಸಿಸ್ಟೆಂಟ್ ಸೆಕ್ರೆಟೆರಿ,
ಮೈಸೂರ್ ಗವರ್ನಮೆಂಟ್.

ಮಿಲಿಟರಿ.

ತಾರೀಖು 16ನೇ ಜನವರಿ 1896.

ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ಇದರಡಿ ಕಂಡ ನೌಕರರಾತಿಯು ಹುಕುಂ ಮಾಡಲ್ಪಟ್ಟಿರುತ್ತೆ:—

ದಫೇದಾರ್ ಮೇಜರ್ ಗೋವಿಂದರಾವ್ ಸಿಂಧೆಯವರು, 1895ನೇ ಇಸವಿ ಡಿಸೆಂಬರ್ 16ನೇ ಮೊದಲ್ಗೊಂಡು ಲಾಗಾಯತು ಮಿಲಿಟರಿ ಪ್ರೊಬೇಷನರಾಗಿ ನೌಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 16ನೇ ಜನವರಿ 1896.

ಸ್ಕ್ವಾಡ್ರನ್ ಕಮ್ಯಾಂಡರ್ ಆದ ಮಹಮ್ಮದ್ ಹುಸೇನಿಯವರಿಗೆ ಪೆನ್‌ಷನಿಗೆ ತೆಗದಿರುವ ಸಬಬ್ ಯಿದರಡಿ ಕಂಡ ಬಡ್ತಿಗಳು ಮೈಸೂರು ಸವಾರ್ ಇಲಾಖೇ ಯಿಂಪೀರಿಯಲ್ ರೆಜಿಮೆಂಟಿನಲ್ಲಿ 1895ನೇ ಇಸವಿ ಡಿಸೆಂಬರ್ 16ನೇ ಮರ್ಕ್ಯುಂ ಲಾಗಾಯತು ಜಾರೀಲಿ ತರಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತ್ತೆ:—

ಹೆಸರು.	ದರ್ಜೆ.	
	ಯಿಂದ.	ಗೆ.
ಚಾಮೇ ಅರಸಿನವರು	4ನೇ ಗ್ರೇಡ್ ರಿಸಾಲ್‌ದಾರ್	ಸ್ಕ್ವಾಡ್ರನ್ ಕಮ್ಯಾಂಡರ್
ಸುಬ್ಬರಾಯರು	ಜಮೇದಾರ್	4ನೇ ಗ್ರೇಡ್ ರಿಸಾಲ್‌ದಾರ್
ಮೀರ್‌ಮೈನುದ್ದೀನ್‌ಯವರು	ಜಮೇದಾರ್ ಟ್ರೂಪ್ ಆಫಿಸರ್	ಜಮೇದಾರ್ ಟ್ರೂಪ್ ಕಮ್ಯಾಂಡರ್
ಸೈದ್‌ಬುರ್ಹನ್	ಪ್ರೊಬೇಷನರ್	ಜಮೇದಾರ್ ಟ್ರೂಪ್ ಆಫಿಸರ್

ಇದರಡಿ ಕಂಡ ಬಡ್ತಿಗಳು ಮೈಸೂರು ಸವಾರ್ ಇಲಾಖಾ ಲೋಕಲ್ ಸರ್ವಿಸ್ ರೆಜಿಮೆಂಟಿನಲ್ಲಿ 1895ನೇ ಇಸವಿ ಡಿಸೆಂಬರ್ 16ನೇ ಮರ್ಕ್ಯುಂ ಲಾಗಾಯತು ಜಾರಿಯಲ್ಲಿ ತರಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತ್ತೆ:—

ಹೆಸರು.	ಹುದ್ದೆ.		ಷರಾ.
	ಯಿಂದ.	ಗೆ.	
ಮಹಮ್ಮದ್ ಯಿಸ್ಮಾಯಿಲ್	ಜಮೇದಾರ್	ಸರ್ ಜಫರ್‌ದಾರ್	ಪೆನ್‌ಷನ್ ಮೇಲೆ ನಿವೃತ್ತರಾದ ಹನುಮಂತರಾವ್ ರಣನವರೆಯವರಿಗೆ ಬದಲಿ.
ಹಜರತ್‌ಖಾನ್	ದಫೇದಾರ್	ಜಮೇದಾರ್	ಬಡ್ತಿಯಾದ ಮಹಮ್ಮದ್ ಯಿಸ್ಮಾಯಿಲ್‌ಗೆ ಬದಲಿ.
ಕೇಶವರಾವ್ ಚೌವಾನ್	ಡಿಟ್ಟೋ	ಡಿಟ್ಟೋ	ಪೆನ್‌ಷನ್‌ಗೆ ವರ್ಗಮಾಡಲ್ಪಟ್ಟ ಸಯಾಜಿ ಜಾಧೋ ಯವರಿಗೆ ಬದಲಿ.

ತಾರೀಖು 22ನೇ ಜನವರಿ 1896.

ಮೈಸೂರು ಸವಾರ್ ಇಲಾಖೆ ಲೋಕಲ್ ಸರ್ವಿಸ್ ರೆಜಿಮೆಂಟಿನ ರೆಜಿಮೆಂಟ್‌ದಾರ್ ರಾಮರಾವ್ ರಣನವರೆ ಆರ್. ಬಿ. ಯವರು ಮಾಹೆ ಮಜಕೂರು 10ನೇ ಮರ್ಕ್ಯುಂ ಲಾಗಾಯತು ಎರಡು ತಿಂಗಳೂ ಇಪ್ಪತ್ತು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ರೆಜಿಮೆಂಟ್‌ದಾರ್ ರಾಮರಾವ್ ರಣನವರೆ ಆರ್. ಬಿ. ಯವರು ರಜಾದ ಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ರಿಸಾಲ್‌ದಾರ್ ಕೃಷ್ಣರಾಯರು ಸದರೀ ಮೇಲ್ಕಂಡ ರೆಜಿಮೆಂಟಿನ ಕಮ್ಯಾಂಡೆಂಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದೆಂದು ಘನವನ್ನು ಹೊಂದಿದ ಶ್ರೀಮನ್ ಮಹಾರಾಣಿ ರೀಜಂಟ್ ಸಿ. ಐ. ಯವರು ಆಜ್ಞಾಪಿಸಿ ಇರುತ್ತಾರೆ.

ಹುಕುಂ ಬಮೋಜೀಬ್,

ಜೆ. ದೇಶೀರಾಜ್ ಅರಸ್,

ಲೆ॥ ಕರ್ನಲ್ ಮತ್ತು ಆ॥ ಮಿಲಿಟರಿ ಸೆಕ್ರೆಟರಿ.

57

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 4

ಬೆಂಗಳೂರು, ಗುರುವಾರ, ಜನವರಿ ತಾ॥ 30, ಸ್ನ 1896.

II ನೇ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಅಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಫೋರ್ಟರು ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ರ್ಯಾಮರವರ ಡಿಟೋ	,, 85

ಖರೀದೀದಾರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $12\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಇನಾಂ ಇಲಾಖಾ.

ಇಸ್ತಿ ಹಾರ್‌ನಾಮೆ.

(ನಂ. 5) ತಾರೀಖು 17—18 ಜನವರಿ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಲೇಟೆ ಅತ್ತಿ ಕುಪ್ಪ ಹಾಲಿ ಕೃಷ್ಣರಾಜಪ್ಪೇಟೆ ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೆ ಇನಾಂಗಳಬಾಬತು (618) ಫೈನಲ್ ಟೈಟಲ್ ಡೀಡ್ ಯಾನೆ ಕಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವೆ.

2. ಸದರೀ ತಾಲ್ಲೂಕಿನ ಅಮಲ್ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದ ಮೇಲೆ ಅವುಗಳನ್ನ ತೆಗೆದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲದಾರು ಅಂಥಾ ನೋಟಿಸ್‌ಗಳನ್ನ ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದುಮಾಡಲ್ಪಟ್ಟಯಿರುತ್ತೆಂದು ಇದರ ದೆಶೆಯಿಂದ ಪ್ರಕಟಸಲ್ಪಟ್ಟಯಿರುತ್ತೆ.

ಜೆ. ಪಿ. ಗ್ರ್ಯಾಂಟ್,
ಇನಾಂ ಸೂಪರಿಂಟೆಂಡೆಂಟ್.

ಇಸ್ತಿ ಹಾರ್.

ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 7ನೇ ಜನವರಿ 1896.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ,— ಸ್ನ 1878ನೇ ಇಸವಿ ಜೂನ್ 8ನೇ ತಾರೀಖಿನ ಫಾರೆಸ್ಟು ರೂಲ್ಸು 13ನೇ ಸೆಕ್ಷನ್ ಅನುಸರಿಸಿ, ಈ ಕೆಳಗೆ ನಮೂದಿರುವ ಸ್ಟೇಟು ಮತ್ತು ರಿಜರ್ವ್ ಫಾರೆಸ್ಟುಗಳು ಮತ್ತು ಪ್ಲ್ಯಾಂಟೇಷನ್‌ಗಳು 1896ನೇ ಇಸವಿ ಫಿಬ್ರವರಿ 1ರ ಲಾಗಾಯಿತು 1896ನೇ ಇಸವಿ ಮೇ ಆಖೈರುವರಿಗೆ ಬಿಸಲು ಕಾಲದಲ್ಲಿ ಜನಗಳಿಗೆ ಬಂದು ಮಾಡಲ್ಪಟ್ಟಿರುತ್ತೆ.

2. ಈ ಮೇಲ್ಕಂಡ ಕಾಲದಲ್ಲಿ ಯಾವ ವಿಧವಾದ ಶಿಕಾರಿಯೂ ನಿರೋಧಿಸಲ್ಪಟ್ಟಿದೆ. ಅತಿಕ್ರಮ ಪ್ರವೇಶ ಮಾಡುವವರು ಪ್ರಾಸಿಕ್ಯೂಷನ್‌ಗೆ ಗುರಿಯಾದಾರು.

ನಂಬರ್.	ಸ್ಟೇಟು ಮತ್ತು ರಿಜರ್ವ್ ಫಾರೆಸ್ಟುಗಳು ಮತ್ತು ಪ್ಲ್ಯಾಂಟೇಷನ್‌ಗಳ ಹೆಸರು.	ತಾಲ್ಲೂಕು.
	I ಫಾರೆಸ್ಟುಗಳು.	
1	ನಂದೀದುರ್ಗ	ಚಿಕ್ಕಬಳ್ಳಾಪುರ
2	ನರಸಿಹ್ಮದೇವರ ಬೆಟ್ಟ	ಡಿಟ್ಟೋ, ಗೋರೀಬಿದನೂರು ಮತ್ತು ಗುಡಿಬಂಡೆ ಸಬ್ ತಾಲ್ಲೂಕು
3	ಕಾಮಸಂದ್ರಜಂಗಲ್ ಮತ್ತು ಅದರಲ್ಲಿರುವ ಪ್ಲ್ಯಾಂಟೇಷನ್‌ಗಳು	ಬೌರಿಂಗ್‌ಪೇಟೆ ಮತ್ತು ಮಾಲೂರು
4	ರಾಯಲ್‌ಪಾಡು, ಅಡ್ಡಗಲ್ಲು, ನೆಲವಂಕಿ ಜಂಗಲ್‌ಗಳು ಮತ್ತು ಅವುಗಳಲ್ಲಿರುವ ಪ್ಲ್ಯಾಂಟೇಷನ್‌ಗಳು	ಚಿಂತಾಮಣಿ ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು
5	ಶ್ರೀನಿವಾಸಪುರ ಯಲ್ದೂರು ಜಂಗಲ್ ಮತ್ತು ಅವುಗಳಲ್ಲಿರುವ ಪ್ಲ್ಯಾಂಟೇಷನ್‌ಗಳು	ಶ್ರೀನಿವಾಸಪುರ ಸಬ್ ತಾಲ್ಲೂಕು ಮತ್ತು ಮುಳಬಾಗಲು
6	ಅಗರದ ಜಂಗಲ್	ಮುಳಬಾಗಲು
7	ಹೊಸೂರು, ಅಣಜಗಾನಹಳ್ಳಿ, ಪಾಳ್ಯೇಗಾರ್ ಪೊದೆ	ಶ್ರೀನಿವಾಸಪುರ ಸಬ್ ತಾಲ್ಲೂಕು
8	ಇಟಿಕಲ್ ದುರ್ಗ ಫಾರೆಸ್ಟು	ಬಾಗೇಪಲ್ಲಿ
9	ವಲಸೆ ಫಾರೆಸ್ಟು	ಗೋರೀಬಿದನೂರು
10	ಗೆದರೆಬೆಟ್ಟ ಮತ್ತು ಯೆಮ್ಮಗುಟ್ಟ ಜಂಗಲ್‌ಗಳು (ಸಂದಲ್‌ಪೇರಾವಾಗಿರತಕ್ಕ ಪ್ರದೇಶಮಾತ್ರವೆ)	ಡಿಟ್ಟೋ
	II ಪ್ಲ್ಯಾಂಟೇಷನ್‌ಗಳು.	
11	ನಂದಿ	ಚಿಕ್ಕಬಳ್ಳಾಪುರ
12	ಸುಲಾಲಪ್ಪನ ದಿನ್ನೆ	ಡಿಟ್ಟೋ
13	ಗಾಜಲ ದಿನ್ನೆ	ಕೋಲಾರ
14	ಸಂಗಂಡನಹಳ್ಳಿ	ಡಿಟ್ಟೋ
15	ಮಾಲೂರು	ಮಾಲೂರು
16	ಬೀಚಗಾನಹಳ್ಳಿ	ಗುಡಿಬಂಡೆ ಸಬ್ ತಾಲ್ಲೂಕು
17		ಶಿಡ್ಲಘಟ್ಟ
18	ತಿರುಮಲಯ್ಯನ ದಿನ್ನೆ	ಡಿಟ್ಟೋ
19	ಚವುಡಸಂದ್ರ	ಡಿಟ್ಟೋ
20	ಗೂರವುಡುಗು	ಡಿಟ್ಟೋ
21	ಯಲ್ಲಂಪಲ್ಲಿ	ಬಾಗೇಪಲ್ಲಿ

ಬಿ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ್.

ತುಮಕೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 16ನೇ ಜನವರಿ 1896ನೇ ಇಸವಿ.

ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ ಸಾಹೆಬರವರ 1889ನೇ ಇಸವಿ 6ನೇ ನಂಬರ್ ಸರ್‌ಕ್ಯುಲರ್ ಹುಕುಂ ಪ್ರಕಾರ ತುಮಕೂರು ಡಿಸ್ಟ್ರಿಕ್ಟಿಗೆ ಶೇರಿದ ಸಬ್ ಡಿ॥ ಬಾಬತು ಈ ಕೆಳಗೆ ನಮೂದಾಗುವ ದಸ್ತೈವಜುಗಳು 1895ನೇ ಇಸವಿ ಡಿಸೆಂಬರ್ ಆಖೈರ್ ವರಿಗೆ ಬೇವಾರಸಾಗಿರುವದ್ದರಿಂದ ನಾಶಮಾಡಲ್ಪಡುವದು.

ತಾಲ್ಲೂಕು	ನಂಬರು ಮತ್ತು ತಾರೀಖು.	ದಸ್ತೈವಜಿನ ತಾರೀಖು.	ರಿಜಿಸ್ಟ್ರಾರ ತಾರೀಖು.	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.	ದಸ್ತೈವಜಿನ ಸ್ವಭಾವ.	ಷರಾ.
ತುಮಕೂರು	561 / 1892—93	8— 1—93	14— 3—93	ರುದ್ರಪ್ಪನ ಹೆಂಡತಿ ಶಿದ್ದಮ್ಮ	ವೀರಪ್ಪಶಾಸ್ತ್ರಿ	ಕ್ರಯ 95 ರೂಪಾಯಿಗೆ ಪರಿವರ್ತನೆ	1896ನೇ ಇಸವಿ ಫೆಬ್ರವರಿ ತಿಂಗಳು ಮಾಸದ ತೆಗದುಕೊಳ್ಳದ ಪಕ್ಷದಲ್ಲಿ ನಾಶ ಮಾಡಲ್ಪಡುವವು
ಡಿಟೋ	10 / 1893—94	5— 7—93	5— 7—93	1ನೇ ಫಕರುದ್ದೀನ್‌ಸಾಬಿ 2ನೇ ಗುಲಾಂ ಮೊಹದೀನ್‌ಸಾಬಿ	1ನೇ ಶಿಲೇಮಾನ್‌ಸಾಬಿ 2ನೇ ಹಸನ್‌ಸಾಬಿ	50 ರೂಪಾಯಿನ ಕಿಮ್ಮತ್ತಿನ ಸ್ಥಿತಿಗಳಿಗೆ	
ಡಿಟೋ	124 / 1893—94	5— 8—93	26— 8—93	ಶಿದ್ದಹೊನ್ನಯ್ಯ ಮೈನರ್ ಗಾರ್ಡಿಯನ್ ತಾಯಿ ಶಿದ್ದನಂಜಮ್ಮ	ಶಾಮರಾವ್	ಕ್ರಯ 15 ರೂಪಾಯಿಗಳಿಗೆ	
ಗುಬ್ಬಿ	91 / 1892—93	20— 6—92	27— 6—92	ರಂಗಯ್ಯ	ವೆಂಕಮ್ಮ	ಕ್ರಯ 200 ರೂಪಾಯಿಗಳಿಗೆ	
ಡಿಟೋ	232 / 1893—94	14—12—93	20—12—93	ವೆಂಕಟರಮಣಶೆಟ್ಟಿ	ಕರಿಯಪ್ಪ	ಕ್ರಯ 130 ರೂಪಾಯಿಗೆ	
ಕುಣಿಗಲ್	108 / 1892—93	8— 4—92	8— 6—92	ರಾಮಯ್ಯ	ರಂಗಣ್ಣ	ಕ್ರಯ 50 ರೂಪಾಯಿಗೆ	
ಡಿಟೋ	119 / 1892—93	19— 6—92	21— 6—92	ಲಕ್ಕ	ರಾಮ	ಕ್ರಯ 32 ರೂಪಾಯಿಗೆ	
ಡಿಟೋ	468 / 1892—93	17— 3—93	17— 3—93	ಲಿಂಗಪ್ಪಯ್ಯ	ಗುಂಡಪ್ಪ	ಭೋಗ್ಯ 75 ರೂಪಾಯಿಗೆ	
ಡಿಟೋ	563 / 1892—93	25— 5—93	25— 5—93	ಉಸ್ಮಾನ್‌ಸಾಬಿ	ಲಿಂಗಣ್ಣ	ಗೇಣೀಚೀಟು 3 ವರುಷಗಳಿಗೆ	

ಎಂ. ನಾರಾಯಣರಾವ್,
ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ತಾರೀಖು 12ನೇ ಜನವರಿ 1896.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟಿಗೆ ಶೇರಿದ ಮಂಚಲದೊರೆ ಸ್ಟೇಟ್ ಫಾರೆಸ್ಟಿನಲ್ಲಿ ಸರ್ಕಾರೀ ತರ್ಫಿನಿಂದ ರೂಢಿಸಿರುವ 1500 ಮಣ ಅಳಲೇಕಾಯಿಯನ್ನ ಗುಬ್ಬೀ ತಾಲ್ಲೂಕು ಮಂಚಲದೊರೆ ಗ್ರಾಮಕ್ಕೆ ಸಮೀಪದಲ್ಲಿರುವ ಮುಚ್ಚಲನಹಳ್ಳಿಯಲ್ಲಿ 1896ನೇ ಇಸವಿ ಫಿಬ್ರವರಿ 5ನೇ ತಾರೀಖಿನಲ್ಲಿ ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ಹರಾಜು ಮೊಬಲಗು ಪಾವತಿ ಆದ ಲಾಗಾಯಿತು ಕಾವಲ್ ಕಟ್ಟಣೆ ಹರಾಜ್‌ದಾರರಿಗೆ ಹೊಂದಿರುತ್ತೆ.

ಷರತ್ತು—ಹರಾಜು ಕೈದಾದ ಕೂಡ್ಲೆ ಶೇಕಡಾ 25 ರೂಪಾಯಿಯಂತೆ ಠೇವಣಿ ಹಾಜರ್ಮಾಡಬೇಕು. ಹರಾಜು ತಾರೀಖು ಲಾಗಾಯಿತು ವೊಂದು ವಾರದವಳಗಾಗಿ ಬಾಕಿ ಮೊಬಲಗನ್ನ ಪಾವತಿ ಮಾಡಬೇಕು. ತಪ್ಪಿದಲ್ಲಿ ಮಾಲು ಪುನಹ ಹರಾಜು ಮಾಡಲ್ಪಡುತ್ತೆ, ಅಲ್ಲದೆ ನಷ್ಟಕ್ಕೆ ಮೊದಲ್ ಹರಾಜ್‌ದಾರನ್ನ ಗುರಿಮಾಡುತ್ತೆ. ಮತ್ತು ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುತ್ತೆ.

ಇತರ ತಪ್ಸೀಲಿಗೆ 1887ನೇ ಇಸವಿ ಸೆಪ್ಟಂಬರು 3ನೇ ತಾರೀಖಿನ ಮೈಸೂರು ಗೆಜೆಟಿನಲ್ಲಿ ಘಾಯಿಷಾಗಿರುವ 1887ನೇ ಇಸವಿ ಆಗಸ್ಟ್ 30ನೇ ತಾರೀಖಿನ 99ನೇ ನಂಬರು ಗವರ್ನಮೆಂಟ್ ಪ್ರೋಸೀಡಿಂಗ್ಸ್ ನೋಡಿ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್.

ಮೈಸೂರ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ 1895—96ನೇ ಇಸವಿ ಅರ್ಜೀ ನಂಬರ್ 247.

ಮೃತಪಟ್ಟ ಮುದಿಯಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ರಂಗಪ್ಪ, 2ನೇ ತಮ್ಮಯ್ಯ, 3ನೇ ಚಿಕ್ಕರಂಗಪ್ಪ, 4ನೇ ವೀರರಂಗಪ್ಪ, 5ನೇ ದೊಡ್ಡರಂಗಪ್ಪ ಇವರುಗಳು, ಮೃತಪಟ್ಟ ಸದರೀ ಮುದಿಯಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ಕಟ್ಟೇಹಳ್ಳಿ ಹೋಬಳಿ ಅಗ್ರಹಾರ ಸ್ಥಳದ ಸದರೀ ರಂಗಪ್ಪ ವಗೈರೆ 5 ಜನರು ಸದರೀ ವಾಸಸ್ಥರಾಗಿ ಮೃತಪಟ್ಟ ಮುದಿಯಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗಪ್ಪ ವಗೈರೇರ ಅರ್ಜಿಯನ್ನು ಸ 1896ನೇ ಇಸವಿ ಫೆಬ್ರುವರಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯಾತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುದಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ 1895-96ನೇ ಇಸವಿ ಅರ್ಜೀ ನಂಬರ್ 264.

ಮೃತಪಟ್ಟ ಅಗಸರ ಜೋರನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಜವರನು, ಮೃತಪಟ್ಟ ಸದರೀ ಜೋರನಿಗೆ ಅಣ್ಣ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ನಗುವನಹಳ್ಳಿ ಸ್ಥಳದ ಸದರೀ ಜವರನು, ಸದರೀ ವಾಸಸ್ಥನಾಗಿ ಮೃತಪಟ್ಟ ಜೋರನ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಜವರನ ಅರ್ಜಿಯನ್ನು ಸ 1896ನೇ ಇಸವಿ ಫೆಬ್ರುವರಿ ತಿಂಗಳ ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜೋರನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ 1895-96ನೇ ಇಸವಿ ಅರ್ಜೀ ನಂಬರ್ 265.

ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ರಾಮಾಜೋಯಿಸರು, ಮೃತಪಟ್ಟ ಸದರೀ ಅಶ್ವತ್ಥಶಾಸ್ತ್ರಿಗಳಿಗೆ ವಿಲ್‌ಪಡೆದ ಹಕ್ಕುದಾರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ರಾಮಾಶಾಸ್ತ್ರಿಗಳು, ಸದರೀ ವಾಸಸ್ಥರಾಗಿ ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್‌ಮಾಡುವದಕ್ಕೆ ಸ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಾಶಾಸ್ತ್ರಿಗಳ ಅರ್ಜಿಯನ್ನು ಸ 1896ನೇ ಇಸವಿ ಫೆಬ್ರುವರಿ ತಿಂಗಳ ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ 1896ನೇ ಇಸವಿ ಜನವರಿ ತಿಂಗಳ 21ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಫಾರೆಸ್ಟ್ ಇಲಾಖಾ.

16. ಮಲ್‌ನಾಡಿನ "ಕಾನುಗಳಲ್ಲಿ" ಅಥವಾ ಫಾರೆಸ್ಟ್ ಯಾ ರೆವಿನ್ಯೂ ಇಲಾಖೆಯವರು 4 ಅಥವಾ 15 ಎ. ಪ್ಯಾರಾ ಅನುಸರಿಸಿ ಬಂದ್ ಮಾಡಿರುವಂಥಾ ಯಾವದಾದರೂ ಗವರ್ನಮೆಂಟ್ ಜಂಗಲಿಗಳಲ್ಲಿ ಮರಾ ಯಾ ಬೊಂಬುಗಳನ್ನು ಕತರಾಯಿಸುವ ಬಗ್ಯೆ ಯಾವ ಲೈಸೆನ್ಸೂ ಕೊಡಲ್ಪಡಕೂಡದು. ಯಾವದಾದರೂ ಜಂಗಲಿಯು ಬಂದ್ ಮಾಡಲ್ಪಟ್ಟ ಸಂಗತಿ ಕೂಡ್ಲೆ ಸದರೀ ತಾಲ್ಲೂಕು ಅಮಲ್‌ದಾರ್ರಿಗೆ ತಿಳಿಸಲ್ಪಡಬೇಕು.

17. 8ನೇ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಮರ, ಬೊಂಬುಗಳು ಅಥವಾ ಇತರ ಸಾಮಾನುಗಳನ್ನು ಕತರಾಯಿಸಿ ಸಾಗಿಸುವಂಥಾ ಅಥವಾ ಅವಶ್ಯಕವಾದ ಲೈಸೆನ್ಸು ಪಡಿಯದೆ ಒಂದು ಡಿಸ್ಟ್ರಿಕ್ಟ್ ಫಾರೆಸ್ಟಿನಿಂದ ಸದರೀ ಲೈಸೆನ್ಸಿನಲ್ಲಿ ನಮೂದಾದ ತೇದಾದನ್ನು ಮೀರುವಂಥಾ ಯಾವ ರೈತನಾದರೂ ಗೊತ್ತಾದ ವಾಯಿದೆಯಲ್ಲಿ ಲೈಸೆನ್ಸನ್ನು ವಾಪಸ ಮಾಡುವದಕ್ಕೆ ತಪ್ಪಿದರೆ ಅಥವಾ ಸದರೀ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದರೆ ಅಥವಾ ಈ ನಿಬಂಧನೆಗಳ ನಿಯಮಗಳನ್ನು ತಪ್ಪಿ ನಡದರೆ ಅವನು 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 40ನೇ ಸೆಕ್ಷನ್ ಅನುಸರಿಸಿ ದಂಡನೆಗೆ ಗುರಿಯಾಗಿರತಕ್ಕದ್ದು.

18. ಮೇಲೆ ಕೊಡೋಣಾದ ರಿಯಾಯತಿಗಳಿಗೋಸ್ಕರ, ಸ್ಟೇಟ್ ಫಾರೆಸ್ಟ್‌ಗಳು ವ ಪ್ಲಾಂಟೇಷನ್‌ಗಳ ನೆರೆಹೊರೆಯಲ್ಲಿ ವಾಸವಾಗಿರುವಂಥಾ ರೈತರುಗಳು ಸದರೀ ಸ್ಟೇಟ್ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ವುಂಟಾಗಬಹುದಾದ ಬೆಂಕಿಯನ್ನು ನಿರೋಧಪಡಿಸುವದಕ್ಕೆ, ತಗ್ಗಿಸುವದಕ್ಕೆ ಅಥವಾ ಆರಿಸುವದಕ್ಕೆ ಫಾರೆಸ್ಟ್ ಇಲಾಖೆಯವರಿಗೆ ಕುಮ್ಮಕ್ ಮಾಡಬೇಕಾಗಿ ಇರುತ್ತೆ. ಈ ವಿಷಯದಲ್ಲಿ ಅಶ್ರದ್ಧೆ ಏನಾದರೂ ತೋರಿಬಂದರೆ ರಿಯಾಯತಿಗಳು ಪೂರ್ತಿಯಾಗಾಗಲಿ ಕೆಲವು ಮಟ್ಟಿಗಾಗಲಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ರವರು ಗೊತ್ತು ಮಾಡುವಂಥಾ ಒಂದು ವಾಯಿದೆ ಪರಿಯಂತ ವಾಪಸ್ ತೆಗದುಕೊಳ್ಳಲ್ಪಡುವ ಬಗ್ಯೆ ಗುರಿಯಾಗಿರತಕ್ಕದ್ದು.

19. ರೈತರು ಒಂದು ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹುಲ್ಲು, ತರಗು, ಮುಳ್ಳು, ಅಥವಾ ಬಿದರು ಕಂಪೆಗಳಿಗೆ ಬೆಂಕಿ ಹಚ್ಚಿ ತದ್ವಾರಾ ಒಂದು ಸ್ಟೇಟ್ ಫಾರೆಸ್ಟ್ ಯಾ ಪ್ಲಾಂಟೇಷನನ್ನು ಅಪಾಯ ಪಡಿಸದಂತೆ ಖಂಡಿತವಾಗಿ ನಿರೋಧಿಸಲ್ಪಟ್ಟಿರುತ್ತಾರೆ.

20. ಇದರಡಿಕಂಡ ಇಸ್ತಿಹಾರನಾಮೆಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ:—

1873ನೇ ಇಸವಿ ಏಪ್ರೈಲ್ 23ನೇ ಮುರ್ರ್ಖಂ 5ನೇ ನಂಬರ್ ಇಸ್ತಿಹಾರನಾಮೆ. 1874ನೇ ಇಸವಿ ಆಗಸ್ಟ್ 31ನೇ ಮುರ್ರ್ಖಂ 153ನೇ ನಂಬರ್ ಇಸ್ತಿಹಾರನಾಮೆ ಮತ್ತು ಇದನ್ನು ರದ್ದುಮಾಡುವ 1887ನೇ ಇಸವಿ ಫಿಬ್ರವರಿ 11ನೇ ಮುರ್ರ್ಖ 244ನೇ ನಂಬರ್ ಇಸ್ತಿಹಾರನಾಮೆ. 1873ನೇ ಇಸವಿ ಡಿಸೆಂಬರ 19ನೇ ಮುರ್ರ್ಖಂ 5323-83ನೇ ನಂಬರ್ ಪ್ರೊಸಿಡಿಂಗ್ಸ್. 1892ನೇ ಇಸವಿ ಡಿಸೆಂಬರ 9ನೇ ಮುರ್ರ್ಖಂ 9837—ಆರ್. ಎಫ್. 226—92ನೇ —ನಂಬರ್ ಪ್ರೊಸಿಡಿಂಗ್ಸ್. 1893ನೇ ಇಸವಿ ಸೆಪ್ಟಂಬರ 25ನೇ ಮುರ್ರ್ಖಂ 5822—ಆರ್. ಎಫ್. 226-92ನೇ ನಂಬರ್ ಪ್ರೊಸಿಡಿಂಗ್ಸ್.	ಇವುಗಳು ಶಿವಮೊಗ್ಗಾ, ಕಡೂರು ಮತ್ತು ಹಾಸನ ಈ ಡಿಸ್ಟ್ರಿಕ್ಟುಗಳಿಗೆ ಲಗಾವಾಗುವಷ್ಟರ ಮಟ್ಟಿಗೆ.

8ನೇ ರೂಲಿನಲ್ಲಿ ನಮೂದಾದ "ಭಂಡಿಬೋಜಾ" ಅಂದರೆ ಯರಡು ಯತ್ತುಗಳಿಂದ ಯಳೆಯಲ್ಪಟ್ಟ ಕಂತ್ರಿಭಂಡಿಯಂದು ಅರ್ಥವಾಗತಕ್ಕದ್ದು. ನಾಲ್ಕು ಯತ್ತುಗಳಿಂದ ಯಳೆಯಲ್ಪಟ್ಟ ಭಂಡಿ ಬೋಜಾಕ್ಕೆ ದರವು ಯರಡು ಯತ್ತುಗಳಿಂದ ಯಳೆಯಲ್ಪಟ್ಟ ಭಂಡಿ ದರಕ್ಕೆ ದುಗಣಿಯಾಗಿ ಇರತಕ್ಕದ್ದು. ಮತ್ತು ಭಂಡಿ ಯಳೆಯುವ ಬಗ್ಯೆ ಜಾಸ್ತಿಯಾಗಿ ಕಟ್ಟಲ್ಪಡುವ ಪ್ರತಿ ಒಂದು ಜೋಡಿ ಯತ್ತಿಗೂ ಬದಸ್ತೂರ್ ಜಾಸ್ತೀ ಮಾಡಲ್ಪಡತಕ್ಕದ್ದು.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್,
ರವಿನ್ಯೂ ಸೆಕ್ರೆಟೆರಿ.

ಅಪೆಂಡಿಕ್ಸ್ A.

ಶಿವಮೊಗ್ಗಾ ಡಿಸ್ಟ್ರಿಕ್ಟು.—ತೀರ್ಥಹಳ್ಳಿ, ಸಾಗರ ವ ನಗರ ತಾಲ್ಲೂಕುಗಳು ಮತ್ತು ಸೊರಬ, ಕ್ಯಾಸನೂರು, ಚಂದ್ರಗುತ್ತಿ, ಚಿತ್ತೂರು, ಷಿಗ್ಗಾ ಮಾಗಣಿಗಳು ಮತ್ತು 1891ನೇ ಇಸವಿ ಅಕ್ಟೋಬರ್ 6ನೇ ಮುರ್ರ್ಖಂ 281ನೇ ನಂಬರ್ ಇಸ್ತಿಹಾರನಾಮೆಯಲ್ಲಿ ಅಡಗಿರತಕ್ಕಂಥಾ ಅಂಡಿಗೆ, ತವನಂದಿ ಮತ್ತು ವುದ್ರಿ ಮಾಗಣಿಗಳ ಗ್ರಾಮುಗಳು. ಸೊರಬ ತಾಲ್ಲೂಕಿನಲ್ಲಿ ಹೆಚ್ಚೆ ಮತ್ತು ಎಳಂದೂರು ವ ಬಾರೂರು ಮಾಗಣಿಗಳು, ಮತ್ತು ಷಿಕಾರಿಪುರ ತಾಲ್ಲೂಕು ದಾನಂದೂರು ಮಾಗಣಿ ದಾನಂದೂರು ಗ್ರಾಮ ಮತ್ತು 1891ನೇ ಇಸವಿ ಸೆಪ್ಟಂಬರ 30ನೇ ಮುರ್ರ್ಖಂ 280ನೇ ನಂಬರ್ ಇಸ್ತಿಹಾರನಾಮೆಯಲ್ಲಿ ಅಡಗಿರುವ ದಾನಿವಾಸ, ಕೋಣನಾಡ್, ಗಾಜನೂರ್, ಲಕ್ಕುವಳ್ಳಿ, ಕುಂಸಿ, ಚೋರಡಿ ವ ಆಯನೂರು ಈ ಮಾಗಣಿಗಳಲ್ಲಿನ ಗ್ರಾಮುಗಳು.

ಹಾಸನ ಡಿಸ್ಟ್ರಿಕ್ಟು.—ಮಂಜಿರಾಬಾದ್ ತಾಲ್ಲೂಕಿನ ಬ್ಯಾಗಡಹಳ್ಳಿ, ಮಾರನಹಳ್ಳಿ ವ ಹಾನೆಬಾಳ್ ಹೋಬಳಿಗಳು.

ಕಡೂರು ಡಿಸ್ಟ್ರಿಕ್ಟು.—ಕೊಪ್ಪ ವ ಮೂಡಗೆರೆ ತಾಲ್ಲೂಕುಗಳು, ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ವ ಲಕ್ಕುವಳ್ಳಿ ಮಾಗಣಿಗಳು. ವಸ್ತಾರ, ಆಯನೂರು, ಕಡಗಲ್‌ನಾಡ್, ತಲದುರ್ನಾಡ್, ಆಲ್‌ದೂರ್, ಜಾಗರ, ಸಿರವಾಸಿ, ಮತ್ತು ಲಿಂಗೇನಹಳ್ಳಿ ಮಾಗಣಿಗಳು ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗಳೂರು ಮಾಗಣಿ ಹಿರೆಕೊಳಲೆ, ಚಿಕ್ಕೊಳಲೆ ಮತ್ತು ಅರಳಗುಪ್ಪೆ ಗ್ರಾಮುಗಳು.

B. ನಮೂನೆ.

ರೈತರ ಹಕ್ಕುಗಳ ರೂಲ್ಸ್ ಅನುಸರಿಸಿ ಮರ, ಬೊಂಬುಗಳು ವ ಇತರ ಸಾಮಾನುಗಳನ್ನು ಕತರಾಯಿಸುವದಕ್ಕೆ, ಸಾಗಿಸುವದಕ್ಕೆ ಕೊಡಲ್ಪಟ್ಟ ಲೈಸೆನ್ಸು.

ಲೈಸೆನ್ಸ್ ಪಡದ ರೈತನ ಹೆಸರು ಮತ್ತು ವಾಸಸ್ಥಳ.	ಮರ, ಬೊಂಬುಗಳು ಅಥವಾ ಇತರ ಸಾಮಾನುಗಳನ್ನು ಕತರಾಯಿಸುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟ ತೇದಾದು.	ಕತರಾಯಿಸಲ್ಪಡಬೇಕಾದ ಫಾರೆಸ್ಟು ವ ಗ್ರಾಮದ ಹೆಸರು.	ಮರ ವ ಬೊಂಬುಗಳು ಯಲ್ಲಿಗೆ ಮತ್ತು ಎಷ್ಟರ ವಾಯಿದೆ ವಳಗೆ ಸಾಗಿಸಲ್ಪಡತಕ್ಕದ್ದು.	ಸೀನಿಯಾರೇಜ್ ಯಾನೆ ತೀರ್ವೆ.		ಕತರಾಯಿಸಲ್ಪಡಬೇಕಾದ ಮರಗಳ ವಿವರಣೆ.	ಇತರ ಷರತ್ತುಗಳು ಯೇನಾದರೂ ಇದ್ದರೆ.	ಮರ, ಬೊಂಬುಗಳು, ಅಥವಾ ಇತರ ಸಾಮಾನುಗಳು ಕತರಾಯಿಸಲ್ಪಟ್ಟ ಸರಹದ್ದಿನ ಗ್ರಾಮದ ಪಟೇಲನಿಗೆ ತನಿಖಿ ಮಾಡಲ್ಪಡುವ ಬಗ್ಯೆ ಒಪ್ಪಿಸಿದ ತಾರೀಖು.	ಮರ, ಬೊಂಬುಗಳು ಅಥವಾ ಇತರ ಸಾಮಾನುಗಳು ಸಾಗಿಸಲ್ಪಟ್ಟ ಗ್ರಾಮದ ಪಟೇಲನಿಂದ ಆಖೈರ್ ತನಿಖಿ ಮಾಡಲ್ಪಡುವ ಬಗ್ಯೆ ಹಾಜರ್ಮಾಡಿದ ತಾರೀಖು.	ತಾಲ್ಲೂಕಿನ ಅಮಲ್‌ದಾರರಿಗಾಗಲಿ ಅಥವಾ ಅದು ಸಾದರ್ಮಾಡಿದ ಆಫಿಸರರಿಗಾಗಲಿ ಲೈಸೆನ್ಸ್ ವಾಪಸ್ ಮಾಡಲ್ಪಡಬೇಕಾದ ಕಾಲ.	ಲೈಸೆನ್ಸು ವಾಪಸಾದ ಕಾಲ, ಮತ್ತು ಯಾರ ಬಳಿಗೆ ವಾಪಸ್ ಮಾಡಲ್ಪಟ್ಟಿತೋ ಅಂಥಾ ಆಫಿಸರರ ರುಜು ಮತ್ತು ತಾರೀಖು.
				ಮೊಬಲಗು.	ಪಾವತಿ ತಾರೀಖು.						
1	2	3	4	5	6	7	8	9	10	11	12

ತಾರೀಖು 10ನೇ ಫೆಬ್ರವರಿ 1896.

ನಂ. 7158.—ರೆ. 2782.—ಇದರಡಿಕಂಡ ಅಮಲ್‌ದಾರರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

ಕೇಶವಯ್ಯಂಗಾರ್ರಿಗೆ ಶ್ರೀರಂಗಪಟ್ಟಣದಿಂದ ಚನ್ನರಾಯಪಟ್ಟಣಕ್ಕೆ—ಡೆಪ್ಯುಟಿ ಅಮಲ್‌ದಾರ್ರಿಗೆ ಚಾರ್ಜು ಒಪ್ಪಿಸಿ ಕೂಡ್ಲೆ ಹೊರಟು ಹೋಗತಕ್ಕದ್ದು.

ವೆಂಕಟಾಚಲಯ್ಯನವರಿಗೆ ಯಡತೊರೆ ಯಿಂದ ಶ್ರೀರಂಗಪಟ್ಟಣಕ್ಕೆ—ತಾಲ್ಲೂಕು ಶಿರಸ್ತೇದಾರ್ರಿಗೆ ಚಾರ್ಜು ಒಪ್ಪಿಸಿ ಕೆಲಸದಮೇಲೆ ಕೂಡ್ಲೇ ಹೊರಟು ಹೋಗತಕ್ಕದ್ದು.

ಕ್ರಿಷ್ಣೇಅರಸಿನವರಿಗೆ ಚನ್ನರಾಯಪಟ್ಟಣದಿಂದ ಯಡತೊರೆಗೆ.

2. ಈ ಯೇರ್ಪಾಡಿನಿಂದ 1896ನೇ ಇಸವಿ ಜನವರಿ 30ನೇ ಮರ್ಕ್ಕಂ 6805.—2647ನೇ ನಂಬರ ಗವರ್ನಮೆಂಟ ಇಸ್ತಿಹಾರ್‌ನಾಮೆಯಲ್ಲಿ ಮಾಡೋಣಾದ ನೇಮಣೂಕಿಗಳು ರದ್ದು ಮಾಡಲ್ಪಟ್ಟಿರುತವೆ.

ನಂ. 7163.—ರೆ. 2787.—ಮೈಸೂರ ಸರ್ವಿಸ ರೆಗ್ಯುಲೇಷನಿನ 172ನೇ ಆರ್ಟಿಕಲ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ ಜನರಲ ಅಸಿಸ್ಟೆಂಟ ಕಮ್ಮಿಷನರ ಮೆಸ್ಸರ್ಸ್/ಪಿ. ವೆಂಕಟರಾಯರಿಗೆ, 1896ನೇ ಇಸವಿ ಫೆಬ್ರವರಿ 17ನೇ ಮರ್ಕ್ಕಂ ಲಾಗಾಯತು ಯಾ ಅವರದನ್ನ ಉಪಯೋಗಿಸಿಕೊಂಡ ತಾರೀಖು ಮೊದಲು 15 ದಿವಸಗಳ ಕ್ಯಾಜುಯಲ ರಜಾ ಕೊಡಲ್ಪಟ್ಟಿರುತ್ತೆ.

ನಂ. 7190.—ರೆ. 2800.—ಮೈಸೂರ ಸರ್ವಿಸ ರೆಗ್ಯುಲೇಷನಿನ 171ನೇ ಆರ್ಟಿಕಲ ಅನುಸರಿಸಿ, ಚಿಕ್ಕಬಳ್ಳಾಪುರದ ಸಬ್ ಡಿವಿಜನ ಆಫಿಸರ ಮೆಸ್ಸರ್ ಬಿ. ಜಿ. ಕ್ರಿಷ್ಣಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 5 ದಿವಸಗಳ ಕ್ಯಾಜುಯಲ ರಜಾ ಕೊಡಲ್ಪಟ್ಟಿರುತ್ತೆ.

ನಂ. 7193.—ರೆ. 2803.—ಮೈಸೂರ ಸರ್ವಿಸ ರೆಗ್ಯುಲೇಷನಿನ 171ನೇ ಆರ್ಟಿಕಲ ಅನುಸರಿಸಿ, ಹೊಸಕೋಟೇ ತಾಲ್ಲೂಕು ಅಮಲ್‌ದಾರ ಬಾವಾರಾವ್ ಬಿ. ಎ. ಯವರಿಗೆ, ಅವರು ಉಪಯೋಗಿಸಿಕೊಂಡ ತಾರೀಖು ಮೊದಲು 3 ದಿವಸಗಳ ಕ್ಯಾಜುಯಲ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ರು ಚಾಲತಿ ರೆವಿನ್ಯೂ ಕೆಲಸಗಳ ಚಾರ್ಜು ವಹಿಸಿರತಕ್ಕದ್ದು.

ನಂ. 7204.—ರೆ. 2814.—ಮೈಸೂರ ಸರ್ವಿಸ ರೆಗ್ಯುಲೇಷನಿನ 172ನೇ ಆರ್ಟಿಕಲ ಅನುಸರಿಸಿ, ಶ್ರೀನಿವಾಸಪುರ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ ಶಿರಾಮೊಹಿದೀನಲ್ಲಿಯವರಿಗೆ ಅವರುಪಯೋಗಿಸಿಕೊಂಡ ತಾರೀಖು ಲಾಗಾಯತು 7 ದಿವಸಗಳ ಕ್ಯಾಜುಯಲ ರಜಾ ಕೊಡಲ್ಪಟ್ಟಿರುತ್ತೆ.

ಶಿರಾಮೊಹಿದೀನಲ್ಲಿಯವರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚಿಂತಾಮಣಿ ತಾಲ್ಲೂಕು ಅಮಲ್‌ದಾರ್ರು, ಅವರ ಕೆಲಸಗಳೊಂದಿಗೆ ಸದರೀ ಸಬ್ ತಾಲ್ಲೂಕಿನ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 12ನೇ ಫೆಬ್ರವರಿ 1896.

ನಂ. 7187.—ರೆ. 2797.—ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್‌ದಾರ ಪಿ. ಶ್ರೀನಿವಾಸರಾಯರ ನವುಕರಿಯು ಹಂಗಾಮೀ ತರೀಕ ಪೊಲೀಸ ಇನ್ಸ್‌ಪೆಕ್ಟರ ಜನರಲ್‌ರವರ ತಾಬೆಗೆ ಕೊಟ್ಟಿರುವದ್ದರಿಂದ ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ಕೆಲಸನೋಡುತ್ತಿರುವ ಅಮಲ್‌ದಾರ ಎನ್. ಗೋಪಾಲಯ್ಯಂಗಾರ್ರಿಗೆ, ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್‌ದಾರ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತೆ.

ನಂ. 7196.—ರೆ. 2806.—ಮೈಸೂರ ಸರ್ವಿಸ ರೆಗ್ಯುಲೇಷನಿನ 172ನೇ ಆರ್ಟಿಕಲ ಅನುಸರಿಸಿ, ಕೋಲಾರ ತಾಲ್ಲೂಕು ಅಮಲ್‌ದಾರ ಸಿ. ಶೇಷಾದ್ರಿ ಅಯ್ಯಂಗಾರ್ರಿಗೆ, 1896ನೇ ಇಸವಿ ಜನವರಿ 31ನೇ ಮರ್ಕ್ಕಂ ಲಾಗಾಯತು ಅಥವಾ ಅವರುಪಯೋಗಿಸಿಕೊಂಡ ತಾರೀಖು ಮೊದಲು 10 ದಿವಸಗಳ ಕ್ಯಾಜುಯಲ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ರು, ಅಮಲ್‌ದಾರ್ರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಡಿಟ್ಟೋ ತಾಲ್ಲೂಕಿನ ಚಾಲತೀ ಕೆಲಸಗಳ ಚಾರ್ಜನ್ನು ವಹಿಸಿರತಕ್ಕದ್ದು.

ನಂ. 7200.—ರೆ. 2810.—ಇದರಡಿ ಕಂಡ ಡೆಪ್ಯುಟಿ ಅಮಲ್‌ದಾರರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

ತಿರುನಾರಣಯ್ಯಂಗಾರ್ರಿಗೆ, ಹುಳಿಯಾರದಿಂದ ಕ್ಯೋಸ್‌ಪೇಟೆಗೆ (ಕುಣಿಗಲ ತಾಲ್ಲೂಕಿನ ಚಾರ್ಜು ಒಪ್ಪಿಸಿದನಂತರ ಹೋಗಿ ಶೇರತಕ್ಕದ್ದು.)

ಬಿ. ವಾಸುದೇವರಾಯರಿಗೆ, ಕ್ಯೋಸ್‌ಪೇಟೆಯಿಂದ ಕೊರಟಗೆರೆಗೆ (ತಿರುನಾರಣಯ್ಯಂಗಾರ್ರಿಗೆ ಚಾರ್ಜು ಕೊಟ್ಟ ತರುವಾಯ ಹೋಗಿ ಶೇರತಕ್ಕದ್ದು.)

ಬಿ. ಕೇಶವಯ್ಯನವರಿಗೆ ಕೊರಟಗೆರೆಯಿಂದ ಹುಳಿಯಾರಿಗೆ. (ಬಿ. ವಾಸುದೇವರಾಯರಿಗೆ ಚಾರ್ಜು ಒಪ್ಪಿಸಿದನಂತರ ಹೋಗಿ ಶೇರತಕ್ಕದ್ದು.)

ತಾರೀಖು 13ನೇ ಫೆಬ್ರವರಿ 1896.

ನಂ. 7263.—ರೆ. 2836.—ಚಿತ್ರದುರ್ಗದ ಆಫಿಷಿಯೇಟಿಂಗ ಡೆಪ್ಯುಟಿ ಕಮ್ಮಿಷನರ ಮೆಸ್ಸರ್ ಎಂ. ಎಸ್. ನಾರಾಯಣರಾಯರಿಗೆ, 1896ನೇ ಇಸವಿ ಜನವರಿ 1ನೇ ಮರ್ಕ್ಕಂ ಕ್ಯಾಂ. 12ನೇ ನಂಬರ ಗವರ್ನಮೆಂಟ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 5 ದಿವಸಗಳ ಕ್ಯಾಜುಯಲ ರಜಾ ಅವರ ಖಾಯಿಷ್ ಮೇರೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 14ನೇ ಫಿಬ್ರವರಿ 1896.

ನಂ. 7339 —ರೆ. 2866.—ಮೈಸೂರ ಸರ್ವಿಸ್ ರೆಗ್ಯುಲೇಷನ್ಸ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ದೇವನಹಳ್ಳಿ ತಾಲ್ಲೂಕ್ ಅಮಲ್‌ದಾರ್ ಟಿ. ಚೊಕ್ಕಣ್ಣ, ಬಿ. ಎ. ಯವರಿಗೆ, 1896ನೇ ಇಸವಿ ಫಿಬ್ರವರಿ 6ನೇ ಮರ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖು ಮೊದಲು 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಟಿ. ಚೊಕ್ಕಣ್ಣನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸದರೀ ತಾಲ್ಲೂಕು ಶಿರಸ್ತೇದಾರು ತಾಲ್ಲೂಕು ಚಾಲತಿ ಕೆಲಸಗಳ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 15ನೇ ಫಿಬ್ರವರಿ 1896.

ನಂ. 7395.—ರೆ. 2880.—ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮಿಷನರ ಮೆಸ್ಟರ್ ಸಿ. ಕೃಷ್ಣರಾಯರು ಅವರಿಗೆ, 1896ನೇ ಇಸವಿ ಜನವರಿ 22ನೇ ಮರ್ಕುಂ 6601. ರ. 2545.ನೇ ನಂಬರ ಗವರ್ನಮೆಂಟ ಇಸ್ತಿಹಾರನಾಮೆ ಮೂಲಕ ಕೊಡಲ್ಪಟ್ಟ ಕ್ಯಾಜುಯಲ್ ರಜಾವನ್ನ ಮಾಹೆ ಗುಜಸ್ತಾ 27ನೇ ಮರ್ಕುಂ ಮಧ್ಯಾನ್ಹಾನಂತ್ರರ ಉಪಯೋಗಿಸಿಕೊಂಡು ಮಾಹೆ ಮಜಕೂರ್ 5ನೇ ಮರ್ಕುಂ ಅಪರಾಹ್ನದಲ್ಲಿ ಕೆಲಸದ ಮೇಲೆ ವಾಪಸ್ ಬಂದಿರುತ್ತಾರಾಗಿ ರಜಾದ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ರೈಲ್ವೆ.

ಇಸ್ತಿಹಾರ್‌ನಾಮೆ.

ಮೈಸೂರು ಗವರ್ನಮೆಂಟಿನವರಿಗೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಜಮೀನುಗಳು ಸರಕಾರದ ಕೆಲಸಕ್ಕೋಸ್ಕರ ಅರಸೀಕೆರೆ ಯಿಂದ ಮಂಗಳೂರಿಗೆ ಅಂದರೆ ಹಾಬನಘಟ್ಟ, ಆಡಿಹಳ್ಳಿ, ಬಾಗಡದೇವುದ್ದ, ಹಾಸನ, ಆಲೂರು, ಬೆಳಗೋಡು, ಸಕಲೇಶಪುರ, ಹೆಬ್ಬಸಾಲ, ಯಟಿಯಾನಹಳ್ಳಿ ಹಳ್ಳಾ, ಕೆಂಪಕಲ ಮತ್ತು ಮರಳೀಬೀಡಿ ಮಾರ್ಗವಾಗಿ ರೆಯಿಲ್ ರಸ್ತೆಯನ್ನು ಹಾಕುವ ಬಗ್ಗೆ ಬಹುಶಃ ಬೇಕಾಗಬಹುದೆಂದು ಕಾಣಬರುವದರಿಂದ ಇದಕ್ಕೆ ಸಂಬಂಧಪಟ್ಟ ತಮಾಂ ಜನಗಳಿಗೂ ಇದರಿಂದ ತಿಳಿಸುವದೇನಂದರೆ,—1894ನೇ ಇಸವಿ VIIನೇ ನಂಬರ್ ಮೈಸೂರು ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 4 ವ 5ನೇ ಸೆಕ್ಷನ್‌ಗಳಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನ ಚಲಾಯಿಸುವದರಲ್ಲಿ ಮೈಸೂರು ಗವರ್ನಮೆಂಟಿನವರು, ಸದರೀ ಗವರ್ನಮೆಂಟಿನ ರೈಲ್ವೇ ಇಲಾಖೆ ಸೆಕ್ರೆಟರಿಯವರನ್ನೂ ಅವರ ತಾಬೇದಾರರನ್ನೂ ಮತ್ತು ಅವರ ನವುಕರರುಗಳನ್ನೂ ಸುದಾ ಈ ಆಕ್ಟಿನ ಕೆಲಸಗಳಿಗೋಸ್ಕರ ಮೊಕರರ್ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಸಿ. ಬರ್ನ ಕರ್ನಲ್,
ರೆಯಿಲ್ವೇ ಸೆಕ್ರೆಟರಿ.

110

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 7.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ॥ 20, ಸನ್ 1896.

IIನೇ ಭಾಗ.

ಇಂಡ್ಯ ಗವರ್ನ್‌ಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)	
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ	150
2	ಇ[illegible]ಡ್ ಪೋರ್ಟರು ಬ್ರದರಸ್‌ರ ಡಿಟೋ	,,	170
1	[illegible]ಸ್ ಓಕ್ಸರವರ ಡಿಟೋ	,,	250
1	[illegible] ಡಿಟೋ ಡಿಟೋ	,,	188
1	[illegible] ಬೋಲ್ಟ್ಯಾಪುರವರ ಡಿಟೋ	,,	85

ಖರೀದೀದಾ[illegible]ಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಸೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 18ನೇ ಜನವರಿ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಕೊರಟಗೆರೆ ಸಬ್ ತಾಲ್ಲೂಕು ಚನ್ನರಾಯದುರ್ಗ ಸಮ್ಮತು ಹೋಲ್ತಾಳು ಬಳಿ ಸರ್ವೇ 38ನೇ ನಂಬರಿನಲ್ಲಿರತಕ್ಕ ಕಲ್ಲಿನ ಬಾಬತು ಮಂಟಪ, ಭಾವಿ ವಗೈರೆ ಪರಸ್ಥಳೀಕರ ಉಪಯೋಗಕ್ಕೆ ಅನುಕೂಲವಾಗಿರುವ ಕಟ್ಟಡವನ್ನು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನವರ ತನಿಖೆಗೆ ಒಳಪಡಿಸಿಕೊಂಡು ಮುಸಾಫರ್‌ಖಾನೆ ಯೆಂಬ ಹೆಸರಿಟ್ಟು ಕೊಂಡು ಕಾಮಗಾರಿ ಮಾಡಿಸಬೇಕೆಂದು ತಾತ್ಪರ್ಯ ಇಟ್ಟುಕೊಂಡಿರುತ್ತಾರೆ. ಇದನ್ನ ಕಟ್ಟಿಸಿರತಕ್ಕವರು ಇಂತವರೆಂಬದಾಗಲಿ, ಇದ್ದರ ವಾರಸ್ಸುದಾರರಾಗಲಿ ಈಗ್ಯೆ ಸುಮಾರು 40, 50 ವರುಷದ ಲಾಗಾಯತು ಇರುವಂತೆ ಗೊತ್ತಾಗಿಲ್ಲ. ಆದ್ದರಿಂದ ಈ ಲಾಗಾಯತು ಮೂರು ತಿಂಗಳೊಳಗಾಗಿ ಈ ಕಟ್ಟಡಕ್ಕೆ ಹಾಗೆ ವಾರಸ್ಸುದಾರರಾದವರು ಯಾರಾದರೂ ಯಿದ್ದ ಪಕ್ಷದಲ್ಲಿ ನಮ್ಮ ರೂಬರೂಬ್ ಹಾಜರಾಗಿ ತಮ್ಮ ಹಕ್ಕನ್ನು ದೃಢಪಡಿಸಿಕೊಳ್ಳಬಹುದು. ಇಲ್ಲವಾದರೆ ನಂತರ ಬರುವ ತಕರಾರಿಗೆ ಅವಕಾಶವಿಲ್ಲವಾದ್ದು, ತಿಳಿಯುವದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟ್ ಫಂಡ್ ಬೋರ್ಡ್ ಪ್ರೆಸಿಡೆಂಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 4ನೇ ಫಿಬ್ರವರಿ 1896.

1. ಕಾಯಂಗುತ್ತಾ ಬಾಕಿದಾರರಾದ ಅಂಗತಟ್ಟ ಗ್ರಾಮದ ಹನುಮಂತರಾಯುಬಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಹಿಡುವಳಿ ಹಕ್ಕು ತಪ್ಪಿ ಹೋಗಿದೆ ಯೆಂದು ಪ್ರಕಟಿಸಲ್ಪಟ್ಟಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಶಿಡ್ಲಘಟ್ಟ ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಮಾರ್ಚಿ 18ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 1137—11—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜೆಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಅಸಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರ[illegible] ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂ[illegible]ಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇ[illegible]ಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು [illegible] ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ[illegible] ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿ[illegible] ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾ[illegible]0 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿ[illegible]ಸಲ್ಪಟ್ಟ ಪಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರ[illegible] ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

112

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು	ಜಮೀನು. ನಂಬರ್ ಅಥವಾ ಜಮೀನ ಹೆಸರು.	ಖುಷ್ಕಿ ತರೀ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಮೊಬಲಗು.		
1	2	3	4	5	6	7	8	9		10			11		
					ರೂ. ಆ. ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಶಿಡ್ಲಘಟ್ಟ	ಜಂಗಮಕೋಟೆ	ಕಾಯಗಂಗುಳಾ ಲಿಂಗಶೆಟ್ಟಿ	ಹನುಮಂತರಾಯರು			ಪೂರಾ ಗ್ರಾಮ.	ಖುಷ್ಕಿ	302	28	516	8	0			
							ಬಾಗಾಯತು	18	28	106	0	0			
							ಸಾಗುವಳೀ ನಾಲಾಯಖು	92	14	1	8	0			
								413	30	624	0	0			
							ಸಾಲಿಯಾನಾಕ್ಕೊಡತಕ್ಕ ಮೊಬಲಗು			375	15	7	1137	11	0

ಷರಾ.—ಜೋಡೀದಾರ್ರಿಂದಾಗಲಿ ಬಾಧ್ಯತೇ ಮೂಲಕ ಇವರುಗಳಿಗೆ ಹಿಂದೆ ಇದ್ದವರಿಂದಲಾಗಲಿ ವುಂಟುಮಾಡಲ್ಪಟ್ಟ ತವಾಂ ಹಿಡುವಳಿಗಾಗಲಿ ದೇಣೆಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ಒಳಪಟ್ಟಿರುವದಿಲ್ಲ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 12ನೇ ಫೆಬ್ರವರಿ 1896.

1. ಕಂದಾಯದ ಬಾಕಿದಾರನಾದ ರಮ್ಯವರಾಚಾರ್ ಮೈನರ್, ಗಾರ್ಡಿಯನ್ ವೆಂಕಟಲಕ್ಷ್ಮಮ್ಮನಿಂದ ಬರಬೇಕಾದ ಜವಿನ್ ಕಂದಾಯದ ಬಾಕಿಗಾಗಿ ಫಾರ್‌ಫಿಟ್ಟಾಗಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪುರ ತಾಲ್ಲೂಕು ಚಿಕ್ಕಬಳ್ಳಾಪುರದಲ್ಲಿ ಸಬ್ ಡಿವಿಜನ್ ಆಫೀಸರರ ರೂಬರೂ 1896ನೇ ಮಾರ್ಚಿ 26ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ [illegible]ಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1,412—8—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ರೂ.ಯನ್ನ ಡಿಪಾಜಿಟ್ಟು ಹಾಜರ್‍ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್‍ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್‍ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ, ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ, ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್‍ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್‍ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‍ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್‍ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್‍ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಜಾತಿ.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ವಗೈರೆ ವಿವರ.	ಖುಷ್ಕಿ, ತರೀ, ಬಾಗಾಯತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ಬಾಕಿ ಸಹಿತ ಒಟ್ಟು.
1	2	3	4	5	6	7	8	9	10	11
					ರೂ. ಆ. ಪೈ.			ಎಕರೆ. ಗು.	ರೂ. ಆ. ಪೈ.	ರೂ. ಆ. ಪೈ.
ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ.	ಸರ್ವನಹಳ್ಳಿ ಜಾಗೀರು.	ರಮ್ಯವರಾಚಾರ್ ಮೈನರ್, ಗಾರ್ಡಿಯನ್ ತಾಯಿ ವೆಂಕಟಲಕ್ಷ್ಮಮ್ಮ	..	..	ಸರ್ವನಹಳ್ಳಿ ಗ್ರಾಮದ ಬಾಕಿದಾರರ ಜಮೀನು	ಖುಷ್ಕಿ	392 6	347 0 0	
							ತರೀ	101 7	235 1 0	1,048 11 0
							ಬಾಗಾಯತು	25 16	119 0 0	ಬಡ್ಡಿ
							ಪರಂಪೋಕು	208 39	3 4 0	363 13 4
							ಟೋಟಲ್	727 28	704 5 0	1,412 8 4
							ಸಾಲಿಯಾನಾ ಸರ್ಕಾರಕ್ಕೆ ಬರಬೇಕಾದ್ದು			
							ಕ್ವಿಟ್ರೆಂಟ್	..	88 0 0	
							ಸೆಸ್	..	44 0 2	
									132 0 2	

ಈ ಹರಾಜಿಗೆ ಇನಾಂದಾರರು ಮಾಡಿರುವ ಭೋಗ್ಯ ವಗೈರೆ ಪರಭಾರೆ ಬಾಧಿಸುವದಿಲ್ಲ.

ಸಿ. ಮಾದಯ್ಯ, ಡೆಪ್ಯುಟಿ ಕಮಿಷನರ್.

ತಾರೀಖು 8ನೇ ಫೆಬ್ರುವರಿ 1896ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಸಬ್ ರಿಜಸ್ಟ್ರಾರ್ ಆಫಿಸಿನಲ್ಲಿ ಬೇವಾರಸಾಗಿರುವ ದಸ್ತೈವಜನ್ನ ಕ್ರಮವಾದ ವಾರಸದಾರನಾಗಲಿ ಅಥವಾ ಅವನಿಂದ ಕ್ರಮವಾದ ಅಧಿಕಾರ ಪಡದುಕೊಂಡ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆ ಸಬ್‌ರಿಜಸ್ಟ್ರಾರ್ ಮುಂದೆ ಹಾಜರಾಗಿ ವಾಪಸ್ ತೆಗದುಕೊಂಡು ಹೋಗಬಹುದು. ಇಲ್ಲವಾದರೆ ಇಂಡಿಯನ್ ರಿಜಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅದನ್ನ ನಾಶಪಡಿಸಲ್ಪಡುವದು.

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜಿನ ತಾರೀಖು.	ರಿಜಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
107 / 1893—94	ಚಿಕ್ಕಬಳ್ಳಾಪುರದಲ್ಲಿರುವ ತೆನಗುಬಣಜಿಗ ಗುಂಡಹಳ್ಳಿ ಮಲ್ಲೆಲು ವೆಂಕಟರಮಣಪ್ಪನ ಮಗ ಚಿಕ್ಕಕೊಂಡಪ್ಪ	ಚಿಕ್ಕಬಳ್ಳಾಪುರದಲ್ಲಿರುವ ತೆನಗುಬಣಜಿಗ ಹುವ್ವಿನ ಅಪ್ಪೊನು ಮಗ ಚಿಕ್ಕಪ್ಪೊನು	1893ನೇ ಇಸವಿ ಜೂನ್ ತಾರೀಖು 20	1893ನೇ ಇಸವಿ ಸೆಪ್ಟಂಬರ್ ತಾರೀಖು 19	ಶಿಡ್ಲಘಟ್ಟದ ತಾಲ್ಲೂಕು ಸಾದಲಿ ಹೋಬಳಿ ಗುಂಡಹಳ್ಳಿ ಗ್ರಾಮದ ಬಳಿ ಇರುವ ಜಮೀನುಗಳು ಮತ್ತು ಮನೆ ಸಹ 100 ರೂಪಾಯಿಗೆ ಕ್ರಯ.

ಸಿ. ಮಾದಯ್ಯ, ರಿಜಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ನಂ. 1895—96ನೇ ಇಸವಿ ಬಾಬತು.

ತಾರೀಖು 12ನೇ ಫೆಬ್ರವರಿ 1896.

ಇದರಲ್ಲಿ ನಮೂದಾಗುವ ಸಬ್ ರಿಜಸ್ಟ್ರಾರ್ ಆಫೀಸುಗಳಲ್ಲಿ ಈ ಕೆಳಗೆ ನಮೂದಿಸಿ ಇರುವ ಬೇವಾರಸ್ ದಸ್ತೈವಜುಗಳನ್ನು ಕ್ರಮವಾದ ವಾರಸ್‌ದಾರರ್‌ಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆಯಾಯ ಸಬ್ ರಿಜಸ್ಟ್ರಾರ್ರ ಆಫೀಸುಗಳಲ್ಲಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ನಂಬರು.	ಆಫೀಸಿನ ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಸ್ಟರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
1	ಮೈಸೂರ ಡಿ॥ ರಿಜಸ್ಟ್ರಾರ್ ಆಫೀಸ್	1ನೇ ನಂಬರ್ ಬುಕ್ಕು ನಂ. 24	ಹಾಸನದಲ್ಲಿರುವ ಶಾಮಣ್ಣನವರ ಹೆಂಡತಿ ಲಕ್ಷ್ಮೀದೇವಮ್ಮ	ನಾಗಮಂಗಲದಲ್ಲಿರುವ ನಾರಣಪ್ಪನವರ ಮಗ ನರಸಿಂಹಯ್ಯ	16—12—93	18—12—93	500 ರೂಪಾಯಿನ ಕ್ರಯಪತ್ರ
2	ಮೈಸೂರು ಸಬ್ ರಿಜಸ್ಟ್ರಾರ್ ಆಫೀಸ್	2ನೇ ನಂಬರು ಬುಕ್ಕು ನಂ. 2	ಮೈಸೂರು ತಾಲ್ಲೂಕು ಆನಂದೂರು ಹೋಬಳಿ ಕಸಬಾ ಆನಂದೂರಲ್ಲಿರುವ ಆಲೇಗವುಡನ ಮಗ ಚಿಕ್ಕೇಗವುಡ	ತಿರುಮಕೂಡ್ಲು ನರಸೀಪುರದ ತಾ॥ ಸೋಸಲೆ ಹೋಬಳೀ ಶ್ರೀರಂಗರಾಜಪುರದ ಅಗ್ರಹಾರದಲ್ಲಿರುವ ಅಳಿಯುವಲ್ಲಿಗೆ ಗೋಪಾಲಾಚಾರ್ರು	12—9—93	12—9—93	23 ರೂಪಾಯಿನ ಆಧಾರಪತ್ರ
		ನಂಬರು 4	ಮೈಸೂರು ತಾಲ್ಲೂಕು ಆನಂದೂರು ಕಸಬಾದಲ್ಲಿರುವ ಚಲುವೇಗವುಡನ ಮಗ ಕಾಳನರಸೇಗವುಡ	ಮಾಗಡಿ ತಾಲ್ಲೂಕು ಹುಲಿಕಲ್ಲಿನಲ್ಲಿರುವ ಆನಂದೂರು ತಾತಾಚಾರ್ರ ಮಕ್ಕಳು ಶ್ರೀನಿವಾಸರಾಘವಾಚಾರ್ರು	14—10—92	26—9—93	18 ಖಂಡಿ ಭತ್ತ ಕೊಡತಕ್ಕ ಗುತ್ತಗೇ ಕರಾರು
		ನಂಬರು 5	ಮೈಸೂರು ತಾಲ್ಲೂಕು ಆನಂದೂರು ಹೋಬಳಿ ಹೊಸಕೋಟೆ ಗ್ರಾಮದಲ್ಲಿ ಇರುವ ಗಂಗಡಿಕಾರ್ರ ಜಾತಿ ಚಿಕ್ಕಶಿದ್ದೇಗವುಡನ ಮಗ ಕಸ್ತೂರಿಗವುಡ, ಮರಿತಿಮ್ಮೇಗವುಡನ ಮಗ ಮಂಚ, ಸಣ್ಣ, ಚಿಕ್ಕತಿಮ್ಮೇಗವುಡನ ಮಗ ಶಿದ್ದೇಗವುಡ ವುರಫ್ ಅಣ್ಣಯ್ಯ, ಮಂಚೇಗವುಡನ ಹೆಂಡತಿ ಶಿದ್ದಮ್ಮ ಇವಳ ಮಗ ತಿಮ್ಮ	ಮೈಸೂರು ತಾಲ್ಲೂಕು ಇಲವಾಲದಲ್ಲಿರುವ ಶ್ರೀವೈಷ್ಣವ ಬ್ರಾಂಹಣ ಶೇಷಯ್ಯಂಗಾರ್ರ ಮಕ್ಕಳು ರಾಮಸ್ವಾಮಯ್ಯಂಗಾರ್	9—3—93	26—9—93	400 ರೂಪಾಯಿನ ಕ್ರಯಪತ್ರ
		ನಂಬರು 11	ಮೈಸೂರು ಲಷ್ಕರ್ ಮೊಹಲಾದಲ್ಲಿರುವ ಅಹಮ್ಮದ್ ಶೇಟರ ಮಕ್ಕಳು ಅಲ್ಲೀಮಹಮ್ಮದ್‌ಶೇಟ್ ಇಸ್ಮಾಯಿಲಶೇಟ್ ವುರಫ್ ಜಾನ್ ಮಹಮ್ಮದ್‌ಶೇಟ್ ಅಬ್ದುಲ್‌ರಹಿಮಾನ್ ವುರಫ್ ಚಾಂದೂಶೇಟ್	ಮೈಸೂರು ಲಷ್ಕರ್ ಮೊಹಲಾದಲ್ಲಿರುವ ಮುಸಲ್ಮಾನರಜಾತಿ ಚೇಣಾ ಜವಳಿ ಅಂಗಡಿ ವುಮ್ಮರ್‌ಅಬ್ದುಲ್ಲಾಶೇಟ್	11—5—93	28—11—93	150 ರೂಪಾಯಿನ ಭೋಗ್ಯತ್ರ
		ನಂಬರು 14	ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿಯಲ್ಲಿರುವ ಬೆಳ್ಳಾಳ ವಕ್ಕಲಿಗರ ಸುಬ್ಬಣ್ಣನ ಮಗ ಅಂಡಾನಪ್ಪ	ಮೈಸೂರು ಕ್ರಿಷ್ಣರಾಜ ಮೊಹಲಾ ಬಂಡಿಕಾರ್ರ ಬೀದಿಯಲ್ಲಿರುವ ಬಿಳಿಮಗ್ಗದ ಬೋರಶೆಟ್ಟಿ ಶಿದ್ದಣ್ಣನ ಮಗ ನಿಂಗಣ್ಣ	2—6—93	11—1—94	70 ರೂಪಾಯಿನ ಭೋಗ್ಯಪತ್ರ

ನಂಬರು	ಆಫೀಸಿನ ಹೆಸರು	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ಅಡ್ರೆಸ್ಸು.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್ಸು.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಸ್ಟರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
	ಮೈಸೂರು ಸಬ್ ರಿಜಿಸ್ಟ್ರಾರ್ ಆಫೀಸು	1ನೇ ನಂಬರ್ ಬುಕ್ಕು ನಂ. 1419	ಮೈಸೂರು ದೇವರಾಜ ಮೊಹಲಾ ಬಂಡಿಕೇರಿಯಲ್ಲಿ ಇರುವ ಗಂಗಡಿಕಾರ್ರ ನಂಜಂಣನ ಮಕ್ಕಳು ನಂಜುಂಡಪ್ಪ 1 ಬೋಗಯ್ಯ 1 ಕಾವೇರಯ್ಯ 1 ಕಪಿನಯ್ಯ 1 ನಿಂಗಯ್ಯ 1 ಕೆಂಪನಂಜ ಮೈನರ್ ಗಾರ್ಡಿಯನ್ ನಂಜಂಣ	ಮೈಸೂರು ದೇವರಾಜ ಮೊಹಲೆ ಬಂಡಿಕೇರಿಯಲ್ಲಿರುವ ಗಂಗಡಿಕಾರ್ರ ನಂಜಂಣನ ಮಕ್ಕಳು ನಂಜುಂಡಪ್ಪ 1 ಬೋಗಯ್ಯ ಕಾವೇರಯ್ಯ, ಕಪಿನಯ್ಯ, ನಿಂಗಯ್ಯ, ಕೆಂಪನಂಜ ಮೈನರ್ ಗಾರ್ಡಿಯನ್ ತಂದೆ ನಂಜಂಣ	2—2—93	3—2—93	1,000 ರೂಪಾಯಿನ ವಿಭಾಗ ಪತ್ರ
		ನಂ. 1581	ಮೈಸೂರು ಇಟ್ಟಿಗೆ ಗೂಡಿನಲ್ಲಿರುವ ಒಕ್ಕಲಿಗರಜಾತಿ ಗವುರಯ್ಯನ ಮಗ ಗರಗಸದ ಮೋಳೆ ರಂಗ	ಮೈಸೂರು ಇಟ್ಟಿಗೆ ಗೂಡಿನಲ್ಲಿರುವ ಒಕ್ಕಲಿಗರ ಜಾತಿ ಗವುರಯ್ಯನ ಮಗಳು ಪಟ್ಟಮ್ಮ ಈಕೆ ಮಗ ತಿಮ್ಮಯ್ಯ	11—3—93	13—3—93	100 ರೂಪಾಯಿನ ಕ್ರಯಪತ್ರ
		ನಂ. 1597	ಮೈಸೂರು ಕೃಷ್ಣರಾಜ ಮೊಹಲಾ ಸುಣ್ಣದಕೇರಿಯಲ್ಲಿರುವ ರಾಮಾನುಜಪ್ಪನವರ ಹಣ್ಣುಕಾಯಿ ಅಂಗಡಿ ಸುಬ್ಬರಾಮಾನುಜಪ್ಪ	ಮೈಸೂರು ಹಳೇ ಅಗ್ರಹಾರದಲ್ಲಿ ಸುಣ್ಣದಕೇರಿಯಲ್ಲಿರುವ ರಾಮಾನುಜಪ್ಪನ ಮಗ ಹೋಬಳಿದಾರ್ ರಾಮಾನುಜಪ್ಪ	15—3—93	16—3—93	22 ರೂಪಾಯಿನ ಆಧಾರ ಪತ್ರ
		ನಂ. 822	ಮೈಸೂರು ದೇವರಾಜ ಮೊಹಲಾದಲ್ಲಿರುವ ಕುಂಚಿಗರಜಾತಿ ಕಾಮಾಲೆ ದೊಡ್ಡಯ್ಯನ ಮಗ ಕಾಮಾಲಿ ಶಿದ್ದಲಿಂಗಂಣ	ಮೈಸೂರು ಮಂಡಿ ಮೊಹಲಾದಲ್ಲಿರುವ ಮುಸಲ್ಮಾನ್ ಜಾತಿ ಹುಸೇನ್‌ಖಾನ್ ಸಾಬರ ಮಗ ಕಂಟ್ರಾಕ್ಟುದಾರ್ ರಹಿಮಾನ್ ಖಾನ್	13—12—93	14—12—93	450 ರೂಪಾಯಿನ ಕ್ರಯಪತ್ರ
3	ಯಡತೊರೆ ಸಬ್ ರಿಜಿಸ್ಟ್ರಾರ್ ಆಫೀಸು	1ನೇ ನಂಬರು ಬುಕ್ಕು ನಂ. 1232	ಭೇರ್‍ಯದಲ್ಲಿರುವ ವೈಷ್ಣವ ಬ್ರಾಂಹಣ ರಾಮಯ್ಯನ ಮಗ ಅರ್ಚಕಾವೃತ್ತಿ ಶೇಷಗಿರಿ	ಸುಗ್ಗನಹಳ್ಳಿಯಲ್ಲಿರುವ ಬಡಗಿಜಾತಿ ಬಸವಯ್ಯನ ಮಗ ಆರಂಬದ ಅಪ್ಪಾಜಯ್ಯ	24—2—93	7—3—93	245 ರೂಪಾಯಿನ ಕ್ರಯಪತ್ರ
		ನಂಬರು 1594	ಕಲ್ಲಹಳ್ಳಿಯಲ್ಲಿರುವ ತೊರೇರ ಬೋರನನುಗ ಆರಂಬದ ಬೋರ ಪುರಫ್ ಜೊಟ್ಟಿ	ಕಲ್ಲಹಳ್ಳಿಯಲ್ಲಿರುವ ಮುಸಲ್ಮಾನರ ಜಹಂಗೀರ್ ಸಾಬರ ಮಗ ಜಿರಾಯಿತು ಜೀವನದ ಮುಹಮ್ಮದ್ ಗೌಸ್‌ಸಾಬಿ	21—4—93	11—5—93	25 ರೂಪಾಯಿನ ಕ್ರಯಪತ್ರ
		ನಂಬರು 399	ಚನ್ನಪ್ಪನ ಕೊಪ್ಪಲ್‌ನಲ್ಲಿರುವ ಶಿವಾಚಾರದ ಜಾತಿ ಕೆಂಪೇಗವುಡನಮಗ ಆರಂಬದ ಚಿನ್ನೇಗವುಡ	ಚನ್ನಪ್ಪನ ಕೊಪ್ಪಲಿನಲ್ಲಿರುವ ಶಿವಾಚಾರದಜಾತಿ ಕೆಂಪೇಗವುಡನ ಮಗ ಆರಂಬದಬಸವೇಗವುಡ	12—6—93	12—10—93	160 ರೂಪಾಯಿನ ಭೋಗ್ಯಪತ್ರ
		ನಂಬರು 400	ಕಲ್ಲಹಳ್ಳಿಯಲ್ಲಿ ಯಿರುವ ಪಾಂಚಾಳದ ಜಾತಿ ಕಪನಯ್ಯನ ಮಗ ಜಾತಿಕಸಬಿನ ನಂಜಾಚಾರಿ	ಕಲ್ಲಹಳ್ಳಿಯಲ್ಲಿರುವ ಶಿವಾಚಾರದ ಮಲ್ಲೇಗವುಡನ ಮಗ ಪಟೇಲ್ ಲಿಂಗಂಣ	8—10—93	13—10—93	400 ರೂಪಾಯಿನ ಆಧಾರಪತ್ರ
		ನಂಬರು 503	ಯಡತೊರೆಯಲ್ಲಿರುವ ಮುಸಲ್ಮಾನರ ಖಾಸಿಂ ಸಾಬರ ಮಗ ಆರಂಬದ ಕಗ್ಗೆರೆ ಅಮ್ಮತ್‌ಸಾಬಿ	ತಿಪ್ಪೂರು ಹೋಬಳಿ ಅಂಬಲೀ ಮಠದಲ್ಲಿರುವ ಬಿರಾಂಸಾಬರ ಮಗ ಜಮಾಲ್‌ಸಾಬಿ	29—7—93	28—11—93	90 ರೂಪಾಯಿನ ಕ್ರಯಪತ್ರ
		ನಂಬರು 510	ಸಾಲಿಗ್ರಾಮದಲ್ಲಿರುವ ಸ್ಮಾರ್ತ ಬ್ರಾಂಹಣ ವಿಶ್ವೇಶ್ವರಯ್ಯನವರ ಮಗ ಸ್ಕೂಲ್ ಟೀಚರ್ ಶಾಮಂಣ	ಬಳ್ಳೂರು ಕೊಪ್ಪಲಲ್ಲಿರುವ ಜವರೇಗವುಡನ ಮಗ ಹೊಟ್ಟೆಪ್ಪ, ಪುರಫ್ ಮಾಳೆಗೆಗವುಡ	2—8—93	30—11—93	180 ರೂಪಾಯಿನ ಕ್ರಯಪತ್ರ

ನಂಬರು.	ಆಫೀಸಿನ ಹೆಸರು	ಬುಕ್ಕು ಮತ್ತು ನಂಬರು.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ಅಡಿರ್ಷ.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡಿರ್ಷ.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
4	ತಿರುಮಕೂಡ್ಲು ನರಸೀಪುರದ ಸಬ್ ರಿಜಿಸ್ಟ್ರಿ ಆಫೀಸು.	1ನೇ ನಂಬರು ಬುಕ್ಕು ನಂಬರು 1651	ಕನ್ನಹಳ್ಳಿ ದಾಖಲೆ ಶೀಹಳ್ಳಿ ಗ್ರಾಮದಲ್ಲಿರುವ ಕಿರಗಾಣಿಗರ ದೊಡ್ಡಶಟ್ಟಿ ಮಗೆ ಕಿದ್ದಶಟ್ಟಿ	ಕನ್ನಹಳ್ಳಿ ದಾಖಲೆ ಶೀಹಳ್ಳಿ ಗ್ರಾಮದಲ್ಲಿರುವ ವೀರಶೈವಜಾತಿ ಯಿಸವೇಗವುಡರ ಮಗ ಪಟೇಲ್ ಸುಬ್ಬೇಗವುಡ	25—1—93	26—1—93	200 ರೂಪಾಯಿನ ಕ್ರಯಪತ್ರ
		ನಂಬರು 2349	ನಂಜನಗೂಡಿನಲ್ಲಿರುವ ಲೇಟ್ ಪ್ರಿನಸಪಲ್ ಸದರ್ ಮುನಸೂಫ್ ಕೋರ್ಟು ಪಂಡಿತ ಆನಂದತೀರ್ಥಾಚಾರ್ಯರ ಮಗ ಕೋರ್ಟು ಶ್ರೀನಿವಾಸಾಚಾರ್	ನಂಜನಗೂಡಿನಲ್ಲಿರುವ ಲೇಟ್ ಪ್ರಿನಸಿಪಲ್ ಸದರ್ ಮುನಸೀಫ್ ಕೋರ್ಟು ಪಂಡಿತ ಆನಂದತೀರ್ಥಾಚಾರ್ಯರ ಮಗ ವಿಜಈಂದ್ರಾಚಾರ್	24—4—93	25—4—93	300 ರೂಪಾಯಿನ ಕ್ರಯಪತ್ರ
		ನಂಬರು 2350	ನಂಜನಗೂಡಿನಲ್ಲಿರುವ ಮಾಧ್ವ ಬ್ರಾಹ್ಮಣ ವಾಸುದೇವಾಚಾರ್ ವಾದೇಂದ್ರಾಚಾರ್ರ ಮಕ್ಕಳು ವೈದೀಕವೃತ್ತಿ ಜೀವನದ ಪುರೋಹಿತ ಜಯರಾಮಾಚಾರ್.	ನಂಜನಗೂಡಿನಲ್ಲಿರುವ ಪುರೋಹಿತ ವೆಂಕಟರಮಣಾಚಾರ್ಯರ ಮಗ ಶ್ರೀನಿವಾಸಾಚಾರಿ, ಪುರೋಹಿತ ರಾಘವೇಂದ್ರಾಚಾರ್ಯರ ಮಕ್ಕಳು ಲಕ್ಷ್ಮೀನಾರಣಾಚಾರ್	24—4—93	25—4—93	400 ರೂಪಾಯಿನ ಕ್ರಯಪತ್ರ
		ನಂಬರು 2880	ಪಟ್ಟಹಳ್ಳಿ ದಾಖಲೆ ಮುಡುಕುದೊರೆಯಲ್ಲಿರುವ ಶ್ರೀಮಲ್ಲಕಾರ್ಜುನ ಸ್ವಾಮಿಯುವರ ದೇವಸ್ಥಾನದ ತಮ್ಮಡಿ ಚಿಕ್ಕಚಂದ್ರಶೇಖರಯ್ಯನ ಮಲ್ಲಯ್ಯನ ಮಗ ಮಲ್ಲಯ್ಯ	ತಿರಮಕೂಡ್ಲು ನರಸೀಪುರದ ತಾಲ್ಲೂಕು ಕಚೇರಿಗೆ	5—6—93	12—6—93	100 ರೂಪಾಯಿನ ಜಾಮೀನುಪತ್ರ
		ನಂಬರು 148	ಶ್ರೀರಂಗರಾಜಪುರದ ಅಗ್ರಹಾರದಲ್ಲಿರುವ ಕಲ್ಯಾಣಪುರ ರಾಮಾನುಜಯ್ಯಂಗಾರ್ರ ಮಕ್ಕಳು ಅನಂತಾಚಾರ್	ಶ್ರೀರಂಗರಾಜಪುರದ ಅಗ್ರಹಾರದಲ್ಲಿರುವ ಶ್ರೀಕಂಠಶಾಸ್ತ್ರಿಗಳ ಮಕ್ಕಳು ಕರಾ|| ಕೃಷ್ಣಶಾಸ್ತ್ರಿ	29—7—93	31—7—93	100 ರೂಪಾಯಿನ ಆಧಾರಪತ್ರ
		ನಂಬರು 846	ಗಾಡಿಜೋಗಿ ಹುಂಡಿ ಗ್ರಾಮದಲ್ಲಿರುವ ಶೀಹಳ್ಳಿ ಅಪ್ಪಾಚಾರಿ ಮಗ ಪುಟ್ಟಾಚಾರಿ	ಶ್ರೀರಂಗಪಟ್ಟಣದ ತಾಲ್ಲೂಕು ಯಮೆಕಾರಕೊಪ್ಪಲ್ ಗ್ರಾಮದ ಮಾರಿಗುಡಿ ಬೆಟ್ಟೆಗವುಡನ ಮಗ ಶಿಂಗೇಗೌಡ	10—1—94	11—1—94	200 ರೂಪಾಯಿನ ಆಧಾರಪತ್ರ
		ನಂಬರು 911	ನರಸೀಪುರದಲ್ಲಿರುವ ಫಿರ್ಷ ಜುಡಿಷಲ್ ಗುಮಾಸ್ತೆ ಲೋಕಾಚಾರ್	ಹೊರಳಹಳ್ಳಿ ಗ್ರಾಮದಲ್ಲಿರುವ ಹಲಗಯ್ಯನ ಮಗ ಮರಿದೇವರು	22—1—94	23—1—94	130 ರೂಪಾಯಿನ ಕ್ರಯಪತ್ರ
		2ನೇ ನಂಬರ್ ಬುಕ್ಕು ನಂಬರು 29	ದೊಡ್ಡ ಅಬ್ಬಾಗಿಲ ದಾಖಲೆ ನರಸೀಪುರದಲ್ಲಿರುವ ಎಡಗೈ ಜಾತಿ ಚಕ್ರದಡಿ ಲಿಂಗನ ಮಗ ಹೆಳವಾ	ದೊಡ್ಡ ಅಬ್ಬಾಗಿಲ ದಾಖಲೆ ನರಸೀಪುರದಲ್ಲಿರುವ ಅಬ್ದುಲ್ ಖಾದರ್‌ಸಾಬಿ	10—1—92	16—6—93	100 ರೂಪಾಯಿನ ಆಧಾರಪತ್ರ
		ನಂಬರು 31	ಬನ್ನೂರಲ್ಲಿರುವ ಕಾಳೋಜಿ ನರಸುಹ್ಮಯ್ಯ	ಬನ್ನೂರಲ್ಲಿರುವ ಶಿಂಗಾರಿ ಕೆಂಪ್ನ ಬೋರಾ	16—12—92	29—6—93	65 ರೂಪಾಯಿನ ಕ್ರಯಪ್ರ
		4ನೇ ನಂಬರ್ ಬುಕ್ಕು ನಂಬರು 14	ನರಸೀಪುರದಲ್ಲಿರುವ ಪುಟ್ಟಹೊನ್ನಪ್ಪ	ನರಸೀಪುರದಲ್ಲಿರವ ನಶ್ಯದ ಹುಚ್ಚಪ್ಪ	27—11—93	28—11—93	50 ರೂಪಾಯಿನ ಕ್ರಯಪತ್ರ

ನಂಬರು	ಆಫೀಸಿನ ಹೆಸರು	ಬುಕ್ಕು ಮತ್ತು ನಂಬರ್	ದಸ್ತಾವೇಜನ್ನು ಬರೆದುಕೊಟ್ಟವರಹೆಸರು ಮತ್ತು ಅಡ್ರೆಸ್	ದಸ್ತಾವೇಜು ಬರೆಸಿಕೊಂಡವರ ಹೆಸರು ಮತ್ತು ಅಡ್ರೆಸ್	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು	ರಿಜಿಸ್ಟ್ರಿಯಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು	ದಸ್ತಾವೇಜಿನ ಸ್ವಭಾವ
5	ನಂಜನಗೂಡು ಸಬ್ ರಿಜಿಸ್ಟ್ರಿ ಆಫೀಸ್	1ನೇ ನಂಬರ್ ಬುಕ್ಕು ನಂಬರ್ 207	ದಾಸನೂರು ಕಸಬಾದಲ್ಲಿರುವ ಬಸವೇಗವುಡನ ಮಗ ಪಟೇಲ್ ಮಲ್ಲಪ್ಪ	ತಗಡೂರಲ್ಲಿರುವ ಚಿಕ್ಕಚೆನ್ನನ ಕಾಳನ ಮಗ ವೀರ	18—8—93	18—8—93	190 ರೂಪಾಯಿನ ಕ್ರಯಪತ್ರ
		ನಂ. 249	ಹುಳಿಮಾವು ಶಾ|| ನಂಜನಗೂಡಿನಲ್ಲಿರುವ ಸುಬ್ಬಯರ ಮಗ ನಂಜುಂಡಯ್ಯ	ನಂಜನಗೂಡಿನಲ್ಲಿರುವ ಚಿಕ್ಕ ಪುಟ್ಟಸ್ವಾಮಿಶೆಟ್ಟಿ	1—9—93	2—9—93	35 ರೂಪಾಯಿನ ಆಧಾರಪತ್ರ
		ನಂ. 345	ಅಳಗಂಚಿ ಗ್ರಾಮದಲ್ಲಿರುವ ಪುಷ್ಪಲಿಗರ ಚನ್ನನ ಶಿದ್ದನಮಗ ನಂಜಶೆಟ್ಟಿ	ವೀರೇದೇವನಪುರದ ದಾಖಲೆ ಚಿನ್ನದಗುಡಿ ಹುಂಡಿಯಲ್ಲಿರುವ ಸಿದ್ದರಾಮೇಗವುಡನ ದತ್ತುಮಗ ದೊಡ್ಡೇಗವುಡ	3—10—93	3—10—93	70 ರೂಪಾಯಿನ ಕ್ರಯಪತ್ರ
		ನಂ. 349	ಬೊಕ್ಕಹಳ್ಳಿಯಲಿರುವ ವೆಂಕಟಪ್ಪನ ಮಗ ಗುಂಡಪ್ಪ	ಮೈಸೂರು ಕಿಲ್ಲೇದಲ್ಲಿರುವ ಅಂಚೆ ರಾಮಣ್ಣನವರ ಮಕ್ಕಳು ಶೇಕದಾರ್ ರಾಮಣ್ಣ	4—10—93	4—10—93	80 ರೂಪಾಯಿನ ಆಧಾರಪತ್ರ
		ನಂ. 516	ನಂಜನಗೂಡಿನಲ್ಲಿರುವ ಶಂಕರ ನಂಜಯ್ಯನ ಮಗ ಶಿದ್ದಯ್ಯ 1 ಗೋಫ 1 ದೇವಪ್ಪ	ಯಡತೊರೆ ಕಸಬೇಲಿರುವ ನಾರಣಶೆಟ್ಟಿ ಮಗ ದಾಸಶೆಟ್ಟಿ	27—11—93	27—11—93	ಗುತ್ತಿಗೇ ಕರಾರು
		ನಂ. 513	ಯಡತೊರೆ ತಾಲ್ಲೂಕು ತಿಪ್ಪೂರಲ್ಲಿರುವ ನರಸಿಂಹಯ್ಯನ ಹೆಂಡತಿ ಪಾರ್ವತಮ್ಮ ಮೈನರ್, ತಂದೆ ವಿಶ್ವೇಶ್ವರಶಾಸ್ತ್ರಿ	ನಂಜನಗೂಡಿನಲ್ಲಿರುವ ನರಸಮ್ಮ ಮೈನರ್, ಮಕ್ಕಳು ಕೃಷ್ಣಪ್ಪ, ನರಸಮ್ಮಯ್ಯನವರ ಮಗಳು ಲಕ್ಷ್ಮೀದೇವಮ್ಮ	25—11—93	25—11—93	200 ರೂಪಾಯಿನ ಕ್ರಯಪತ್ರ
6	ಚಾಮರಾಜನಗರ ಸಬ್ ರಿಜಿಸ್ಟ್ರಿ ಆಫೀಸ್	1ನೇ ನಂಬರ್ ಬುಕ್ಕು ನಂ. 1100	ಚಾಮರಾಜನಗರದ ಕಸಬಾದಲ್ಲಿರುವ ವೈಶ್ಯರ ಬನ್ನೂರು ಮುದ್ದಶೆಟ್ಟಿಮಗ 1ನೇ ರಾಮಶೆಟ್ಟಿ 2ನೇ ಇವನ ಹೆಂಡತಿ ಕೃಷ್ಣಮ್ಮ 3ನೇ ಇವನ 2ನೇ ಮಗ ಆದಿಶೆಟ್ಟಿ	ನಂಜನಗೂಡು ತಾಲ್ಲೂಕು ಕಸಬಾ ಚಾಮಲಾಪುರದಲ್ಲಿರುವ ಗಂಗಡಿಕಾರ ಅಣಯ್ಯನಮಗ ಮಳಿಗೆ ಕೆಂಪಣ್ಣ	6—12—92	3—4—93	109-9-6 ರೂಪಾಯಿನ ಆಧಾರಪತ್ರ
		ನಂ. 61	ಚಾಮರಾಜನಗರದ ತಾಲ್ಲೂಕು ನಾಗಳಿ ಗ್ರಾಮದಲ್ಲಿರುವ ಚನ್ನಶೆಟ್ಟಿ ತಿಮ್ಮಶೆಟ್ಟಿಮಗ ವೆಂಕಟಶೆಟ್ಟಿ	ಚಾಮರಾಜನಗರದ ತಾಲ್ಲೂಕು ನಾಗಳಿ ಗ್ರಾಮದಲ್ಲಿರುವ ವೆಂಕಟಸುಬ್ಬಶೆಟ್ಟಿ ಮಗ ತಿಮ್ಮಶೆಟ್ಟಿ	15—7—93	17—7—93	70 ರೂಪಾಯಿನ ಕ್ರಯಪತ್ರ
		ನಂ. 75	ನಂಜನಗೂಡು ತಾಲ್ಲೂಕ್ ದೊಡ್ಡ ಕೌಲಂದೆ ಗ್ರಾಮಗಲ್ಲಿ ಇರುವ ಸ್ಕೂಲ್ ಮ್ಯಾಸ್ಟರ್ ವೆಂಕಟಕೃಷ್ಣಯ್ಯನ ಹೆಂಡತಿ, ವೆಂಕಟಲಕ್ಷ್ಮಮ್ಮ	ನಂಜನಗೂಡು ತಾಲ್ಲೂಕು ಹೆಡತಲೆ ಹೋಬಳಿ ಮಲ್ಲಹಳ್ಳಿಯಲಿರುವ ಗಟ್ಟವಾಡಿಪುರದ ರಾಮಯ್ಯನ ಮಗ ಶಿವರಾಮಯ್ಯ	18—7—93	19—7—93	31 ರೂಪಾಯಿನ ಕ್ರಯಪತ್ರ
		ನಂ. 115	ಚಾಮರಾಜನಗರದ ತಾಲ್ಲೂಕು ಹೊಸ್ಗಮಾಡಿ ಪುರದಲ್ಲಿರುವ ಕಿರಗಾಣಿಗರ ಶಂಕರಶೆಟ್ಟಿ ಮಗ ಶಿದ್ದಲಿಂಗಶೆಟ್ಟಿ	ಚಾಮರಾಜನಗರದ ತಾಲ್ಲೂಕು ದೇಶವಳ್ಳಿಯಲಿರುವ ಮಳಹಳ್ಳಿ ಖಾಸಿಂಸಾಬಿ ಮಗ ಇಮಾಮ್‌ಸಾಬಿ	28—7—93	29—7—93	200 ರೂಪಾಯಿನ ಭೋಗ್ಯಪತ್ರ

ನಂಬರು.	ಆಫೀಸಿನ ಹೆಸರು.	ಬುಕ್ಕು ನಂಬರ್.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ಅಡಿರ್ಸ.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರಿರ್ಸ.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಿದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
6	ಚಾಮರಾಜನಗರ ಸಬ್ ರಿಜಿಸ್ಟ್ರಿ ಆಫೀಸ್	1ನೇ ನಂಬರ್ ಬುಕ್ಕು ನಂ. 121	ಚಾಮರಾಜನಗರದ ತಾಲ್ಲೂಕು ಹಗ್ಗವಾಡಿ ಪುರದಲ್ಲಿರುವ ಕಿರಗಾಣಿಗರ ಶಂಕರಶೆಟ್ಟಿ ಮಗ ಸಿದ್ದಲಿಂಗಶೆಟ್ಟಿ	ಚಾಮರಾಜನಗರದ ತಾಲ್ಲೂಕು ದೇಶವಳ್ಳಿಲ್ಲಿರುವ ಮಳಹಳ್ಳಿ ಖಾಸಿಂಸಾಬಿ ಮಗ ಯಿಮಾಮುಸಾಬಿ	29—7—93	31—7—93	200 ರೂಪಾಯಿನ ಭೋಗ್ಯಪತ್ರ
		ನಂ. 358	ಚಾಮರಾಜನಗರದ ತಾಲ್ಲೂಕು ಸರಗೂರು ದಾಖಲೆ ಪುಟ್ಟನಂಜನಪುರದಲ್ಲಿರುವ ಶಿವಾಚಾರದ ಬೊಕಳಿ ಮಾದಯ್ಯನ ಮಗ ಹುಚ್ಚಯ್ಯ	ಚಾಮರಾಜನಗರದ ತಾಲ್ಲೂಕು ಸರಗೂರು ಗ್ರಾಮದಲ್ಲಿರುವ ಶ್ರೀನಿವಾಸಯ್ಯಂಗಾರ್ರ ಹೆಂಡತಿ ಗರುಡಮ್ಮ	3—10—93	4—10—93	100 ರೂಪಾಯಿನ ಆಧಾರಪತ್ರ
7	ಶ್ರೀರಂಗಪಟ್ಟಣ ಸಬ್ ರಿಜಿಸ್ಟ್ರಿ ಆಫೀಸ್	1ನೇ ನಂಬರ್ ಬುಕ್ಕು ನಂ. 1017	ಶ್ರೀರಂಗಪಟ್ಟಣ ತಾಲ್ಲೂಕು ಬಳಗುಳದ ಹೋಬಳಿ ಹೊಸಹಳ್ಳಿಯಲ್ಲಿರುವ ಪಾಂಚಾಲದ ಜಾತಿ ಪಮಾಡಾಚಾರಿ ಮಗ ಚನ್ನಾಚಾರಿ	ಸದರೀ ಗ್ರಾಮದಲ್ಲಿರುವ ದ್ಯಾವೇಗವುಡನ ಮಗ ದ್ಯಾವೇಗವುಡ	30—3—93	31—3—93	178-8-0 ರೂಪಾಯಿನ ಕ್ರಯಪತ್ರ
		ನಂ. 1296	ಶ್ರೀರಂಗಪಟ್ಟಣ ತಾಲ್ಲೂಕು ಹರವು ಹೋಬಳಿ ಜಾಗಚೆಟ್ಟಿಹಳ್ಳಿಯಲ್ಲಿ ಇರುವ ಮಲ್ಲಪ್ಪಯ್ಯನ ಮಗ ಚನ್ನಪ್ಪಯ್ಯ ಸದರೀ ತಾಲ್ಲೂಕ್ ಮಂಡಿಚೆಟ್ಟಹಳ್ಳಿಯಲ್ಲಿರುವ ಮಡಿವಾಳರ ಗಿರಿಯನ ಮಗ ದಾಸ	ಮೈಸೂರು ಕೃಷ್ಣರಾಜ ಮೊಹಲಾದಲ್ಲಿರುವ ಲೇಟ್ ಹುಜೂರ್ ಮೋತೀಖಾನೆ ಗುಮಾಸ್ತೆ ಕಪನೀಪತಯ್ಯನ ಮಗ ಬುಕಸೆಲ್ಲರ್ ಸುಬ್ಬರಾವ್	30—5—93	30—5—93	100 ರೂಪಾಯಿನ ಕ್ರಯಪತ್ರ
		ನಂ. 120	ಶ್ರೀರಂಗಪಟ್ಟಣ ತಾಲ್ಲೂಕು ಅಲ್ಲಾಪಟ್ಟಣ ಗ್ರಾಮದಲ್ಲಿರುವ ಹೊಂಬಾಳೇಮಗ ಕಾಳೇಗವುಡ	ಸದರೀ ಗ್ರಾಮದಲ್ಲಿರುವ ಯಡಗೈ ಜವರನ ಮಗ ದ್ಯಾವ	7—8—93	9—8—93	300 ರೂಪಾಯಿನ ಕ್ರಯಪತ್ರ
		ನಂ. 220	ಗಂಜಾಂನಲ್ಲಿರುವ ಸೈಯದ್ ಖುದಬುದ್ದೀನ್ಷಾಖಾದ್ರಿ ಮಗ ಸೈಯದ್ ಹೈದರ್ ಷಾಖಾದ್ರಿ ಪುರಫ್ ಅಪ್ಪಲ್ಯಾಷಾಖಾದಿರಿ	ಗಂಜಾಂ ಮೇಸ್ತ್ರಿ ಸುಬ್ಬರಾಯಾಚಾರಿ ಮಗ ನಂಜಪ್ಪಾಚಾರಿ	16—9—93	18—9—93	8 ರೂಪಾಯಿನ ಕ್ರಯಪತ್ರ
		ನಂ. 224	ಶ್ರೀರಂಗಪಟ್ಟಣ ತಾಲ್ಲೂಕು ದೊಡ್ಡೇಗವುಡನ ಕೊಪ್ಪಲಲ್ಲಿರುವ ದೊಡ್ಡೇಗವುಡನ ಮಗ ದೊಡ್ಡೇಗವುಡ, ಕಾಮಾಟಿ ಮರಿಯಪ್ಪನ ಮಗ ದೊಡ್ಡ ಚನ್ನಪ್ಪ	ಮೈಸೂರು ಕೆಂಪನಂಜಾಂಬಾ ಅಗ್ರಹಾರದಲ್ಲಿರುವ ತಿರುಮಲಾಚಾರ್ ಮಗ ಸರಗೂರು ತಿರುನಾರಣಯ್ಯಂಗಾರ್	18—9—93	19—9—93	ಗುತ್ತಿಗೇ ಕರಾರ್
		ನಂ. 423	ಶ್ರೀರಂಗಪಟ್ಟಣ ತಾಲ್ಲೂಕು ಶಟ್ಟಹಳ್ಳಿ ಹೋಬಳಿ ಮಳ್ಳಾಗಾಲದ ಸಿದ್ದೇಗವುಡನ ಮಗ ಕೃಷ್ಣೇಗವುಡ	ಗಂಜಾಂನಲ್ಲಿರುವ ರಂಗಂಣ ಪುರಫ್ ಹೊಟ್ಟೆ ರಂಗಂಣನ ಮಗ ತಿಪ್ಪಯ್ಯ	1—12—93	2—12—93	63 ರೂಪಾಯಿನ ಕ್ರಯಪತ್ರ
		2ನೇ ನಂಬರು ಬುಕ್ಕು ನಂ. 1	ಚಾಮರಾಜನಗರದಲ್ಲಿರುವ ಬಳಗುಳದ ಮಾಜಿ ಶಾನುಭೋಗ ಶ್ರೀನಿವಾಸಯ್ಯಂಗಾರ್ರ ಮಗಳು ರಂಗನಾಯಕಮ್ಮ	ಶ್ರೀರಂಗಪಟ್ಟಣ ತಾಲ್ಲೂಕು ಕರೇಕುರಾ ಗ್ರಾಮದಲ್ಲಿರುವ ಚೊಟ್ಟಬೋರೇಗವುಡನ ಸಿದ್ದೇಗವುಡನ ಮಗ ರಾಮೇಗವುಡ.	2—6—93	5—10—93	ಗುತ್ತಿಗೇ ಕರಾರ್

ನಂಬರು.	ಆಫೀಸು ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರದು ಕೊಟ್ಟವರಹೆಸರು ಮತ್ತು ಅಡಿರ್ಷ.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡಿರ್ಷ.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಸ್ಟರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಾಭಾವ.
8	ಕೃಷ್ಣರಾಜಪೇಟೆ ಸಬ್ ರಿಜಿಸ್ಟ್ರಿ ಆಫೀಸು.	1ನೇ ನಂಬರು ಬುಕ್ಕು ನಂ. 545	ಸಂತೇಬಾಚಹಳ್ಳಿ ಹೆಬ್ಬಾರ ನಂಜಪ್ಪನ ಮಗ ನಂಜುಂಡಯ್ಯ	ಸಂತೇಬಾಚಹಳ್ಳಿಯಲ್ಲಿರುವ ರಾಮಯ್ಯನ ಮಗ ನಂಜಪ್ಪ	30—12—93	30—12—93	100 ರೂಪಾಯಿನ ಕ್ರಯಪತ್ರ
		ನಂ. 733	ಕಿಕ್ಕೇರೀ ಕಸಬಾದಲ್ಲಿರುವ ಬಿಳೀಮಗ್ಗದ ಹೊಸಮನೇ ಚಿಕ್ಕಣ್ಣಶೆಟ್ಟಿ ಮಗ ಹೊಸಮನೆ ಯಾಲಕ್ಕಿ ಶೆಟ್ಟಿ	ಕಿಕ್ಕೇರೀ ಕಸಬೇಲಿರುವ ಬಿಳೀ ಮಗ್ಗದ ಹೊಸಮನೆ ಚಿಕ್ಕಣ್ಣಶೆಟ್ಟಿ ಮಗ ವೆಂಕಟಶೆಟ್ಟಿ	28—1—93	30—1—93	500 ರೂಪಾಯಿನ ಆಧಾರಪತ್ರ
		ನಂ. 942	ಕನ್ನಂಬಾಡೀಲಿರುವ ಗೋಪಾಲಯ್ಯನ ಮಗ ಗೋಪಾಲಕೃಷ್ಣಯ್ಯ	ಕನ್ನಂಬಾಡೀಲಿರುವ ಯತ್ತಿನಹಟ್ಟಿ ವೆಂಕಟೇಗವ್ಡನ ಮಗ್ಗ ಗವುರ	17—4—93	18—4—93	80 ರೂಪಾಯಿನ ಕ್ರಯಪತ್ರ
		ನಂ. 944	ಡಿಟೋ	ಕನ್ನಂಬಾಡೀಲಿರುವ ಶಿವನಂಜೇಗವ್ಡನ ಮಗ ನಂಜಪ್ಪ ವುರಫ್ ತಮ್ಮಯ್ಯ	17—4—93	18—4—93	98 ರೂಪಾಯಿನ ಕ್ರಯಪತ್ರ
		ನಂ. 388	ದೊಡ್ಡಯಾಚೇನಹಳ್ಳಿ ಗ್ರಾಮದಲ್ಲಿರುವ ಪಾಂಚಾಳದ ಜಾತಿ ಚನ್ನಾಚಾರಿ ಮಗ ಪಟ್ಟಾಚಾರಿ	ದೊಡ್ಡಯಾಚೇನಹಳ್ಳೀಲಿರುವ ಪಾಂಚಾಳದ ಜಾತಿ ಕದಗೆರೆ ನಿಂಗಾಚಾರೀ ಮಗ ಚಿಕ್ಕಾಚಾರಿ	1—11—93	6—11—93	25 ರೂಪಾಯಿನ ಕ್ರಯಪತ್ರ
		ನಂ. 517	ಸಾಯಪ್ಪನಹಳ್ಳಿಯಲ್ಲಿರುವ ಮರಿಗವ್ಡನ ಹಿರಿ ಹೆಂಡತೀ ಮಗ ಚಿಕ್ಕೇಗವ್ಡ	ಸಾಯಪ್ಪನಹಳ್ಳೀಲಿರುವ ಕುರುಬರ ಜಾತಿ ಮರಿಗವ್ಡನ ಹೆಂಡತಿ ಪುಟ್ಟಮ್ಮ ಇವಳ ಮಕ್ಕಳು ನಂಜ, ಕವರ, ದೊಡ್ಡ ಶಿವನಂಜ	20—12—93	21—12—93	700 ರೂಪಾಯಿನ ವಿಭಾಗ ಪತ್ರ
9	ಮಳವಳ್ಳಿ ಸಬ್ ರಿಜಿಸ್ಟ್ರಿ ಆಫೀಸು.	1ನೇ ನಂಬರು ಬುಕ್ಕು ನಂ. 16	ಮಳವಳ್ಳಿ ತಾಲ್ಲೂಕು ಪೂರೀಗಾಲಿ ಹೋಬಳಿ ಮರಳಹಳ್ಳಿ ದಾಖಲೆ ಕೃಷ್ಣಯ್ಯಂಗಾರ್ರ ಹುಂಡಿಯಲ್ಲಿರುವ ವೆಂಕಪ್ಪ, ನರಸಿಂಹಾಚಾರ್ರ ಮಗ ಶ್ರೀನಿವಾಸಯ್ಯಂಗಾರ್	ಕಾನಕಾನಹಳ್ಳಿಯಲ್ಲಿರುವ ದೇಸಿಕಾಚಾರ್ರ ಮಗ ವರದಾಚಾರ್ 1 ಅನಂತಾಚಾರ್ರ ಮಗ ವೀರರಾಘವಾಚಾರ್	8—7—93	15—7—93	100 ರೂಪಾಯಿನ ಕ್ರಯಪತ್ರ
		ನಂ. 34	ತಿರುಮಕೂಡ್ಲು ನರಸೀಪುರದ ತಾಲ್ಲೂಕು ತಲಕಾಡು ಹೋಬಳಿ ಕುರಿಬೋಳನ ಹುಂಡಿಯಲ್ಲಿರುವ ಬೆಸ್ತರ ಹೊಂಬಾಳೇ ಹೆಂಡತಿ ಮಾರೆ	ಮಳವಳ್ಳಿ ತಾಲ್ಲೂಕು ಪೆಂಡರವಾಡೀಲಿರುವ ಚಿಕ್ಕ ನಂಜರಾಜೇ ಅರಸ್	13—5—93	20—7—93	25 ರೂಪಾಯಿನ ಕ್ರಯಪತ್ರ
		ನಂ. 147	ಮಳವಳ್ಳಿ ತಾಲ್ಲೂಕು ಮರಳಿಹಳ್ಳಿ ಕಣ್ಣಾರಜಾತಿ ಮುಂದಾಗನ ಮಗ ಮುಂದಾಗ	ಪಳಕಪಾಡೀಲಿರುವ ಕಂಸಾರಜಾತಿ ರಾಚನ ಮಗ ಮಲ್ಲದಾಸ	11—9—93	15—9—93	50 ರೂಪಾಯಿನ ಆಧಾರಪತ್ರ
		2ನೇ ನಂಬರು ಬುಕ್ಕು ನಂ. 2	ಮಳವಳ್ಳಿ ತಾಲ್ಲೂಕು ಅಂಣೂರಲ್ಲಿರುವ ಈಡಿಗರ ರಾಚೇಗವುಡನ ಮಗ ದೊಳೇಗವುಡ	ಅಂಣೂರಲ್ಲಿರುವ ದ್ಯಾವೇಗವುಡನ ಮಗ ದೊಡ್ಡಪುಟ್ಟೇಗವುಡ	21—3—93	12—8—93	120 ರೂಪಾಯಿನ ಕ್ರಯಪತ್ರ

120

ನಂಬರ್.	ಆಫೀಸ್ ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಿದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
10	ಹುಣಸೂರು ಸಬ್ ರಿಜಿಸ್ಟ್ರಿ ಆಫೀಸ್	1ನೇ. ನಂಬರು ಬುಕ್ಕು ನಂ. 567	ಹುಣಸೂರು ತಾಲ್ಲೂಕು ಹೆಗ್ಗಂದೂರು ಮಾಗಣಿ ಕಿರಂಗೂರಲ್ಲಿರುವ ಪಕ್ಕಲಿಗರ ಜಾತಿ ಕಾಳೇಗವುಡನ ಮಗ ಜಿರಾಯಿತ್, ಜೀವನದ ಈರೇಗವುಡ	ಹುಣಸೂರು ತಾಲ್ಲೂಕು ಹೆಗಂದೂರು ಮಾಗಣಿ ಕಿರಂಗೂರಿನಲ್ಲಿರುವ ಪಕ್ಕಲಿಗರ ಸುಬ್ಬಮ್ಮನ ಮಗ ಜಿರಾಯಿತ ಜೀವನದ ಬೋರಲಿಂಗೇಗವುಡ	8—4—93	9—4—93	99 ರೂಪಾಯಿನ ಕ್ರಯಪತ್ರ
		ನಂ. 25	ಹುಣಸೂರಲ್ಲಿರುವ ಕರ್ನಾಟಕ ಮಾಜಿ ಕಪನಯ್ಯನ ಮಗ ಜಿರಾಯಿತ್ ಕಸಬಿನಿಂದ ಜೀವಿಸುವ ಲಿಂಗ	ಹುಣಸೂರು ತಾಲ್ಲೂಕು ಕಿರಜಾಜಿ ಹೋಬಳಿ ದೊಡ್ಡ ಹುಣಸೂರಿನಲ್ಲಿರುವ ಪಾಂಚಾಳದ ಜಾತಿ ರಾಮಸ್ವಾಮಿ ಆಚಾರ್ರ ಮಗ ಕುಳ್ಳಾ ಮೇಸ್ತ್ರಿ	12—7—93	13—7—93	300 ರೂಪಾಯಿನ ಕ್ರಯಪತ್ರ
		ನಂ. 40	ಹುಣಸೂರು ತಾಲ್ಲೂಕು ದೊಡ್ಡ ಹುಣಸೂರಿನಲ್ಲಿರುವ ದರ್ಜೀಜಾತಿ ರಾಜಪ್ಪನ ಮಗ ಜಿರಾಯಿತ್ ಜೀವನದ ನಂಜಪ್ಪ	ಹುಣಸೂರು ತಾಲ್ಲೂಕು ದೊಡ್ಡ ಹುಣಸೂರಿನಲ್ಲಿರುವ ದರ್ಜಿ ಜಾತಿ ಪುಟ್ಟಸ್ವಾಮಿ ಹೆಂಡತಿ ಜವಿಾನಿನಿಂದ ಜೀವಿಸುವ ಪುಟ್ಟಬಾಯಮ್ಮ	19—7—93	20—7—93	100 ರೂಪಾಯಿನ ಕ್ರಯಪತ್ರ
		ನಂ. 150	ಹುಣಸೂರು ತಾಲ್ಲೂಕು ಗಾವಡಗೆರೇ ಹೋಬಳಿ ಹೆಜೊಡಲಲ್ಲಿಯಿರುವ ಪಕ್ಕಲಿಗರ ಜವರೇಗವುಡನ ಮಗ ಪಟೇಲ್ ಮರಿಗವುಡ	ಹುಣಸೂರು ತಾಲ್ಲೂಕು ಗಾವಡಗೆರೆ ಹೋಬಳಿ ಉಂಡ್ವಾಡಿಯಲ್ಲಿರುವ ಸಂಗೀತಗಾರ ರಂಗಪ್ಪನವರ ಮಕ್ಕಳು ವೈಷ್ಣವ ಬ್ರಾಹ್ಮಣ ವೆಂಕಟರಾಮಣಯ್ಯ	11—9—93	12—9—93	100 ರೂಪಾಯಿನ ಕ್ರಯಪತ್ರ
		ನಂ. 224	ಕೊಡಗು ವೀರರಾಜೇಂದ್ರಪೇಟೆಲಿರುವ ರಹಿಮ್ಖಾನ್‌ಸಾಬರ ಮಗ ವ್ಯಾಪಾರದ ಜೀವನದ ಇಬ್ರಾಹಿಂಸಾಬಿ	ಹುಣಸೂರು ತಾಲ್ಲೂಕು ಪಿರ್ಯಾಪಟ್ಟಣದ ಹೋಬಳಿ ಸತ್ಯಗಾಲದಲ್ಲಿರುವ ಮುಸಲ್ಮಾನರ ಮುಸ್ತಫ್‌ಸಾಬರ ಮಗ ಜಿರಾಯಿತನಿಂದ ಜೀವಿಸುವ ಉಮ್ಮರಸಾಬಿ	3—11—93	4—11—93	20 ರೂಪಾಯಿನ ಕ್ರಯಪತ್ರ
11	ಬೆಂಕ್ಳೆ ಸಬ್ ರಿಜಿಸ್ಟ್ರಿ ಆಫೀಸ್	1ನೇ ನಂಬರು ಬುಕ್ಕು ನಂಬರು 199	ಹಳೇಕೆರೆ ಗ್ರಾಮದ ಕಬ್ಬನಮಾಯಿಗವುಡನ ಮಗ ಚಿಕ್ಕೇಗವುಡ	ಹಳೇಕೆರೆ ಪಟೇಲ್ ಲಿಂಗೇಗವುಡನ ಮಗ ಚನ್ನೇಗವುಡ	20—4—92	22—8—92	66 ರೂಪಾಯಿನ ಯಿಳಿಭೋಗ್ಯಪತ್ರ
		ನಂಬರು 239	ಹೊನಗೋನಹಳ್ಳಿ ಯಿಮ್ಮೆ ಚಿಕ್ಕನ ಕಾಳೆಗವುಡನ ಮಗ ಚವುಡೇಗವುಡ	ಸದರೀ ಹೊನಗೋನಹಳ್ಳಿ ಗ್ರಾಮದ ಚಿಕ್ಕಮ್ಮನ ಮಗ ಚವುಡೇಗವುಡ	6—9—92	9—9—92	62 ರೂಪಾಯಿನ ಕ್ರಯಪತ್ರ
		ನಂಬರು 307	ಕವುಡ್ಲೆ ಸುಬ್ಬಾವಧಾನಿಗಳ ಮಗ ಶ್ರೀಕಂಠಯ್ಯ	ಕವುಡ್ಲೆ ದಾಲೆ ಜೆಸ್ತರ ಕೇವ್ರಲಿಂಗನಮಗ ಲಿಂಗಾ	22—10—92	22—10—92	40 ರೂಪಾಯಿನ ಕ್ರಯಪತ್ರ
		4ನೇ ನಂಬರು ಬುಕ್ಕು ನಂ. 1	ದೇಶಹಳ್ಳಿ ದೊಡ್ಡ ಚನ್ನಯ್ಯನ ಮಗ ಮುದ್ದೇಗವುಡ	ನಾಗಮಂಗಲದ ತಾಲ್ಲೂಕು ಮೈಲಾರಪಟ್ಟಣದ ನಿಂಗೇಗವುಡನ ಮಗ ಚನ್ನೇಗವುಡ	15—3—93	15—7—93	ಜೀವನಾಂಶದ ಕರಾರು
		ನಂಬರು 20	ಪಟೇಲ್‌ಲಿಂಗೇಗವುಡನ ಮಗ ಚನ್ನೇಗವುಡ ಹಳೇಕೆರೆ ಗ್ರಾಮ	ಸದರೀ ಪಟೇಲ ಚನ್ನೇಗವುಡ—ಹಳೇಕೆರೆ ಗ್ರಾಮ	30—3—93	10—7—93	ಗುತ್ತಿಗೇಕರಾರು

ನಂಬರು	ಸಬ್ ಆಫೀಸು	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡಿರ್ಷ.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡಿರ್ಷ.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಸ್ಟ್ರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
11	ಗುಂಡ್ಲುಪೇಟೆ ಸಬ್ ರಿಜಿಸ್ಟ್ರಿ	4ನೇ ನಂಬರು ಬುಕ್ಕು ನಂಬರಿ 36	ಹೊನ್ನೆಮಡು ತಿಂಗಾಚಾರೀಮಗ ಚನ್ನಾಚಾರಿ	ಅರಕನಗೆರೇ ಗ್ರಾಮದ ನರಸೇಗವುಡನ ಮಗ ಹುಚ್ಚೇಗವುಡ	21—7—93	22—7—93	ಗುತ್ತಿಗೆ ಕರಾರ್
		ನಂಬರು 214	ಕಗ್ಗಹಳ್ಳಿ ಗ್ರಾಮದ ಹಳಗಿ ತಿದ್ದೇಗವುಡನ ಮಗ ಪುಟ್ಟೇಗವುಡ.	ಸದರೀ ಪುಟ್ಟೇಗವುಡ	2—11—93	6—11—93	100 ರೂಪಾಯಿನ ಕ್ರಯಪತ್ರ
12	ನಾಗಮಂಗಲದ ಸಬ್ ರಿಜಿಸ್ಟ್ರಿ	1ನೇ ನಂಬರು ಬುಕ್ಕು ನಂಬರು 35	ಲಕ್ಕಣಗವುಡನ ಮಗ ನಂಜುಂಡ, ತಿದ್ದಾಪುರದಲ್ಲಿವಾಸ	ಕುರಡಿಕೇಗವುಡನ ಮಗ ನಂಜೇಗವುಡ ತಿದ್ದಾಪುರ ಗ್ರಾಮದಲ್ಲಿವಾಸ	1—8—93	7—8—93	20 ರೂಪಾಯಿನ ಕ್ರಯ ಪತ್ರ
13	ಗುಂಡ್ಲುಪೇಟೆ ಸಬ್ ರಿಜಿಸ್ಟ್ರಿ	1ನೇ ನಂಬರು ಬುಕ್ಕು ನಂಬರು 99	ಬೊಮ್ಮಾಪುರದ ಗ್ರಾಮದಲ್ಲಿರುವ ಶಿವಾಚಾರದ ಜಾತಿ ಜಿರಾಯಿತ'ನಿಂದ ಜೀವಿಸುವ ಲಿಂಗಯ್ಯ	ಬಾಚಹಳ್ಳೀ ಗ್ರಾಮದಲ್ಲಿಯಿರುವ ವೀರಶೈವ ಮಾದಪ್ಪನ ಮಗ ಜಿರಾಯಿತ'ನಿಂದ ಜೀವಿಸುವ ಮಲ್ಲಣ್ಣ ಶಾಸ್ತ್ರಿ	13—12—94	13—12—94	45 ರೂಪಾಯಿನ ಕ್ರಯಪತ್ರ

ಬಿ. ಕೆ. ವೆಂಕಟವರದಯ್ಯಂಗಾರ್, ಡಿ|| ರಿಜಸ್ಟ್ರಾರ್.

ಚಿತ್ರದುರ್ಗದ ಡಿಸ್ಟ್ರಿಕ್ಟು.

ಇಸಿ ಹಾರ್ನಾಮೆ.

ತಾರೀಖು 10ನೇ ಫೆಬ್ರುವರಿ 1896.

ಇದರಿಂದ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿ ಇರುವ ರಿಜಸ್ಟರಾದ ದಸ್ತೈವಜುಗಳು ಯರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ಸಬ್ ರಿಜಿಸ್ಟ್ರೀ ಆಫಿಸಿನಲ್ಲಿ ವಾರಸ್‌ದಾರು ಹಾಜರಾಗಿ ವಾಪಸ್ ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯತ್ತು ವಂದು ತಿಂಗಳ ವಳಗಾಗಿ ಸದರೀ ತಂಸೂಕು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ತಂಸೂಕುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ್ ರಿಜಿಸ್ಟ್ರೀ ಆಫಿಸಿನಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸ್ ಪಡಿಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್‌ಷನ್ ಮೇರೆಗೆ ಸದರೀ ದಸ್ತೈವಜುಗಳು ನಾಶ ಪಡಿಸಲ್ಪಡುತ್ತೆ.

ಸಬ್ ರಿಜಿಸ್ಟ್ರೀ ಆಫಿಸ್ ಹೆಸರು.	ಬುಕ್ಕು ಮತ್ತು ರಿಜಸ್ಟರ ನಂಬರು.	ಕಕ್ಷಿಗಾರ್ರ ಹೆಸರು ವಗ್ಯೆರೆ.		ದಸ್ತೈವಜು ತಾರೀಖು.	ರಿಜಸ್ಟ್ರಾದ ತಾರೀಖು.	ದಸ್ತೈವಜಿನ ಸ್ವಭಾವ.
		ತಂಸೂಕು ಬರದುಕೊಟ್ಟವ.	ತಂಸೂಕು ಬರಸಿಕೊಂಡವ.			
ಹರಿಹರ	1ನೇ ಬುಕ್ಕು ನಂ. 99 1893—94	ಕೊಡಿಯಾಲದ ಗಂಗವ್ವನ ಮಗ ನೀಲ	ನಾಡಿಗ ಶೀನಪ್ಪನ ಮಗ ಗುಡ್ಡಪ್ಪ ಮೈನರ್ ಗಾರ್ಡಿಯನ್ ಗುರಾಜಪ್ಪ	1—12–93	2—12–93	ಸಾಲಿಯಾನಾ 12 ರೂಪಾಯಿನಂತೆ 3 ವರುಷದ ವರಿಗೆ ಕೊಡುವದಾಗಿ ಗೇಣೀ ಕರಾರು.
	ಡಿಟೋ ನಂ. 108 1893—94	ಸಾರಥಿ ಗ್ರಾಮದಲ್ಲಿ ಇರುವ ಪೂಜಾರಿ ಕರಿಯಪ್ಪನ ಮಗ ಪುಜಪ್ಪ	ಸಾರಥಿ ಗ್ರಾಮದ ಕಬ್ಬ್ಯರ್ರ ಗಾಜಪ್ಪನ ಮಗ ನೀಲಪ್ಪ	26–12-93	26–12-93	20 ರೂಪಾಯಿನ ಸ್ಥಿರಸ್ವತ್ತಿನ ಕ್ರಯಪತ್ರ.

ಎಂ. ಎಸ್. ನಾರಾಯಣರಾವ್, ಡಿ|| ರಿಜಸ್ಟ್ರಾರ್.

ನಗರ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1895—96ನೇ ಇಸವಿ ಅರ್ಜೀ ನಂಬರ 235.

ಮೃತಪಟ್ಟ ಮೋತೀರಾಂ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‍ರು ಚಿತ್ರದುರ್ಗದಲ್ಲಿರುವ ವಾಲಾಜಿ ಮಗ ಕೃಷ್ಣಾಜಿ, ಮೃತಪಟ್ಟ ಸದರೀ ಮೋತೀರಾಂ ಎಂಬವರಿಗೆ ಅವಿಭಕ್ತ ಸಹೋದರನು ಆಗಬೇಕೆಂಬ ಹಕ್ಕು ದಾರಿ ಮೇಲೆ ಚಿತ್ರದುರ್ಗ ಸ್ಥಳದ ವಾಲಾಜಿ ಮಗ ಕೃಷ್ಣಾಜಿ ಎಂಬವರು, ಚಿತ್ರದುರ್ಗದ ವಾಸಸ್ಥರಾಗಿ ಮೃತಪಟ್ಟ ಮೋತೀರಾಂ ಎಂಬವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 5000 ರೂಪಾಯಿ ಸಾಲವನ್ನು ವಸೂಲ್‌ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಕೃಷ್ಣಾಜಿಯೆಂಬವರ ಅರ್ಜಿಯನ್ನು ಸರ್ 1896ನೇ ಇಸವಿ ಮಾರ್ಚಿ ತಿಂಗಳ ತಾರೀಖು 13ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೋತೀರಾಂ ಎಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1895–96ನೇ ಇಸವಿ ಅರ್ಜೀ ನಂಬರ 236.

ಮೃತಪಟ್ಟ ದೇವಪ್ಪನಾಯಕರ ಮಗ ಚನ್ನಬಸಪ್ಪ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‍ರು ಸಾಗರ ತಾಲ್ಲೂಕು ಸೂತಾಳು ಮಾಗಣಿ ಅವಣೆಕೊಪ್ಪ ಗ್ರಾಮದಲ್ಲಿರುವ ಶಿವಬಸಪ್ಪನಾಯಕನ ಮಗ ಚನ್ನಬಸಪ್ಪ, ಮೃತಪಟ್ಟ ಸದರೀ ಚನ್ನಬಸಪ್ಪ ಎಂಬವರಿಗೆ ದಾಯಾದಿ ಆಗಬೇಕೆಂಬ ಹಕ್ಕುದಾರಿ ಮೇಲೆ ಅವಣೆಕೊಪ್ಪ ಸ್ಥಳದ ಚನ್ನಬಸಪ್ಪ ಎಂಬವರು, ಅವಣೆಕೊಪ್ಪ ವಾಸಸ್ಥರಾಗಿ ಮೃತಪಟ್ಟ ಚನ್ನಬಸಪ್ಪ ಎಂಬವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಚನ್ನಬಸಪ್ಪ ಎಂಬವರ ಅರ್ಜಿಯನ್ನು ಸರ್ 1896ನೇ ಇಸವಿ ಮಾರ್ಚಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಬಸಪ್ಪ ಎಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1895–96ನೇ ಇಸವಿ ಅರ್ಜೀ ನಂಬರ 237.

ಮೃತಪಟ್ಟ ಶಟ್ಟರ ಅಜ್ಜಪ್ಪ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‍ರು ಕರಿವೀರಪ್ಪ ಮೈನರ್, ಗಾರ್ಡಿಯನ್ ಮಲತಾಯಿ ಬಸವ್ವ ಮತ್ತು ಶಟ್ಟರ ವೀರಪ್ಪ ಜಗಲೂರು ತಾಲ್ಲೂಕು ಬಿಳಚೋಡು ವಾಸಸ್ಥರು, ಮೃತಪಟ್ಟ ಸದರೀ ಶಟ್ಟರ ಅಜ್ಜಪ್ಪ ಎಂಬವರಿಗೆ ಮಗ ಆಗಬೇಕೆಂಬ ಹಕ್ಕುದಾರಿಮೇಲೆ ಬಿಳಚೋಡು ಸ್ಥಳದ ಕರಿವೀರಪ್ಪ ಮೈನರ್, ಗಾರ್ಡಿಯನ್ ಮಲತಾಯಿ ಬಸವ್ವ ಮತ್ತು ಶಟ್ಟರ ವೀರಪ್ಪ ಎಂಬವರು, ಬಿಳಚೋಡು ವಾಸಸ್ಥರಾಗಿ ಮೃತಪಟ್ಟ ಶಟ್ಟರ ಅಜ್ಜಪ್ಪ ಎಂಬವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್‌ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕರಿವೀರಪ್ಪ ಮೈನರ್, ಗಾರ್ಡಿಯನ್ ಮಲತಾಯಿ ಬಸವ್ವ ಮತ್ತು ಶಟ್ಟರ ವೀರಪ್ಪ ಎಂಬವರ ಅರ್ಜಿಯನ್ನು ಸರ್ 1896ನೇ ಇಸವಿ ಮಾರ್ಚಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಟ್ಟರ ಅಜ್ಜಪ್ಪ ಎಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 238.

ಅರ್ಜೀದಾರ್ ವೀರಭದ್ರಪ್ಪ ಬಿನ್ ದತ್ತು ತಂದೆ ದೊಡ್ಡರುದ್ರಪ್ಪ, ಕುಂಸಿ ಸಬ್ ತಾಲ್ಲೂಕು ಆಯನೂರು ಮಾಗಣಿ ಬಿಯುವಶೇರ ಕೊಪ್ಪದ ವಾಸಿ—

ಬುದ್ಧಿ ಸ್ವಾತಂತ್ರ್ಯ ವಿಲ್ಲದ ಬಿಯುವಶೇರ ಕೊಪ್ಪದ ಸ್ಥಳದ ಚನ್ನವೀರಪ್ಪ ಎಂಬವರ ಆಸ್ತೀ ವಿಷಯದಲ್ಲಿ—

ಸದರೀ ಬುದ್ಧಿ ಸ್ವಾತಂತ್ರ್ಯವಿಲ್ಲದವರಾದ ಚನ್ನವೀರಪ್ಪಗೆ ಸಹೋದರನು ಆಗಬೇಕೆಂಬ ಹಕ್ಕಿನ ಮೇಲೆ ಸದರೀ ಬಿಯುವಶೇರ ಕೊಪ್ಪದ ಸ್ಥಳದ ವೀರಭದ್ರಪ್ಪ ಎಂಬವರು, ಸದರೀ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗ್ಯೆ 1896ನೇ ಇಸವಿ ಮಾರ್ಚಿ ತಾರೀಖು 20ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ ಕೊಡಲಾಗಿದೆ. ಇದರಲ್ಲಿ ಸಂಬಂಧವಿದೆ ಎಂಬ ತಮಾಂ ಜನಗಳೂ ಮೇಲ್ಕಂಡ ತಾರೀಖಿನಲ್ಲಿ ಈ ಕೋರ್ಟು ರೂಬರೂ ಹಾಜರಾಗತಕ್ಕದ್ದಿದೆ.

1896ನೇ ಇಸವಿ ಫಿಬ್ರುವರಿ ತಿಂಗಳ 4ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1895—96ನೇ ಇಸವಿ ಅರ್ಜೀ ನಂಬರ 261.

ಮೃತಪಟ್ಟ ಸಂಣಮನೆ ಚನ್ನಬಸಪ್ಪ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‍ರು ದ್ಯಾವಪ್ಪ ಮೈನರ್, ಗಾರ್ಡಿಯನ್ ತಂದೆ ಚನ್ನವೀರಪ್ಪ, ಸಾಗರ ತಾಲ್ಲೂಕು ಸಂಪೆಕ್ಯೈವಾಸಿ, ಮೃತಪಟ್ಟ ಸದರೀ ಸಂಣಮನೆ ಚನ್ನಬಸಪ್ಪ ಎಂಬವರಿಗೆ ಖಾಸಾ ಚಿಕ್ಕಪ್ಪನ ದೋಹಿತ್ರನು ಆಗಬೇಕೆಂಬ ಹಕ್ಕುದಾರಿ ಮೇಲೆ ಸಂಪೆಕ್ಯೆ ಸ್ಥಳದ ದ್ಯಾವಪ್ಪ ಮೈನರ್, ಗಾರ್ಡಿಯನ್ ಚನ್ನವೀರಪ್ಪ ಎಂಬವರು, ಸಾಗರ ತಾಲ್ಲೂಕು ಅವಣೆಕೊಪ್ಪ ವಾಸಸ್ಥರಾಗಿ ಮೃತಪಟ್ಟ ಸಂಣಮನೆ ಚನ್ನಬಸಪ್ಪ ಎಂಬವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ದ್ಯಾವಪ್ಪ ಮೈನರ್, ಗಾರ್ಡಿಯನ್ ಚನ್ನವೀರಪ್ಪನ ಅರ್ಜಿಯನ್ನು ಸರ್ 1896ನೇ ಇಸವಿ ಮಾರ್ಚಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಂಣಮನೆ ಚನ್ನಬಸಪ್ಪ ಎಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1896ನೇ ಇಸವಿ ಫಿಬ್ರುವರಿ ತಿಂಗಳ 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರ ಗೆಜೆಟ್ ಚಂದಾ ದರ ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವಗೈರೆ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ		ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದ್ಧಾ 12 ತಿಂಗಳಿಗೆ	7	0	3	8
ಚಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು.	
ಚಾಲತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮರ್ಕುಂ 24205—6—ಜಿ. 6200ನೇ ನಂಬರಿ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಗೆ ನೋಟಿಸಗಳು:—

	ರೂ.	ಆ.
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ)	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟ್ಟೋ	1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

		ರೂ.	ಆ.
ಡ್ಯೂಪ್ಲಿಕೇಟ್ ಕಾಫೀ ಪಟ್ಟಿ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫೀಸರುಗಳು ಕೊಡುವ ನೋಟಿಸಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಸಜ್ಜ 1ಕ್ಕೆ	0	8
ಎರಡನೇ ದಫಾ ಡಿಟ್ಟೋ	ಡಿಟ್ಟೋ	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		0	4

ಷರಾ.—ಚಂದಾ ವಗೈರೇ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ವೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗೆಯದ ದರಖಾಸ್ತುಗಳು ಮೈಸೂರು ಗವರ್ನಮೆಂಟ್ ಆಯಾ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದುಗಳು ಇದರಡಿ ರುಜು ಮಾಡಿದವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ವ ಇಸ್ತಿಹಾರ್ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೇವು ಖಾತರ್ ಯಿಲ್ಲ.

ಟಿ. ಟಿ. ಲೆನಾರ್ಡ್,
ಮೈಸೂರ ಗೆಜೆಟ್ ಕಂಪೈಲರ್.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಫ್ರಾಯಿಷ್ ಆದ್ದು [ನಂ. 8.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ॥ 27, ಸನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ ವರ್ಕಸ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷನ ವ ಯಜ್ಯುಕೇಷನ ಇನಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ ಬೋರ್ಡ ಪ್ರಸಿಡೆಂಟರು, ಡಿಸ್ಟ್ರಿಕ್ಟ ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗ್ಯೆರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ ಸರ್ಕಾರದಿಂದ ಮಂಜೂರಾತಿಪಡಿಸಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 8ನೇ ಜನವರಿ 1896.

ನಂ. 6084.—ಫಾ. ಫೈ. 105.—95.—ಡಿಸ್ಟ್ರಿಕ್ಟ ಯಾ ಮನ್ನಾ ಅಲ್ಲದ ಸರ್ಕಾರಿ ಜಂಗಲಿಗಳಿಂದ ಮರ ಮತ್ತು ಇತರ ಫಾರೆಸ್ಟ ಹುಟ್ಟುವಳಿಯನ್ನು ರೈತರು ತೆಗೆದುಕೊಳ್ಳುವ ವಿಷಯದಲ್ಲಿ ಅವರ ಹಕ್ಕುದಾರಿಗಳನ್ನು ಪೂರ್ತಿಯಾಗಿ ವಿವರಿಸಿ, 1878ನೇ ಇಸವಿಯ ಫಾರೆಸ್ಟ ರೂಲ್ಸಿನ 23, 24, 25, ವ 26ನೇ ಸೆಕ್ಷನುಗಳನುಸರಿಸಿ ಉಂಟುಮಾಡಲ್ಪಟ್ಟ ಇದರಡಿ ಕಂಡ ಫಾರೆಸ್ಟು ರೂಲ್ಸಗಳು, ಫಾರೆಸ್ಟು ರೂಲ್ಸಗಳು ತಿದ್ದುಪಾಟಾಗುವ ನಿರೀಕ್ಷಣೆ ಮೇಲೆ, ಶಿವಮೊಗ್ಗಾ ಕಡೂರು ವ ಹಾಸನ ಡಿಸ್ಟ್ರಿಕ್ಟುಗಳಿಗೋಸ್ಕರ ಮೈಸೂರು ಗವರ್ನಮೆಂಟಿನಿಂದ ಮಂಜೂರಾತಿಪಡಿಸಲ್ಪಟ್ಟು ಸರ್ವರ ತಿಳುವಳಿಕೆ ಬಗ್ಯೆ ಫ್ರಾಯಿಷ್ ಮಾಡಲ್ಪಟ್ಟಿರುತ್ತೆ. ಈ ರೂಲ್‌ಸಗಳು ಕಾಫಿ ಪ್ಲಾಂಟರುಗಳಿಗೆ ಅನ್ವಯಿಸುವದಿಲ್ಲವು:—

1. ಈ ರೂಲ್‌ಸಗಳಲ್ಲಿ ರೈತರುಗಳಿಗೆ ಕೊಡಲ್ಪಟ್ಟ ಹಕ್ಕುದಾರಿಗಳು, ಗೊತ್ತಾಗಿ ವಿವರಿಸಲ್ಪಟ್ಟಿರತಕ್ಕಂಥಾ ಗ್ರಾಮ ಫಾರೆಸ್ಟುಗಳ ಸರಹದ್ದುಗಳ ವಳಗೆ ಅವರಿಂದ ಚಲಾಯಿಸಲ್ಪಡತಕ್ಕದ್ದು, ಮತ್ತು ಹಾಂಗೆ ಗ್ರಾಮ ಫಾರೆಸ್ಟುಗಳು ವಿವರಿಸಿ ಗೊತ್ತು ಮಾಡಲ್ಪಡದೆ ಇದ್ದಾಗ ಆ ಬಗ್ಯಾಗಿ ನಿಯಮಿಸಲ್ಪಟ್ಟ ಡಿಸ್ಟ್ರಿಕ್ಟ ಫಾರೆಸ್ಟಿನ ಸರಹದ್ದಿನಲ್ಲಿಯಾಗಲಿ ಅಥವಾ ಅದರ ಒಂದು ಭಾಗದಲ್ಲಾಗಲಿ ಚಲಾಯಿಸಲ್ಪಡತಕ್ಕದ್ದು.

2. ಗ್ರಾಮ ಯಾ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ಈ ರೂಲ್ಸಗಳನುಸರಿಸಿ ಫಾರೆಸ್ಟ್ ಹುಟ್ಟುವಳಿಯಾಗತಕ್ಕಂಥಾ ಮರಗಳು ಅಂದರೆ ದಾಲ್‌ಚಿನ್ನಿ ಅಥವಾ ಯಲಗಾ, ಹುಳಿಹಂಣು, ಅಳಲೇಕಾಯಿ, ಕಾಚು, ಗೇರು, ಅರಿದಾಳ, ಅಂಟುವಾಳ, ಮಡ್ಡಿಧೂಪ, ಮತ್ತು ಹಾಲ್ ಮಡಿವಗೈರೆ ಹುಟ್ಟುವ ಮರಗಳು ಕಡಿಯಲ್ಪಡಕೂಡದು.

ಗ್ರಾಮ ಮತ್ತು ಡಿಸ್ಟ್ರಿಕ್ಟ ಫಾರೆಸ್ಟುಗಳಲ್ಲಿನ ಗಂಧ, ತೇಗ, ಬೀಟೆಯಾನೆ ಕರೀಮರ, ಮಳಲಿ, ಕುವ್ವೆ, ಕಾರಾಚಿ ಮತ್ತು ಜಾಲಾರಿ ಈ ಜಾತಿ ಮರಗಳು ಪೂರ್ತಿಯಾಗಿ ಫಾರೆಸ್ಟ್ ಇಲಾಖೆಯ ಸ್ವಾತಂತ್ರ್ಯದಲ್ಲಿರತಕ್ಕವು. ರೈತರು ಮತ್ತು ವ್ಯಾಪಾರಸ್ಥರು ಸುದಾ ಈ ತರಹೆ ಮರಗಳಿಗೋಸ್ಕರ, ಫಾರೆಸ್ಟ್ ಇಲಾಖೆಯಿಂದ ವಿಧಿಸಲ್ಪಟ್ಟ ಷರತ್ತುಗಳ ಮೇಲೆ ದರಗಳನ್ನು ಪಾವತಿಮಾಡಬೇಕು.

3. "ಅವಲ್ ರಖಮಿನ ವಿಂಗಡಿಸಲ್ಪಟ್ಟ ಮರಗಳು" ಅಂದರೆ ಹಲಸು, ಹೆಬ್ಬಲಸು, ಮತ್ತಿ, ಹೊನ್ನೆ, ನಂದಿ, ಮತ್ತು ಇಪ್ಪೆ.

"ದುಯಂ ರಖಮಿನ ವಿಂಗಡಿಸಲ್ಪಟ್ಟ ಮರಗಳು" ಅಂದರೆ ಹುಲ್ಲೆ, ಜಂಬೀಯಾನೆ ಕಿಲ್ವೆ, ಹುರಗಲು, ಹೆತ್ತಿಗ ಅಥವಾ ಅರಿಸಿನ ತ್ಯಾಗ, ಬಿಲ್ವಾರ, ತೊಡಸಲು, ಚಳ್ಳೆ, ಬಾಗಿ, ಹಡಗ, ನಂಜ ಅಥವಾ ಬಕುಳ, ಸಂಪಿಗೆ, ವಾಟೆ, ಬಲಿಗೆ, ಹಾಲಾಡಿ ಅಥವಾ ಹರಳಬಂಡಿಗೆ ಮತ್ತು ಸಗದೆ ಮರಗಳು.

"ಕಾಡುಮರ" ಅಂದರೆ ಮನ್ನಾ ಜಾತಿ ಅಲ್ಲದ ಮತ್ತು ವಿಂಗಡಿಸಲ್ಪಟ್ಟ ರಖಮಿಗೆ ಸೇರದಂಥಾ ಇತರ ಮರಗಳು.

"ವ್ಯವಸಾಯ ಸಾಧನಗಳು" ಅಂದರೆ ನೇಗಲುಗಳು, ಸಾಲು ಹೊಡಿಯುವ ಹಲಿಗೆಗಳು, ಹೆಂಟೆ ಬಡಿಯುವ ತುಂಡುಗಳು ಸನಿಕೆಗಳು, ಕೂರಿಗೆ, ಮಮ್ಟೀ ಕಾವುಗಳು, ಗುದ್ದಲಿ ಕಾವುಗಳು, ಮತ್ತು ಇತರ ತಮಾಂ ವ್ಯವಸಾಯ ಸಾಧನಗಳೆಂದು ಅರ್ಥವಾಗತಕ್ಕದ್ದು. ಆದರೆ ಇದರಲ್ಲಿ, ಮಲನಾಡಿನಲ್ಲಿ ವಿನಾ ಅನ್ಯತ್ರ, ಕಬ್ಬಿನ ಆಲೆಗಳು, ಭತ್ತ ಕುಟ್ಟುವ ಯಂತ್ರಗಳು, ಮತ್ತು ದನದ ತೊಟ್ಟಿಗಳು ಅಡಗಿರುವದಿಲ್ಲವು.

"ಮಲ್‌ನಾಡ್" ಅಂದರೆ ಎ. ಅಪೆಂಡಿಕ್ಸಿನಲ್ಲಿ ವಿವರಿಸಲ್ಪಟ್ಟ ತಾಲ್ಲೂಕುಗಳು ಮತ್ತು ತಾಲ್ಲೂಕುಗಳ ಪ್ರದೇಶಗಳು ಎಂದು ಅರ್ಥವಾಗತಕ್ಕದ್ದು; ಇತರ ಎಲ್ಲಾ ಪ್ರದೇಶಗಳೂ, ಮೈದಾನ್ ಎಂದು ಭಾವಿಸಲ್ಪಡತಕ್ಕದ್ದು.

"ರೈತ" ಅಂದರೆ ಒಬ್ಬ ಪಟ್ಟೇದಾರ, ಖಾತೇದಾರ, ಅಥವಾ ಸರ್ಕಾರದ ಜಮೀನಿನ ಹಿಡುವಳಿಯ ರಿಜಿಸ್ಟರ್‌ದಾರ ಅಥವಾ ಚಿಲ್ಲರೆ ಇನಾಂದಾರ ಇವರುಗಳೆಂದು ಅರ್ಥವಾಗತಕ್ಕದ್ದಲ್ಲದೆ ಮೇಲ್ಕಂಡ ತಮಾಂ ತರಹೆಯ ಜಮೀನ್ ಹಿಡುವಳಿದಾರರ ಜಂಟೀದಾರರು ಅಥವಾ ಹಿಡುವಳಿದಾರರನ್ನು ಸುದಾ ಅಡಗಿಸಿಕೊಂಡಿರುತ್ತೆ. ಅಂಥಾ ಹಿಡುವಳಿದಾರರು ಅವರ ಪಟ್ಟಾದಾರ್, ಚಿಲ್ಲರೆ ಇನಾಂದಾರ್ ಅಥವಾ ಜಂಟಿ ಹಿಡುವಳಿದಾರ್‌ಗಳೊಂದಿಗೆ, ಈ ರೂಲ್ಸಿನ 10ನೇ ಪ್ಯಾರಾದಲ್ಲಿ ಅಡಗಿರುವ ತೇದಾದಿನ ವಳಗಾಗಿ, ಮರ ವ ಬೊಂಬುಗಳನ್ನು ಪಡೆಯುವ ಬಗ್ಗೆ ಅರ್ಹರಾಗಿ ಇರತಕ್ಕದ್ದು.

4. ಐಂದ ಉಂಟುಮಾಡಲ್ಪಡುವಂಥಾ ಏರ್ಪಾಡುಗಳಿಗೆ ವಳಪಟ್ಟು ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ಹುಲ್ಲು ಮೇಯಿಸುವ ಬಗ್ಗೆ ಹಾಲಿ ಇರತಕ್ಕ ಹಕ್ಕುದಾರಗಳಿಗೆ ಈ ರೂಲ್ಸಗಳು ಲಗಾವಾಗುವದಿಲ್ಲವು; ಅಥವಾ ಮಲ್‌ನಾಡಿನಲ್ಲಿ ಅವರವರ ಸೊಪ್ಪಿನ ಬೆಟ್ಟಗಳಲ್ಲಿ ತೋಟಗಳ ಸ್ವಂತಗಾರರ ಹಾಲಿ ಇರತಕ್ಕ ಹಕ್ಕುಗಳಿಗಾಗಲಿ ಕಾನುಗಳಲ್ಲಿ ಅವರ ಹಕ್ಕುದಾರಗಳಿಗಾಗಲಿ ಈ ರೂಲ್ಸಗಳು ಅನ್ವಯಿಸುವದಿಲ್ಲವು. ರಕ್ಷಣೆ ಬಗ್ಗೆಯಾಗಿ ಯಾವ ಡಿಸ್ಟ್ರಿಕ್ಟು ಫಾರೆಸ್ಟಾದರೂ ಫಾರೆಸ್ಟ್ ಇಲಾಖೆಯವರಿಂದ ಮುಚ್ಚಲ್ಪಡುವದನ್ನು ಇದರಲ್ಲಿ ಅಡಗಿ ಇರತಕ್ಕ ಯಾವ ಅಂಶವೂ ನಿರೋಧಿಸುವದಿಲ್ಲವು.

5. ಮಲ್‌ನಾಡ್ ವ ಮೈದಾನಿನ ರೈತರುಗಳು 1 ವ 2ನೇ ರೂಲಿಗೆ ಒಳಪಟ್ಟು ಡಿಸ್ಟ್ರಿಕ್ಟು ಫಾರೆಸ್ಟಿನಿಂದ ಪರ್ಮಿಟ್ಟಯಾನೆ ಪ್ಯಾಸಿಲ್ಲದೆ ಮುಫತ್ತು ತೆಗದುಕೊಳ್ಳಬಹುದಾದ ಸಾಮಾನುಗಳ್ಯಾವವಂದರೆ:—

1ನೇದು.—ವ್ಯವಸಾಯ ಸಾಧನಗಳಿಗೋಸ್ಕರ ಬೇಕಾದ ಪರಂತು ವಿಂಗಡಿಸಲ್ಪಟ್ಟ ರಖಮಿಗೆ ಸೇರದೆ ಇರತಕ್ಕಂಥಾ ಮರಗಳು. ಪರಂತು ಮಲ್‌ನಾಡಿನಲ್ಲಿ ದುಯಂ ರಖಮಿನ ವಿಂಗಡಿಸಲ್ಪಟ್ಟ ಮರಗಳು ಈ ಕೆಲಸಕ್ಕೋಸ್ಕರ ಪಟೇಲನ ಬರಹ ಮೂಲಕವಾದ ಅಪ್ಪಣೆ ಚೀಟಿ ಪಡೆದು ತೆಗದುಕೊಳ್ಳಲ್ಪಡಬಹುದು. ಕಡಿಯಲ್ಪಡುವಂಥಾ ಮರಗಳು ಬಲ್ಲದ್ದಾಗಿಯಾ ಗಂಟುಗಳಾಗಿ ನಾಟಾ ಬಗ್ಗೆ ನಾಲಾಯಖಾದ್ದಾಗಿರಬೇಕು. ಮಲ್‌ನಾಡಿನಲ್ಲಿ ಕಬ್ಬಿನ ಆಲೆಗಳು, ಭತ್ತ ಕುಟ್ಟುವ ಯಂತ್ರಗಳು ದನಗಳ ತೊಟ್ಟಿಗಳು ಇವುಗಳಿಗೋಸ್ಕರ ಮರ ಬೇಕಾದಾಗ ಅಮಲ್‌ದಾರರಿಂದ ಮಾಫೀ ಪ್ಯಾಸ್ ಪಡೆಯತಕ್ಕದ್ದು. ಈ ಪ್ಯಾಸುಗಳು ಅದರಲ್ಲಿ ವಿವರಿಸೋಣಾದ ಮಾಯಿದೆ ವಳಗಾಗಿ ಯಾವ ಗ್ರಾಮದಲ್ಲಿ ಸದರಿ ಮರಗಳು ಕತರಾಯಿಸಲ್ಪಟ್ಟಿತ್ತೋ ಆ ಗ್ರಾಮದ ಪಟೇಲನಿಂದ ಪ್ಯಾಸ್ ಮೂಲಕ ಸಾಗಿಸಲ್ಪಟ್ಟ ಮರದ ತೇದಾದನಿಸಿ ತಾಲ್ಲೂಕಿಗೆ ಇಂಡಾರ್ಸು ಮಾಡಲ್ಪಟ್ಟು ವಾಪಸ್ ಮಾಡಲ್ಪಡತಕ್ಕದ್ದು;

2ನೇದು.—ಬೇಲಿಗಳು, ತಡಿಕೆಗಳು, ಮತ್ತು ಅಣೆಗಳಿಗೋಸ್ಕರ ಬೇಕಾದ ಕೂಚಗಳು, ಮುಳ್ಳು ಕಂಪೆಗಳು, ಮತ್ತು ಬೊಂಬಿನ ಕಂಪೆಗಳು;

3ನೇದು.—ದನವಹಟ್ಟಿ; ಗುಡಿಸಲು, ಚಪ್ಪರಗಳು, ಚಿಕ್ಕ ಝೋಪಡಿಗಳು ಮತ್ತು ಹೊಲಗಳಲ್ಲಿ ಹಾಕಬೇಕಾದ ಮಂಚಿಕೆಗಳು ಮತ್ತು ಮೆದೆಹಾಕುವ ಬಗ್ಗೆ ಸಾಮಾನುಗಳು ಇವುಗಳಿಗೋಸ್ಕರ ಬೇಕಾದ ಮರಗಳು ಅಂದರೆ ವಿಂಗಡಿಸಲ್ಪಟ್ಟ ರಖಮಿಗೆ ಸೇರದೇ ಯಿರತಕ್ಕಂಥಾ ಮರಗಳು ಮತ್ತು ಬೊಂಬುಗಳು;

4ನೇದು.—ಗೊಬ್ಬರ ಮತ್ತು ಮಂಚಾಲಿಗೋಸ್ಕರ ಕಾಡುಜಾತಿ ಮರಗಳ ಕೊಂಬೆಗಳು; ಮತ್ತು

5ನೇದು.—ಮನೆ ಹೊದಿಸುವ ಬಗ್ಗೆ ಹುಲ್ಲು.

ಮೇಲ್ಕಂಡ ಸಾಮಾನುಗಳಲ್ಲದೆ, ರೈತರುಗಳು ಮನ್ನಾ ಮತ್ತು ಡಿಸ್ಟ್ರಿಕ್ಟು ಜಂಗಲಿಗಳಿಂದ ಅಂಥಾ ಜಂಗಲಿಗಳು ಇರತಕ್ಕ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಪಡೆದು ಹುಲ್ಲನ್ನು ಮುಫತ್ತಾಗಿ ಕುಯಿದು ಸಾಗಿಸಬಹುದು.

6. 5ನೇ ರೂಲಿನ 1 ವ 3ನೇ ಕ್ಲಾಜ್‌ಗಳಲ್ಲಿ ವಿವರಿಸಲ್ಪಟ್ಟ ಕೆಲಸಗಳಿಗೋಸ್ಕರ ಮರವನ್ನು ಅಪೇಕ್ಷಿಸುವ ರೈತರು, ಅವರ ಗ್ರಾಮವಲ್ಲದ ಇತರ ಗ್ರಾಮದ ಸರಹದ್ದಿನಲ್ಲಾಗಲಿ ಅಥವಾ ಅವರಿಗೋಸ್ಕರ ಬಿಡಲ್ಪಟ್ಟ ಪ್ರದೇಶ ವಿನಾ ಅನ್ಯತ್ರವಾಗಲಿ ಮರವನ್ನು ಕತರಾಯಿಸಲು ಅಪೇಕ್ಷಿಸಿದರೆ, ಅವರು ಸದರೀ ಗ್ರಾಮದ ಪಟೇಲನ ಅಪ್ಪಣೆಯನ್ನು ಪಡೆಯಬೇಕು. ವ್ಯವಸಾಯ ಸಾಧನಗಳಿಗೋಸ್ಕರ ಕತರಾಯಿಸಲ್ಪಡುವ ಮರಗಳ ಪರಿಮಾಣವು, ಅಂಥಾ ಸಾಧನಗಳನ್ನು ತಯಾರುಮಾಡುವದಕ್ಕೆ ಅವಶ್ಯಕವಾಗಿ ಬೇಕಾದುದಕ್ಕಿಂತಲೂ ಭಾರಿಯಾಗಿರಕೂಡದು. 5ನೇ ರೂಲಿನ 3ನೇ ಕ್ಲಾಜ್ ಅನುಸರಿಸಿ ಮುಫತ್ತಾಗಿ ತೆಗೆದುಕೊಳ್ಳುವಂಥಾ ಮರವು, ಮಲ್ನಾಡಿನಲ್ಲಾಗಲಿ, ಮೈದಾನಿನಲ್ಲಾಗಲಿ, ಕಬ್ಬಿನ ಆಲೆಗಳು, ಭತ್ತ ಕುಟ್ಟುವ ಯಂತ್ರಗಳು ಮತ್ತು ಮಲ್ನಾಡಿನಲ್ಲಿನ ದನದ ತೊಟ್ಟಿಗಳು ಇವುಗಳಿಗೋಸ್ಕರ ವಲ್ಲದೆ ಅನ್ಯಥಾ ಸುತ್ತಳತೆಯಲ್ಲಿ ಎರಡು ಅಡಿಗೆ ಮೀರಕೂಡದು.

6. (*a*) ಸಾಗರ ವ ನಗರ ತಾಲ್ಲೂಕುಗಳಲ್ಲಿನ ಬಾಜಾದಲ್ಲಿ ಕಂಡ ಮಾಗಣಿಗಳ ರೈತರುಗಳು ಸದ್ಯಃ ಕಾಡುಮರಗಳನ್ನು ಮುಫತ್ತಾಗಿ ಪ್ಯಾಸಿಲ್ಲದೆ ತೆಗೆದುಕೊಳ್ಳತಕ್ಕದ್ದು; ಪರಂತು ಅವರು ತಮ್ಮಿಂದ ತೆಗೆದುಕೊಳ್ಳಲ್ಪಟ್ಟ ತೇದಾದನ್ನು ಸದರೀ ಗ್ರಾಮದ ಪಟೇಲನಿಗೆ ರಿಪೋರ್ಟು ಮಾಡಬೇಕು. ಆತನು ಆ ಸಂಗತಿಯನ್ನು ತಾಲ್ಲೂಕು ಅಮಲ್ದಾರರಿಗೆ ಜಾಹಿರ್ಮಾಡತಕ್ಕದ್ದು.

ಸಾಗರದ ತಾಲ್ಲೂಕು.			ನಗರ ತಾಲ್ಲೂಕು.
ಮರಬಾಡಿ.	ಸಾವಂತನಕಟ್ಟೆ.	ಬ್ರಹ್ಮನವಾಡ.	ಮಾಗನಾಡು.
ಡಿಟೋ	ಸಾರಲಹೊಳೆ.	ನಾಡವಾಡ.	ಕಬ್ಬನಾಡು.
ಕಾರೂರು.	ಮಳಲಿ.	ಬ್ರಹ್ಮನವಾಡ.	
ಡಿಟೋ	ಯಿಡವನಿ.	ನಾಡವಾಡ.	
ಸಾಲನಾಡು.	ಆವಿನಹಳ್ಳಿ.		

7. ಮಲ್ನಾಡಿನಲ್ಲಿ ರೈತರು ಪ್ಯಾಸಿಲ್ಲದೆ ಮುಫತ್ತಾಗಿ ಬೇಲಿಗಳಿಗೋಸ್ಕರ ಬೊಂಬಿನ ಕಾವೆಗಳನ್ನು ಪಡೆಯತಕ್ಕದ್ದು, ಮತ್ತು ಕಬ್ಬಿನ ಬೇಲಿ ವ ನೀರಿನ ವಡ್ಡಿಗೋಸ್ಕರ ಬೇಕಾದ ಒಣಗಿದ ಈಚಲು ಅಥವಾ ಬಗನಿ ಮರಗಳನ್ನು ವ್ಯವಸಾಯ ಕೆಲಸಗಳಿಗೋಸ್ಕರ ಪತ್ರಗಳನ್ನು ಸುದಾ ಬದಸ್ತೂರು ಪಡೆಯತಕ್ಕದ್ದು.

8. ಮಲ್ನಾಡು ವ ಮೈದಾನ್ ಪ್ರಾಂತ್ಯಗಳ ರೈತರುಗಳು ಕಟ್ಟಣ ಮತ್ತು ವ್ಯವಸಾಯ ಕೆಲಸಗಳಿಗೋಸ್ಕರ ಬೇಕಾದ್ದ ಮರ ವ ಬೊಂಬುಗಳನ್ನು 1ನೇ ರೂಲಿನಲ್ಲಿ ನಮೂದ್ ಮಾಡಲ್ಪಟ್ಟಂಥಾ ಗ್ರಾಮ ಯಾ ಡಿಸ್ಟ್ರಿಕ್ಟು ಫಾರೆಸ್ಟುಗಳಿಂದ ಇದರಡಿ ನಮೂದ್ ಮಾಡಲ್ಪಟ್ಟ ಸುಲಭ ತೀರ್ವೆ ಪಾವತಿ ಮಾಡಿ ತೆಗೆದುಕೊಳ್ಳಬಹುದು. ಪರಂತು, ಹಾಂಗೆ ಪಡೆಯೋಣಾದ ಮರ ವ ಬೊಂಬುಗಳು, ಸದರೀ ಫಾರೆಸ್ಟು ಸೇರಿಸಲ್ಪಟ್ಟಿರತಕ್ಕಂಥಾ ಅಥವಾ ಗೊತ್ತು ಮಾಡಲ್ಪಟ್ಟಿರತಕ್ಕಂಥಾ ಗ್ರಾಮದಲ್ಲಿ ಇರತಕ್ಕ ಅವರ ವ್ಯವಸಾಯದ ಮನೆಗಳನ್ನು ಮತ್ತು ವಾಸಮಾಡುವ ಮನೆಗಳನ್ನು ಕಟ್ಟುವ ಬಗ್ಗೆ ರಿಪೇರಿ ಮಾಡುವ ಬಗ್ಗೆ ಉಪಯೋಗಿಸಲ್ಪಡತಕ್ಕದ್ದು.

		ರೂ.	ಆ.	ಪೈ.
ಮೈದಾನಿನಲ್ಲಿ	ವಿಂಗಡಿಸಲ್ಪಟ್ಟ ಅವಲ್ ರಖಮಿನ ಮರಗಳು (ಹೊನ್ನೆ ಶಿವಾಯಿ) ಭಂಡಿ ಬೋಜಾ 1ಕ್ಕೆ	3	0	0
	ಹೊನ್ನೇಮರ, ಭಂಡಿ ಬೋಜಾ 1ಕ್ಕೆ ..	5	0	0
	ವಿಂಗಡಿಸಲ್ಪಟ್ಟ ದುಯ್ಯಂ ರಖಮಿನ ಮರ, ಭಂಡಿ ಬೋಜಾ 1ಕ್ಕೆ ..	1	0	0
	ಕಾಡುಜಾತಿ ಮರಗಳು, ಭಂಡಿ ಬೋಜಾ 1ಕ್ಕೆ ಮತ್ತು ಕಿರಿಬಿದರು ದರ 100ಕ್ಕೆ ..	0	8	0
	ಕಾಡುಮರದ ಕೋಚಗಳು ದರ ಭಂಡಿ ಬೋಜಾ 1ಕ್ಕೆ ..	0	8	0
	ಗರಟೆಯಾನೆ ಚಿಕ್ಕಗಟ್ಟಿ ಬೊಂಬುಗಳು ದರ 100ಕ್ಕೆ ..	0	4	0
	ಹೆಬ್ಬಿದರು, ದರ 100ಕ್ಕೆ ..	0	0	0
ಮಲ್ನಾಡಿನಲ್ಲಿ	ವಿಂಗಡಿಸಲ್ಪಟ್ಟ ಅವಲ್ ರಖಮಿನ ಮರಗಳು (ಹೊನ್ನೆ ಶಿವಾಯಿ) ಭಂಡಿ ಬೋಜಾ 1ಕ್ಕೆ	5	0	0
	ಹೊನ್ನೇಮರ, ಭಂಡಿ ಬೋಜಾ 1ಕ್ಕೆ ..	7	0	0
	ವಿಂಗಡಿಸಲ್ಪಟ್ಟ ದುಯ್ಯಂ ರಖಮಿನ ಮರ ಭಂಡಿ ಬೋಜಾ 1ಕ್ಕೆ ..	2	0	0
	ಕಾಡುಜಾತಿ ಮರ, ಭಂಡಿ ಬೋಜಾ 1ಕ್ಕೆ ಕಿರಿಬಿದರು ದರ 100ಕ್ಕೆ ..	1	8	0
	ಹೆಬ್ಬಿದರು ದರ 100ಕ್ಕೆ ..	3	8	0

ಸೊರಬ ವ ಶಿಕಾರಿಪುರ ತಾಲ್ಲೂಕಿನ ಅರ್ಧ ಮಲ್ನಾಡ್ ಮಾಗಣಿಗಳಲ್ಲೂ, ಕುಮುಸಿ ಸಬ್ ತಾಲ್ಲೂಕಿನಲ್ಲೂ ಮತ್ತು ಡೆಪ್ಯುಟಿ ಕಮಿಷನರವರು ಮೈಸೂರು ಗೆಜೆಟ್ಟಿನಲ್ಲಿ ಡಿಸ್ಟ್ರಿಕ್ಟು ಆರ್ಡರನ್ನು ಪ್ರಕಟ ಪಡಿಸುವದರ ಮೂಲಕ ಈ ರೂಲಿನ ರಿಯಾಯತಿಗಳನ್ನು ವಿಸ್ತರಿಸಬಹುದಾದಂಥಾ ಶಿವಮೊಗ್ಗ ತಾಲ್ಲೂಕಿನ ಯಾವದಾದರೂ ಮಾಗಣಿಗಳಲ್ಲೂ—

ಕಿರಿಬಿದರು ದರ 100ಕ್ಕೆ .. .. .. 1 ರೂಪಾಯಿ.

9. ಯಾವದಾದರೊಂದು ಪಟ್ಟದಹಳ್ಳದ ಯಾ ಅದಕ್ಕೆ ಬಂದು ಸೇರುವ ಕಾಲವೆಗಳ ಧಡಗಳಿಂದ 50 ಗಜದ ವಳಗಿನ ಫಾಸಲೆಯಲ್ಲಾಗಲಿ, ಅಥವಾ ಯಾವದಾದರೂ ಜಲಾಧಾರದ ಮೂಲದಿಂದ 50 ಗಜಗಳ ಕಮ್ಮಿ ಫಾಸಲೆಯಲ್ಲಾಗಲಿ ಅಥವಾ ಯಾವದಾದರೂ ರಸ್ತೆಯಿಂದ 50 ಗಜಗಳ ಫಾಸಲೆ ವಳಗಾಗಲಿ ಯಾವ ಡಿಸ್ಟ್ರಿಕ್ಟು ಫಾರೆಸ್ಟಿನೊಳಗಾದರೂ ಮರ, ಸೊಪ್ಪು, ಬೊಂಬುಗಳು ಅಥವಾ ಜಂಗಲ್ ಕತರಾಯಿಸಲ್ಪಡಕೂಡದು, ಮತ್ತು ಅಲ್ಲಿ ಯಾವ ಮರ ಅಥವಾ ಹುಲ್ಲಾಗಲಿ ಸುಡಲ್ಪಡಕೂಡದು.

10. 8ನೇ ರೂಲ್ ಅನುಸರಿಸಿ ಸುಲಭ ತೀರ್ವೆ ಮೇಲೆ ಕೊಡಲ್ಪಡುವ ಮರಗಳು ಪ್ರಬ್ಬ ರೈತನಿಗೆ ಮೈದಾನಿನಲ್ಲಿ ವಂದು ದಸ್ಸಾಲಿನಲ್ಲಿಯೂ, ಮಲ್ನಾಡಿನಲ್ಲಿ ವಂದು ಪಂಚಸಾಲಿನಲ್ಲಿಯೂ 50 ಭಂಡಿ ಬೋಜಾಗಳಿಗೆ ಜಾಸ್ತಿಯಾಗಕೂಡದು. ಪ್ರತಿ ಸಂಗತಿಯಲ್ಲಿಯೂ 50 ಭಂಡಿ ಬೋಜಾ ಮರಗಳು ಅವಶ್ಯವಾಗಿ ಕೊಡಬೇಕೆಂದು ಅರ್ಥಮಾಡಲ್ಪಡಕೂಡದು. ಇದು ಕೊಡಬಹುದಾದ ಜಾಸ್ತೀ ತೇದಾದು ಆಗಿರುತ್ತೆ. ಪ್ರತಿ ಸಂಗತಿಯಲ್ಲಿಯೂ ಅಮಲ್ದಾರರು ರೈತನ ಆವಶ್ಯಕತೆಯನ್ನು ತಿಳಿದುಕೊಂಡು ವಾಸ್ತವ್ಯವಾಗಿ ಬೇಕಾಗುವ ತೇದಾದನ್ನು ಕೊಡತಕ್ಕದ್ದು. ಮತ್ತು ಈ ರಿಯಾಯತಿಯು ದುರುಪಯೋಗ ಪಡಿಸದಂತೆ ಅಮಲ್ದಾರರು ನಿಗಾ ಇಡಬೇಕಾಗಿರುತ್ತೆ. ಅಮಲ್ದಾರ್ರು ಮರ್ರ ಅಥವಾ ಬೊಂಬುಗಳಿಗೋಸ್ಕರ ಬರುವ ದರಖಾಸ್ತುಗಳನ್ನು ಅವು ಅದರಿಂದ ಫಾಯಿದೆ ಪಡೆಯುವ ಬಗ್ಗೆ ದರಖಾಸ್ತು ಮಾಡಲ್ಪಟ್ಟಿರುತ್ತೆಂದು ಕಂಡುಬಂದ ಸಂದರ್ಭದಲ್ಲಿ ಲೈಸೆನ್ಸ್ ಕೊಡದೆ ತಿರಸ್ಕರಿಸಬಹುದು.

11. ರೈತರುಗಳಿಗೆ 7, 8 ವ 10ನೇ ರೂಲ್‌ಗಳಿಂದ ಉಂಟುಮಾಡಲ್ಪಟ್ಟ ರಿಯಾಯತಿಗಳು ವಾಸ್ತವವಾಗಿ ಅವರ ಸ್ವಂತ ಉಪಯೋಗಕ್ಕೋಸ್ಕರ ಮಾತ್ರವೇ ಆಗಿರುತ್ತೆ. ಸದರೀ ಮೇಲ್ಕಂಡ ರೂಲ್‌ಸ್ ಅನುಸರಿಸಿ ಪಡೆಯೋಣಾದ ಯಾವ ಸಾಮಾನುಗಳಾಗಲಿ, ಅವರಿಂದ ವರ್ಗ, ಖರೀದಿ ಯಾ ವ್ಯಾಪಾರ ಉದ್ದಿಶ್ಯ ಅನ್ಯಾಕ್ರಾಂತ ಮಾಡಲ್ಪಡಕೂಡದು.

12. ರೂಲ್ 8ರ ಅನುಸಾರವಾಗಿ ಮರ ಯಾ ಬೊಂಬುಗಳನ್ನು ಪಡೆಯಲು ಅಪೇಕ್ಷಿಸುವಂಥಾ ಯಾವ ರೈತನಾದರೂ, ಸದರೀ ರೂಲ್ ಪ್ರಕಾರ ತಾನು ಕತರಾಯಿಸಲು ಹಕ್ಕುಳ್ಳ ಜಂಗಲಿಯು ಇರತಕ್ಕಂಥಾ ಸರಹದ್ದಿನ ತಾಲ್ಲೂಕು ಅಮಲ್ದಾರರಿಗೆ ದರಖಾಸ್ತು ಮಾಡತಕ್ಕದ್ದು.

13. 8ನೇ ರೂಲ್‌ನಲ್ಲಿ ವಿಧಿಸೋಣಾದ ಸೀನಿಯಾರೇಜ್‌ಯಾನೆ ತೀರ್ವೆಯು ಪಾವತಿ ಮಾಡಲ್ಪಟ್ಟ ತರುವಾಯ ಅಮಲ್ದಾರರು ಅಪೆಂಡಿಕ್ಸ್ ಬಿ. ನಮೂನೆಯಲ್ಲಿ ಒಂದು ಲೈಸೆನ್ಸನ್ನು ಕೊಡತಕ್ಕದ್ದು. ಅಂಥಾ ಲೈಸೆನ್ಸು ವರ್ಗಮಾಡಲ್ಪಡತಕ್ಕದ್ದಲ್ಲ. ಸದರೀ ಲೈಸೆನ್ಸಿನ ಷರತ್ತುಗಳ ಪ್ರಕಾರ ನಡೆದುಕೊಳ್ಳುವದು ಲೈಸೆನ್ಸುದಾರನಿಗೆ ಕರ್ತವ್ಯವಾಗಿರುತ್ತೆ. ವಾಯಿದೆ ಮೀರಿದ ತಮಾಂ ಲೈಸೆನ್ಸ್‌ಗಳೂ ರದ್ದಾಗಿರತಕ್ಕವು. ಉಪಯೋಗಿಸಲ್ಪಡದ ಲೈಸೆನ್ಸುಗಳಿಗೋಸ್ಕರ ತೀರ್ವೆಯು ವಾಪಸ್ ಮಾಡಲ್ಪಡಕೂಡದು, ಅಥವಾ ಅವುಗಳಿಗೆ ಬದಲಾಗಿ ಹೊಸ ಲೈಸೆನ್ಸ್ ಕೊಡಲ್ಪಡತಕ್ಕದ್ದಲ್ಲವು.

14. ಲೈಸೆನ್ಸ್‌ದಾರನು; ಸದರೀ ಲೈಸೆನ್ಸಿನಲ್ಲಿ ಕಂಡ ಡಿಸ್ಟ್ರಿಕ್ಟು ಫಾರೆಸ್ಟು ಸರಹದ್ದುಗಳು ಸೇರಿ ಇರುವಂಥಾ ಗ್ರಾಮದ ಪಟೇಲನಿಗೆ ಸದರೀ ಲೈಸೆನ್ಸಿನ ಆಧಾರದ ಮೇಲೆ ತಾನು ಸಾಗಿಸತಕ್ಕಂಥಾ ಮರ ಯಾ ಬೊಂಬುಗಳು ಅಥವಾ ಇತರ ಸಾಮಾನುಗಳು ಇವುಗಳನ್ನು ತನಿಖೀ ಬಗ್ಗೆ ಹಾಜರ್ಮಾಡುವದಕ್ಕೆ ಮತ್ತು ಅದರಲ್ಲಿ ನಮೂದಾದ ತೇದಾದು ಕರಾರ್ವಾಕಾ ಇರುತ್ತೆಂದು ಪಟೇಲನಿಂದ ಇಂಡಾರಸ್‌ಮೆಂಟ್‌ಯಾನೆ ಷರಾ ಬರಿಸಿಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು. ಮರ, ಬೊಂಬುಗಳು, ಅಥವಾ ಇತರ ಸಾಮಾನುಗಳು ತರುವಾಯ ಲೈಸೆನ್ಸ್ ಸಮೇತ ಸಾಗಿಸಲ್ಪಟ್ಟು ಸದರೀ ಲೈಸೆನ್ಸು ಅಂಥಾ ಮರ, ಬೊಂಬುಗಳು ಅಥವಾ ಇತರ ಪದಾರ್ಥಗಳು ಸೇರಿಸಲ್ಪಡುವಂಥಾ ಗ್ರಾಮದ ಪಟೇಲನಿಗೆ ಒಪ್ಪಿಸಲ್ಪಡತಕ್ಕದ್ದು, ಸದರೀ ಪಟೇಲನು ಲೈಸೆನ್ಸಿನೊಂದಿಗೆ ತೇದಾದನ್ನು ಮೊಕಾಬಿಲೆ ಮಾಡಿ ಸದರೀ ಲೈಸೆನ್ಸನ್ನು ತನ್ನ ಸರ್ಟಿಫಿಕೇಟ್ ಸಮೇತ ತಾಲ್ಲೂಕು ಅಮಲ್ದಾರ್ರಿಗೆ ಕಳುಹಿಸತಕ್ಕದ್ದು. ಅವರು ಲೈಸೆನ್ಸನ್ನು ಸಾದರ್ಮಾಡದವರಾಗಿದ್ದರೆ ಅದು ಸಾದರ್ಮಾಡಲ್ಪಟ್ಟಂಥಾ ಅಮಲ್ದಾರ್ರಿಗೆ ಕಳುಹಿಸತಕ್ಕದ್ದು. ಲೈಸೆನ್ಸಿನಲ್ಲಿ ಕೊಡೋಣಾದ ತೇದಾದು ಹುಟ್ಟಬಹುದಾದಂಥಾ ಮರಗಳು ಮಾತ್ರವೇ ಕತರಾಯಿಸಲ್ಪಡತಕ್ಕದ್ದು. ಮನ್ನಾನೆ ಅಥವಾ ನಷ್ಟವಾಗುವಂತೆ ಕತರಾಯಿಸಿದರೆ ಈ ರಿಯಾಯತಿಯು ಅಂಥಾ ರೈತನಿಂದ ಪೂರ್ತಿಯಾಗಿಯಾದರೂ ಅಥವಾ ಕೆಲವು ಕಾಲದ ಮಟ್ಟಿಗಾದರೂ ವಾಪಸ ತೆಗದುಕೊಳ್ಳಲ್ಪಡುವದು.

15. ಮಲ್‌ನಾಡ್ ರೈತರಿಗೆ 5ನೇ ರೂಲಿನಲ್ಲಿ ಗೊತ್ತು ಮಾಡಲ್ಪಟ್ಟ ಮಾಫೀ ರಹದಾರಿಗಳು ಮತ್ತು 13ನೇ ರೂಲಿನಲ್ಲಿ ನಮೂದ್ಮಾಡಲ್ಪಟ್ಟ ತೀರ್ವೆ ಸಂದ ಲೈಸೆನ್ಸುಗಳು ಸದಾ ಫಾರೆಸ್ಟು, ರೆವಿನ್ಯೂ, ಪೊಲೀಸ್ ಆಫೀಸರಗಳಿಂದ ತನಿಖೆ ನೋಡಲ್ಪಡುವ ಬಗ್ಗೆ ವಶದಲ್ಲಿಟ್ಟಿರತಕ್ಕದ್ದು, ಸದರೀ ಆಫೀಸರಗಳು ಸದರೀ ಲೈಸೆನ್ಸಿನ ಷರತ್ತುಗಳು ಅತಿಕ್ರಮಿಸಲ್ಪಡಲಿಲ್ಲವೆಂದು ಅಥವಾ ಉಲ್ಲಂಘಿಸಲ್ಪಡಲಿಲ್ಲವೆಂದು ನೋಡುವ ಬಗ್ಗೆ ಬದ್ಧರಾಗಿರುತ್ತಾರೆ.

15 ಎ. ಯಾವ ಜಂಗಲಿಯಾಗಲಿ ಅಥವಾ ಅದರ ಭಾಗವಾಗಲಿ ವಿಶೇಷವಾಗಿ ಕತರಾಯಿಸಲ್ಪಟ್ಟಾಗ ಡೆಪ್ಯುಟಿ ಕಮಿಷನರವರು ಅಂಥಾ ಜಂಗಲಿ ಯಾ ಒಂದು ಭಾಗವನ್ನು ಆವಶ್ಯಕವಾದ ವಾಯಿದೆ ಪರಿಯಂತ ಬಂದು ಮಾಡಿ ಆ ಸಂಗತಿಯನ್ನು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಲು ಸ್ವತಂತ್ರರಿರುತ್ತಾರೆ.

16. ಮಲ್‌ನಾಡಿನ "ಕಾನುಗಳಲ್ಲಿ" ಅಥವಾ ಫಾರೆಸ್ಟು ಯಾ ರೆವಿನ್ಯೂ ಇಲಾಖೆಯವರು 4 ಅಥವಾ 15 ಎ. ಪ್ಯಾರಾ ಅನುಸರಿಸಿ ಬಂದ್ ಮಾಡಿರುವಂಥಾ ಯಾವದಾದರೂ ಗವರ್ನಮೆಂಟ್ ಜಂಗಲಿಗಳಲ್ಲಿ ಮರಾ ಯಾ ಬೊಂಬುಗಳನ್ನು ಕತರಾಯಿಸುವ ಬಗ್ಗೆ ಯಾವ ಲೈಸೆನ್ಸೂ ಕೊಡಲ್ಪಡಕೂಡದು. ಯಾವದಾದರೂ ಜಂಗಲಿಯು ಬಂದ್ ಮಾಡಲ್ಪಟ್ಟ ಸಂಗತಿ ಕೂಡ್ಲೆ ಸದರೀ ತಾಲ್ಲೂಕು ಅಮಲ್ದಾರ್ರಿಗೆ ತಿಳಿಸಲ್ಪಡಬೇಕು.

17. 8ನೇ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಮರ, ಬೊಂಬುಗಳು ಅಥವಾ ಇತರ ಸಾಮಾನುಗಳನ್ನು ಕತರಾಯಿಸಿ ಸಾಗಿಸುವಂಥಾ ಅಥವಾ ಆವಶ್ಯಕವಾದ ಲೈಸೆನ್ಸು ಪಡಿಯದೆ ಒಂದು ಡಿಸ್ಟ್ರಿಕ್ಟು ಫಾರೆಸ್ಟಿನಿಂದ ಸದರೀ ಲೈಸೆನ್ಸಿನಲ್ಲಿ ನಮೂದಾದ ತೇದಾದನ್ನು ಮೀರುವಂಥಾ ಯಾವ ರೈತನಾದರೂ ಗೊತ್ತಾದ ವಾಯಿದೆಯಲ್ಲಿ ಲೈಸೆನ್ಸನ್ನು ವಾಪಸ್ ಮಾಡುವದಕ್ಕೆ ತಪ್ಪಿದರೆ ಅಥವಾ ಸದರೀ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದರೆ ಅಥವಾ ಈ ನಿಬಂಧನೆಗಳ ನಿಯಮಗಳನ್ನು ತಪ್ಪಿ ನಡದರೆ ಅವನು 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 40ನೇ ಸೆಕ್ಷನ್ ಅನುಸರಿಸಿ ದಂಡನೆಗೆ ಗುರಿಯಾಗಿರತಕ್ಕದ್ದು.

18. ಮೇಲೆ ಕೊಡೋಣಾದ ರಿಯಾಯತಿಗಳಿಗೋಸ್ಕರ, ಸ್ಟೇಟ್ ಫಾರೆಸ್ಟುಗಳು ವ ಪ್ಲಾಂಟೇಷನ್‌ಗಳ ನೆರೆಹೊರೆಯಲ್ಲಿ ವಾಸವಾಗಿರುವಂಥಾ ರೈತರುಗಳು ಸದರೀ ಸ್ಟೇಟ್ ಫಾರೆಸ್ಟು ವ ಪ್ಲಾಂಟೇಷನ್‌ಗಳಲ್ಲಿ ಉಂಟಾಗಬಹುದಾದ ಬೆಂಕಿಯನ್ನು ನಿರೋಧಪಡಿಸುವದಕ್ಕೆ, ತಗ್ಗಿಸುವದಕ್ಕೆ ಅಥವಾ ಆರಿಸುವದಕ್ಕೆ ಫಾರೆಸ್ಟು ಇಲಾಖೆಯವರಿಗೆ ಕುಮ್ಮಕ್ ಮಾಡಬೇಕಾಗಿ ಇರುತ್ತೆ. ಈ ವಿಷಯದಲ್ಲಿ ಅಶ್ರದ್ಧೆ ಯೇನಾದರೂ ತೋರಿಬಂದರೆ ರಿಯಾಯತಿಗಳು ಪೂರ್ತಿಯಾಗಾಗಲಿ ಕೆಲವು ಮಟ್ಟಿಗಾಗಲಿ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ರವರು ಗೊತ್ತು ಮಾಡುವಂಥಾ ಒಂದು ವಾಯಿದೆ ಪರಿಯಂತ ವಾಪಸ ತೆಗದುಕೊಳ್ಳಲ್ಪಡುವ ಬಗ್ಗೆ ಗುರಿಯಾಗಿರತಕ್ಕದ್ದು.

19. ರೈತರು ಒಂದು ಡಿಸ್ಟ್ರಿಕ್ಟು ಫಾರೆಸ್ಟಿನಲ್ಲಿ ಹುಲ್ಲು, ತರಗು, ಮುಳ್ಳು, ಅಥವಾ ಬಿದರು ಕಂಪೆಗಳಿಗೆ ಬೆಂಕಿ ಹಚ್ಚಿ ತದ್ವಾರಾ ಒಂದು ಸ್ಟೇಟ್ ಫಾರೆಸ್ಟು ಯಾ ಪ್ಲಾಂಟೇಷನನ್ನು ಅಪಾಯ ಪಡಿಸದಂತೆ ಖಂಡಿತವಾಗಿ ನಿರೋಧಿಸಲ್ಪಟ್ಟಿರುತ್ತಾರೆ.

20. ಇದರಡಿಕಂಡ ಇಸ್ತಿಹಾರ್‌ನಾಮೆಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ:—

1873ನೇ ಇಸವಿ ಏಪ್ರಿಲ್ 23ನೇ ಮರ್ಕುಂ 5ನೇ ನಂಬರ್ ಇಸ್ತಿಹಾರ್‌ನಾಮೆ.
1874ನೇ ಇಸವಿ ಆಗಸ್ಟ್ 31ನೇ ಮರ್ಕುಂ 153ನೇ ನಂಬರ್ ಇಸ್ತಿಹಾರ್‌ನಾಮೆ ಮತ್ತು ಇದನ್ನು ರದ್ದುಮಾಡುವ 1887ನೇ ಇಸವಿ ಫೆಬ್ರವರಿ 11ನೇ ಮರ್ಕುಂ 244ನೇ ನಂಬರ್ ಇಸ್ತಿಹಾರ್‌ನಾಮೆ.
1873ನೇ ಇಸವಿ ಡಿಸೆಂಬರ್ 19ನೇ ಮರ್ಕುಂ 5323–83ನೇ ನಂಬರ್ ಪ್ರೊಸಿಡಿಂಗ್ಸ್.
1892ನೇ ಇಸವಿ ಡಿಸೆಂಬರ್ 9ನೇ ಮರ್ಕುಂ 9837—ಆರ್. ಎಫ್. 226—92ನೇ ನಂಬರ್ ಪ್ರೊಸಿಡಿಂಗ್ಸ್.
1893ನೇ ಇಸವಿ ಸೆಪ್ಟಂಬರ್ 25ನೇ ಮರ್ಕುಂ 5822—ಆರ್. ಎಫ್. 226–92ನೇ ನಂಬರ್ ಪ್ರೊಸಿಡಿಂಗ್ಸ್.

} ಇವುಗಳು ಶಿವಮೊಗ್ಗಾ, ಕಡೂರು ಮತ್ತು ಹಾಸನ ಈ ಡಿಸ್ಟ್ರಿಕ್ಟುಗಳಿಗೆ ಲಗಾವಾಗುವಷ್ಟರ ಮಟ್ಟಿಗೆ.

8ನೇ ರೂಲಿನಲ್ಲಿ ನಮೂದಾದ "ಭಂಡಿಬೋಜಾ" ಅಂದರೆ ಯರಡು ಯತ್ತುಗಳಿಂದ ಯಳೆಯಲ್ಪಟ್ಟ ಕಂತ್ರಿ ಭಂಡಿಯಂದು ಅರ್ಥವಾಗತಕ್ಕದ್ದು. ನಾಲ್ಕು ಯತ್ತುಗಳಿಂದ ಯಳೆಯಲ್ಪಟ್ಟ ಭಂಡಿ ಬೋಜಾಕ್ಕೆ ದರವು ಯರಡು ಯತ್ತುಗಳಿಂದ ಯಳೆಯಲ್ಪಟ್ಟ ಭಂಡಿ ದರಕ್ಕೆ ದುಗಣಿಯಾಗಿ ಇರತಕ್ಕದ್ದು. ಮತ್ತು ಭಂಡಿ ಯಳೆಯುವ ಬಗ್ಯೆ ಜಾಸ್ತಿಯಾಗಿ ಕಟ್ಟಲ್ಪಡುವ ಪ್ರತಿ ಒಂದು ಜೋಡಿ ಯತ್ತಿಗೂ ಬದಸ್ತೂರ್ ಜಾಸ್ತೀ ಮಾಡಲ್ಪಡತಕ್ಕದ್ದು.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಸೆಕ್ರೆಟರಿ.

ಅಪ್ಪೆಂಡಿಕ್ಸ್ A.

ಶಿವಮೊಗ್ಗಾ ಡಿಸ್ಟ್ರಿಕ್ಟ್.—ತೀರ್ಥಹಳ್ಳಿ, ಸಾಗರ ವ ನಗರ ತಾಲ್ಲೂಕುಗಳು ಮತ್ತು ಸೊರಬ, ಕ್ಯಾಸನೂರು, ಚಂದ್ರಗುತ್ತಿ, ಚಿತ್ತೂರು, ಶಿಗ್ಗಾ ಮಾಗಣಿಗಳು ಮತ್ತು 1891ನೇ ಇಸವಿ ಅಕ್ಟೋಬರ್ 6ನೇ ಮರ್ಕುಂ 281ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಡಗಿರತಕ್ಕಂಥಾ ಅಂಡಿಗೆ, ತವನಂದಿ ಮತ್ತು ವುದ್ರಿ ಮಾಗಣಿಗಳ ಗ್ರಾಮಗಳು. ಸೊರಬ ತಾಲ್ಲೂಕಿನಲ್ಲಿ ಹೆಚ್ಚೆ ಮತ್ತು ಬೆಳಂಬೂರು ವ ಬಾರೂರು ಮಾಗಣಿಗಳು, ಮತ್ತು ಶಿಕಾರಿಪುರ ತಾಲ್ಲೂಕು ದಾನಂದೂರು ಮಾಗಣಿ ದಾನಂದೂರು ಗ್ರಾಮ ಮತ್ತು 1891ನೇ ಇಸವಿ ಸೆಪ್ಟಂಬರ್ 30ನೇ ಮರ್ಕುಂ 280ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಡಗಿರುವ ದಾನಿವಾಸ, ಕೋಣನಾಡ್, ಗಾಜನೂರ್, ಲಕ್ಕವಳ್ಳಿ, ಕುಂಸಿ, ಚೋರಡಿ ವ ಆಯನೂರು ಈ ಮಾಗಣಿಗಳಲ್ಲಿನ ಗ್ರಾಮಗಳು.

ಹಾಸನ ಡಿಸ್ಟ್ರಿಕ್ಟ್.—ಮಂಜಿರಾಬಾದ್ ತಾಲ್ಲೂಕಿನ ಬ್ಯಾಗಡಹಳ್ಳಿ, ಮಾರನಹಳ್ಳಿ ವ ಹಾನೆಬಾಳ್ ಹೋಬಳಿಗಳು.

ಕಡೂರು ಡಿಸ್ಟ್ರಿಕ್ಟ್.—ಕೊಪ್ಪ ವ ಮೂಡಗೆರೆ ತಾಲ್ಲೂಕುಗಳು, ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ವ ಲಕ್ಕವಳ್ಳಿ ಮಾಗಣಿಗಳು. ವಸ್ತಾರ, ಆಯನೂರು, ಕಡಗಲ್‌ನಾಡ್, ತಲದುರ್ನಾಡ್, ಆಲ್ದೂರ್, ಜಾಗರ, ಸಿರವಾಸಿ, ಮತ್ತು ಲಿಂಗೇನಹಳ್ಳಿ ಮಾಗಣಿಗಳು ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗಳೂರು ಮಾಗಣಿ ಹಿರೆಕೊಳಲೆ, ಚಿಕ್ಕೊಳಲೆ ಮತ್ತು ಆರಳಗುಪ್ಪೆ ಗ್ರಾಮಗಳು.

B. ನಮೂನೆ.

ರೈತರ ಹಕ್ಕುಗಳ ರೂಲ್ಸ್ ಅನುಸರಿಸಿ ಮರ, ಬೊಂಬುಗಳು ವ ಇತರ ಸಾಮಾನುಗಳನ್ನು ಕತರಾಯಿಸುವದಕ್ಕೆ, ಸಾಗಿಸುವದಕ್ಕೆ ಕೊಡಲ್ಪಟ್ಟ ಲೈಸೆನ್ಸು.

ಲೈಸೆನ್ಸ್ ಪಡದ ರೈತನ ಹೆಸರು ಮತ್ತು ವಾಸಸ್ಥಳ.	ಮರ, ಬೊಂಬುಗಳು ಅಥವಾ ಇತರ ಸಾಮಾನುಗಳನ್ನು ಕತ್ತರಾಯಿಸುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟ ತೇದಾದು.	ಕತರಾಯಿಸಲ್ಪಡಬೇಕಾದ ಫಾರೆಸ್ಟ್ ವ ಗ್ರಾಮದ ಹೆಸರು.	ಮರ ವ ಬೊಂಬುಗಳು ಯಲ್ಲಿಗೆ ಮತ್ತು ಎಷ್ಟರ ವಾಯಿದೆವಳಗೆ ಸಾಗಿಸಲ್ಪಡತಕ್ಕದ್ದು.	ಸೀನಿಯಾರೇಜ್ ಯಾನೆ ಶೀರ್ವೆ.		ಕತರಾಯಿಸಲ್ಪಡಬೇಕಾದ ಮರಗಳ ವಿವರಣೆ.	ಇತರ ಷರತ್ತುಗಳು ಯೇನಾದರೂ ಇದ್ದರೆ.	ಮರ, ಬೊಂಬುಗಳು, ಅಥವಾ ಇತರ ಸಾಮಾನುಗಳು ಕತರಾಯಿಸಲ್ಪಟ್ಟ ಸರಹದ್ದಿನ ಗ್ರಾಮದ ಪಟೇಲನಿಗೆ ತನಿಖಿ ಮಾಡಲ್ಪಡುವ ಬಗ್ಯೆ ಒಪ್ಪಿಸಿದ ತಾರೀಖು.	ಮರ, ಬೊಂಬುಗಳು ಅಥವಾ ಇತರ ಸಾಮಾನುಗಳು ಸಾಗಿಸಲ್ಪಟ್ಟ ಗ್ರಾಮದ ಪಟೇಲನಿಂದ ಆಖೈರ್ ತನಿಖಿ ಮಾಡಲ್ಪಡುವ ಬಗ್ಯೆ ಹಾಜರ್ಮಾಡಿದ ತಾರೀಖು.	ತಾಲ್ಲೂಕಿನ ಅಮಲ್ದಾರರಿಗಾಗಲಿ ಅಥವಾ ಅದು ಸಾದರ್ಮಾಡಿದ ಆಫೀಸರಿಗಾಗಲಿ ಲೈಸೆನ್ಸ್ ವಾಪಸ್ ಮಾಡಲ್ಪಡಬೇಕಾದ ಕಾಲ.	ಲೈಸೆನ್ಸು ವಾಪಸಾದ ಕಾಲ, ಮತ್ತು ಯಾಂಬಳಿಗೆ ವಾಪಸ್ ಮಾಡಲ್ಪಟ್ಟಿತೋ ಅಂಥಾ ಆಫೀಸರರ ರುಜು ಮತ್ತು ತಾರೀಖು.
				ಮೊಬಲಗು.	ಪಾವತಿ ತಾರೀಖು.						
1	2	3	4	5	6	7	8	9	10	11	12

ತಾರೀಖು 4ನೇ ಫೆಬ್ರವರಿ 1896.

ನಂ. 8979.—ಲೋ. ಫಂ. 257-92.—1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಆಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಕಡೂರು ಗ್ರಾಮದಲ್ಲಿ ಮಾದಿಗರಹಟ್ಟಿಯನ್ನು ಕಟ್ಟುವಬಗ್ಗೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು—ಕಡೂರು, ತಾಲ್ಲೂಕು—ಕಡೂರು, ಗ್ರಾಮ—ಕಡೂರು, ಖಾತೇದಾರನ ಹೆಸರು—ಚವುಡಾ.

ಜಮೀನಿನ ತಪ್ಸೀಲ್.

ಸರ್ವೇ ನಂಬರ್—ಪೈಕಿ 73, ವಿಸ್ತೀರ್ಣ—ಖುಷ್ಕೀ 5 ಎಕರೆ 8 ಗುಂಟೆ, ಕಂದಾಯ—ರೂ. 4—12—0.

ಚಕ್ಕುಬಂದಿ.

ಪೂರ್ವಕ್ಕೆ—ಸರ್ವೇ ನಂಬರ್ 74, ದೇವಯ್ಯನ ಭೂಮಿ.
ಪಶ್ಚಿಮಕ್ಕೆ—ಡಿಟೋ 72, ಲಕ್ಕನ ಭೂಮಿ.
ಉತ್ತರಕ್ಕೆ—ಸರ್ವೇ ನಂ. 69, ಹನುಮನ ಭೂಮಿ.
ದಕ್ಷಿಣಕ್ಕೆ—ಡಿಟೋ 73, ಪೈಕಿ ತಿಮ್ಮನ ಭೂಮಿ.

ನಂ. 8976.—ಲೋ. ಫಂ. 257.—92.—1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಆಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟ ಪಡಿಸುವದೇನಂದರೆ,—ಇದರಡಿ ವಿವರಿಸಲ್ಪಟ್ಟ ಮನೆ ವ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ ಗೋರೀಬಿದನೂರು ಷಹರ್ ಮ್ಯುನಿಸಿಪಾಲಿಟಿಯಲ್ಲಿ ವಂದು ಹೊಸರಸ್ತೆ ಹಾಕುವ ಬಗ್ಗೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನಿನ ತಪ್ಸೀಲ್.				ಚಕ್ಕುಬಂದಿ.			
				ಸಂ ನಂಬರು	ವಿವರಣೆ.	ಬೇಕಾದ ವಿಸ್ತೀರ್ಣ.	ದಾವಾಮೂಷಾಯಿ ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ.	ಗೋರೀಬಿದನೂರು.	ಗೋರೀಬಿದನೂರು ಷಹರ್.	ಗಾಣಿಗ ಲಿಂಗಂಣ	..	ಗಾಣಿಗ ಲಿಂಗಂಣನಬೀದಿಯಲ್ಲಿ ನಾಲ್ಕು ಅಂಕಣ ಮನೆ ಮತ್ತು ಖಾಲಿ ಜಮೀನು	ಲಾ. ರು. ಮ. ಸಲೆ ಅಡಿ 13–6–78	..	ಸರ್ವೆ ನಂ. 10 11—12	ಬೀದಿ	ಲಿಂಗಂಣನ ಮನೆ ಮತ್ತು ಅಂಗಳ	ಲಿಂಗಂಣನ ಮನೆ ಮತ್ತು ಖಾಲೀ ಅಂಗಳ
			ಡಿಟೋ	..	ಸದರೀ ಬೀದಿಯಲ್ಲಿ 9 ಅಂಕಣ ಮನೆ	30–6-180	..	ಡಿಟೋ	ಡಿಟೋ ಲಿಂಗಂಣನ ಮನೆ ಮತ್ತು ಖಾಲೀ ನಿವೇಶನ	ಕುಂಬಾರ ಮುನೆಪ್ಪನ ಮನೆ	ನಾಮ ಸುಬ್ಬಯ್ಯನ ಹಿತ್ತಲು
			ಕುಂಬಾರ ಕಪ್ಪಂಣನ ಮುನಿಯಪ್ಪನ ಮನೆ	..	8 ಅಂಕಣ ಮತ್ತು ಖಾಲೀ ನಿವೇಶನ	15–6–90	..	ಡಿಟೋ ನಂಬರ್ 12	ಕುಂಬಾರ ಮುನೆಪ್ಪ ಕಟಿನಯ್ಯ ಮುನೆಪ್ಪನ ಮನೆ ಮತ್ತು ರಸ್ತೆಯಾನೆ ಕಾಲ್‌ದಾರಿ	ಲಿಂಗಂಣನ ಮನೆ	ಲಿಂಗಂಣನ ಮನೆ
			ಗವುರಯ್ಯನ ವೆಂಕಟರಮಣನ ಜಮೀನ್	12	ತೋಟ	ಎಕರೆ ಗುಂಟೆ. 0—4	0–9–7	12ನೇ ಸರ್ವೆ ನಂಬರಿನ ಭಾಗ	ಕುಂಬಾರ ತಿಮ್ಮಪ್ಪ ವಗೈರೆರ ಮನೆಅಂಗಳ	ಸರ್ವೆ ನಂ. 13 ಮತ್ತು ರಂಗಯ್ಯನ ತಲಪರಿಗೆ ಪೋಣಿ	ಕುಂಬಾರ ಮುನೆಪ್ಪನ ಮನೆ
			ನಾಮ ರಂಗಯ್ಯನ ಡಿಟೋ	13	ಡಿಟೊ ಮತ್ತು 5 ಅಂಕಣದ ಕಲ್ಲು ಮಂಟಪ	3—2	0–3–5	13ನೇ ಸರ್ವೆ ನಂಬರಿನ ಭಾಗ	ಪನ್ನೆಭಾವಿಮುಸಾಸಾಬ್ ವಗೈರೇರ ಮನೆ		ಸರ್ವೆ ನಂ. 12

ತಾರೀಖು 17ನೇ ಫೆಬ್ರವರಿ 1896.

ನಂ. 7418.—ಫೈ. 459—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಕಾಂಪ್‌ಟ್ರೋಲರವರ ಚೀಫ್ ಅಸಿಸ್ಟೆಂಟರಾದ ಮಿಸ್ಟರ್ ಜೆ. ಆರ್. ಬ್ಯಾರೋಯವರಿಗೆ, 1896ನೇ ಇಸವಿ ಫೆಬ್ರವರಿ 10ನೇ ಮಧ್ಯಾಹ್ನದಲ್ಲಿ ಒಂದು ದಿವಸದ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿತು.

ತಾರೀಖು 18ನೇ ಫೆಬ್ರವರಿ 1896.

ನಂ. 7426.—ಫೈ. 464.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಸೆಕ್ಷನ್ ಅನುಸರಿಸಿ, ಸ್ಟೇಟ್‌ಹುಜೂರ್ ಟ್ರೆಜರಿ ಟ್ರೆಜರರಾದ ಮಿಸ್ಟರ್ ಟಿ. ರಾಯಲುಚೆಟ್ಟಿಯವರಿಗೆ, ಮಾಹೆಮಜಕೂರ್ 14ನೇ ಮಧ್ಯಾಹ್ನಂ ಲಾಗಾಯತು 2 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ತಾರೀಖು 18ನೇ ಫೆಬ್ರುವರಿ 1896.

ನಂ. 7409.—ಫೊ. 482.—ಮೆಸ್ಟರ್ ಯಲ್. ರಿಕೆಟಸ್ ಯವರು ಮಾಹೆ ಮಜಕೂರು 20ನೇ ಮಾರ್ಚಿಂ ಲಾಗಾಯತು ಮೈಸೂರ್ ಗವರ್ನಮೆಂಟ್ ನೌಕರಿಯಿಂದ ಪೆನ್ಷನ ಮೇಲೆ ನಿವೃತ್ತರಾಗಲು ಅಪ್ಪಣೆ ಕೊಡಲ್ಪಟ್ಟಿರುವದರಿಂದ, ಈ ಆಫಿಸರರು ಮೈಸೂರ್ ಸಂಸ್ಥಾನದಲ್ಲಿ ಸರ್ಕಾರ ನೌಕರಿ ಮಾಡಿದ ಸುಮಾರು 35 ವರುಷಗಳಗಿಂತ ಜಾಸ್ತೀ ಕಾಲದಲ್ಲಿ, ಅನೇಕ ದೊಡ್ಡದೊಡ್ಡ ಮತ್ತು ಜವಾಬ್‌ದಾರಿವುಳ್ಳ ಉದ್ಯೋಗಗಳಲ್ಲಿದ್ದು ಅವುಗಳನ್ನು ವಿಶೇಷ ಸಾಮರ್ಥ್ಯದಿಂದಲೂ ಮೆಹನತ್ತಿನಿಂದಲೂ ಅತ್ಯಂತ ಶ್ರದ್ಧೆಯಿಂದಲೂ ನಿರ್ವಾಹಮಾಡಿದ ಈ ಆಫೀಸರರ ಅಮೋಘವಾದ ಮೆಹನತ್ತನ್ನು ಘನವನ್ನುಹೊಂದಿದ ಶ್ರೀಮನ್ ಮಹಾರಾಣಿ ರೀಜಂಟರವರು ವಿಶೇಷ ವಾಗಿ ಗಣನೆಗೆ ತಂದು ಈ ಆಫಿಸರರು ನಿವೃತ್ತರಾಗುವದರ ದೆಸೆಯಿಂದ ಈ ಸಂಸ್ಥಾನಕ್ಕೆ ಅತ್ಯಂತ ಅನುಭವಶಾಲಿಗಳಾದ ಆಫೀಸರರ ನೌಕರಿಯು ನ್ಯೂನತೆಯಾಯಿತೆಂದು ಅಜ್ಞಾಪಿಸುತ್ತಾರೆ.

ತಾರೀಖು 19ನೇ ಫೆಬ್ರುವರಿ 1896.

ನಂ. 7457.—ರೆ. 2903.—ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 171ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ತಾಲ್ಲೂಕು ಅಮಲ್‌ದಾರ್ ಸಿ. ಡಿ. ರಾಮಸ್ವಾಮಯ್ಯನವರಿಗೆ, ಮಾಹೆಮಜಕೂರ್ 16ನೇ ಮಾರ್ಚಿಂ ಲಾಗಾಯತು 5 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಅಮಲ್‌ದಾರರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ತನಕ ಸದರೀ ತಾಲ್ಲೂಕು ಸಿರಸ್ತೇದಾರ್ರು ತಾಲ್ಲೂಕು ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 20ನೇ ಫೆಬ್ರುವರಿ 1896.

ನಂ.7471.—ರೆ. 2909.—ಯಡಹಳ್ಳಿ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರ್ ಯಲ್ಲೋ ಶ್ರೀನಿವಾಸರಾಯರಿಗೆ, ಮಾಹೇ ಮಜಕೂರು 7ನೇ ಮಾರ್ಚಿಂ 7121—ರೆ. 2758ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 5 ದಿವಸಗಳ ಕ್ಯಾಜುಯಲ್ ರಜಾ ಅವರ ಖಾಯಿಷ್ ಮೇರೆ ಇದರದೆಸೆಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 7474.—ರೆ. 2912.—1896ನೇ ಇಸವಿ ಜನವರಿ 27ನೇ ತಾರೀಖಿನ 6786—ರೆ. 2628ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಮೂಲಕ ಆನೆಕಲ್ ಅಮಲ್‌ದಾರ್ ಬಿ. ಶ್ರೀನಿವಾಸರಾಯರಿಗೆ ಕೊಡಲ್ಪಟ್ಟ ಆರುದಿವಸಗಳ ಕ್ಯಾಜುಯಲ್ ರಜಾ ಪೈಕಿ ಅವರು ಒಂದು ದಿವಸ ಅಂದರೆ ಜನವರಿ 20ನೇ ಮಾರ್ಚಿನಲ್ಲಿ ಮಾತ್ರ ವುಪಯೋಗಿಸಿಕೊಂಡಿರುತ್ತಾರಾಗಿ ವುಳಿದ ಭಾಗದ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 7477.—ರೆ. 2915.—1895ನೇ ಇಸವಿ ಡಿಸೆಂಬರ್ 17ನೇ ಮಾರ್ಚಿಂ 5598—ರೆ. 2179ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಮೂಲಕ ಹೊಸದುರ್ಗದ ಡೆಪ್ಯುಟಿ ಅಮಲ್‌ದಾರ್ ಟ. ವೆಂಕಟರಾಮಯ್ಯನವರಿಗೆ ಕೊಡಲ್ಪಟ್ಟ ಮೂರು ದಿವಸಗಳ ಕ್ಯಾಜುಯಲ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 7495.—ಫಾರೆಸ್ಟ್—ಯಫ್. 123—95 ಮೂರನೇ ಗ್ರೇಡ್ ಫಾರೆಸ್ಟ್ ಅಸಿಸ್ಟೆಂಟ್ ಕನ್‌ಸರ್ವೇಟರ್ ಮೆಸ್ಟರ್ ಸಿ. ಅಪ್ಪಯ್ಯನವರು, ಅವರ ವರ್ಕಿಂಗ್‌ಪ್ಲಾನ್ ಆಫಿಸ್ ಕೆಲಸಗಳಿಗೆ ಕುಂದಕ ವಿಲ್ಲದೆ ಮತ್ತೊಂದು ಹುಕುಂ ಕೊಡುವ ತನಕ ಕನ್‌ಸರ್ವೇಟರವರಿಗೆ ಹೆಡ್ ಕ್ವಾರ್ಟರಿನ ಅಸಿಸ್ಟೆಂಟರಾಗಿ ಕೆಲಸ ನೋಡತಕ್ಕದ್ದು.

ನಂ. 7512.—ರೆ. 2935.—1896ನೇ ಇಸವಿ ಫೆಬ್ರುವರಿ 7ನೇ ಮಾರ್ಚಿಂ 7127—ರೆ. 2764ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಮೂಲಕ ಪಾವಗಡ ತಾಲ್ಲೂಕು ಅಮಲ್‌ದಾರ್ ಆರ್. ರಾಘವೇಂದ್ರರಾಯರಿಗೆ ಕೊಡಲ್ಪಟ್ಟ 8 ದಿವಸಗಳ ಕ್ಯಾಜುಯಲ್ ರಜಾ ಇದರಿಂದ ಪ್ರಿವಿಲೀಜ್ ರಜಾಕ್ಕೆ ಬದಲಾಯಿಸಲ್ಪಟ್ಟು ಇನ್ನೂ 10 ದಿವಸಗಳ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಫೆಬ್ರುವರಿ 1896.

ನಂ.7500.—ರೆ. 2925.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ, ಶಿರಾ ತಾಲ್ಲೂಕು ಅಮಲ್‌ದಾರ್ ಎ. ವೇದಾಂತ ದೇಶಿಗಂ ಅಯ್ಯಂಗಾರ್ರಿಗೆ, 1896ನೇ ಇಸವಿ ಫೆಬ್ರುವರಿ 25ನೇ ಮಾರ್ಚಿಂ ಲಾಗಾಯತು ಯಾ ಅವರು ಅದನ್ನುಪಯೋಗಿಸಿಕೊಳ್ಳುವ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ವೇದಾಂತ ದೇಶಿಗಂ ಅಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಹಾಲಿ ಕ್ಲೋಸ್‌ಪೇಟೆಗೆ ವರ್ಗ ಮಾಡಲ್ಪಟ್ಟಿರುವ ಹುಳಿಯಾರದ ಡೆಪ್ಯುಟಿ ಅಮಲ್‌ದಾರ್ ತಿರುನಾರಣಯ್ಯಂಗಾರ್ರಿಗೆ ಶಿರಾ ತಾಲ್ಲೂಕು ಅಮಲ್‌ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತೆ.

ತಿರುನಾರಣಯ್ಯಂಗಾರ್ರು ಇತರ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ, ದಿವಾನರವರ ಆಫಿಸ್ ಕ್ಲರ್ಕ್ ಎ. ಕೃಷ್ಣಸ್ವಾಮಯ್ಯಂಗಾರ್ ಬಿ. ಎ. ಯವರಿಗೆ, ಕ್ಲೋಸ್‌ಪೇಟೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತೆ (ಕೂಡಲೇ ಕೆಲಸದ ಮೇಲೆ ಹೋಗತಕ್ಕದ್ದು.)

ನಂ. 7505.—ರೆ. 2930.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ, ಕೊಪ್ಪ ತಾಲ್ಲೂಕು ಅಮಲ್‌ದಾರ್ ನಗರ ಸುಬ್ಬರಾಯರಿಗೆ, 1896ನೇ ಇಸವಿ ಮಾರ್ಚಿ 1ನೇ ತಾರೀಖು ಲಾಗಾಯತು ಯಾ ಅವರು ಅದನ್ನ ಉಪಯೋಗಿಸಿಕೊಂಡ ತಾರೀಖು ಮೊದಲು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಗರ ಸುಬ್ಬರಾಯರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಯಡಹಳ್ಳಿ ಡೆಪ್ಯುಟಿ ಅಮಲ್‌ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾದ ಯಲ್ಲೋ ಶ್ರೀನಿವಾಸರಾಯರು, ಕೊಪ್ಪ ತಾಲ್ಲೂಕು ಅಮಲ್‌ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ಯಲ್ಲೋ. ಶ್ರೀನಿವಾಸರಾಯರು ಯಿತರ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ, ದಿವಾನರವರ ಆಫೀಸು ಕ್ಲರ್ಕ ಯಂ. ಕೃಷ್ಣಸ್ವಾಮಯ್ಯಂಗಾರ್ ಬಿ. ಎ. ಯವರು ಯಡಹಳ್ಳಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ಮೊಕರರ್.

ತಾರೀಖು 21ನೇ ಫೆಬ್ರುವರಿ 1896.

ನಂ. 7535.—ರೆ. 2946.—ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 172ನೇ ಆರ್ಟಿಕಲ್ ಮೇರೆ, ಚಿತ್ರದುರ್ಗದ ಡಿಸ್ಟ್ರಿಕ್ಟ್ ಹರಿಹರ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಡಿ. ನರಸಿಂಗರಾಯರಿಗೆ, ಅವರುಪಯೋಗಿಸಿಕೊಳ್ಳುವ ತಾರೀಖಿನಿಂದ 7 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಡೆಪ್ಯುಟಿ ಅಮಲ್ದಾರರು ರಜಾದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ದಾವಣಗೆರೆ ತಾಲ್ಲೂಕಿನ ಅಮಲ್ದಾರರು ಅವರ ಕೆಲಸಗಳೊಂದಿಗೆ ಹರಿಹರ ಸಬ್ ತಾಲ್ಲೂಕಿನ ಚಾರ್ಜನ್ನು ವಹಿಸಿರತಕ್ಕದ್ದು.

ನಂ. 9745.—ಲೋ. ಫಂ. 125—92.—ಇದರಡಿ ನಮೂದ್ ಮಾಡಲ್ಪಟ್ಟಿರುವ ದೊಡ್ಡ ಮನುಷ್ಯರುಗಳು ಬಾಜಾದಲ್ಲಿ ಕಂಡ ಮ್ಯುನಿಸಿಪಲ್ ಬೋರ್ಡುಗಳ ಮೆಂಬರಾಗಿ 5 ವರುಷ ಕಾಲ ಅಥವಾ ಅದಕ್ಕೆ ಜಾಸ್ತಿಯಾಗಿ ಕೆಲಸ ನೋಡಿರುವದರಿಂದ ಇನ್ನೂ 5 ವರುಷ ಕಾಲ ಪರಿಯಂತ ಪುನಃ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮ್ಯುನಿಸಿಪಾಲಿಟಿಗಳು.		ಮೆಂಬರುಗಳ ಹೆಸರು.
1. ಚಿಕ್ಕ ಮಗಳೂರು	..	ಮೆಸ್ಸರ್ಸ್ ಟಿ. ಪಾಪಣ್ಣಚೆಟ್ಟಿ
2. ಯಡೆಹಳ್ಳಿ	..	ಡಿಟ್ಟೋ ಭನಪ್ಪ
3. ತರೀಕೆರೆ	..	ಡಿಟ್ಟೋ ಪಟೇಲ್ ಶಿವಪ್ಪ
4. ಅಜಂಪುರ	..	1 ಡಿಟ್ಟೋ ಖಾಜಿ ಅಬ್ದುಲ್ ರಜಾಖ್ ಸಾಹೆಬ್
		2 ಡಿಟ್ಟೋ ಮರಿಯಣ್ಣ
5. ಶ್ರಿಂಗೇರಿ	..	ಡಿಟ್ಟೋ ವೆಂಕಟರಾಮಯ್ಯ

ನಂ. 9746.—ಲೋ. ಫಂ. 125-92.—ಅಯಿದು ವರುಷಗಳ ಕಾಲವನ್ನ ಪೂರ್ತಿಮಾಡಿ ನಿವರ್ತರಾಗುವವರ ಹೆಸರುಗಳಿಗೆ ಯದುರಾಗಿ ಕಾಣಿಸಲ್ಪಟ್ಟ ಇದರಡಿ ಕಂಡ ದೊಡ್ಡ ಮನುಷ್ಯರುಗಳು ತರೀಕೆರೆ ಮ್ಯುನಿಸಿಪಾಲಿಟಿ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹೊಸ ಮೆಂಬರುಗಳು.	ನಿವರ್ತರಾಗುವ ಮೆಂಬರುಗಳು.
1. ಮೆಸ್ಸರ್ಸ್ ಫಣಿಯಪ್ಪ (ಸಾಹುಕಾರ್)	ಮೆಸ್ಸರ್ಸ್ ಡಿ. ರಾಚಪ್ಪ
2. ಡಿಟ್ಟೋ ಸಿ. ಬಾಬುಸಾಬ್ (ಜಮೀನ್ದಾರ್)	ಡಿಟ್ಟೋ ಸಿ. ಹಯಾತ್ಸಾಬ್

ನಂ. 9747.—ಲೋ. ಫಂ. 125—92.—ಇದರಡಿಕಂಡ ದೊಡ್ಡ ಮನುಷ್ಯರು ಕಡೂರು ಡಿಸ್ಟ್ರಿಕ್ಟ್ ಕಡೂರು ತಾಲ್ಲೂಕಿನಲ್ಲಿ ಹೊಸದಾಗಿ ಯೇರ್ಪಾಡಾಗಿರುವ ಸಕ್ಕರೆ ಪಟ್ಟಣದ ಮ್ಯುನಿಸಿಪಾಲಿಟಿಯ ಮೆಂಬರುಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಕಡೂರು ಅಮಲ್ದಾರರು	ವೈಸ್ ಪ್ರೆಸಿಡೆಂಟ್.
ಪಬ್ಲಿಕ್ ವರ್ಕ್ಸ್ ಡಿಪಾರ್ಟ್ಮೆಂಟ್ ಓವರಸಿಯರ್	ಸಕ್ಕರೆಪಟ್ಟಣದ ಎಕ್ಸ್ ಅಫಿಷಿಯೊ ಮೆಂಬರ್.

1. ಮೆಸ್ಸರ್ಸ್ ಜೆ. ಶ್ರೀನಿವಾಸರಾವ್	(ಜಮೀನ್ದಾರ್)		ನಾನ್ ಅಫಿಷಿಯಲ್ ಮೆಂಬರುಗಳು.
2. ಡಿಟ್ಟೋ ಕೆ. ಧಾಮಣ್ಣ	(ಡಿಟ್ಟೋ ವ ಕಂಟ್ರಾಕ್ಟರ್)		
3. ಡಿಟ್ಟೋ ಮಲ್ಲೇಶಯ್ಯ	(ಪಟೇಲ್)		
4. ಡಿಟ್ಟೋ ರಾಮಸ್ವಾಮಯ್ಯಂಗಾರ್	(ಜಮೀನ್ದಾರ್)		
5. ಡಿಟ್ಟೋ ರೇವಣ್ಣ	(ಡಿಟ್ಟೋ ವ ವರ್ತಕರು)		
6. ಡಿಟ್ಟೋ ತೋಟಪ್ಪ	(ಡಿಟ್ಟೋ)		
7. ಡಿಟ್ಟೋ ರಂಗಣ್ಣ	(ಜಮೀನ್ದಾರ್)		
8. ಡಿಟ್ಟೋ ಬೋರನಾಯಕ	(ಡಿಟ್ಟೋ)		

ತಾರೀಖು 24ನೇ ಫೆಬ್ರುವರಿ 1896.

ನಂ. 7578.—ರೆ. 2963.—ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಮೇರೆ ಮದ್ದಗಿರಿ ತಾಲ್ಲೂಕು ಅಮಲ್ದಾರ್ ಸಿ. ರ್ಯ. ಚವುಡಯ್ಯನವರಿಗೆ, 1896ನೇ ಇಸವಿ ಮಾರ್ಚಿ 6ನೇ ತಾರೀಖು ಲಾಗಾಯತು ಅಥವಾ ಅವರದನ್ನುಪಯೋಗಿಸಿಕೊಳ್ಳುವ ತಾರೀಖಿನಿಂದ ವಂದು ತಿಂಗಳ ಪ್ರಿ[illegible]ಕ್ ರಜಾ ಕೊಡಲ್ಪಟ್ಟಿರುತ್ತೆ.

ಸಿ. ರ್ಯ. ಚವುಡಯ್ಯನವರು ರಜಾದ[illegible]ರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವಾಸುದೇವ[illegible]ರು ಅವರ ಕೆಲಸಗಳೊಂದಿಗೆ ಆ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮ[illegible]ಲ್ಪಟ್ಟಿರುತ್ತಾರೆ.

ನಂ. 7621.—ರೆ. 2975.—ಮೆಸ್ಸರ್ಸ್ ಪಿ. ರ್ಯ. ಪೂರ್ಣಯ್ಯನವರು ಬೆಂಗಳೂರು ಡಿಸ್ಟ್ರಿಕ್ಟ್ ವ ಟ್ರೆಜರೀ ಚಾರಜನ್ನು ಮಾಹೆ ಮಜಕೂರು 24ನೇ ಮರ್ಕುಮಿನ ಮಧ್ಯಾನ್ಹಾತ್ಪರ ಪೊಪ್ಪಿಸಿ, ಮೆಸ್ಸರ್ಸ್ ವಿ. ರ್ಯ. ನರಸಿಹ್ಮಯ್ಯಂಗಾರ್ರವರು ವಹಿಸಿರುತ್ತಾರೆ.

ನಂ. 7598.—ಫೈ. 479.—ಮೈಸೂರ ಸರ್ವಿಸ್ ರೆಗ್ಯುಲೇಷನಿನ 171ನೇ ಆರ್ಟಿಕಲ್ ಅನುಸರಿಸಿ ಅಸಿಸ್ಟೆಂಟ್ ಕಾಮ್ಪ್ಟ್ರೋಲರ್ ಮೆಸ್ಸರ್ಸ್ ಹೆಚ್. ಈಗಲ್ಸ್ಯವರಿಗೆ 1896ನೇ ಫೆಬ್ರುವರಿ 18ನೇ ಮರ್ಕುಮಿನಲ್ಲಿ ಕಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 25ನೇ ಫೆಬ್ರುವರಿ 1896.

ನಂ. 7611.—ರೆ. 2972.—ಮೆಸ್ಸರ್ಸ್ ಯಲ್. ರಿಕ್ಕೆಟ್ಸ್ಯವರು ಮೈಸೂರು ಸಂಸ್ಥಾನದ ಯಕ್ಸೈಜ್ ಕಮಿಷನರ್ ಆಫಿಸಿನ ಚಾರ್ಜನ್ನು ಮೆಸ್ಸರ್ಸ್ ಪಿ. ರ್ಯ. ಪೂರ್ಣಯ್ಯನವರಿಗೆ 1896ನೇ ಇಸವಿ ಫೆಬ್ರುವರಿ 24ನೇ ಮರ್ಕುಮಿನ ಮಧ್ಯಾನ್ಹಾತ್ಪರ ಒಪ್ಪಿಸಿರುತ್ತಾರೆ.

ತಾರೀಖು 26ನೇ ಫೆಬ್ರವರಿ 1896.

ನಂ. 9970—ಜ್ಞಲೋ. ಫಂ. 197—92. ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ವೈಸ್ ಪ್ರೆಸಿಡೆಂಟರಾದ ಮೆಸ್ಟರ್ ಕೆ. ಶ್ರೀನಿವಾಸ ರಾಯರು 1896ನೇ ಇಸವಿ ಜನವರಿ ಮಾಹೆ 21ನೇ ತಾರೀಖು 8261—ಲೋ. ಫಂ. 197—92ನೇ ನಂಬರ ಗವರ್ನಮೆಂಟ ಇಸ್ತಿ ಹಾರನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟ ಮೂರು ವಾರಗಳ ಪ್ರಿವಿಲೀಜ್ ರಜಾ ಪೈಕಿ 17 ದಿವಸಗಳನ್ನು ಮಾತ್ರ ಉಪಯೋಗಿಸಿಕೊಂಡಿ ರುತ್ತಾರಾಗಿ ಅವರು ಉಪಯೋಗಿಸಿಕೊಳ್ಳದ 4 ದಿವಸಗಳ ರಜಾ ಯಿದ್ದರಿಂದ ರದ್ದುಮಾಡಲ್ಪಟ್ಟಿದೆ.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೇಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ತಾರೀಖು 19ನೇ ಫೆಬ್ರವರಿ 1896ನೇ ಇಸವಿ ಬೆಂಗಳೂರು.

ಹಾಸನದ ಕಸಬಾದಲ್ಲಿರುವ ಸರ್ಕಾರ ಅನ್ನಛತ್ರಕ್ಕೆ ಈ ಕೆಳಗೆ ನಮೂದಿಸುವವರನ್ನು ಧರ್ಮದರ್ಶಿಗಳನ್ನಾಗಿ ನೇಮಿಸಿಯಿದೆ.

(1) ಪೆನ್ಷನ್ ಅಮಲ್ದಾರ್ ಕ್ರಿಷ್ಣಪ್ಪನವರು.
(2) ನಾಡಿಗ ಚನ್ನಕೇಶವಯ್ಯನವರು.
(3) ಪಂಡಿತ ನರಸಿಹ್ಮಯ್ಯನವರು.
(4) ಕೆ. ಶೀತಾರಾಮಯ್ಯನವರು.
(5) ಕಸಬಾ ಶಾನುಭಾಗ ವೆಂಕಟಸುಬ್ಬಯ್ಯನವರು.

ಎ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂ. ಅಂಡ್ ಸೆಕ್ರೇಟರಿ.

ರೆಯಿಲ್ವೇ.

ಇಸ್ತಿಹಾರನಾಮೆ.

ಮೈಸೂರು ಗವರ್ನಮೆಂಟನವರಿಗೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಜಮೀನುಗಳು ಸರಕಾರದ ಕೆಲಸಕ್ಕೋಸ್ಕರ ಅರಸೀಕೆರೆ ಯಿಂದ ಮಂ ಗಳೂರಿಗೆ ಅಂದರೆ ಹಾಬನಕಟ್ಟ, ಆಡಿಹಳ್ಳಿ, ಬಾಗಡದೇದುದ್ದ, ಹಾಸನ, ಆಲೂರು, ಬೆಳಗೋಡು, ಸಕಲೇಶಪುರ, ಹೆಬ್ಬಸಾಲ, ಯಟಿ ಯಾನಹಳ್ಳೀ ಹಳ್ಳಾ, ಕೆಂಪಕಲ್ ಮತ್ತು ಮಾರ್ನೇಬೀಡ ಮಾರ್ಗವಾಗಿ ರೆಯಿಲ್ ರಸ್ತೆಯನ್ನು ಹಾಕುವ ಬಗ್ಯೆ ಬಹುಶಃ ಬೇಕಾಗಬಹು ದೆಂದು ಕಾಣಬರುವದರಿಂದ ಇದಕ್ಕೆ ಸಂಬಂಧಪಟ್ಟ ತಮಾಂ ಜನಗಳಿಗೂ ಇದರಿಂದ ತಿಳಿಸುವದೇನಂದರೆ,—1894ನೇ ಇಸವಿ VIIನೇ ನಂಬರ್ ಮೈಸೂರು ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 4 ವ 5ನೇ ಸೆಕ್ಷನ್‌ಗಳಿಂದ ವುಂಟುಮಾಡಲ್ಪಟ್ಟ ಅಧಿಕಾರಗಳನ್ನ ಚಲಾ ಯಿಸುವದರಲ್ಲಿ ಮೈಸೂರು ಗವರ್ನಮೆಂಟನವರು, ಸದರೀ ಗವರ್ನಮೆಂಟನ ರೈಲ್ವೇ ಇಲಾಖೆ ಸೆಕ್ರೇಟರಿಯವರನ್ನೂ ಅವರ ತಾಬೇದಾರ ರನ್ನೂ ಮತ್ತು ಅವರ ನವುಕರರುಗಳನ್ನೂ ಸುದಾ ಈ ಆಕ್ಟಿನ ಕೆಲಸಗಳಿಗೋಸ್ಕರ ಮೊಕರರ್ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಸಿ. ಬರ್ನ್ ಕರ್ನಲ್,
ರೆಯಿಲ್ವೇ ಸೆಕ್ರೇಟರಿ.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 8.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ|| 27, ಸನ 1896.

IIನೇ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಷ್ಮಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ ಪೋರ್ಟರು ಬ್ರದರಸ್ಸಿರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ರ್ಯಾಮರವರ ಡಿಟೋ	,, 85

ಖರೀದೀದಾರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

134

ನಂದೀದುರ್ಗದ ಡಿವಿಜ಼ರ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸರ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 299.

ಮೃತಪಟ್ಟ ಸ್ವೈಬಶಟ್ರು ಅಣ್ಣಯ್ಯಪ್ಪ ಶಟ್ಟರವರ ಆಸ್ತೀ ವಿಷಯದಲ್ಲಿ—.

ಅರ್ಜೀದಾರು, ಬೆಂಗಳೂರು ನಗರ್ತರ ಪೇಟೆಯಲ್ಲಿ ಇರುವ ಲಕ್ಷ್ಮಮ್ಮನು, ಮೃತಪಟ್ಟ ಸದರೀ ಸೈಬಶಟ್ಟರ ಅಂಣಯ್ಯಪ್ಪಶಟ್ಟರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ನಗರ್ತರಪೇಟೇ ಸ್ಥಳದ ಲಕ್ಷ್ಮಮ್ಮನು, ಡಿಟ್ಟೋ ಪೇಟೇ ವಾಸಸ್ಥರಾಗಿ ಮೃತಪಟ್ಟ ಸೈಬಶಟ್ಟರ ಅಂಣಯ್ಯಪ್ಪಶಟ್ಟರವರ ಜಿಂದಗಿ ಬಗ್ಯಾಗಿ, ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ರಖಾಸ್ತುದಾರರಾದ ಲಕ್ಷ್ಮಮ್ಮನವರ ಅರ್ಜಿಯನ್ನು ಸರ್ 1896ನೇ ಇಸವಿ ಮಾರ್ಚಿ ತಿಂಗಳ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೈಬಶಟ್ಟರ ಅಣ್ಣಯ್ಯಪ್ಪಶಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಫಿಬ್ರುವರಿ ತಿಂಗಳ 10ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 220.

ಮೃತಪಟ್ಟ ವೆಂಕಟಪ್ಪನ ಆಸ್ತೀ ವಿಷಯದಲ್ಲಿ—.

ಅರ್ಜೀದಾರು ಆನೆಕಲ್ ತಾಲ್ಲೂಕು ಅತ್ತಿಬೆಲೆಯಲ್ಲಿರುವ 1ನೇ ನಾರಾಯಣಿ 2ನೇ ನಾಗಪ್ಪ ಮೈನರುಗಳು ಗಾರ್ಡಿಯನ್ ಮತ್ತು ಚಿಕ್ಕಪ್ಪ ರಾಮದಾಸಂಣನು, ಮೃತಪಟ್ಟ ಸದರೀ ವೆಂಕಟಪ್ಪನಿಗೆ 1ನೇ ನಾರಾಯಣಿ 2ನೇ ನಾಗಪ್ಪ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಅತ್ತಿಬೆಲೇ ಸ್ಥಳದ ರಾಮದಾಸಣ್ಣನು, ಅತ್ತಿಬೆಲೇ ವಾಸಸ್ಥರಾಗಿ ಮೃತಪಟ್ಟ ವೆಂಕಟಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ನಾರಾಯಣಿ 2ನೇ ನಾಗಪ್ಪ, ಗಾರ್ಡಿಯನ್ ರಾಮದಾಸಂಣನ ಅರ್ಜಿಯನ್ನು ಸರ್ 1896ನೇ ಇಸವಿ ಮಾರ್ಚಿ ತಿಂಗಳ ತಾರೀಖು 18ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1896ನೇ ಇಸವಿ ಫಿಬ್ರುವರಿ ತಿಂಗಳ 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಶಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಅನುಸರಿಸಿ, ಕೊಡಲ್ಪಟ್ಟ ನೋಟಿಸ್.

ಬೆಂಗಳೂರು ಸಬ್ ಡಿವೀಜ಼ನ್ ಮುನ್ಸಿಫ್ ಕೋರ್ಟು ಸರ್ 1895—96ನೇ ಇಸವಿ ಅಸಲ್ ನಂಬರ 148.

ವಾದಿ.	ಪ್ರತಿವಾದಿಗಳು.
ಆನೆಕಲ್‌ನಲ್ಲಿರುವ ಶಿವಾಚಾರದ ರುದ್ರದೇವರ ಕೊಮಾರ ವೀರಮರಿದೇವರು.	ಆನೆಕಲ್ ಕಸಬಾದಲ್ಲಿರುವ ಕಾನಬಾನಹಳ್ಳಿ ತಾಲ್ಲೂಕು ಮರಳುವಾಡಿ ಗುರುಶಿದ್ದೇವರ ಸ್ವಿಕೃತ ಸಿಷ್ಯ ಹೊನ್ನಯ್ಯ ಉರುಫ್ ಮರಿದೇವರು ವಗೈರೆ 8 ಜನಗಳು.

ಈ ಮೊಕದ್ದಮಾ 1ನೇ ಪ್ರತಿವಾದಿಯಿಂದ ತನಿಗೆ ಕ್ರಯಮೂಲಕವಾಗಿ ಬಂದಿರತಕ್ಕ ಕಾನಬಾನಹಳ್ಳಿ ತಾಲ್ಲೂಕು ಮರಳುವಾಡಿಯಲ್ಲಿ ಇರುವ ಮನೆಯನ್ನ ಪ್ರತಿವಾದಿಗಳಿಂದ ತನ್ನ ಸ್ವಾಧೀನಪಡಿಸಿಕೊಡಬೇಕೆಂತ ಸದರೀ ವಾದಿ ವೀರಮರಿದೇವರು ಯಂಬವರು ಈ ಕೋರ್ಟಿನಲ್ಲಿ ದಾವಾ ತಂದಿರುವದ್ದರಿಂದಲೂ, ಈ ದಾವಾ ಸ್ವತ್ತು ಸದರೀ ಮರಳುವಾಡಿ ಗ್ರಾಮದ ಹತ್ತುಜನ ಸಿವಾಚಾರ ಮತಸ್ಥರಿಗೆ ಸಂಬಂಧಪಟ್ಟದ್ದೆಂತಲೂ ಸಹ ತಿಳಿಯಬರುವದರಿಂದ ಇದರಲ್ಲಿ ಹಕ್ಕು ಯಿರತಕ್ಕ ಯಲ್ಲಾ ಸಿವಾಚಾರ ಜನಗಳೂ 1896ನೇ ಇಸವಿ ಫಿಬ್ರುವರಿ 27ನೇ ತಾರೀಖು ದಿವ 11 ಘಂಟೆಗೆ ಕೋರ್ಟು ರೂಬರೂ ಹಾಜರಾಗಿ ಮೊಕದ್ದಮಾ ನಡಿಸಬಹುದೆಂತ ಇದರಿಂದ ಮೇಲ್ಕಂಡ ಸಮಸ್ತ ಶಿವಾಚಾರದ ಜನಗಳಿಗೆ ತಿಳಿಯಪಡಿಸಿಧೆ.

ತಾರೀಖು 20ನೇ ಮಾಹೆ ಫಿಬ್ರುವರಿ 1896ನೇ ಇಸವಿ.

ಟಿ. ಜೆ. ವ್ಯಾಂಡರ್ ಲೋಕ್,
ಮುನ್ಸಿಫ್.

ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 17ನೇ ಫೆಬ್ರುವರಿ 1896ನೇ ಇಸವಿ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—95—96ನೇ ಸಾಲಿನ ಜಂಗಲ್ ಪಸಾಲೇ ಜಿನಸಿಗಳು ಅಮಾನಿ ಜಮಾಯಿಸಿದ್ದು ಈ ಕೆಳಗೆ ಕಂಡಂತೆ 96ನೇ ಇಸವಿ ಮಾರ್ಚಿ 24ನೇ ತಾರೀಖು ಬೆಳಿಗ್ಯೆ 8 ಘಂಟೇಲಿ ಬೆಂಗಳೂರು ಸಂಡಲ್ ಕೋಠೀಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜು ಮಾಡಲ್ಪಡುತ್ತೆ:—

	ಜಿನಸಿಗಳ ತಪ್ಸೀಲು.	ಮೊತ್ತ.	ಷರಾ.
1	ಅಳಲೇಕಾಯಿ	5 ರ್ಟಗಳು	ಹೆಚ್ಚು ಕಡಮೆ
2	ಅರಗುಪುಡಿ	1 ರ್ಟ	ಡಿಟೋ
3	ಅಳಲೇಕಾಯಿ ಹೊಟ್ಟು	$\frac{1}{8}$ ರ್ಟ	ಡಿಟೋ

2. ಹರಾಜಿನಲ್ಲಿ ತೆಗದುಕೊಂಡವರೇ ಹರಾಜಾದ ಅಥವಾ ಮೊಬಲಗು ಕೊಟ್ಟ ತಾರೀಖು ಲಾಗಾಯತು ಆ ಜಿನಸಿಗಳ ರೇಖೆ ಮಾಡಿಕೊಳ್ಳತಕ್ಕದ್ದು.

3. ಹರಾಜು ಖೈದಾದ ತಕ್ಷಣವೇ ಶೇಕಡಾ 25 ರೂಪಾಯಿ ಮೇರೆ ಡಿಪಾಜಿಟಿ ಹಾಜರ್ಮಾಡಿ, ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ಒಂದು ವಾರದಲ್ಲಿ ಕೊಡಬೇಕು. ತಪ್ಪಿದರೆ ಆ ಜಿನಸು ಪುನಹ ಹರಾಜು ಮಾಡಿ ಲುಕ್ಸಾನಿಗೆ ಮೊದಲಿನ ಸವಾಲ್‌ದಾರನ್ನ ಗುರಿಮಾಡುತ್ತೆ. ಹರಾಜು ತಾರೀಖು ಲಾಗಾಯತು 10 ದಿವಸಗಳೊಳಗಾಗಿ ಜಿನಸನ್ನು ಸಾಗಿಸಿಕೊಳ್ಳಬೇಕು. ಇನ್ನೂ ಬೇಕಾದ ತಪ್ಸೀಲುಗಳಿಗೆ 1895ನೇ ಏಪ್ರೆಲ್ 25ನೇ ಮರ್ಕುಂ 15229.—ಆರ್. ಎಫ್. 155-92ನೇ ನಂಬರ್ ನೋಟಿಫಿಕೇಷನ್ ನೋಡಿಕೊಳ್ಳಬೇಕು. ಅದು ಹರಾಜು ಕಾಲದಲ್ಲಿ ಓದಲ್ಪಡುತ್ತೆ.

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ.

ತುಮಕೂರು ಡಿಸ್ಟ್ರಿಕ್ಟು.

ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜ್.

ಇಸ್ತಿಹಾರ.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ್ ಚಡ ಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪ್ರತಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ, ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸ್ಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಷುರೂ ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಡೆಪ್ಯುಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ, ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜ್ ಕಾಯಮಾದನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್ರಿಂದ ಹೊಂದುವನು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೇ ನಂಬರು.	ಬಾಬು ಖುಷ್ಕೀ, ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.		ಆಕಾರ.			ವುರಗಳು ಭಾವಿಗಳು ವಗೈರೆ. ಕೂಡಿದ ವುಟ್ಟುಗೂ ಕರಾರ್ವಾಕಾ ತಪ್ಶೀಲ್.	ಹರಾಜ್ ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲಿಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ವೊಬಲಗು ಮತ್ತು ಇತರ ಷರಾ.
1	2	3	4	5	6		7			8	9	10	11
					ಎ.	ಗುಂ.	ರೂ.	ಆ.	ಪೈ.				
ತಿಪಟೂರು.	ಹಾಲ್ಕುರಿಕೆ.	ಹಾಲ್ಕುರಿಕೆ ಅಮೃತಮಹಲ್ ಕಾವಲ್.	1	ತರೀ ಜಮೀನುಗಳು	2	0	13	4	0	ಕಾಡುಜಾತಿ ಮರಗಳು.	ಹಾಲ್ಕುರಿಕೆ ಅಮೃತಮಹಲ್ ಕಾವಲ್‌ಬಳಿ 1896ನೇ ಮಾರ್ಚಿ 20ನೇ ತಾರೀಖು ದಿವಿ 11 ಘಂಟೆಗೆ ಷುರು.	ಈ ಕೆಲಸಕ್ಕಾಗಿ ನೇಮಿಸಲ್ಪಡುವ ಅಸಿಸ್ಟೆಂಟ್ ಕಮ್ಮಿಷನರ್.	ಆಖೈರ್ ಸವಾಲ್‌ದಾರರು ಹರಾಜ್ ವೊಬಲಗು ಮತ್ತು ಬಾಂದು ಲಾಗವಡು ಸಹ ಕೊಡಲು ಬದ್ಧರಾಗಿರಬೇಕು.
			2		2	0	13	4	0				
			3		2	0	13	4	0				
			4		2	3	13	12	0				
			5		2	0	13	4	0				
			6		2	38	20	8	0				
			7		1	23	10	4	0				
			8		2	6	14	4	0				
			9		1	38	13	0	0				
			10		2	0	13	4	0				
			11		2	0	13	4	0				
			12		1	39	13	4	0				
			13		3	20	23	4	0				
			14		2	7	14	4	0				
			15		2	0	13	4	0				
			16		1	38	13	0	0				
			17		2	6	14	4	0				
			18		6	35	45	8	0				
			19		2	7	14	4	0				
			20		2	2	13	8	0				
			21		2	10	15	0	0				
			22		2	11	15	0	0				
			23		2	12	15	4	0				
			24		2	4	13	12	0				
			25		1	39	13	4	0				
			26		2	12	15	4	0				
			27		2	0	13	4	0				
			28		2	7	14	4	0				
			29		2	11	15	0	0				
			30		2	8	14	8	0				
			31		2	4	13	12	0				
			32		2	26	17	8	0				
			33		2	20	16	8	0				
			34		2	11	15	0	0				
			35		2	14	15	8	0				
			36		2	2	13	8	0				
			37		1	31	11	12	0				
			38		1	33	14	0	0				
			39		1	37	14	4	0				
			40		9	24	18	8	0				
			41		2	15	15	12	0				
			42		2	26	17	8	0				
			43		2	32	19	4	0				

137

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮೀನ್. ಸರ್ವೇ ನಂಬರು.	ಬಾಬು ಖುಷ್ಕಿ ತರೀ, ಬಾಗಾಯತು ಅಥವಾ ಕಾಫಿ.	ವಿಸ್ತೀರ್ಣ.		ಆಕಾರ.			ಮರಗಳು ಛಾವಿಗಳು ವಗೈರೆ. ಕೂಡಿದ ಮುಟ್ಟಿಗೂ ಕರಾರ್ವಾಕಾ ತಪ್ಸೀಲ್.	ಹರಾಜ್ ಸ್ಥಳ, ತಾರೀಖು ಮತ್ತು ಕಾಲ.	ಹರಾಜ್ ನಡಿಸತಕ್ಕವರ ಹೆಸರು.	ಕ್ಲಿಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ.
1	2	3	4	5	6		7			8	9	10	11
					ಎ.	ಗುಂ.	ರೂ.	ಆ.	ಪೈ.				
ತಿಪಟೂರು.	ಹಾಲ್ಕುರಿಕೆ.	ಹಾಲ್ಕುರಿಕೆ ಅಮೃತಮಹಲ್ ಕಾವಲ್.	44	ತರೀ ಜಮೀನುಗಳು.	2	5	14	0	0	ಕಾಡುಜಾತಿ ಮರಗಳು	ಹಾಲ್ಕುರಿಕೆ ಅಮೃತಮಹಲ್ ಕಾವಲ್‌ಬಳಿ 1896ನೇ ಮಾರ್ಚಿ 20ನೇ-ತಾರೀಖು ದಿವಿ 11 ಘಂಟೆಗೆ ಷುರು.	ಈ ಕೆಲಸಕ್ಕಾಗಿ ನೇಮಿಸಲ್ಪಡುವ ಅಸಿಸ್ಟೆಂಟ್ ಕಮ್ಮಿಷನರ್.	ಆಖೈರ್ ಸವಾಲ್‌ದಾರರು ಹರಾಜ್ ಮೊಬಲಗು ಮತ್ತು ಬಾಂದು ಲಾಗನಡು ಸಹ ಕೊಡಲು ಬದ್ಧರಾಗಿರಬೇಕು
			45		2	10	15	0	0				
			46		2	15	17	4	0				
			47		2	21	16	12	0				
			48		3	21	23	4	0				
			49		2	17	16	0	0				
			50		2	8	14	8	0				
			51		2	7	14	4	0				
			52		2	30	18	4	0				
			53		2	11	15	0	0				
			54		2	1	13	8	0				
			55		2	27	17	12	0				
			56		1	30	11	12	0				
			57		1	35	12	8	0				
			58		1	35	12	8	0				
			59		3	1	20	0	0				
			60		1	28	11	4	0				
			61		3	1	20	0	0				
			62		2	39	20	0	0				
			63		2	20	16	8	0				
			64		2	14	15	8	0				
			65		2	25	17	8	0				
			66		2	26	17	8	0				
			67		2	25	17	8	0				
			68		3	5	20	12	0				
			69		3	3	20	4	0				
			70		2	4	13	12	0				
			71		1	38	13	0	0				
			72		2	12	15	4	0				
			73		2	15	15	12	0				
			74		2	1	13	8	0				
			75		4	1	26	8	0				
			76		2	39	20	0	0				
			77		2	25	17	8	0				
			78		2	6	14	4	0				
			79		2	1	13	8	0				
			80		2	27	17	12	0				
			81		2	13	15	8	0				
			82		2	15	15	12	0				
			83		2	20	16	8	0				
			84		2	31	19	0	0				
			ಜುಮ್ಲಾ		201	8	1339	8	0				

ಎಂ. ನಾರಾಯಣರಾವ್,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ತಾರೀಖು 18ನೇ ಜನವರಿ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಕೊರಟಗೆರೆ ಸಬ್ ತಾಲ್ಲೂಕು ಚನ್ನರಾಯದುರ್ಗ ಸಮ್ಮತು ಹೊಲ್ತಾಳು ಬಳಿ ಸರ್ವೆ 38ನೇ ನಂಬರಿನಲ್ಲಿರತಕ್ಕ ಕಲ್ಲಿನ ಬಾಬತು ಮಂಟಪ, ಭಾವಿ ವಗೈರೆ ಪರಸ್ಥಳೀಕರ ವುಪಯೋಗಕ್ಕೆ ಅನುಕೂಲವಾಗಿರುವ ಕಟ್ಟಡವನ್ನು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನವರ ತನಿಖೆಗೆ ಒಳಪಡಿಸಿಕೊಂಡು ಮುಸಾಫರಖಾನೆ ಯೆಂಬ ಹೆಸರಿಟ್ಟು ಕೊಂಚ ಕಾಮಗಾರಿ ಮಾಡಿಸಬೇಕೆಂದು ತಾತ್ಪರ್ಯ ಇಟ್ಟುಕೊಂಡಿರುತ್ತಾರೆ. ಇದನ್ನ ಕಟ್ಟಿಸಿರತಕ್ಕವರು ಇಂತವರೆಂಬದಾಗಲಿ, ಇದರ ವಾರಸದಾರರಾಗಲಿ ಈಗ್ಯೆ ಸುಮಾರು 40, 50 ವರುಷದ ಲಾಗಾಯತು ಇರುವಂತೆ ಗೊತ್ತಾಗಿಲ್ಲ. ಆದ್ದರಿಂದ ಈ ಲಾಗಾಯತು ಮೂರು ತಿಂಗಳೊಳಗಾಗಿ ಈ ಕಟ್ಟಡಕ್ಕೆ ಹಾಗೆ ವಾರಸದಾರರಾದವರು ಯಾರಾದರೂ ಯಿದ್ದ ಪಕ್ಷದಲ್ಲಿ ನಮ್ಮ ರೂಬರೂಬ ಹಾಜರಾಗಿ ತಮ್ಮ ಹಕ್ಕನ್ನು ದೃಢಪಡಿಸಿಕೊಳ್ಳಬಹುದು. ಇಲ್ಲವಾದರೆ ನಂತರ ಬರುವ ತಕರಾರಿಗೆ ಅವಕಾಶವಿಲ್ಲವಾದ್ದು, ತಿಳಿಯುವದು.

ಎಂ. ನಾರಾಯಣರಾವ್,

ಡೆಪ್ಯುಟಿ ಕಮ್ಮಿಷನರ ಮತ್ತು ಡಿಸ್ಟ್ರಿಕ್ಟ್ ಫಂಡ್ ಬೋರ್ಡ್ ಪ್ರೆಸಿಡೆಂಟ.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 4ನೇ ಫೆಬ್ರುವರಿ 1896.

1. ಕಾಯಂಗುತ್ತಾ ಬಾಕಿದಾರರಾದ ಅಂಗತಟ್ಟಿ ಗ್ರಾಮದ ಹನುಮಂತರಾಯರಿಂದ ಬರಬೇಕಾದ ಜಮೀನ ಕಂದಾಯದ ಬಾಕಿಗಾಗಿ ಹಿಡುವಳಿ ಹಕ್ಕು ತಪ್ಪಿ ಹೋಗಿದೆ ಯೆಂದು ಪ್ರಕಟಸಲ್ಪಟ್ಟಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಶಿಡ್ಲಘಟ್ಟ ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಮಾರ್ಚಿ 18ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1137—11—0 ರೂಪಾಯಿ ಆಗಿರುತ್ತೆ.

3. ಹರಾಜ್ ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸ್ಯೆನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬುದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಪಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರಿ, ಬಾಗಾಯತು.	ವಿಸ್ತೀರ್ಣ.		ಅಕಾರ.			ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗು.		
1	2	3	4	5	6	7	8	9		10			11		
					ರೂ. ಆ. ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಬಳ್ಳಾಪುರ	ಜಂಗಮಕೋಟೆ	ಕಾಯಿಂಗಾಲ ಲಿಂಗಶೆಟ್ಟಿ	ಹನುಮಂತರಾಯುರು	..	..	ಪೂರಾ ಗ್ರಾಮ.	ಖುಷ್ಕಿ	302	28	516	8	0			
							ಬಾಗಾಯತು	18	28	106	0	0			
							ಸಾಗುವಳೀ ನಾಲಾಯಖು	92	14	1	8	0			
								413	30	624	0	0			
							ಸಾಲಿಯಾನಾಕೊಡತಕ್ಕ ಮೊಬಲಗು	..	..	375	15	7	1137	11	0

ಷರಾ.—ಜೋಡೀದಾರ್ರಿಂದಾಗಲಿ ಬಾಧ್ಯತೇ ಮೂಲಕ ಇವರುಗಳಿಗೆ ಹಿಂದೆ ಇದ್ದವರಿಂದಲಾಗಲಿ ವುಂಟುಮಾಡಲ್ಪಟ್ಟ ತಮಾಂ ಹಿಡುವಳಿಗಾಗಲಿ ದೇಣಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ವಳಪಟ್ಟಿರುವದಿಲ್ಲ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 12ನೇ ಫೆಬ್ರವರಿ 1896.

1. ಕಂದಾಯದ ಬಾಕಿದಾರನಾದ ರಮ್ಯವರಾಚಾರ್ ಮೈನರ್, ಗಾರ್ಡಿಯನ್ ವೆಂಕಟಲಕ್ಷ್ಮಮ್ಮನಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಫಾರ್ಫಿಟ್ಟಾಗಿರುವ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ತಾಲ್ಲೂಕು ಚಿಕ್ಕಬಳ್ಳಾಪುರದಲ್ಲಿ ಸಬ್ ಡಿವಿಜನ್ ಆಫಿಸರರ ರೂಬರೂ 1896ನೇ ಮಾರ್ಚಿ 26ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1,412—8—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ರೂ.ಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ, ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ, ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.			ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಎಕರೆ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ.	ಸರ್ವಮಾನ್ಯ ಜಾತವಾರ.	ರಮ್ಯವರಾಚಾರ್ ಮೈನರ್, ಗಾರ್ಡಿಯನ್ ತಾಯಿ ವೆಂಕಟಲಕ್ಷ್ಮಮ್ಮ	..	..	..	..	ಸರ್ವಮಾನ್ಯ ಗ್ರಾಮದಲ್ಲಿ ಬಾಕಿದಾರ್ರಿಗೆ ಇರುವ ಹಿಸ್ಸೆ.	ಖುಷ್ಕೀ	392	6	347	0	0			
									ತರೀ	101	7	235	1	0	1,048	11	0
									ಬಾಗಾಯತು	25	16	119	0	0	ಬಡ್ಡಿ		
									ಪರಂಪೋಕು	208	39	3	4	0	363	13	4
									ಟೋಟಲ್	727	28	704	5	0	1,412	8	4
									ಸೊಲಿಯಾನಾ ಸರ್ಕಾರಕ್ಕೆ ಬರಪೇಕಾದ್ದು								
									ಕ್ವಿಟ್ರೆಂಟ್	...	..	88	0	0			
									ಸೆಸ್			44	0	2			
												132	0	2			

ಈ ಹರಾಜಿಗೆ ಇನಾಂದಾರರು ಮಾಡಿರುವ ಭೋಗ್ಯ ವಗೈರೆ ಪರಭಾರೆ ಬಾಧಿಸುವದಿಲ್ಲ.

ಸಿ. ಮಾದಯ್ಯ, ಡೆಪ್ಯುಟಿ ಕಮ್ಮಿಷನರ್.

ತಾರೀಖು 8ನೇ ಫೆಬ್ರವರಿ 1896ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಬೇವಾರಸಾಗಿರುವ ದಸ್ತಾವೇಜನ್ನ ಕ್ರಮವಾದ ವಾರಸ್ದಾರನಾಗಲಿ ಅಥವಾ ಅವನಿಂದ ಕ್ರಮವಾದ ಅಧಿಕಾರ ಪಡೆದುಕೊಂಡ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆ ಸಬ್‌ರಿಜಿಸ್ಟ್ರಾರ್ ಮುಂದೆ ಹಾಜರಾಗಿ ವಾಪಸ್ ತೆಗೆದುಕೊಂಡು ಹೋಗಬಹುದು. ಇಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ಅದನ್ನ ನಾಶಪಡಿಸಲಾಧೀತು.

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
107 / 1893—94	ಚಿಕ್ಕಬಳ್ಳಾಪುರದಲ್ಲಿರುವ ತೆನಗುಬಣಜಿಗ ಗುಂಡ್ಲಹಳ್ಳಿ ಮಲ್ಲೆಲು ವೆಂಕಟರಮಣಪ್ಪನ ಮಗ ಚಿಕ್ಕ ಕೊಂಡಪ್ಪ	ಚಿಕ್ಕಬಳ್ಳಾಪುರದಲ್ಲಿರುವ ತೆನಗುಬಣಜಿಗ ಹುಮ್ಮಿನ ಅಪ್ಪೊನು ಮಗ ಚಿಕ್ಕ ಅಪ್ಪೊನು	1893ನೇ ಇಸವಿ ಜೂನ್ ತಾರೀಖು 20	1893ನೇ ಇಸವಿ ಸೆಪ್ಟಂಬರ್ ತಾರೀಖು 19	ಶಿಡ್ಲಘಟ್ಟದ ತಾಲ್ಲೂಕು ಸಾದಲಿ ಹೋಬಳಿ ಗುಂಡ್ಲಹಳ್ಳಿ ಗ್ರಾಮದ ಬಳಿ ಇರುವ ಜಮೀನ್‌ಗಳು ಮತ್ತು ಮನೆ ಸಹ 100 ರೂಪಾಯಿಗೆ ಕ್ರಯ.

ಸಿ. ಮಾದಯ್ಯ, ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿ ಹಾರ್.

ನಂ. 1895—96ನೇ ಇಸವಿ ಬಾಬತು.

ತಾರೀಖು 12ನೇ ಫೆಬ್ರುವರಿ 1896.

ಇದರಲ್ಲಿ ನಮೂದಾಗುವ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಈ ಕೆಳಗೆ ನಮೂದಿಸಿ ಇರುವ ಬೇವಾರಸ್ ದಸ್ತೈವಜುಗಳನ್ನು ಕ್ರಮವಾದ ವಾರಸ್‌ದಾರರ್‍ಯಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆಯಾಯ ಸಬ್ ರಿಜಿಸ್ಟ್ರಾರ್ರ ಆಫೀಸುಗಳಲ್ಲಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ನಂಬರು.	ಆಫೀಸಿನ ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
1	ಮೈಸೂರು ತಾ॥ ರಿಜಿಸ್ಟ್ರಾರ್ ಆಫೀಸು	1ನೇ ನಂಬರ್. ಬುಕ್ಕು ನಂ. 24	ಹಾಸನದಲ್ಲಿರುವ ಶಾಮಂಣನವರ ಹೆಂಡತಿ ಲಕ್ಷ್ಮೀದೇವಮ್ಮ	ನಾಗಮಂಗಲದಲ್ಲಿರುವ ನಾರಣಪ್ಪನವರ ಮಗ ನರಸಿಂಹಯ್ಯ	16—12—93	18—12—93	500 ರೂಪಾಯಿನ ಕ್ರಯಪತ್ರ
2	ಮೈಸೂರು ಸಬ್ ರಿಜಿಸ್ಟ್ರಾರ್ ಆಫೀಸು	2ನೇ ನಂಬರು ಬುಕ್ಕು ನಂ. 2	ಮೈಸೂರು ತಾಲ್ಲೂಕು ಆನಂದೂರು ಹೋಬಳಿ ಕಸಬಾ ಆನಂದೂರಲ್ಲಿರುವ ಆಲೇ ಗವುಡನ ಮಗ ಚಿಕ್ಕೇಗವುಡ	ತಿರುಮಕೂಡ್ಲು ನರಶೀಪುರದ ತಾ॥ ಸೋಸಲೆ ಹೋಬಳೀ ಶ್ರೀರಂಗರಾಜಪುರದ ಅಗ್ರಹಾರದಲ್ಲಿರುವ ಅಳಿಯುವಲ್ಲಿಗೆ ಗೋಪಾಲಾಚಾರ್ರು	12—9—93	12—9—93	23 ರೂಪಾಯಿನ ಆಧಾರಪತ್ರ
		ನಂಬರು 4	ಮೈಸೂರು ತಾಲ್ಲೂಕು ಆನಂದೂರು ಕಸಬಾದಲ್ಲಿರುವ ಚಲುವೇಗವುಡನ ಮಗ ಕಾಳನರಸೇಗವುಡ	ಮಾಗಡಿ ತಾಲ್ಲೂಕು ಹುಲಿಕಲ್ಲಿನಲ್ಲಿರುವ ಆನಂದೂರು ತಾತಾಚಾರ್ರ ಮಕ್ಕಳು ಶ್ರೀನಿವಾಸರಾಘವಾಚಾರ್ರು	14—10—92	26—9—93	18 ಖಂಡಿ ಭತ್ತ ಕೊಡತಕ್ಕ ಗುತ್ತಿಗೇ ಕರಾರು
		ನಂಬರು 5	ಮೈಸೂರು ತಾಲ್ಲೂಕು ಆನಂದೂರು ಹೋಬಳಿ ಹೊಸಕೋಟೆ ಗ್ರಾಮದಲ್ಲಿ ಇರುವ ಗಂಗಡಿಕಾರ್ರ ಜಾತಿ ಚಿಕ್ಕಶಿದ್ದೇಗವುಡನ ಮಗ ಕಸ್ತೂರಿಗವುಡ, ಮರಿತಿಮ್ಮೆಗವುಡನ ಮಗ ಮಂಚ, ಸಂಣ, ಚಿಕ್ಕತಿಮ್ಮೇಗವುಡನ ಮಗ ಶಿದ್ದೇಗವುಡ ವುರಫ್ ಅಂಣಯ್ಯ, ಮಂಚೇಗವುಡನ ಹೆಂಡತಿ ಶಿದ್ದಮ್ಮ ಇವಳ ಮಗ ತಿಮ್ಮ	ಮೈಸೂರು ತಾಲ್ಲೂಕು ಇಲವಾಲದಲ್ಲಿರುವ ಶ್ರೀವೈಷ್ಣವ ಬ್ರಾಂಹಣ ಶೇಷಯ್ಯಂಗಾರ್ರ ಮಕ್ಕಳು ರಾಮಸ್ವಾಮಯ್ಯಂಗಾರ್	9—3—93	26—9—93	400 ರೂಪಾಯಿನ ಕ್ರಯಪತ್ರ
		ನಂಬರು 11	ಮೈಸೂರು ಲಷ್ಕರ್ ಮೊಹಲಾದಲ್ಲಿರುವ ಅಹಮ್ಮದ್ ಶೇಟರ ಮಕ್ಕಳು ಅಲ್ಲೀಮಹಮ್ಮದ್‌ಶೇಟ್ ಇಸ್ಮಾಯಿಲ್ ಶೇಟ್ ವುರಫ್ ಜಾನ್ ಮಹಮ್ಮದ್‌ಶೇಟ್ ಅಬ್ದುಲ್‌ರಹಿಮಾನ್ ವುರಫ್ ಚಾಂದೂಶೇಟ್	ಮೈಸೂರು ಲಷ್ಕರ್ ಮೊಹಲಾದಲ್ಲಿರುವ ಮುಸಲ್ಮಾನರಜಾತಿ ಚೀಣಾ ಜವಳಿ ಅಂಗಡಿ ವುಮ್ಮರ್‌ಅಬ್ದುಲ್ಲಾಶೇಟ್	11—5—93	28—11—93	150 ರೂಪಾಯಿ ಭೋಗ್ಯಪತ್ರ
		ನಂಬರು 14	ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿಯಲ್ಲಿರುವ ಬೆಳ್ಳಾಳ ವಕ್ಕಲಿಗರ ಸುಬ್ಬಂಣನ ಮಗ ಅಂದಾನಪ್ಪ	ಮೈಸೂರು ಕ್ರಿಷ್ಣರಾಜ ಮೊಹಲಾ ಬಂಡಿಕಾರ್ರ ಬೀದಿಯಲ್ಲಿರುವ ಬಿಳಿಮಗ್ಗದ ಬೋರಶಟ್ಟಿ ಶಿದ್ದಂಣನ ಮಗ ನಿಂಗಂಣ	2—6—93	11—1—94	70 ರೂಪಾಯಿನ ಭೋಗ್ಯಪತ್ರ

ನಂಬರು.	ಆಫೀಸು ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರೆದು ಕೊಟ್ಟವರ ಹೆಸರು ಮತ್ತು ಅಡ್ರೆಸ್ಸು.	ದಸ್ತೈವಜು ಬರೆಸಿಕೊಂಡವರ ಹೆಸರು ಮತ್ತು ಅಡ್ರೆಸ್ಸು.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
	ಮೈಸೂರು ಸಬ್ ರಿಜಿಸ್ಟ್ರಾರ್ ಆಫೀಸು.	1ನೇ ನಂಬರಿ ಬುಕ್ಕು ನಂ. 1419	ಮೈಸೂರು ದೇವರಾಜ ಮೊಹಲಾ ಬಂಡಿಕೇರಿಯಲ್ಲಿ ಇರುವ ಗಂಗಡಿಕಾರ್ರು ನಂಜಂಣನ ಮಕ್ಕಳು ನಂಜುಂಡಪ್ಪ 1 ಬೋಗಯ್ಯ 1 ಕಾವೇರಯ್ಯ 1 ಕಪಿನಯ್ಯ 1 ನಿಂಗಯ್ಯ 1 ಕೆಂಪನಂಜ ಮೈನರ್ ಗಾರ್ಡಿಯನ್ ನಂಜಂಣ	ಮೈಸೂರು ದೇವರಾಜ ಮೊಹಲೆ ಬಂಡಿಕೇರಿಯಲ್ಲಿರುವ ಗಂಗಡಿಕಾರ್ರು ನಂಜಂಣನ ಮಕ್ಕಳು ನಂಜುಂಡಪ್ಪ 1 ಬೋಗಯ್ಯ ಕಾವೇರಯ್ಯ, ಕಪಿನಯ್ಯ, ನಿಂಗಯ್ಯ, ಕೆಂಪನಂಜ ಮೈನರ್ ಗಾರ್ಡಿಯನ್ ತಂದೆ ನಂಜಂಣ	2—2—93	3—2—93	1,000 ರೂಪಾಯಿನ ವಿಭಾಗ ಪತ್ರ
		ನಂ. 1581	ಮೈಸೂರು ಇಟ್ಟಿಗೆ ಗೂಡಿನಲ್ಲಿರುವ ಒಕ್ಕಲಿಗರಜಾತಿ ಗವುರಯ್ಯನ ಮಗ ಗರಗಸದ ಮೋಳೆ ರಂಗ	ಮೈಸೂರು ಇಟ್ಟಿಗೆ ಗೂಡಿನಲ್ಲಿರುವ ಒಕ್ಕಲಿಗರ ಜಾತಿ ಗವುರಯ್ಯನ ಮಗಳು ಬೆಟ್ಟಮ್ಮ ಈಕೆ ಮಗ ತಿಮ್ಮಯ್ಯ	11—3—93	13—3—93	100 ರೂಪಾಯಿನ ಕ್ರಯಪತ್ರ
		ನಂ. 1597	ಮೈಸೂರು ಕೃಷ್ಣರಾಜ ಮೊಹಲಾ ಸುಂಣದಕೇರಿಯಲ್ಲಿರುವ ರಾಮಾಜಟ್ಟಪ್ಪನವರ ಹಂಣುಕಾಯಿ ಅಂಗಡಿ ಸುಬ್ಬರಾಮಾಜಟ್ಟಪ್ಪ	ಮೈಸೂರು ಹಳೇ ಅಗ್ರಹಾರದಲ್ಲಿ ಸುಂಣದಕೇರಿಯಲ್ಲಿರುವ ರಾಮಾಜಟ್ಟಪ್ಪನ ಮಗ ಹೋಬಳಿದಾರ್ ರಾಮಾಜಟ್ಟಪ್ಪ	15—3—93	16—3—93	22 ರೂಪಾಯಿನ ಆಧಾರ ಪತ್ರ
		ನಂ. 822	ಮೈಸೂರು ದೇವರಾಜ ಮೊಹಲಾದಲ್ಲಿರುವ ಕುಂಚಿಗರಜಾತಿ ಕಾವಾಲೆ ದೊಡ್ಡಯ್ಯನ ಮಗ ಕಾವಾಲೆ ಶಿದ್ದಲಿಂಗಂಣ	ಮೈಸೂರು ಮಂಡಿ ಮೊಹಲಾದಲ್ಲಿರುವ ಮುಸಲ್ಮಾನ್ ಜಾತಿ ಹುಸೇನ್ ಖಾನ್ ಸಾಬರ ಮಗ ಕಂಟ್ರಾಕ್ಟದಾರ್ ರಹಿಮಾನ್ ಖಾನ್	13—12—93	14—12—93	450 ರೂಪಾಯಿನ ಕ್ರಯಪತ್ರ
3	ಯಡತೊರೆ ಸಬ್ ರಿಜಿಸ್ಟ್ರಾರ್ ಆಫೀಸು.	1ನೇ ನಂಬರು ಬುಕ್ಕು ನಂ. 1232	ಭೇರ್ಯದಲ್ಲಿರುವ ವೈಷ್ಣವ ಬ್ರಾಂಹಣ ರಾಮಯ್ಯನ ಮಗ ಅರ್ಚನಾವೃತ್ತಿ ಕೇಶಗಿರಿ	ಸುಗ್ಗನಹಳ್ಳಿಯಲ್ಲಿರುವ ಒಡಗಿಜಾತಿ ಬಸವಯ್ಯನ ಮಗ ಆರಂಬದ ಅಪ್ಪಾಜಯ್ಯ	24—2—93	7—3—93	245 ರೂಪಾಯಿನ ಕ್ರಯಪತ್ರ
		ನಂಬರು 1594	ಕಲ್ಲಹಳ್ಳಿಯಲ್ಲಿರುವ ತೋರೇರ ಬೋರನಮಗ ಆರಂಬದ ಬೋರ ವುರಫ್ ಜೊಟ್ಟಿ	ಕಲ್ಲಹಳ್ಳಿಯಲ್ಲಿರುವ ಮುಸಲ್ಮಾನರ ಜಹಂಗೀರ್ ಸಾಬರ ಮಗ ಜಿರಾಯಿತು ಜೀವನದ ಮಹಮ್ಮದ್ ಗೌಸ್‌ಸಾಬಿ	21—4—93	11—5—93	25 ರೂಪಾಯಿನ ಕ್ರಯಪತ್ರ
		ನಂಬರು 399	ಚನ್ನಪ್ಪನ ಕೊಪ್ಪಲಿನಲ್ಲಿರುವ ಶಿವಾಚಾರದ ಜಾತಿ ಕೆಂಪೇಗವುಡನಮಗ ಆರಂಬದ ಚನ್ನೇಗವುಡ	ಚನ್ನಪ್ಪನ ಕೊಪ್ಪಲಿನಲ್ಲಿರುವ ಶಿವಾಚಾರದಜಾತಿ ಕೆಂಪೇಗವುಡನ ಮಗ ಆರಂಬದಬಸವೇಗವುಡ	12—6—93	12—10—93	160 ರೂಪಾಯಿನ ಭೋಗ್ಯಪತ್ರ
		ನಂಬರು 400	ಕಲ್ಲಹಳ್ಳಿಯಲ್ಲಿ ಯಿರುವ ಪಾಂಚಾಳದ ಜಾತಿ ಕಪನಯ್ಯನ ಮಗ ಜಾತಿಕಸಬಿನ ಸಂಕಣಾಚಾರಿ	ಕಲ್ಲಹಳ್ಳಿಯಲ್ಲಿರುವ ಶಿವಾಚಾರದ, ಮಲ್ಲೇಗವುಡನ ಮಗ ಪಟೇಲ್ ಲಿಂಗಂಣ	8—10—93	13—10—93	400 ರೂಪಾಯಿನ ಆಧಾರಪತ್ರ
		ನಂಬರು 503	ಯಡತೊರೆಯಲ್ಲಿರುವ ಮುಸಲ್ಮಾನರ ಖಾಸಿಂಸಾಬರ ಮಗ ಆರಂಬದ ಕಗ್ಗೆರೆ ಅಮ್ಮತ್‌ಸಾಬಿ	ತಿಪ್ಪೂರು ಹೋಬಳಿ ಅಂಬಲೀ ಮತದಲ್ಲಿರುವ ಬಿರಾಂಸಾಬರ ಮಗ ಜಮಾಲ್‌ಸಾಬಿ	29—7—93	28—11—93	90 ರೂಪಾಯಿನ ಕ್ರಯಪತ್ರ
		ನಂಬರು 510	ಸಾಲಿಗ್ರಾಮದಲ್ಲಿರುವ ಸ್ಮಾರ್ತರ ಬ್ರಾಂಹಣ ವಿಶ್ವೇಶ್ವರಯ್ಯನವರ ಮಗ ಸ್ಕೂಲ್ ಟೀಚರ್ ಶಾಮಂಣ	ಬೆಳ್ಳೂರು ಕೊಪ್ಪಲಲ್ಲಿರುವ ಜವರೇಗವುಡನ ಮಗ ಹೊಟ್ಟೆಪ್ಪ, ವುರಫ್ ಪಾಳೆಗವುಡ	2—8—93	30—11—93	180 ರೂಪಾಯಿನ ಕ್ರಯಪತ್ರ

ನಂಬರು.	ಆಫೀಸು.	ಬುಕ್ಕು ಮತ್ತು ನಂಬರು.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ಅಡಿರ್ಸ.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡಿರ್ಸ.	ರಿಜಿಸ್ಟ್ರಿಗೆ ಹಾಜರಾದ ಸಾಲ ಮಾಹೆ ತಾರೀಖು.	ರಿಜಿಸ್ಟ್ರರಾದ ಅಥವಾ ತಿರಸ್ಕರಿಸಿದ ಸಾಲ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
4	ತಿರುಮಕೂಡ್ಲು ನರಸೀಪುರದ ಸಬ್ ರಿಜಿಸ್ಟ್ರಿ ಆಫೀಸು.	1ನೇ ನಂಬರು ಬುಕ್ಕು ನಂಬರು 1651	ಕನ್ನಹಳ್ಳಿ ದಾಖಲೆ ಶೀಹಳ್ಳಿ ಗ್ರಾಮದಲ್ಲಿರುವ ಕಿರಗಾಣಿಗರ ದೊಡ್ಡಶೆಟ್ಟಿ ಮಗ ಶಿದ್ದಶೆಟ್ಟಿ.	ಕನ್ನಹಳ್ಳಿ ದಾಖಲೆ ಶೀಹಳ್ಳಿ ಗ್ರಾಮದಲ್ಲಿರುವ ವೀರಶೈವಜಾತಿ ಯಿಸವೇಗವುಡರ ಮಗ ಪಟೇಲ್ ಸುಬ್ಬೇಗವುಡ	25—1—93	26—1—93	200 ರೂಪಾಯಿನ ಕ್ರಯಪತ್ರ
		ನಂಬರು 2349	ನಂಜನಗೂಡಿನಲ್ಲಿರುವ ಲೇಟ್ ಪ್ರಿನ್ಸಿಪಲ್ ಸದರ್ ಮುನಸೂಫ್ ಕೋರ್ಟು ಪಂಡಿತ ಆನಂದತೀರ್ಥಾಚಾರ್ಯರ ಮಗ ಕೋರ್ಟು ಶ್ರೀನಿವಾಸಾಚಾರ್	ನಂಜನಗೂಡಿನಲ್ಲಿರುವ ಲೇಟ್ ಪ್ರಿನ್ಸಿಪಲ್ ಸದರ್ ಮುನಸೀಫ್ ಕೋರ್ಟು ಪಂಡಿತ ಆನಂದತೀರ್ಥಾಚಾರ್ಯರ ಮಗ ವಿಜಯೀಂದ್ರಾಚಾರ್	24—4—93	25—4—93	300 ರೂಪಾಯಿನ ಕ್ರಯಪತ್ರ
		ನಂಬರು 2350	ನಂಜನಗೂಡಿನಲ್ಲಿರುವ ಮಾಧ್ವ ಬ್ರಾಹ್ಮಣ ವಾಸುದೇವಾಚಾರ್ ವಾದೇಂದ್ರಾಚಾರ್ರ ಮಕ್ಕಳು ವೈದೀಕವೃತ್ತಿ ಜೀವನದ ಪುರೋಹಿತ ಜಯರಾಮಾಚಾರ್	ನಂಜನಗೂಡಿನಲ್ಲಿರುವ ಪುರೋಹಿತ ವೆಂಕಟರಮಣಾಚಾರ್ಯರ ಮಗ ಶ್ರೀನಿವಾಸಾಚಾರಿ, ಪುರೋಹಿತ ರಾಘವೇಂದ್ರಾಚಾರ್ಯರ ಮಕ್ಕಳು ಲಕ್ಷ್ಮೀನಾರಣಾಚಾರ್	24—4—93	25—4—93	400 ರೂಪಾಯಿನ ಕ್ರಯಪತ್ರ
		ನಂಬರು 2880	ಚೆಟ್ಟಹಳ್ಳಿ ದಾಖಲೆ ಮುಡ್ಕುದೊರೆಯಲ್ಲಿರುವ ಶ್ರೀಮಲ್ಲಿಕಾರ್ಜುನ ಸ್ವಾಮಿಯುವರ ದೇವಸ್ಥಾನದ ತಮ್ಮಡಿ ಚಿಕ್ಕಚಂದ್ರಶೇಖರಯ್ಯನ ಮಲ್ಲಯ್ಯನ ಮಗ ಮಲ್ಲಯ್ಯ	ತಿರಮಕೂಡು ನರಸೀಪುರದ ತಾಲ್ಲೂಕು ಕಚೇರಿಗೆ	5—6—93	12—6—93	100 ರೂಪಾಯಿನ ಜಾಮೀನುಪತ್ರ
		ನಂಬರು 148	ಶ್ರೀರಂಗರಾಜಪುರದ ಅಗ್ರಹಾರದಲ್ಲಿರುವ ಕಲ್ಯಾಣಪುರ ರಾಮಾನುಜಯ್ಯಂಗಾರ್ರ ಮಕ್ಕಳು ಅನಂತಾಚಾರ್	ಶ್ರೀರಂಗರಾಜಪುರದ ಅಗ್ರಹಾರದಲ್ಲಿರುವ ಶ್ರೀಕಂಠಶಾಸ್ತ್ರಿಗಳ ಮಕ್ಕಳು ಕರಾ|| ಕೃಷ್ಣಶಾಸ್ತ್ರಿ	29—7—93	31—7—93	100 ರೂಪಾಯಿನ ಆಧಾರಪತ್ರ
		ನಂಬರು 846	ಗಾಡಿಜೋಗಿ ಹುಂಡಿ ಗ್ರಾಮದಲ್ಲಿರುವ ಶೀಹಳ್ಳಿ ಅಪ್ಪಾಚಾರಿ ಮಗ ಪುಟ್ಟಾಚಾರಿ	ಶ್ರೀರಂಗಪಟ್ಟಣದ ತಾಲ್ಲೂಕು ಯಮೆಕಾರಕೊಪ್ಪಲ್ ಗ್ರಾಮದ ಮಾರಿಗುಡಿ ಜೆಟ್ಟಿಗವುಡನ ಮಗ ಶಿಂಗೇಗೌಡ	10—1—94	11—1—94	200 ರೂಪಾಯಿನ ಆಧಾರಪತ್ರ
		ನಂಬರು 911	ನರಸೀಪುರದಲ್ಲಿರುವ ಪಿರ್ಸ್ಟ್ ಜುಡಿಷಲ್ ಗುಮಾಸ್ತೆ ಲೋಕಾಚಾರ್	ಹೊರಳಹಳ್ಳಿ ಗ್ರಾಮದಲ್ಲಿರುವ ಹಲಗಯ್ಯನ ಮಗ ಮಾದೇವರು	22—1—94	23—1—94	130 ರೂಪಾಯಿನ ಕ್ರಯಪತ್ರ
		2ನೇ ನಂಬರ ಬುಕ್ಕು ನಂಬರು 29	ದೊಡ್ಡ ಅಬ್ಬಾಗಿಲ ದಾಖಲೆ ನರಸೀಪುರದಲ್ಲಿರುವ ವಿಡಗ್ಗೈ ಜಾತಿ ಚಕ್ರದಡಿ ಲಿಂಗನ ಮಗ ಹೆಳವಾ	ದೊಡ್ಡ ಅಬ್ಬಾಗಿಲ ದಾಖಲೆ ನರಸೀಪುರದಲ್ಲಿರುವ ಅಬ್ದುಲ್ ಖಾದರಸಾಬಿ	10—1—92	16—6—93	100 ರೂಪಾಯಿನ ಆಧಾರಪತ್ರ
		ನಂಬರು 31	ಬನ್ನೂರಲ್ಲಿರುವ ಕಾಳೋಜಿ ನರಸುಮ್ಮಯ್ಯ	ಬನ್ನೂರಲ್ಲಿರುವ ಶಿಂಗಾರಿ ಕೆಂಪ್ನ ಜೋರಾ	16—12—92	29—6—93	65 ರೂಪಾಯಿನ ಕ್ರಯಪತ್ರ
		4ನೇ ನಂಬರ ಬುಕ್ಕು ನಂಬರು 14	ನರಸೀಪುರದಲ್ಲಿರುವ ಪುಟ್ಟಹೊನ್ನಪ್ಪ	ನರಸೀಪುರದಲ್ಲಿರುವ ನಶ್ಯದ ಹುಚ್ಚಪ್ಪ	27—11—93	28—11—93	50 ರೂಪಾಯಿನ ಕ್ರಯಪತ್ರ

ನಂಬರು.	ಆಫೀಸಿನ ಹೆಸರು.	ಬುಕ್ಕು ಮತ್ತು ನಂಬರ್.	ದಸ್ತಾವೇಜನ್ನು ಬರೆದುಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತಾವೇಜು ಬರೆಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಿಯಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
5	ನಂಜನಗೂಡು ಸಬ್ ರಿಜಿಸ್ಟ್ರಿ ಆಫೀಸ್.	1ನೇ ನಂಬರ ಬುಕ್ಕು ನಂಬರ 207	ದಾಸನೂರು ಕಸಬಾದಲ್ಲಿರುವ ಬಸವೇಗವುಡನ ಮಗ ಪಟೇಲ್ ಮಲ್ಲಪ್ಪ	ತಗಡೂರಲ್ಲಿರುವ ಚಿಕ್ಕ ಚೆನ್ನನ ಕಾಳನ ಮಗ ವೀರಾ	18—8—93	18—8—93	190 ರೂಪಾಯಿನ ಕ್ರಯಪತ್ರ
		ನಂ. 249	ಹುಳಿಮಾವು ಶಾ॥ ನಂಜನಗೂಡಿನಲ್ಲಿರುವ ಸುಬ್ರಾಯರ ಮಗ ನಂಜುಂಡಯ್ಯ	ನಂಜನಗೂಡಿನಲ್ಲಿರುವ ಚಿಕ್ಕ ಪುಟ್ಟಸ್ವಾಮಿಶೆಟ್ಟಿ	1—9—93	2—9—93	35 ರೂಪಾಯಿನ ಆಧಾರಪತ್ರ
		ನಂ. 345	ಆಳಗಂಚಿ ಗ್ರಾಮದಲ್ಲಿರುವ ವುಪ್ಪಲಿಗರ ಚನ್ನನ ಶಿದ್ದನ ಮಗ ನಂಜಶೆಟ್ಟಿ	ವೀರೇದೇವನಪುರದ ದಾಖಲೆ ಚಿನ್ನದಗುಡಿ ಹುಂಡಿಯಲ್ಲಿರುವ ಸಿದ್ದರಾಮೇಗವುಡನ ದತ್ತು ಮಗ ದೊಡ್ಡೇಗವುಡ	3—10—93	3—10—93	70 ರೂಪಾಯಿನ ಕ್ರಯಪತ್ರ
		ನಂ. 349	ಬೊಕ್ಕಹಳ್ಳಿಯಲ್ಲಿರುವ ವೆಂಕಟಪ್ಪನ ಮಗ ಗುಂಡಪ್ಪ	ಮೈಸೂರು ಕಿಲ್ಲೇದಲ್ಲಿರುವ ಅಂಚೆ ರಾಮಣ್ಣನವರ ಮಕ್ಕಳು ಶೇಕದಾರ್ ರಾಮಣ್ಣ	4—10—93	4—10—93	80 ರೂಪಾಯಿನ ಆಧಾರಪತ್ರ
		ನಂ. 516	ನಂಜನಗೂಡಿನಲ್ಲಿರುವ ಶಂಕರ ನಂಜಯ್ಯನ ಮಗ ಶಿದ್ದಯ್ಯ 1 ಗೊಂಭ 1 ದೇವಪ್ಪ	ಯಡತೊರೆ ಕಸಬೇಲಿರುವ ನಾರಣಶೆಟ್ಟಿ ಮಗ ದಾಸಶೆಟ್ಟಿ	27—11—93	27—11—93	ಗುತ್ತಿಗೆ ಕರಾರು
		ನಂ. 513	ಯಡತೊರೆ ತಾಲ್ಲೂಕು ತಿಪ್ಪೂರಲ್ಲಿರುವ ನರಸುಹ್ಮಯ್ಯನ ಹೆಂಡತಿ ಪಾರ್ವತಮ್ಮ ಮೈನರ್, ತಂದೆ ವಿಶ್ವೇಶ್ವರಶಾಸ್ತ್ರಿ	ನಂಜನಗೂಡಿನಲ್ಲಿರುವ ನರಸಮ್ಮ ಮೈನರ್, ಮಕ್ಕಳು ಕೃಷ್ಣಪ್ಪ, ನರಸುಹ್ಮಯ್ಯನವರ ಮಗಳು ಲಕ್ಷ್ಮೀದೇವಮ್ಮ	25—11—93	25—11—93	200 ರೂಪಾಯಿನ ಕ್ರಯಪತ್ರ
6	ಚಾಮರಾಜನಗರ ಸಬ್ ರಿಜಿಸ್ಟ್ರಿ ಆಫೀಸ್.	1ನೇ ನಂಬರ ಬುಕ್ಕು ನಂ. 1400	ಚಾಮರಾಜನಗರದ ಕಸಬಾದಲ್ಲಿರುವ ವೈಶ್ಯರ ಬನ್ನೂರು ಮುದ್ದಶೆಟ್ಟಿಮಗ 1ನೇ ರಾಮಶೆಟ್ಟಿ 2ನೇ ಇವನ ಹೆಂಡತಿ ಕೃಷ್ಣಮ್ಮ 3ನೇ ಇವನ 2ನೇ ಮಗ ಆದಿಶೆಟ್ಟಿ	ನಂಜನಗೂಡು ತಾಲ್ಲೂಕು ಕಸಬಾ ಚಾಮಲಾಪುರದಲ್ಲಿರುವ ಗಂಗಡಿಕಾರ ಅಣಯ್ಯನಮಗ ಮಳಿಗೆ ಕೆಂಪಣ್ಣ	6—12—92	3—4—93	109-9-6 ರೂಪಾಯಿನ ಆಧಾರಪತ್ರ.
		ನಂ. 61	ಚಾಮರಾಜನಗರದ ತಾಲ್ಲೂಕು ನಾಗಳಿ ಗ್ರಾಮದಲ್ಲಿರುವ ಚನ್ನಶೆಟ್ಟಿ ತಿಮ್ಮಶೆಟ್ಟಿಮಗ ವೆಂಕಟಶೆಟ್ಟಿ	ಚಾಮರಾಜನಗರದ ತಾಲ್ಲೂಕು ನಾಗಳಿ ಗ್ರಾಮದಲ್ಲಿರುವ ವೆಂಕಟಸುಬ್ಬಶೆಟ್ಟಿ ಮಗ ತಿಮ್ಮಶೆಟ್ಟಿ	15—7—93	17—7—93	70 ರೂಪಾಯಿನ ಕ್ರಯಪತ್ರ
		ನಂ. 75	ನಂಜನಗೂಡು ತಾಲ್ಲೂಕ್ ದೊಡ್ಡ ಕೌಲಂದಿಗೆ ಗ್ರಾಮದಲ್ಲಿ ಇರುವ ಸ್ಕೂಲ್ ಮ್ಯಾಸ್ಟರ್ ವೆಂಕಟಕೃಷ್ಣಯ್ಯನ ಹೆಂಡತಿ ವೆಂಕಟಲಕ್ಷ್ಮಮ್ಮ	ನಂಜನಗೂಡು ತಾಲ್ಲೂಕು ಹೆಡತಲೆ ಹೋಬಳಿ ಮಲ್ಲಹಳ್ಳಿಯಲ್ಲಿರುವ ಗಟ್ಟವಾಡಿಪುರದ ರಾಮಯ್ಯನ ಮಗ ಶಿವರಾಮಯ್ಯ	18—7—93	19—7—93	31 ರೂಪಾಯಿನ ಕ್ರಯಪತ್ರ
		ನಂ. 115	ಚಾಮರಾಜನಗರದ ತಾಲ್ಲೂಕು ಹೆಗ್ಗವಾಡಿ ಪುರದಲ್ಲಿರುವ ಕಿರಗಾಣಿಗರ ಶಂಕರಶೆಟ್ಟಿ ಮಗ ಶಿದ್ದಲಿಂಗಶೆಟ್ಟಿ	ಚಾಮರಾಜನಗರದ ತಾಲ್ಲೂಕು ದೇಶವಳ್ಳಿಯಲ್ಲಿರುವ ಮಳಹಳ್ಳಿ ಖಾಸಿಂಸಾಬಿ ಮಗ ಇಮಾಮ್‌ಸಾಬಿ	28—7—93	29—7—93	200 ರೂಪಾಯಿನ ಭೋಗ್ಯಪತ್ರ

ನಂಬರು.	ಆಫೀಸಿನ ಹೆಸರು.	ಬುಕ್ಕು ನಂಬರು.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ಅಡಿರ್ಷ.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡಿರ್ಷ.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಿಯಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
6	ಚಾಮರಾಜನಗರ ಸಬ್ ರಿಜಿಸ್ಟ್ರಿ ಆಫೀಸು.	1ನೇ ನಂಬರ ಬುಕ್ಕು ನಂ. 121	ಚಾಮರಾಜನಗರದ ತಾಲ್ಲೂಕು ಹಗ್ಗವಾಡಿ ಪುರದಲ್ಲಿರುವ ಕಿರಗಾಣಿಗರ ಶಂಕರಶೆಟ್ಟಿ ಮಗ ಕಿದ್ದಲಿಂಗಶೆಟ್ಟಿ	ಚಾಮರಾಜನಗರದ ತಾಲ್ಲೂಕು ದೇಶವಳ್ಳಿಯಲ್ಲಿರುವ ಮಳಹಳ್ಳಿ ಖಾಸಿಂಸಾಬಿ ಮಗ ಯಿಮಾಮಸಾಬಿ	29—7—93	31—7—93	200 ರೂಪಾಯಿನ ಭೋಗ್ಯಪತ್ರ
		ನಂ. 358	ಚಾಮರಾಜನಗರದ ತಾಲ್ಲೂಕು ಸರಗೂರು ದಾಖಲೆ ಪುಳಿನಂಜನ ಪುರದಲ್ಲಿರುವ ಶಿವಾಚಾರದ ಪೊಕಳೆ ಮಾದಯ್ಯನ ಮಗ ಹುಚ್ಚಯ್ಯ	ಚಾಮರಾಜನಗರದ ತಾಲ್ಲೂಕು ಸರಗೂರು ಗ್ರಾಮದಲ್ಲಿರುವ ಶ್ರೀನಿವಾಸಯ್ಯಂಗಾರ್ರ ಹೆಂಡತಿ ಗರುಡಮ್ಮ	3—10—93	4—10—93	100 ರೂಪಾಯಿನ ಆಧಾರಪತ್ರ
7	ಶ್ರೀರಂಗಪಟ್ಟಣ ಸಬ್ ರಿಜಿಸ್ಟ್ರಿ ಆಫೀಸು.	1ನೇ ನಂಬರ ಬುಕ್ಕು ನಂ. 1017	ಶ್ರೀರಂಗಪಟ್ಟಣ ತಾಲ್ಲೂಕು ಬಳಗುಳದ ಹೋಬಳಿ ಹೊಸಹಳ್ಳಿಯಲ್ಲಿರುವ ಪಾಂಚಾಲದ ಜಾತಿ ಪಟ್ಟಾಚಾರಿ ಮಗ ಚನ್ನಾಚಾರಿ	ಸದರೀ ಗ್ರಾಮದಲ್ಲಿರುವ ದ್ಯಾವೇಗವುಡನ ಮಗ ದ್ಯಾವೇಗವುಡ	30—3—93	31—3—93	178-8-0 ರೂಪಾಯಿನ ಕ್ರಯಪತ್ರ
		ನಂ. 1296	ಶ್ರೀರಂಗಪಟ್ಟಣ ತಾಲ್ಲೂಕು ಹರವು ಹೋಬಳಿ ಜಾಗಚೆಟ್ಟಿಹಳ್ಳಿಯಲ್ಲಿ ಇರುವ ಮಲ್ಲಿಪ್ಪಯ್ಯನ ಮಗ ಚನ್ನಪ್ಪಯ್ಯ ಸದರೀ ತಾಲ್ಲೂಕ್ ಮಂಡಿಪಟ್ಟಹಳ್ಳಿಯಲ್ಲಿರುವ ಮಡಿವಾಳರ ಗಿರಿಯನ ಮಗ ದಾಸ	ಮೈಸೂರು ಕೃಷ್ಣರಾಜ ಮೊಹಲಾದಲ್ಲಿರುವ ಲೇಟ್ ಹುಜೂರ್ ಮೋತೀಖಾನೆ ಗುಮಾಸ್ತೆ ಕಪನೀಪತಯ್ಯನ ಮಗ ಬುಕ್‌ಸೆಲ್ಲರ್ ಸುಬ್ಬರಾವ್	30—5—93	30—5—93	100 ರೂಪಾಯಿನ ಕ್ರಯಪತ್ರ
		ನಂ. 120	ಶ್ರೀರಂಗಪಟ್ಟಣ ತಾಲ್ಲೂಕು ಅಲ್ಲಾಪಟ್ಟಣ ಗ್ರಾಮದಲ್ಲಿರುವ ಹೊಂಬಾಳೇಮಗ ಕಾಳೇಗವುಡ	ಸದರೀ ಗ್ರಾಮದಲ್ಲಿರುವ ಮಡಗೈ ಜವರನ ಮಗ ದ್ಯಾವ	7—8—93	9—8—93	300 ರೂಪಾಯಿನ ಕ್ರಯಪತ್ರ
		ನಂ. 220	ಗಂಜಾಂನಲ್ಲಿರುವ ಸೈಯದ್ ಖುದಬುದೀನ್ ಷಾಖಾದಿ ಮಗ ಸೈಯದ್ ಹೈದರ್ ಷಖಾದ್ರಿ ಪುರಫ್ ಅಪುಲ್ಯಾಷಾಖಾದಿರಿ	ಗಂಜಾಂ ಮೇಸ್ತ್ರಿ ಸುಬ್ಬರಾಯಾಚಾರಿ ಮಗ ನಂಜಪ್ಪಾಚಾರಿ	16—9—93	18—9—93	8 ರೂಪಾಯಿನ ಕ್ರಯಪತ್ರ
		ನಂ. 224	ಶ್ರೀರಂಗಪಟ್ಟಣ ತಾಲ್ಲೂಕು ದೊಡ್ಡೇಗವುಡನ ಕೊಪ್ಪಲಲ್ಲಿರುವ ದೊಡ್ಡೇಗವುಡನ ಮಗ ದೊಡ್ಡೇಗವುಡ, ಕಾವಾಪಟ ಮರಿಯಪ್ಪನ ಮಗ ದೊಡ್ಡಚನ್ನಪ್ಪ	ಮೈಸೂರು ಕೆಂಪನಂಜಾಂಬಾ ಅಗ್ರಹಾರದಲ್ಲಿರುವ ತಿರುಮಲಾಚಾರ್ ಮಗ, ಸರಗೂರು ತಿರುನಾರಣಯ್ಯಂಗಾರ್	18—9—93	19—9—93	ಗುತ್ತಿಗೇ ಕರಾರ್
		ನಂ. 423	ಶ್ರೀರಂಗಪಟ್ಟಣ ತಾಲ್ಲೂಕು ಶೆಟ್ಟಿಹಳ್ಳಿ ಹೋಬಳಿ ಮಳ್ಳಿಗಾಲದ ಕಿದ್ದೇಗವುಡನ ಮಗ ಕೃಷ್ಣೇಗವುಡ	ಗಂಜಾಂನಲ್ಲಿರುವ ರಂಗಂಣ ಪುರಫ್ ಹೊಟ್ಟೆ ರಂಗಂಣನ ಮಗ ತಿಪ್ಪಯ್ಯ	1—12—93	2—12—93	63 ರೂಪಾಯಿನ ಕ್ರಯಪತ್ರ
		2ನೇ ನಂಬರು ಬುಕ್ಕು ನಂ. 1	ಚಾಮರಾಜನಗರದಲ್ಲಿರುವ ಬಳಗುಳದ ಮಾಜಿ ಶಾನುಭೋಗ ಶ್ರೀನಿವಾಸಯ್ಯಂಗಾರ್ರ ಮಗಳು ರಂಗನಾಯಕಮ್ಮ	ಶ್ರೀರಂಗಪಟ್ಟಣ ತಾಲ್ಲೂಕು ಕರೇಕುರಾ ಗ್ರಾಮದಲ್ಲಿರುವ ಚೊಟ್ಟಬೋರೇಗವುಡನ ಕಿದ್ದೇಗವುಡನ ಮಗ ರಾಮೇಗವುಡ	2—6—93	5—10—93	ಗುತ್ತಿಗೇ ಕರಾರ್

ನಂಬರು.	ಜಿಲ್ಲೆ ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟರಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಾಭಾವ.
8	ಕೃಷ್ಣರಾಜಪೇಟೆ ಸಬ್ ರಿಜಿಸ್ಟ್ರಿ ಆಫೀಸು	1ನೇ ನಂಬರು ಬುಕ್ಕು ನಂ. 545	ಸಂತೇಬಾಚಹಳ್ಳಿ ಹೆಬ್ಬಾರ ಸಂಜಪ್ಪನ ಮಗ ನಂಜುಂಡಯ್ಯ	ಸಂತೇಬಾಚಹಳ್ಳಿಯಲ್ಲಿರುವ ರಾಮಯ್ಯನ ಮಗ ನಂಜಪ್ಪ	30—12—93	30—12—93	100 ರೂಪಾಯಿನ ಕ್ರಯಪತ್ರ
		ನಂ. 733	ಕಿಕ್ಕೇರೀ ಕಸಬಾದಲ್ಲಿರುವ ಬಿಳೀಮಗ್ಗದ ಹೊಸಮನೇ ಚಿಕ್ಕಣ್ಣಶೆಟ್ಟಿ ಮಗ ಹೊಸಮನೆ ಯಾಲಕ್ಕಿಶೆಟ್ಟಿ	ಕಿಕ್ಕೇರೀ ಕಸಬೇಲಿರುವ ಬಿಳೀ ಮಗ್ಗದ ಹೊಸಮನೆ ಚಿಕ್ಕಣ್ಣಶೆಟ್ಟಿ ಮಗ ವೆಂಕಟಶೆಟ್ಟಿ	28—1—93	30—1—93	500 ರೂಪಾಯಿನ ಆಧಾರಪತ್ರ
		ನಂ. 942	ಕನ್ನಂಬಾಡೀಲಿರುವ ಗೋಪಾಲಯ್ಯನ ಮಗ ಗೋಪಾಲಕೃಷ್ಣಯ್ಯ	ಕನ್ನಂಬಾಡೀಲಿರುವ ಯತ್ತಿನಹಟ್ಟಿ ವೆಂಕಟೇಗವುಡನ ಮಗ ಗವುರ	17—4—93	18—4—93	80 ರೂಪಾಯಿನ ಕ್ರಯಪತ್ರ
		ನಂ. 944	ಡಿಟೋ	ಕನ್ನಂಬಾಡೀಲಿರುವ ಶಿವನಂಜೇಗವುಡನ ಮಗ ನಂಜಪ್ಪ ವುರಫ್ ತಮ್ಮಯ್ಯ	17—4—93	18—4—93	98 ರೂಪಾಯಿನ ಕ್ರಯಪತ್ರ
		ನಂ. 388	ದೊಡ್ಡ ಯಾಚೇನಹಳ್ಳಿ ಗ್ರಾಮದಲ್ಲಿರುವ ಪಾಂಚಾಳದ ಜಾತಿ ಚನ್ನಾಚಾರಿ ಮಗ ಚಿಟ್ಟಾಚಾರಿ	ದೊಡ್ಡ ಯಾಚೇನಹಳ್ಳೀಲಿರುವ ಪಾಂಚಾಳದ ಜಾತಿ ಕಲ್ಲಗೆರೆ ನಿಂಗಾಚಾರೀ ಮಗ ಚಿಕ್ಕಾಚಾರಿ	1—11—93	6—11—93	25 ರೂಪಾಯಿನ ಕ್ರಯಪತ್ರ
		ನಂ. 517	ಸಾಯಪ್ಪನಹಳ್ಳಿಯಲ್ಲಿರುವ ಮರಿಗವುಡನ ಹಿರಿ ಹೆಂಡತೀ ಮಗ ಚಿಕ್ಕೇಗವುಡ	ಸಾಯಪ್ಪನಹಳ್ಳೀಲಿರುವ ಕುರುಬರ ಜಾತಿ ಮರಿಗವುಡನ ಹೆಂಡತಿ ಪುಟ್ಟವ್ವ ಇವಳ ಮಕ್ಕಳು ನಂಜ, ಕವರ, ದೊಡ್ಡ ಶಿವನಂಜ	20—12—93	21—12—93	700 ರೂಪಾಯಿನ ವಿಭಾಗ ಪತ್ರ
9	ಮಳವಳ್ಳಿ ಸಬ್ ರಿಜಿಸ್ಟ್ರಿ ಆಫೀಸು	1ನೇ ನಂಬರು ಬುಕ್ಕು ನಂ. 16	ಮಳವಳ್ಳಿ ತಾಲ್ಲೂಕು ಪೂರೀಗಾಲಿ ಹೋಬಳಿ ಮರಳಹಳ್ಳಿ ದಾಖಲೆ ಕೃಷ್ಣಯ್ಯಂಗಾರ್ರ ಹುಂಡಿಯಲ್ಲಿರುವ ವೆಂಕಪ್ಪ, ನರಸಿಂಹಾಚಾರ್ರ ಮಗ ಶ್ರೀನಿವಾಸಯ್ಯಂಗಾರ್	ಕಾನಖಾನಹಳ್ಳಿಯಲ್ಲಿರುವ ದೇಸಿಕಾಚಾರ್ರ ಮಗ ವರದಾಚಾರ್ ಅನಂತಾಚಾರ್ರ ಮಗ ವೀರರಾಘವಾಚಾರ್	8—7—93	15—7—93	100 ರೂಪಾಯಿನ ಕ್ರಯಪತ್ರ
		ನಂ. 34	ತಿರುಮಕೂಡ್ಲು ನರಸೀಪುರದ ತಾಲ್ಲೂಕು ತಲಕಾಡು ಹೋಬಳಿ ಕುರಿಬೋಳನ ಹುಂಡಿಯಲ್ಲಿರುವ ಬೆಸ್ತರ ಹೊಂಬಾಳೇ ಹೆಂಡತಿ ಮಾರೆ	ಮಳವಳ್ಳಿ ತಾಲ್ಲೂಕು ಪೆಂಡರವಾಡೀಲಿರುವ ಚಿಕ್ಕನಂಜರಾಜೇ ಅರಸ್	13—5—93	20—7—93	25 ರೂಪಾಯಿನ ಕ್ರಯಪತ್ರ
		ನಂ. 147	ಮಳವಳ್ಳಿ ತಾಲ್ಲೂಕು ಮರಳಿಹಳ್ಳಿ ಕಣ್ಣಾರಜಾತಿ ಮುಂದಾಗನ ಮಗ ಮುಂದಾಗ	ಬಳಕಪಾಡೀಲಿರುವ ಕಂಸಾರಜಾತಿ ರಾಚನ ಮಗ ಮಲ್ಲದಾಸ	11—9—93	15—9—93	50 ರೂಪಾಯಿನ ಆಧಾರಪತ್ರ
		2ನೇ ನಂಬರು ಬುಕ್ಕು ನಂ. 2	ಮಳವಳ್ಳಿ ತಾಲ್ಲೂಕು ಅಂಣೂರಲ್ಲಿರುವ ಈಡಿಗರ ರಾಚೇಗವುಡನ ಮಗ ದೂಳೇಗವುಡ	ಅಂಣೂರಲ್ಲಿರುವ ದ್ಯಾವೇಗವುಡನ ಮಗ ದೊಡ್ಡಪುಟ್ಟೇಗವುಡ	21—3—93	12—8—93	120 ರೂಪಾಯಿನ ಕ್ರಯಪತ್ರ

ನಂಬರ್.	ಆಫೀಸು ಹೆಸರು.	ಬುಕ್ಕು ಮತ್ತು ನಂಬರ್.	ದಸ್ತೈವಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡ್ರೆಸ್ಸು.	ದಸ್ತೈವಜು ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್ಸು.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಿಯಾದ ಅಥವಾ ತಿರಸ್ಕರಿಸಿದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
8. ಮೇಲ್ಕಂಡ ಯಾವದಾದರೂ ಷರತ್ತಾಗಲಿ ಲೈಸೆನ್ಸಾಗಲಿ ಲೈಸೆನ್ಸುದಾರನಿಂದಾದರೂ ಅಥವಾ ಆತನ ಅಂತರ್ಯ ತಿಳುವಳಿಕೆ ಯಾ ಸಮ್ಮತಿಯಿಂದ ಆತನ ನೌಕರರಿಂದಲಾದರೂ ಉಲ್ಲಂಘಿಸಲ್ಪಟ್ಟರೆ, ಅಥವಾ ಲೈಸೆನ್ಸುದಾರನು ತನ್ನ ದುಕಾನ್ಗಳನ್ನು ಇಡುವದಕ್ಕಾದರೂ ಯಾ ತನ್ನ ಇಜಾರೆಯ ಕೆಲಸಗಳನ್ನು ಕ್ರಮವಾದ ಎಚ್ಚರಿಕೆಯೊಡನೆ ನಡಿಸುವದಕ್ಕಾದರೂ ಉದಾಸೀನ ಮಾಡಿದರೆ ಅಂಥಾ ಪ್ರತಿ ಒಂದು ಉಲ್ಲಂಘನೆ ಯಾ ಉದಾಸೀನದ ಬಗ್ಗ್ಯೆ ಪ್ರತಿ ಇಜಾರೆ ಬಿಕರಿ ಲೈಸೆನ್ಸದಾರನಿಗೆ 50 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಯನ್ನು ವಿಧಿಸುವ ಬಗ್ಗೆ ಡೆಪ್ಯುಟಿ ಕಮ್ಮಿಷನರವರಿಗೆ ನ್ಯಾಯವಾಗಿರತಕ್ಕದ್ದು. ಅಥವಾ ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ಅವರಿಂದ ಇಡೋಣಾದ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡಲಿಕ್ಕೂ, ಲೈಸೆನ್ಸನ್ನು ರದ್ದು ಮಾಡಲಿಕ್ಕೂ, ಲೈಸೆನ್ಸುದಾರನನ್ನು ನಷ್ಟಕ್ಕೆ ಗುರಿಮಾಡಿ ಒಟ್ಟು ಸ್ವಾತಂತ್ರ್ಯವನ್ನು ಮರಳಿ ಹರಾಜು ಮಾಡಲಿಕ್ಕೂ, ಅಥವಾ ಇಜಾರೆ ಅಮಾನಿಯಲ್ಲಿ ಜರಿಗಿಸುವದಕ್ಕೂ ಅವರಿಗೆ ಮುಖ್ತ್ಯಾರೀ ಇರತಕ್ಕದ್ದು. ಒಂದು ಇಜಾರೆಯು ರದ್ದು ಮಾಡಲ್ಪಟ್ಟರೆ ಅಂಥಾ ಇಜಾರೆಯು ಪೂರ್ತಿಯಾದ ಕಾಲಕ್ಕೆ ಬರಬೇಕಾದ ತಮಾಂ ಮೊಬಲಗೂ ತಕ್ಷಣ ಪಾವತಿ ಮಾಡಲ್ಪಡಬೇಕು; ಮತ್ತು ಹಾಗೆ ಇಜಾರೆ ರದ್ದು ಮಾಡಲ್ಪಟ್ಟದ್ದರಿಂದ ಯಾ ಮರಳಿ ಹರಾಜಿನಿಂದ ಗವರ್ನಮೆಂಟಿಗೆ ಉಂಟಾಗುವ ಎಲ್ಲಾ ಲುಕ್ಸಾನುಗಳೂ ಲೈಸೆನ್ಸದಾರನಿಂದ ಯಾ ಅವನ ಜಾಮೀನ್ದಾರನಿಂದ ಮೇಲ್ಕಂಡ 4ನೇ ಪ್ಯಾರಾ ಅನುಸರಿಸಿ ಮರಳಿ ಹರಾಜಿಗಾಗಿ ವಿಧಿಸಿರುವಮೇರೆ ಭರ್ತೀಮಾಡಲ್ಪಡಬೇಕು. ಅಂಥಾ ನಷ್ಟ ವ ದಂಡಗಳಿಗಾಗಿ ವಸೂಲಾಗಬೇಕಾದ ತಮಾಂ ಮೊಬಲಗುಗಳೂ ಜಮೀನ್ ಕಂದಾಯದ ಬಾಕಿಯ ಮಾದಿಯಲ್ಲಿ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣೀ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸ್ ರದ್ದುಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಅಥವಾ ನಿರೂಪಣೆಗಳು ಯಾ ರೂಲ್ಸ್‌ಗಳ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸದಾರನನ್ನಾಗಲಿ, ಯಾ ಆತನ ಏಜಂಟನ್ನಾಗಲಿ, ಯಾ ಆತನ ನೌಕರರನ್ನಾಗಲಿ ಅಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕ ಪಡಿಸುವದೆಂದು ಭಾವಿಸಲ್ಪಡಕೂಡದು.

1896-97ನೇ ವರುಷಕ್ಕಾಗಿ ಪ್ರತ್ಯೇಕ ಸಾರಾಯಿ ಅಂಗಡಿಗಳ ಹರಾಜು.

ನಂಬರ 8032 A—245-A. ತಾರೀಖು 5ನೇ ಮಾರ್ಚಿ 1896.

1. ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲ್ ಪಟ್ಟಿಯಲ್ಲಿ * ನಮೂದಾಗುವ ಜಾಗಗಳಲ್ಲಿರುವ ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1896ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1897ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸಾರಾಯಿ ಬಿಕರೀ ಮಾಡತಕ್ಕ ಹಕ್ಕನ್ನು ಸದರೀ ಪಟ್ಟಿಯಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಟ್ಟ ಆಫಿಸರು ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲ್ ಮಾಡುವುದಕ್ಕೆ ಮುಂಚಿತವಾಗಿ 60 ರೂಪಾಯಿ ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೇ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಸದರೀ ಅಂಗಡಿಗಳಿಗೆ ಯಾರ ದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಬಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರು ಮಾಡಲ್ಪಟ್ಟ ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು, ಅಥವಾ ಅವರಿಂದ ಕ್ರಮವಾಗಿ ಅಪ್ಪಣೆಪಡದು ಇರುವ ಅವರ ತರಫ್ ಮುಖ್ತಾರ್‌ರನ್ನು ಕಳುಹಿಸಬೇಕು.

3. ಹರಾಜು ಪೂರೈಸಿದ ಕೂಡಲೆ ನಾಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸ ಮಾಡಲ್ಪಡುತ್ತವೆ. ಹರಾಜ್ ನಡಿಯುತ್ತಾ ಬಂದಹಾಗೆಲ್ಲಾ ಪ್ರತಿ ಅಂಗಡಿಗೆ ಯಾರ್ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆಯಾಯ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಅಣೆ ಭಾಗದ ಮೊಬಲಗನ್ನು ಠೇವಣೀ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇ ಕಲಮಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿಗಾಗಲಿ ಅಥವಾ ಮತ್ಯಾವ ಅಂಗಡಿಗೋಸ್ಕರವಾಗಿ ಆಗಲಿ ಸವಾಲ್ ಮಾಡಕೂಡದು.

4. ಯಾರ್ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂಡಂತೆ ಠೇವಣೀ ಮೊಬಲಗುಗಳನ್ನು ಕಟ್ಟಿರುತ್ತಾರೋ ಆ ಜನಗಳು ಹರಾಜು ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಒಂದು ಅಂಗಡಿಯ ಎರಡು ತಿಂಗಳ ಗುತ್ತಿಗೇ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನು ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣೀ ಕಟ್ಟಿ ವಿಧಾಯಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಬಳಪಟ್ಟು ಲೈಸೆನ್ಸಗಳನ್ನು ಪಡಿಯತಕ್ಕದ್ದು, ಮತ್ತು ಎದರು ಒಡಂಬಡಿಕೆಗಳನ್ನು ಬರೆದುಕೊಡತಕ್ಕದ್ದು. ಈ ರೀತೀಲಿ ಠೇವಣೀ ಇಡುವುದಕ್ಕೆ ಯಾ ಲೈಸೆನ್ಸು ಪಡಿಯಲಿಕ್ಕೆ ಯಾ ಎದರು ಒಡಂಬಡಿಕೆಯನ್ನು ಬರೆದುಕೊಡಲಿಕ್ಕೆ ಯಾವ ಮನುಷ್ಯನಾದರೂ ತಪ್ಪಿದರೆ ಸದರೀ ಅಂಗಡಿಯು ಯಾ ಅಂಗಡಿಗಳು ಅಂಥಾ ಮನುಷ್ಯರ ಜವಾಬ್‌ದಾರೀ ಮೇಲೆ ಪುನಹ ಹರಾಜು ಮಾಡಲ್ಪಡುತ್ತವೆ; ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೇ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸದಾರರು ಅಥವಾ ಆತನಿಂದ ವರ್ಗಪಡದವರನ್ನು ಹೊಂದಿರುತ್ತೆ.

5. ಮೇಲಿನ 4ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡೆಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ ಮತ್ತು ದುಸರೇ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ

235

ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದರಲ್ಲಿ ಚಡ ಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದರನ್ನ ಆತನು ಭರ್ತಿ ಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಂಡಿರುವ ಠೇವಣೀ ಮೊಬಲಗುಗಳನ್ನ ವಜಾವಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರೀ ಠೇವಣೀ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣೀ ಮೊಬಲಗನ್ನೆಲ್ಲಾ ಸರಕಾರಕ್ಕೇನೇ ಜಮಾ ಮಾಡಿಕೊಳ್ಳತಕ್ಕದ್ದು.

6\. ಹಿಂದಿನ ಕೆಲವು ವರುಷಗಳ ಬಾಬತು ಪ್ರತಿ ಅಂಗಡಿಯ ಗುತ್ತಿಗೆ ಮೊಬಲಗು ಖರ್ಚಾದ ಸಾರಾಯಿ ವಗೈರೆ ತಪ್ಸೀಲ್ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7\. ಮೇಲಿನ 4ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1). ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನ ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ. ಪರಂತು ಬೆಂಗಳೂರು ಸೆಂಟ್ರಲ್ ಡಿಸ್ಟಿಲೆರಿಯಲ್ಲಿ ತಯಾರಾಗುವ ಯಾವ ಜೋರಿನದೇ ಆಗಲಿ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗುಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನ ಯಾ ಇತರ ವಿಶೇಷ ಮದ್ಯಗಳನ್ನ ಮಾರಲಿಕ್ಕೆ ಹಕ್ಕು ಇರಲಾರದು. ಈ ಬಾಬತು ಷರಾಬನ್ನ ವ ಮದ್ಯಗಳನ್ನ ಮಾರುವದಕ್ಕೆ ಅನ್ಯದೇಶದ ಸಾರಾಯಿಗಳ ಅಂಗಡಿಕಾರರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವತಂತ್ರದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸ್ಥಳೀಯವಾದ ಸರ್ಕಾರದ ಖಜಾನೆಗೆ 1896ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳುಗಟ್ಲೇ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಮಾಹೆಯ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್‌ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಇಜಾರೆ ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹ ಮೂಲಕವಾಗಿ ರಿಕಾರ್ಡು ಮಾಡಿ ಮಾಹೆ ಆಖೈರ್ ಆದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ ಅಂಗಡಿಯನ್ನು ಮರಳಿ ಹರಾಜು ಮಾಡತಕ್ಕದ್ದು. ಲೈಸೆನ್ಸದಾರನಿಂದ ಇಡಲ್ಪಟ್ಟ ಠೇವಣೀ ಮೊಬಲಗು ಇಜಾರೆ ವಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಅಂಗಡಿಗಳು ದುಸರೇ ಹರಾಜು ಮಾಡಲ್ಪಟ್ಟಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗದುಕೊಳ್ಳಲ್ಪಡಬಹುದು, ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಅಂಗಡಿಗಳು ದುಸರೇ ಹರಾಜು ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತೀ ಮಾಡುವ ಬಗ್ಗೆ ಉಪಯೋಗಿಸಲ್ಪಡಬಹುದು. ಅಂಥಾ ಬರಬೇಕಾದ ಬಾಕಿಗಳೂ ಮತ್ತು ನಷ್ಟದ ಮೊಬಲಗುಗಳೂ ಸುದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಶೇಕಡ ಸಾಲಿಯಾನ ಆರರಂತೆ ಆಗುವ ಬಡ್ಡಿ ದೇಖೀಲ್ ಲೈಸೆನ್ಸದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಗೆ ಅಥವಾ ಈಡು ಮೊಬಲಗು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

(3) ಈ ಸರ್ಕಾರಕ್ಕೆ ಸಾರಾಯಿಯನ್ನ ವ ಇತರ ಒಳದೇಶದ ಷರಾಬನ್ನ ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರರಾದ ಪ್ಯಾರಿ ಅಂಡ್ ಕೋ ಎಂಬ ವರ್ತಕರಿಂದ ಲೈಸೆನ್ಸದಾರನು ತನ್ನ ಅಂಗಡಿಯಲ್ಲಿ ಮಾರುವದಕ್ಕೋಸ್ಕರ ಡಿಸ್ಟಿಲೆರಿಯಲ್ಲಿ ಯಾ ಸರ್ಕಾರದ ಅಪ್ಪಣೆ ಮೇರೆ ಏರ್ಪಾಡಾಗಿರುವ ಬಾಂಡೆಡ್ ಡೆಪೋಯಿಂದ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ 10½ ಆಣೆ ದರದ ಮ್ಯಾರೆ ಕ್ರಯವನ್ನು ಪಾವತಿ ಮಾಡಿ ಕೊಂಡುಕೊಳ್ಳಬೇಕು. ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯು ಗ್ಯಾಲನ್ 1ಕ್ಕೆ 5—5—0 ದರದ ಪ್ರಕಾರ ಜನಗಳಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸ್‌ದಾರನೂ ಆವನ ಅಂಗಡಿಯು ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದ ಮೇರಿಗೆ ಮ್ಯುನಿಸಿಪಲ್ ಕಾನೂನು ಪ್ರಕಾರ ರೆಜಿಸ್ಟರ್ ಫೀ ಯಾ ರುಸುಮನ್ನು ಕೊಡಬೇಕು; ಮತ್ತು ಆತನು ಪ್ರತಿ ತಿಂಗಳಲ್ಲಿಯೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಮೇಲ್ಕಂಡ ಖರೀದಿ ದರ ಮತ್ತು ರುಸುಂಗಳು ಶಿವಾಯಿ ಸರ್ಕಾರದ ಅಪ್ಪಣೇ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ವಿಧಾಯಕವಾಗಿರುವ 4 ರೂಪಾಯಿ ದರದ ಮೇರೆ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತೀ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸ್‌ದಾರನು ಮೇಲ್ಕಂಡ ಹಾಸಲನ್ನೂ ವ ಖರೀದಿ ಮೊಬಲಗನ್ನೂ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬಲಗನ್ನೂ ತೆಗದುಕೊಳ್ಳಲು ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನ ವಶಕ್ಕೆ ಪಾವತೀ ಮಾಡಿ ಗೊತ್ತುಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರೀ ಆಫಿಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟೀ ಮೊಬಲಗಿಗೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಎಕ್ಸೈಜ್ ಕಮ್ಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೇದಾರನು ಬಾಂಡೆಡ್ ಡಿಪೋಯಿಂದ ಸಾರಾಯಿ ರವಾನೆ ಮಾಡಲು ವಿಧಾಯುಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು.

(7) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖ, ಸಾರಾಯಿಯು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ತೆಗದುಕೊಳ್ಳಲ್ಪಟ್ಟದ್ದ ಅಂಗಡಿಗಳ ಪೈಕಿ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರವರು ವಿಚಾರಮಾಡದೆ ತಿರಸ್ಕರಿಸುವರು.

(9) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(10) ಬಾಕೀ ಕರಾರುಗಳು ವ ಷರತ್ತುಗಳು ವಿಧಾಯುಕವಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

8. ಲೈಸೆನ್ಸುದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸುದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣೀ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂಬು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದು ಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರೀಮೇಲೆ ಮೇಲ್ಕಂಡ ಹಕ್ಕನ್ನು ಪುನಹ ಹರಾಜು ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1896ನೇ ಇಸವಿ ಜುಲೈ ಗುರ್ರೀ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ

237

ನಡಿಸುವದರಲ್ಲಿ ಅಶ್ರದ್ಧೆ ಮಾಡೋಣವರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲು ಸದರೀ ಲೈಸೆನ್ಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜರ್ಮಿನ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳು ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನ ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸುದಾರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಅತಂಕ ಪಡಿಸುವದಿಲ್ಲ.

1896–97ನೇ ಸಾಲಿಗೆ ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ಹರಾಜು.

ನಂ. 8032–E. X. 245, ತಾರೀಖು 6ನೇ ಮಾರ್ಚಿ 1896.

1. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ * ವಿವರಿಸಲ್ಪಟ್ಟಿರುವ ಗೊತ್ತಾದ ಪ್ರದೇಶಗಳಲ್ಲಿ ಯಾ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ 1896ನೇ ಇಸವಿ ಜುಲೈ ದುರ್ರೇ ತಾರೀಖು ಲಾಗಾಯತು 1897ನೇ ಇಸವಿ ಜೂನ 30ನೇ ತಾರೀಖಿಗೆ ಪೂರೈಸುವ ಸರ್ಕಾರ್ ಸಾಲ್ ಅಖೈರವರಿಗೆ ಸಾರಾಯಿಯನ್ನು ಬಿಕರಿಮಾಡುವ ಬಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮ್ಮಿಷನರುಗಳಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ ಕಮ್ಮಿಷನರುಗಳಿಂದ ಶಿವಮೊಗ್ಗ ಡಿಸ್ಟ್ರಿಕ್ಟಿನ ಹರಾಜನ್ನು ಆ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರನಲ್ಲಿಯೂ ಇತರ ಡಿಸ್ಟ್ರಿಕ್ಟುಗಳ ಬಾಬತನ್ನು ಆಯಾ ಡಿಸ್ಟ್ರಿಕ್ಟುಗಳ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಹರಾಜ್ ಹಾಕಲ್ಪಡಲು ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜ್‌ಗಳು ಸದರೀ ತಾರೀಖುಗಳಲ್ಲಿ ಪೂರೈಸದೇಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳ ಪೈಕಿ ಒಂಟಿಯಾಗಿ ಯಾವದಕ್ಕಾದರೂ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಹರಾಜ್ ಹಾಕುವ ಆಫೀಸರರು ಒಂದಕ್ಕಿಂತ ಹೆಚ್ಚು ಫಿರ್ಕಾಗಳನ್ನ ಸೇರಿಸಿಯಾಗಲಿ ಫಿರ್ಕಾಗಳನ್ನ ತಾಲ್ಲೂಕುವಾರ್ ಹರಾಜ್ ಮಾಡುವದರ ಮೂಲಕವಾಗಿ ಆಗಲಿ ಯಾ ಹಾಲಿ ಅಂಗಡಿಗನ್ನುಂಟಾಗದೆ ಇರುವ ವಿಶೇಷ ಫಿರ್ಕಾಗಳನ್ನು ಮುಂದೆ ಫೈಸಲ್ಮಾಡಲು ಅವಶ್ಯಕ ವಿದ್ದರೆ ಉಳಿಸಿಕೊಳ್ಳುವದರ ಮೂಲಕವಾಗಲಿ ಯುಕ್ತಾನುಸಾರ ಸದರೀ ಫಿರ್ಕಾಗಳನ್ನ ಬದಲಾಯಿಸಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಬಟ್ಟು ಸ್ವಾತಂತ್ರ್ಯದ ಹಕ್ಕು ಫಿರ್ಕಾವಾರ್ ಹರಾಜ್ ಮಾಡಲ್ಪಡುತ್ತೆ, ಹರಾಜ್ ಮಾಡಲ್ಪಟ್ಟ ಪ್ರತಿ ಫಿರ್ಕಾವೂ ಅಂಗೀಕರಿಸಲ್ಪಡತಕ್ಕ ಛಡ ಸವಾಲ್‌ದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಸವಾಲನ್ನ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮನಾಗಿ ಮಂಜೂರ್ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು. ಯಾವದಾದರೊಂದು ಫಿರ್ಕಾದ ಬಟ್ಟು ಸ್ವಾತಂತ್ರ್ಯದ ಹಕನ್ನು ಹರಾಜಿನಲ್ಲಿ ಕೊಡಲ್ಪಟ್ಟ ಸವಾಲುದಾರನು ಎರಡನೇ ಫಿರ್ಕಾದ ಹರಾಜ್ ಷುರುವಾಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ಠೇವಣೀ ಇಡಬೇಕು. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಸಲ್ಪಟ್ಟ ಹದಿನೈದು ದಿವಸಕೆಳೊಳಗಾಗಿ ಮೊದಲು ಇಡೋಣಾದ ಠೇವಣೀ ಜೇಖಿಲ್ ಆತನ ಎರಡು ತಿಂಗಳ ಗುತ್ತಿಗೇ ಹಣಕ್ಕೆ ಸಮಾನವಾಗುವಷ್ಟು ಠೇವಣೀಯನ್ನಿಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿರುವ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಕೊಳ್ಳುವದಲ್ಲದೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡುವ ರೀತ್ಯಾ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಃ ಹರಾಜ್ ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ದುಸರೇ ಹರಾಜ್‌ಗಳು ತಪ್ಪಿಸ್ತನಾದ ಮೇಲ್ಕಂಡ ಸವಾಲ್‌ದಾರನ ಜವಾಬ್ದಾರೀಮೇಲೆ ನಡಿಸಲ್ಪಡುವವು. ಸದರೀ ಸವಾಲ್‌ದಾರನು ಯಲ್ಲಾ ಆದಾಯವನ್ನೂ ಕಳದು ಕೊಳ್ಳತಕ್ಕದ್ದಲ್ಲದೆ ದುಸರೇ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಷುರೂ ಹರಾಜಿನ ಷರತುಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ಪಾವತಿಯಾಗಬೇಕಾಗಿದ್ದ ಬಟ್ಟು ಮೊಬಲಗಿನಲ್ಲಿ ದುಸರೇ ಹರಾಜಿನಲ್ಲಿ ಪಡದ ಸವಾಲ್‌ದಾರನಿಂದ ಪಾವತಿಯಾಗತಕ್ಕ ಬಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ಪಾವತೀ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕೋಸ್ಕರ ವಜಾ ಮಾಡಲ್ಪಡತಕ್ಕದ್ದು. ತದನಂತರ ಬಾಕಿ ಏನಾದರೂ ನಿಂತಲ್ಲಿ ಆ ಮೊಬಲಗು ಜಮೀನ ಕಂದಾಯವು ಯಾವ ರೀತಿಯಾಗಿ ವಸೂಲ್ಮಾಡಲ್ಪಡುತ್ತೋ ಅದೇ ರೀತಿಯಾಗಿ ವಸೂಲ್ಮಾಡಲ್ಪಡುವದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ

* ಪಟ್ಟಿಬಗ್ಯೆ 1896ನೇ ಇಸವಿ ಮಾರ್ಚಿ 26ನೇ ಮುದ್ರಣ ಸಪ್ಲಿಮೆಂಟ ಗೆಜೆಟ್ಟನ್ನು ನೋಡತಕ್ಕದ್ದು.

ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

5. ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳನ್ನ ಆಚರಿಸುವದಕ್ಕೆ ಬದ್ಧನಾಗಿರಲುಳ್ಳವನೆಂದು ಒಂದು ಕರಾರನ್ನು ಬರದು ರುಜುಮಾಡಿ ಕೊಡತಕ್ಕದ್ದು. ಕೊಂಡು ಕೊಂಡವನು ಕರಾರನ್ನ ಸೈನ್ ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಸಿಷ್ಟ ಠೇವಣೀ ಮೊಬಲಗೂ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂಗಳಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದೀದಾರನ ಜವಾಬ್ದಾರಿ ವ ನಷ್ಟಕ್ಕೆ ಗುರಿಯಾಗಿ ದುಸರೇ ಹರಾಜ್ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹರಾಜಿ ಮಂಜೂರಾದ ಮೇಲೆ ಸದರೀ ಖರೀದೀದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನ ಪಡದವರು ಸದರೀ ಕರಾರಿಗೆ ಜವಾಬ್ದಾರರಾಗಿರುತಾರೆ.

6. ಹಿಂದಿನ ಕೆಲವು ಸಾಲುಗಳಲ್ಲಿ ಹಾಲಿ ಫಿರ್ಕಾಗಳ ಬಾಬತು ಅಂಗಡಿಗಳಲ್ಲಿಯೂ ಮತ್ತು ಕೋರಿಗಳಲ್ಲಿಯೂ ಖರ್ಚಾದ ಸಾರಾಯಿಯ ತಪಶೀಲೂ ಮತ್ತು ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗೂ ವಗೈರೆ ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟ ಕೂಡ್ಲೇ ಖರೀದೀದಾರನಿಗೆ ಡೆಪ್ಯುಟಿ ಕಮ್ಮಿಷನರವರು ಈ ಕೆಳಗೆ ಉದಹರಿಸಿರುವ ಷರತುಗಳಿಗೆ ಒಳಪಟ್ಟು ವಿಧಿಸಲ್ಪಟ್ಟ ನಮೂನೆಯಲ್ಲಿ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕನ್ನ ನಮೂದಿಸಿ ಒಂದು ಲೈಸೆನ್ಸನ್ನ ಕೊಡುವರು.

(1) ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ಸಾಧಾರಣವಾಗಿ 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನ ಮಾರುವದಕ್ಕೆ ಮಾತ್ರವೇ ಲಗಾವಾಗುತ್ತೆ. ಪರಂತು ಡೆಪ್ಯುಟಿ ಕಮ್ಮಿಷನರವರ ಯಾ ಇವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರ ವಿಶೇಷ ಅಪ್ಪಣೆ ಮೂಲಕ 30° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನೂ ಮಾರಬಹುದು. ಆದರೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಯಾವ ಜೋರಿನದಾದರೂ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟೀ ಇಳಿಸಲ್ಪಟ್ಟಿರುವ ಷರಾಬಗಳನ್ನೂ ಮತ್ತು ಇತರ ವಿಶೇಷವಾದ ಸಾರಾಯಿಗಳನ್ನೂ ಮಾರಲಿಕ್ಕೆ ಹಕ್ಕು ಇರುವದಿಲ್ಲವು. ಈ ಷರಾಬುಗಳನ್ನೂ ವ ಸಾರಾಯಿಗಳನ್ನೂ ಮಾರಲಿಕ್ಕೆ ಪರಾಯಿ ದೇಶದ ಸಾರಾಯಿಗಳ ಅಂಗಡಿಕಾರರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡದುಕೊಂಡದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರದಿಂದ ಆ ಬಗ್ಗೆ ವಿಧಾಯಕವಾಗಿ ಅಚ್ಚು ಹಾಕಿಸಲ್ಪಟ್ಟಿರುವ ಚರ್ಲಗಳ ಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1896ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಇಜಾರೇ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಗೆ ಪಾವತಿಮಾಡಲಿಕ್ಕೆ ತಪ್ಪಿದರೆ ಅಮಲ್‌ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಲೈಸೆನ್ಸು ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ರಿಕಾರ್ಡುಮಾಡಿ ಮಾಹೆ ಆಖೈರ್ ಅವಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ ಇಜಾರೆಯನ್ನು ಮರಳಿ ಹರಾಜು ಮಾಡತಕ್ಕದ್ದು. ಪರಂತು ಮೇಲ್ಕಂಡಂತೆ ಇಜಾರೆಯನ್ನು ಪುನಃ ವಿಕ್ರಯಿಸುವದಕ್ಕೆ ಬದಲಾಗಿ ಡೆಪ್ಯುಟಿ ಕಮ್ಮಿಷನರವರು ಅವರ ಯುಕ್ತಾನುಸಾರ ಹಾಗೆ ತಪ್ಪಿಹೋದ ಇಜಾರೆಯನ್ನು ಹಾಲಿ ಇರತಕ್ಕ ಅದಕ್ಕೆ ಶೇರಿದದುಕಾನುವಾರಾಗಿ ವಿಂಗಡಿಸಲ್ಪಟ್ಟ ಪ್ರತಿ ಬೇರೆ ಬೇರೆ ದುಕಾನ್ದಾರನಿಗೂ ಅವನು ಪಾವತಿ ಮಾಡುವದಕ್ಕೆ ಒಪ್ಪುವ ಗುತ್ತಿಗೆ ಮೊಬಲಗಿಗೋಸ್ಕರ ಒಂದು ಲೈಸೆನ್ಸ್ ಕೊಡುವಂತೆ ಅಮಲ್‌ದಾರರಿಗೆಹುಕುಂ ಕೊಡಬಹುದು. ಪರಂತು ಹೀಂಗೆ ಕೊಡೋಣಾವ ಗುತ್ತಿಗೆಯ ಒಟ್ಟು ಮೊಬಲಗು ತಪ್ಪಿಹೋದ ಇಜಾರೆದಾರನು ಪಾವತಿ ಮಾಡುವದಕ್ಕೆ ಒಪ್ಪಿ ಇದ್ದ ಮೊಬಲಗಿಗಿಂತಲೂ ಕಮ್ಮಿ ಆಗಿರಕೂಡದು.

(3) ಲೈಸೆನ್ಸಗಾರನಿಂದ ಇಡಲ್ಪಟ್ಟ ಠೇವಣೀ ಮೊಬಲಗು ಇಜಾರೆ ವಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಮೇಲ್ಕಂಡಂತೆ ಎರಡನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಅಥವಾ ವಿಂಗಡಿಸಲ್ಪಟ್ಟಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕೀಗೋಸ್ಕರವೂ ಇಜಾರೆಯು ದುಸರೇ ಹರಾಜು ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತಿಮಾಡು ವ ಬಗ್ಗೂ ಉಪಯೋಗಿಸಲ್ಪಡಬಹುದು. ಅಂಥಾ ಬರಬೇಕಾದ ಬಾಕಿಗಳೂ ಮತ್ತು ನಷ್ಟದ ಮೊಬಲಗುಗಳೂ ಸುದಾ ರೆವಿನ್ಯೂ ಕಂದ್ಬಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಶೇಕ್ಷ್ದಾ ಸಾಲಿಯಾನಾ ಆರ್ರಂತೆ ಆಗುವ ಬಡ್ಡೀ ಜೋಡಿಲ್ ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೇ ಮೊಬಲಗನ್ನು ಕಮ್ಮಿಮಾಡುವ ಬಗ್ಗೆ ಅಥವಾ ಈಡುಮೊಬಲಗು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

239

(4) (*a*) ಈ ಸರ್ಕಾರಕ್ಕೆ ಸಾರಾಯಿಯನ್ನೂ ಒಳದೇಶದ ಇತರ ಷರಾಬುಗಳನ್ನೂ ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರ್ರಾದ ಮ್ಯಾರಿ ಅಂಡ್‌ಕೋ ಎಂಬ ವರ್ತಕರಿಂದಾಗಲಿ ಯಾ ಸರ್ಕಾರದ ಅಪ್ಪಣೆ ಮೇರೆ ಏರ್ಪಡಿಸಾಗುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದಾಗಲಿ ಲೈಸೆನ್ಸ್‌ದಾರನು ತನ್ನ ಫಿರ್ಕಾ ಅಂಗಡಿಗಳಿಗೆ ಸರಬರಾಯಿಗೋಸ್ಕರ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಅಂಥಾ ಭಟ್ಟೀದಾರ್ರಿಂದ ಸರಬರಾಯಿ ಆಗುವ ಸಾರಾಯಿನ ದರವು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 10½ ಆಣೆಪ್ರಕಾರವೂ ಮತ್ತು ಸದರೀ ಜೋರಿಗಿಂತ ಕಮ್ಮಿ ಜೋರುಳ್ಳ ಸಾರಾಯಿಗಳಿಗೆ ಕ್ಯಾಸಲ್ಲಾ ಎಂಬುವರ ಸೂತ್ರಗಳನ್ನನುಸರಿಸಿ ಅದೇ ದಾಮಾಷಾಯಿ ದರಗಳ ಪ್ರಕಾರವೂ ಇರತಕ್ಕದ್ದು. ಲೈಸೆನ್ಸ್‌ದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯು ಗ್ಯಾಲನ್ 1ಕ್ಕೆ 5—5—0 ದರದ ಪ್ರಕಾರವು ಸದರೀ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನಗಳಿಗೆ ಮಾರತಕ್ಕದ್ದು.

(*b*) ಮೇಲ್ಕಂಡ ಖರೀದೀ ದರ ಶಿವಾಯಿ ಡಿಸ್ಟಿಲೇರಿಯಾನೆ ಭಟ್ಟೀ ಗಡಂಗಿನಿಂದ ಯಾ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಬಯ್ಯಲ್ಪಡುವದಕ್ಕೆ ಪೂರ್ತಾ 20° ಡಿಗ್ರಿ ಅಂಡರ್‌ಪ್ರೂಫ್ ಜೋರುಳ್ಳ ಸಾರಾಯಿಯ ಗ್ಯಾಲನ್ 1ಕ್ಕೆ 4 ರೂಪಾಯಿ ದರದಂತೆ ಎಕ್ಸೈಜ್ ಡ್ಯೂಟಿಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಸ್ಥಳೀಯ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(5) ಲೈಸೆನ್ಸ್‌ದಾರನು ಮೇಲ್ಕಂಡ ಡ್ಯೂಟಿ ಮೊಬಲಗನ್ನು ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ ವಿಧಿಸೋಣಾಗಿರುವ ನಮೂನೆಯಲ್ಲಿ ಒಂದು ರಶೀತಿಯನ್ನು ಪಡಿಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕಸಾರಾಯಿಯ ಸರಬರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಪಡಿಸಿ ಅಂಥಾ ಷರಾಬಿಗೆ ವಿಧಿಸಿರುವ ಖರೀದಿಯನ್ನು ಭಟ್ಟೀದಾರರಿಗಾಗಲಿ ಯಾ ಅವರ ಏಜಂಟರಿಗಾಗಲಿ ಯಾ ಈ ಬಗ್ಯೆ ಸರ್ಕಾರದಿಂದ ನೆಮಿಸಲ್ಪಡುವ ಯಾವ ಮನುಷ್ಯನಿಗಾಗಲಿ ಪಾವತಿ ಮಾಡಿದ ನಂತರ ಡಿಸ್ಟಿಲೇರಿ ಜಿಮ್ಮೇಲಿರುವ ಅಸಿಸ್ಟೆಂಟ್ ಸೂಪರ್ ವೈಜರ್ ಅಥವಾ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರೀ ಆಫಿಸರ್ರ ರಶೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮೊಬಲಗ್ಗೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿರುವ ತಾರೀಖು ಮತ್ತು ಫಂಪಿ ನಮೂದ್ಮಾಡಿ ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫಿಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಅಸಿಸ್ಟೆಂಟ್ ಸೂಪರ್ ವೈಜರವರು ಅಥವಾ ಮೇಲೆ ಹೇಳಲ್ಪಟ್ಟ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜಿಮ್ಮೇದಾರನು ವಿಧಾಯಕವಾಗಿರುವ ನಮೂನೆಯಲ್ಲಿ ಡಿಸ್ಟಿಲೇರಿ ಅಥವಾ ವೇರ್ ಹೌಸಿನಿಂದ ಸಾರಾಯಿ ರವಾನೆ ಮಾಡುವದಕ್ಕೋಸ್ಕರ ಜಾರೀಲಿರುವ ನಿಬಂಧನೆಗಳ ಪ್ರಕಾರ ವಿಧಾಯಕವಾದ ನಮೂನೆಯಲ್ಲಿ ದ್ವಿಪ್ರತಿಯಾಗಿ ರಹದಾರಿಯನ್ನು ಕಳುಹಿಸತಕ್ಕದ್ದು. ಬಾಂಡೆಡ್ ಡಿಪೋಯಿಂದ ಸಾರಾಯಿಯನ್ನು ಪಡಿಯುವಂಥಾ ಲೈಸೆನ್ಸ್‌ದಾರನು ಅಂಥಾ ಸಾರಾಯಿಯ ಖರೀದಿಯನ್ನೂ ಮತ್ತು ಡ್ಯೂಟಿ ಮೊಬಲಗನ್ನೂ ಸಹ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಬೇಕು.

(6) ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿನ ಲೈಸೆನ್ಸ್‌ದಾರನು ತನ್ನ ಫಿರ್ಕಾ ಸರಹದ್ದಿನಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಮತ್ತು ತನ್ನಿಂದಲೂ ಅವಶ್ಯಕವೆಂದು ಎಣಿಸಲ್ಪಡತಕ್ಕ ಸ್ಥಳ ಯಾ ಸ್ಥಳಗಳಲ್ಲಿ ಕೋಠಿ ಯಾ ಕೋಠಿಗಳನ್ನು ಸ್ಥಾಪಿಸತಕ್ಕದ್ದು. ಈ ಕೋಠಿಗಳಿಗೆ ತಾನು ಖರೀದಿಗೆ ಪಡದ ಸಾರಾಯಿಯನ್ನು ಅಂಗಡಿಕಾರರಿಗೆ ಕೊಡುವದಕ್ಕೆ ತತ್ಪೂರ್ವವೇ ಹಾಲಿ ಜಾರೀಲಿರುವ ನಿಬಂಧನೆಗಳನ್ನನುಸರಿಸಿ ರವಾನಿಸಿದ ಸರಕನ್ನ ಮೊಕಾಬಿಲೆ ವಗ್ಯೆರೆ ಮಾಡತಕ್ಕ ಬಗ್ಯೆ ತೆಗದುಕೊಂಡು ಹೋಗತಕ್ಕದ್ದು. ಸದರೀ ಕೋಠಿಗಳು ಡೆಪ್ಯುಟಿ ಕಮ್ಮಿಷನರವರ ಯಾ ಎಕ್ಸೈಜ್ ಇಲಾಖೆ ಇತರ ಆಫಿಸರರ ತನಿಖೆ ಬಗ್ಯೆ ಸದಾ ಖುಲ್ಲಾವಾಗಿರತಕ್ಕದ್ದು. ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಲೈಸೆನ್ಸ್ ಹೊಂದದೆ ಅಂಥಾ ಕೋಠಿಯು ಇಡಲ್ಪಡಲಾಗದು. ಉಳಿದ 7 ಡಿಸ್ಟ್ರಿಕ್ಟುಗಳ ಲೈಸೆನ್ಸ್‌ದಾರರಿಂದ ಈಗಿನ ಹಾಗೆ ಶಿಬ್ಬಂದಿ ವ ಬಾಡಿಗೆ ಖರ್ಚುಗಳು ಭರಿಸಲ್ಪಟ್ಟು ಅವರು ಹಾಲಿ ಜಾರೀಲಿರುವ ಬಾಂಡೆಡ್ ಡಿಪೋಗಳಿಂದಲೇ ಸಾರಾಯಿ ಸರಬರಾಯಿ ಪಡೆಯಬೇಕಲ್ಲದೆ ಅವರ ಅಂಗಡಿಗಳಿಗೆ ರವಾನೆ ಮಾಡಲು ಸದರೀ ಡಿಪೋಗಳಲ್ಲಿ ಅದನ್ನು ಇಡತಕ್ಕದ್ದು.

(7) ಡಿಸ್ಟಿಲೇರಿ ಯಾ ಬಾಂಡೆಡ್ ಡಿಪೋಯಿಂದ ಯಾ ಫಿರ್ಕಾ ಕೋಠಿಯಿಂದ ರವಾನಿಸಲ್ಪಟ್ಟ ಸ್ಥಿತಿಯಲ್ಲಿ ಸಾರಾಯಿಯು ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಶ್ರಮಾಡಲಾಗದು.

(8) ಲೈಸೆನ್ಸ್‌ದಾರನು ತನ್ನಿಂದ ಖರೀದಿಗೆ ತೆಗೆದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಸಾರಾಯಿಯ ಪರಿಮಾಣವನ್ನೂ ಮತ್ತು ಜೋರನ್ನೂ ಕುರಿತು ಸರಿಯಾದ ಲೆಖ್ಖಗಳನ್ನಿಡಬೇಕು. ಆತನಿಂದ ಕೊಂಡುಕೊಳ್ಳಲ್ಪಟ್ಟ ಸಾರಾಯಿಯೊಡನೆ ರವಾನಿಸಿದ ರಹದಾರಿಗಳು ಹಾಲಿ ಜಾರೀಲಿರುವ ಯಾ

ಮುಂದೆ ಆಗಿಂದಾಗ್ಯೆ ಸರ್ಕಾರದಿಂದ ಸಾದರ್ಪಡಿಸಲ್ಪಡಬಹುದಾದ ನಿಬಂಧನೆಗಳನ್ನನುಸರಿಸಿ ಅಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(9) ವಿಧಾಯುಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಕ್ರಮವಾಗಿ ಲೈಸೆನ್ಸ ಪಡದ ದುಕಾನಗಳಲ್ಲಿ ವಿನಹ ಮತ್ತೆಲ್ಲಿಯೂ ಸಾರಾಯಿ ಬಿಕರೀ ಮಾಡಲಾಗದು ಮತ್ತು ಎಕ್ಸೈಜ್ ಕಮ್ಮಿಷನರವರ ಮುಂಚಿತವಾದ ಮಂಜೂರಾತಿ ಇಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು.

(10) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(11) ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆ ವಳಗೆ ಲೈಸೆನ್ಸಿನಲ್ಲಿ ವ್ಯಕ್ತಪಟ್ಟಿರುವ ಫಿರ್ಕಾವಿನ ಯಾವ ಭಾಗವಲ್ಲಾದರೂ ಶೇಂದೀ ಮಾರತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ಕಾವಿನ ಯಾವ ಭಾಗದಲ್ಲಾದರೂ ಶೇಂದೀ ಬಿಕರೀ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಒಳದೇಶದ ಸಾರಾಯಿ ಮಾರುವ ತನ್ನ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಅಗಲಿ ಯಾ ಸಂಬಂಧವುಳ್ಳವನನ್ನಾಗಿ ಅಗಲಿ ಇಟ್ಟುಕೊಳ್ಳಕೂಡದು; ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂಬರ್ವಾರ್ ಎಕ್ಸೈಜ್ ಕಮ್ಮಿಷನರವರ ಲಿಖಿತ ಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈ ಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿ ದೇಶದ ಯಾ ಶೀಮೆಯಲ್ಲಾಗಲಿ ಲೈಸೆನ್ಸದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(12) ಲೈಸೆನ್ಸದಾರನು 1896ನೇ ಇಸವಿ ಜುಲೈ ಗುರ್ರೆಯಲ್ಲಿ ತನ್ನ ಫಿರ್ಕಾದೊಳಗಿರುವ ಹಾಲಿ ಬಾಂಡೆಡ ಡಿಪೋದಲ್ಲಿ ಯಾ ಫಿರ್ಕಾ ಕೋಠಿಯಲ್ಲಿ ಯಾ ಆತನ ಅಂಗಡಿಗಳಲ್ಲಿ ಹಾಜರಿರತಕ್ಕ ವಾಯಿದೆ ಮೀರದ ಗುತ್ತಿಗೆದಾರನ ಬಾಬತು ದಾಸ್ತಾ ಸಾರಾಯಿ ಮುನ್ನ ಎಕ್ಸೈಜ್ ಕಮ್ಮಿಷನರ್ ಸಾಹೆಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಪೂರ್ವದಗುತ್ತಿಗೇದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(13) ಲೈಸೆನ್ಸದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಅಥವಾ ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನ ಉಪಯೋಗಿಸತಕ್ಕದ್ದು. ಮತ್ತು ಸಾರಾಯಿಯನ್ನು ಸಾಗಿಸುವ ಬಗ್ಗೆ ಬೇಕಾದ ಲೆಕ್ಕ, ರಹದಾರಿ ಅಥವಾ ಪ್ಯಾಸ್ ಇವುಗಳಗೆ ವಿಧಾಯುಕವಾದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ವದಗಿಸಿಕೊಳ್ಳತಕ್ಕದ್ದು.

(14) ಈ ಗುತ್ತಿಗೆಯು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(15) ತೆಗದುಕೊಳ್ಳಲ್ಪಟ್ಟದ್ದ ಫಿರ್ಕಾಗಳ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರವರು ವಿಚಾರ ಮಾಡದೇ ತಿರಸ್ಕರಿಸುವರು.

8. ಲೈಸೆನ್ಸದಾರನಿಂದಲಾಗಲಿ ಯಾ ಆತನ ಶಿಫಾರಸಿನ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಿಂದಲಾಗಲಿ ಮೇಲ್ಕಂಡ ಷರತ್ತುಗಳು, ಯಾ ಲೈಸೆನ್ಸಿನ ಕರಾರುಗಳು ಉಲ್ಲಂಘಿಸಲ್ಪಟ್ಟ ಪಕ್ಷದಲ್ಲಿ ಯಾ ಆತನು ಅಂಗಡಿಗಳನ್ನು ತೆಗಿಯುವದರಲ್ಲಿ ಅಶ್ರದ್ಧೆಯಾಗಿದ್ದಲ್ಲಿ ಯಾ ಗುತ್ತಿಗೇ ಕೆಲಸದಲ್ಲಿ ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯಕೊಡಲು ತಪ್ಪಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಪ್ರತಿಯೊಂದು ಉಲ್ಲಂಘನೆಗೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ತೇವಣೀ ಇಡಲ್ಪಟ್ಟಿರುವ ಮೊಬಲಗು ದಂಡವಾಗಿ ದಾಖಲ್ಮಾಡಿಕೊಳ್ಳಲ್ಪಟ್ಟರತ್ತೆಂದು ಹುಕುಂ ಮಾಡಲಿಕ್ಕೂ, ಲೈಸೆನ್ಸನ್ನ ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರೀ ಮೇಲೆ ಸದರೀ ಸರ್ವ ಸ್ವತಂತ್ರದ ಹಕ್ಕನ್ನು ಪುನಃ ಹರಾಜು ಮಾಡಲಿಕ್ಕೂ, ಯಾ ಅಂಥಾ ಗುತ್ತಿಗೇ ಫಿರ್ಕಾವನ್ನ ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾದ ಎಲ್ಲಾ ನಷ್ಟವನ್ನೂ 1896ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಗಳನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನಷ್ಟಗಳೂ ದೇಖೀಲ್ ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೇ ಹಣವು ಕೂಡಲೆ ಪಾವತಿ ಮಾಡಲಿಕ್ಕೆ ಗುರಿಯಾಗುತ್ತೆ. ಅಂಥಾ ಎಲ್ಲಾ ದಂಡದ ವ ನಷ್ಟದ ಮೊಬಲಗುಗಳೂ ಜಮೀನ್ದಾರೀ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ತೇವಣೀ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸ ರದ್ದು ಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನು ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸದಾರನನ್ನಾಗಲಿ, ಯಾ ಆತನ ಏಜಂಟನ್ನಾಗಲಿ, ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತಿ ಕ್ರಮ ನಡಿಸಲು ಆತಂಕ ಪಡಿಸುವದೆಂದು ಭಾವಿಸಲ್ಪಡಕೂಡದು.

241

ಮೈಸೂರು ಸರ್ಕಾರದಿಂದ ಹೊರಡೋಣಾದ ಇಸ್ತಿಹಾರನಾಮೆ.

ನಂಬರ್ 8550—ಯು. 260.

ತಾರೀಖು 18ನೇ ಮಾರ್ಚಿ 1896.

ಇದರಿಂದ ಪ್ರಕಟಪಡಿಸುವದೇನಂದರೆ, 1896 ನೇ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯತು 1897ನೇ ಇಸವಿ ಜೂನ 30ನೇ ತಾರೀಖಿಗೆ ಪೂರೈಸುವ 12 ತಿಂಗಳ ಕಾಲದಲ್ಲಿ ಇಜಾರೇದಾರರ ಕೈಕೆಳಗಿನ ಅಂಗಡೀದಾರರಿಂದ ಜನಗಳಿಗೆ ಮತ್ತು ಬೇಕರ್ಸ್ ಯಾನೆ ರೊಟ್ಟಿ ಕಾರಖಾನೆಯವರಿಗೆ ಈಚಲು ಮರದ ಶೇಂದಿಯು ಇದರಡಿ ನಮೂದಿಸಿರುವ ಮೇರೆ ಚಿಲ್ಲರೇ ದರಗಳಿಗೆ ಮಾರಲ್ಪಡತಕ್ಕದ್ದು:—

ಡಿಸ್ಟ್ರಿಕ್ಟು	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ. ಉತ್ತಮ.	ಕನಿಷ್ಟ.	ರೊಟ್ಟಿ ಕಾರಖಾನೆಯವರಿಗೆ ಒಂದು ಶೇರು ಗೋಧಿ ಖರೀದಿ
ಬೆಂಗಳೂರು.	ಸಿವಿಲ್ ವ ಮಿಲಿಟರಿ ಸ್ಟೇಷನ್ ಮತ್ತು ಷಹರ್	0 1 6	0 1 0	0 1 0
	ತಾಲ್ಲೂಕು ಕಸಬಾಗಳು	0 1 3	0 0 10	
	ಮೈಸೂರ್ ಡಿಸ್ಟ್ರಿಕ್ಟಿನ ಬಾಜೂದಲ್ಲಿರುವ ಗ್ರಾಮಗಳು, ಅಂದರೆ:— ಚನ್ನಪಟ್ಟಣದ ತಾಲ್ಲೂಕಿಗೆ ಸೇರಿದ ಇಗ್ಗಲೂರು, ಗೇಜಗದಾಸನ ದೊಡ್ಡಿ, ಚೆಗದಾಪುರ, ಕುಕ್ಕೂರು, ವೀರಗನಹಳ್ಳಿ, ದಾಮನಗುಂಡು, ಮತ್ತು ಅರಳಾಪುರ ಎಂಬುವ ಗ್ರಾಮಗಳು ಕಾನಕಾನಹಳ್ಳಿ ತಾಲ್ಲೂಕಿಗೆ ಸೇರಿದ ಸಾತನೂರು ಮತ್ತು ಹಲಸೂರು ಎಂಬುವ ಗ್ರಾಮಗಳು	0 0 6	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ	0 1 0	0 0 8	
ಕೋಲಾರ.	ತಾಲ್ಲೂಕು ಕಸಬಾಗಳು	0 1 3	0 0 10	
	ಕೋಲಾರಿಗೆ ಸೇರಿದ ದಿಂಬ, ಬವರಿಂಗುಪ್ಯಾಟೆಗೆ ಸೇರಿದ ನೇರನಹಳ್ಳಿ, ಚಿಕ್ಕಬಳ್ಳಾಪುರಕ್ಕೆ ಸೇರಿದ ರಂಗಸ್ಥಳ, ಗೋರೀಬಿದನೂರಿಗೆ ಸೇರಿದ ಗುಂಡಾಪುರ, ಚಿಕ್ಕ ಕುರುಗೋಡು, ಹಿರೇಬಿದನೂರು, ಗೊಟ್ಟಗನಪುರ ಮತ್ತು ಕಲ್ಲೂಡಿ, ಮತ್ತು ಬಾಗೇಪಲ್ಲಿಗೆ ಸೇರಿದ ಗಂಟಂವಾರಿಪಲ್ಲಿ, ಹೊಸಕೋಟೆ ಮತ್ತು ಮಲ್ಲಸಂದ್ರ ಎಂಬ ಗ್ರಾಮಗಳಲ್ಲಿ	0 1 3	0 0 10	
	ಇತರ ಎಲ್ಲಾ ಗ್ರಾಮಗಳಲ್ಲಿ	0 1 0	0 0 8	
ತುಮಕೂರು.	ಹುಳಿಯಾರ್ ಸಬ್ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ	0 0 8	0 0 6	
	ಶಿರಾ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ	0 1 3	0 0 6	
	ಇತರ ಎಲ್ಲಾ ತಾಲ್ಲೂಕು ಕಸಬಾಗಳಲ್ಲಿ	0 1 3	0 0 10	
	ಕುಣಿಗಲ್ ತಾಲ್ಲೂಕಿಗೆ ಸೇರಿದ ಹುಳಿಯಾರದುರ್ಗ, ಪುರ ಮತ್ತು ಕೋಡವಟ್ಟಿ ಎಂಬ ಗ್ರಾಮಗಳಲ್ಲಿ	0 0 6	0 0 4	
	ಹುಳಿಯಾರು ಸಬ್ ತಾಲ್ಲೂಕಿನ ಗ್ರಾಮಗಳಲ್ಲಿ	0 0 6	0 0 4	
	ಶಿರಾ ತಾಲ್ಲೂಕಿನ ಗ್ರಾಮಗಳಲ್ಲಿ	0 1 0	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ	0 1 0	0 0 8	
ಮೈಸೂರು.	ಮೈಸೂರ ಟವನ್	0 1 0	0 0 10	
	ಮೈಸೂರು ತಾಲ್ಲೂಕಿಗೆ ಸೇರಿದ ಹೊಸಕೋಳ, ಹಾರೋಹಳ್ಳಿ, ವರುಣ, ವೃತ್ತನಹಳ್ಳಿ ಮತ್ತು ಕುಪ್ಪಗಾಲ ಎಂಬ ಗ್ರಾಮಗಳು	0 0 8	0 0 4	
	ಮೈಸೂರು ತಾಲ್ಲೂಕಿಗೆ ಸೇರಿದ ಚಾಮುಂಡಿ ಮತ್ತು ಉತ್ತನಹಳ್ಳಿ ಜಾತ್ರೆಗಳಲ್ಲಿ	0 1 0	0 0 8	
	ಮೈಸೂರು ತಾಲ್ಲೂಕಿಗೆ ಸೇರಿದ ಕಲಸ್ವಾಡಿ, ಸುಕ್ಕಹಳ್ಳಿ, ರಾಂನಹಳ್ಳಿ, ಕುಂಬಿಗರ ಕಟ್ಟೆ ಮತ್ತು ಅಮ್ಮನವರಕೊಳ ಎಂಬ ಗ್ರಾಮಗಳಲ್ಲಿ	0 1 0	0 0 10	
	ಮೈಸೂರು ತಾಲ್ಲೂಕಿಗೆ ಸೇರಿದ ಭೂಗದಹಳ್ಳಿ, ಕೆಂಚಲಗೂಡು, ಮರಟಿಕ್ಯಾತನಹಳ್ಳಿ ಮತ್ತು ಗಣಂಗೂರ್ ಹುಂಡಿ ಎಂಬ ಗ್ರಾಮಗಳಲ್ಲಿ	0 0 10	0 0 8	
	ಹೆಗ್ಗಡದೇವನಕೋಟೆ ಕಸಬ	0 0 10	0 0 4	
	ಮಾಗಡಿಹಳ್ಳಿ ಕಾಡುಗ್ರಾಮದಲ್ಲಿ	0 1 0	0 0 8	
	ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿದ ಸರಗೂರು, ಕಿತ್ತೂರು, ಮರಳುಮಗ್ಗೆ, ಸೋಗಿರೆ, ಅಂತ್ರಸಂತೆ, ನೇರಳೆ, ಎಲ್ಲಮತ್ತೂರು ಕಾರೇಪುರ, ಮತ್ತು ಗಿಶನೆ ಎಂಬ ಗ್ರಾಮಗಳಲ್ಲಿ	0 0 8	0 0 6	

ಜಿಲ್ಲೆ.	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ.		[illegible]
		ಉತ್ತಮ.	ಕನಿಷ್ಟ.	
ಮೈಸೂರು	ಹೆಗ್ಗಡ ದೇವನಕೋಟೆ ತಾಲ್ಲೂಕಿಗೆ ಸೇರಿದ ಚಿಕ್ಕಳ್ಳಿ, ಮತ್ತಿಕೆರೆ, ಎಡತೊರೆ ಮತ್ತು ಹಿರಿಹಳ್ಳಿ, ಎಂಬ ಗ್ರಾಮಗಳು	0 0 10	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ	0 0 8	0 0 4	
	ಹುಣಸೂರು ಕಸಬ	0 0 10	0 0 6	
	ಹುಣಸೂರು ತಾಲ್ಲೂಕಿಗೆ ಸೇರಿದ ದಾದಕೆರೆ, ಹನಗೋಡು, ಹೆಬ್ಬೂರು, ಬಿಳಿಕೆರೆ ಮಸನಿಕಟ್ಟೆ, ಚಿಟ್ಟನಹಳ್ಳಿ, ಪಿಜಾಜೆಗುರ್ರಿ, ಕಂಪಾಪುರ, ಚಿಲಕುಂದು, ಅತ್ತಿಕುಪ್ಪ, ಪಟ್ಟದಪುರ, ಅತ್ತಿಗೋಡುಸಂತೆ, ಕವರವಳ್ಳಿ, ಸೂಲೆಕೋಟೆ, ಚಾಮರಾಜಕೋಟೆ, ಕನ್ನಗೊಳ, ಆನೆಚೌಕೂರು, ಪಂಚವಳ್ಳಿ ಮಟ್ಟೂರು ಅವರ್ತಿಕೋಟೆ ಮತ್ತು ಸತ್ತಿಗಾಲ ಎಂಬ ಗ್ರಾಮಗಳು	0 0 8	0 0 4	
	ಹುಣಸೂರು ತಾಲ್ಲೂಕಿಗೆ ಸೇರಿದ ಪಟ್ಟದಪುರದ ಜಾತ್ರೆಗಳಲ್ಲಿ	0 0 10	0 0 8	
	ಹುಣಸೂರು ತಾಲ್ಲೂಕಿಗೆ ಸೇರಿದ ಕಟ್ಟೆಮಳವಾಡಿ, ಕಲ್ಲಬೆಟ್ಟ, ಹೊನ್ನೇನಹಳ್ಳಿ ಮತ್ತು ಬನ್ನಿಕುಪ್ಪೆ ಎಂಬ ಗ್ರಾಮಗಳಲ್ಲಿ	0 0 10	0 0 6	
	ಶ್ರೀರಂಗಪಟ್ಟಣದ ಕಸಬ	0 0 10	0 0 6	
	ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿದ ದರಸಕುಪ್ಪೆ ಹಿರೋಡು ಶೆಟ್ಟಿಹಳ್ಳಿ ಅರಕೆರೆ ಕೊಡಿಯಾಲ ಮತ್ತು ಹಾರಲಹಳ್ಳಿ ಎಂಬ ಗ್ರಾಮಗಳಲ್ಲಿ	0 0 8	0 0 4	
	ಶ್ರೀರಂಗಪಟ್ಟಣದ ತಾಲ್ಲೂಕಿನ ಮೇಲುಕೋಟೆ ಜಾತ್ರೆಯಲ್ಲಿ	0 1 0	0 0 8	
	ಶ್ರೀರಂಗಪಟ್ಟಣದ ತಾಲ್ಲೂಕಿನ ಪಾಲಹಳ್ಳಿ ಸುಲ್ತಾನಪೇಟೆ ಪಶ್ಚಿಮವಾಹಿನಿ ಬಳಗೊಳ ಬೆಳವಾಡಿ ಕ್ಯಾತನಹಳ್ಳಿ ಕಬ್ಬಿನಬೋರೆ ಕಿರಂಗೂರು ಮತ್ತು ಗಂಜಾಂ ಎಂಬುವ ಗ್ರಾಮಗಳಲ್ಲಿ	0 0 10	0 0 6	
	ಎಳಂದೂರು ಕಸಬ	0 0 10	0 0 6	
	ಎಳಂದೂರು ಜಹಗೀರಿಗೆ ಸೇರಿದ ಅಗರ ಮಾಂಬಳ್ಳಿ ಹೊಳಕೆರೆ ಮತ್ತು ಹೊರಳಕೆರೆ ಎಂಬುವಗ್ರಾಮಗಳಲ್ಲಿ	0 0 8	0 0 4	
	ತಿರುಮಕೂಡ್ಲು ನರಶೀಪುರದ ಕಸಬ	0 0 10	0 0 6	
	ತಿರುಮಕೂಡ್ಲು ನರಶೀಪುರ ತಾಲ್ಲೂಕಿನ ಕಾಹಳ್ಳಿ ಹರುಷಾರ ಮತ್ತು ಕೆಂಪನಪುರ ಎಂಬ ಗ್ರಾಮಗಳಲ್ಲಿ	0 0 8	0 0 4	
	ತಿರುಮಕೂಡ್ಲು ನರಶೀಪುರ ತಾಲ್ಲೂಕಿನ ಅಂಕನಹಳ್ಳಿ ಹನುಮನಾಳು ಬೆಟ್ಟಹಳ್ಳಿ ಕೊಲದೂರು ಕೊನ್ನಾಯ್ಕನಹಳ್ಳಿ ಬಿದರವಹಳ್ಳಿ ನರಗತನಹಳ್ಳಿ ಹೆಟ್ಟವಹಳ್ಳಿ ಹೊರಳಹಳ್ಳಿ ಭೂಹಳ್ಳಿ ಕೆರನಸೂರು ಕೆರ್ರತಿ ಪಾಟಲು ಮದರಹಳ್ಳಿ ಕನ್ನಹಳ್ಳಿ ಬೆಟ್ಟಹಳ್ಳಿ ತೂಟವಾಡಿ ದೊಡ್ಡಷಾರ ಮಾವಿನಹಳ್ಳಿ ತಾಟುಗೂಳು ದೊಡ್ಡಬಾಗಲು ಹುಣಸಗಳ್ಳಿ ತಂಗಹಳ್ಳಿ ಕರಗಹಳ್ಳಿ ಕುಪ್ಯ ತಂಬಳ್ಳ ಮುದರ್ತಿ ಮತ್ತು ಯಾಕನೂರು ಎಂಬ ಗ್ರಾಮಗಳಲ್ಲಿ	0 0 8	0 0 6	
	ತಿರುಮಕೂಡ್ಲು ನರಶೀಪುರ ತಾಲ್ಲೂಕಿನ ಇತರ ಎಲ್ಲಾ ಗ್ರಾಮಗಳಲ್ಲಿ	0 0 10	0 0 6	
	ತಿರುಮಕೂಡ್ಲು ನರಶೀಪುರ ತಾಲ್ಲೂಕಿನ ಮುದುಕತೊರೆ ಮತ್ತು ಮೂಗೂರು ಎಂಬ ಜಾತ್ರೆಗಳಲ್ಲಿ	0 0 10	0 0 8	
	ತಿರುಮಕೂಡ್ಲು ನರಶೀಪುರ ತಾಲ್ಲೂಕಿಗೆ ಸೇರಿದ ಅರವಟ್ಟಿಗೆ ಕೊಪ್ಪಲು ಜಾತ್ರೆ	0 0 10	0 0 6	
	ಇತರ ಚಿಲ್ಲರೆ ಜಾತ್ರೆಗಳಲ್ಲಿ	0 0 10	0 0 4	
	ಚಾಮರಾಜನಗರ ಕಸಬ	0 0 10	0 0 6	
	ಚಾಮರಾಜನಗರ ತಾಲ್ಲೂಕಿನ ರಾಮಸಮುದ್ರ ದೊಡರಾಯಪೇಟೆ ಮಾದಳ್ಳಿ ಕಾಡಳ್ಳಿ ಮಲ್ಲೈನಪುರ ಉತ್ತಹಳ್ಳಿ ಮತ್ತು ಸೋಮವಾರದಪೇಟೆ ಎಂಬ ಗ್ರಾಮಗಳಲ್ಲಿ	0 0 10	0 0 6	
	ಕ್ರಿಷ್ಣರಾಜಪೇಟೆ ಮತ್ತು ನಾಗಮಂಗಲ ತಾಲ್ಲೂಕು ಕಸಬಾಗಳಲ್ಲಿ	0 1 0	0 0 6	
	ಕ್ರಿಷ್ಣರಾಜಪೇಟೆ ತಾಲ್ಲೂಕಿನ ಅಗ್ರಹಾರ ಬಾಚಳ್ಳಿ ಮುರಕನಹಳ್ಳಿ ಮತ್ತು ಹೊಸಹೊಳಲು ಎಂಬ ಗ್ರಾಮಗಳಲ್ಲಿ	0 1 0	0 0 6	
	ನಾಗಮಂಗಲ ತಾಲ್ಲೂಕಿನ ಪಾಲಗ್ರಹಾರ ಕೋಟೆಬೆಟ್ಟ ಮತ್ತು ಬೊಮ್ಮದಳ್ಳಿ ಎಂಬ ಗ್ರಾಮಗಳಲ್ಲಿ	0 1 0	0 0 6	
	ನಾಗಮಂಗಲ ತಾಲ್ಲೂಕಿನ ಜೆಲ್ಲೂರು ನೆಲ್ಲಿಗೆರೆ ಕಾಳಿಂಗನಹಳ್ಳಿ ಬಿಲಗುಂದ ಸೋಮನಹಳ್ಳಿ ಅಮ್ಮನಜಾತ್ರೆ ಹುಲ್ಲನಹಳ್ಳಿ ಮಾಯಮ್ಮನ ಜಾತ್ರೆ ತೂಬಿನಕೆರೆ ಪಟ್ಟದಜಾತ್ರೆ ನಾಗನಕೆರೆ ಗುಡ್ಡದಜಾತ್ರೆ ಮದ್ದಿನಹಳ್ಳಿ ಜಾತ್ರೆಹರಕಲ್ ಹನುಮಂತರಾಯನಜಾತ್ರೆ ಹುಲಿಕೆರೆಜಾತ್ರೆ ಮತ್ತು ಗುಂಡಕಲ್ ಜಾತ್ರೆ	0 0 8	0 0 4	
	ನಾಗಮಂಗಲತಾಲ್ಲೂಕು ಚುಂಚಿಂಗಿರಿಜಾತ್ರೆ	0 1 0	0 0 4	

ಡಿಸ್ಟ್ರಿಕ್ಟು	ಸ್ಥಳ	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಬೆಲೆ.		ಹೊಸ್ತಕಾರವಾದರೆ ಒಂದು ಶೇರು ಒಂದಕ್ಕೆ ಗೊತ್ತಾದ ಬೆಲೆ.
		ಉತ್ತಮ.	ಕನಿಷ್ಟ.	
ಮೈಸೂರು	ಎಡತೊರೆ ಕಸಬ ..	0 0 10	0 0 6	
	ಎಡತೊರೆ ತಾಲ್ಲೂಕಿನ ಚುಂಚಿನಕಟ್ಟೆ ಮತ್ತು ಕಪಡಿ ಜಾತ್ರೆಗಳಲ್ಲಿ ..	0 0 10	0 0 8	
	ಡಿಟೋ ತಾಲ್ಲೂಕು ತಂದ್ರಿ ..	0 0 8	0 0 6	
	ಡಿಟೋ ತಾಲ್ಲೂಕ ಹಂಪಾಪುರ ಶಿವ್ವಾರು ಸಾಲಗ್ರಾಮ ದೊರ್ನಹಳ್ಳಿ ಬೆಳ್ಳುಳ್ಳಿ ಬ್ಯಾಡರಹಳ್ಳಿ ಈ ಗ್ರಾಮಗಳಲ್ಲಿ ..	0 0 10	0 0 6	
	ಮಳವಳ್ಳಿ ತಾಲ್ಲೂಕಿಗೆ ಶೇರಿದ ಹಲಗೂರು ದಳವಾಯಿಕೋಡಿಹಳ್ಳಿ ಹರಿಹರ ವಾಂಗೌಡನಹಳ್ಳಿ ಮತ್ತು ಬಾಣಸಮುದ್ರ ಎಂಬುವ ಗ್ರಾಮಗಳಲ್ಲಿ ..	0 0 8	0 0 4	
	ಮಂಡ್ಯದ ಕಸಬ ..	0 0 10	0 0 6	
	ಮಂಡ್ಯದ ತಾಲ್ಲೂಕು ಚಿಕ್ಕಮಂಡ್ಯ ಸಾತನೂರ ಕಟ್ಟೆಹಳ್ಳಿ ಪನಕನಹಳ್ಳಿ ಈ ಗ್ರಾಮಗಳಲ್ಲಿ ..	0 0 10	0 0 6	
	ನಂಜನಗೂಡು ಕಸಬ ..	0 0 10	0 0 4	
	ನಂಜನಗೂಡು ತಾಲ್ಲೂಕು ದ್ಯಾವರಸನಹಳ್ಳಿ ಪುಪ್ಪನಹಳ್ಳಿ ಕುಂಬಳ್ಳಿ ದಿಬ್ಬೂರು ಚಿಕ್ಕಯ್ಯನಛತ್ರ ತೊರೆಮಾವು ಮಲ್ಲೂರು ನರಸೀಪುರ ಗನತಗಾಲ ಕುಪ್ಪಿ ಲಗ್ಗಾರಹುಂಡಿ ಮಾಚನಹಳ್ಳಿ ಮತ್ತು ಶಿಂಗರಿಪುರ ಈ ಗ್ರಾಮಗಳಲ್ಲಿ ..	0 0 10	0 0 4	
	ಡಿಟೋ ತಾಲ್ಲೂಕು ಇತರ ಎಲ್ಲಾ ಗ್ರಾಮಗಳಲ್ಲಿ ..	0 0 6	0 0 3	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟ್ ಮಜಕೂರ್ ಇತರ ಎಲ್ಲಾ ಕಸಬೆಗಳಲ್ಲಿಯೂ ..	0 0 10	0 0 6	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟು ಮಜಕೂರ್ ಇತರ ಎಲ್ಲಾ ಗ್ರಾಮಗಳಲ್ಲಿಯೂ ..	0 0 6	0 0 4	
ಹಾಸನ	ಹಾಸನ ಟವರ್ ..	0 1 0	0 0 10	
	ಅರಕಲಗೂಡು ಕಸಬ ..	0 1 4	0 1 0	
	ಇತರ ತಾಲ್ಲೂಕು ಕಸಬಾಗಳು ..	0 1 0	0 0 6	
	ಬೇಲೂರು ತಾಲ್ಲೂಕು ಗ್ರಾಮಗಳು ..	0 1 0	0 0 6	
	ಬೇಲೂರು ಅರಕಲಗೂಡು ಮತ್ತು ಮಂಜರಾಬಾದು ತಾಲ್ಲೂಕು ಗ್ರಾಮಗಳು ವಿನಾಯಿಸಿ ಇತರ ಗ್ರಾಮಗಳಲ್ಲಿ ..	0 0 6	0 0 4	
	ಮಂಜರಾಬಾದು ತಾಲ್ಲೂಕಿನ ಸಕಲೇಶಪುರ ಸುಂಡೇಕೆರೆ ಬೆಳಗೋಡು ಬಳ್ಳುಪೇಟೆ ಹೊಸಕೋಟೆ ಮೊಗ್ಗೆ ಶುಕ್ರವಾರಸಂತೆ ಮತ್ತು ಕಿರೋಡಿ ಎಂಬ ಗ್ರಾಮಗಳಲ್ಲಿ ..	0 1 0	0 0 8	
	ಅರಕಲಗೂಡು ತಾಲ್ಲೂಕಿನ ಕೋಣನೂರು ಗುರುವಾರಸಂತೆ ಮೂರೂರು ಸಂತೆ ಮಾಲಾಪಟ್ಟಣ ರಾಮನಾಥಪುರ ಮತ್ತು ಇತರ ಗ್ರಾಮದ ಜಾತ್ರೆಗಳಲ್ಲಿ ..	0 1 4	0 1 0	
	ಡಿಟೋ ತಾಲ್ಲೂಕುಮಗಳ ಸೋಮವಾರಸಂತೆ ಬಸ್ರೂರು ಬುಧವಾರಸಂತೆಮಗಳಲ್ಲಿ ..	0 1 4	0 0 9	
	ಡಿಟೋ ತಾಲ್ಲೂಕು ಕೋಣನೂರು ಗ್ರಾಮದಲ್ಲಿ ..	0 1 2	0 0 9	
	ಡಿಟೋ ತಾಲ್ಲೂಕುಮಗ್ಗೆ ರಾಮನಾಥಪುರ ಮತ್ತು ಕಟ್ಟೆಪುರ ಗ್ರಾಮಗಳಲ್ಲಿ ..	0 1 0	0 0 9	
	ಡಿಟೋ ತಾಲ್ಲೂಕು ಬಸವಾಪಟ್ಟಣ ಕಂಗಳಲಮರಟ ಮತ್ತು ಕಡಿವಿನಹೊಸಹಳ್ಳಿ ಗ್ರಾಮಗಳಲ್ಲಿ ..	0 1 0	0 0 8	
	ಡಿಟೋ ತಾಲ್ಲೂಕು ರುದ್ರಾಪಟ್ಟಣ ಮತ್ತು ಕಾರಳಾಪುರ ಗ್ರಾಮಗಳಲ್ಲಿ ..	0 0 10	0 0 8	
	ಡಿಟೋ ತಾಲ್ಲೂಕು ಧರ್ಮಾಪುರ ನರಸಕುಪ್ಪೆ ಎಲ್ಲಹಳ್ಳಿ ಮುಗನಹಳ್ಳಿ ಮರಟಿ ಮತ್ತು ಹುಲಿಕಲ್ಲು ಗ್ರಾಮಗಳಲ್ಲಿ ..	0 0 10	0 0 6	
	ಡಿಟೋ ತಾಲ್ಲೂಕು ಉಲ್ಲಿಹೊಸೂರು ಉಕ್ಕಡ ಮತ್ತು ಗಂಗೂರು ಮರಟ ಗ್ರಾಮಗಳಲ್ಲಿ ..	0 0 8	0 0 6	
ಕಡೂರು	ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕು ಕಸಬಾ ಮತ್ತು ಗ್ರಾಮಾಂತ್ರಗಳಲ್ಲಿ ..	0 1 6	0 0 6	
	ಇತರ ತಾಲ್ಲೂಕು ಕಸಬಗಳಲ್ಲಿ ..	0 1 4	0 0 6	
	ಇತರ ಗ್ರಾಮಗಳಲ್ಲಿ ..	0 1 0	0 0 6	
ಶಿವಮೊಗ್ಗ	ಶಿವಮೊಗ್ಗ ಟವರ್ ..	0 1 6	0 1 0	
	ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು ..	0 1 0	0 0 6	
	ಡಿಸ್ಟ್ರಿಕ್ಟಿನ ಇತರ ಎಲ್ಲಾ ಭಾಗಗಳಲ್ಲಿ ..	0 1 6	0 0 6	
ಚಿತ್ರದುರ್ಗ	ತಾಲ್ಲೂಕು ಕಸಬಾಗಳಲ್ಲಿ ಮತ್ತು ಗ್ರಾಮಗಳಲ್ಲಿ ..	0 1 0	0 0 6	

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರೆವಿನ್ಯೂ

ಇಲಾಖೆಗಳ ಗವರ್ನ್ಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 13.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 2, ಸ್ನ 1896.

IIನೇ ಭಾಗ.

ಇಂಡ್ಯಾ ಗವರ್ನ್ಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ ಖರೀದಿ (ರೂಪಾಯಿ)	
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವೊಂದಕ್ಕೆ	150
2	ಇಂಗ್ಲಾಂಡಿ ಫೋರ್ಟರು ಬ್ರದರಸರ ಡಿಟ್ಟೋ	,,	170
1	ಮದ್ರಾಸ್ ಓಕ್ಸರವರ ಡಿಟ್ಟೋ	,,	250
1	ಡಿಟ್ಟೋ ಡಿಟ್ಟೋ ಡಿಟ್ಟೋ	,,	188
1	ಡಿಟ್ಟೋ ಜೋರ್ರ್ಯಾಪರವರ ಡಿಟ್ಟೋ	,,	185

1896–97ನೇ ವರುಷಕ್ಕಾಗಿ ಬೆಂಗಳೂರು ಶಿಟಿಯಲ್ಲಿ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟೀಸ.

ನಂಬರ 3689–48, ತಾರೀಖು 18ನೇ ಮಾರ್ಚಿ 1896.

1. ಬೆಂಗಳೂರು ಶಿಟಿಯಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಮೂರು ಅಂಗಡಿಗಳಲ್ಲಿ, ಬೀರು ಮತ್ತು ಪೋರ್ಟರನ್ನು 1896ನೇ ಇಸವಿ ಜುಲೈ ಗುರ್ನೆ ತಾರೀಖಿಗೆ ಪ್ರಾರಂಭವಾಗಿ 1897ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಬಿಟ್ಟು ಸ್ವತಂತ್ರದ ಹಕ್ಕನ್ನು ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಸರ್ 1896ನೇ ಇಸವಿ ಏಪ್ರೈಲ್ 16ನೇ ತಾರೀಖಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರರು ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲುದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 50 ರೂಪಾಯಿ ಯಾ ಹರಾಜು ಮಾಡತಕ್ಕ ಆಫೀಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪ್ರತಿ ಅಂಗಡಿಗೆ ಯಾರ ಚಡ ದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾವರಿಗೆ ಆ ಅಂಗಡಿಯು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ ಮುಕಾಲೀಕರನ್ನ ಕಳುಹಿಸಬೇಕು.

3. ಹರಾಜು ಪೂರೈಸಿದ ಕೂಡಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ. ಹರಾಜು ನಡೆಯುತ್ತಿರುವಾಗ ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆ ಅಂಗಡಿಯು ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣಿ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇ ಕಲಂನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣಿ ಮೊಬಲಗು ಸರಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿ ಯಾ ಇತರ ಅಂಗಡಿಗಳನ್ನು ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜು ತಾರೀಖು ಲಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಅಂಗಡಿಯು ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣಿ ಕಟ್ಟಿ ವಿಧಾಯಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸಗಳನ್ನ ಪಡಿಯುತಕ್ಕದ್ದು, ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದುಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದುಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್‌ದಾರಿ ಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್‌ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗಪಡೆದವರನ್ನ ಹೊಂದಿರುತ್ತೆ.

5. ಮೇಲಿನ 4ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿ ಮೇಲೆ ನಡಿಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದರಲ್ಲಿ ಚಡಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರಕಾರಕ್ಕೇನೇ ಜಮಾಮಾಡಿಕೊಳ್ಳತಕ್ಕದ್ದು.

6. ಮೇಲಿನ 4ನೇ ಕಲಂನಲ್ಲಿ ಕಂಡವರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು,—

246

ತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಇದಕ್ಕಾಗಿ ಗೊತ್ತಾಗಿರುವ ಚರ್ಲನ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚಿತವಾಗಿ ಪಾವತಿಯಾಗತಕ್ಕದ್ದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ 2 ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಸದರೀ 20ನೇ ತಾರೀಖಿನೊಳಗ್ಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿಯಂತೆ ಬಡ್ಡಿ ನಿಕಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫೀ ವಜಾ ಮುಂತಾದ್ದನ್ನು ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(3) ಲೈಸೆನ್ಸ್‌ದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೂ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(4) ಲೈಸೆನ್ಸ್‌ದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರ್ಯೂಯರಿಯಿಂದ ಬೆಂಗಳೂರು ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯನ್ನು ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮಿಷನರ್ ಸಾಹೇಬರವರ ಆಫೀಸಿಗೆ ರವಾನಿಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡೆದ ಇತರ ಆಫೀಸರ್ರು ಸರಕನ್ನು ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(5) ಬೆಂಗಳೂರು ಸಿಟಿಯಲ್ಲಿರುವ ಪ್ರತಿ ಒಂದು ಬೀರು ಅಂಗಡಿಯು ಲೈಸೆನ್ಸ್‌ದಾರನೂ ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟ್ರೇಷನ್ ರುಸುಂ ಬಗ್ಗೆ ಸಾಲಿಯಾನಾ 180 ರೂಪಾಯಿಗಳನ್ನು ಈ ಲೈಸೆನ್ಸ್ ಕೊಟ್ಟಿರುವ ಕಾಲದ ಮಟ್ಟಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(6) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲಿಖಿ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಗೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸ್‌ದಾರನು 1896ನೇ ಇಸವಿ ಜುಲೈ ಗುರ್ರೆಯಲ್ಲಿ, ಹಳೇ ಲೈಸೆನ್ಸ್‌ದಾರನ ಬಾಬತು ಸದರೀ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಬೀರು ಅಥವಾ ಪೋರ್ಟರನ್ನ ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಲೈಸೆನ್ಸ್‌ದಾರನಿಗೆ ಪಾವತಿ ಮಾಡಿ ತೆಗೆದುಕೊಳ್ಳಲು ಗುರಿಯಾಗಿರತಕ್ಕದ್ದು.

(8) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗೀದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(9) ಬಾಕಿ ಕರಾರುಗಳು ವ ಷರತ್ತುಗಳು ಇದಕ್ಕೆ ಲಗತ್ತಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸ್‌ದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂತ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮೊಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1896ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖಿಲು ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದುಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೆ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸ್‌ದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಅಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಪಿ. ಎನ್. ಪೂರ್ಣಯ್ಯ,

ಮೈಸೂರು ಸೀಮೆಯ ಎಕ್ಸೈಜ್ ಕಮಿಷನರ್.

ಷೆಡ್ಯೂಲ್ ಪಟ್ಟಿ.

ಸ್ಥಳದ ಹೆಸರು.	ಅಂಗಡಿಯ ಜಂಜರ್ ನಂಬರ್.	ಅಂಗಡಿ ಇರುವ ಸ್ಥಳ.		ಹಾಲಿ ಇರುವ ಲೈಸೆನ್ಸ್ ಸುದಾರ್ರುಗಳ ಹೆಸರುಗಳು.	ಖರ್ಚು.			1895-96ನೇ ಸಾಲಿನ ಗುತ್ತಾ ಮೊಬಲಗು.			ಷರಾ.
		ಕವಾಟ ಸಂಖ್ಯೆ.	ಸ್ಥಳ.		1893-94	1894-95	1895-96ನೇ ಸಾಲಿನ 8 ತಿಂಗಳಿಗೆ.				
					ಹಾಗ್ಸ ಹೆಡ.	ಹಾಗ್ಸ ಹೆಡ.	ಹಾಗ್ಸ ಹೆಡ.	ರೂ.	ಅ.	ಪೈ.	
ಬೆಂಗಳೂರು ಪೇಟೆ.	1	42	ಮೈಸೂರು ರೋಡ	ಸುಬ್ಬಯ್ಯನಾಯಿಡು	66	37	23	180	0	0	
	2	56	ಅರಳೇಪೇಟೆ ಟ್ಯಾಂಕ್ ರೋಡ್	ಕುಮಾರಸಾಮಿ ಮೊದಲಿಯಾರ್	44	25	24	30	0	0	
	3		ಅವೆನ್ಯೂರೋಡ್ ಎಲಹಂಕದ ಬಾಗಲು	ಸುಬ್ಬಯ್ಯನಾಯಿಡು	9	21	*	6	0	0	*ಅಂಗಡಿ ತೆಗೆದಿಲ್ಲ

ಬೀರ್ ಲೈಸೆನ್ಸ್,

ಕಂತ್ರಿ ಬೀರನ್ನು ವ ಪೋರ್ಟರನ್ನು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸ್ (1881ನೇ ಇಸವಿ XXIIನೇ ನಂಬರ್ ಆಕ್ಟಿನ 12 ವ 13ನೇ ಸೆಕ್ಷನ್‌ಗಳನ್ನನುಸರಿಸಿ ಕೊಡಲ್ಪಟ್ಟದ್ದು.)

1. ರಿಜಿಸ್ಟರ್ ನಂಬರ್.
2. ಲೈಸೆನ್ಸದಾರನ ಹೆಸರು.
3. ಮಾರುವವನ ಹೆಸರು.
4. ಸ್ಥಳ.

ಬೀರ ಮತ್ತು ಪೋರ್ಟರನ್ನು ಡಿಸ್ಟ್ರಿಕ್ಟು
ನಂಬರ್ ಅಂಗಡಿಯಲ್ಲಿ ಚಿಲ್ಲರೆಯಾಗಿ ಮಾರುವದಕ್ಕೋಸ್ಕರ

ನಲ್ಲಿರುವ ಗೆ

ಈ ಕೆಳಗಿನ ಷರತ್ತುಗಳ ಪ್ರಕಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ನಾವು ಇದರಿಂದ ಅಧಿಕಾರವನ್ನು ಕೊಟ್ಟಿರುತ್ತೇವೆ.

1. ಈಲೈಸೆನ್ಸ್ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ. ಮತ್ತು ಇದರಲ್ಲಿ ನಮೂದಿರತಕ್ಕವರು ಶಿವಾಯಿ ಮತ್ಯಾವ ಜನರಿಗೂ ಇದರ ಆಧಾರದ ಮೇಲೆ ಕಾರ್ಯಗಳನ್ನ ನಡಿಸಲಿಕ್ಕೆ ಅಧಿಕಾರ ವಿರುವದಿಲ್ಲ.

2. ದುಕಾನದಾರನು ಲೈಸೆನ್ಸದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ—ಆ ಷರತ್ತುಗಳು ಯಾವವೆಂದರೆ:—

3. ಅವನು ಬೀರ ಮತ್ತು ಪೋರ್ಟರನ್ನು ಮಾತ್ರವೇ ಪೀಪಾಯಿನಿಂದಾಗಲಿ ಅಥವಾ ಬುಡ್ಡಿಗಳಿಂದಾಗಲಿ ಅಂಗಡಿಯಲ್ಲಿ ಅಥವಾ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರಬೇಕೇ ಹೊರ್ತು ಇತರ ಯಾವ ತರಹೇದ ಬೀರನ್ನಾಗಲಿ ಪೋರ್ಟರನ್ನಾಗಲಿ ಮಾರಕೂಡದು. ಮತ್ತು ಅಂಗಡಿಯ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರುವ ಸಂದರ್ಭದಲ್ಲಿ ಎಕ್ಸೈಜ್ ಇಲಾಖೆಯಿಂದ ಕೊಡಲ್ಪಡುವ ರಹದಾರಿಗಳ ಆಧಾರದ ಮೇಲೆ ಮಾರತಕ್ಕದ್ದಲ್ಲದೆ ಸದರೀ ರಹದಾರಿಯಲ್ಲಿನ ಷರತ್ತುಗಳಂತೆ ಮಾರುವವನೂ ಮತ್ತು ಕೊಂಡುಕೊಳ್ಳುವವನೂ ಈ ಉಭಯತ್ತರೂ ಖಂಡಿತವಾಗಿ ನಡೆದುಕೊಳ್ಳಬೇಕು. ಮತ್ತು ಅಂಥಾ ರಹದಾರಿಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಎರಡು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ಎಂಟು ಶೇರುಗಳ್ಗಿಂತಾ ಹೆಚ್ಚಾಗಿರಕೂಡದು.

4. ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ವ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮ್ಮಿಷನ್‌ಡ್ ಆಫಿಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರೀ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು, ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾಹತ್ತಿ ಬೀಳುವಂತೆ ಮಾಡಕೂಡದು, ಮತ್ತು ಅವರು ಅಕ್ರಮವಾಗಿ ನಡೆಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು, ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂ ಕೂಡದು. ಮತ್ತು ಗುಮಾನಿ ನಡತೆ

248

ಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೊಲೀಸ್ ಆಫೀಸರ್ ಯಾ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೊಲೀಸ್ ಆಫೀಸರಿಗೆಯಾಗಲಿ, ರೈಲ್ವೆ ನೌಕರನಿಗೆಯಾಗಲಿ, ಎಕ್ಸೈಜ್ ಆಫೀಸರಿಗೆಯಾಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂ ಕೂಡದು.

5. ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇ ಮೇಲೆ ತನ್ನ ಹೆಸರು, ಮಾರುವವನಹೆಸರು, ಅಂಗಡಿ ನಂಬರ್ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರೆಸಿ ಇಡಬೇಕು.

6. ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗದು ಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಮತ್ತು ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದು ರೂಪಾಯಿನ ಲಾಗಾಯತು ಒಂದು ರೂಪಾಯಿ ನಾಲ್ಕಾಣೆ ವರಿವಿಗೆ ನಗದಾಗಿ ಹಣ ತೆಗೆದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

7. ಈ ಲೈಸೆನ್ಸ್ ಪ್ರಕಾರ ಮಾರುವ ಪ್ರತಿ ಒಂದು ಹಾಗ್ಸ್ ಹೆಡ್ಡಿಗೆ ಬೀರ್ ಮತ್ತು ಪೋರ್ಟರನಲ್ಲಿ ಮಾಲ್ಟ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ, ಕೆಂಟು ದೇಶದಲ್ಲಿ ಬೆಳದಂಥಾ ಒಳ್ಳೇದಾಗಿ ಇರುವ ಮೂರು ಪೌಂಡ್ ಹಾಪಸ್ ಎಂಬ ಹುವ್ವುಗಳನ್ನೂ ಸೇರಿಸಿರಬೇಕು. ಮತ್ತು ಮೇಲ್ಕಂಡ ಬೀರು ವ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದ ಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು ಯಾ ಇತರ ಪದಾರ್ಥಗಳನ್ನ ಬೆರೆಸಿ ಕೆಡಿಸಕೂಡದು. ಇಂಥಾ ಬೀರ್ ಮತ್ತು ಪೋರ್ಟರ್‌ವುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷೀ ಮಾಡುವದಕ್ಕಾಗಿ ಭಟ್ಟೀ ಕಾರ್ಖಾನೆಯಿಂದ ಕಳುಹಿಸಬೇಕು.

8. ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫೀಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶಕೊಡಬೇಕು. ಮತ್ತು ಲೈಸೆನ್ಸನ್ನೂ ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸದಾರನಿಂದಲೂ, ವ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೇನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

9. ಸದರೀ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಗೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

10. ಕಮ್ಮಿಸೆರಿಯಾಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

11. ಸದರೀ ಅಂಗಡಿಗೆ ಒಂದೇ ಬಾಗಲಿರಬೇಕು. ಹಿಂಭಾಗದಲ್ಲ್ಯಾದರೂ ಕೊನೇ ಭಾಗಗಳಲ್ಲ್ಯಾದರೂ ಕಿಟಕಿ ಇಡಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

12. ಮೇಲಿನ ಷರತ್ತು ಮತ್ತು ನಿಬಂಧನೆಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಲೈಸೆನ್ಸದಾರನು ಒಬ್ಬ ಮ್ಯಾಜಿಸ್ಟ್ರೇಟರ ಮುಂದೆ ತಪ್ಪು ಆಪಾದಿಸಲ್ಪಟ್ಟು 1881ನೇ ಇಸವಿ XXIIನೇ ಆಕ್ಟ್ಟು ಅನುಸರಿಸಿ, ಜುಲ್ಮಾನೆ ತೆರುವದಕ್ಕಾಗಲಿ, ಸದರೀ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಲೈಸೆನ್ಸ್ ಕಳಕೊಳ್ಳುವದಕ್ಕಾಗಲಿ ಅಥವಾ ಈ ಎರಡಕ್ಕಾಗಲಿ ಗುರಿಯಾಗತಕ್ಕದ್ದು.

13. ಈ ಲೈಸೆನ್ಸ್ 189 ನೇ ಇಸವಿ ನೇ ತಾರೀಖು ವರಿವಿಗೆ ಜಾರಿಯೇ ಹೊರ್ತು ಅನಂತರವಲ್ಲ. ಆದರೆ ಇದು 1881ನೇ ಇಸವಿ XXIIನೇ ಆಕ್ಟಿನ 13 ವ 14ನೇ ಸೆಕ್ಷನ್‌ಗಳನ್ನನುಸರಿಸಿ ಯಾವಾಗಲಾದರೂ ವಾಪಸ್ ತರಿಸಿಕೊಳ್ಳಲ್ಪಡಬಹುದು ಅಥವಾ ಬಿಟ್ಟು ಬಿಡಲ್ಪಡಬಹುದು.

ಡೆಪ್ಯುಟಿ ಕಮ್ಮಿಷನರ್, ವ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ್,
ಡಿಸ್ಟ್ರಿಕ್ಟು.

ಎದುರು ಒಡಂಬಡಿಕೆ.

ಈ ಕೆಳಗೆ ರುಜು ಮಾಡಿರುವ ಮೇಲ್ಕಂಡ ಲೈಸೆನ್ಸದಾರ ವ ಬಿಕರೀದಾರ ಮತ್ತು ಸದರೀ . . . . ಬಳಿ ಇರುವ ಬೀರ್ ಅಂಗಡಿಗೆ ಸಂಬಂಧಪಟ್ಟವರಾದ ನಾವು ನಮಗಾಗಿಯೂ ನಮ್ಮ ವಾರಸದಾರರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ, ಇದರ ಡೆಕಿಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ಬರೆಯೋಣಾದ, ಛಾಪಿಸೋಣಾದ, ವ ಹೇಳೋಣಾದ ಕರಾರುಗಳಿಗೂ ಷರತ್ತುಗಳಿಗೂ ಒಪ್ಪಿರುತ್ತೇವೆ.

. . . ತಾರೀಖಿನ ದಿನ . . . . ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ನಮ್ಮಗಳ ರೂಬರೂ ರುಜು ವ ಮೊಹರಿನೊಡನೆ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು.

1.
2.
3.

ಲೈಸೆನ್ಸದಾರ್ ವ ಬಿಕರೀದಾರ್.

249

ಕೋಲಾರ ಡಿಸ್ಟ್ರಿಕ್ಟು

ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫಿಸರವರಿಂದ.

ತಾರೀಖು 29ನೇ ಮಾಹೆ ಫೆಬ್ರುವರಿ ಸನ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಬಳ್ಳಾಪುರ ತಾಲ್ಲೂಕು ಪೂರ್ಣಸಾಗರ ಹೋಬಳಿ ಯರ್ರನೂರೇನಹಳ್ಳಿ, ಮಜರೆ ನಾರೇನಹಳ್ಳಿ, ಯಂಬ ಬೇಚಿರಾಖ್ ಗ್ರಾಮದಲ್ಲಿ ಬಂಜರಿನಲ್ಲಿ ಇರುವ ಇನಾಂ ಶಿವಾಯಿ ಖರ್ಸ ಸರ್ಕಾರಿ ಬಾಬತು ಹಿಸ್ಸೆಗೆ ಆಕಾರ 155—12—0 ರೂಪಾಯಿವುಳ್ಳ ಸಾಗುವಳಿ ಲಾಯಖ್ ವಿಶಿಷ್ಟ ಜಮೀನುಗಳನ್ನೂ ಬಾಜೂದಲ್ಲಿ ಕಾಣಿಸಿ ಇರುವ ಆಳವೆ ಕಂದಾಯದ ಮೇಲೆ ಸಾಗುವಳಿಗೆ ಕೊಡಿಸಬೇಕೆಂತಲೂ ಸದರೀ ಜಮೀನಿಗೆ ಆಧಾರವಾಗಿರುವ ಶಿಕಸ್ತು ಕಲ್ಲುಭಾವಿ ಮೂರು ಕುಂಟೆ ವಂದು ಸಹ ದುರಸ್ತು ಮಾಡಿಸಿಕೊಂಡು ತರೀ ಬಾಗಾಯತು ಜಮೀನುಗಳಿಗೆ ನೀರುಕಟ್ಟಿಕೊಳ್ಳುತ್ತಾ ಖುಷ್ಕಿ ಜಮೀನಿಗೆ ನೀರು ಕಟ್ಟಿಕೊಂಡರೆ ನೀರು ಸರದಿ ಕೊಡುವದಲ್ಲದೆ, ಭಾವಿ, ಕುಂಟೆ ಹಕ್ಕು ಸರಕಾರಕ್ಕೆ ವುಳಸಿಕೊಳ್ಳಬಹುದಂತಲೂ ಇದು ಬೇಚಿರಾಖ್ ಗ್ರಾಮ ಆಬಾದಿಗೆ ತರಬೇಕಾದ್ದರಿಂದ ಈ ನಂಬರಿಗಳಲ್ಲಿ ಇರತಕ್ಕ ಮಾಲ್ಕಿ ಸ್ವತ್ತು ಪೈಕಿ ಹತ್ತು ಮನೆಗಳಿಗೆ ತಕ್ಕಷ್ಟು ಮುಫತ್ತು ಬಿಟ್ಟು ಬಾಕಿ ಮಾಲ್ಕಿ ಸ್ವತ್ತಿಗೆ ಕಿಮ್ಮತ್ತು ಕಟ್ಟಿಸಿ ಕೊಡಬೇಕೆಂತಲೂ ಆದನ್ನ ವಡನೇ ಕೊಡುವದಾಗಿಯೂ ಸದರೀ ಹತ್ತು ಸಾಲ ಆಳವೆ ಕಾಲದಲ್ಲಿ ದರ ಸಾಲ 10ನೇ ವಂದು ಭಾಗದ ಮೇರಿಗೆ ಆಳವೆ ಆಖೈರ ಪಾಯಿದೆ ವಳಗೆ ಪೂರಾ ಜಮೀನು ಕಿರ್ದಿಗೆ ತಂದು ಸಾಗುವಳಿ ಮಾಡುವದಾಗಿಯೂ ತಪ್ಪಿದರೆ ಸದರೀ ಜಮೀನುಗಳಿಗೆ ಷುರೂ ಸಾಲ ಲಾಗಾಯತು ಸರಕಾರಕ್ಕೆ ಭರ ಆಕಾರ ಕೊಡುವದಾಗಿಯೂ ಈ ಷರತ್ತುಗಳ ಮೇಲೆ ಸಾಗುವಳಿಗೆ ಕೊಡಿಸಬೇಕೆಂದು ಗೋರೀಬಿದನೂರು ತಾಲ್ಲೂಕು ಅರಸಾಲ್ ಬಂಡೆ ವುರುಫ್ ಮಾವಿನಕಾಯಿನಹಳ್ಳಿ ನರಶಿಂಗಪ್ಪನ ಮಗ ಶೀನಪ್ಪನೆಂಬುವನು ದರಖಾಸ್ತು ಕೊಟ್ಟು ಇರುತ್ತಾನೆ, ಆದ್ದರಿಂದ ದರಖಾಸ್ತು ಮಾಡಲ್ಪಟ್ಟ ಜಮೀನುಗಳನ್ನು ಭರ ಆಕಾರದ ಮೇಲಾಗಲಿ ಅಥವಾ ಮೇಲ್ಕಂಡ ದರಖಾಸ್ತು ನಮೂದಿಸುವ ಆಳವೆ ಕಾಲ ಮತ್ತು ಷರತ್ತುಗಳಿಗಿಂತಲೂ ಕಮ್ಮಿ ಆದ ಕಾಲ ವ ಷರತ್ತುಗಳ ಮೇಲಾಗಲಿ ಅಥವಾ ಸರಕಾರಕ್ಕೆ ಲಾಭಕರವಾದ ಇತರ ಷರತ್ತು ವಗೈರೆ ಮೇಲಾಗಲಿ ದರಖಾಸ್ತು ಮಾಡಲಪೇಕ್ಷೆವುಳ್ಳವರು ಈ ತಾರೀಖು ಲಾಗಾಯ್ತು 3 ತಿಂಗಳ ವಳಗೆ ದರಖಾಸ್ತು ಕೊಡಬಹುದು. ಆ ಪ್ರಕಾರ ದರಖಾಸ್ತುಗಳು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ 20ನೇ ಕಲಂ 18ನೇ ಪ್ಯಾರಾ ಪ್ರಕಾರ ಯುಕ್ತಕಂಡ ರೀತಿ ವೆವಸ್ಥೆ ಮಾಡಲಾದೀತು.

1ನೇ ಸಾಲಿಗೆ	ಕಂದಾಯ	15—12—0
2ನೇ ಡಿಟೋ	ಡಿಟೋ	31— 8—0
3ನೇ ಡಿಟೋ	ಡಿಟೋ	47— 4—0
4ನೇ ಡಿಟೋ	ಡಿಟೋ	63— 0—0
5ನೇ ಡಿಟೋ	ಡಿಟೋ	78—12—0
6ನೇ ಡಿಟೋ	ಡಿಟೋ	94— 8—0
7ನೇ ಡಿಟೋ	ಡಿಟೋ	110— 4—0
8ನೇ ಡಿಟೋ	ಡಿಟೋ	126— 0—0
9ನೇ ಡಿಟೋ	ಡಿಟೋ	141—12—0
10ನೇ ಡಿಟೋ	ಡಿಟೋ	155—12—0

ಬಿ. ಜಿ. ಕೃಷ್ಣಯ್ಯಂಗಾರ್,
ಸಬ್ ಡಿವಿಜನ್ ಆಫಿಸರ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 9ನೇ ಮಾರ್ಚಿ 1896.

1. ಕಂದಾಯದ ಬಾಕಿದಾರರಾದ ರಮ್ಯಾವರಾಚಾರ್ ಮೈನರ್, ಗಾರ್ಡಿಯನ್ ವೆಂಕಟಲಕ್ಷ್ಮಮ್ಮನಿಂದ ಬರಬೇಕಾದ ಜಮೀನು ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತನ್ನ ಹಕ್ಕು ಬಾಧ್ಯತೆ ಕೋಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫೀಸಿನಲ್ಲಿ, 1896ನೇ ಇಸವಿ ಏಪ್ರೆಲ್ 21ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 1,412—8—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದ್ಯಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನನಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯ್ತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ಅಥವಾ ಖಾತೆ ನಂಬರು.	ಖುಷ್ಕಿ ತರಿ ಬಾಗಾಯತು ಇತ್ಯಾದಿ.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ಬಾಕಿ [illegible]		
1	2	3	4	5	6	7	8	9		10			11		
					ರೂ. ಆ. ಪೈ.			ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ.	[illegible]	ರಮ್ಯಾವರಾಚಾರ್ ಮೈನರ್, ಗಾರ್ಡಿಯನ್ ತಾಯಿ ವೆಂಕಟಲಕ್ಷ್ಮಮ್ಮ.	..	..	[illegible]	ಖುಷ್ಕಿ	392	6	347	0	0	1048	11	0
							ತರಿ	101	7	235	1	0	ಬಡ್ಡಿ		
							ಬಾಗಾಯತು	25	16	119	0	0	363	13	4
							ಪರಂಪೋಕು	208	39	3	4	0			
							ಟೋಟಲ್	727	28	704	5	0	1412	8	4
							ಸಾಲಿಯಾನಾ ಸರಕಾರಕ್ಕೆ ಬರಬೇಕಾದ್ದು								
							ಕ್ವಿಟರೆಂಟ			88	0	0			
							ಸೆಸ್ಸ್			44	0	2			
										12	0	2			

ಸಿ. ಮಾದಯ್ಯ,
ಡೆಪ್ಯುಟಿ ಕಮಿಷನರ್.

ಫಾರೆಸ್ಟ್ ಇಲಾಖಾ.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 16ನೇ ಮಾರ್ಚಿ 1896ನೇ ಇಸವಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಸರ್ಕಾರ ತರ್ಫಿನಿಂದ ತುಮಕೂರು ಡಿಸ್ಟ್ರಿಕ್ಟು ದೇವರಾಯದುರ್ಗ, ಮದ್ದುಗಿರಿ, ಕುದರೆಕಣವೆ, ಹುಲಿಯೂರದುರ್ಗ, ಬುಕ್ಕಾಪಟ್ಟಣದ ಫಾರೆಸ್ಟುಗಳಲ್ಲಿ ಜಮಾಯಿಸಲ್ಪಟ್ಟ 1895—96ನೇ ಸಾಲ ಸಬಾರ ಜಿನಸಿಗಳು ವಗೈರೆ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುತ್ತೆ.

1896ನೇ ಇಸವಿ ಏಪ್ರೆಲ 14ರಲ್ಲು ಹುಲಿಯೂರದುರ್ಗದ ತಾಲ್ಲೂಕು ಕಚೇರಿಯಲ್ಲಿ.

ನಂಬರ.	ಜಿನಸಿ ತಪಶೀಲ.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ	..	229	..	ಸೆರಾಸರಿ
2	ಹೊಂಗೇಬೀಜ	1	..	..	ಡಿಟೋ
3	ಸೀಗೇಕಾಯಿ	..	20	..	ಡಿಟೋ
4	ಹುಣಸೇಹಣ್ಣು	..	10	..	ಡಿಟೋ

1896ನೇ ಇಸವಿ ಏಪ್ರೆಲ 17ರಲ್ಲು ತುಮಕೂರ ಡಿಪೋದಲ್ಲಿ.

ನಂಬರ.	ಜಿನಸಿ ತಪಶೀಲ.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ	..	100	..	ಡಿಟೋ
2	ಗೇರುಬೀಜ (Marking nut)	1	..	..	ಡಿಟೋ
3	ಹೊಂಗೇಕಾಯಿ	10	..	..	ಡಿಟೋ
4	ಸೀಗೇಕಾಯಿ	..	85	..	ಡಿಟೋ
5	ಲಾಕ (ಅರಗು)	..	2	..	ಡಿಟೋ
6	ಹುಣಸೇ ಹಣ್ಣು	..	100	..	ಡಿಟೋ
7	ಕಪಿಲಾರಂಗು	..	1	14	ಡಿಟೋ
8	ಕ್ಯಾಸು ಅರೀನತೀರು	ನಂಬರ 24	ಸಲೆ 51-3-3	..	ಡಿಟೋ

1896ನೇ ಇಸವಿ ಏಪ್ರೆಲ 20ರಲ್ಲು ಮದ್ದಗಿರಿ ಡಿಪೋದಲ್ಲಿ.

ನಂಬರ.	ಜಿನಸಿ ತಪಶೀಲ.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ	..	700	..	ಡಿಟೋ
2	ಗೇರುಬೀಜ	3	..	..	ಡಿಟೋ
3	ಹೊಂಗೇಕಾಯಿ	..	..	50	ಡಿಟೋ
4	ಹುಣಸೇಹಣ್ಣು	..	10	..	ಡಿಟೋ
5	ತ್ಯಾಗದ ತೀರು	ನಂಬರ 124	ಸ 118-11-3	..	ಡಿಟೋ
6	ಹುಲ್ವೇ	1	8	..	ಡಿಟೋ

1896ನೇ ಇಸವಿ ಏಪ್ರೆಲ 22ರಲ್ಲು ಶಿರಾ ಮುಸಾಫರ ಬಂಗ್ಲಾದಲ್ಲಿ.

ನಂಬರ.	ಜಿನಸಿ ತಪಶೀಲ.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ	..	770	..	ಡಿಟೋ
2	ಹುಣಸೇಹಣ್ಣು	..	6	..	ಡಿಟೋ
3	ಕುದರೆಕಣವೆ ಸ್ಟೇಟ ಫಾರೆಸ್ಟು ಬಾಬತು ಅಳಲೇಕಾಯಿ	..	67	..	ಡಿಟೋ

ಮೊಬಲಗು ಪಾವತಿ ಯಾ ಹರಾಜು ತಾರೀಖು ಲಾಗಾಯತು ಕಾವಲ ಕಟ್ಟಣೆ ಹರಾಜುದಾರ್ರಿಗೇನೇ ಸಂಬಂಧಪಡುತ್ತೆ.

ಷರತ್ತು.—ಶೇಕಡಾ 25 ರೂಪಾಯಿನಂತೆ ಡಿಪಾಜಿಟ ಮೊಬಲಗು ತಕ್ಷಣ ಕಟ್ಟಬೇಕು. ಬಾಕಿ ಮೊಬಲಗು ಹರಾಜ ತಾರೀಖು ಲಾಗಾಯತು ಒಂದು ವಾರದೊಳಗಾಗಿ ಪಾವತಿ, ಮಾಡಬೇಕು, ತಪ್ಪಿದರೆ ಬಾಬನ್ನು ಪುನಹ ಹರಾಜ ಮಾಡಲ್ಪಡುತ್ತೆ. ಲುಕಶಾನಿಗೆ ಮೊದಲ ಹರಾಜುದಾರನ್ನ ಗುರಿಮಾಡುತ್ತೆ. ಸಾಮಾನುಗಳು ಹರಾಜು ತಾರೀಖು ಲಾಗಾಯತು 10 ದಿವಸಗಳ ವಳಗಾಗಿ ಸಾಗಿಸಿಕೊಳ್ಳಲ್ಪಡಬೇಕು. ಇವುಗಳ ಶಿವಾಯಿ ಇತರ ತಪಶೀಲಗಳಿಗೆ 1887ನೇ ಇಸವಿ ಸೆಪ್ಟಂಬರ 3ನೇ ಮುರ್ಸ್ತಾಂ 35ನೇ ನಂಬರ ಗೆಜೆಟ್ಟಿನ 1ನೇ ಭಾಗದಲ್ಲಿ ಛಾಯಿಸಾಗಿರುವ 1887ನೇ ಇಸವಿ ಆಗಸ್ಟ 30ನೇ ಮುರ್ಸ್ತಾಂ 90ನೇ ನಂಬರ ಪ್ರಕಟನೆ ನೋಡಿ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರ.

ಮೈಸೂರು ಫಾರೆಸ್ಟ ಇಲಾಖಾ.

ಇಸ್ತಿಹಾರನಾಮೆ.

ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಜಂಗಲಗಳಲ್ಲಿ ಬಿದರು, ಗಳುವನ್ನು ಕತರಾಯಿಸಿ ಜಮಾಯಿಸಿ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಗೆ ದರಖಾಸ್ತುಗಳು ಕೋರಲ್ಪಟ್ಟಿವೆ.

(1)	ನಂದೀ ಫಾರೆಸ್ಟ	ತಾಲ್ಲೂಕು ಚಿಕ್ಕಬಳ್ಳಾಪುರ.
(2)	ನರಸಿಂಹದೇವರ ಬೆಟ್ಟದ ಫಾರೆಸ್ಟಿನಲ್ಲಿ II ಎರಡನೇ ಬ್ಲಾಕ	ಡಿಟೋ.
(3)	ರಾಯಲಪಾಡ ಫಾರೆಸ್ಟಿನಲ್ಲಿ ಮುದಿಮಡಗು ಬ್ಲಾಕ	ಚಿಂತಾಮಣಿ.
(4)	ಸೂಟವೆ ಡಿಸ್ಟ್ರಿಕ್ಟ ಜಂಗಲ	ಮಾಲೂರ.

252

2. ತಮ್ಮ ದರಖಾಸ್ತುಗಳನ್ನೂ ಲಕ್ಕೋಟೆಗಳಲ್ಲಿ ಹಾಕಿ ಮೊಹರ್ ಮಾಡಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿಗೆ ರವಾನಿಸ ಬೇಕಲ್ಲದೆ ಪ್ರತಿ ದರಖಾಸ್ತಿನೊಂದಿಗೂ (50) ರೂಪಾಯಿಗಳನ್ನ ಠೇವಣಿ ಬಗ್ಯಾಗಿ ಕಳುಹಿಸಬೇಕಾಗಿರುತ್ತೆ. ಖಾಲೀ ದರಖಾಸ್ತುಗಳನ್ನ ಹಿಡಿಯುವದಿಲ್ಲ. ಇದೇ ಇಸವಿ ಮೇ ಮಾಹೆ ಆಖ್ಯೆರ್ ವರಿಗೆ ದರಖಾಸ್ತುಗಳನ್ನು ಬರಮಾಡಿಕೊಂಡು ಜೂನ್ ಗುರ್ರೇ ತಾರೀಖಿನಲ್ಲಿ ಫೈಸಲ್ಮಾಡಲಾಗುತ್ತೆ.

3. ಇದೇ ಇಸವಿ ಜುಲೈ ಗುರ್ರೇ ಲಾಗಾಯತು 97ನೇ ಜೂನ್ ಆಖ್ಯೆರ್ ವರೆಗೆ ಸಲ್ಲುವ 1896—97ನೇ ಸಾಲಿನಲ್ಲಿ ಯಾವ ಜಂಗ್ಲಿಯಿಂದ ಎಷ್ಟು ಬಿದರುಗಳನ್ನ ಕಡಿದು ತೆಗೆದುಕೊಂಡು ಹೋಗುವದಕ್ಕೆ ಒಪ್ಪುತ್ತಾರೋ ಮತ್ತು (1000) ಒಂದು ಸಾವಿರ ಬೊಂಬುಗಳಿಗೆ ಯಾವ ದರ ಕೊಡುವದಕ್ಕೆ ಕಬೂಲ್ ಇದ್ದಾರೆ ಎಂಬ ಎರಡು ಸಂಗತಿಗಳನ್ನೂ ದರಖಾಸ್ತುದಾರರು ಸ್ಪಷ್ಟವಾಗಿ ನಮೂದಿಸಬೇಕು. ಹೆಚ್ಚು ದರ ನಮೂದುಳ್ಳ ಅಥವಾ ಇನ್ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನೂ ಹೇಳದೆ ಇಷ್ಟಬಂದರೆ ಅಂಗೀಕರಿಸುವದಕ್ಕೂ ನಿಂತದ್ದನ್ನ ತಿರಸ್ಕರಿಸುವದಕ್ಕೂ ಸಹ, ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿದ್ದಾರೆ.

4. ತಿರಸ್ಕರಿಸಲ್ಪಡುವ ದರಖಾಸ್ತುದಾರ್ರುಗಳಿಂದ ಇಡಲ್ಪಟ್ಟ ಠೇವಣಿ ಮೊಬಲಗು ವಾಪಸು ಮಾಡಲ್ಪಡುತ್ತದೆ. ದರಖಾಸ್ತುಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರಾದ ಸಂಗತಿಯನ್ನ ಸದರೀ ದರಖಾಸ್ತುದಾರರಿಗೆ ತಿಳಿಸಿದ ಕೂಡ್ಲೆ ಕಂಟ್ರಾಕ್ಟಿನ ಷರತ್ತುಗಳ ಮೇರೆಗೆ ನಡೆದುಕೊಳ್ಳತಕ್ಕ ಖಾತರೀ ಬಗ್ಯಾಗಿ ಮೊದಲು ಇಟ್ಟದ್ದು (50) ಐವತ್ತು ರೂಪಾಯಿಗಳಲ್ಲದೆ ಜಾಸ್ತಿಯಾಗಿ (250) ಎರಡುನೂರ ಐವತ್ತು ರೂಪಾಯಿಗಳನ್ನ ಠೇವಣಿ ಇಡಬೇಕು. ಮತ್ತು ಈ ಕೆಳಗೆ ಕಂಡ ಮುಖ್ಯ ಸಂಗತಿಗಳನ್ನು ಕಂಡು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು.

(1) ದರಖಾಸ್ತಿನಲ್ಲಿ ಕಂಡ ಪ್ರದೇಶ ಶಿವಾಯಿ ಇತರ ಕಡೆಯಲ್ಲಿ ಕತರಾವಣಿ ಮಾಡುವದಿಲ್ಲ.

(2) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನೇಮಕಮಾಡಲ್ಪಡುವ ಮೇರೆಗೆ ಕ್ರಮವಾಗಿ ಒಂದು ಕಡೆಯಿಂದ ಬಿದರನ್ನ ಕಡಿಯುತ್ತೇನೆ. ಕತರಾವಣಿ ಬಗ್ಯೆ ದಫೆ ಒಂದಕ್ಕೆ ಒಂದು ನೂರು ಎಕರೆಗೆ ಮೀರದ ತುಕಡಿಯನ್ನ ನಿಷ್ಕರ್ಷೆ ಮಾಡಿಸಿಕೊಂಡು ಅದರಲ್ಲಿ ಕತರಾವಣಿ ಪೂರೈಸಿದ ನಂತರ ಇನ್ನೊಂದು ತುಕಡಿಯನ್ನು ನಿಷ್ಕರ್ಷೆ ಮಾಡಿಸಿ ಕೊಡತಕ್ಕ ಬಗ್ಯೆ ಖಾಯಿಷ್ಮಾಡುತ್ತೇನೆ.

(3) ಪ್ರತಿ ಯೊಂದು ಪೊದೆಯಲ್ಲಿಯೂ ಹಸೀ, ಯಾ ಯಳೇ ಬಿದರುಗಳನ್ನ ನಾಲ್ಕಕ್ಕೆ ಕಮ್ಮಿ ಇಲ್ಲದೆ ಬಿಟ್ಟು ನಿಂತದ್ದನ್ನ ಭೂ ಮಟ್ಟಕ್ಕೆ ಕಡಿಯುತ್ತೇನೆ.

(4) ನಾನು ಕಡಿಯುವ ಬಿದರುಗಳ ಪೈಕಿ ಹಸೀದಾಗಲಿ, ಒಣಗಿದ್ದಾಗಲಿ ಕೆಲವು ಅದದುಗಳನ್ನ ಹಾಸಲು ಕೊಟ್ಟು ಸಾಗಿಸಿಕೊಂಡು ಹೋಗಲು ಇಚ್ಛೈಪಡದೆ ಇರುವ ಸಂದರ್ಭದಲ್ಲಿ ಅಂಥಾ ಗಳುಗಳನ್ನ ಗಾಡೀ ಸಂಚಾರಕ್ಕೆ ಅನುಕೂಲವಾದ ಪ್ರದೇಶಗಳಲ್ಲಿ ಜಮಾಯಿಸಿಕೊಡುತ್ತೇನೆ.

(5) ಹಾಸಲು ಪಾವತಿ ಮಾಡಿ ಸಾಗಿಸಿಕೊಂಡು ಹೋಗಬೇಕೆಂದು ನಾನು ಉದ್ದೇಶಿಸುವ ವಿಶಿಷ್ಟ ಗಳುಗಳನ್ನೂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಜಾಗಗಳಲ್ಲಿ ಎಣಿಕೆಗೆ ಅನುಕೂಲವಾಗುವ ರೀತ್ಯಾ ಜಮಾಯಿಸಿ ಇಡುತ್ತೇನೆ.

(6) ಹೀಗೆ ನಾನು ಜಮಾಯಿಸಿ ಇಡುವ, ಗಳುಗಳನ್ನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಹುದ್ದೇದಾರು ಎಣಿಕೆ ಮಾಡಿದ ನಂತರ ನಾನು ಒಪ್ಪಿಕೊಂಡ್ಡ ದರದ ಮೇರೆಗೆ ಪಾವತಿ ಮಾಡಬೇಕಾದ ಖರೀದಿ ಮೊಬಲಗನ್ನ ಲೆಟರ್ ಆಫ್ ಅಡ್ವೈನ್ಸ್, ಅಥವಾ ಚಲನಿನ ಒಡನೆ ಸಮೀಪದ ಖಜಾನೆಗೆ ಇರಸಾಲ್ಮಾಡಿ, ರಶೀತಿ ಹಾಜರ್ಪಡಿಸಿ, ನೆಟ್ಟಿನಿಂದ, ಗಳುಗಳನ್ನ ಸಾಗಿಸಿಕೊಂಡು ಹೋಗತಕ್ಕೆ ಬಗ್ಯೆ ರಹದಾರಿ ಪಡೆಯುತ್ತೇನೆ.

(7) ತೀರ್ವೆ ಪಾವತಿಯಾದ, ಗಳುಗಳನ್ನ ನೆಟ್ಟಿನಿಂದ ನಿಕ್ಷೇಪವಾಗಿ ಸಾಗಿಸಿಕೊಂಡು ಹೋದ ಹೊರತು, ಜಂಗ್ಲಿಯಿಂದ ಯಾವ, ಗಳುವನ್ನೂ ಹೊಸದಾಗಿ ತೆಗೆದುಕೊಂಡು ಬಂದು ನೆಟ್ಟಿನಲ್ಲಿ ಇಡುವದಿಲ್ಲ. ಮತ್ತು ಹಾಸಲು ಪಾವತಿಯಾದ, ಗಳುವನ್ನು, ರಹದಾರಿ ಕೊಟ್ಟ ತಾರೀಖು ಲಾಗಾಯತು ಹದಿನೈದು ದಿವಸಗಳ ವಳಗಾಗಿ ನೆಟ್ಟಿನಿಂದ ಸಾಗಿಸಿಕೊಂಡು ಹೋಗುತ್ತೇನೆ.

(8) ನನ್ನ ಕರಾರ್ ವಾಯಿದೆ ಕಳೆದ ನಂತರ ನನ್ನ ಬಾಬತು ಡಿಪಾಜಿಟೆ ಮೊಬಲಗು ಮೂರು ನೂರು ರೂಪಾಯಿಗಳನ್ನ ಸರ್ಕಾರದಿಂದ ವಾಪಸ್ ತೆಗದುಕೊಳ್ಳುತ್ತೇನೆ. ಅಥವಾ ಕರಾರಿನ ಕೊನೆ ಮೂರು ತಿಂಗಳುಗಳಲ್ಲಿ ನನ್ನಿಂದ ಬರಬೇಕಾಗುವ ಮೊಬಲಗ್ಯಾಗಿ ಸದರೀ ಡಿಪಾಜಿಟೆ ಮೊಬಲಗನ್ನ ಸರ್ಕಾರದವರು ಉತ್ತಾರ ಹಾಕಿಕೊಳ್ಳಬಹುದು.

(9) ನನ್ನಿಂದ ಅಥವಾ ನನ್ನ ಕಡೆ ಜನಗಳಿಂದ ಯಾವ ಕಾರಣದಿಂದಲಾಗಲಿ ಸರ್ಕಾರಕ್ಕೆ ಏನಾದರೂ ನಷ್ಟ ಸಂಭವಿಸಿದಲ್ಲಿ ಅದಕ್ಕೆ ನಾನು ಜವಾಬ್ ಮಾಡತಕ್ಕವನು.

(10) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ಉಲ್ಲಂಘಿಸಿ ನಡೆದಲ್ಲಿ ಡೆಪ್ಯುಟಿ ಕಮ್ಮಿಷನರವರು ನನ್ನ ಕರಾರನ್ನ ರದ್ದುಮಾಡಿ ನಾನು ಜಮಾಯಿಸಿ ಇಟ್ಟುಕೊಂಡಿರುವ, ಗಳುಗಳನ್ನೂ ಜಫ್ತಿ ಮಾಡಬಹುದು. ಮತ್ತು ಅಂಥಾ ತಪ್ಪಿತಕ್ಕಾಗಿ ಮೇಲ್ಕಂಡ ಸೆಕ್ಯೂರಿಟಿ ಮೊಬಲಗನ್ನ ಪೂರ್ತಿಯಾಗಿಯಾಗಲಿ ಅ ಪೈಕಿ ಒಂದು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಕೊಡಲುಳ್ಳವನಲ್ಲದೆ ಕ್ರಿಮಿನಲ್ ತರಫ್ ವಿಚಾರಣೆಗೂ ಸಹ ಗುರಿಯಾಗುತ್ತೇನೆ.

ಬಿ. ರಾಮುಸ್ವಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 17ನೇ ಮಾರ್ಚಿ 1896.

ಇದರಿಂದ ಪ್ರಕಟಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ಫಾರೆಸ್ಟ್ ಡಿಪೋದಲ್ಲಿ ಜಮಾಯಿಸಲ್ಪಟ್ಟಿರುವ ಸುಮಾರು (25) ಸಾವಿರ ಮಣುಗಳ ಅಳಲೇಕಾಯಿಯನ್ನು ದರ ಸಾವಿರ ಮಣಗಳಿಗೆ ಒಂದೊಂದು ಲಾಟಾಗಿ ಮಾಡಿ ಹಾಸನ ಡಿಸ್ಟ್ರಿಕ್ಟ್ ಫಾರೆಸ್ಟ್

ಅಸಿಸ್ಟೆಂಟ್ ಕನ್ಸರ್‌ವೇಟರವರ ರೂಬರೂ ಬರುವ ಏಪ್ರೈಲ್ ಮಾಹೆ 10ನೇ ತಾರೀಖು ಶುಕ್ರವಾರ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಿಸುತ್ತಾದ್ದರಿಂದ ಇಚ್ಛೆವುಳ್ಳವರು ಆ ಕಾಲಕ್ಕೆ ಹಾಜರಾಗಿ ಛಡದರಖಾಸ್ತು ಮಾಡಬಹುದಾಗಿರುತ್ತೆ.

ಹರಾಜಿನ ರೂಲ್ಸನ್ನು ಆ ಕಾಲದಲ್ಲಿ ಓದಿ ಹೇಳಲಾದೀತು ಜರ್ನ ರೂಲ್ಸ್ ಪ್ರಕಾರವೇ ಮೇಲ್ಕಂಡ ಹರಾಜು ನಡಿಸಲ್ಪಡುವದು.

ಎಸ್. ಎ. ಬಾಪೂರಾವ್,
ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್‌ವೇಟರ್.

ಇಸ್ತಿಹಾರ ನಾಮೆ.

ತಾರೀಖು 24ನೇ ಮಾರ್ಚಿ ಸರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ದೊಡ್ಡಬಿಕ್ಕೋಡು ಗ್ರಾಮದಲ್ಲಿ ಇರುವ ಇದರಡಿ ನಮೂದು ಮಾಡಿರುವ ಜಮೀನಿಗೆ ಕಾಫೀ ಸಾಗುವಳಿಬಗ್ಗಾಗಿ ದರಖಾಸ್ತು ಬಂದಿರೋಣದರಿಂದ ಸರ್ 1896ನೇ ಇಸವಿ ಮೇ ತಾರೀಖು 18ನೇ ಸೋಮವಾರ ಹಗಲು 11 ಘಂಟೆವೆಗೆ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ಬೇಲೂರು ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇಲೆ ಆಗುವ ಅಪ್ಸೆಟಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇಲೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್‍ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟಪ್ರೈಸಯಾನೆ ನಿಯಮವಾದ ಸರಕಾರ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯುಳ್ಳ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇಲೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ವ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಖರ್ಚು ಜಾತಾ ಉಳಿಯುವ ಡಿಪಾಜಿಟ್ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಂಡು ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜ್ ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ದುಸರೇ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನ ಸವಾಲಿಗಿಂತಾ ಕಮ್ಮಿಯಾಗುವ ಪಕ್ಷ ಕಮ್ಮಿ ಮೊಬಲಗನ್ನ ರವಿನ್ಯೂ ಬಾಕಿಯಂತೆ ಅವನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು, 4ನೇ 5ನೇ ಸಾಲ್ ಅರ್ಧ ಆಕಾರ, 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ದ ಮೇಲೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತಿ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಫೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

6. ಈ ನಂಬರಿನಲ್ಲಿರುವ ಸುಮಾರು 1—2 ವಿಸ್ತೀರ್ಣದ ಯರಡು ದಾರಿಗಳು ಇವೆ, ಇವುಗಳನ್ನ ಹರಾಜಿನಲ್ಲಿ ಪಡಿಯುವ ಚಡದರಖಾಸ್ತುದಾರನು ಅಡ್ಡಿಪಡಿಸಕೂಡದು, ಅವುಗಳನ್ನ ಜನೋಪಯುಕ್ತಕ್ಕಾಗಿ ಉಳಿಕೊಂಡಿದೆ.

ಸರ್ವೆ ನಂಬರ.	ದರಖಾಸ್ತುದಾರನ ಹೆಸರು.	ಜಮೀನಿನ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ, ಎಕರೆ	ದರಖಾಸ್ತು ಜಮೀನಿನ, ಗುಂಟೆ	ಷರಾ.
2ನೇ ಬ್ಲಾಕು ನಂಬರ 172	ಮೆಸ್ಟರ್ ಜೆ. ಜಿ. ಎಚ್. ಕ್ರಾಫರ್ಡಯವರು.	ದೊಡ್ಡಬಿಕ್ಕೋಡು ಗ್ರಾಮ.	ಉತ್ತರಕ್ಕೆ—ಸರ್ವೆ ನಂಬರು 7—8—9—10 ಮತ್ತು ಮಠ ದಕ್ಷಿಣಕ್ಕೆ—ಸರ್ವೆ 2ನೇ ನಂಬರು ಪೈಕಿ. ಪೂರ್ವಕ್ಕೆ—ಸರ್ವೆ ನಂಬರು 88—1 ಪಶ್ಚಿಮಕ್ಕೆ—ಸರ್ವೆ 2ನೇ ನಂಬರು ಪೈಕಿ.	ಎ. ಗುಂ. 108—22 ಈ ನಂಬರಿನಲ್ಲಿ 2 ಎಕರೆ [illegible]		ಖಾಯಂ ದರ—ಎಕರೆ 1ಕ್ಕೆ 1—8—0 ಹಂಗಾಮಿ ದರ—ಎಕರೆ 1—0—0 [illegible]

ತಿಳುವಳಿಕೆ ಷರಾ,—ಒಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು (ಒಂದು ಕಚ್ಚಾ ಅಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಪೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನು ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 18ನೇ ಮಾರ್ಚಿ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ಡಾಕ್ಟರ್ ಸಿಡ್ನಿಸ್ಮಿತ ಸಾಹೆಬರು ಮತ್ತು ಬಿ. ಎ. ಬ್ರಿಟೊ ಜಂಟಿದಾರರಿಂದ ಬರಬೇಕಾದ ಜಮೀನು ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಇಧೆಯಂತ ಹುಕುಂ ಮಾಡಲ್ಪಟ್ಟ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಚೇರಿಯಲ್ಲಿ ತಾಲ್ಲೂಕು ಅಮಲ್‌ದಾರ್ ಯಾ ಶಿರಸ್ತೇದಾರ್ರ ರೂಬರೂ ಸ್ನ 1896ನೇ ಇಸವಿ ಮೇ 15ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇಧೆ.

ಹರಾಜು ಆ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕಟಂಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894-95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 288—1—1 ಮತ್ತು ಬಡ್ಡಿ ವಗೈರೆ ಇತರ ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ, ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

255

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೋಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್.										ಸರ್ಕಾರಕ್ಕೆ ಬರಬೇಕಾದ ಕೋರ್ಟ ಫೀ ಖರ್ಚು ಸಮೇತ ಬಾಕಿ ಮೊಬಲಗು.		
				ಕಟ್ಟಡಗಳು.		ಜಮೀನು.										
				ಕಟ್ಟಡದ ನಂಬರು.	ಅಂದಾಜು ಕಿಮ್ಮತ್ತು.	ಸರ್ವೆ ಅಥವಾ ಬಗೇರಿನ ನಂಬರು.	ಖುಷ್ಕಿ ಅಥವಾ ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಕಂದಾಯ.					
1	2	3	4	5	6	7	8	9		10			11		
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಮಗಳೂರು.	ಜಾಗರ.	ಸಿರಿಗೊಳ್ಳ ತೋಟ1	ಡಾಕ್ಟರ್ ಸಿಡ್ನಿಸ್ಮಿತ್ ಸಾಹೆಬರು ಬಿ. ಎ. ಬ್ರಿಟೋ ಜಂಟಿ.	..	..	17	ಕಾಫೀ	79	12	119	0	0	288 ಮತ್ತು	1 ಬಡ್ಡಿವಗೈರೆ ಇತರ	1

ಬಿ. ಜೆ. ಕೊಮಾರಸ್ವಾಮಿ ನಾಯುಡ್,

ಫಾರ್ ಡೆಪ್ಯುಟಿ ಕಮ್ಮಿಷನರ್.

256

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 14.

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 9, ಸ್ನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷ್ಣ ವ ಯಜ್ಯುಕೇಷ್ಣ ಇನ್ಸ್‌ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಣ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಣಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 11ನೇ ಮಾರ್ಚಿ 1896.

ನಂ. 10410.—ಲೋ. ಫಂ. 257—92.—ಬೆಂಗಳೂರು ತಾಲ್ಲೂಕಿನಲ್ಲಿ ಸರ್ಕಾರ್ ಕೆಲಸಕ್ಕೆ ಅಂದರೆ ಗುಟ್ಟಹಳ್ಳಿ, ಗವೀಪುರ, ಸುಂಕೇನಹಳ್ಳಿ ಮತ್ತು ಗೋರಿಪಾಳ್ಯ ಈ ಗ್ರಾಮಗಳ ಕಡೆ ಪಟ್ಟಣವನ್ನು ಬಡಾಯಿಸುವದಕ್ಕೋಸ್ಕರ ಭೂಮಿಯು ಬೇಕಾಗುತ್ತಲಿದೆಂದು ಮೈಸೂರು ಸರ್ಕಾರಕ್ಕೆ ತೋರಿಬರುವದ್ದರಿಂದ ಇದಕ್ಕೆ ಸಂಬಂಧಪಟ್ಟವರಿಗೆಲ್ಲಾ ತಿಳಿಯಪಡಿಸುವದೇನಂದರೆ, 1894ನೇ ಇಸವಿ VIIನೇ ನಂಬರ್ ಮೈಸೂರ್ ಲ್ಯಾಂಡ್ ಅಕ್ವಿಜಿಷ್ಣ ರೆಗ್ಯುಲೇಷನಿನ 4 ಮತ್ತು 5ನೇ ಸೆಕ್ಷ್ಣಗಳಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರ್ ಸರ್ಕಾರದವರು, ಸಿಟಿ ಮ್ಯುನಿಸಿಪಾಲಿಟಿಯ ಪ್ರಸಿಡೆಂಟರನ್ನೂ ಅವರ ಕೈಕೆಳಗಿನ ಉದ್ಯೋಗಸ್ಥರನ್ನೂ ಅವರ ನವುಕರರನ್ನೂ ಸಹ ಈ ಕಾನೂನಿನ ಕೆಲಸಗಳಿಗೋಸ್ಕರ ನೇಮಿಸಿರುತ್ತಾರೆ.

256

ತಾರೀಖು 11ನೇ ಮಾರ್ಚಿ 1896.

ನಂ. 10443.—ಲೋ. ಫಂ. 82.—92.—ಲ್ಯಾಂಡ್ ಅಕ್ವಿಜಿಷರ್ಷ ರೆಗ್ಯುಲೇಷನಿನ 6ನೇ ಸೆಕ್ಷರ್ಷ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಬೆಂಗಳೂರ್ ಷಹರಿನ ಪಶ್ಚಿಮ ದಿಕ್ಕಿನ ಬಡಾವಣೆ ಬಗ್ಗ್ಯಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು	ತಾಲ್ಲೂಕು	ಗ್ರಾಮ	ಹಿಡುವಳಿದಾರರ ಹೆಸರು	ಜಮೀನ್ ತಪ್ಸೀಲ್. ತರಹೆ	ಸರ್ವೆ ನಂಬರು	ವಿಸ್ತೀರ್ಣ		ಕಂದಾಯ	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ.	ಗು.	ರೂ.ಆ. ಪೈ.				
ಬೆಂಗಳೂರು.	ಬೆಂಗಳೂರು	ಗುಟ್ಟಹಳ್ಳಿ	ಮೆಸ್ಟರ್ ಎ. ಸಿಂಗಾರವೇಲು ಮೊದಲಿಯಾರ್ರು	ಖುಷ್ಕಿ	29ರ ಪೈಕಿ	3	0	4-12-0	ಸರ್ವೆ ನಂ. 30	ಸರ್ವೆ ನಂ. 27 ವ 28	ಮೆ॥ ಸುಬ್ಬರಾಯರ್ ಮತ್ತು ಮೆ॥ ನಾರಾಯಣರಾಯರ ಬಂಗ್ಲೆ ನಿವೇಶನ	ಸರ್ವೆ ನಂ. 18 ವ 19
			ಡಿಟೋ	ಬಾಗಾಯತು	ಡಿಟೋ	1	20	13-8-0	ಡಿಟೋ	ಡಿಟೋ	ಡಿಟೋ	ಡಿಟೋ
						4	20	18-4-0				

ತಾರೀಖು 24ನೇ ಮಾರ್ಚಿ 1896.

ನಂ. 10974.—ಜ. 1203.—ಬೆಂಗಳೂರ್ ಪೋಲೀಸ್ ಸೂಪರ್ರಿಟೆಂಡೆಂಟರಾದ ಮೆಸ್ಟರ್ ಡಿ. ದೇವರಾಜ್ ಅರಸಿನವರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷರ್ಷಗಳ 172ನೇ ಆರ್ಟಿಕಲ್ ಅನುಸರಿಸಿ, 1896ನೇ ಮಾರ್ಚಿ 12ನೇ ಮಸ್ತ್ಕಂ ಲಾಗಾಯತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ನಂ. 10982.—ಮಿ. 1581.—1896ನೇ ಇಸವಿ Iನೇ ನಂಬರ್ ರೆಗ್ಯುಲೇಷನಿನ 1ನೇ ಸೆಕ್ಷರ್ಷ 1ನೇ ಕ್ಲಾಜಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಗವರ್ನಮೆಂಟಿನವರು ಇದರ ದೆಶೆಯಿಂದ ಒಂದು ಸ್ಪೆಷಲ್ ಕೋರ್ಟನ್ನು ಯೇರ್ಪಡಿಸುತ್ತಾರಲ್ಲದೆ ಇದರಡಿ ಕಂಡ ಕಮ್ಮಿಷನರುಗಳನ್ನು ಮೊಕರರ್ಮಾಡಿರುತ್ತಾರೆ; ಯಾರಂದರೆ:—

1 ಮೈಸೂರ್ ಚೀಫ್ ಕೋರ್ಟಿನ ಚೀಫ್ ಜಡ್ಜೀರಾದ ಜೆ. ಡಬ್ಲ್ಯು. ಬೆಸ್ಟ್ ಯಸ್ಕ್ವಯರ್ ಯವರು,
2 ಬ್ರಿಟಿಷ್ ಗವರ್ನಮೆಂಟಿನಿಂದ ದರಬಾರಿಗೆ ಈ ಬಗ್ಗ್ಯಾಗಿ ನವುಕರಿ ವುದ್ದಿಶ್ಯ ವರ್ಗಮಾಡಲ್ಪಟ್ಟಿರುವ ಇಂಡಿಯರ್ಷ ಸಿವಿಲ್ ಸರ್ವಿಸ್ಸಿಗೆ ಶೇರಿದ ಸಿ. ಜೆ. ಜಾಪ್ ಯಸ್ಕ್ವಯರ್ ಯವರು,

ಈ ಮೇಲ್ಕಂಡವರನ್ನು, 1895ನೇ ಇಸವಿ ಅಕ್ಟೋಬರ್ 4ನೇ ಮಸ್ತ್ಕಂ ಕ್ಯಾಂಪ್ 42ನೇ ನಂಬರುಳ್ಳ ಗವರ್ನಮೆಂಟ್ ಇಸ್ತಿಹಾರನಾಮೆಯು ಷರತ್ತುಗಳನುಸರಿಸಿ ದಾಖಲ್ಮಾಡಲ್ಪಟ್ಟ ತಮಾಂ ದಾವೆಗಳನ್ನೂ ಸದರೀ ರೆಗ್ಯುಲೇಷನಿನ ನಿಯಮಗಳನುಸರಿಸಿ ವಿಚಾರಣೆ ಮಾಡಿ ಫೈಸಲ್ಮಾಡುವದಕ್ಕೂ, ಸದರೀ ರೆಗ್ಯುಲೇಷನಿನ 12ನೇ ಸೆಕ್ಷನಿನಿಂದ ನಿಯಮಿಸಲ್ಪಟ್ಟ ಪ್ರಕಾರ ಅವರ ಆಖ್ಯೆರ್ ತೀರ್ಪನ್ನೂ ಮೈಸೂರು ಗವರ್ನಮೆಂಟಿಗೆ ಒಪ್ಪಿಸುವ ಬಗ್ಗ್ಯಾಗಿ, ಸದರೀ ಕೋರ್ಟಿನ ಜಡ್ಜೀರಾಗಿ ಮೊಕರರ್ಮಾಡಿರುತ್ತಾರೆ.

2. ಸದರೀ ಸ್ಪೆಷಲ್ ಕೋರ್ಟು 1896ನೇ ಇಸವಿ ಜೂನ್ 15ನೇ ಮಸ್ತ್ಕಂ ಸೋಮವಾರ ಪೂರ್ವಾಹ್ನ 11 ಘಂಟೆಗೆ ಸರಿಯಾಗಿ ಬೆಂಗಳೂರಲ್ಲಿನ ಚೀಫ್ ಕೋರ್ಟಿನ ಕಟ್ಟಡದಲ್ಲಿ ಪ್ರಾರಂಭಿಸಲ್ಪಡುವದು. ಹೀಗೆ ಪ್ರಾರಂಭಿಸಲ್ಪಡುವ ಸಂಗತಿಯು ಮೇಲ್ಕಂಡ ಇಸ್ತಿಹಾರನಾಮೆಯು ಷರತ್ತುಗಳನುಸರಿಸಿ ಚೀಫ್ ಕೋರ್ಟಿನ ರೆಜಿಸ್ಟ್ರಾರ್ರವರಿಗೆ ಅವರವರ ಹಕ್ಕುಗಳನ್ನು ಮುಂಚಿತವಾಗಿ ತಿಳಿಸಿರುವಂಥಾ ಕಕ್ಷಿಗಾರರಿಗೆ ಅವರುಗಳು ಸದರೀ ಸ್ಪೆಷಲ್ ಕೋರ್ಟು ರೂಬರೂ ತಮ್ಮ ದಾವೆಗಳನ್ನ ನಡಿಸಲು ಅವಕಾಶ ಉಂಟುಮಾಡುವ ಬಗ್ಗೆ ಅಂಥಾ ತಮಾಂ ಕಕ್ಷಿಗಾರರಿಗೂ ನೋಟಿಸ್ ಮೂಲಕ ತಿಳಿಸಲ್ಪಡುವದು.

3. ಸದರೀ 1896ನೇ ಇಸವಿ Iನೇ ನಂಬರ್ ರೆಗ್ಯುಲೇಷರ್ಷ 7ನೇ ಸೆಕ್ಷರ್ಷ 3ನೇ ಕ್ಲಾಜ್ ನಿಯಮಗಳನುಸರಿಸಿ, ಬೆಂಗಳೂರು ಸ್ಪೆಷಲ್ ಜ್ಯುಡಿಷಿಯಲ್ ಆಫಿಸರಾದ ಮೆಸ್ಟರ್ ಸಿ. ಬಿ. ಶೇಷಗಿರಿರಾಯರು, ಸದರೀ ಸ್ಪೆಷಲ್ ಕೋರ್ಟಿನ ರೆಜಿಸ್ಟ್ರಾರ್ರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

4. ಗವರ್ನಮೆಂಟ್ ಆಡ್ವೊಕೇಟರು, (ಗವರ್ನಮೆಂಟಿನ ಜುಡಿಷಲ್ ಅಂಡರ್ ಸೆಕ್ರೆಟರಿಯವರಿಂದ ಸಲಹೆ ಪಡೆದು) ಸದರೀ ಕೋರ್ಟಿನಲ್ಲಿ ನಡಿಯುವ ತಮಾಂ ನಡವಳಿತಗಳಲ್ಲೂ ಮೈಸೂರು ಗವರ್ನಮೆಂಟ್ ತರಫ್ ವಾದ ನಡಿಸತಕ್ಕದ್ದು.

257

ತಾರೀಖು 26ನೇ ಮಾರ್ಚಿ 1896.

11001.—ಲೋ. ಫಂ. 178,—92.—ಮೈಸ್ಟರ್ ವೆಂಕಟನಾರಣಿಯ್ಯನವರು, ರಾಜೀನಾಮೆ ಕೊಡಲ್ಪಟ್ಟ ಮೆಸ್ಟರ್ ಚಿಕ್ಕ ಆದಿನಾರಣಯ್ಯನವರ ಸ್ಥಳದಲ್ಲಿ ದೊಡ್ಡಬಳ್ಳಾಪುರದ ಮ್ಯುನಿಸಿಪಾಲಿಟಿಯ ಒಬ್ಬ ಮೆಂಬರಾಗಿ-ಮೊಕರರ್ರ್ಮಡಲ್ಪಟ್ಟಿರುತ್ತಾರೆ.

ನಂ. 11026.—ವಿ. ಫೈ. 155.—92.—ಮೈಸೂರ-ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟು ಶಿವಿಲ್ ಸರ್ಜ್ಜನರಾದ ಡಾಕ್ಟರ್ ಏ. ಎಸ್. ಫರ್ನಾಂಡೆಸ್ ಯವರಿಗೆ, 1896ನೇ ಏಪ್ರಿಲ್-11ನೇ ಮರ್ಹ್ಯಂ ಲಾಗಾಯತು ಯಾ ಅವರುಪಯೋಗಿಸಿಕೊಳ್ಳಬಹುದಾದ ಇತರ ತಾರೀಖಿನಾರಭ್ಯ ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 7ನೇ ಮಾರ್ಚಿ 1896.

ನಂ. 10247.—ಲೋ. ಫಂ. 257—92.—ಸ್ಇ 1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನ್ನುಸರಿಸಿ ಪ್ರಸಿದ್ಧಪಡಿಸುವದೇನಂದರೆ,—ಕೋಲಾರ್ ಮ್ಯುನಿಸಿಪಾಲಿಟಿಯಲ್ಲಿರುವ ಇದ್ದರಡಿ ಕಂಡ ಜಮೀನುಗಳು ಹೆಂಗಸರ ಆಸ್ಪತ್ರೆ ಕಟ್ಟುವ ಬಗ್ಯಾಗಿ ಬೇಕಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳಿದಾರ್ರ ಹೆಸರುಗಳು.	ಜಮೀನಿನ ತಪ್ಸೀಲ್.				ಚಕ್ಕುಬಂದಿ.			
				ಸರ್ವೆ ನಂಬರು.	ಪೂರ್ವ ಪಶ್ಚಿಮ ಗಜಗಳು.	ಉತ್ತರ ದಕ್ಷಿಣ ಗಜಗಳು.	ಒಟ್ಟು ಚದರ ಗಜಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			1. ಮಾಣಿಕ್ಯಂ ವೆಂಕಟೇಶಣ್ಣ ..	..	9	17	153	ಅಗರಂ ಬಾಲಾಚಾರ್ರ ಮನೆ	ರಸ್ತೆ	ರಸ್ತೆ	ರಸ್ತೆ
			2. ಅಗರಂ ಬಾಲಾಚಾರಿ..	..	11	17	187	ಅತ್ತರ್ ಉಸ್ಮಾನ್ ಸಾಬರ ಮನೆ	ಮಾಣಿಕ್ಯಂ ವೆಂಕಟೇಶಂಣನವರ ಮನೆ	ರಸ್ತೆ	ರಸ್ತೆ
			3. ಅತ್ತರ್ ಉಸ್ಮಾನ್ ಸಾಹೆಬ್	..	17	17	289	ಮಾದಮಂಗಲ ಸುಬ್ಬರಾಯಪ್ಪನವರ ಮನೆ	ಅತ್ತರ್ ಉಸ್ಮಾನ್ ಸಾಬರ ಮನೆ	ರಸ್ತೆ	ರಸ್ತೆ
ಕೋಲಾರ	ಕೋಲಾರ	ಕೋಲಾರ	4. ಮಾದಮಂಗಲ ಸುಬ್ಬರಾಯಪ್ಪ	..	18	17	306	ರಸ್ತೆ	ಡಿಟೋ	ರಸ್ತೆ	ರಸ್ತೆ
			5. ನಾರಾಯಣಸಾಮಿ ಮೊದಲಿಯಾರು ..	..	23	21	483	ರಸ್ತೆ	ಬಾಲಾಚಾರ್ ಮತ್ತು ಕಾಳಾಚಾರ್ರ ಮನೆ	ರಸ್ತೆ	ರಸ್ತೆ
			6. ಬಾಲಾಚಾರಿ ..	..	28	11	308	ನಾರಾಯಣ ಸಾಮಿ ಮೊದಲಿಯಾರ್ರ ಮನೆ	ರಸ್ತೆ	ರಸ್ತೆ	ವೆಂಕೋಜಿ ಮತ್ತು ಕಾಳಾಚಾರ್ರ ಮನೆ
			7. ಮಾದಮಂಗಲ ಕಾಳಾಚಾರಿ	..	14	15	210	ಡಿಟೋ	ವೆಂಕೋಜಿಯ ಮನೆ	ಬಾಲಾಚಾರ್ರ ಮನೆ	ರಸ್ತೆ
			8. ಪೋಲೀಸ್ ವೆಂಕೋಜಿ ..	..	14	15	210	ಕಾಳಾಚಾರ್ರ ಮನೆ	ರಸ್ತೆ	ಡಿಟೋ	ರಸ್ತೆ
			ಜುಮ್ಲಾ...	...	..	..	2146				

258

ತಾರೀಖು 12ನೇ ಮಾರ್ಚಿ 1896.

ನಂ. 10482.—ಲೋ. ಫಂ. 101–95. ಸನ್ 1894ನೇ ಇಸವಿ ನಂಬರ್ VIIನೇ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಹಾನುಬಾಳಿನಿಂದ ಬೈರಾಪುರಕ್ಕೆ ರಸ್ತೆ ಹಾಕುವ ಬಗ್ಗೆಗಾಗಿ ಬೇಕಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರುಗಳು.	ಜಮೀನು ತಪಶೀಲು. ಸರ್ವೆ ನಂ.	ಬಗೆ.	ವಿಸ್ತೀರ್ಣ.	ದಾಮಾಷಾಯಿ ಜೇರೀಜು.	ಚಕ್ಕು ಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗುಂ.	ರೂ. ಆ. ಪೈ.				
ಹಾಸನ.	ಮಂಜರಾಬಾದು.	ಹಾನುಬಾಳು.	ಹಿರಿಗಂಡಿ.	ಅಣ್ಣೇಗವುಡ, ದ್ಯಾವೇಗವುಡ, ಅಪ್ಪಣ್ಣಿ, ಬಸವಮ್ಮಿ	75	ಕಾಫಿ	0—16	0—6—5	ಸರ್ವೆ ನಂ. 75	ಸರ್ವೆ ನಂ. 76	ಸರ್ವೆ ನಂ. 75	ಸರ್ವೆ ನಂ. 75
				ಕೋಟೇಪುನೆ ಸೋವೇಗವುಡ	79	ಕಾಫಿ	0—38	1—0—0	ಸರ್ವೆ ನಂ. 76 ವ 79	ಸರ್ವೆ ನಂ. 79	ಸರ್ವೆ ನಂ. 79	ಸರ್ವೆ ನಂ. 79
				ದ್ಯಾವಮ್ಮ, ದ್ಯಾವೇಗವುಡ, ನಿಂಗೇಗವುಡ, ದ್ಯಾವಮ್ಮಿ	17	ತರೀ	0— 6	0—3—0	ಸರ್ವೆ ನಂ. 17	ಸರ್ವೆ ನಂ. 17	ಸರ್ವೆ ನಂ. 17	ಸರ್ವೆ ನಂ. 17
				ಈರಮ್ಮನ ದ್ಯಾವೇಗವುಡ, ಅಣ್ಣೇಗವುಡ, ದ್ಯಾವೇಗವುಡ, ಅಪ್ಪಣ್ಣಿ, ಬಸವಮ್ಮಿ, ಕುಂಬಾರಸುಬ್ಬಿ, ದ್ಯಾವ	18	ತರೀ	0—2$\frac{3}{4}$	0—1—6	ಸರ್ವೆ ನಂ. 18	ಸರ್ವೆ ನಂ. 18	ಸರ್ವೆ ನಂ. 114	ಸರ್ವೆ ನಂ. 18
				ದ್ಯಾವೇಗವುಡ	19	ತರೀ	0— 2	0—1—0	ಸರ್ವೆ ನಂ. 19	ಸರ್ವೆ ನಂ. 19	ಸರ್ವೆ ನಂ. 114	ಸರ್ವೆ ನಂ. 19
				ದ್ಯಾವಮ್ಮಿ, ಸುಬ್ಬಿ, ಬೈರಸ	20	ತರೀ	0—1$\frac{3}{4}$	0—1—0	ಸರ್ವೆ ನಂ. 20	ಸರ್ವೆ ನಂ. 20	ಸರ್ವೆ ನಂ. 114	ಸರ್ವೆ ನಂ. 20
				ದ್ಯಾವಮ್ಮಿ, ದ್ಯಾವೇಗವುಡ, ವಸಂತೆಗವುಡ, ಅಣ್ಣೇಗವುಡ, ಮಂಜಮ್ಮಿ, ಸೋವೇಗವುಡ, ದ್ಯಾವೇಗವುಡ, ಅಪ್ಪಣ್ಣಿ, ಬಸಮ್ಮ, ಅಣ್ಣೇಗವುಡ	21	ತರೀ	0— 4	0—4—0	ಸರ್ವೆ ನಂ. 21	ಸರ್ವೆ ನಂ. 21	ಸರ್ವೆ ನಂ. 21	ಸರ್ವೆ ನಂ. 21
				ಸೋವೇಗವುಡ,	112	ತರೀ	0—13	0—8—6	ಸರ್ವೆ ನಂ. 112	ಸರ್ವೆ ನಂ. 112	ಸರ್ವೆ ನಂ. 112	ಸರ್ವೆ ನಂ. 112
				ಅಣ್ಣೇಗವುಡ, ದ್ಯಾವೇಗವುಡ, ಅಪ್ಪಣ್ಣಿ ಮತ್ತು ಬಸಮ್ಮ	113	ತರೀ ವ ಖುಷ್ಕಿ	0— 6	0—5—0	ಸರ್ವೆ ನಂ. 20	ಸರ್ವೆ ನಂ. 113	ರ್ವೆ ನಂ. 1 13	ಸರ್ವೆ ನಂ. 21
			[illegible]	ಗುಡ್ಡೇಗವುಡ, ಪುಟ್ಟೇಗವುಡ	46	ತರೀ ವ ಖುಷ್ಕಿ	0—32	2—6—0	ಸರ್ವೆ ನಂ. 46	ಸರ್ವೆ ನಂ. 46	ಸರ್ವೆ ನಂ. 46	ಸರ್ವೆ ನಂ. 46
				ಹುಚ್ಚೇಗವುಡ ಬಿನ್ ಅಣ್ಣೇಗವುಡ	22	ತರೀ	0—17$\frac{1}{2}$	1—1—0	ಸರ್ವೆ ನಂ. 22	ಸರ್ವೆ ನಂ. 22	ಸರ್ವೆ ನಂ. 22	ಸರ್ವೆ ನಂ. 22
				ಬೈರೇಗವುಡ	42	ತರೀ	0—10	0—11—0	ಸರ್ವೆ ನಂ. 42	ಸರ್ವೆ ನಂ. 42	ಸರ್ವೆ ನಂ. 42	ಸರ್ವೆ ನಂ 42

ತಾರೀಖು 30ನೇ ಮಾರ್ಚಿ 1896.

259

ನಂ. 11130.—ಲೋ. ಫಂ. 273—92.—ತಿರಮಕೂಡ್ಲು ನರಸೀಪುರದ ಪೂರ್ಣ ಮಂಗಲ ಕಾಮಾಕ್ಷಿ ಬ್ಯಾಂಕ್ ಏಜಂಟ್ ಮೆಸ್ಟರ್ ಕೃಷ್ಣರಾಯರವರು ಕೆಲಸದಿಂದ ನಿವೃತ್ತರಾದ ಮೆಸ್ಟರ್ ರಾಘವೇಂದ್ರರಾಯರಿಗೆ, ಬದಲಾಗಿ ತಿರಮಕೂಡ್ಲು ನರಸೀಪುರದ ಮ್ಯುನಿಸಿಪಲ್ ಬೋರ್ಡಿನ ಪಬ್ಬು ಮೆಂಬರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

11131,—ಲೋ. ಫಂ. 273—92.—ಇದರಡಿ ಕಂಡ ಮ್ಯುನಿಸಿಪಾಲಿಟಿಗಳ ಮೆಂಬರುಗಳು ಅವರ ಹೆಸರುಗಳ ಬಾಜೂದಲ್ಲಿ ಕಂಡ ಬೋರ್ಡಿನಲ್ಲಿ ಐದು ವರುಷಗಳಿಗೆ ಮೀರಿ ನವುಕರಿ ಮಾಡಿರುತ್ತಾರಾಗಿ ಪುನಃ ಐದು ವರುಷಗಳ ಕಾಲ ಪರಿಯಂತ ಮರಳಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ:—

ಚಾಮರಾಜನಗರ	ಉಸ್ಮಾನ್ ಸಾಬ್
ತಿರಮಕೂಡ್ಲು ನರಸೀಪುರ ..	ಕೃಷ್ಣಶಾಸ್ತ್ರಿ
ಎಡತೊರೆ ..	ಶಿವಾಜಿರಾವ್, ದಾಸಶೆಟ್ಟಿ
ಹೆಗ್ಗಡದೇವನಕೋಟೆ ..	ರಂಗಯ್ಯಂಗಾರ್, ಸುಬ್ಬರಾವ್, ವೆಂಕಟರಮಣಶೆಟ್ಟಿ
ಸರಗೂರು	ಅಪ್ಪಾಜಿಶೆಟ್ಟಿ, ಬ್ರಹ್ಮಶೆಟ್ಟಿ, ರಾಮಣ್ಣ, ವೆಂಕಟಶೆಟ್ಟಿ
ಸೋಸಲೆ ..	ವೆಂಕಟರಾಯಾಚಾರ್, ಸೂರ್ಯಾಚಾರ್, ಟಿ. ಗೋಪಾಲಾಚಾರ್, ಹುಸೇನ್ ಸಾಬ್, ಬೋಗನಂದಪ್ಪ, ಮಾದಶೆಟ್ಟಿ

ತಾರೀಖು 31ನೇ ಮಾರ್ಚಿ 1896.

11181.—ಜ. 1230.—ಕೋಲಾರ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆಸ್ಟರ್ ಜಿ. ಕೃಷ್ಣರಾಯರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ 1896ನೇ ಮಾರ್ಚಿ 22ನೇ ಮರ್ಸ್ಕಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 11154.—ಲೋ. ಫಂ. 257—92.—ಸರ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ—ಇದರಡಿ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗ ಮ್ಯುನಿಸಿಪಾಲಿಟಿಯಲ್ಲಿ ಕೊಳ್ಳೇಗಾಲದ ಶಾಮಯ್ಯಂಗಾರ್ರ ಮನೆ ಪಕ್ಕದಲ್ಲಿ ಒಂದು ಕಸದ ತೊಟ್ಟಿಯನ್ನು ಕಟ್ಟುವ ಬಗ್ಗೆ ಅವಶ್ಯಕವಾಗಿರುತ್ತೆ:—

ಸೀರಿಯಲ್ ನಂಬರ್.	ಬೀದಿ ಹೆಸರು.	ಹಿಡುವಳಿದಾರರ ಹೆಸರು.	ಜಾಗದ ವಿಸ್ತೀರ್ಣ.		ವಿವರಣೆ.	ಚಕ್ಕುಬಂದಿ.			
			ಲಾಂಬಿ.	ರುಂದಿ.		ಉತ್ತರ	ದಕ್ಷಿಣ.	ಪೂರ್ವ.	ಪಶ್ಚಿಮ.
			ಗಜಗಳು						
1	ಸಂತೇಬಾಗಲ ರಸ್ತೆ.	ಕೊಳ್ಳೇಗಾಲದ ಶಾಮಯ್ಯಂಗಾರ್ ಮತ್ತು ಗರುಡಾಚಾರ್, ಚಿತ್ರದುರ್ಗದ ಡಿಸ್ಟ್ರಿಕ್ಟು ಆಫೀಸ್ ರೆವಿನ್ಯು ಅಕೌಂಟೆಂಟ್.	3	3	ಖಾಲಿ ಹಿತ್ತಲು.	ರಾಘವೇಂದ್ರ ಸ್ವಾಮಿಯವರ ಮಠದ ರಸ್ತೆ.	ಸ್ವಾಂತಗಾರ್ರ ಮನೆ.	ಸಂತೇಬಾಗಲಿನಿಂದ ಹುಚ್ಚಂಗಿದೇವಸ್ಥಾನಕ್ಕೆ ಹೋಗುವ ಹ್ಯಾ ರೋಡು.	ಸ್ವಾಂತಗಾರ್ರ ಹಿತ್ತಲಿನ ಉಳಿದ ಭಾಗ.

ತಾರೀಖು 1ನೇ ಏಪ್ರಿಲ್ 1896.

ನಂ. 11228.—ಜ. 1234.—ಚಿಕ್ಕಮಗಳೂರು ಮುನ್ಸಿಫ್ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ ಕೊಡಲ್ಪಟ್ಟಿದ್ದ ರಜಾ ಪೈಕಿ ಕೆಲವು ಮಟ್ಟಿಗೆ ರದ್ದು ಮಾಡಿರುವ 1896ನೇ ಮಾರ್ಚಿ 10ನೇ ಮರ್ಸ್ಕಂ 10363—ಜ. 1135ನೇ ನಂಬರ್ ಇಸ್ತಿಹಾರನಾಮೆಗೆ ಬದಲಾಗಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, 1896ನೇ ಫೆಬ್ರುವರಿ 8ನೇ ಮರ್ಸ್ಕಂ 9199—ಜ. 998ನೇ ನಂಬರ್ ಇಸ್ತಿಹಾರನಾಮೆಯಲ್ಲಿ ಸದರೀಯವರಿಗೆ ಕೊಡಲ್ಪಟ್ಟಿದ್ದ ರಜಾ ಮೂರು ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ. 11230.—ಜ. 1236.—ಮೈಸೂರ್ ಸಬ್ ಜಡ್ಜ್ ಮೆಸ್ಟರ್ ಎಸ್. ಆರ್. ಸುಬ್ಬರಾಯ ಐಯ್ಯರ್ ಯವರಿಗೆ, 1896ನೇ ಜನವರಿ 21ನೇ ಮರ್ಸ್ಕಂ 8313.—ಜ. 910ನೇ ನಂಬರ್ ಇಸ್ತಿಹಾರನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ಹತ್ತು ದಿನಗಳ ಕ್ಯಾಜುಯಲ್ ರಜಾ ಪೈಕಿ ಆರು ದಿನಗಳು ಉಪಯೋಗಿಸಿಕೊಂಡ ಸಬಬ್ ಉಳಿದ ಭಾಗ ಅಂದರೆ ನಾಲ್ಕು ದಿನಗಳು ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 18ನೇ ಮಾರ್ಚಿ 1896.

ನಂ. 8520.—ರೆ. 3314.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಹುಣಸೂರು ತಾಲ್ಲೂಕು ಅಮಲ್ದಾರ್ ಟಿ. ಯನ್. ಮೀರ್ ನಿಜಾಮುದ್ದೀನ್ ಅಲ್ಲೀಖಾನರಿಗೆ, 1896ನೇ ಮಾರ್ಚಿ 18ನೇ ಮರ್‍ಸ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖಿನಾರಭ್ಯ ಐದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ರು ಡಿಟೋ ಅಮಲ್ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಆ ತಾಲ್ಲೂಕಿನ ಚಾಲತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 19ನೇ ಮಾರ್ಚಿ 1896.

ನಂ. 8554—ರೆ. 3327.—ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ರಾಮಚಂದ್ರರಾಯರು, ಶಿವಮೊಗ್ಗಾ ಡಿಸ್ಟ್ರಿಕ್ಟ್ಟಿನ ಟ್ರೆಜರಿ ಚಾರ್ಜನ್ನು ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಎ. ರಂಗಸ್ವಾಮಯ್ಯಂಗಾರ್‍ರಿಂದ, 1896ನೇ ಫೆಬ್ರುವರಿ 29ನೇ ಮರ್‍ಸ್ತಿನ ಮಧ್ಯಾಹ್ನಾ ತ್ತರ ವಹಿಸಿರುತ್ತಾರೆ.

ಸಾಗರದ ಸಬ್ ಡಿವಿಜನ್ ಆಫಿಸರ್ ಮೆಸ್ಟರ್ ಜಿ. ರಘುನಾಥರಾಯರು, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಟ್ರೆಜರಿ ಚಾರ್ಜನ್ನು ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ರಾಮಚಂದ್ರರಾಯರಿಂದ ಮಾಹೆ ಮಜಕೂರು ಗುರ್‍ರೇ ತಾರೀಖಿನ ಪೂರ್ವಾಹ್ನದಲ್ಲಿ ವಹಿಸಿರುತ್ತಾರೆ.

ನಂ. 8556.—ರೆ. ಫ. 89—95.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಹೊಸದುರ್ಗ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಟಿ. ವೆಂಕಟರಾಮಯ್ಯನವರಿಗೆ, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ. ಹೊಳಲಕೆರೆ ತಾಲ್ಲೂಕು ಅಮಲ್ದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ಟಿ. ವೆಂಕಟರಾಮಯ್ಯನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹೊಸ ದುರ್ಗ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 8562.—ರೆ. ಫ. 88—95.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಮುಳಬಾಗಲ್ ತಾಲ್ಲೂಕು ಅಮಲ್ದಾರ್ ಯಂ. ಮಹದೇವರಾಯರಿಗೆ, 1896ನೇ ಮಾರ್ಚಿ 11ನೇ ಮರ್‍ಸ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖು ಮೊದಲು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ರು ಡಿಟೋ ಅಮಲ್ದಾರ್ರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ಸೇ 1896—97ನೇ ಸಾಲಿಗೆ ಶೇಂದೀ ಫಿರ್ಕಾಗಳ ಹರಾಜು.

ನಂಬರ 8030.—E. X.—243, ತಾರೀಖು 5ನೇ ಮಾರ್ಚಿ 1896.

ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ * ವಿವರಿಸಲ್ಪಟ್ಟಿರುವ ಆಯಾ ತರಗತಿಗಳ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ ಸೇ 1896ನೇ ಇಸವಿ ಜುಲೈ ಗುರ್‍ರೇ ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಈಚಲುಮರದ ಶೇಂದಿಯನ್ನು ಬಿಕರಿ ಮಾಡುವ ಬಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮ್ಮಿಷನರುಗಳಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಪ್ರತಿ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಹರಾಜ್ ಹಾಕಲ್ಪಡಲು ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್‌ಮೂಲಕ ಪ್ರಕಟಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳಿಗೆ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಯಾ ಹಾಲಿ ಫಿರ್ಕಾಗಳ ಪೈಕಿ ಯಾವದಾದರೂ ಕೇವಲ ದೊಡ್ಡದಾಗಿರುವ ಪಕ್ಷದಲ್ಲಿ ಹರಾಜು ಹಾಕುವ ಆಫಿಸರರು ಎಕ್ಸೈಜ್ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಅಂಥಾ ಫಿರ್ಕಾಗಳನ್ನ ಬದಲಾಯಿಸಲೂ, ವಿಭಾಗ ಮಾಡಲೂ ಯಾ ಇತರ ವಿಧವಾಗಿ ವಿಂಗಡಿಸಲೂ ಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಒಟ್ಟು ಸ್ವಾತಂತ್ರ್ಯದ ಹಕ್ಕು ಹರಾಜು ಮಾಡಲ್ಪಡುತ್ತೆ. ಅಂಗೀಕರಿಸಲ್ಪಡತಕ್ಕ ಛಡಸವಾಲ್ದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಸದರೀ ಹಕ್ಕು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು. ಯಾವದಾದರೊಂದು ಫಿರ್ಕಾದ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಕೊಡಲ್ಪಟ್ಟ ಸವಾಲುದಾರನು ಎರಡನೇ ಫಿರ್ಕಾದ ಹರಾಜು ಷುರುವಾಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ಠೇವಣೀ ಇಡಬೇಕು. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಗಳೊಳಗಾಗಿ ಮೊದಲು ಇಡೋಣಾದ ಠೇವಣೀ ದೇಖೀಲ್ ಆತನ ಮೂರು ತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ಠೇವಣಿಯನ್ನಿಡಬೇಕು. ಪರಂತು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರು ತಮಗೆ ಯುಕ್ತವಾಗಿ ತೋರುವ ಪಕ್ಷದಲ್ಲಿ ಎರಡು ತಿಂಗಳ ಗುತ್ತಿಗೆ ಹಣಕ್ಕೆ ತಕ್ಕಷ್ಟು ಮೊಬಲಗನ್ನ ನಗದಾಗಿಯಾಗಲಿ ಅಥವಾ ಆ ಮೊಬಲಗ್ಗೆ ಸರಿಯಾದ ಗವರ್ನಮೆಂಟ್ ಸೆಕ್ಯೂರಿಟಿ ನೋಟ್ ಪತ್ರಗಳನ್ನಾಗಲಿ, ಅಥವಾ ಒಂದು ತಿಂಗಳ ಗುತ್ತಿಗೆ ಮೊಬಲಗು ಮತ್ತು ಮೂರು ತಿಂಗಳ ಗುತ್ತಿಗೆ ಮೊಬಲಗ್ಗೆ ಸರಿಯಾದ ಆಸಾಮಿ ಜಾಮೀನನ್ನಾಗಲಿ ಠೇವಣಿಯಾಗಿ ಇಡಲು ಹುಕುಂ ಕೊಡಬಹುದು. ಮೇಲ್ಕಂಡಂತೆ ಜಾಮೀನುಗಳನ್ನು ಕೊಡಲು ತಪ್ಪಿದಲ್ಲಿ ಮೊದಲು ಇಟ್ಟಿರುವ ಠೇವಣೀ ಮೊಬಲಗುಗಳನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡುವ ರೀತ್ಯ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಃ ಹರಾಜ್ ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು.

---

* ಪಟ್ಟಿಬಗ್ಗೆ 1896ನೇ ಇಸವಿ ಮಾರ್ಚಿ 26ನೇ ಮರ್‍ಸ್ತಂ ಸಪ್ಲಿಮೆಂಟ್ ಗೆಜಟನ್ನು ನೋಡತಕ್ಕದ್ದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ಪುನಶ್ಚ ಹರಾಜುಗಳು ತಪ್ಪಿತಸ್ಥನಾದ ಮೇಲ್ಕಂಡ ಸವಾಲ್‌ದಾರನ ಜವಾಬ್ ದಾರೀ ಮೇಲೆ ನಡಿಸಲ್ಪಡುವವು. ಸದರೀ ಸವಾಲ್‌ದಾರನು ಎಲ್ಲಾ ಆದಾಯವನ್ನೂ ಕಳೆದುಕೊಳ್ಳತಕ್ಕದ್ದಲ್ಲದೆ ದುಸರಾ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಷುರೂ ಹರಾಜಿನ ಷರತ್ತುಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ಪಾವತಿಯಾಗ ಬೇಕಾಗಿದ್ದ ಒಟ್ಟು ಮೊಬಲಗಿನಲ್ಲಿ ದುಸರಾ ಹರಾಜಿನಲ್ಲಿ ಪಡದ ಸವಾಲ್‌ದಾರನಿಂದ ಪಾವತಿಯಾಗತಕ್ಕ ಒಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ಪಾವತಿ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕೋಸ್ಕರ ವಜಾ ಮಾಡಲ್ಪಡತಕ್ಕದ್ದು. ತದನಂತರ ಬಾಕಿ ಯೇನಾದರೂ ನಿಂತಲ್ಲಿ ಆ ಮೊಬಲಗು ಜಮೀನ್ ಕಂದಾಯವು ಯಾವರೀತಿಯಾಗಿ ವಸೂಲ್ಮಾಡಲ್ಪಡುತ್ತೋ ಅದೇರೀತಿಯಾಗಿ ವಸೂಲ್ಮಾಡಲ್ಪಡುವದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರಾ ಹರಾಜಿನಿಂದುಂಟಾದ ನಷ್ಟಕ್ಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

5. ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳನ್ನು ಆಚರಿಸುವದಕ್ಕೆ ಬದ್ಧನಾಗಿರಲುಳ್ಳವನೆಂದು ಒಂದು ಕರಾರನ್ನ ಬರೆದು ರುಜುಮಾಡಿ ಕೊಡತಕ್ಕದ್ದು. ಕೊಂಡುಕೊಂಡವನು ಕರಾರನ್ನ ಸೈನ್ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಸಿಷ್ಟ ಠೇವಣೀ ಮೊಬಲಗೂ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂಗಳಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದೀದಾರನ ಜವಾಬ್‌ದಾರಿ ವ ನಷ್ಟಕ್ಕೆ ಗುರಿಯಾಗಿ ದುಸರಾ ಹರಾಜ್ ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹರಾಜ್ ಮಂಜೂರಾದ ಮೇಲೆ ಸದರೀ ಖರೀದೀದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನ ಪಡೆದವರು ಸದರೀ ಕರಾರಿಗೆ ಜವಾಬ್‌ದಾರ್ರಾಗಿರುತ್ತಾರೆ.

6. ಪ್ರತಿ ಫಿರ್ಕಾದಲ್ಲಿ ಹಾಲಿ ಇರುವ ಅಂಗಡಿಗಳು ಮತ್ತು ಪ್ರತಿ ಫಿರ್ಕಾಕ್ಕೆ ಶೇರಿದ ವನಗಳು, ಮತ್ತು ಹಿಂದಿನ ಸಾಲುಗಳ ಬಾಬತು ಪ್ರತಿ ಫಿರ್ಕಾವ ಸಾಲಿಯಾನಾ ಗುತ್ತಿಗೆ ಮೊಬಲಗು ವಗ್ಯೆರೆ ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟ ಕೂಡ್ಲೆ ಖರೀದೀದಾರನಿಗೆ ಡೆಪ್ಯುಟಿ ಕಮಿಷನರವರು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟು ವಿಧಾಯಕವಾದ ನಮೂನೆಯಲ್ಲಿ ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕನ್ನ ನಮೂದಿಸಿ ಒಂದು ಲೈಸೆನ್ಸನ್ನ ಕೊಡುವರು:—

(1) ಲೈಸೆನ್ಸದಾರನು ತನ್ನ ದುಕಾನುಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಫಿರ್ಕಾಕ್ಕೆ ಶೇರಿದ ವನಗಳಲ್ಲಿ ಇರುವ ಈಚಲು ಗಿಡಗಳಿಂದ ಶೇಂದಿಯನ್ನ ತಯಾರ್ಮಾಡಿಕೊಳ್ಳಲು ಸರ್ವಸ್ವತಂತ್ರವುಳ್ಳವನಾಗಿರುತ್ತಾನೆ. ಮತ್ತು ಎಕ್ಸೈಜ್ ಆಕ್ಟ 5ನೇ ಸೆಕ್ಷನ್ ಪ್ರಕಾರ ಮಾಫೀ ಲೈಸೆನ್ಸ್ ಪಡದು ತನ್ನ ಫಿರ್ಕಾದ ಸರಹದ್ದಿನೊಳಗೆ ಅಥವಾ ತನ್ನ ಫಿರ್ಕಾದ ಹೊರಗೆ ಇರುವ ಹಿಡುವಳಿದಾರ್ರ ಜಮೀನುಗಳಲ್ಲಿ ಇರತಕ್ಕ ಈಚಲು, ತಾಳೆ ಯಾ ತೆಂಗಿನ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವದಕ್ಕೂ ಯಾ ಅಂಥಾ ಜಮೀನುಗಳ ಮಾಲೀಕರೊಡನೆ ಯಾ ಅಂಥಾ ಫಿರ್ಕಾಗಳ ಲೈಸೆನ್ಸದಾರ್ರೊಡನೆ ಸಂಗತ್ಯಾನುಸಾರ್ರ ಆಪಸಿನಲ್ಲಿ ಮಾಡಿಕೊಂಡ ಯೇರ್ಪಾಟುಗಳನ್ನನುಸರಿಸಿ ಇತರ ಫಿರ್ಕಾಗಳಿಂದ ಕೊಂಡುಕೊಳ್ಳುವದಕ್ಕೂ ಸ್ವತಂತ್ರ್ರಾಗಿರತಕ್ಕದ್ದು. ತಾಳೆ ಯಾ ತೆಂಗಿನ ಶೇಂದಿಯ ವಿಕರಿ ದರಗಳು ಎಕ್ಸೈಜ್ ಕಮಿಷನರ್ ಸಾಹೆಬರವರಿಂದ ಆಗಿಂದಾಗ್ಯೆ ಗೊತ್ತು ಮಾಡಲ್ಪಡತಕ್ಕದ್ದು.

(2) ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ ಮತ್ತು ತೆಂಗಿನಮರಗಳ ಶೇಂದಿಯನ್ನ ಮಾರುವದಕ್ಕೆ ಮಾತ್ರವೇ ಲಗತ್ತಾಗುತ್ತೆ. ಬಗನಿ ಶೇಂದೀ ಮಾರಾಟವು ಇದರಲ್ಲಿ ಶೇರಿ ಇರುವದಿಲ್ಲವು.

(3) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರದಿಂದ ಆ ಬಗ್ಯೆ ವಿಧಾಯಕವಾಗಿ ಅಚ್ಚು ಹಾಕಲ್ಪಟ್ಟಿರುವ ಚಲನ್‌ಗಳ ಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1896ನೇ ಇಸವಿ ಜುಲೈ ಲಾಗಾಯತು ಸರಿಯಾದ ತಿಂಗಳಗಟ್ಲೆ ಖಿಸ್ತು ಪ್ರಕಾರ ಖಿಸ್ತು ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆ ಮೇರೆ ಲೋಕಲ್ ಸೆಸ್ ಸಹಿತವಾಗಿ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಅದೇ ತಿಂಗಳ 20ನೇ ತಾರೀಖು ವ ಅದರೊಳಗೆ ಅದಕ್ಕಾಗುವ ಲೋಕಲ್ ಸೆಸ್ ಸಹಿತ ಪಾವತಿಯಾಗತಕ್ಕದ್ದು. ಹಾಗೆ ಪಾವತಿ ಆಗುವದಕ್ಕೆ ತಪ್ಪಿದರೆ, ಸದರೀ ಅಮಲ್‌ದಾರರು, ಡೆಪ್ಯುಟಿ ಕಮಿಷನರವರ ಮಂಜೂರಾತಿಯನ್ನು ಪಡೆದು ಸದರೀ ಗುತ್ತಿಗೆಯು ರದ್ದಾಗಿರುತ್ತೆಂದು ಬರಹ ಮೂಲಕ ರೆಕಾರ್ಡು ಮಾಡಿ, ಸದರೀ ಮಾಹೆ ಆಖೈರಾದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ, ಇಜಾರೆಯನ್ನು ಮರಳಿ ಹರಾಜ್ ಮಾಡುವದಕ್ಕೆ ಉದ್ಯುಕ್ತರಾಗತಕ್ಕದ್ದು. ಪರಂತು ಸದರೀ ಇಜಾರೆಯನ್ನು ಮೇಲ್ಕಂಡಂತೆ ದುಸರೇ ಹರಾಜ್ ಮಾಡುವದಕ್ಕೆ ಬದಲಾಗಿ, ಡೆಪ್ಯುಟಿ ಕಮಿಷನರವರು ತಮ್ಮ ಯುಕ್ತಾನುಸಾರ, ಅಂಥಾ ರದ್ದಾದ ಇಜಾರೆಗೆ ಶೇರಿರತಕ್ಕ ದುಕಾನುಗಳನ್ನು ಪೂಟಾಗಿ ವಿಂಗಡಿಸಿ ಪ್ರತಿ ದುಕಾನ್‌ದಾರನಿಗೂ ಅವನು ಕೊಡುವದಕ್ಕೆ ಒಪ್ಪುವಂಥಾ ಗುತ್ತಿಗೆ ಮೊಬಲಗ್ಯೆ ಬೇರೆ ಬೇರೆ ಲೈಸೆನ್ಸ್ ಕೊಡುವಂತೆ ಹುಕುಂ ಮಾಡಬಹುದು; ಪರಂತು ಅಂಥಾ ಗುತ್ತಿಗೆಯು ಒಟ್ಟು ಮೊಬಲಗು, ತಪ್ಪಿಹೋದ ಕಂಟ್ರಾಕ್ಟದಾರನು ಪಾವತಿ ಮಾಡುವದಾಗಿ ಒಪ್ಪಿ ಇದ್ದದ್ದಕ್ಕಿಂತಲೂ ಕಮ್ಮಿಯಾಗಿರಕೂಡದು.

(4) ಲೈಸೆನ್ಸದಾರನಿಂದ ಹಾಜರ್ಮಾಡಲ್ಪಟ್ಟ ಠೇವಣೀ ಮೊಬಲಗು, ಗುತ್ತಿಗೆ ವಾಯಿದೆಯ ಆಖೈರ್ ಮಾಹೆ ಯಾ ಮಾಹೆಗಳ ಖಿಸುಗಳಿಗೋಸ್ಕರ ವಸೂಲ್ ಹಾಕಲ್ಪಡಬೇಕು. ಪರಂತು ಮೇಲ್ಕಂಡ (3)ನೇ ಸಬ್ ಕ್ಲಾಜ್ ಅನುಸರಿಸಿ ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಯಾ ರದ್ದು ಮಾಡಲ್ಪಟ್ಟಾಗ, ಡಿಪಾಜಿಟ ಮೊಬಲಗು ಡೆಪ್ಯುಟಿ ಕಮಿಷನರವರ ಯುಕ್ತಾನುಸಾರ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದ ಇಜಾರೆದಾರನಿಂದ ಬರಬೇಕಾದ ಬಾಕಿಗೂ ಮತ್ತು ಇಜಾರೆಯು ಮರಳಿ ಹರಾಜ್ ಮಾಡಲ್ಪಟ್ಟದ್ದರಿಂದ ಉಂಟಾಗಬಹುದಾದ ಯಾವದಾದರೂ ನಷ್ಟದ ಮೊಬಲಗಿಗೂ ಸುದಾ ಉಪಯೋಗಿಸಲ್ಪಡಬಹುದು. ಹಾಂಗೆ ಬರಬೇಕಾದ ಬಾಕಿ ಮೊಬಲಗು ವ ನಷ್ಟದ ಮೊಬಲಗು ಸುದಾ ಲೈಸೆನ್ಸ್

ದಾರನಿಂದಾಗಲಿ ಅವನ ಜಾಮೀನುದಾರ್ ಯಾ ಜಾಮೀನುದಾರರಿಂದಲಾಗಲಿ ಯಾ ಉಭಯಂತ್ರರಿಂದಾಗಲಿ, ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗ್ಯಾಗಿ ಜಾರಿಯಲ್ಲಿರುವ ರೂಲ್ಸ್‌ನ ಅನುಸರಿಸಿ, ಶೇಕಡಾ ಸಾಲಿಯಾನಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಬಬಿನ ಮೇಲಾಗಲಿ, ಗುತ್ತಿಗೆ ಮೊಬಲಗಿನ ಯಾವ ರಿಮಿಶನ್ ಅಥವಾ ಕಮ್ಮಿ ಮಾಡುವಣವಾಗಲಿ ಅಥವಾ ಈಡು ಮೊಬಲಗಾಗಲಿ ಕೇಳಲ್ಪಡಕೂಡದು.

(5) ಗವರ್ನಮೆಂಟಿನವರಿಂದ ವಿಧಿಸೋಣವಾದ ದರಗಳ ರೀತ್ಯ ಶೇಂದಿಯು ಜನಗಳಿಗೆ ಮಾರಲ್ಪಡತಕ್ಕದ್ದು.

(6) ಮರಗಳಿಂದ ತೆಗಿಯಲ್ಪಟ್ಟ ಸ್ಥಿತಿಯಲ್ಲಿ ಶೇಂದಿಯು ಬೆರಿಕೆಯಿಲ್ಲದೆ ಮಾರಲ್ಪಡತಕ್ಕದ್ದು, ಮತ್ತು ಅಂಗಡಿಗಳಲ್ಲಿ ಅಥವಾ ಡಿಪೋಗಳಿದ್ದರೆ ಅವುಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಶ್ರ ಮಾಡಲಾಗದು.

(7) ಲೈಸೆನ್ಸದಾರನು ತನ್ನಿಂದ ತೆಗದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಶೇಂದಿಯು ಪರಿಮಾಣವನ್ನು ಕುರಿತು ಸರಿಯಾದ ಲೆಕ್ಕಗಳನ್ನಿಡಬೇಕು. ಒಯ್ಯಲ್ಪಡುವ ಶೇಂದೀ ನಿಮಿತ್ತಕವಾದ ರಹದಾರಿಗಳು ಈ ಬಗ್ಯೆ ಅಧಿಕಾರ ಕೊಡಲ್ಪಟ್ಟ ಆಫಿಸರರ ಅಜಮಾಯಿಷಿಗೂ ವ ತನಿಖಿಗೂ ಗುರಿಯಾಗತಕ್ಕದ್ದು.

(8) ವಿಧಾಯುಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಕ್ರಮವಾಗಿ ಲೈಸೆನ್ಸ್ ಪಡೆದ ದುಕಾನಗಳಲ್ಲಿ ವಿನಹ ಮತ್ತೆಲ್ಲಿಯೂ ಶೇಂದೀ ಬಿಕ್ರೀ ಮಾಡಲಾಗದು, ಮತ್ತು ಎಕ್ಸೈಜ್ ಕಮ್ಮಿಷನರವರ ಮುಂಚಿತವಾದ ಮಂಜೂರಾತಿ ಇಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು. ಶೇಂದಿಯನ್ನು ಗಿಡದ ಕೆಳಗೆ ಮಾರೋಣವೂ ಅಥವಾ ಫೈಲಿನಲ್ಲಿ ಮಾರೋಣವೂ ಅಥವಾ ಕಾನೂನು ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೆ ಇರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಡತಕ್ಕದ್ದು.

(9) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(10) ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆ ಒಳಗೆ ಲೈಸೆನ್ಸಿನಲ್ಲಿ ವ್ಯಕ್ತಪಟ್ಟಿರುವ ಫಿರ್ಕಾವಿನ ಯಾವ ಭಾಗದಲ್ಲಾದರೂ ಸಾರಾಯಿ ಮಾರತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ಕಾವಿನ ಯಾವ ಭಾಗದಲ್ಲಾದರೂ ಸಾರಾಯಿ ಬಿಕರೀ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನಾಗಲಿ, ಶೇಂದಿ ಮಾರುವ ತನ್ನ ಒಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ, ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರವಾರ್ ಎಕ್ಸೈಜ್ ಕಮ್ಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈಕೆಳಗಿರುವ ಮದರಾಸ್, ಯಾ ಮುಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ ಯಾ ಇತರ ಪರಾಯಿದೇಶದ ಯಾ ಶೀಮೆಯಲ್ಲಾಗಲಿ ಲೈಸೆನ್ಸದಾರನು ಯಾವದೊಂದು ಶೇಂದೀ ಗುತ್ತಿಗೆಯಲ್ಲಿಯೂ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(11) ಲೈಸೆನ್ಸದಾರನು ಹಾಲೀ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಅಥವಾ ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಶೇಂದೀ ಸಾಗಿಸುವದಕ್ಕೋಸ್ಕರ ಬೇಕಾದ ರಹದಾರೀ ಬುಕ್ಕುಗಳನ್ನು ಸ್ಥಳಿಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(12) ಈ ಫಿರ್ಕಾವು ಎಕ್ಸೈಜ್ ಕಮ್ಮಿಷನರ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(13) ತೆಗದುಕೊಳ್ಳಲ್ಪಟ್ಟಿದ್ದ ಫಿರ್ಕಾಗಳ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರವರು ವಿಚಾರಮಾಡದೆ ತಿರಸ್ಕರಿಸುವರು.

(14) ಉಳಿದ ಕರಾರುಗಳೂ ವ ಷರತ್ತುಗಳೂ ವಿಧಾಯುಕವಾದ ಲೈಸೆನ್ಸಗಳಲ್ಲಿ ವಿವರಿಸಿರುವ ಮೇರಿಗೆ ಇರತಕ್ಕದ್ದು.

8. ಮೇಲ್ಕಂಡ ಯಾವದಾದರೂ ಷರತ್ತಾಗಲಿ ಲೈಸೆನ್ಸಾಗಲಿ ಲೈಸೆನ್ಸುದಾರನಿಂದಾದರೂ ಅಥವಾ ಆತನ ಅಂತರ್ಯಾ ತಿಳುವಳಿಕೆ ಯಾ ಸಮ್ಮತಿಯಿಂದ ಆತನ ನೌಕರರಿಂದಲಾದರೂ ಉಲ್ಲಂಘಿಸಲ್ಪಟ್ಟರೆ, ಅಥವಾ ಲೈಸೆನ್ಸುದಾರನು ತನ್ನ ದುಕಾನಗಳನ್ನು ಇಡುವದಕ್ಕಾದರೂ ಯಾ ತನ್ನ ಇಜಾರೆಯ ಕೆಲಸಗಳನ್ನು ಕ್ರಮವಾದ ಎಚ್ಚರಿಕೆಯೊಡನೆ ನಡಿಸುವದಕ್ಕಾದರೂ ಉದಾಸೀನ ಮಾಡಿದರೆ ಅಂಥಾ ಪ್ರತಿ ಒಂದು ಉಲ್ಲಂಘನೆ ಯಾ ಉದಾಸೀನದ ಬಗ್ಯೂ ಪ್ರತಿ ಇಜಾರೆ ಬಿಕರಿ ಲೈಸೆನ್ಸದಾರನಿಗೆ 50 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಯನ್ನು ವಿಧಿಸುವ ಬಗ್ಯೆ ಡೆಪ್ಯುಟಿ ಕಮ್ಮಿಷನರವರಿಗೆ ನ್ಯಾಯವಾಗಿರತಕ್ಕದ್ದು; ಅಥವಾ ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ಅವರಿಂದ ಇಡೋಣಾದ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡಲಿಕ್ಕೂ, ಲೈಸೆನ್ಸನ್ನು ರದ್ದುಮಾಡಲಿಕ್ಕೂ, ಲೈಸೆನ್ಸುದಾರನನ್ನ ನಷ್ಟಕ್ಕೆ ಗುರಿಮಾಡಿ ಒಟ್ಟು ಸ್ವಾತಂತ್ರ್ಯವನ್ನು ಮರಳಿ ಹರಾಜು ಮಾಡಲಿಕ್ಕೂ, ಅಥವಾ ಇಜಾರೆ ಅಮಾನಿಯಲ್ಲಿ ಜರಿಗಿಸುವದಕ್ಕೂ ಅವರಿಗೆ ಮುಖ್ತ್ಯಾರೀ ಇರತಕ್ಕದ್ದು. ಒಂದು ಇಜಾರೆಯು ರದ್ದು ಮಾಡಲ್ಪಟ್ಟರೆ ಅಂಥಾ ಇಜಾರೆಯು ಪೂರ್ತಿಯಾದ ಕಾಲಕ್ಕೆ ಬರಬೇಕಾದ ತಮಾಂ ಮೊಬಲಗೂ ತಕ್ಷಣ ಪಾವತಿ ಮಾಡಲ್ಪಡಬೇಕು; ಮತ್ತು ಹಾಗ ಇಜಾರೆ ರದ್ದು ಮಾಡಲ್ಪಟ್ಟದ್ದರಿಂದ ಯಾ ಮರಳಿ ಹರಾಜಿನಿಂದ ಗವರ್ನಮೆಂಟಿಗೆ ಉಂಟಾಗುವ ಎಲ್ಲಾ ನುಕ್ಸಾನುಗಳೂ ಲೈಸೆನ್ಸದಾರನಿಂದ ಯಾ ಅವನ ಜಾಮೀನುದಾರನಿಂದ ಮೇಲ್ಕಂಡ 4ನೇ ಪ್ಯಾರಾ ಅನುಸರಿಸಿ ಮರಳಿ ಹರಾಜಿಗಾಗಿ ವಿಧಿಸಿರುವ ಮೇರೆ ಭರ್ತೀಮಾಡಲ್ಪಡಬೇಕು. ಅಂಥಾ ನಷ್ಟ ವ ದಂಡಕ್ಕಾಗಿ ವಸೂಲಾಗಬೇಕಾದ ತಮಾಂ ಮೊಬಲಗುಗಳೂ ಜಮೀನ್ ಕಂದಾಯದ ಬಾಕಿಯ ರೀತಿಯಲ್ಲಿ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣೀ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳೋಣ, ಲೈಸೆನ್ಸ್ ರದ್ದುಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಅಥವಾ ನಿರೂಪಣೆಗಳು ಯಾ ರೂಲ್ಸ್‌ಗಳ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸದಾರನನ್ನಾಗಲಿ, ಯಾ ಆತನ ಏಜಂಟನನ್ನಾಗಲಿ, ಯಾ ಆತನ ನೌಕರನನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕ ಪಡಿಸುವದೆಂದು ಭಾವಿಸಲ್ಪಡಕೂಡದು.

963

1896–97ನೇ ವರುಷಕ್ಕಾಗಿ ಪ್ರತ್ಯೇಕ ಸಾರಾಯಿ ಅಂಗಡಿಗಳ ಹರಾಜು.

ನಂಬರ 8032 A.—245-A. ತಾರೀಖು 5ನೇ ಮಾರ್ಚಿ 1896.

1. ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲ್ ಪಟ್ಟಿಯಲ್ಲಿ * ನಮೂದಾಗುವ ಜಾಗಗಳಲ್ಲಿರುವ ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1896ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1897ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸಾರಾಯಿ ಬಿಕರೀ ಮಾಡತಕ್ಕ ಹಕ್ಕನ್ನು ಸದರೀ ಪಟ್ಟಿಯಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ನೇಮಿಸಲ್ಪಟ್ಟ ಆಫೀಸರು ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲ್ ಮಾಡುವುದಕ್ಕೆ ಮುಂಚಿತವಾಗಿ 60 ರೂಪಾಯಿ ಯಾ ಹರಾಜು ಮಾಡತಕ್ಕ ಆಫೀಸರರು ಗೊತ್ತು ಮಾಡುವ ಬೇರೇ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಸದರೀ ಅಂಗಡಿಗಳಿಗೆ ಯಾರ ಟೆಂಡರ ದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರು ಮಾಡಲ್ಪಟ್ಟ ದರಖಾಸ್ತನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು, ಅಥವಾ ಅವರಿಂದ ಕ್ರಮವಾಗಿ ಅಪ್ಪಣೆಪಡದು ಇರುವ ಅವರ ತರಫ್ ಮುಖ್ತಾರೀಕರನ್ನ ಕಳುಹಿಸಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸ ಮಾಡಲ್ಪಡುತ್ತವೆ. ಹರಾಜ್ ನಡಿಯುತ್ತಾ ಬಂದಹಾಗೆಲ್ಲಾ ಪ್ರತಿ ಅಂಗಡಿಗೆ ಯಾರ್‍ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆಯಾಯ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣೀ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇ ಕಲಮಿನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿಗಾಗಲಿ ಅಥವಾ ಮತ್ಯಾವ ಅಂಗಡಿಗೋಸ್ಕರವಾಗಿ ಆಗಲಿ ಸವಾಲ್ ಮಾಡಕೂಡದು.

4. ಯಾರ್‍ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂಡಂತೆ ಠೇವಣೀ ಮೊಬಲಗುಗಳನ್ನ ಕಟ್ಟಿರುತ್ತಾರೋ ಆ ಜನಗಳು ಹರಾಜು ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಒಂದು ಅಂಗಡಿಯ ಎರಡು ತಿಂಗಳ ಗುತ್ತಿಗೇ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣೀ ಕಟ್ಟಿ ವಿಧಾಯುಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸುಗಳನ್ನ ಪಡಿಯತಕ್ಕದ್ದು, ಮತ್ತು ಎದರು ಒಡಂಬಡಿಕೆಗಳನ್ನು ಬರೆದುಕೊಡತಕ್ಕದ್ದು. ಈ ರೀತೀಲಿ ಠೇವಣೀ ಇಡುವುದಕ್ಕೆ ಯಾ ಲೈಸೆನ್ಸು ಪಡಿಯಲಿಕ್ಕೆ ಯಾ ಎದರು ಒಡಂಬಡಿಕೆಯನ್ನು ಬರೆದುಕೊಡಲಿಕ್ಕೆ ಯಾವ ಮನುಷ್ಯನಾದರೂ ತಪ್ಪಿದರೆ ಸದರೀ ಅಂಗಡಿಯು ಯಾ ಅಂಗಡಿಗಳು ಅಂಥಾ ಮನುಷ್ಯರ ಜವಾಬ್‌ದಾರೀ ಮೇಲೆ ಪುನಹ ಹರಾಜು ಮಾಡಲ್ಪಡುತ್ತವೆ; ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೇ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸ್‌ದಾರರು ಅಥವಾ ಆತನಿಂದ ವರ್ಗಪಡದವರನ್ನ ಹೊಂದಿರುತ್ತೆ.

5. ಮೇಲಿನ 4ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡೆಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ ಮತ್ತು ದುಸರೇ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲನೇ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ

---

* ಪಟ್ಟಿಬಗ್ಯೆ 1896ನೇ ಇಸವಿ ಮಾರ್ಚಿ 26ನೇ ಮುಸ್ತಂ ಸಪ್ಲಿಮೆಂಟ್ ಗೆಜೆಟ್ಟನ್ನು ನೋಡತಕ್ಕದ್ದು.

2.c

ಹರಾಜಾದ್ದರಲ್ಲಿ ಚಡ ಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದರನ್ನು ಆತನು ಭರ್ತಿ ಮಾಡಿಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಂಡಿರುವ ಠೇವಣೀ ಮೊಬಲಗುಗಳನ್ನು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರೀ ಠೇವಣೀ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣೀ ಮೊಬಲಗನ್ನೆಲ್ಲಾ ಸರಕಾರಕ್ಕೇನೇ ಜಮಾ ಮಾಡಿಕೊಳ್ಳತಕ್ಕದ್ದು.

6. ಹಿಂದಿನ ಕೆಲವು ವರುಷಗಳ ಬಾಬತು ಪ್ರತಿ ಅಂಗಡಿಯ ಗುತ್ತಿಗೆ ಮೊಬಲಗು ಖರ್ಚಾದ ಸಾರಾಯಿ ವಗೈರೆ ತಪ್ಸೀಲ್ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಮೇಲಿನ 4ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ, ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ. ಪರಂತು ಬೆಂಗಳೂರು ಸೆಂಟ್ರಲ್ ಡಿಸ್ಟಿಲೆರಿಯಲ್ಲಿ ತಯಾರಾಗುವ ಯಾವ ಜೋರಿನದೇ ಆಗಲಿ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗುಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ಮಾರಲಿಕ್ಕೆ ಹಕ್ಕು ಇರಲಾರದು. ಈ ಬಾಬತು ಷರಾಬನ್ನು ವ ಮದ್ಯಗಳನ್ನು ಮಾರುವದಕ್ಕೆ ಅನ್ಯದೇಶದ ಸಾರಾಯಿಗಳ ಅಂಗಡಿಕಾರರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವತಂತ್ರದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸ್ಥಳೀಯವಾದ ಸರ್ಕಾರದ ಖಜಾನೆಗೆ 1896ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳುಗಟ್ಲೇ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಮಾಹೆಯ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್‌ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಇಜಾರೆ ದಂಡವಾಗಿ ಕಳೆದುಕೊಳ್ಳಲ್ಪಟ್ಟಿರುತ್ತೆಂದು ಬರಹ ಮೂಲಕವಾಗಿ ರಿಕಾರ್ಡು ಮಾಡಿ ಮಾಹೆ ಆಖೈರ್ ಆದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ ಅಂಗಡಿಯನ್ನು ಮರಳಿ ಹರಾಜು ಮಾಡತಕ್ಕದ್ದು. ಲೈಸೆನ್ಸ್‌ದಾರನಿಂದ ಇಡಲ್ಪಟ್ಟ ಠೇವಣೀ ಮೊಬಲಗು ಇಜಾರೆ ವಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಅಂಗಡಿಗಳು ದುಸರೇ ಹರಾಜು ಮಾಡಲ್ಪಟ್ಟಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗದುಕೊಳ್ಳಲ್ಪಡಬಹುದು, ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಅಂಗಡಿಗಳು ದುಸರೇ ಹರಾಜು ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತೀ ಮಾಡುವ ಬಗ್ಗೆ ಉಪಯೋಗಿಸಲ್ಪಡಬಹುದು. ಅಂಥಾ ಬರಬೇಕಾದ ಬಾಕಿಗಳೂ ಮತ್ತು ನಷ್ಟದ ಮೊಬಲಗುಗಳೂ ಸುದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಶೇಕಡ ಸಾಲಿಯಾನ ಆರ್ರಂತೆ ಆಗುವ ಬಡ್ಡಿ ಬೇಖಿಲ್ ಲೈಸೆನ್ಸದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಗೆ ಅಥವಾ ಈಡು ಮೊಬಲಗು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

(3) ಈ ಸರ್ಕಾರಕ್ಕೆ ಸಾರಾಯಿಯನ್ನು ವ ಇತರ ಒಳದೇಶದ ಷರಾಬನ್ನು ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರರಾದ ಪ್ಯಾರಿ ಅಂಡ್ ಕೋ ಎಂಬ ವರ್ತಕರಿಂದ ಲೈಸೆನ್ಸದಾರನು ತನ್ನ ಅಂಗಡಿಯಲ್ಲಿ ಮಾರುವದಕ್ಕೋಸ್ಕರ ಡಿಸ್ಟಿಲೆರಿಯಲ್ಲಿ ಯಾ ಸರ್ಕಾರದ ಅಪ್ಪಣೇ ಮೇರೆ ಏರ್ಪಾಡಾಗಿರುವ ಬಾಂಡೆಡ್ ಡೆಪೋಯಿಂದ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ $10\frac{1}{2}$ ಆಣೆ ದರದ ಮ್ಯಾರೆ ಕ್ರಯವನ್ನು ಪಾವತಿ ಮಾಡಿ ಕೊಂಡುಕೊಳ್ಳಬೇಕು. ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 5—5—0 ದರದ ಪ್ರಕಾರ ಜನಗಳಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನೂ ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದ ಮೇರಿಗೆ ಮ್ಯುನಿಸಿಪಲ್ ಕಾನೂನ್ ಪ್ರಕಾರ ರೆಜಿಸ್ಟರ್ ಫೀ ಯಾ ರುಸುಮನ್ನು ಕೊಡಬೇಕು; ಮತ್ತು ಆತನು ಪ್ರತಿ ತಿಂಗಳಲ್ಲಿಯೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಮೇಲ್ಕಂಡ ಖರೀದಿ ದರ ಮತ್ತು ರುಸುಂಗಳು ಶಿವಾಯಿ ಸರ್ಕಾರದ ಅಪ್ಪಣೇ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಬಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ವಿಧಾಯಕವಾಗಿರುವ 4 ರೂಪಾಯಿ ದರದ ಮೇರೆ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತೀ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ವ ಖರೀದಿ ಮೊಬಲಗನ್ನೂ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬಲಗನ್ನೂ ತೆಗದುಕೊಳ್ಳಲು ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನ ವಶಕ್ಕೆ ಪಾವತೀ ಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರೀ ಆಫಿಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟೀ ಮೊಬಲಗಿಗೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿದ ತಾರೀಖು ಮತ್ತು ಘಂಟೆಯನ್ನ ನಮೂದುಮಾಡಿ ಎಕ್ಸೈಜ್ ಕಮ್ಮಿಷನರವರ ಆಫಿಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೇದಾರನು ಬಾಂಡೆಡ್ ಡಿಪೋಯಿಂದ ಸಾರಾಯಿ ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖ, ಸಾರಾಯಿಯು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ತೆಗದುಕೊಳ್ಳಲ್ಪಟ್ಟದ್ದ ಅಂಗಡಿಗಳ ಪೈಕಿ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರವರು ವಿಚಾರಮಾಡದೆ ತಿರಸ್ಕರಿಸುವರು.

(9) ಲೈಸೆನ್ಸದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(10) ಬಾಕೀ ಕರಾರುಗಳು ವ ಷರತ್ತುಗಳು ವಿಧಾಯಕವಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

8. ಲೈಸೆನ್ಸುದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸುದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣೀ ಮೊಬಲಗನ್ನ ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರೀ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1896ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋ

ಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲು ಸದರೀ ಲೈಸೆಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದುಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿಮಾಡ ಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜರ್ಮಾ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟ ಗಳು ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನ ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆಸುದಾ ರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

1896–97ನೇ ಸಾಲಿಗೆ ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ಹರಾಜು.

ನಂ. 8032–E. X. 245, ತಾರೀಖು 6ನೇ ಮಾರ್ಚಿ 1896.

1. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ * ವಿವರಿಸಲ್ಪಟ್ಟಿರುವ ಗೊತ್ತಾದ ಪ್ರದೇಶಗಳಲ್ಲಿ ಯಾ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ 1896ನೇ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯತು 1897ನೇ ಇಸವಿ ಜೂ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲ್ ಆಖೈರವರಿಗೆ ಸಾರಾಯಿಯನ್ನು ಬಿಕರಿಮಾಡುವ ಬಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮ್ಮಿಷನರುಗಳಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಶಿವಮೊಗ್ಗ ಡಿಸ್ಟ್ರಿಕ್ಟಿನ ಹರಾಜನ್ನು ಆ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್‌ನಲ್ಲಿಯೂ ಇತರ ಡಿಸ್ಟ್ರಿ ಕ್ಟುಗಳ ಬಾಬತನ್ನು ಆಯಾ ಡಿಸ್ಟ್ರಿಕ್ಟುಗಳ ತಾಲ್ಲೂಕು ಕಸಬಾಗಳಲ್ಲಿಯೂ ಮೇಲ್ಕಂಡ ಪಟ್ಟಿಯಲ್ಲಿ ನಮೂ ದ್ಮಾಡಿರುವ ತಾರೀಖುಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಹರಾಜ್ ಹಾಕಲ್ಪಡಲು ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜ್‌ಗಳು ಸದರೀ ತಾರೀಖುಗಳಲ್ಲಿ ಪೂರೈಸದೇಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳ ಪೈಕಿ ಒಂಟಿಯಾಗಿ ಯಾವದಕ್ಕಾದರೂ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಹರಾಜ್ ಹಾಕುವ ಆಫೀಸರರು ಒಂದಕ್ಕಿಂತ ಹೆಚ್ಚು ಫಿರ್ಕಾಗಳನ್ನ ಸೇರಿಸಿಯಾಗಲಿ ಫಿರ್ಕಾಗಳನ್ನ ತಾಲ್ಲೂಕುವಾರ್ ಹರಾಜ್ ಮಾಡುವದರ ಮೂಲಕವಾಗಿ ಆಗಲಿ ಯಾ ಹಾಲಿ ಅಂಗಡಿಗಳನ್ನುಂಟಾಗದೆ ಇರುವ ವಿಶೇಷ ಫಿರ್ಕಾಗಳನ್ನು ಮುಂದೆ ಫೈಸಲ್ಮಾಡಲು ಆವಶ್ಯಕ ವಿದ್ದರೆ ಉಳಿಸಿ ಕೊಳ್ಳುವದರ ಮೂಲಕವಾಗಲಿ ಯುಕ್ತಾನುಸಾರ ಸದರೀ ಫಿರ್ಕಾಗಳನ್ನ ಬದಲಾಯಿಸಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಬಟ್ಟು ಸ್ವಾತಂತ್ರ್ಯದ ಹಕ್ಕು ಫಿರ್ಕಾವಾರ್ ಹರಾಜ್ ಮಾಡಲ್ಪಡುತ್ತೆ, ಹರಾಜ್ ಮಾಡಲ್ಪಟ್ಟ ಪ್ರತಿ ಫಿರ್ಕಾವೂ ಅಂಗೀಕರಿಸಲ್ಪಡತಕ್ಕ ಛಡ ಸವಾಲ್‌ದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ತಮ್ಮ ಯುಕ್ತಾನುಸಾರ ಸವಾಲನ್ನ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂ ಜೂರ್ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುಖ್ತಾರೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು. ಯಾವದಾದರೊಂದು ಫಿರ್ಕಾದ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾ ಜಿನಲ್ಲಿ ಕೊಡಲ್ಪಟ್ಟ ಸವಾಲುದಾರನು ಎರಡನೇ ಫಿರ್ಕಾದ ಹರಾಜ್ ಷುರುವಾಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ಠೇವಣೀ ಇಡಬೇಕು. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಗಳೊಳಗಾಗಿ ಮೊದಲು ಇಡೋಣಾದ ಠೇವಣೀ ದೇಖೀಲ್ ಆತನ ಎರಡು ತಿಂಗಳ ಗುತ್ತಿಗೇ ಹಣಕ್ಕೆ ಸಮಾನ ವಾಗುವಷ್ಟು ಠೇವಣೀಯನ್ನಿಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿರುವ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಡೆಪ್ಯುಟಿ ಕಮ್ಮಿಷನರವರು ಅಪ್ಪಣೆ ಕೊಡುವ ರೀತ್ಯಾ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಃ ಹರಾಜ್ ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ದುಸರೇ ಹರಾಜಿಗಳು ತಪ್ಪಿತಸ್ಥನಾದ ಮೇಲ್ಕಂಡ ಸವಾಲ್‌ದಾರನ ಜವಾಬ್ದಾರೀಮೇಲೆ ನಡಿಸಲ್ಪಡುವವು. ಸದರೀ ಸವಾಲ್‌ದಾರನು ಯಲ್ಲಾ ಆದಾಯವನ್ನೂ ಕಳೆದು ಕೊಳ್ಳತಕ್ಕದ್ದಲ್ಲದೆ ದುಸರೇ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಷುರೂ ಹರಾಜಿನ ಷರತು ಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ಪಾವತಿಯಾಗಬೇಕಾಗಿದ್ದ ಬಟ್ಟು ಮೊಬಲಗಿನಲ್ಲಿ ದುಸರೇ ಹರಾಜಿನಲ್ಲಿ ಪಡದ ಸವಾಲ್‌ದಾರನಿಂದ ಪಾವತಿಯಾಗತಕ್ಕ ಬಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ಪಾವತೀ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕೋಸ್ಕರ ವಜಾ ಮಾಡಲ್ಪಡತಕ್ಕದ್ದು. ತದ ನಂತರ ಬಾಕಿ ಏನಾದರೂ ನಿಂತಲ್ಲಿ ಆ ಮೊಬಲಗು ಜರ್ಮಾ ಕಂದಾಯವು ಯಾವ ರೀತಿಯಾಗಿ ವಸೂಲ್ಮಾಡ ಲ್ಪಡುತ್ತೋ ಅದೇ ರೀತಿಯಾಗಿ ವಸೂಲ್ಮಾಡಲ್ಪಡುವದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ

---

* ಪಟ್ಟಿಬಗ್ಯೆ 1896ನೇ ಇಸವಿ ಮಾರ್ಚಿ 26ನೇ ಮುಕ್ಕಾಂ ಸಪ್ಲಿಮೆಂಟ್ ಗೆಜೆಟ್ಟನ್ನು ನೋಡತಕ್ಕದ್ದು.

267

ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುವದು.

5. ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳನ್ನ ಆಚರಿಸುವದಕ್ಕೆ ಬದ್ಧನಾಗಿರಲುಳ್ಳವನೆಂದು ಒಂದು ಕರಾರನ್ನು ಬರದು ರುಜುಮಾಡಿ ಕೊಡತಕ್ಕದ್ದು. ಕೊಂಡು ಕೊಂಡವನು ಕರಾರಿನ್ನ ಸ್ಥೈರ್ಯ ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಸಿಷ್ಟ ಠೇವಣೀ ಮೊಬಲಗೂ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಬಟ್ಟಿ ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂಗಳಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದೀದಾರನ ಜವಾಬ್ದಾರಿ ವ ನಷ್ಟಕ್ಕೆ ಗುರಿಯಾಗಿ ದುಸರೇ ಹರಾಜ್ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಹರಾಜ್ ಮಂಜೂರಾದ ಮೇಲೆ ಸದರೀ ಖರೀದೀದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನ ಪಡದವರು ಸದರೀ ಕರಾರಿಗೆ ಜವಾಬ್ದಾರರಾಗಿರುತ್ತಾರೆ.

6. ಹಿಂದಿನ ಕೆಲವು ಸಾಲುಗಳಲ್ಲಿ ಹಾಲಿ ಫಿರ್ಕಾಗಳ ಬಾಬತು ಅಂಗಡಿಗಳಲ್ಲಿಯೂ ಮತ್ತು ಕೋಠಿಗಳಲ್ಲಿಯೂ ಖರ್ಚಾದ ಸಾರಾಯಿಯ ತಪಶೀಲೂ ಮತ್ತು ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗೂ ವಗೈರೆ ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟ ಕೂಡ್ಲೆ ಖರೀದೀದಾರನಿಗೆ ಡೆಪ್ಯುಟಿ ಕಮಿಷ್ನರವರು ಈ ಕೆಳಗೆ ಉದಹರಿಸಿರುವ ಷರತುಗಳಿಗೆ ಒಳಪಟ್ಟು ವಿಧಿಸಲ್ಪಟ್ಟ ನಮೂನೆಯಲ್ಲಿ ಸದರೀ ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನ ನಮೂದಿಸಿ ಒಂದು ಲೈಸೆನ್ಸನ್ನ ಕೊಡುವರು.

(1) ಸದರೀ ಬಟ್ಟಿ ಸ್ವಾತಂತ್ರ್ಯದ ಹಕ್ಕು ಸಾಧಾರಣವಾಗಿ 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನ ಮಾರುವದಕ್ಕೆ ಮಾತ್ರವೇ ಲಗಾವಾಗುತ್ತೆ. ಪರಂತು ಡೆಪ್ಯುಟಿ ಕಮಿಷ್ನರವರ ಯಾ ಇವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರ ವಿಶೇಷ ಅಪ್ಪಣೆ ಮೂಲಕ 30° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನೂ ಮಾರಬಹುದು. ಆದರೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಯಾವ ಜೋರಿನದಾದರೂ ಡಬ್ಬಲ್ ಡಿಸ್ಟಿಲ್ಡ್ ಯಾನೆ, ದುಗಣೀ ಭಟ್ಟೀ ಇಳಿಸಲ್ಪಟ್ಟಿರುವ ಷರಾಬಗಳನ್ನೂ ಮತ್ತು ಇತರ ವಿಶೇಷವಾದ ಸಾರಾಯಿಗಳನ್ನೂ ಮಾರಲಿಕ್ಕೆ ಹಕ್ಕು ಇರುವದಿಲ್ಲವು. ಈ ಷರಾಬುಗಳನ್ನೂ ವ ಸಾರಾಯಿಗಳನ್ನೂ ಮಾರಲಿಕ್ಕೆ ಪರಾಯಿ ದೇಶದ ಸಾರಾಯಿಗಳ ಅಂಗಡಿಕಾರರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರದಿಂದ ಆ ಬಗ್ಗೆ ವಿಧಾಯಕವಾಗಿ ಅಚ್ಚು ಹಾಕಿಸಲ್ಪಟ್ಟಿರುವ ಚಲ್ನಗಳ ಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1896ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಗೆ ಪಾವತಿಯಾಗತಕ್ಕದ್ದೋ ಆ ತಿಂಗಳನ ಗುತ್ತಿಗೇ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿ ಮಾಹೆಯ ಇಜಾರೇ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ ತತ್ಪೂರ್ವವಾಗಲಿ ಪಾವತಿಮಾಡಲ್ಪಡಬೇಕು. ಹಾಗೆ ಪಾವತಿಮಾಡಲಿಕ್ಕೆ ತಪ್ಪಿದರೆ ಅಮಲ್‌ದಾರರು ಡೆಪ್ಯುಟಿ ಕಮಿಷ್ನರ ಹುಕುಂ ಪಡೆದು ಸದರೀ ಲೈಸೆನ್ಸು ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ರಿಕಾರ್ಡುಮಾಡಿ ಮಾಹೆ ಆಖೈರ್ ಆದಕೂಡಲೆ ಸಾಧ್ಯವಾದಷ್ಟುತ್ವರೆಯಲ್ಲಿ ಇಜಾರೆಯನ್ನು ಮರಳಿ ಹರಾಜು ಮಾಡತಕ್ಕದ್ದು. ಪರಂತುಮೇಲ್ಕಂಡಂತೆ ಇಜಾರೆಯನ್ನು ಪುನಃ ವಿಕ್ರಯಿಸುವದಕ್ಕೆ ಬದಲಾಗಿ ಡೆಪ್ಯುಟಿ ಕಮಿಷ್ನರವರು ಅವರ ಯುಕ್ತಾನುಸಾರ ಹಾಗೆ ತಪ್ಪಿಹೋದ ಇಜಾರೆಯನ್ನುಹಾಲಿ ಇರತಕ್ಕ ಅದಕ್ಕೆ ಶೇರಿದ ದುಕಾನವಾರಾಗಿ ವಿಂಗಡಿಸಲ್ಪಟ್ಟ ಪ್ರತಿ ಬೇರೆ ಬೇರೆ ದುಕಾನ್‌ದಾರನಿಗೂ ಅವನು ಪಾವತಿ ಮಾಡುವದಕ್ಕೆ ಒಪ್ಪುವ ಗುತ್ತಿಗೆ ಮೊಬಲಗಿಗೋಸ್ಕರ ಒಂದು ಲೈಸೆನ್ಸ್ ಕೊಡುವಂತೆ ಅಮಲ್‌ದಾರರಿಗೆಹುಕುಂ ಕೊಡಬಹುದು. ಪರಂತು ಹೀಗೆ ಕೊಡೋಣಾದ ಗುತ್ತಿಗೆಯ ಒಟ್ಟು ಮೊಬಲಗು ತಪ್ಪಿಹೋದ ಇಜಾರೆದಾರನು ಪಾವತಿ ಮಾಡುವದಕ್ಕೆ ಒಪ್ಪಿ ಇದ್ದ ಮೊಬಲಗಿಗಿಂತಲೂ ಕಮ್ಮಿ ಆಗಿರಕೂಡದು.

(3) ಲೈಸೆನ್ಸ್‌ದಾರನಿಂದ ಇಡಲ್ಪಟ್ಟ ಠೇವಣೀ ಮೊಬಲಗು ಇಜಾರೆ ವಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಮೇಲ್ಕಂಡಂತೆ ಎರಡನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಅಥವಾ ವಿಂಗಡಿಸಲ್ಪಟ್ಟಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮಿಷ್ನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗೆದುಕೊಳ್ಳಲ್ಪಡಬಹುದು ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕೀಗೋಸ್ಕ

(a) ಈ ಸರ್ಕಾರಕ್ಕೆ ಸಾರಾಯಿಯನ್ನೂ ಒಳದೇಶದ ಇತರ ಷರಾಬುಗಳನ್ನೂ ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀವಾರ್ರಾದ ಪ್ಯಾರಿ ಅಂಡ್‌ಕೋ ಎಂಬ ವರ್ತಕರಿಂದಾಗಲಿ ಯಾ ಸರ್ಕಾರದ ಅಪ್ಪಣೆ ಮೇರೆ ಏರ್ಪಾಡಾಗುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದಾಗಲಿ ಲೈಸೆನ್ಸ್‌ದಾರನು ತನ್ನ ಫಿರ್ಕಾ ಅಂಗಡಿಗಳಿಗೆ ಸರಬರಾಯಿಗೋಸ್ಕರ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಅಂಥಾ ಭಟ್ಟೀದಾರರಿಂದ ಸರಬರಾಯಿ ಆಗುವ ಸಾರಾಯಿನ ದರವು 20° ಡಿಗ್ರಿ, ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ $10\frac{1}{2}$ ಆಣೆಪ್ರಕಾರವೂ, ಮತ್ತು ಸದರೀ ಜೋರಿಗಿಂತ ಕಮ್ಮಿ ಜೋರುಳ್ಳ ಸಾರಾಯಿಗಳಿಗೆ ಕ್ಯಾಸಲ್ಲಾ ಎಂಬುವರ ಸೂತ್ರಗಳನ್ನನುಸರಿಸಿ ಅದೇ ದಾಮಾಷಾಯಿ ದರಗಳ ಪ್ರಕಾರವೂ ಇರತಕ್ಕದ್ದು. ಲೈಸೆನ್ಸ್‌ದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಸಾರಾಯಿಯ ಗ್ಯಾಲನ್ 1ಕ್ಕೆ 5–5–0 ದರದ ಪ್ರಕಾರವು ಸದರೀ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನಗಳಿಗೆ ಮಾರತಕ್ಕದ್ದು.

b) ಮೇಲ್ಕಂಡ ಖರೀದಿ ದರ ಶಿವಾಯಿ ಡಿಸ್ಟಿಲೇರಿಯಾನೆ ಭಟ್ಟೀ ಗಡಂಗಿನಿಂದ ಯಾ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್‌ಪ್ರೂಫ್ ಜೋರುಳ್ಳ ಸಾರಾಯಿಯ ಗ್ಯಾಲನ್ 1ಕ್ಕೆ 4 ರೂಪಾಯಿ ದರದಂತೆ ಎಕ್ಸೈಜ್ ಡ್ಯೂಟಿಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಸ್ಥಳೀಯ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

5) ಲೈಸೆನ್ಸ್‌ದಾರನು ಮೇಲ್ಕಂಡ ಡ್ಯೂಟಿ ಮೊಬಲಗನ್ನು ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ ವಿಧಿಸೋಣಾಗಿರುವ ನಮೂನೆಯಲ್ಲಿ ಒಂದು ರಶೀತಿಯನ್ನು ಪಡಿಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಯ ಸರಬರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಪಡಿಸಿ ಅಂಥಾ ಷರಾಬಿಗೆ ವಿಧಿಸಿರುವ ಖರೀದಿಯನ್ನು ಭಟ್ಟೀದಾರರಿಗಾಗಲಿ ಯಾ ಅವರ ಏಜಂಟರಿಗಾಗಲಿ ಯಾ ಈ ಬಗ್ಗೆ ಸರ್ಕಾರದಿಂದ ನಿಯಮಿಸಲ್ಪಡುವ ಯಾವ ಮನುಷ್ಯನಿಗಾಗಲಿ ಪಾವತಿ ಮಾಡಿದ ನಂತರ ಡಿಸ್ಟಿಲೇರಿ ಜಿಮ್ಮೇಲಿರುವ ಅಸಿಸ್ಟೆಂಟ್ ಸೂಪರ್ ವೈಜರ್ ಅಥವಾ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರೀ ಆಫಿಸರ್ರ ರಶೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮೊಬಲಗ್ಗೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿರುವ ತಾರೀಖು ಮತ್ತು ಘಂಟೆ ನಮೂದ್ಮಾಡಿ ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫಿಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಅಸಿಸ್ಟೆಂಟ್ ಸೂಪರ್ ವೈಜರವರು ಅಥವಾ ಮೇಲೆ ಹೇಳಲ್ಪಟ್ಟ ಇತರ ಆಫಿಸರರು ಯಾ ಬಾಂಡೆಡ್ ಡಿಪೋ ಜಿಮ್ಮೇದಾರನು ವಿಧಾಯಕವಾಗಿರುವ ನಮೂನೆಯಲ್ಲಿ ಡಿಸ್ಟಿಲೇರಿ ಅಥವಾ ವೇರ್ ಹೌಸಿನಿಂದ ಸಾರಾಯಿ ರವಾನೆ ಮಾಡುವದಕ್ಕೋಸ್ಕರ ಜಾರೀಲಿರುವ ನಿಬಂಧನೆಗಳ ಪ್ರಕಾರ ವಿಧಾಯಕವಾದ ನಮೂನೆಯಲ್ಲಿ ದ್ವಿಪ್ರತಿಯಾಗಿ ರಹದಾರಿಯನ್ನು ಕಳುಹಿಸತಕ್ಕದ್ದು. ಬಾಂಡೆಡ್ ಡಿಪೋಯಿಂದ ಸಾರಾಯಿಯನ್ನು ಪಡಿಯುವಂಥಾ ಲೈಸೆನ್ಸ್‌ದಾರನು ಅಂಥಾ ಸಾರಾಯಿಯ ಖರೀದಿಯನ್ನೂ ಮತ್ತು ಡ್ಯೂಟಿ ಮೊಬಲಗನ್ನೂ ಸಹ ಸ್ಥಳೀಯ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಬೇಕು.

) ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿನ ಲೈಸೆನ್ಸ್‌ದಾರನು ತನ್ನ ಫಿರ್ಕಾ ಸರಹದ್ದಿನಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಲೂ ಮತ್ತು ತನ್ನಿಂದಲೂ ಅವಶ್ಯಕವೆಂದು ಎಣಿಸಲ್ಪಡತಕ್ಕ ಸ್ಥಳ ಯಾ ಸ್ಥಳಗಳಲ್ಲಿ ಕೋಠಿ ಯಾ ಕೋಠಿಗಳನ್ನು ಸ್ಥಾಪಿಸತಕ್ಕದ್ದು. ಈ ಕೋಠಿಗಳಿಗೆ ತಾನು ಖರೀದಿಗೆ ಪಡದ ಸಾರಾಯಿಯನ್ನು ಅಂಗಡಿಕಾರರಿಗೆ ಕೊಡುವದಕ್ಕೆ ತತ್ಪೂರ್ವವೇ ಹಾಲಿ ಜಾರೀಲಿರುವ ನಿಬಂಧನೆಗಳನ್ನನುಸರಿಸಿ ರವಾನಿಸಿದ ಸರಕನ್ನು ಮೊಕಾಬಿಲೆ ವಗೈರೆ ಮಾಡತಕ್ಕ ಬಗ್ಗೆ ತೆಗದುಕೊಂಡು ಹೋಗತಕ್ಕದ್ದು. ಸದರೀ ಕೋಠಿಗಳು ಡೆಪ್ಯುಟಿ ಕಮ್ಮಿಷನರವರ ಯಾ ಎಕ್ಸೈಜ್ ಇಲಾಖೆ ಇತರ ಆಫಿಸರರ ತನಿಖೆ ಬಗ್ಗೆ ಸದಾ ಖುಲ್ಲಾವಾಗಿರತಕ್ಕದ್ದು. ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಲೈಸೆನ್ಸ್ ಹೊಂದದೆ ಅಂಥಾ ಕೋಠಿಯು ಇಡಲ್ಪಡಲಾಗದು. ಉಳಿದ 7 ಡಿಸ್ಟ್ರಿಕ್ಟುಗಳ ಲೈಸೆನ್ಸ್‌ದಾರರಿಂದ ಈಗಿನ ಹಾಗೆ ಶಿಬ್ಬಂದಿ ವ ಬಾಡಿಗೆ ಖರ್ಚುಗಳು ಭರಿಸಲ್ಪಟ್ಟು ಅವರು ಹಾಲಿ ಜಾರೀಲಿರುವ ಬಾಂಡೆಡ್ ಡಿಪೋಗಳಿಂದಲೇ ಸಾರಾಯಿ ಸರಬರಾಯಿ ಪಡೆಯಬೇಕಲ್ಲದೆ ಅವರ ಅಂಗಡಿಗಳಿಗೆ ರವಾನೆ ಮಾಡಲು ಸದರೀ ಡಿಪೋಗಳಲ್ಲಿ ಅದನ್ನು ಇಡತಕ್ಕದ್ದು.

) ಡಿಸ್ಟಿಲೇರಿ ಯಾ ಬಾಂಡೆಡ್ ಡಿಪೋಯಿಂದ ಯಾ ಫಿರ್ಕಾ ಕೋಠಿಯಿಂದ ರವಾನಿಸಲ್ಪಟ್ಟ ಸ್ಥಿತಿಯಲ್ಲಿ ಸಾರಾಯಿಯು ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾ

ಮುಂದೆ ಆಗಿಂದಾಗ್ಯೆ ಸರ್ಕಾರದಿಂದ ಸಾದರ್‌ಮಾಡಲ್ಪಡಬಹುದಾದ ನಿಬಂಧನೆಗಳನ್ನನುಸರಿಸಿ ಅಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರಿಂದ ಕ್ರಮವಾಗಿ ಲೈಸೆನ್ಸ ಪಡದ ದುಕಾನ್‌ಗಳಲ್ಲಿ ವಿನಹ ಮತ್ತೆಲ್ಲಿಯೂ ಸಾರಾಯಿ ಬಿಕರೀ ಮಾಡಲಾಗದು ಮತ್ತು ಎಕ್ಸೈಜ್ ಕಮ್ಮಿಷನರವರ ಮುಂಚಿತವಾದ ಮಂಜೂರಾತಿ ಇಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು.

(10) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನ್‌ಗಳನ್ನಾಗಲಿ ಮುಚ್ಚಬಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(11) ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆ ವಳಗೆ ಲೈಸೆನ್ಸಿನಲ್ಲಿ ವ್ಯಕ್ತಪಟ್ಟಿರುವ ಫಿರ್ಕಾವಿನ ಯಾವ ಭಾಗದಲ್ಲಾದರೂ ಶೇಂದೀ ಮಾರತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ಕಾವಿನ ಯಾವ ಭಾಗದಲ್ಲಾದರೂ ಶೇಂದೀ ಬಿಕರೀ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಬಳದೇಶದ ಸಾರಾಯಿ ಮಾರುವ ತನ್ನ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು; ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರ್‌ವಾರ್ ಎಕ್ಸೈಜ್ ಕಮ್ಮಿಷನರವರ ಲಿಖಿತ ಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈ ಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿ ದೇಶದ ಯಾ ಶೀಮೆಯಲ್ಲಾಗಲಿ ಲೈಸೆನ್ಸದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(12) ಲೈಸೆನ್ಸದಾರನು 1896ನೇ ಇಸವಿ ಜುಲೈ ಗುರ್ರೆಯಲ್ಲಿ ತನ್ನ ಫಿರ್ಕಾದೊಳಗಿರುವ ಹಾಲಿ ಬಾಂಡೆಡ್ ಡಿಪೋದಲ್ಲಿ ಯಾ ಫಿರ್ಕಾ ಕೋಠಿಯಲ್ಲಿ ಯಾ ಆತನ ಅಂಗಡಿಗಳಲ್ಲಿ ಹಾಜರಿರತಕ್ಕ ವಾಯಿದೆ ಮೀರದ ಗುತ್ತಿಗೆದಾರನ ಬಾಬತು ದಾಸ್ತಾನ್ ಸಾರಾಯಿಯನ್ನ ಎಕ್ಸೈಜ್ ಕಮ್ಮಿಷನರ್ ಸಾಹೆಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಪೂರ್ವದಗುತ್ತಿಗೇದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(13) ಲೈಸೆನ್ಸದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಅಥವಾ ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನ ಉಪಯೋಗಿಸತಕ್ಕದ್ದು. ಮತ್ತು ಸಾರಾಯಿಯನ್ನು ಸಾಗಿಸುವ ಬಗ್ಯೆ ಬೇಕಾದ ಲೆಖ್ಖ, ರಹದಾರಿ ಅಥವಾ ಪ್ಯಾಸ ಇವುಗಳಿಗೆ ವಿಧಾಯಕವಾದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(14) ಈ ಗುತ್ತಿಗೆಯು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(15) ತೆಗದುಕೊಳ್ಳಲ್ಪಟ್ಟದ್ದ ಫಿರ್ಕಾಗಳ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರವರು ವಿಚಾರ ಮಾಡದೇ ತಿರಸ್ಕರಿಸುವರು.

8. ಲೈಸೆನ್ಸದಾರನಿಂದಲಾಗಲಿ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಿಂದಲಾಗಲಿ ಮೇಲ್ಕಂಡ ಷರತ್ತುಗಳು, ಯಾ ಲೈಸೆನ್ಸಿನ ಕರಾರುಗಳು ಉಲ್ಲಂಘಿಸಲ್ಪಟ್ಟ ಪಕ್ಷದಲ್ಲಿ ಯಾ ಆತನು ಅಂಗಡಿಗಳನ್ನು ತೆಗಿಯುವದರಲ್ಲಿ ಅಶ್ರದ್ಧೆಯಾಗಿದ್ದಲ್ಲಿ ಯಾ ಗುತ್ತಿಗೇ ಕೆಲಸದಲ್ಲಿ ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯಕೊಡಲು ತಪ್ಪಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಪ್ರತಿಯೊಂದು ಉಲ್ಲಂಘನೆಗೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಠೇವಣೀ ಇಡಲ್ಪಟ್ಟಿರುವ ಮೊಬಲಗು ದಂಡವಾಗಿ ದಾಖಲ್‌ಮಾಡಿಕೊಳ್ಳಲ್ಪಟ್ಟಿರುತ್ತೆಂದು ಹುಕುಂ ಮಾಡಲಿಕ್ಕೂ, ಲೈಸೆನ್ಸನ್ನ ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್‌ದಾರೀ ಮೇಲೆ ಸದರೀ ಸರ್ವ ಸ್ವತಂತ್ರದ ಹಕ್ಕನ್ನು ಪುನಃ ಹರಾಜು ಮಾಡಲಿಕ್ಕೂ, ಯಾ ಅಂಥಾ ಗುತ್ತಿಗೇ ಫಿರ್ಕಾವನ್ನ ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾದ ಎಲ್ಲಾ ನಷ್ಟವನ್ನೂ 1896ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಗಳನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನಷ್ಟಗಳೂ ದೇಖೀಲ್ ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗುತ್ತೆ. ಅಂಥಾ ಎಲ್ಲಾ ದಂಡದ ವ ನಷ್ಟದ ಮೊಬಲಗುಗಳೂ ಜಮೀನ್ ಕಂದಾಯದ ಬಾಕಿಯಂತೆ ವಸೂಲ್‌ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣೀ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸ ರದ್ದು ಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸದಾರನನ್ನಾಗಲಿ, ಯಾ ಆತನ ಏಜಂಟನ್ನಾಗಲಿ, ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕ ಪಡಿಸುವದೆಂದು ಭಾವಿಸಲ್ಪಡಕೂಡದು.

270

ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ನಂಬರ್ 8550—ಯು. 260.

ತಾರೀಖು 18ನೇ ಮಾರ್ಚಿ 1896.

ಇದರಿಂದ ಪ್ರಕಟಪಡಿಸುವದೇನಂದರೆ, 1896 ನೇ ಇಸವಿ ಜುಲೈ ಗುರ್ರೀ ತಾರೀಖು ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ 12 ತಿಂಗಳ ಕಾಲದಲ್ಲಿ ಇಜಾರೇದಾರ್ರ, ಕೈಕೆಳಗಿನ ಅಂಗಡೀದಾರ್ರಿಂದ ಜನಗಳಿಗೆ ಮತ್ತು ಬೇಕರ್ಸ್ ಯಾನೆ ರೊಟ್ಟಿ ಕಾರಖಾನೆಯವರಿಗೆ ಈಚಲು ಮರದ ಶೇಂದಿಯು ಇದರಡಿ ನಮೂದಿಸಿರುವ ಮೇರೆ ಚಿಲ್ಲರೇ ದರಗಳಿಗೆ ಮಾರಲ್ಪಡತಕ್ಕದ್ದು:—

ಜಿಲ್ಲೆ.	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ. ಉತ್ತಮ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ. ಕನಿಷ್ಟ.	ರೊಟ್ಟೀ ಕಾರಖಾನೆಯವರಿಗೆ ಶೇರು ಒಂದಕ್ಕೆ ಗೊತ್ತಾದ ದರ.
ಬೆಂಗಳೂರು.	ಶಿವಿಲ್ ವ ಮಿಲಿಟೆರಿ ಸ್ಟೇಷನ್ ಮತ್ತು ಷಹರ್ ..	0 1 6	0 1 0	0 1 0
	ತಾಲ್ಲೂಕು ಕಸಬಾಗಳು ..	0 1 3	0 0 10	
	ಮೈಸೂರ್ ಡಿಸ್ಟ್ರಿಕ್ಟಿನ ಬಾಜೂದಲ್ಲಿರುವ ಗ್ರಾಮಗಳು, ಅಂದರೆ:— ಚೆನ್ನಪಟ್ಟಣದ ತಾಲ್ಲೂಕಿಗೆ ಶೇರಿದ ಇಗ್ಗಲೂರು, ಗೀಜಗದಾಸನ ದೊಡ್ಡಿ, ಜೆಗದಾಪುರ, ಕುಕ್ಕೂರು, ಮೋರಗನಹಳ್ಳಿ, ದಾಮನಗುಂಡು, ಮತ್ತು ಅರಳಾಪುರ ಎಂಬುವ ಗ್ರಾಮಗಳು ಕಾನಕಾನಹಳ್ಳಿ ತಾಲ್ಲೂಕಿಗೆ ಶೇರಿದ ಸಾತನೂರು ಮತ್ತು ಹಲಸೂರು ಎಂಬುವ ಗ್ರಾಮಗಳು ..	0 0 6	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ ..	0 1 0	0 0 8	
ಕೋಲಾರ.	ತಾಲ್ಲೂಕು ಕಸಬಾಗಳು ..	0 1 3	0 0 10	
	ಕೋಲಾರಿಗೆ ಶೇರಿದ ದಿಂಬ, ಬವರಿಂಗುಪ್ಯಾಟೆಗೆ ಶೇರಿದ ನೇರನಹಳ್ಳಿ, ಚಿಕ್ಕಬಳ್ಳಾಪುರಕ್ಕೆ ಶೇರಿದ ರಂಗಸ್ಥಳ, ಗೋರೀಬಿದನೂರಿಗೆ ಶೇರಿದ ಗುಂಡಾಪುರ, ಚಿಕ್ಕ ಕುರುಗೋಡು, ಹಿರೇಬಿದನೂರು, ಗೊಟ್ಟಗನಪುರ ಮತ್ತು ಕಲ್ಲೂಡಿ, ಮತ್ತು ಬಾಗೇಪಲ್ಲಿಗೆ ಶೇರಿದ ಗಂಟಂಪಾರಿಪಲ್ಲಿ, ಹೊಸಕೋಟೆ ಮತ್ತು ಮಲ್ಲಸಂದ್ರ ಎಂಬ ಗ್ರಾಮಗಳಲ್ಲಿ ..	0 1 3	0 0 10	
	ಇತರ ಎಲ್ಲಾ ಗ್ರಾಮಗಳಲ್ಲಿ ..	0 1 0	0 0 8	
ತುಮಕೂರು.	ಹುಳಿಯಾರ್ ಸಬ್ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ ..	0 0 8	0 0 6	
	ಶಿರಾ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ ..	0 1 3	0 0 6	
	ಇತರ ಎಲ್ಲಾ ತಾಲ್ಲೂಕು ಕಸಬಾಗಳಲ್ಲಿ ..	0 1 3	0 0 10	
	ಕುಣಿಗಲ್ ತಾಲ್ಲೂಕಿಗೆ ಶೇರಿದ ಹುಳಿಯಾರದುರ್ಗ, ಪುರ ಮತ್ತು ಕೋಡವಟ್ಟಿ ಎಂಬ ಗ್ರಾಮಗಳಲ್ಲಿ ..	0 0 6	0 0 4	
	ಹುಳಿಯಾರು ಸಬ್ ತಾಲ್ಲೂಕಿನ ಗ್ರಾಮಗಳಲ್ಲಿ ..	0 0 6	0 0 4	
	ಶಿರಾ ತಾಲ್ಲೂಕಿನ ಗ್ರಾಮಗಳಲ್ಲಿ ..	0 1 0	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ ..	0 1 0	0 0 8	
ಮೈಸೂರು.	ಮೈಸೂರ ಟವನ್ ..	0 1 0	0 0 10	
	ಮೈಸೂರು ತಾಲ್ಲೂಕಿಗೆ ಶೇರಿದ ಹೊಸಕೊಳ, ಹಾರೋಹಳ್ಳಿ, ವರುಣ, ವುತ್ತನಹಳ್ಳಿ ಮತ್ತು ಕುಪ್ಪಗಾಲ ಎಂಬ ಗ್ರಾಮಗಳು ..	0 0 8	0 0 4	
	ಮೈಸೂರು ತಾಲ್ಲೂಕಿಗೆ ಶೇರಿದ ಚಾಮುಂಡಿ ಮತ್ತು ಉತ್ತನಹಳ್ಳಿ ಜಾತ್ರೆಗಳಲ್ಲಿ ..	0 1 0	0 0 8	
	ಮೈಸೂರು ತಾಲ್ಲೂಕಿಗೆ ಶೇರಿದ ಕಲಸ್‌ವಾಡಿ, ಸುಕ್ಕಹಳ್ಳಿ, ರಾಂನಹಳ್ಳಿ, ಕುಂಚಿಗರ ಕಟ್ಟೆ ಮತ್ತು ಅಮ್ಮನವರಕೊಳ ಎಂಬ ಗ್ರಾಮಗಳಲ್ಲಿ ..	0 1 0	0 0 10	
	ಮೈಸೂರು ತಾಲ್ಲೂಕಿಗೆ ಶೇರಿದ ಭೂಗದಹಳ್ಳಿ, ಕೆಂಚಲಗೂಡು, ಮಾರಟಿಕ್ಯಾತನಹಳ್ಳಿ ಮತ್ತು ಗಣಂಗೂರ್ ಹುಂಡಿ ಎಂಬ ಗ್ರಾಮಗಳಲ್ಲಿ ..	0 0 10	0 0 8	
	ಹೆಗ್ಗಡದೇವನಕೋಟೆ ಕಸಬ ..	0 0 10	0 0 4	
	ಮಾಗಡಹಳ್ಳಿ, ಕಾಡುಗ್ರಾಮದಲ್ಲಿ ..	0 1 0	0 0 8	
	ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಶೇರಿದ ಸರಗೂರು, ಕಿತ್ತೂರು, ಮರಳುಮಗ್ಗೆ ಸೋಗೆರೆ, ಅಂತ್ರಸಂತೆ, ನೇರಳೆ, ಎಲ್ಲಮತ್ತೂರು ಕಾರೇಪುರ, ಮತ್ತು ಗಿಶನೆ ಎಂಬ ಗ್ರಾಮಗಳಲ್ಲಿ ..	0 0 8	0 0 6	

ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮನಾದ ಶೇರು ಒಂದಕ್ಕೆ ಖರೀದಿ.		ರೂಪಾಯಿಗೆ ... ಶೇರು ...
	ಉತ್ತಮ.	ಕನಿಷ್ಟ.	
...ಡ ದೇವನಕೋಟೆ ತಾಲ್ಲೂಕಿಗೆ ಸೇರಿದ ಚಿಕ್ಕಳ್ಳಿ, ಮತ್ತಿಕೆರೆ, ಎಡತೊರೆ ಮತ್ತು ಹಿರಿಹಳ್ಳಿ, ಎಂಬ ಗ್ರಾಮಗಳು	0 0 10	0 0 4	
...ಎಲ್ಲಾ ಗ್ರಾಮಗಳಲ್ಲಿ	0 0 8	0 0 4	
...ಸೂರು ಕಸಬ	0 0 10	0 0 6	
...ಸೂರು ತಾಲ್ಲೂಕಿಗೆ ಸೇರಿದ ದಾದಕೆರೆ, ಹನಗೂಡು, ಹೆಬ್ಬೂರು, ಬಿಳಿಕೆರೆ ಮಸಿಕಟ್ಟೆ, ಚಿಟ್ಟನಹಳ್ಳಿ, ಬಿಜಾಪಿಗುದ್ದೆ, ಕಂಪ್ಲಾಪುರ, ಚಿಲ್ಕುಂದ, ...ತ್ತಿಕುಪ್ಪೆ, ಪಟ್ಟವಪುರ, ಅತ್ತಿಗೋಡುಸಂತೆ, ಕಮರವಳ್ಳಿ, ಸೂಲೆಕೋಟೆ, ಚಾಮರಾಜಕೋಟೆ, ಕನ್ನಗೊಳ, ಆನೆಚೌಕೂರು, ಪಂಚವಳ್ಳಿ ಮಟ್ಟೂರು ಅವರ್ತಿಕೋಟೆ ಮತ್ತು ಸತ್ತಿಗಾಲ ಎಂಬ ಗ್ರಾಮಗಳು ..	0 0 8	0 0 4	
...ಸೂರು ತಾಲ್ಲೂಕಿಗೆ ಸೇರಿದ ಪಟ್ಟದಪುರದ ಜಾತ್ರೆಗಳಲ್ಲಿ ..	0 0 10	0 0 8	
...ಸೂರು ತಾಲ್ಲೂಕಿಗೆ ಸೇರಿದ ಕಟ್ಟೆಮಳವಾಡಿ, ಕಲ್ಲಹಟ್ಟ, ಹೊನ್ನೇನಹಳ್ಳಿ ಮತ್ತು ಬನ್ನಿಕುಪ್ಪೆ ಎಂಬ ಗ್ರಾಮಗಳಲ್ಲಿ	0 0 10	0 0 6	
...ರಂಗಪಟ್ಟಣದ ಕಸಬ	0 0 10	0 0 6	
...ರಂಗಪಟ್ಟಣ ತಾಲ್ಲೂಕಿಗೆ ಸೇರಿದ ದರಸಕುಪ್ಪೆ ಹಿರೋಡು ಕಟ್ಟೆಹಳ್ಳಿ ಅರಕೆರೆ ಕೊಡಿಯಾಲ ಮತ್ತು ಹಾರಲಹಳ್ಳಿ ಎಂಬ ಗ್ರಾಮಗಳಲ್ಲಿ ..	0 0 8	0 0 4	
...ರಂಗಪಟ್ಟಣದ ತಾಲ್ಲೂಕಿನ ಮೇಲುಕೋಟೆ ಜಾತ್ರೆಯಲ್ಲಿ ..	0 1 0	0 0 8	
...ರಂಗಪಟ್ಟಣದ ತಾಲ್ಲೂಕಿನ ಪಾಲಹಳ್ಳಿ ಸುಲ್ತಾನಪೇಟೆ ಪಶ್ಚಿಮವಾಹಿನಿ ಬೆಳಗೊಳ ಬಳವಾಡಿ ಕ್ಯಾತನಹಳ್ಳಿ ಕಬ್ಬಿನಹೋರೆ ಕಿರಂಗೂರು ಮತ್ತು ಗಂಜಾಂ ಎಂಬುವ ಗ್ರಾಮಗಳಲ್ಲಿ	0 0 10	0 0 6	
...ದೂರು ಕಸಬ	0 0 10	0 0 6	
...ದೂರು ಜಹಗೀರಿಗೆ ಸೇರಿದ ಅಗರ ಮಾಂಬಳ್ಳಿ ಹೊಳಕೆರೆ ಮತ್ತು ಹೊರಳಕೆ ಎಂಬುವಗ್ರಾಮಗಳಲ್ಲಿ	0 0 8	0 0 4	
...ಮಕೂಡ್ಲು ನರಸೀಪುರದ ಕಸಬ	0 0 10	0 0 6	
...ಮಕೂಡ್ಲು ನರಸೀಪುರ ತಾಲ್ಲೂಕಿನ ಕಾಹಳ್ಳಿ ಹರುಷಾರ ಮತ್ತು ಕೆಂಪನಪುರ ಎಂಬ ಗ್ರಾಮಗಳಲ್ಲಿ	0 0 8	0 0 4	
...ಮಕೂಡ್ಲು ನರಸೀಪುರ ತಾಲ್ಲೂಕಿನ ಅಂಕನಹಳ್ಳಿ ಹನುಮನಾಳು ಪಟ್ಟೆಹಳ್ಳಿ ಕೊಲಮೂರು ಕೊಣ್ಣಾಯ್ಕನಹಳ್ಳಿ ಬಿದರವಳ್ಳಿ ನರಗತನಹಳ್ಳಿ ...ಟ್ಟವಹಳ್ಳಿ ಹೊರಳಹಳ್ಳಿ ಛೂಹಳ್ಳಿ ಕೆರನಸೂರು ಕೆರ್ರತಿ ಪಾಟಲು ಮ...ರಹಳ್ಳಿ ಕನ್ನಹಳ್ಳಿ ಪಟ್ಟಹಳ್ಳಿ ತೂಪವಾಡಿ ದೊಡ್ಡಪುರ ಮಾವಿನಹಳ್ಳಿ ತಾಯಿಗೂಳು ದೊಡ್ಡ... ಮೂಗನಹಳ್ಳಿ ತಂಗಹಳ್ಳಿ ಕರಗಹಳ್ಳಿ ಕು... ಮುದರ್ಗ... ...ಧೂಕನೂರು ಎಂಬ ಗ್ರಾಮಗಳಲ್ಲಿ .. ಪ್ಯ ತ್ರ... ನರಸೀಪುರ ತ...	0 0 8	0 0 6	
...ಎಲ್ಲಾ ಗ್ರಾಮಗಳಲ್ಲಿ ತಿರುಮಕ... 4 ನರಸೀಪುರ ತಾ... ..	0 0 10	0 0 6	
...ಕತೊರೆ ಮತ್ತು ಮೂಗೂರು ಎಂಬ ...ಗಳಲ್ಲಿ ತಿರುಮಕ... 1 ... ನರಸೀಪುರ ತಾಲ್ಲೂಕಿಗೆ	0 0 10	0 0 8	
...ಟ್ಟಿಗೆ ಕೊಪ್ಪಲು ಜಾತ್ರೆ.. ಇತರ ಎಲ್ಲಾ ಜಾತ್ರೆಗಳಲ್ಲಿ	0 0 10	0 0 6	
ಚಾಮರಾಜನಗರ ಕಸಬ	0 0 10	0 0 4	
ಚಾಮರಾಜನಗರ ತಾಲ್ಲೂಕಿನ ರಾಮಸಮುದ್ರ ...ಯಸೇಟೆ ಮೂಡಹಳ್ಳಿ ಕಾಹಳ್ಳಿ ಮಲ್ಲಿಕನಪುರ ಉತ್ತಹಳ್ಳಿ ಮತ್ತು ...ವಾದವೇಟೆ ಎಂಬ ಗ್ರಾಮಗಳಲ್ಲಿ	0 0 10	0 0 6	
ಕೃಷ್ಣರಾಜಪೇಟೆ ಮತ್ತು ನಾಗಮಂಗಲ ತ... ...ಸಬಾಗಳಲ್ಲಿ ..	0 0 10	0 0 6	
ಕೃಷ್ಣರಾಜಪೇಟೆ ತಾಲ್ಲೂಕಿನ ಅಗ್ರಹಾರ ...ರಕನ ಮತ್ತು ಹೊಸಹೊಳಲು ಎಂಬ ಗ್ರಾಮಗಳಲ್ಲಿ ..	0 1 0	0 0 6	
ನಾಗಮಂಗಲ ತಾಲ್ಲೂಕಿನ ಪಾಲಗ್ರಹಾರ ಕೋಟೆಪಟ್ಟ ಮತ್ತು ಬೊಮ್ಮದ... ಎಂಬ ಗ್ರಾಮಗಳಲ್ಲಿ ..	0 1 0	0 0 6	
.. ..	0 1 0	0 0 6	
ನಾಗಮಂಗಲ ತಾಲ್ಲೂಕಿನ ಬೆಳ್ಳೂರು ನೆಲ್ಲಿಗೆರೆ ಕಾಳಿಂಗನಹಳ್ಳಿ ಬಿಲಗುಂದ ಸೋಮನಹಳ್ಳಿ ಅಮ್ಮನಜಾತ್ರೆ ಹುಲ್ಲನಹಳ್ಳಿ ಮಾಯಮ್ಮನ ಜಾತ್ರೆ ತೂಬಿನಕೆರೆ ಪಟ್ಟಣದಜಾತ್ರೆ ನಾಗನಕೆರೆ ಗುಡ್ಡದಜಾತ್ರೆ ಮದ್ದಿನಹಳ್ಳಿ ಜಾತ್ರೆಹರಕಲ್ ಹನುಮಂತರಾಯನಜಾತ್ರೆ ಹುಲಿಕೆರೆಜಾತ್ರೆ ಮತ್ತು ಗುಂಡಕಲ್ ಜಾತ್ರೆ..	0 0 8	0 0	
ನಾಗಮಂಗಲ ತಾಲ್ಲೂಕು ಚುಂಚನಗಿರಿಜಾತ್ರೆ	0 1 0	0	

...ಮಲ್ಲಿ ಗವರ್ನ...
...ಗೇಜೇಬ್,
ಲೆ|| ಕರ್ನಲ್, ...ಯಿ
...ಚೀಫ್ ಸೆಕ್ರೆಟರಿ
...ರಸ್ಟಸ್.

ಡಿಸ್ಟ್ರಿಕ್ಟು.	ಸ್ಥಳ.	ಒಂದು ಇಂಪೀರಿಯಾಲ್ ಕ್ವಾರ್ಟಿಗೆ ಸಮವಾದ ಸೇರು ಒಂದಕ್ಕೆ ಖರೀದಿ.		ರೊಟ್ಟಿ[illegible]
		ಉತ್ತಮ.	ಕನಿಷ್ಟ.	
ಮೈಸೂರು.	ಎಡತೊರೆ ಕಸಬ	0 0 10	0 0 6	
	ಎಡತೊರೆ ತಾಲ್ಲೂಕಿನ ಚುಂಚನಕಟ್ಟೆ ಮತ್ತು ಕಪಡಿ ಜಾತ್ರೆಗಳಲ್ಲಿ ..	0 0 10	0 0 8	
	ಡಿಟ್ಟೋ ತಾಲ್ಲೂಕು ತಂದ್ರಿ	0 0 8	0 0 6	
	ಡಿಟ್ಟೋ ತಾಲ್ಲೂಕ ಜಂಪಾಪುರ ಸಿಪ್ಪೂರು ಸಾಲಿಗ್ರಾಮ ದೊಡ್ಡಹಳ್ಳಿ ಚಳ್ಳಳ್ಳಿ ಬ್ಯಾಡರಹಳ್ಳಿ ಈ ಗ್ರಾಮಗಳಲ್ಲಿ	0 0 10	0 0 6	
	ಮಳವಳ್ಳಿ ತಾಲ್ಲೂಕಿಗೆ ಸೇರಿದ ಹಲಗೂರು ದಳವಾಯಿಕೋಡಿಹಳ್ಳಿ ಹರಿಹರ ಮಾರಗೌಡನಹಳ್ಳಿ ಮತ್ತು ಬಾಣಸಮುದ್ರ ಎಂಬುವ ಗ್ರಾಮಗಳಲ್ಲಿ ..	0 0 8	0 0 4	
	ಮಂಡ್ಯದ ಕಸಬ	0 0 10	0 0 6	
	ಮಂಡ್ಯದ ತಾಲ್ಲೂಕು ಚಿಕ್ಕಮಂಡ್ಯ ಸಾತನೂರ ಕಟ್ಟೆಹಳ್ಳಿ ಪನಕನಹಳ್ಳಿ ಈ ಗ್ರಾಮಗಳಲ್ಲಿ	0 0 10	0 0 6	
	ನಂಜನಗೂಡು ಕಸಬ	0 0 10	0 0 4	
	ನಂಜನಗೂಡು ತಾಲೂಕು ದ್ಯಾವರಸನಹಳ್ಳಿ ಹುಸ್ಸನಹಳ್ಳಿ ಕುಂಬಳ್ಳಿ ದಿಬ್ಬೂರು ಚಿಕ್ಕಯ್ಯನಛತ್ರ ತೊರೆಮಾವು ಮಲ್ಲೂರು ನರಸೀಪುರ ಗನತಗಾಲ ಕುಪ್ಪೆ ಲಗ್ಗಾರಹುಂಡಿ ಮಾಚನಹಳ್ಳಿ ಮತ್ತು ಸಿಂಗರಿಪುರ ಈ ಗ್ರಾಮಗಳಲ್ಲಿ ..	0 0 10	0 0 4	
	ಡಿಟ್ಟೋ ತಾಲೂಕು ಇತರ ಎಲ್ಲಾ ಗ್ರಾಮಗಳಲ್ಲಿ	0 0 6	0 0 3	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟ್ ಮಜಕೂರ್ ಇತರ ಎಲ್ಲಾ ಕಸಬೆ ಗ್ರಾಮಗಳಲ್ಲಿಯೂ	0 0 10	0 0 6	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟ್ ಮಜಕೂರ್ ಇತರ ಎಲ್ಲಾ ಗ್ರಾಮಗಳಲ್ಲಿಯೂ	0 0 6	0 0 4	
ಹಾಸನ.	ಹಾಸನ ಟವರ್	0 1 0	0 0 10	
	ಅರಕಲ್‌ಗೂಡು ಕಸಬ	0 1 4	0 1 0	
	ಇತರ ತಾಲ್ಲೂಕು ಕಸಬಾಗಳು	0 1 0	0 0 6	
	ಬೇಲೂರು ತಾಲೂಕು ಗ್ರಾಮಗಳು	0 1 0	0 0 6	
	ಬೇಲೂರು ಅರಕಲಗೂಡು ಮತ್ತು ಮಂಜರಾಬಾದು ತಾಲ್ಲೂಕು ಗ್ರಾಮಗಳು ವಿನಾಯಿಸಿ ಇತರ ಗ್ರಾಮಗಳಲ್ಲಿ	0 0 6	0 0 4	
	ಮಂಜರಾಬಾದು ತಾಲ್ಲೂಕಿನ ಸಕಲೇಶಪುರ ಸುಂಡೇಕೆರೆ ಬೆಳಗೋಡು ಬಳ್ಳು ಹೊಸಕೋಟೆ ಮೊಗ್ಗೆ ಶುಕ್ರವಾರಸಂತೆ ಮತ್ತು ಕರೋಡಿ ಎಂಬ ಗ್ರಾಮಗಳಲ್ಲಿ ..	0 1 0	0 0 8	
	ಅರಕಲಗೂಡು ತಾಲೂಕಿನ ಕೊಣನೂರು ಗುರುವಾರಸಂತೆ ಮಾರೂರು ಸಂತೆ ಮಾಲಾಪಟ್ಟಣ ರಾಮನಾಥಪುರ ಮತ್ತು ಇತರ ಗ್ರಾಮದ ಜಾತ್ರೆಗಳಲ್ಲಿ ..	0 1 4	0 1 0	
	ಡಿಟ್ಟೋ ತಾಲ್ಲೂಕುಮಗಳ ಸೋಮವಾರಸಂತೆ ಬಸ್ಸೂರು ಬುಧವಾರಸಂತೆ ಮಗಳಲ್ಲಿ	0 1 [illegible]	0 0 [illegible] 0 0 9	
	ಡಿಟ್ಟೋ ತಾಲೂಕು ಕೊಣನೂರು ಗ್ರಾಮದಲ್ಲಿ	[illegible] 0	0 0 9	
	ಡಿಟ್ಟೋ ತಾಲ್ಲೂಕುಮಗ್ಗೆ ರಾಮನಾಥಪುರ ಮತ್ತು ಕಟ್ಟೆಪುರ ಗ್ರಾಮಗಳ			
	ಡಿಟ್ಟೋ ತಾಲೂಕು ಬಸವಾಪಟ್ಟಣ ಕಂಗಳಲಮರಟೆ ಮತ್ತು ಕಡಿವಿನಹೊಹಳ್ಳಿ ಗ್ರಾಮಗಳಲ್ಲಿ	0 1 0	0 0 8	
	ಡಿಟ್ಟೋ ತಾಲ್ಲೂಕು ರುದ್ರಪಟ್ಟಣ ಮತ್ತು ಕಾರಳಾಪುರ ಗ್ರಾಮಗಳ ..	0 0 10	0 0 8	
	ಡಿಟ್ಟೋ ತಾಲ್ಲೂಕು ಧರ್ಮಾಪುರ ನರಸೀಪುರ ಎಲ್ಲಹಳ್ಳಿ ಮಗನಹಳ್ಳಿ ಮತ್ತು ಹುಲಿಕಲ್ಲು ಗ್ರಾಮಗಳಲ್ಲಿ ..	0 0 10	0 0 6	
	ಡಿಟ್ಟೋ ತಾಲ್ಲೂಕು ಉಲ್ಲಿಹೊಸೂರು ಉಕ್ಕಡ ಮತ್ತು ಗಂಗೂರು ಗುಣ, ವ್ರ ಗ್ರಾಮಗಳಲ್ಲಿ .. .. .. ಜಾತ್ರೆಗಳ	0 0 8	0 0 6	
ಕಡೂರು.	ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕು ಕಸಬಾ ಮತ್ತು ...ವಾಂತ್ರ...ಹಳ್ಳಿ, ಕು..	0 1 6	0 0 6	
	ಇತರ ತಾಲ್ಲೂಕು ಕಸಬ ಗಳಲ್ಲಿ	0 1 4	0 0 6	
	ಇತರ ಗ್ರಾಮಗಳಲ್ಲಿ	0 1 0	0 0 6	
ಶಿವಮೊಗ್ಗ.	ಶಿವಮೊಗ್ಗಾ ಟವರ್	0 1 6	0 1 0	
	ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳು	0 1 0	0 0 6	
	ಮಗ್ಗೆ ಸೊಲ್ಲಾ ಭಾಗಗಳಲ್ಲಿ	0 1 6	0 0 6	
	ಮತ್ತು ಗಿರನೆ ...ಳ್ಳಿ ಮತ್ತು ಗ್ರಾಮಗಳಲ್ಲಿ	0 1 0	0 0 6	

ತಾರೀಖು 21ನೇ ಮಾರ್ಚಿ 1896.

ನಂ. 8722.—ಯಕ್ಸ್ 264.—1881ನೇ ಇಸವಿ XXIIನೇ ನಂಬರ ಯಕ್ಸೈಜ್ ಆಕ್ಟ್ 55ನೇ ಸೆಕ್ಷನ್ನು ನಿಯಮಗಳನುಸರಿಸಿ ಮೈಸೂರು ಗವರ್ನಮೆಂಟಿನವರು ಅಜ್ಞಾಪಿಸುವದೇನಂದರೆ:—ಶೇಂದಿ ಇಜಾರೆದಾರ್ ಮತ್ತು ಶೇಂದಿ ದುರ್ಕಾನದಾರರುಗಳಿಗೆ ಕೊಡಲ್ಪಡುವ ಲೈಸೆನ್ಸುಗಳ ಷರತ್ತುಗಳಲ್ಲಿ ಇದರಡಿ ಕಂಡ ತಿದ್ದುಪಾಟುಗಳು ಸೇರಿಸಲ್ಪಡತಕ್ಕದ್ದು.

1893ನೇ ಇಸವಿ ಜನವರಿ 14ನೇ ಮಖ್ಕಂ 11813—ರೆ. ಫೈ. 233—92ನೇ ನಂಬರ ಇಸ್ತಿಹಾರನಾಮೆಯ A ಅಪೆಂಡಿಕ್ಸ್ ಆದ ಶೇಂದಿ ಇಜಾರೆದಾರರ ಲೈಸೆನ್ಸಿನ 21ನೇ ಕಲಂನಲ್ಲಿ,—

"ಶೇಂದಿಯು ಗಿಡಗಳಿಂದ ಇಳಿಸಲ್ಪಟ್ಟಂತೆ ಜನಗಳಿಗೆ ಬಿಕರೀ ಮಾಡಲ್ಪಡತಕ್ಕದ್ದು, ಮತ್ತು ಬಲ ತಗ್ಗಿಸಲ್ಪಡಕೂಡದು ಮತ್ತು "ಪರಿಕೆ ಮಾಡಲ್ಪಡಕೂಡದು" ಯಂಬದಕ್ಕೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು:—

"ಬಲ ತಗ್ಗಿಸಲ್ಪಟ್ಟ ಅಥವಾ ಪರಿಕೆ ಮಾಡಲ್ಪಟ್ಟ ಶೇಂದಿಯಾಗಲೀ ಅಥವಾ ಯರಡು ದಿವಸಗಳಿಗೆ ಮುಂಚಿತವಾಗಿ ಇಳಿಸಲ್ಪಟ್ಟ "ಶೇಂದಿಯಾಗಲಿ ಬಿಕರಿ ಮಾಡಲ್ಪಡಕೂಡದು ಯಾ ಬಿಕರಿ ಬಗ್ಯೆ ಕೊಡಲ್ಪಡಕೂಡದು ಅಥವಾ ದುಕಾನಿನಲ್ಲಿ ಇಡಲ್ಪಡಕೂಡದು."

2. 1893ನೇ ಇಸವಿ ಜನವರಿ 14ನೇ ಮಖ್ಕಂ 11813.—ರೆ. ಫೈ. 233—92ನೇ ನಂಬರ ಇಸ್ತಿಹಾರನಾಮೆ B ಅಪೆಂಡಿಕ್ಸ್ ಆದ ಶೇಂದಿ ಚಿಲ್ಲರೆ ಮಾರಾಟದ ಲೈಸೆನ್ಸಿನ 4ನೇ ಷರತ್ತಿನಲ್ಲಿ ಬರುವ ಮೊದಲನೇ ವಾಕ್ಯವಾದ ಇದರಡಿ ಕಾಣಿಸಿರುವದಕ್ಕೆ ಅಂದರೆ:—

"ಬಲತಗ್ಗಿಸಲ್ಪಟ್ಟ ಯಾ ಪರಿಕೆ ಮಾಡಲ್ಪಟ್ಟ ಶೇಂದಿಯಾಗಲಿ ಅಥವಾ ಎರಡು ದಿವಸಗಳಿಗೆ ಮುಂಚಿತವಾಗಿ ಉತಾರ್ ಮಾ- "ಡಲ್ಪಟ್ಟ ಶೇಂದಿಯಾಗಲಿ ಬಿಕರಿ ಮಾಡಲ್ಪಡಕೂಡದು." ಎಂಬದಕ್ಕೆ ಬದಲಾಗಿ.

"ಬಲ ತಗ್ಗಿಸಲ್ಪಟ್ಟ ಅಥವಾ ಪರಿಕೆ ಮಾಡಲ್ಪಟ್ಟ ಶೇಂದಿ ಆಗಲಿ ಅಥವಾ ಎರಡು ದಿವಸಗಳಿಗೆ ಮುಂಚಿತವಾಗಿ ಉತಾರ್ ಮಾಡ "ಲ್ಪಟ್ಟ ಶೇಂದಿ ಆಗಲಿ ಬಿಕರೀ ಮಾಡಲ್ಪಡಕೂಡದು ವ ಬಿಕರೀ ಬಗ್ಯೆ ಕೊಡಲ್ಪಡಕೂಡದು. ಮತ್ತು ದುರ್ಕಾನುಗಳಲ್ಲಿ ಇಡಲ್ಪಡಲೂ ಕೂಡದು" ಎಂಬ ಮಾತುಗಳನ್ನು ಸೇರಿಸತಕ್ಕದ್ದು.

ತಾರೀಖು 26ನೇ ಮಾರ್ಚಿ 1896.

ನಂ. 8947.—ಯಕ್ಸ್. 274.—1892ನೇ ಇಸವಿ ಮಾರ್ಚಿ 30ನೇ ಮಖ್ಕಂ 495ನೇ ನಂಬರ ಗವರ್ನಮೆಂಟ್ ಇಸ್ತಿಹಾರನಾಮೆಯ 5ನೇ ರೂಲಿನ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರದಿರುವದನ್ನ ಸೇರಿಸತಕ್ಕದ್ದು.

"ಹಳೇ ಸಾರಾಯಿ ಅಂದರೆ 10 ದಿವಸಗಳು ಯಾ ಅದಕ್ಕೆ ಜಾಸ್ತಿ ಕಾಲದ ಸಾರಾಯಿಯು ಡಿಸ್ಟಿಲೇರಿಯಿಂದ ಯಾವಾಗ್ಯೂ ಕೊ "ಡಲ್ಪಟ್ಟು 50 ಮೈಲಿ ಫಾಸಲೆ ವಳಗೆ ಇರತಕ್ಕ ಡಿಪೋಗಳಿಗೆ 20° ಡಿಗ್ರಿ ಅಂಡರ್ ಪ್ರೂಫಿಗೆ ಪ್ಯಾಸ್ ಮಾಡಲ್ಪಡತಕ್ಕದ್ದು ಮತ್ತು "ಡಿಸ್ಟಿಲೇರಿಯಿಂದ 50 ಮೈಲಿಗಳಿಗಿಂತ ಜಾಸ್ತಿ ಫಾಸಲೆ ಇರತಕ್ಕ ಡಿಪೋಗಳಿಗೆ 19·5 ಡಿಗ್ರಿ ಅಂಡರ್‌ಪ್ರೂಫ್ ವುಳ್ಳ ಸಾರಾಯಿಯು "ಪ್ಯಾಸ್ ಮಾಡಲ್ಪಟ್ಟು 20° ಡಿಗ್ರಿ ಅಂಡರ್‌ಪ್ರೂಫಿಗೆ ಚಾರ್ಜು ಮಾಡಲ್ಪಡತಕ್ಕದ್ದು. ಪರಂತು ದಾಸ್ತಾ ಇಲ್ಲದ ಸಬಬಿನಿಂದ ಅಥವಾ "ಮತ್ಯಾವ ಕಾರಣದಿಂದಲಾದರೂ ಅಂಥಾ ಹಳೇ ಸಾರಾಯಿ ಇಲ್ಲದೆ ಇದ್ದು ಹೊಸ ಸಾರಾಯಿ ಅಂದರೆ 10 ದಿವಸಕ್ಕಿಂತ ಕಮ್ಮಿ ದಿವಸ "ದ ಸಾರಾಯಿ ಕೊಡಬೇಕಾದ ಅವಶ್ಯಕ ಕಂಡುಬಂದರೆ ಅಂಥಾ ಹೊಸ ಸಾರಾಯಿಯು ಡಿಸ್ಟಿಲೇರಿಯಿಂದ 50 ಮೈಲಿಗಳಿಗಿಂತ ಕಮ್ಮಿ "ಫಾಸಲೆಯಲ್ಲಿರುವ ಡಿಪೋಗಳಿಗೆ 19·5° ಅಂಡರ್‌ಪ್ರೂಫ್ ಡಿಗ್ರಿಗೆ ಪ್ಯಾಸ್ ಮಾಡಲ್ಪಡತಕ್ಕದ್ದಲ್ಲದೆ 50 ಮೈಲಿಗಿಂತ ಜಾಸ್ತಿ ಫಾಸಲೆಯಲ್ಲಿ "ರುವ ಡಿಪೋಗಳಿಗೆ 19° ಡಿಗ್ರಿ ಅಂಡರ್‌ಪ್ರೂಫಿಗೆ ಪ್ಯಾಸ್ ಮಾಡಲ್ಪಟ್ಟು 20° ಡಿಗ್ರಿ ಅಂಡರ್ ಪ್ರೂಫಿಗೆ ಚಾರ್ಜು ಮಾಡಲ್ಪಡತಕ್ಕದ್ದು."

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸಕ್ರೆಟರಿ.

ಮಿಲಿಟರಿ.

ಇಸ್ತಿಹಾರನಾಮಾ.

ತಾರೀಖು 21ನೇ ಮಾರ್ಚಿ 1896.

ಮೈಸೂರ್ ಸವಾರ್ ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ಈ ಕೆಳಗೆ ಕಂಡ ಬಡ್ತಿಗಳು 1896ನೇ ಮಾರ್ಚಿ 21ನೇ ಮಖ್ಕಂ ಲಾಗಾಯತು ಮಾಡಲ್ಪಟ್ಟಿರುತ್ತವೆ:—

ಹೆಸರು.	ಹುದ್ದೆ.		ಷರಾ.
	ಇಂದ.	ಗೆ.	
ಟಿ. ನಂಜರಾಜ ಅರಸರು	ಜಮಾದಾರ್ ಟ್ರುಫ್ ಆಫಿಸರ್	ಜಮಾದಾರ್ ಟ್ರುಫ್ ಕಮ್ಯಾಂಡರ್	ಪೆನ್ಷನ್ನ ಮೇಲೆ ನಿವೃತ್ತರಾದ ಇಸ್ಮಾಯಿಲ್ ಬೇಗರಿಗೆ ಬದಲಾಗಿ.
ಎಂ. ನಂಜರಾಜ ಅರಸರು	ಪ್ರೊಬೇಷನರ್	ಜಮಾದಾರ್ ಟ್ರುಫ್ ಆಫಿಸರ್	ಬಡ್ತಿ ಮಾಡಲ್ಪಟ್ಟ ಟಿ. ನಂಜರಾಜ ಅರಸಿನವರಿಗೆ ಬದಲಾಗಿ.
ಸೈಯ್ಯದ್ ಫತ್ತುಲಾಯವರು	ದಫೇದಾರ್ ಮೇಜರ್	ಪ್ರೊಬೇಷನರ್	ಬಡ್ತಿ ಮಾಡಲ್ಪಟ್ಟ ಎಂ. ನಂಜರಾಜ ಅರಸಿನವರಿಗೆ ಬದಲಾಗಿ.
ರಾಮಚಂದ್ರರಾವ್ ಪಂತ್ ಯವರು.	ದಫೇದಾರ್	ಡಿಟ್ಟೋ	ಪೆನ್ಷನ್ನ ಮೇಲೆ ನಿವೃತ್ತರಾದ ಯಲ್ಲಮಾಸ್ ಖಾನರಿಗೆ ಬದಲಾಗಿ.

ತಾರೀಖು 24ನೇ ಮಾರ್ಚಿ 1896.

ಮಿಲಿಟರಿ ಸೆಕ್ರಟರಿ ಯವರಿಗೆ ಪರ್ಸನಲ್ ಅಸಿಸ್ಟೆಂಟರಾದ ಮಿಸ್ಟರ್ ಯಚ್. ಡರ್ಲಾ ಯವರು ಮಿಲಿಟರಿ ಇಲಾಖೆಯಲ್ಲಿ ಗವರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಯಾಗಿ 1896ನೇ ಮಾರ್ಚಿ 20ನೇ ಮಖ್ಕಂ ಲಾಗಾಯತು ಮೊಕರ್ರಮ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಜೆ. ದೇಸರಾಜ್ ಅರಸ್, ಲೆ|| ಕರ್ನಲ್,
ಆಫಿಷಿಯೇಟಿಂಗ್ ಮಿಲಿಟರಿ ಸೆಕ್ರೆಟರಿ.

274

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 14.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 9, ಸ್ವ 1896.

IIನೇ ಭಾಗ.

ಇಂಡ್ಯ ಗವರ್ನ್ಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಷಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ಯಾಮರವರ ಡಿಟೋ	,, 85

ಖರೀದಿದಾರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

275

ಮೈಸೂರ ಫಾರೆಸ್ಟ್ ಡಿಪಾರ್ಟ್ಮೆಂಟ.

ಕೋಲಾರ್ ಡಿಸ್ಟ್ರಿಕ್ಟ್.

ನೋಟಿಸ.

ತಾರೀಖು 28ನೇ ಫೆಬ್ರುವರಿ 1896ನೇ ಇಸವಿ, ಮೊಕ್ಕಾಂ ಚಿಕ್ಕಬಳ್ಳಾಪುರ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ತಮಾಂ ತಾಲ್ಲೂಕುಗಳಲ್ಲೂ ಫಾರೆಸ್ಟುಗಳಲ್ಲೂ ಸಹ, ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನ ಜಮಾಯಿಸತಕ್ಕ ಬಗ್ಯೆ ಲೈಸೆನ್ಸ್ ಕೊಡತಕ್ಕ ಪದ್ಧತಿಯನ್ನ ನಿಲ್ಲಿಸಬೇಕೆಂದು ಹುಕುಂ ಜಾರಿಯಾಗಿರುತ್ತೆ.

(2.) ಇದಕ್ಕೆ ಮೊದಲು ಲೈಸೆನ್ಸ್ ಪಡೆದಿರುವ ಜನಗಳು ಅವರವರ ಲೈಸೆನ್ಸಿನಲ್ಲಿ ಕಂಡ ಚಕ್ಕೆಯನ್ನು ನಿಶ್ಶೇಷವಾಗಿ ಮುಂದಿನ ಏಪ್ರೆಲ್ ತಾರೀಖು 15ರ ಒಳಗಾಗಿ ಸಾಗಿಸಿಕೊಂಡು ಹೋಗತಕ್ಕದ್ದು. ಆ ತಾರೀಖು ಕಳೆದನಂತರ ಸದರೀ ಚಕ್ಕೆಯನ್ನ ಜಮಾಯಿಸುವದಕ್ಕಾಗಲಿ, ಡಿಸ್ಟ್ರಿಕ್ಟಿನಲ್ಲಿ ದಾಸ್ತಾನ್ ಯಿಡುವದಕ್ಕಾಗಲಿ, ಅಥವಾ ರಫ್ತು ಮಾಡತಕ್ಕ ಬಗ್ಯಾಗಲಿ ಯಾವ ಸಂದರ್ಭದಲ್ಲೂ ಅವಕಾಶ ಕೊಡುವದಿಲ್ಲ.

(3.) ಡಿಸ್ಟ್ರಿಕ್ಟ ಮಜಕೂರ್ ತಾಲ್ಲೂಕುಗಳಲ್ಲಿ ಈ ಬಾಬುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕನ್ನು ಇಜಾರೇದಾರರುಗಳಿಗೆ ಬಹಿರಂಗವಾದ ಹರಾಜಿನಲ್ಲಿ ಪೋಟಾಪೋಟಿಯಿಂದ ಮೊಕರರ್ ಮಾಡಲಾಗುತ್ತದೆ. ಸದರೀ ಹರಾಜಿನ ಕ್ರಮ ಮತ್ತು ಷರತ್ತುಗಳನ್ನ ಕಂಡು ಅಲಾಹಿದ ನೋಟಿಸ ಜಾರಿಯಾಗಿರುತ್ತೆ. ಈ ಬಾಬುಗಳನ್ನ ಇಜಾರೇಮಾಡಬೇಕೆಂದು ಉದ್ದೇಶಿಸುವವರು ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟ ಆಫೀಸಿಗೆ ಅರ್ಜಿಯನ್ನ ಬರೆದು ನೋಟಿಸಗಳನ್ನ ತರಿಸಿಕೊಂಡು ತಪ್ಸೀಲ್ ತಿಳಿದುಕೊಳ್ಳಬೇಕಾಗಿ ಕೋರಲ್ಪಟ್ಟಿದೆ.

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

(1.) ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಇದರಡಿ ನಮೂದಿರುವ ತಾಲ್ಲೂಕುಗಳಲ್ಲಿ ದೊರೆಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನ ಜಮಾಯಿಸಿ ತೆಗೆದುಕೊಂಡು ಹೋಗತಕ್ಕ ಇಜಾರೆಯ ಬಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ.

ಹರಾಜು ತಾರೀಖು ಮತ್ತು ಹರಾಜ್ ನಡಿಸುವ ಸ್ಥಳ ವಗ್ಯೆರೆ ತಪ್ಸೀಲುಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕುಗಳು.	ನಂಬರ.	ಹೋಬಳಿಗಳು.	ಇಜಾರೆಯ ಹಕ್ಕಿನ ಕಾಲ.	ಹರಾಜಿನ ತಾರೀಖು.	ಹರಾಜಾಗುವ ಸ್ಥಳ.	ಹರಾಜು ಮಾಡಿಸುವ ಆಫಿಸರುಗಳು.	ಹರಾಜು ಯಾರಿಂದ ಮಂಜೂರಾಗಬೇಕಾದದ್ದು.	ಷರಾ.
I ಕೋಲಾರ	1	ಕೋಲಾರ	1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ ಆಖೈರ್ ವರೆಗೆ.	1896ನೇ ಇಸವಿ ಮೇ ತಾರೀಖು 14ರಲ್ಲಿ.	ಕೋಲಾರ ಡಿಸ್ಟ್ರಿಕ್ಟು ಕಚೇರಿಯಲ್ಲಿ.	ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು.	ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ.	ತಾಲ್ಲೂಕುವಾರ್ ಹರಾಜು ಜರುಗಿಸಲ್ಪಡುತ್ತದೆ.
	2	ವಕ್ಕಲೇರಿ						
	3	ಹುತ್ತೂರು						
	4	ವೇಮುಗಲ್ಲು						
	5	ಸುಗಟೂರು						
	6	ದಳಸನೂರು						
	7	ಹೋಳೂರು						
II ಮಾಲೂರು	1	ಮಾಲೂರು						
	2	ನರಸಾಪುರ						
	3	ಲಕ್ಕೂರು						
	4	ಮಾಸ್ತಿ						
	5	ಹುಳದೇನಹಳ್ಳಿ						
	6	ತ್ಯಾಕಲ್ಲು						
III ಬೌರಿಂಗ್‌ಪೇಟೆ	1	ಬೌರಿಂಗ್ ಪೇಟೆ						
	2	ಬೋದಿಕೋಟೆ						
	3	ಕಾಮಸಮುದ್ರ						
	4	ಬೇತಮಂಗಲ						
	5	ಕ್ಯಾಸಂಬಳ್ಳಿ						
	6	ರಾಮಸಾಗರ						
	7	ದ್ಯಾಸರಹೊಸಹಳ್ಳಿ						

(2.) ಮೇಲ್ಕಂಡ ತಾರೀಖಿನ ಮಧ್ಯಾನ್ಹ 3 ಘಂಟೆಯ ಲಗಾಯತು ಸಾಯಿಂಕಾಲದ ವರೆಗೂ ಹರಾಜು ಕ್ರಮ ಜರಗುವದು ಮತ್ತು ಆ ದಿವಸವೇ ಹರಾಜು ಖೈದಾಗದೇ ಇದ್ದಲ್ಲಿ ಖೈದಾಗುವ ವರೆಗೂ ಮಾರನೇದಿನವೂ ಸಹ ನಡಿಸಲ್ಪಡುತ್ತದೆ.

(3.) ಮೇಲ್ಕಂಡ ಒಟ್ಟು ಸ್ವತಂತ್ರದ ಇಜಾರೆ ಹಕ್ಕು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ ಚಡಸವಾಲ್‌ದಾರ್ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿಧಾರೆ. ಪೋಟು ಪೋಟೀಯಲ್ಲಿ ನಿಲ್ಲುವ ಆಖೈರ ಚಡಸವಾಲ ಮೊಬಲಗು ಮೇಲ್ಕಂಡ 12 ತಿಂಗಳ ಕಾಲದಲ್ಲಿ ಕಡದು ಜಮಾಯಿಸಿ ಸಾಗಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿ ಎಂದು ಭಾವಿಸಲ್ಪಡುತ್ತದೆ.

(4.) ಇಜಾರೆ ಮಾಡಬೇಕೆಂದು ಅಪೇಕ್ಷಿಸುವವರು ತಾವೇ ಖುದ್ದು ಬಂದು ಹರಾಜಿನಲ್ಲಿ ಚಡಸವಾಲ್ ಮಾಡಬಹುದು, ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರನ್ನಾಗಲಿ ಕಳುಹಿಸಬಹುದು. ಚಡಸವಾಲ ಮಾಡಲಪೇಕ್ಷೆಯುಳ್ಳವರು ಖಾತರೀ ಬಗ್ಗೆಗಿ ಒಂದುನೂರು ರೂಪಾಯಿಗಳನ್ನ ಹರಾಜು ಕಾಲದಲ್ಲಿ ಹರಾಜು ಮಾಡುವ ಆಫಿಸರವರಲ್ಲಿ ಠೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರ್ಮಾಡಿದ್ದ ಡಿಪಾಜಿಟ ಮೊಬಲಗು ಹರಾಜು ಖೈದಾದ ಕೂಡ್ಲೆ ವಾಪಸ್ ಮಾಡಲ್ಪಡುತ್ತೆ. ಪ್ರತಿ ಒಂದು ತಾಲ್ಲೂಕಿನ ಸವಾಲ್ ಖೈದಾದ ಒಡನೆಯೇ ಅಂಗೀಕರಿಸಲ್ಪಟ್ಟ ಸವಾಲ್‌ದಾರ್ರುಗಳು ತಮ್ಮ ಸವಾಲಿನ ಒಟ್ಟು ಮೊಬಲಗಿನಲ್ಲಿ ಮೊದಲ್ ಹಾಜರ್ಮಾಡಿದ್ದ ಮೊಬಲಗೂ ಸೇರಿ ಕಾಲು ಹಿಸ್ಸೆಯನ್ನ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಡಿಪಾಜಿಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಪ್ ದುಸರಾ ಹರಾಜು ಮಾಡಿಸುವದರಲ್ಲಿ ಉಂಟಾಗುವ ನಷ್ಟಕ್ಕೂ ಸಹ ಈತನನ್ನೇ ಗುರಿಮಾಡಲ್ಪಡುತ್ತೆ. ಆದರೆ ಆದಾಯ ವೇನಾದರೂ ಹೊರಟಲ್ಲಿ ಸದರೀಯವನಿಗೆ ಅದರ ಹಕ್ಕು ಇರುವದಿಲ್ಲ.

(5) ಮೇಲ್ಕಂಡ ಮೇರೆಗೆ ನಡಿಸಲ್ಪಡಬೇಕಾಗಿ ಬರುವ ಎರಡನೇ ಹರಾಜಿನ ಆಖೈರ ಸವಾಲ್‌ಗಿಂತಲೂ ಮೊದಲನೇ ಹರಾಜಿನಲ್ಲಿ ಜಾಸ್ತಿಯಾಗಿ ವುಂಟಾಗಿದ್ದ ಮೊಬಲಗನ್ನು ಮೊದಲನೇ ಹರಾಜಿನ ಆಖೈರ ಸವಾಲ್‌ದಾರನು ಸರ್ಕಾರಕ್ಕೆ ಪಾವತಿ ಮಾಡಬೇಕು.

(6) ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರಾದ 3 ದಿವಸದೊಳಗಾಗಿ ಈ ಕೆಳಗೆ ನಮೂದಿಸಿರುವ ಷರತ್ತುಗಳ ಕಂಡು ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಇಜಾರೇದಾರನು ಮುಚ್ಚಳಿಕೆ ಬರೆದುಕೊಡಬೇಕು.

(7.) ಇಜಾರೆ ಬಾಬತು ಬಾಕಿ ಮುಕ್ಕಾಲು ಹಿಸ್ಸೆಯನ್ನು ಇದೇ ಇಸವಿ ಮೇ ಮಾಹೆ ಆಖೈರೊಳಗಾಗಿ ಪಾರ್ಖಾವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಠೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ ಯಲ್ಲದೆ ಚಕ್ಕೆ ಜಮಾಯಿಸುವ ಇಜಾರೆ ಹಕ್ಕನ್ನು ಪುನಹ ಹರಾಜು ಮಾಡುವದರಲ್ಲಿ ಬಂದೀತು.

(8.) ಮೇಲ್ಕಂಡ ಮೇರೆ ಪೂರ್ತಾ ಮೊಬಲಗು ಇರಸಾಲ ಆದನಂತರ ಈ ಕೆಳಗೆ ನಮೂದಿರುವ ಷರತ್ತುಗಳು ಕಂಡು ಒಂದು ರೂಪಾಯಿನ ಛಾಪಾ ಕಾಗದದಲ್ಲಿ ಇದೇ ಇಸವಿ ಜೂನ್ ಗುರ್ರೇ ತಾರೀಖಿನಲ್ಲಿ ಕರಾರ್ ಬರೆದುಕೊಟ್ಟು ಅನಂತರ ಬಾಬು ಸುಫರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳು ಯಾವವಂದರೆ.

(1) ಒಂದು ವರುಷಕ್ಕಿಂತಲೂ ಎಳೇದಾದ ಗಿಡಗಳನ್ನ ಕಡಿಯುವದಿಲ್ಲ.

(2) ಕಡಿಯುವ ವಿಶಿಷ್ಟ ಮೋಟು ಮತ್ತು ರಂಬೆಗಳಲ್ಲಿರುವ ಚಕ್ಕೆಯನ್ನ ನಿಶ್ಶೇಷವಾಗಿ ತೆಗೆದುಕೊಳ್ಳುತ್ತೇನೆ ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಪೊಟ್ಟೆಯನ್ನ ತೆಗೆಯದೆ ಬಿಸಾಡುವದಿಲ್ಲ.

(3) ಚಕ್ಕೆಯನ್ನ ತೆಗೆದನಂತರ ವಿಶಿಷ್ಟ ಸಾದೆಯೂ ಇಜಾರೆದಾರನಿಗೆ ಸೇರಿದ್ದೇ ಶಿವಾಯಿ ಸರ್ಕಾರಕ್ಕೆ ಸೇರಿದ್ದಲ್ಲ.

(4) ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಮೊಕರರ್ ಮಾಡುವ ಮೇರೆಗೆ ನನ್ನ ಕರಾರು ಅನುಸರಿಸಿ ಜಮಾಯಿಸಿ ಸಾಗಿಸಿಕೊಂಡು ಹೋಗುವ ಚಕ್ಕೆಗೆ ತಪ್ಪಿಲ್ಲಾಗಿ ಲೆಖ್ಖ ಇಡುತ್ತೇನೆ ಯಲ್ಲದೆ ಈ ಬಾಬತು ಲೆಖ್ಖವನ್ನ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಕೇಳಿದಾಗ್ಯೆ ತನಿಖೆಬಗ್ಗೆ ಹಾಜರ್ಮಾಡುತ್ತೇನೆ.

(5) ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿಯ ಚಕ್ಕೆಗೂ ಪ್ಯಾಸ್ ಕೊಡುತ್ತೇನೆ.

(6) ನಾನು ಜಮಾಯಿಸುವ ವಿಶಿಷ್ಟ ಚಕ್ಕೆಯನ್ನೂ 1897ನೇ ಇಸವಿ ಜೂನ್ ಆಖೈರೊಳಗಾಗಿ ನಿಶ್ಶೇಷವಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೇಟ ಫಾರೆಸ್ಟ ಮತ್ತು ಪ್ಲಾಂಟೇಷನ್‌ಗಳಲ್ಲಿ ಸಹ ನನ್ನಿಂದಲಾಗಲಿ ನನ್ನ ಕಡೆ ಜನಗಳಿಂದಲಾಗಲಿ ಬೆಂಕಿಯ ಅಥವಾ ಇನ್ನ್ಯಾವ ಕಾರಣದಿಂದಾಗ್ಯೂ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲ್‌ಗಳು ನಾಶವಾದಲ್ಲಿ ಅದರಿಂದ ವುಂಟಾಗುವ ನಷ್ಟಕ್ಕೆ ನಾನೇ ಜವಾಬ್ ಮಾಡಲು ಬದ್ಧನಾಗಿದ್ದೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ ಜನಗಳಾಗಲಿ ಅತಿಕ್ರಮಿಸಿ ನಡೆದಲ್ಲಿ ನನ್ನ ಇಜಾರೆಯನ್ನ ರದ್ದು ಮಾಡಬಹುದು. ಮತ್ತು ನಾನು ಅದುವರಗೆ ಜಮಾಯಿಸಿ ಹಾಜರಿಟ್ಟುಕೊಂಡಿರತಕ್ಕ ಚಕ್ಕೆಯನ್ನ ಸರ್ಕಾರದವರು ಜಫ್ತಿ ಮಾಡಬಹುದಲ್ಲದೆ ನಾನು ಪಾವತಿ ಮಾಡಿರುವ ಮೊಬಲಗನ್ನ ಪೂರ್ತಿಯಾಗಿ ಯಾಗಲಿ ಅಥವಾ ಆ ಪೈಕಿ ಕೆಲವು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಬಹುದು.

ಬಿ. ರಾಮಸ್ವಾಮಯ್ಯರ್,
ಫೋರ್ ಡೆಪ್ಯುಟಿ ಕಮ್ಮಿಷನರ.

ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫೀಸರವರಿಂದ.

ತಾರೀಖು 29ನೇ ಮಾಹೆ ಫಿಬ್ರವರಿ ಸ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕ ಬಳ್ಳಾಪುರ ತಾಲ್ಲೂಕು ಪೂರ್ಣಸಾಗರ ಹೋಬಳಿ ದುರ್ರಮಾರೇನಹಳ್ಳಿ, ಮಜರೆ ನಾರೇನಹಳ್ಳಿ ಯಂಬ ಬೇಚಿರಾಖ್ ಗ್ರಾಮದಲ್ಲಿ ಬಂಜರಿನಲ್ಲಿ ಇರುವ ಇನಾಂ ಶಿವಾಯಿ ಖರ್ಷ ಸರ್ಕಾರಿ ಬಾಬತು ಖು—ಿಗೆ ಆಕಾರ 155—12—0 ರೂ ಪಾಯಿವುಳ್ಳ ಸಾಗುವಳಿ ಲಾಯಖ್ ವಿಶಿಷ್ಟ ಜಮೀನುಗಳನ್ನೂ ಬಾಜಾದಲ್ಲಿ ಕಾಣಿಸಿ ಇರುವ ಅಳವೆ ಕಂದಾಯದ ಮೇಲೆ ಸಾಗುವಳಿಗೆ ಕೊಡಿಸಬೇಕೆಂತಲೂ ಸದರೀ ಜಮೀನಿಗೆ ಆಧಾರವಾಗಿರುವ ಶಿಕಸ್ತ ಕಲ್ಲುಭಾವಿ ಮೂರು ಕುಂಟೆ ವಂದು ಸಹ ದುರಸ್ತುಮಾಡಿಸಿಕೊಂಡು ತರೀ ಬಾಗಾಯತು ಜಮೀನುಗಳಿಗೆ ನೀರುಕಟ್ಟಿಕೊಳ್ಳುತ್ತಾ ಖುಷ್ಕೀ ಜಮೀನಿಗೆ ನೀರು ಕಟ್ಟಿಕೊಂಡರೆ ನೀರು ಸರದಿ ಕೊಡುವದಲ್ಲದೆ, ಭಾವಿ, ಕುಂಟೆ ಹಕ್ಕು ಸರಕಾರಕ್ಕೆ ವುಳಸಿಕೊಳ್ಳಬಹುದೆಂತಲೂ ಇದು ಬೇಚಿರಾಖ್ ಗ್ರಾಮ ಆಬಾದಿಗೆ ತರಬೇಕಾದ್ದರಿಂದ ಈ ನಂಬರಿಗಳಲ್ಲಿ ಇರತಕ್ಕ ಮಾಲ್ಕಿ ಸ್ವತ್ತು ಪೈಕಿ ಹತ್ತು ಮನೆಗಳಿಗೆ ತಕ್ಕಷ್ಟು ಮುಫತ್ತು ಬಿಟ್ಟು ಬಾಕಿ ಮಾಲ್ಕಿ ಸ್ವತ್ತಿಗೆ ಕಿಮ್ಮತ್ತು ಕಟ್ಟಿಸಿ ಕೊಡಬೇಕೆಂತಲೂ ಅದನ್ನ ವಡನೇ ಕೊಡುವದಾಗಿಯೂ ಸದರೀ ಹತ್ತು ಸಾಲ್ ಅಳವೆ ಕಾಲದಲ್ಲಿ ವರ ಸಾಲ್ 10ನೇ ವಂದು ಭಾಗದ ಮೇರಿಗೆ ಅಳವೆ ಅಖೈರ್ ಪಾಯಿದೆ ವಳಗೆ ಪೂರಾ ಜಮೀನ ಕಿರ್ದಿಗೆ ತಂದು ಸಾಗುವಳಿ ಮಾಡುವದಾಗಿಯೂ ತಪ್ಪಿದರೆ ಸದರೀ ಜಮೀನುಗಳಿಗೆ ಷುರೂ ಸಾಲ್ ಲಾಗಾಯತು ಸರಕಾರಕ್ಕೆ ಭರ ಆಕಾರ ಕೊಡುವದಾಗಿಯೂ ಈ ಷರತ್ತುಗಳ ಮೇಲೆ ಸಾಗುವಳಿಗೆ ಕೊಡಿಸಬೇಕೆಂದು ಗೋರೀಬಿದನೂರು ತಾಲ್ಲೂಕು ಅರಸಾಲ್ ಬಂಡೆ ವುರಫ್ ಮಾವಿನಕಾಯಿನಹಳ್ಳಿ ನರಸಿಂಗಪ್ಪನ ಮಗ ಶೀನಪ್ಪನೆಂಬುವನು ದರಖಾಸ್ತು ಕೊಟ್ಟು ಇರುತ್ತಾನೆ, ಆದ್ದರಿಂದ ದರಖಾಸ್ತು ಮಾಡಲ್ಪಟ್ಟ ಜಮೀನುಗಳನ್ನು ಭರ ಆಕಾರದ ಮೇಲಾಗಲಿ ಅಥವಾ ಮೇಲ್ಕಂಡ ದರಖಾಸ್ತು ನಮೂದಿಸುವ ಅಳವೆ ಕಾಲ ಮತ್ತು ಷರತ್ತುಗಳಿಗಿಂತಲೂ ಕಮ್ಮಿ ಆದ ಕಾಲ ವ ಷರತ್ತುಗಳ ಮೇಲಾಗಲಿ ಅಥವಾ ಸರಕಾರಕ್ಕೆ ಲಾಭಕರವಾದ ಇತರ ಷರತ್ತು ವಗೈರೆ ಮೇಲಾಗಲಿ ದರಖಾಸ್ತು ಮಾಡಲಪೇಕ್ಷೆವುಳ್ಳವರು ಈ ತಾರೀಖು ಲಾಗಾಯತು 3 ತಿಂಗಳ ವಳಗೆ ದರಖಾಸ್ತು ಕೊಡಬಹುದು. ಆ ಪ್ರಕಾರ ದರಖಾಸ್ತುಗಳು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ 20ನೇ ಕಲಂ 18ನೇ ಪ್ಯಾರಾ ಪ್ರಕಾರ ಯುಕ್ತಕಂಡ ರೀತಿ ವೆವಸ್ಥೆ ಮಾಡಲಾಧೀತು.

1ನೇ ಸಾಲಿಗೆ	ಕಂದಾಯ	15—12—0
2ನೇ ಡಿಟೋ	ಡಿಟೋ	31—8—0
3ನೇ ಡಿಟೋ	ಡಿಟೋ	47—4—0
4ನೇ ಡಿಟೋ	ಡಿಟೋ	63—0—0
5ನೇ ಡಿಟೋ	ಡಿಟೋ	78—12—0
6ನೇ ಡಿಟೋ	ಡಿಟೋ	94—8—0
7ನೇ ಡಿಟೋ	ಡಿಟೋ	110—4—0
8ನೇ ಡಿಟೋ	ಡಿಟೋ	126—0—0
9ನೇ ಡಿಟೋ	ಡಿಟೋ	141—12—0
10ನೇ ಡಿಟೋ	ಡಿಟೋ	155—12—0

ಬಿ. ಜಿ. ಕೃಷ್ಣಯ್ಯಂಗಾರ್,
ಸಬ್ ಡಿವಿಜನ್ ಆಫಿಸರ್.

ಫಾರೆಸ್ಟ್ ಇಲಾಖಾ.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 16ನೇ ಮಾರ್ಚಿ 1896ನೇ ಇಸವಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಸರ್ಕಾರಿ ತರ್ಫಿನಿಂದ ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ, ಮದ್ದಗಿರಿ, ಕುದುರೆಕಣಿವೆ, ಹುಲಿಯೂರದುರ್ಗ, ಬುಕ್ಕಾಪಟ್ಣದ ಫಾರೆಸ್ಟಗಳಲ್ಲಿ ಜಮಾಯಿಸಲ್ಪಟ್ಟ 1895—96ನೇ ಸಾಲ್ ಪಸಾರೆ ಜಿನಸಿಗಳು ವಗೈರೆ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುತ್ತೆ.

1896ನೇ ಇಸವಿ ಏಪ್ರೈಲ್ 14ರಲ್ಲು ಹುಲಿಯೂರದುರ್ಗದ ತಾಲ್ಲೂಕು ಕಚೇರಿಯಲ್ಲಿ.

ನಂಬರ್.	ಜಿನಸಿ ತಪಶೀಲ್.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ	..	229	..	ಸರಾಸರಿ
2	ಹೊಂಗೇಬೀಜ	1	..	..	ಡಿಟೋ
3	ಸೀಗೇಕಾಯಿ	..	20	..	ಡಿಟೋ
4	ಹುಣಸೇಹಣ್ಣು	..	10	..	ಡಿಟೋ

1896ನೇ ಇಸವಿ ಏಪ್ರೆಲ್ 17ರಲ್ಲು ತುಮಕೂರ ಡಿಪೋದಲ್ಲಿ.

ನಂಬರ.	ಜಿನಸಿ ತಪಶೀಲ್.	ಪಲ್ಲ.	ಮಣ.	ಶೇರು.	ಷರಾ.
1	ಆಳಲೇಕಾಯಿ ..	..	100	..	ಡಿಟೋ
2	ಗೇರುಬೀಜ (Marking nut) ..	1	..	..	ಡಿಟೋ
3	ಹೊಂಗೇಕಾಯಿ ..	10	..	..	ಡಿಟೋ
4	ಸೀಗೇಕಾಯಿ ..	..	85	..	ಡಿಟೋ
5	ಲಾಕ (ಅರಗು) ..	..	2	..	ಡಿಟೋ
6	ಹುಣಸ್ಸೇ ಹಣ್ಣು ..	..	100	..	ಡಿಟೋ
7	ಕಪಿಲಾರಂಗು ..	..	1	14	ಡಿಟೋ
8	ಕ್ಯಾಸು ಅರೀನತೀರು ..	ನಂಬರ 24	ಸಲಿ 51-3-3	..	ಡಿಟೋ

1896ನೇ ಇಸವಿ ಏಪ್ರೆಲ್ 20ರಲ್ಲು ಮದ್ದಗಿರಿ ಡಿಪೋದಲ್ಲಿ.

ನಂಬರ.	ಜಿನಸಿ ತಪಶೀಲ್.	ಪಲ್ಲ.	ಮಣ.	ಶೇರು.	ಷರಾ.
1	ಆಳಲೇಕಾಯಿ ..	..	700	..	ಡಿಟೋ
2	ಗೇರುಬೀಜ ..	3	..	..	ಡಿಟೋ
3	ಹೊಂಗೇಕಾಯಿ ..	..	..	50	ಡಿಟೋ
4	ಹುಣಸೇಹಣ್ಣು ..	..	10	..	ಡಿಟೋ
5	ತ್ಯಾಗದ ತೀರು ..	ನಂಬರ 124	ಸಾ|| 118-11-3	..	ಡಿಟೋ
6	ಹುಲ್ವೇ ..	1	8	..	ಡಿಟೋ

1896ನೇ ಇಸವಿ ಏಪ್ರೆಲ್ 22ರಲ್ಲು ಶಿರಾ ಮುಸಾಫರ ಬಂಗ್ಲಾದಲ್ಲಿ.

ನಂಬರ.	ಜಿನಸಿ ತಪಶೀಲ್.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ ..	..	770	..	ಡಿಟೋ
2	ಹುಣಸೇಹಣ್ಣು ..	..	6	..	ಡಿಟೋ
3	ಕುದರೆಕಣಿವೆ ಸ್ಟೇಟ್ ಫಾರೆಸ್ಟ್ ಬಾಬತು ಆಳಲೇಕಾಯಿ	..	67	..	ಡಿಟೋ

ಮೊಬಲಗು ಪಾವತಿ ಯಾ ಹರಾಜು ತಾರೀಖು ಲಾಗಾಯತು ಕಾವಲ್ ಕಟ್ಟಣೆ ಹರಾಜುದಾರ್ರಿಗೇನೇ ಸಂಬಂಧಪಡುತ್ತೆ.

ಷರತ್ತು.—ಶೇಕಡಾ 25 ರೂಪಾಯಿನಂತೆ ಡಿಪಾಜಿಟ ಮೊಬಲಗು ತಕ್ಷಣ ಕಟ್ಟಬೇಕು. ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ಒಂದು ವಾರದೊಳಗಾಗಿ ಪಾವತಿ ಮಾಡಬೇಕು, ತಪ್ಪಿದರೆ ಬಾಬನ್ನ ಪುನಹ ಹರಾಜ್ ಮಾಡಲ್ಪಡುತ್ತೆ. ಲುಕಸಾನಿಗೆ ಮೊದಲ್ ಹರಾಜುದಾರನ್ನ ಗುರಿಮಾಡುತ್ತೆ. ಸಾಮಾನುಗಳು ಹರಾಜು ತಾರೀಖು ಲಾಗಾಯತು 10 ದಿವಸಗಳ ವಳಗಾಗಿ ಸಾಗಿಸಿಕೊಳ್ಳಲ್ಪಡಬೇಕು. ಇವುಗಳ ಶಿವಾಯಿ ಇತರ ತಪಶೀಲ್‌ಗಳಿಗೆ 1887ನೇ ಇಸವಿ ಸೆಪ್ಟಂಬರ 3ನೇ ಮರ್ರ್ಹಂ 35ನೇ ನಂಬರ ಗೆಜೆಟ್ಟಿನ 1ನೇ ಭಾಗದಲ್ಲಿ ಪ್ರಾಯಿಷಾಗಿರುವ 1887ನೇ ಇಸವಿ ಆಗಸ್ಟ್ 30ನೇ ಮರ್ರ್ಹಂ 90ನೇ ನಂಬರ ಪ್ರಕಟನೆ ನೋಡಿ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ.

ಮೈಸೂರು ಫಾರೆಸ್ಟ್ ಇಲಾಖಾ.

ಇಸ್ತಿಹಾರನಾಮೆ.

ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಜಂಗಲಗಳಲ್ಲಿ ಬಿದರು, ಗಳುವನ್ನು ಕತರಾಯಿಸಿ ಜಮಾಯಿಸಿ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಗೆ ದರಖಾಸ್ತುಗಳು ಕೋರಲ್ಪಟ್ಟಿವೆ:—

(1) ನಂದೀ ಫಾರೆಸ್ಟ್ .. ತಾಲ್ಲೂಕು ಚಿಕ್ಕಬಳ್ಳಾಪುರ.
(2) ನರಸಿಂಹದೇವರ ಬೆಟ್ಟದ ಫಾರೆಸ್ಟಿನಲ್ಲಿ II ಎರಡನೇ ಬ್ಲಾಕ .. ಡಿಟೋ.
(3) ರಾಯಲ್‌ಪಾಡ್ ಫಾರೆಸ್ಟಿನಲ್ಲಿ ಮುದಿಮಡಗು ಬ್ಲಾಕ .. ಚಿಂತಾಮಣಿ.
(4) ನೂಟವೆ ಡಿಸ್ಟ್ರಿಕ್ಟ್ ಜಂಗಲ್ .. ಮಾಲೂರ.

2. ತಮಾಂ ದರಖಾಸ್ತುಗಳನ್ನೂ ಲಕ್ಕೋಟೆಗಳಲ್ಲಿ ಹಾಕಿ ಮೊಹರಮಾಡಿ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿಗೆ ರವಾನಿಸಬೇಕಲ್ಲದೆ ಪ್ರತಿ ದರಖಾಸ್ತಿನೊಂದಿಗೂ (50) ರೂಪಾಯಿಗಳನ್ನ ಠೇವಣಿ ಬಗ್ಯಾಗಿ ಕಳುಹಿಸಬೇಕಾಗಿರುತ್ತೆ. ಖಾಲೀ ದರಖಾಸ್ತುಗಳನ್ನ ಹಿಡಿಯುವದಿಲ್ಲ. ಇದೇ ಇಸವಿ ಮೇ ಮಾಹೆ ಆಖೈರ ವರಿಗೆ ದರಖಾಸ್ತುಗಳನ್ನು ಬರಮಾಡಿಕೊಂಡು ಜೂನ್ ಗುರ್ರೇ ತಾರೀಖಿನಲ್ಲಿ ಫೈಸಲ್ಮಾಡಲಾಗುತ್ತೆ.

3. ಇದೇ ಇಸವಿ ಜುಲೈ ಗುರ್ರೇ ಲಾಗಾಯತು 97ನೇ ಜೂನ್ ಆಖೈರ ವರೆಗೆ ಸಲ್ಲುವ 1896—97ನೇ ಸಾಲಿನಲ್ಲಿ ಯಾವ ಜಂಗ್ಲಿಯಿಂದ ಎಷ್ಟು ಬಿದರುಗಳನ್ನ ಕಡಿದು ತೆಗೆದುಕೊಂಡು ಹೋಗುವದಕ್ಕೆ ಒಪ್ಪುತ್ತಾರೋ ಮತ್ತು (1000) ಒಂದು ಸಾವಿರ ಬೊಂಬುಗಳಿಗೆ ಯಾವ ದರ ಕೊಡುವದಕ್ಕೆ ಕಬೂಲ್ ಇಧಾರೆ ಎಂಬ ಎರಡು ಸಂಗತಿಗಳನ್ನೂ ದರಖಾಸ್ತುದಾರರು ಸ್ಪಷ್ಟವಾಗಿ ನಮೂದಿಸಬೇಕು. ಹೆಚ್ಚು ದರ ನಮೂದುಳ್ಳ ಅಥವಾ ಇನ್ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನೂ ಹೇಳದೆ ಇಷ್ಟಬಂದರೆ ಅಂಗೀಕರಿಸುವದಕ್ಕೂ ನಿಂತದ್ದನ್ನ ತಿರಸ್ಕರಿಸುವದಕ್ಕೂ ಸಹ, ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರರಾಗಿಧಾರೆ.

4. ತಿರಸ್ಕರಿಸಲ್ಪಡುವ ದರಖಾಸ್ತು ದಾರುಗಳಿಂದ ಇಡಲ್ಪಟ್ಟ ಠೇವಣಿ ಮೊಬಲಗು ವಾಪಸು ಮಾಡಲ್ಪಡುತ್ತದೆ. ದರಖಾಸ್ತುಗಳು ಡೆಪ್ಯುಟಿ ಕಮಿಷನರವರಿಂದ ಮಂಜೂರಾದ ಸಂಗತಿಯನ್ನು ಸದರೀ ದರಖಾಸ್ತುದಾರರಿಗೆ ತಿಳಿಸಿದ ಕೂಡಲೆ ಕಂಟ್ರಾಕ್ಟಿನ ಷರತ್ತುಗಳ ಮೇರೆಗೆ ನಡೆದುಕೊಳ್ಳತಕ್ಕ ಖಾತರೀ ಬಗ್ಗೆಯಾಗಿ ಮೊದಲು ಇಟ್ಟದ್ದು (50) ಐವತ್ತು ರೂಪಾಯಿಗಳಲ್ಲದೆ ಜಾಸ್ತಿಯಾಗಿ (250) ಎರಡುನೂರ ಐವತ್ತು ರೂಪಾಯಿಗಳನ್ನ ಠೇವಣಿ ಇಡಬೇಕು. ಮತ್ತು ಈ ಕೆಳಗೆ ಕಂಡ ಮುಖ್ಯ ಸಂಗತಿಗಳನ್ನು ಕಂಡು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು.

(1) ದರಖಾಸ್ತಿನಲ್ಲಿ ಕಂಡ ಪ್ರದೇಶ ಶಿವಾಯಿ ಇತರ ಕಡೆಯಲ್ಲಿ ಕತರಾವಣಿ ಮಾಡುವದಿಲ್ಲ.

(2) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನೇಮಕವಾಡಲ್ಪಡುವ ಮೇರೆಗೆ ಕ್ರಮವಾಗಿ ಒಂದು ಕಡೆಯಿಂದ ಬಿದರನ್ನ ಕಡಿಯುತ್ತೇನೆ. ಕತರಾವಣಿ ಬಗ್ಗೆ ದಫಾ ಒಂದಕ್ಕೆ ಒಂದು ನೂರು ಎಕರೆಗೆ ಮೀರದ ತುಕಡಿಯನ್ನ ನಿಷ್ಕರ್ಷೆ ಮಾಡಿಸಿಕೊಂಡು ಅದರಲ್ಲಿ ಕತರಾವಣಿ ಪೂರೈಸಿದ ನಂತರ ಇನ್ನೊಂದು ತುಕಡಿಯನ್ನು ನಿಷ್ಕರ್ಷೆ ಮಾಡಿಸಿ ಕೊಡತಕ್ಕ ಬಗ್ಗೆ ಖಾಯಿಷ್ಮಾಡುತ್ತೇನೆ.

(3) ಪ್ರತಿ ಯೊಂದು ಪೊದೆಯಲ್ಲಿಯೂ ಹಸೀ ಯಾ ಯಳೀ ಬಿದರುಗಳನ್ನ ನಾಲ್ಕಕ್ಕೆ ಕಮ್ಮಿ ಇಲ್ಲದೆ ಬಿಟ್ಟು ನಿಂತದ್ದನ್ನ ಭೂ ಮಟ್ಟಕ್ಕೆ ಕಡಿಯುತ್ತೇನೆ.

(4) ನಾನು ಕಡಿಯುವ ಬಿದರುಗಳ ಪೈಕಿ ಹಸೀದಾಗಲಿ, ಒಣಗಿದ್ದಾಗಲಿ ಕೆಲವು ಅವದುಗಳನ್ನ ಹಾಸಲು ಕೊಟ್ಟು ಸಾಗಿಸಿಕೊಂಡು ಹೋಗಲು ಇಷ್ಟಪಡದೆ ಇರುವ ಸಂದರ್ಭದಲ್ಲಿ ಅಂಥಾ ಗಳುಗಳನ್ನ ಗಾಡೀ ಸಂಚಾರಕ್ಕೆ ಅನುಕೂಲವಾದ ಪ್ರದೇಶಗಳಲ್ಲಿ ಜಮಾಯಿಸಿಕೊಡುತ್ತೇನೆ.

(5) ಹಾಸಲು ಪಾವತಿ ಮಾಡಿ ಸಾಗಿಸಿಕೊಂಡು ಹೋಗಬೇಕೆಂದು ನಾನು ಉದ್ದೇಶಿಸುವ ವಿಶಿಷ್ಟ ಗಳುಗಳನ್ನೂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಜಾಗಗಳಲ್ಲಿ ಎಣಿಕೆಗೆ ಅನುಕೂಲವಾಗುವ ರೀತ್ಯಾ ಜಮಾಯಿಸಿ ಇಡುತ್ತೇನೆ.

(6) ಹೀಗೆ ನಾನು ಜಮಾಯಿಸಿ ಇಡುವ ಗಳುಗಳನ್ನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತುಮಾಡಲ್ಪಡುವ ಹುದ್ದೇದಾರು ಎಣಿಕೆ ಮಾಡಿದ ನಂತರ ನಾನು ಒಪ್ಪಿಕೊಂಡ ದರದ ಮೇರೆಗೆ ಪಾವತಿ ಮಾಡಬೇಕಾದ ಖರೀದಿ ಮೊಬಲಗನ್ನ ಲೆಟರ್ ಆಫ್ ಅಡ್ವೈಸ್, ಅಥವಾ ಚಲನಿನ ಒಡನೆ ಸಮೀಪದ ಖಜಾನೆಗೆ ಇರಸಾಲ್ಮಾಡಿ, ರಶೀತಿ ಹಾಜರ್ಪಡಿಸಿ ನೆಟ್ಟಿನಿಂದ, ಗಳುಗಳನ್ನ ಸಾಗಿಸಿಕೊಂಡು ಹೋಗತಕ್ಕ ಬಗ್ಗೆ ರಹದಾರಿ ಪಡೆಯುತ್ತೇನೆ.

(7) ಕೀರ್ವೆ ಪಾವತಿಯಾದ ಗಳುಗಳನ್ನ ನೆಟ್ಟಿನಿಂದ ನಿಶ್ಯೇಷವಾಗಿ ಸಾಗಿಸಿಕೊಂಡು ಹೋದ ಹೊರತು, ಜಂಗ್ಲಿಯಿಂದ ಯಾವ ಗಳುವನ್ನೂ ಹೊಸದಾಗಿ ತೆಗೆದುಕೊಂಡು ಬಂದು ನೆಟ್ಟಿನಲ್ಲಿ ಇಡುವದಿಲ್ಲ. ಮತ್ತು ಹಾಸಲು ಪಾವತಿಯಾದ ಗಳುವನ್ನು, ರಹದಾರಿ ಕೊಟ್ಟ ತಾರೀಖು ಲಾಗಾಯತು ಹದಿನೈದು ದಿವಸಗಳ ವಳಗಾಗಿ ನೆಟ್ಟಿನಿಂದ ಸಾಗಿಸಿಕೊಂಡು ಹೋಗುತ್ತೇನೆ.

(8) ನನ್ನ ಕರಾರ್ ಮಾಯಿದೆ ಕಳೆದ ನಂತರ ನನ್ನ ಬಾಬತು ಡಿಪಾಜಿಟ್ ಮೊಬಲಗು ಮೂರು ನೂರು ರೂಪಾಯಿಗಳನ್ನ ಸರ್ಕಾರದಿಂದ ವಾಪಸ್ ತೆಗೆದುಕೊಳ್ಳುತ್ತೇನೆ. ಅಥವಾ ಕರಾರಿನ ಕೊನೆ ಮೂರು ತಿಂಗಳುಗಳಲ್ಲಿ ನನ್ನಿಂದ ಬರಬೇಕಾಗುವಮೊಬಲಗ್ಗಾಗಿ ಸದರೀ ಡಿಪಾಜಿಟ್ ಮೊಬಲಗನ್ನ ಸರ್ಕಾರದವರು ಉತ್ತಾರ ಹಾಕಿಕೊಳ್ಳಬಹುದು.

(9) ನನ್ನಿಂದ ಅಥವಾ ನನ್ನ ಕಡೆ ಜನಗಳಿಂದ ಯಾವ ಕಾರಣದಿಂದಲಾಗಲಿ ಸರ್ಕಾರಕ್ಕೆ ಏನಾದರೂ ನಷ್ಟ ಸಂಭವಿಸಿದಲ್ಲಿ ಅದಕ್ಕೆ ನಾನು ಜವಾಬ್ ಮಾಡತಕ್ಕವನು.

(10) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ಉಲ್ಲಂಘಿಸಿ ನಡೆದಲ್ಲಿ ಡೆಪ್ಯುಟಿ ಕಮಿಷನರವರು ನನ್ನ ಕರಾರನ್ನ ರದ್ದುಮಾಡಿ ನಾನು ಜಮಾಯಿಸಿ ಇಟ್ಟುಕೊಂಡಿರುವ ಗಳುಗಳನ್ನೂ ಜಫ್ತಿ ಮಾಡಬಹುದು. ಮತ್ತು ಅಂಥಾ ತಪ್ಪಿತಕ್ಕಾಗಿ ಮೇಲ್ಕಂಡ ಸೆಕ್ಯೂರಿಟಿ ಮೊಬಲಗನ್ನ ಪೂರ್ತಿಯಾಗಿಯಾಗಲಿ ಆ ಪೈಕಿ ಒಂದು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಕೊಡಲುಳ್ಳವನಲ್ಲದೆ ಕ್ರಿಮಿನಲ್ ತರಫ್ ವಿಚಾರಣೆಗೂ ಸಹ ಗುರಿಯಾಗುತ್ತೇನೆ.

ಬಿ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಮೈಸೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಮಂಜಿರಾಬಾದ್ ತಾಲ್ಲೂಕು ಬೆಳಗೋಡು ಗ್ರಾಮದಲ್ಲಿರುವ ಅಕ್ಕಸಾಲೆ ನಾಗಾಚಾರಿ ಮಗ ವೀರಾಚಾರಿ ವಿಷಯದಲ್ಲಿ—

ಸ್ 1895—96ನೇ ಇಸವಿ ದಿವಾಳಿ ಕೇಸಿ ನಂಬರು 217.

ಹುಕುಂ.

ಮೇಲ್ಕಂಡ ವೀರಾಚಾರಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ರೂಬರೂ ಅರ್ಜಿದಾರನಾದ ವೀರಾಚಾರಿ ಪರವಾಗ ಅಡ್ವೋಕೇಟ್ ಮಿಸ್ಟರ್ ರಾಘವಾಚಾರು ಮತ್ತು ಸದರೀ ಯವನ ಲೇಣೇದಾರಾದ ತರಫ್ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ-1ನೇ ಅಬ್ದುಲ್‌ಮಲಿಕಸಾಬ್, 2ನೇ ಉಂಮಾಜಿ ದೇವೋಜಿ, 3ನೇ ಮುಡವಾಳಪ್ಪ 4ನೇ ವೆಂಕಟಾಚಲಶೆಟ್ಟಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ವೀರಾಚಾರಿ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ

ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯುಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ನ 1896ನೇ ಇಸವಿ ಮಾರ್ಚಿ 18ನೇ ತಾರೀಖಿನಲ್ಲಿ ಈ ಕೋರ್ಟಿ ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು, ಹಾಲಿ ತಿಳಿಯಬಂದ ಅವರಗಳ ವಾಸಸ್ಥಳ.	ಮೊಬಲಗು	ಯಾವಾಗ ಕೊಡಬೇಕು ಬೊಂಬಡವೂ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಮಂಜಿರಾಬಾದ್ ತಾಲ್ಲೂಕು ಬೆಳಗೊಡುನಲ್ಲಿರುವ ಅಬ್ದುಲ್ ಮಲಿಕ್‌ಸಾಬ್	266—12—0		ಡಿಕ್ರಿ ಬಾಬತು	
2	ಉಂಮಾಜಿ—ದೇವೋಜಿ	171—0—0		ಡಿಟೋ	

ದಿವಾಳಿಯಾದ ಡಿಕ್ರಿ ದೇಣೇದಾರ ಮೈಸೂರು ಹಳೆ ಅಗ್ರಹಾರದಲ್ಲಿರುವ ತಿರುಚನಾಪಲ್ಲಿ ಜಿಲ್ಲಾ ಕರವತ್ತೂರು ಸ್ಥಳದ ಅನಂತರಾಮಯ್ಯನ ಮಗ ರಾಮಸ್ವಾಮಯ್ಯನ ವಿಷಯದಲ್ಲಿ—

ಸ್ನ 1895—96ನೇ ಇಸವಿ ದಿವಾಳಿ ಕೇಸ್ ನಂಬರ 208.

ಹುಕುಂ.

ಮೇಲ್ಕಂಡ ರಾಮಸ್ವಾಮಯ್ಯನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರು ಅರ್ಜಿದಾರನಾದ ರಾಮಸ್ವಾಮಯ್ಯನ ಪರವಾಗಿ ಫಸ್ಟ್‌ಗ್ರೇಡ್ ಪ್ಲಿಡರ್ ಮೆ|| ವೆಂಕಟಸುಬ್ಬಯ್ಯನವರನ್ನು ಮತ್ತು ಸದರೀಯವರ ಲೇಣೇದಾರರ ದ 5ನೇ ವೆಂಕಟರಾಮಯ್ಯ ಖುದ್ದು ಹಾಜರು ಇವರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಮೈಸೂರಲ್ಲಿರುವ ಗೋವಿಂದಜಟ್ಟಪ್ಪ, 2ನೇ ಏಜಂಟ್ ಅಪ್ಪೂರಾವ್, 3ನೇ ಅಳಿಂಗಾಚಾರು, 4ನೇ ಕಾಳಿಂಗಶೆಟ್ಟರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ರಾಮಸ್ವಾಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯುಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ನ 1896ನೇ ಇಸವಿ ಮಾರ್ಚಿ ತಿಂಗಳ 18ನೇ ತಾರೀಖಿನಲ್ಲಿ ಈ ಕೋರ್ಟಿಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರಗಳ ವಾಸಸ್ಥಳ.	ಮೊಬಲಗು	ಯಾವಾಗ ಕೊಡಬೇಕು ಬೊಂಬಡವೂ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ
1	ಮೈಸೂರು ಮಂಡಿ ಮೊಹಲಾದಲ್ಲಿರುವ ಗೋವಿಂದ ಜಟ್ಟಪ್ಪ	23—6—0		ಡಿಕ್ರಿ ಬಾಬತು.	

ಎಸ್. ಆರ್. ಸುಬ್ಬರಾಯ ಅಯ್ಯರ್,
ಸಬ್ ಜಡ್ಜ್.

ಫ್ರೇಜರ್‌ಪೇಟ್ ಸಬ್ ಡಿವಿಜನ್.

ಪ್ರಸಿದ್ಧ ಪತ್ರಿಕೆ.

ತಾರೀಖು 2ನೇ ಏಪ್ರಿಲ್ 1896.

I. ಕೃಷ್ಣರಾಜಪೇಟೆ ತಾಲ್ಲೂಕು ಕಲ್ಲಹಳ್ಳಿ ಬಳಿ ಹೇಮಾವತಿ ನದಿಗೆ ಅಣೆಕಟ್ಟು ಕಟ್ಟಲು ಕಾಂಗಾರಿ ಉದ್ದಿಶ್ಯ 96ನೇ ಇಸವಿ ಏಪ್ರೈಲ್ ಮಾಹೆ 17ನೇ ತಾರೀಖು ವರಿವಿಗೂ ದರಖಾಸ್ತುಗಳು ಫ್ರೇಜರ್‌ಪೇಟ್ ಡಿವಿಜನ್ ಎಗ್ಸಿಕ್ಯೂಟಿವ್ ಇಂಜಿನಿಯರಸಾಹೇಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಮೊತ್ತವನ್ನ ಕಾಣಿಸಲ್ಪಟ್ಟಿರುತ್ತದೆ. ಇದುನಿಷ್ಕರ್ಷೆಯಾದದ್ದಾಗಿರುವದಿಲ್ಲ. ಕಾಂಮಗಾರಿಯು 1897ನೇ ಇಸವಿ ಜಾನ್ ತಿಂಗಳು ಅಖೈರೊಳಗಾಗಿ ಪೂರೈಸತಕ್ಕದ್ದು.

981

II. ಪ್ಲ್ಯಾನ ಮತ್ತು ಅಂದಾಜು ಷರತ್ತು ವಗೈರೆ ಎಗ್ಜಿಕ್ಯೂಟಿವ್ ಇಂಜಿನಿಯರ ಸಾಹೇಬರವರ ಆಫೀಸಿನಲ್ಲಿ ಪ್ರಾತಃಕಾಲ 11 ಘಂಟೇಲಾಗಾಯತು ಸಾಯಂಕಾಲ 4 ಘಂಟೇವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸಿನಲ್ಲಿ ದೊರಿಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಒಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸ ಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಕ್ಕೆ.	ಮೊತ್ತ.	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ಒಪ್ಪುವ ದರ.
ಮಣ್ಣು ಕೆಲಸ	ಸಲೆ ಗಜ 1ಕ್ಕೆ	16,000	
ಕಲ್ಲು ಕೆಲಸ			

IV. ಪ್ರತಿ ಒಂದು ದರಖಾಸ್ತಿನ ಸಂಗಡಲೂ 1000 ರೂಪಾಯಿಗಳ ಕರೆನ್ಸೀ ನೋಟುಗಳಾಗಲಿ, ಗವರ್ನಮೆಂಟ ಪ್ರಾಂಸರೀ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ಠೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಖೋಟೇ ಮೇಲೆ "ಕಲ್ಲಹಳ್ಳಿ ಅಣೆ ಕಾಂಗಾರೀ ಬಗ್ಯೆ ದರಖಾಸ್ತೆಂಬದಾಗಿ" ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನು ತಿರಸ್ಕರಿಸಲಾಧೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಚೀಫ್ ಇಂಜಿನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ಯೆಂಟು ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡ್ ಎಂಬ ಕರಾರು ಪತ್ರವನ್ನ ಬರದು ಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದು ಮಾಡಲ್ಪಟ್ಟು ಠೇವಣಾತೀ ಹಣವನ್ನ ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡು ಮೇಲೆ ಬರದು ಚಿಕ್ಕಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬೂ ದೊರಿಯಲಾರದು.

VIII. ಯಾವದಾನರೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರಿಗೆ ವಾಪಸ್ ಮಾಡಲ್ಪಡುತ್ತೆ.

IX. ಅನುಗುಣವಾದ ಕಲ್ಲುಗಳು ಕೆಲಸದ ಬಳಿಯಲ್ಲಿ ಕಟ್ಟಲು ಸರ್ಕಾರದಿಂದಲೇ ಕಂಟ್ರಾಕ್ಟದಾರ್ರಿಗೆ ಸಪ್ಲೈಮಾಡಲ್ಪಡುತ್ತೆ. ಹಾಲಿ ಟೆಂಡರು, ಗಾರೆಯನ್ನು ಸಪ್ಲೈಮಾಡಿ ಸಂಕ್ರಾಷ್ ಕಲ್ಲುನಿಂದ ಕಟ್ಟುವದಕ್ಕೆ ಮಾತ್ರವೇ ಆಗಿ ಯಿಧೆ.

ಅಣೆಕಟ್ಟು 1000 ಅಡಿ ಲಾಂಬಿ 8 ಅಡಿ ಅಗಲ ಸ್ಲೋಪು 1:4.

ಕೆಲಸದ ವಿವರ.	ಕ್ಕೆ.	ಮೊತ್ತ.
ಸುರಂಗೆ	ಸಲೆಗಜ	8
ಕಲ್ಲು ಮೆಟ್ಟು ಮೆಟ್ಟಾಗಿ ಮಾಡುವಿಕೆ	ಚದರ ಅಡಿ	9891
ಸಾಧಾರಣವಾದ ಮಟ್ಟ ಕಾಮಗಾರಿ	ಸಲೆಗಜ	180
ಸೂರ್ಕಿ ಗಾರೆ ಕಲ್ಲು	ಸಲೆಅಡಿ	71004
ಸಂಕ್ರಾಸುಮಾಡಿದ ಕಲ್ಲು ಸೂರ್ಕಿಯಿಂದ ಕಟ್ಟಲು	ಡಿಟೋ	12767
ಸಂಕ್ರಾಸುಮಾಡಿದ ಕಲ್ಲನ ಮಂಡೇರಿ	ಚದರಅಡಿ	6774
ಪೋರ್ಟ್ಲೆಂಡು ಯಾ ಶೀಮೆಸುಣ್ಣದ ಸಂದುಗಾರೆ	ಚದರ	266·79
ಚೇಲಿಂಗು	ಮೊತ್ತ ರೂ.	
ಇನ್‌ಸ್ಪೆಕ್ಷನ್ ಲಾಡ್ಜ್	ಡಿಟೋ	

ತಾಮಸ್. ಇನ್‌ಪ್ಯಾರ್,
ಎಗ್ಜಿಕ್ಯೂಟಿವ ಇಂಜಿನಿಯರ್,

ಹಾಸನ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 17ನೇ ಮಾರ್ಚಿ 1896.

ಇದರಿಂದ ಪ್ರಕಟಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಅರಶೀಕೆರೆ ಫಾರೆಸ್ಟ್ ಡಿಪೋದಲ್ಲಿ ಜಮಾಯಿಸಲ್ಪಟ್ಟಿರುವ ಸುಮಾರು (25) ಸಾವಿರ ಮಣುಗಳ ಅಳಲೇಕಾಯಿಯನ್ನು ದರ ಸಾವಿರ ಮಣಗಳಿಗೆ ಒಂದೊಂದು ಲಾಟಾಗಿ ಮಾಡಿ ಹಾಸನ ಡಿಸ್ಟ್ರಿಕ್ಟು ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್‌ವೇಟರವರ ರೂಬರೂ ಬರುವ ಏಪ್ರೆಲ್ ಮಾಹೆ 10ನೇ ತಾರೀಖು ಶುಕ್ರವಾರ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಿಸುತ್ತಾದ್ದರಿಂದ ಇಚ್ಛೆವುಳ್ಳವರು ಆ ಕಾಲಕ್ಕೆ ಹಾಜರಾಗಿ ಛಡದರಖಾಸ್ತು ಮಾಡಬಹುದಾಗಿರುತ್ತೆ.

ಹರಾಜಿನ ರೂಲ್ಸನ್ನು ಆ ಕಾಲದಲ್ಲಿ ಓದಿ ಹೇಳಲಾದೀತು ಏರ್ಜ ರೂಲ್ಸ್ ಪ್ರಕಾರವೇ ಮೇಲ್ಕಂಡ ಹರಾಜು ನಡಿಸಲ್ಪಡುವದು

ಎಸ್. ಎ. ಬಾಪೂರಾವ್,
ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್‌ವೇಟರ್.

ಇಸ್ತಿಹಾರ್‌ನಾಮೆ.

ತಾರೀಖು 24ನೇ ಮಾರ್ಚಿ ಸ್ರ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ದೊಡ್ಡಬಿಕ್ಕೋಡು ಗ್ರಾಮದಲ್ಲಿ ಇರುವ ಇದರಡಿ ನಮೂದು ಮಾಡಿರುವ ಜಮೀನಿಗೆ ಕಾಫೀ ಸಾಗುವಳಿಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ರ 1896ನೇ ಇಸವಿ ಮೇ ತಾರೀಖು 18ನೇ ಸೋಮವಾರ ಹಗಲು 11 ಘಂಟೆಗೆ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ಬೇಲೂರು ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್‌ಯಾನೆ ನಿಖುಮವಾದ ಸರಕಾರ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯುಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರ್ಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಖರ್ಚು ಜಾತಾ ಉಳಿಯುವ ಡಿಪಾಜಿಟ್ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಂಡು ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜ್ ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ದುಸರೇ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನ ಸವಾಲ್‌ಗಿಂತಾ ಕಮ್ಮಿಯಾಗುವ ಪಕ್ಷ ಕಮ್ಮಿ ಮೊಬಲಗನ್ನ ರೆವಿನ್ಯೂ ಬಾಕಿಯಂತೆ ಅವನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು; 4ನೇ 5ನೇ ಸಾಲ್ ಅರ್ಧ ಆಕಾರ, 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತಿ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

6. ಈ ನಂಬರಿನಲ್ಲಿರುವ ಸುಮಾರು 1—2 ವಿಸ್ತೀರ್ಣದ ಯರಡು ದಾರಿಗಳು ಇವೆ, ಇವುಗಳನ್ನ ಹರಾಜಿನಲ್ಲಿ ಪಡಿಯುವ ಚಡದರಖಾಸ್ತುದಾರನು ಅಡ್ಡಿಪಡಿಸಕೂಡದು. ಅವುಗಳನ್ನ ಜನೋಪಯುಕ್ತಕ್ಕಾಗಿ ಉಳಿಸಿಕೊಂಡಿಧೆ.

283

ಸರ್ವೆ ನಂಬರ.	ದರಖಾಸ್ತುದಾರನ ಹೆಸರು.	ಜಮೀನ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ, ವಿಸ್ತೀರ್ಣ.	ದರಖಾಸ್ತು ಜಮೀನಿನ, ಆಕಾರ.	ಷರಾ.
2ರ ಪೈಕಿ ಪೋಡು ನಂಬರ 172	ಮೆಸ್ಟರ್ ಜೆ. ಜಿ. ಎಚ್. ಕ್ರಾಫರ್ಡಯವರು.	ದೊಡ್ಡಬಿಕ್ಕೋಡು ಗ್ರಾಮ.	ಉತ್ತರಕ್ಕೆ—ಸರ್ವೆ ನಂಬರು 7—8—9— 0 ಮತ್ತು ಮಠ. ದಕ್ಷಿಣಕ್ಕೆ—ಸರ್ವೆ 2ನೇ ನಂಬರು ಪೈಕಿ ಪೂರ್ವಕ್ಕೆ—ಸರ್ವೆ ನಂಬರು 88—1 ಪಶ್ಚಿಮಕ್ಕೆ—ಸರ್ವೆ 2ನೇ ನಂಬರು ಪೈಕಿ	ಎ. ಗುಂ. 108—22 ಈ ನಂಬರಿನಲ್ಲಿರುವ 2ದಾರಿಗಳು ಶಿವಾಯಿ		ಖಾಯಂದರ—ಎಕರೆ 1ಕ್ಕೆ 1—8—0 ಹಂಗಾಮಿ ದರ—ಡಿಟೋ 1—0—0 ಹರಾಜಿನಲ್ಲಿ ಪಡಿಯುವವರ ಯಿಷ್ಟ ಪ್ರಕಾರ ಕಂದಾಯ ದಾಖಲ್ಮಾಡಲ್ಪಡುವದು.

ತಿಳುವಳಿಕೆ ಷರಾ.—ಒಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯುವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 18ನೇ ಮಾರ್ಚಿ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1\. ಕಂದಾಯದ ಬಾಕಿದಾರರಾದ ಡಾಕ್ಟರ್ ಸಿಡ್ನಿಸ್ಮಿತ್ ಸಾಹೆಬರು ಮತ್ತು ಬಿ. ಎ. ಬ್ರಿಟೊ ಜಂಟಿದಾರರಿಂದ ಬರಬೇಕಾದ ಜಮೀನ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಇಧೆಯಂತ ಹುಕುಂ ಮಾಡಲ್ಪಟ್ಟ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಚೇರಿಯಲ್ಲಿ ತಾಲ್ಲೂಕು ಅಮಲ್‌ದಾರ್ ಯಾ ಶಿರಸ್ತೇದಾರ್ರ ರೂಬರೂ ಸನ್ 1896ನೇ ಇಸವಿ ಮೇ 15ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ಆ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2\. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ 288—1—1 ಮತ್ತು ಬಡ್ಡಿ ವಗೈರೆ ಇತರ ರೂಪಾಯಿ ಆಗಿರುತ್ತೆ.

3\. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದ್ದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4\. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ, ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5\. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6\. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಪುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಕಿಸಮು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಕಿಸಮು.	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ಹೊಸ್ತು ಬಾಕಿ ಮೊಬಲಗು.		
1	2	3	4	5	6	7	8	9		10			11		
					ರೂ. ಅ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಮಗಳೂರು.	ಬಾಗರ.	ಶಿರಿವಾಸೆ	ಡಾಕ್ಟರ್ ಸಿಡ್ನಿಸ್ಮಿತ್ ಸಾಹೆಬರು ಬಿ. ಎ. ಬ್ರಿಟೋ ಜಂಟಿ.	..	..	17	ಕಾಫೀ	79	12	119	0	0	288 ಮತ್ತು	1 ಬಡ್ಡಿ	1 ವಗೈರೆ ಇತರ

ಬಿ. ಜೆ. ಕೊಮಾರಸಾಮಿ ನಾಯುಕ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಫಾರೆಸ್ಟ್ ಡಿಪಾರ್ಟ್ಮೆಂಟ್.

ಕಡೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 28ನೇ ಮಾರ್ಚಿ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಿಸುವ ಚೌಬೀನೆ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ಡಿಪೋದಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ 1896ನೇ ಏಪ್ರೈಲ್ 27ನೇ ತಾರೀಖಿನಲ್ಲಿ ಹರಾಜು ನಡಿಸಲ್ಪಡುವದು.

ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ತುದಿತುಂಡುಗಳು.
ತರೀಕೆರೆ	27—4—1896	2968

ಹರಾಜು ಷರತು.—ಸೆ 1895ನೇ ಇಸವಿ 15ನೇ ಮಾರ್ಚಿ 15–229 ಆರ್. ಯಫ್. 155—92ನೇ ನಂಬರು ಗವರ್ನಮೆಂಟ್ ಇಸ್ತಿಹಾರ್‌ನಲ್ಲಿ ಘಾಯಿಷ್ ಆಗಿರತಕ್ಕ ರೂಲ್ಸ್ ಹರಾಜು ವೇಳೆ ವೋದಲ್ಪಡುವದು.

ಬಿ. ಹಿರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್.

ಮೈಸೂರ ಗೆಜೆಟ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರು ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ		ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಷ್ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು.	
ಚಾಲ್ತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ			0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ್ ಉಳ್ಳ ಗವರ್ನಮೆಂಟ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್ ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ವಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮರ್ಕುಂ 24205—6—ಜಿ. 6200ನೇ ನಂಬರ್ ಗವರ್ನಮೆಂಟ ಆರ್‌ಡರ್ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಫಿಕೇಟ ಬಗ್ಯೆ ನೋಟಿಸಗಳು:—

ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)		2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ		1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ :—			
ಮೊದಲನೇ ಸಲಕ್ಕೆ		5	0
ಎರಡನೇ ವ ಆ ತರುವಾಯ ಪ್ರತಿ ದಫೆಕ್ಕೆ		2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.			
ಡ್ಯೂಪ್ಲಿಕೇಟ ಕಾಫೀ ಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸ್‌ಗಳಿಗೆ :—			
ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	”	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ	ಡಿಟೋ	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರ್‌ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರು ಗವರ್ನಮೆಂಟ ಆಯಾ ಇಲಾಖೆ ಸೆಕ್ರೇಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಗಳು ಇದರಡಿ ರುಜೂ ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಗಾಯತು ಒಂದು ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವೊಳಗಾಗಿ ಕಂಪೈಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಯಿಲ್ಲ.

ಟಿ. ಟಿ. ಲೆನಾರ್ಡ,
ಮೈಸೂರ ಗೆಜೆಟ ಕಂಪೈಲರ್.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು [ನಂ. 15.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 16, ಸನ 1896.

ವಿ ಷ ಯ ಸೂ ಚಿ ಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರ್‌ಗಳು, ಫಾರೆಸ್ಟು, ರಜಿಸ್ಟ್ರೇಷನ ವ ಯಡ್ಯುಕೇಷನ ಇನ್ಸ್‌ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಭೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 9ನೇ ಏಪ್ರೆಲ್ 1896.

ನಂ. 274.—ಮೈಸೂರ್ ಡಿ. ಸಿ. ಎರಡನೇ ರಾಜಪುತ್ರಿಯರಾದ ಕೃಷ್ಣಾಜಮ್ಮಣ್ಣಿಯವರನ್ನು ಇಂಪೀರಿಯಲ್ ಸರ್ವಿಸ್ ಲ್ಯಾನಸರ್ಸಿನ ಲೆಫ್‌ಟಿನೆಂಟ್ ಕರ್ನಲ್‌ರಾದ ಜೆ. ದೇಶರಾಜರ್ಅಸಿನವರಿಗೆ ಕೊಟ್ಟು ಬೆಳಸುವ ವಿವಾಹ ಮಹೋತ್ಸವದ ಮರ್ಯಾದಾರ್ಥವಾಗಿ 1896ನೇ ಇಸವಿ ಏಪ್ರೈಲ್ 20ನೇ ತಾರೀಖು ಸೋಮವಾರದ ದಿವಸ ಈ ಕೀಮೆಯ ತಮಾಂ ಪಬ್ಲಿಕ ಆಫಿಸಗಳೂ, ಕೋರ್ಟುಗಳೂ ಮತ್ತು ಸ್ಕೂಲ್‌ಗಳೂ ಬರಖಾಸ್ತು ಮಾಡಲ್ಪಡತಕ್ಕದ್ದು.

ನಂ. 275.—ಮೈಸೂರ್ ಡಿ. ಸಿ. ಘನವನ್ನು ಹೊಂದಿದ ಮೈಸೂರು ಶ್ರೀಮನ್ ಮಹಾರಾಜ ಕೃಷ್ಣರಾಜ ಒಡೆಯರ್ ಬಹದೂರವರ ಉಪನಯನ ಮಹೋತ್ಸವದ ಮರ್ಯಾದಾರ್ಥವಾಗಿ 1896ನೇ ಇಸವಿ ಏಪ್ರೈಲ್ 29ನೇ ತಾರೀಖು ಬುಧವಾರದ ದಿವಸ ಈ ಕೀಮೆಯ ತಮಾಂ ಪಬ್ಲಿಕ ಆಫಿಸಗಳೂ, ಕೋರ್ಟುಗಳೂ ಮತ್ತು ಸ್ಕೂಲ್‌ಗಳೂ ಬರಖಾಸ್ತು ಮಾಡಲ್ಪಡತಕ್ಕದ್ದು.

ತಾರೀಖು 31ನೇ ಮಾರ್ಚ್ 1896.

ನಂ. 11154.—ಲೋ. ಫಾ. 257–92, ಸರ್ 1894ನೇ ಇಸವಿಯು VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ ನಿಯಮಗಳನುಸರಿಸಿ ಪ್ರಸಿದ್ಧಪಡಿಸುವದೇನಂದರೆ—ಇದರಡಿ ಕಂಡ ಜಮೀನು ಸರ್ಕಾರಿ ಕೆಲಸಕ್ಕೆ ಅಂದರೆ ಚಿತ್ರದುರ್ಗ ಮ್ಯುನಿಸಿಪಾಲಿಟಿಯಲ್ಲಿ ಕೊಳ್ಳೇಗಾಲದ ಶಾಮಯ್ಯಂಗಾರ್ರ ಮನೆ ಪಕ್ಕದಲ್ಲಿ ಒಂದು ಕಸದ ತೊಟ್ಟಿಯನ್ನು ಕಟ್ಟುವ ಜಗ್ಗಾಗಿ ಅವಶ್ಯಕವಾಗಿರುತ್ತೆ:—

ಸೀರಿಯಲ್ ನಂಬರ್.	ಬೀದಿ ಹೆಸರು.	ಹಿಡುವಳೆದಾರ್ರ ಹೆಸರು.	ಟೀಕಾದ ವಿಸ್ತೀರ್ಣ.		ವಿವರಣೆ.	ಚಕ್ಕು ಬಂದಿ.			
			ಲಾಂಬಿ.	ರುಂದಿ.		ಉತ್ತರ	ದಕ್ಷಿಣ.	ಪೂರ್ವ.	ಪಶ್ಚಿಮ.
			ಗಜಗಳು						
1	ಸಂತೇಬಾಗಲ ರಸ್ತೆ.	ಕೊಳ್ಳೇಗಾಲದ ಶಾಮಯ್ಯಂಗಾರ್ ಮತ್ತು ಗರುಡಾಚಾರ್, ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫಿಸ್ ರೆವಿನ್ಯು ಅಕೌಂಟೆಂಟ್.	3	3	ಖಾಲಿ ಹಿತ್ತಲು.	ರಾಘವೇಂದ್ರ ಸ್ವಾಮಿಯವರ ಮಠದ ರಸ್ತೆ.	ಸ್ವಂತಗಾರ್ರ ಮನೆ.	ಸಂತೇಬಾಗಲಿನಿಂದ ಹುಚ್ಚಂಗಿದೇವಸ್ಥಾನಕ್ಕೆ ಹೋಗುವ ಹೈ ರೋಡು.	ಸ್ವಂತಗಾರ್ರ ಹಿತ್ತಲಿನ ಉಳಿದ ಭಾಗ.

ತಾರೀಖು 2ನೇ ಏಪ್ರೈಲ್ 1896.

ನಂ. 11271.—ಯಲ್. ಯಫ್. 197—92, ಮಿಸ್ಟರ್ ಕ್ರಿಷ್ಣಸಾಮಿಐರ್ ಬಿ. ಏ. ಮತ್ತು ಯಲ್. ಸಿ. ಯಿ. ಯವರು ಮೈಸೂರು ಶಿಟಿ ಮ್ಯುನಿಸಿಪಾಲಿಟಿಯ ಯಗ್ಜಿಕ್ಯೂಟಿವ್ ಯಿಂಜಿನೀಯರಾಗಿ ಒಂದು ವರುಷಪರಿಯಂತ ಅಜಮಾಯಿಷೀ ತರೀಕ ಮೊಕರ್ರಮಾಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಏಪ್ರೈಲ್ 1896.

ನಂ. 11295.—ಲೋ. ಫಾ. 257—92, ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ,—ಈ ಕೆಳಗಿನ ಪಟ್ಟಿಯಲ್ಲಿ ತೋರಿಸಯಿರುವ ಜಮೀನುಗಳು ಸರ್ಕಾರದ ಕೆಲಸಕ್ಕೆ ಅಂದರೆ ಕೋಲಾರ ಡಿಸ್ಟ್ರಿಕ್ಟ್ ಬಾಗೇಪಲ್ಲಿ ತಾಲ್ಲೂಕು ಬಾಗೇಪಲ್ಲಿ ಟವನ್ ಬಡಾಯಿಸುವದಕ್ಕಾಗಿ ಬೇಕಾಗಿರುತ್ತೆ:—

ನಂಬರು.	ಸರ್ವೇ ನಂಬರು.	ಖಾತೇದಾರನ ಹೆಸರು.	ಪಟ್ಟುಜಮೀನಿನ ವಿಸ್ತೀರ್ಣ.				ಹೊಂದಲ್ಪಡತಕ್ಕ ಜಮೀನು.				ಸರಹದ್ದು.			
			ವಿಸ್ತೀರ್ಣ	ಕಂದಾಯ.			ವಿಸ್ತೀರ್ಣ.	ಕಂದಾಯ.			ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು.	ರೂ.	ಆ.	ಪೈ.	ಎ. ಗು.	ರೂ.	ಆ.	ಪೈ.				
1	ಖುಷ್ಕಿ ನಂ. 160ರ ಪೈಕಿ	ಶಂಕರ ನಾಗಣ್ಣ	3—31	5	12	0	1—20	2	4	0	ಫಕ್ರುಸಾಹೇಬನ ಕಂದಾಯದ ಭೂಮಿ	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರ್ರ ಯಿನಾಮತಿ	ರಸ್ತೆ	ಖಾತೇದಾರನ ಬಾಕಿ ಜಮೀನು.
2	(ಖುಷ್ಕಿ) ಭಟ್ಟ ಇನಾಂ ನಂ. 159	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರಿ	1—38	3	0	0	0—20	0	12	0	ಶಂಕರ ನಾಗಣ್ಣನ ಕಂದಾಯದ ಭೂಮಿ	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ.	ರಸ್ತೆ	ಡಿಟೋ.
3	ಖುಷ್ಕಿ ನಂ. 153ರ ಪೈಕಿ	ಸುಣ್ಣಕಲ್ಲು ವೆಂಕಟಿಗಾ	1—11	2	0	0	0—18	0	10	9	ಪುಟ್ಟಾಚಾರಿ, ರಾಮಾಚಾರಿ ಮತ್ತು ವೇದಾಂತಾಚಾರ್ರ ಇನಾಮತಿ	ಕೋಡಿ ಚರುವು ಹನುಮಂತನ ಕಂದಾಯದ ಭೂಮಿ ಮತ್ತು ಸರ್ಕಾರದ ಖಾಲೀ ಜಮೀನು	ರಸ್ತೆ	ಡಿಟೋ.
4	ಡಿಟೋ.	ಕೋಡಿಚರವು ಹನುಮಂತ (ಅನುಭವದಾರ್ ನರಶಿಮ್ಹ)	3—12	5	0	0	0—15	0	9	0	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ಒಣಿ ಮತ್ತು ಬಾಕಿ ಜಮೀನು	ಸರ್ಕಾರದ ಬಂಜರು ಜಮೀನು	ಡಿಟೋ.

ತಾರೀಖು 4ನೇ ಏಪ್ರೆಲ್ 1896.

ನಂ. 11304.—ಯಜ್ಯುಕೇಷರ್ಷ. 357, ಪೋಲೀಸ ಇನ್ಸ್‌ಪೆಕ್ಟರ ಜನರಲ್ ಆದ ಮೆಸ್ಟರ್ ವಿ. ಪಿ. ಮಾಧವರಾಯರವರು, ರಾಜೀನಾಮೆಕೊಟ್ಟ ಮೆಸ್ಟರ್ ಪಿ. ಯರ್. ಕೃಷ್ಣಮೂರ್ತಿಗಳಿಗೆ ಬದಲಾಗಿ ಘನವನ್ನು ಹೊಂದಿದ ಮೈಸೂರು ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಮ್ಯಾನೇಜಿಂಗ ಕಮ್ಮಿಟಿಯ ಪ್ರೆಸಿಡೆಂಟರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 11323.—ಜಿ. 1252; ಕಡೂರು ಡಿಸ್ಟ್ರಿಕ್ಟು ಪೋಲೀಸ ಅಸಿಸ್ಟೆಂಟ್ ಸೂಪರ್ರಿಟೆಂಡೆಂಟರಾದ ಮೆಸ್ಟರ್ ಡಿ. ವಿ. ಬಾಲಾರ್‍ಯಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷರ್ಷಗಳ 188ನೇ ಆರ್ಟಿಕಲ್ ಅನುಸಾರವಾಗಿ ಯರಡು ತಿಂಗಳು ವ ಏಳುದಿವಸಗಳ ಪ್ರಿವಿಲೇಜು ರಜಾವನ್ನು ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಮಂಜೂರ ಮಾಡಲ್ಪಟ್ಟಿರುತ್ತೆ.

ಸದರೀ ಯವರ ಗೈರಹಾಜರಿಯಲ್ಲಿ ಪೋಲೀಸ ಸೂಪರ್ರಿಟೆಂಡೆಂಟರಾದ ಮೆಸ್ಟರ್ ಜಿ. ಡನಿಂಗ್‌ಯವರು ಕಡೂರು ಡಿಸ್ಟ್ರಿಕ್ಟಿನ ಪೋಲೀಸ್ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 7ನೇ ಏಪ್ರೆಲ್ 1896.

ನಂ. 11371.—ಜಿ. 1261, ಬೆಂಗಳೂರು ಸಿಟಿ ಮೇಜಿಸ್ಟ್ರೇಟರಾದ ಮೆಸ್ಟರ ಯಸ್. ವೈದ್ಯನಾಥಯ್ಯನವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷರ್ಷಗಳ 172ನೇ ಆರ್ಟಿಕಲ್ ಅನುಸರಿಸಿ 1896ನೇ ಇಸವಿ ಏಪ್ರೆಲ್ 13ನೇ ಮುಸ್ತುಮಿನಾರಭ್ಯ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹಂಭತ್ತು ದಿವಸಗಳ ಕ್ಯಾಜುಯಲ್ ರಜಾ ಮಂಜೂರ್ಮಾಡಲ್ಪಟ್ಟಿರುತ್ತೆ.

ತಾರೀಖು 13ನೇ ಏಪ್ರೆಲ್ 1896. ಕ್ಯಾಂಪ್, ಮೈಸೂರ್.

ನಂ. 11570.—ಮಿ. ಎಫ್. 5—90; ಮಾಹೆ ಮಜಕೂರ 6ನೇ ತಾರೀಖು ಪೂರ್ವಾಹ್ನದಲ್ಲಿ ಮೈಸೂರ ಗವರ್ನಮೆಂಟ ಮಿಲಿಟೇರಿ ಸೆಕ್ರೆಟರಿಯರ ಉದ್ಯೋಗದ ಚಾರ್ಜನ್ನು ಲೆಫ್ಟಿನೆಂಟ ಕರ್ನಲ್ ಜೆ. ದೇಶರಾಜ ಅರಸಿನವರು ಒಪ್ಪಿಸಿ ಲೆಫ್ಟಿನೆಂಟ ಕರ್ನಲ್ ಎ. ಎಚ್. ಮೆಕ್ಕಿಂಟೈರ್ರವರು ವಹಿಸಿದರು.

ತಾರೀಖು 14ನೇ ಮಾರ್ಚಿ 1896.

ನಂ. 8435.—ಆರ್. 3279, (1888ನೇ ಇಸವಿ IVನೇ ರೆಗ್ಯುಲೇಷರ್ಷ) ಮೈಸೂರ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷರ್ಷ 2ನೇ ಪ್ರಕಾರ ಅನುಸರಿಸಿ ನಾಗಮಂಗಲದ ತಾಲ್ಲೂಕು ಜೋಡಿ ಸಿವನಹಳ್ಳಿ ಗ್ರಾಮಕ್ಕೆ ಸದರೀ ಕೋಡಿನ VIII ಮತ್ತು IXನೇ ಅಧ್ಯಾಯಗಳ ನಿಯಮಗಳು ಲಗಾವಾಗಬೇಕೆಂದು ಮೈಸೂರ ಸರ್ಕಾರದವರು ಆಜ್ಞಾಪಿಸಿರುತ್ತಾರೆ.

ತಾರೀಖು 21ನೇ ಮಾರ್ಚಿ 1896.

ನಂ. 8722.—ಯಕ್ಸ್. 264.—1881ನೇ ಇಸವಿ XXIIನೇ ನಂಬರ ಯಕ್ಸೈಜ್ ಆಕ್ಟ 55ನೇ ಸೆಕ್ಷರ್ಷ ನಿಯಮಗಳನುಸರಿಸಿ ಮೈಸೂರು ಗವರ್ನಮೆಂಟಿನವರು ಆಜ್ಞಾಪಿಸುವದೇನಂದರೆ:—ಶೇಂದಿ ಇಜಾರೆದಾರ್ ಮತ್ತು ಶೇಂದಿ ದುಕಾನದಾರರುಗಳಿಗೆ ಕೊಡಲ್ಪಡುವ ಲೈಸೆನ್ಸುಗಳ ಷರತ್ತುಗಳಲ್ಲಿ ಇದರಡಿ ಕಂಡ ತಿದ್ದುಪಾಟುಗಳು ಸೇರಿಸಲ್ಪಡತಕ್ಕದ್ದು.

1893ನೇ ಇಸವಿ ಜನವರಿ 14ನೇ ಮುಸ್ತುಂ 11813—ರೆ. ಫೈ. 233—92ನೇ ನಂಬರ ಇಸ್ತಿಹಾರ್‌ನಾಮೆಯ A ಅಪೆಂಡಿಕ್ಸ್ ಆದ ಶೇಂದಿ ಇಜಾರೆದಾರರ ಲೈಸೆನ್ಸಿನ 21ನೇ ಕಲಂನಲ್ಲಿ,—

"ಶೇಂದಿಯು ಗಿಡಗಳಿಂದ ಇಳಿಸಲ್ಪಟ್ಟಂತೆ ಜನಗಳಿಗೆ ಬಿಕರೀ ಮಾಡಲ್ಪಡತಕ್ಕದ್ದು, ಮತ್ತು ಬಲ ತಗ್ಗಿಸಲ್ಪಡಕೂಡದು ಮತ್ತು "ಬೆರಿಕೆ ಮಾಡಲ್ಪಡಕೂಡದು" ಯಂಬದಕ್ಕೆ ಬದಲಾಗಿ ಇದರಡಿ ಬರುವದನ್ನು ಸೇರಿಸತಕ್ಕದ್ದು:—

"ಬಲ ತಗ್ಗಿಸಲ್ಪಟ್ಟ ಅಥವಾ ಬೆರಿಕೆ ಮಾಡಲ್ಪಟ್ಟ ಶೇಂದಿಯಾಗಲೀ ಅಥವಾ ಯರಡು ದಿವಸಗಳಿಗೆ ಮುಂಚಿತವಾಗಿ ಇಳಿಸಲ್ಪಟ್ಟ "ಶೇಂದಿಯಾಗಲಿ ಬಿಕರಿ ಮಾಡಲ್ಪಡಕೂಡದು ಯಾ ಬಿಕರಿ ಬಗ್ಯೆ ಕೊಡಲ್ಪಡಕೂಡದು ಅಥವಾ ದುಕಾನಿನಲ್ಲಿ ಇಡಲ್ಪಡಕೂಡದು."

2. 1893ನೇ ಇಸವಿ ಜನವರಿ 14ನೇ ಮುಸ್ತುಂ 11813.—ರೆ. ಫೈ. 233—92ನೇ ನಂಬರ ಇಸ್ತಿಹಾರ್‌ನಾಮೆ B ಅಪೆಂಡಿಕ್ಸ್ ಆದ ಶೇಂದಿ ಚಿಲ್ಲರೆ ಮಾರಾಟದ ಲೈಸೆನ್ಸಿನ 4ನೇ ಷರತ್ತಿನಲ್ಲಿ ಬರುವ ಮೊದಲನೇ ವಾಕ್ಯವಾದ ಇದರಡಿ ಕಾಣಿಸಿರುವದಕ್ಕೆ ಅಂದರೆ:—

"ಬಲತಗ್ಗಿಸಲ್ಪಟ್ಟ ಯಾ ಬೆರಿಕೆ ಮಾಡಲ್ಪಟ್ಟ ಶೇಂದಿಯಾಗಲಿ ಅಥವಾ ಎರಡು ದಿವಸಗಳಿಗೆ ಮುಂಚಿತವಾಗಿ ಉತಾರ್ ಮಾ "ಡಲ್ಪಟ್ಟ ಶೇಂದಿಯಾಗಲಿ ಬಿಕರಿ ಮಾಡಲ್ಪಡಕೂಡದು." ಎಂಬದಕ್ಕೆ ಬದಲಾಗಿ.

"ಬಲ ತಗ್ಗಿಸಲ್ಪಟ್ಟ ಅಥವಾ ಬೆರಿಕೆ ಮಾಡಲ್ಪಟ್ಟ ಶೇಂದಿ ಆಗಲಿ ಅಥವಾ ಎರಡು ದಿವಸಗಳಿಗೆ ಮುಂಚಿತವಾಗಿ ಉತಾರ್ ಮಾಡ "ಲ್ಪಟ್ಟ ಶೇಂದಿ ಆಗಲಿ ಬಿಕರೀ ಮಾಡಲ್ಪಡಕೂಡದು ವ ಬಿಕರೀ ಬಗ್ಯೆ ಕೊಡಲ್ಪಡಕೂಡದು. ಮತ್ತು ದುಕಾನಗಳಲ್ಲಿ ಇಡಲ್ಪಡಲೂ ಕೂಡದು" ಎಂಬ ಮಾತುಗಳನ್ನು ಸೇರಿಸತಕ್ಕದ್ದು.

ತಾರೀಖು 24ನೇ ಮಾರ್ಚಿ 1896.

ನಂ. 8758.—ಆರ್. 3394, 1894ನೇ ಇಸವಿ VIIನೇ ನಂಬರ ಲ್ಯಾಂಡ್ ಅಕ್ವಿಜಿಷರ್ಷ ರೆಗ್ಯುಲೇಷನಿನ 6ನೇ ಸೆಕ್ಷರ್ಷ ನಿಯಮಗಳನುಸರಿಸಿ ಯಿದರಿಂದ ಪ್ರಕಟಿಸಲ್ಪಡುವದೇನಂದರೆ,—ಈ ಕೆಳಗೆ ನಮೂದಿಸಿರುವ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಕೋಲಾರದಲ್ಲಿ ಡೆಪ್ಯುಟಿ ಕಮ್ಮಿಷನರವರ ಹೊಸ ಬಂಗಲೆಯ ಕಾಂಪೌಂಡಿಗಾಗಿ ಬೇಕಾಗಿಯಿರುತ್ತೆ.

289.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೇ ಸೆಟಲ್‌ಮೆಂಟಿಗೆ ಪೂರ್ವದ ಹಳೇ ಲೆಖ್ಖಗಳ ಪ್ರಕಾರ ಜಮೀನಿನ ತಪ್ಸೀಲ್.				ಚಕ್ಕುಬಂದಿ.			
					ಬಗೆ.	ನಂಬರು.	ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಖಂ. ಕೊ. ಪ.	ರೂ. ಆ. ಪೈ				
ಕೋಲಾರ	ಕೋಲಾರ	ಕೋಲಾರ	ಕೋಲಾರ ಪೇಟೆ	ಗೋವಿಂದರಾಜು ಪಿಳ್ಳೆ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ ಖುಷ್ಕಿ	603 605	0—0—2 0—0—10½	0-1-9 0-9-2	ಮಾಜಿ ನಂ. 602 ತೋಟ	ಮಾಜಿ ನಂ. 604 ಬಂಜರು	ಮಾಜಿ ನಂ. 605 ಪಲ್ಲಿಗಕುಂಟೆ	ಮಾಜಿ ನಂ. 599 ಸರ್ಕಾರದ ಬಂಜರು
				ವಾನಂಬಾಡಿ ಬಸಪ್ಪ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ	605	0—0—7¾	0-6-11	ಮಾಜಿ ನಂ. 606 ಬಂಜರು	ಮಾಜಿ ನಂ. 598 ರಸ್ತೆ	ಮಾಜಿ ನಂ. 486 ಚರಂಡಿ	ಮಾಜಿ ನಂ. 602, 603 ಮತ್ತು 604 ಬಂಜರು

ತಾರೀಖು 26ನೇ ಮಾರ್ಚಿ 1896.

ನಂ. 8947.—ಯಕ್ಸ್. 274, 1892ನೇ ಇಸವಿ ಮಾರ್ಚಿ 30ನೇ ಮರ್ಕುಂ 495ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ ನಾಮೆಯ 5ನೇ ರೂಲಿನ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರದಿರುವದನ್ನ ಸೇರಿಸತಕ್ಕದ್ದು.

"ಹಳೇ ಸಾರಾಯಿ ಅಂದರೆ 10 ದಿವಸಗಳು ಯಾ ಅದಕ್ಕೆ ಜಾಸ್ತಿ ಕಾಲದ ಸಾರಾಯಿಯು ಡಿಸ್ಟಿಲೇರಿಯಿಂದ ಯಾವಾಗ್ಯೂ ಕೊ
"ಡಲ್ಪಟ್ಟು 50 ಮೈಲಿ ಫಾಸಲೆ ವಳಗೆ ಇರತಕ್ಕ ಡಿಪೋಗಳಿಗೆ 20° ಡಿಗ್ರಿ ಅಂಡರ್ ಪ್ರೂಫಿಗೆ ಪ್ಯಾಸ್ ಮಾಡಲ್ಪಡತಕ್ಕದ್ದು ಮತ್ತು
"ಡಿಸ್ಟಿಲೇರಿಯಿಂದ 50 ಮೈಲಿಗಳಿಗಿಂತ ಜಾಸ್ತಿ ಫಾಸಲೆ ಇರತಕ್ಕ ಡಿಪೋಗಳಿಗೆ 19·5 ಡಿಗ್ರಿ ಅಂಡರ್‌ಪ್ರೂಫ್ ವುಳ್ಳ ಸಾರಾಯಿಯು
"ಪ್ಯಾಸ್ ಮಾಡಲ್ಪಟ್ಟು 20°, ಡಿಗ್ರಿ ಅಂಡರ್‌ಪ್ರೂಫಿಗೆ ಚಾರ್ಜು ಮಾಡಲ್ಪಡತಕ್ಕದ್ದು. ಪರಂತು ದಾಸ್ತಾ ಇಲ್ಲದ ಸಬಬಿನಿಂದ ಅಥವಾ
"ಮತ್ಯಾವ ಕಾರಣದಿಂದಲಾದರೂ ಅಂಥಾ ಹಳೇ ಸಾರಾಯಿ ಇಲ್ಲದೆ ಇದ್ದು ಹೊಸ ಸಾರಾಯಿ ಅಂದರೆ 10 ದಿವಸಕ್ಕಿಂತ ಕಮ್ಮಿ ದಿವಸ
"ದ ಸಾರಾಯಿ ಕೊಡಬೇಕಾದ ಅವಶ್ಯಕ ಕಂಡುಬಂದರೆ ಅಂಥಾ ಹೊಸ ಸಾರಾಯಿಯು ಡಿಸ್ಟಿಲೇರಿಯಿಂದ 50 ಮೈಲಿಗಳಿಗಿಂತ ಕಮ್ಮಿ
"ಫಾಸಲೆಯಲ್ಲಿರುವ ಡಿಪೋಗಳಿಗೆ 19·5° ಅಂಡರ್‌ಪ್ರೂಫ್ ಡಿಗ್ರಿಗೆ ಪ್ಯಾಸ್ ಮಾಡಲ್ಪಡತಕ್ಕದ್ದಲ್ಲದೆ 50 ಮೈಲಿಗಿಂತ ಜಾಸ್ತಿ ಫಾಸಲೆಯಲ್ಲಿ
"ರುವ ಡಿಪೋಗಳಿಗೆ 19° ಡಿಗ್ರಿ ಅಂಡರ್‌ಪ್ರೂಫಿಗೆ ಪ್ಯಾಸ್ ಮಾಡಲ್ಪಟ್ಟ 20°. ಡಿಗ್ರಿ ಅಂಡರ್ ಪ್ರೂಫಿಗೆ ಚಾರ್ಜು ಮಾಡಲ್ಪಡತಕ್ಕದ್ದು."

ತಾರೀಖು 30ನೇ ಮಾರ್ಚಿ 1896.

ನಂ. 8966.—ಆರ್. ಎಫ್. 99—95, ಶ್ರೀರಂಗಪಟ್ಣದ ಡೆಪ್ಯುಟಿ ಅಮಲ್‌ದಾರ್ರಾದ ಡಿ. ಸುಬ್ಬರಾಯರಿಗೆ, 1896ನೇ ಇಸವಿ ಜನವರಿ 28ನೇ ಮರ್ಕುಂ 6851—ಆರ್. 2672ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ಹತ್ತು ದಿವಸಗಳ ಕ್ಯಾಜುಯಲ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 8969.—ಆರ್. ಎಫ್. 100—95, ಮಂಡ್ಯದ ತಾಲ್ಲೂಕು ಅಮಲ್‌ದಾರ್ರಾದ ವಿ. ಎನ್. ಗುರುರಾಯರಿಗೆ, 1896ನೇ ಇಸವಿ ಫೆಬ್ರವರಿ 10ನೇ ಮರ್ಕುಂ 8279—ಆರ್. 3204ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ಮೂರು ದಿವಸಗಳ ಕ್ಯಾಜುಯಲ್ ರಜಾವು ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಇನ್ನೂ ಏಳು ದಿವಸಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ.

ಅಮಲ್‌ದಾರ್ರು ರಜಾದಮೇಲೆ ಗೈರ್ ಹಾಜರಿರುವ ಕಾಲದಲ್ಲಿ ತಾಲ್ಲೂಕು ಶಿರಸ್ತೇದಾರ್ರು ತಾಲ್ಲೂಕಿನ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 2ನೇ ಏಪ್ರಿಲ್ 1896.

ನಂ: 9037.—ಆರ್. ಎಫ್. 104—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 173ನೇ ಆರ್ಟಿಕಲ್ ಅನುಸರಿಸಿ ತುಮಕೂರ್ ತಾಲ್ಲೂಕು ಅಮಲ್‌ದಾರ್ರಾದ ಮಹಮ್ಮದ್ ರಜಾಯವರಿಗೆ, 1896ನೇ ಇಸವಿ ಮಾರ್ಚಿ 28ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿನೈದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮಹಮ್ಮದ್ ರಿಜಾಯವರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರಿಗೂ ತುಮಕೂರು ತಾಲ್ಲೂಕು ಪೊಲೀಸ್ ಇನ್ಸ್‌ಪೆಕ್ಟರಾದ ನಾಗೇಶ್ವರಯ್ಯನವರು ತುಮಕೂರು ತಾಲ್ಲೂಕು ಅಮಲ್‌ದಾರ್ ಮತ್ತು ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಹಂಗಾಮಿ ತರೀಕ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 9094.—ಆರ್. ಎಫ್. 107—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್‌ದಾರರಾದ ವೆಂಕಟಾಚಲಯ್ಯನವರು, 1896ನೇ ಇಸವಿ ಮಾರ್ಚಿ 10ನೇ ತಾರೀಖಿನ ದಿನ ಒಂದು ದಿವಸದ ಕ್ಯಾಜುಯಲ್ ರಜಾ ಕೊಡಲ್ಪಟ್ಟರು.

ನಂ. 9097.—ಆರ್. ಎಫ್. 103—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಮಾಗಡೀ ತಾಲ್ಲೂಕು ಅಮಲ್‌ದಾರ್ ಎಂ. ಪಿ. ತಿರುಮಲಾಚಾರ್ಯರವರು, 1896ನೇ ಇಸವಿ ಮಾರ್ಚಿ 25ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಮಲ್‌ದಾರರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತರ ತಾಲ್ಲೂಕು ಶಿರಸ್ತೇದಾರರು ತಾಲ್ಲೂಕಿನ ಚಾಲ್ತೀ ಕೆಲಸದ ಚಾರ್ಜಿನಲ್ಲಿ ಇರತಕ್ಕದ್ದು.

ನಂ. 9101.—ಆರ್. ಎಫ್. 105—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಸೆಕ್ಷನ್ ಅನುಸರಿಸಿ ತಿಪಟೂರು ತಾಲ್ಲೂಕು ಅಮಲ್‌ದಾರ್ ಬಿ. ಸೀತಾರಾಮಯ್ಯನವರು, 1896ನೇ ಇಸವಿ ಏಪ್ರೈಲ್ ಮಾಹೆ ಗುರ್ರೇ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖು ಲಾಗಾಯತು ಒಂದು ತಿಂಗಳು ಮತ್ತು ಐದು ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಬಿ. ಸೀತಾರಾಮಯ್ಯನವರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರಿಗೂ ತುರವೇಕೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್‌ದಾರರು ಅವರ ಸ್ವಂತ ಕೆಲಸಗಳೊಂದಿಗೆ ತಿಪಟೂರು ತಾಲ್ಲೂಕಿನ ಅಮಲ್‌ದಾರ್ ಮತ್ತು ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಹಂಗಾಮಿ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 9108.—ಆರ್. 3524,—ಹುಜೂರ್ ಹೆಡ್ ಶಿರಸ್ತೇದಾರರಾದ ಮಿಸ್ಟರ್ ಸಿ. ರಾಮರಾಯರು, 1896ನೇ ಇಸವಿ ಜನವರಿ 30ನೇ ಮುರ್ಖಂ 6780—ಆರ್. 2623ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟ ಎರಡು ತಿಂಗಳುಗಳ ಪ್ರಿವಿಲೇಜ್ ರಜಾವನ್ನು 1896ನೇ ಇಸವಿ ಫೆಬ್ರುವರಿ 5ನೇ ಮುರ್ಖಂ ಲಾಗಾಯತು ಉಪಯೋಗಿಸಿಕೊಂಡು ಮಾಹೆ ಮಜಕೂರ್ 2ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸದಮೇಲೆ ವಾಪಸ್ ಬಂದಿರುತ್ತಾರಾಗಿ ಅವರು ಉಪಯೋಗಿಸಿಕೊಳ್ಳದ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 9111.—ಆರ್. ಎಫ್. 108—96,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಗುಂಡ್ಲುಪೇಟೆ ತಾಲ್ಲೂಕು ಅಮಲ್‌ದಾರರಾದ ಹೆಚ್. ಆರ್. ಶ್ರೀನಿವಾಸರಾಯರು, 1896ನೇ ಇಸವಿ ಏಪ್ರೈಲ್ 6ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಮಲ್‌ದಾರರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರರು ಅವರ ಕೆಲಸಗಳ ಜೊತೆಗೆ ತಾಲ್ಲೂಕಿನ ಚಾಲ್ತೀ ಕೆಲಸವನ್ನು ವಹಿಸಿರತಕ್ಕದ್ದು.

ನಂ. 9114.—ಆರ್. ಎಫ್. 102—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ನೆಲಮಂಗಲ ತಾಲ್ಲೂಕು ಅಮಲ್‌ದಾರ್ ಸಿ. ರಾಜಗೋಪಾಲಯ್ಯಂಗಾರರು, 1896ನೇ ಇಸವಿ ಏಪ್ರೈಲ್ ಗುರ್ರೇ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖು ಲಾಗಾಯತು ಐದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಮಲ್‌ದಾರರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರರು ತಾಲ್ಲೂಕಿನ ಚಾಲ್ತೀ ಕೆಲಸಗಳನ್ನು ವಹಿಸಿರತಕ್ಕದ್ದು.

ತಾರೀಖು 6ನೇ ಏಪ್ರೈಲ್ 1896.

ನಂ. 9151.—ಆರ್. ಎಫ್. 110—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಹುಣಸೂರು ತಾಲ್ಲೂಕು ಅಮಲ್‌ದಾರ್ ಮಿರ್ ನೈಜಾಮುದ್ದೀನ್ ಅಲ್ಲಿಖಾನ್‌ಯವರು 1896ನೇ ಇಸವಿ ಏಪ್ರೈಲ್ 2ನೇ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಅಮಲ್‌ದಾರರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರರು ಅವರ ಕೆಲಸಗಳ ಜೊತೆಗೆ ತಾಲ್ಲೂಕಿನ ಚಾಲ್ತೀ ಕೆಲಸಗಳನ್ನು ವಹಿಸಿರತಕ್ಕದ್ದು.

ಮೈಸೂರ್ ಕ್ಯಾಂಪ್; ನಂ. 97, ತಾರೀಖು 13ನೇ ಏಪ್ರೈಲ್ 1896.

1896ನೇ ಇಸವಿ ಮಾರ್ಚಿ 6ನೇ ಮುರ್ಖಂ 8032—ಎಕ್ಸ್. 245ನೇ ನಂಬರು ಮತ್ತು ಅದೇ ಮಾಹೆ 5ನೇ ಮುರ್ಖಂ 8030—ಎಕ್ಸ್. 243ನೇ ನಂಬರು ಇಸ್ತಿಹಾರುಗಳಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಯಡತೊರೆ, ಹುಣಸೂರು, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ತಿರಮುಕೂಡ್ಲು ನರಸೀಪುರ ಈ ತಾಲ್ಲೂಕುಗಳ ಬಾಬತು 1896-97ನೇ ಸಾಲಿನ ಸಾಯರ್ ಬಿಕರಿ ಗುತ್ತಿಗೆ ಫಿರಖಾಗಳ ಮತ್ತು ಕೇಂದಿ ಫಿರಖಾಗಳ ಹರಾಜು ಬಗ್ಗೆ ಮೊಕರರೂ ಮಾಡಲ್ಪಟ್ಟಿರುವ ತಾರೀಖುಗಳಿಗೆ ಬದಲಾಗಿ ಇದರಡಿ ನಮೂದಿಸೋಣಾದ ತಾರೀಖುಗಳಲ್ಲಿ ಹರಾಜು ಕ್ರಮ ನಡಿಸಲ್ಪಡುವದು:—

ತಾಲ್ಲೂಕು.		ಪರಾಬು.		ಕೇಂದಿ.	
ಯಡತೊರೆ	..	1896ನೇ ಮೇ ತಾ॥ 23.		1896ನೇ ಮೇ ತಾ॥ 23.	
ಹುಣಸೂರು	..	ಡಿಟ್ಟೋ	25.	ಡಿಟ್ಟೋ	25 ಮತ್ತು 26.
ಹೆಗ್ಗಡದೇವನಕೋಟೆ	..	ಡಿಟ್ಟೋ	27.	ಡಿಟ್ಟೋ	27.
ಗುಂಡ್ಲುಪೇಟೆ	..	ಡಿಟ್ಟೋ	29.	ಡಿಟ್ಟೋ	29 ಮತ್ತು 30.
ಚಾಮರಾಜನಗರ	..	ಡಿಟ್ಟೋ	31.	ಡಿಟ್ಟೋ	31 ಮತ್ತು ಜೂನ್ ತಾ॥ 1.
ಯಳಂದೂರು	..	1896ನೇ ಜೂನ್ ತಾ॥ 2.		ಡಿಟ್ಟೋ	ಡಿಟ್ಟೋ
ತಿರಮುಕೂಡ್ಲು ನರಸೀಪುರ	..	ಡಿಟ್ಟೋ	3.	1896ನೇ ಜೂನ್ ತಾ॥ 3 ಮತ್ತು 4.	

ಮೈಸೂರು ಸರ್ಕಾರದಿಂದ ಹೊರಡಿಸಲಾದ ಇಸ್ತಿಹಾರ್‌ನಾಮೆ.

ನಂಬರ್ 8550—ಯು. 260.

ತಾರೀಖು 18ನೇ ಮಾರ್ಚಿ 1896.

ಇದರಿಂದ ಪ್ರಕಟಪಡಿಸುವದೇನಂದರೆ, 1896 ನೇ ಇಸವಿ ಜುಲೈ ಒಂದನೇ ತಾರೀಖು ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ 12 ತಿಂಗಳ ಕಾಲದಲ್ಲಿ ಇಜಾರೇದಾರ್ರು ಕೈಕೆಳಗಿನ ಅಂಗಡೀದಾರ್ರಿಂದ ಜನಗಳಿಗೆ ಮತ್ತು ಬೇಕರ್ಸ್ ಯಾನೆ ರೊಟ್ಟಿ ಕಾರಖಾನೆಯವರಿಗೆ ಈಚಲು ಮರದ ಶೇಂದಿಯು ಇದರಡಿ ನಮೂದಿಸಿರುವ ಮೇರೆ ಜಿಲ್ಲರೇ ದರಗಳಿಗೆ ಮಾರಲ್ಪಡತಕ್ಕದ್ದು:—

ಡಿಸ್ಟ್ರಿಕ್ಟು	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ. ಉತ್ತಮ.	ಕನಿಷ್ಟ.	ರೊಟ್ಟಿ ಕಾರಖಾನೆಯವರಿಗೆ ಒಂದು ಶೇರಿನ ಗೊತ್ತಾದ ಧರ
ಬೆಂಗಳೂರು.	ಸಿವಿಲ್ ವ ಮಿಲಿಟರಿ ಸ್ಟೇಷನ್ ಮತ್ತು ಷಹರ್ ...	0 1 6	0 1 0	0 1 0
	ತಾಲ್ಲೂಕು ಕಸಬಾಗಳು ...	0 1 3	0 0 10	
	ಮೈಸೂರ್ ಡಿಸ್ಟ್ರಿಕ್ಟಿನ ಬಾಜೂದಲ್ಲಿರುವ ಗ್ರಾಮಗಳು, ಅಂದರೆ:—			
	ಚೆನ್ನಪಟ್ಟಣದ ತಾಲ್ಲೂಕಿಗೆ ಸೇರಿದ ಇಗ್ಗಲೂರು, ಗೀಜಗದಾಸನ ದೊಡ್ಡಿ, ಜೆಗದಾಪುರ, ಕುಕ್ಕೂರು, ಪೂರಗನಹಳ್ಳಿ, ದಾಮನಗುಂಡು, ಮತ್ತು ಅರಳಾಪುರ ಎಂಬುವ ಗ್ರಾಮಗಳು ಕಾನಕಾನಹಳ್ಳಿ ತಾಲ್ಲೂಕಿಗೆ ಸೇರಿದ ಸಾತನೂರು ಮತ್ತು ಹಲಸೂರು ಎಂಬುವ ಗ್ರಾಮಗಳು ...	0 0 6	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ ...	0 1 0	0 0 8	
ಕೋಲಾರ.	ತಾಲ್ಲೂಕು ಕಸಬಾಗಳು ...	0 1 3	0 0 10	
	ಕೋಲಾರಿಗೆ ಸೇರಿದ ಬಿಂಬ, ಬಾವರಿಂಗುಪ್ಯಾಟೆಗೆ ಸೇರಿದ ನೇರನಹಳ್ಳಿ, ಚಿಕ್ಕಬಳ್ಳಾಪುರಕ್ಕೆ ಸೇರಿದ ರಂಗಸ್ಥಳ, ಗೋರೀಬಿದನೂರಿಗೆ ಸೇರಿದ ಗುಂಡಾಪುರ, ಚಿಕ್ಕ ಕುರುಗೋಡು, ಹಿರೇಬಿದನೂರು, ಗೊಟ್ಟಿಗನಪುರ ಮತ್ತು ಕಲ್ಲೂಡಿ, ಮತ್ತು ಬಾಗೇಪಲ್ಲಿಗೆ ಸೇರಿದ ಗಂಟಂವಾರಿಪಲ್ಲಿ, ಹೊಸಕೋಟೆ ಮತ್ತು ಮಲ್ಲಸಂದ್ರ ಎಂಬ ಗ್ರಾಮಗಳಲ್ಲಿ ...	0 1 3	0 0 10	
	ಇತರ ಎಲ್ಲಾ ಗ್ರಾಮಗಳಲ್ಲಿ ...	0 1 0	0 0 8	
ತುಮಕೂರು.	ಹುಳಿಯಾರ್ ಸಬ್ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ ...	0 0 8	0 0 6	
	ಶಿರಾ ತಾಲ್ಲೂಕಿನ ಕಸಬಾ ದುಕಾನುಗಳಲ್ಲಿ ...	0 1 3	0 0 6	
	ಇತರ ಎಲ್ಲಾ ತಾಲ್ಲೂಕು ಕಸಬಾಗಳಲ್ಲಿ ...	0 1 3	0 0 10	
	ಕುಣಿಗಲ್ ತಾಲ್ಲೂಕಿಗೆ ಸೇರಿದ ಹುಳಿಯಾರದುರ್ಗ, ಪುರ ಮತ್ತು ಕೋಡವಟ್ಟಿ ಎಂಬ ಗ್ರಾಮಗಳಲ್ಲಿ ...	0 0 6	0 0 4	
	ಹುಳಿಯಾರು ಸಬ್ ತಾಲ್ಲೂಕಿನ ಗ್ರಾಮಗಳಲ್ಲಿ ...	0 0 6	0 0 4	
	ಶಿರಾ ತಾಲ್ಲೂಕಿನ ಗ್ರಾಮಗಳಲ್ಲಿ ...	0 1 0	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ ...	0 1 0	0 0 8	
ಮೈಸೂರು.	ಮೈಸೂರ ಟೌನ್ ...	0 1 0	0 0 10	
	ಮೈಸೂರು ತಾಲ್ಲೂಕಿಗೆ ಸೇರಿದ ಹೊಸಕೊಳ, ಹಾರೋಹಳ್ಳಿ, ವರುಣಾ, ವುತ್ತನಹಳ್ಳಿ ಮತ್ತು ಕುಪ್ಪೆಗಾಲ ಎಂಬ ಗ್ರಾಮಗಳು ...	0 0 8	0 0 4	
	ಮೈಸೂರು ತಾಲ್ಲೂಕಿಗೆ ಸೇರಿದ ಚಾಮುಂಡಿ ಮತ್ತು ಉತ್ತನಹಳ್ಳಿ ಜಾತ್ರೆಗಳಲ್ಲಿ ...	0 1 0	0 0 8	
	ಮೈಸೂರು ತಾಲ್ಲೂಕಿಗೆ ಸೇರಿದ ಕಲಸ್ವಾಡಿ, ಸುಕ್ಕಹಳ್ಳಿ, ರಾಂನಹಳ್ಳಿ, ಕುಂಚಿಗರ ಕಟ್ಟೆ ಮತ್ತು ಅಮ್ಮನವರಕೊಳ ಎಂಬ ಗ್ರಾಮಗಳಲ್ಲಿ ...	0 1 0	0 0 10	
	ಮೈಸೂರು ತಾಲ್ಲೂಕಿಗೆ ಸೇರಿದ ಭೂಗದಹಳ್ಳಿ, ಕೆಂಚಲಗೂಡು, ಮರಟಿಕ್ಯಾತನಹಳ್ಳಿ ಮತ್ತು ಗಣಂಗೂರ್ ಹುಂಡಿ ಎಂಬ ಗ್ರಾಮಗಳಲ್ಲಿ ...	0 0 10	0 0 8	
	ಹೆಗ್ಗಡದೇವನಕೋಟೆ ಕಸಬ ...	0 0 10	0 0 4	
	ಮಾಗಡಿಹಳ್ಳಿ ಕಾಡುಗ್ರಾಮದಲ್ಲಿ ...	0 1 0	0 0 8	
	ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿದ ಸರಗೂರು, ಕಿತ್ತೂರು, ಮರಳುಮಗ್ಗೆ, ಸೋಗೆರೆ, ಅಂತ್ರಸಂತೆ, ನೇರಳೆ, ಎಲ್ಲಮತ್ತೂರು, ಕಾರೇಪುರ, ಮತ್ತು ಗಿಶನೆ ಎಂಬ ಗ್ರಾಮಗಳಲ್ಲಿ ...	0 0 8	0 0 6	

ಜಿಲ್ಲೆ.	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಸೇರು ಒಂದಕ್ಕೆ ಖರೀದಿ. ಉತ್ತಮ.	ಕನಿಷ್ಟ.	ರೂಪಾಯಿಯೊಂದಕ್ಕೆ ಬರುವ ಸೇರುಗಳ ಸಂಖ್ಯೆ
ಮೈಸೂರು	ಹೆಗ್ಗಡ ದೇವನಕೋಟೆ ತಾಲ್ಲೂಕಿಗೆ ಸೇರಿದ ಚಿಕ್ಕಳ್ಳಿ, ಮತ್ತಿಕೆರೆ, ಎಡತೊರೆ ಮತ್ತು ಹಿರಿಹಳ್ಳಿ, ಎಂಬ ಗ್ರಾಮಗಳು	0 0 10	0 0 4	
	ಇತರ ಎಲ್ಲಾ ಗ್ರಾಮಗಳಲ್ಲಿ	0 0 8	0 0 4	
	ಹುಣಸೂರು ಕಸಬ	0 0 10	0 0 6	
	ಹುಣಸೂರು ತಾಲ್ಲೂಕಿಗೆ ಸೇರಿದ ದಾದಕೆರೆ, ಹನಗೋಡು, ಹೆಬ್ಬೂರು, ಬಿಳಿಕೆರೆ ಮಸನಿಕಟ್ಟೆ, ಚಿಟ್ಟನಹಳ್ಳಿ, ಬಿಜಾಜಿಗುರ್ರೆ, ಕಂಪ್ಲಾಪುರ, ಚಿಲಕುಂದ, ಅತ್ತಿಕುಪ್ಪ, ಪಟ್ಟದಪುರ, ಅತ್ತಿಗೋಪುಸಂತೆ, ಕಮರವಳ್ಳಿ, ಸೂಲೆಕೋಟೆ, ಚಾಮರಾಜಕೋಟೆ, ಕಸ್ಪಗೊಳ, ಆನೆಚಕೂರು ಪಂಚವಳ್ಳಿ ಮಟ್ಟೂರು ಅವರ್ತಿಕೋಟೆ ಮತ್ತು ಸತ್ತಿಗಾಲ ಎಂಬ ಗ್ರಾಮಗಳು	0 0 8	0 0 4	
	ಹುಣಸೂರು ತಾಲ್ಲೂಕಿಗೆ ಸೇರಿದ ಪಟ್ಟದಪುರದ ಜಾತ್ರೆಗಳಲ್ಲಿ	0 0 10	0 0 8	
	ಹುಣಸೂರು ತಾಲ್ಲೂಕಿಗೆ ಸೇರಿದ ಕಟ್ಟೆಮಳಲವಾಡಿ, ಕಲ್ಲಬೆಟ್ಟ, ಹೊನ್ನೇನಹಳ್ಳಿ ಮತ್ತು ಬನ್ನಿಕುಪ್ಪೆ ಎಂಬ ಗ್ರಾಮಗಳಲ್ಲಿ	0 0 10	0 0 6	
	ಶ್ರೀರಂಗಪಟ್ಟಣದ ಕಸಬ	0 0 10	0 0 6	
	ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿದ ದರಸಕುಪ್ಪೆ ಹಿರೋಡು ಕಟ್ಟೆಹಳ್ಳಿ ಅರಕೆರೆ ಕೊಡಿಯಾಲ ಮತ್ತು ಹಾರಲಹಳ್ಳಿ ಎಂಬ ಗ್ರಾಮಗಳಲ್ಲಿ	0 0 8	0 0 4	
	ಶ್ರೀರಂಗಪಟ್ಟಣದ ತಾಲ್ಲೂಕಿನ ಮೇಲುಕೋಟೆ ಜಾತ್ರೆಯಲ್ಲಿ	0 1 0	0 0 8	
	ಶ್ರೀರಂಗಪಟ್ಟಣದ ತಾಲ್ಲೂಕಿನ ಪಾಲಹಳ್ಳಿ ಸುಲ್ತಾನ್‌ಪೇಟೆ ಪಶ್ಚಿಮವಾಹಿನಿ ಬೆಳಗೊಳ ಬೆಳವಾಡಿ ಕ್ಯಾತನಹಳ್ಳಿ ಕಬ್ಬಿನಬೋರೆ ಕಿರಂಗೂರು ಮತ್ತು ಗಂಜಾಂ ಎಂಬುವ ಗ್ರಾಮಗಳಲ್ಲಿ	0 0 10	0 0 6	
	ಎಳಂದೂರು ಕಸಬ	0 0 10	0 0 6	
	ಎಳಂದೂರು ಜಹಗೀರಿಗೆ ಸೇರಿದ ಆಗರ ಮಾಂಬಳ್ಳಿ ಬೋಳಕೆರೆ ಮತ್ತು ಹೊರಳಕೆರೆ ಎಂಬುವ ಗ್ರಾಮಗಳಲ್ಲಿ	0 0 8	0 0 4	
	ತಿರುಮಕೂಡ್ಲು ನರಸೀಪುರದ ಕಸಬ	0 0 10	0 0 6	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಸೋಹಳ್ಳಿ ಹರುಷಾರ ಮತ್ತು ಕೆಂಪನಪುರ ಎಂಬ ಗ್ರಾಮಗಳಲ್ಲಿ	0 0 8	0 0 4	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಅಂಕನಹಳ್ಳಿ ಹನುಮನಾಳು ಬಟ್ಟಹಳ್ಳಿ ಕೊಲಬೂರು ಕೊನ್ನಾಯ್ಕನಹಳ್ಳಿ ಬಿದರವಳ್ಳಿ ನರಗತನಹಳ್ಳಿ ಹೆಟ್ಟವಳ್ಳಿ ಹೊರಳಹಳ್ಳಿ ಭೂಹಳ್ಳಿ ಕೆರನಸೂರು ಕೆರತ್ರಿ ಪಾಟಲು ಮದರಹಳ್ಳಿ ಕನ್ನಹಳ್ಳಿ ಬಟ್ಟಹಳ್ಳಿ ತೂಟವಾಡಿ ದೊಡ್ಡಷಾರ ಮಾವಿನಹಳ್ಳಿ ತಾಟುಗೂಳು ದೊಡ್ಡಬಾಗಲು ಹುಣಸಗಳ್ಳಿ ತಂಗಹಳ್ಳಿ ಕರಗಹಳ್ಳಿ ಕುಪ್ಯ ತಂಬಳ್ಳ ಮುದರ್ಜಾತಿ ಮತ್ತು ಯಾಕನೂರು ಎಂಬ ಗ್ರಾಮಗಳಲ್ಲಿ	0 0 8	0 0 6	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಇತರ ಎಲ್ಲಾ ಗ್ರಾಮಗಳಲ್ಲಿ	0 0 10	0 0 6	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಮುದುಕತೊರೆ ಮತ್ತು ಮೂಗೂರು ಎಂಬ ಜಾತ್ರೆಗಳಲ್ಲಿ	0 0 10	0 0 8	
	ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಅರವಟ್ಟಿಗೆ ಕೊಪ್ಪಲು ಜಾತ್ರೆ	0 0 10	0 0 6	
	ಇತರ ಚಿಲ್ಲರೆ ಜಾತ್ರೆಗಳಲ್ಲಿ	0 0 10	0 0 4	
	ಚಾಮರಾಜನಗರ ಕಸಬ	0 0 10	0 0 6	
	ಚಾಮರಾಜನಗರ ತಾಲ್ಲೂಕಿನ ರಾಮಸಮುದ್ರ ದೊಡ ರಾಯಪೇಟೆ ಮೂಡಳ್ಳಿ ಕಾಡಳ್ಳಿ ಮಲ್ಲೈನಪುರ ಉತ್ತಹಳ್ಳಿ ಮತ್ತು ಸೋಮವಾರದಪೇಟೆ ಎಂಬ ಗ್ರಾಮಗಳಲ್ಲಿ	0 0 10	0 0 6	
	ಕ್ರಿಷ್ಣರಾಜಪೇಟೆ ಮತ್ತು ನಾಗಮಂಗಲ ತಾಲ್ಲೂಕು ಕಸಬಾಗಳಲ್ಲಿ	0 1 0	0 0 6	
	ಕ್ರಿಷ್ಣರಾಜಪೇಟೆ ತಾಲ್ಲೂಕಿನ ಅಗ್ರಹಾರ ಬಾಚಹಳ್ಳಿ ಮುರುಕನಹಳ್ಳಿ ಮತ್ತು ಹೊಸಹೊಳಲು ಎಂಬ ಗ್ರಾಮಗಳಲ್ಲಿ	0 1 0	0 0 6	
	ನಾಗಮಂಗಲ ತಾಲ್ಲೂಕಿನ ಪೇಲಗ್ರಹಾರ ಕೋಟೆಬೆಟ್ಟ ಮತ್ತು ಬೊಮ್ಮದಳ್ಳಿ ಎಂಬ ಗ್ರಾಮಗಳಲ್ಲಿ	0 1 0	0 0 6	
	ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಸೆಲ್ಲಿಗೆರೆ ಕಾಳಿಂಗನಹಳ್ಳಿ ಬಿಲಗುಂದ ಸೋಮನಹಳ್ಳಿ ಅಮ್ಮನಜಾತ್ರೆ ಹುಲ್ಲನಹಳ್ಳಿ ಮಾಯಮ್ಮನ ಜಾತ್ರೆ ತೂಬಿನಕೆರೆ ಪಟ್ಟಣದಜಾತ್ರೆ ನಾಗನಕೆರೆ ಗುಡ್ಡದಜಾತ್ರೆ ಮದ್ದಿನಹಳ್ಳಿ ಜಾತ್ರೆಹರಕಲ್ ಹನುಮಂತರಾಯನಜಾತ್ರೆ ಹುಲಿಕೆರೆಜಾತ್ರೆ ಮತ್ತು ಗಂಡಕಲ್ ಜಾತ್ರೆ	0 0 8	0 0 4	
	ನಾಗಮಂಗಲತಾಲ್ಲೂಕು ಚುಂಚಿನಗಿರಿಜಾತ್ರೆ	0 1 0	0 0 4	

ಡಿಸ್ಟ್ರಿಕ್ಟು	ಸ್ಥಳ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ. ಉತ್ತಮ.	ಒಂದು ಇಂಪೀರಿಯಲ್ ಕ್ವಾರ್ಟಿಗೆ ಸಮವಾದ ಶೇರು ಒಂದಕ್ಕೆ ಖರೀದಿ. ಕನಿಷ್ಟ.	ಪ್ರತ್ಯೇಕವಾಗಿ ಬಂಗ ಶೇರು ಬಂದಕ್ಕೆ ಗೊತ್ತಾದ ಖರೀದಿ.
ಮೈಸೂರು	ಎಡತೊರೆ ಕಸಬು	0 0 10	0 0 6	
	ಎಡತೊರೆ ತಾಲ್ಲೂಕಿನ ಚುಂಚಿನಕಟ್ಟೆ ಮತ್ತು ಕಪಡಿ ಜಾತ್ರೆಗಳಲ್ಲಿ	0 0 10	0 0 8	
	ಡಿಟೋ ತಾಲ್ಲೂಕು ತಂದ್ರಿ	0 0 8	0 0 6	
	ಡಿಟೋ ತಾಲ್ಲೂಕ ಹಂಪಾಪುರ ತಿಪ್ಪೂರು ಸಾಲಗ್ರಾಮ ದೊರ್ನಹಳ್ಳಿ ಚಳ್ಳುಳ್ಳಿ ಬ್ಯಾಡರಹಳ್ಳಿ ಈ ಗ್ರಾಮಗಳಲ್ಲಿ	0 0 10	0 0 6	
	ಮಳವಳ್ಳಿ ತಾಲ್ಲೂಕಿಗೆ ಶೇರಿದ ಹಲಗೂರು ದಳವಾಯಿಕೋಡಿಹಳ್ಳಿ ಹರಿಹರ ವಾರಂಗಾಡನಹಳ್ಳಿ ಮತ್ತು ಬಾಣಸಮುದ್ರ ಎಂಬುವ ಗ್ರಾಮಗಳಲ್ಲಿ	0 0 8	0 0 4	
	ಮಂಡ್ಯದ ಕಸಬು	0 0 10	0 0 6	
	ಮಂಡ್ಯದ ತಾಲ್ಲೂಕು ಚಿಕ್ಕಮಂಡ್ಯ ಸಾತನೂರ ಕಟ್ಟೆಹಳ್ಳಿ ಪನಕನಹಳ್ಳಿ ಈ ಗ್ರಾಮಗಳಲ್ಲಿ	0 0 10	0 0 6	
	ನಂಜನಗೂಡು ಕಸಬು	0 0 10	0 0 4	
	ನಂಜನಗೂಡು ತಾಲೂಕು ದ್ಯಾವರಸನಹಳ್ಳಿ ಪುಪ್ಪನಹಳ್ಳಿ ಕುಂಬಳ್ಳಿ ದಿಬ್ಬೂರು ಚಿಕ್ಕಯ್ಯನಛತ್ರ ತೊರೆಮಾವು ಮಲ್ಲೂರು ನರಸೀಪುರ ಗನತಗಾಲ ಕುಪ್ಪೆ ಉಗಾರಹುಂಡಿ ಮಾಚನಹಳ್ಳಿ ಮತ್ತು ಶಿಂಗರಿಪುರ ಈ ಗ್ರಾಮಗಳಲ್ಲಿ	0 0 10	0 0 4	
	ಡಿಟೋ ತಾಲೂಕು ಇತರ ಎಲ್ಲಾ ಗ್ರಾಮಗಳಲ್ಲಿ	0 0 6	0 0 3	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟು ಮಜಕೂರ ಇತರ ಎಲ್ಲಾ ಕಸಬೆಗಳಲ್ಲಿಯೂ	0 0 10	0 0 6	
	ಮೇಲೆ ಉದಹರಿಸದೇ ಇರುವ ಡಿಸ್ಟ್ರಿಕ್ಟು ಮಜಕೂರ ಇತರ ಎಲ್ಲಾ ಗ್ರಾಮಗಳಲ್ಲಿಯೂ	0 0 6	0 0 4	
ಹಾಸನ.	ಹಾಸನಪೇಟೆ	0 1 0	0 0 10	
	ಅರಕಲಗೂಡು ಕಸಬು	0 1 4	0 1 0	
	ಇತರ ತಾಲೂಕು ಕಸಬಾಗಳು	0 1 0	0 0 6	
	ಬೇಲೂರು ತಾಲೂಕು ಗ್ರಾಮಗಳು	0 1 0	0 0 6	
	ಬೇಲೂರು ಅರಕಲಗೂಡು ಮತ್ತು ಮಂಜರಾಬಾದು ತಾಲ್ಲೂಕು ಗ್ರಾಮಗಳು ವಿನಾಯಿಸಿ ಇತರ ಗ್ರಾಮಗಳಲ್ಲಿ	0 0 6	0 0 4	
	ಮಂಜರಾಬಾದು ತಾಲೂಕಿನ ಸಕಲೇಶಪುರ ಸ್ಕುಂಡೇಕೆರೆ ಬೆಳಗೋಡು ಬಳ್ಳು ಹೊಸಕೋಟೆ ವೊಗ್ಗೆ ಶುಕ್ರವಾರಸಂತೆ ಮತ್ತು ಕಿರೋಡಿ ಎಂಬ ಗ್ರಾಮಗಳಲ್ಲಿ	0 1 0	0 0 8	
	ಅರಕಲಗೂಡು ತಾಲೂಕಿನ ಕೋಣನೂರು ಗುರುವಾರಸಂತೆ ಮಾರೂರು ಸಂತೆ ಮಾಲಾಪಟ್ನ ರಾಮನಾಥಪುರ ಮತ್ತು ಇತರ ಗ್ರಾಮದ ಜಾತ್ರೆಗಳಲ್ಲಿ	0 1 4	0 1 0	
	ಡಿಟೋ ತಾಲ್ಲೂಕುಮಗಳ ಸೋಮವಾರಸಂತೆ ಬಸ್ರೂರು ಬುಧವಾರಸಂತೆ ಮಗಳಲ್ಲಿ	0 1 4	0 0 9	
	ಡಿಟೋ ತಾಲೂಕು ಕೋಣನೂರು ಗ್ರಾಮದಲ್ಲಿ	0 1 2	0 0 9	
	ಡಿಟೋ ತಾಲ್ಲೂಕುಮಗ್ಗೆ ರಾಮನಾಥಪುರ ಮತ್ತು ಕಟ್ಟೆಪುರ ಗ್ರಾಮಗಳಲ್ಲಿ	0 1 0	0 0 9	
	ಡಿಟೋ ತಾಲೂಕು ಬಸವಾಪಟ್ನ ಕಂಗಳಲಮರಟ ಮತ್ತು ಕಡಿವಿನಹೊಸಹಳ್ಳಿ ಗ್ರಾಮಗಳಲ್ಲಿ	0 1 0	0 0 8	
	ಡಿಟೋ ತಾಲ್ಲೂಕು ರುದ್ರಾಪಟ್ನ ಮತ್ತು ಕಾರಳಾಪುರ ಗ್ರಾಮಗಳಲ್ಲಿ	0 0 10	0 0 8	
	ಡಿಟೋ ತಾಲ್ಲೂಕು ಧರ್ಮಾಪುರ ನರಸಕುಪ್ಪೆ ಎಲ್ಲಹಳ್ಳಿ ಮಗನಹಳ್ಳಿ ಮರಟ ಮತ್ತು ಹುಲಿಕಲ್ಲು ಗ್ರಾಮಗಳಲ್ಲಿ	0 0 10	0 0 6	
	ಡಿಟೋ ತಾಲ್ಲೂಕು ಉಲ್ಲಿಹೊಸೂರು ಉಕ್ಕಡ ಮತ್ತು ಗಂಗೂರು ಮರಟ ಗ್ರಾಮಗಳಲ್ಲಿ	0 0 8	0 0 6	
ಕಡೂರು.	ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕು ಕಸಬಾ ಮತ್ತು ಗ್ರಾಮಾಂತ್ರಗಳಲ್ಲಿ	0 1 6	0 0 6	
	ಇತರ ತಾಲ್ಲೂಕು ಕಸಬಾಗಳಲ್ಲಿ	0 1 4	0 0 6	
	ಇತರ ಗ್ರಾಮಗಳಲ್ಲಿ	0 1 0	0 0 6	
ಶಿವಮೊಗ್ಗ.	ಶಿವಮೊಗ್ಗಾ ಪೇಟೆ	0 1 6	0 1 0	
	ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು	0 1 0	0 0 6	
	ಡಿಸ್ಟ್ರಿಕ್ಟಿನ ಇತರ ಎಲ್ಲಾ ಭಾಗಗಳಲ್ಲಿ	0 1 6	0 0 6	
ಚಿತ್ರದುರ್ಗ	ತಾಲ್ಲೂಕು ಕಸಬಾಗಳಲ್ಲಿ ಮತ್ತು ಗ್ರಾಮಗಳಲ್ಲಿ	0 1 0	0 0 6	

ಹುಕುಂ ಬಮೋಜಿಬ್,
ಪಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 1234. ತಾರೀಖು 7ನೇ ಮಾಹೆ ಏಪ್ರೈಲ್ 1896ನೇ ಇಸವಿ, ಬೆಂಗ್ಳೂರು.

ಬೆಂಗಳೂರು ಷಹರಿನಲ್ಲಿರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಧರ್ಮರಾಯರ ದೇವಸ್ಥಾನಕ್ಕೆ ಮೊಕರರಾದ ಧರ್ಮದರ್ಶಿಗಳ ಪೈಕಿ ಫೌತಿಯಾದ ಗಣಾಚಾರಿಗೆ ಬದಲಾಗಿ ಆತನ ತಮ್ಮ ಗಣಾಚಾರಿ ಫುಳಪ್ಪನವರನ್ನ ಧರ್ಮದರ್ಶಿಯಾಗಿ ನೇಮಿಸಿ ಇದೆ.

ಎ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂ. ಅಂಡ್ ಸೆಕ್ರಟರಿ.

295

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು [ನಂ. 15.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 16, ಸ್ನ 1896.

IIನೇ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡಿ ಪೋರ್ಟರು ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ರ್ಯಾಮರವರ ಡಿಟೋ	,, 85

ಖರೀದೀದಾರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಮೈಸೂರ್ ಫಾರೆಸ್ಟ್ ಡಿಪಾರ್ಟ್‌ಮೆಂಟ.

ಕೋಲಾರ್ ಡಿಸ್ಟ್ರಿಕ್ಟ.

ನೋಟಿಸ.

ತಾರೀಖು 28ನೇ ಫೆಬ್ರವರಿ 1896ನೇ ಇಸವಿ, ಮೊಕ್ಕಾಂ ಚಿಕ್ಕಬಳ್ಳಾಪುರ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ;—

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ತಮಾಂ ತಾಲ್ಲೂಕುಗಳಲ್ಲೂ ಫಾರೆಸ್ಟುಗಳಲ್ಲೂ ಸಹ, ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು ಜಮಾಯಿಸತಕ್ಕ ಬಗ್ಯೆ ಲೈಸೆನ್ಸ ಕೊಡತಕ್ಕ ಪದ್ಧತಿಯನ್ನು ನಿಲ್ಲಿಸಬೇಕೆಂದು ಹುಕುಂ ಜಾರಿಯಾಗಿರುತ್ತೆ.

(2.) ಇದಕ್ಕೆ ಮೊದಲು ಲೈಸೆನ್ಸ ಪಡೆದಿರುವ ಜನಗಳು ಅವರವರ ಲೈಸೆನ್ಸಿನಲ್ಲಿ ಕಂಡ ಚಕ್ಕೆಯನ್ನು ನಿಶ್ಶೇಷವಾಗಿ ಮುಂದಿನ ಏಪ್ರಿಲ್ ತಾರೀಖು 15ರ ಒಳಗಾಗಿ ಸಾಗಿಸಿಕೊಂಡು ಹೋಗತಕ್ಕದ್ದು. ಆ ತಾರೀಖು ಕಳೆದನಂತರ ಸದರೀ ಚಕ್ಕೆಯನ್ನು ಜಮಾಯಿಸುವದಕ್ಕಾಗಲಿ, ಡಿಸ್ಟ್ರಿಕ್ಟಿನಲ್ಲಿ ದಾಸ್ತಾನು ಯಿಡುವದಕ್ಕಾಗಲಿ, ಅಥವಾ ರಫ್ತು ಮಾಡತಕ್ಕ ಬಗ್ಯಾಗಲಿ ಯಾವ ಸಂದರ್ಭದಲ್ಲೂ ಅವಕಾಶ ಕೊಡುವದಿಲ್ಲ.

(3.) ಡಿಸ್ಟ್ರಿಕ್ಟ ಮಜಕೂರ ತಾಲ್ಲೂಕುಗಳಲ್ಲಿ ಈ ಬಾಬುಗಳನ್ನು ಜಮಾಯಿಸಿಕೊಳ್ಳತಕ್ಕ ಹಕ್ಕನ್ನು ಇಜಾರೇದಾರ್ರುಗಳಿಗೆ ಬಹಿರಂಗವಾದ ಹರಾಜಿನಲ್ಲಿ ಪೋಟಾಪೋಟಿಯಿಂದ ಮೊಕರರೂರ್ ಮಾಡಲಾಗುತ್ತದೆ. ಸದರೀ ಹರಾಜಿನ ಕ್ರಮ ಮತ್ತು ಷರತ್ತುಗಳನ್ನು ಕಂಡು ಅಲಾಹಿದ ನೋಟಿಸ ಜಾರಿಯಾಗಿರುತ್ತೆ. ಈ ಬಾಬುಗಳನ್ನು ಇಜಾರೇಮಾಡಬೇಕೆಂದು ಉದ್ದೇಶಿಸುವವರು ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟು ಆಫೀಸಿಗೆ ಅರ್ಜಿಯನ್ನು ಬರೆದು ನೋಟಿಸಗಳನ್ನು ತರಿಸಿಕೊಂಡು ತಪ್ಸೀಲ್ ತಿಳದುಕೊಳ್ಳಬೇಕಾಗಿ ಕೋರಲ್ಪಟ್ಟಿದೆ.

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ಇದರಡಿ ನಮೂದಿರುವ ತಾಲ್ಲೂಕುಗಳಲ್ಲಿ ದೊರೆಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು ಜಮಾಯಿಸಿ ತೆಗದುಕೊಂಡು ಹೋಗತಕ್ಕ ಇಜಾರೆಯ ಬಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ.

ಹರಾಜ್ ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗೈರೆ ತಪ್ಸೀಲಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕುಗಳು.	ನಂಬರ್.	ಹೋಬಳಿಗಳು.	ಇಜಾರೆಯ ಹಕ್ಕಿನ ಕಾಲ.	ಹರಾಜಿನ ತಾರೀಖು.	ಹರಾಜಾಗುವ ಸ್ಥಳ.	ಹರಾಜು ಮಾಡಿಸುವ ಆಫೀಸರುಗಳು.	ಹರಾಜು ಯಾರಿಂದ ಮಂಜೂರಾಗಬೇಕಾದದ್ದು.	ಷರಾ.
I ಕೋಲಾರ	1	ಕೋಲಾರ	1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಜೂನ ಆಖ್ಯೆರ್ ವರಿಗೆ.	1896ನೇ ಇಸವಿ ಮೇ ತಾರೀಖು 14ರಲ್ಲಿ.	ಕೋಲಾರ ಡಿಸ್ಟ್ರಿಕ್ಟು ಕಚೇರಿಯಲ್ಲಿ.	ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು.	ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಂದ.	ತಾಲ್ಲೂಕುವಾರ್ ಹರಾಜು ಜರಿಗಿಸಲ್ಪಡುತ್ತದೆ.
	2	ವಕ್ಕಲೇರಿ						
	3	ಹುತ್ತೂರು						
	4	ವೇಮಗಲ್ಲು						
	5	ಸುಗಟೂರು						
	6	ದಳಸನೂರು						
	7.	ಹೋಳೂರು						
II ಮಾಲೂರು	1	ಮಾಲೂರು						
	2	ನರಸಾಪುರ						
	3	ಲಕ್ಕೂರು						
	4	ಮಾಸ್ತಿ						
	5	ಹುಳದೇನಹಳ್ಳಿ						
	6	ತ್ಯಾಕಲ್ಲು						
III ಬಾರಿಂಗಪೇಟೆ	1	ಬಾರಿಂಗಪೇಟೆ						
	2	ಬೂದಿಕೋಟೆ						
	3	ಕಾಮಸಮುದ್ರ						
	4	ಬೇತಮಂಗಲ						
	5	ಕ್ಯಾಸಂಬಳ್ಳಿ						
	6	ರಾಮಸಾಗರ						
	7	ದಾಸರಹೊಸಹಳ್ಳಿ						

297

(2.) ಮೇಲ್ಕಂಡ ತಾರೀಖಿನ ಮಧ್ಯಾಹ್ನ 3 ಘಂಟೆಯ ಲಾಗಾಯತು ಸಾಯಿಂಕಾಲದ ವರೆಗೂ ಹರಾಜು ಕ್ರಮ ಜರಗುವದು ಮತ್ತು ಆ ದಿವಸವೇ ಹರಾಜು ಖೈದಾಗದೇ ಇದ್ದಲ್ಲಿ ಖೈದಾಗುವ ವರೆಗೂ ಮಾರನೇದಿನವೂ ಸಹ ನಡಿಸಲ್ಪಡುತ್ತದೆ.

(3.) ಮೇಲ್ಕಂಡ ಬಟ್ಟು ಸ್ವತಂತ್ರದ ಇಜಾರೆ ಹಕ್ಕು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡಸವಾಲ್‌ದಾರ್ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಡೆಪ್ಯುಟಿ ಕಮ್ಮಿಷನರವರು ಮುಖ್ತ್ಯಾರ್ರಾಗಿಧಾರೆ. ಪೋಟಾ ಪೋಟೀಯಲ್ಲಿ ನಿಲ್ಲುವ ಆಖೈರ್ ಚಡಸವಾಲ್ ಮೊಬಲಗು ಮೇಲ್ಕಂಡ 12 ತಿಂಗಳ ಕಾಲದಲ್ಲಿ ಕಡಿದು ಜಮಾಯಿಸಿ ಸಾಗಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿ ಎಂದು ಭಾವಿಸಲ್ಪಡುತ್ತದೆ.

(4.) ಇಜಾರೆ ಮಾಡಬೇಕೆಂದು ಅಪೇಕ್ಷಿಸುವವರು ತಾವೇ ಖುದ್ದು ಬಂದು ಹರಾಜಿನಲ್ಲಿ ಚಡಸವಾಲ್ ಮಾಡಬಹುದು. ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರನ್ನಾಗಲಿ ಕಳುಹಿಸಬಹುದು. ಚಡಸವಾಲ್ ಮಾಡಲಪೇಕ್ಷೆಯುಳ್ಳವರು ಖಾತರೀ ಬಗ್ಯಾಗಿ ಒಂದುನೂರು ರೂಪಾಯಿಗಳನ್ನು ಹರಾಜು ಕಾಲದಲ್ಲಿ ಹರಾಜು ಮಾಡುವ ಆಫಿಸರವರಲ್ಲಿ ಠೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರ್ಮಾಡಿದ್ದ ಡಿಪಾಜಿಟ್ ಮೊಬಲಗು ಹರಾಜು ಖೈದಾದ ಕೂಡ್ಲೆ ವಾಪಸ್ ಮಾಡಲ್ಪಡುತ್ತೆ. ಪ್ರತಿ ಒಂದು ತಾಲ್ಲೂಕಿನ ಸವಾಲ್ ಖೈದಾದ ಒಡನೆಯೇ ಅಂಗೀಕರಿಸಲ್ಪಟ್ಟ ಸವಾಲ್‌ದಾರ್ರುಗಳು ತಮ್ಮ ಸವಾಲಿನ ಒಟ್ಟು ಮೊಬಲಗಿನಲ್ಲಿ ಮೊದಲ್ ಹಾಜರ್ಮಾಡಿದ್ದ ಮೊಬಲಗೂ ಶೇರಿ ಕಾಲು ಹಿಸ್ಸೆಯನ್ನು ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬ್ ದುಸರಾ ಹರಾಜು ಮಾಡಿಸುವದರಲ್ಲಿ ಉಂಟಾಗುವ ನಷ್ಟಕ್ಕೂ ಸಹ ಈತನನ್ನೇ ಗುರಿಮಾಡಲ್ಪಡುತ್ತೆ. ಆದರೆ ಆದಾಯ ಏನಾದರೂ ಹೊರಟಲ್ಲಿ ಸದರೀಯವನಿಗೆ ಅದರ ಹಕ್ಕು ಇರುವದಿಲ್ಲ.

(5) ಮೇಲ್ಕಂಡ ಮೇರಿಗೆ ನಡಿಸಲ್ಪಡಬೇಕಾಗಿ ಬರುವ ಎರಡನೇ ಹರಾಜಿನ ಆಖೈರ್ ಸವಾಲ್‌ಗಿಂತಲೂ ಮೊದಲನೇ ಹರಾಜಿನಲ್ಲಿ ಜಾಸ್ತಿಯಾಗಿ ವುಂಟಾಗಿದ್ದ ಮೊಬಲಗನ್ನು ಮೊದಲನೇ ಹರಾಜಿನ ಆಖೈರ್ ಸವಾಲ್‌ದಾರನು ಸರ್ಕಾರಕ್ಕೆ ಪಾವತಿ ಮಾಡಬೇಕು.

(6) ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರಾದ 3 ದಿವಸದೊಳಗಾಗಿ ಈ ಕೆಳಗೆ ಮಾದಿಸಿರುವ ಷರತ್ತುಗಳ ಕಂಡು ನಡದುಕೊಳ್ಳತಕ್ಕ ಬಗ್ಯೆ ಬದ್ಧನಾಗಿ ಇಜಾರೇದಾರನು ಮುಚ್ಚಳಿಕೆ ಬರೆದುಕೊಡಬೇಕು.

(7.) ಇಜಾರೆ ಬಾಬತು ಬಾಕಿ ಮುಕ್ಕಾಲು ಹಿಸ್ಸೆಯನ್ನು ಇದೇ ಇಸವಿ ಮೇ ಮಾಹೆ ಆಖೈರೊಳಗಾಗಿ ಪಾರ್ಖವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಠೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ ಯಲ್ಲದೆ ಚಕ್ಕೆ ಜಮಾಯಿಸುವ ಇಜಾರೆ ಹಕ್ಕನ್ನು ಪುನಹ ಹರಾಜು ಮಾಡುವದರಲ್ಲಿ ಬಂದೀತು.

(8.) ಮೇಲ್ಕಂಡ ಮೇರೆ ಪೂರ್ತಾ ಮೊಬಲಗು ಇರಸಾಲ್ ಆದನಂತರ ಈ ಕೆಳಗೆ ನಮೂದಿರುವ ಷರತ್ತುಗಳು ಕಂಡು ಒಂದು ರೂಪಾಯಿನ ಛಾಪಾ ಕಾಗದದಲ್ಲಿ ಇದೇ ಇಸವಿ ಜೂನ್ ಗುರ್ರೇ ತಾರೀಖಿನಲ್ಲಿ ಕರಾರ್ ಬರೆದುಕೊಟ್ಟು ಅನಂತರ ಬಾಬು ಸುಪರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳು ಯಾವವಂದರೆ.

(1) ಒಂದು ವರುಷಕ್ಕಿಂತಲೂ ಎಳೇದಾದ ಗಿಡಗಳನ್ನು ಕಡಿಯುವದಿಲ್ಲ.

(2) ಕಡಿಯುವ ವಿಶಿಷ್ಟ ಮೋಟು ಮತ್ತು ರಂಬೆಗಳಲ್ಲಿರುವ ಚಕ್ಕೆಯನ್ನು ನಿಶ್ಶೇಷವಾಗಿ ತೆಗೆದುಕೊಳ್ಳುತ್ತೇನೆ ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಬೊಬ್ಬಡೆಯನ್ನು ತೆಗೆಯದೆ ಬಿಸಾಡುವದಿಲ್ಲ.

(3) ಚಕ್ಕೆಯನ್ನು ತೆಗೆದನಂತರ ವಿಶಿಷ್ಟ ಸಾದೆಯೂ ಇಜಾರೆದಾರನಿಗೆ ಶೇರಿದ್ದೇ ಶಿವಾಯಿ ಸರ್ಕಾರಕ್ಕೆ ಶೇರಿದ್ದಲ್ಲ.

(4) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮೊಕರರ್ ಮಾಡುವ ಮೇರೆಗೆ ನನ್ನ ಕರಾರು ಅನುಸರಿಸಿ ಜಮಾಯಿಸಿ ಸಾಗಿಸಿಕೊಂಡು ಹೋಗುವ ಚಕ್ಕೆಗೆ ತಪ್ಪೇಲಾಗಿ ಲೆಖ್ಖ ಇಡುತ್ತೇನೆ ಯಲ್ಲದೆ ಈ ಬಾಬತು ಲೆಖ್ಖವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಕೇಳಿದಾಗ್ಯೆ ತನಿಖೆಬಗ್ಯೆ ಹಾಜರ್ಮಾಡುತ್ತೇನೆ.

(5) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿಯ ಚಕ್ಕೆಗೂ ಪ್ಯಾಸ್ ಕೊಡುತ್ತೇನೆ.

(6) ನಾನು ಜಮಾಯಿಸುವ ವಿಶಿಷ್ಟ ಚಕ್ಕೆಯನ್ನೂ 1897ನೇ ಇಸವಿ ಜೂನ್ ಆಖೈರೊಳಗಾಗಿ ನಿಶ್ಶೇಷವಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಸಹ ನನ್ನಿಂದಲಾಗಲಿ ನನ್ನ ಕಡೆ ಜನಗಳಿಂದಲಾಗಲಿ ಬೆಂಕಿಯ ಅಥವಾ ಇನ್ಯಾವ ಕಾರಣದಿಂದಾಗ್ಯೂ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲ್‌ಗಳು ನಾಶವಾದಲ್ಲಿ, ಅದರಿಂದ ವುಂಟಾಗುವ ನಷ್ಟಕ್ಕೆ ನಾನೇ ಜವಾಬ್ ಮಾಡಲು ಬದ್ಧನಾಗಿಧೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ್ ಜನಗಳಾಗಲಿ ಅತಿಕ್ರಮಿಸಿ ನಡೆದಲ್ಲಿ ನನ್ನ ಇಜಾರೆಯನ್ನು ರದ್ದು ಮಾಡಬಹುದು. ಮತ್ತು ನಾನು ಅದುವರೆಗೆ ಜಮಾಯಿಸಿ ಹಾಜರಿಟ್ಟುಕೊಂಡಿರತಕ್ಕ ಚಕ್ಕೆಯನ್ನು ಸರ್ಕಾರದವರು ಜಪ್ತಿ ಮಾಡಬಹುದಲ್ಲದೆ ನಾನು ಪಾವತಿ ಮಾಡಿರುವ ಮೊಬಲಗನ್ನು ಪೂರ್ತಿಯಾಗಿ ಯಾಗಲಿ ಅಥವಾ ಆ ಪೈಕಿ ಕೆಲವು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಬಹುದು.

ಬಿ. ರಾಮಸ್ವಾಮಯ್ಯರ್,
ಕೋರ ಡೆಪ್ಯುಟಿ ಕಮ್ಮಿಷನರ.

ಮೈಸೂರು ಫಾರೆಸ್ಟ್ ಇಲಾಖಾ.

ಇಸ್ತಿಹಾರನಾಮೆ.

ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಜಂಗಲಿಗಳಲ್ಲಿ ಬಿದರು, ಗಳುವನ್ನು ಕತರಾಯಿಸಿ ಜಮಾಯಿಸಿ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟವೆ.

(1)	ನಂದೀ ಫಾರೆಸ್ಟ್	ತಾಲ್ಲೂಕು ಚಿಕ್ಕಬಳ್ಳಾಪುರ.
(2)	ನರಸಿಂಹದೇವರ ಬೆಟ್ಟದ ಫಾರೆಸ್ಟಿನಲ್ಲಿ II ಎರಡನೇ ಬ್ಲಾಕ	ಡಿಟ್ಟೋ.
(3)	ರಾಯಲ್‌ಪಾಡ್ ಫಾರೆಸ್ಟಿನಲ್ಲಿ ಮುದಿಮಡಗು ಬ್ಲಾಕ	ಚಿಂತಾಮಣಿ.
(4)	ನೂಟವೆ ಡಿಸ್ಟ್ರಿಕ್ಟ್ ಜಂಗಲ್	ಮಾಲೂರ.

2. ತಮ್ಮಾಂ ದರಖಾಸ್ತುಗಳನ್ನೂ ಲಕ್ಕೋಟೆಗಳಲ್ಲಿ ಹಾಕಿ ಮೊಹರ್‌ಮಾಡಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿಗೆ ರವಾನಿಸಬೇಕಲ್ಲದೆ ಪ್ರತಿ ದರಖಾಸ್ತಿನೊಂದಿಗೂ (50) ರೂಪಾಯಿಗಳನ್ನ ಠೇವಣಿ ಬಗ್ಯಾಗಿ ಕಳುಹಿಸಬೇಕಾಗಿರುತ್ತೆ. ಖಾಲೀ ದರಖಾಸ್ತುಗಳನ್ನ ಹಿಡಿಯುವದಿಲ್ಲ. ಇದೇ ಇಸವಿ ಮೇ ಮಾಹೆ ಆಖೈರ್ ವರಿಗೆ ದರಖಾಸ್ತುಗಳನ್ನು ಬರಮಾಡಿಕೊಂಡು ಜೂನ್ ಗುರ್ರೇ ತಾರೀಖಿನಲ್ಲಿ ಫೈಸಲ್ಮಾಡಲಾಗುತ್ತೆ.

3. ಇದೇ ಇಸವಿ ಜುಲೈ ಗುರ್ರೇ ಲಾಗಾಯತು 97ನೇ ಜೂನ್ ಆಖೈರ ವರೆಗೆ ಸಲ್ಲುವ 1896—97ನೇ ಸಾಲಿನಲ್ಲಿ ಯಾವ ಜಂಗ್ಲಿಯಿಂದ ಎಷ್ಟು ಬಿದರುಗಳನ್ನ ಕಡಿದು ತೆಗೆದುಕೊಂಡು ಹೋಗುವದಕ್ಕೆ ಒಪ್ಪುತ್ತಾರೋ ಮತ್ತು (1000) ಒಂದು ಸಾವಿರ ಬೊಂಬುಗಳಿಗೆ ಯಾವ ದರ ಕೊಡುವದಕ್ಕೆ ಕಬೂಲ್ ಇಧಾರೆ ಎಂಬ ಎರಡು ಸಂಗತಿಗಳನ್ನೂ ದರಖಾಸ್ತುದಾರರು ಸ್ಪಷ್ಟವಾಗಿ ನಮೂದಿಸಬೇಕು. ಹೆಚ್ಚು ದರ ನಮೂದುಳ್ಳ ಅಥವಾ ಇನ್ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನೂ ಹೇಳದೆ ಇಷ್ಟಬಂದರೆ ಅಂಗೀಕರಿಸುವದಕ್ಕೂ ನಿಂತದ್ದನ್ನ ತಿರಸ್ಕರಿಸುವದಕ್ಕೂ ಸಹ, ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿಧಾರೆ.

4. ತಿರಸ್ಕರಿಸಲ್ಪಡುವ ದರಖಾಸ್ತುದಾರ್ರುಗಳಿಂದ ಇಡಲ್ಪಟ್ಟ ಠೇವಣಿ ಮೊಬಲಗು ವಾಪಸು ಮಾಡಲ್ಪಡುತ್ತದೆ. ದರಖಾಸ್ತುಗಳು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರಾದ ಸಂಗತಿಯನ್ನ ಸದರೀ ದರಖಾಸ್ತುದಾರರಿಗೆ ತಿಳಿಸಿದ ಕೂಡ್ಲೆ ಕಂಟ್ರಾಕ್ಟಿನ ಷರತ್ತುಗಳ ಪ್ರೇರಿಗೆ ನಡೆದುಕೊಳ್ಳತಕ್ಕ ಖಾತರೀ ಬಗ್ಯಾಗಿ ಮೊದಲು ಇಟ್ಟದ್ದು (50) ಐವತ್ತು ರೂಪಾಯಿಗಳಲ್ಲದೆ ಜಾಸ್ತಿಯಾಗಿ (250) ಎರಡುನೂರ ಐವತ್ತು ರೂಪಾಯಿಗಳನ್ನ ಠೇವಣಿ ಇಡಬೇಕು. ಮತ್ತು ಈ ಕೆಳಗೆ ಕಂಡ ಮುಖ್ಯ ಸಂಗತಿಗಳನ್ನು ಕಂಡು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು.

(1) ದರಖಾಸ್ತಿನಲ್ಲಿ ಕಂಡ ಪ್ರದೇಶ ಶಿವಾಯಿ ಇತರ ಕಡೆಯಲ್ಲಿ ಕತರಾವಣಿ ಮಾಡುವದಿಲ್ಲ.

(2) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನೇಮಕಮಾಡಲ್ಪಡುವ ಮೇರೆಗೆ ಕ್ರಮವಾಗಿ ಒಂದು ಕಡೆಯಿಂದ ಬಿದರನ್ನ ಕಡಿಯುತ್ತೇನೆ. ಕತರಾವಣಿ ಬಗ್ಯೆ ದಫಾ ಒಂದಕ್ಕೆ ಒಂದು ನೂರು ಎಕರೆಗೆ ಮೀರದ ತುಕಡಿಯನ್ನ ನಿಷ್ಕರ್ಷ ಮಾಡಿಸಿಕೊಂಡು ಅದರಲ್ಲಿ ಕತರಾವಣಿ ಪೂರೈಸಿದ ನಂತರ ಇನ್ನೊಂದು ತುಕಡಿಯನ್ನು ನಿಷ್ಕರ್ಷ ಮಾಡಿಸಿ ಕೊಡತಕ್ಕ ಬಗ್ಯೆ ಖಾಯಿಷ್ಮಾಡುತ್ತೇನೆ.

(3) ಪ್ರತಿ ಯೊಂದು ಪೊದೆಯಲ್ಲಿಯೂ ಹಸೀ, ಯಾ ಯಳೇ ಬಿದರುಗಳನ್ನ ನಾಲ್ಕಕ್ಕೆ ಕಮ್ಮಿ ಇಲ್ಲದೆ ಬಿಟ್ಟು ನಿಂತದ್ದನ್ನ ಭೂ ಮಟ್ಟಕ್ಕೆ ಕಡಿಯುತ್ತೇನೆ.

(4) ನಾನು ಕಡಿಯುವ ಬಿದರುಗಳ ಪೈಕಿ ಹಸೀದಾಗಲಿ, ಒಣಗಿದ್ದಾಗಲಿ ಕೆಲವು ಆದದುಗಳನ್ನ ಹಾಸಲು ಕೊಟ್ಟು ಸಾಗಿಸಿಕೊಂಡು ಹೋಗಲು ಇಚ್ಛೆಪಡದೆ ಇರುವ ಸಂದರ್ಭದಲ್ಲಿ ಅಂಥಾ ಗಳುಗಳನ್ನ ಗಾಡೀ ಸಂಚಾರಕ್ಕೆ ಅನುಕೂಲವಾದ ಪ್ರದೇಶಗಳಲ್ಲಿ ಜಮಾಯಿಸಿಕೊಡುತ್ತೇನೆ.

(5) ಹಾಸಲು ಪಾವತಿ ಮಾಡಿ ಸಾಗಿಸಿಕೊಂಡು ಹೋಗಬೇಕೆಂದು ನಾನು ಉದ್ದೇಶಿಸುವ ವಿಶಿಷ್ಟ ಗಳುಗಳನ್ನೂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಜಾಗಗಳಲ್ಲಿ ಎಣಿಕೆಗೆ ಅನುಕೂಲವಾಗುವ ರೀತ್ಯಾ ಜಮಾಯಿಸಿ ಇಡುತ್ತೇನೆ.

(6) ಹೀಗೆ ನಾನು ಜಮಾಯಿಸಿ ಇಡುವ, ಗಳುಗಳನ್ನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತುಮಾಡಲ್ಪಡುವ ಹುದ್ದೇದಾರು ಎಣಿಕೆ ಮಾಡಿದ ನಂತರ ನಾನು ಒಪ್ಪಿಕೊಂಡ, ದರದ ಮೇರೆಗೆ ಪಾವತಿ ಮಾಡಬೇಕಾದ ಖರೀದಿ ಮೊಬಲಗನ್ನ ಲೆಟರ ಆಫ್ ಅಡ್ವೈಸ್, ಅಥವಾ ಚಲನಿನ ಒಡನೆ ಸಮೀಪದ ಖಜಾನೆಗೆ ಇರಸಾಲ್ಮಾಡಿ, ರಶೀತಿ ಹಾಜರ್ಪಡಿಸಿ, ನೆಟ್ಟಿನಿಂದ, ಗಳುಗಳನ್ನ ಸಾಗಿಸಿಕೊಂಡು ಹೋಗತಕ್ಕ ಬಗ್ಯೆ ರಹದಾರಿ ಪಡೆಯುತ್ತೇನೆ.

(7) ತೀರ್ವೆ ಪಾವತಿಯಾದ, ಗಳುಗಳನ್ನ ನೆಟ್ಟಿನಿಂದ ನಿಶ್ಶೇಷವಾಗಿ ಸಾಗಿಸಿಕೊಂಡು ಹೋದ ಹೊರತು, ಜಂಗ್ಲಿಯಿಂದ ಯಾವ, ಗಳುವನ್ನೂ ಹೊಸದಾಗಿ ತೆಗೆದುಕೊಂಡು ಬಂದು ನೆಟ್ಟಿನಲ್ಲಿ ಇಡುವದಿಲ್ಲ. ಮತ್ತು ಹಾಸಲು ಪಾವತಿಯಾದ, ಗಳುವನ್ನು, ರಹದಾರಿ ಕೊಟ್ಟ ತಾರೀಖು ಲಾಗಾಯ್ತು ಹದಿನೈದು ದಿವಸಗಳ ವಳಗಾಗಿ ನೆಟ್ಟಿನಿಂದ ಸಾಗಿಸಿಕೊಂಡು ಹೋಗುತ್ತೇನೆ.

(8) ನನ್ನ ಕರಾರ್ ವಾಯಿದೆ ಕಳೆದ ನಂತರ ನನ್ನ ಬಾಬತು ಡಿಪಾಜಿಟ್ ಮೊಬಲಗು ಮೂರು ನೂರು ರೂಪಾಯಿಗಳನ್ನ ಸರ್ಕಾರದಿಂದ ವಾಪಸ್ ತೆಗದುಕೊಳ್ಳುತ್ತೇನೆ. ಅಥವಾ ಕರಾರಿನ ಕೊನೆ ಮೂರು ತಿಂಗಳುಗಳಲ್ಲಿ ನನ್ನಿಂದ ಬರಬೇಕಾಗುವ ಮೊಬಲಗ್ಯಾಗಿ ಸದರೀ ಡಿಪಾಜಿಟ್ ಮೊಬಲಗನ್ನ ಸರ್ಕಾರದವರು ಉತ್ತಾರ ಹಾಕಿಕೊಳ್ಳಬಹುದು.

(9) ನನ್ನಿಂದ ಅಥವಾ ನನ್ನ ಕಡೆ ಜನಗಳಿಂದ ಯಾವ ಕಾರಣದಿಂದಲಾಗಲಿ ಸರ್ಕಾರಕ್ಕೆ ಏನಾದರೂ ನಷ್ಟ ಸಂಭವಿಸಿದಲ್ಲಿ ಅದಕ್ಕೆ ನಾನು ಜವಾಬ್ ಮಾಡತಕ್ಕವನು.

(10) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ಉಲ್ಲಂಘಿಸಿ ನಡೆದಲ್ಲಿ ಡೆಪ್ಯುಟಿ ಕಮ್ಮಿಷನರವರು ನನ್ನ ಕರಾರನ್ನ ರದ್ದುಮಾಡಿ ನಾನು ಜಮಾಯಿಸಿ ಇಟ್ಟುಕೊಂಡಿರುವ, ಗಳುಗಳನ್ನೂ ಜಫ್ತಿ ಮಾಡಬಹುದು. ಮತ್ತು ಅಂಥಾ ತಪ್ಪಿತಕ್ಕಾಗಿ ಮೇಲ್ಕಂಡ ಸೆಕ್ಯೂರಿಟಿ ಮೊಬಲಗನ್ನ ಪೂರ್ತಿಯಾಗಿಯಾಗಲಿ ಆ ಪೈಕಿ ಒಂದು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಕೊಡಲುಳ್ಳವನಲ್ಲದೆ ಕ್ರಿಮಿನಲ್ ತರಫ್ ವಿಚಾರಣೆಗೂ ಸಹ ಗುರಿಯಾಗುತ್ತೇನೆ.

ಬಿ. ರಾಮಸ್ವಾಮಯ್ಯರ್,
ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್,

299

ಫ್ರೇಜರ್‌ರಾಕ್ಸ್ ಸಬ್ ಡಿವಿಜನ್.

ಪ್ರಸಿದ್ಧ ಪತ್ರಿಕೆ.

ತಾರೀಖು 2ನೇ ಏಪ್ರೈಲ್ 1896.

I. ಕೃಷ್ಣರಾಜಪೇಟೆ ತಾಲ್ಲೂಕು ಕಲ್ಲಹಳ್ಳಿ ಬಳಿ ಹೇಮಾವತಿ ನದಿಗೆ ಅಣೆಕಟ್ಟು ಕಟ್ಟಲು ಕಾಂಗಾರಿ ಉದ್ದಿಶ 96ನೇ ಇಸವಿ ಏಪ್ರೈಲ್ ಮಾಹೆ 17ನೇ ತಾರೀಖು ವರಿವಿಗೂ ದರಖಾಸ್ತುಗಳು ಫ್ರೇಜರ್‌ರಾಕ್ಸ್ ಡಿವಿಜನ್ ಎಗ್ಜಿಕ್ಯೂ ಟಿವ್ ಇಂಜಿನಿಯರ್‌ಸಾಹೇಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಮೊತ್ತ ವನ್ನು ಕಾಣಿಸಲ್ಪಟ್ಟಿರುತ್ತದೆ. ಇದುನಿಷ್ಕರ್ಷೆಯಾದದ್ದಾಗಿರುವದಿಲ್ಲ. ಕಾಂಮಗಾರಿಯು 1897ನೇ ಇಸವಿ ಜ್ಯಾ ತಿಂಗಳು ಆಖ್ಯೆರೊಳಗಾಗಿ ಪೂರೈಸತಕ್ಕದ್ದು.

II. ಪ್ಲ್ಯಾನ್ ಮತ್ತು ಅಂದಾಜು ಷರತ್ತು ವಗ್ಯೆರೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ಪ್ರಾತಃಕಾಲ 1 ಘಂಟೇ ಲಾಗಾಯತು ಸಾಯಂಕಾಲ 4 ಘಂಟೇವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇ ರವರ ಆಫೀಸಿನಲ್ಲಿ ದೊರಿಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಒಂದು ಸ್ಟೇಟ್‌ಮೆಂ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿ ಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಕ್ಕೆ.	ಮೊತ್ತ.	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ಒಪ್ಪುವ ದರ.
ಮಣ್ಣು ಕೆಲಸ	ಸಲಿ ಗಜ 1ಕ್ಕೆ.	16,000.	
ಕಲ್ಲು ಕೆಲಸ			

IV. ಪ್ರತಿ ಒಂದು ದರಖಾಸ್ತಿನ ಸಂಗಡಲೂ 1000 ರೂಪಾಯಿಗಳ ಕರೆನ್ಸಿ ನೋಟುಗಳಾಗಲಿ, ಗವರ್ನ್‌ಮೆಂಟ್ ಪ್ರಾಂಸ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ಠೇವಣಾತಿಯಾಗಿ ಹಾಜರ್‌ಮಾಡಬೇಕು, ಮತ್ತು ಲಖೋಟೇ ಮೇ "ಕಲ್ಲಹಳ್ಳಿ ಅಣೆ 'ಕಾಂಗಾರೀ ಬಗ್ಯೆ ದರಖಾಸ್ತೆಂಬದಾಗಿ" ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನು ತಿ ಸ್ಕರಿಸಲಾಧೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್‌ಮಾಡತಕ್ಕದ್ದಕ್ಕೆ ಚೀಫ್ ಇಂಜಿನಿಯರ್ ಸಾಹೇಬರವರು ಸ್ವತಂತ್ರರಾಗಿರುತ ರೆ. ಹಾಗೆ ಮಂಜೂರ್‌ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ಒಪ್ಪಿಕೊಳ್ಳಬ ಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್‌ಮಾಡಿದ 8 ಯಂಟು ದಿನಗಳ ವಳಗಾಗಿ ಮಂಜೂರ್‌ಮಾಡಲ್ಪಟ್ಟ ದರಖಾಸ್ತುದಾರನ ಕಂಟ್ರಾಕ್ಟ್ ಬಾಂಡ್ ಎಂಬ ಕರಾರು ಪತ್ರವನ್ನು ಬರದು ಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದುಮಾ ಲ್ಪಟ್ಟು ಠೇವಣಾತೀ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸ್ ಮುಂಭಾಗದಲ್ಲಿ ನೋಟಿ ಬೋರ್ಡ್ ಮೇಲೆ ಬರದು ಚಿಕ್ಕಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯ ದಲ್ಲಿ ಯಾವದೊಂದು ಜವಾಬೂ ದೊರಿಯಲಾರದು.

VIII. ಯಾವದಾದರೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವು ಅವರಿಗೆ ವಾಪ ಮಾಡಲ್ಪಡುತ್ತೆ.

IX. ಅನುಗುಣವಾದ ಕಲ್ಲುಗಳು ಕೆಲಸದ ಬಳಿಯಲ್ಲಿ ಕಟ್ಟಲು ಸರ್ಕಾರದಿಂದಲೇ ಕಂಟ್ರಾಕ್ಟದಾರರಿಗೆ ಸಪ್ಲೈಮಾಡಲ್ಪಡುತ್ತೆ ಹಾಲಿ ಟೆಂಡರು, ಗಾರೆಯನ್ನು ಸಪ್ಲೈಮಾಡಿ ಸಂಕ್ರಾಂತ್ ಕಲ್ಲಿನಿಂದ ಕಟ್ಟುವದಕ್ಕೆ ಮಾತ್ರವೇ ಆಗಿ ಯಿಧೆ.

ಅಣೆಕಟ್ಟು 1000 ಅಡಿ ಲಾಂಬಿ 8 ಅಡಿ ಅಗಲ ಸ್ಲೋಪು 1:4

303

ಕೆಲಸದ ವಿವರ.	ಕ್ಕೆ	ಮೊತ್ತ.
ಸುರಂಗ	ಸಲಿಗೆಜ	8
ಕಲ್ಲು ಮೆಟ್ಲು ಮೆಟ್ಲಾಗಿ ಮಾಡುವಿಕೆ	ಚದರ ಅಡಿ	9891
ಸಾಧಾರಣವಾದ ಮಟ್ಟು ಕಾಮಗಾರಿ	ಸಲಿಗೆಜ	180
ಸೂರ್ಕಿ ಗಾರೆ ಕಲ್ಲು	ಸಲೆಅಡಿ	71004
ಸಂಕ್ರಾಸುವಮಾಡಿದ ಕಲ್ಲು ಸೂರ್ಕಿಯಿಂದ ಕಟ್ಟಲು	ಡಿಟೋ	12767
ಸಂಕ್ರಾಸುವಮಾಡಿದ ಕಲ್ಲಿನ ಮಂಡೇರಿ	ಚದರಅಡಿ	6774
ಪೋರ್ಟ್ಲೇಂಡು ಯಾ ಸಿಮೆಂಟು ಸುಣ್ಣದ ಸಂದುಗಾರೆ	ಚದರ	266·79
ಪೇಲಿಂಗು	ಮೊತ್ತ ರೂ.	
ಈನ್ಸ್ಪೆಕ್ಷನ್ ಲಾಡ್ಜ್	ಡಿಟೋ	

ಎಸ್. ಈವರ್ಟ್,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 6ನೇ ಏಪ್ರೆಲ್ ಸರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರ್ನ ...ಳ್ಳಿ ಘಾಟಿಯಲ್ಲಿ ಟೋಲ್‌ಗೇಟೆಂಬ ಸುಂಕದ ಕಟ್ಟೆ ಒಳಗೆ ಸರ್ 1896ನೇ ಇಸವಿ ಜುಲೈ ಮಾಹೆ 1ನೇ ಮೊದಲ್ಗೊಂಡು ಲಾಗಾಯತು ...ರ್ 1897ನೇ ಜೂನ್ 30ರ ವರಿಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಸರ್ 1896ನೇ ಇಸವಿ ಮೇ ತಾ ...ಖು 4ನೇ ಸೋಮವಾರ ಹಗಲು 11 ಘಂಟೆಗೆ ಸಕಲೇಶಪುರದ ಮೊಕ್ಕಾಂನಲ್ಲಿ ತಾಲ್ಲೂಕು ಕಚೇರಿ ಬಳಿ ಅಮಲ್ದಾರ್ರಿಂದ ಬಹಿ ...ಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಛಡನವಾಲನ್ನಾಗಲೀ ಅಥವಾ ಯಾವ ಸವಾಲನ್ನೇ ಆಗಲಿ ಕಾರಣವನ್ನು ಹೇಳದೇನೆ ಅಂಗೀಕರಿಸುವ ಯಾ ತಿರಸ್ಕರಿಸುವ ಅಧಿಕಾರವನ್ನು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು ಉಳಿಸಿಕೊಂಡಿರುತ್ತಾರೆ. ಮತ್ತು ಡೆಪ್ಯುಟಿ ಕಮ್ಮಿಷನರವ ...ಂದ ಮಂಜೂರಾದ ಹೊರ್ತು ಹರಾಜು ಖಾಯಂ ಆದ ಹಾಗೆ ತಿಳಿಯಕೂಡದು.

3. ಛಡವರಖುಸ್ತುದಾರನು ಹರಾಜು ಮೊಬಲಗಿನ ಪೈಕಿ ನಾಲ್ಕರಲ್ಲಿ ಒಂದು ಭಾಗವನ್ನು ಆ ಕೂಡಲೆ ಡಿಪಾಜಿಟ್ ಇಡಬೇಕ ...ಲ್ಲದೆ ಬಾಕಿ ಉಳಿದ ಮೊಬಲಗನ್ನು ಸರ್ 1896ನೇ ಇಸವಿ ಜುಲೈ 20ರ ಲಾಗಾಯತು ಸಮವಾದ 3 ಖಿಸ್ತುಗಳಾಗಿ ಪ್ರತಿ ಮಾಹೆ 20ನೇ ತಾರೀಖಿಗೆ ಪಾವತಿ ಮಾಡಲು ಬದ್ಧನಾಗಿ ಇರಬೇಕು. ಹರಾಜು ಮಂಜೂರಾತಿಯು ತನಗೆ ತಿಳಿಸಲ್ಪಟ್ಟ ತಾರೀಖು ಲಾಗಾಯ ...ತು 15 ದಿವಸಗಳ ಒಳಗೆ ಕ್ರಮವಾದ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಈ ಕೆಳಗೆ ನಮೂದಿಸುವ ಷರತ್ತಿಗೆ ಒಳಪಟ್ಟು ಕಂಟ್ರಾ ...ಕ್ಟಿನಂತೆ ತಾನು ಸರಿಯಾಗಿ ನಡಕೊಳ್ಳತಕ್ಕ ಬಗ್ಯೆ ಖಾತರಿ ಜಾಮೀನು ಕೊಡಬೇಕು. ಡಿಪಾಜಿಟ್ ಮೊಬಲಗು ಹಾಜರ್ಮಾಡದೇಯೂ ಮುಚ್ಚಳಿಕೆ ಬರದುಕೊಡದೇಯೂ ಜಾಮೀನು ಕೊಡದೇಯೂ ತಪ್ಪಿದರೆ ಬಾಬನ್ನು ದುಸರೆ ಹರಾಜ್ ಮೂಲಕ ವಿಕ್ರಯಿಸುವದಲ್ಲದೆ ...ಕಿಸ್ಟಕ್ಕೆ ತಪ್ಪಿತಸ್ಥನಾದ ಇಜಾರದಾರನನ್ನು ಗುರಿಪಡಿಸುತ್ತಿಯೆ ಶಿವಾಯಿ ಹಾಗೆ ಬಾಬನ್ನು ದುಸರೆ ಹರಾಜ್ ಮಾಡೋಣದರಲ್ಲಿ ಉಂಟಾ ...ಗುವ ಲಾಭಕ್ಕೆ ಅವನು ಭಾಗಿಯಾಗಲಾರನು.

4. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿ ಆದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ಮಾಹೆಯಾ ...ನಾ ರೂಪಾಯಿ 1ಕ್ಕೆ ಒಂದು ಪೈನಂತೆ ಬಡ್ಡಿ ಸೇರಿಸಿ ವಸೂಲ್ಮಾಡಲ್ಪಡುತ್ತೆ. ಮತ್ತು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಗೆ ಯುಕ್ತ ...ತೋರಿದರೆ ಅಥವಾ ಜಾಮೀನ್ದಾರನು ಅಪೇಕ್ಷಿಸಿದರೆ ಕಂಟ್ರಾಕ್ಟು ದುಸರ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗುವದು. ಅದರಿಂದ ...ಸರ್ಕಾರಕ್ಕೇನ ದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಕಂಟ್ರಾಕ್ಟುದಾರನಿಂದಲೇ ಆಗಲಿ ಅಥವಾ ಜಾಮೀನ್ದಾರನಿಂದಲೇ ಆಗಲಿ ಕಂದಾ ...ಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ.

5. ಹರಾಜ್ ಮೊಬಲಗು ಶಿವಾಯಿ 3—4ನೇ ಕಲಂಗಳಲ್ಲಿ ನಮೂದಾಗುವ ಷರತ್ತುಗಳಿಗೆ ಒಳಪಟ್ಟು ಖಜಾನಿಗೆ ಸಲ್ಲಿಸ ...ತಕ್ಕುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಇಜಾರೆದಾರನು ಬದ್ಧನಾಗಿರ ...ಬೇಕು.

6. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲ್‌ನಲ್ಲಿ ನಮೂದಿಸುವ ದರಗಳ ...ಮೇರೆಗೇನೆ ಟೋಲ್ ವಸೂಲ್ಮಾಡಬೇಕು ಮತ್ತು ಸರ್ 1876ನೇ ಇಸವಿ ನವಂಬರ್ 4ನೇ ಮಾರ್ಕಂ 274ನೇ ನಂಬರ್ ಚೀಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇಷನ್‌ನಲ್ಲಿ ಘಾಯಿಷಾಗಿರುವ ರೂಲ್ಸ್ ಪ್ರಕಾರ ನಡಕೊಳ್ಳಬೇಕು.

7. ಪ್ರತಿ ದಿನದ ಟೋಲ್‌ಯಾನೆ ಸುಂಕದ ವಸೂಲಿ ತೋರಿಸುವ ನಿಜವಾದ ಮತ್ತು ಕರಾರುವಾಕವಾದ ಲೆಖ್ಖವನ್ನು ಇಡಲು ...ಸದಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಅಧಿಕಾರಿಗಳ ತನಿಖೆಗೆ ಸದರೀ ಲೆಖ್ಖವು ಒಳಪಟ್ಟು ...ರತಕ್ಕದ್ದು.

304

8. 7ನೇ ಷರತ್ತಿನಲ್ಲಿ ನಮೂದಿಸಿರುವ ಮೇರೆ ಕರಾರ್‌ವಾಕಾ ಅಂಮದ್ ರಫ್ತು ಲೆಖ್ಖವನ್ನು ಇಡಲೋಸ್ಕರ ಶಿಬ್ಬಂದಿ ಅಂದರೆ ಆಳ್ಬು ಮುತ್ಸದ್ದಿಯ ಖರ್ಚನ್ನು ಕಂಟ್ರಾಕ್ಟುದಾರನೇ ವಹಿಸಬೇಕು.

9. ಗವರ್ನ್‌ಮೆಂಟ್ ಟೋಲ್‌ಮನೆ ಮತ್ತು ಟೋಲ್‌ಗೇಟನ್ನು ಸಹ ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಅವುಗಳನ್ನು ಪೂರಾ ದುರಸ್ತಿನಲ್ಲಿ ಆತನು ಇಟ್ಟುಕೊಂಡಿರತಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ಮಾಹೆ ಗುರ್ರೆ ತಾರೀಖಿನಲ್ಲಿ ಹಿಂದಲ ತಿಂಗಳ ಟೋಲ್ ವಸೂಲಿ ಲೆಖ್ಖವನ್ನು ಮಂಜರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

11. ಕಂಟ್ರಾಕ್ಟುದಾರ ವಸೂಲ್ಮಾಡಬೇಕಾದ ದರಗಳ ತಖ್ತೆಯು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿ ಇದೆ.

1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಡಿಟೋ ಎರಡು ಡಿಟೋ	1	0	0
3	ಪ್ರತಿ ಯುಕ್ಕಾ ಮೇಲು	0	4	0
4	ಸ್ಪ್ರಿಂಗಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ಒಂದಕ್ಕೆ	0	2	0
5	ಎಂಟು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಒಂದಕ್ಕೆ	1	8	0
6	ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	12	0
8	ಆರು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಆಗಿದ್ದರೆ	0	8	0
10	ಡಿಟೋ ಡಿಟೋ ಭರ್ತಿಇಲ್ಲದಿದ್ದರೆ	0	4	0
11	ಎರಡು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ, ಹೇಸರು ಕತ್ತೆಗಳಿಂದ ಎಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	4	0
12	ಡಿಟೋ ಭರ್ತಿ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ಥೋಸು 1ಕ್ಕೆ ಹೇರಿಸಲ್ಪಟ್ಟು ಇದ್ದರೆ	0	1	0
14	ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೇರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದಿದ್ದರೆ	0	4	0
18	ಪ್ರತಿ ಕುದುರೆಗೂ ಹೇರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರ 1 ಕುದುರೆಗೂ	0	0	9
20	ಪ್ರತಿ ತಟ್ಟು ಯಾ ಹೇಸರುಕತ್ತೆ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಪ್ರತಿ ತಟ್ಟು ಯಾ ಹೇಸರುಕತ್ತೆ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22	ಪ್ರತಿ ಕತ್ತೆಗೂ ಹೊರೆ,ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	6
23	ಹೊರೆ ಇಲ್ಲದೆ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿ	0	0	1
25	ಎಂಟು ಬೋಯಿಗಳ ಜತೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಿಗೂ	1	0	0
26	ಆರು ಬೋಯಿಗಳೊಡನೆ ಡಿಟೋ	0	12	0
27	ನಾಲ್ಕು ಬೋಯಿಗಳೊಡನೆ ಡಿಟೋ	0	8	0
28	ಇಬ್ಬರು ಬೋಯಿಗಳೊಡನೆ ಡಿಟೋ	0	4	0

ನಡದು ಬರುವ ಮಾರ್ಗಸ್ತರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

ಎ. ಕ್ರಿಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಇಸ್ತಿಹಾರ್ ನಾಮೆ.

ತಾರೀಖು 24ನೇ ಮಾರ್ಚಿ ಸರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,— ಬೇಲೂರು ತಾಲ್ಲೂಕು ದೊಡ್ಡಬಿಕ್ಕೋಡು ಗ್ರಾಮದಲ್ಲಿ ಇರುವ ಇದರಡಿ ನಮೂದು ಮಾಡಿರುವ ಜಮೀನಿಗೆ ಕಾಫೀ ಸಾಗುವಳಿಬಗ್ಗೆ ದರಖಾಸ್ತು ಬಂದಿರೋಣದರಿಂದ ಸರ್ 1896ನೇ ಇಸವಿ ಮೇ ತಾರೀಖು 18ನೇ ಸೋಮವಾರ ಹಗಲು 11 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಡಿಸಿ ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರವರ ರೂಬರೂ ಬೇಲೂರು ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯುತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ಆಖೈರ್ ಚಡದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಿಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಆವಧಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್‌ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯುಳ್ಳಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಖರ್ಚು ಜಾತಾ ಉಳಿಯುವ ಡಿಪಾಜಿಟ್ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗೆದುಕೊಂಡು ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜ್ ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ದುಸರೇ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನ ಸವಾಲ್‌ಗಿಂತಾ ಕಮ್ಮಿಯಾಗುವ ಪಕ್ಷಕ್ಕೆ ಕಮ್ಮಿ ಮೊಬಲಗನ್ನ ರೆವಿನ್ಯೂ ಬಾಕಿಯಂತೆ ಅವನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು, 4ನೇ 5ನೇ ಸಾಲ್ ಅರ್ಧ ಆಕಾರ, 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

6. ಈ ನಂಬರಿನಲ್ಲಿರುವ ಸುಮಾರು 1—2 ವಿಸ್ತೀರ್ಣದ ಯರಡು ದಾರಿಗಳು ಇವೆ, ಇವುಗಳನ್ನ ಹರಾಜಿನಲ್ಲಿ ಪಡಿಯುವ ಚಡದರಖಾಸ್ತುದಾರನು ಅಡ್ಡಿಪಡಿಸಕೂಡದು. ಅವುಗಳನ್ನ ಜನೋಪಯುಕ್ತಕ್ಕಾಗಿ ಉಳಿಸಿಕೊಂಡಿದೆ.

ಸರ್ವೆ ನಂಬರ.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಸಗಡಿ.	ದರಖಾಸ್ತು ಜಮೀನಿನ ವಿಸ್ತೀರ್ಣ	ದರಖಾಸ್ತು ಜಮೀನಿನ ಕಂದಾಯ	ಷರಾ.
23 ನೇ ಬ್ಲಾಕು ನಂಬರ 172	ಮಿಸ್ಟರ್ ಜೆ. ಜೆ. ಎಚ್. ಕ್ರಾಫರ್ಡುಯವರು.	ದೊಡ್ಡಬಿಕ್ಕೋಡು ಗ್ರಾಮ.	ಉತ್ತರಕ್ಕೆ—ಸರ್ವೆ ನಂಬರು 7—8—9—10 ಮತ್ತು ಮಾಂತ ದಕ್ಷಿಣಕ್ಕೆ—ಸರ್ವೆ 2ನೇ ನಂಬರು ಪೈಕಿ ಪೂರ್ವಕ್ಕೆ—ಸರ್ವೆ ನಂಬರು 88—1 ಪಶ್ಚಿಮಕ್ಕೆ—ಸರ್ವೆ 2ನೇ ನಂಬರು ಪೈಕಿ	ಎ. ಗುಂ. 108—22 ಈ ನಂಬರಿನಲ್ಲಿರುವ 2 ದಾರಿಗಳು ಹೊರ್ತು		ಸಾಲಿಯಂದರೆ ಎಕರೆ 1 ಕ್ಕೆ 1—8—0 ಕಂಗಾಮಿ ದರ—ಜಿರಾಯ್ತಿ 1—0—0 ಹರಾಜಿನಲ್ಲಿ ಪಡಿಯುವವರ ಯಿಷ್ಟ ಪ್ರಕಾರ ಕಾಯಂ ದಾಖಲು ಮಾಡಲ್ಪಡುವದು.

ತಿಳುವಳಿಕೆ ಷರಾ.—ಒಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಪೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟಪ್ರೈಸ್ ವಸೂಲೀ ಕೊಡುವದಕ್ಕೇ, ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ ಹಿಡುವಳಿದಾರನು ಬದ್ಧ ವ ಅರ್ಹನಾಗಿರಬೇಕು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 4ನೇ ಏಪ್ರಿಲ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ ಇದರಡಿ ನಮೂದಿಸಿರುವ ಚೌಬೀನೆ ಮತ್ತು ಬೊಂಬು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡಿಪೋಗಳಲ್ಲಿ ಅವುಗಳ ಬಾಜೂದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಫಾರೆಸ್ಟ್ ಆಫಿಸರ ಮತ್ತು ಡೆಪ್ಯುಟಿ ಕಮಿಷನರ್ ಯಾ ಇವರಿಂದ ನೇಮಿಸಲ್ಪಡುವ ಇತರ ಆಫಿಸರಗಳಿಂದ ಹರಾಜು ಮಾಡಿಸಲ್ಪಡುವದು.

ನಂಬರು.	ಡಿಪೋಗಳ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟಾ.	ರಿಜರ್ವೆಡ್ ನಾಟಾ.	ಅನ್ ರಿಜರ್ವೆಡ್ ನಾಟಾ.	ಸಾಗುವಾನಿ ಬೆಲಗು ಮತ್ತು ತುಂಡು.	ಕಾಡುಜಾತಿ ಬೆಲಗು.	ಬೊಂಬು.	ಷರಾ.
1	ಆನವಟ್ಟಿ ..	1 5 96	30	..	..	151	43	1,325	ಸ್ವಲ್ಪ ಹೆಚ್ಚು ಕಡಮೆ.
2	ಶಿರಾಳಕೊಪ್ಪ ...	4 5 96	26	89	2	151	23	393	
3	ಶಿಕಾರಿಪುರ ...	7 5 96	4	32	2	11	..	1,000	
4	ಚನ್ನಗಿರಿ ..	11 5 96	..	..	..	250	..	2,000	
5	ಮುಬ್ರಾಣಿ ..	13 5 96	..	...	..	42	..	1,500	
6	ಆಯನೂರು ..	1 6 96	100	100	25	200	..	5,000	
7	ಶಿವಮೊಗ್ಗಾ ..	8 6 96	110	163	7	36	100	3,864	
8	ಕುಂಬಾರು ..	12 6 96	100	130	20		..	..	
9	ಸಮುದ್ರಹಳ್ಳಿ ..	13 6 96	..	125	25	...	..	..	

ಹರಾಜು ಷರತ್ತುಗಳು:—ತಾರೀಖು 25—4—95ನೇ ನಂಬರ್ 15ನೇ ಮೈಸೂರು ಗೆಜೆಟನಲ್ಲಿ ಪ್ರಾಯಿಷ್ಠಾಗಿರುವ ತಾರೀಖು 15—3—95ನೇ ನಂಬರ್ 15,229.—155—92ನೇ ನೋಟಿಫಿಕೇಷನ್ ನೋಡತಕ್ಕದ್ದು.

ಸಿ. ನಾರಾಯಣರಾವ್,
ಡೆಪ್ಯುಟಿ ಕನ್ಸರವೇಟರ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 18ನೇ ಮಾರ್ಚಿ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ಡಾಕ್ಟರ್ ಸಿಡ್ನಿಸ್ಮಿತ್ ಸಾಹೇಬರು ಮತ್ತು ಬಿ. ಎ. ಬ್ರಿಟೊ ಜಂಟಿದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಇದೆಯಂತ ಹುಕುಂ ಮಾಡಲ್ಪಟ್ಟು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಚೇರಿಯಲ್ಲಿ ತಾಲ್ಲೂಕು ಅಮಲ್‌ದಾರ್ ಯಾ ಶಿರಸ್ತೇದಾರ್ರ ರೂಬರೂ ಸನ್ 1896ನೇ ಇಸವಿ ಮೇ 15ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ಆ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 288—1—1 ಮತ್ತು ಬಡ್ಡಿ ವಗೈರೆ ಇತರ ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ, ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ಸ್ಯೆನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟವುಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.		
1	2	3	4	5	6	7	8	9		10			11		
					ರೂ. ಅ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಚಿಕ್ಕಮಗಳೂರು.	ಜಾಗರ.	ಮೆಲಿನ ಹುಲುವತ್ತಿ.	ಡಾಕ್ಟರ್ ಸಿಡ್ನಿ ಸ್ಮಿತ್ ಸಾಹೆಬರು ಬಿ. ಎ. ಬ್ರಿಟೋ ಜಂಟಿ.			17	ಕಾಫೀ	79	12	119	0	0	288 ಮತ್ತು	1 ಬಡ್ಡಿವಗೈ	1 ರೆ ಇತರ

ಬಿ. ಜೆ. ಕೊಮಾರಸಾಮಿ ನಾಯಕ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಕಡೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 28ನೇ ಮಾರ್ಚಿ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಿಸುವ ಚೌಬೀನೆ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ಡಿಪೋದಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ 1896ನೇ ಏಪ್ರೈಲ್ 27ನೇ ತಾರೀಖಿನಲ್ಲಿ ಹರಾಜು ನಡಿಸಲ್ಪಡುವದು.

ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ತುದಿತುಂಡುಗಳು.
ತರೀಕೆರೆ	27—4—1896	2968

ಹರಾಜು ಷರತ್ತು.—ಸ್ತ 1895ನೇ ಇಸವಿ 15ನೇ ಮಾರ್ಚಿ 15–229 ಆರ್. ಯಫ್. 155—92ನೇ ನಂಬರು ಗವರ್ನಮೆಂಟ್ ಇಸ್ತಿಹಾರ್‌ನಲ್ಲಿ ಘಾಯಿಷ್ ಆಗಿರತಕ್ಕ ರೂಲ್ಸ್ ಹರಾಜು ವೇಳೆ ಓದಲ್ಪಡುವದು.

ಬಿ. ಹಿರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್.

Mysore Government Central Press, Bangalore—1896.

308

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 16.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 23, ಸ್ಟ 1896.

ವಿ ಷ ಯ ಸೂ ಚಿ ಕೆ.

1ನೇ ಭಾಗ–ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷ್ನ ವ ಯಿಡ್ಯುಕೇಷ್ನ ಇನ್ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ–ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ನಗಳು.—ಇಲ್ಲ.

4ನೇ ಭಾಗ–ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯು.

ತಾರೀಖು 9ನೇ ಏಪ್ರೈಲ್ 1896.

ನಂ. 11470.—ಜಿ. 1273,—ಹಾಸನ ಡಿಸ್ಟ್ರಿಕ್ಟು ಪೊಲೀಸ್ ಸೂಪರ್ರಿಟೆಂಡೆಂಟೆ ಮೆಸ್ಟರ್ ಸಯ್ಯದ್ ಅಮೀರ ಹರ್ಸಯವರಿಗೆ, 1896ನೇ ಮಾರ್ಚಿ 21ನೇ ಮುರ್ಕುಂ 10888—ಜಿ. 1201ನೇ ನಂಬರ್ ಗವರ್ನಮೆಂಟ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹದಿನೈದು ದಿನಗಳ ಕ್ಯಾಜುಯಲ್ ರಜಾವನ್ನ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 11ನೇ ಏಪ್ರೈಲ್ 1896.

ನಂ. 11487.—ಜಿ. 1278,—ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್ದಾರ್ ವೆಂಕಟಾಚಲಯ್ಯನವರು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಎರಡನೇ ಕ್ಲಾಸಿನ ಬ್ಟ್ಪ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 24ನೇ ಮಾರ್ಚಿ 1896.

ನಂ. 8758.—ಅರ್. 3394, 1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಯಿದರಿಂದ ಪ್ರಕಟಿಸಲ್ಪಡುವದೇನೆಂದರೆ,—ಈ ಕೆಳಗೆ ನಮೂದಿಸಿರುವ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಕೋಲಾರದಲ್ಲಿ ಡೆಪ್ಯುಟಿ ಕಮ್ಮಿಷನರವರ ಹೊಸ ಬಂಗಲೆಯ ಕಾಂಪೌಂಡಿಗಾಗಿ ಬೇಕಾಗಿಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೇ ಸೆಟಲ್‌ಮೆಂಟಗೆ ಪೂರ್ವದ ಹಳೇ ಲೆಖ್ಖಗಳ ಪ್ರಕಾರ ಜಮೀನಿನ ತಪ್ಸೀಲ್.				ಚಕ್ಕು ಬಂದಿ.			
					ಬಾಬತು.	ನಂಬರು.	ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಖಂ. ಕೊ. ಪ.	ರೂ. ಆ. ಪೈ				
ಕೋಲಾರ	ಕೋಲಾರ	ಕೋಲಾರ	ಕೋಲಾರ ಪೇಟೆ	ಗೋವಿಂದರಾಜು ಪಿಳ್ಳೆ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ ಖುಷ್ಕಿ	603 605	0—0—2 0—0—10½	0-1-9 0-9-2	ಮಾಜಿ ನಂ. 602 ತೋಟ	ಮಾಜಿ ನಂ. 604 ಬಂಜರು	ಮಾಜಿ ನಂ. 605 ಪಲ್ಲಿಗಕುಂಟೆ	ಮಾಜಿ ನಂ. 599 ಸರ್ಕಾರದ ಬಂಜರು
				ವಾನಂಬಾಡಿ ಬಸಪ್ಪ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ	605	0—0—7¾	0-6-11	ಮಾಜಿ ನಂ. 606 ಬಂಜರು	ಮಾಜಿ ನಂ. 598 ರಸ್ತೆ	ಮಾಜಿ ನಂ. 486 ಚರಂಡಿ	ಮಾಜಿ ನಂ. 602, 603 ಮತ್ತು 604 ಬಂಜರು

ತಾರೀಖು 13ನೇ ಏಪ್ರೈಲ್ 1896.

ನಂ. 11582.—ಜ. 1285,—ಸರ್ 1877ನೇ ಇಸವಿಯ IIIನೇ ನಂಬರ ರಿಜಿಸ್ಟ್ರೇಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಮೈಸೂರ ಗವರ್ನಮೆಂಟಿನವರು, ಇದರಡೀಕಂಡ ಬಡ್ತಿಗಳು, ಮೊಕರರಾತಿಗಳು ಮತ್ತು ನೇಮಣೂಕಿಗಳನ್ನು ಹುಕುಂ ಮಾಡಿರುತ್ತಾರೆ:—

I. ಎಡತೊರೆ 1ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ ಟಿ. ಕೆ. ಲಕ್ಷ್ಮಣ ಅಯ್ಯರ್, ಬಿ. ಏ., ಯವರು, ಬರ್ತರಫ್ ಮಾಡಲ್ಪಟ್ಟ ಚಿನ್ನಿತಂಬಿ ಮೊದಲಿಯಾರ್‌ರಿಗೆ ಬದಲಾಗಿ, ತಿರಮಕೂಡ್ಲು ನರಸೀಪುರಕ್ಕೆ ವರ್ಗ ಮಾಡಲ್ಪಟ್ಟಿರುತ್ತಾರೆ.

II. ಚಾಮರಾಜನಗರದ 2ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ ಟಿ. ಶೇಷಾದ್ರಯ್ಯಂಗಾರು, 1ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟು ಮತ್ತು ವರ್ಗ ಮಾಡಲ್ಪಟ್ಟ ಟಿ. ಕೆ. ಲಕ್ಷ್ಮಣ ಅಯ್ಯರಿಗೆ ಬದಲಾಗಿ ಯಡತೊರೆಗೆ ನೇಮಿಸಲ್ಪಟ್ಟಿರುತ್ತಾರೆ.

III. ಮೈಸೂರು ಡಿಸ್ಟ್ರಿಕ್ಟು ರಿಜಿಸ್ಟ್ರಾರ್ರ ಆಫಿಸ ಹೆಡ್‌ಕ್ಲರ್ಕ್ ಬಿ. ವೆಂಕಟಪತಯ್ಯಂಗಾರು, 2ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ಮೊಕರರ್ ಮಾಡಲ್ಪಟ್ಟು ಮತ್ತು ವರ್ಗ ಮಾಡಲ್ಪಟ್ಟ ಟಿ. ಶೇಷಾದ್ರಯ್ಯಂಗಾರಿಗೆ ಬದಲಾಗಿ ಚಾಮರಾಜನಗರಕ್ಕೆ ನೇಮಿಸಲ್ಪಟ್ಟಿರುತ್ತಾರೆ.

IV. ಹಾಲಿ ತಿರುಮಕೂಡ್ಲು ನರಸೀಪುರದ ಆಕ್ಟಿಂಗ್ ಸಬ್ ರಿಜಿಸ್ಟ್ರಾರಾಗಿರುವ ಏ. ಶಾಮರಾವ್ ಬಿ. ಏ., ಯವರು, 3ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ಮೊಕರರ್ ಮಾಡಲ್ಪಟ್ಟು ಮತ್ತು ಮೈಸೂರ ಡಿಸ್ಟ್ರಿಕ್ಟು ರಿಜಿಸ್ಟ್ರಾರ್ರ ಆಫಿಸಿಗೆ ವರ್ಗ ಮಾಡಲ್ಪಟ್ಟ ಸಿ. ವೆಂಕಟರಾವ್ ಬಿ. ಏ., ಯವರಿಗೆ ಬದಲಾಗಿ ಮಳವಳ್ಳಿಗೆ ನೇಮಿಸಲ್ಪಟ್ಟಿರುತ್ತಾರೆ.

ನಂ. 106.—ಮೊಕ್ಕಾಂ ಮೈಸೂರ್, ತಾರೀಖು 13ನೇ ಏಪ್ರೈಲ್ 1896.

ಮೈಸೂರ ಲೋಕಲ್ ಸರ್ವಿಸ್ ಪರೀಕ್ಷೆ ರೂಲ್‌ಗಳ 5ನೇ ರೂಲಿಗೆ ಈ ಕೆಳಗೆ ಕಂಡ ಜಾಸ್ತೀ ಅಂಶಗಳು ಸೇರಿಸಲ್ಪಟ್ಟಿರುತ್ತೆಂದು ಸರ್ವರ ತಿಳುವಳಿಕೆ ಬಗ್ಯಾಗಿ ಫಾಯಿಷ್ ಮಾಡಲ್ಪಟ್ಟಿರುತ್ತೆ:—

"ಉಮೇದ್‌ವಾರರುಗಳು 1ನೇ ಕ್ಲಾಸಿನಲ್ಲಿ ತೇರ್ಗಡೆಯಾಗಲಿಕ್ಕೆ ಅನ್ಯಥಾ ಅರ್ಹರಾಗಿದ್ದು ಪರಂತು ಒಂದು ಪಾಠದಲ್ಲಿ ಮಾತ್ರ ತಪ್ಪಿಹೋಗಿ ತಕ್ಕವರಿಗೆ ಹಾಗೆ ಸದರೀ ಪಾಠಕ್ಕೋಸ್ಕರ ಕೊಟ್ಟಿರುವ ಕಮ್ಮಿ ನಂಬರುಗಳ ಮೇಲೆ ಶೇಕಡಾ ಹತ್ತರ ಮೇರೆ ರಿಯಾಯತೀ ತರೀಕ ಸೇರಿಸಿ ಕೊಡಲ್ಪಡತಕ್ಕದ್ದು."

ಮೊಕ್ಕಾಂ ಮೈಸೂರ್, ತಾರೀಖು 14ನೇ ಏಪ್ರೈಲ್ 1896.

ನಂ. 11611.—ಲೋ. ಫಂ. 125—92,—ಮೆಸ್ಸರಸ್ ಭಂಗಿಬಸಪ್ಪ ಮತ್ತು ಪಟೇಲ್ ಶಿಂಗಭಟ್ಟ ಇವರುಗಳು ಕಡೂರು ಡಿಸ್ಟ್ರಿಕ್ಟು ಅಜ್ಜಂಪುರ ಮುನಿಸಿಪಾಲಿಟಿಗೆ ಜಾಸ್ತಿ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 11612.—ಲೋ. ಫಂ. 125—92,—ಕಡೂರು ತಾಲ್ಲೂಕು ಶಿರಸ್ತೇದಾರ ಮೆಸ್ಸರ್ ಸುಬ್ಬಣ್ಣನವರು, ಕಡೂರು ಮ್ಯುನಿಸಿಪಲ್ ಬೋರ್ಡಿನ ಒಬ್ಬ ನೇಮಣೂಕೀ ಮಾಡಲ್ಪಟ್ಟ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಏಪ್ರೆಲ್ 1896.

ನಂ. 11295.—ಲೋ. ಫಂ. 257—92, ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ,—ಈ ಕೆಳಗಿನ ಪಟ್ಟಿಯಲ್ಲಿ ತೋರಿಸಿಯಿರುವ ಜಮೀನುಗಳು ಸರ್ಕಾರದ ಕೆಲಸಕ್ಕೆ ಅಂದರೆ ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಬಾಗೇಪಲ್ಲಿ ಟವರ್ ಬಡಾಯಿಸುವದಕ್ಕಾಗಿ ಬೇಕಾಗಿರುತ್ತೆ:—

ನಂಬರು.	ಸರ್ವೆ ನಂಬರು.	ಖಾತೇದಾರನ ಹೆಸರು.	ವಟ್ಟುಜಮೀನಿನ ವಿಸ್ತೀರ್ಣ.		ಹೊಂದಲ್ಪಡತಕ್ಕ ಜಮೀನು.		ಸರಹದ್ದು.			
			ವಿಸ್ತೀರ್ಣ	ಕಂದಾಯ.	ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು.	ರೂ. ಆ. ಪೈ.	ಎ. ಗು.	ರೂ. ಆ. ಪೈ.				
1	ಖುಷ್ಕಿ ನಂ. 160ರ ಪೈ	ಶಂಕರ ನಾಗಣ್ಣ	3—31	5 12 0	1—20	2 4 0	ಫಕ್ರುಸಾಹೇಬನ ಕಂದಾಯುದ ಭೂಮಿ	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರ್ರಯಿನಾಮತಿ	ರಸ್ತೆ	[illegible]
2	(ಖುಷ್ಕಿ) ಭಟ್ಟ ಇನಾಂ ನಂ. 159	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರಿ	1—38	3 0 0	0—20	0 12 0	ಶಂಕರ ನಾಗಣ್ಣನ ಕಂದಾಯುದ ಭೂಮಿ	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ರಸ್ತೆ	ಡಿಟೋ
3	ಖುಷ್ಕಿ ನಂ. 153ರ ಪೈಕಿ	ಸುಣ್ಣಕಲ್ಲು ವೆಂಕಟಿಗಾ	1—11	2 0 0	0—18	0 10 9	ಪುಟ್ಟಾಚಾರಿ, ರಾಮಾಚಾರಿಮತ್ತು ವೇದಾಂತಾಚಾರ್ರಇನಾಮತಿ	ಕೋಡಿ ಚರುವು ಹನುಮಂತನ ಕಂದಾಯದ ಭೂಮಿ ಮತ್ತು ಸರ್ಕಾರದ ಖಾಲೀ ಜಮೀನು,	ರಸ್ತೆ	ಡಿಟೋ
4	ಡಿಟೋ	ಕೋಡಿಚರವು ಹನುಮಂತ (ಅನುಭವದಾರ್ ನರಶಿಹ್ಮ)	3—12	5 0 0	0—15	0 9 0	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ಒಣಿ ಮತ್ತು ಬಾಕಿ ಜಮೀನು	ಸರ್ಕಾರದ ಬಂಜರು ಜಮೀನು	ಡಿಟೋ

ತಾರೀಖು 14ನೇ ಏಪ್ರೆಲ್ ಸ್ಹ 1896ನೇ ಇಸವಿ.

ನಂ. 11613.—ಜು. 1287,—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ರೆವಿನ್ಯೂ ಪ್ರೊಬೇಷನರಾದ ರ್ಯನ್ ರಂಗರಾಯರಿಗೆ ಅವರು ಬೆಂಗಳೂರು ತಾಲ್ಲೂಕಿನ ಚಾರ್ಜಿನಲ್ಲಿರುವ ಕಾಲದಲ್ಲಿ ಮೂರನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತವೆ.

ನಂ. 11616.—ಜು. 1290,—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಹಾಸನ ತಾಲ್ಲೂಕು ಅಮಲ್ದಾರ್ ಪಿ. ನಂಜುಂಡನಾಯುಡು ಯವರು ಪ್ರೊಬ್ಬ ಎರಡನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 15ನೇ ಏಪ್ರೆಲ್ 1896.

ನಂ. 11687.—ಜು. 1301,—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜಿನಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಕೆ. ಚಾಂಡಿ, ಬಿ. ಎ., ಯವರು ಮೂರನೇ ಕ್ಲಾಸ್ ಪ್ರೊಬ್ಬ ಮಾಜಿಸ್ಟ್ರೇಟರ ಅಧಿಕಾರಗಳನ್ನು ಕೊಡಲ್ಪಟ್ಟಿರುತ್ತಾರೆ.

ತಾರೀಖು 6ನೇ ಏಪ್ರೆಲ್ 1896.

ನಂ. 9190.—ರೆ. ಫೈ. 109—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಕ್ಲೋಸ್ ಟಿ ಸಬ್ ಡಿವಿಜನ್ ಆಫಿಸರಾದ ಮೆಸ್ಟರ್ ಸಿ. ರಾಘವಾಚಾರ್ಲು ಯವರಿಗೆ, 189ನೇ ಇಸವಿ ಏಪ್ರೆಲ್ ಗುರ್ರೇ ಲಾಗಾಯುತು ಯಾ ಅವರು ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖಿನಾರಭ್ಯ ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 8ನೇ ಏಪ್ರೆಲ್ 1896.

ನಂ. 9207.—ಫಾ. ಫೈ. 62—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಹೆಗ್ಗಡದೇವನಕೋಟೆ ಫಾರೆಸ್ಟ್ ಸಬ್ ಡಿವಿಜನ್ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕನ್‌ಸರವೇಟರಾದ ಮೆಸ್ಟರ್ ಎಂ. ಜಿ. ರಾಮರಾಯರಿಗೆ, 1896ನೇ ಫೆಬ್ರುವರಿ 14ನೇ ಮುರ್ಕಿಂ ಲಾಗಾಯತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 9240.—ರೆ. 3568, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ಬಿ. ರಾಮಸ್ವಾಮಯ್ಯನವರಿಗೆ, 1896ನೇ ಏಪ್ರೆಲ್ 5ನೇ ಮುಕ್ಕಾಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಅಮಲ್ದಾರು ರಜಾದ ಮೇಲೆ ಗೈರ್‌ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರು ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 9243.—ರೆ. 3571,—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ಟಿ. ರಾಮಚಂದ್ರರಾಯರಿಗೆ, 1896ನೇ ಮಾರ್ಚಿ 19ನೇ ಮುಕ್ಕಾಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 9ನೇ ಏಪ್ರೆಲ್ 1896.

ನಂ. 9260.—ರೆ. ಫೈ. 123—95,—ಮುದ್ದಗಿರಿ ತಾಲ್ಲೂಕು ಅಮಲ್ದಾರ್ ಚೌಡಯ್ಯನವರಿಗೆ 1896ನೇ ಫಿಬ್ರವರಿ 24ನೇ ಮುಕ್ಕಾಂ 7578—ರೆ. 2963ನೇ ನೆಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾವನ್ನು ಅವರ ಕೋರಿಕೆ ಯಂತೆ ಯಿದ್ದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 9263.—ರೆ. ಫೈ. 122—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ ಮಳವಳ್ಳಿ ತಾಲ್ಲೂಕು ಅಮಲ್ದಾರ್ ಹಸನಲ್ಲಿಬೇಗ್ ಯವರಿಗೆ, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಅಮಲ್ದಾರು ರಜಾದಮೇಲೆ ಗೈರ್‌ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರು ತಮ್ಮ ಕೆಲಸಗಳೊಂದಿಗೆ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 9299.—ರೆ. ಫೈ. 121—95,—ಮೊಕ್ಕಾಂ ಮೈಸೂರ ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 188ನೇ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗದ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರಾದ ಮೆಸ್ಟರ್ ಯಚ್. ರಾಮಾನುಜಯ್ಯಗಾರಿಗೆ 1896ನೆ ಏಪ್ರೆಲ್ 21ನೇ ಮುಕ್ಕಾಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳಬಹುದಾದ ಯಿತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಮೆಸ್ಟರ್ ಯಚ್. ರಾಮಾನುಜಯ್ಯಂಗಾರು ರಜಾದ ಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಟ್ರೆಜರೀ ಅಸ್ಸಿಂಟ್ ಕಮ್ಮಿಷನರವರು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟಿನ ಚಾರ್ಜಿನಲ್ಲಿರತಕ್ಕದ್ದು.

ಮೊಕ್ಕಾಂ ಮೈಸೂರ್ ತಾರೀಖು 10ನೇ ಏಪ್ರೆಲ್ 1896.

ನಂ. 9316.—ಫಾ. ಫೈ. 91—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 218ನೇ ಆರ್ಟಿಕಲ್ ಅನುಸರಿಸಿ ಷಿಕಾರಿಪುರ ಫಾರಸ್ಟ್ ಸಬ್ ಡಿವಿಜನ್ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ, 1896ನೇ ಮಾರ್ಚಿ 12ನೇ ಮುಕ್ಕಾಂ ಲಾಗಾಯತು ಮಡಿಕಲ್ ಸರ್ಟಿಫಿಕೇಟ್ ಮೇಲೆ ಒಂದು ತಿಂಗಳು ರಜಾ ಕೊಡಲ್ಪಟ್ಟಿರುತ್ತೆ.

ಫಾರೆಸ್ಟುಗಳ ಯಕ್ಸ್‌ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆಸ್ಟರ್ ಮಾರ್ಟಿಕೋಯವರು, ಮೆಸ್ಟರ್ ಶ್ರೀನಿವಾಸರಾಯರಿಗೆ ಚಾರ್ಜು ಒಪ್ಪಿಸುವವರಿಗೆ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಷಿಕಾರಿಪುರದ ಸಬ್ ಡಿವಿಜನ್ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 11ನೇ ಏಪ್ರೆಲ್ 1896.

ನಂ. 9311.—ರೆ. ಫೈ. 104—95,—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸಗಳ 171ನೇ ಆರ್ಟಿಕಲ್ ಅನುಸರಿಸಿ ತುಮಕೂರು ತಾಲ್ಲೂಕು ಅಮಲ್ದಾರ್ ಮಹಮ್ಮದ್ ರಜಾಯವರಿಗೆ ಒಂದು ದಿನ ಅಂದರೆ 1896ನೇ ಏಪ್ರೆಲ್ 4ನೇ ಮುಕ್ಕಾಮಿನ ದಿನ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸಕ್ರಿಟರಿ.

312

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಸ್ಪ್ ಆದ್ದು. [ನಂ. 16.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 23, ಸನ್ 1896.

IIನೇ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸ್ರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ರ್ಯಾಪುರವರ ಡಿಟೋ	,, 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನಪತ್ರಿಕೆ.

ಸ್ 1896ನೇ ಇಸವಿ ಫೆಬ್ರುವರಿ ತಾರೀಖು 26.

ಸ್ 1897ನೇ ಸಂವತ್ಸರಾನಂತರ ಎಲ್ಲಾ ದೇಶೀ ಪರೀಕ್ಷೆಗಳಿಗೂ ಪರೀಕ್ಷ್ಯರು ಅವರ ಪ್ರಶ್ನಪತ್ರಿಕೆಗಳಲ್ಲಿ ಸಂಸ್ಕೃತ ಭಾಷೆಯನ್ನು ದೇವನಾಗರಿ ಅಕ್ಷರದಲ್ಲೇ ಬರೆಯತಕ್ಕದ್ದು.

ಇಂಗ್ಲೀಷ್ ಭಾಷೆಯನ್ನ ತಮ್ಮ ದೇಶಭಾಷೆಯಾಗಿ ಉಳ್ಳಂಥಾ ಪರೀಕ್ಷ್ಯೆಯರು ಮೈಸೂರು ಲೋವರ್ ಸೆಕೆಂಡರೀ ಪರೀಕ್ಷೆಗೆ ಕ್ರೀಟನ್ಸ್ ಷಿಲಿಂಗ್ ಹಿಸ್ಟರಿ ಆಫ್ ಇಂಗ್ಲಂಡ್ ಎಂಬದರಲ್ಲಿರುವಂತೆ ಇಂಗ್ಲಾಂಡ್ ದೇಶದ ಚರಿತ್ರೆಯನ್ನು ಮತ್ತು ಮಿಸ್ ಕೀಲೀಸ್ ಲೆಸ್ಸನ್ಸ್ ಆಡೊಮೆಸ್ಟಿಕ್ ಎಕಾನಮಿ ಎಂಬ ಗ್ರಂಥದಲ್ಲಿರುವಂತೆ ಡೊಮೆಸ್ಟಿಕ್ ಎಕಾನಮಿ ಅಂದರೆ ಗೃಹಕೃತ್ಯ ನಡಿಸುವ ಕ್ರಮ ಗ್ರಂಥವನ್ನು ತಮ್ಮ ಐಚ್ಛಿಕ ವಿಷಯಗಳಿಗಾಗಿ ತೆಗೆದುಕೊಳ್ಳಬಹುದು.

ಸ್ 1896ನೇ ಇಸವಿ ಫೆಬ್ರುವರಿ ತಾರೀಖು 26.

ಇದರಡಿ ಕಂಡ ಭಾಷಾ ಗ್ರಂಥಗಳು ಸ್ 1897ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ದೇಶಭಾಷಾ ಅಪ್ಪರ್ ಸೆಕೆಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ.

ಕನ್ನಡ, ಪದ್ಯ .. (1) ಕಬ್ಬಿಗರಕಾವ ಪದ್ಯಗಳು 239ರಿಂದ ಕಡೇವರೆಗೆ (ಒದಲವಶ್ಯಕವಿಲ್ಲದ ಪದ್ಯಗಳು ಗೊತ್ತು ಮಾಡಲ್ಪಡುತ್ತವೆ.)
(2) ಸೂರಸೇನ ಚರಿತ್ರೆ (ಒತೆಲೊ) ಬಸವಪ್ಪಶಾಸ್ತ್ರಿ ಮತ್ತು ಸಿ. ಸುಬ್ಬರಾವು ಬಿ. ಯೆ. ಇವರುಗಳಿಂದ ರಚಿಸಲ್ಪಟ್ಟದ್ದು.
(3) ಕರ್ಣಾಟಕ ಕಾದಂಬರಿ ಮೊದಲನೇ ಭಾಗ, ಪದ್ಯಗಳು 584ರಿಂದ 684ರ ವರೆಗೆ.

ಗದ್ಯ .. (1) ಅದ್ಭುತರಾಮಾಯಣ (ಕರ್ನಾಟಕ ಕಾವ್ಯಮಂಜರಿ ಪ್ರತಿ) ಪುಟಗಳು 1—70.
(2) ಆರ್ಯಕೀರ್ತಿ ಮ॥ ಸಿ. ವಾಸುದೇವಯ್ಯನವರಿಂದ ರಚಿಸಲ್ಪಟ್ಟದ್ದು. (ಕರ್ನಾಟಕ ಗ್ರಂಥಮಾಲೆ ಪ್ರತಿ) ಪುಟಗಳು 1—40.

ಸಂಸ್ಕೃತ .. (1) ರಘುವಂಶ ಸರ್ಗಗಳು 7 ಮತ್ತು 10.
(2) ಪಂಚತಂತ್ರ ಮುಂಬೈ ಛಾಪ 2ನೇ ಭಾಗ ಪುಟಗಳು 1—41.

ಫಾರಸಿ ಪದ್ಯ .. ದಿವಾನಿಫನಿ (ನಾವಲಕಿಷೋರ ಮುದ್ರಾಕ್ಷರಶಾಲೆಯ 1887ನೇ ಛಾಪ) 7ನೇ ಪುಟದಿಂದ 104ನೇ ಪುಟದ ಕೊನೇ ವರೆಗೆ.

ಗದ್ಯ .. ಮಂಮ್ರಾ ಖಾಹಾ ಯೆತಿ ಫಾರಸಿ ಹಿಸ್ಸೇಯಿ ಚಹರಂ ರೆವರೆಂಡ್ ಇ. ಸೆಲ್. ಯವರಿಂದ ರಚಿಸಲ್ಪಟ್ಟದ್ದು.

ಹಿಂದುಸ್ತಾನಿ ಪದ್ಯ .. ದಿವಾನಿ ಮೋಮಿನ್ (ನಾವಲಕಿಷೋರ ಮುದ್ರಾಕ್ಷರಶಾಲೆಯ 1885ನೇ ಛಾಪ) 74ನೇ ಪುಟದಿಂದ 148ನೇ ಪುಟದ ವರೆಗೆ.

ಗದ್ಯ .. ಟಾಲಿಂ, ಸಿರಾಜುದ್ದೀನ್ ಅಹಮದ್ ಸಾಹೆಬರಿಂದ ರಚಿಸಲ್ಪಟ್ಟದ್ದು.

ಕರ್ನಾಟಕ ಪಂಡಿತ ಪರೀಕ್ಷೆ.

ಕಾವ್ಯಾವಲೋಕನ ಅಥವ ಅಪ್ರತಿಮ ವೀರಚರಿತೆ ಎಂಬದಕ್ಕೆ ಬದಲಾಗಿ ನಾಗವರ್ಮ ಕಾವ್ಯಾವಲೋಕನ ಮತ್ತು ಅಪ್ರತಿಮ ವೀರಚರಿತ್ರೆಯನ್ನು ನಿಯಮಿಸಲ್ಪಟ್ಟಿರುತ್ತೆ.

ಇದರಡಿಕಂಡ ಭಾಷಾ ಗ್ರಂಥಗಳು ಸ್ 1897ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕೆಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ.

ಕನ್ನಡ ಪದ್ಯ .. (1) ಪದ್ಯಸಾರ ಪದ್ಯಗಳು 72ರಿಂದ 128ರ ವರೆಗೆ (ಹೊಸಛಾಪ.)
(2) ರಾಮಾಭ್ಯುದಯ ಕಥಾಕುಸುಮ ಮಂಜರಿ, ಸುಂದರಕಾಂಡ ನಾಲ್ಕನೇ ಸಂಧಿ.
(3) ಸುಮತಿಶತಕ 50 ಪದ್ಯಗಳು - 1896ನೇ ವರುಷದ ಪರೀಕ್ಷೆಗೆ ನಿಯಮಿಸಲ್ಪಟ್ಟ ಪದ್ಯಗಳು ವಿನಹ ಮಿಕ್ಕ ಪದ್ಯಗಳಲ್ಲಿ.

ಗದ್ಯ ರಾಜಶೇಖರ ಚರಿತ್ರೆ. ಮ॥ ಸೋಮನಾಥಯ್ಯನವರಿಂದ ತೆಲುಗಿನಿಂದ ಭಾಷಾಂತರ ಮಾಡಲ್ಪಟ್ಟದ್ದು. ಪೂರ್ವಾರ್ಧಭಾಗ.

ಪದ್ಯಸಾರದಲ್ಲಿನ ಪದ್ಯಗಳು ವಿನಹ ಮೇಲೆ ನಿಯಮಿಸಲ್ಪಟ್ಟಿರುವ ಗ್ರಂಥಗಳೆಲ್ಲಾ ಇಲಾಖೆಯವರಿಂದ ಒಂದೇ ಪುಸ್ತಕವಾಗಿ ಛಾಪಿಸಲ್ಪಡುತ್ತವೆ.

ತೆಲುಗು (1) ನಳಚರಿತ್ರಮು.
(2) ವೇಣೀ ಸಂಹಾರ ಮತ್ತು ಮಾಳವಿಕಾಗ್ನಿಮಿತ್ರ ನಾಟಕಗಳ ಕಥೆ (ಮದ್ರಾಸ್ ಸ್ಕೂಲ್ ಬುಕ್ಕು ಮತ್ತು ವರ್ನಾಕ್ಯುಲರ್ ಲಿಟ್ರೇಚರ್ ಸೊಸೈಟಿಯವರಿಂದ ಛಾಪಿಸಲ್ಪಟ್ಟದ್ದು.

314

	(3)	ಕಂಠಪಾಠ. ನಳಚರಿತ್ರಮು ಪುಟಗಳು 16—30.
ಅರವ	(1)	ಪಂಚತಂತ್ರಂ. ಪ್ರಸ್ತಾವನೆ ಮತ್ತು ಮೊದಲನೇ ಭಾಗ.
	(2)	ಎರಡನೇ ನಂಬರು ನೀತಿಮಂಜರಿ.
	(3)	ಕಂಠಪಾಠ ಎರಡನೇ ನಂಬರು ನೀತಿಮಂಜರಿ ಪದ್ಯಗಳು 65—128.
ಹಿಂದುಸ್ತಾನಿ ಪದ್ಯ	..	ಮಜಮುವ-ಇಸರ್ಖ ಹಿಸ್ಸೇದುಯಂ ಎರಡನೇ ಭಾಗ.
ಗದ್ಯ	..	ಖಿಸಾಸಿಹಿಂದ್, ಮೊದಲನೇ ಭಾಗ ಮುಫಿ-ದಿ-ಯಂ-ಮುದ್ರಾಕ್ಷರಶಾಲೆ, ಲಾಹೋರ್.
ಸಂಸ್ಕೃತ ಮೊದಲನೇ ಭಾಷೆ.	(1)	ಚಂಪುರಾಮಾಯಣ ಕಾಂಡಗಳು 4 ಮತ್ತು 5.
	(2)	ಭರ್ತೃಹರಿ ನೀತಿಶತಕ ಪೂರ್ತಿಯಾಗಿ; ಮತ್ತು ವೈರಾಗ್ಯಶತಕ ಮೊದಲಿನಿಂದ 50 ಪದ್ಯಗಳು.
ಸಂಸ್ಕೃತ ಎರಡನೇ ಭಾಷೆ.	..	ವಿಕ್ರಮಾರ್ಕ ಚರಿತ್ರೆ. ಒಂಭತ್ತನೇ ಕಥೆಯಿಂದ ಮುಂದಿನ ಎಂಟು ಕಥೆಗಳು. (ಸ್ವಲ್ಪ ಹೆಚ್ಚು ಕಡಮೆ 1896ನೇ ವರುಷಕ್ಕೆ ನಿಯಮಿಸಲ್ಪಟ್ಟಿರುವಷ್ಟು.)
ಫಾರಸಿ ಮೊದಲನೇ ಭಾಷೆ. ..	(1)	ಗುಲ್ಧಸ್ತಾ ಇದಾನಿಷ್ (ಪಂಜಾಬ್ ಛಾಪ.)
	(2)	ಸರ್ಮಾಯಿಖಿರಾದ್ (ಪಂಜಾಬ್ ಛಾಪ) ಪುಟಗಳು 1—112.
ಫಾರಸಿ ಎರಡನೇ ಭಾಷೆ. ..	(1)	ಫಾರಸಿ ಎರಡನೇ ಪುಸ್ತಕ ಪಂಜಾಬ್ ಛಾಪ.
	(2)	ಗುಲ್ಧಸ್ತಾ ಇದಾನಿಷ್ (ಪಂಜಾಬ್ ಛಾಪ) ಪುಟಗಳು 1—48.
ಲ್ಯಾಟಿನ್ ಎರಡನೇ ಭಾಷೆ	..	ಸೀಜರ್ ಡಿಬೆಲೊ ಗ್ಯಾಲಿಕೊ ಎರಡನೇ ಪುಸ್ತಕ.

ತಾರೀಖು 8ನೇ ಏಪ್ರೈಲ್ ಸರ್ 1896ನೇ ಇಸವಿ.

ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ಸರ್ 1896ನೇ ಇಸವಿ ಏಪ್ರೈಲ್ ತಾರೀಖು 6.

ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಲೋವರ್ ಸೆಕಂಡರಿ ಮತ್ತು ಪ್ರೈಮರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸರ್ 1896ನೇ ಇಸವಿ ಜೂನ್ ತಿಂಗಳ ತಾರೀಖು 1ನೇ ಸೋಮವಾರ ಮತ್ತು 2ನೇ ಮಂಗಳವಾರ ಈ ದಿವಸಗಳಲ್ಲಿ ಮೈಸೂರಲ್ಲಿ ಇದರಡಿ ಕಂಡ ಕಾಲಕ್ರಮವಾಗಿ ನಡೆಯಿಸಲ್ಪಡುವುದು.

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯುಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯುಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯುಗಳು.
ಮೊದಲನೆಯ ದಿವಸ	10ರಿಂದ 1ರ ವರಿಗೆ	(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲಿಗಳಲ್ಲಿ ಓದಬೇಕಾದ ವಿಷಯುಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ (The art of oral teaching) ಯಾವುದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on a given subject)	10ರಿಂದ 1ರ ವರಿಗೆ	(a) ಅಪ್ಪರ್ ಪ್ರೈಮರಿ ಸ್ಕೂಲಿಗಳಲ್ಲಿ ಓದಬೇಕಾದ ವಿಷಯುಗಳನ್ನು ಕಲಿಸುವ ಕ್ರಮುಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ	10ರಿಂದ 11-30ರ ವರಿಗೆ	(a) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ.
	2ರಿಂದ 5ರ ವರಿಗೆ	(b) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲಿಗಳ ಸಂವಿಧಾನ (Organization) ಸ್ಕೂಲ್ ರಿಜಿಸ್ಟರಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ ಮತ್ತು ಸರ್ಕಾರೀ ಕಾಗದಗಳನ್ನು ಬರೆಯುವ ಸರಿಯಾದ ಕ್ರಮ.	2ರಿಂದ 4ರ ವರಿಗೆ	(b) ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline), ಸ್ಕೂಲ್ ರಿಜಿಸ್ಟರುಗಳ ಮಾದಿರಿ ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ.	2ರಿಂದ 3-30ರ ವರಿಗೆ	(b) ಸ್ಕೂಲ್ ರಿಜಿಸ್ಟರುಗಳ ಮಾದರಿ ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವರೀತಿ.
ಎರಡನೆಯ ದಿವಸ	10ರಿಂದ 11-30ರ ವರಿಗೆ	(c) ನೀತ್ಯನುಶಾಸನ ವಿಧಾನ (Principles of moral discipline) ಶೀಲ ಸ್ವಭಾವೋತ್ಪಾದನ (Formation of habits and character)				

ಒಂದೊಂದು ಪತ್ರಿಕೆಗೂ ಕ್ಲಿಪ್ತಮಾಡಿರುವ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವುದಿಲ್ಲ. ತೇರ್ಗಡೆಯಾದವರಲ್ಲಿ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

ಬರಹ ಪರೀಕ್ಷೆಗಳ ಫಲಿತಾಂಶವು 1896ನೇ ಇಸವಿ ಜೂನ್ ತಿಂಗಳು 12ನೇ ತಾರೀಖನ್ನು ಅತಿಕ್ರಮಿಸದೆ ಪ್ರಕಟಿಸಲ್ಪಡುತ್ತದೆ.

ವ್ಯವಹಾರಿಕ ಪರೀಕ್ಷೆಯು (Practical test) 1896ನೇ ಇಸವಿ ಜೂನ್ ತಿಂಗಳು 17ನೇ ತಾರೀಖಿನಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು.

ಬರಹ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವುದಿಲ್ಲ.

ಇದರಡಿ ಕಂಡ ನಿಬಂಧನೆಗಳಿಗೆ ಪರೀಕ್ಷ್ಯರು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ಪರೀಕ್ಷ್ಯನಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದ ಮೇಲೆ ಬರುವ ಯಾವ ಪರೀಕ್ಷ್ಯರಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಹ ಪ್ರವೇಶಿಸಲು ಯಾವ ಪರೀಕ್ಷ್ಯನಿಗೂ ಅವಕಾಶ ಉಂಟಾಗಲಾರದು ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟು ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ಪರೀಕ್ಷ್ಯನೇ ಆಗಲಿ ಮತ್ತೊಬ್ಬ ಪರೀಕ್ಷ್ಯನೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ತಿಳಿಸಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ನಾವ ವಿಧವಾದ ಕಾಗದ ಪತ್ರವನ್ನಾಗಲಿ ತೆಗದುಕೊಂಡು ಹೋಗಲು ಯಾವ ಪರೀಕ್ಷ್ಯನಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವುದಿಲ್ಲವು. ಯಾವ ಪರೀಕ್ಷ್ಯನಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ನಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ತಿಳಿಸಲ್ಪಡುವುದು.

(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು, ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಅಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಪಿ. ಎಚ್. ಪೂರ್ಣಯ್ಯ,
ಅ|| ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ತುಮಕೂರು ಡಿಸ್ಟ್ರಿಕ್ಟು

ಇಸ್ತಿಹಾರನಾಮೆ.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಆರೇನಲ್ಲಿ ನಮೂದಾಗುವ ಸ್ಟೇಟ್‌ಫಾರೆಸ್ಟುಗಳು ವಿನಹ, ತುಮಕೂರು, ಮದ್ದಗಿರಿ, ಚಿಕ್ಕನಾಯಿಕನಹಳ್ಳಿ, ಶಿರಾ, ಗುಬ್ಬಿ, ತಿಪಟೂರ, ಪಾವಗಡ, ಕುಣಿಗಲ್ ಈ ತಾಲ್ಲೂಕುಗಳ ಮತ್ತು ಕೊರಟಗೆರೆ, ಹುಳಿಯಾರ್, ತುರುವೆಕೆರೆ ಸಬ್ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟು ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ ಆಖೈರವರಿಗೆ ಒಂದು ವರುಷ ಅಂದರೆ 1896—97ನೇ ಸಾಲಿಗೆ ಜಡದರಬಾಸ್ತುದಾರ್ರಿಗೆ 1896ನೇ ಇಸವಿ ಜೂನ್ ತಾರೀಖು 1ರಲ್ಲು ಮಧ್ಯಾಹ್ನ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯುಟಿ ಕಮಿಷನರ್ ಅಥವಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮಿಷನರ್ ರೂಬರೂ ವಿಕ್ರಯಿಸಲ್ಪಡುವದು.

1. ದೇವರಾಯದುರ್ಗ
2. ಮದ್ದಗಿರಿ
3. ಕೋಳಿಕಲ್
4. ಭುಕ್ಕಾಪಟ್ಣ
5. ಮಂಚಲದೊರೆ
6. ಹುಲಿಯೂರದುರ್ಗ
7. ಕಂಪಲಾಪುರ
8. ಕುದುರೆಕಣಿವೆ
9. ತೀರ್ಥರಾಂಪುರ

II. ಡಿಡ ದರಖಾಸ್ತುದಾರರು ತಮ್ಮ ದರಖಾಸ್ತು ಮಂಜೂರಾದ ನಂತರ ಮಂಜೂರಾದ ಕಂಟ್ರಾಕ್ಟು ಪಟ್ಟು ಮೊಬಲಗಿನ ನಾಲ್ಕು ತಿಂಗಳ ಖಿಸ್ತುಗಳಿಗೆ ಸಮನಾದ ಮೊಬಲಗು ನಗದಾಗಲಿ ಅಥವಾ ಕರ್ರೆನ್ಸಿ ನೋಟಾಗಲಿ ಹಾಜರ್ಮಾಡತಕ್ಕದ್ದು. ಹಾಗೆ ಮಾಡ ಲಿಕ್ಕೆ ತಪ್ಪಿದ ಪಕ್ಷ ಸದರೀ ಕಂಟ್ರಾಕ್ಟು ಕೂಡ್ಲೆ ಪುನಹ ಹರಾಜು ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ವುಂಟಾಗುವ ಲುಕ್ಸಾನಿಗೆ ಅವರನ್ನು ಗುರಿಮಾಡಲಾದೀತು.

III. ಮಂಜೂರಾದ ದರಖಾಸ್ತುದಾರು 1896ನೇ ಜುಲೈ 1ನೇ ತಾರೀಖಿನಲ್ಲಿ ಕಂಟ್ರಾಕ್ಟು ಕೆಲಸದ ಮೇಲೆ ಪ್ರವೇಶಿಸಿ ತಮ್ಮ ಮೊದಲನೆ ಮಾಹೆ ಖಿಸ್ತನ್ನು 1896ನೇ ಇಸವಿ ಆಗಸ್ಟು 15ರಲ್ಲಿ ಆಗಲಿ ತತ್ಪೂರ್ವದಲ್ಲಾಗಲಿ ಪಾವತಿ ಮಾಡತಕ್ಕದ್ದು. ಆ ತರು ವಾಯ ಪ್ರತಿ ಮಾಹೆ ಖಿಸ್ತು ಆ ತಿಂಗಳು ಕಳದ ಮಾರನೆತಿಂಗಳ 15ನೇ ತಾರೀಖಿನಲ್ಲಿ ಆಗಲಿ ತತ್ಪೂರ್ವದಲ್ಲಾಗಲಿ ಪಾವತಿ ಮಾಡತ ಕ್ಕದ್ದು ಅಂಥಾ ಮಾಹೆವಾರಿ ಖಿಸ್ತುಗಳು ಡಿಪಾಜಟ್ಟು ಇಟ್ಟ ಮೊಬಲಗ್ಯೆ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಪಾವತಿ ಮಾಡತಕ್ಕದ್ದು. ಹಾಗೆ ಪ್ರತಿಮಾಹೆ 15ನೇ ತಾರೀಖಿನ ವಳಗೇನೇ ಖಿಸ್ತು ಮೊಬಲಗು ಪಾವತಿಮಾಡದೆ ತಪ್ಪಿದಲ್ಲಿ ಆ ಲಾಗಾಯಿತು ಅಂಥಾ ಖಿಸ್ತು ಮೊ ಬಲಗ್ಯೆ ಸಾಲಿಯಾನಾ ಶೇಕಡಾ 6 ರೂಪಾಯಿನಂತೆ ಬಡ್ಡಿ ದಾಖಲ್ಮಾಲ್ಪಡುವದು.

IV. ಕಂಟ್ರಾಕ್ಟುದಾರು ಕೊಡತಕ್ಕ ಮಾಹೆವಾರಿ ಖಿಸ್ತುಗಳ ಮೇಲೆ ರೂಪಾಯಿ ವಂದಕ್ಕೆ ಪಂದಾಣೆ ಮೇರೆಗೆ ಲೋಕಲ್ ಸೆಸ್ಸನ್ನು ಕೊಡಬೇಕು.

V. ಅವಿಚ್ಛಿನ್ನವಾಗಿ (2) ಯರಡು ತಿಂಗಳವರಿವಿಗೂ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೂ ಅಥವಾ ಸಾವಕಾಶ ಮಾಡಿದರೂ ಸದರೀ ಕಂಟ್ರಾಕ್ಟು ಪೂರ್ತಿಯಾಗಿ ರದ್ದಾಗಲಿಕ್ಕೆ ಗುರಿಯಾಗಿ ಡಿಪಾಜಟ್ಟು ಪಟ್ಟು ಮೊಬಲಗನ್ನ ಗಣನಿಗೆ ತಾರದೆ ಷರತ್ತಿಗೆ ತಪ್ಪಿದ ಕಂ ಟ್ರಾಕ್ಟುದಾರನ್ನ ಲುಕ್ಸಾನಿಗೆ ಗುರಿಪಡಿಸಿ ಕಂಟ್ರಾಕ್ಟು ಪುನಹ ವಿಕ್ರಯಿಸಲ್ಪಡುವದು. ಸದರೀ ಡಿಪಾಜಟ ಮೊಬಲಗು ಗವರ್ನಮೆಂ ಟಿಗೆ ಸೇರಿಸಿಕೊಳ್ಳಲ್ಪಡುವದು ಮತ್ತು ಬಾಕಿ ಮೊಬಲಗು ವಿಷಯದಲ್ಲಿ ರೆವಿನ್ಯೂ ಕಂದಾಯದ ಮೊಬಲಗಿನಂತೆ ವಸೂಲಮಾಡಲ್ಪಡುವದು.

VI. ಕಂಟ್ರಾಕ್ಟುದಾರು ಯಾವ ಗಿಡಗಳಿಂದ ಅರಗು ತೆಗದುಕೊಂಡು ಹೋಗುರ್ತಾರೋ ಅಂತಾ ಅರಗಿನ ಗಿಡಗಳನ್ನು ಕತ್ತ ರಿಸುವದಕ್ಕೂ ಸಾಗಿಸುವದಕ್ಕೂ ಯಾ ಅರೂಪ ಪಡಿಸುವದಕ್ಕೂ ಅಧಿಕಾರವನ್ನು ಹೊಂದಿರುವದಿಲ್ಲ.

VII. ಇನಾಂದಾರುಗಳಿಗೆ ಸ್ಥಿರಪಟ್ಟಿರುವ ಹಕ್ಕಿನ ವಿಷಯದಲ್ಲಿ ಕಂಟ್ರಾಕ್ಟುದಾರು ಪ್ರವೇಶಿಸಕೂಡದು.

VIII. ಹರಾಜು ಕಾಲದಲ್ಲಿ ಜಾಲಾರೀ ಗಿಡಗಳು ಇರತಕ್ಕ ಬಗರ ಹಿಡುವಳಿ ಜಮೀನುಗಳು ಕಂಟ್ರಾಕ್ಟು ಜಾರೀಲಿರುವ ಕಾಲ ದಲ್ಲಿ ಸಾಗುವಳಿಗೆ ತೆಗದುಕೊಂಡ ಪಕ್ಷ ಕಂಟ್ರಾಕ್ಟುದಾರ ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಅಂತಾ ಗಿಡಗಳಲ್ಲಿ ಅರಗು ಜಮಾ ಯಿಸಿಕೊಳ್ಳತಕ್ಕ ಹಕ್ಕು ವುಳ್ಳವನಾಗಿ ಇರತಕ್ಕದ್ದು.

IX. ಕಾರಣಗಳನ್ನು ತೋರಿಸದೇನೇ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯೂ ಟಿ ಕಮಿಷನರವರು ಸ್ವತಂತ್ರರಾಗಿರುತ್ತಾರೆ.

ಎಂ. ನಾರಾಯಣರಾವ್,
ಆಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ಮೈಸೂರ್ ಫಾರೆಸ್ಟು ಡಿಪಾರ್ಟ್ಮೆಂಟ.

ಕೋಲಾರ್ ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 28ನೇ ಫೆಬ್ರುವರಿ 1896ನೇ ಇಸವಿ, ಮೊಕ್ಕಾಂ ಚಿಕ್ಕಬಳ್ಳಾಪುರ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ತಮಾಂ ತಾಲ್ಲೂಕುಗಳಲ್ಲೂ ಫಾರೆಸ್ಟುಗಳಲ್ಲೂ ಸಹ, ತಂಗಡಿ ಮತ್ತು ಚಕ್ಕೆ ಚಕ್ಕೆಯನ ಜಮಾಯಿಸತಕ್ಕ ಬ್ಯೆ ಲೈಸೆನ್ಸ್ ಕೊಡತಕ್ಕ ಪದ್ಧತಿಯನ್ನ ನಿಲ್ಲಿಸಬೇಕೆಂದು ಹುಕುಂ ಜಾರಿಯಾಗಿರುತ್ತೆ.

(2.) ಇದಕ್ಕೆ ಮೊದಲು ಲೈಸೆನ್ಸ್ ಪಡೆದಿರುವ ಜನಗಳು ಅವರವರ ಲೈಸೆನ್ಸಿನಲ್ಲಿ ಕಂಡ ಚಕ್ಕೆಯನ್ನು ನಿಶ್ಶೇಷವಾಗಿ ಮುಂ ದಿನ ಏಪ್ರೆಲ್ ತಾರೀಖು 15ರ ಒಳಗಾಗಿ ಸಾಗಿಸಿಕೊಂಡು ಹೋಗತಕ್ಕದ್ದು. ಆ ತಾರೀಖು ಕಳೆದನಂತರ ಸದರೀ ಚಕ್ಕೆಯನ್ನ ಜಮಾ ಯಿಸುವದಕ್ಕಾಗಲಿ, ಡಿಸ್ಟ್ರಿಕ್ಟಿನಲ್ಲಿ ದಾಸ್ತಾನ್ಯಿಡುವದಕ್ಕಾಗಲಿ, ಅಥವಾ ರಫ್ತು ಮಾಡತಕ್ಕ ಬಗ್ಯಾಗಲಿ ಯಾವ ಸಂದರ್ಭದಲ್ಲೂ ಅವಕಾಶ ಕೊಡುವದಿಲ್ಲ.

(3.) ಡಿಸ್ಟ್ರಿಕ್ಟ ಮಜಕೂರ ತಾಲ್ಲೂಕುಗಳಲ್ಲಿ ಈ ಬಾಬುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕನ್ನು ಇಜಾರೇದಾರರುಗಳಿಗೆ ಬಹಿರಂಗವಾದ ಹರಾಜಿನಲ್ಲಿ ಪೋಟಾಪೋಟ್ಟಿಯಿಂದ ಮೊಕರೂರ ಮಾಡಲಾಗುತ್ತದೆ. ಸದರೀ ಹರಾಜಿನ ಕ್ರಮ ಮತ್ತು ಷರತ್ತುಗಳನ್ನ ಕಂಡು ಅಲಾಹಿದ ನೋಟಿಸ ಜಾರಿಯಾಗಿರುತ್ತೆ. ಈ ಬಾಬುಗಳನ್ನ ಇಜಾರೇಮಾಡಬೇಕೆಂದು ಉದ್ದೇಶಿಸುವವರು ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟು ಆಫೀಸಿಗೆ ಅರ್ಜಿಯನ್ನ ಬರದು ನೋಟಿಸಗಳನ್ನ ತರಿಸಿಕೊಂಡು ತಪ್ಸೀಲ್ ತಿಳದುಕೊಳ್ಳಬೇಕಾಗಿ ಕೋರಲ್ಪಟ್ಟಿದೆ.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ್ದ ಇದರಡಿ ನಮೂದಿರುವ ತಾಲ್ಲೂಕುಗಳಲ್ಲಿ ದೊರೆಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಇಜಾರೆಯ ಒಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ.

ಈ ಹರಾಜ್ ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗೈರೆ ತಪ್ಸೀಲಿಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕುಗಳು.	ನಂಬರು	ಹೋಬಳಿಗಳು.	ಇಜಾರೆಯ ಮುದ್ದತ್ತು.	ಹರಾಜಿನ ತಾರೀಖು.	ಹರಾಜಿನ ಸ್ಥಳ.	ಹರಾಜು ಮಾಡತಕ್ಕ ಅಧಿಕಾರಿಗಳು.	ಹರಾಜು ಯಾರಿಂದ ಮಂಜೂರಾಗಬೇಕೋ ಅವರು.	ಷರಾ.
I. ಕೋಲಾರ	1	ಕೋಲಾರ	1896ನೇ ಇಸವಿ ಜುಲೈ ಗುರ್ರೆ ಲಾಗಾಯತು 1897ನೇ ಜೂನ್ ಆಖೈರ್ ವರೆಗೆ.	1896ನೇ ಇಸವಿ ಮೇ ತಾರೀಖು 14ನೇ.	ಕೋಲಾರ ಡಿಸ್ಟ್ರಿಕ್ಟ್ ಕಚೇರಿಯ ಬಳಿ.	ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರರು.	ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ.	ತಾಲ್ಲೂಕುವಾರ್ ಹರಾಜು ಮಾಡಲ್ಪಡುತ್ತೆ.
	2	ವಕ್ಕಲೇರಿ						
	3	ಹುತ್ತೂರು						
	4	ವೇಮಗಲ್ಲು						
	5	ಸುಗಟೂರು						
	6	ದಳಸನೂರು						
	7	ಹೋಳೂರು						
II ಮಾಲೂರು	1	ಮಾಲೂರು						
	2	ನರಸಾಪುರ						
	3	ಲಕ್ಕೂರು						
	4	ಮಾಸ್ತಿ						
	5	ಹುಳದೇನಹಳ್ಳಿ						
	6	ತ್ಯಾಕಲ್ಲು						
III ಬೌರಿಂಗಪೇಟೆ	1	ಬೌರಿಂಗಪೇಟೆ						
	2	ಬೂದಿಕೋಟೆ						
	3	ಕಾಮಸಮುದ್ರ						
	4	ಬೇತಮಂಗಲ						
	5	ಕ್ಯಾಸಂಬಳ್ಳಿ						
	6	ರಾಮಸಾಗರ						
	7	ದಾಸರಹೊಸಹಳ್ಳಿ						

(2.) ಮೇಲ್ಕಂಡ ತಾರೀಖಿನ ಮಧ್ಯಾನ್ನ 3 ಘಂಟೆಯ ಲಾಗಾಯತು ಸಾಯಿಂಕಾಲದ ವರೆಗೂ ಹರಾಜು ಕ್ರಮ ಜರಗುವದು ಮತ್ತು ಆ ದಿವಸವೇ ಹರಾಜು ಖೈದಾಗದೇ ಇದ್ದಲ್ಲಿ ಖೈದಾಗುವ ವರೆಗೂ ಮಾರನೇದಿನವೂ ಸಹ ನಡಿಸಲ್ಪಡುತ್ತದೆ.

(3.) ಮೇಲ್ಕಂಡ ಒಟ್ಟು ಸ್ವತಂತ್ರದ ಇಜಾರೆ ಹಕ್ಕು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡಸವಾಲ್‌ದಾರರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಡೆಪ್ಯುಟಿ ಕಮಿಷನರವರು ಮೊಖ್ತ್ಯಾರಾಗಿರುತ್ತಾರೆ. ಪೋಟಾ ಪೋಟೀಯಲ್ಲಿ ನಿಲ್ಲುವ ಆಖೈರ್ ಚಡಸವಾಲ್ ಮೊಬಲಗು ಮೇಲ್ಕಂಡ 12 ತಿಂಗಳ ಕಾಲದಲ್ಲಿ ಕಡದು ಜಮಾಯಿಸಿ ಸಾಗಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿ ಎಂದು ಭಾವಿಸಲ್ಪಡುತ್ತದೆ.

(4.) ಇಜಾರೆ ಮಾಡಬೇಕೆಂದು ಅಪೇಕ್ಷಿಸುವವರು ತಾವೇ ಖುದ್ದು ಬಂದು ಹರಾಜಿನಲ್ಲಿ ಚಡಸವಾಲ್ ಮಾಡಬಹುದು. ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರನ್ನಾಗಲಿ ಕಳುಹಿಸಬಹುದು. ಚಡಸವಾಲ್ ಮಾಡಲು ಇಚ್ಛೆಯುಳ್ಳವರು ಖಾತರೀ ಬಗ್ಗೆಯಾಗಿ ಒಂದುನೂರು ರೂಪಾಯಿಗಳನ್ನ ಹರಾಜು ಕಾಲದಲ್ಲಿ ಹರಾಜು ಮಾಡುವ ಆಫೀಸರವರಲ್ಲಿ ಠೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರು ಹಾಜರ್ಮಾಡಿದ್ದ ಡಿಪಾಜಿಟ್ ಮೊಬಲಗು ಹರಾಜು ಖೈದಾದ ಕೂಡಲೆ ವಾಪಸ್ ಮಾಡಲ್ಪಡುತ್ತೆ. ಪ್ರತಿ ಒಂದು ತಾಲ್ಲೂಕಿನ ಸವಾಲ್ ಖೈದಾದ ಒಡನೆಯೇ ಅಂಗೀಕರಿಸಲ್ಪಟ್ಟ ಸವಾಲ್‌ದಾರರುಗಳು ತಮ್ಮ ಸವಾಲಿನ ಒಟ್ಟು ಮೊಬಲಗಿನಲ್ಲಿ ಮೊದಲ್ ಹಾಜರ್ಮಾಡಿದ್ದ ಮೊಬಲಗೂ ಸೇರಿ ಕಾಲು ಹಿಸ್ಸೆಯನ್ನ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬ್ ದುಸರಾ ಹರಾಜು ಮಾಡಿಸುವದರಲ್ಲಿ ಉಂಟಾಗುವ ನಷ್ಟಕ್ಕೂ ಸಹ ಈತನನ್ನೇ ಗುರಿಮಾಡಲ್ಪಡುತ್ತೆ. ಆದರೆ ಆದಾಯ ಏನಾದರೂ ಹೊರಟಲ್ಲಿ ಸದರೀಯವನಿಗೆ ಅದರ ಹಕ್ಕು ಇರುವದಿಲ್ಲ.

(5.) ಮೇಲ್ಕಂಡ ಮೇರಿಗೆ ನಡಿಸಲ್ಪಡಬೇಕಾಗಿ ಬರುವ ಎರಡನೇ ಹರಾಜಿನ ಆಖೈರ್ ಸವಾಲ್‌ಗಿಂತಲೂ ಮೊದಲನೇ ಹರಾಜಿನಲ್ಲಿ ಜಾಸ್ತಿಯಾಗಿ ಉಂಟಾಗಿದ್ದ ಮೊಬಲಗನ್ನು ಮೊದಲನೇ ಹರಾಜಿನ ಆಖೈರ್ ಸವಾಲ್‌ದಾರನು ಸರ್ಕಾರಕ್ಕೆ ಪಾವತಿ ಮಾಡಬೇಕು.

(6.) ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರಾದ 3 ದಿವಸದೊಳಗಾಗಿ ಈ ಕೆಳಗೆ ನಮೂದಿಸಿರುವ ಷರತ್ತುಗಳ ಕಂಡು ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಇಜಾರೇದಾರನು ಮುಚ್ಚಳಿಕೆ ಬರೆದುಕೊಡಬೇಕು.

(7.) ಇಜಾರೆ ಬಾಬತು ಬಾಕಿ ಮುಕ್ಕಾಲು ಹಿಸ್ಸೆಯನ್ನು ಇದೇ ಇಸವಿ ಮೇ ಮಾಹೆ ಅಖೈರೊಳಗಾಗಿ ಪಾರ್ಖಾವಣೆ ಮಾಡ ತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಠೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ ಯಲ್ಲದೆ ಚಕ್ಕೆ ಜಮಾಯಿಸುವ ಇಜಾರೆ ಹಕ್ಕನ್ನು ಪುನಹ ಹರಾಜು ಮಾಡುವದರಲ್ಲಿ ಬಂದೀತು.

(8.) ಮೇಲ್ಕಂಡ ಮೇರೆ ಪೂರ್ತಾ ಮೊಬಲಗು ಇರಸಾಲ್ ಆದನಂತರ ಈ ಕೆಳಗೆ ನಮೂದಿರುವ ಷರತ್ತುಗಳು ಕಂಡು ಒಂದು ರೂಪಾಯಿನ ಛಾಪಾ ಕಾಗದದಲ್ಲಿ ಇದೇ ಇಸವಿ ಜೂನ್ ಗುರ್ರೇ ತಾರೀಖಿನಲ್ಲಿ ಕರಾರ್ ಬರೆದುಕೊಟ್ಟು ಅನಂತರ ಬಾಬು ಸುಪರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳು ಯಾವವಂದರೆ.

(1) ಒಂದು ವರುಷಕ್ಕಿಂತಲೂ ಎಳೇದಾದ ಗಿಡಗಳನ್ನ ಕಡಿಯುವದಿಲ್ಲ.

(2) ಕಡಿಯುವ ವಿಶಿಷ್ಟ ಮೋಟು ಮತ್ತು ರಂಬೆಗಳಲ್ಲಿರುವ ಚಕ್ಕೆಯನ್ನ ನಿಶ್ಶೇಷವಾಗಿ ತೆಗೆದುಕೊಳ್ಳುತ್ತೇನೆ ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಪೊಟ್ಟೆಯನ್ನ ತೆಗೆಯದೆ ಬಿಸಾಡುವದಿಲ್ಲ.

(3) ಚಕ್ಕೆಯನ್ನ ತೆಗೆದನಂತರ ವಿಶಿಷ್ಟ ಸಾದೆಯೂ ಇಜಾರದಾರನಿಗೆ ಸೇರಿದ್ದೇ ಶಿವಾಯಿ ಸರ್ಕಾರಕ್ಕೆ ಸೇರದ್ದಲ್ಲ.

(4) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮೊಕರರ್ ಮಾಡುವ ಮೇರೆಗೆ ನನ್ನ ಕರಾರು ಅನುಸರಿಸಿ ಜಮಾಯಿಸಿ ಸಾಗಿಸಿಕೊಂಡು ಹೋಗುವ ಚಕ್ಕೆಗೆ ತಪ್ಸೀಲಾಗಿ ಲೆಖ್ಖ ಇಡುತ್ತೇನೆ ಯಲ್ಲದೆ ಈ ಬಾಬತು ಲೆಖ್ಖವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಕೇಳಿದಾಗ್ಯೆ ತನಿಖೆಬಗ್ಗೆ ಹಾಜರ್ಮಾಡುತ್ತೇನೆ.

(5) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿಯ ಚಕ್ಕೆಗೂ ಪ್ಯಾಸ್ ಕೊಡುತ್ತೇನೆ.

(6) ನಾನು ಜಮಾಯಿಸುವ ವಿಶಿಷ್ಟ ಚಕ್ಕೆಯನ್ನೂ 1897ನೇ ಇಸವಿ ಜೂನ್ ಅಖೈರೊಳಗಾಗಿ ನಿಶ್ಶೇಷವಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಸಹ ನನ್ನಿಂದಲಾಗಲಿ ನನ್ನ ಕಡೆ ಜನಗಳಿಂದಲಾಗಲಿ ಬೆಂಕಿಯು ಅಥವಾ ಇನ್ನ್ಯಾವ ಕಾರಣದಿಂದಾಗ್ಯೂ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲುಗಳು ನಾಶವಾದಲ್ಲಿ ಅದರಿಂದ ಪ್ರಾಪ್ತವಾಗುವ ನಷ್ಟಕ್ಕೆ ನಾನೇ ಜವಾಬ್ ಮಾಡಲು ಬದ್ಧನಾಗಿರ್ತೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ್ ಜನಗಳಾಗಲಿ ಅತಿಕ್ರಮಿಸಿ ನಡೆದಲ್ಲಿ ನನ್ನ ಇಜಾರೆಯನ್ನ ರದ್ದು ಮಾಡಬಹುದು. ಮತ್ತು ನಾನು ಅದುವರೆಗೆ ಜಮಾಯಿಸಿ ಹಾಜರಿಟ್ಟುಕೊಂಡಿರತಕ್ಕ ಚಕ್ಕೆಯನ್ನ ಸರ್ಕಾರದವರು ಜಫ್ತು ಮಾಡಬಹುದಲ್ಲದೆ ನಾನು ಪಾವತಿ ಮಾಡಿರುವ ಮೊಬಲಗನ್ನ ಪೂರ್ತಿಯಾಗಿ ಯಾಗಲಿ ಅಥವಾ ಆ ಪೈಕಿ ಕೆಲವು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಬಹುದು.

ಬಿ. ರಾಮಸ್ವಾಮಯ್ಯರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

ಪ್ರಸಿದ್ಧ ಪತ್ರಿಕೆ.

ತಾರೀಖು 2ನೇ ಏಪ್ರೈಲ್ 1896.

I. ಕೃಷ್ಣರಾಜಪೇಟೆ ತಾಲ್ಲೂಕು ಕಲ್ಲಹಳ್ಳಿ ಬಳಿ ಹೇಮಾವತಿ ನದಿಗೆ ಅಣೆಕಟ್ಟು ಕಟ್ಟಲು ಕಾಂಗಾರಿ ಉದ್ದಿಶ್ಯ 96ನೇ ಇಸವಿ ಏಪ್ರೈಲ್ ಮಾಹೆ 17ನೇ ತಾರೀಖು ವರಿವಿಗೂ ದರಖಾಸ್ತುಗಳು ಫ್ರೆಂಚ್‌ರಾಕ್ಸ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್‌ಸಾಹೇಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಮೊತ್ತವನ್ನ ಕಾಣಿಸಲ್ಪಟ್ಟಿರುತ್ತದೆ. ಇದುನಿಷ್ಕರ್ಷೆಯಾದದ್ದಾಗಿರುವದಿಲ್ಲ. ಕಾಂಮಗಾರಿಯು 1897ನೇ ಇಸವಿ ಜೂನ್ ತಿಂಗಳು ಅಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲಾನ್ ಮತ್ತು ಅಂದಾಜು ಷರತ್ತು ವಗ್ಯೆರೆ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಆಫೀಸಿನಲ್ಲಿ ಪ್ರಾತಃಕಾಲ 11 ಘಂಟೇ ಲಾಗಾಯತು ಸಾಯಂಕಾಲ 4 ಘಂಟೇವರಿಸಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚುಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಆಫಿಸಿನಲ್ಲಿ ದೊರಿಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಒಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ.	ಕ್ಕೆ.	ಮೊತ್ತ.	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ಒಪ್ಪುವ ದರ.			
ಮಣ್ಣು ಕೆಲಸ	ಸಲೆ ಗಜ 1ಕ್ಕೆ	16,000				
ಕಲ್ಲು ಕೆಲಸ						

IV. ಪ್ರತಿ ಒಂದು ದರಖಾಸ್ತಿನ ಸಂಗಡಲೂ 1000 ರೂಪಾಯಿಗಳ ಕರೆನ್ಸೀ ನೋಟುಗಳಾಗಲಿ, ಗವರ್ನರ್ಮೆಂಟ್ ಪ್ರಾಂಸರೀ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ಠೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಕೋಟೆಯ ಮೇಲೆ "ಕಲ್ಲಹಳ್ಳಿ ಅಣೆ ಕಾಂಗಾರಿ ಬಗ್ಯೆ ದರಖಾಸ್ತೆಂಬದಾಗಿ" ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನು ತಿರಸ್ಕರಿಸಲಾಗುತ್ತೆ.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಚೀಫ್ ಇಂಜನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ಯಂಟು ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟ್ ಬಾಂಡ್ ಎಂಬ ಕರಾರು ಪತ್ರವನ್ನು ಬರದು ಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದುಮಾಡಲ್ಪಟ್ಟು ಠೇವಣಾತೀ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಆಫೀಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್ ಮೇಲೆ ಬರದು ಚಿಕ್ಕಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬೂ ದೊರಿಯಲಾರದು.

VIII. ಯಾವದಾಗರೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವು ಅವರಿಗೆ ವಾಪಸ್ ಮಾಡಲ್ಪಡುತ್ತೆ.

IX. ಅನುಗುಣವಾದ ಕಲ್ಲುಗಳು ಕೆಲಸದ ಬಳಿಯಲ್ಲಿ ಕಟ್ಟಲು ಸರ್ಕಾರದಿಂದಲೇ ಕಂಟ್ರಾಕ್ಟದಾರಿಗೆ ಸಪ್ಲೈಮಾಡಲ್ಪಡುತ್ತೆ. ಹಾಲಿ ಟೆಂಡರು, ಗಾರೆಯನ್ನು ಸಪ್ಲೈಮಾಡಿ ಸಂಕ್ರಾಪ್ ಕಲ್ಲಿನಿಂದ ಕಟ್ಟುವದಕ್ಕೆ ಮಾತ್ರವೇ ಆಗಿ ಯಿಥೆ.

ಅಣೆಕಟ್ಟು 1000 ಅಡಿ ಲಾಂಬಿ 8 ಅಡಿ ಅಗಲ ಸ್ಲೋಪು 1:4

ಕೆಲಸದ ವಿವರ.	ಕ್ಕೆ.	ಮೊತ್ತ.
ಸುರಂಗ	ಸಲೆಗಜ	8
ಕಲ್ಲು ಮೆಟ್ಟು ಮೆಟ್ಟಾಗಿ ಮಾಡುವಿಕೆ	ಚದರ ಅಡಿ	9891
ಸಾಧಾರಣವಾದ ಮಟ್ಟಿ ಕಾಮಗಾರಿ	ಸಲೆಗಜ	180
ಸೂರ್ಕಿಗಾರೆ ಕಲ್ಲು	ಸಲೆಅಡಿ	71004
ಸಂಕ್ರಾಪುಮಾಡಿದ ಕಲ್ಲು ಸೂರ್ಕಿಯಿಂದ ಕಟ್ಟಲು	ಡಿಟೋ	12767
ಸಂಕ್ರಾಪುಮಾಡಿದ ಕಲ್ಲಿನ ಮಂಡೇರಿ	ಚದರಅಡಿ	6774
ಪೋರ್ಟ್ಲೆಂಡು ಯಾ ಶಿಮೆಸುಣ್ಣದ ಸಂದುಗಾರೆ	ಚದರ	266·79
ಪೇಲಿಂಗು	ಮೊತ್ತ ರೂ.	
ಇನ್ಸ್ಪೆಕ್ಷನ್ ಲಾಡ್ಜ್	ಡಿಟೋ	

ಡಬ್ಲ್ಯು. ಎಸ್. ಇರ್ವಿನ್,
ಎಗ್ಜಿಕ್ಯೂಟಿವ್ ಇಂಜನಿಯರ್.

ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟ್ಮೆಂಟ್.

ನೋಟಿಫಿಕೇಷನ್.

ತಾರೀಖು 13–14ನೇ ಏಪ್ರಿಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹುಣಸೂರು ಸಂದಲ್ ಕೋಠಿಯಲ್ಲಿ ಛತಕ್ಕ ಬಿಳಿ ಚಕ್ಕೆಯು 1896ನೇ ಇಸವಿ ಏಪ್ರಿಲ್ 20ನೇ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆ ಯಂತ ಮೈಸೂರ ಗೆಜೆಟಿನಲ್ಲಿ ಪ್ರಾಯಿಷ್ ಮಾಡಲ್ಪಟ್ಟಿರುವದು

390

ದು ಸರಿಯಷ್ಟೈ ಸದರೀ ತಾರೀಖು ಪಬ್ಲಿಕ್ ರಜಾ ದಿವಸ ಆದ್ದರಿಂದ ಮೇಲೆ ನಮೂದಿಸಿರತಕ್ಕ ಸಂಡಲ್ ಬಿಳಿ ಚಕ್ಕೆಯು ಬರುವ ಮೇ ತಿಂಗಳ 11ನೇ ತಾರೀಖಿನ ದಿವಸ ಹರಾಜು ಮಾಡಿಸಲ್ಪಡುತ್ತೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 6ನೇ ಏಪ್ರೆಲ್ ಸರ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರ್ನ ಹಳ್ಳಿ ಘಾಟಿಯಲ್ಲಿ ಟೋಲ್‌ಗೇಟೆಂಬ ಸುಂಕದ ಕಟ್ಟೆ ಒಳಗೆ ಸರ್ 1896ನೇ ಇಸವಿ ಜುಲೈ ಮಾಹೆ 1ನೇ ಮೊದಲ್ಗೊಂಡು ಲಾಗಾಯತು ಸರ್ 1897ನೇ ಜೂನ್ 30ರ ವರಿಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಸರ್ 1896ನೇ ಇಸವಿ ಮೇ ತಾರೀಖು 4ನೇ ಸೋಮವಾರ ಹಗಲು 11 ಘಂಟೆಗೆ ಸಕಲೇಶಪುರದ ಮೊಕ್ಕಾಂನಲ್ಲಿ ತಾಲ್ಲೂಕು ಕಚೇರೀ ಬಳಿ ಅಮಲ್‌ದಾರರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ಛಡಸವಾಲನ್ನಾಗಲಿ ಅಥವಾ ಯಾವ ಸವಾಲನ್ನೇ ಆಗಲಿ ಕಾರಣವನ್ನು ಹೇಳದೇನೇ ಅಂಗೀಕರಿಸುವ ಯಾ ತಿರಸ್ಕರಿಸುವ ಅಧಿಕಾರವನ್ನು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಉಳಿಸಿಕೊಂಡಿರುತ್ತಾರೆ. ಮತ್ತು ಡೆಪ್ಯುಟಿ ಕಮಿಷನರವರಿಂದ ಮಂಜೂರಾದ ಹೊರ್ತು ಹರಾಜ್ ಖಾಯಂ ಆದ ಹಾಗೆ ತಿಳಿಯಕೂಡದು.

3. ಛಡದರಖಾಸ್ತುದಾರನು ಹರಾಜು ಮೊಬಲಗಿನ ಪೈಕಿ ನಾಲ್ಕರಲ್ಲಿ ಒಂದು ಭಾಗವನ್ನು ಆ ಕೂಡಲೆ ಡಿಪಾಜಿಟ್ ಇಡಬೇಕಲ್ಲದೆ ಬಾಕಿ ಉಳಿದ ಮೊಬಲಗನ್ನ ಸರ್ 1896ನೇ ಇಸವಿ ಜುಲೈ 20ರ ಲಾಗಾಯತು ಸಮವಾದ 3 ಕಿಸ್ತುಗಳಾಗಿ ಪ್ರತಿ ಮಾಹೆ 20ನೇ ತಾರೀಖಿಗೆ ಪಾವತಿ ಮಾಡಲು ಬದ್ಧನಾಗಿ ಇರಬೇಕು. ಹರಾಜು ಮಂಜೂರಾತಿಯು ತನಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 15 ದಿವಸಗಳ ಒಳಗೆ ಕ್ರಮವಾದ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಈ ಕೆಳಗೆ ನಮೂದಿಸುವ ಷರತ್ತಿಗೆ ಒಳಪಟ್ಟು ಕಂಟ್ರಾಕ್ಟಿನಂತೆ ತಾನು ಸರಿಯಾಗಿ ನಡದುಕೊಳ್ಳತಕ್ಕ ಬಗ್ಯೆ ಖಾತರೆ ಜಾಮೀನ್ ಕೊಡಬೇಕು. ಡಿಪಾಜಿಟ್ ಮೊಬಲಗು ಹಾಜರ್ಮಾಡದೇಯೂ ಮುಚ್ಚಳಿಕೆ ಬರದುಕೊಡದೇಯೂ ಜಾಮೀನ್ ಕೊಡದೇಯೂ ತಪ್ಪಿದರೆ ಬಾಬನ್ನು ದುಸರೆ ಹರಾಜ್ ಮೂಲಕ ವಿಕ್ರಯಿಸುವದಲ್ಲದೆ ನಷ್ಟಕ್ಕೆ ತಪ್ಪಿತಸ್ಥನಾದ ಇಜಾರೆದಾರನನ್ನು ಗುರಿಪಡಿಸುತ್ತೆಯೇ ಶಿವಾಯಿ ಹಾಂಗೆ ಬಾಬನ್ನ ದುಸರೆ ಹರಾಜ್ ಮಾಡೋಣದರಲ್ಲಿ ಉಂಟಾಗುವ ಆದಾಯಕ್ಕೆ ಅವನು ಭಾಗಿಯಾಗಲಾರನು.

4. ಕಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಂಗೆ ಬಾಕಿ ಆದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿ 1ಕ್ಕೆ ಒಂದು ಪೈನಂತೆ ಬಡ್ಡಿ ಕೇರಿಸಿ ವಸೂಲ್ಮಾಡಲ್ಪಡುತ್ತೆ. ಮತ್ತು ಡೆಪ್ಯುಟಿ ಕಮಿಷನರ್ ಸಾಹೆಬರವರಿಗೆ ಯುಕ್ತ ತೋರಿದರೆ ಅಥವಾ ಜಾಮೀನ್‌ದಾರನು ಅಪೇಕ್ಷಿಸಿದರೆ ಕಂಟ್ರಾಕ್ಟು ದುಸರೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗುವದು. ಅದರಿಂದ ಸರ್ಕಾರಕ್ಕೇನಾದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಕಂಟ್ರಾಕ್ಟುದಾರನಿಂದಲೇ ಆಗಲಿ ಅಥವಾ ಜಾಮೀನ್‌ದಾರನಿಂದಲೇ ಆಗಲಿ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ.

5. ಹರಾಜ್ ಮೊಬಲಗು ಶಿವಾಯಿ 3—4ನೇ ಕಲಂಗಳಲ್ಲಿ ನಮೂದಾಗುವ ಷರತ್ತುಗಳಿಗೆ ಒಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಇಜಾರೆದಾರನು ಬದ್ಧನಾಗಿರಬೇಕು.

6. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲ್‌ನಲ್ಲಿ ನಮೂದಿರುವ ದರಗಳ ಮೇರಗೇನೇ ಟೋಲ್ ವಸೂಲ್ಮಾಡಬೇಕು ಮತ್ತು ಸರ್ 1876ನೇ ಇಸವಿ ನವಂಬರ್ 4ನೇ ಮೊದಲ್ಗೊಂಡು 274ನೇ ನಂಬರ್ ಲೇಟ್ ಚೀಫ್ ಕಮಿಷನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಘಾಯಿಷಾಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

7. ಪ್ರತಿ ದಿನದ ಟೋಲ್‌ಯಾನೆ ಸುಂಕದ ವಸೂಲಿ ತೋರಿಸುವ ನಿಜವಾದ ಮತ್ತು ಕರಾರ್‌ವಾಕವಾದ ಲೆಖ್ಖವನ್ನು ಇಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಅಧಿಕಾರಿಗಳ ತನಿಖೆಗೆ ಸದರೀ ಲೆಖ್ಖವು ಒಳಪಟ್ಟು ಇರತಕ್ಕದ್ದು.

8. 7ನೇ ಷರತ್ತಿನಲ್ಲಿ ನಮೂದಿಸಿರುವ ಮೇರ ಕರಾರ್‌ವಾಕಾ ಆಮದ್ ರಫ್ತ್ ಲೆಖ್ಖವನ್ನು ಇಡಲೋಸ್ಕರ ಶಿಬ್ಬಂದಿ ಅಂದರೆ ಬಬ್ಬ ಮುತ್ಸದ್ದಿಯ ಖರ್ಚನ್ನು ಕಂಟ್ರಾಕ್ಟುದಾರನೇ ವಹಿಸಬೇಕು.

9. ಗವರ್ನಮೆಂಟ್ ಟೋಲ್‌ಮನೆ ಮತ್ತು ಟೋಲ್‌ಗೇಟನ್ನು ಸಹ ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಅವುಗಳನ್ನು ಪೂರಾ ದುರಸ್ತಿನಲ್ಲಿ ಆತನು ಇಟ್ಟುಕೊಂಡಿರತಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ಮಾಹೆ ಗುರ್ರೆ ತಾರೀಖಿನಲ್ಲಿ ಹಿಂದಲ ತಿಂಗಳ ಟೋಲ್ ವಸೂಲಿ ಲೆಖ್ಖವನ್ನು ಮಂಜರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

11. ಕಂಟ್ರಾಕ್ಟುದಾರ ವಸೂಲ್ಮಾಡಬೇಕಾದ ದರಗಳ ತಖ್ತೆಯು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿ ಇದೆ.

1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಡಿಟೋ ಎರಡು ಡಿಟೋ	1	0	0
3	ಪ್ರತಿ ಯಕ್ಕಾ ಮೇಲೂ	0	4	0
4	ಸ್ಪ್ರಿಂಗ್‌ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ಒಂದಕ್ಕೆ	0	2	0
5	ಎಂಟು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಒಂದಕ್ಕೆ	1	8	0
6	ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗ್ಯೆರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	12	0
8	ಆರು ಎತ್ತುಗಳು ವಗ್ಯೆರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಇಲ್ಲದಿದ್ದರೆ	0	6	0

2 c

9	ನಾಲ್ಕು ಎತ್ತುಗಳು ವಗೈರೆಗಳಿಂದ ಎಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಆಗಿದ್ದರೆ	0	8	0
10	ಡಿಟೋ ಡಿಟೋ ಭರ್ತಿಇಲ್ಲದಿದ್ದರೆ	0	4	0
11	ಎರಡು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟಾಕಣಗಳಿಂಡ, ಕತ್ತೆಗಳಿಂದ, ಹೇಸರು ಕತ್ತೆಗಳಿಂದ ಎಳಿಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	4	0
12	ಡಿಟೋ ಭರ್ತಿ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟ ಇದ್ದರೆ	0	1	0
14	ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದಿದ್ದರೆ	0	4	0
18	ಪ್ರತಿ ಕುದರೆಗೂ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ 1 ಕುದರೆಗೂ	0	0	9
20	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	6
23	ಹೊರೆ ಇಲ್ಲದೆ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿ	0	0	1
25	ಎಂಟು ಬೋಯಿಗಳ ವಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಿಗೂ	1	0	0
26	ಆರು ಬೋಯಿಗಳೊಡನೆ ಡಿಟೋ	0	12	0
27	ನಾಲ್ಕು ಬೋಯಿಗಳೊಡನೆ ಡಿಟೋ	0	8	0
28	ಇಬ್ಬರು ಬೋಯಿಗಳೊಡನೆ ಡಿಟೋ	0	4	0

ನಡದು ಬರುವ ಮಾರ್ಗಸ್ಥರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮಿಷನರ.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸಿ ಹಾರನಾಮೆ.

ತಾರೀಖು 4ನೇ ಏಪ್ರೈಲ್ 1896ನೇ ಇಸವಿ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ ಇದರಡಿ ನಮೂದಿಸಿರುವ ಚೌಬೀನೆ ಮತ್ತು ಬೊಂಬು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡಿಪ್ಪೋಗಳಲ್ಲಿ ಅವುಗಳ ಬಾಜೂದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಫಾರೆಸ್ಟ್ ಆಫಿಸರ ಮತ್ತು ಡೆಪ್ಯುಟಿ ಕಮಿಷನರ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಗಳಿಂದ ಹರಾಜು ಮಾಡಿಸಲ್ಪಡುವದು.

ನಂಬರು.	ಡಿಪ್ಪೋಗಳ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟಾ.	ಬೀಟೆ ನಾಟಾ.	ಇತರ ಜಾತಿ ನಾಟಾ.	ಸಾಗುವಾನಿ ಹಲಗೆ ಹಾಗು ತುಂಡು.	ಸಾದಾ ಜಾತಿ ಹಲಗು.	ಬೊಂಬು.	ಷರಾ.
1	ಆನವಟ್ಟಿ	1 5 96	30	..	..	151	43	1,325	[illegible]
2	ಶಿರಾಳಕೊಪ್ಪ	4 5 96	26	89	2	151	23	393	
3	ಕಾರಿಪುರ	7 5 96	4	32	2	11	..	1,000	
4	ಚನ್ನಗಿರಿ	11 5 96	..	..	..	250	..	2,000	
5	ವುಬ್ರಾಣಿ	13 5 96	..	..	..	42	..	1,500	
6	ಆಯನೂರು	1 6 96	100	100	25	200	..	5,000	
7	ಶಿವಮೊಗ್ಗಾ	8 6 96	110	163	7	36	100	3,864	
8	ಕುಣಬೂರು	12 6 96	100	130	20	..	..	..	
9	ಸಮುದ್ರಹಳ್ಳಿ	13 6 96	..	125	25	..	..	..	

ಹರಾಜು ಷರತ್ತುಗಳು:—ತಾರೀಖು 25—4—95ನೇ ನಂಬರ 15ನೇ ಮೈಸೂರು ಗೆಜೆಟನಲ್ಲಿ ಪ್ರಾಯಿಪಾಗಿರುವ ತಾರೀಖು 15—3—95ನೇ ನಂಬರ 15,229.—155—92ನೇ ನೋಟಿಫಿಕೇಷನ ನೋಡತಕ್ಕದ್ದು.

ಸಿ. ನಾರಾಯಣರಾವ್,
ಡೆಪ್ಯುಟಿ ಕನಸರವೇಟರ.

1896ನೇ ಇಸವಿ ಏಪ್ರೈಲ 1ನೇ ಮುಕ್ಕಾಂ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಈ ಕೆಳಗೆ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟು ತಾಲ್ಲೂಕುಗಳ ಬಗನಿ ಶೇಂದಿ ವುತಾರ ಮತ್ತು ಮಾರುವ ಹಕ್ಕು ಸನ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂನ 30ರ ವರಿಗೆ ಗ್ರಾಮವಾರಾಗಿ ಆಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕು ಬಾಜಾರದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ವಳಪಟ್ಟು ಆಯಾ ತಾಲ್ಲೂಕು ಕಚೇರಿ ರೂಬರೂ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಎಬ್ಬರು ಅಸಿಸ್ಟೆಂಟ ಕಮ್ಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜ ಮೂಲಕ ವಿಕ್ರಯಿಸಲ್ಪಡುತ್ತೆ.

	ತಾಲ್ಲೂಕು.	ಹರಾಜು ತಾರೀಖು.	
1	ಶಿಕಾರಿಪುರ	ಸನ 1896ನೇ ಮೇ	11—12
2	ಸೊರಬ	ಡಿಟ್ಟೋ	14—15
3	ಸಾಗರ	ಡಿಟ್ಟೋ	18—19
4	ನಗರ	ಡಿಟ್ಟೋ	21—22
5	ತೀರ್ಥಹಳ್ಳಿ	ಡಿಟ್ಟೋ	25—26

II. ಪ್ರತಿ ಒಂದು ಸರಕಲ್ ಗುತ್ತೆಯನ್ನು ಚಡದರಖಾಸ್ತುದಾರನಿಗೆ ಕೊಡಲ್ಪಡುವದು, (ಸದರೀ ಚಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲಗಳ ಮೊಬಲಗ್ಯೆಕಮ್ಮಿ ಇರಕೂಡದು) ಈ ಹರಾಜು ಅಸಿಸ್ಟೆಂಟ ಕಮ್ಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು ಡೆಪ್ಯುಟಿ ಕಮ್ಮಿಷನರವರ ಮಂಜೂರಿಗೆ ಒಳಪಟ್ಟು ಇರತಕ್ಕದ್ದಾಗಿ ಇರುತ್ತೆ ಅಂಥಾ ಹರಾಜಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸದರೀಯವರು ಡೆಪ್ಯುಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು, ಡೆಪ್ಯುಟಿ ಕಮ್ಮಿಷನರವರು ಯಾವದೊಂದು ದರಖಾಸ್ತೂ ಅಥವಾ ಚಡದರಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

III. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುಖ್ತಾಲೀಕನ ಮೂಲಕವಾಗಿಯಾಗಲಿ ಹಾಜರಾಗಬೇಕು. ಡೆಪ್ಯುಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡತಕ್ಕ ಆಫಿಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ ಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೆ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಒಡನೆ ಡಿಪಾಜಿಟ ಮಾಡಬೇಕು ಡೆಪ್ಯುಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಹಿಂದೆ ಹಾಜರು ಮಾಡಿದ ಡಿಪಾಜಿಟ ಮೊಬಲಗು ಶೇರಿ ಸಾಲ ಗುತ್ತಿಗೆ ಮೊಬಲಗಿನ ಮೂರು ತಿಂಗಳ ಖಿಸ್ತು ಮೊಬಲಗು ನಗದಾಗಿಯಾಗಲಿ ಅಥವಾ ಗವರ್ನಮೆಂಟ ಪತ್ರ ಮೂಲಕವಾಗಿಯಾಗಲಿ ಅಮಲ್‌ದಾರಲ್ಲಿ ಹಾಜರ್ಮಾಡಬೇಕು. ಹಾಗೆ ಗವರ್ನಮೆಂಟ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತ್ರೆಗಾಗಿ ಹಾಜರ್ಮಾಡಿದೆ ಎಂದು ಸದರೀ ಪತ್ರ ಜ್ಯೆಲ ಡೆಪ್ಯುಟಿ ಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿಕೊಡತಕ್ಕದ್ದಾಗಿ ಇರುತ್ತೆ ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗಿಗಾಗಿ ಅರವಾಶಿ ನಗದಾಗಿಯಾಗಲಿ ಅಥವಾ ಮೇಲ್ಕಂಡಂತೆ ಇಂಡಾರ್ಸ್‌ಮಾಡಿ ಕೊಟ್ಟ ಗವರ್ನಮೆಂಟ ಪತ್ರ ಮೂಲಕವಾಗಿಯಾಗಲಿ ಬಾಕಿ ಅರ್ಧ ಭಾಗ ಸ್ಥಿರಸೊತ್ತು ಮೂಲಕ ಜಾಮೀನ ಕೊಡಬಹುದು ಹಾಗೆ ಆಧಾರ ಮಾಡುವ ಸ್ಥಿರಸೊತ್ತಿನ ಬೆಲೆ ಜಾಮೀನ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು, ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಠೇವಣಿ ಇಟ್ಟ ಮೊಬಲಗು ಆಖೈರ ಮೂರು ತಿಂಗಳ ಖಿಸ್ತಿನ ಬಗ್ಯೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನೆಂತ ಕ್ರಮವಾದ ಸ್ಟಾಂಪು ಕಾಗದದ ಮೇಲೆ ಮಾಮೂಲಿನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿ ಇರುತ್ತೆ.

IV. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ ಹಾಜರ್ಮಾಡದೆ ತಪ್ಪಿದರೂ, ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ, ಶುರೂ ಹಾಜರ್ಮಾಡಿದ ಡಿಪಾಜಿಟ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿಯಾಗಲಿ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಯೇನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು ಕಂದಾಯ್ದ ಬಾಕಿಯಂತೆ ಸದರೀಯವನ ಜಿಂದಗಿ ಜಪ್ತೀ ಹರಾಜು ಮೂಲಕ ವಸೂಲ್ಮಾಡಿಕೊಳ್ಳಲ್ಪಡುತ್ತೆ.

V. ಈಚಲ ಶೇಂದಿ ಕಂಟ್ರಾಕ್ಟ ಸಂಬಂಧದಲ್ಲಿ ವಿಧಾಯಕವಾಗಿರುವ ಷರತ್ತುಗಳು ಈ ಬಗನೀ ಶೇಂದಿ ಇಜಾರೆ ಬಗ್ಯೆ ಅನ್ವಯಿಸಲ್ಪಡುತ್ತೆ.

VI. ಹಿಂದಿನ ಸಾಲಗಳ ಬಗನೀ ಶೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ ತಿಳಿಯಬೇಕಾಗಿದ್ದರೆ ತಾಲ್ಲೂಕು ಅಮಲ್‌ದಾರು ಅಥವಾ ಶಿರಸ್ತೇದಾರಲ್ಲಿ ದರಖಾಸ್ತು ಕೊಟ್ಟು ತಿಳಕೊಳ್ಳಬಹುದು.

ಎಂ. ರಾಮಚಂದ್ರರಾವ,
ಫೋರ ಅಫಿಷಿಯೇಟಿಂಗ ಡೆಪ್ಯುಟಿ ಕಮ್ಮಿಷನರ.

383

ಚಿತ್ರದುರ್ಗದ ಡಿಸ್ಟ್ರಿಕ್ಟು.

ಸ್ನ 1896ನೇ ಇಸವಿ ಜನವರಿ 7ನೇ ಮುರ್ಸ್ಕಂ ಮಂಗಳವಾರದ ದಿವಸ ಚಿತ್ರದುರ್ಗದ ಲೋಕಲ್ ಫಂಡು

ಬೋರ್ಡು ಮೀಟಿಂಗಿನ ನಡವಳಿತೆ.

ಹಾಜರು.

ಎಂ. ಎಸ್. ನಾರಾಯಣರಾವ ಯೆಸ್ಕ್ವೈರ್, ಆಕ್ಟಿಂಗ್ ಡೆಪ್ಯುಟಿ ಕಮ್ಮಿಷನರ್ ಮತ್ತು ಪ್ರಸಿಡೆಂಟರು.

ಅಫಿಷಿಯಲ್ ಮೆಂಬರುಗಳು.

1. ಮೆಸ್ಸರ್ ಪ್ರಹ್ಲಾದರಾಯರವರು ಎಗ್ಜಿಕ್ಯೂಟಿವ್ ಇಂಜನೀರ್
2. ,, ರಾಮಾನುಜಯ್ಯಂಗಾರ್ರವರು ಜನರಲ್ ಅಸಿಸ್ಟೆಂಟ್ ಕಮಿಷನರ್
3. ,, ಡಬ್ಲಿಯು. ಶ್ರೀನಿವಾಸಯ್ಯಂಗಾರ್ರವರು ಅಸಿಸ್ಟೆಂಟ್ ಜಡ್ಜ್
4. ,, ಶಿ. ಶಾಮಯ್ಯಂಗಾರ್ರವರು ಹಿರ್ಯೂರು ತಾಲ್ಲೂಕು ಅಮಲ್ದಾರ್
5. ,, ಶಿ. ಡಿ. ರಾಮಸ್ವಾಮಯ್ಯನವರು ಚಿತ್ರದುರ್ಗದ ತಾಲ್ಲೂಕು ಅಮಲದಾರ್
6. ,, ಕೃಷ್ಣರಾಯರವರು ಹೊಳಲ್ಕೆರೆ ತಾಲ್ಲೂಕು ಅಮಲ್ದಾರ್
7. ,, ಶಿ ನರಸಿಂಗರಾಯರವರು ಜಗಲೂರು ತಾಲ್ಲೂಕು ಅಮಲ್ದಾರ್
8. ,, ಜಿ. ಆರ್. ಶ್ರೀನಿವಾಸಯ್ಯಂಗಾರ್ರವರು ದಾವಣಗೆರೆ ತಾಲ್ಲೂಕು ಅಮಲ್ದಾರ್
9. ,, ಎಸ್. ಕೃಷ್ಣಯ್ಯರು ಮೊಳಕಾಲ್ಮುರೂ ತಾಲ್ಲೂಕು ಅಮಲದಾರ್
10. ,, ಡಿ. ನರಸಿಂಗರಾಯರವರು ಚಳ್ಳಕೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್

ನಾನ್ ಅಫಿಷಿಯಲ್ ಮೆಂಬರುಗಳು.

1. ಮೆಸ್ಸರ್ ಕ್ಯಾಸಾಪುರ ರಾಮಣ್ಣನವರು ಚಿತ್ರದುರ್ಗದ ತಾಲ್ಲೂಕು ಮೆಂಬರು
2. ,, ಪಿ. ಸುಬ್ಬಣ್ಣನವರು ಚಳ್ಳಕೆರೇ ತಾಲ್ಲೂಕು ಮೆಂಬರು
3. ,, ಪಟೇಲ್ ಕರಿಯಣ್ಣನವರು ಹಿರ್ಯೂರು ತಾಲ್ಲೂಕು ಮೆಂಬರು
4. ,, ಪಟೇಲ್ ಶಿದ್ರಾಮಯ್ಯನವರು ಹೊಳಲ್ಕೆರೇ ತಾಲ್ಲೂಕು ಮೆಂಬರು
5. ,, ಅಶ್ವತ್ಥಪ್ಪನವರು ಜಗಲೂರು ತಾಲ್ಲೂಕು ಮೆಂಬರು

ಹೊಸದುರ್ಗದ ಡೆಪ್ಯುಟಿ ಅಮಲ್ದಾರ್ ಮೆಸ್ಸರ್ ಬಿ. ವೆಂಕಟರಾಮಯ್ಯನವರು ಮತ್ತು ಹರಿಹರ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ವೆಂಕಟೇಶಯ್ಯನವರು ಸಹ ಹಾಜರ್.

I. 1896—97ನೇ ಇಸವಿಯ ಹುಟ್ಟುವಳಿ ಬಡಜಟ್ಟನ್ನ ಓದಲಾಯಿತು.

(1) 96—97ನೇ ಇಸವಿಯಲ್ಲಿ ವಸೂಲಾಗಬಹುದಾದ ಬಂದಾಣೆ ಸೆಸ್ಸನ್ನ 94—95ನೇ ಇಸವಿಯಲ್ಲಿ ಕರಾರುವಾಕಾ ವಸೂಲಾದ್ದನ್ನನುಸರಿಸಿ ದಾಖಲ್ಮಾಡಿದ್ದಾಗಿಧೆ ಈ ತಪಶೀಲನ್ನ A ನಂಬರ್ ನಮೂನೆಯಲ್ಲಿ ವಿವರಿಸಿದೆ.

(2) ಜಮಾಬಾಬಿನ ಇತರ ಐಟಂಗಳನ್ನ 95—96ನೇ ಸಾಲಿಗೆ ಮಂಜೂರಾಗಿರುವ ಎಸ್ಟಿಮೇಟಿನಂತೆ ದಾಖಲ್ಮಾಡಿಧೆ.

(3) ಈ ರೀತಿ 96—97ನೇ ಸಾಲಿಗೆ ಒಟ್ಟು 40,430 ರೂಪಾಯಿಗಳು ಹುಟ್ಟಬಹುದಾಗಿರುತ್ತೆ 95—96ನೇ ಸಾಲಿಗೆ ಅಂದಾಜ್ 40,255 ರೂಪಾಯಿಗಳು ಮತ್ತು 94—95ನೇ ಸಾಲಿನ ಕರಾರುವಾಕಾ ಹುಟ್ಟುವಳಿ 42,706 ರೂಪಾಯಿಗಳು ಆಗುತ್ತವೆ.

(4) 2—11—95ನೇ ಮುರ್ಸ್ಕಂ 5195—7 L. F. 151—94 ನಂಬರು ಪ್ರೊಸೀಡಿಂಗ್ಸ್ ಪ್ರಕಾರ 96—97ನೇ ಸಾಲಿನ ಷುರುವಿನಲ್ಲಿ ಬೋರ್ಡು ತರಪು 7,849 ರೂಪಾಯಿಗಳು ಬಾಕಿ ಉಳಿಯಬಹುದಾಗಿರುತ್ತೆ. ಆದರೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ 8—11—95ನೇ ಮುರ್ಸ್ಕಂ 364—114ನೇ ನಂಬರು ಲೆಟರ ಪ್ರಕಾರ ಚಿತ್ರದುರ್ಗ ಚಳ್ಳಕೆರೆ ರಸ್ತೆಯಲ್ಲಿ ಪ್ರವಾಹದಿಂದ ಕೊಚ್ಚಿಹೋದ ಸೇತುವೆಯನ್ನು ಕಟ್ಟಿಸತಕ್ಕ ಬಗ್ಯೆ ಚಾಲತಿ ಸಾಲಿಗೆ ಬೇಕಾಗುವ 10,62 ರೂಪಾಯಿಗಳನ್ನು ಮೇಲ್ಕಂಡ ಶಿಲ್ಕು ಮೊಬಲಿಗಿನಲ್ಲಿ ವಜಾ ಮಾಡಬೇಕಾಗುತ್ತೆ. ಆದ್ದರಿಂದ 96—97ನೇ ಸಾಲಿನ ಹುಟ್ಟುವಳಿ ದೇಖೀಲ್ ಒಟ್ಟು 47,217 ರೂಪಾಯಿಗಳು ಆಗುತ್ತೆ. ಇದನ್ನ ಪ್ಯಾಸ್ ಮಾಡಬಹುದೆಂತ ತೀರ್ಮಾನಿಸಲಾಯಿತು.

II. 96—97ನೇ ಸಾಲಿನಲ್ಲಿ ಮರಹಮ್ಮತ್ತು ಇಲ್ಲಾ ಮಾಮೂಲಿ ಮುರೀಕತ್ತು ನಡಿಯಬೇಕಾದ ಕಾಮಗಾರಿಗಳಿಗಾಗಿ ಬೇಕಾಗುವ ಖರ್ಚು ಮೊಬಲಗು ಅಂದಾಜ್ ಓದಲಾಯಿತು.

ಒರಿಜನಲ್.

(1) ವಿಜಾಪುರ, ವುಜ್ಜನಿ ರಸ್ತೆಯಲ್ಲಿ ಕೆಲವು ಸ್ಥಳಗಳಲ್ಲಿ ಮಾಡಬೇಕಾದ ಸ್ಪೆಷಲ್ ಕಾಮಕಾರಿಗಳಿಗಾಗಿ ಸಾಲಮಜಕೂರಲ್ಲಿ 1,580 ರೂಪಾಯಿಗೆ ಎಸ್ಟಿಮೇಟು ಮಂಜೂರಾಗಿಧೆ ಈ ಸಾಲ ಆಖೈರೊಳಗಾಗಿ ಸದರೀ, ಅಂದಾಜಿನಂತೆ ಕಾಮಗಾರಿ ಮುಗಿಯಬಹುದಾಗಿಯೂ ಇರುತ್ತೆ. ಇದಲ್ಲದೆ ಈ ರಸ್ತೆಯನ್ನ ಆಮದುರೆಫ್ತುಗೆ ಸರಿಯಾದ ಸ್ಥಿತಿಗೆ ತರಲು ಇನ್ನೂ ಕೆಲವು ಸ್ಥಳಗಳಲ್ಲಿ ಸ್ಪೆಷಲ್ ಕಾಮಗಾರಿ ಆಗತಕ್ಕದ್ದು ಅವಶ್ಯಕವಾಗಿರುತ್ತೆ ಇದನ್ನ ಸಾಲಾಬಾದಿಗೋಸ್ಕರವಾಗಿ ಮಂಜೂರಾಗತಕ್ಕ ಹಣದಿಂದಲೇ ಸರಿಯಾಗಿ ಮಾಡಿಸಲು ಸಾಧ್ಯವಿಲ್ಲ. ಆದ್ದರಿಂದ ಮುಂದಿನ ಸಾಲಿಗೆ ಈ ಕೆಲಸಕ್ಕಾಗಿ 1,000 ರೂಪಾಯಿ ದಾಖಲ್ಮಾಡಿಧೆ.

(2) ಮೇಲ್ಕಂಡ ಸಬಬಿಗಾಗಿಯೇ ಹಾನಗಲ್, ರಾಯದುರ್ಗದ ರಸ್ತೆಯಲ್ಲಿ 96—97ನೇ ಸಾಲಿಗೆ ಮಾಡಬೇಕಾದ ಸ್ಪೆಷಲ್ ಕಾಮಗಾರಿಗಳಿಗಾಗಿ 500 ರೂಪಾಯಿಗಳು ದಾಖಲ್ಮಾಡಿವೆ.

(3) ಹೊಳಲ್ಕೆರೆ ಹುಳಿಯಾರು ರಸ್ತೆಯಲ್ಲಿ ಅನೇಕ ಸ್ಥಳಗಳಲ್ಲಿ ಸೇತುವೆಗಳು ಕಟ್ಟಿಸತಕ್ಕದ್ದು ಅತ್ಯಾವಶ್ಯಕವಾಗಿರುತ್ತೆ. ಆದರೆ ಹಣವಿಲ್ಲದ್ದರಿಂ ಎಲ್ಲವೂ ಒಂದೇ ಸರ್ತಿ ಮಾಡಿಸಲು ಅನುಕೂಲವಿಲ್ಲದಿದ್ದಾಗ್ಯೂ ಸಾಲೇ ಸಾಲ್ ಸ್ವಲ್ಪ ಸ್ವಲ್ಪ ಹಣಕೊಟ್ಟು ಮಾಡಿಸಬೇಕಾಗಿರುತ್ತೆ. 1678 ರೂಪಾಯಿನ ಅಂದಾಜಾಕ್ಕೆ ಹಾಲಿ 2 ಸೇತುವೇ ಕೆಲಸ ನಡಿಯುತ್ತಾ ಇದೆ. ಮುಂದಿನ ಸಾಲಿನಲ್ಲಿ ಇನ್ನೊಂದು ಸೇತುವೇ ತಯಾರಿಗೋಸ್ಕರ 500 ರೂಪಾಯಿ ದಾಖಲ್ಮಾಡಿದೆ.

(4) ಚಿತ್ರದುರ್ಗದ ತಾಲ್ಲೂಕು ತುರುವನೂರು ಗ್ರಾಮವು ಬಹಳ ದೊಡ್ಡದಾಗಿಯೂ ಜನಭರಿತವಾಗಿಯೂ ಇರುತ್ತದೆ ಜನ, ಜಾನುವಾರುಗಳಿಗೆ ಸಮೀಪದಲ್ಲಿ ನೀರಿನ ಅನುಕೂಲತೆ ಇಲ್ಲ ಆದ ಪ್ರಯುಕ್ತ ಈ ಗ್ರಾಮದಲ್ಲಿ ಒಂದು ಕುಡಿಯುವ ನೀರಿನ ಕೆರೆಯನ್ನು ಕಟ್ಟಿಸುವದಕ್ಕಾಗಿ 96—97ನೇ ಸಾಲಿಗೆ 2,000 ರೂಪಾಯಿ ಸೇರಿಸಿದೆ ಇದಕ್ಕಾಗಿ ಇಂಜನೀರ್ ಇಲಾಖೆ ಇಂದ ಒಂದು ಅಂದಾಜ್ ತಯಾರಾಗುತ್ತಾ ಇದೆ.

(5) ಆನಗೋಡು ದಾವಣಗೆರೆ, ರಸ್ತೆಯನ್ನು ಜಾಗ್ರತೆ ಪೂರೈಸತಕ್ಕದ್ದು ಆವಶ್ಯಕವೆಂದು ಬೋರ್ಡಿನವರು ಅಭಿಪ್ರಾಯ ಪಟ್ಟಾಗ್ಯೂ 96—97ನೇ ಸಾಲಿಗೆ 3,000 ರೂಪಾಯಿಗಳಿಗಿಂತಲೂ ಜಾಸ್ತಿಯಾಗಿ ಈ ರಸ್ತೇ ಕೆಲಸಕೆ ಕೊಡಲು ಅನುಕೂಲ ವಿಲ್ಲದ್ದರಿಂದ ಸದರೀ ಮೊಬಲಗು ದಾಖಲ್ಮಾಡಿದೆ.

ರಿಪೇರಿ.

(1) ಪ್ರಾವಿನ್ಶಿಯಲ್ ಫಂಡಿಗೆ ವರ್ಗಕೊಟ್ಟ ಚಿತ್ರದುರ್ಗ, ಬುಕ್ಕಾಪುರದ ರೋಡಿಗೆ ಬದಲಾಗಿ ಬೋರ್ಡಿನವರು ತೆಗದುಕೊಂಡ ಚಿತ್ರದುರ್ಗ, ಚಳ್ಳಕೆರೆ ರೋಡು ಸಹ ಬಹಳ ಮುಖ್ಯವಾದದ್ದಾಗಿದೆ. ಸದರೀ ರೋಡಿನಲ್ಲಿನ ಆಮದುರಫ್ತು ಬುಕ್ಕಾಪುರದ ರೋಡಿನಲ್ಲಿರತಕ್ಕ ಆಮದುರಫ್ತಿಗೆ ಯಾವ ವಿಧದಲ್ಲಿಯೂ ಕಮ್ಮಿ ಇಲ್ಲ ಆದ್ದರಿಂದ ಹಾಲಿ ಇರುವ ಮೈಲೇಜು ರೇಟು 100 ರೂಪಾಯಿನಲ್ಲಿ ರೋಡನ್ನ ಆಬಾದು ಸ್ಥಿತಿಯಲ್ಲಿಡಲು ಆಗುವದಿಲ್ಲ ಆದ್ದರಿಂದ ಹಾಲಿ ಇರತಕ್ಕ ದರವನ್ನ ಮೈಲಿ 1ಕ್ಕೆ 120 ರೂಪಾಯಿನಂತೆ ಹೆಚ್ಚಿಸಬೇಕಾಯಿತು.

(2) ಮೊಳಕಾಲ್ಮುರು ತಾಲ್ಲೂಕು ರಾಂಪುರದಲ್ಲಿರತಕ್ಕ IIIನೇ ಕ್ಲಾಸ್ ಬಂಗ್ಲೆಯು ಬಹಳ ನಾದುರಸ್ತು ಸ್ಥಿತಿಯಲ್ಲಿರುತ್ತೆ ಆದ್ದರಿಂದ ಅದರ ರಿಪೇರಿಗೆ 828 ರೂಪಾಯಿ ದಾಖಲ್ಮಾಡಿದೆ.

(3) ಈ ಬಾಬಿನಲ್ಲಿ 96—97ನೇ ಸಾಲಿಗೆ ವಟ್ಟು 14,108 ರೂಪಾಯಿ ಖರ್ಚು ಆಗತಕ್ಕದ್ದಾಗಿದೆ.

ನವುಕರ್ರನಮಾನೇರ ತಲಬು.

ಗವರ್ನಮೆಂಟು 23—10—95ನೇ ಮುರ್ಕ್ಕಂ 4449—58—L. F. 210—92ನೇ ನಂಬರು ಪ್ರೊಸಿಡಿಂಗ್ಸು ಪ್ರಕಾರ ವೊಟ್ಟು ಖರ್ಚಿನ ಮೇಲೆ ಶೇಕಡಾ 17½ ರೂಪಾಯಿ ಪ್ರಕಾರ ನವುಕರರಮಾನೇರ ತಲಬಿಗಾಗಿ; 3,692 ರೂಪಾಯಿ ದಾಖಲ್ಮಾಡಿದೆ.

ಅಹನಿ ಸಾಮಾನು ವಗೈರೆ.

ಆಹನೀ ಸಾಮಾನುಗಳ ಬಗ್ಯಾಗಿ 100 ರೂಪಾಯಿ ಸೇರಿಸಿರುತ್ತೆ.

ಈ ರೀತಿ ಮರಹಂಮತ್ತು ಇಲಾಖಾ ಮಾರಿಫತ್ತು ನಡಿಯುತಕ್ಕಂಥ ಕಾಮಗಾರಿಗಳಿಗಾಗಿ 96—97ನೇ ಸಾಲಿಗೆ ತಗಲಬಹುದಾದ ವಟ್ಟು ಖರ್ಚು 24,900 ರೂಪಾಯಿ ಆಗುತ್ತೆ. ಇದನ್ನ ಅಂಗೀಕರಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

III. 96—97ನೇ ಸಾಲಿಗೆ ಡಿಸ್ಟ್ರಿಕ್ಟ್ ಫಂಡಿಗೆ ಖರ್ಚು ಬೀಳತಕ್ಕ ಆಸ್ಪತ್ರೆ ಖರ್ಚು ವಗೈರೆ ಸಿವಿಲ್ ಛಾರ್ಜಿನ ಬಾಬತು ಅಂದಾಜ್ ಪಟ್ಟಿ ಓದಲಾಯಿತು.

(1) ಗವರ್ನಮೆಂಟ್ ಪ್ರೆಸ್ಸಿನಿಂದ ಬರತಕ್ಕ ಫಾರಂಗಳ ಬಾಬತು ಗಾಡೀ ಬಾಡಿಗೆ ರೈಲ್ ಛಾರ್ಜು ವಗೈರೆ ಬಗ್ಯೆ ಮತ್ತು ಡಿಸ್ಟ್ರಿಕ್ಟ್ ಆಫೀಸ್ ಲೋಕಲ್ ಫಂಡ್ ಇಲಾಖೆಗೆ ಬೇಕಾಗುವ ಚಿಲ್ಲರೆ ಸಾಮಾನುಗಳು ಕೊಂಡುಕೊಳ್ಳುವ ಬಗ್ಯೆ ಸಹ ಮಾಹೆಯಾನಾ 3 ರೂಪಾಯಿನಂತೆ ಸಾದಿಲ್ವಾರು ದಾಖಲ್ಮಾಡಿದೆ.

(2) (a) ಹರಿಹರದ ಸಬ್ ತಾಲ್ಲೂಕು ಮಲೆಬೆನ್ನೂರಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಆಸ್ಪತ್ರೆಯನ್ನು ಹೊನ್ನಪ್ಪನಾಯಿಡರವರ ಛತ್ರದಲ್ಲಿಡಬೇಕೆಂದು ಯೋಚಿಸುತ್ತಾ ಇದ್ದರಿಂದ ಇದಕ್ಕಾಗಿ ಚಾಲ್ತಿ ಸಾಲಿಗೆ ಮನೆ ಬಾಡಿಗೆ ಸೇರಿಸಲಿಲ್ಲ ಆದರೆ ಸದರೀ ಛತ್ರವು ಅನುಕೂಲವಿಲ್ಲವೆಂದು ಈಚಿಗೆ ತೋರಿ ಸದರೀ ಆಸ್ಪತ್ರೆ ಇಡಗಲು ಮಾಹೆಯಾನಾ 5 ರೂಪಾಯಿ ಬಾಡಿಗ್ಯೆ ಒಂದು ಮನೆಯನ್ನು ನಿಷ್ಕರ್ಷೆ ಮಾಡಿ ಆ ಬಗ್ಯಾಗಿ 40 ರೂಪಾಯಿ ದಾಖಲ್ಮಾಡಿದೆ.

(b) ತಾಲ್ಲೂಕು ಜಾಗಗಳಲ್ಲಿರತಕ್ಕ ಲೋಕಲ್ ಫಂಡ್ ಆಸ್ಪತ್ರೆಗಳಿಂದ ಚಿತ್ರದುರ್ಗದಲ್ಲಿರುವ ಸಿವಿಲ್ ಆಸ್ಪತ್ರೆಗೆ ಚಿಕಿತ್ಸೆ ಬಗ್ಯೆ ಕಾಯಿಲೆಯವರನ್ನು ಅವಶ್ಯಕ ಬಿದ್ದಾಗ ರವಾನೆ ಮಾಡಲು ಬೇಕಾಗುವ ಗಾಡಿಬಾಡಿಗೆ ಮತ್ತು ಇತರ ಖರ್ಚಿಗಾಗಿ 50 ರೂಪಾಯಿ ಸೇರಿಸಿದೆ ಈ ತರಹೆ ಖರ್ಚಿನ ಸಂದರ್ಭ ಚಾಲ್ತಿ ಸಾಲಿನಲ್ಲಿ ಒದಗಿದ್ದದ್ದರಿಂದಲೂ ಮತ್ತು ಆಸ್ಪತ್ರೆಗಳಿಗೆ ಹಾಲಿ ಕೊಟ್ಟಿರುವ ಸಾದಿಲ್ವಾರು ಮೊಬಲಗು ಆಸ್ಪತ್ರೆಗಳಿಗೆ ಬೇಕಾದ ಸಾಮಾನುಗಳನ್ನು ಮತ್ತು ಅಂಗಡಿ ಅವುಷಧಗಳನ್ನು ತೆಗದುಕೊಳ್ಳುವದಕ್ಕೆ ಮಾತ್ರಕ್ಕೆ ಸಾಕಾಗುವಷ್ಟು ಇದ್ದು ಮೇಲೆ ಹೇಳಿದ ತರಹೆ ಖರ್ಚಿಗೆ ಉಳಿಯುವದಿಲ್ಲವೆಂದು ಅಸಿಸ್ಟೆಂಟ್ ಸರ್ಜನ್ ಸಾಹೆಬರವರು ಅಭಿಪ್ರಾಯ ಪಟ್ಟದ್ದರಿಂದಲೂ ಸದರಿ 50 ರೂಪಾಯಿ ದಾಖಲ್ಮಾಡತಕ್ಕ ಅವಶ್ಯಕ ತೋರಿಬಂತು.

(3) 95—96ನೇ ಸಾಲಿಗೆ ಆಸ್ಪತ್ರೆ ನವುಕರಿ ಮೇಲೆ ಇದ್ದ 5 ಜನ ಸೂಲಗಿತ್ತಿಯರ ತಲಬು ಮತ್ತು ಅಲೋವೆನ್ಸ್ ಬಗ್ಯೆ ಮಾತ್ರ ಬೇಕಾದ ಮೊಬಲಗು ದಾಖಲ್ಮಾಡಿತ್ತು.

ಡಿಸ್ಟ್ರಿಕ್ಟ್ ಮಂಜೂರಿಗೆ ಬೇಕಾದ ವಟ್ಟು ಇಸಂಗಳು ಸಧ್ಯದಲ್ಲಿ ಭರ್ತಿ ಆಗುವದ್ದರಿಂದ ಅವರುಗಳ ತಲಬು ವಗೈರೆ ಬಗ್ಯೆ ಬೇಕಾಗುವ ಮೊಬಲಗನ್ನು ಮುಂದಿನ ಸಾಲಿಗೆ ಸೇರಿಸುವದ್ದರಿಂದ ಜಾಸ್ತಿಯಾಗಿರುತ್ತೆ.

(4) (a) ಹೊಳಲ್ಕೆರೆ ತಾಲ್ಲೂಕು ರಾಮಗಿರಿಯಲ್ಲಿನ ಮುಸಾಫರ್ ಖಾನೆಯಲ್ಲಿ ಪ್ರಯಾಣೀಕರು ಯಾರೂ ಉಳಿಯುವದಿಲ್ಲ ಲೋ

ಲ್ಮುರೂ ತಾಲ್ಲೂಕು ಅಮುಕುಂದಿಯಲ್ಲಿ ಹೊಸದಾಗಿ ಕಟ್ಟಿಸಿರತಕ್ಕ ರೆಸ್ಟ್ ಹೌಸ್ ವುಸ್ತುವಾರೀ ಬಗ್ಯೆ ಮಾಹೆಯಾನಾ 3 ರೂಪಾಯಿ ತಲಬಿನ ಮೇಲೆ ಒಂದು ಇಸಂ ನೇಮಿಸಬೇಕಾಗಿರುತ್ತೆ.

ಹೊಸದುರ್ಗದ ಮುಸಾಫರ್‌ಖಾನೆಗೆ ಮಾಹೆಯಾನಾ 4 ರೂಪಾಯಿ ತಲಬಿನ ಮೇಲೆ ವಬ್ಬ ಝಾಡ್ಮಾಲೀ ಇಸಂ ಮಂಜೂರಾಗಿರುವ ಪ್ರಕಾರ 96—97ನೇ ಸಾಲಿನ ಬಡ್‌ಜೆಟ್ಟಿನಲ್ಲಿ ದಾಖಲ್ಮಾಡಿಥೆ.

ರೆಸ್ಟ್‌ಹೌಸ್

1 ಚಿತ್ರದುರ್ಗದ ತಾಲ್ಲೂಕು ಕಲ್ಲಹಳ್ಳಿ
2 ಹೊಳಲ್‌ಕೆರೇ ತಾಲ್ಲೂಕು ಕೊಟ್ಟಿಗೆ
3 ಮೊಳಕಾಲ್ಮುರೂ ತಾ॥ ತಮ್ಮೇನಹಳ್ಳಿ ಮುಸಾಫರ್‌ಖಾನೆ
4 ಚಿತ್ರದುರ್ಗದ ತಾಲ್ಲೂಕು ವಿಜಾಪುರ

ಈ ಬಾಜೂದಲ್ಲಿ ನಮೂದಿರುವ ರೆಸ್ಟ್ ಹೌಸ್ ಮತ್ತು ಮುಸಾಫರ್‌ಖಾನೆಗಳಿಗಿರುವ ವುಸ್ತುವಾರೀ ಇಸಂಗಳ ತಲಬು ಬಹಳ ಕಡಮೆ ಆಗಿರುವದ್ದರಿಂದ ಅವರುಗಳ ತಲಬನ್ನು ಫೀ ಇಸಂ 2 ರೂಪಾಯಿನಿಂದ 3 ರೂಪಾಯಿಗೆ ಹೆಚ್ಚಿಸಬೇಕೆಂದು ಬೋರ್ಡಿನವರು ಸಿಫಾರಸ್ ಮಾಡುತ್ತಾರೆ.

(b) ಬಂಗ್ಲೆಗಳು ಮತ್ತು ಮುಸಾಫರ್‌ಖಾನೆಗಳಿಗೆ ಬೇಕಾಗುವ ಕಬ್ಬಿಣದ ಕೊಡ ಹಗ್ಗ ವಗೈರೆಗಳ ಬಗ್ಯೆ ಈ ಕಟ್ಟಡಗಳ ಬಾಗಲು ಮತ್ತು ಕಿಟಕಿಗಳ ಚಿಲ್ಲರೆ ರಿಪೇರಿ ಸಂಬಂಧದ ಖರ್ಚಿನ ಬಗ್ಯೆ 50 ರೂಪಾಯಿ ದಾಖಲ್ಮಾಡಿಥೆ.

ಇವುಗಳೇ ಬಂಗ್ಲೆ ಮತ್ತು ಮುಸಾಫರ್‌ಖಾನೆ ಹೆಡ್ಡುಗಳಲ್ಲಿ ಜಾಸ್ತಿ ಮೊಬಲಗು ದಾಖಲಾಗಿರುವದಕ್ಕೆ ಕಾರಣಗಳಾಗಿರುತ್ತವೆ.

(5) ಹಣ ಸಾಲದ್ದರಿಂದ ಗ್ರಾಮಾಂತ್ರಗಳಲ್ಲಿ ನಡಿಯಬೇಕಾದ ಆರೋಗ್ಯಾಭಿವೃದ್ಧಿ ಕಾಮಗಾರಿಗಳಿಗೂ ಮತ್ತು ಗ್ರಾಮ ಪಾಕೀಜ್ ಝಾಡಮಾಲಿಗಳ ತಲಬು ಬಗ್ಯೆ 1,432 ರೂಪಾಯಿಗಿಂತಲೂ ಜಾಸ್ತಿಯಾಗಿ ದಾಖಲ್ಮಾಡಲು ಅನುಕೂಲವಿಲ್ಲ.

(6) ಬಾಕೀ ಬಾಬುಗಳ ವಿಷಯದಲ್ಲಿ ಸ್ಪೆಷಲಾಗಿ ಹೇಳತಕ್ಕದ್ದೇನೂ ಇರುವದಿಲ್ಲ.

(7) ಈ ಸಿವಿಲ್ ಛಾರ್ಜಿನ ಒಟ್ಟು ಮೊಬಲಗು 12,117 ರೂಪಾಯಿ ಆಗುತ್ತೆ.

ಇದನ್ನ ಅಂಗೀಕರಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

IV. ಅಮಲ್ದಾರುಗಳಿಂದ ತಯಾರ್ಮಾಡಲ್ಪಟ್ಟ ಕಾಮಗಾರಿಗಳ ಪಟ್ಟಿಗಳನ್ನು ಓದಲಾಯಿತು.

96—97ನೇ ಸಾಲಿನಲ್ಲಿ ರೆವಿನ್ಯೂ ಇಲಾಖೆಯಿಂದ ನಡಿಸತಕ್ಕ ಕಾಮಗಾರಿಗಳಿಗಾಗಿ 3000 ರೂಪಾಯಿ ದಾಖಲ್ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು ಫಂಡಿಗೂ ಸಾಲದ್ದರಿಂದ ಇಷ್ಟು ಸ್ವಲ್ಪ ಮೊಬಲಗು ದಾಖಲ್ಮಾಡಬೇಕಾಯಿತು ಜರೂರಿಯಾತ್ ಅನುಸರಿಸಿ ನಡಿಯಬೇಕಾದ ಕಾಮಗಾರಿಗಳಿಗೆ ಲ್ಯಾಂತಖ್ಮೀಲ್ ಅಂದಾಜಾಗಳು ಗವರ್ನಮೆಂಟ್ ಮಂಜೂರಿ ಬಗ್ಯೆ ಕಳುಹಿಸಲ್ಪಡತಕ್ಕದ್ದು ಹಾಲಿ ನೇಮಕವಾಗಿರುವ 2 ಮೇಸ್ತ್ರೀ ಇಸಂಗಳ ತಲಬಿಗಾಗಿ ಡಿಸ್ಟ್ರಿಕ್ಟ್ ಫಂಡಿನಿಂದ 200 ರೂಪಾಯಿ ದಾಖಲ್ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

V. ಈ ಕೆಳಗೆ ತೋರಿಸುವ ಪ್ರಕಾರ 96—97ನೇ ಸಾಲಿಗೆ ಎಲ್ಲಾ ಬಾಬುಗಳ ಖರ್ಚು ಶೇರಿ 40,217 ರೂಪಾಯಿಯೂ ಸಾಲ್ ಅಖೈರಿಗೆ ಶಿಲ್ಕು 7,000 ರೂಪಾಯಿಯೂ ಆಗುತ್ತೆ.

ಹಿಂದಿನ ಶಿಲ್ಕು	6,787	
96—97ನೇ ಸಾಲಿನ ಹುಟ್ಟುವಳಿ	40,430	
ಖರ್ಚು ಜುಮ್ಲಾ	47,217	ರೂ.
(A.) ಮರಹಮ್ಮತ್ ಇಲಾಖಾ ಮಾರಿಫತ್ತು ನಡಿಯಬೇಕಾದ ಕಾಮಗಾರಿಗಾಗಿ		24,900
(B.) ರೆವಿನ್ಯೂ ಇಲಾಖಾ		3,200
(C.) ಸಿವಿಲ್ ಛಾರ್ಜು		12,117
ಜುಮ್ಲಾ		40,217
ಶಿಲ್ಕು		7,000

VI. ಕೇವಲ ಅವಶ್ಯಕವಾಗಿರುವ ಖರ್ಚಿನ ಬಗ್ಯಾಗಿ ದಾಖಲ್ಮಾಡಿರುವ ಮೇಲ್ಕಂಡ ಮೊಬಲಗುಗಳನ್ನು ಪ್ಯಾಸ್‌ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

VII. ಚಾಲ್ತಿ ಸಾಲಿಗೆ ಲೋಕಲ್‌ಫಂಡ್ಸ್ ಜನರಲ್‌ನಿಂದ ಹೊಸದಾಗಿ ಹಣ ಕೊಡಲು ಆಗುವದಿಲ್ಲವೆಂದು ಗವರ್ನಮೆಂಟಿನವರು ಮಾಡಿರತಕ್ಕ ಆರ್ಡರನ್ನ ಈ ಡಿಸ್ಟ್ರಿಕ್ಟು ವಿಚಾರದಲ್ಲಿ ಮಟ್ಟಿಗೆ ಪುನರಾಲೋಚನೆಗೆ ತೆಗದುಕೊಳ್ಳಬೇಕೆಂದು ಜನರಲ್ ಸೆಕ್ರೆಟರಿ ಸಾಹೆಬರವರಿಗೆ ಡೆಪ್ಯುಟಿ ಕಮ್ಮಿಷನರವರು ಬರೆಸಿರುವ 12—11—95ನೇ ಮುಕ್ಕಾಂ 367—115ನೇ ನಂಬರ್ ಲೆಟರ್ ಓದಲಾಯಿತು. ಹಣವಿಲ್ಲದ್ದಕ್ಕಾಗಿ ಮಾಡಿಸಬೇಕೆಂದು ಯೋಚಿಸಿದ್ದ ಅನೇಕ ಪಾಕೀಜಾ ಕಾಮಗಾರಿಗಳು ಹಾಲಿ ನಿಂತು ಹೋಗಿರುವದ್ದರಿಂದ ಈ ವಿಷಯದಲ್ಲಿ ಪುನಹ ಗವರ್ನಮೆಂಟಿಗೆ ಬರಿಸಬೇಕೆಂದು ತೀರ್ಮಾನಿಸಲಾಯಿತು.

ಎಂ. ಎಸ್. ನಾರಾಯಣರಾಯರು,
ಆ. ಡೆಪ್ಯುಟಿ ಕಮ್ಮಿಷನರ್, ಮತ್ತು ಪ್ರೆಸಿಡೆಂಟ್.

ಸ್ವಂತಪ್ರಕಟನೆ.

ನೋಟಿಸ.

ಮಂಡ್ಯದ ತಾಲ್ಲೂಕು ಆತಗೂರು ಹೋಬಳಿ ಕದಲೂರಲ್ಲಿರುವ ಯಡತೊರೇ ತಾಲ್ಲೂಕು ಮಾವತ್ತೂರು ವೆಂಕಟರಾಮಯ್ಯನವರ ಹೆಂಡತಿ ವೆಂಕಟಲಕ್ಷ್ಮಮ್ಮನು, ಇದರಿಂದ ಸಕಲರಿಗೂ ತಿಳಿಯಪಡಿಸುವದೇನಂದರೆ,—ನಾನು ಮಂಡ್ಯದ ತಾಲ್ಲೂಕು ಸರ್ವಮಾನ್ಯ ಕೆಸ್ತೂರು ಅಲ್ಲಿರುವ ಹರಿಯಣ್ಣಯ್ಯನ ನರಸಯ್ಯನವರ ಮಕ್ಕಳು ನರಸುಬ್ಬಯ್ಯನವರಿಗೆ, ನಾನು ಬರದುಕೊಟ್ಟಿರುವ 94ನೇ ಇಸವಿ ಆಕ್ಟೋಬರ್ 21ನೇ ಮುಕ್ಕಾಂ ಜನರಲ್ ಪವರಾಫ್ ಆಟರ್ನಿ ಪ್ರೊಟ್ಟು ಮೊಕ್ತ್ಯಾರ್‌ನಾಮೆಯನ್ನು ನಾನು ರದ್ದು ಪಡಿಸಿರುವದರಿಂದ ಈ ತಾರೀಖು ಲಾಗಾಯಿತು ಮುಂದೆ ನನಿಗೋಸ್ಕರ ಅವರಲ್ಲಿ ಯಾವವಿಧವಾದ ಲೇವಾದೇವಿ, ಲೆಕ್ಕಾಚಾರ ಮತ್ತು ಕಾಗದಪತ್ರಗಳನ್ನು ಇತರರು ನಡಿಸಕೂಡದು. ಹಾಗೆ ನಡಿಸಿದರೆ ಅದಕ್ಕೆ ನಾನು ಬದ್ಧಳಾಗಲಾರೆನಾದ ವಿವರ ತಿಳಿಯುವದು. ತಾರೀಖು 12—4—96.

326

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಛಾಯಿಸ್ ಆದ್ದು. [ನಂ. 17.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 30, ಸನ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರ್‌ಗಳು, ಫಾರೆಸ್ಟು, ರಜಿಸ್ಟ್ರೇಷನ್ ವ ಯಜ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಮೊಕ್ಕಾಂ ಮೈಸೂರು, ತಾರೀಖು 15ನೇ ಏಪ್ರೈಲ್ 1896.

ನಂ. 9395.—ಫೈ. 653, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಸ್ಟೇಟ್ ಹುಜೂರ್ ಟ್ರೆಜರಿಯ ಇನ್‌ಚಾರ್ಜ್ ಆಫಿಸರಾದ ಮೆಸ್ಟರ್ ಎ. ವೀರಾಸಾಮಿ ಮೊದಲಿಯಾರ್ರಿಗೆ ಮಾಹೆ ಮಜಕೂರು 21ನೇ ಮುಕ್ಕಾಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಟ್ರೆಜರರ್ ಮೆಸ್ಟರ್ ರಾಯಲುಚಟ್ಟಿಯವರು ಸದರೀ ಮೆಸ್ಟರ್ ವೀರಾಸಾಮಿ ಮೊದಲಿಯಾರು ರಜಾದ ಮೇಲೆ ಗೈರ್‌ಹಾಜರಿರುವ ಕಾಲದಲ್ಲಿ ತಮ್ಮ ಕೆಲಸಗಳೊಂದಿಗೆ ಟ್ರೆಜರಿಯ ಚಾರ್ಜಿನಲ್ಲಿ ಹಂಗಾಮಿ ತರೀಕ ಇರತಕ್ಕದ್ದು.

ತಾರೀಖು 24ನೇ ಮಾರ್ಚಿ 1896.

ನಂ. 8758.—ಆರ್. 3394. 1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಯಿದರಿಂದ ಪ್ರಕಟಿಸಲ್ಪಡುವದೇನಂದರೆ,—ಈ ಕೆಳಗೆ ನಮೂದಿಸಿರುವ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಕೋಲಾರದಲ್ಲಿ ಡೆಪ್ಯುಟಿ ಕಮ್ಮಿಷನರವರ ಹೊಸ ಬಂಗಲೆಯ ಕಾಂಪೌಂಡಿಗಾಗಿ ಬೇಕಾಗಿಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೇ ಸೆಟಲ್‌ಮೆಂಟಿಗೆ ಪೂರ್ವದ ಹಳೇ ಲೆಖ್ಖಗಳ ಪ್ರಕಾರ ಜಮೀನಿನ ತಪ್ಸೀಲ್.				ಚಕ್ಕುಬಂದಿ.			
					ಜಾತಿ.	ನಂಬರು.	ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಖಂ. ಕೊ. ಪ.	ರೂ. ಆ. ಪೈ				
ಕೋಲಾರ	ಕೋಲಾರ	ಕೋಲಾರ	ಕೋಲಾರ ಟೌನು	ಗೋವಿಂದರಾಜು ಪಿಳ್ಳೆ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ ಖುಷ್ಕಿ	603 605	0—0—2 0—0—$10\frac{1}{3}$	0-1-9 0-9-2	ಮಾಜಿ ನಂ. 602 ತೋಟ	ಮಾಜಿ ನಂ. 604 ಬಂಜರು	ಮಾಜಿ ನಂ. 605 ಪಲ್ಲಿಗಕುಂಟೆ	ಮಾಜಿ ನಂ. 599 ಸರ್ಕಾರದ ಬಂಜರು
				ವಾನಂಬಾಡಿ ಬಸಪ್ಪ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ	605	0—0—$7\frac{3}{4}$	0-6-11	ಮಾಜಿ ನಂ. 606 ಬಂಜರು	ಮಾಜಿ ನಂ. 598 ರಸ್ತೆ	ಮಾಜಿ ನಂ. 486 ಚರಂಡಿ	ಮಾಜಿ ನಂ. 602, 603 ಮತ್ತು 604 ಬಂಜರು

ತಾರೀಖು 16ನೇ ಏಪ್ರೈಲ್ 1896.

ನಂ. ಸಿ. 150.—ಫ್ರೇಜರ್‌ಟಾಕ್ಸ್ ಸಬ್ ಡಿವಿಜನ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿಸ್ಟರ್ ಎಂ. ನಂಜರಾಜ ಅರಸಿನವರಿಗೆ 1896ನೇ ಏಪ್ರೈಲ್ 15ನೇ ಮರ್ತು೦ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. ಸಿ. 160.—ಸರ್ 1894ನೇ ಇಸವಿಯ ಮೈಸೂರ್ ಜೈಲ್ ಮ್ಯಾನ್ಯುಯಲಿನ 86ನೇ ಪುಟದಲ್ಲಿ ಛಾಪಿಸಿರುವ 519ನೇ ರೂಲಿಗೆ ಬದಲಾಗಿ ಇದರಡಿ ಕಂಡದ್ದನ್ನು ಸೇರಿಸತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ:

"519. ಯಾವ ಖೈದಿಯಾಗಲಿ ಅಪಾಯಕರವಾದ್ದ ಯಾ ಗುಣವಾಗದ ಕಾಹಿಲೆಯಲ್ಲಿದ್ದು ಮತ್ತು ಅಂಥಾವನ ವಿಷಯದಲ್ಲಿ ಸದರೀ ಖೈದಿಯು ಖುಲಾಸೆ ಮಾಡಲ್ಪಟ್ಟ ಹೊರತು ಅನ್ಯಥಾ ಬದುಕಲಾರನೆಂದು ಸದರೀ ಬಂದೀಖಾನೆಯ ಮೆಡಿಕಲ್ ಆಫೀಸರರು ಅಭಿಪ್ರಾಯ ಪಟ್ಟರೆ ಜೈಲ್ ಸೂಪರಿಂಟೆಂಡೆಂಟುವರು, ಗವರ್ನಮೆಂಟ್ ಆರ್ಡರ್ ಅನುಸರಿಸಿ ಖುಲಾಸೆ ಮಾಡಲ್ಪಡುವ ಬಗ್ಯಾಗಿ ಬಂದೀಖಾನೆಯ ಇನ್‌ಸ್ಪೆಕ್ಟರ್ ಜನರಲ್‌ಯವರಿಗೆ ಶಿಫಾರಸ್ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಜೈಲ್ ಸೂಪರಿಂಟೆಂಡೆಂಟರವರು ಸದರೀ ಖೈದಿಯು ಬಂದೀಖಾನೆಯಲ್ಲಿರುವಾಗ್ಯೆ ಅಕ್ರಮಃನಡತೆಯುಳ್ಳವನಾಗಿರಲಿಲ್ಲವೆಂದು ದೃಢಪಡಿಸಬೇಕು ಮತ್ತು ಮೆಡಿಕಲ್ ಆಫೀಸರರು, ಸದರೀ ಖೈದಿಯ ಖುಲಾಸೆ ಬಗ್ಯಾಗಿ ಕಾರಣಭೂತವಾದ ಕಾಹಿಲೆಯು ಯಾವ ವಿಧದಿಂದಲಾಗಲಿ ಖೈದಿಯು ಮನಃಪೂರ್ವಕ ಮಾಡಿದ ಕೆಲಸದಿಂದ ಉಂಟಾಗಲಿಲ್ಲವೆಂತಲೂ ಅಥವಾ ಹೆಚ್ಚಾಗಲಿಲ್ಲವೆಂತಲೂ ಮತ್ತು ಸದರೀ ಖೈದಿಯು ಇನ್ನೂ ಬಂದೀಖಾನೆಯಲ್ಲಿ ಯಿಡಲ್ಪಟ್ಟರೆ ಅವನ ಪ್ರಾಣಕ್ಕೆ ಅಪಾಯ ಉಂಟಾಗುವದೆಂತಲೂ ಮತ್ತು ಸದರೀಯವನು ಖುಲಾಸೆ ಮಾಡಲ್ಪಟ್ಟರೆ ಕಾಹಿಲೆಯು ಗುಣವಾಗಬಹುದೆಂತಲೂ ಸರ್ಟಿಫೈ ಮಾಡತಕ್ಕದ್ದು."

ತಾರೀಖು 4ನೇ ಏಪ್ರೈಲ್ 1896.

ನಂ. 11295.—ಲೋ. ಫಂ. 257—92, ಲ್ಯಾಂಡ್ ಅಕ್ವಿಜಿಷರ್ರ ರೆಗ್ಯುಲೇಷರ್ರ 6ನೇ ಸೆಕ್ಷರ್ರ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ,—ಈ ಕೆಳಗಿನ ಪಟ್ಟೆಯಲ್ಲಿ ತೋರಿಸಿಯಿರುವ ಜವಿರ್ರಗಳು ಸರ್ಕಾರದ ಕೆಲಸಕ್ಕೆ ಅಂದರೆ ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಬಾಗೇಪಲ್ಲಿ ಟವರ್ರ ಬಡಾಯಿಸುವದಕ್ಕಾಗಿ ಬೇಕಾಗಿರುತ್ತೆ:—

ನಂಬರು	ಸೈವೆ ನಂಬರು	ಖಾತೇದಾರನ ಹೆಸರು	ವಟ್ಟುಜವಿಾನಿನ ವಿಸ್ತೀರ್ಣ.				ಹೊಂದಲ್ಪಡತಕ್ಕ ಜವಿಾನು.				ಸರಹದ್ದು.			
			ವಿಸ್ತೀರ್ಣ	ಕಂದಾಯ.			ವಿಸ್ತೀರ್ಣ.	ಕಂದಾಯ.			ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು.	ರೂ.	ಆ.	ಪೈ.	ಎ. ಗು.	ರೂ.	ಆ.	ಪೈ.				
1	ಖುಷ್ಕಿ ನಂ. 160ರ ಪೈಕಿ	ಶಂಕರ ನಾಗಂಣ	3—31	5	12	0	1—20	2	4	0	ಫಕ್ರುಸಾಹೇಬನ ಕಂದಾಯುದ ಭೂಮಿ	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರ್ರ ಯಿನಾಮತಿ	ರಸ್ತೆ	[illegible]
2	(ಖುಷ್ಕಿ)ಭಟ್ಟಇನಾಂ ನಂ. 159	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರಿ	1—38	3	0	0	0—20	0	12	0	ಶಂಕರ ನಾಗಂಣನ ಕಂದಾಯುದ ಭೂಮಿ	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ರಸ್ತೆ	ಡಿಟೋ
3	ಖುಷ್ಕಿ ನಂ. 153ರ ಪೈಕಿ	ಸುಣ್ಣಕಲ್ಲು ವೆಂಕಟಿಗಾ	1—11	2	0	0	0—18	0	10	9	ಪುಟ್ಟಾಚಾರಿ, ರಾಮಾಚಾರಿ ಮತ್ತು ವೇದಾಂತಾಚಾರ್ರ ಇನಾಮತಿ	ಕೋಡಿ ಚರುವು ಹನುಮಂತನ ಕಂದಾಯದ ಭೂಮಿ, ಮತ್ತು ಸರ್ಕಾರದ ಖಾಲೀ ಜವಿಾನು	ರಸ್ತೆ	ಡಿಟೋ
4	ಡಿಟೋ	ಕೋಡಿಚರವು ಹನುಮಂತ (ಅನುಭವದಾರ್ ನರಸಿಹ್ಮ)	3—12	5	0	0	0—15	0	9	0	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ಒಣಿ ಮತ್ತು ಬಾಕಿ ಜವಿಾನು	ಸರ್ಕಾರದ ಬಂಜರು ಜವಿಾನು	ಡಿಟೋ

ತಾರೀಖು 18ನೇ ಏಪ್ರೈಲ್ 1896.

ನಂ. 11846.—ಮಿ. 1685, ಸ್ರ 1869ನೇ ಇಸವಿಯ ಜನರಲ್ ಸ್ಟಾಂಪ್ ಆಕ್ಟಿನ 48ನೇ ಸೆಕ್ಷರ್ರ ಅನುಸರಿಸಿ ಮೈಸೂರ್ ಗವರ್ರಮೆಂಟಿನವರು, 1870ನೇ ಇಸವಿ ಸೆಪ್ಟಂಬರ್ 23ನೇ ಮರ್ಸ್ತುಂ 209ನೇ ನಂಬರ್‌ಉಳ್ಳ ಲೇಟ್ ಚೀಫ್ ಕಮಿಷ್ಮನರವರ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ Xನೇ ರೂಲನ್ನು ರದ್ದುಮಾಡಿ ಇದರಡಿ ಬರುವ ರೂಲನ್ನು ಏರ್ಪಡಿಸಿರುತ್ತಾರೆ:—

"ಪ್ರತಿಯುಕ್ಸ್ ಅಫಿಷಿಯೋ ಅಥವಾ ಲೈಸೆನ್ಸ್ ಪಡೆದಿರುವ ಬಿಕರೀದಾರನು ತಾನು ಬಿಕರಿಮಾಡುವ ಎರಡನೇ ಕ್ಲಾಸಿನ ಪ್ರತಿ ಸ್ಟಾಂಪ್ ಕಾಗದದ ಹಿಂಭಾಗದಲ್ಲಿ ಜಂಜರ್ ನಂಬರ್, ಬಿಕರಿಯ ತಾರೀಖು, ಖರೀದಿಗೆ ಪಡೆದುಕೊಂಡವನ ಹೆಸರು ವ ವಾಸಸ್ಥಳ, ಮತ್ತು ಸದರೀ ಸ್ಟಾಂಪು ಹಣ ಹಾಜರ್ಮಾಡಿದವನಲ್ಲದ ಇತರ ಬೇರೇ ಮನುಷ್ಯನಿಗೋಸ್ಕರ ಕೊಂಡುಕೊಳ್ಳಲ್ಪಟ್ಟರೆ ಅಂಥಾ ಇತರ ಮನುಷ್ಯನ ಹೆಸರು ವ ವಾಸಸ್ಥಳ ಮತ್ತು ಅಕ್ಷರದಲ್ಲಿ ಪೂರ್ತಿಯಾಗಿ ಸ್ಟಾಂಪಿನ ಕಿಮ್ಮತು ಮತ್ತು ಅವನ ಸಾಧಾರಣವಾದ ರುಜು ಸಹ ಬರಿಯತಕ್ಕದ್ದು. ಲೋಕಲ್ ಗವರ್ರಮೆಂಟಿನಿಂದ ವಿಧಿಸಲ್ಪಡಬಹುದಾದ ನಮೂನೆಯಲ್ಲಿ ವೊಂದು ರಿಜಿಸ್ಟರ್ ಇಟ್ಟು ಸದರೀ ರಿಜಿಸ್ಟರಿನಲ್ಲಿ ಈ ತಪಶೀಲುಗಳನ್ನು ಬರಿಯತಕ್ಕದ್ದು. ಅಂಥಾ ಯಾವ ಬಿಕರೀದಾರನಾಗಲಿ ಬಿಕರಿ ಮಾಡಲ್ಪಟ್ಟ ಸ್ಟಾಂಪಿನ ಮೇಲೆ ತನಿಗೆ ತಿಳಿದು ಯಿದ್ದೂ ಕೂಡ ಸುಳ್ಳು ಯಿಂಡಾರ್ಸ್‌ಮೆಂಟನ್ನು ಮಾಡಕೂಡದು ಅಥವಾ ತನ್ನ ರಿಜಿಸ್ಟರಿನಲ್ಲಿ ಸುಳ್ಳು ಖತಾಯಿತಿಯನ್ನು ದಾಖಲ್ಮಾಡಕೂಡದು."

ತಾರೀಖು 21ನೇ ಏಪ್ರೈಲ್ 1896.

ನಂ. 11910.—ಯ. ಫೈ. 104—95, ಬೆಂಗಳೂರ್ ಷಹರಿನ ಮ್ಯುನಿಸಿಪಲ್ ಇಂಗ್ಲೀಷ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಡಿ. ಗೋವಿಂದರಾಯರು ತಮ್ಮ ಹೆಸರನ್ನು ಡಿ. ಶಾಮರಾಯರೆಂದು ಬದಲಾಯಿಸಿಕೊಂಡಿರುವದ್ದರಿಂದ ಈ ತಾರೀಖು ಲಾಗಾಯಿತು ಸದರೀ ಹೆಸರಿನಿಂದ ಸಿಬ್ಬಂದಿಯಲ್ಲಿ ದಾಖಲ್ಮಾಡಲ್ಪಡತಕ್ಕದ್ದು.

ಕ್ಯಾಂಪ್ ನಂ. 188. ಮೊಕ್ಕಾಂ ಮೈಸೂರು, ತಾರೀಖು 24ನೇ ಏಪ್ರೈಲ್ 1896.

ಇದರಡಿ ಕಂಡ ಮೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

1. ಗವರ್ರಮೆಂಟ್ ಪ್ರಸ್, ಸ್ಟೇಷನರಿ ವ ಸ್ಟೋರುಗಳ ಸೂಪರಿಂಟೆಂಡೆಂಟ್, ಮೈಸೂರ್ ಗೆಜೆಟ್ ಕಂಪೈಲರ್ ಮತ್ತು ಗವರ್ರಮೆಂಟ್ ಲೈಬ್ರರಿ ಯಕ್ಸ್-ಅಫಿಷಿಯೋ ಕ್ಯೂರೇಟರಾದ ಮೆಸ್ಟರ್ ಟಿ. ಟಿ. ಲೆನರ‍್ಡ ಯವರು ಬೆಂಗಳೂರು ಷಹರಿನ ಮ್ಯುನಿಸಿಪಲ್ ಕಮಿಷ್ಮನರುಗಳ ಪ್ರೆಸಿಡೆಂಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ. ಚಾರ್ಜು ವೊಪ್ಪಿಸಿದ ತರುವಾಯ ಕೆಲಸದಮೇಲೆ ಹೋಗತಕ್ಕದ್ದು.

2. ಕೋಲಸಪೇಟೆ ಸಬ್ ಡಿವಿಜನ್ ಆಫೀಸರ್ ಮಿಸ್ಟರ್ ಸಿ. ವಿ. ರಾಘವಾಚಾರ್ಲು ಯವರು ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್, ಮೈಸೂರ ಗೆಜೆಟ್ ಕಂಪೈಲರ್, ಗವರ್ನಮೆಂಟ್ ಲೈಬ್ರರಿ ಯಕ್ಸ್-ಅಫಿಷಿಯೋ ಕ್ಯೂರೇಟರ್ ಮತ್ತು ಸ್ಟೇಷನರಿ ವ ಸ್ಟೋರುಗಳ ಸೂಪರಿಂಟೆಂಡೆಂಟರಾಗಿ ಸಬ್ ಪ್ರೋಟೆಂ ತಾತ್ಕಾಲಿಕ ಆಕ್ಟಿಂಗಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಚಾರ್ಜು ಒಪ್ಪಿಸಿದ ತರುವಾಯ ಕೆಲಸದ ಮೇಲೆ ಹೋಗತಕ್ಕದ್ದು.

3. ಪೊಲೀಸ್ ಸೂಪರಿಂಟೆಂಡೆಂಟ್ ಮಿಸ್ಟರ್ ಕೆ. ಪಿ. ಪುಟ್ಟಣ್ಣಚೆಟ್ಟಿಯವರು ಸದರೀ ಮಿಸ್ಟರ್ ಸಿ. ವಿ. ರಾಘವಾಚಾರ್ಲು ಯವರು ಇತರ ಕೆಲಸದ ಮೇಲೆ ಗೈರುಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೋಲಸಪೇಟೆ ಸಬ್ ಡಿವಿಜನ್ ಆಫೀಸರಾಗಿ ಸಬ್ ಪ್ರೋಟೆಂ ತಾತ್ಕಾಲಿಕ ಆಕ್ಟಿಂಗಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಕೂಡಲೆ ಕೆಲಸದ ಮೇಲೆ ಹೋಗತಕ್ಕದ್ದು.

ಮೊಕ್ಕಾಂ ಮೈಸೂರು, ತಾರೀಖು 25ನೇ ಏಪ್ರೆಲ್ 1896.

ಸಿ. ನಂ. 201.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಹೊಳಲಕೆರೆ ತಾಲ್ಲೂಕು ಅಮಲ್ದಾರ್ ಎಸ್. ಕೃಷ್ಣ ಅಯರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಐದುದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಸಿರಸ್ತೇದಾರರು ತಮ್ಮ ಕೆಲಸಗಳೊಂದಿಗೆ ಸದರೀ ಎಸ್. ಕೃಷ್ಣ ಅಯ್ಯರ್ ಯವರು ರಜಾದಮೇಲೆ ಗೈರುಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಸಿ. ನಂ. 210.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ವೈ. ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 204.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ್ ಮಿಸ್ಟರ್ ಸಿ. ಅಪ್ಪಯ್ಯನವರಿಗೆ 1896ನೇ ಏಪ್ರೆಲ್ 27ನೇ ಮಾರ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 12102.—ಜು. 1365, ಕಡೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿಸ್ಟರ್ ಬಲ್ಲಾರ್ಡಿಯವರಿಗೆ 1896ನೇ ಏಪ್ರೆಲ್ 4ನೇ ಮಾರ್ಕುಂ 11323—ಜು. 1252ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಎರಡು ತಿಂಗಳೂ ಮತ್ತು ಏಳು ದಿನಗಳ ಪ್ರಿವಿಲೀಜ್ ರಜಾ ಇನ್ನೂ ಇಪ್ಪತ್ಮೂರು ದಿನಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರ, ತಾರೀಖು ನೇ ಏಪ್ರೆಲ್ 1896.

ಸಿ. ನಂ. 207.—ಚೀಫ್ ಸೆಕ್ರೆಟರಿಯರಾದ ಮಿಸ್ಟರ್ ಟಿ. ಆನಂದರಾಯರವರಿಗೆ 1896ನೇ ಜನವರಿ 28ನೇ ಮಾರ್ಕುಂ 6677—ಫೈ. 336ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ರಜಾವನ್ನು ಮೂರುತಿಂಗಳುಗಳಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರ ತಾರೀಖು 25ನೇ ಏಪ್ರೆಲ್ 1896.

ಕ್ಯಾಂಪ್ ನಂ. 213.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟು ಯಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಬಿ. ರಾಮಸ್ವಾಮಿ ಅಯ್ಯಂಗಾರ್ರಿಗೆ, 1896ನೇ ಏಪ್ರೆಲ್ 28ನೇ ಮಾರ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರ, ತಾರೀಖು 27ನೇ ಏಪ್ರೆಲ್ 1896.

ಸಿ. ನಂ. 217, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಎಂ. ಚಂಗಯ್ಯಚೆಟ್ಟಿ, ಬಿ. ಏ, ಯವರಿಗೆ ಮಾಹೆ ಮಜಕೂರ್ 28ನೇ ಮಾರ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿಮೂರು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 12104.—ಜು. 1367, ಚಿತ್ರದುರ್ಗದ ಮುನ್ಸಿಫ್ ಮಿಸ್ಟರ್ ಏ. ಆನಂದರಾಯರವರು, ಅವರಿಗೆ 1896ನೇ ಫೆಬ್ರುವರಿ 14ನೇ ಮಾರ್ಕುಂ 9448.—ಜು. 1025ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾ ಪೈಕೀ 28 ದಿನಗಳು ಮಾತ್ರ ಉಪಯೋಗಿಸಿಕೊಂಡ ಸಬಬ್ ಉಳಿದ ಭಾಗದ ರಜಾ (ಎರಡು ದಿನಗಳು) ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 12100.—ಜು. 1363, ಸರ್ 1877ನೇ ಇಸವಿಯ ರಿಜಿಸ್ಟ್ರೇಷನ್ ಆಕ್ಟು 6ನೇ ಸೆಕ್ಷನಿನ ನಿಯಮಗಳನುಸರಿಸಿ, ಸೊರಬ ತಾಲ್ಲೂಕು ಅಮಲ್ದಾರು ಆ ತಾಲ್ಲೂಕಿನ ಯಕ್ಸ್ ಅಫಿಷಿಯೋ ಸಬ್ ರಿಜಿಸ್ಟ್ರಾರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೇ ಏಪ್ರೆಲ್ 1896.

ನಂ. 9361.—ರೆ. 3619, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಕೆ. ಆರ್. ಶ್ರೀನಿವಾಸಯ್ಯಂಗಾರ್ರಿಗೆ 1896ನೇ ಮಾರ್ಚಿ 30 ವ 31ನೇ ಮಾರ್ಕುಂಗಳಲ್ಲಿ ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

330

[illegible]

ಮೈಸೂರ್ ಕ್ಯಾಂಪ್ ನಂ. 97, ತಾರೀಖು 13ನೇ ಏಪ್ರೆಲ್ 1896.

[illegible]

1896ನೇ ಇಸವಿ ಮಾರ್ಚಿ 6ನೇ ಮರ್ಸ್ಸುಂ 8032—ಎಕ್ಸ್. 245ನೇ ನಂಬರು ಮತ್ತು ಅದೇ ಮಾಹೆ 5ನೇ ಮರ್ಸ್ಸುಂ 8030—ಎಕ್ಸ್. 243ನೇ ನಂಬರು ಇಸ್ತಿಹಾರುಗಳಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಯಡತೊರೆ, ಹುಣಸೂರು, ಹೆಗ್ಗಡದೇವನ ಕೋಟೆ, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ತಿರಮಕೂಡಲು ನರಸೀಪುರ ಈ ತಾಲ್ಲೂಕುಗಳ ಬಾಬತ್ತು 1896–97ನೇ ಸಾಲಿನ ಸಾರಾಯಿ ಬಿಕರಿ ಗುತ್ತಿಗೆ ಫಿರಖಾಗಳ ಮತ್ತು ಶೇಂದಿ ಫಿರಖಾಗಳ ಹರಾಜು ಬಗ್ಯೆ ಮೊಕರರೂರು ಮಾಡಲ್ಪಟ್ಟಿರುವ ತಾರೀಖುಗಳಿಗೆ ಬದಲಾಗಿ ಇದರಡಿ ನಮೂದಿಸೋಣಾದ ತಾರೀಖುಗಳಲ್ಲಿ ಹರಾಜು ಕ್ರಮ ನಡಿಸಲ್ಪಡುವದು:—

ತಾಲ್ಲೂಕು		ಸಾರಾಯಿ.	ಶೇಂದಿ.
ಯಡತೊರೆ	..	1896ನೇ ಮೇ ತಾ॥ 23	1896ನೇ ಮೇ ತಾ॥ 23
ಹುಣಸೂರು	..	ಡಿಟೋ 25	ಡಿಟೋ 25 ಮತ್ತು 26
ಹೆಗ್ಗಡದೇವನಕೋಟೆ	..	ಡಿಟೋ 27	ಡಿಟೋ 27
ಗುಂಡ್ಲುಪೇಟೆ	..	ಡಿಟೋ 29	ಡಿಟೋ 29 ಮತ್ತು 30
ಚಾಮರಾಜನಗರ	..	ಡಿಟೋ 31	ಡಿಟೋ 31 ಮತ್ತು ಜೂನ್ 1
ಯಳಂದೂರು	..	1896ನೇ ಜೂನ್ ತಾ॥ 2	ಡಿಟೋ ಡಿಟೋ
ತಿರಮಕೂಡಲು ನರಸೀಪುರ	..	ಡಿಟೋ 3	1896ನೇ ಜೂನ್ ತಾ॥ 3 ಮತ್ತು 4

ಮೈಸೂರು ತಾರೀಖು 14ನೇ ಏಪ್ರೆಲ್ 1896.

ನಂ. 9384.—ಫಾ. ಫೈ. 119—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರವೇಟರ್ ಮೆಸ್ಟರ್ ಯಚ್. ಮುತ್ತಪ್ಪನವರಿಗೆ 1896ನೇ ಏಪ್ರೆಲ್ 15ನೇ ಮರ್ಸ್ಸುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು ತಾರೀಖು 15ನೇ ಏಪ್ರೆಲ್ 1896.

ನಂ. 278.—ಡಿ. ಸಿ. ಇದರಡಿ ಕಂಡ ಫಾರೆಸ್ಟು ಆಫಿಸರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ.—

ನಂಬರು	ಆಫಿಸರರ ಹೆಸರು ಮತ್ತು ಹುದ್ದೆ.	ಇಂದ.	ಗೆ.	ಯಾವಾಗ ಸೇರತಕ್ಕದ್ದು.
1	ಮೆಸ್ಟರ್ ಯಚ್. ಮುತ್ತಪ್ಪ, ಅಸಿಸ್ಟೆಂಟ್ ಕನ್ಸರ್ವೇಟರ್.	ಸ್ಪೆಷಲ್ ಡ್ಯೂಟಿ	ಬೆಂಗಳೂರು ಡಿಸ್ಟ್ರಿಕ್ಟು	ರಜಾ ಪೂರೈಸಿದ ತರುವಾಯ
2	ಮೆಸ್ಟರ್ ವೈ. ಸೀತಾರಾಮಯ್ಯ ಅಸಿಸ್ಟೆಂಟ್ ಕನ್ಸರ್ವೇಟರ್	ಬೆಂಗಳೂರು ಡಿಸ್ಟ್ರಿಕ್ಟು	ಕೋಲಾರ್ ಡಿಸ್ಟ್ರಿಕ್ಟು	ಮೆ॥ ಮುತ್ತಪ್ಪನವರಿಗೆ ಚಾರ್ಜ್ ವೊಪ್ಪಿಸಿದ ತರುವಾಯ
3	ಮೆಸ್ಟರ್ ರಾಮಸ್ವಾಮಿ ಅಯ್ಯರ್	ಕೋಲಾರ್ ಡಿಸ್ಟ್ರಿಕ್ಟು	ಚಿತ್ರದುರ್ಗ ಡಿಸ್ಟ್ರಿಕ್ಟು	ಮೆ॥ ಶೀತಾರಾಮಯ್ಯನವರಿಗೆ ಚಾರ್ಜ್ ವೊಪ್ಪಿಸಿದ ತರುವಾಯ
4	ಮೆಸ್ಟರ್ ಕೆ. ಶಾಮಯ್ಯಂಗಾರ್	ಚಿತ್ರದುರ್ಗ ಡಿಸ್ಟ್ರಿಕ್ಟು	ಶಿಕಾರಿಪುರ ಸಬ್ ಡಿವಿಜನ್	ಮೆ॥ ರಾಮಸ್ವಾಮಿ ಅಯ್ಯರವರಿಗೆ ಚಾರ್ಜ್ ವೊಪ್ಪಿಸಿದ ತರುವಾಯ

ನಂ. 9413.—ರೆ. 3647, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟು ಪ್ರೋಬೆಷನರಿ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಕೆ. ಚಾಂಡಿ, ಬಿ. ಏ. ಯವರಿಗೆ 1896ನೇ ಏಪ್ರೆಲ್ 25ನೇ ಮರ್ಸ್ಸುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ವೊಂದು ತಿಂಗಳೂ ಯಿಪ್ಪತ್ತಮೂರು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 16ನೇ ಏಪ್ರೆಲ್ 1896.

ನಂ. 9441.—ರೆ. ಫೈ. 96—95, ಸಿಡ್ಲಗಟ್ಟದ ತಾಲ್ಲೂಕು ಅಮಲ್ದಾರ್ ಸಿರಾ ಶ್ರೀನಿವಾಸರಾಯರಿಗೆ 1896ನೇ ಮಾರ್ಚಿ 27ನೇ ಮರ್ಸ್ಸುಂ 8924—ರೆ. ಫೈ. 96—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹನ್ನೆರಡು ದಿನಗಳ ಕ್ಯಾಜುಯಲ್ ರಜಾವನ್ನು ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 219ನೇ ಸೆಕ್ಷನ್ ಅನುಸರಿಸಿ ಸ್ವಂತ ಕೆಲಸಗಳ ಮೇಲೆ ರಜಕ್ಕೆ ಬದಲಾಯಿಸಲ್ಪಟ್ಟು ಹದಿನೈದು ದಿನಗಳು ಜಾಸ್ತಿಮಾಡಲ್ಪಟ್ಟಿರುತ್ತೆ.

ನಂ. 9444.—ರೆ. ಫೈ. 127—95, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಶಿವಮೊಗ್ಗಾ ಡಿಸ್ಟ್ರಿಕ್ಟು ನಗರ ತಾಲ್ಲೂಕು ಅಮಲ್ದಾರ್ ಕೆ. ಜಿ. ಅನಂತರಾಮಯ್ಯಂಗಾರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸಾಗರದ ಸಬ್ ಡಿವಿಜನ್ ಆಫಿಸ್ ಸಿರಸ್ತೇದಾರರಾದ ಯಸ್. ಶಾಮರಾಯರು ಸದರೀ ಕೆ. ಜಿ. ಅನಂತರಾಮಯ್ಯಂಗಾರ್ರು ರಜೆಯ ಮೇಲೆ ಗೈರಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವವರೆಯುತ ನಗರ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 9464.—ರೆ. 3650, ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರರಾದ ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಯಿಪ್ಪತ್ತೊಂದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಶ್ರೀರಂಗಪಟ್ಟಣದ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಡಿ. ಸುಬ್ಬರಾಯರು ಸದರೀ ವೆಂಕಟರಾಯರು ರಜಾದ ಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಮೈಸೂರ್, ತಾರೀಖು 18ನೇ ಏಪ್ರೆಲ್ 1896.

ನಂ. 9474.—ಫಾ. ಫೈ. 91—95, ಷಿಕಾರಿಪುರದ ಫಾರೆಸ್ಟು ಸಬ್ ಡಿವಿಜನ್ ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ 1896ನೇ ಏಪ್ರೆಲ್ 10ನೇ ಮರ್ಕುಂ 9316.—ಫಾ. ಫೈ. 91—95ನೇ ನಂಬರ ಇಸ್ತಿಹಾರ್ನಾಮೆಯಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಮೊಂದು ತಿಂಗಳ ರಜಾವನ್ನು ಎರಡು ತಿಂಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಫಾರೆಸ್ಟುಗಳ ಯಕ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ ಮಾಂಟೇರೊ ಯವರು ಸದರೀ ಮೆಸ್ಟರ್ ಬಿ. ಶ್ರೀನಿವಾಸರಾಯರು ರಜಾದಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಷಿಕಾರಿಪುರದ ಫಾರೆಸ್ಟು ಸಬ್ ಡಿವಿಜನ್ ಚಾರ್ಜಿನಲ್ಲಿ ಯಿರತಕ್ಕದ್ದು.

ಮೊಕಾಂ ಮೈಸೂರ್, ತಾರೀಖು 25ನೇ ಏಪ್ರೆಲ್ 1896.

ನಂ. 9575.—ರ. 3696, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ತಿರಮಕೂಡು ನರಸೀಪುರದ ತಾಲ್ಲೂಕು ಅಮಲ್ದಾರರಾದ ಜಿ. ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಶಿರಸ್ತೇದಾರರು ಸದರೀ ಜಿ. ಹನುಮಂತರಾಯರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರವಿನ್ಯೂ,
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮಿಲಿಟೆರಿ.

ಇಸ್ತಿಹಾರ್ನಾಮಾ.

ತಾರೀಖು 21ನೇ ಏಪ್ರೆಲ್ 1896.

ಪೆನ್ಷನ್ ಮೇಲೆ ನಿವೃತ್ತರಾದ ಕಮಾಂಡೆಂಟ್ ರಾಮರಾವ್ ರಣರವರೆ, ಆರ್. ಬಿ. ಯವರಿಗೆ ಬದಲಾಗಿ ರಿಸಾಲ್ದಾರ್ ಕೃಷ್ಣರಾಯರನ್ನು 1896ನೇ ಏಪ್ರೆಲ್ 11ನೇ ಮರ್ಕುಂ ಲಾಗಾಯತು ಮೈಸೂರ್ ಸವಾರ್ ಲೋಕಲ್ ಸರ್ವಿಸ್ 1ನೇ ರೆಜಿಮೆಂಟ್ ಕಮಾಂಡೆಂಟರಾಗಿ ಘನವನ್ನು ಹೊಂದಿದ ಶ್ರೀಮನ್ ಮಹಾರಾಜ್ಞೀ ರೀಜಂಟ್, ಸಿ. ಐ., ಯವರು ಮೊಕರರ್ ಮಾಡಿರುತ್ತಾರೆ.

ಮೈಸೂರ್ ಸವಾರ್ ಲೋಕಲ್ ಸರ್ವಿಸ್ 1ನೇ ರೆಜಿಮೆಂಟಿನಲ್ಲಿ ಇದರಡಿ ಕಂಡ ಬಡ್ತಿಗಳು 1896ನೇ ಏಪ್ರೆಲ್ 16ನೇ ಮರ್ಕುಂ ಲಾಗಾಯತು ಮಾಡಲ್ಪಟ್ಟಿರುತವೆ:—

ಹೆಸರು.	ಹುದ್ದೆಯಿಂದ.	ಹುದ್ದೆಗೆ.	ಷರಾ.
ಮಹಮ್ಮದ್ ಅಲ್ಲಿ ..	ಜಮಾದಾರ್ ..	ರಿಸಾಲ್ದಾರ್, ನಾಲ್ಕನೇ ಗ್ರೇಡ್	ಪೆನ್ಷನ್‌ಮೇಲೆ ನಿವೃತ್ತರಾದ ರಿಸಾಲ್ದಾರ್ ತಿಮ್ಮಾಜಿ ಯಲೆಷಾವರಿಗೆ ಬದಲಾಗಿ.
ಸಯ್ಯದ್ ಫಕ್ರುದ್ದಿನ್ ..	ದಫಾದಾರ್ ..	ಜಮಾದಾರ್	ಬಡ್ತಿ ಮಾಡಲ್ಪಟ್ಟ ಜಮಾದಾರ್ ಮಹಮ್ಮದ್ ಅಲ್ಲಿಯವರಿಗೆ ಬದಲಾಗಿ.

ಹುಕುಂ ಬಮೋಜಿಬ್,

ಪಿ. ಯಚ್. ಮೆಕ್ಇಂಟೈರ್, ಲೆ. ಕರ್ನಲ್,
ಮಿಲಿಟೆರಿ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 1086. ಮೊಕ್ಕಾಂ ಮೈಸೂರ್, ತಾರೀಖು 16ನೇ ಏಪ್ರೆಲ್ 1896.

ಇದರಡಿ ಕಂಡ ಸ್ಥಾನಗಳು ದಾವಣಗೆರೆ ತಾಲ್ಲೂಕು ಕಡ್ಲಬಾಳ ಆಂಜನೇಯಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ:—

1. ಮ॥ ರಾ॥ ಕಡ್ಲಬಾಳ ಶಾನುಭೋಗರಾದ ನರಸಿಂಗರಾಯರು.
2. ಡಿಟೋ ಕಡ್ಲಬಾಳದ ಗುರುರಾಯರು.
3. ಡಿಟೋ ಡಿಟೋ ಪಟೇಲ್ ಚನ್ನಪ್ಪನವರು.

ಹುಕುಂ ಬಮೋಜಿಬ್,

ಎ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೆಕ್ರೆಟರಿ.

332

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 17.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 30, ಸ್ನ 1896.

IIನೇ ಭಾಗ.

ಇಂಡ್ಯಾ ಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಅರ್ಗ್ಲಾಂಡ್ ಪೋರ್ಟರು ಬ್ರದರಸ್ರ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಜೋರ್ರ್ಯಾಮರವರ ಡಿಟೋ	,, 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ 10½ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನಪತ್ರಿಕೆ.

ಸರ್ 1896ನೇ ಇಸವಿ ಫೆಬ್ರುವರಿ ತಾರೀಖು 26.

ಸರ್ 1897ನೇ ಸಂವತ್ಸರಾನಂತರ ಎಲ್ಲಾ ದೇಶೀ ಪರೀಕ್ಷೆಗಳಿಗೂ ಪರೀಕ್ಷ್ಯರು ಅವರ ಪ್ರಶ್ನ ಪತ್ರಿಕೆಗಳಲ್ಲಿ ಸಂಸ್ಕೃತ ಭಾಷೆಯನ್ನು ದೇವನಾಗರಿ ಅಕ್ಷರದಲ್ಲೇ ಬರೆಯತಕ್ಕದ್ದು.

ಇಂಗ್ಲೀಷ್ ಭಾಷೆಯನ್ನ ತಮ್ಮ ದೇಶಭಾಷೆಯಾಗಿ ಉಳ್ಳಂಥಾ ಪರೀಕ್ಷ್ಯೆಯರು ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ಕ್ರೀಟನ್ಸ್ ಷಿಲಿಂಗ್ ಹಿಸ್ಟರಿ ಆಫ್ ಇಂಗ್ಲಂಡ್ ಎಂಬದರಲ್ಲಿರುವಂತೆ ಇಂಗ್ಲಾಂಡ್ ದೇಶದ ಚರಿತ್ರೆಯನ್ನು ಮತ್ತು ಮಿಸ್ ಕೀಲೀಸ್ ಲೆಸ್ಸನ್ಸ್ ಆನ್ ಡೊಮೆಸ್ಟಿಕ್ ಎಕಾನಮಿ ಎಂಬ ಗ್ರಂಥದಲ್ಲಿರುವಂತೆ ಡೊಮೆಸ್ಟಿಕ್ ಇಕಾನಮಿ ಅಂದರೆ ಗೃಹಕೃತ್ಯ ನಡಿಸುವ ಕ್ರಮ ಗ್ರಂಥವನ್ನು ತಮ್ಮ ಐಚ್ಛಿಕ ವಿಷಯಗಳಿಗಾಗಿ ತೆಗೆದುಕೊಳ್ಳಬಹುದು.

ಸರ್ 1896ನೇ ಇಸವಿ ಫೆಬ್ರುವರಿ ತಾರೀಖು 26.

ಇದರಡಿ ಕಂಡ ಭಾಷಾ ಗ್ರಂಥಗಳು ಸರ್ 1897ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ದೇಶಭಾಷಾ ಅಪ್ಪರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ.

ಕನ್ನಡ, ಪದ್ಯ .. (1) ಕಬ್ಬಿಗರಕಾವ ಪದ್ಯಗಳು 239ರಿಂದ ಕಡೇವರೆಗೆ (ಓದಲವಶ್ಯಕ ವಿಲ್ಲದ ಪದ್ಯಗಳು ಗೊತ್ತು ಮಾಡಲ್ಪಡುತ್ತವೆ.)

(2) ಸೂರಸೇನ ಚರಿತ್ರೆ (ಒತೆಲೊ) ಬಸವಪ್ಪಶಾಸ್ತ್ರಿ ಮತ್ತು ಸಿ. ಸುಬ್ಬರಾವು ಬಿ. ಯೆ. ಇವರುಗಳಿಂದ ರಚಿಸಲ್ಪಟ್ಟದ್ದು.

(3) ಕರ್ಣಾಟಕ ಕಾದಂಬರಿ ಮೊದಲನೇ ಭಾಗ, ಪದ್ಯಗಳು 584ರಿಂದ 684ರ ವರೆಗೆ.

ಗದ್ಯ .. (1) ಅದ್ಭುತರಾಮಾಯಣ (ಕರ್ನಾಟಕ ಕಾವ್ಯಮಂಜರಿ ಪ್ರತಿ) ಪುಟಗಳು 1—70.

(2) ಆರ್ಯಕೀರ್ತಿ ಮೆ|| ಸಿ. ವಾಸುದೇವಯ್ಯನವರಿಂದ ರಚಿಸಲ್ಪಟ್ಟದ್ದು, (ಕರ್ನಾಟಕ ಗ್ರಂಥಮಾಲೆ ಪ್ರತಿ) ಪುಟಗಳು 1—40.

ಸಂಸ್ಕೃತ .. (1) ರಘುವಂಶ ಸರ್ಗಗಳು 7 ಮತ್ತು 10.

(2) ಪಂಚತಂತ್ರ ಮುಂಬೈ ಛಾಪು 2ನೇ ಭಾಗ ಪುಟಗಳು 1—41.

ಫಾರಸಿ ಪದ್ಯ .. ದಿವಾನಿಫೆನಿ (ನಾವಲ್‌ಕಿಷೋರ್ ಮುದ್ರಾಕ್ಷರಶಾಲೆಯ 1887ನೇ ಛಾಪು) 7ನೇ ಪುಟದಿಂದ 104ನೇ ಪುಟದ ಕೊನೇ ವರೆಗೆ.

ಗದ್ಯ .. ಮಂಮ್ತಾ ಖಾಹಾ ಯೆತಿ ಫಾರಸಿ ಹಿಸ್ಸೇಯಿ ಚಹರಂ ರೆವರೆಂಡ್ ಇ. ಸೆಲ್. ಯವರಿಂದ ರಚಿಸಲ್ಪಟ್ಟದ್ದು.

ಹಿಂದುಸ್ತಾನಿ ಪದ್ಯ .. ದಿವಾನಿ ಮೋಮಿನ್ (ನಾವಲಕಿಷೋರ್ ಮುದ್ರಾಕ್ಷರಶಾಲೆಯ 1885ನೇ ಛಾಪು) 74ನೇ ಪುಟದಿಂದ 148ನೇ ಪುಟದ ವರೆಗೆ.

ಗದ್ಯ .. ಟಾಲಿಂ, ಸಿರಾಜುದ್ದಿನ್ ಅಹಮದ್ ಸಾಹೆಬರಿಂದ ರಚಿಸಲ್ಪಟ್ಟದ್ದು.

ಕರ್ನಾಟಕ ಪಂಡಿತ ಪರೀಕ್ಷೆ.

ಕಾವ್ಯಾವಲೋಕನ ಅಥವ ಅಪ್ರತಿಮ ವೀರಚರಿತೆ ಎಂಬದಕ್ಕೆ ಬದಲಾಗಿ ನಾಗವರ್ಮ ಕಾವ್ಯಾವಲೋಕನ ಮತ್ತು ಅಪ್ರತಿಮ ವೀರಚರಿತ್ರೆಯನ್ನು ನಿಯಮಿಸಲ್ಪಟ್ಟಿರುತ್ತೆ.

ಇದರಡಿಕಂಡ ಭಾಷಾ ಗ್ರಂಥಗಳು ಸರ್ 1897ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ.

ಕನ್ನಡ ಪದ್ಯ .. (1) ಪದ್ಯಸಾರ ಪದ್ಯಗಳು 72ರಿಂದ 128ರ ವರೆಗೆ (ಹೊಸಛಾಪು.)

(2) ರಾಮಾಭ್ಯುದಯ ಕಥಾಕುಸುಮ ಮಂಜರಿ, ಸುಂದರಕಾಂಡ ನಾಲ್ಕನೇ ಸಂಧಿ.

(3) ಸುಮತಿಶತಕ 50 ಪದ್ಯಗಳು 1896ನೇ ವರುಷದ ಪರೀಕ್ಷೆಗೆ ನಿಯಮಿಸಲ್ಪಟ್ಟ ಪದ್ಯಗಳು ವಿನಹ ಮಿಕ್ಕ ಪದ್ಯಗಳಲ್ಲಿ.

ಗದ್ಯ .. ರಾಜಶೇಖರ ಚರಿತ್ರೆ. ಮೆ|| ಸೋಮನಾಥಯ್ಯನವರಿಂದ ತೆಲುಗಿನಿಂದ ಭಾಷಾಂತರ ಮಾಡಲ್ಪಟ್ಟದ್ದು. ಪೂರ್ವಾರ್ಧಭಾಗ.

ಪದ್ಯಸಾರದಲ್ಲಿನ ಪದ್ಯಗಳು ವಿನಹ ಮೇಲೆ ನಿಯಮಿಸಲ್ಪಟ್ಟಿರುವ ಗ್ರಂಥಗಳೆಲ್ಲಾ ಇಲಾಖೆಯವರಿಂದ ಒಂದೇ ಪುಸ್ತಕವಾಗಿ ಛಾಪಿಸಲ್ಪಡುತ್ತವೆ.

ತೆಲುಗು (1) ನಳಚರಿತ್ರಮು.

(2) ವೇಣೀ ಸಂಹಾರ ಮತ್ತು ಮಾಳವಿಕಾಗ್ನಿಮಿತ್ರ ನಾಟಕಗಳ ಕಥೆ (ಮದ್ರಾಸ್ ಸ್ಕೂಲ್ ಬುಕ್ಕು ಮತ್ತು ವರ್ನಾಕ್ಯುಲರ್ ಲಿಟ್ರೇಚರ್ ಸೊಸೈಟಿಯವರಿಂದ ಛಾಪಿಸಲ್ಪಟ್ಟದ್ದು.

334

	(3)	ಕಂಠಪಾಠ. ನಳಚರಿತ್ರವು ಪುಟಗಳು 16—30.
ಅರವ	(1)	ಪಂಚತಂತ್ರಂ. ಪ್ರಸ್ತಾವನೆ ಮತ್ತು ಮೊದಲನೇ ಭಾಗ.
	(2)	ಎರಡನೇ ನಂಬರು ನೀತಿಮಂಜರಿ.
	(3)	ಕಂಠಪಾಠ ಎರಡನೇ ನಂಬರು ನೀತಿಮಂಜರಿ ಪದ್ಯಗಳು 65—128.
ಹಿಂದುಸ್ತಾನಿ ಪದ್ಯ	..	ಮಜಮುವ—ಇಸರ್ಖ ಹಿಸ್ಸೇದುಯಂ ಎರಡನೇ ಭಾಗ.
ಗದ್ಯ	..	ಖಸಾಸಿಹಿಂಡ್, ಮೊದಲನೇ ಭಾಗ ಮುಫಿ—ದಿ—ಯಂ—ಮುದ್ರಾಕ್ಷರಶಾಲೆ, ಲಾಹೋರ್.
ಸಂಸ್ಕೃತ ಮೊದಲನೇ ಭಾಷೆ.	(1)	ಚಂಪುರಾಮಾಯಣ ಕಾಂಡಗಳು 4 ಮತ್ತು 5.
	(2)	ಭರ್ತೃಹರಿ ನೀತಿಶತಕ ಪೂರ್ತಿಯಾಗಿ; ಮತ್ತು ವೈರಾಗ್ಯಶತಕ ಮೊದಲಿನಿಂದ 50 ಪದ್ಯಗಳು.
ಸಂಸ್ಕೃತ ಎರಡನೇ ಭಾಷೆ.	..	ವಿಕ್ರಮಾರ್ಕ ಚರಿತ್ರೆ. ಒಂಭತ್ತನೇ ಕಥೆಯಿಂದ ಮುಂದಿನ ಎಂಟು ಕಥೆಗಳು. (ಸ್ವಲ್ಪ ಹೆಚ್ಚು ಕಡಮೆ 1896ನೇ ವರುಷಕ್ಕೆ ನಿಯಮಿಸಲ್ಪಟ್ಟಿರುವಷ್ಟು.)
ಫಾರಸಿ ಮೊದಲನೇ ಭಾಷೆ. ..	(1)	ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ.)
	(2)	ಸವಾರಾಯಿಖಿರಾದ್ (ಪಂಜಾಬ್ ಛಾಪ) ಪುಟಗಳು 1—112.
ಫಾರಸಿ ಎರಡನೇ ಭಾಷೆ. ..	(1)	ಫಾರಸಿ ಎರಡನೇ ಪುಸ್ತಕ ಪಂಜಾಬ್ ಛಾಪ.
	(2)	ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ) ಪುಟಗಳು 1—48.
ಲ್ಯಾಟಿನ್ ಎರಡನೇ ಭಾಷೆ ..		ಸೀಜರ್ ಡಿಬೆಲೊ ಗ್ಯಾಲಿಕೊ ಎರಡನೇ ಪುಸ್ತಕ.

ತಾರೀಖು 8ನೇ ಏಪ್ರೆಲ್ ಸರ್ 1896ನೇ ಇಸವಿ.

ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ಸರ್ 1896ನೇ ಇಸವಿ ಏಪ್ರೆಲ್ ತಾರೀಖು 6.

ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಲೋವರ್ ಸೆಕಂಡರಿ ಮತ್ತು ಪ್ರೈಮರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸರ್ 1896ನೇ ಇಸವಿ ಜೂನ್ ತಿಂಗಳ ತಾರೀಖು 1ನೇ ಸೋಮವಾರ ಮತ್ತು 2ನೇ ಮಂಗಳವಾರ ಈ ದಿವಸಗಳಲ್ಲಿ ಮೈಸೂರಲ್ಲಿ ಇದರಡಿ ಕಂಡ ಕಾಲಕ್ರಮವಾಗಿ ನಡೆಯಿಸಲ್ಪಡುವುದು.

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯಗಳು.
ಮೊದಲನೆಯ ದಿವಸ	10ರಿಂದ 1ರ ವರೆಗೆ	(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ (The art of oral teaching) ಯಾವುದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on a given subject).	10ರಿಂದ 1ರ ವರಿಗೆ	(a) ಅಪ್ಪರ್ ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ.	10ರಿಂದ 11—30ರ ವರೆಗೆ	(a) ಸಾಮಾನ್ಯವಾಗಿ ಮುಖತಃಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೊ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ
	2ರಿಂದ 5ರ ವರಿಗೆ	(b) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳ ಸಂವಿಧಾನ (Organization) ಸ್ಕೂಲ್ ರಜಿಸ್ಟರ್‌ಗಳ ಮಾದಿರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ ಮತ್ತು ಸರ್ಕಾರೀ ಕಾಗದಗಳನ್ನು ಬರೆಯುವ ಸರಿಯಾದ ಕ್ರಮ.	2ರಿಂದ 4ರ ವರಿಗೆ	(b) ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline), ಸ್ಕೂಲ್ ರಿಜಿಸ್ಟರುಗಳ ಮಾದಿರಿ ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ.	2ರಿಂದ 3—30ರ ವರೆಗೆ	(b) ಸ್ಕೂಲ್ ರಿಜಿಸ್ಟರುಗಳ ಮಾದರಿ ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವರೀತಿ.
ಎರಡನೆಯ ದಿವಸ	10ರಿಂದ 11-30ರ ವರಿಗೆ.	(c) ನೀತ್ಯನುಶಾಸನ ವಿಧಾನ (Principles of moral discipline) ಶೀಲ ಸ್ವಭಾವೋತ್ಪಾದನ (Formation of habits and character).				

ಒಂದೊಂದು ಪತ್ರಿಕೆಗೂ ಕ್ಲುಪ್ತ ಮಾಡಿರುವ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವುದಿಲ್ಲ. ತೇರ್ಗಡೆಯಾದವರಲ್ಲಿ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

ಬರಹ ಪರೀಕ್ಷೆಗಳ ಫಲಿತಾಂಶವು 1896ನೇ ಇಸವಿ ಜೂನ್ ತಿಂಗಳು 12ನೇ ತಾರೀಖನ್ನು ಅತಿಕ್ರಮಿಸದೆ ಪ್ರಕಟಿಸಲ್ಪಡುತ್ತದೆ. ವ್ಯವಹಾರಿಕ ಪರೀಕ್ಷೆಯು (Practical test) 1896ನೇ ಇಸವಿ ಜೂನ್ ತಿಂಗಳು 17ನೇ ತಾರೀಖಿನಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು.

ಬರಹ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವುದಿಲ್ಲ.

ಇದರಡಿ ಕಂಡ ನಿಬಂಧನೆಗಳಿಗೆ ಪರೀಕ್ಷ್ಯರು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ಪ್ರಸ್ತಾವಾರ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ಪರೀಕ್ಷ್ಯನಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದ ಮೇಲೆ ಬರುವ ಯಾವ ಪರೀಕ್ಷ್ಯನಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಹ ಪ್ರವೇಶಿಸಲು ಯಾವ ಪರೀಕ್ಷ್ಯನಿಗೂ ಅವಕಾಶ ಉಂಟಾಗಲಾರದು ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ಪರೀಕ್ಷ್ಯನೇ ಆಗಲಿ ಮತ್ತೊಬ್ಬ ಪರೀಕ್ಷ್ಯನೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೂಡಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರಿಗೆ ತಿಳಿಸಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರವನ್ನಾಗಲಿ, ತೆಗದುಕೊಂಡು ಹೋಗಲು ಯಾವ ಪರೀಕ್ಷ್ಯನಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವುದಿಲ್ಲವು. ಯಾವ ಪರೀಕ್ಷ್ಯನಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರಿಗೆ ರಿಪೋರ್ಟು ತಿಳಿಸಲ್ಪಡುವುದು.

(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಅಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಪಿ ಎನ್. ಪೂರ್ಣಯ್ಯ,
ಆ॥ ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಮೈಸೂರ್ ಶ್ರೀಮ ಕಂಪ್ಟ್ರೋಲರ್ ಸಾಹೆಬರವರಿಂದ.

ಖಜಾನೆ ಇಲಾಖಾ ಯಲ್ಲಾ ಡೆಪ್ಯುಟಿ ಕಮಿಷನರವರುಗಳಿಗೆ.
ತಾರೀಖು 10ನೇ ಏಪ್ರೆಲ್ 1896ನೇ ಇಸವಿ.

ಸರ್ಕ್ಯೂಲರ್ ನಂ. 447—54—ಆರ್. ಇ.—7.

ಪದೇ ಪದೇ ಈ ಆಫೀಸಿನಿಂದ ತಿಳಿಯಪಡಿಸಿದಾಗ್ಯೂ ಅಬ್ಕಾರಿ ಚರ್ಲಗಳನ್ನ ಇನ್ನೂ ಅತೃಪ್ತಿಕರವಾಗಿ ತಯಾರ್ಮಾಡಿ ರವಾನಿಸುವದನ್ನು ನೋಡಿ ಕಂಟ್ರೋಲರಿಯವರು ವಿಷಾದಗೊಂಡು ಈ ಕೆಳಗೆ ಕಂಡ ವಿಧಾಯಕವನ್ನು ತಿಳಿಯಪಡಿಸುವದಲ್ಲದೆ ಮುಂದೆ ಸದರೀ ಮೇರೆ ನಡದುಕೊಳ್ಳುವ ಭಾಗದಲ್ಲಿ ಖಜಾನೆ ಇಲಾಖಾ ಡೆಪ್ಯುಟಿ ಕಮಿಷನರಿಯವರು ತಾಲ್ಲೂಕು ಅಮಿಲ್ದಾರಿಗೆ ಖಂಡಿತವಾದ ಹುಕುಂ ಕೊಡಬೇಕೆಂದು ಕೋರಿಕೊಳ್ಳುತ್ತಾರೆ.

(1). ಚರ್ಲಗಳಲ್ಲಿ ಕಾಣಿಸಲ್ಪಡುವ ಫಿರ್ಕಾ ಹೆಸರು ನಂಬರು ಮತ್ತು ಇಜಾರದಾರನ ಹೆಸರು ಸಹ ಎಕ್ಸೈಜ್ ಕಮಿಷನರ್‌ಯವರಿಂದ ಈ ಆಫೀಸಿಗೆ ತಲಪಿರುವ ಹರಾಜು ಪಟ್ಟಿಯಲ್ಲಿ ಕಂಡಂತೆ ಒಂದಕ್ಕೊಂದು ತಾಳೆ ಇರುವಂತೆ ಅದೇ ನಂಬರು ಮತ್ತು ಹೆಸರು ಕಾಣಿಸಲ್ಪಡಬೇಕು.

(2) ಪ್ರತಿ ಒಂದು ಫಿರ್ಕಾಗಾಗಿ ಒಂದೊಂದು ಚರ್ಲ ಉಪಯೋಗಿಸಬೇಕೇಹೊರತು ಅನೇಕ ಫಿರ್ಕಾಗಳ ಇಜಾರದಾರ ಒಬ್ಬನೇಯಾಗಿರುತ್ತಾನೆಂಬ ಅಭಿಪ್ರಾಯದ ಮೇಲೆ ಅವನಿಗೆ ವಹಿಸಲ್ಪಟ್ಟ ಒಟ್ಟು ಫಿರ್ಕಾಗಳಿಗಾಗಿ ಒಂದೇ ಚರ್ಲ ತಯಾರ್ಮಾಡಿ ರವಾನಿಸತಕ್ಕದ್ದಲ್ಲ.

(3) ಯಾವ ಸಾಲ್ ಮತ್ತು ಮಾಹೆಗಾಗಿ ಗುತ್ತಿಗೆ ಮೊಬಲಗು ವಸೂಲ್ಮಾಡಲ್ಪಟ್ಟಿರುತ್ತೋ ಅವುಗಳನ್ನ ಚಲನ್ನಲ್ಲಿ ಎಂದಿಗೂ ಕಾಣಿಸದೆ ಇರಕೂಡದು.

(4) ಖಜಾನೆಗೆ ಹಣ ಪಾವತಿಯಾದ ತಾರೀಖು ಕಾಣಿಸಲ್ಪಡಲು ಚಲನ್ ಕೆಳಭಾಗದಲ್ಲಿ ಬಿಟ್ಟಿರುವ ಜಾಗಾದಲ್ಲಿ ಟ್ರೆಜರಿ ಇಲಾಖೆಯವರೇ ತಾರೀಖನ್ನ ಕಾಣಿಸಬೇಕೇಹೊರ್ತು ಇಜಾರದಾರು ಅದನ್ನ ಬರಿಯಕೂಡದು.

(5) ಚಲನ್‌ಗಳಲ್ಲಿ ಮೊಬಲಗು ವಗೈರೆ ಯಾವದನ್ನಾದರೂ ತಿದ್ದಿದಲ್ಲಿ ಅದಕ್ಕೆ ಟ್ರೆಜರಿ ಆಫಿಸರವರ ರುಜು ಅಗತ್ಯವಾಗಿ ಆಗಿರಬೇಕು.

(6) ಚಲನ್‌ನಲ್ಲಿ ಕಾಣಿಸಲ್ಪಡುವ ಮೊಬಲಗು ಅಕ್ಷರ ಮತ್ತು ಸಂಖ್ಯೆಯಲ್ಲಿ ಸಹ ಒಂದಕ್ಕೊಂದು ಭೇದವಿಲ್ಲದಂತೆ ಸರಿಯಾಗಿ ಇರುತ್ತೆಂಬುವದನ್ನ ಜಾಗರೂಕತೆಯಿಂದ ನೋಡಿಕೊಳ್ಳಬೇಕು.

2. ಈ ಮೇಲ್ಕಂಡ ವಿಧಾಯಕದಂತೆಯಾಗಲಿ ಮತ್ತು ಇದಕ್ಕೆ ಹಿಂದೆ ಇದೇ ವಿಚಾರದಲ್ಲಿ ಕೊಡಲ್ಪಟ್ಟ ಸರ್ಕ್ಯೂಲರ್‌ನಂತೆಯಾಗಲಿ ತಯಾರ್ಮಾಡಲ್ಪಡದೇ ಇರುವ ವಿಶಿಷ್ಟ ಚಲನ್‌ಗಳೂ ವಾಪಸ್ ಮಾಡಲ್ಪಡುತ್ತದೆ.

ಈ. ಆರ್. ಸುಬ್ಬಾಯರ್,
ಕಾಂಪ್‌ಟ್ರೋಲರ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 321.

ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ವೃತ್ತೂರು ಸಮ್ಮತು ಜೋಡಿ ಶಾಮರಹಳ್ಳಿಯಲ್ಲಿರುವ ಮೃತಪಟ್ಟ ನಾರಣಪ್ಪನವರ ಮಕ್ಕಳು 1ನೇ ವೆಂಕಟಶಾಮಯ್ಯ, 2ನೇ ಸುಬ್ಬಾಯಪ್ಪನವರು.

ಮೈನರಾದ ಜೋಡಿ ಶಾಮರಹಳ್ಳಿ ಸ್ಥಳದ ಮೇಲ್ಕಂಡ ಘಾತೀ ನಾರಣಪ್ಪನವರ ಮಕ್ಕಳಾದ 3ನೇ ರಾಮಯ್ಯ, 4ನೇ ಲಕ್ಷ್ಮಯ್ಯ ಇವರುಗಳ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 3ನೇ ರಾಮಯ್ಯ, 4ನೇ ಲಕ್ಷ್ಮಯ್ಯ ಇವರಿಗೆ 1ನೇ ವೆಂಕಟಶಾಮಯ್ಯ, 2ನೇ ಸುಬ್ಬಾಯಪ್ಪ ಇವರುಗಳು ಅಣಾಂದರಾಗಬೇಕೆಂಬ ಹಕ್ಕಿನಮೇಲೆ ಜೋಡಿ ಶಾಮರಹಳ್ಳಿ ಸ್ಥಳದ 1ನೇ ವೆಂಕಟಶಾಮಯ್ಯ, 2ನೇ ಸುಬ್ಬಾಯಪ್ಪ ಇವರುಗಳು ಸದರೀ ಮೈನರುಗಳ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1896ನೇ ಇಸವಿ ಜೂನ್ ತಾರೀಖು 3ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

1896ನೇ ಇಸವಿ ಮಾರ್ಚಿ ತಿಂಗಳ 5ನೇ ತಾರೀಖಿನಲ್ಲಿ ಕೋರ್ಟಿ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 322.

ಮೃತಪಟ್ಟ ಇಸ್ಮಾಲ್‌ಸಾಬಿ ಯಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ತುಮಕೂರು ಡಿಸ್ಟ್ರಿಕ್ಟ್ ಪಾವಗಡ ತಾಲ್ಲೂಕು ರಾಯಚರ್ಲು ಹೋಬಳಿ ನಾಗಲ್‌ಮಡಿಕೆಯಲ್ಲಿರುವ ಜೇನಬಿ ಮತ್ತು ವಜೀರ್‌ಬಿ, ಮೃತಪಟ್ಟ ಸದರೀ ಇಸ್ಮಾಲ್‌ಸಾಬಿ ಯಂಬವರಿಗೆ ಹೆಂಡತಿ ಮತ್ತು ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ, ಮೇಲ್ಕಂಡ ನಾಗಲ್‌ಮಡಿಕೆ ಸ್ಥಳದ ಜೇನಬಿ ಮತ್ತು ವಜೀರ್‌ಬಿ ಇವರು ಡಿಟ್ಟೋ ನಾಗಲ್‌ಮಡಿಕೆ ವಾಸಸ್ಥರಾಗಿ ಮೃತಪಟ್ಟ ಇಸ್ಮಾಲ್‌ಸಾಬಿಯವರ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜೇನಬಿ ಮತ್ತು ವಜೀರ್‌ಬಿ ಇವರ ಅರ್ಜಿಯನ್ನು ಸನ್ 1896ನೇ ಇಸವಿ ಜೂನ್ ತಿಂಗಳ ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಇಸ್ಮಾಲ್‌ಸಾಬಿ ಯಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಮಾರ್ಚಿ ತಿಂಗಳ 3ನೇ ತಾರೀಖಿನಲ್ಲಿ ಕೋರ್ಟಿ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1895—96ನೇ ಇಸವಿ ಮಿ|| ಅರ್ಜೀ ನಂಬರ್ 328.

ಮೃತಪಟ್ಟ ಹಕೀಂ ಅಬ್ದುಲ್‌ಕರೀಂ ಸಾಹೆಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ರಾಣಾಶಿಂಗನಪೇಟೆಯಲ್ಲಿ ಇರುವ, 1ನೇ ಜನ್ನಾಬಿ 2ನೇ ಮಹಮ್ಮದ್‌ಸಾಬಿ, 3ನೇ ಅಮೀನಾಬಿ 4ನೇ ಆಷಾಬಿ ಇವರುಗಳು, ಮೃತಪಟ್ಟ ಸದರೀ ಹಕೀಂ ಅಬ್ದುಲ್ ಕರೀಂಸಾಹೆಬರಿಗೆ 1ನೇಯವಳು ಹೆಂಡತಿ 2—3—4ನೇ ಅರ್ಜಿದಾರ್ರು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ರಾಣಾಶಿಂಗನಪೇಟೆ ಸ್ಥಳದ ಜನ್ನಾಬೀ ವಗೈರೇರು, ಡಿಟ್ಟೋ ರಾಣಾಶಿಂಗನಪೇಟೆ ವಾಸಸ್ಥರಾಗಿ ಮೃತಪಟ್ಟ ಹಕೀಂ ಅಬ್ದುಲ್‌ಕರೀಂ ಸಾಹೆಬರ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜನ್ನಾಬೀ ವಗೈರೇರ ಅರ್ಜಿಯನ್ನು ಸನ್ 1896ನೇ ಇಸವಿ ಜೂನ್ ತಿಂಗಳ ತಾರೀಖು 15ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಕೀಂ ಅಬ್ದುಲ್‌ಕರೀಂ ಸಾಹೆಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಮಾರ್ಚಿ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟಿ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1895-96ನೇ ಇಸವಿ ಮಿ॥ ಅರ್ಜೀ ನಂಬರ 331.

ಮೃತಪಟ್ಟ ನರಶಿಂಗ್ ಯಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮಾಗಡಿ ಕಸಬೆಯಲ್ಲಿ ಇರುವ ಹೀರಾಮಲ್ ಶಿಂಗರ ಮಗ ಭವಾನ್‍ಶಿಂಗ್, ಮೃತಪಟ್ಟ ಸದರೀ ನರಶಿಂಗ್ ಯಂಬುವರಿಗೆ ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ಸ್ಥಳದ ಭವಾನ್‍ಶಿಂಗ್ ಯಂಬವರು, ಮಾಗಡಿ ವಾಸಸ್ಥರಾಗಿ ಮೃತಪಟ್ಟ ನರಶಿಂಗ್ ಯಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭವಾನ್‍ಶಿಂಗರ ಅರ್ಜಿಯನ್ನು ಸನ್1896ನೇ ಇಸವಿ ಜೂನ್ ತಿಂಗಳ ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಶಿಂಗ್ ಯಂಬುವರ ಆಸ್ತಿಗೆ ಹಕ್ಕು ದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1896ನೇ ಇಸವಿ ಮಾರ್ಚಿ ತಿಂಗಳ 3ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 334.

ಬೆಂಗಳೂರ ಬಳ್ಳಾಪುರ ಪೇಟೆಯಲ್ಲಿ ಇರುವ 1ನೇ ಖಾತರ್‍ಬೀಬಿ ವುರಫ್ ಬಿಜಾಬೀ 6ನೇ ಪೆನ್ಷನ್ ಅಮಲ್‍ದಾರ್ ಮಹಮ್ಮದ್ ದಾವೂದ್‍ಖಾನ್‍ಸಾಹೆಬರು, ಮೃತಪಟ್ಟ ಫೌಸ್ದಾರ್ ಹಾಜಿ ಸಯ್ಯದ್ ನಸರುದ್ದೀನ್ ಸಾಹೆಬರ ಮೈನರ್ ಮಕ್ಕಳಾದ ಬೆಂಗಳೂರು ಬಳ್ಳಾಪುರಪೇಟೆಯಲ್ಲಿ ಇರುವ 2ನೇ ಫಾತಿಮಾನ್ನಿಸಾಬೇಗಮ್ಮ, 3ನೇ ರಹಿಮಾನ್ನಿಸಾಬೇಗಮ್ಮ, 4ನೇ ಸಯ್ಯದ್ ಮಹಮ್ಮದ್ ಅಬ್ದುಲ್‍ಮಜೀದ್, 5ನೇ ಸಯ್ಯದ್ ಮಹಮ್ಮದ್ ಅಬ್ದುಲ್ ಅಜೀಜ್ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 2ನೇ ಫಾತಿಮಾನ್ನಿಸಾಬೇಗಮ್ಮ, 3ನೇ ರಹಿಮಾನ್ನಿಸಾಬೇಗಮ್ಮ, 4ನೇ ಸಯ್ಯದ್ ಮಹಮ್ಮದ್‍ಅಬ್ದುಲ್ ಮಜೀದ್, 5ನೇ ಸಯ್ಯದ್ ಮಹಮ್ಮದ್ ಅಬ್ದುಲ್ ಅಜೀಜು ಇವರುಗಳಿಗೆ 1ನೇ ಖಾತರ್‍ಬೀಬಿ ವುರಫ್ ಬಿಜಾಬಿ ತಾಯಿಯು 6ನೇ ಮಹಮ್ಮದ್ ದಾವೂದ್‍ಖಾನ್‍ಸಾಹೆಬರು ಮಾವನು ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಬಳ್ಳಾಪುರಪೇಟೆಯಲ್ಲಿ ಇರುವ 1ನೇ ಖಾತರ್‍ಬೀಬಿ ವುರಫ್ ಬಿಜಾಬಿ 6ನೇ ಮಹಮ್ಮದ್ ದಾವೂದ್‍ಖಾನ್‍ಸಾಹೆಬರು, ಸದರೀ ಮೈನರುಗಳ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1896ನೇ ಇಸವಿ ಜೂನ್ ತಾರೀಖು 15ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

1896ನೇ ಇಸವಿ ಮಾರ್ಚಿ ತಿಂಗಳ 4ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1895-96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 362.

ಮೃತಪಟ್ಟ ದೇವಾಂಗದ ಸೊಂಡೇಕುಪ್ಪದ ನರಸಿಹ್ಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ರಣವೀರಶಟ್ಟಿ ಪ್ಯಾಟೆಯಲ್ಲಿ ಯಿರುವ ಭೋಗದ ನರಸಿಹ್ಮಯ್ಯ ಮೈನರು, ಗಾರ್ಡಿಯನ್ 1ನೇ ತಾಯಿ ರಾಮಕ್ಕಾ 2ನೇ ಮಲತಾಯಿ ಮುನಿಯಮ್ಮ ಯಿವರು, ಮೃತಪಟ್ಟ ಸದರೀ ಸೊಂಡೇಕುಪ್ಪದ ನರಸಿಹ್ಮಯ್ಯನವರಿಗೆ 1—2ನೇ ಅರ್ಜಿದಾರರು ಹೆಂಡತಿಯರು ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ರಣವೀರಶಟ್ಟಿ ಪ್ಯಾಟೆ ಸ್ಥಳದ ಭೋಗದ ನರಸಿಹ್ಮಯ್ಯ ಮೈನರ್, ಗಾರ್ಡಿಯನ್ 1ನೇ ರಾಮಕ್ಕಾ 2ನೇ ಮುನಿಯಮ್ಮ, ಡಿಟ್ಟೋ ಪ್ಯಾಟೆ ವಾಸಸ್ಥರಾಗಿ ಮೃತಪಟ್ಟ ಸೊಂಡೇಕುಪ್ಪದ ನರಸಿಹ್ಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭೋಗದ ನರಸಿಹ್ಮಯ್ಯ ಮೈನರ್, ಗಾರ್ಡಿಯನ್ ಮತ್ತು ತಾಯಿ 1ನೇ ರಾಮಕ್ಕಾ 2ನೇ ಮಲತಾಯಿ ಮುನಿಯಮ್ಮ ಇವರ ಅರ್ಜಿಯನ್ನು ಸನ್ 1896ನೇ ಇಸವಿ ಜುಲೈ ತಿಂಗಳ ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೊಂಡೇಕುಪ್ಪದ ನರಸಿಹ್ಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಮಾರ್ಚಿ ತಿಂಗಳ ನೇ ತಾರೀಖಿನಲ್ಲಿ ಕೋರ್ಟು ಮೊಹರ್‍ನಿಶಿ ನಮ್ಮ ದಸ್ತಖತ್ತೊನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‍ನಾಮೆ.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇಲೇಖಿನಲ್ಲಿ ನಮೂದಾಗುವ ಸ್ಟೇಟ್‍ಫಾರೆಸ್ಟುಗಳು ವಿನಹ ತುಮಕೂರು, ಮದ್ದಗಿರಿ, ಚಿಕ್ಕನಾಯಿಕನಹಳ್ಳಿ, ಶಿರಾ, ಗುಬ್ಬಿ, ತಿಪಟೂರ್, ಪಾವಗಡ, ಕುಣಿಗಲ್ ಈ ತಾಲ್ಲೂಕುಗಳ ಮತ್ತು ಕೊರಟಗೆರೆ, ಹುಲಿಯೂರ್, ತುರುವೇಕೆರೆ ಸಬ್ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟು ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು, ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ ಆಖ್ಯೆರವರಿಗೆ ಒಂದು ವರುಷ ಅಂದರೆ 1896—97ನೇ ಸಾಲಿಗೆ ಜಡದರಖಾಸ್ತುದಾರರಿಗೆ 1896ನೇ ಇಸವಿ ಜೂನ್ ತಾರೀಖು 1ರಲ್ಲು ಮಧ್ಯಾನ್ಹ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯುಟಿ ಕಮಿಷನರ್ ಅಥವಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮಿಷನರ್ ರೂಬರೂ ವಿಕ್ರಯಿಸಲ್ಪಡುವದು.

1. ದೇವರಾಯದುರ್ಗ
2. ಮದ್ದಗಿರಿ
3. ಕೋಟೆಕಲ್
4. ಬುಕ್ಕಾಪಟ್ಣ
5. ಮಂಚಲದೊರೆ
6. ಹುಲಿಯೂರದುರ್ಗ
7. ಕೆಂಪಲಾಪುರ
8. ಕಾದರೆಕಣಿವೆ
9. ತೀರ್ಥರಾಂಪುರ

II. ಕಡ ದರಖಾಸ್ತು ದಾರರು ತಮ್ಮ ದರಖಾಸ್ತು ಮಂಜೂರಾದ ನಂತರ ಮಂಜೂರಾದ ಕಂಟ್ರಾಕ್ಟು ಪಟ್ಟು ಮೊಬಲಗಿನ ನಾಲ್ಕು ತಿಂಗಳ ಖಿಸ್ತುಗಳಿಗೆ ಸಮನಾದ ಮೊಬಲಗು ನಗದಾಗಲಿ ಅಥವಾ ಕರ್ರೆನ್ಸಿ ನೋಟಾಗಲಿ ಹಾಜರ್ಮಾಡತಕ್ಕದ್ದು, ಹಾಗೆ ಮಾಡ ಲಿಕ್ಕೆ ತಪ್ಪಿದ ಪಕ್ಷ ಸದರೀ ಕಂಟ್ರಾಕ್ಟು ಕೊಡ್ಲೆ ಪುನಹ ಹರಾಜು ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಫುಂಟಾಗುವ ಲುಕ್ಸಾನಿಗೆ ಅವರನ್ನು ಗುರಿಮಾಡಲಾದೀತು.

III. ಮಂಜೂರಾದ ದರಖಾಸ್ತುದಾರರು 1896ನೇ ಜುಲೈ 1ನೇ ತಾರೀಖಿನಲ್ಲಿ ಕಂಟ್ರಾಕ್ಟು ಕೆಲಸದ ಮೇಲೆ ಪ್ರವೇಶಿಸಿ ತಮ್ಮ ಮೊದಲನೆ ಮಾಹೆ ಖಿಸ್ತನ್ನು 1896ನೇ ಇಸವಿ ಆಗಸ್ಟು 15ರಲ್ಲಿ ಆಗಲಿ ತತ್ಪೂರ್ವಆಗಲಿ ಪಾವತಿ ಮಾಡತಕ್ಕದ್ದು. ಆ ತರು ವಾಯ ಪ್ರತಿ ಮಾಹೆ ಖಿಸ್ತು ಆ ತಿಂಗಳು ಕಳದ ಮಾರನೆತಿಂಗಳ 15ನೇ ತಾರೀಖಿನಲ್ಲಿ ಆಗಲಿ ತತ್ಪೂರ್ವಆಗಲಿ ಪಾವತಿ ಮಾಡತ ಕ್ಕದ್ದು ಅಂಥಾ ಮಾಹೆವಾರಿ ಖಿಸ್ತುಗಳು ಡಿಪಾಜಟ್ಟು ಇಟ್ಟ ಮೊಬಲಗ್ಯೆ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಪಾವತಿ ಮಾಡತಕ್ಕದ್ದು. ಹಾಗೆ ಪ್ರತಿಮಾಹೆ 15ನೇ ತಾರೀಖಿನ ಒಳಗೇನೇ ಖಿಸ್ತು ಹೊಬಲಗು ಪಾವತಿಮಾಡದೆ ತಪ್ಪಿದಲ್ಲಿ ಆ ಲಾಗಾಯಿತು ಅಂಥಾ ಖಿಸ್ತು ಮೊ ಬಲಗ್ಯೆ ಸಾಲಿಯಾನಾ ಶೇಕಡಾ 6 ರೂಪಾಯಿನಂತೆ ಬಡ್ಡಿ ದಾಖಲ್‌ಮಾಲ್ಪಡುವದು.

IV. ಕಂಟ್ರಾಕ್ಟುದಾರರು ಕೊಡತಕ್ಕ ಮಾಹೆವಾರಿ ಖಿಸ್ತುಗಳ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆ ಮೇರಿಗೆ ಲೋಕಲ್ ಸೆಸ್ಸನ್ನು ಕೊಡಬೇಕು.

V. ಅವಿಚ್ಛಿನ್ನವಾಗಿ (2) ಯರಡು ತಿಂಗಳವರಿವಿಗೂ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೂ ಅಥವಾ ನೊವಕಾಶ ಮಾಡಿದರೂ ಸದರೀ ಕಂಟ್ರಾಕ್ಟು ಫ್ರುಟಗಿ ರದ್ದಾಗಲಿಕ್ಕೆ ಗುರಿಯಾಗಿ ಡಿಪಾಜಟ್ಟು ಪಟ್ಟು ಮೊಬಲಗನ್ನ ಗಣನಿಗೆ ತಾರದೆ ಷರತ್ತಿಗೆ ತಪ್ಪಿದ ಕಂ ಟ್ರಾಕ್ಟುದಾರನ್ನ ಲುಕ್ಸಾನಿಗೆ ಗುರಿಪಡಿಸಿ ಕಂಟ್ರಾಕ್ಟು ಪುನಹ ವಿಕ್ರಯಿಸಲ್ಪಡುವದು. ಸದರೀ ಡಿಪಾಜಟಿ ಮೊಬಲಗು ಗವರ್ನಮೆಂ ಟಿಗೆ ಸೇರಿಸಿಕೊಳ್ಳಲ್ಪಡುವದು ಮತ್ತು ಬಾಕಿ ಮೊಬಲಗು ವಿಷಯದಲ್ಲಿ ರೆವಿನ್ಯೂ ಕಂದಾಯದ ಮೊಬಲಗಿನಂತೆ ವಸೂಲಮಾಡಲ್ಪಡುವದು.

VI. ಕಂಟ್ರಾಕ್ಟುದಾರರು ಯಾವ ಗಿಡಗಳಿಂದ ಅರಗು ತೆಗೆದುಕೊಂಡು ಹೋಗುರ್ತಾರೋ ಅಂತಾ ಅರಗಿನ ಗಿಡಗಳನ್ನು ಕತ್ತ ರಿಸುವದಕ್ಕೂ ಸಾಗಿಸುವದಕ್ಕೂ ಯಾ ಅರೂಪ ಪಡಿಸುವದಕ್ಕೂ ಅಧಿಕಾರವನ್ನು ಹೊಂದಿರುವದಿಲ್ಲ.

VII. ಇನಾಂದಾರರುಗಳಿಗೆ ಸ್ಥಿರಪಟ್ಟಿರುವ ಹಕ್ಕಿನ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸಕೂಡದು.

VIII. ಹರಾಜು ಕಾಲದಲ್ಲಿ ಜಾಲಾರೀ ಗಿಡಗಳು ಇರತಕ್ಕ ಬಗರ್ ಹಿಡುವಳಿ ಜಮೀನುಗಳು ಕಂಟ್ರಾಕ್ಟು ಜಾರೀಲಿರುವ ಕಾಲ ದಲ್ಲಿ ಸಾಗುವಳಿಗೆ ತೆಗೆದುಕೊಂಡ ಪಕ್ಷ ಕಂಟ್ರಾಕ್ಟುದಾರ ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಅಂತಾ ಗಿಡಗಳಲ್ಲಿ ಅರಗು ಜಮಾ ಯಿಸಿಕೊಳ್ಳತಕ್ಕ ಹಕ್ಕುಳ್ಳವನಾಗಿ ಇರತಕ್ಕದ್ದು.

IX. ಕಾರಣಗಳನ್ನು ತೋರಿಸದೇನೇ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯು ಟಿ ಕಮಿಷ್ನರವರು ಸ್ವತಂತ್ರರಾಗಿರುತ್ತಾರೆ.

ಎಂ. ನಾರಾಯಣರಾವ್,
ಆಫಿಷಿಯೇಟಿಂಗ್ ಡೆಪ್ಯುಟಿ ಕಮಿಷ್ನರ್.

ಮೈಸೂರ ಡಿಸ್ಟ್ರಿಕ್ಟ ಜಡ್ಜಿಯವರ ಕೋರ್ಟಿನಲ್ಲಿ.

1895—96ನೇ ಇಸವಿ ಅರ್ಜೀ ನಂಬರ 390.

ಮೃತಪಟ್ಟ ಪಾರ್ವತೆಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ನಾರಾಯಣ 2ನೇ ಗುಂಡಾ ಮೈನರುಗಳು, ಗಾರ್ಡಿಯನ್ ಜನಕ ತಂದೆ ಶ್ರೀಕಂಠಯ್ಯನವರು, ಮೃತಪಟ್ಟ ಸದರೀ ಪಾರ್ವತೆಮ್ಮನವರಿಗೆ ಮೈನರುಗಳು ಮಮ್ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ಕಸಬಾ ಸ್ಥಳದ ಸದರೀ ಶ್ರೀಕಂಠಯ್ಯನವರು, ಮೈಸೂರು ಕಿಲ್ಲೇ ವಾಸಸ್ಥರಾಗಿ ಮೃತಪಟ್ಟ ಪಾರ್ವತೆಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀಕಂಠಯ್ಯನವರ ಅರ್ಜಿಯನ್ನು 1896ನೇ ಇಸವಿ ಜೂನ್ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾರ್ವತೆಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1895—96ನೇ ಇಸವಿ ಅರ್ಜೀ ನಂಬರ 391.

ಮೃತಪಟ್ಟ ನಿಶ್ಯದಂಗಡಿ ಮುಹಮ್ಮದ್ ಖಾಸಿಂಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ಜೈನಾಬಿ 2ನೇ ಅಷಾಬಿ ಮೈನರ್‌ಗಳು, ಗಾರ್ಡಿಯನ್ ಇವರ ಗಂಡ ಅಮ್ಮದ್‌ಸಾಬಿಯು ಮೃತಪಟ್ಟ ಸದರೀ ಮುಹಮ್ಮದ್‌ಖಾಸಿಂಸಾಬರಿಗೆ 1ನೇಯವಳು ಅಕ್ಕ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ಸ್ಥಳದ ಸದರೀ ಅಮೀರ್‌ಸಾಬೀರು, ಸದರೀ ವಾಸಸ್ಥರಾಗಿ ಮೃತಪಟ್ಟ ಮುಹಮ್ಮದ್ ಖಾಸಿಂಸಾಬರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಮೀರ್‌ಸಾಬರ ಅರ್ಜಿಯನ್ನು 1896ನೇ ಇಸವಿ ಜೂನ್ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುಹಮ್ಮದ್‌ಖಾಸಿಂಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1895—96ನೇ ಇಸವಿ ಅರ್ಜೀ ನಂಬರ್ 428.

ಮೃತಪಟ್ಟ ವೆಂಕಟರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸಾವಿತ್ರಮ್ಮ ಮೈನರ್, ಗಾರ್ಡಿಯನ್ ಜನಕತಂದೆ ಹರಿಯಪ್ಪನವರು, ಮೃತಪಟ್ಟ ಸದರೀ ವೆಂಕಟರಾಮಯ್ಯನವರಿಗೆ ಮೈನರು ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಸನದ ಸ್ಥಳದ ಸದರೀ ಹರಿಯಪ್ಪನವರು, ಸಕಲೇಶಪುರದ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹರಿಯಪ್ಪನವರ ಅರ್ಜಿಯನ್ನು 1896ನೇ ಇಸವಿ ಜೂನ್ ತಿಂಗಳ ತಾರೀಖು 29ರಲ್ಲು ಕೇಳಿ ಸರಟಿಫಿಕೇಟು ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1895—96ನೇ ಇಸವಿ ಅರ್ಜೀ ನಂಬರ್ 429.

ಮೃತಪಟ್ಟ ದ್ಯಾವೇಗವ್ಡುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ದ್ಯಾವಣ್ಣ ಮೈನರ್, ಇವನ ಗಾರ್ಡಿಯನ್ ಜನಕತಂದೆ ಪುಟ್ಟೇಗವ್ಡುಡರು, ಮೃತಪಟ್ಟ ಸದರೀ ದ್ಯಾವೇಗವ್ಡುಡರಿಗೆ ಮೈನರು ದತ್ತುಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಪೆರಿಯಾಪಟ್ಣ ಹೋಬಳಿ ಸತ್ಯಗಾಲ ಸ್ಥಳದ ಸದರೀ ಪುಟ್ಟೇಗವ್ಡುಡರು, ಸದರೀ ವಾಸಸ್ಥರಾಗಿ ಮೃತಪಟ್ಟ ದ್ಯಾವೇಗವ್ಡುಡರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟೇಗವ್ಡುಡರ ಅರ್ಜಿಯನ್ನು 1896ನೇ ಇಸವಿ ಜೂನ್ ತಿಂಗಳ ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದ್ಯಾವೇಗವ್ಡುಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1896ನೇ ಇಸವಿ ಮಾರ್ಚಿ ತಿಂಗಳ 31ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ಸಹಿ ನಮ್ಮ ದಸ್ತುಖತ್ತಿನೊಡನೆ ಕೊಡೋಣಾಗಿಧೆ.

ಯಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜಿ.

ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟು ಡಿಪಾರ್ಟ್ಮೆಂಟ್.

ನೋಟಿಫಿಕೇಷನ್.

ತಾರೀಖು 18–21ನೇ ಏಪ್ರಿಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿರುವ ನಾಟಾ ಜಂತೆ ಸರ ಮತ್ತು ಮುಂಡಿಗೆಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1896ನೇ ಇಸವಿ ಮೇ ತಾರೀಖು 16ರಲ್ಲಿ ನಂಜನಗೂಡು ಡಿಪೋದಲ್ಲೂ ಮತ್ತು ಅದೇ ಮೇ ತಿಂಗಳ ತಾರೀಖು 18ರಲ್ಲಿ ಮೈಸೂರ್ ಉಡ್ಯಾರ್ಡಿನಲ್ಲೂ ಹರಾಜ್ ಮಾಡಿಸಲ್ಪಡುತ್ತವೆ.

ಮರದ ತಪ್ಸೀಲು.	ನಂಜನಗೂಡು ಡಿಪೊ. ಸ್ವಲ್ಪ ಹೆಚ್ಚು ಕಡಮೆ.		ಮೈಸೂರು ಉಡ್ಯಾರ್ಡು. ಸ್ವಲ್ಪ ಹೆಚ್ಚು ಕಡಮೆ.	
	ನಂಬರು.	ಸಲೇಅಡಿ.	ನಂಬರು.	ಸಲೇಅಡಿ.
ಸಾಗವಾನಿನಾಟಾ	124	2868	388	12092$\frac{3}{4}$
ಡಿಟ್ಟೋ ಜಂತೆ	108	959$\frac{1}{2}$	83	740$\frac{1}{4}$
ಡಿಟ್ಟೋ ಸರ	9	11$\frac{1}{4}$	..	..
ಡಿಟ್ಟೋ ಮುಂಡಿಗೆ	24	37$\frac{1}{2}$	..	..
ಹೊನ್ನೆ ನಾಟಾ	95	2041	99	2396$\frac{1}{4}$
ಡಿಟ್ಟೋ ಜಂತೆ	96	1006$\frac{1}{4}$	29	324
ಮತ್ತಿ ನಾಟಾ	3	55$\frac{1}{2}$	50	1225$\frac{3}{4}$
ಡಿಟ್ಟೋ ಜಂತೆ	1	7	9	79$\frac{1}{4}$
ಬೀಟೆ ನಾಟಾ	2	32$\frac{1}{4}$	9	463
ಡಿಟ್ಟೋ ಜಂತೆ	2	21$\frac{1}{2}$	9	106
ನಂದಿ ನಾಟಾ	5	85$\frac{3}{4}$	18	403$\frac{3}{4}$
ಡಿಟ್ಟೋ ಜಂತೆ	10	104$\frac{3}{4}$	6	71
ಜಂಗಲ್ ನಾಟಾ	2	50$\frac{3}{4}$	17	421$\frac{1}{4}$
	481	7281	716	18253$\frac{1}{4}$

ಷರತ್ತು.—ಮೈಸೂರು ಗೆಜೆಟ್ 1895ನೇ ಏಪ್ರೆಲ್ 25ನೇ ಮರ್ರ್ಯಾದಿನಲ್ಲಿ ಚವುಬೀನೆ ಮತ್ತು ಜೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1895ನೇ ಇಸವಿ ಮಾರ್ಚಿ 15ನೇ ಮರ್ರ್ಯಂ 15229–ಆರ್. ಎಫ್. 156—92ನೇ ನಂಬರ್ ಗವರ್ನಮೆಂಟ ನೋಟಿಫಿಕೇಷನ್ ಮೇರೆ.

ತಾರೀಖು 13–14ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹುಣಸೂರು ಸಂದಲ್ ಕೋಟಿಯಲ್ಲಿ ಷರತ್ತಕ್ಕೆ ಬಿಳಿ ಚಕ್ಕೆಯು 1896ನೇ ಇಸವಿ ಏಪ್ರೆಲ್ 20ನೇ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆಯಂತ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್ ಮಾಡಲ್ಪಟ್ಟಿರುವದು ದು ಸರಿಯುಷ್ಟೆ ಸದರೀ ತಾರೀಖು ಪಬ್ಲಿಕ್ ರಜಾ ದಿವಸ ಆದ್ದರಿಂದ ಮೇಲೆ ನಮೂದಿಸಿರತಕ್ಕ ಸಂದಲ್ ಬಿಳಿ ಚಕ್ಕೆಯು ಬರುವ ಮೇ ತಿಂಗಳ 11ನೇ ತಾರೀಖಿನ ದಿವಸ ಹರಾಜು ಮಾಡಿಸಲ್ಪಡುತ್ತೆ.

ಟಿ. ಅಬ್ದುಲ್ ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ.

ಹಾಸನ ಡಿಸ್ಟ್ರಿಕ್ಟು.

ತಾರೀಖು 6ನೇ ಏಪ್ರೆಲ್ ಸನ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾರ್ನಹಳ್ಳಿ ಘಾಟಿಯಲ್ಲಿ ಟೋಲ್‌ಗೇಟೆಂಬ ಸುಂಕದ ಕಟ್ಟೆ ಒಳಗೆ ಸನ್ 1896ನೇ ಇಸವಿ ಜುಲೈ ಮಾಹೆ 1ನೇ ಮರ್ರ್ಯಂ ಲಾಗಾಯತು ಸನ್ 1897ನೇ ಜೂನ್ 30ರ ವರಿಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಸನ್ 1896ನೇ ಇಸವಿ ಮೇ ತಾರೀಖು 4ನೇ ಸೋಮವಾರ ಹಗಲು 11 ಘಂಟೆಗೆ ಸಕಲೇಶಪುರದ ಮೊಕ್ಕಾಂನಲ್ಲಿ ತಾಲ್ಲೂಕು ಕಚೇರೀ ಬಳಿ ಅಮಲ್ದಾರರಿಂದ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಛಡಸವಾಲನ್ನಾಗಲಿ ಅಥವಾ ಯಾವ ಸವಾಲನ್ನೇ ಆಗಲಿ ಕಾರಣವನ್ನು ಹೇಳದೇನೇ ಅಂಗೀಕರಿಸುವ ಯಾ ತಿರಸ್ಕರಿಸುವ ಅಧಿಕಾರವನ್ನು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರು ಉಳಿಸಿಕೊಂಡಿರುತ್ತಾರೆ. ಮತ್ತು ಡೆಪ್ಯುಟಿ ಕಮಿಷನರವರಿಂದ ಮಂಜೂರಾದ ಹೊರ್ತು ಹರಾಜು ಖಾಯಂ ಆದ ಹಾಗೆ ತಿಳಿಯಕೂಡದು.

3. ಛಡದರಖಾಸ್ತುದಾರನು ಹರಾಜು ಮೊಬಲಗಿನ ಪೈಕಿ ನಾಲ್ಕರಲ್ಲಿ ಒಂದು ಭಾಗವನ್ನು ಆ ಕೂಡಲೆ ಡಿಪಾಜಿಟ್ ಇಡಬೇಕಲ್ಲದೆ ಬಾಕಿ ಉಳಿದ ಮೊಬಲಗನ್ನು ಸನ್ 1896ನೇ ಇಸವಿ ಜುಲೈ 20ರ ಲಾಗಾಯತು ಸಮವಾದ 3 ಖಿಸ್ತುಗಳಾಗಿ ಪ್ರತಿ ಮಾಹೆ 20ನೇ ತಾರೀಖಿಗೆ ಪಾವತಿ ಮಾಡಲು ಬದ್ಧನಾಗಿ ಇರಬೇಕು. ಹರಾಜು ಮಂಜೂರಾತಿಯು ತನಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 15 ದಿವಸಗಳ ಒಳಗೆ ಕ್ರಮವಾದ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಈ ಕೆಳಗೆ ನಮೂದಿಸುವ ಷರತ್ತಿಗೆ ಒಳಪಟ್ಟು ಕಂಟ್ರಾಕ್ಟಿನಂತೆ ತಾನು ಸರಿಯಾಗಿ ನಡೆದುಕೊಳ್ಳತಕ್ಕ ಬಗ್ಗೆ ಖಾತರೆ ಜಾಮೀನ್ ಕೊಡಬೇಕು. ಡಿಪಾಜಿಟ್ ಮೊಬಲಗು ಹಾಜರ್ಮಾಡದೇಯೂ ಮುಚ್ಚಳಿಕೆ ಬರದುಕೊಡದೇಯೂ ಜಾಮೀನ್ ಕೊಡದೇಯೂ ತಪ್ಪಿದರೆ ಬಾಬನ್ನು ದುಸರೆ ಹರಾಜ್ ಮೂಲಕ ವಿಕ್ರಯಿಸುವದಲ್ಲದೆ ನಷ್ಟಕ್ಕೆ ತಪ್ಪಿತಸ್ಥನಾದ ಇಜಾರದಾರನನ್ನು ಗುರಿಪಡಿಸುತ್ತೆಯೇ ಶಿವಾಯಿ ಹಾಂಗೆ ಬಾಬನ್ನು ದುಸರೆ ಹರಾಜ್ ಮಾಡೋಣದರಲ್ಲಿ ಉಂಟಾಗುವ ಆದಾಯಕ್ಕೆ ಅವನು ಭಾಗಿಯಾಗಲಾರನು.

4. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಂಗೆ ಬಾಕಿ ಆದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿ 1ಕ್ಕೆ ಒಂದು ಪೈನಂತೆ ಬಡ್ಡಿ ಶೇರಿಸಿ ವಸೂಲ್ಮಾಡಲ್ಪಡುತ್ತೆ. ಮತ್ತು ಡೆಪ್ಯುಟಿ ಕಮಿಷನರ್ ಸಾಹೆಬರವರಿಗೆ ಯುಕ್ತ ತೋರಿದರೆ ಅಥವಾ ಜಾಮೀನ್‌ದಾರನು ಅಪೇಕ್ಷಿಸಿದರೆ ಕಂಟ್ರಾಕ್ಟು ದುಸರೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗುವದು. ಆದರಿಂದ ಸರ್ಕಾರಕ್ಕೇನಾದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಕಂಟ್ರಾಕ್ಟುದಾರನಿಂದಲೇ ಆಗಲಿ ಅಥವಾ ಜಾಮೀನ್‌ದಾರನಿಂದಲೇ ಆಗಲಿ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ.

5. ಹರಾಜ್ ಮೊಬಲಗು ಶಿವಾಯಿ 3—4ನೇ ಕಲಂಗಳಲ್ಲಿ ನಮೂದಾಗುವ ಷರತ್ತುಗಳಿಗೆ ಒಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಇಜಾರದಾರನು ಬದ್ಧನಾಗಿರಬೇಕು.

6. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲ್‌ನಲ್ಲಿ ನಮೂದಿರುವ ದರಗಳ ಮೇರೆಗೇನೇ ಟೋಲ್ ವಸೂಲ್ಮಾಡಬೇಕು ಮತ್ತು ಸನ್ 1876ನೇ ಇಸವಿ ನವಂಬರ್ 4ನೇ ಮರ್ರ್ಯಂ 274ನೇ ನಂಬರ್ ಲೇಟ್ ಚೀಫ್ ಕಮಿಷನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಫಾಯಿಷಾಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

7. ಪ್ರತಿ ದಿನದ ಟೋಲ್ ಯಾನೆ ಸುಂಕದ ವಸೂಲಿ ತೋರಿಸುವ ನಿಜವಾದ ಮತ್ತು ಕರಾರುವಾಕ್ಕಾದ ಲೆಖ್ಖವನ್ನು ಇಡುವು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಅಧಿಕಾರಿಗಳ ತನಿಖೆಗೆ ಸದರೀ ಲೆಖ್ಖವು ಒಳಪಟ್ಟು ಇರತಕ್ಕದ್ದು.

8. 7ನೇ ಷರತ್ತಿನಲ್ಲಿ ನಮೂದಿಸಿರುವ ಮೇರೆ ಕರಾರ್‌ವಾಕಾ ಆಮದ್ ರಫ್ತು ಲೆಖ್ಖವನ್ನು ಇಡಲೋಸ್ಕರ ಶಿಬ್ಬಂದಿ ಅಂದರೆ ಒಬ್ಬ ಮುತ್ಸದ್ದಿಯ ಖರ್ಚನ್ನು ಕಂಟ್ರಾಕ್ಟುದಾರನೇ ವಹಿಸಬೇಕು.

9. ಗವರ್ನಮೆಂಟ ಟೋಲ್‌ಮನೆ ಮತ್ತು ಟೋಲ್‌ಗೇಟನ್ನು ಸಹ ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಅವುಗಳನ್ನು ಪೂರಾ ದುರಸ್ತಿನಲ್ಲಿ ಆತನು ಇಟ್ಟುಕೊಂಡಿರತಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ಮಾಹೆ ಗುರ್ರೆ ತಾರೀಖಿನಲ್ಲಿ ಹಿಂದಲ ತಿಂಗಳ ಟೋಲ್ ವಸೂಲಿ ಲೆಖ್ಖವನ್ನು ಮಂಜರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

3H1

11. ಕಂಟ್ರಾಕ್ಟುದಾರ ವಸೂಲ್ಮಾಡಬೇಕಾದ ದರಗಳ ತಪ್ಸೀಲು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿ ಇಧೆ.

1	ಪ್ರತಿ ನಾಲ್ಕು ಚಕ್ರದ ಭಂಡಿಗೆ ..	2	0	0
2	ಡಿಟೋ ಎರಡು ಡಿಟೋ ..	1	0	0
3	ಪ್ರತಿ ಯಕ್ಕಾ ಮೇಲೂ ..	0	4	0
4	ಸ್ಪ್ರಿಂಗ್‌ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ಒಂದಕ್ಕೆ	0	2	0
5	ಎಂಟು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳಿಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಒಂದಕ್ಕೆ ..	1	8	0
6	ಡಿಟೋ ಭರ್ತಿ ಇಲ್ಲದಿದ್ದರೆ ..	0	8	0
7	ಆರು ಎತ್ತುಗಳು ವಗೈರೆಗಳಿಂದ ಎಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ ..	0	12	0
8	ಆರು ಎತ್ತುಗಳು ವಗೈರೆಗಳಿಂದ ಎಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಇಲ್ಲದಿದ್ದರೆ ..	0	6	0
9	ನಾಲ್ಕು ಎತ್ತುಗಳು ವಗೈರಗಳಿಂದ ಎಳಿಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಆಗಿದ್ದರೆ ..	0	8	0
10	ಡಿಟೋ ಡಿಟೋ ಭರ್ತಿಇಲ್ಲದಿದ್ದರೆ ..	0	4	0
11	ಎರಡು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ, ಹೇಸರು ಕತ್ತೆಗಳಿಂದ ಎಳಿಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ ..	0	4	0
12	ಡಿಟೋ ಭರ್ತಿ ಇಲ್ಲದಿದ್ದರೆ ..	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಇದ್ದರೆ ..	0	1	0
14	ಡಿಟೋ ಹೊರೆ ಇಲ್ಲದಿದ್ದರೆ ..	0	0	3
15	ಪ್ರತಿ ಆನೆಗೂ ..	1	8	0
16	ಪ್ರತಿ ಒಂಟೆಗೂ ಹೊರಿಸಲ್ಪಟ್ಟಿದ್ದರೆ ..	0	8	0
17	ಡಿಟೋ ಹೊರೆ ಇಲ್ಲದಿದ್ದರೆ ..	0	4	0
18	ಪ್ರತಿ ಕುದರೆಗೂ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ..	0	1	6
19	ಹೊರೆ ಇಲ್ಲದ ಯಾ ಹಿಡದುಕೊಂಡು ಹೋಗುವ ಪ್ರತಿ 1 ಕುದರೆಗೂ ..	0	0	9
20	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ..	0	0	9
21	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಇಲ್ಲವ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ..	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ..	0	0	6
23	ಹೊರೆ ಇಲ್ಲದೆ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ ..	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿ ..	0	0	1
25	ಎಂಟು ಬೋಯಿಗಳ ವಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಿಗೂ ..	1	0	0
26	ಆರು ಬೋಯಿಗಳೊಡನೆ ಡಿಟೋ ..	0	12	0
27	ನಾಲ್ಕು ಬೋಯಿಗಳೊಡನೆ ಡಿಟೋ ..	0	8	0
28	ಇಬ್ಬರು ಬೋಯಿಗಳೊಡನೆ ಡಿಟೋ ..	0	4	0

ನಡದು ಬರುವ ಮಾರ್ಗಸ್ತರ ಮೇಲೆ ಟೋಲ್ ವಸೂಲ್ ಮಾಡಕೂಡದ್ದಲ್ಲ.

ಎ. ಕ್ರಿಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

1896ನೇ ಇಸವಿ ಏಪ್ರಿಲ್ 1ನೇ ಮುಕ್ಕಾಂ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಈ ಕೆಳಗೆ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟು ತಾಲ್ಲೂಕುಗಳ ಒಗಸಿ ಹೇಂದಿ ಪುತಾರ್ ಮತ್ತು ಮಾರುವ ಹಕ್ಕು ಸರ್ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಆಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕು ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ವಳಪಟ್ಟು ಆ ಯಾ ತಾಲ್ಲೂಕು ಕಚೇರಿ ರೂಬರೂ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ವಬ್ಬರು ಅಸಿಸ್ಟೆಂಟ ಕಮ್ಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

	ತಾಲ್ಲೂಕು.	ಹರಾಜು ತಾರೀಖು.	
1	ಶಿಕಾರಿಪುರ	ಸರ್ 1896ನೇ ಮೇ	11—12
2	ಸೊರಬ	ಡಿಟೋ	14—15
3	ಸಾಗರ	ಡಿಟೋ	18—19
4	ನಗರ	ಡಿಟೋ	21—22
5	ತೀರ್ಥಹಳ್ಳಿ	ಡಿಟೋ	25—26

II. ಪ್ರತಿ ಒಂದು ಸರಕಾರ ಗುತ್ತೆಯನ್ನ ಚಡದರಖಾಸ್ತುದಾರನಿಗೆ ಕೊಡಲ್ಪಡುವದು, (ಸದರೀ ಚಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲಗಳ ಮೊಬಲಗ್ಯೆಕಮ್ಮಿ ಇರಕೂಡದು) ಈ ಹರಾಜು ಅಸಿಸ್ಟೆಂಟ ಕಮ್ಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು

342

ಡೆಪ್ಯುಟಿ ಕಮ್ಮಿಷನರವರ ಮಂಜೂರಿಗೆ ಒಳಪಟ್ಟು ಇರತಕ್ಕದ್ದಾಗಿ ಇರುತ್ತೆ. ಅಂಥಾ ಹರಾಜಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸದರೀಯವರು ಡೆಪ್ಯುಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾವದೊಂದು ದರಖಾಸ್ತು ಅಥವಾ ಚಡದರ ಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

III. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುಖ್ತಾರನ ಮೂಲಕವಾಗಿಯಾಗಲಿ ಹಾಜರಾಗಬೇಕು. ಡೆಪ್ಯುಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡತಕ್ಕ ಆಫೀಸರಲ್ಲಿ ಆ ಕೂಡಲೆ ಹಾಜರು ಮಾಡಬೇಕು ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ್ ಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೆ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಬಿಡನೆ ಡಿಪಾಜಿಟಿ ಮಾಡಬೇಕು ಡೆಪ್ಯುಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಹಿಂದೆ ಹಾಜರು ಮಾಡಿದ ಡಿಪಾಜಿಟಿ ಮೊಬಲಗು ಸೇರಿ ಸಾಲ್ ಗುತ್ತಿಗೆ ಮೊಬಲಗಿನ ಮೂರು ತಿಂಗಳ ಬಿಸ್ತು ಮೊಬಲಗು ನಗದಾಗಿಯಾಗಲಿ ಅಥವಾ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಅಮಲ್‌ದಾರರಲ್ಲಿ ಹಾಜರ್‌ಮಾಡಬೇಕು. ಹಾಗೆ ಗವರ್ನಮೆಂಟ್ ಪತ್ರ ಹಾಜರ್‌ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟ ಷರತ್ತು ನೆರವೇರಿಕೆ ಖಾತ್ರಿಗಾಗಿ ಹಾಜರ್‌ಮಾಡಿದೆ ಎಂದು ಸದರೀ ಪತ್ರ ಜೈಲ್ ಡೆಪ್ಯುಟಿ ಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿಕೊಡತಕ್ಕದ್ದಾಗಿ ಇರುತ್ತೆ. ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗನ್ನಾಗಿ ಅರವಾಸಿ ನಗದಾಗಿಯಾಗಲಿ ಅಥವಾ ಮೇಲ್ಕಂಡಂತೆ ಇಂಡಾರ್ಸ್‌ಮಾಡಿ ಕೊಟ್ಟ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಬಾಕಿ ಅರ್ಧ ಭಾಗ ಸ್ಥಿರಸೊತ್ತು ಮೂಲಕ ಜಾಮೀನ್ ಕೊಡಬಹುದು ಹಾಗೆ ಆಧಾರ ಮಾಡುವ ಸ್ಥಿರಸೊತ್ತಿನ ಬೆಲೆ ಜಾಮೀನ್ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು, ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಠೇವಣಿ ಇಟ್ಟ ಮೊಬಲಗು. ಆಖೈರ್‌ಮೂರು ತಿಂಗಳ ಬಿಸ್ತಿನ ಒಗ್ಯೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನೆಂತ ಕ್ರಮವಾದ ಸ್ಟಾಂಪು ಕಾಗದದ ಮೇಲೆ ಮಾಮೂಲಿನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿ ಇರುತ್ತೆ.

IV. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟಿ ಹಾಜರ್‌ಮಾಡದೆ ತಪ್ಪಿದರೂ, ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ, ಷುರೂ ಹಾಜರ್‌ಮಾಡಿದ ಡಿಪಾಜಿಟಿ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬ್ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿಯಾಗಲಿ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಯೇನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು ಕಂದಾಯ ಬಾಕಿಯಂತೆ ಸದರೀಯವನ ಜಂಗಮ ಜಪ್ತೀ ಹರಾಜು ಮೂಲಕ ವಸೂಲ್ ಮಾಡಿಕೊಳ್ಳಲ್ಪಡುತ್ತೆ.

V. ಈಚಲ ಸೇಂದಿ ಕಂಟ್ರಾಕ್ಟ್ ಸಂಬಂಧದಲ್ಲಿ ವಿಧಾಯಕವಾಗಿರುವ ಷರತ್ತುಗಳು ಈ ಬಗನೀ ಸೇಂದಿ ಇಜಾರೆ ಬಗ್ಯೆ ಅನ್ವಯಿಸಲ್ಪಡುತ್ತೆ.

VI. ಹಿಂದಿನ ಸಾಲಗಳ ಬಗನೀ ಸೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕು ಅಮಲ್‌ದಾರು ಅಥವಾ ಶಿರಸ್ತೇದಾರಲ್ಲಿ ದರಖಾಸ್ತು ಕೊಟ್ಟು ತಿಳಕೊಳ್ಳಬಹುದು.

ಎಂ. ರಾಮಚಂದ್ರರಾವ್,
ಫಾರ್ ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ತಾರೀಖು 4ನೇ ಏಪ್ರೈಲ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರಡಿ ನಮೂದಿಸಿರುವ ಚೌಬೀನೆ ಮತ್ತು ಬೊಂಬು ಶಿವಮೊಗ್ಗ ಡಿಸ್ಟ್ರಿಕ್ಟಿನ ಡಿಪೋಗಳಲ್ಲಿ ಅವುಗಳ ಬಾಜಾದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಫಾರೆಸ್ಟ್ ಅಫಿಸರ್ ಮತ್ತು ಡೆಪ್ಯುಟಿ ಕಮ್ಮಿಷನರ್ ಯಾರಿಂದ ನೇಮಿಸಲ್ಪಡುವ ಇತರ ಆಫಿಸರಗಳಿಂದ ಹರಾಜು ಮಾಡಿಸಲ್ಪಡುವದು.

ನಂಬರು.	ಡಿಪೋಗಳ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟಾ.	ರಿಜರ್‌ವೆಡ್ ನಾಟಾ.	ಅನ್ ರಿಜರ್‌ವೆಡ್ ನಾಟಾ.	ಸಾಗುವಾನಿ ಜಲಗು ಮತ್ತು ತುಂಡು.	ಕಾಡುಜಾತಿ ಜಲಗು.	ಬೊಂಬು.	ಷರಾ.
1	ಆನವಟ್ಟಿ	1 5 96	30	..		151	43	1,325	ಸ್ವಲ್ಪ ಪಚ್ಚ ಕಡವೆ.
2	ಶಿರಾಳಕೊಪ್ಪ	4 5 96	26	89	2	151	23	393	
3	ಶಿಕಾರಿಪುರ	7 5 96	4	32	2	11	..	1,000	
4	ಚನ್ನಗಿರಿ	11 5 96	..	..	..	250	..	2,000	
5	ಪುಬ್ಬಾಣಿ	1 5 6	..	..	..	42	..	1,500	
6	ಆಯನೂರು	1 6 6	100	100	25	200	..	5,000	
7	ಶಿವಮೊಗ್ಗಾ	8 6 6	110	163	7	36	100	3,864	
8	ಕುಂಸಿ (ಕಣಬೂರು)	12 6 96	100	130	20	..	..	..	
9	ಸಮುದ್ರಹಳ್ಳಿ	13 6 96	..	125	25	..	..	..	

ಹರಾಜು ಷರತ್ತುಗಳು:—ತಾರೀಖು 25—4—95ನೇ ನಂಬರ್ 15ನೇ ಮೈಸೂರು ಗೆಜೆಟಿನಲ್ಲಿ ಪ್ರಾಯಿಷಾಗಿರುವ ತಾರೀಖು 15—3—95ನೇ ನಂಬರ್ 15,229.—155—92ನೇ ನೋಟಿಫಿಕೇಷನ್ ನೋಡತಕ್ಕದ್ದು.

ಸಿ. ನಾರಾಯಣರಾವ್, ಡೆಪ್ಯುಟಿ ಕನ್ಸರ್ವೇಟರ್.

ಸ್ವಂತಪ್ರಕಟನೆ.

ನೋಟೀಸ್.

ಮಂಡ್ಯದ ತಾಲ್ಲೂಕು ಆತಗೂರು ಹೋಬಳಿ ಕದಲೂರಲ್ಲಿರುವ ಯಡತೊರೇ ತಾಲ್ಲೂಕು ಮಾವತ್ತೂರು ವೆಂಕಟರಾಮಯ್ಯನವರ ಹೆಂಡತಿ ವೆಂಕಟಲಕ್ಷ್ಮಮ್ಮನು, ಇದರಿಂದ ಸಕಲರಿಗೂ ತಿಳಿಯಪಡಿಸುವದೇನಂದರೆ,—ನಾನು ಮಂಡ್ಯದ ತಾಲ್ಲೂಕು ಸರ್ವನ್ಯಾಸ್ಕ ಕೆಸ್ತೂರು, ಅಲ್ಲಿರುವ ಹರಿಯಣ್ಣಯ್ಯನ ನರಸಯ್ಯನವರ ಮಕ್ಕಳು ನರಸುಬ್ಬಯ್ಯನವರಿಗೆ, ನಾನು ಬರದುಕೊಟ್ಟಿರುವ 94ನೇ ಇಸವಿ ಅಕ್ಟೋಬರ 21ನೇ ತಾರೀಖಿನ ಜನರಲ ಪವರಾಫ ಅಟಾರ್ನಿ ನೋಟು ಮೊಕ್ತ್ಯಾರನಾಮೆಯನ್ನು ನಾನು ರದ್ದುಪಡಿಸಿರುವದರಿಂದ ಈ ತಾರೀಖು ಲಾಗಾಯ್ತು ಮುಂದೆ ನನ್ನ ಗೋಸ್ಕರ ಅವರಲ್ಲಿ ಯಾವವಿಧವಾದ ಲೇವಾದೇವಿ, ಲೆಕ್ಕಾಚಾರ ಮತ್ತು ಕಾಗದ ಪತ್ರಗಳನ್ನು ಇತರರು ನಡಿಸಕೂಡದು. ಹಾಗೆ ನಡಿಸಿದರೆ ಅದಕ್ಕೆ ನಾನು ಬದ್ಧಳಾಗಲಾರೆನಾದ ವಿವರ ತಿಳಿಯುವದು. ತಾರೀಖು 12—4—96.

ೞ ವೆಂಕಟಲಕ್ಷ್ಮಮ್ಮನ ಗುರುತಿನ ರುಜುವಿಗೆ ಕದಲೂರು ಶಾನಭೋಗ ವೆಂಕಟಸುಬ್ಬಯ್ಯನ ಬರಹ.

3HH

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಪಿಸಿಷ್ ಆದ್ದು

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 30, ಸ್ 1896.

IIIನೇ ಭಾಗ.

ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.

GOVERNMENT OF MYSORE.

ಮೈಸೂರ್ ಗವರ್ನಮೆಂಟ.

LEGISLATIVE DEPARTMENT.

ಲೆಜಿಸ್ಲೇಟಿವ್ ಇಲಾಖಾ.

REGULATION No. I OF 1896.

1896ನೇ ಇಸವಿಯ 1ನೇ ನಂಬರ್ ರೆಗ್ಯುಲೇಷನ್.

(1896ನೇ ಇಸವಿ ಫೆಬ್ರುವರಿ 18ನೇ ತಾರೀಖಿನ ದಿನ ಮಂಜೂರಾದ್ದು.)

ಮೈಸೂರ ಗವರ್ನಮೆಂಟಿನ ಮೇಲೆ ಬ್ರಿಜಲಾಲ್‌ದಾಸ್ ಎಂಬುವನ ದಾವೆ ವಿಚಾರದಲ್ಲಿ ಆಖೈರ್ ಫೈಸಲನ್ನು ಕೊಡಲು ಒಂದು ಸ್ಪೆಷಲ್ ಕೋರ್ಟನ್ನು ಮೊಕರರ್ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಘನವೆತ್ತೈದಿದ ಶ್ರೀಮನ್ ಮಹಾರಾಜರವರಾದ IIIನೇ ಕೃಷ್ಣರಾಜವಡೆಯರವರ ಮೇಲೆ ತರಲ್ಪಟ್ಟ ದಾವೆಗಳನ್ನೆಲ್ಲ ವ್ಯವಸ್ಥೆ ಮಾಡಲು ಸುಪ್ರೀಂ ಅಂದರೆ ಇಂಡಿಯಾ ಗವರ್ನಮೆಂಟನವರ ಮಂಜೂರಾತಿ ಮತ್ತು ಆಜ್ಞಾನುಸಾರವಾಗಿ ಮೈಸೂರ ಕಮ್ಮಿಷನರವರು ಅಷ್ಟಗ್ರಾಮದ ಡಿವಿಜನ್ ಸೂಪರಿಂಟೆಂಡೆಂಟರಾದ ಕ್ಯಾಪ್ಟನ್ ಯಲಿಯಟ್ ಸಿ. ಬಿ. ಸಾಹೆಬರನ್ನೂ, ದರಬಾರ್ ಸರ್ಜನರಾದ ಜೆ. ಸಿ. ಕ್ಯಾಂಬಲ್ ಸಾಹೆಬರನ್ನೂ ಮೊಕರರ್ಮಾಡಿದರು. ಇವರಿಬ್ಬರೂ ಸೇರಿ 1864ನೇ ಇಸವಿ ಡಿಸೆಂಬರ್ 23ನೇ ತಾರೀಖಿನಲ್ಲಿ ಈ ವಿಷಯದಲ್ಲಿ ಮಾಡಿದ ತೀರ್ಪಿನ ಪ್ರಕಾರ ಫಾತಿಯಾಗಿದ್ದ ದಾಮೋದರ ದಾಸನೆಂಬುವನ ವಾರಸದಾರ ಮತ್ತು ಖಾಯಿದೆಗೊಪ್ಪಿದ ಪ್ರತಿನಿಧಿಯಾದ ಫಾತಿ ಬ್ರಿಜಲಾಲ್‌ದಾಸನೆಂಬುವನಿಗೆ, ಆತನಿಗಿದ್ದ ಹಕ್ಕುಗಳೆಲ್ಲಾ ಪೂರಾ ಫೈಸಲಾಗಿ ಹೋಗುವಂತೆ, ರೂ. 5,67,338–15–1 ಮೊತ್ತವು ಕೊಡಲ್ಪಡಬೇಕಾಯಿತು. ಸದರೀ ಮೊಬಲಗನ್ನು ಈಗ ಮೈಸೂರ್ ಸರ್ಕಾರದಿಂದ ಬರಮಾಡಿಕೊಳ್ಳಲು ಖಾಯಿದೆಗೆ ಅನುಸಾರವಾಗಿ ಯಾರಿಗೂ ಹಕ್ಕಿಲ್ಲದೆ ಇದ್ದರೂ, ಸದರೀ ಬ್ರಿಜಲಾಲ್‌ದಾಸಿನ ವಾರಸದಾರು, ಮತ್ತು ಖಾಯಿದೆಗೆ ಸರಿಯಾದ ಪ್ರತಿನಿಧಿಗಳೆಂದು ತೀರ್ಮಾನಿಸಲು ಅಧಿಕಾರಹೊಂದಿದ ಕೋರ್ಟಿನಿಂದ ಗೊತ್ತುಮಾಡಲ್ಪಡಬಹುದಾದ ಇಸಂ ಅಥವಾ ಇಸಂಗಳಿಗೆ ಸದರೀ ಮೊಬಲಗನ್ನು, ನ್ಯಾಯ, ನೀತಿ ಮತ್ತು ಸದ್ಧರ್ಮಕ್ಕೆ ಅನುಸಾರವಾಗಿ ಸೇರಿಸಬಹುದಾದ ತಕ್ಕ ಷರತ್ತುಗಳಿಗೊಳಪಡಿಸಿ, ಧಾರಾಳವಾಗಿ ಕೊಟ್ಟು ಬಿಡಬೇಕೆಂದು ಮೈಸೂರ್ ಗವರ್ನಮೆಂಟ

345

ನವರು ಇಷ್ಟಪಟ್ಟಿದಾರೆ. ಈ ಯಿಛ್ಛಾನುಸಾರವಾಗಿ ಸದರೀ ರೂ. 5,67,338—15—1 ಮೊತ್ತ ಮಾಡಿಕೊಳ್ಳಲು ಅಪೇಕ್ಷಿಸುವ ಜನಗಳೆಲ್ಲ ತಮ್ಮ ದಾವೆಗಳನ್ನು ಮೈಸೂರ ಚೀಫ್ ಕೋರ್ಟಿನ ಆಫೀಸಿನಲ್ಲಿ ದಾಖಲ್ಮಾಡಬೇಕೆಂತಲೂ, ಅಂತ ದಾವೇಗಳ ವ್ಯವಸ್ಥೆಯು ಬಗ್ಗ್ಯಾಗಿ ಒಂದು ಸ್ಪೆಷಲ್ ಕೋರ್ಟ ಡಿಸುವ ಉದ್ದೇಶ ತಮಗಿರುವದಾಗಿಯೂ, ಮೈಸೂರ್ ಗವರ್ನಮೆಂಟಿನವರು 1895ನೇ ಇಸವಿ 8ನೇ ಮರ್ಚ್ಕಂ ಮೈಸೂರ್ ಮೊಕ್ಕಾಮಿನ C. 42ನೇ ನಂಬರ್ ಇಸ್ತಿಹಾರನ್ನು ಸಾದರಮ್ಮಾಡಿರುತಾರೆ ಘನವನ್ನೈದಿದ ಶ್ರೀಮನ್ ಮಹಾರಾಣಿ ರೀಜಂಟರವರು ಕೆಳಗೆ ನಮೂದಿಸಿರುವಂತೆ ವಿಧಿಸಿರುತ್ತಾರೆ:—

1. (1) ಮೈಸೂರ್ ಗವರ್ನಮೆಂಟಿನವರು ಒಂದು ಸ್ಪೆಷಲ್ ಕೋರ್ಟನ್ನು ಸರ್ಕಾರಿ ಗೆಜೆಟಿನಲ್ಲಿ ರಿನ ಮೂಲಕ ಏರ್ಪಡಿಸಿ ಅಂತಾ ಸ್ಪೆಷಲ್ ಕೋರ್ಟಿನ ಜಡ್ಜಿಗಳ ರು ಕಮ್ಮಿಷನರುಗಳನ್ನು ಮೊಕರರ್ಮಾಡತಕ್ಕದ್ದು.

ಸ್ಪೆಷಲ್ ಕೋರ್ಟಿನ ಏರ್ಪಾಡು.

(2) ಸದರೀ ಸ್ಪೆಷಲ್ ಕೋರ್ಟಿಗೆ, ಈ ರೆಗ್ಯುಲೇಷನಿನ ನಿಬಂಧನೆಗಳಿಗೊಳಪಟ್ಟು,

(*a*) ಈ ರೆಗ್ಯುಲೇಷನಿನ ಪೀಠಿಕೆಯಲ್ಲಿ ಕಂಡ 5,67,338—15—1 (ಐದುಲಕ್ಷವೂ ಅರವತ್ತೇ ಏಳು ಮುನ್ನೂರಮೂವತ್ತೆಂಟು ರೂಪಾಯಿಗಳು, ಹದಿನೈದು ಅಣೆ, ಒಂದುಪೈ)ನ ಮೊಬ ಸದರೀ ಬ್ರಿಜಲಾಲ್‌ದಾಸಿನ ವಾರಸುದಾರರು ಮತ್ತು ಖಾಯಿದೆಯ ಪ್ರಕಾರ ಪ್ರತಿನಿಧಿಗಳು ಯ ರಾದರೂ ಯಿದ್ದು ಅವರಿಗೆ ಸಲ್ಲಬೇಕಾದರೆ ಅಂತಾ ಮನುಷ್ಯ ಅಥವಾ ಮನುಷ್ಯರು ಯಾರೆಂಬ ವಿಷಯದಲ್ಲಿಯೂ,

(*b*) ಮೇಲೆ ನಮೂದಿಸಲ್ಪಟ್ಟ ಸಂದಾಯಕ್ಕೆ ನ್ಯಾಯ, ನೀತಿ ಮತ್ತು ಸದ್ಧರ್ಮಕ್ಕೆ ಅನುಸಾರವಾಗಿ ಲಗತಾಗಿರಬೇಕಾದ ಷರತ್ತುಗಳು ಮತ್ತು ಭರವಸೆಗಳೇನಾದರೂ ಇದ್ದರೆ ಅಂತವುಗಳನ್ನು ಕು ರಿತೂ ವಿಚಾರಣೆಯನ್ನು ಮಾಡಿ ನಿರ್ಣೈಸಿ ಆಖೈರ್ ಫೈಸಲನ್ನು ಕೊಡುವಧಿಕಾರವಿರತಕ್ಕದ್ದು.

(3) ಈ ಪ್ರಕರಣ ಪ್ರಕಾರ ಮೊಕರರಾದ ಒಬ್ಬ ಕಮ್ಮಿಷನರಿನ ಮರಣ, ರಾಜೀನಾಮೆ, ಅಥವಾ ಅಸ ಮರ್ಥತೆಯಸಂಪರ್ಕದಲ್ಲಿ, ಅಂಥಾ ಕಮ್ಮಿಷನರಿಗೆ ಬದಲಾಗಿ ಮತ್ತೊಬ್ಬರನ್ನು ಸರ್ಕಾರಿ ಗೆಜೆಟಿನಲ್ಲಿ ಇಸ್ತಿಹಾರ್ ಮೂಲಕ ಮೈಸೂರ್ ಗವರ್ನಮೆಂಟಿನವರು ಮೊಕರರ್ಮಾಡತಕ್ಕದ್ದು.

2. ಸದರೀ ಸ್ಪೆಷಲ್ ಕೋರ್ಟಿನವರು, ಈ ರೆಗ್ಯುಲೇಷನಿನ ಪೀಠಿಕೆಯಲ್ಲಿ ಕಂಡ ಇಸ್ತಿಹಾರಿನಲ್ಲಿ ಗೊತ್ತು ಮಾಡಲ್ಪಟ್ಟಿರುವ ವಾಯಿದೆಯೊಳಗಾಗಿ ಮತ್ತು ರೀತಿಯಂತೆ ಸರಿಯಾಗಿ ದಾಖಲ್ಮಾಡಲ್ಪಡದೆ ಹೋದ ಯಾವ ದಾವೆಯನ್ನೂ ಹಿಡಿಯತಕ್ಕದ್ದಲ್ಲ, ಮತ್ತು ಹಾಗೆ ದಾಖಲ್ಮಾಡಲ್ಪಡದೆಹೋದ ಎಲ್ಲಾ ದಾವೆಗಳೂ ಎಂದೆಂದಿಗೂ ರದ್ದಾದವೆಂತಲೂ ಪುನಃ ಯಾವ ಬಗೆಯಾಗಿಯೂ ಉಜ್ಜೀವಿಸುವದಕ್ಕೆ ಅಯೋಗ್ಯವಾದವೆಂತಲೂ ಭಾವಿಸಲ್ಪಡತ ಕ್ಕದ್ದು.

ಪೀಠಿಕೆಯಲ್ಲಿ ನಮೂದಾಗುವ ನೋಟಿಸಿನಂ ತೆ ನಡಿಯದೆ ತಪ್ಪುವದರ ಫಲ.

3. ಸದರೀ ಸ್ಪೆಷಲ್ ಕೋರ್ಟಿನವರಿಗೆ, ತಮ್ಮ ರೂಬರೂ ದಾಖಲ್ಮಾಡಲ್ಪಟ್ಟಿರುವ ದಾವೆಗಳಿಗೆ ಸಂಬಂಧಿ ಸಿದ ಅಥವಾ ತಮ್ಮ ರೂಬರೂ ನಡಿಯುವ ವಿಚಾರಣೆಗೆ ಮುಖ್ಯವಾ ದ್ದೆಂದು ಭಾವಿಸಲ್ಪಡಬಹುದಾದ ಯಾವ ಆಜ್ಞಾಪತ್ರಿಕೆಗಳು, ಡಿಕ್ರಿಗಳು, ಜಡ್ಜಮೆಂಟುಗಳು, ರಿಕಾರ್ಡುಗಳು, ಪತ್ರಗಳು, ದಸ್ತಾವೇಜುಗಳು, ದಾ ಗೀನಾಗಳು, ಪ್ಲೀಡಿಂಗ್ಸು ಅಂದರೆ ಪ್ರತಿಪಾದನಗಳು, ಪುಸ್ತಕಗಳು, ಲೆಕ್ಕಗಳು, ಪತ್ರಿಕೆಗಳು, ಅರ್ಜಿಗಳು, ಕಾಗದಗಳು ಅಥವಾ ಬರವಣಿಗೆಗಳನ್ನೂ, ಅವು ಯಾವ ಮನುಷ್ಯನ, ಜಡ್ಜಿಯ ಅಥವಾ ಕೋರ್ಟಿನ ಸ್ವಾಧೀನದಲ್ಲಿದ್ದಾಗ್ಯೂ, ತಗಾದೆಹಚ್ಚಿ ಹಾಜರ್ಮಾಡಿಸಿಕೊಳ್ಳೋಣ ನ್ಯಾಯವಾಗಿರ ತಕ್ಕದ್ದು; ಮತ್ತು ಅಂತಾ ಮನುಷ್ಯ, ಜಡ್ಜಿ ಅಥವಾ ಕೋರ್ಟು ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ಉದ್ಯೋ ಗಸ್ಥ ಅಥವಾ ಮನುಷ್ಯನಿಗೆ ನೋಟಿಸ್ ಕೊಡಲ್ಪಟ್ಟ ಮೇಲೆ, ಸದರೀ ನೋಟಿಸಿನಲ್ಲಿ ಕಂಡ ಆಜ್ಞಾಪತ್ರಿಕೆಗಳು, ಡಿಕ್ರಿಗಳು, ಜಡ್ಜಮೆಂಟುಗಳು, ರಿಕಾರ್ಡುಗಳು, ಪತ್ರಗಳು, ದಸ್ತಾವೇಜುಗಳು, ದಾಗೀನಾಗಳು, ಪ್ಲೀಡಿಂಗ್ಸು ಅಂದರೆ ಪ್ರತಿಪಾದನಗಳು, ಪುಸ್ತಕಗಳು, ಲೆಕ್ಕಗಳು, ಪತ್ರಿಕೆಗಳು, ಅರ್ಜಿಗಳು, ಕಾಗದಗಳು ಅಥವಾ ಬರವ ಣಿಗೆಗಳನ್ನು ಸದರೀ ನೋಟಿಸಿನಲ್ಲಿ ನಿರೂಪಿಸಲ್ಪಟ್ಟಿರುವ ರೀತಿಯಲ್ಲಿ ಸದರೀ ಸ್ಪೆಷಲ್ ಕೋರ್ಟಿನವರಿಗೆ ಕೂಡ್ಲೆ ಒಪ್ಪಿಸಿಬಿಡಲ್ಪಡತಕ್ಕದ್ದು, ಹೀಗೆ ನಡಿಸಲು ಯಾವ ವಿಧವಾಗಿ ವಿರೋಧವಾದ ಯಾವ ಆಕ್ಟು, ರೆಗ್ಯುಲೇಷನ್, ಮಾಮೂಲ್ ಅಥವಾ ಪದ್ಧತಿ ಇದ್ದಾಗ್ಯೂ ಚಿಂತೆ ಯಿಲ್ಲ.

ದಾಖಲ್ಮಾಡಲ್ಪಟ್ಟ ದಾವೆಗಳಿಗೆ ಸಂಬಂಧಿ ಸಿದ ದಸ್ತಾವೇಜುಗಳನ್ನು ಹಾಜರ್ಮಾಡಿಸಿಕೊಳ್ಳ ಲು ಕಮ್ಮಿಷನರುಗಳಿಗೆ ಅಧಿಕಾರ.

4. ಸದರೀ ಸ್ಪೆಷಲ್ ಕೋರ್ಟಿನವರಿಗೆ, ಸಾಕ್ಷಿಗಳಿಗೆ ಸಮನ್ ಮಾಡಿ ಅವರ ಸಾಕ್ಷ್ಯವನ್ನು ತೆಗಿಯೋಣ ವೂ, ಆ ಬಗ್ಗ್ಯಾಗಿ ಸಿವಿಲ್ ಪ್ರೊಸಿಡ್ಯೂರ್ ಕೋಡಿನಿಂದ ಒಂದು ಸಿವಿಲ್ ಕೋರ್ಟಿನ ವಿಚಾರದಲ್ಲಿ ವಿಧಿಸಲ್ಪಟ್ಟಿರುವಂತೆ ಸಾಧ್ಯವಾದ ಮಟ್ಟಿಗೂ ಅದೇ ರೀತೀಲಿ ಮತ್ತು ಅದೇ ಸಾಧನಗಳ ಮೂಲಕವಾಗಿ ಸಾಕ್ಷಿಗಳ ಮತ್ತು ಪುಸ್ತಕಗಳ, ಲೆಕ್ಕಗಳ, ಕಾಗದಗಳ, ಪತ್ರಗಳ ಅಥವಾ ಇತರ

ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಮೇರಿಗೆ ಹ್ಯಾಗೋ ಹಾಗೆ ಸಾಕ್ಷಿಗಳು ವಗೈರೆ ಬಗ್ಯೆ ಸ ಮನ್ ಮಾಡಲು ಕಮ್ಮಿಷನರುಗಳಿಗೆ ಅಧಿಕಾ ರ.

ದಸ್ತಾವೇಜುಗಳ ಹಾಜರಾತಿಯನ್ನು ಬಲಾತ್ಕರಿಸೋಣವೂ, ಈ ಪ್ರಕರಣ ಪ್ರಕಾರ ಮಾಡಲ್ಪಟ್ಟ ಯಾವ ಹುಕುಮಿಗಾದರೂ ಅವಿಧೇಯತ್ವ ನಡದಲ್ಲಿ ಆ ಬಗ್ಗೆ ಒಂದುನೂರು ರೂಪಾಯಿಗಳಿಗೆ ಮಿಂಚದೊಂದು ಜುರ್ಮಾನೆಯನ್ನು ವಿಧಿಸೋಣವೂ ನ್ಯಾಯವಾಗಿರತಕ್ಕದ್ದು.

ಪ್ರಮಾಣವನ್ನು ಮಾಡಿಸಲು ಕಮಿಷ್ನರುಗಳಿಗೆ ಅಧಿಕಾರ.

5. ಸದರೀ ಸ್ಪೆಷಲ್ ಕೋರ್ಟಿನವರು ಈ ರೆಗ್ಯುಲೇಷನ್ ಪ್ರಕಾರ ವಿಚಾರಿಸಲ್ಪಡುವ ಸಂಗತಿಗಳ ಪೈಕಿ ಯಾವದಕ್ಕೆ ಸಂಬಂಧಿಸಿಯಾದರೂ ತಮ್ಮ ರೂಬರೂ ತನಿಖೆ ಮಾಡಲ್ಪಡುವ ಯಾವ ಮನುಷ್ಯನಿಗಾದರೂ ತಮಿಗೆ ಯುಕ್ತವೆಂದು ತೋಚಬಹುದಾದ ಬಗೆಯಿಂದ ಪ್ರಮಾಣ ಅಥವಾ ಸತ್ಯವನ್ನು ಮಾಡಿಸಬಹುದು.

ಕಮಿಷ್ನರುಗಳ ರೂಬರೂ ನಡಿಸಲ್ಪಡುವ ವಿಚಾರಣೆಗಳು, ಕೊಡಲ್ಪಡುವ ವಾಕ್ಮೂಲಗಳು, ಇಂಡಿಯನ್ ಪಿನಲ್ ಕೋಡಿನ ಅರ್ಥ ವಿವರಣೆ ಪ್ರಕಾರ "ಜುಡಿಷಿಯಲ್ ಪ್ರೊಸಿಡಿಂಗ್ಸ್" ಮತ್ತು "ಎವಿಡೆನ್ಸ್" ಆಗಿರತಕ್ಕದ್ದು.

6. ಸದರೀ ಸ್ಪೆಷಲ್ ಕೋರ್ಟಿನಿಂದ, ಈ ರೆಗ್ಯುಲೇಷನ್ ಮೇರಿಗೆ ಆ ಕೋರ್ಟಿನಲ್ಲಿ ದಾಖಲಾದ ಯಾವಗಾದರೂ ದಾವೆಯನ್ನು, ಅಥವಾ ಅಂತ ಯಾವ ದಾವೆಗಾದರೂ ಸಂಬಂಧಿಸಿದ ಯಾವದಾದರೂ ಸಂಗತಿಯನ್ನು ಕುರಿತು, ಮಾಡಲ್ಪಡುವ ಪ್ರತಿ ವಿಚಾರಣೆಯೂ ಇಂಡಿಯನ್ ಪೀನಲ್ ಕೋಡಿನ ಅರ್ಥ ವಿವರಣೆಯಂತೆ ಒಂದು "ಜುಡಿಷಿಯಲ್ ಪ್ರೊಸಿಡಿಂಗ್ಸ್" ಎಂಬದಾಗಿ ಎಣಿಸಲ್ಪಡತಕ್ಕದ್ದು. ಮತ್ತು ಅಂತ ವಿಚಾರಣೆಗೆ ಸಂಬಂಧವಾಗಿ, ಪ್ರಮಾಣದ ಮೇಲಾಗಲಿ ಅಥವಾ ಪ್ರಮಾಣ ವಿಲ್ಲದೆಯಾಗಲಿ, ಸದರೀ ಸ್ಪೆಷಲ್ ಕೋರ್ಟಿನಿಂದ ಅಥವಾ ಅದರ ರೂಬರೂ ವಿಚಾರಿಸಲ್ಪಡುವ ಯಾವ ಮನುಷ್ಯನಿಂದಲಾದರೂ ಕೊಡಲ್ಪಡುವ ಪ್ರತಿ ವಾಕ್ಮೂಲವೂ ಅದೇ ಕೋಡಿನ ಅರ್ಥವಿವರಣೆಯಂತೆ "ಎವಿಡೆನ್ಸ್" ಎಂಬದಾಗಿ ಎಣಿಸಲ್ಪಡತಕ್ಕದ್ದು.

ಸ್ಪೆಷಲ್ ಕೋರ್ಟಿನ ಆಡಳಿತಗಳು ಹ್ಯಾಗೆ ನಡಿಸಲ್ಪಡತಕ್ಕದ್ದು.

7. (1) ಸದರೀ ಸ್ಪೆಷಲ್ ಕೋರ್ಟಿನ ಆಡಳಿತಗಳು ಅಸಲ್ ದಾವೆಗಳ ವಿಚಾರಣೆ ವಿಷಯದಲ್ಲಿ 1884ನೇ ಇಸವಿ IIನೇ ನಂಬರ್ ರೆಗ್ಯುಲೇಷನಾದ ಸಿವಿಲ್ ಪ್ರೊಸಿಡ್ಯೂರ್ ಕೋಡಿನಲ್ಲಿರುವ ನಿಬಂಧನೆಗಳಂತೆ ನಡಿಸಲ್ಪಡತಕ್ಕದ್ದು.

(2) ಸದರೀ ಸ್ಪೆಷಲ್ ಕೋರ್ಟಿನವರು ಸಾಮಾನ್ಯವಾಗಿ ಬೆಂಗಳೂರಲ್ಲಿ ಕೂಡತಕ್ಕದ್ದು.

(3) ಸದರೀ ಸ್ಪೆಷಲ್ ಕೋರ್ಟಿಗೆ ರಿಜಿಸ್ಟ್ರಾರಾಗಿ ಒಬ್ಬ ಆಫಿಸರನ್ನು ಮೈಸೂರ್ ಗವರ್ನಮೆಂಟಿನವರು ಮೊಕರರ್ಮಾಡತಕ್ಕದ್ದು, ಮತ್ತು ಅಂತ ರಿಜಿಸ್ಟ್ರಾರು, ಸದರೀ ಸ್ಪೆಷಲ್ ಕೋರ್ಟಿನವರು ಆಗಿಂದಾಗ್ಯೆ ನಿಯಮಿಸಬಹುದಾದಂತೆ, ಮಂತ್ರಿತ್ವ ಸ್ವಭಾವದ ಅಧಿಕಾರಗಳನ್ನು ಮತ್ತು ಕೆಲಸಗಳನ್ನು ನಡಿಸತಕ್ಕದ್ದು.

ದಾವೆಗಳನ್ನು ಫೈಸಲ್ಮಾಡೋಣದರಲ್ಲಿ ಸ್ಪೆಷಲ್ ಕೋರ್ಟಿನಿಂದ ಉಪಯೋಗಿಸಲ್ಪಡಬೇಕಾದ ಕಾನೂನು.

8. ಸದರೀ ಸ್ಪೆಷಲ್ ಕೋರ್ಟಿನವರು, ವಂಶಾವಳಿ, ದಾಯಬಾಧ್ಯತೆ, ಮದುವೆ, ಅಥವಾ ಜಾತಿ ಅಥವಾ ಯಾವದಾದರೂ ಮತಸಂಬಂಧವಾದ ಮಾಮೂಲ್ ಅಥವಾ ಏರ್ಪಾಡಿನ ವಿಚಾರವಾದ ಯಾವದಾದರೂ ಪ್ರಮೇಯವನ್ನು ತೀರ್ಮಾನಿಸೋಣ ಅವಶ್ಯಕವಾದಾಗ,—

(*a*) ಹಿಂದೂ ಲಾ, ಅಥವಾ

(*b*) ಕಾನೂನಿನ ಬಲೀಯುಳ್ಳದ್ದಾಗಿಯೂ ವ್ಯವಹಾರಕ್ಕೆ ಸಂಬಂಧಿಸಿದ ಕಕ್ಷಿಗಾರಿಗೆ ಅಥವಾ ಸ್ವತ್ತಿಗೆ ವ್ಯವಸ್ಥಾಪಕವಾಗಿಯೂ ಯಾವದಾದರೂ ಪದ್ಧತಿ ಇದ್ದಲ್ಲಿ ಅಂತ ಪದ್ಧತಿಯೂ,

ಅಂತಾ ಲಾ ಅಥವಾ ಪದ್ಧತಿ ಖಾಯಿದೆ ಮಾಡುವ ಇಲಾಖೆಯ ಖಾಯಿದೆ ಯಿಂದ ವೆತ್ಯಾಸ ಪಡಿಸಲ್ಪಟ್ಟ ಅಥವಾ ಮೌಖೂಫ್ ಮಾಡಲ್ಪಡದಿದ್ದರೆ, ಸದರೀ ಕೋರ್ಟಿನವರ ತೀರ್ಪಿನ ವಿಧಿಯಾಗಿರತಕ್ಕದ್ದು.

(*c*) ವಿಶೇಷ ವಿಧಿಯಿಲ್ಲದ ಸಂದರ್ಭಗಳಲ್ಲಿ, ಸದರೀ ಸ್ಪೆಷಲ್ ಕೋರ್ಟಿನವರು ನ್ಯಾಯ, ನೀತಿ ಮತ್ತು ಸದ್ಧರ್ಮದ ಪ್ರಕಾರ ಫೈಸಲ್ಮಾಡತಕ್ಕದ್ದು.

ಕಾಲನಿಬಂಧನೆ ಸಬಬಿನ ಮೇಲೆ ದಾವೆಗಳು ತಿರಸ್ಕರಿಸಲ್ಪಡಕೂಡದು.

9. (1) ಈ ರೆಗ್ಯುಲೇಷನ್ ಪ್ರಕಾರ ಸದರೀ ಸ್ಪೆಷಲ್ ಕೋರ್ಟಿಗೆ ದಾಖಲಾಗುವ ಯಾವ ದಾವೆಯೂ ಅದಕ್ಕೆ ಲಗಾವಾಗುವ ಸಾಧಾರಣ "ಕಾಲನಿಬಂಧನೆ ಕಾನೂನಿ"ನ ಕಾರಣದಿಂದ ತಿರಸ್ಕರಿಸಲ್ಪಡಕೂಡದು.

ಸ್ಟಾಂಪು ಡ್ಯೂಟಿಯು ಮಾಫಿ.

(2) ಸದರೀ ಸ್ಪೆಷಲ್ ಕೋರ್ಟಿನಲ್ಲಿ ದಾವೇದಾರರಿಂದ ದಾಖಲ್ಮಾಡಲ್ಪಡುವ ದಾವೆಗಳ ಮೇಲಾಗಲಿ ದಸ್ತಾವೇಜುಗಳ ಮೇಲಾಗಲಿ ಸ್ಟಾಂಪುಗಳು ವಸೂಲ್ಮಾಡಲ್ಪಡತಕ್ಕದ್ದಿಲ್ಲ.

347

ಕಮ್ಮಿಷನರುಗಳಿಗೆ ಭಿನ್ನಾಭಿಪ್ರಾಯ ಹುಟ್ಟಿದಾಗ ಆಚರಿಸಬೇಕಾದ ನಡವಡಿಕೆ.

10. ವ್ಯವಹಾರದಲ್ಲಿರುವ ಯಾವದಾದರೂ ವಿಶೇಷಾಂಶದ ವಿಷಯದಲ್ಲಿ ಸದರೀ ಸ್ಪೆಷಲ್ ಕೋರ್ಟಿಗೇರ್ಪಡುವ ಇಬ್ಬರು ಕಮ್ಮಿಷನರುಗಳಿಗೆ ಪರಸ್ಪರ ಅಭಿಪ್ರಾಯ ಭೇದವೇನಾದರೂ ಬಂದಲ್ಲಿ, ಅಂತಾ ಸಂಗತಿಯನ್ನು ಇಂಡಿಯಾ ಗವರ್ನ್‌ಮೆಂಟಿನವರ ತೀರ್ಮಾನಕ್ಕಾಗಿ ಮೈಸೂರ್ ಗವರ್ನ್‌ಮೆಂಟಿನವರ ಮೂಲಕ ಅರಿಕೆ ಮಾಡತಕ್ಕದ್ದು, ಮತ್ತು ಸದರೀ ಸ್ಪೆಷಲ್ ಕೋರ್ಟಿನ ಜಡ್ಜಿಮೆಂಟ್ ಇಂಡಿಯಾ ಗವರ್ನ್‌ಮೆಂಟಿನವರು ತಿಳಿಸಬಹುದಾದ ತೀರ್ಮಾನಕ್ಕೆ ಅನುಸರಿಸಿರತಕ್ಕದ್ದು.

ಸ್ಪೆಷಲ್ ಕೋರ್ಟಿನ ಖರ್ಚಿನ ಸಂದಾಯ.

11. ಸದರೀ ಸ್ಪೆಷಲ್ ಕೋರ್ಟಿನ ಖರ್ಚು ಪ್ರಥಮತಃ ಮೈಸೂರ್ ಗವರ್ನ್‌ಮೆಂಟಿನವರಿಂದ ಕೊಡಲ್ಪಡತಕ್ಕದ್ದು, ಮತ್ತು ಸದರೀ ಸ್ಪೆಷಲ್ ಕೋರ್ಟಿನಿಂದ ಈ ವಿಚಾರದಲ್ಲಿ ಮಾಡಲ್ಪಡತಕ್ಕ ಸಿಫಾರಿಷಿನ ಮೇಲೆ ಇಂಡಿಯಾ ಗವರ್ನ್‌ಮೆಂಟಿನವರು ತೀರ್ಮಾನಿಸಬಹುದಾದ ರೀತಿಯಲ್ಲಿ ಆಖೈರಿಗೆ ವಿಲೆಯಾಗತಕ್ಕದ್ದು.

ಆಖೈರ್ ಫೈಸಲಿಗೆ ಅನಂತರ ಕೋರ್ಟು ಮುಗಿಯತಕ್ಕದ್ದು.

12. ಈ ರೆಗ್ಯುಲೇಷನ್ ಪ್ರಕಾರ ಸದರೀ ಸ್ಪೆಷಲ್ ಕೋರ್ಟಿನವರು ಕೊಡುವ ಆಖೈರ್ ಫೈಸಲನ್ನು ಅವರು ಮೈಸೂರ್ ಗವರ್ನ್‌ಮೆಂಟಿಗೆ ಒಪ್ಪಿಸತಕ್ಕದ್ದು, ಮತ್ತು ಆ ತರುವಾಯ್ಯ ಈ ರೆಗ್ಯುಲೇಷನಿನಂತೆ ನಡಿಯುವ ಸದರೀ ಕೋರ್ಟಿನ ಕೆಲಸಗಳು, ಅಧಿಕಾರಗಳು ಮುಗಿದಂತೆ ನಿಷ್ಕರ್ಷೆಯಾಗತಕ್ಕದ್ದು.

ಆಖೈರ್ ಫೈಸಲನ್ನು ಮೈಸೂರ್ ಗವರ್ನ್‌ಮೆಂಟಿನವರು ಜಾರಿಮಾಡತಕ್ಕದ್ದು.

13. ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಫೈಸಲನ್ನು ಮೈಸೂರ್ ಗವರ್ನ್‌ಮೆಂಟಿನವರು ಕ್ರಮ ಪ್ರಕಾರ ಜಾರಿಮಾಡತಕ್ಕದ್ದು, ಮತ್ತು ಅಂತ ಜಡ್ಜಿಮೆಂಟಿನಿಂದ ಆಜ್ಞಾಪಿಸಲ್ಪಟ್ಟ ಯಾವದಾದರೂ ಹಣ ಪಾವತಿಯನ್ನಾಗಲಿ ಅಥವಾ ಇತರ ವಿಲೇವಾರಿಯನ್ನಾಗಲಿ ಮಾಡುವದಕ್ಕೆ ಮುಂಚೆ, ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಜಡ್ಜಿಮೆಂಟಿನಲ್ಲಿ ನಮೂದಿಸಲ್ಪಟ್ಟಿರಬಹುದಾದ ಷರತ್ತುಗಳು ಮತ್ತು ಭರವಸೆಗಳು ಪೂರಾ ಜಾರೀಲಿ ಬರುವದಕ್ಕೋಸ್ಕರವಾಗಿ, ತಮಗೆ ಯುಕ್ತ ತೋಚಬಹುದಾದಂತೆ, ಏರ್ಪಾಡುಗಳನ್ನು ಮಾಡಿ ಜಾಮೀನುಗಳನ್ನು ಪಡಿಯುತಕ್ಕದ್ದು.

ಸಿವಿಲ ದಾವೆಗಳಿಗೆ ಆಟಂಕ.

14. ಸದರೀ 5,67,338—15—1 (ಐದುಲಕ್ಷವೂ ಅರವತ್ತೇಳು ಸಾವಿರದ ಮುನ್ನೂರು ಮೂವತ್ತೆಂಟು ರೂಪಾಯಿ, ಹದಿನೈದಾಣೆ, ಒಂದುಪೈನ ಮೊಬಲಗು ಅಥವಾ ಅದರ ಪೈಕಿ ಯಾವ ಭಾಗದ ವಿಷಯದಲ್ಲಾಗಲಿ, ಅಥವಾ ಈ ರೆಗ್ಯುಲೇಷನಿನ ನಿಬಂಧನೆಗಳನ್ನು ಜಾರಿ ಮಾಡತೋಣದರಲ್ಲಿ ಮಾಡಲ್ಪಟ್ಟ ಸಂದಾಯ ಅಥವಾ ನಡಿಸಲ್ಪಟ್ಟ ಕೃತ್ಯದ ವಿಷಯದಲ್ಲಾಗಲಿ, ಅಥವಾ ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಜಡ್ಜಿಮೆಂಟಿನ ಅಭಿಪ್ರಾಯಗಳ ವಿಷಯದಲ್ಲಾಗಲಿ, ಯಾವ ಸಿವಿಲ್ ಕೋರ್ಟಿನವರೂ ಇಖ್ತಿಯಾರಿಯನ್ನು ಚಲಾಯಿಸತಕ್ಕದ್ದಲ್ಲ.

ಕೆ. ಶೇಷಾದ್ರಿ, ಐಯ್ಯರ್,
ಮೈಸೂರ್ ಸಂಸ್ಥಾನದ ದಿವಾನ್.

348

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಸ್ ಅದ್ದು! [ನಂ. 18.

ಬೆಂಗಳೂರು, ಗುರುವಾರ, ಮೇ ತಾ|| 7, ಸ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷ್ ವ ಯಡ್ಯುಕೇಷ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 16ನೇ ಏಪ್ರೈಲ್ 1896.

ನಂ. ಸಿ. 160.—ಸ್ 1894ನೇ ಇಸವಿಯ ಮೈಸೂರ್ ಜೈಲ್ ಮ್ಯಾನ್ಯುಯಲಿನ 86ನೇ ಪುಟದಲ್ಲಿ ಛಾಪಿಸಿರುವ 519ನೇ ರೂಲಿಗೆ ಬದಲಾಗಿ ಇದರಡಿ ಕಂಡದ್ದನ್ನು ಸೇರಿಸತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ:

"519. ಯಾವ ಖೈದಿಯಾಗಲಿ ಅಪಾಯಕರವಾದ ಯಾ ಗುಣವಾಗದ ಕಾಹಿಲೆಯಲ್ಲಿದ್ದು ಮತ್ತು ಅಂಥಾವನ ವಿಷಯದಲ್ಲಿ ಸದರೀ ಖೈದಿಯು ಖುಲಾಸೆ ಮಾಡಲ್ಪಟ್ಟ ಹೊರತು ಅನ್ಯಥಾ ಬದುಕಲಾರನೆಂದು ಸದರೀ ಬಂದೀಖಾನೆಯ ಮೆಡಿಕಲ್ ಆಫಿಸರರು ಅಭಿಪ್ರಾಯ ಪಟ್ಟರೆ ಜೈಲ್ ಸೂಪರ್ರಿಟೆಂಡೆಂಟುವರು ಗವರ್ನಮೆಂಟ್ ಆರ್ಡರ್ ಅನುಸರಿಸಿ ಖುಲಾಸೆ ಮಾಡಲ್ಪಡುವ ಬಗ್ಯಾಗಿ ಬಂದೀಖಾನೆಯ ಇನ್ಸ್ಪೆಕ್ಟರ್ ಜನರಲ್‌ಯವರಿಗೆ ಶಿಫಾರಸ್ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಜೈಲ್ ಸೂಪರ್ರಿಟೆಂಡೆಂಟರವರು ಸದರೀ ಖೈದಿಯು ಬಂದೀಖಾನೆಯಲ್ಲಿರುವಾಗ್ಯೆ ಅಕ್ರಮನಡತೆಯುಳ್ಳವನಾಗಿರಲಿಲ್ಲವೆಂದು ದೃಢಪಡಿಸಬೇಕು ಮತ್ತು ಮೆಡಿಕಲ್ ಆಫಿಸರರು ಸದರೀ ಖೈದಿಯ ಖುಲಾಸೆ ಬಗ್ಯಾಗಿ ಕಾರಣಭೂತವಾದ ಕಾಹಿಲೆಯು ಯಾವ ವಿಧದಿಂದಲಾಗಲಿ ಖೈದಿಯು ಮನಃಪೂರ್ವಕ ಮಾಡಿದ ಕೆಲಸದಿಂದ ಉಂಟಾಗಲಿಲ್ಲವೆಂತಲೂ ಅಥವಾ ಹೆಚ್ಚಾಗಲಿಲ್ಲವೆಂತಲೂ ಮತ್ತು ಸದರೀ ಖೈದಿಯು ಇನ್ನೂ ಬಂದೀಖಾನೆಯಲ್ಲಿ ಯಿಡಲ್ಪಟ್ಟರೆ

ಅವನ ಪ್ರಾಣಕ್ಕೆ ಅಪಾಯ ಉಂಟಾಗುವದೆಂತಲೂ ಮತ್ತು ಸದರೀಯವನು ಖುಲಾಸೆ ಮಾಡಲ್ಪಟ್ಟರೆ ಕಾಹಿಲೆಯು ಗುಣವಾಗಬಹು ದೆಂತಲೂ ಸರ್ಟಿಫೈ ಮಾಡತಕ್ಕದ್ದು.''

ತಾರೀಖು 18ನೇ ಏಪ್ರೈಲ್ 1896.

ನಂ. 11846.—ಮಿ. 1685, ಸರ್ 1869ನೇ, ಇಸವಿಯ ಜನರಲ್ ಸ್ಟ್ಯಾಂಪ್ ಆಕ್ಟಿನ 48ನೇ ಸೆಕ್ಷನ್ ಅನುಸರಿಸಿ ಮೈ ಸೂರ್ ಗವರ್ನಮೆಂಟಿನವರು, 1870ನೇ ಇಸವಿ ಸೆಪ್ಟಂಬರ್ 23ನೇ ಮುಕ್ಕಾಂ 209ನೇ ನಂಬರ್‌ಉಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ Xನೇ ರೂಲನ್ನು ರದ್ದುಮಾಡಿ ಇದರಡಿ ಬರುವ ರೂಲನ್ನು ಏರ್ಪಡಿಸಿರುತ್ತಾರೆ:—

''ಪ್ರತಿಯುಕ್ಸ್ ಅಫಿಷಿಯೋ ಅಥವಾ ಲೈಸೆನ್ಸ್ ಪಡೆದಿರುವ ಬಿಕರೀದಾರನು ತಾನು ಬಿಕರಿಮಾಡುವ ಎರಡನೇ ಕ್ಲಾಸಿನ ಪ್ರತಿ ಸ್ಟ್ಯಾಂಪ್ ಕಾಗದದ ಹಿಂಭಾಗದಲ್ಲಿ ಜಂಜರ್ ನಂಬರ್, ಬಿಕರಿಯ ತಾರೀಖು, ಖರೀದಿಗೆ ಪಡೆದುಕೊಂಡವನ ಹೆಸರು ವ ವಾಸಸ್ಥಳ, ಮತ್ತು ಸದರೀ ಸ್ಟ್ಯಾಂಪು ಹಣ ಹಾಜರ್‌ಮಾಡಿದವನಲ್ಲದ ಇತರ ಬೇರೇ ಮನುಷ್ಯನಿಗೋಸ್ಕರ ಕೊಂಡುಕೊಳ್ಳಲ್ಪಟ್ಟರೆ ಅಂಥಾ ಇತರ ಮನುಷ್ಯ ನ ಹೆಸರು ವ ವಾಸಸ್ಥಳ ಮತ್ತು ಅಕ್ಷರದಲ್ಲಿ ಪೂರ್ತಿಯಾಗಿ ಸ್ಟ್ಯಾಂಪಿನ ಕಿಮ್ಮತ್ತು ಮತ್ತು ಅವನ ಸಾಧಾರಣವಾದ ರುಜು ಸಹ ಬರಿಯ ತಕ್ಕದ್ದು. ಲೋಕಲ್ ಗವರ್ನಮೆಂಟಿನಿಂದ ವಿಧಿಸಲ್ಪಡಬಹುದಾದ ನಮೂನೆಯಲ್ಲಿ ಒಂದು ರಿಜಿಸ್ಟರ್ ಇಟ್ಟು ಸದರೀ ರಿಜಿಸ್ಟರಿನಲ್ಲಿ ಈ ತಪಶೀಲುಗಳನ್ನು ಬರಿಯತಕ್ಕದ್ದು. ಅಂಥಾ ಯಾವ ಬಿಕರಿದಾರನಾಗಲಿ ಬಿಕರಿ ಮಾಡಲ್ಪಟ್ಟ ಸ್ಟ್ಯಾಂಪಿನ ಮೇಲೆ ತನಗೆ ತಿಳಿದು ಯಿದ್ದೂ ಕೂಡ ಸುಳ್ಳು ಯಿಂಡಾರ್ಸ್ಮೆಂಟನ್ನು ಮಾಡಕೂಡದು ಅಥವಾ ತನ್ನ ರಿಜಿಸ್ಟರಿನಲ್ಲಿ ಸುಳ್ಳು ಖತಾಯಿತಿಯನ್ನು ದಾಖಲ್‌ಮಾಡಕೂಡದು.''

ಮೊಕ್ಕಾಂ ಮೈಸೂರು ತಾರೀಖು 22ನೇ ಏಪ್ರೈಲ್ 1896.

ನಂ. ಸಿ. 177.—ಚಳ್ಳಕೆರೆ ತಾಲ್ಲೂಕು ಅಮಲ್‌ದಾರ್‌ರಾದ ಟಿ. ಎಂ. ನಾರಣಯ್ಯನವರಿಗೆ 1896ನೇ ಜನವರೀ 27 ವ ಮಾರ್ಚಿ 12ನೇ ಮುಕ್ಕಾಂ 6755—ರೆ. 2605 ಮತ್ತು 8292—ರೆ. 3207ನೇ ನಂಬರುಗಳ ಗವರ್ನಮೆಂಟ್ ಇಸ್ತಿಹಾರ್‌ನಾಮೆಗಳಲ್ಲಿ ಕೊಡಲ್ಪಟ್ಟದ್ದ ಎರಡೂವರೆ ತಿಂಗಳ ಪ್ರಿವಿಲೀಜ್ ರಜಾ ಯಿನ್ನೂ ಹದಿನೈದು ದಿವಸಗಳ ಪರಿಯಂತ ಜಾಸ್ತೀಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು ತಾರೀಖು 27ನೇ ಏಪ್ರೈಲ್ 1896.

ನಂ. 12017.—ಎ. 387, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 172ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿಸ್ಟರ್ ಬಿ. ವೆಂಕಟಸತಯ್ಯಂಗಾರ್‌ರವರು 1896ನೇ ಮಾರ್ಚಿ 22ನೇ ಮುಕ್ಕಾಂ ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 12079.—ಮಿ. 1730. ಸರ್ 1890ನೇ ಇಸವಿಯ ಮೈಸೂರ್ ಅರಮನೆ ರೆಗ್ಯುಲೇಷನಿನ 22ನೇ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ 1895ನೇ ಮೇ 1ನೇ ಮುಕ್ಕಾಂ 1ನೇ ನಂಬರ್ ಇಸ್ತಿಹಾರಿನ 1ನೇ ಪ್ಯಾರ (3) ವ (11)ನೇ ಕ್ಲಾಜುಗಳಲ್ಲಿ ಇದರಡೀ ಕಂಡ ತಿದ್ದುಪಾಟುಗಳು ಮಾಡತಕ್ಕದ್ದೆಂದು ಮೈಸೂರು ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

i. ಕ್ಲಾಜ್ (3)ರಲ್ಲಿ ''ಪೋಸ್ಟಲ್ ಆಫಿಸರ್‌ಗಳು'' ಎಂಬ ಮಾತು ತೆಗೆದುಹಾಕತಕ್ಕದ್ದು.

ii. ಕ್ಲಾಜ್ (11)ರಲ್ಲಿ ''ಕೆಲಸ'' ಯೆಂಬಮಾತಿನ ತರುವಾಯ ಇದರಡಿ ಕಂಡದ್ದನ್ನು ಸೇರಿಸತಕ್ಕದ್ದು:—

''ಮತ್ತು ಪೋಸ್ಟ್ ಆಫೀಸ್‌ಗಳ ಸೂಪರಿಂಟೆಂಡೆಂಟರು ವ ಇನ್ಸ್‌ಪೆಕ್ಟರುಗಳು ಮತ್ತು ಮೇಯಿಲ್ ಓವರ್‌ಸಿಯರುಗಳು,
''ಮತ್ತು ಮೈಸೂರ್ ಗವರ್ನಮೆಂಟಿನವರು ಆಗಿಂದಾಗ್ಯೆ ಜನರಲ್ ಯಾ ಸ್ಪೆಷಲ್ ಆರ್ಡರ್ ಮೂಲಕ ಅಪ್ಪಣೆ ಕೊಡಬಹು
''ದಾದಂಥಾ ಪೋಸ್ಟಲ್ ಇಲಾಖೆಯ ಇತರ ಆಫಿಸರ್‌ಗಳು.''

ತಾರೀಖು 28ನೇ ಏಪ್ರೈಲ್ 1896 ಮೊಕ್ಕಾಂ ಮೈಸೂರು.

ಸಿ. ನಂ. 226.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಮಿಸ್ಟರ್ ಕೆ. ಪಿ. ಪುಟ್ಟಣ್ಣಚಟ್ಟಿಯವರು 1ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್‌ಮಾಡಲ್ಪಟ್ಟು ಮತ್ತು 13ನೇ ಸೆಕ್ಷನ್ ಅನುಸರಿಸಿ ಸದರೀಯವರು ಕ್ಲೋಸ್‌ಪ್ಯಾಟೆಯ ಸಬ್ ಡಿವಿಜನ್ ಚಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ.

2. ಮಿಸ್ಟರ್ ಕೆ. ಪಿ. ಪುಟ್ಟಣ್ಣಚಟ್ಟಿಯವರು 36ನೇ ಸೆಕ್ಷನ್ ಅನುಸರಿಸಿ ಸಬ್ ಡಿವಿಜನಲ್ ಮಾಜಿಸ್ಟ್ರೇಟರ, ತಮ್ಮ ಸಾಧಾರಣ ಅಧಿಕಾರಗಳೊಂದಿಗೆ 37ನೇ ಸೆಕ್ಷನ್ ಅನುಸರಿಸಿ 1ನೇ ಕ್ಲಾಸ್ ಮಾಜಿಸ್ಟ್ರೇಟುಗಳು ವ ಸಬ್ ಡಿವಿಜನಲ್ ಮಾಜಿಸ್ಟ್ರೇಟುಗಳಿಗೆ ಗವರ್ನಮೆಂಟಿನವರಿಂದ ಕೊಡಲ್ಪಡುವ IVನೇ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ದರೋಬಸ್ತು ಜಾಸ್ತಿ ಅಧಿಕಾರಗಳೂ ಅಂದರೆ ಪೂರ್ತಾಗಿ ದರ್‍ಯಾಫ್ತು ಮಾಡುವ ಬಗ್ಗೆ ಅಧಿಕಾರ ವಿನಾ ಮಿಕ್ಕ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ಸಿ. ನಂ. 227.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 13ನೇ ಸೆಕ್ಷನ್ ಅನುಸರಿಸಿ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಕೆ. ಎಸ್. ದೊರಸಾಮಿ ಐಯ್ಯರ್ ಯವರು ಚಿಕ್ಕಬಳ್ಳಾಪುರದ ಸಬ್ ಡಿವಿಜನಿನ ಚಾರ್ಜಿಗೆ ಹಂಗಾಮಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ.

2. ಮಿಸ್ಟರ್ ದೊರಸಾಮಿ ಐಯ್ಯರ್‌ಯವರು 36ನೇ ಸೆಕ್ಷನ್ ಅನುಸರಿಸಿ ಸಬ್ ಡಿವಿಜನಲ್ ಮಾಜಿಸ್ಟ್ರೇಟರ, ತಮ್ಮ ಸಾಧಾರಣ ಅಧಿಕಾರಗಳೊಂದಿಗೆ 37ನೇ ಸೆಕ್ಷನ್ ಅನುಸರಿಸಿ 1ನೇ ಕ್ಲಾಸ್ ಮಾಜಿಸ್ಟ್ರೇಟುಗಳು ವ ಸಬ್ ಡಿವಿಜನಲ್ ಮಾಜಿಸ್ಟ್ರೇಟುಗಳಿಗೆ ಗವರ್ನಮೆಂಟಿನವರಿಂದ ಕೊಡಲ್ಪಡುವ IVನೇ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ದರೋಬಸ್ತು ಜಾಸ್ತಿ ಅಧಿಕಾರಗಳು ಅಂದರೆ ಪೂರ್ತಾಗಿ ದರ್‍ಯಾಫ್ತು ಮಾಡುವ ಬಗ್ಗೆ ಅಧಿಕಾರ ವಿನಾ ಮಿಕ್ಕ ಅಧಿಕಾರಗಳೂ ಹಂಗಾಮಿಯಾಗಿ ಕೊಡಲ್ಪಟ್ಟಿರುತ್ತಾರೆ.

ಸಿ. ನಂ. 228.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 13ನೇ ಸೆಕ್ಷನ್ ಅನುಸರಿಸಿ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಕೆ. ರಾಮಚಂದ್ರರಾಯರವರು ಸಾಗರದ ಸಬ್ ಡಿವಿಜನಿನ ಚಾರ್ಜಿಗೆ ಹಂಗಾಮಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ.

2. ಮೆಸ್ಟರ್ ಕೆ. ರಾಮಚಂದ್ರರಾಯರವರು 36ನೇ ಸೆಕ್ಷನ್ ಅನುಸರಿಸಿ ಸಬ್ ಡಿವಿಜನಲ್ ಮಾಜಿಸ್ಟ್ರೇಟರ, ತಮ್ಮ ಸಾಧಾರಣ ಅಧಿಕಾರಗಳೊಂದಿಗೆ 37ನೇ ಸೆಕ್ಷನ್ ಅನುಸರಿಸಿ 1ನೇ ಕ್ಲಾಸ ಮಾಜಿಸ್ಟ್ರೇಟುಗಳೂ ವ ಸಬ್ ಡಿವಿಜನಲ್ ಮಾಜಿಸ್ಟ್ರೇಟುಗಳಿಗೆ ಗವರ್ನಮೆಂಟಿನವರಿಂದ ಕೊಡಲ್ಪಡುವ IVನೇ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ದರೋಬಸ್ತು ಜಾಸ್ತಿ ಅಧಿಕಾರಗಳೂ ಅಂದರೆ ಪೂರಾಗಿ ದರ್ಯಾಫ್ತಿ ಮಾಡುವ ಬಗ್ಯೆ ಅಧಿಕಾರ ವಿನಾ ಮಿಕ್ಕ ಅಧಿಕಾರಗಳು ಹಂಗಾಮಿಯಾಗಿ ಕೊಡಲ್ಪಟ್ಟಿರುತ್ತಾರೆ.

ಸಿ. ನಂ. 229.—ಹೊಸಕೋಟೆ ತಾಲ್ಲೂಕು ಅಮಲ್ದಾರ್ ಟಿ. ಬಾವಾರಾಯರಿಗೆ ಮಾಹೆ ಮಜಕೂರು 28ನೇ ಮರ್ಕಾಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ರೆವಿನ್ಯೂ ಪ್ರೊಬೇಷನರಾದ ಸಿ. ಕೃಷ್ಣಮನಾಯುಡುಯವರು ಸದರೀ ಟಿ. ಬಾವಾರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹೊಸಕೋಟೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಸಿ. ನಂ. 239.—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟು ಟ್ರೆಜರಿಯ ಚಾರ್ಜಿನಲ್ಲಿರುವ ಯಕ್ಸ್ಟ್ರಾ ಅಸಿಸ್ಟೆಂಟ ಕಮ್ಮಿಷನರ್ ಮೆಸ್ಟರ್ ಸಿ. ಕೃಷ್ಣರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಬೆಂಗಳೂರು ಡಿಸ್ಟ್ರಿಕ್ಟು ಪ್ರೊಬೇಷನರಿ ಅಸಿಸ್ಟೆಂಟ ಕಮ್ಮಿಷನರಾದ ಮೆಸ್ಟರ್ ವಿ. ಆರ್. ತ್ಯಾಗರಾಜ ಐಯ್ಯರ್ ಎಂ. ಏ. ಯವರು ಹಂಗಾಮಿಯಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟು ಮತ್ತು ಸದರೀ ಮೆಸ್ಟರ್ ಸಿ. ಕೃಷ್ಣರಾಯರವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟು ಟ್ರೆಜರಿಯ ಚಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ.

ಸಿ. ನಂ. 243.—ಸರ್ಜನ್ ಕರ್ನಲ್ ಟಿ. ಜೆ. ಮೆಗ್ಗಾನ್ ಯವರು ಬ್ರಿಟಿಷ ನವುಕರಿಗೆ ವಾಪಸ್ ಹೊರಟು ಹೋದ ಸಬಬ್ ಇದರಡೀ ಕಂಡ ಬಡ್ತಿಗಳು 1896ನೇ ಏಪ್ರೆಲ್ 30ನೇ ಮರ್ಕಾಂ ಲಾಗಾಯತು ಹುಕುಂ ಮಾಡಲ್ಪಟ್ಟಿರುತ್ತವೆ:—

ಮೈಸೂರ ಸಿವಿಲ್ ಸರ್ಜನ್‌ರಾದ ಸರ್ಜನ್ ಲೆಫ್ಟಿನೆಂಟ ಕರ್ನಲ್ ಪಿ. ಎಚ್. ಬೆನ್ಸನ್ ಎಂ. ಬಿ. ಸಿ. ಎಂ., ಎಂ. ಆರ್. ಸಿ. ಎಸ್. ಯವರು ಸಬ್ ಪ್ರೋಟಮಾಗಿ ಸೀನಿಯರ್ ಸರ್ಜನ್ ಮತ್ತು ಮೈಸೂರ ಗವರ್ನಮೆಂಟ ಎಕ್ಸ್ ಅಫಿಷಿಯೋ ಸ್ಯಾನಿಟರಿ ಕಮ್ಮಿಷನರಾಗಿರತಕ್ಕದ್ದು.

ಅಸಿಸ್ಟೆಂಟ ಸರ್ಜನ್‌ರಾದ ಮೆಸ್ಟರ್ ಟಿ. ವಿ. ಆರ್ಮುಗ ಮೊದಲಿಯಾರ್ ಎಂ. ಬಿ. ಸಿ. ಎಂ. ಯವರು ಸಬ್ ಪ್ರೋಟಂ ತರೀಕ ಮೈಸೂರ 3ನೇ ಕ್ಲಾಸ ಸಿವಿಲ್ ಸರ್ಜನ್‌ರಾಗಿ ಆಕ್ಟ ಮಾಡತಕ್ಕದ್ದು.

ತಾರೀಖು 30ನೇ ಏಪ್ರೆಲ್ 1896, ಮೊಕ್ಕಾಂ ಮೈಸೂರು.

ನಂ. 12115—ಯ. 389, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 173ನೇ ಆರ್ಟಿಕಲ್ ಅನುಸರಿಸಿ ಮೈಸೂರಿನ ಯಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್‌ರವರಿಗೆ ಅಸಿಸ್ಟೆಂಟರಾದ ಮೆಸ್ಟರ್ ಟಿ. ಆರ್. ವೆಂಕಟಸಾಮಿನಾಯಡುಯವರಿಗೆ 1896ನೇ ಮಾರ್ಚಿ 22ನೇ ಮರ್ಕಾಂ ಲಾಗಾಯತು ಎಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 4ನೇ ಮೇ 1896. ಮೊಕ್ಕಾಂ ಮೈಸೂರು.

ಕ್ಯಾಂಪ ನಂ. 248.—ಸಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ ಎಸ್. ಶ್ರೀನಿವಾಸರಾಯರಿಗೆ 1896ನೇ ಏಪ್ರೆಲ್ 16ನೇ ಮರ್ಕಾಂ 9141—ರೆ. ಫಾ. 96—95ನೇ ನಂಬರ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಸ್ವಂತ ಕೆಲಸದ ಮೇಲಿನ ರಜಾವನ್ನ ಇನ್ನು ಒಂದು ತಿಂಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾಲ್ಲೂಕು ಶಿರಸ್ತೇದಾರ್ ಕನ್ನಯ್ಯ ಶಾಸ್ತ್ರಿಯವರು ಸದರೀ ಶ್ರೀನಿವಾಸರಾಯರು ರಜಾವನ್ನ ಉಪಯೋಗಿಸಿಕೊಂಡ ತಾರೀಖು ಲಾಗಾಯತು ಸಿಡ್ಲಘಟ್ಟ ತಾಲ್ಲೂಕ ಅಮಲ್ದಾರ್ ವ 3ನೇ ಕ್ಲಾಸ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಮೈಸೂರ ಕ್ಯಾಂಪ ನಂ. 97, ತಾರೀಖು 13ನೇ ಏಪ್ರೆಲ್ 1896.

1896ನೇ ಇಸವಿ ಮಾರ್ಚಿ 6ನೇ ಮರ್ಕಾಂ 8032—ಎಕ್ಸ. 245ನೇ ನಂಬರು ಮತ್ತು ಅದೇ ಮಾಹೆ 5ನೇ ಮರ್ಕಾಂ 8030—ಎಕ್ಸ. 243ನೇ ನಂಬರು ಇಸ್ತಿಹಾರುಗಳಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಯಡತೊರೆ, ಹುಣಸೂರು, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ತಿರಮಕೂಡ್ಲು ನರಸೀಪುರ ಈ ತಾಲ್ಲೂಕುಗಳ ಬಾಬತು 1896—97ನೇ ಸಾಲಿನ ಸಾರಾಯಿ ಬಿಕರಿ ಗುತ್ತಿಗೆ ಫಿರಖಾಗಳ ಮತ್ತು ಶೇಂದಿ ಫಿರಖಾಗಳ ಹರಾಜು ಬಗ್ಯೆ ಮೊಕರರೂ ಮಾಡಲ್ಪಟ್ಟಿರುವ ತಾರೀಖುಗಳಿಗೆ ಬದಲಾಗಿ ಇದರಡಿ ನಮೂದಿಸೋಣಾದ ತಾರೀಖುಗಳಲ್ಲಿ ಹರಾಜು ಕ್ರಮ ನಡಿಸಲ್ಪಡುವದು:—

ತಾಲ್ಲೂಕು.		ಸರಾಯಿ.	ಶೇಂದಿ.
ಯಡತೊರೆ	..	1896ನೇ ಮೇ ತಾ|| 23	1896ನೇ ಮೇ ತಾ|| 23
ಹುಣಸೂರು	..	ಡಿಟ್ಟೋ 25	ಡಿಟ್ಟೋ 25 ಮತ್ತು 26
ಹೆಗ್ಗಡದೇವನಕೋಟೆ	..	ಡಿಟ್ಟೋ 27	ಡಿಟ್ಟೋ 27
ಗುಂಡ್ಲುಪೇಟೆ	..	ಡಿಟ್ಟೋ 29	ಡಿಟ್ಟೋ 29 ಮತ್ತು 30
ಚಾಮರಾಜನಗರ	..	ಡಿಟ್ಟೋ 31	ಡಿಟ್ಟೋ 31 ಮತ್ತು ಜೂನ್ 1
ಯಳಂದೂರು	..	1896ನೇ ಜೂನ್ ತಾ|| 2	ಡಿಟ್ಟೋ ಡಿಟ್ಟೋ
ತಿರಮಕೂಡ್ಲು ನರಸೀಪುರ	..	ಡಿಟ್ಟೋ 3	1896ನೇ ಜೂನ್ ತಾ|| 3 ಮತ್ತು 4

ತಾರೀಖು 25ನೇ ಏಪ್ರಲ್ 1896, ಮೊಕ್ಕಾಂ ಮೈಸೂರು.

ನಂ. 9588.—ರೆ. ಫಾ. 104—95, ತುಮಕೂರು ತಾಲ್ಲೂಕು ಅಮಲ್‌ದಾರ್ ಮುಹಮ್ಮದ್‌ರಜಾಯವರಿಗೆ, 1896ನೇ ಏಪ್ರಿಲ್ 11ನೇ ಮುರ್ಸ್ಕಾಂ 9311—ರೆ. ಫಾ. 104—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ದಿನದ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 29ನೇ ಏಪ್ರೈಲ್ 1896, ಮೊಕ್ಕಾಂ ಮೈಸೂರ್.

ನಂ. 9661.—ರೆ. 3731,—ಕುಣಿಗಲ್ ತಾಲ್ಲೂಕು ಅಮಲ್‌ದಾರ್ ವಿ. ಪಾರ್ಥಸಾರಥಿ ಅಯ್ಯಂಗಾರ್ರವರಿಗೆ, 1896ನೇ ಜನವರಿ 29ನೇ ಮುರ್ಸ್ಕಾಂ 6798.—ರೆ. 2640ನೇ ನಂಬರ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ನಲ್ವತ್ತು ದಿನಗಳ ಪ್ರಿವಿಲೇಜ್ ರಜಾವನ್ನ 1896ನೇ ಮಾರ್ಚಿ 18ನೇ ಮುರ್ಸ್ಕಾಂ ಲಾಗಾಯತು ಅವರು ಉಪಯೋಗಿಸಿಕೊಂಡು ಮತ್ತು 1896ನೇ ಏಪ್ರೆಲ್ 18ನೇ ಮುರ್ಸ್ಕಾ ಮಿನ ಪೂರ್ವಾಹ್ಣದಲ್ಲಿ ಕೆಲಸಕ್ಕೆ ವಾಪಸ್ ಬಂದ ಸಬಬು, ಉಪಯೋಗಿಕೊಳ್ಳದ ರಜಾ ಭಾಗವನ್ನ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 9666.—ರೆ. 3734,—ಸಿರಾ ತಾಲ್ಲೂಕು ಅಮಲ್‌ದಾರ್ ಪಿ. ವೇದಾಂತದೇಶಿಗಂ ಅಯ್ಯಂಗಾರ್ರವರಿಗೆ 1896ನೇ ಫೆಬ್ರುವರಿ 21ನೇ ಮುರ್ಸ್ಕಾಂ 7500.—ರೆ. 2925ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ವೊಂದು ತಿಂಗಳ ಪ್ರಿವಿಲೇಜ್ ರಜಾವನ್ನ 1896ನೇ ಮಾರ್ಚಿ 2ನೇ ಮುರ್ಸ್ಕಾಂ ಲಾಗಾಯತು ಉಪಯೋಗಿಸಿಕೊಂಡು ಮತ್ತು 1896ನೇ ಏಪ್ರೆಲ್ 1ನೇ ಮುರ್ಸ್ಕಾ ಮಿನ ಪೂರ್ವಾಹ್ಣದಲ್ಲಿ ಕೆಲಸಕ್ಕೆ ವಾಪಸ್ ಬಂದ ಸಬಬು, ಉಪಯೋಗಿಸಿಕೊಳ್ಳದ ರಜಾ ಭಾಗವನ್ನ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 30ನೇ ಏಪ್ರೈಲ್ 1896, ಮೊಕ್ಕಾಂ ಮೈಸೂರ್.

ನಂ. 9683.—ರೆ. 374,—ಇದರಡಿಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕ್ಕುಂ ಮಾಡಲ್ಪಟ್ಟಿರುತ್ತವೆ:—

ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1. ಕೆಂಪನಪುರ ಗ್ರಾಮ (ಸರ್ವಮಾನ್ಯ)	ತಿರುಮಕೂಡ್ಲು ನರಸೀಪುರ	ಚಾಮರಾಜನಗರ.
2. ಕನ್ನಗಾಲ್ ಗ್ರಾಮ (ಜೋಡಿ)	ಡಿಟ್ಟೋ	ಡಿಟ್ಟೋ

ನಂ. 9684.—ರೆ. 3741,—ಕಾಯಂಗುತ್ತಾ ಮಾರಗೊಂಡನಹಳ್ಳಿ ಕೃಷ್ಣಸಾಗರ ಗ್ರಾಮವನ್ನ ಕ್ಲೋಸ್ ಟೆ ಸಬ್ ತಾಲ್ಲೂಕಿನಿಂದ ಬೆಂಗಳೂರು ತಾಲ್ಲೂಕಿಗೆ ವರ್ಗಾಯಿಸಿರುತ್ತೆ.

ಹುಕುಂ ಬಮೋಜಿಬ್,
ಟಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್‌ನಾಮಾ.

ತಾರೀಖು 2ನೇ ಮೇ 1896.

ಲೋಕಲ್ ಸರ್ವಿಸ್ ರೆಜಿಮೆಂಟನಲ್ಲಿ 1896ನೇ ಏಪ್ರೈಲ್ 11ನೇ ಮುರ್ಸ್ಕಾಂ ಲಾಗಾಯತು ಇದರಡಿಕಂಡ ಬಡ್ತಿಗಳು ಮಾಡಲ್ಪಟ್ಟಿರುತವೆ:—

ಹೆಸರು.	ಹುದ್ದೆಯಿಂದ.	ಹುದ್ದೆಗೆ.	ಷರಾ.
ಮುಹಮ್ಮದ್ ಇಸ್ಮಾಯಿಲ್	ಸರ್‌ಜಫರ್‌ದಾರ್	ರಿಸಾಲ್‌ದಾರ್, 4ನೇ ಗ್ರೇಡ್	ಬಡ್ತಿ ಮಾಡಲ್ಪಟ್ಟ ರಿಸಾಲ್‌ದಾರ್ ಕೃಷ್ಣರಾಯರಿಗೆ ಬದಲಾಗಿ.
ಮೀರ್ ಸಾದುದ್ದೀ	ಸೂಪರ್ ನ್ಯೂಮರರಿ ಜಮಾದಾರ್	ಸರ್‌ಜಫರ್‌ದಾರ್.	

ಹುಕುಂ ಬಮೋಜಿಬ್,
ಪಿ. ಯಚ್. ಮೆಕ್ಕಿಂಟೈರ್, ಲೆ. ಕರ್ನಲ್,
ಮಿಲಿಟರಿ ಸೆಕ್ರೆಟರಿ.

352

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ನಂ. 18.

ಬೆಂಗಳೂರು, ಗುರುವಾರ, ಮೇ ತಾ|| 7, ಸನ್ 1896.

IIನೇ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಅಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರಸರ ಡಿಟೋ	,, 170
1	ಮದ್ರಾಸ್ ಒಕ್ಸರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ರ್ಯಾಮರವರ ಡಿಟೋ	,, 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

ಸರ್ 1896ನೇ ಇಸವಿ ಫೆಬ್ರುವರಿ ತಾರೀಖು 26.

ಸರ್ 1897ನೇ ಸಂವತ್ಸರಾನಂತರ ಎಲ್ಲಾ ದೇಶೀ ಪರೀಕ್ಷೆಗಳಿಗೂ ಪರೀಕ್ಷ್ಯರು ಅವರ ಪ್ರಶ್ನ ಪತ್ರಿಕೆಗಳಲ್ಲಿ ಸಂಸ್ಕೃತ ಭಾಷೆಯನ್ನು ದೇವನಾಗರಿ ಅಕ್ಷರದಲ್ಲೇ ಬರೆಯತಕ್ಕದ್ದು.

ಇಂಗ್ಲೀಷ್ ಭಾಷೆಯನ್ನು ತಮ್ಮ ದೇಶಭಾಷೆಯಾಗಿ ಉಳ್ಳಂಥಾ ಪರೀಕ್ಷ್ಯಯರು ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ಕ್ರೀರ್ಟಸ ಷಿಲಿಂಗ್ ಹಿಸ್ಟರಿ ಆಫ್ ಇಂಗ್ಲಂಡ್ ಎಂಬದರಲ್ಲಿರುವಂತೆ ಇಂಗ್ಲಾಂಡ್ ದೇಶದ ಚರಿತ್ರೆಯನ್ನು ಮತ್ತು ಮಿಸ್ ಕೀಲೀಸ್ ಲೆರ್ಸ ಸ ಆಡ್ ಡೊಮೆಸ್ಟಿಕ್ ಇಕಾನಮಿ ಎಂಬ ಗ್ರಂಥದಲ್ಲಿರುವಂತೆ ಡೊಮೆಸ್ಟಿಕ್ ಇಕಾನಮಿ ಅಂದರೆ ಗೃಹಕೃತ್ಯ ನಡಿಸುವ ಕ್ರಮ ಗ್ರಂಥವನ್ನು ತಮ್ಮ ಐಚ್ಛಿಕ ವಿಷಯಗಳಿಗಾಗಿ ತೆಗದುಕೊಳ್ಳಬಹುದು.

ಸರ್ 1896ನೇ ಇಸವಿ ಫೆಬ್ರುವರಿ ತಾರೀಖು 26.

ಇದರಡಿ ಕಂಡ ಭಾಷಾ ಗ್ರಂಥಗಳು ಸರ್ 1897ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ದೇಶಭಾಷಾ ಅಪ್ಪರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ.

ಕನ್ನಡ, ಪದ್ಯ .. (1) ಕಬ್ಬಿಗರಕಾವ ಪದ್ಯಗಳು 239ರಿಂದ ಕಡೇವರೆಗೆ (ಓದಲವಶ್ಯಕ ವಿಲ್ಲದ ಪದ್ಯಗಳು ಗೊತ್ತು ಮಾಡಲ್ಪಡುತ್ತವೆ.)
(2) ಸೂರಸೇನ ಚರಿತ್ರೆ (ಬತೆಲೊ) ಬಸವಪ್ಪಶಾಸ್ತ್ರಿ ಮತ್ತು ಸಿ. ಸುಬ್ಬರಾವು ಬಿ. ಯೆ. ಇವರುಗಳಿಂದ ರಚಿಸಲ್ಪಟ್ಟದ್ದು.
(3) ಕರ್ಣಾಟಕ ಕಾದಂಬರಿ ಮೊದಲನೇ ಭಾಗ, ಪದ್ಯಗಳು 584ರಿಂದ 684ರ ವರೆಗೆ.
ಗದ್ಯ .. (1) ಅದ್ಭುತರಾಮಾಯಣ (ಕರ್ನಾಟಕ ಕಾವ್ಯಮಂಜರಿ ಪ್ರತಿ) ಪುಟಗಳು 1—70.
(2) ಆರ್ಯಕೀರ್ತಿ ಮ॥ ಸಿ. ವಾಸುದೇವಯ್ಯನವರಿಂದ ರಚಿಸಲ್ಪಟ್ಟದ್ದು, (ಕರ್ನಾಟಕ ಗ್ರಂಥಮಾಲೆ ಪ್ರತಿ) ಪುಟಗಳು 1—40.
ಸಂಸ್ಕೃತ .. (1) ರಘುವಂಶ ಸರ್ಗಗಳು 7 ಮತ್ತು 10.
(2) ಪಂಚತಂತ್ರ ಮುಂಬೈ ಛಾಪ 2ನೇ ಭಾಗ ಪುಟಗಳು 1—41.
ಫಾರಸಿ ಪದ್ಯ ... ದಿವಾನಿಹೊಸಿ (ನಾವಲ್‌ಕಿಷೋರ್ ಮುದ್ರಾಕ್ಷರಶಾಲೆಯ 1887ನೇ ಛಾಪ) 7ನೇ ಪುಟದಿಂದ 104ನೇ ಪುಟದ ಕೊನೇ ವರೆಗೆ.
ಗದ್ಯ .. ಮಂಟಖಬ ಖಾಹಾ ಯೆತಿ ಫಾರಸಿ ಹಿಸ್ಸೇಯಿ ಚಹರಂ ರೆವರೆಂಡ್ ಇ. ಸೆಲ್. ಯವರಿಂದ ರಚಿಸಲ್ಪಟ್ಟದ್ದು.
ಹಿಂದುಸ್ತಾನಿ ಪದ್ಯ .. ದಿವಾನಿ ಮೋಮಿನ್ (ನಾವಲಕಿಷೋರ್ ಮುದ್ರಾಕ್ಷರಶಾಲೆಯ 1885ನೇ ಛಾಪ) 74ನೇ ಪುಟದಿಂದ 148ನೇ ಪುಟದ ವರೆಗೆ.
ಗದ್ಯ .. ಟಾಲಿಂ, ಸಿರಾಜುದ್ದೀನ್ ಅಹಮದ್ ಸಾಹೇಬರಿಂದ ರಚಿಸಲ್ಪಟ್ಟದ್ದು.

ಕರ್ನಾಟಕ ಪಂಡಿತ ಪರೀಕ್ಷೆ.

ಕಾವ್ಯಾವಲೋಕನ ಅಥವ ಅಪ್ರತಿಮ ವೀರಚರಿತ್ರೆ ಎಂಬದಕ್ಕೆ ಬದಲಾಗಿ ನಾಗವರ್ಮ ಕಾವ್ಯಾವಲೋಕನ ಮತ್ತು ಅಪ್ರತಿಮ ವೀರಚರಿತ್ರೆಯನ್ನು ನಿಯಮಿಸಲ್ಪಟ್ಟಿರುತ್ತೆ.

ಇದರಡಿಕಂಡ ಭಾಷಾ ಗ್ರಂಥಗಳು ಸರ್ 1897ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕಂಡರೀ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ.

ಕನ್ನಡ ಪದ್ಯ ... (1) ಪದ್ಯಸಾರ ಪದ್ಯಗಳು 72ರಿಂದ 128ರ ವರೆಗೆ (ಹೊಸಛಾಪ.)
(2) ರಾಮಾಭ್ಯುದಯ ಕಥಾಕುಸುಮ ಮಂಜರಿ, ಸುಂದರಕಾಂಡ ನಾಲ್ಕನೇ ಸಂಧಿ.
(3) ಸುಮತಿಶತಕ 50 ಪದ್ಯಗಳು 1896ನೇ ವರುಷದ ಪರೀಕ್ಷೆಗೆ ನಿಯಮಿಸಲ್ಪಟ್ಟ ಪದ್ಯಗಳು ವಿನಹ ಮಿಕ್ಕ ಪದ್ಯಗಳಲ್ಲಿ.
ಗದ್ಯ . ರಾಜಶೇಖರ ಚರಿತ್ರೆ. ಮ॥ ಸೋಮನಾಥಯ್ಯನವರಿಂದ ತೆಲುಗಿನಿಂದ ಭಾಷಾಂತರ ಮಾಡಲ್ಪಟ್ಟದ್ದು. ಪೂರ್ವಾರ್ಧಭಾಗ.

ಪದ್ಯಸಾರದಲ್ಲಿನ ಪದ್ಯಗಳು ವಿನಹ ಮೇಲೆ ನಿಯಮಿಸಲ್ಪಟ್ಟಿರುವ ಗ್ರಂಥಗಳೆಲ್ಲಾ ಇಲಾಖೆಯವರಿಂದ ಒಂದೇ ಪುಸ್ತಕವಾಗಿ ಛಾಪಿಸಲ್ಪಡುತ್ತವೆ.

ತೆಲುಗು (1) ನಳಚರಿತ್ರಮು.
(2) ವೇಣೀ ಸಂಹಾರ ಮತ್ತು ಮಾಳವಿಕಾಗ್ನಿಮಿತ್ರ ನಾಟಕಗಳ ಕಥೆ (ಮದ್ರಾಸ್ ಸ್ಕೂಲ್ ಬುಕ್ಕು ಮತ್ತು ವರ್ನಾಕ್ಯುಲರ್ ಲಿಟ್ರೇಚರ್ ಸೊಸೈಟಿಯವರಿಂದ ಛಾಪಿಸಲ್ಪಟ್ಟದ್ದು.

	(3)	ಕಂಠಪಾಠ, ನಳಚರಿತ್ರಮು ಪುಟಗಳು. 16—30.
ಅರವ	(1)	ಪಂಚತಂತ್ರಂ. ಪ್ರಸ್ತಾವನೆ ಮತ್ತು ಮೊದಲನೇ ಭಾಗ.
	(2)	ಎರಡನೇ ನಂಬರು ನೀತಿಮಂಜರಿ.
	(3)	ಕಂಠಪಾಠ ಎರಡನೇ ನಂಬರು ನೀತಿಮಂಜರಿ ಪದ್ಯಗಳು 65—128.
ಹಿಂದುಸ್ತಾನಿ ಪದ್ಯ	..	ಮಜಮುವ–ಇಸರ್ಖ ಹಿಸ್ಸೇದುಯಂ ಎರಡನೇ ಭಾಗ.
ಗದ್ಯ	..	ಬಿಸೂಸಿಹಿಂಡ್, ಮೊದಲನೇ ಭಾಗ ಮುಫಿ–ಬಿ–ಯಂ–ಮುದ್ರಾಕ್ಷರಶಾಲೆ, ಲಾಹೋರ್.
ಸಂಸ್ಕೃತ ಮೊದಲನೇ ಭಾಷೆ.	(1)	ಚಂಪುರಾಮಾಯಣ ಕಾಂಡಗಳು 4 ಮತ್ತು 5.
	(2)	ಭರ್ತೃಹರಿ ನೀತಿಶತಕ ಪೂರ್ತಿಯಾಗಿ; ಮತ್ತು ವೈರಾಗ್ಯಶತಕ ಮೊದಲಿನಿಂದ 50 ಪದ್ಯಗಳು.
ಸಂಸ್ಕೃತ ಎರಡನೇ ಭಾಷೆ.	..	ವಿಕ್ರಮಾರ್ಕ ಚರಿತ್ರೆ. ಒಂಭತ್ತನೇ ಕಥೆಯಿಂದ ಮುಂದಿನ ಎಂಟು ಕಥೆಗಳು. (ಸ್ವಲ್ಪ ಹೆಚ್ಚು ಕಡಮೆ 1896ನೇ ವರುಷಕ್ಕೆ ನಿಯಮಿಸಲ್ಪಟ್ಟಿರುವಷ್ಟು.)
ಫಾರಸಿ ಮೊದಲನೇ ಭಾಷೆ. ..	(1)	ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ.)
	(2)	ಸವರ್ನಾಯಿಖಿರಾದ್ (ಪಂಜಾಬ್ ಛಾಪ) ಪುಟಗಳು 1—112.
ಫಾರಸಿ ಎರಡನೇ ಭಾಷೆ. ..	(1)	ಫಾರಸಿ ಎರಡನೇ ಪುಸ್ತಕ ಪಂಜಾಬ್ ಛಾಪ.
	(2)	ಗುಲ್ದಸ್ತಾ ಇದಾನಿಷ್ (ಪಂಜಾಬ್ ಛಾಪ) ಪುಟಗಳು 1—48.
ಲ್ಯಾಟಿನ್ ಎರಡನೇ ಭಾಷೆ	..	ಸೀಜರ್ ಡಿಬೆಲೊ ಗ್ಯಾಲಿಕೊ ಎರಡನೇ ಪುಸ್ತಕ.

ತಾರೀಖು 8ನೇ ಏಪ್ರಿಲ್ ಸನ್ 1896ನೇ ಇಸವಿ.

ಉಪಾಧ್ಯಾಯ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ಸನ್ 1896ನೇ ಇಸವಿ ಏಪ್ರಿಲ್ ತಾರೀಖು 6.

ಉಪಾಧ್ಯಾಯ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಲೋವರ್ ಸೆಕಂಡರಿ ಮತ್ತು ಪ್ರೈಮರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination). ಸನ್ 1896ನೇ ಇಸವಿ ಜೂನ್ ತಿಂಗಳ ತಾರೀಖು 1ನೇ ಸೋಮವಾರ ಮತ್ತು 2ನೇ ಮಂಗಳವಾರ ಈ ದಿವಸಗಳಲ್ಲಿ ಮೈಸೂರಲ್ಲಿ ಇದರಡಿ ಕಂಡ ಕಾಲಕ್ರಮವಾಗಿ ನಡೆಯಿಸಲ್ಪಡುವುದು.

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯಗಳು.
ಮೊದಲನೆಯ ದಿವಸ	10ರಿಂದ 1ರ ವರೆಗೆ	(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲುಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ (The art of oral teaching) ಯಾವುದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on a given subject)	10ರಿಂದ 1ರ ವರೆಗೆ	(a) ಅಪ್ಪರ್ ಪ್ರೈಮರಿ ಸ್ಕೂಲುಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು; ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ	10ರಿಂದ 11-30ರ ವರೆಗೆ	(a) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ
	2ರಿಂದ 5ರ ವರೆಗೆ	(b) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲುಗಳ ಸಂವಿಧಾನ (Organization) ಸ್ಕೂಲ್ ರಿಜಿಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ ಮತ್ತು ಸರ್ಕಾರೀ ಕಾಗದಗಳನ್ನು ಬರೆಯುವ ಸರಿಯಾದ ಕ್ರಮ.	2ರಿಂದ 4ರ ವರೆಗೆ	(b) ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline), ಸ್ಕೂಲ್ ರಿಜಿಸ್ಟರುಗಳ ಮಾದರಿ ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಕ್ಕಗಳನ್ನು ತಯಾರ್ಮಾಡುವ ರೀತಿ.	2ರಿಂದ 3-30ರ ವರೆಗೆ	(b) ಸ[illegible] ರಿಜಿಸ್[illegible] ಮಾದರಿ[illegible] ಳನ್ನು[illegible] ಮತ್ತು [illegible] ಳಿಂದ ಲೆ[illegible] ಗಳನ್ನು ತಯಾರ್ಮಾಡುವರೀತಿ.
ಎರಡನೆಯ ದಿವಸ	10ರಿಂದ 11-30ರ ವರೆಗೆ	(c) ನೀತ್ಯನುಶಾಸನ ವಿಧಾನ (Principles of moral discipline) ಶೀಲ ಸ್ವಭಾವೋತ್ಪಾದನ (Formation of habits and character)				

ಒಂದೊಂದು ಪತ್ರಿಕೆಗೂ ಕ್ಲಿಪ್ತ ಮಾಡಿರುವ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವುದಿಲ್ಲ. ತೇರ್ಗಡೆಯಾದವರಲ್ಲಿ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

ಬರಹ ಪರೀಕ್ಷೆಗಳ ಫಲಿತಾಂಶವು 1896ನೇ ಇಸವಿ ಜೂನ್ ತಿಂಗಳು 12ನೇ ತಾರೀಖನ್ನು ಅತಿಕ್ರಮಿಸದೆ ಪ್ರಕಟಸಲ್ಪಡುತ್ತದೆ. ವ್ಯವಹಾರಿಕ ಪರೀಕ್ಷೆಯು (Practical test) 1896ನೇ ಇಸವಿ ಜೂನ್ ತಿಂಗಳು 17ನೇ ತಾರೀಖಿನಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು.

ಬರಹ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವುದಿಲ್ಲ.

ಇದರಡಿ ಕಂಡ ನಿಬಂಧನೆಗಳಿಗೆ ಪರೀಕ್ಷ್ಯರು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ಪರೀಕ್ಷ್ಯನಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದ ಮೇಲೆ ಬರುವ ಯಾವ ಪರೀಕ್ಷ್ಯರಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಹ ಪ್ರವೇಶಿಸಲು ಯಾವ ಪರೀಕ್ಷ್ಯನಿಗೂ ಅವಕಾಶ ಉಂಟಾಗಲಾರದು ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟು ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ಪರೀಕ್ಷ್ಯನೇ ಆಗಲಿ ಮತ್ತೊಬ್ಬ ಪರೀಕ್ಷ್ಯನೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ತಿಳಿಸಲ್ಪಡುವುದು.

[(4)] ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾ[ಗಲಿ ಅ]ಥವಾ ಇನ್ಯಾವ ವಿಧವಾದ ಕಾಗದ ಪತ್ರವನ್ನಾಗಲಿ, ತೆಗದುಕೊಂಡು ಹೋಗಲು ಯಾವ ಪರೀಕ್ಷ್ಯನಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವುದಿಲ್ಲವು. ಯಾವ ಪರೀಕ್ಷ್ಯನಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ತಿಳಿಸಲ್ಪಡುವುದು.

(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಅಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಪಿ. ಎಂ. ಪೂರ್ಣಯ್ಯ,
ಆ|| ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಮೈಸೂರ್ ಶ್ರೀಮ ಕಂಟ್ರೋಲರ್ ಸಾಹೇಬರವರಿಂದ.

ಖಜಾನೆ ಇಲಾಖಾ ಯಲ್ಲಾ ಡೆಪ್ಯುಟಿ ಕಮ್ಮಿಷನರವರುಗಳಿಗೆ.

ತಾರೀಖು 10ನೇ ಏಪ್ರಲ್ 1896ನೇ ಇಸವಿ.

ಸರಕ್ಯೂಲರ್ ನಂ. 447—54—ಆರ್. ಇ.—7.

[ಪ]ದೇ ಪದೇ ಈ ಆಫಿಸಿನಿಂದ ತಿಳಿಯಪಡಿಸಿದಾಗ್ಯೂ ಆಟ್ಕಾರಿ ಚರ್ಲಗಳನ್ನ ಇನ್ನೂ ಅತೃಪ್ತಿಕರವಾಗಿ ತಯಾರ್ಮಾಡಿ ರವಾನಿಸುವದು ನೋಡಿ ಕಂಟ್ರೋಲರಯವರು ವಿಷಾದಗೊಂಡು ಈ ಕೆಳಗೆ ಕಂಡ ವಿಧಾಯುಕವನ್ನು ತಿಳಿಯಪಡಿಸುವದಲ್ಲದೆ ಮುಂದೆ ಸದರೀ ಮೇರೆ ನಡದುಕೊಳ್ಳುವ ಭಾಗದಲ್ಲಿ ಖಜಾನೆ ಇಲಾಖಾ ಡೆಪ್ಯುಟಿ ಕಮ್ಮಿಷನರಯವರು ತಾಲ್ಲೂಕು ಆಮಿಲ್ದಾರರಿಗೆ ಖಂಡಿತವಾದ ಹುಕುಂ ಕೊಡಬೇಕೆಂದು [ಕ]ೋರಿಕೊಳ್ಳುತ್ತಾರೆ.

(1) ಚರ್ಲಗಳಲ್ಲಿ ಕಾಣಿಸಲ್ಪಡುವ ಫಿರ್ಕಾ ಹೆಸರು ನಂಬರು ಮತ್ತು ಇಜಾರದಾರನ ಹೆಸರು ಸಹ ಎಕ್ಸೈಜ್ ಕಮ್ಮಿಷನರ್ ಯವರಿಂದ ಈ ಆಫಿಸಿಗೆ ತಲಪಿರುವ ಹರಾಜು ಪಟ್ಟಿಯಲ್ಲಿ ಕಂಡಂತೆ ಒಂದಕ್ಕೊಂದು ತಾಳೆ ಇರುವಂತೆ ಅದೇ ನಂಬರು ಮತ್ತು ಹೆಸರು ಕಾಣಿಸಲ್ಪಡಬೇಕು.

(2) ಪ್ರತಿ ಒಂದು ಫಿರ್ಕಾಗಾಗಿ ಒಂದೊಂದು ಚರ್ಲ ಉಪಯೋಗಬೇಕೇಹೊರ್ತು ಅನೇಕ ಫಿರ್ಕಾಗಳ ಇಜಾರದಾರ ಒಬ್ಬನೇಯಾಗಿರುತ್ತಾನೆಂಬ ಅಭಿಪ್ರಾಯದ ಮೇಲೆ ಅವನಿಗೆ ವಳಪಟ್ಟ ಒಟ್ಟು ಫಿರ್ಕಾಗಳಿಗಾಗಿ ಒಂದೇ ಚರ್ಲ ತಯಾರ್ಮಾಡಿ ರವಾನಿಸತಕ್ಕದ್ದಲ್ಲಾ.

(3) ಯಾವ ಸಾಲ್ ಮತ್ತು ಮಾಹೆಗಾಗಿ ಗುತ್ತಿಗೆ ಮೊಬಲಗು ವಸೂಲ್ಮಾಡಲ್ಪಟ್ಟಿರುತ್ತೋ ಅವುಗಳನ್ನ ಚಲನ್ನಲ್ಲಿ ಎಂದಿಗೂ ಕಾಣಿಸದೆ ಇರಕೂಡದು.

(4) ಖಜಾನೆಗೆ ಹಣ ಪಾವತಿಯಾದ ತಾರೀಖು ಕಾಣಿಸಲ್ಪಡಲು ಚಲನ್ ಕೆಳಭಾಗದಲ್ಲಿ ಬಿಟ್ಟಿರುವ ಜಾಗಾದಲ್ಲಿ ಟ್ರೆಜರಿ ಇಲಾಖೆಯುವರೇ ತಾರೀಖನ್ನ ಕಾಣಿಸಬೇಕೇಹೊರ್ತು ಇಜಾರದಾರು ಅದನ್ನ ಬರಿಯಕೂಡದು.

(5) ಚಲನ್‌ಗಳಲ್ಲಿ ಮೊಬಲಗು ವಗೈರೆ ಯಾವದನ್ನಾದರೂ ತಿದ್ದಿದಲ್ಲಿ ಅದಕ್ಕೆ ಟ್ರೆಜರಿ ಆಫಿಸರವರ ರುಜು ಅಗತ್ಯವಾಗಿ ಆಗಿರಬೇಕು.

(6) ಚಲನ್‌ನಲ್ಲಿ ಕಾಣಿಸಲ್ಪಡುವ ಮೊಬಲಗು ಅಕ್ಷರ ಮತ್ತು ಸಂಖ್ಯೆಯಲ್ಲಿ ಸಹ ಒಂದಕ್ಕೊಂದು ಭೇದವಿಲ್ಲದಂತೆ ಸರಿಯಾಗಿ ಇರುತ್ತೆಂಬುವದನ್ನ ಜಾಗರೂಕತೆಯಿಂದ ನೋಡಿಕೊಳ್ಳಬೇಕು.

2. ಈ ಮೇಲ್ಕಂಡ ವಿಧಾಯಕದಂತೆಯಾಗಲಿ ಮತ್ತು ಇದಕ್ಕೆ ಹಿಂದೆ ಇದೇ ವಿಚಾರದಲ್ಲಿ ಕೊಡಲ್ಪಟ್ಟ ಸರಿಕ್ಯೂಲರನಂತೆಯಾಗಲಿ ತಯಾರ್ಮಾಡಲ್ಪಡದೇ ಇರುವ ವಿಶಿಷ್ಟ ಚಲನ್‌ಗಳೂ ವಾಪಸ್ ಮಾಡಲ್ಪಡುತ್ತದೆ.

ಈ. ಆರ್. ಸುಬ್ಬಾಯರ್,
ಕಾಂಪ್‌ಟ್ರೋಲರ್.

ತುಮಕೂರು ಡಿಸ್ಟ್ರಿಕ್ಟು
ಇಸ್ತಿಹಾರಿನಾಮೆ.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇರೇಬಿನಲ್ಲಿ ನಮೂದಾಗುವ ಸ್ಟೇಟ್‌ಫಾರೆಸ್ಟುಗಳು ವಿನಹ ತುಮಕೂರು, ಮದ್ದಗಿರಿ, ಚಿಕ್ಕನಾಯಿಕನಹಳ್ಳಿ, ಶಿರಾ, ಗುಬ್ಬಿ, ತಿಪಟೂರ್, ಪಾವಗಡ, ಕುಣಿಗಲ್ ಈ ತಾಲ್ಲೂಕುಗಳ ಮತ್ತು ಕೊರಟಗೆರೆ, ಹುಳಿಯಾರ್, ತುರುವೆಕೆರೆ ಸಬ್ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟು ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ ಆಖೈರವರಿಗೆ ಒಂದು ವರುಷ ಅಂದರೆ 1896—97ನೇ ಸಾಲಿಗೆ ಜಡದರಖಾಸ್ತುದಾರ್ರಿಗೆ 1896ನೇ ಇಸವಿ ಜೂನ್ ತಾರೀಖು 1ರಲ್ಲು ಮಧ್ಯಾನ್ಹ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫಿಸಿನಲ್ಲಿ ಡೆಪ್ಯುಟಿ ಕಮ್ಮಿಷನರ್ ಅಥವಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮ್ಮಿಷನರ್ ರೂಬರೂ ವಿಕ್ರಯಿಸಲ್ಪಡುವದು.

1. ದೇವರಾಯದುರ್ಗ
2. ಮದ್ದಗಿರಿ
3. ಕೋಟೆಕಲ್
4. ಬುಕ್ಕಾಪಟ್ಣ
5. ಮಂಚಲದೊರೆ
6. ಹುಲಿಯೂರದುರ್ಗ
7. ಕಂಪಲಾಪುರ
8. ಕಾದುರೆಕಣಿವೆ
9. ತೀರ್ಥರಾಂಪುರ

II. ಜಡ ದರಖಾಸ್ತುದಾರರು ತಮ್ಮ ದರಖಾಸ್ತು ಮಂಜೂರಾದ ನಂತರ ಮಂಜೂರಾದ ಕಂಟ್ರಾಕ್ಟು ವಟ್ಟು ಮೊಬಲಗಿನ ನಾಲ್ಕು ತಿಂಗಳ ಖಿಸ್ತುಗಳಿಗೆ ಸಮನಾದ ಮೊಬಲಗು ನಗದಾಗಲಿ ಅಥವಾ ಕರೆನ್ಸಿ ನೋಟಾಗಲಿ ಹಾಜರ್ಮಾಡತಕ್ಕದ್ದು, ಹಾಗೆ ಮಾಡಲಿಕ್ಕೆ ತಪ್ಪಿದ ಪಕ್ಷ ಸದರೀ ಕಂಟ್ರಾಕ್ಟು ಕೂಡ್ಲೆ ಪುನಹ ಹರಾಜು ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ವುಂಟಾಗುವ ಲುಕ್ಸಾನಿಗೆ ಅವರನ್ನು ಗುರಿಮಾಡಲಾದೀತು.

III. ಮಂಜೂರಾದ ದರಖಾಸ್ತುದಾರು 1896ನೇ ಜುಲೈ 1ನೇ ತಾರೀಖಿನಲ್ಲಿ ಕಂಟ್ರಾಕ್ಟು ಕೆಲಸದ ಮೇಲೆ ಪ್ರವೇಶಿಸಿ ತಮ್ಮ ಮೊದಲನೆ ಮಾಹೆ ಖಿಸ್ತನ್ನು 1896ನೇ ಇಸವಿ ಆಗಸ್ಟು 15ರಲ್ಲಿ ಆಗಲಿ ತತ್ಪೂರ್ವಆಗಲಿ ಪಾವತಿ ಮಾಡತಕ್ಕದ್ದು. ಆ ತರುವಾಯ ಪ್ರತಿ ಮಾಹೆ ಖಿಸ್ತು ಆ ತಿಂಗಳು ಕಳೆದ ಮಾರನೆತಿಂಗಳ 15ನೇ ತಾರೀಖಿನಲ್ಲಿ ಆಗಲಿ ತತ್ಪೂರ್ವಆಗಲಿ ಪಾವತಿ ಮಾಡತಕ್ಕದ್ದು ಅಂಥಾ ಮಾಹೆವಾರಿ ಖಿಸ್ತುಗಳು ಡಿಪಾಜಿಟ್ಟು ಇಟ್ಟ ಮೊಬಲಗ್ಗೆ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಪಾವತಿ ಮಾಡತಕ್ಕದ್ದು. ಹಾಗೆ ಪ್ರತಿಮಾಹೆ 15ನೇ ತಾರೀಖಿನ ವಳಗೇನೇ ಖಿಸ್ತು ಮೊಬಲಗು ಪಾವತಿಮಾಡದೆ ತಪ್ಪಿದಲ್ಲಿ ಆ ಲಾಗಾಯಿತು ಅಂಥಾ ಖಿಸ್ತು ಮೊಬಲಗ್ಗೆ ಸಾಲಿಯಾನಾ ಶೇಕಡಾ 6 ರೂಪಾಯಿನಂತೆ ಬಡ್ಡಿ ದಾಖಲ್‌ಮಾಲ್ಪಡುವದು.

IV. ಕಂಟ್ರಾಕ್ಟುದಾರು ಕೊಡತಕ್ಕ ಮಾಹೆವಾರಿ ಖಿಸ್ತುಗಳ ಮೇಲೆ ರೂಪಾಯಿ ವಂದಕ್ಕೆ ಒಂದಾಣೆ ಮೇರಿಗೆ ಲೋಕಲ್ ಸೆಸ್ಸನ್ನು ಕೊಡಬೇಕು.

V. ಅವಿಚ್ಛಿನ್ನವಾಗಿ (2) ಯರಡು ತಿಂಗಳವರಿವಿಗೂ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೂ ಅಥವಾ ಸಾವಕಾಶ ಮಾಡಿದರೂ ಸದರೀ ಕಂಟ್ರಾಕ್ಟು ಪೂರಾಗಿ ರದ್ದಾಗಲಿಕ್ಕೆ ಗುರಿಯಾಗಿ ಡಿಪಾಜಿಟ್ಟು ವಟ್ಟು ಮೊಬಲಗನ್ನ ಗಣನಿಗೆ ತಾರದೆ ಷರ್ತಿಗೆ ತಪ್ಪಿದ ಕಂಟ್ರಾಕ್ಟುದಾರನ್ನ ಲುಕ್ಸಾನಿಗೆ ಗುರಿಪಡಿಸಿ ಕಂಟ್ರಾಕ್ಟು ಪುನಹ ವಿಕ್ರಯಿಸಲ್ಪಡುವದು. ಸದರೀ ಡಿಪಾಜಿಟ್ ಮೊಬಲಗು ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಡುವದು ಮತ್ತು ಬಾಕಿ ಮೊಬಲಗು ವಿಷಯದಲ್ಲಿ ರೆವಿನ್ಯೂ ಕಂದಾಯದ ಮೊಬಲಗಿನಂತೆ ವಸೂಲ್‌ಮಾಡಲ್ಪಡುವದು.

VI. ಕಂಟ್ರಾಕ್ಟುದಾರು ಯಾವ ಗಿಡಗಳಿಂದ ಅರಗು ತೆಗೆದುಕೊಂಡು ಹೋಗುತ್ತಾರೋ ಅಂತಾ ಅರಗಿನ ಗಿಡಗಳನ್ನು ಕತ್ತರಿಸುವದಕ್ಕೂ ಸಾಗಿಸುವದಕ್ಕೂ ಯಾ ಅರೂಪ ಪಡಿಸುವದಕ್ಕೂ ಅಧಿಕಾರವನ್ನು ಹೊಂದಿರುವದಿಲ್ಲ.

VII. ಇನಾಂದಾರುಗಳಿಗೆ ಸ್ಥಿರಪಟ್ಟಿರುವ ಹಕ್ಕಿನ ವಿಷಯದಲ್ಲಿ ಕಂಟ್ರಾಕ್ಟುದಾರು ಪ್ರವೇಶಿಸಕೂಡದು.

VIII. ಹರಾಜು ಕಾಲದಲ್ಲಿ ಜಾಲಾರೀ ಗಿಡಗಳು ಇರತಕ್ಕ ಬಗೆರ್ ಹಿಡುವಳಿ ಜಮೀನುಗಳು ಕಂಟ್ರಾಕ್ಟು ಜಾರೀಲಿರುವ ಕಾಲದಲ್ಲಿ ಸಾಗುವಳಿಗೆ ತೆಗೆದುಕೊಂಡ ಪಕ್ಷ ಕಂಟ್ರಾಕ್ಟುದಾರ ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಅಂತಾ ಗಿಡಗಳಲ್ಲಿ ಅರಗು ಜಮಾಯಿಸಿಕೊಳ್ಳತಕ್ಕ ಹಕ್ಕುವುಳ್ಳವನಾಗಿ ಇರತಕ್ಕದ್ದು.

IX. ಕಾರಣಗಳನ್ನು ತೋರಿಸದೇನೇ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿರುತ್ತಾರೆ.

ಎಂ. ನಾರಾಯಣರಾವ್, ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟ್‌ಮೆಂಟ್.
ನೋಟಿಫಿಕೇಷನ್.

ತಾರೀಖು 18-21ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿರುವ ನಾಟಾ ಜಂತೆ ಸರ ಮತ್ತು ಪುಂಡಿಗೆಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ 1896ನೇ ಇಸವಿ ಮೇ ತಾರೀಖು 16ರಲ್ಲಿ ನಂಜನಗೂಡು ಡಿಪೋದಲ್ಲೂ ಮತ್ತು ಅದೆ ಮೇ ತಿಂಗಳ ತಾರೀಖು 18ರಲ್ಲಿ ಮೈಸೂರ್ ಉಡ್ಯಾರ್ಡಿನಲ್ಲೂ ಹರಾಜ್ ಮಾಡಿಸಲ್ಪಡುತ್ತವೆ.

ಮರದ ತಪ್ಸೀಲು.	ನಂಜನಗೂಡು ಡಿಪೊ.		ಮೈಸೂರು ಉಡ್ಯಾರ್ಡ.	
	ಸ್ವಲ್ಪ ಹೆಚ್ಚು ಕಡಮೆ.		ಸ್ವಲ್ಪ ಹೆಚ್ಚು ಕಡಮೆ.	
	ನಂಬರು.	ಸಲೆಅಡಿ.	ನಂಬರು.	ಸಲೆಅಡಿ.
ಸಾಗವಾನಿನಾಟೂ ..	124	2868	388	12092$\frac{3}{4}$
ಡಿಟೋ ಜಂತೆ ..	108	959$\frac{1}{2}$	83	740$\frac{1}{4}$
ಡಿಟೋ ಸರ ..	9	11$\frac{1}{4}$	..	..
ಡಿಟೋ ಮುಂಡಿಗೆ ..	24	37$\frac{1}{2}$	..	..
ಹೊನ್ನೆ ನಾಟೂ ..	95	2041	99	2396$\frac{1}{4}$
ಡಿಟೋ ಜಂತೆ ..	96	1006$\frac{1}{4}$	29	324
ಮತ್ತಿ ನಾಟೂ ..	3	55$\frac{1}{2}$	50	1225$\frac{3}{4}$
ಡಿಟೋ ಜಂತೆ ..	1	7	9	79$\frac{1}{4}$
ಬೀಟೆ ನಾಟೂ ..	2	32$\frac{1}{4}$	9	463
ಡಿಟೋ ಜಂತೆ ..	2	21$\frac{1}{2}$	9	106
ನಂದಿ ನಾಟೂ ..	5	85$\frac{3}{4}$	18	403$\frac{3}{4}$
ಡಿಟೋ ಜಂತೆ ..	10	104$\frac{3}{4}$	6	71
ಜಂಗಲ್ ನಾಟೂ ..	2	50$\frac{3}{4}$	17	421$\frac{1}{4}$
	481	7281	716	18253$\frac{1}{4}$

ಷರತ್ತು.—ಮೈಸೂರ ಗೆಜೆಟ್ 1895ನೇ ಏಪ್ರೆಲ್ 25ನೇ ಮರ್ಕ್ಕುಮಿನಲ್ಲಿ ಚವುಬೀನೆ ಮತ್ತು ಬೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1895ನೇ ಇಸವಿ ಮಾರ್ಚಿ 15ನೇ ಮರ್ಕ್ಕುಂ 15229—ಆರ್. ಎಫ್. 155—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಮೇರೆ.

ತಾರೀಖು 1ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರ ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟ್ ಬಾಬತು ಈ ಕೆಳಗೆ ವಿವರಿಸಿರುವ ಪಸಾರೇ ಜಿನಸಿಗಳು ಸ್ 1896ನೇ ಇಸವಿ ಮೇ ತಾರೀಖು 25ರಲ್ಲು ಮೈಸೂರ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರಿಂದ ಮೈಸೂರು ವುಡಯಾರಡಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸೀ ತಪ್ಸೀಲ.	ಸುಮಾರು ಮೊತ್ತ.	
	ಮಣ.	ವಾ.
ಜೇನುಮೇಣ	6	7
ಜೇನುತುಪ್ಪ	3	24
ಅಳಲೇಕಾಯಿ	1,500	..
ಸಾರಗನಕೊಂಬು	9	13
ದಿಂಡಿಗದಗೋಂದು	39	23
ಅರಗು	100	..
ಶೀಗೇಕಾಯಿ	20	..
ಕಾಡಮೇಕೆ ಕೊಂಬು	1	..

ಷರತ್ತು.—1887ನೇ ಇಸವಿ ಜೂನ್ 18ನೇ ಮರ್ಕ್ಕುಂ ಮೈಸೂರ ಗೆಜೆಟ 287—288ನೇ ಪೇಜಿನಲ್ಲಿ ಫಾಯಿಷ್ ಮಾಡಿರುವ 1887ನೇ ಇಸವಿ ಜೂನ್ 11ನೇ ಮರ್ಕ್ಕುಂ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ ನೋಟಿಫಿಕೇಷನ್ ಮೇರೆ.

ತಾರೀಖು 13–14ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹುಣಸೂರು ಸಂಡಲ್ ಕೋಠಿಯಲ್ಲಿ ಇರತಕ್ಕ ಬಿಳಿ ಚಕ್ಕೆಯು 1896ನೇ ಇಸವಿ ಏಪ್ರೆಲ್ 20ನೇ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆಯೆಂತ ಮೈಸೂರ ಗೆಜೆಟನಲ್ಲಿ ಫಾಯಿಷ್ ಮಾಡಲ್ಪಟ್ಟಿರುವದು ಸರಿಯಷ್ಟೆ; ಸದರೀ ತಾರೀಖು ಪಬ್ಲಿಕ್ ರಜಾ ದಿವಸ ಆದ್ದರಿಂದ ಮೇಲೆ ನಮೂದಿಸಿರತಕ್ಕ ಸಂಡಲ್ ಬಿಳಿಚಕ್ಕೆಯು ಬರುವ ಮೇ ತಿಂಗಳ 11ನೇ ತಾರೀಖಿನ ದಿವಸ ಹರಾಜು ಮಾಡಿಸಲ್ಪಡುತ್ತೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಇಸ್ತಿಹಾರ್‌ನಾಮೆ.

ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಲಗತ್ತಿರುವ ಸ್ಟೇಟಮೆಂಟಿನಲ್ಲಿ ತೋರಿಸಿರುವ ತಾಲ್ಲೂಕು ಮಜಕೂರು ಗ್ರಾಮಗಳ ಬಾಬತು ಸರ್ಕಾರಿ ಮತ್ತು ಹಿಡುವಳಿದಾರ್ರ ಜಮೀನಿನಲ್ಲಿ ಇರುವ ಬಗನೆ ಬಾಬನ್ನು ಮತ್ತು ಬಗನೆ ಶೇಂದಿ ಮೇಲೆ ಪೈಲ್ ಜಜ್ಜರಿ ಸುಂಕ ವಸೂಲ್ಮಾಡಿಕೊಳ್ಳುವ ಹಕ್ಕನ್ನು ಸಹಾ ಪದ್ಧತಿ ಅನುಸರಿಸಿ 1896ನೇ ಇಸವಿ ಜುಲೈ ಗುರ್ರ್ ಲಗಾಯತು 1897ನೇ ಇಸವಿ ಜೂನ್ ಆಖೈರು ವಿನಹು 12 ತಿಂಗಳು ಕಾಲಗಳಲ್ಲಿ ಬಗನೆ ಶೇಂದಿ ಇಳಿಸಿಕೊಂಡು ದುಕಾನ್ ಇಟ್ಟು ಮಾರುವ ಹಕ್ಕನ್ನು ಮತ್ತು ಬಗನೆ ಶೇಂದಿ ಮೇಲೆ ಪೈಲ್ ಜಜ್ಜರಿ ಸುಂಕ ವಸೂಲ್ಮಾಡಿಕೊಳ್ಳುವ ಹಕ್ಕನ್ನು ಸಹಾ ಬೇಲೂರು ತಾಲ್ಲೂಕು ಅಮಲ್ದಾರ್ರಿಂದ ಬಹಿರಂಗವಾದ ಹರಾಜು ಮಾಡಲು ಪಡುತ್ತೆ. ಇಚ್ಛೆಯುಳ್ಳವರು ಆಯಾಯ ಕಾಲಗಳಲ್ಲಿ ಆಯಾಯ ಸ್ಥಳಗಳಲ್ಲಿ ಹಾಜರಿದ್ದು ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಛಡದರಖಾಸ್ತು ಮೂಲಕ ಪಡಿಯಬಹುದು.

I. ಹರಾಜಿನಲ್ಲಿ ಪಡದವನು ಹರಾಜು ಖೈದಾದ ವಡನೆಯೇ ಶೇಕಡಾ 25 ರೂಪಾಯಿನಂತೆ ಡಿಪಾಜಿಟ್ ಇಡಬೇಕು. ಹಾಗೆ ಕಟ್ಟದೆ ಇದ್ದರೆ ಬಾಬನ್ನು ವಡನೆ ದುಸರ ಹರಾಜು ಮಾಡಿಸಿ ದುಸರೆ ಹರಾಜಿನಿಂದ ಸರ್ಕಾರಕ್ಕೆ ವುಂಟಾಗುವ ಲುಕ್ಸಾನಿಗೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ.

ಈ ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರ್ಮಾಡಲ್ಪಡತಕ್ಕದ್ದು.

ಹರಾಜು ಮಂಜೂರಾದ ಸಂಗತಿಯು ಹರಾಜುದಾರನಿಗೆ ತಿಳಿದ ಒಂದು ವಾರದೊಳಗಾಗಿ ಮೇಲ್ಕಂಡ ಕೇವಣಿ ಜಾಮಾ ಬಾಕಿ ಮೊಬಲಗು ಹಾಜರು ಮಾಡಬೇಕು ಮತ್ತು ಮುಚ್ಚಳಿಕೆ ಬರದುಕೊಡಬೇಕು. ಹಾಗೆ ಮಾಡಲು ತಪ್ಪಿದರೆ ಕೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ದುಸರೆ ಹರಾಜಿನಿಂದ ಸರ್ಕಾರಕ್ಕೆ ವುಂಟಾಗಬಹುದಾದ ಲುಕ್ಸಾನಿಗೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ.

II. ಹಾಲಿ ಯಲ್ಲಿಲ್ಲಿ ದುಕಾನ್ ಇಧೆಯೋ ಆ ಸ್ಥಳ ಶಿವಾಯಿ ಬೇರೆ ಸ್ಥಳದಲ್ಲಿ ದುಕಾನ್ ಇಡಕೂಡದು.

III. ವಿಶೇಷ ಸಂದರ್ಭಗಳಲ್ಲಿ ವಿನಹಾ ಒಂದು ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚಾಗಿ ದುಕಾನ್ ಇಡಬಾರದು. ಹೀಗೆ ಗೊತ್ತುಮಾಡಲ್ಪಟ್ಟ ಸ್ಥಳದಲ್ಲಿ ಬಗನೆ ಶೇಂದಿ ಬಿಕರಿ ಬಗ್ಗೆ ಹರಾಜುದಾರನಿಗೆ ಲೈಸೆನ್ಸು ಕೊಡಬಾರದು.

IV. ಎಕ್ಸೈಜ್ ಆಕ್ಟು Vನೇ ಸೆಕಷನ್ ಮೇರಿಗೆ ಪ್ರತಿ ಒಬ್ಬ ಗುತ್ತಾರುದಾರನು ಲೈಸೆನ್ಸ್ ಪಡಿಯಬೇಕು.

1896—97ನೇ ಸಾಲಿನ ಬಗನೆ ಶೇಂದಿ ಹರಾಜು ಇಸ್ತಿಹಾರ್ ತಪಶೀಲ್ ಸ್ಟೇಟಮೆಂಟ್, ತಾಲ್ಲೂಕು ಬೇಲೂರು, ಡಿಸ್ಟ್ರಿಕ್ಟ್ ಹಾಸನ, ಸ್ 1896ನೇ ಇಸವಿ ಏಪ್ರಲ್ ಮಾಹೆಯಲ್ಲು.

ನಂಬರು.	ಹೋಬಳಿ ಹೆಸರು.	ಗ್ರಾಮಗಳ ಹೆಸರು.	ದುಕಾನು ಸಂಖ್ಯೆ.	ಗುದಸ್ತಾ ಇಜಾರೆ ಮೊಬಲಗು.			ಹರಾಜು ತಾರೀಖು.	ದರ. ಮುತ್ತಮ.	ದರ. ಕನಿಷ್ಟ.	ಷರಾ.
1	2	3	4	5			6	7		8
1	ಅರೇಹಳ್ಳಿ ಹೋಬಳಿ.	ಮುತ್ತೊಳಲು ..	1	101	0	0	ಅರೇಹಳ್ಳಿ ಮೊಕ್ಕಾಂ 12—5—96	0—1—4	0—1—0	ಈ ಬಾಬನ್ನು ಪಡೆದ ಕಂಟ್ರಾಕ್ಟುದಾರ್ರುಗಳು ಅಪೇಕ್ಷಿಸಿದ ಸ್ಥಳಗಳಲ್ಲಿಗ್ರಾಮಕ್ಕೆ ಒಂದಕ್ಕೆ ಅಧಿಕರಿಸದಂತೆ ದುಕಾನನ್ನು ಸ್ಥಾಪಿಸಿ ಕೊಡಲುಪಡುತ್ತೆ.
2		ಬಳಾದಕಲ್ಲು ..	1	0	8	0	ಡಿಟೋ	0—1—4	0—1—0	
3		ವಾಟೆಹಳ್ಳಿ ..	1	2	8	0	ಡಿಟೋ	0—1—4	0—1—0	
4		ಬ್ಯಾದನೆ ..	1	35	0	0	ಡಿಟೋ	0—1—4	0—1—0	
5		ಬಾಳಗುಲಿ ..	1	2	4	0	ಡಿಟೋ	0—1—4	0—1—0	
6		ನಂದಿಗೋಡ್ನಹಳ್ಳಿ ..	1	1	4	0	ಡಿಟೋ	0—1—4	0—1—0	
7		ಮಲಸಾವಾರ ..	1	15	8	0	ಡಿಟೋ	0—1—4	0—1—0	
8		ಮಡೇನಹಳ್ಳಿ ..	1	0	8	0	ಡಿಟೋ	0—1—4	0—1—0	
9		ಬಕ್ಕರವಳ್ಳಿ ..	1	7	0	0	ಡಿಟೋ	0—1—4	0—1—0	
10		ಗುರಗಿಹಳ್ಳಿ ..	1	12	0	0	ಡಿಟೋ	0—1—4	0—1—0	
11		ಕಾನಹಳ್ಳಿ ..	1	11	0	0	ಡಿಟೋ	0—1—4	0—1—0	
12		ಮುರಹಳ್ಳಿ ..	1	8	0	0	ಡಿಟೋ	0—1—4	0—1—0	
13		ತುಂಬದೇವ್ನಹಳ್ಳಿ ..	1	0	8	0	ಡಿಟೋ	0—1—4	0—1—0	
14		ಹೊಸಹಳ್ಳಿ ..	1	0	8	0	ಡಿಟೋ	0—1—4	0—1—0	
15		ಸುಲಗಳಲೆ ..	1	1	8	0	ಡಿಟೋ	0—1—4	0—1—0	
16		ಹೆಗ್ಗದ್ದೆ ..	1	2	8	0	ಡಿಟೋ	0—1—4	0—1—0	
17		ಮುದುಮ್ನಹಳ್ಳಿ ..	1	1	8	0	ಡಿಟೋ	0—1—4	0—1—0	
18		ನಾರ್ವೆ ..	1	2	0	0	ಡಿಟೋ	0—1—4	0—1—0	
19		ಕೊರ್ಲಗದ್ದೆ ..	1	1	8	0	ಡಿಟೋ	0—1—4	0—1—0	
20		ನಾರ್ವೆಪ್ಯಾಟೆ ..	1	1	8	0	ಡಿಟೋ	0—1—4	0—1—0	
21		ಗೊರವನಹಳ್ಳಿ ..	1	2	0	0	ಡಿಟೋ	0—1—4	0—1—0	
22		ಅನೂಗಟ್ಟ ..	1	1	0	0	ಡಿಟೋ	0—1—4	0—1—0	
23		ಚಿಕ್ಕಶಾಲಾವಾರ ..	1	2	0	0	ಡಿಟೋ	0—1—4	0—1—0	
24		ಮುಂಬಳಗೋಡು ..	1	9	0	0	ಡಿಟೋ	0—1—4	0—1—0	
25		ಹಿರಿಹಸಡೆ ..	1	5	0	0	ಡಿಟೋ	0—1—4	0—1—0	
26		ಹಂಚಿಹಳ್ಳಿ ..	1	1	0	0	ಡಿಟೋ	0—1—4	0—1—0	
27		ದೊಡ್ಡಶಾಲಾವಾರ ..	1	3	0	0	ಡಿಟೋ	0—1—4	0—1—0	

ನಂಬರು.	ಹೋಬಳಿ ಹೆಸರು.	ಗ್ರಾಮಗಳ ಹೆಸರು.	ದುರ್ಕಾ ಸಂಖ್ಯೆ.	ಗುದಸ್ತಾ ಇಜಾರೆ ಮೊಬಲಗು. ರೂ.	ಆ.	ಪೈ.	ಹರಾಜು ತಾರೀಖು.	ದರ. ಪ್ರಥಮ.	ದರ. ಕನಿಷ್ಟ.	ಷರಾ.
1	2	3	4	5			6	7		8
29	ಅರೇಹಳ್ಳಿ ಹೋಬಳಿ.	ಕುಂಬಾರಹಳ್ಳಿ ..	1	16	0	0	ಅರೆಹಳ್ಳಿ ಮೊಕಾಂ 12-5-96	0—1—4	0—1—0	
30		ಚೀಕನಹಳ್ಳಿ ..	1	1	8	0	ಡಿಟ್ಟೋ	0—1—4	0—1—0	
31		ಕೋಗೋಡು ..	1	2	0	0	ಡಿಟ್ಟೋ	0—1—4	0—1—0	
32		ಹರಗುರ ..	1	1	12	0	ಡಿಟ್ಟೋ	0—1—4	0—1—0	
33		ತೊಳಲು ..	1	2	0	0	ಡಿಟ್ಟೋ	0—1—4	0—1—0	
34		ಬಳೋಟೆ ..	1	0	4	0	ಡಿಟ್ಟೋ	0—1—4	0—1—0	
35		ಈಚಲಹಳ್ಳಿ ..	1	0	4	0	ಡಿಟ್ಟೋ	0—1—4	0—1—0	
36		ಅರೆಹಳ್ಳಿ ..	1	2	8	0	ಡಿಟ್ಟೋ	0—1—4	0—1—0	
37		ಬಿಳಗವಳ್ಳಿ ..	1	1	(	0	ಡಿಟ್ಟೋ	0—1—4	0—1—0	
38		ಬೆಳ್ಳಾವಾರ ..	1	1	0	0	ಡಿಟ್ಟೋ	0—1—4	0—1—0	
39		ಮೂಲಹಳ್ಳಿ ..	1	1	0	0	ಡಿಟ್ಟೋ	0—1—4	0—1—0	
40		ಲಿಂಗಾಪುರ ..	1	1	0	0	ಡಿಟ್ಟೋ	0—1—4	0—1—0	
41		ಹಿರಿಗರ್ಜಾ ..	1	2	0	0	ಡಿಟ್ಟೋ	0—1—4	0—1—9	
42		ಕಡಗರ್ಜಾ ..	1	0	0	0	ಡಿಟ್ಟೋ	0—1—4	0—1—0	
43		ಹೊಸಮನೆ ..	1	0	10	0	ಡಿಟ್ಟೋ	0—1—4	0—1—0	
44		ಕೊಳಲುಸಂತೆ ಪೈಲ್ ಜಜ್ಜರಿ.	1	10	0	0	ಡಿಟ್ಟೋ	0—0—2	0—0—2	
45		ಅರೇಹಳ್ಳಿ ಪೈಲ್ ಜಜ್ಜರಿ ..	1	0	0	0	ಡಿಟ್ಟೋ	0—0—2	0—0—2	
46	ಶನಿವಾರಸಂತೆ.	ಕಣದೂರು ..	1	0	0	0	ಗಂಡಹಳ್ಳಿ ಮೊಕ್ಕಾಂ 20-5-96	0—1—4	0—1—0	
47		ಹುನುಗನಹಳ್ಳಿ ..	1	0	0	0		0—1—4	0—1—0	
48		ದೀವರಕೊಪ್ಪ ..	1	0	0	0		0—1—4	0—1—0	
49		ಮಳಲಕೊಪ್ಪ ..	1	0	0	0		0—1—4	0—1—0	
50		ಬೆಟ್ಟದಕೊಪ್ಪ ..	1	1	4	0		0—1—4	0—1—0	
51		ಕುಪ್ಪಗೋಡು ..	1	1	10	0		0—1—4	0—1—0	
52		ನಾಗೇನಹಳ್ಳಿ ..	1	0	0	0		0—1—4	0—1—0	
53		ಕಳ್ಳೇರಿ ..	1	2	0	0		0—1—4	0—1—0	
54		ತಲಗೋಡು ..	1	1	0	0		0—1—4	0—1—0	
55		ತುಡುಮುನಹಳ್ಳಿ ..	1	1	8	0		0—1—4	0—1—0	
56		ಕೀತೂರು. ..	1	1	0	0		0—1—4	0—1—0	
57		ಆಡವಳ್ಳಿ ..	1	0	8	0		0—1—4	0—1—0	
58		ಅಂಗಜನಹಳ್ಳಿ ..	1	1	4	0		0—1—4	0—1—0	
59		ಕರ್ಕಿಹಳ್ಳಿ ..	1	10	8	0		0—1—4	0—1—0	
60		ಮೊಗೆಹಳ್ಳಿ ..	1	2	0	0		0—1—4	0—1—0	
61		ಮಾಡಗೋಡು ..	1	0	0	0		0—1—4	0—1—0	
62		ಹೊಸಹಳ್ಳಿ ..	1	5	0	0		0—1—4	0—1—0	
63		ಕೋಟಗ್ನಹಳ್ಳಿ ..	1	8	12	0		0—1—4	0—1—0	
64		ಶನಿವಾರಸಂತೆ ಪೈಲ್‌ಜಜ್ಜರಿ.		48	0	0		0—0—2	0—0—2	
65	ಬಿಕ್ಕೋಡು ಹೋಬಳಿ.	ಅಂಕಿಹಳ್ಳಿ ..	1	0	12	0	ಬಿಕ್ಕೋಡು ಮೊಕ್ಕಾಂ 16-5-96	0—1—4	0—1—0	
66		ಕೆಸಗೋಡು ..	1	5	0	0		0—1—4	0—1—0	
67		ಹಿರಿವಾಟೆ ..	1	0	0	0		0—1—4	0—1—0	
68		ಲಕ್ಕುಂದ ..	1	3	0	0		0—1—4	0—1—0	
69		ಬಾದಹಳ್ಳಿ ..	1	0	12	0		0—1—4	0—1—0	
70		ಕೆರೆಹಳ್ಳಿ ..	1	0	8	0		0—1—4	0—1—0	
71		ಹೊಳಲು ..	1	21	8	0		0—1—4	0—1—0	
72		ಬಿಕ್ಕೋಡು ಸಂತೆಪೈಲ್‌ಜಜ್ಜರಿ	1	9	0	0		0—0—2	0—0—2	
73	ತಗರೆ ಹೋಬಳಿ.	ಚಂದಾಪುರ ..	1	0	8	0	ತಗರೆ ಮೊಕ್ಕಾಂ 18-5-96	0—1—4	0—1—0	
74		ಮಳವಳ್ಳಿ ..	1	5	8	0		0—1—4	0—1—0	
75		ಮೈಲಿಗೆ ..	1	1	0	0		0—1—4	0—1—0	
76		ಮೊಗಸವಾರ ..	1	0	0	0		0—1—4	0—1—0	
		ಜುಮ್ಲಾ ..	72	406	4	0	..		..	

ತಾರೀಖು 23ನೇ ಏಪ್ರೆಲ್ 1896ನೇ ಇಸವಿ.

ತಾರೀಖು 18ನೇ ಏಪ್ರೆಲ್ 1896.

ಸ್ನ 1896—97ನೇ ಸಾಲಿಗೆ ಬಗಿನಿ ಶೇಂದಿ ಬಾಬತು ಗ್ರಾಮವಾರು ಹರಾಜ್ ಇಸ್ತಿಹಾರ್.

(1)

ಇದಕ್ಕೆ ಲಗ್ಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಆಯಾ ಗ್ರಾಮಗಳಲ್ಲಿ, 12 ತಿಂಗಳು ಅಂದರೆ ಸ್ನ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂ॥ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಬಗಿನಿ ಮರದ ಶೇಂದಿಯನ್ನು ಇಳಿಸಿ ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರಿಂದ ಯಾ ಇದಕ್ಕಾಗಿ ಸದರೀಯವರಿಂದ ನೇಮಿಸಲ್ಪಡಬಹುದಾದವರಿಂದ ಆಯಾ ಹೋಬಳಿ ಕಸಬಾ ಗ್ರಾಮಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು ಹರಾಜು ಹಾಕಲ್ಪಡಲೂ ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜು ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಆ ಮಾರನೇ ದಿನಗಳಲ್ಲಿಯೂ ಹರಾಜು ಹಾಕಲ್ಪಡುವವು. ಮೇಲ್ಕಂಡ ಗ್ರಾಮವಾರಿಗೆ ದರಖಾಸ್ತುಗಳೇನೂ ಬಾರದೆ ಹೋದರೆ ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಅಂಥಾ ಗ್ರಾಮಗಳನ್ನು ಅಮಾನಿಯಾಗಿ ರೂಢಿಸುವದಕ್ಕೂ ಅಥವಾ ಬಗನಿ ಏನೂ ಇಲ್ಲವೆಂಬ ಭಾಗ ದೃಢಪಟ್ಟಲ್ಲಿ ಹರಾಜಿನಿಂದ ವಿನಾಯಿಸುವದಕ್ಕೂ ಸ್ವತಂತ್ರರಾಗಿ ಇರುತ್ತಾರೆ.

2\. ಮೇಲೆ ವಿವರಿಸಲ್ಪಟ್ಟಿರುವ ಗ್ರಾಮಗಳ ಪಟ್ಟು ಸ್ವಾತಂತ್ರ್ಯದ ಹಕ್ಕು ಹರಾಜು ಚಡ ಸವಾಲದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಸದರೀ ಹಕ್ಕು ಕೊಡಲ್ಪಡುವದು. ಡೆಪ್ಯುಟಿ ಕಮಿಷನರವರು ಯಾ ಅವರು ನೇಮಿಸಬಹುದಾದವರು ತಮ್ಮ ಯುಕ್ತಾನುಸಾರ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿ ಇರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ ಮಾಡಲ್ಪಡೋಣವು ಸವಾಲನ್ನು ಅಂಗೀಕರಿಸದಂತೆ ಭಾವಿಸಲ್ಪಡತಕ್ಕದ್ದು.

3\. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿ ಯಾಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುಖ್ತಾಲಿಕರ ಮೂಲಕವಾಗಲಿ ಹಾಜರಾಗಬೇಕು. ಯಾವದಾದರೊಂದು ಗ್ರಾಮದ ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡೆದ ಸವಾಲ್‌ದಾರನು 2ನೇ ಗ್ರಾಮದ ಹರಾಜು ಷುರು ಆಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಡಿಪಾಜಿಟ್ ಕಟ್ಟಬೇಕು. ಹಾಗೆ ಕಟ್ಟದೆ ಇದ್ದರೆ ಒಡನೆ ಬಾಪನ್ನು ದುಸರೀ ಹರಾಜು ಮಾಡಿಸಿ ಈ ದುಸರಿ ಹರಾಜಿನಿಂದ ಸರ್ಕಾರಕ್ಕೆ ಉಂಟಾಗುವ ಲುಕ್ಸಾನಿಗೆ ಅವ್ವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಈ ಹರಾಜು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಂದ ಮಂಜೂರಾದ ಸಂಗತಿಯೂ ಹರಾಜುದಾರನಿಗೆ ತಿಳಿದ ಒಂದು ವಾರದ ಒಳಗಾಗಿ ಮೇಲ್ಕಂಡ ಶೇವಣಿ ಬಾಬತು ಬಾಕಿ ಪೂರಾ ಮೊಬಲಗನ್ನು ಮತ್ತು ಆಯಾ ಗ್ರಾಮದ ಒಟ್ಟು ಇಜಾರೆ ಮೊಬಲಗಿನ ಮೇಲೆ ದರ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನು ಹಾಜರ್ಮಾಡಬೇಕಲ್ಲದೆ ಮುಚ್ಚಳಿಕೆ ಸಹ ಬರದುಕೊಡಬೇಕು. ಈ ರೀತಿ ನಡಿಯಲೂ ತಪ್ಪಿದರೆ ಶೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಂಡು ಪುನಃ ದುಸರೀ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಅವಲ್ ಹರಾಜುದಾರನನ್ನೇ ಗುರಿಪಡಿಸುತ್ತೆ. ಶಿವಾಯಿ ಚಡದರಖಾಸ್ತುದಾರನು ಸದರೀ ಮುಚ್ಚಳಿಕೆ ಬರದುಕೊಡುವಾಗಲೆ ಎಕ್ಸೈಜ್ ರೂಲ್ಸ್ ಅನುಸರಿಸಿ ಯೇರ್ಪಡಿಸಾಗಬಹುದಾದ ಹುಕುಂಗಳಿಗೆ ಒಳಪಟ್ಟು ಪುತಾರಿದಾರ್ರ ಹೆಸರು ನಮೂದಿಸಿ ಒಂದು ಪಟ್ಟಿಯನ್ನು ಹಾಜರ್ ಮಾಡಬೇಕು.

4\. ಹಾಲೀ ಗ್ರಾಮಗಳಲ್ಲಿ ದುಕಾನ್ ಇರುವ ಸ್ಥಳ ಹೊರ್ತು ಬೇರೇ ಸ್ಥಳದಲ್ಲಿ ದುಕಾನ್ ಇಡಕೂಡದು. ವಿಶೇಷ ಸಂದರ್ಭಗಳು ವಿನಹಾ ಒಂದು ಗ್ರಾಮದಲ್ಲಿ ಒಂದಕ್ಕಿಂತಾ ಹೆಚ್ಚಾಗಿ ದುಕಾನ್ ಇಡಕೂಡದು. ಜಾಸ್ತೀ ದುಕಾನ್ ಕೊಡುವದಕ್ಕೂ ಯಾ ತೆಗದು ಹಾಕುವದಕ್ಕೂ ಸಂದರ್ಭಾನುಸಾರ ಡೆಪ್ಯುಟಿ ಕಮಿಷನರ್ ಸಾಹೇಬರವರು ಸ್ವತಂತ್ರವುಳ್ಳವರಾಗಿ ಇರುತ್ತಾರೆ.

5\. ಎಕ್ಸೈಜ್ ಆಕ್ಟ್ 5ನೇ ಸೆಕ್ಷನ್ ಅನುಸರಿಸಿ ಪ್ರತಿ ಒಬ್ಬ ದುಕಾನ್‌ದಾರ ಮತ್ತು ಇಜಾರೆದಾರ ಸಹ ಲೈಸೆನ್ಸ್ ಹೊಂದಿ ಬಾಬನ್ನು ರೂಢಿಸಿಕೊಳ್ಳಬೇಕು.

6\. ಸಂತೆ ಮತ್ತು ಜಾತ್ರೆಗಳು ಯಾವ್ಯಾವ ಗ್ರಾಮಕ್ಕೆ ಸಂಬಂಧಪಟ್ಟದ್ದೊ ಆಯಾ ಗ್ರಾಮದ ಇಜಾರೇದಾರನಿಗೆ ಸೇರಿಸಿ ಕೊಡಲ್ಪಡುತ್ತೆ. ಸಂದರ್ಭಾನುಸಾರ ಸದರೀ ಸಂತೆ ಮತ್ತು ಜಾತ್ರೆ ಬಿಕರಿಗೆ ಇತರ ಗ್ರಾಮದ ಇಜಾರೇದಾರನು ಅಪೇಕ್ಷಿಸಿದರೆ ರೂಲ್ಸ್ ಅನುಸರಿಸಿ ಸ್ಪೆಷಲ್ ಅಪ್ಪಣೆ ಚೀಟಿಯು ಕೊಡಲ್ಪಡುತ್ತೆ.

ಸ್ನ 1896—97ನೇ ಸಾಲಿಗೆ ಬಗನಿ ಶೇಂದಿ ಬಾಬತು ದುಕಾನ್ ವಗೈರೆ ತಪ್ಸೀಲ್ ಪಟ್ಟಿ.

ತಾಲ್ಲೂಕು ಮಂಜರಾಬಾದು ಡಿಸ್ಟ್ರಿಕ್ಟು ಹಾಸನ ಸ್ನ 1896ನೇ ಇಸವಿ.

ನಂಬರ್.	ಹೋಬಳಿ.	ಗ್ರಾಮ.	ತಪ್ಸೀಲ್. 95—96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆಸ್ಸ್ ವಿನಹ ಇಜಾರೇ ಮೊಬಲಗು.			ದುಕಾನುಗಳು	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
1	ಹೆತ್ತೂರು	ಪ್ಯಕೆರೆ	ಮಲ್ಲೇಗವುಡ ..	15	0	0	1	ಸಕಲೇಶಪುರ	ಸೇರು 1ಕ್ಕೆ 1 ಆಣೆ ಲಾಗಾ
2		ಬಿರಡಹಳ್ಳಿ	ಕೆಂಚೇಗವುಡ ..	2	0	0	1	ಹೋಬಳಿ ಪೂ	ಯತು ದರ 2 ಆಣೆಯಂ
3		ಅಚಂಗಿ	ಮರಿದಾಸಪ್ಪ ..	0	4	0	1	ರಾ 1896ನೇ	ತೆ ಬಿಕರಿ ಆಗುತ್ತಲಿದೆ ಆದ
4		ಜೆನ್ನಾಪುರ	ಚಿಕ್ಕೀರೇಗವುಡ ..	5	0	0	1	ಮೇ 18—19	ರೆ ಮಳೆಕಾಲದಲ್ಲಿ ಯಲ್ಲಾ
5		ಗಾಣದಹೊಳೆ	ಪರವಯ್ಯ ..	20	0	0	2		ದುಕಾನ್‌ಗಳಲ್ಲೂ 1 ಆಣೆ
6		ಹೆ[illegible]	ಡಿಟ್ಟೋ ..	25	0	0	2		ಯಂತೆಯೂ ಬೇಸಿಗೆಕಾಲ

361

ನಂಬರು.	ಹೋಬಳಿ.	ಗ್ರಾಮ.	[illegible] ತಪ್ಸೀಲ [illegible] 95—96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆಸ್ಸ್ ವಿನಹ ಇಜಾರೇ ಮೊಬಲಗು.			ಅಂಗಡಿಗಳ ಸಂಖ್ಯೆ	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
8	ಸಕಲೇಶಪುರ	ಸಕಲೇಶಪುರ	ಸೋಮೇಗವುಡ	0	8	0	4		
9		ದೊಡ್ಡನಾಗರ	ಬಸವೇಗವುಡ	0	6	0	1		
10		ಕಬ್ಬಿನಗದ್ದೆ	ಮಲ್ಲೇಗವುಡ	5	8	0	2		
11		ಮುಟ್ಟಸಾಗರ	ಪಟೇಲ್ ಪುಟ್ಟೇಗವುಡ	13	4	0	3		
12		ಕೊಗಡವ	ಸೋಮೇಗವುಡ	0	8	0	1		
13		ಬಸವನಹಳ್ಳಿ	ಅಣ್ಣೇಗವುಡ	0	8	0	1		
14		ಶಿದ್ದಾಪುರ	ಶಿದ್ದವೀರಯ್ಯ	0	12	0	1		
15		ಕಣಿಗಲಮನೆ	ಡಿಟೋ	0	8	0	1		
16		ಹಾಲೆಬೇಲೂರು	ಸೋಮೇಗವುಡ	5	0	0	3		
17		ರಾಮೇನಹಳ್ಳಿ	ಡಿಟೋ	5	0	0	1		
18		ಕೊಲ್ಲಹಳ್ಳಿ	ಡಿಟೋ	2	0	0	1		
19		ಮಳಲಿ	ಚನ್ನಮ್ಮ ಹೆಗ್ಗಡತಿ	7	12	0	2		
20		ಕೆಸಗಾನಹಳ್ಳಿ	ಬಸವೇಗವುಡ	10	0	0	1		
21		ಕಾಡಹಳ್ಳಿ	ಬೈರೇಗವುಡ	0	8	0	1		
22		ಹಳ್ಳಿಮೈಲ್	ಡಿಟೋ	0	8	0	1		
23		ಆನೇಮಾಲ್	ಡಿಟೋ	0	8	0	1		
24		ಇರಗಲೂ	ಡಿಟೋ	0	4	0	1		
25		ಕಲ್ಲಹಳ್ಳಿ	ರಾಮೇಗವುಡ	0	10	0	1		
26		ಚಿಕ್ಕಸತ್ತಿಗಾಲ್	ಸುಬ್ಬೇಗವುಡ	0	8	0	1		
27		ದೋಣಿಗಾಲ್	ಶಾಂತಮಲ್ಲೇಗವುಡ	7	0	0	1		
28		ದೇವೀಹಳ್ಳಿ	ಡಿಟೋ	7	0	0	1		
29		ಕೆಲಗಳಲೆ	ಸೋಮೇಗವುಡ	6	0	0	2		
30		ಮಾಗಡಿ	ದ್ಯಾವೇಗವುಡ	3	0	0	1		
31		ಕಿರಹಳ್ಳಿ	ಡಿಟೋ	5	0	0	2		
32		ಮಾಸವಳ್ಳಿ	ಪುಟ್ಟೇಗವುಡ	10	0	0	1		
33		ಹನಡೆ	ರುದ್ರಯ್ಯ	2	8	0	1		
34		ಹಲಸಾಲಿಗೆ	ಡಿಟೋ	15	0	0	2		
35		ಹುಲ್ಲಹಳ್ಳಿ	ಮಲ್ಲೇಗವುಡ	7	0	0	1		
			ಜುಮ್ಲಾ	234	4	0	0		
36	ಬೆಳಗೋಡು	ಜಮ್ಮನಹಳ್ಳಿ	ಅಜ್ಜೇಗವುಡ	5	0	0	1	1896ನೇ ಮೇ	
37		ಹಳ್ಳೀಕೆರೆ	ಮಿ|| ಪಿ. ಎ. ಕೊಯಿಲೊ	3	0	0	1	20–21ಹೋ	
38		ಹೊಸಕೆರೆ	ಡಿಟೋ	3	0	0	1	ಬಳಿಪೂರ	
39		ಕುಣಿಗನಹಳ್ಳಿ	ಬಸವೇಗವುಡ	1	0	0	1		
40		ಕಾಕನಮನೆ	ಬಸಲಿಂಗಯ್ಯ	1	0	0	1		
41		ಯಡೆಹಳ್ಳಿ	ಜೋಗೀಕನ್ನ ಬಸ್ವ	1	0	0	1		
42		ಗುಲಗಳಲೆ	ನಿರ್ವಾಣಿಗವುಡ	5	8	0	1		
43		ಬಾಗೆ	ಬಸವ	10	4	0	2		
44		ಬಾಳ್ಳು	ನಿರ್ವಾಣಿ	3	0	0	1		
45		ಬನವಾಶೆ	ಡಿಟೋ	2	0	0	1		
46		ಕೆಸಗುಲಿ	ಮಲ್ಲೇಗವುಡ	2	0	0	1		
47		ಹೆಬ್ಬನಹಳ್ಳಿ	ಡಿಟೋ	8	8	0	1		
48		ಮತಿಗಳಲೆ	ಡಿಟೋ	1	0	0	1		
49		ಬಾಳಗೋಡು	ಬೋವಿದ್ಯಾವ	4	0	0	1		
50		ವುದೇವಾರ	ಡಿಟೋ	2	0	0	2		
51		ಒಳಗೋಡು	ಬೇಲೂರುಕಾಡಿಗರ ಮೊಗ್ಗೇಗವುಡ	3	8	0	1		
52		ಕೆಂಚನಮನೆ	ಡಿಟೋ	23	0	0	2		
53		ಹಸಗವಳ್ಳಿ	ಡಿಟೋ	8	0	0	1		
56		ಗೊಳಗೊಂಡೆ	ಡಿಟೋ	28	4	0	3		
			ಜುಮ್ಲಾ	115	0	0	0		

ನಂಬರು.	ಹೋಬಳಿ.	ಗ್ರಾಮ.	ತಪ್ಶೀಲ್. 95—96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆಸ್ ವಿನಹ ಇಜಾರೇ ಮೊಬಲಗು.			ಬೇಕಾಗುವ ಜಾಮೀನು.	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
57	ಕಂಚಿನಗಲ್ಲ ಹೊಸಕೋಟೆ	ಕಾಗನೂರು ..	ಸೋಮೇಗವುಡ ..	2	8	0	1	ಹೊಸಕೋಟೆ ಹೋಬಳಿಪೂರ ಮೇ 22—23 ಲ್ಲಿ	
58		ವಡೂರು ..	ಸಾಂತಮಲ್ಲೇಗವುಡ ..	6	0	0	2		
59		ಕಾಡ್ಲೂರು ..	ಸಂಗೇಗವುಡ ..	0	4	0	1		
60		ಹಾಡ್ಯ ..	ಮಲ್ಲೇಗವುಡ ..	0	4	0	1		
61		ಹೆಂಡ್ಮಿಗೆ ..	ಷೇಕ್‌ದಾವೂದ್‌ಸಾಬಿ ..	4	4	0	1		
62		ಹೊಸಹಳ್ಳಿ ..	ಹನುಮೇಗವುಡ ..	0	4	0	1		
63		ಹೈದೂರು ..	ಸಣ್ಣೇಗವುಡ ..	0	4	0	1		
64		ಮುತ್ತಿಗಿ ..	ನಂಜೇಗವುಡ ..	0	8	0	1		
65		ನೇರಗಳಲೆ ..	ಶ್ರೀನಿವಾಸರಾವ್‌ರಣಾನವರ	0	4	0	1		
66		ಆವರಹಳ್ಳಿ ..	ಬಸವೇಗವುಡ ..	0	4	0	1		
67		ಕಿರಹುಣಸೆ ..	ಡಿಟೋ ..	1	0	0	1		
68		ಕಿತ್ತಗಳಲೆ ..	ಮಲ್ಲೇಗವುಡ ..	1	3	0	1		
69		ಬೀಗತ್ತೂರು ..	ಕುಳ್ವಾಡಿಗಕೆಂಪ ..	0	11	0	1		
70		ಶಿರಗಾವಾರ ..	ಸಿದ್ದೇಗವುಡ ..	0	6	0	1		
71		ಸುಳಗೋಡು ..	ಕಾರೇಗವುಡ ..	0	4	0	1		
			ಜುಮ್ಲಾ ..	18	4	0	0		
72	[illegible]	ಮರ್ಕಹಳ್ಳಿ ..	ಕೆಂಚೇಗವುಡ ..	4	0	0	2	ಹೋಬಳಿಪೂರ 25—26ನೇ ಮೇ 1896	
73		ಹಾಡ್ಯಹಳ್ಳಿ ..	ರಾಮೇಗವುಡ ..	5	0	0	2		
74		ಹೆತ್ತೂರು ..	ದ್ಯಾವೇಗಡ ..	7	0	0	3		
75		ಕೋಣಬನಹಳ್ಳಿ ..	ಕೆಂಚೇಗವುಡ ..	1	0	0	1		
76		ಅತ್ತಿಗನಹಳ್ಳಿ ..	ಮಹಲಿಂಗೇಗವುಡ ..	4	0	0	1		
77		ಯಡ್ಡೆರೆ ..	ತಿಮ್ಮೇಗವುಡ ..	1	8	0	1		
78		ಲಕ್ಕೊಂದ ..	ಕೊಮಾರಗವುಡ ..	1	0	0	1		
79		ಸಂತಹಳ್ಳಿ ..	ಕರೀಗವುಡ ..	5	0	0	2		
80		ಚಂಗಡಹಳ್ಳಿ ..	ಡಿಟೋ ..	2	0	0	2		
81		ಹೇರೂರು ..	ಡಿಟೋ ..	4	0	0	1		
82		ಹೆಗ್ಗಡಹಳ್ಳಿ ..	ಶಿವಬಸವಯ್ಯ ..	1	0	0	1		
83		ದೊಡ್ಡಕುಂದೂರು ..	ಕೊಮಾರಗವುಡ ..	1	8	0	1		
84		ಮುತ್ತೂರು ..	ಡಿಟೋ ..	1	0	0	1		
85		ನಾರೂರು ..	ಅಣ್ಣೇಗವುಡ ..	0	8	0	1		
86		ಮಂಚೂರು ..	ಬಸವೇಗವುಡ ..	0	8	0	1		
87		ಐಗೂರು ..	ಸುಬ್ಬೇಗವುಡ ..	0	4	0	1		
88		ಹಾಸ್ಯ ..	ಡಿಟೋ ..	1	0	0	1		
89		ಹೊಸ್ಕೋಟೆ ..	ರಾಜಗವುಡ ..	1	0	0	1		
90		ಹುಲಗತ್ತೂರು ..	ವುಚ್ಚಂಗಿ ಬಸವೇಗವುಡ	1	8	0	1		
91		ಈಚಲುಬೀಡು ..	ಕೆಂಚ್ಚೇಗವುಡ ..	1	0	0	1		
92		ಕಳಲೆ ..	ಸಂತಹಳ್ಳಿ ಕರೀಗವುಡ	4	0	0	1		
93		ತಡಕಲು ..	ಅತ್ತಿಹಳ್ಳಿ ದೊಡ್ಡೇಗವುಡ	1	8	0	1		
94		ಹೊಸೂರು ..	ದೊಡ್ಡೇಗವುಡ ..	2	8	0	1		
95		ಕವಕುಂಟೆ ..	ಅತ್ತಿಹಳ್ಳಿ ದೊಡ್ಡೇಗವುಡ	4	0	0	1		
96		ಕಾಡೂರು ..	ದೊಡ್ಡೇಗವುಡ ..	2	8	0	1		
97		ಹುಲ್ಲತ್ತೂರು ಎಸ್ಟೇಟಿ	ಬಸವೇಗವುಡ ..	0	8	0	1		
98		ವುಚ್ಚಂಗಿ ..	ಡಿಟೋ ..	1	0	0	1		
99		ಯುಸಳೂರು ..	ಸಿದ್ದೇಗವುಡ ..	1	0	0	1		
		ತೊಂತಾಪುರ ..	ಬಲಗೈ ಬಡವ ..	1	8	0	1		
100		ಸುಂಡವಳ್ಳಿ ..	ನಿರ್ವಾಣಿಗವುಡ ..	1	0	0	1		
			ಜುಮ್ಲಾ ..	63	12	0	0		

ನಂಬರು.	ಹೋಬಳಿ.	ಗ್ರಾಮು.	ತಪ್ಸೀಲ್.				ಅಂಗಡಿ ಸಂಖ್ಯೆ	ಹರಾಜು ತಾರೀಖು ಮತ್ತು ಸ್ಥಳ.	ಷರಾ.
			95–96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆನ್ಸ್ ವಿನಹ ಇಜಾರೆ ಮೊಬಲಗು.					
101	[illegible]	ಇಬ್ಬಡಿ	ಸುಳ್ಳಕ್ಕಿ ಪುಟ್ಟೇಗವುಡ	1	0	0	1	ಮೇ 28–29 ಹೋಬಳಿಪೂರಾ 1896	
102		ಸಾಂತಪುರ	ಡಿಟೋ ಪೊವಿಶಿದ್ಯಾ	0	8	0	1		
103		ದೊಡ್ಡಸತ್ತಿಗಾಲ	ಸುಳ್ಳಕ್ಕಿ ಪುಟ್ಟೇಗವುಡ	0	8	0	1		
104		ನಲ್ಲುಲ್ಲಿ	ನಿರ್ವಾಣೆಗವುಡ	2	0	0	2		
105		ನಿಡಗೆರೆ	ಬಳ್ಳೂರು ನಂಜೇಗವುಡ	0	8	0	1		
106		ಬಳ್ಳೂರು	ಡಿಟೋ	2	0	0	2		
107		ಕುರಬತ್ತೂರು	ನಂಜೇಗವುಡ	2	0	0	1		
108		ಈಚಪುರ	ರಾಮೇಗವುಡ	1	8	0	1		
109		ದೊಡ್ಡನಹಳ್ಳಿ	ಶಿದ್ದೇಗವುಡ	1	0	0	1		
110		ಹೆಸ್ನಲಿ	ನಂಜೇಗವುಡ	1	0	0	1		
111		ಹಡ್ಲಹಳ್ಳಿ	ನಲ್ಲುಲ್ಲಿ ನಿರ್ವಾಣೆಗವುಡ	12	0	0	2		
112		ಮಾಗಲ	ಚನ್ನೇಗವುಡ	6	0	0	2		
113		ಕೆರೋಡಿ	ದೊಡ್ಡ ಕೆಂಚೇಗವುಡ	5	0	0	2		
114		ಅರೇಕೆರೆ	ಗೊಗ್ಗಿ ಸಂಗೇಗವುಡ	55	0	0	3		
115		ಸುಳ್ಳಕ್ಕಿ	ಪುಟ್ಟೇಗವುಡ	7	0	0	1		
116		ಬ್ಯಾಕರವಳ್ಳಿ	ತಮ್ಮೇಗವುಡ	2	0	0	1		
117		ಜಾನೆಕೆರೆ	ಪುಟ್ಟೇಗವುಡ	12	0	0	2		
118		ಉಮ್ಮತ್ತೂರು	ಬಸವೇಗವುಡ	3	4	0	2		
119		ಕೊತನಹಳ್ಳಿ	ಕುಳ್ಯಾಡಿದೊಡ್ಡ	2	0	0	1		
120		ಕುಂಬ್ರಹಳ್ಳಿ	ಡಿಟೋ	0	8	0	1		
121		ಚಿಕ್ಕಲ್ಲೂರು	ಡಿಟೋ ಬೈರಾ	0	4	0	1		
122		ದೊಡ್ಡಕಲ್ಲೂರು	ಡಿಟೋ ಜ್ವಾಲಾರಿ	0	4	0	1		
123		ಯಣವರಹಳ್ಳಿ	ದೊಡ್ಡೇಗವುಡ	1	0	0	1		
124		ಕಾಮನಹಳ್ಳಿ	ದ್ಯಾವೇಗವುಡ	5	0	0	1		
			ಜುಮ್ಲಾ	123	4	0	0		
125	[illegible]	ಕರಗೂರು	ಅಪ್ಪಣ್ಣಗವುಡ	2	0	0	1	1896ನೆ ಮೇ ತಾರೀಖು 30-31 ಹೋಬಳಿ ಪೂರಾ	
126		ಜೋಡಿಗದ್ದೆ	ನಿಂಗೇಗವುಡ	2	0	0	1		
127		ಗೊಪ್ಪದ್ದು	ಕರಿಗವುಡ	19	8	0	3		
128		ಕೊಂಗಹಳ್ಳಿ	ಸುಬ್ಬೇಗವುಡ	6	8	0	1		
129		ಬಾಚಹಳ್ಳಿ	ಮಂಚೇಗವುಡ	1	0	0	1		
130		ಕುಮ್ಮಹಳ್ಳಿ	ಕೊಮಾರಗವುಡ	1	8	0	1		
131		ಹದಾಲಿಕೆರೆಹಳ್ಳಿ	ಡಿಟೋ	0	8	0	1		
132		ತಂಬಗೆರೆ	ನಿಂಗೇಗವುಡ	3	0	0	1		
133		ಮಾಗೇರಿ	ಚಿಕ್ಕರಾಮೇಗಡವು	2	0	0	1		
134		ಬೂಣಗೆರೆ	ಸುಬ್ಬೇಗವುಡ	2	0	0	1		
135		ಮಂಕನಹಳ್ಳಿ	ಚಿಕ್ಕರಾಮೇಗವುಡ	3	8	0	1		
136		ಅರಣಿ ಎಸ್ಟೇಟ್	ವಡ್ಡೇರಚನ್ನೇಗವುಡ	2	0	0	1		
137		ಡಿಟೋ ಗ್ರಾಮ	ಡಿಟೋ	2	0	0	1		
138		ಮೋಡಹಳ್ಳಿ	ದ್ಯಾವೇಗವುಡ	1	0	0	1		
139		ವಣಗೂರು	ನಾರಾಯಣೆಗವುಡ	3	0	0	1		
140		ಯರಗಹಳ್ಳಿ	ಸುಬ್ಬೇಗವುಡ	1	0	0	1		
141		ಅತ್ತಿಹಳ್ಳಿ	ರಾಮೇಗವುಡ	15	4	0	2		
142		[illegible] ಮನೆ	ಕೊಮಾರಗವುಡ	10	0	0	2		
143		ಮಂಗತ್ತೂರು	ಶಾ॥ ಶೀತಾರಾಮಯ್ಯ	2	0	0	1		
144		ವಾಲಹಳ್ಳಿ	ವಡೇರ ಚನ್ನೇಗವುಡ	2	0	0	1		
145		ಹೊಂಗಡಹಳ್ಳಿ	ಹಿರಿಗವುಡ	3	0	0	1		
146		ಯಡೆತುಮರಿ	ನಿರ್ವಾಣಿ	2	0	0	1		
147		ಒಟ್ಟೆಕುಮರಿ	ಸುಬ್ಬೇಗವುಡ	2	0	0	1		
148		ಯತ್ತಹಳ್ಳಿ	ರಾಮೇಗವುಡ	6	0	0	1		
149		ಬಾಳೆಹಳ್ಳಿ	ಮಂಚೇಗವುಡ	3	0	0	1		
150		ಬ್ಯಾಗಡಹಳ್ಳಿ	ನಿಂಗೇಗವುಡ	1	0	0	1		
		ಹಳ್ಳೂರು	ಡಿಟೋ	2	0	0	1		
			ಜುಮ್ಲಾ	100	12	0	0		

ನಂಬರು.	ಹೋಬಳಿ.	ಗ್ರಾಮ.	ತಪ್ಸೀಲ್. 95—96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ, ಸೆಸ್ಸ್ ವಿನಹ ಇಜಾರೆ ಮೊಬಲಗು.			ಬಿಡ್ಡುಗಳ ಸಂಖ್ಯೆ.	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
1 5	[illegible]	ಕೆಳಗನಮಂಚಹಳ್ಳಿ ..	ದೇವೇಗವುಡ ..	40	0	0	3	ಜೂನ್ 3—4 1896ನೇ ಇಸವಿ	
152		ಬುಗಡಹಳ್ಳಿ ..	ಮಲ್ಲೇಗವುಡ ..	6	8	0	1		
153		ಕರ್ಡಿಗಾಲ ..	ರಾಮೇಗವುಡ ..	3	0	0	1		
154		ಚಿಣ್ಣಹಳ್ಳಿ ..	ಡಿಟೋ ..	15	0	0	2		
156		ಜೊಬ್ಬನಹಳ್ಳಿ ..	ಜಾಕಹಳ್ಳಿ ದೊಡ್ಡೇಗವುಡ	10	0	0	3		
157		ಹಿರಿಯೂರು ..	ಸಣ್ಣೇಗವುಡ ..	3	0	0	1		
158		ಹೊಸಹಳ್ಳಿ ..	ಸುಬ್ಬೇಗವುಡ ..	3	8	0	1		
159		ವಳಲಹಳ್ಳಿ ..	ಮಲ್ಲೇಗವುಡ ..	5	4	0	2		
160		ಹರಗ್ರಹಳ್ಳಿ ..	ಬಳ್ಳೂರು ನಂಜೇಗವುಡ	5	0	0	2		
161		ಹಾರ್ನಹಳ್ಳಿ ..	ದೊಡ್ಡೇಗೌಡ ..	3	0	0	2		
162		ಕಡಗ್ರವಳ್ಳಿ ..	ಡಿಟೋ ..	3	8	0	1		
163		ಕ್ಯಾನಹಳ್ಳಿ ..	ಬೀರೇಗವುಡ ..	4	0	0	2		
164		ಕುಂಬರಡಿ ..	ಬಸವೇಗವುಡ ..	33	0	0	3		
165		ಹೆಗ್ಗದ್ದೆ ..	ಹೀಗವುಡ ..	33	0	0	4		
166		ಬಿಸ್ಲಹಳ್ಳಿ ..	ಶಾ|| ಗು|| ಸೂರಪ್ಪ ..	1	0	0	1		
167		ಆಲವಳ್ಳಿ ..	ಡಿಟೋ ..	2	0	0	1		
168		ವಡ್ರಹಳ್ಳಿ ..	ಡಿಟೋ ..	0	4	0	1		
169		ಕಾಡಮನೆ ..	ಬಸವೇಗವುಡ ..	16	0	0	2		
170		ನಡಹಳ್ಳಿ ..	ಶಾ|| ಗು|| ದಾಸಪ್ಪ ..	30	0	0	3		
171		ಬ್ರಹ್ಮನಕೆರೆ ..	ಮಲ್ಲೇಗವುಡ ..	0	4	0	1		
			ಜುಮ್ಲಾ ..	217	4	0	0		
172	ಹಾನುಬಾಳು	ದೇವಾಲ್ದಕೆರೆ ..	ಪ. ಶಿವೇಗವುಡ ..	3	0	0	1	ಜೂನ್ 6—7 ಹೋಬಳಿ ಪೂರ	ಈ ಹರಾಜು ರಿಕಾರ್ಡು ಹುಜೂರಿಗೆ ರವಾನೆಯಾಗಿ ಧೆವಾಪಸು ಬರಲಿಲ್ಲವಾಗಿ ಹೊಸ ವನ ಮಾಡಿಸಲು ಯತ್ನವಿಲ್ಲ.
173		ಮಕ್ಕಿಹಳ್ಳಿ ..	ಬಿಲ್ಲೊ ರಿಕರ್ಸ್ಸ್ ..	12	8	0	1		
174		ನಲಗಹಳ್ಳಿ ..	ರಾಮೇಗವುಡ ..	5	0	0	1		
175		ಕ್ಯಾಮ್ನಹಳ್ಳಿ ..	ಸಕ್ಲೇಶಪುರದಲ್ಲಿರುವ ಅ. ಮಲ್ಲಶೆಟ್ಟಿ	62	0	0	3		
176		ಅಚ್ಚರಡಿ ..	ರಾಮೇಗವುಡ ..	5	0	0	1		
177		ಹರ್ಜಬಾಳು ..	ಡಿಟೋ ..	20	0	0	3		
178		ಅಚ್ಚನಹಳ್ಳಿ ..	ಬಿಳಸರೆ ಪುಟ್ಟೇಗವುಡ	20	0	0	2		
179		ಬಾಚ್ನಹಳ್ಳಿ ..	ಪುಟ್ಟೇಗವುಡ ..	3	0	0	1		
180		ಅಗಳಹಟ್ಟಿ ..	ಮಾಸ್ತರೆ ಸೋಮೇಗವುಡ	64	0	0	2		
181		ಹುವಡಿ ..	ನಂಜೇಗವುಡ ..	5	0	0	1		
182		ಹಾದಿಗೆ ..	ಶಾಂತಮಲ್ಲೇಗವುಡ ..	2	8	0	2		
183		ಡಿಟೋ ಎಸ್ಟೇಟ್ ..	ಡಿಟೋ ..	1	0	0	1		
184		ಬಾಚ್ನಹಳ್ಳಿ ಅವರಕಾಡು ಎಸ್ಟೇಟ್	ರಾಮೇಗವುಡ ..	1	0	0	1		
185		ಹಂಜಿಗೊಡ್ಲಹಳ್ಳಿ ..	ಕಾಗವುಡ ..	1	12	0	1		
186		ಡಿಟೋ ಎಸ್ಟೇಟ್ ..	ಡಿಟೋ ..	2	0	0	1		
187		ಮದ್ನಾಪುರ ..	ತಮ್ಮಣ್ಣಗವುಡ ..	5	0	0	1		
188		ಹೀನ್ನಾದೆ ..	ಸೋಮೇಗವುಡ ..	3	0	0	1		
189		ಕೊಗ್ರವಳ್ಳಿ ..	ಶಿವೇಗವುಡ ..	7	8	0	2		
190		ಮಾಗಡಿ ..	ಸುಬ್ಬೇಗವುಡ ..	26	12	0	2		
191		ಮಾಗುಂದ ..	ಪುರ್ಟೇಗವುಡ ..	8	0	0	1		
192		ಕುಮರಹಳ್ಳಿ ..	ಜಟ್ಟೇಗವುಡ ..	4	8	0	1		
193		ಹೊಡ್ಡಹಳ್ಳಿ ..	ಮಂಚೇಗವುಡ ..	2	0	0	1		
195		ಮಾವಿನಕೂಲು ..	ರಾಮೇಗವುಡ ..	70	0	0	3		
196		ಮಾವಿನಹಳ್ಳಿ ..	ಭೈರವ ..	56	0	0	2		
197		ದಬ್ಬಗದ್ದೆ ..	ಡಿಟೋ ..	101	8	0	3		
198		ಸೀಕನಹಳ್ಳಿ ..	ಶಿವೇಗವುಡ ..	8	0	0	1		
199		ಅಗನಿ ..	ಪುಟ್ಟೇಗವುಡ ..	35	0	0	2		
200		ರಕ್ತಸಿದ್ಧಿ ಎಸ್ಟೇಟ್ ..	ಬಸವೇಗವುಡ ..	1	8	0	1		
201		ಜಂಬರಡಿ ..	ದ್ಯಾವೇಗವುಡ ..	20	0	0	2		
			ಜುಮ್ಲಾ ...	556	8	0	0		
			ಒಟ್ಟುಜುಮ್ಲಾ ..	1427	0	0	0		

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರನಾಮೆ.

1896ನೇ ಇಸವಿ ಏಪ್ರಿಲ್ 1ನೇ ಮುಕ್ಕಾಂ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,---

I. ಈ ಕೆಳಗೆ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟು ತಾಲ್ಲೂಕುಗಳ ಬಗನಿ ಶೇಂದಿ ಪುತಾರ್ ಮತ್ತು ಮಾರುವ ಹಕ್ಕು ಸನ್ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಆಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕು ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಆಯಾ ತಾಲ್ಲೂಕು ಕಚೇರಿ ರೂಬರೂ ಡೆಪ್ಯುಟಿ ಕಮಿಷನರವರಿಂದ ಆಗಲಿ ಅಥವಾ ಪೈರು ಅಸಿಸ್ಟೆಂಟ್ ಕಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

	ತಾಲ್ಲೂಕು.	ಹರಾಜು ತಾರೀಖು.	
1	ಶಿಕಾರಿಪುರ	ಸನ್ 1896ನೇ ಮೇ	11—12
2	ಸೊರಬ	ಡಿಟ್ಟೋ	14—15
3	ಸಾಗರ	ಡಿಟ್ಟೋ	18—19
4	ನಗರ	ಡಿಟ್ಟೋ	21—22
5	ತೀರ್ಥಹಳ್ಳಿ	ಡಿಟ್ಟೋ	25—26

II. ಪ್ರತಿ ಒಂದು ಸರಕಲ್ ಗುತ್ತೆಯನ್ನ ಚಡದರಖಾಸ್ತುದಾರನಿಗೆ ಕೊಡಲ್ಪಡುವದು, (ಸದರೀ ಚಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲಿನ ಮೊಬಲಗ್ಯೆ ಕಮ್ಮಿ ಇರಕೂಡದು) ಈ ಹರಾಜು ಅಸಿಸ್ಟೆಂಟ್ ಕಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು ಡೆಪ್ಯುಟಿ ಕಮಿಷನರವರ ಮಂಜೂರಿಗೆ ಒಳಪಟ್ಟು ಇರತಕ್ಕದ್ದಾಗಿ ಇರುತ್ತೆ ಅಂಥಾ ಹರಾಜಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸದರೀ ಯವರು ಡೆಪ್ಯುಟಿ ಕಮಿಷನರವರಲ್ಲಿಗೆ ಕಳುಹಿಸತಕ್ಕದ್ದು, ಡೆಪ್ಯುಟಿ ಕಮಿಷನರವರು ಯಾವದೊಂದು ದರಖಾಸ್ತೂ ಅಥವಾ ಚಡದರಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

III. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ಮೂಲಕವಾಗಿಯಾಗಲಿ ಹಾಜರಾಗಬೇಕು. ಡೆಪ್ಯುಟಿ ಕಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡತಕ್ಕ ಆಫೀಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ್ ಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೆ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಒಡನೆ ಡಿಪಾಜಿಟ್ ಮಾಡಬೇಕು ಡೆಪ್ಯುಟಿ ಕಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಹಿಂದೆ ಹಾಜರು ಮಾಡಿದ ಡಿಪಾಜಿಟ್ ಮೊಬಲಗು ಸೇರಿ ಸಾಲ್ ಗುತ್ತಿಗೆ ಮೊಬಲಗಿನ ಮೂರು ತಿಂಗಳ ಖಿಸ್ತು ಮೊಬಲಗು ನಗದಾಗಿಯಾಗಲಿ ಅಥವಾ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಅಮಲ್ದಾರರಲ್ಲಿ ಹಾಜರ್ಮಾಡಬೇಕು. ಹಾಗೆ ಗವರ್ನಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತ್ರಿಗಾಗಿ ಹಾಜರ್ಮಾಡಿದೆ ಎಂದು ಸದರೀ ಪತ್ರ ಮೈಲ್ ಡೆಪ್ಯುಟಿ ಕಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿಕೊಡತಕ್ಕದ್ದಾಗಿ ಇರುತ್ತೆ ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗ್ಗಾಗಿ ಅರವಾಶಿ ನಗದಾಗಿಯಾಗಲಿ ಅಥವಾ ಮೇಲ್ಕಂಡಂತೆ ಇಂಡಾರ್ಸ್ಮಾಡಿ ಕೊಟ್ಟ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಬಾಕಿ ಅರ್ಧ ಭಾಗ ಸ್ಥಿರಸೊತ್ತು ಮೂಲಕ ಜಾಮೀನ್ ಕೊಡಬಹುದು ಹಾಗೆ ಆಧಾರ ಮಾಡುವ ಸ್ಥಿರಸೊತ್ತಿನ ಬೆಲೆ ಜಾಮೀನ್ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು, ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಠೇವಣಿ ಇಟ್ಟ ಮೊಬಲಗು ಆಖ್ಯೆರ ಮೂರು ತಿಂಗಳ ಖಿಸ್ತಿನ ಬಗ್ಯೆ ಜಮಾ ಹಿಡಿಯಲ್ಪಡುತ್ತದೆ, ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನೆಂತ ಕ್ರಮವಾದ ಸ್ಟಾಂಪು ಕಾಗದದ ಮೇಲೆ ಮಾಮೂಲಿನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿ ಇರುತ್ತೆ.

IV. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್ಮಾಡದೆ ತಪ್ಪಿದರೂ, ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ, ಷರೂ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬ್ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿಯಾಗಲಿ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಯೇನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು ಕಂದಾಯ್ದ ಬಾಕಿಯಂತೆ ಸದರೀಯವನ ಜಿಂದಗಿ ಜಫ್ತೀ ಹರಾಜು ಮೂಲಕ ವಸೂಲ್ಮಾಡಿಕೊಳ್ಳಲ್ಪಡುತ್ತೆ.

V. ಈಚಲ್ ಶೇಂದಿ ಕಂಟ್ರಾಕ್ಟ್ ಸಂಬಂಧದಲ್ಲಿ ವಿಧಾಯಕವಾಗಿರುವ ಷರತ್ತುಗಳು ಈ ಬಗನೀ ಶೇಂದಿ ಇಜಾರೆ ಬಗ್ಯೆ ಅನ್ವಯಿಸಲ್ಪಡುತ್ತೆ.

VI. ಹಿಂದಿನ ಸಾಲುಗಳ ಬಗನೀ ಶೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕು ಅಮಲ್ದಾರ್ರು ಅಥವಾ ಶಿರಸ್ತೇದಾರರಲ್ಲಿ ದರಖಾಸ್ತು ಕೊಟ್ಟು ತಿಳಕೊಳ್ಳಬಹುದು.

ಎಂ. ರಾಮಚಂದ್ರರಾವ್,
ಫಾರ್ ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಎಕ್ಸೈಜ್ ಡಿಪಾರ್ಟ್ಮೆಂಟ್.

1896ನೇ ಇಸವಿ ಏಪ್ರಿಲ್ 28ನೇ ಮುಕ್ಕಾಂ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

1. ಈ ಕೆಳಗೆ ಕಂಡ ಕಡೂರು ಡಿಸ್ಟ್ರಿಕ್ಟು ತಾಲ್ಲೂಕುಗಳ ಬಗಣಿ ಶೇಂದಿ ಉತಾರು ಮತ್ತು ಮಾರುವ ಹಕ್ಕು ಸನ್ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಯಾಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ

ಆಯಾ ತಾಲ್ಲೂಕ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಆಯಾ ತಾಲ್ಲೂಕ ಕಚೇರಿ ರೂಬರೂ ಅಸಿಸ್ಟೆಂಟ ಕಮ್ಮಿಷನರವರಿಂದಾಗಲಿ ಅಥವಾ ಅಮಲ್ದಾರ್ರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ತಾಲ್ಲೂಕು.	ಹರಾಜು ತಾರೀಖು.
1. ಚಿಕ್ಕಮಗಳೂರು	ಮೇ ತಿಂಗಳ 27ರ ಲಾಗಾಯಿತು 29ರವರಿಗೆ
2. ಮೂಡಗೆರೆ,	ಡಿಟೋ 25 ಮತ್ತು 26ನೇ ತಾರೀಖುಗಳು.
3. ಕೊಪ್ಪ	ಜೂನ ತಿಂಗಳ 3ನೇ ತಾರೀಖು ಲಾಗಾಯಿತು 5ರವರಿಗೆ
4. ಯಡೆಹಳ್ಳಿ	ಜೂನ 6 ಮತ್ತು 7ನೇ ತಾರೀಖುಗಳು.

2. ಪ್ರತಿ ಒಂದು ಸರ್ಕಲ್ ಗುತ್ತಿಯು ಚಡದರ ಖಾಸ್ತುದಾರನಿಗೆ ಕೊಡಲ್ಪಡುವದು. ಸದರಿ ಚಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲ ಮೊಬಲಗ್ಯೆ ಕಮ್ಮಿ ಇರಕೂಡದು. ಈ ಹರಾಜು ಡೆಪ್ಯುಟಿ ಕಮ್ಮಿಷನರವರ ಮಂಜೂರಿಗೆ ಒಳಪಟ್ಟು ಇರತಕ್ಕದ್ದಾಗಿ ಇರುತ್ತೆ. ಅಂಥಾ ಹರಾಜಿಗೆ ಸಮ್ಮಂಧಪಟ್ಟ ರಿಕಾರ್ಡುಗಳನ್ನು ಸದರೀಯವರು ಡೆಪ್ಯುಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾವದೊಂದು ದರಖಾಸ್ತು ಅಥವಾ ಚಡ ದರಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

3. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟ್ಯ ಉಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು.

4. ಡೆಪ್ಯುಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡಿಸತಕ್ಕ ಆಫೀಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು, ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೊ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಪಡನೆ ಡಿಪಾಜಿಟ್ ಮಾಡಬೇಕು. ಡೆಪ್ಯುಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಮೊದಲು ಇಡೋಣಾದ ಠೇವಣಿ ದೇಖಿಲ್ ಸಾಲ ಗುತ್ತಿಗೆ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗದಷ್ಟು ಮೊಬಲಗು ನಗದಾಗೆ ಯಾಗಲಿ ಅಥವಾ ಗವರ್ನಮೆಂಟ ಪತ್ರಮೂಲಕವಾಗಿ ಯಾಗಲಿ ಅಮಲ್ದಾರ್ರಲ್ಲಿ ಹಾಜರ್ ಮಾಡಬೇಕು. ಹಾಗೆ ಗವರ್ನಮೆಂಟ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತ್ರಿಗಾಗಿ ಹಾಜರ್ಮಾಡಿಥೆಯೆಂದು ಸದರೀ ಪತ್ರ ಜ್ಯೆಲ ಡೆಪ್ಯುಟಿಕಮ್ಮಿಷನರವರ ಹೆಸರಿಗೆ ಇಂಡಾರ್ಸ ಮಾಡಿ ಕೊಡತಕ್ಕದ್ದಾಗಿ ಇರುತ್ತೆ. ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗ್ಗಾಗಿ ಅರವಾಸಿ ನಗದಾಗಿಯಾಗಲೀ ಅಥವಾ ಮೇಲ್ಕಂಡಂತೆ ಇಂಡಾರ್ಸಮಾಡಿಕೊಟ್ಟ ಗವರ್ನಮೆಂಟ ಪತ್ರಮೂಲಕವಾಗಿಯಾಗಲೀ ಬಾಕಿ ಅರ್ಧಭಾಗ ಸ್ಥಿರಸ್ವತ್ತು ಮೂಲಕ ಜಾಮೀನಿಕೊಡಬಹುದು. ಹಾಗೆ ಆಧಾರ ಮಾಡುವ ಸ್ಥಿರಸ್ವತ್ತಿನ ಬೆಲೆ ಜಾಮೀನಿ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು. ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಠೇವಣಿ ಇಟ್ಟ ಮೊಬಲಗು ಆಖೈರ್ ಮೂರು ತಿಂಗಳ ಖಿಸ್ತಿನ ಬಗ್ಯೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನೆಂತ ಕ್ರಮವಾದ ಸ್ಟಾಂಪು ಕಾಗದದ ಮೇಲೆ ಮಾಮೂಲನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿರುತ್ತೆ.

5. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಟ ಹಾಜರಮಾಡದೇ ತಪ್ಪಿದರೂ ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ ಷುರು ಹಾಜರ್ ಮಾಡಿದ ಡಿಪಾಜಿಟ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಡಲ್ಪಡುತ್ತಲ್ಲದೆ ಬಾಬ ಪುನಹ ಹರಾಜುಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿ ಯಾಗಲೀ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಏನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು (ಜಮೀನು) ಕಂದಾಯದ ಬಾಕಿಯಂತೆ ಸದರಿಯಾವನ ಜಿಂದಗಿ ಜಪ್ತಿ ಹರಾಜು ಮೂಲಕ ವಸೂಲ ಮಾಡಿಕ್ಕೊಳ್ಳಲ್ಪಡುತ್ತೆ.

6. ಪ್ರತಿ ಒಬ್ಬ ಉತಾರದಾರನೂ ಎಕ್ಸೈಸ ಆಕ್ಟ 5ನೇ ಸೆಕ್ಷನ ಅನುಸರಿಸಿ ಡೆಪ್ಯುಟಿ ಕಮ್ಮಿಷನರವರಿಂದ ಪಂದು ಲೈಸೆನ್ಸು ಪಡಿಯತಕ್ಕದ್ದು.

7. ಸರ್ಕಾರದಿಂದ ಲೈಸನ್ಸು ರೂಲ್ಸ ಮಂಜೂರಾಗುವ ವರಿಗೂ ಗುತ್ತಿಗೆದಾರನು ತನ್ನ ಫಿರ್ಕಾಕ್ಕೆ ಸಮ್ಮಂಧಪಟ್ಟ ಅಂಗಡಿಗಳಲ್ಲಿ ಸೇಂದಿ ಬಿಕರೀ ಬಗ್ಯೆ ಎಕ್ಸೈಜ ಆಕ್ಟ 16ನೇ ಸೆಕ್ಷನ ಪ್ರಕಾರ ಅಪ್ಪಣೆ ಚೀಟಿ ಕೊಡಬಹುದು.

8. ಈಚಲು ಸೇಂದಿ ಕಂಟ್ರಾಕ್ಟ ವಿಷಯದಲ್ಲಿ ಹಾಲಿ ಜಾರೀಲಿರುವ ಷರತ್ತುಗಳು ಈ ಬಗನಿ ಸೇಂದಿ ಇಜಾರೆ ಬಗ್ಯೆ ಅನ್ವಯಿಸಲ್ಪಡುತ್ತೆ.

9. ಹಿಂದಿನ ಸಾಲಗಳ ಬಗನಿ ಸೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ ತಿಳಿಯಬೇಕಾಗಿದ್ದರೆ ತಾಲ್ಲೂಕ ಅಮಲ್ದಾರ್ರು ಅಥವಾ ಸಿರಸ್ತೇದಾರರಲ್ಲಿ ದರಖಾಸ್ತು ಕೊಟ್ಟು ತಿಳುಕೊಳ್ಳಬಹುದು.

10. ಕಂಟ್ರಾಕ್ಟಿಗೆ ಸಮ್ಮಂಧಪಟ್ಟ ಬಾಕಿ ಎಲ್ಲಾ ಸಂಗತಿಗಳು ಹರಾಜು ಮಾಡಿಸುವ ಆಫೀಸರಿಂದ ಹರಾಜು ಕಾಲದಲ್ಲಿ ತಿಳಿಸಲ್ಪಡುವದು.

ಎಜ. ಎಚ. ಸ್ಪಾರ್ಕಸ,

ಡೆಪ್ಯುಟಿ ಕಮ್ಮಿಷನರ, ಕಡೂರ ಡಿಸ್ಟ್ರಿಕ್ಟು.

ಸ್ವಂತಪ್ರಕಟನೆ.

ನೋಟಿಸ್.

ಮಂಡ್ಯದ ತಾಲ್ಲೂಕು ಆತಗೂರು ಹೋಬಳಿ ಕದಲೂರಲ್ಲಿರುವ ಯಡತೊರೇ ತಾಲ್ಲೂಕು ಮಾವತ್ತೂರು ವೆಂಕಟರಾಮಯ್ಯನವರ ಹೆಂಡತಿ ವೆಂಕಟಲಕ್ಷ್ಮಮ್ಮನು, ಇದರಿಂದ ಸಕಲರಿಗೂ ತಿಳಿಯಪಡಿಸುವದೇನಂದರೆ,-ನಾನು ಮಂಡ್ಯದ ತಾಲ್ಲೂಕು ಸರ್ವಮಾನ್ಯ ಕೆಸ್ತೂರು, ಅಲ್ಲಿರುವ ಹರಿಯಣ್ಣಯ್ಯನ ನರಸಯ್ಯನವರ ಮಕ್ಕಳು ನರಸುಹ್ಮಯ್ಯನವರಿಗೆ, ನಾನು ಬರದುಕೊಟ್ಟಿರುವ 94ನೇ ಇಸವಿ ಅಕ್ಟೋಬರ್ 21ನೇ ಮರ್‍ಯಂ ಜನರಲ್ ಪವರಾಫ್ ಅಟರ್ನಿ ನೋಟ್ಸು ಮೊಕ್ತ್ಯಾರ್‌ನಾಮೆಯನ್ನು ನಾನು ರದ್ದುಪಡಿಸಿರುವದರಿಂದ ಈ ತಾರೀಖು ಲಾಗಾಯತು ಮುಂದೆ ನನಿಗೋಸ್ಕರ ಅವರಲ್ಲಿ ಯಾವವಿಧವಾದ ಲೇವಾದೇವಿ, ಬೆಕ್ಸಾಚಾರ ಮತ್ತು ಕಾಗದ ಪತ್ರಗಳನ್ನು ಇತರರು ನಡಿಸಕೂಡದು. ಹಾಗ್ಗೆ ನಡಿಸಿದರೆ ಅದಕ್ಕೆ ನಾನು ಬದ್ಧಳಾಗಲಾರೆನಾದ ವಿವರ ತಿಳಿಯುವದು. ತಾರೀಖು 12—4—96.

○ ವೆಂಕಟಲಕ್ಷ್ಮಮ್ಮನ ಗುರುತಿನ ರುಜುವಿಗೆ ಕದಲೂರು ಶಾನಭೋಗ ವೆಂಕಟಸುಬ್ಬಯ್ಯನ ಬರಹ.

368

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಂಮಿಷ್ ಆದ್ದು

ಬೆಂಗಳೂರು, ಗುರುವಾರ, ಮೇ ತಾ॥ 7, ಸ॥ 1896.

III ನೇ ಭಾಗ.

ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.

GOVERNMENT OF MYSORE.

ಮೈಸೂರ್ ಗವರ್ನಮೆಂಟ್.

LEGISLATIVE DEPARTMENT.

ಲೆಜಿಸ್ಲೇಟಿವ್ ಇಲಾಖಾ.

REGULATION No. I OF 1896.

1896ನೇ ಇಸವಿಯ 1ನೇ ನಂಬರ್ ರೆಗ್ಯುಲೇಷನ್.

(1896ನೇ ಇಸವಿ ಫೆಬ್ರುವರಿ 18ನೇ ತಾರೀಖಿನ ದಿನ ಮಂಜೂರಾದ್ದು.)

ಮೈಸೂರ ಗವರ್ನಮೆಂಟಿನ ಮೇಲೆ ಬ್ರಿಜಲಾಲ್‌ದಾಸ್ ಎಂಬುವನ ದಾವೆ ವಿಚಾರದಲ್ಲಿ ಆಖೈರ್ ಫೈಸಲನ್ನು ಕೊಡಲು ಒಂದು ಸ್ಪೆಷಲ್ ಕೋರ್ಟನ್ನು ಮುಕರರ್ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ. ಘನವನ್ನೈದಿದ ಶ್ರೀಮನ್ ಮಹಾರಾಜರವರಾದ IIIನೇ ಕೃಷ್ಣರಾಜಒಡೆಯರವರ ಮೇಲೆ ತರಲ್ಪಟ್ಟ ದಾವೆಗಳನ್ನೆಲ್ಲ ವ್ಯವಸ್ಥೆ ಮಾಡಲು ಸುಪ್ರೀಂ ಅಂದರೆ ಇಂಡಿಯಾ ಗವರ್ನಮೆಂಟಿನವರ ಮಂಜೂರಾತಿ ಮತ್ತು ಆಜ್ಞಾನುಸಾರವಾಗಿ ಮೈಸೂರ ಕಮಿಷನರವರು ಅಷ್ಟಗ್ರಾಮದ ಡಿವಿಜನ್ ಸೂಪರಿಂಟೆಂಡೆಂಟರಾದ ಕ್ಯಾಪ್ಟನ್ ಯಲಿಯಟ್ ಸಿ. ಬಿ. ಸಾಹೇಬರನ್ನೂ ದರಬಾರ್ ಸರ್ಜನರಾದ ಜೆ. ಸಿ. ಕ್ಯಾಂಬಲ್ ಸಾಹೇಬರನ್ನೂ ಮುಕರರ್ಮಾಡಿದರು. ಇವರಿಬ್ಬರೂ ಸೇರಿ 1864ನೇ ಇಸವಿ ಡಿಸೆಂಬರ್ 23ನೇ ತಾರೀಖಿನಲ್ಲಿ ಈ ವಿಷಯದಲ್ಲಿ ಮಾಡಿದ ತೀರ್ಪಿನ ಪ್ರಕಾರ ಘಾತಿಯಾಗಿದ್ದ ದಾಮೋದರ ದಾಸನೆಂಬುವನ ವಾರಸ್‌ದಾರ ಮತ್ತು ಜಾಯಿದಗೊಪ್ಪಿದ ಪ್ರತಿನಿಧಿಯಾದ ಘಾತಿ ಬ್ರಿಜಲಾಲ್‌ದಾಸನೆಂಬುವನಿಗೆ, ಆತನಿಗಿದ್ದ ಹಕ್ಕುಗಳೆಲ್ಲಾ ಪೂರಾ ಫೈಸಲಾಗಿ ಹೋಗುವಂತೆ, ರೂ. 5,67,338–15–1 ಮೊತ್ತವು ಕೊಡಲ್ಪಡಬೇಕಾಯಿತು. ಸದರೀ ಮೊಬಲಗನ್ನು ಈಗ ಮೈಸೂರ್ ಸರ್ಕಾರದಿಂದ ಬರಮಾಡಿಕೊಳ್ಳಲು ಜಾಯಿದಗೆ ಅನುಸಾರವಾಗಿ ಯಾರಿಗೂ ಹಕ್ಕಿಲ್ಲದೆ ಇದ್ದರೂ, ಸದರೀ ಬ್ರಿಜಲಾಲ್‌ದಾಸಿನ ವಾರಸದಾರರು, ಮತ್ತು ಜಾಯಿದಗೆ ಸರಿಯಾದ ಪ್ರತಿನಿಧಿಗಳೆಂದು ತೀರ್ಮಾನಿಸಲು ಅಧಿಕಾರಹೊಂದಿದ ಕೋರ್ಟಿನಿಂದ ಗೊತ್ತು ಮಾಡಲ್ಪಡಬಹುದಾದ ಇಸಂ ಅಥವಾ ಇಸಂಗಳಿಗೆ ಸದರೀ ಮೊಬಲಗನ್ನು, ನ್ಯಾಯ, ನೀತಿ ಮತ್ತು ಸದ್ವರ್ತನಕ್ಕೆ ಅನುಸಾರವಾಗಿ ಸೇರಿಸಬಹುದಾದ ತಕ್ಕ ಷರತ್ತುಗಳಿಗೊಳಪಡಿಸಿ, ಧಾರಾಳವಾಗಿ ಕೊಟ್ಟುಬಿಡಬೇಕೆಂದು ಮೈಸೂರ ಗವರ್ನಮೆಂಟಿ

ನವರು ಇಷ್ಟಪಟ್ಟಿದಾರೆ. ಈ ಯಿಛ್ಛಾನುಸಾರವಾಗಿ ಸದರೀ ರೂ. 5,67,338—15—1 ವೊತ್ತವನ್ನು ಬರ
ಮಾಡಿಕೊಳ್ಳಲು ಅಪೇಕ್ಷಿಸುವ ಜನಗಳೆಲ್ಲ ತಮ್ಮ ದಾವೆಗಳನ್ನು ಮೈಸೂರ ಚೀಫ್ ಕೋರ್ಟಿನ ರೆಜಿಸ್ಟ್ರಾರವರ
ಆಫೀಸಿನಲ್ಲಿ ದಾಖಲ್ಮಾಡಬೇಕೆಂತಲೂ, ಅಂತ ದಾವೇಗಳ ವ್ಯವಸ್ಥೆಯ ಬಗ್ಗ್ಯಾಗಿ ಒಂದು ಸ್ಪೆಷಲ ಕೋರ್ಟನ್ನು ಏರ್ಪ
ಡಿಸುವ ಉದ್ದೇಶ ತಮಗಿರುವದಾಗಿಯೂ, ಮೈಸೂರ್ ಗವರ್ನಮೆಂಟಿನವರು 1895ನೇ ಇಸವಿ ಅಕ್ಟೋಬರ್
8ನೇ ಮರ್ಕಂ ಮೈಸೂರ್ ಮೊಕ್ಕಾಮಿನ C. 42ನೇ ನಂಬರ್ ಇಸ್ತಿಹಾರನ್ನು ಸಾದರ್ಮಾಡಿರುತ್ತಾರೆ. ಆದ್ದರಿಂದ
ಘನವನ್ನೈದಿದ ಶ್ರೀಮನ್ ಮಹಾರಾಣಿ ರೀಜಂಟರವರು ಕೆಳಗೆ ನಮೂದಿಸಿರುವಂತೆ ವಿಧಿಸಿರುತ್ತಾರೆ:—

1. (1) ಮೈಸೂರ ಗವರ್ನಮೆಂಟಿನವರು ಒಂದು ಸ್ಪೆಷಲ್ ಕೋರ್ಟನ್ನು ಸರ್ಕಾರಿ ಗಜೆಟಿನಲ್ಲಿ ಇಸ್ತಿಹಾ
ರಿನ ಮೂಲಕ ಏರ್ಪಡಿಸಿ ಅಂತಾ ಸ್ಪೆಷಲ್ ಕೋರ್ಟಿನ ಜಡ್ಜಿಗಳಾಗಿ ಇಬ್ಬ
ರು ಕಮ್ಮಿಷನರುಗಳನ್ನು ಮೊಕರರ್ಮಾಡತಕ್ಕದ್ದು.

ಸ್ಪೆಷಲ ಕೋರ್ಟಿನ ಏರ್ಪಾಡು.

(2) ಸದರೀ ಸ್ಪೆಷಲ ಕೋರ್ಟಿಗೆ, ಈ ರೆಗ್ಯುಲೇಷನಿನ ನಿಬಂಧನೆಗಳಿಗೊಳಪಟ್ಟು,
(a) ಈ ರೆಗ್ಯುಲೇಷನಿನ ಪೀಠಿಕೆಯಲ್ಲಿ ಕಂಡ 5,67,338—15—1 (ಐದುಲಕ್ಷವೂ ಅರವತ್ತೇಳುಸಾ
ವಿರದ ಮುನ್ನೂರಮೂವತ್ತೆಂಟು ರೂಪಾಯಿಗಳು, ಹದಿನೈದು ಆಣೆ, ಒಂದುಪೈ)ನ ವೊಬಲಗು
ಸದರೀ ಬ್ರಿಜಲಾಲ್‌ದಾಸಿನ ವಾರಸುದಾರರು ಮತ್ತು ಖಾಯಿದೆಯ ಪ್ರಕಾರ ಪ್ರತಿನಿಧಿಗಳು ಯಾ
ರಾದರೂ ಯಿದ್ದು ಅವರಿಗೆ ಸಲ್ಲಬೇಕಾದರೆ ಅಂತಾ ಮನುಷ್ಯ ಅಥವಾ ಮನುಷ್ಯರು ಯಾರೆಂಬ
ವಿಷಯದಲ್ಲಿಯೂ,
(b) ಮೇಲೆ ನಮೂದಿಸಲ್ಪಟ್ಟ ಸಂದಾಯಕ್ಕೆ ನ್ಯಾಯ, ನೀತಿ ಮತ್ತು ಸದ್ಧರ್ಮಕ್ಕೆ ಅನುಸಾರವಾಗಿ
ಲಗತ್ತಾಗಿರಬೇಕಾದ ಷರತ್ತುಗಳು ಮತ್ತು ಭರವಸೆಗಳೇನಾದರೂ ಇದ್ದರೆ ಅಂತವುಗಳನ್ನು ಕು
ರಿತೂ ವಿಚಾರಣೆಯನ್ನು ಮಾಡಿ ನಿರ್ಣೈಸಿ ಆಖೈರ್ ಫೈಸಲನ್ನು ಕೊಡುವಧಿಕಾರವಿರತಕ್ಕದ್ದು.

(3) ಈ ಪ್ರಕರಣ ಪ್ರಕಾರ ಮೊಕರರಾದ ಒಬ್ಬ ಕಮ್ಮಿಷನರಿನ ಮರಣ, ರಾಜೀನಾಮೆ, ಅಥವಾ ಅಸ
ಮರ್ಥತೆಯಸಂದರ್ಭದಲ್ಲಿ, ಅಂಥಾ ಕಮ್ಮಿಷನರಿಗೆ ಬದಲಾಗಿ ಮತ್ತೊಬ್ಬರನ್ನು ಸರ್ಕಾರಿ ಗೆಜೆಟಿನಲ್ಲಿ ಇಸ್ತಿಹಾರ್
ಮೂಲಕ ಮೈಸೂರ್ ಗವರ್ನಮೆಂಟಿನವರು ಮೊಕರರ್ಮಾಡತಕ್ಕದ್ದು.

2. ಸದರೀ ಸ್ಪೆಷಲ್ ಕೋರ್ಟಿನವರು, ಈ ರೆಗ್ಯುಲೇಷನಿನ ಪೀಠಿಕೆಯಲ್ಲಿ ಕಂಡ ಇಸ್ತಿಹಾರಿನಲ್ಲಿ ಗೊತ್ತು
ಮಾಡಲ್ಪಟ್ಟಿರುವ ವಾಯಿದೆಯೊಳಗಾಗಿ ಮತ್ತು ರೀತಿಯಂತೆ ಸರಿಯಾಗಿ
ದಾಖಲ್ಮಾಡಲ್ಪಡದೆ ಹೋದ ಯಾವ ದಾವೆಯನ್ನೂ ಹಿಡಿಯತಕ್ಕದ್ದಲ್ಲ,
ಮತ್ತು ಹಾಗೆ ದಾಖಲ್ಮಾಡಲ್ಪಡದೆಹೋದ ಎಲ್ಲಾ ದಾವೆಗಳೂ ಎಂದೆಂದಿಗೂ
ರದ್ದಾದವೆಂತಲೂ ಪುನಃ ಯಾವ ಬಗೆಯಾಗಿಯೂ ಉಜ್ಜೀವಿಸುವದಕ್ಕೆ ಅಯೋಗ್ಯವಾದವೆಂತಲೂ, ಭಾವಿಸಲ್ಪಡತ
ಕ್ಕದ್ದು.

ಪೀಠಿಕೆಯಲ್ಲಿ ನಮೂದಾಗುವ ನೋಟೀಸಿನಂ
ತೆ ನಡಿಯದೆ ತಪ್ಪುವದರ ಫಲ.

3. ಸದರೀ ಸ್ಪೆಷಲ್ ಕೋರ್ಟಿನವರಿಗೆ, ತಮ್ಮ ರೂಬರೂ ದಾಖಲ್ಮಾಡಲ್ಪಟ್ಟಿರುವ ದಾವೆಗಳಿಗೆ ಸಂಬಂಧಿ
ಸಿದ ಅಥವಾ ತಮ್ಮ ರೂಬರೂ ನಡಿಯುವ ವಿಚಾರಣೆಗೆ ಮುಖ್ಯವಾ
ದ್ದೆಂದು ಭಾವಿಸಲ್ಪಡಬಹುದಾದ ಯಾವ ಆಜ್ಞಾಪತ್ರಿಕೆಗಳು, ಡಿಕ್ರಿಗಳು,
ಜಡ್ಜಮೆಂಟುಗಳು, ರಿಕಾರ್ಡುಗಳು, ಪತ್ರಗಳು, ದಸ್ತಾವೇಜುಗಳು, ದಾ
ಗೀನಾಗಳು, ಪ್ಲೀಡಿಂಗ್ಸು ಅಂದರೆ ಪ್ರತಿಪಾದನಗಳು, ಪುಸ್ತಕಗಳು,
ಲೆಕ್ಕಗಳು, ಪತ್ರಿಕೆಗಳು, ಅರ್ಜಿಗಳು, ಕಾಗದಗಳು ಅಥವಾ ಬರವಣಿಗೆಗಳನ್ನೂ, ಅವು ಯಾವ ಮನುಷ್ಯನ,
ಜಡ್ಜಿಯ ಅಥವಾ ಕೋರ್ಟಿನ ಸ್ವಾಧೀನದಲ್ಲಿದ್ದಾಗ್ಯೂ, ತಗಾದೆಹಚ್ಚಿ ಹಾಜರ್ಮಾಡಿಸಿಕೊಳ್ಳೋಣ ನ್ಯಾಯವಾಗಿರ
ತಕ್ಕದ್ದು; ಮತ್ತು ಅಂತಾ ಮನುಷ್ಯ, ಜಡ್ಜಿ, ಅಥವಾ ಕೋರ್ಟು ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ಉದ್ಯೋ
ಗಸ್ಥ ಅಥವಾ ಮನುಷ್ಯನಿಗೆ ನೋಟಿಸ್ ಕೊಡಲ್ಪಟ್ಟ ಮೇಲೆ, ಸದರೀ ನೋಟಿಸಿನಲ್ಲಿ ಕಂಡ ಆಜ್ಞಾಪತ್ರಿಕೆಗಳು,
ಡಿಕ್ರಿಗಳು, ಜಡ್ಜಮೆಂಟುಗಳು, ರಿಕಾರ್ಡುಗಳು, ಪತ್ರಗಳು, ದಸ್ತಾವೇಜುಗಳು, ದಾಗೀನಾಗಳು, ಪ್ಲೀಡಿಂಗ್ಸು
ಅಂದರೆ ಪ್ರತಿಪಾದನಗಳು, ಪುಸ್ತಕಗಳು, ಲೆಕ್ಕಗಳು, ಪತ್ರಿಕೆಗಳು, ಅರ್ಜಿಗಳು, ಕಾಗದಗಳು ಅಥವಾ ಬರವ
ಣಿಗೆಗಳನ್ನು ಸದರೀ ನೋಟಿಸಿನಲ್ಲಿ ನಿರೂಪಿಸಲ್ಪಟ್ಟಿರುವ ರೀತಿಯಲ್ಲಿ ಸದರೀ ಸ್ಪೆಷಲ್ ಕೋರ್ಟಿನವರಿಗೆ ಕೂಡ್ಲೆ
ಒಪ್ಪಿಸಿಬಿಡಲ್ಪಡತಕ್ಕದ್ದು. ಹೀಗೆ ನಡಿಸಲು ಯಾವ ವಿಧವಾಗಿ ವಿರೋಧವಾದ ಯಾವ ಆಕ್ಟು, ರೆಗ್ಯುಲೇಷನ್,
ಮಾಮೂಲ್ ಅಥವಾ ಪದ್ಧತಿ ಇದ್ದಾಗ್ಯೂ, ಚಿಂತೆ ಯಿಲ್ಲ.

ದಾಖಲ್ಮಾಡಲ್ಪಟ್ಟ ದಾವೆಗಳಿಗೆ ಸಂಬಂಧಿ
ಸಿದ ದಸ್ತಾವೇಜುಗಳನ್ನು ಹಾಜರ್ಮಾಡಿಸಿಕೊಳ್ಳ
ಲು ಕಮ್ಮಿಷನರುಗಳಿಗೆ ಅಧಿಕಾರ.

4. ಸದರೀ ಸ್ಪೆಷಲ್ ಕೋರ್ಟಿನವರಿಗೆ, ಸಾಕ್ಷಿಗಳಿಗೆ ಸಮನ್ ಮಾಡಿ ಅವರ ಸಾಕ್ಷ್ಯವನ್ನು ತೆಗಿಯೋಣ
ವೂ, ಆ ಬಗ್ಗ್ಯಾಗಿ ಸಿವಿಲ್ ಪ್ರೊಸಿಡ್ಯೂರ್ ಕೋಡಿನಿಂದ ಒಂದು ಸಿವಿಲ್
ಕೋರ್ಟಿನ ವಿಚಾರದಲ್ಲಿ ವಿಧಿಸಲ್ಪಟ್ಟಿರುವಂತೆ ಸಾಧ್ಯವಾದ ಮಟ್ಟಿಗೂ
ಅದೇ ರೀತೀಲಿ ಮತ್ತು ಅದೇ ಸಾಧನಗಳ ಮೂಲಕವಾಗಿ ಸಾಕ್ಷಿಗಳ
ಮತ್ತು ಪುಸ್ತಕಗಳ, ಲೆಕ್ಕಗಳ, ಕಾಗದಗಳ, ಪತ್ರಗಳ ಅಥವಾ ಇತರ

ಸಿವಿಲ್ ಪ್ರೊಸಿಡ್ಯೂರ್ ಕೋಡಿನ ಮೇರಿಗೆ
ಹ್ಯಾಗೋ ಹಾಗೆ ಸಾಕ್ಷಿಗಳು ವಗೈರೆ ಬಗ್ಗೆ ಸ
ಮನ್ ಮಾಡಲು ಕಮ್ಮಿಷನರುಗಳಿಗೆ ಅಧಿಕಾ
ರ.

ದಸ್ತಾವೇಜುಗಳ ಹಾಜರಾತಿಯನ್ನು ಬಲಾತ್ಕರಿಸೋಣವೂ, ಈ ಪ್ರಕರಣ ಪ್ರಕಾರ ಮಾಡಲ್ಪಟ್ಟ ಯಾವ ಹುಕುಮಿಗಾದರೂ ಅವಿಧೇಯತ್ವ ನಡದಲ್ಲಿ ಆ ಬಗ್ಗೆ ಒಂದುನೂರು ರೂಪಾಯಿಗಳಿಗೆ ಮಿಂಚದೊಂದು ಜುರ್ಮಾನೆಯನ್ನು ವಿಧಿಸೋಣವೂ ನ್ಯಾಯವಾಗಿರತಕ್ಕದ್ದು.

ಪ್ರಮಾಣವನ್ನು ಮಾಡಿಸಲು ಕಮಿಷನರುಗಳಿಗೆ ಅಧಿಕಾರ.

5. ಸದರೀ ಸ್ಪೆಷಲ್ ಕೋರ್ಟನವರು ಈ ರೆಗ್ಯುಲೇಷನ್ ಪ್ರಕಾರ ವಿಚಾರಿಸಲ್ಪಡುವ ಸಂಗತಿಗಳ ಪೈಕಿ ಯಾವದಕ್ಕೆ ಸಂಬಂಧಿಸಿಯಾದರೂ ತಮ್ಮ ರೂಬರೂ ತನಿಖೆ ಮಾಡಲ್ಪಡುವ ಯಾವ ಮನುಷ್ಯನಿಗಾದರೂ ತಮಗೆ ಯುಕ್ತವೆಂದು ತೋಚಬಹುದಾದ ಬಗೆಯಿಂದ ಪ್ರಮಾಣ ಅಥವಾ ಸತ್ಯವನ್ನು ಮಾಡಿಸಬಹುದು.

ಕಮಿಷನರುಗಳ ರೂಬರೂ ನಡಿಸಲ್ಪಡುವ ವಿಚಾರಣೆಗಳು, ಕೊಡಲ್ಪಡುವ ವಾಜಮೂಲಗಳು, ಇಂಡಿಯನ್ ಪೀನಲ್ ಕೋಡಿನ ಅರ್ಥ ವಿವರಣೆ ಪ್ರಕಾರ "ಜುಡಿಷಿಯಲ್ ಪ್ರೊಸಿಡಿಂಗ್ಸ್" ಮತ್ತು "ಎವಿಡೆನ್ಸ್" ಆಗಿರತಕ್ಕದ್ದು.

6. ಸದರೀ ಸ್ಪೆಷಲ್ ಕೋರ್ಟನಿಂದ, ಈ ರೆಗ್ಯುಲೇಷನ್ ಮೇರಿಗೆ ಆ ಕೋರ್ಟನಲ್ಲಿ ದಾಖಲಾದ ಯಾವದಾದರೂ ದಾವೆಯನ್ನು, ಅಥವಾ ಅಂತ ಯಾವ ದಾವೆಗಾದರೂ ಸಂಬಂಧಿಸಿದ ಯಾವದಾದರೂ ಸಂಗತಿಯನ್ನು ಕುರಿತು, ಮಾಡಲ್ಪಡುವ ಪ್ರತಿ ವಿಚಾರಣೆಯೂ ಇಂಡಿಯನ್ ಪೀನಲ್ ಕೋಡಿನ ಅರ್ಥ ವಿವರಣೆಯಂತೆ ಒಂದು "ಜುಡಿಷಿಯಲ್ ಪ್ರೊಸಿಡಿಂಗ್ಸ್" ಎಂಬದಾಗಿ ಎಣಿಸಲ್ಪಡತಕ್ಕದ್ದು. ಮತ್ತು ಅಂತ ವಿಚಾರಣೆಗೆ ಸಂಬಂಧವಾಗಿ, ಪ್ರಮಾಣದ ಮೇಲಾಗಲಿ ಅಥವಾ ಪ್ರಮಾಣ ವಿಲ್ಲದೆಯಾಗಲಿ, ಸದರೀ ಸ್ಪೆಷಲ್ ಕೋರ್ಟನಿಂದ ಅಥವಾ ಅದರ ರೂಬರೂ ವಿಚಾರಿಸಲ್ಪಡುವ ಯಾವ ಮನುಷ್ಯನಿಂದಲಾದರೂ ಕೊಡಲ್ಪಡುವ ಪ್ರತಿ ವಾಜಮೂಲವೂ ಅದೇ ಕೋಡಿನ ಅರ್ಥವಿವರಣೆಯಂತೆ "ಎವಿಡೆನ್ಸ್" ಎಂಬದಾಗಿ ಎಣಿಸಲ್ಪಡತಕ್ಕದ್ದು.

ಸ್ಪೆಷಲ್ ಕೋರ್ಟನ ಅಡಳಿತಗಳು ಹ್ಯಾಗೆ ನಡಿಸಲ್ಪಡತಕ್ಕದ್ದು.

7. (1) ಸದರೀ ಸ್ಪೆಷಲ್ ಕೋರ್ಟನ ಅಡಳಿತಗಳು ಅಸಲ್ ದಾವೆಗಳ ವಿಚಾರಣೆ ವಿಷಯದಲ್ಲಿ 1884ನೇ ಇಸವಿ IIನೇ ನಂಬರ್ ರೆಗ್ಯುಲೇಷನಾದ ಸಿವಿಲ್ ಪ್ರೊಸಿಡ್ಯೂರ್ ಕೋಡಿನಲ್ಲಿರುವ ನಿಬಂಧನೆಗಳಂತೆ ನಡಿಸಲ್ಪಡತಕ್ಕದ್ದು.

(2) ಸದರೀ ಸ್ಪೆಷಲ್ ಕೋರ್ಟನವರು ಸಾಮಾನ್ಯವಾಗಿ ಬೆಂಗಳೂರಲ್ಲಿ ಕೂಡತಕ್ಕದ್ದು.

(3) ಸದರೀ ಸ್ಪೆಷಲ್ ಕೋರ್ಟಗೆ ರಿಜಿಸ್ಟ್ರಾರಾಗಿ ಒಬ್ಬ ಆಫಿಸರನ್ನು ಮೈಸೂರ್ ಗವರ್ನಮೆಂಟನವರು ನೊಕರರ್ಮಾಡತಕ್ಕದ್ದು, ಮತ್ತು ಅಂತ ರಿಜಿಸ್ಟ್ರಾರು, ಸದರೀ ಸ್ಪೆಷಲ್ ಕೋರ್ಟನವರು ಆಗಿಂದಾಗ್ಯೆ ನಿಯಮಿಸಬಹುದಾದಂತೆ, ಮಂತ್ರಿತ್ವ ಸ್ವಭಾವದ ಅಧಿಕಾರಗಳನ್ನು ಮತ್ತು ಕೆಲಸಗಳನ್ನು ನಡಿಸತಕ್ಕದ್ದು.

ದಾವೆಗಳನ್ನು ಫೈಸಲ್ಮಾಡೋಣದರಲ್ಲಿ ಸ್ಪೆಷಲ್ ಕೋರ್ಟನಿಂದ ಉಪಯೋಗಿಸಲ್ಪಡಬೇಕಾದ ಕಾನೂನು.

8. ಸದರೀ ಸ್ಪೆಷಲ್ ಕೋರ್ಟನವರು, ವಂಶಾವಳಿ, ದಾಯಬಾಧ್ಯತೆ, ಮದುವೆ, ಅಥವಾ ಜಾತಿ ಅಥವಾ ಯಾವದಾದರೂ ಮತಸಂಬಂಧವಾದ ಮಾಮೂಲ್ ಅಥವಾ ಏರ್ಪಾಡಿನ ವಿಚಾರವಾದ ಯಾವದಾದರೂ ಪ್ರಮೇಯವನ್ನು ತೀರ್ಮಾನಿಸೋಣ ಅವಶ್ಯಕವಾದಾಗ,—

(a) ಹಿಂದೂ ಲಾ, ಅಥವಾ

(b) ಕಾನೂನಿನ ಬಲೀಯುಳ್ಳದ್ದಾಗಿಯೂ ವ್ಯವಹಾರಕ್ಕೆ ಸಂಬಂಧಿಸಿದ ಕಕ್ಷಿಗಾರ್ರಿಗೆ ಅಥವಾ ಸ್ವತ್ತಿಗೆ ವ್ಯವಸ್ಥಾಪಕವಾಗಿಯೂ ಯಾವದಾದರೂ ಪದ್ಧತಿ ಇದ್ದಲ್ಲಿ ಅಂತ ಪದ್ಧತಿಯೂ,

ಅಂತಾ ಲಾ ಅಥವಾ ಪದ್ಧತಿ ಖಾಯಿದೆ ಮಾಡುವ ಇಲಾಖೆಯ ಖಾಯಿದೆ ಯಿಂದ ವೆತ್ಯಾಸ ಪಡಿಸಲ್ಪಟ್ಟ ಅಥವಾ ಮೌಖೂಫ್ ಮಾಡಲ್ಪಡದಿದ್ದರೆ, ಸದರೀ ಕೋರ್ಟನವರ ತೀರ್ಪಿನ ವಿಧಿಯಾಗಿರತಕ್ಕದ್ದು.

(c) ವಿಶೇಷ ವಿಧಿಯಿಲ್ಲದ ಸಂದರ್ಭಗಳಲ್ಲಿ, ಸದರೀ ಸ್ಪೆಷಲ್ ಕೋರ್ಟನವರು ನ್ಯಾಯ, ನೀತಿ ಮತ್ತು ಸದ್ಧರ್ಮದ ಪ್ರಕಾರ ಫೈಸಲ್ಮಾಡತಕ್ಕದ್ದು.

ಕಾಲನಿಬಂಧನೆ ಸಬಬಿನ ಮೇಲೆ ದಾವೆಗಳು ತಿರಸ್ಕರಿಸಲ್ಪಡಕೂಡದು.

9. (1) ಈ ರೆಗ್ಯುಲೇಷನ್ ಪ್ರಕಾರ ಸದರೀ ಸ್ಪೆಷಲ್ ಕೋರ್ಟಗೆ ದಾಖಲಾಗುವ ಯಾವ ದಾವೆಯೂ ಅದಕ್ಕೆ ಲಗಾವಾಗುವ ಸಾಧಾರಣ "ಕಾಲನಿಬಂಧನೆ ಕಾನೂನಿ"ನ ಕಾರಣದಿಂದ ತಿರಸ್ಕರಿಸಲ್ಪಡಕೂಡದು.

(2) ಸದರೀ ಸ್ಪೆಷಲ್ ಕೋರ್ಟನಲ್ಲಿ ದಾವೇದಾರ್ರಿಂದ ದಾಖಲ್ಮಾಡಲ್ಪಡುವ ದಾವೆಗಳ ಮೇಲಾಗಲಿ ದಸ್ತಾವೇಜುಗಳ ಮೇಲಾಗಲಿ ಸ್ಟ್ಯಾಂಪುಗಳು ವಸೂಲ್ಮಾಡಲ್ಪಡತಕ್ಕದ್ದಿಲ್ಲ.

ಸ್ಟ್ಯಾಂಪು ಡ್ಯೂಟಿಯು ಮಾಫಿ.

ಕಮ್ಮಿಷನರುಗಳಿಗೆ ಭಿನ್ನಾಭಿಪ್ರಾಯ ಹುಟ್ಟಿದಾಗ ಆಚರಿಸಬೇಕಾದ ನಡವಳಿಕೆ.

10. ವ್ಯವಹಾರದಲ್ಲಿರುವ ಯಾವದಾದರೂ ವಿಶೇಷಾಂಶದ ವಿಷಯದಲ್ಲಿ ಸದರೀ ಸ್ಪೆಷಲ್ ಕೋರ್ಟಿಗೇರ್ಪಡುವ ಇಬ್ಬರು ಕಮ್ಮಿಷನರುಗಳಿಗೆ ಪರಸ್ಪರ ಅಭಿಪ್ರಾಯ ಭೇದವೇನಾದರೂ ಬಂದಲ್ಲಿ, ಅಂತಾ ಸಂಗತಿಯನ್ನು ಇಂಡಿಯಾ ಗವರ್ನಮೆಂಟಿನವರ ತೀರ್ಮಾನಕ್ಕಾಗಿ ಮೈಸೂರ್ ಗವರ್ನಮೆಂಟಿನವರ ಮೂಲಕ ಅರಿಕೆ ಮಾಡತಕ್ಕದ್ದು, ಮತ್ತು ಸದರೀ ಸ್ಪೆಷಲ್ ಕೋರ್ಟಿನ ಜಡ್ಜ್‌ಮೆಂಟ ಇಂಡಿಯಾ ಗವರ್ನಮೆಂಟಿನವರು ತಿಳಿಸಬಹುದಾದ ತೀರ್ಮಾನಕ್ಕೆ ಅನುಸರಿಸಿರತಕ್ಕದ್ದು.

ಸ್ಪೆಷಲ್ ಕೋರ್ಟಿನ ಖರ್ಚಿನ ಸಂದಾಯ.

11. ಸದರೀ ಸ್ಪೆಷಲ್ ಕೋರ್ಟಿನ ಖರ್ಚು ಪ್ರಥಮತಃ ಮೈಸೂರ್ ಗವರ್ನಮೆಂಟಿನವರಿಂದ ಕೊಡಲ್ಪಡತಕ್ಕದ್ದು, ಮತ್ತು ಸದರೀ ಸ್ಪೆಷಲ್ ಕೋರ್ಟಿನಿಂದ ಈ ವಿಚಾರದಲ್ಲಿ ಮಾಡಲ್ಪಡತಕ್ಕ ಸಿಫಾರಿಷಿನ ಮೇಲೆ ಇಂಡಿಯಾ ಗವರ್ನಮೆಂಟಿನವರು ತೀರ್ಮಾನಿಸಬಹುದಾದ ರೀತಿಯಲ್ಲಿ ಆಖೈರಿಗೆ ವಿಲೆಯಾಗತಕ್ಕದ್ದು.

ಆಖೈರ್ ಫೈಸಲಿಗೆ ಅನಂತರ ಕೋರ್ಟು ಮುಗಿಯತಕ್ಕದ್ದು.

12. ಈ ರೆಗ್ಯುಲೇಷನ್ ಪ್ರಕಾರ ಸದರೀ ಸ್ಪೆಷಲ್ ಕೋರ್ಟಿನವರು ಕೊಡುವ ಆಖೈರ್ ಫೈಸಲನ್ನು ಅವರು ಮೈಸೂರ್ ಗವರ್ನಮೆಂಟಿಗೆ ಒಪ್ಪಿಸತಕ್ಕದ್ದು, ಮತ್ತು ಆ ತರುವಾಯ ಈ ರೆಗ್ಯುಲೇಷನಿನಂತೆ ನಡಿಯುವ ಸದರೀ ಕೋರ್ಟಿನ ಕೆಲಸಗಳು, ಅಧಿಕಾರಗಳು ಮುಗಿದಂತೆ ನಿಷ್ಕರ್ಷೆಯಾಗತಕ್ಕದ್ದು.

ಆಖೈರ್ ಫೈಸಲನ್ನು ಮೈಸೂರ್ ಗವರ್ನಮೆಂಟಿನವರು ಜಾರಿಮಾಡತಕ್ಕದ್ದು.

13. ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಫೈಸಲನ್ನು ಮೈಸೂರ್ ಗವರ್ನಮೆಂಟಿನವರು ಕ್ರಮ ಪ್ರಕಾರ ಜಾರಿಮಾಡತಕ್ಕದ್ದು, ಮತ್ತು ಅಂತ ಜಡ್ಜ್‌ಮೆಂಟಿನಿಂದ ಆಜ್ಞಾಪಿಸಲ್ಪಟ್ಟ ಯಾವದಾದರೂ ಹಣ ಪಾವತಿಯನ್ನಾಗಲಿ ಅಥವಾ ಇತರ ವಿಲೇವಾರಿಯನ್ನಾಗಲಿ ಮಾಡುವದಕ್ಕೆ ಮುಂಚೆ, ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಜಡ್ಜ್‌ಮೆಂಟಿನಲ್ಲಿ ನಮೂದಿಸಲ್ಪಟ್ಟಿರಬಹುದಾದ ಷರತ್ತುಗಳು ಮತ್ತು ಭರವಸೆಗಳು ಪೂರಾ ಜಾರೀಲಿ ಬರುವದಕ್ಕೋಸ್ಕರವಾಗಿ, ತಮಗೆ ಯುಕ್ತ ತೋಚಬಹುದಾದಂತೆ, ಏರ್ಪಾಡುಗಳನ್ನು ಮಾಡಿ ಜಾಮೀನುಗಳನ್ನು ಪಡಿಯತಕ್ಕದ್ದು.

ಸಿವಿಲ್ ದಾವೆಗಳಿಗೆ ಅಟಂಕ.

14. ಸದರೀ 5,67,338—15—1 (ಐದುಲಕ್ಷವೂ ಅರವತ್ತೇಳು ಸಾವಿರದ ಮುನ್ನೂರು ಮೂವತ್ತೆಂಟು ರೂಪಾಯಿ, ಹದಿನೈದಾಣೆ, ಒಂದುಪೈನ ಮೊಬಲಗು ಅಥವಾ ಅದರ ಪೈಕಿ ಯಾವ ಭಾಗದ ವಿಷಯದಲ್ಲಾಗಲಿ, ಅಥವಾ ಈ ರೆಗ್ಯುಲೇಷನಿನ ನಿಬಂಧನೆಗಳನ್ನು ಜಾರಿ ಮಾಡೋಣದರಲ್ಲಿ ಮಾಡಲ್ಪಟ್ಟ ಸಂದಾಯ ಅಥವಾ ನಡಿಸಲ್ಪಟ್ಟ ಕೃತ್ಯದ ವಿಷಯದಲ್ಲಾಗಲಿ, ಅಥವಾ ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಜಡ್ಜ್‌ಮೆಂಟಿನ ಅಭಿಪ್ರಾಯಗಳ ವಿಷಯದಲ್ಲಾಗಲಿ, ಯಾವ ಸಿವಿಲ್ ಕೋರ್ಟಿನವರೂ ಯಖ್ತ್ಯಾರಿಯನ್ನು ಚಲಾಯಿಸತಕ್ಕದ್ದಲ್ಲ

ಕೆ. ಶೇಷಾದ್ರಿ, ಐಯ್ಯರ್,
ಮೈಸೂರ್ ಸಂಸ್ಥಾನದ ದಿವಾನ್.

372

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಸ್ಪ್ ಆದ್ದು. [ನಂ. 19.

ಬೆಂಗಳೂರು, ಗುರುವಾರ, ಮೇ ತಾ|| 14, ಸರ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟ್, ರಜಿಸ್ಟ್ರೇಷರ್ ವ ಯಜ್ಯುಕೇಷರ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷರ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೇ ಭಾಗ—ಮೈಸೂರ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷರಗಳು.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೇ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 16ನೇ ಏಪ್ರೆಲ್ 1896.

ನಂ. ಸಿ. 160.—ಸರ್ 1894ನೇ ಇಸವಿಯ ಮೈಸೂರ್ ಜೈಲ್ ಮ್ಯಾನ್ಯುಯಲಿನ 86ನೇ ಪುಟದಲ್ಲಿ ಛಾಪಿಸಿರುವ 519ನೇ ರೂಲಿಗೆ ಬದಲಾಗಿ ಇದರಡಿ ಕಂಡದ್ದನ್ನು ಸೇರಿಸತಕ್ಕದ್ದೆಂದು ಮೈಸೂರ ಗವರ್ನಮೆಂಟನವರು ಹುಕುಂ ಮಾಡಿರುತ್ತಾರೆ:

"519. ಯಾವ ಖೈದಿಯಾಗಲಿ ಅಪಾಯಕರವಾದ ಯಾ ಗುಣವಾಗದ ಕಾಹಿಲೆಯಲ್ಲಿದ್ದು ಮತ್ತು ಅಂಥಾವನ ವಿಷಯದಲ್ಲಿ ಸದರೀ ಖೈದಿಯು ಖುಲಾಸೆ ಮಾಡಲ್ಪಟ್ಟ ಹೊರ್ತು ಅನ್ಯಥಾ ಬದುಕಲಾರನೆಂದು ಸದರೀ ಬಂದೀಖಾನೆಯ ಮೆಡಿಕಲ್ ಆಫಿಸರರು ಅಭಿಪ್ರಾಯ ಪಟ್ಟರೆ ಜೈಲ್ ಸೂಪರ್ರಿಂಟೆಂಡೆಂಟವರು, ಗವರ್ನಮೆಂಟ್ ಆರ್ಡರ್ ಅನುಸರಿಸಿ ಖುಲಾಸೆ ಮಾಡಲ್ಪಡುವ ಬಗ್ಯಾಗಿ ಬಂದೀಖಾನೆಯ ಇನ್ಸ್‌ಪೆಕ್ಟರ್ ಜನರಲಯವರಿಗೆ ಶಿಫಾರಸ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಜೈಲ್ ಸೂಪರ್ರಿಂಟೆಂಡೆಂಟರವರು ಸದರೀ ಖೈದಿಯು ಬಂದೀಖಾನೆಯಲ್ಲಿರುವಾಗ್ಯೆ ಅಕ್ರಮನಡತೆಯುಳ್ಳವನಾಗಿರಲಿಲ್ಲವೆಂದು ದೃಢಪಡಿಸಬೇಕು ಮತ್ತು ಮೆಡಿಕಲ್ ಆಫಿಸರರು, ಸದರೀ ಖೈದಿಯ ಖುಲಾಸೆ ಬಗ್ಯಾಗಿ ಕಾರಣಭೂತವಾದ ಕಾಹಿಲೆಯು ಯಾವ ವಿಧದಿಂದಲಾಗಲಿ ಖೈದಿಯು ಮನಃಪೂರ್ವಕ ಮಾಡಿದ ಕೆಲಸದಿಂದ ಉಂಟಾಗಲಿಲ್ಲವೆಂತಲೂ ಅಥವಾ ಹೆಚ್ಚಾಗಲಿಲ್ಲವೆಂತಲೂ ಮತ್ತು ಸದರೀ ಖೈದಿಯು ಇನ್ನೂ ಬಂದೀಖಾನೆಯಲ್ಲಿ ಯಿಡಲ್ಪಟ್ಟರೆ ಅವನ ಪ್ರಾಣಕ್ಕೆ ಅಪಾಯ ಉಂಟಾಗುವದೆಂತಲೂ ಮತ್ತು ಸದರೀಯವನು ಖುಲಾಸೆ ಮಾಡಲ್ಪಟ್ಟರೆ ಕಾಹಿಲೆಯು ಗುಣವಾಗಬಹುದೆಂತಲೂ ಸರ್ಟಿಫೈ ಮಾಡತಕ್ಕದ್ದು."

ತಾರೀಖು 18ನೇ ಏಪ್ರೆಲ್ 1896.

ನಂ. 11846.—ಮಿ. 1685, ಸರ್ 1869ನೇ ಇಸವಿಯ ಜನರಲ್ ಸ್ಟಾಂಪ್ ಆಕ್ಟಿನ 48ನೇ ಸೆಕ್ಷರ್ ಅನುಸರಿಸಿ ಮೈಸೂರ್ ಗವರ್ನಮೆಂಟನವರು, 1870ನೇ ಇಸವಿ ಸೆಪ್ಟಂಬರ 23ನೇ ಮುರ್ಕಂ 209ನೇ ನಂಬರುಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ Xನೇ ರೂಲನ್ನು ರದ್ದುಮಾಡಿ ಇದರಡಿ ಬರುವ ರೂಲನ್ನು ಏರ್ಪಡಿಸಿರುತ್ತಾರೆ:—

"ಪ್ರತಿಯಕ್ಸ್ ಅಫಿಷಿಯೋ ಅಥವಾ ಲೈಸೆನ್ಸ್ ಪಡೆದಿರುವ ಬಿಕರೀದಾರನುಹಾನು ಬಿಕರಿಮಾಡುವ ಎರಡನೇ ಕ್ಲಾಸಿನ ಪ್ರತಿ ಸ್ಟ್ಯಾಂಪು ಕಾಗದದ ಹಿಂಭಾಗದಲ್ಲಿ ಜಂಬರ್ ನಂಬರ್, ಬಿಕರಿಯ ತಾರೀಖು, ಖರೀದಿಗೆ ಪಡೆದುಕೊಂಡವನ ಹೆಸರು ವ ವಾಸಸ್ಥಳ, ಮತ್ತು ಸದರೀ ಸ್ಟ್ಯಾಂಪು ಹಣ ಹಾಜರ್ಮಾಡಿದವನಲ್ಲದ ಇತರ ಬೇರೇ ಮನುಷ್ಯನಿಗೋಸ್ಕರ ಕೊಂಡುಕೊಳ್ಳಲ್ಪಟ್ಟರೆ ಅಂಥಾ ಇತರ ಮನುಷ್ಯನ ಹೆಸರು ವ ವಾಸಸ್ಥಳ ಮತ್ತು ಅಕ್ಷರದಲ್ಲಿ ಪೂರ್ತಿಯಾಗಿ ಸ್ಟ್ಯಾಂಪಿನ ಕಿಮ್ಮತ್ತು ಮತ್ತು ಅವನ ಸಾಧಾರಣವಾದ ರುಜು ಸಹ ಬರಿಯತಕ್ಕದ್ದು. ಲೋಕಲ್ ಗವರ್ನಮೆಂಟಿನಿಂದ ವಿಧಿಸಲ್ಪಡಬಹುದಾದ ನಮೂನೆಯಲ್ಲಿ ವೊಂದು ರಿಜಿಸ್ಟರ್ ಇಟ್ಟು ಸದರೀ ರಿಜಿಸ್ಟರಿನಲ್ಲಿ ಈ ತಪಶೀಲುಗಳನ್ನು ಬರಿಯತಕ್ಕದ್ದು. ಅಂಥಾ ಯಾವ ಬಿಕರೀದಾರನಾಗಲಿ ಬಿಕರಿ ಮಾಡಲ್ಪಟ್ಟ ಸ್ಟ್ಯಾಂಪಿನ ಮೇಲೆ ತನಿಗೆ ತಿಳಿದು ಯಿದ್ದೂ ಕೂಡ ಸುಳ್ಳು ಯೆಂಡಾರ್ಸ್ಮೆಂಟನ್ನು ಮಾಡಕೂಡದು ಅಥವಾ ತನ್ನ ರಿಜಿಸ್ಟರಿನಲ್ಲಿ ಸುಳ್ಳು ಖತಾಯಿತಿಯನ್ನು ದಾಖಲ್ಮಾಡಕೂಡದು."

ತಾರೀಖು 5ನೇ ಮೇ 1896, ಬೆಂಗಳೂರು.

ನಂ. 12229.—ಜ. 1389,—ಮೈಸೂರ ಸರ್ವಿಸ್ ರೆಗ್ಯುಲೇಷನ್ಸ್‌ಗಳ 213ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟು ಪೊಲೀಸ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಆರ್. ಬಿ. ಪ್ಲೂಮಾರ್ ಯವರಿಗೆ ಮಾಹೆ ಮಜಕೂರ್ 18ನೇ ಮುರ್ಖುಮಿನಲ್ಲಿ ನಡಿಯುವ ಕನ್ನಡ ಪರೀಕ್ಷೆಗೆ ಹಾಜರಾಗುವ ಬಗ್ಯಾಗಿ ಬೆಂಗಳೂರಿಗೆ ಹೊರಡುವದಕ್ಕೆ ಮಾಹೆ ಮಜಕೂರ 16ನೇ ಮುರ್ಖುಂ ಲಾಗಾಯತು 20ರ ವರಿಗೆ ನಾಲ್ಕು ದಿನಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 12231.—ಜ. 1391,—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ತಿರುಮಕೂಡ್ಲು ನರಸೀಪುರ ತಾಲ್ಲೂಕು ಶಿರಸ್ತೇದಾರ್ ರಂಗಣ್ಣನವರು, ಅವರು ಸದರೀ ತಾಲ್ಲೂಕಿನ ಚಾರ್ಜಿನಲ್ಲಿರುವ ಕಾಲದಲ್ಲಿ ಒಬ್ಬ ಮೂರನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಮೇ 1896, ಬೆಂಗಳೂರು.

ನಂ. 12493—ಮಿ. 1808,—1896ನೇ ಮೇ 20ನೇ ಮುರ್ಖುಂ ಬುಧವಾರದ ದಿನ ಘನವನ್ನು ಹೊಂದಿದ ಶ್ರೀಮನ್ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನಿಯವರ ವರ್ಧಂತಿಯ ಮರ್ಯಾದಾರ್ಥವಾಗಿ ಸಂಸ್ಥಾನಾಮುಳೆ ದರೋಬಸ್ತು ಪಬ್ಲಿಕ್ ಆಫೀಸುಗಳೂ ಬರಖಾಸ್ತು ಮಾಡಲ್ಪಡತಕ್ಕದ್ದು.

ತಾರೀಖು 27ನೇ ಏಪ್ರೆಲ್ 1896, ಮೊಕ್ಕಾಂ ಮೈಸೂರ.

ನಂ. 9608.—ರೆ. 3711,—ಮೈಸೂರ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರ್ ಮೆಸ್ಟರ್ ಪಿ. ಪಂಚನಾಥರಾಯರವರಿಗೆ, 1896ನೇ ಏಪ್ರೆಲ್ 3ನೇ ಮುರ್ಖುಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 28ನೇ ಏಪ್ರೆಲ್ 1896, ಮೊಕ್ಕಾಂ ಮೈಸೂರ.

ನಂ. 9603.—ರೆ. ಫೈ. 105—95,—ಮೈಸೂರ ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಜಿ. ತಿರುನಾರಣಯ್ಯಂಗಾರ್ರಿಗೆ, 1896ನೇ ಏಪ್ರೆಲ್ 21ನೇ ಮುರ್ಖುಂ ಲಾಗಾಯತು ವೊಂದೂವರೆ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಸಬ್ ತಾಲ್ಲೂಕಿನ ಚಾರ್ಜಿಗಾಗಿ 1896ನೇ ಫೆಬ್ರುವರಿ 21ನೇ ಮುರ್ಖುಂ 7500—2925ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಹುಕುಂ ಮಾಡಲ್ಪಟ್ಟ ಹಂಗಾಮಿ ಏರ್ಪಾಟೆ ಸದರಿ ತಿರುನಾರಣಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ನಡೆಯತಕ್ಕದ್ದು.

ತಾರೀಖು 30ನೇ ಏಪ್ರೆಲ್ 1896, ಮೊಕ್ಕಾಂ ಮೈಸೂರ.

ನಂ. 9683.—ರೆ. 3740,—ಇದರಡಿಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1. ಕೆಂಪನಪುರ ಗ್ರಾಮ (ಸರ್ವಮಾನ್ಯ)	ತಿರುಮಕೂಡ್ಲು ನರಸೀಪುರ	ಚಾಮರಾಜನಗರ
2. ಕನ್ನಗಾಲ ಗ್ರಾಮ (ಜೋಡಿ).	ಡಿಟ್ಟೋ.	ಡಿಟ್ಟೋ.

ನಂ. 9684.—ರೆ. 3741,—ಕಾಯಂಗುತ್ತಾ ಮಾರಗೊಂಡನಹಳ್ಳಿ, ಕೃಷ್ಣಸಾಗರ ಗ್ರಾಮವನ್ನು ಕ್ಲೋಸ್‌ಪೇಟೆ ಸಬ್ ತಾಲ್ಲೂಕಿನಿಂದ ಬೆಂಗಳೂರು ತಾಲ್ಲೂಕಿಗೆ ವರ್ಗಾಯಿಸಿರುತ್ತೆ.

ತಾರೀಖು 3ನೇ ಮೇ 1896, ಮೊಕ್ಕಾಂ ಮೈಸೂರ.

ನಂ. 9753.—ಫೌ. ಫೈ. 64—95,—ಮೈಸೂರ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರಿ ಮೆಸ್ಟರ್ ಎಂ. ವೆಂಕಟನಾರಣಪ್ಪನವರಿಗೆ, 1896ನೇ ಏಪ್ರೆಲ್ 14ನೇ ಮುರ್ಖುಮಿನಲ್ಲಿ ವೊಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 6ನೇ ಮೇ 1896, ಮೊಕ್ಕಾಂ ಮೈಸೂರ.

ಕ್ಯಾಂಪ್ ನಂ. 259.—ಮೈಸೂರ ಸರ್ವಿಸ್ ರೆಗ್ಯುಲೇಷನ್ಸ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರ್ ಮೆಸ್ಟರ್ ಪಿ. ಪಂಚನಾಥರಾಯರವರಿಗೆ 1896ನೇ ಮೇ 7ನೇ ಮುರ್ಖುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರೆವಿನ್ಯೂ

ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 19.

ಬೆಂಗಳೂರು, ಗುರುವಾರ, ಮೇ ತಾ॥ 14, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇಂಗ್ಲಾಂಡ್ ಪೋರ್ಟರ್ಸ್ ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಟಕ್ಕರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ರ್ಯಾಮರವರ ಡಿಟೋ	,, 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಶೇಕಡಾ $10\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

375

ಮೈಸೂರ್ ಶೀಪ್ ಕಂಟ್ರೋಲರ್ ಸಾಹೆಬರವರಿಂದ.

ಖಜಾನೆ ಇಲಾಖಾ ಯಲ್ಲಾ ಡೆಪ್ಯುಟಿ ಕಮ್ಮಿಷನರವರುಗಳಿಗೆ.
ತಾರೀಖು 10ನೇ ಏಪ್ರಿಲ್ 1896ನೇ ಇಸವಿ.

ಸರಕ್ಯೂಲರ್ ನಂ. 447—54—ಆರ್. ಇ.—7.

ಪದೇ ಪದೇ ಈ ಆಫೀಸಿನಿಂದ ತಿಳಿಯಪಡಿಸಿದಾಗ್ಯೂ ಅಬ್ಕಾರಿ ಚಲನ್‌ಗಳನ್ನ ಇನ್ನೂ ಅತೃಪ್ತಿಕರವಾಗಿ ತಯಾರ್ಮಾಡಿ ರವಾನಿಸುವದು ನೋಡಿ ಕಂಟ್ರೋಲರಯವರು ವಿಷಾದಗೊಂಡು ಈ ಕೆಳಗೆ ಕಂಡ ವಿಧಾಯಕವನ್ನು ತಿಳಿಯಪಡಿಸುವದಲ್ಲದೆ ಮುಂದೆ ಸದರೀ ಮೇರೆ ನಡದುಕೊಳ್ಳುವ ಭಾಗದಲ್ಲಿ ಖಜಾನೆ ಇಲಾಖಾ ಡೆಪ್ಯುಟಿ ಕಮ್ಮಿಷನರಯವರು ತಾಲ್ಲೂಕು ಆಮಿಲ್ದಾರಿಗೆ ಖಂಡಿತವಾದ ಹುಕುಂ ಕೊಡಬೇಕೆಂದು ಕೋರಿಕೊಳ್ಳುತ್ತಾರೆ.

(1) ಚಲನ್‌ಗಳಲ್ಲಿ ಕಾಣಿಸಲ್ಪಡುವ ಫಿರ್ಮಾ ಹೆಸರು ನಂಬರು ಮತ್ತು ಇಜಾರದಾರನ ಹೆಸರು ಸಹ ಎಕ್ಸೈಜ್ ಕಮ್ಮಿಷನರಯವರಿಂದ ಈ ಆಫೀಸಿಗೆ ತಲಪಿರುವ ಹರಾಜು ಪಟ್ಟಿಯಲ್ಲಿ ಕಂಡಂತೆ ಒಂದಕ್ಕೊಂದು ತಾಳೆ ಇರುವಂತ ಅದೇ ನಂಬರು ಮತ್ತು ಹೆಸರು ಕಾಣಿಸಲ್ಪಡಬೇಕು.

(2) ಪ್ರತಿ ಒಂದು ಫಿರ್ಮಾಗಾಗಿ ಒಂದೊಂದು ಚಲನ್ ವ್ಯವಯೋಗಿಸಬೇಕೇಹೊರ್ತು ಅನೇಕ ಫಿರ್ಮಾಗಳ ಇಜಾರದಾರ ಒಬ್ಬನೇಯಾಗಿರುತ್ತಾನೆಂಬ ಅಭಿಪ್ರಾಯದ ಮೇಲೆ ಅವನಿಗೆ ವಹಿಪಟ್ಟ ಒಟ್ಟು ಫಿರ್ಮಾಗಳಿಗಾಗಿ ಒಂದೇ ಚಲನ್ ತಯಾರ್ಮಾಡಿ ರವಾನಿಸತಕ್ಕದ್ದಲ್ಲಾ.

(3) ಯಾವ ಸಾಲಿ ಮತ್ತು ಮಾಹೆಗಾಗಿ ಗುತ್ತಿಗೆ ಮೊಬಲಗು ವಸೂಲ್ಮಾಡಲ್ಪಟ್ಟರುತ್ತೋ ಅವುಗಳನ್ನ ಚಲನ್ನಲ್ಲಿ ಎಂದಿಗೂ ಕಾಣಿಸದೆ ಇರಕೂಡದು.

(4) ಖಜಾನೆಗೆ ಹಣ ಪಾವತಿಯಾದ ತಾರೀಖು ಕಾಣಿಸಲ್ಪಡಲು ಚಲನ್ ಕೆಳಭಾಗದಲ್ಲಿ ಬಿಟ್ಟಿರುವ ಜಾಗಾದಲ್ಲಿ ಟ್ರೆಜರಿ ಇಲಾಖೆಯವರೇ ತಾರೀಖನ್ನ ಕಾಣಿಸಬೇಕೇಹೊರ್ತು ಇಜಾರದಾರ್ರು ಅದನ್ನ ಬರಿಯಕೂಡದು.

(5) ಚಲನ್‌ಗಳಲ್ಲಿ ಮೊಬಲಗು ವಗೈರೆ ಯಾವದನ್ನಾದರೂ ತಿದ್ದಿದಲ್ಲಿ ಅದಕ್ಕೆ ಟ್ರೆಜರಿ ಆಫೀಸರವರ ರುಜು ಅಗತ್ಯವಾಗಿ ಆಗಿರಬೇಕು.

(6) ಚಲನ್ನಲ್ಲಿ ಕಾಣಿಸಲ್ಪಡುವ ಮೊಬಲಗು ಅಕ್ಷರ ಮತ್ತು ಸಂಖೆಯಲ್ಲಿ ಸಹ ಒಂದಕ್ಕೊಂದು ಭೇದವಿಲ್ಲದಂತೆ ಸರಿಯಾಗಿ ಇರುತ್ತೆಂಬುವದನ್ನ ಜಾಗರೂಕತೆಯಿಂದ ನೋಡಿಕೊಳ್ಳಬೇಕು.

2. ಈ ಮೇಲ್ಕಂಡ ವಿಧಾಯಕದಂತೆಯಾಗಲಿ ಮತ್ತು ಇದಕ್ಕೆ ಹಿಂದೆ ಇದೇ ವಿಚಾರದಲ್ಲಿ ಕೊಡಲ್ಪಟ್ಟ ಸರಕ್ಯೂಲರನಂತೆಯಾಗಲಿ ತಯಾರ್ಮಾಡಲ್ಪಡದೇ ಇರುವ ವಿಶಿಷ್ಟ ಚಲನ್‌ಗಳೂ ವಾಪಸ್ ಮಾಡಲ್ಪಡುತ್ತದೆ.

ಈ. ಆರ್. ಸುಬ್ಬಾಯರ್,
ಕಾಂಪ್ಟ್ರೋಲರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ತಾರೀಖು 2ನೇ ಮೇ 1896.

ಸಿಟಿ ಮ್ಯುನಿಸಿಪಾಲಿಟಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸಿಟಿ ಮಜಕೂರ್ ಕಸಾಯಿ ಮಾರ್ಕೆಟ್ಟಿನಲ್ಲಿ ರೋಜೇನಾ ಸಾಯಂಕಾಲದ ವ್ಯಾಳೆ ಕಟಾವಾಗುವ ಕುರಿ ಅಥವಾ ಮೇಕೆ ರಾಸು 1ಕ್ಕೆ ಯರಡು ಆಣೆಮೇರಿಗೆ, 1896ನೇ ಇಸವಿ ಜುಲೈ ಗುರ್ರೇ ಲಾಗಾಯತು ಸನ್ 1897ನೇ ಇಸವಿ ಜೂನ್ ಆಖೈರ್ ವಿನಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವರಿಗೆ 96ನೇ ಇಸವಿ ಮೇ 23ನೇ ತಾರೀಖು ಶನಿವಾರ ಮಧ್ಯಾನ್ಹ 3 ಘಂಟೆಯೊಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಮ್ಯುನಿಸಿಪಲ್ ಸ್ಲಾಟರಹಾಸ್ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ, ಅಥವಾ ಕರೆನ್ಸೀ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಉಳಿಸಿಕೊಳ್ಳಲ್ಪಡುವದು. ಮತ್ತು ಮಂಜೂರಾದ ದರಖಾಸ್ತುದಾರನು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಇಜಾರ ಮುಚ್ಚಳಿಕೆಯನ್ನು ಬರೆದು ಕೊಡುವದಕ್ಕೆ ತಪ್ಪಿದರೆ ಆತನ ಠೇವಣಿ ಹಣವು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

6. ಸ್ಲಾಟರ ಹೌಸನ್ನ ಸಾಫ್ ಮಾಡಿಸಲು ನೇಮಿಸಲ್ಪಡುವ ಯಸ್ಟಾಬ್ಲಿಷಮೆಂಟ್ ಛಾರ್ಜಿಗಾಗಿ ಮಾಹೆ ಮಾನಾ 25 ರೂಪಾಯಿ ಮೇರಿಗೆ ಹರಯೇಕ್ ತಿಂಗಳ 5ನೇ ತಾರೀಖಿನ ವಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ ಹೌಸಿನಲ್ಲಿ ಬೀಳುವ ಕಚರಾ ಕಂಟ್ರಾಕ್ಟುದಾರಗೆ ಸೇರತಕ್ಕದ್ದಲ್ಲ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖಿನ ವಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾ ತಿಂಗಳ ಮೊಬಲಗನ್ನೂ ಮತ್ತು ಯಸ್ಟಾಬ್ಲಿಷಮೆಂಟ್ ಛಾರ್ಜನ್ನೂ ಮುಂದಾಗಿಯೇ ಹಾಜರ್ಮಾಡಿ ರಸೀದಿಪಡಿಯಬೇಕಾಗಿದೆ.

8. ಮಾರ್ಕೆಟ್ ಷೋ ಯಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಆ ದಿನ ಆ ಮಾರ್ಕೆಟ್ಟಿನಲ್ಲಿ ಯಾರಿಂದಲೂ ರುಸುಂ ವಸೂಲ್ ಮಾಡಕೂಡದು. ಇದಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

9. ಠೇವಣಿ ಮೊಬಲಗು ಕಡೇ ತಿಂಗಳಲ್ಲಿ ವಸೂಲ್ ಬೀಳತಕ್ಕದ್ದೇ ಹೊರ್ತು ಮುಂದಾಗಿ ಯಾವ ತಿಂಗಳಿಗೂ ವಸೂಲ್ ಬೀಳತಕ್ಕದ್ದಿಲ್ಲ.

10. ಮೇಲೆ ನಮೂದಾಗುವ ಷರತ್ತಿನ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡಕೊಂಡರೂ ಮೇಲಿನ ರೇಟಗಿಂತ ಜಾಸ್ತಿಯಾಗಿಯೂ ಮತ್ತು ಸ್ಲಾಟರ್‌ಹೌಸ್ ವಿನಹ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೂಡ್ಲೆ ಕಂಟ್ರಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣೀ ಮೊಬಲಗನ್ನ ದಂಡವಾಗಿ ಅಥವಾ ಅವನಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನ್ನ ಜವಾಬ್‌ದಾರನ್ನಾಗಿ ಮಾಡಿ ಆವನ ಜಿಂದಗಿ ಜಫ್ತಿ ಮೂಲಕ ವಸೂಲ್ಮಾಡಲ್ಪಡುತ್ತೆ.

11. ಕಡಮೇ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

12. ಸದರೀ ಸ್ಲಾಟರ್ ಹೌಸ್ ಕಂಟ್ರಾಕ್ಟಿನ ಕಾಲದಲ್ಲಿ ಬೇರೇ ಸ್ಥಳಕ್ಕೆ ವರ್ಗಮಾಡಿದ್ದೇ ಆದರೆ ಬೆಗ್ ತಕರಾರ್ ಅಲ್ಲಿಗೆ ಹೋಗಬೇಕು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—1896—97ನೇ ಸಾಲಿಗೆ ಅಂದರೆ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ ಆಖೈರ್ ವರಿಗೆ ಸಿಟಿ ಮಜಕೂರಿನಲ್ಲಿ ಮ್ಯುನಿಸಿಪಲ್ ಲಾಂದ್ರಗಳಿಗೆ ಪ್ರತಿ ದಿನವೂ ಸಾಯಂಕಾಲ 6 ಘಂಟೆ ಲಾಗಾಯತು ಬೆಳಿಗ್ಯೆ 4 ಘಂಟೆ ವರಿಗೆ ದೀಪ ಹಚ್ಚತಕ್ಕ ಬಗ್ಯೆ ಮೊಹರ್ ಮಾಡಿದ ದರಖಾಸ್ತುಗಳನ್ನ ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿಯಿರುವವರಿಗೆ 1896ನೇ ಮೇ 23ನೇ ತಾರೀಖು ಶನಿವಾರದ ವಳಗಾಗಿ ಕೊಡಬಹುದು.

ದರಖಾಸ್ತುಗಳ ಮೇಲ್‌ಭಾಗದಲ್ಲಿ ಬೆಂಗಳೂರು ಸಿಟಿಯಲ್ಲಿ ಲೈಟಿಂಗ್ ಮಾಡತಕ್ಕ ಟೆಂಡರ್‌ಯೆಂದು ಬರಿಯಲ್ಪಡತಕ್ಕದ್ದು.

ದರಖಾಸ್ತುಗಳ ಸಂಗಡ ನಗದಾಗಲಿ, ಅಥವಾ ಕರ್ರೆನ್ಸೀ ನೋಟಾಗಲಿ 250 ರೂಪಾಯಿ ಹಾಜರ್ಮಾಡಿದ ಹೊರ್ತು ದರಖಾಸ್ತು ಹಿಡಿಯತಕ್ಕದ್ದಿಲ್ಲ.

ಯಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಯಿನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಯಿರುವವರು ಬದ್ಧರಾಗಿಯಿರುವದಿಲ್ಲ. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕೂಡ್ಲೆ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ 500 ರೂಪಾಯಿ ಡಿಪಾಜಿಟ್ಟು ಯಿಡಬೇಕು. ಕಂಟ್ರಾಕ್ಟ್ ಮಂಜೂರಾದ 7 ದಿವಸದೊಳಗಾಗಿ ಕಂಟ್ರಾಕ್ಟ ಮುಚ್ಚಳಿಕೆಯನ್ನು ಬರದುಕೊಡಬೇಕು, ತಪ್ಪಿದರೆ ತಕ್ಷಣ ಕಂಟ್ರಾಕ್ಟ ಬೇರೆ ಜನರಿಗೆ ಕೊಟ್ಟು ಅದರಿಂದ ವುಂಟಾಗುವ ಲುಕ್ಸಾನಿಗೆ ಆವನ್ನ ಗುರಿಮಾಡುವದಲ್ಲದೆ ಠೇವಣೀ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

ಕಂಟ್ರಾಕ್ಟಿಗೆ ಸಂಬಂಧಪಟ್ಟ ಕಡಮೆ ಷರತ್ತುಗಳನ್ನು ಮ್ಯುನಿಸಿಪಲ್ ಆಫೀಸಿನಲ್ಲಿ ಭಾನುವಾರ ಮತ್ತು ರಜಾ ದಿವಸಗಳು ವಿನಹ ಮಿಕ್ಕ ದಿನಗಳಲ್ಲಿ 11 ಘಂಟೆ ಲಾಗಾಯತು 5 ಘಂಟೆ ವರಿಗೂ ತಿಳದುಕೊಳ್ಳಬಹುದು. ಈ ತಪ್ಸೀಲ್ ಚನ್ನಾಗಿ ತಿಳದುಕೊಳ್ಳಬೇಕಾದ ಕೆಲಸ ದರಖಾಸ್ತುದಾರನದಾಗಿ ಯಿರುತ್ತೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕೋಟೆ ಮುಂದಿನ ಮೈದಾನ್ನಲ್ಲಿ, ಹಾಲಿ ಭಂಡಿಗಳು ನಿಲ್ಲುವದಕ್ಕೆ ಹದ್ದು ಮಾಡಿರುವ ಸ್ಥಳದಲ್ಲಿ ಬಂದು ನಿಲ್ಲುವ ಕಲ್ಲು ಭರ್ತೀ ಪ್ರತಿ ಭಂಡಿಗೂ, 1896ನೇ ಇಸವಿ ಜುಲೈ ಗುರ್ರೇ ಲಾಗಾಯತ್ತು 1897ನೇ ಇಸವಿ ಜೂನ್ ಆಖೈರ್ ವರಿಗೂ ರೋಜೀನಾ ದರ ಭಂಡಿ 1ಕ್ಕೆ (6) ಆರು ಪೈ ಮೇರಿಗೆ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಅದರಲ್ಲಿ ಬೀಳುವ ಕಚರಾವನ್ನು ರೂಢಿಸಿಕೊಳ್ಳುವದಕ್ಕೂ ಸಹ ಮೊಹರುಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ ಮೇ 23ನೇ ತಾರೀಖು ಶನಿವಾರ 3 ಘಂಟೆಯೊಳಗಾಗಿ ಕೊಡಬಹುದು. (ಸದರೀ ಸ್ಥಳದ ಪ್ಲ್ಯಾನ್ ಮ್ಯುನಿಸಿಪಲ್ ಆಫೀಸಿನಲ್ಲಿ ನೋಡಬಹುದು.)

2. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಕೋಟೆ ಮುಂದಿನ ಬೈಲು ಜಮೀನಿನಲ್ಲಿ ಕಲ್ಲುಭಂಡೀ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ, ಮತ್ತು ಕಚರಾ ರೂಢಿಸಿಕೊಳ್ಳುವದಕ್ಕೂ ದರಖಾಸ್ತು ಎಂಬದಾಗಿ ಬರೆದು ಇರತಕ್ಕದ್ದು."

3. ದರಖಾಸ್ತು ಸಂಗಡ ನಗದಾಗಲಿ, ಅಥವಾ ಕರ್ರೆನ್ಸೀ ನೋಟುಗಳಾಗಲಿ, 50 ರೂಪಾಯಿನ ಠೇವಣೀ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತಾ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ, ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಅವನ ಕಂಟ್ರಾಕ್ಟು ಮೊಬಲಗಿನ ಪೈಕಿ ಒಂದು ತಿಂಗಳ ಮೊಬಲಗನ್ನ ಅಮಾನತ್ತು ಯಿಡಬೇಕು.

6. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀದಿ ಪಡೆಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನ ಸರಿಯಾಗಿ ನೆರವೇರಿಸುವ ಬಗ್ಯೆ, ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದೊಳಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದು ಕೊಡಬೇಕು. ಇವುಗಳ ಪೈಕಿ ಯಾವ ಷರತ್ತಿಗಾಗಲಿ ತಪ್ಪಿ ನಡಕೊಂಡರೆ ತಕ್ಷಣ ಕಂಟ್ರಾಕ್ಟನ್ನ ಬೇರೇ ಜನರಿಗೆ ಕೊಟ್ಟು ಲುಕ್ಸಾನ್ ಮೊಬಲಗ್ಯೆ ಕಂಟ್ರಾಕ್ಟುದಾರನನ್ನ ಗುರಿಮಾಡುವದಲ್ಲದೆ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

7. ಕಡಮೇ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

8. ಸರಕಾರೀ ವುಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾಗುವಲ್ಲಿ ಬ್ಯಾರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನೂ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ಸ್ಥಳವನ್ನೇ ಉಪಯೋಗಿಸಿಕೊಳ್ಳಬೇಕಾಗಿ ಯಿರುತ್ತೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್‌ಗಳಲ್ಲಿ ಸರ್ 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿನ ವರಿವಿಗೆ ಮಂಜೂರಾಗಿರುವ ದರಗಳ ಮೇರಿಗೆ ತೆರಿಗೆಯನ್ನು ವಸೂಲ್ ಮಾಡುವದಕ್ಕೆ ಮೊಹರಿನಿಸಿ ದರಖಾಸ್ತುಗಳು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ ಚಾಲತಿ ಇಸವಿ ಮೇ 23ನೇ ತಾರೀಖು ಶನಿವಾರ 3 ಘಂಟೆ ವಳಗಾಗಿ ಕೊಡಬಹುದು.

I. ಸಿಟಿ ಮಾರ್ಕೆಟ ಒಳಗೆ ಬರುವ ತರಕಾರಿ ಗೂಡೆಗಳಿಗೂ ಮತ್ತು ತರಕಾರಿ ಗಾಡಿಗಳಿಗೂ ಗೊತ್ತು ಮಾಡಿರುವ ಸ್ಥಳಗಳಲ್ಲಿಅಂದರೆ ಮ್ಯುನಿಸಿಪಾಲಿಟಿಗೆ ಸೇರಿದ ಜಾಗಾಗಳಲ್ಲಿ ಹಂಗಾಮಿಯಾಗಿ ಬಿಕರಿ ಮಾಡುವವರಿಂದ ತೆರಿಗೆ ವಸೂಲ್ಮಾಡುವದಕ್ಕೆ,

II. ಸೆಂಟ್ರಲ ಮಾರ್ಕೆಟ ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ:

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಬೈಲು	ಮಾರ್ಕೆಟ
ಅಕ್ಕಿ ಪೇಟೆಯಲ್ಲಿರುವ	ಡಿಟೋ
ಉಪ್ಪಾರಪೇಟೆ	ಡಿಟೋ
ತಿಗಳರಪೇಟೆ ಧರ್ಮರಾಯನ ಗುಡಿ ಬಳಿ	ಡಿಟೋ
ಕಲಾಸಿಪಾಳ್ಯ	ಡಿಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಬಿಕರೀ ಮಾಡುವವರಿಂದ ತೆರಿಗೆ ವಸೂಲ್ ಮಾಡುವದಕ್ಕೆ.

IV. ತಗರದ ಸೂರುಗಳ ಕೆಳಗೆ ತಾವಾರದಲ್ಲಿ ಬಿಕರಿ ಮಾಡುವವರಿಂದ ತೆರಿಗೆ ವಸೂಲ್ ಮಾಡುವದಕ್ಕೆ.

V. ಮೀನು ಮತ್ತು ಕೋಳಿ ಮಾರ್ಕೆಟಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ತೆರಿಗೆ ವಸೂಲ್ಮಾಡುವದಕ್ಕೆ ಮೇಲ್ಕಂಡ ಮಾರ್ಕೆಟಗಳಲ್ಲಿ ತಿಂಗಳಗಟ್ಟಿ ತೆರಿಗೆ ಕೊಡುವವರಿಂದ ತೆರಿಗೆಯನ್ನು ವಸೂಲ್ ಮಾಡಕೂಡದು.

2. ದರಖಾಸ್ತುಗಳ ಮೇಲ್ ಭಾಗದಲ್ಲಿ "ಸಿಟಿ ಮ್ಯುನಿಸಿಪಲ್ ತರಕಾರಿ, ಮೀನು, ಮತ್ತು ಕೋಳಿ ಮಾರ್ಕೆಟಗಳಲ್ಲಿ ತೆರಿಗೆ ವಸೂಲ್ ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಕೂಡಾ ನಗದಾಗಲಿ, ಅಥವಾ ಕರ್ರೆನ್ಸೀ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ, ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟ ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನು ಒಡನೆ ಹಾಜರ್ಮಾಡಬೇಕು. ಮತ್ತು ಅಂಥಾ ದರಖಾಸ್ತುದಾರನು ಅವನ ದರಖಾಸ್ತನ್ನು ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವಶ್ಯಕವಾದ ಇಜಾರೆ ಮುಚ್ಚಳಿಕೆಯನ್ನು ಬರೆದು ಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದು.

6. ಕಂಟ್ರಾಕ್ಟದಾರನು ಇದರ ಮಾರ್ಜನ್ನಲ್ಲಿ ಕಾಣಿಸಿದ ಪ್ರಕಾರ ಹಣ ವಸೂಲ್ ತೆಗದುಕೊಳ್ಳತಕ್ಕದ್ದಾಗಿದೆ. ಇದರ ತಪಶೀಲ್ ನಮೂದಿನಿಂದ ಇವನು ಇವನ ಕಂಟ್ರಾಕ್ಟಿಗೆ ಸಂಬಂಧಪಟ್ಟ ಪ್ರತಿ ಒಂದು ಸ್ಥಳದಲ್ಲಿಯೂ ಇವನ ಸ್ವಂತ ಲಾಗವಡಿನಿಂದ ಒಂದು ಬೋರ್ಡ್ ಹಾಕಿರಬೇಕು.

1. ಶಿದ್ದೀಕಟ್ಟೆಯಲ್ಲಿರುವ ಯರ್ಕ್ಲೋಜಡ ವೆಜಿಟೆಬಿಲ್ ಮಾರ್ಕೆಟನಲ್ಲಿ:—

A. 1.	ದೊಡ್ಡ ಮಂಕ್ರಿ 1ಕ್ಕೆ ತರಕಾರಿ	0—0—2
B. 2.	ಸೊಪ್ಪುಗಳ ಮಂಕ್ರಿ 1ಕ್ಕೆ	0—0—1
C. 3.	ಭಂಡಿ ತುಂಬಾ ತರಕಾರಿ ಹಂಣು ಹಂಪಲಿಗೆ ಹೋಟಲಿಗೆ ಬಂದರೆ	0—2—0
D. 4.	ಮಾರ್ಕೆಟನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ಬರುವ ತರಕಾರಿ ಭಂಡಿ 1ಕ್ಕೆ	0—1—0
E. 5.	5÷5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸಾಯಂಕಾಲದ ಅಂಗಡಿಗೆ	0—0—3
F. 6.	ಸದರೀ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜ್ ಮಾಡಿಸುವ ಜಾಗಾಕ್ಕೆ	0—1—0
G. 7.	ವೆಜಿಟೆಬಿಲ್ ಮಾರ್ಕೆಟ ಒಳಗಾಗಿ ಟೆಂಪೊರೆರಿಯಾಗಿ ಇಟ್ಟುಕೊಳ್ಳುವ ಸದರೀ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ	0—0—2

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡಕೊಳ್ಳಬೇಕು.

8. ಮಾರ್ಕೆಟ ಷೋ ಎಂಬ ವಿನೋದವು ಯಾವ ದಿವಸ ನಡೆಸಲ್ಪಡುತ್ತೋ ಆ ದಿನ ಆ ಮಾರ್ಕೆಟನಲ್ಲಿ ಯಾರಿಂದಲೂ ರುಸುಂ ವಸೂಲ್ಮಾಡಕೂಡದು. ಅದಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

9. ಠೇವಣಿ ಮೊಬಲಗು ಕಡೇ ತಿಂಗಳಲ್ಲಿ ವಸೂಲ್ ಬೀಳತಕ್ಕದ್ದೇ ಹೊರ್ತು ಮುಂದಾಗಿ ಯಾವ ತಿಂಗಳಿಗೂ ವಸೂಲ್ ಬೀಳತಕ್ಕದ್ದಿಲ್ಲ.

10. ಮಾರ್ಕೆಟ ಹಿಂಭಾಗದಲ್ಲಿರುವ ಅಂಗಡಿಗಳು, ಮತ್ತು ಮುಂಭಾಗದ ಗೇಟ ಉಭಯಪಾರ್ಶ್ವದಲ್ಲಿರುವ ಸರಾಫ್ ಅಂಗಡಿಗಳು ಸಹ ಇಜಾರೆಗೆ ಒಳಪಟ್ಟವಲ್ಲ, ಎರಡನೇ ಪ್ಯಾರಾದಲ್ಲಿ ನಮೂದಿಸಿರುವ ಸ್ಥಳಗಳಲ್ಲಿ ಮಾಮೂಲ್ ಮೇರಿಗೂ, ಇದುವರಿವಿಗೆ ಇಜಾರೆಗೆ ಸೇರದೆ ಇರುವ ಇತರ ಸ್ಥಳಗಳಲ್ಲಿ ತರಕಾರಿ ಮತ್ತು ಹಂಣುಗಳ ವ್ಯಾಪಾರ ನಡಿಸುವವರಿಂದ, ಇಜಾರೆದಾರು ಅಂಗಡಿ ಒಂದಕ್ಕೆ ಎರಡು ಕಾಸಿನ ಮೇರಿಗೆ ವಸೂಲ್ಮಾಡಿಕೊಳ್ಳಬಹುದು.

11. ಈ ಷರತ್ತಿಗೆ ವಿರೋಧವಾಗಿ ನಡೆದುಕೊಳ್ಳುವ ಪಕ್ಷಕ್ಕೆ ಕೂಡ್ಲೆ ಕಂಟ್ರಾಕ್ಟನ್ನು ರದ್ದುಮಾಡಿ ಬೇರೇ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿ ಭರ್ತಿಯಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬ್‌ದಾರಿ ಮಾಡಿ ಅವನ ಜಿಂದಗಿ ಜಫ್ತಿ ಹರಾಜ್ ಮೂಲಕ ವಸೂಲ್ಮಾಡಲ್ಪಡುತ್ತೆ.

12. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫಿಸಿನಲ್ಲಿ ತಿಳಿದುಕೊಳ್ಳಬೇಕು.

13. ಕೋಟೆ ಗೆ ಸಸ್ ಬಳಿ ಇರತಕ್ಕ ಕಬ್ಬಿನ ಅಂಗಡಿಗಳು ಮತ್ತು ಇತರ ಅಂಗಡಿಗಳವರಿಂದ ರುಸುಂ ವಸೂಲ್ ಮಾಡತಕ್ಕ ಬಾಬ್ ಈ ಕಂಟ್ರಾಕ್ಟಿಗೆ ಸೇರಿ ಇರುವದಿಲ್ಲ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಟವರ್ ಮಜಕೂರಿನಲ್ಲಿ ಇರತಕ್ಕ ಅಂದರೆ, ಮಾಮೂಲ್ ಅನುಸರಿಸಿ ಮಾಫಿಲಿ ನಡಿಯತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಶೇರಿದ ತೆಂಗಿನ ಮರಗಳ ಫಸಲ್ ಪೈಕಿ ಆಯಾಯ ಮನೆ ಅಥವಾ ಅಂಗಡೀ ಮಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೇ ಜಾತಾ ಉಳದ ಅರ್ಧಹಿಸ್ಸೇ ಫಸಲನ್ನ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಆಖೈರ್ ವರಿಗೂ ಒಂದು ಸಾಲ್ ಪೂರ್ತಿ ರೂಢಿಸಿಕೊಳ್ಳುವದಕ್ಕೆ-ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 96ನೇ ಇಸವಿ ಮೇ 23ನೇ ತಾರೀಖು ಶನಿವಾರ 3 ಘಂಟೆಯೊಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಷಹರ್ ಮಜಕೂರಿಗೆ ಶೇರಿದ ತೆಂಗಿನಫಸಲ್ ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸೀ ನೋಟುಗಳಾಗಲಿ, 50 ರೂಪಾಯಿನ ಠೇವಣಿ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ, ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸ ಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಉಳಿಸಿಕೊಳ್ಳಲ್ಪಡುವದು. ಮತ್ತು ಮಂಜೂರಾದ ದರಖಾಸ್ತುದಾರನು ಆತನ ದರಖಾಸ್ತು ಮಂಜೂರಾದ ಸಂಗತಿಯನ್ನ ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಕಂಟ್ರಾಕ್ಟಿನ ವಿಸಿಷ್ಟ ಹಣವನ್ನೂ ಹಾಜರ್ಮಾಡಿ ಕಂಟ್ರಾಕ್ಟನ್ನ ಸರಿಯಾಗಿ ನೇರವೇರಿಸುತ್ತೇನೆಂಬುವದಕ್ಕೆ ಛಾಪಾಕಾಗದದಲ್ಲಿ ಇಜಾರೆ ಮುಚ್ಚಳಿಕೆಯನ್ನು ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣಿ ಹಣವು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

6. ಕಡಮೇ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

ಕೆ. ಶ್ರೀನಿವಾಸರಾವ್,
ವೈಸ್ ಪ್ರಸಿಡೆಂಟ್ ಸಿಟಿ ಮ್ಯುನಿಸಿಪಲ್ ಕಮ್ಮಿಷನರ್.

ತಾರೀಖು 2ನೇ ಮೇ 1896.

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ;—ಟವನ್ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚರಾವನ್ನ ಡಿವಿಜನ್ ವಾರಿ ರೂಢಿಸಿಕೊಳ್ಳುವ ಬಗ್ಯೆ ಸನ್ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ ಆಖೈರ್ ವಿನಹು ಇದರಡಿ ಕಂಡಿರುವ ಷರತ್ತುಗಳನ್ನ ಅನುಸರಿಸಿ ಮೇ 23ನೇ ತಾರೀಖು ಶನಿವಾರ ದಿವಿ 2 ಘಂಟೆಗೆ ಬೋರ್ಡು ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತಾಗಿ ಇದನ್ನ ದರಖಾಸ್ತು ಮಾಡಿ ತೆಗದುಕೊಳ್ಳತಕ್ಕ ಇಷ್ಟವುಳ್ಳವರು ಹಾಜರಾಗಿ ಸವಾಲ್ ಮಾಡಿ ತೆಗದುಕೊಳ್ಳಬಹುದು. ಛಡ ಸವಾಲ್‌ದಾರನ ಸವಾಲ್ ಖೈದಾದ ಕೂಡ್ಲೆ ಶೇಕಡಾ 25 ರೂಪಾಯಿ ಮೇರಿಗೆ ಆಗುವ ಮೊಬಲಗನ್ನ ಡಿಪಾಜಿಟ್ ಹಾಜರ್ಮಾಡಬೇಕು ತಪ್ಪಿದಲ್ಲಿ ಸದರೀ ಸವಾಲ್ ಕ್ಯಾನ್ಸಲ್ ಮಾಡಲ್ಪಟ್ಟು ಬಾಬು ಪುನಹ ಹರಾಜ್ ಮಾಡಿಸುವದರಲ್ಲಿ ಉಂಟಾಗುವ ಲುಕ್ಸಾನು ಅವ್ವಲ್ ದರಖಾಸ್ತುದಾರನಿಂದಲೇ ವಸೂಲ್ಮಾಡಲ್ಪಡುತ್ತೆ. (4ನೇ ಡಿವಿಜನ್ ಮನವಾರ್ತೆಪೇಟೆ ಪೈಕಿ ಸುಲ್ತಾನ್‌ಪೇಟೆ ಮೇನ್ ರೋಡು ತರಗುಪೇಟೆ ರೋಡು ಈ ಯರಡು ರೋಡು ಗೊಬ್ಬ ಬೇರೆ ಹರಾಜ್ ಮಾಡಿಸುತ್ತೆಯಾಗಿ 4ನೇ ಡಿವಿಜನ್ ಕಂಟ್ರಾಕ್ಟುದಾರಗೆ ಈ ಯರಡು ರೋಡು ಗೊಬ್ಬ ಶೇರೋದಿಲ್ಲ.)

ಷರತ್ತುಗಳು,

1. ಆಯಾಯು ಡಿವಿಜನ್‌ಗೆ ಸೇರಿದ ರೋಡುಗಳಲ್ಲಿಯೂ ಗಲ್ಲಿಗಳಲ್ಲಿಯೂ ಸಹ ಸ್ವೀಪರ್‌ಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮತ್ತು ರಸ್ತೆ ಬಾಜೂದಲ್ಲಿ ಜಮಾಯಿಸಲ್ಪಡುವ ಕಚರಾವನ್ನ ಮಳೆಕಾಲದಲ್ಲಿಯೂ ಬೇಸಿಗೆ ಕಾಲದಲ್ಲಿಯೂ ಸಹ ಬೆಳಿಗ್ಯೆ 5 ಘಂಟೆ ಲಾಗಾಯತು 10 ಘಂಟೆ ವರಿಗೂ, ಮಧ್ಯಾನ್ಹ 2 ಘಂಟೆ ಲಾಗಾಯತು 5 ಘಂಟೆ ವರಿಗೂ ಒಂದು ದಿನವೂ ತಪ್ಪದೆ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಆಯಾಯು ದಿವಸವೇ ಟೌನ್ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೀನಾ ಮ್ಯುನಿಸಿಪಲ್ ಪ್ರಸಿಡೆಂಟರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ್ಮಾನೆ ಕೊಡುವದಕ್ಕೆ ಬದ್ಧರಾಗಿರಬೇಕು. ಮತ್ತು ಆ ಪ್ರಕಾರ ಕಚರಾವನ್ನ ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನ ಇಡಿಸಿ ಮ್ಯುನಿಸಿಪಲ್ ಅಧಿಕಾರಸ್ಥರು ತೆಗದು ಹಾಕುವದಕ್ಕೆ ತಗಲುವ ಲಾಗವಡು ಎಷ್ಟು ಆಗುತ್ತದೆಯೋ ಅದನ್ನ ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಡಿವಿಜನಿನ ಸರಹದ್ದಿನಲ್ಲಿ ಮ್ಯುನಿಸಿಪಲ್ ಮಾರ್ಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನ ಪ್ರತಿ ದಿವಸವೂ ಸಾಗಿಸತಕ್ಕ ಬಗ್ಯೆ ಹಾಲಿ ಗೊತ್ತಾಗಿರುವ ಮತ್ತು ಆಗಂದಾಗ್ಯೆ ಗೊತ್ತು ಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನ ಪ್ರತಿ ದಿವಸವೂ ಸಾಗಿಸಿ ಪಾಕ್ ಮಾಡಬೇಕು. ತಿಂಗಳಿಗೊಂದಾವರ್ತಿ ಸಾಗಿಸುವ ಬಗ್ಯೆ ಹಾಲಿ ನೇಮಕವಾಗಿರತಕ್ಕ ಮನೆಗಳ ಪಾಯಿಖಾನೆ ಗೊಬ್ಬರವೂ ಐಸಿಂದ ನೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಸಾಗಿಸಿಕೊಂಡು ಪಾಕ್‌ಮಾಡಿಸುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೇ ಕಲಂನಲ್ಲಿ ಗೊತ್ತುಮಾಡಿರುವ ಮೇರಿಗೆ ಜುಮ್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಒಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಂಡಿ ಮಕ್ಕರಿಗಳಲ್ಲಿ ಮೊದಲು ಕಚರಾ ಹಾಕಿ ಮಧ್ಯಭಾಗದಲ್ಲಿ ಪಾಯಿಖಾನೆ ಗೊಬ್ಬರ ಭರ್ತೀಮಾಡಿ ಅದರ ಮೇಲೆ ಪುನಹ ಕಸ ಹಾಕಿ ಅದರ ದುರ್ಗಂಧ ಹೊರಗೆ ಬಾರದಂತೆಯೂ, ದಾರಿಗಳಲ್ಲಿ ಚಲ್ಲದಂತೆಯೂ ಮಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು.

4. ಭಂಡಿಗಳು ಮತ್ತು ಅವುಗಳ ಮೇಲೆ ಇಡತಕ್ಕ ಭಂಡಿ ಮಕ್ಕರಿಗಳೂ ಸಹ ದೊಡ್ಡವಾಗಿಯೂ ಮಜಬೂತಾಗಿಯೂ, ಸಗಣಿಯಿಂದ ಸಾರಿಸಲ್ಪಟ್ಟಂತಾವಾಗಿಯೂ ಇರಬೇಕು. ಎತ್ತುಗಳು ಎಳೇ ಪ್ರಾಯವುಳ್ಳವಾಗಿ ದೃಢತರವಾಗಿ ಇರಬೇಕು.

5. ದರಖಾಸ್ತು ಮಂಜೂರು ಆದನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ನಾಲ್ಕು ಖಿಸ್ತಿನಲ್ಲಿ ಅಂದರೆ ಮೊದಲನೇ ಖಿಸ್ತು 1896ನೇ ಸಪ್ಟಂಬರ್ ಆಖೈರ್ ವರಿಗಿನದು 96ನೇ ಜುಲೈ 1ನೇ ತಾರೀಖಿನಲ್ಲಿಯೂ 2ನೇ ಖಿಸ್ತು ಡಿಸೆಂಬರ್ ಆಖೈರ್‌ವರಿಗಿನದು 96ನೇ ಇಸವಿ ಆಕ್ಟೋಬರ 5ನೇ ತಾರೀಖಿನಲ್ಲಿಯೂ 3ನೇ ಖಿಸ್ತು 97ನೇ ಇಸವಿ ಮಾರ್ಚಿ ಆಖೈರ್‌ವರಿಗಿನದು 97ನೇ ಇಸವಿ ಜನವರಿ 5ನೇ ತಾರೀಖಿನಲ್ಲಿಯೂ 4ನೇ ಖಿಸ್ತು 97ನೇ ಇಸವಿ ಜೂನ್ ಆಖೈರವರಿಗಿನದು 97ನೇ ಇಸವಿ ಏಪ್ರೆಲ್ 5ನೇ ತಾರೀಖಿನಲ್ಲಿಯೂ ಈ ಮೇರೆ ತಪ್ಪದೆ ಅಡ್ವಾನ್ಸಾಗಿ ಹಾಜರ್ಮಾಡಿ ರಸೀದಿ ಪಡಕೊಳ್ಳುತ್ತಾ ಬರಬೇಕು. ಈ ರೀತಿ ಯಾವ ಖಿಸ್ತಿನಲ್ಲಾಗಲಿ ಮೇಲೆ ನಮೂದಾಗಿರುವ ತಾರೀಖಿನಲ್ಲಿ ಮೊಬಲಗು ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಬಾಕಿ ಮೊಬಲಗನ್ನ ಒಂದೇ ಗಂಟನಲ್ಲಿ ಡಿಮ್ಯಾಂಡ್ ಮಾಡಿದ ಒಡನೆ ಬಿನ್ ತಕರಾರ್ ಪಾವತಿ ಮಾಡಬೇಕು. ಇದಕ್ಕಾಗಿ ಸ್ಟಾಂಪು ಕಾಗದದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಯಲ್ಲಾ ಷರತ್ತುಗಳನ್ನೂ ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರದುಕೊಡಬೇಕು. ಈ ಷರತ್ತುಗಳ ಪೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡಕೊಂಡರೆ ಆ ಕೂಡ್ಲೆ ಅವನ ಕಂಟ್ರಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕಂಟ್ರಾಕ್ಟು ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವ್ವಲ್ ಕಂಟ್ರಾಕ್ಟುದಾರನ್ನ ಗುರಿಮಾಡಿ ಜಫ್ತಿ ಹರಾಜು ಮೂಲಕ ಹಣ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟು ಡಿಪಾರ್ಟ್ಮೆಂಟ್.

ನೋಟಿಫಿಕೇಷನ್.

ತಾರೀಖು 18–21ನೇ ಏಪ್ರಿಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಈ ಕೆಳಗೆ ವಿವರಿಸಿರುವ ನಾಟಾ ಜಂತೆ ಸರ ಮತ್ತು ಮುಂಡಿಗೆಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರವರಿಂದ 1896ನೇ ಇಸವಿ ಮೇ ತಾರೀಖು 16ರಲ್ಲಿ ನಂಜನಗೂಡು ಡಿಪೋದಲ್ಲೂ ಮತ್ತು ಅದೇ ಮೇ ತಿಂಗಳ ತಾರೀಖು 18ರಲ್ಲಿ ಮೈಸೂರ ಉಡ್ಯಾರ್ಡಿನಲ್ಲೂ ಹರಾಜ್ ಮಾಡಿಸಲ್ಪಡುತ್ತವೆ.

ಮರದ ತಖ್ಸೀಲು.	ನಂಜನಗೂಡು ಡಿಪೋ. ಸ್ವಲ್ಪ ಹೆಚ್ಚು ಕಡಮೆ. ನಂಬರು.	ನಂಜನಗೂಡು ಡಿಪೋ. ಸ್ವಲ್ಪ ಹೆಚ್ಚು ಕಡಮೆ. ಸಲೆಅಡಿ.	ಮೈಸೂರು ಉಡ್ಯಾರ್ಡು. ಸ್ವಲ್ಪ ಹೆಚ್ಚು ಕಡಮೆ. ನಂಬರು.	ಮೈಸೂರು ಉಡ್ಯಾರ್ಡು. ಸ್ವಲ್ಪ ಹೆಚ್ಚು ಕಡಮೆ. ಸಲೆಅಡಿ.
ಸಾಗವಾನಿನಾಟಾ	124	2868	388	12092¾
ಡಿಟ್ಟೋ ಜಂತೆ	108	959½	83	740¼
ಡಿಟ್ಟೋ ಸರ	9	11¼	..	..
ಡಿಟ್ಟೋ ಮುಂಡಿಗೆ	24	37½	..	..
ಹೊನ್ನೆ ನಾಟಾ	95	2041	99	2396¼
ಡಿಟ್ಟೋ ಜಂತೆ	96	1006¼	29	324
ಮತ್ತಿ ನಾಟಾ	3	55½	50	1225¾
ಡಿಟ್ಟೋ ಜಂತೆ	1	7	9	79¼
ಬೀಟೆ ನಾಟಾ	2	32¼	9	463
ಡಿಟ್ಟೋ ಜಂತೆ	2	21½	9	106
ನಂದಿ ನಾಟಾ	5	85¾	18	403¾
ಡಿಟ್ಟೋ ಜಂತೆ	10	104¾	6	71
ಜಂಗಲ್ ನಾಟಾ	2	50¾	17	421¼
	481	7281	716	18253¼

ಷರತ್ತು.—ಮೈಸೂರ ಗೆಜೆಟ್ 1895ನೇ ಏಪ್ರಿಲ್ 25ನೇ ಮರ್ಸ್ಕಿನಲ್ಲಿ ಚಾವುಬೀನೆ ಮತ್ತು ಬೊಂಬು ವಿಷಯದಲ್ಲಿ ಪ್ರಾಯಿಷ್ ಮಾಡಿರುವ 1895ನೇ ಇಸವಿ ಮಾರ್ಚಿ 15ನೇ ಮರ್ಸ್ಕಿಂ 15229—ಆರ್. ಎಫ್. 155—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಮೇರೆ.

ತಾರೀಖು 1ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರ ಡಿಸ್ಟ್ರಿಕ್ಟ್ ಸ್ಟೇಟ್ ಫಾರೆಸ್ಟ್ ಬಾಬತು ಈ ಕೆಳಗೆ ವಿವರಿಸಿರುವ ಪಸಾರೆ ಜಿನಸಿಗಳು ಸೆ 1896ನೇ ಇಸವಿ ಮೇ ತಾರೀಖು 25ರಲ್ಲು ಮೈಸೂರ ಡಿಸ್ಟ್ರಿಕ್ಟ ಫಾರೆಸ್ಟ್ ಆಫೀಸರವರಿಂದ ಮೈಸೂರು ವುಡಯಾರಡಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸೀ ತಖ್ಸೀಲ್.	ಸುಮಾರು ಮೊತ್ತ. ಮಣ.	ಸುಮಾರು ಮೊತ್ತ. ವಾ.
ಜೇನುಮೇಣ	6	7
ಜೇನುತುಪ್ಪ	3	24
ಅಳಲೇಕಾಯಿ	1,500	..
ಸಾರಗನಕೊಂಬು	9	13
ದಿಂಡಿಗದಗೋಂದು	39	23
ಅರಗು	100	..
ಶೀಗೇಕಾಯಿ	20	..
ಕಾಡಮೇಕೆ ಕೊಂಬು	1	..

ಷರತ್ತು.—1887ನೇ ಇಸವಿ ಜೂನ್ 18ನೇ ಮರ್ಸ್ಕಿಂ ಮೈಸೂರ ಗೆಜೆಟ್ 287—288ನೇ ಪೇಜಿನಲ್ಲಿ ಪ್ರಾಯಿಷ್ ಮಾಡಿರುವ 1887ನೇ ಇಸವಿ ಜೂನ್ 11ನೇ ಮರ್ಸ್ಕಿಂ ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್.

ಇಸಿ ಹಾರನಾಮೆ.

ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಲಗತ್ತಿರುವ ಸ್ಟೇಟಮೆಂಟಿನಲ್ಲಿ ತೋರಿಸಿರುವ ತಾಲ್ಲೂಕು ಮಜಕೂರು ಗ್ರಾಮಗಳ ಬಾಬತು ಸರ್ಕಾರಿ ಮತ್ತು ಹಿಡುವಳಿದಾರ್ರ ಜಮೀನಿನಲ್ಲಿ ಇರುವ ಬಗನೆ ಬಾಬನ್ನು ಮತ್ತು ಬಗನೆ ಶೇಂದಿ ಮೇಲೆ ಬೈಲ್ ಜಜ್ಜರಿ ಸುಂಕ ವಸೂಲ್ಮಾಡಿಕೊಳ್ಳುವ ಹಕ್ಕನ್ನು ಸಹಾ ಪದ್ಧತಿ ಅನುಸರಿಸಿ 1896ನೇ ಇಸವಿ ಜುಲೈ ಗುರ್ರೆ ಲಾಗಾಯತು 1897ನೇ ಇಸವಿ ಜೂನ್ ಆಖೈರು ಮಿನಹ 12 ತಿಂಗಳು ಕಾಲಗಳಲ್ಲಿ ಬಗನೆ ಶೇಂದಿ ಇಳಿಸಿಕೊಂಡು ದುಕಾನ್ ಇಟ್ಟು ಮಾರುವ ಹಕ್ಕನ್ನು ಮತ್ತು ಬಗನೆ ಶೇಂದಿ ಮೇಲೆ ಬೈಲ್ ಜಜ್ಜರಿ ಸುಂಕ ವಸೂಲ್ಮಾಡಿಕೊಳ್ಳುವ ಹಕ್ಕನ್ನು ಸಹಾ ಬೇಲೂರು ತಾಲ್ಲೂಕು ಅಮಲ್ದಾರ್ರಿಂದ ಬಹಿರಂಗವಾದ ಹರಾಜು ಮಾಡಲು ಪಡುತ್ತೆ. ಇಚ್ಛೆಯುಳ್ಳವರು ಆಯಾಯ ಕಾಲಗಳಲ್ಲಿ ಆಯಾಯ ಸ್ಥಳಗಳಲ್ಲಿ ಹಾಜರಿದ್ದು ಈ ಕೆಳಗೆ ಕಂಡ ಷರತುಗಳಿಗೆ ವಳಪಟ್ಟು ಇಡದರಖಾಸ್ತು ಮೂಲಕ ಪಡಿಯಬಹುದು.

I. ಹರಾಜಿನಲ್ಲಿ ಪಡದವನು ಹರಾಜು ಖೈದಾದ ವಡನೆಯೇ ಶೇಕಡಾ 25 ರೂಪಾಯಿನಂತೆ ಡಿಪಾಜಿಟ್ ಇಡಬೇಕು. ಹಾಗೆ ಕಟ್ಟದೆ ಇದ್ದರೆ ಬಾಬನ್ನು ವಡನೆ ದುಸರೆ ಹರಾಜು ಮಾಡಿಸಿ ದುಸರೆ ಹರಾಜಿನಿಂದ ಸರ್ಕಾರಕ್ಕೆ ವುಂಟಾಗುವ ಲುಕ್ಸಾನಿಗೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ.

ಈ ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರ್ಮಾಡಲ್ಪಡತಕ್ಕದ್ದು.

ಹರಾಜು ಮಂಜೂರಾದ ಸಂಗತಿಯು ಹರಾಜುದಾರನಿಗೆ ತಿಳಿದ ಒಂದು ವಾರದೊಳಗಾಗಿ ಮೇಲ್ಕಂಡ ಶೇವಣಿ ಜಾತಾ ಬಾಕಿ ಮೊಬಲಗು ಹಾಜರು ಮಾಡಬೇಕು ಮತ್ತು ಮುಚ್ಚಳಿಕೆ ಬರದುಕೊಡಬೇಕು. ಹಾಗೆ ಮಾಡಲು ತಪ್ಪಿದರೆ ಶೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ದುಸರೆ ಹರಾಜಿನಿಂದ ಸರ್ಕಾರಕ್ಕೆ ವುಂಟಾಗಬಹುದಾದ ಲುಕ್ಸಾನಿಗೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ.

II. ಹಾಲಿ ಯಲ್ಲಿ ದುಕಾನ್ ಇಧೆಯೋ ಆ ಸ್ಥಳ ಶಿವಾಯಿ ಬೇರೆ ಸ್ಥಳದಲ್ಲಿ ದುಕಾನ್ ಇಡಕೂಡದು.

III. ವಿಶೇಷ ಸಂದರ್ಭಗಳಲ್ಲಿ ವಿನಹಾ ಒಂದು ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚಾಗಿ ದುಕಾನ್ ಇಡಬಾರದು. ಹೀಗೆ ಗೊತ್ತುಮಾಡಲ್ಪಟ್ಟ ಸ್ಥಳದಲ್ಲಿ ಬಗನೆ ಶೇಂದಿ ಬಿಕರಿ ಬಗ್ಯೆ ಹರಾಜುದಾರನಿಗೆ ಲೈಸೆನ್ಸು ಕೊಡಬಾರದು.

IV. ಎಕ್ಸೈಜ್ ಆಕ್ಟು Vನೇ ಸೆಕ್ಷನ್ ಮೇರಿಗೆ ಪ್ರತಿ ಒಬ್ಬ ವುತಾರುದಾರನು ಲೈಸೆನ್ಸ್ ಪಡಿಯಬೇಕು.

1896—97ನೇ ಸಾಲಿನ ಬಗನೆ ಶೇಂದಿ ಹರಾಜು ಇಸಿ ಹಾರ್ ತಪಶೀಲ್ ಸ್ಟೇಟಮೆಂಟ್, ತಾಲ್ಲೂಕು ಬೇಲೂರು, ಡಿಸ್ಟ್ರಿಕ್ಟ್ ಹಾಸನ, ಸ್ನ 1896ನೇ ಇಸವಿ ಏಪ್ರಲ್ ಮಾಹೆಯಲ್ಲು.

ನಂಬರು.	ಹೋಬಳಿ ಹೆಸರು.	ಗ್ರಾಮಗಳ ಹೆಸರು.	ದುಕಾನ್ ಸಂಖ್ಯೆ.	ಗುದಸ್ತ ಇಜಾರೆ ಮೊಬಲಗು.			ಹರಾಜು ತಾರೀಖು.	ದರ.		ಷರಾ.
								ಉತ್ತಮ.	ಕನಿಷ್ಟ.	
1	2	3	4	5			6	7		8
1	ಅರೇಹಳ್ಳಿ ಹೋಬಳಿ.	ವುತ್ತೊಳಲು	1	101	0	0	ಅರೇಹಳ್ಳಿ ಮೊಕ್ಕಾಂ 12—5—96	0—1—4	0—1—0	ಈ ಬಾಬನ್ನು ಪಡದ ಕಂಟ್ರಾಕ್ಟುದಾರುಗಳು ಅಪೇಕ್ಷಿಸಿದ ಸ್ಥಳಗಳಲ್ಲಿ ಗ್ರಾಮಕ್ಕೆ ಒಂದಕ್ಕೆ ಅಧಿಕರಿಸದಂತೆ ದುಕಾನನ್ನು ಸ್ಥಾಪಿಸಿ ಕೊಡಲುಪಡುತ್ತೆ.
2		ಬಳಾದಕಲ್ಲು	1	0	8	0	ಡಿಟೋ	0—1—4	0—1—0	
3		ವಾಟೆಹಳ್ಳಿ	1	2	8	0	ಡಿಟೋ	0—1—4	0—1—0	
4		ಬ್ಯಾದನೆ	1	35	0	0	ಡಿಟೋ	0—1—4	0—1—0	
5		ಬಾಳಗುಲಿ	1	2	4	0	ಡಿಟೋ	0—1—4	0—1—0	
6		ನಂದಿಗೋಡ್ನಹಳ್ಳಿ	1	1	4	0	ಡಿಟೋ	0—1—4	0—1—0	
7		ಮಲಸಾವಾರ	1	15	8	0	ಡಿಟೋ	0—1—4	0—1—0	
8		ಮಡೇನಹಳ್ಳಿ	1	0	8	0	ಡಿಟೋ	0—1—4	0—1—0	
9		ಬಕ್ಕರವಳ್ಳಿ	1	7	0	0	ಡಿಟೋ	0—1—4	0—1—0	
10		ಗುರಗಿಹಳ್ಳಿ	1	12	0	0	ಡಿಟೋ	0—1—4	0—1—0	
11		ಕಾನಹಳ್ಳಿ	1	11	0	0	ಡಿಟೋ	0—1—4	0—1—0	
12		ಮುರಹಳ್ಳಿ	1	8	0	0	ಡಿಟೋ	0—1—4	0—1—0	
13		ತುಂಬದೇವ್ನಹಳ್ಳಿ	1	0	8	0	ಡಿಟೋ	0—1—4	0—1—0	
14		ಹೊಸಹಳ್ಳಿ	1	0	8	0	ಡಿಟೋ	0—1—4	0—1—0	
15		ಸುಲಗಳಲೆ	1	1	8	0	ಡಿಟೋ	0—1—4	0—1—0	
16		ಹೆಗ್ಗದ್ದೆ	1	2	8	0	ಡಿಟೋ	0—1—4	0—1—0	
17		ವುದುಮ್ನಹಳ್ಳಿ	1	1	8	0	ಡಿಟೋ	0—1—4	0—1—0	
18		ನಾರ್ವೆ	1	2	0	0	ಡಿಟೋ	0—1—4	0—1—0	
19		ಕೊರ್ಲಗದ್ದೆ	1	1	8	0	ಡಿಟೋ	0—1—4	0—1—0	
20		ನಾರ್ವೆಪ್ಯಾಟೆ	1	1	8	0	ಡಿಟೋ	0—1—4	0—1—0	
21		ಗೊರವನಹಳ್ಳಿ	1	2	0	0	ಡಿಟೋ	0—1—4	0—1—0	
22		ಅನೂಗಟ್ಟ	1	1	0	0	ಡಿಟೋ	0—1—4	0—1—0	
23		ಚಿಕ್ಕಶಾಲಾವಾರ	1	2	0	0	ಡಿಟೋ	0—1—4	0—1—0	
24		ವುಂಬಳಗೋಡು	1	9	0	0	ಡಿಟೋ	0—1—4	0—1—0	
25		ಹಿರಿಹಸಡೆ	1	5	0	0	ಡಿಟೋ	0—1—4	0—1—0	
26		ಹಂಚಿಹಳ್ಳಿ	1	1	0	0	ಡಿಟೋ	0—1—4	0—1—0	
27		ದೊಡ್ಡಶಾಲಾವಾರ	1	3	0	0	ಡಿಟೋ	0—1—4	0—1—0	
28		ಚಿಕ್ಕಹಸಡೆ	1	0	8	0	ಡಿಟೋ	0—1—4	0—1—0	

ನಂಬರು.	ಹೋಬಳಿ ಹೆಸರು.	ಗ್ರಾಮಗಳ ಹೆಸರು.	ಬ್ಲಾಕ್ ಸಂಖ್ಯೆ.	ಗುದಸ್ತಾ ಇಜಾರೆ ಮೊಬಲಗು.			ಹರಾಜು ತಾರೀಖು.	ದರ.		ಷರಾ.
								ವುತ್ತಮ.	ಕನಿಷ್ಟ.	
1	2	3	4	5			6	7		8
				ರೂ.	ಆ	ಪೈ.				
29	ಅರೆಹಳ್ಳಿ ಹೋಬಳಿ.	ಕುಂಬಾರಹಳ್ಳಿ ..	1	16	0	0	ಅರೆಹಳ್ಳಿ ಮೊಕಾಂ 12-5-96	0—1—4	0—1—0	
30		ಚೀಕನಹಳ್ಳಿ ..	1	1	8	0	ಡಿಟೋ	0—1—4	0—1—0	
31		ಕೋಗೋಡು ..	1	2	0	0	ಡಿಟೋ	0—1—4	0—1—0	
32		ಕಿರಗೂರ ..	1	1	12	0	ಡಿಟೋ	0—1—4	0—1—0	
33		ತೊಳಲು ..	1	2	0	0	ಡಿಟೋ	0—1—4	0—1—0	
34		ಬಳೋಟೆ ..	1	0	4	0	ಡಿಟೋ	0—1—4	0—1—0	
35		ಈಚಲಹಳ್ಳಿ ..	1	0	4	0	ಡಿಟೋ	0—1—4	0—1—0	
36		ಅರೆಹಳ್ಳಿ ..	1	2	8	0	ಡಿಟೋ	0—1—4	0—1—0	
37		ಬಿಳಗವಳ್ಳಿ ..	1	1	0	0	ಡಿಟೋ	0—1—4	0—1—0	
38		ಬೆಳ್ಳಾವಾರ ..	1	1	0	0	ಡಿಟೋ	0—1—4	0—1—0	
39		ಮಾಲಹಳ್ಳಿ ..	1	1	0	0	ಡಿಟೋ	0—1—4	0—1—0	
40		ಲಿಂಗಾಪುರ ..	1	1	0	0	ಡಿಟೋ	0—1—4	0—1—0	
41		ಹಿರಿಗರ್ಜಿ ..	1	2	0	0	ಡಿಟೋ	0—1—4	0—1—9	
42		ಕಡಗರ್ಜಿ ..	1	0	0	0	ಡಿಟೋ	0—1—4	0—1—0	
43		ಹೊಸಮನೆ ..	1	0	10	0	ಡಿಟೋ	0—1—4	0—1—0	
44		ತೊಳಲುಸಂತೆ ಸೈಲ್ ಜಜರಿ.	1	10	0	0	ಡಿಟೋ	0—0—2	0—0—2	
45		ಅರೇಹಳ್ಳಿಸೈಲ್ ಜಜ್ಜರಿ ..	1	0	0	0	ಡಿಟೋ	0—0—2	0—0—2	
46	ಶನಿವಾರಸಂತೆ.	ಕಣದೂರು ..	1	0	0	0	ಗೌಡಳ್ಳಿ ಶಿಬಾಂ 20-5-96	0—1—4	0—1—0	
47		ಹುನುಗನಹಳ್ಳಿ ..	1	0	0	0		0—1—4	0—1—0	
48		ದೀವರಕೆರೆ ..	1	0	0	0		0—1—4	0—1—0	
49		ಮಳಲಕೆರೆ ..	1	0	0	0		0—1—4	0—1—0	
50		ಬೆಟ್ಟದಕೆರೆ ..	1	1	4	0		0—1—4	0—1—0	
51		ಕುಪ್ಪಗೋಡು ..	1	1	10	0		0—1—4	0—1—0	
52		ನಾಗೇನಹಳ್ಳಿ ..	1	0	0	0		0—1—4	0—1—0	
53		ಕಳ್ಳೇರಿ ..	1	2	0	0		0—1—4	0—1—0	
54		ತಲಗೋಡು ..	1	1	0	0		0—1—4	0—1—0	
55		ತುಡುಮನಹಳ್ಳಿ ..	1	1	8	0		0—1—4	0—1—0	
56		ಸೀತೂರು ..	1	1	0	0		0—1—4	0—1—0	
57		ಆಡವಳ್ಳಿ ..	1	0	8	0		0—1—4	0—1—0	
58		ಅಂಗಜನಹಳ್ಳಿ ..	1	1	4	0		0—1—4	0—1—0	
59		ಕರ್ಕಿಹಳ್ಳಿ ..	1	10	8	0		0—1—4	0—1—0	
60		ಮೊಗೆಹಳ್ಳಿ ..	1	2	0	0		0—1—4	0—1—0	
61		ಮಾಡಗೋಡು ..	1	0	0	0		0—1—4	0—1—0	
62		ಹೊಸಹಳ್ಳಿ ..	1	5	0	0		0—1—4	0—1—0	
63		ಕೋಟಗನ್ನಹಳ್ಳಿ ..	1	8	12	0		0—1—4	0—1—0	
64		ಶನಿವಾರಸಂತೆಸೈಲ್‌ಜಜ್ಜರಿ.		48	0	0		0—0—2	0—0—2	
65	ಬಿಕ್ಕೋಡು ಹೋಬಳಿ.	ಅಂಕಿಹಳ್ಳಿ ..	1	0	12	0	ಬಿಕ್ಕೋಡು ಶಿಬಾಂ 16-5-96	0—1—4	0—1—0	
66		ಕೆಸಗೋಡು ..	1	5	0	0		0—1—4	0—1—0	
67		ಹಿರಿಪಾಟೆ ..	1	0	0	0		0—1—4	0—1—0	
68		ಲಕ್ಕುಂದ ..	1	3	0	0		0—1—4	0—1—0	
69		ಬಾದಿಹಳ್ಳಿ ..	1	0	12	0		0—1—4	0—1—0	
70		ಕೆರೆಪಳ್ಳಿ ..	1	0	8	0		0—1—4	0—1—0	
71		ಹೊಳಲು ..	1	21	8	0		0—1—4	0—1—0	
72		ಬಿಕ್ಕೋಡು ಸಂತೆಸೈಲ್‌ಜಜ್ಜರಿ	1	9	0	0		0—0—2	0—0—2	
73	ತಗರಿ ಹೋಬಳಿ.	ಚಂದಾಪುರ ..	1	0	8	0	ತಗರಿ ಶಿಬಾಂ 18-5-96	0—1—4	0—1—0	
74		ಮಳವಳ್ಳಿ ..	1	5	8	0		0—1—4	0—1—0	
75		ಮೈಲಿಗೆ ..	1	1	0	0		0—1—4	0—1—0	
76		ಮೊಗಸಾವಾರ ..	1	0	0	0		0—1—4	0—1—0	
		ಜುಮ್ಲಾ ..	72	406	4	0	..	..	..	

ತಾರೀಖು 23ನೇ ಏಪ್ರೆಲ್ 1896ನೇ ಇಸವಿ.

ತಾರೀಖು 18ನೇ ಏಪ್ರೆಲ್ 1896.

ಸರ್ 1896—97ನೇ ಸಾಲಿಗೆ ಬಗನಿ ಶೇಂದಿ ಬಾಬತು ಗ್ರಾಮವಾರು ಹರಾಜು ಇಸ್ತಿಹಾರ್.

ಇದಕ್ಕೆ ಲಗ್ಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಆಯಾ ಗ್ರಾಮಗಳಲ್ಲಿ, 12 ತಿಂಗಳು ಅಂದರೆ ಸರ್ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಬಗನಿ ಮರದ ಶೇಂದಿಯನ್ನು ಇಳಿಸಿ ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಂದ ಯಾ ಇದಕ್ಕಾಗಿ ಸದರೀಯವರಿಂದ ನೇಮಿಸಲ್ಪಡಬಹುದಾದವರಿಂದ ಆಯಾ ಹೋಬಳಿ ಕಸಬಾ ಗ್ರಾಮಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ವಳಪಟ್ಟು ಹರಾಜು ಹಾಕಲ್ಪಡಲೂ ಮೈಸೂರ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜು ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಆ ಮಾರನೇ ದಿನಗಳಲ್ಲಿಯೂ ಹರಾಜು ಹಾಕಲ್ಪಡುವವು. ಮೇಲ್ಕಂಡ ಗ್ರಾಮವಾರಿಗೆ ದರಖಾಸ್ತುಗಳೇನೂ ಬಾರದೆ ಹೋದರೆ ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಅಂಥಾ ಗ್ರಾಮಗಳನ್ನು ಅಮಾನಿಯಾಗಿ ರೂಢಿಸುವದಕ್ಕೂ ಅಥವಾ ಬಗನಿ ಏನೂ ಇಲ್ಲವೆಂಬ ಭಾಗ ಪೃಥಕ್ಪಟ್ಟಿಲ್ಲಿ ಹರಾಜಿನಿಂದ ವಿನಾಯಿಸುವದಕ್ಕೂ ಸ್ವತಂತ್ರರಾಗಿ ಇರುತ್ತಾರೆ.

2. ಮೇಲೆ ವಿವರಿಸಲ್ಪಟ್ಟಿರುವ ಗ್ರಾಮಗಳ ವಟ್ಟು ಸ್ವಾತಂತ್ರ್ಯದ ಹಕ್ಕು ಹರಾಜು ಚಡ ಸವಾಲ್‌ದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ವಳಪಟ್ಟು ಸದರೀ ಹಕ್ಕು ಕೊಡಲ್ಪಡುವದು. ಡೆಪ್ಯುಟಿ ಕಮಿಷನರವರು ಯಾ ಅವರು ನೇಮಿಸಬಹುದಾದವರು ತಮ್ಮ ಯುಕ್ತಾನುಸಾರ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿ ಇರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿ ಯಾಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುಖ್ತಾಲಿಕರ ಮೂಲಕವಾಗಲಿ ಹಾಜರಾಗಬೇಕು. ಯಾವದಾದರೊಂದು ಗ್ರಾಮದ ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡದ ಸವಾಲ್‌ದಾರನು 2ನೇ ಗ್ರಾಮದ ಹರಾಜು ಷುರು ಆಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಡಿಪಾಜಿಟ್ ಕಟ್ಟಬೇಕ್ಕು. ಹಾಗೆ ಕಟ್ಟದೆ ಇದ್ದರೆ ಒಡನೆ ಬಾಬನ್ನು ದುಸರೇ ಹರಾಜು ಮಾಡಿಸಿ ಈ ದುಸರೆ ಹರಾಜಿನಿಂದ ಸರ್ಕಾರಕ್ಕೆ ಉಂಟಾಗುವ ಲುಕ್ಸಾನಿಗೆ ಅವ್ವಲ್ ಹರಾಜುದಾರನನ್ನ ಗುರಿಪಡಿಸುತ್ತೆ. ಈ ಹರಾಜು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಂದ ಮಂಜೂರಾದ ಸಂಗತಿಯೂ ಹರಾಜುದಾರನಿಗೆ ತಿಳಿದ ಒಂದು ವಾರದ ವಳಗಾಗಿ ಮೇಲ್ಕಂಡ ಶೇವಣಿ ಬಾಬತು ಬಾಕಿ ಪೂರಾ ಮೊಬಲಗನ್ನು ಮತ್ತು ಆಯಾ ಗ್ರಾಮದ ಒಟ್ಟು ಇಜಾರೆ ಮೊಬಲಗಿನ ಮೇಲೆ ಪರ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನು ಹಾಜರ್ಮಾಡಬೇಕಲ್ಲದೆ ಮುಚ್ಚಳಿಕೆ ಸಹ ಬರೆದುಕೊಡಬೇಕು. ಈ ರೀತಿ ನಡಿಯಲೂ ತಪ್ಪಿದರೆ ಶೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಂಡು ಪುನಃ ದುಸರೇ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಅವಲ್ ಹರಾಜುದಾರನನ್ನೇ ಗುರಿಪಡಿಸುತ್ತೆ. ಶಿವಾಯಿ ಚಡದರಖಾಸ್ತುದಾರನು ಸದರೀ ಮುಚ್ಚಳಿಕೆ ಬರದುಕೊಡುವಾಗಲೆ ಎಕ್ಸೈಜ್ ರೂಲ್ಸ್ ಅನುಸರಿಸಿ ಯೇರ್ಪಡಬಹುದಾದ ಹುಕುಂಗಳಿಗೆ ವೊಳಪಟ್ಟು ಪುತಾಲಿದಾರ್ರ ಹೆಸರು ನಮೂದಿಸಿ ಒಂದು ಪಟ್ಟಿಯನ್ನು ಹಾಜರ್ ಮಾಡಬೇಕು.

4. ಹಾಲೀ ಗ್ರಾಮಗಳಲ್ಲಿ ದುಕಾನ್ ಇರುವ ಸ್ಥಳ ಹೊರ್ತು ಬೇರೇ ಸ್ಥಳದಲ್ಲಿ ದುಕಾನ್ ಇಡಕೂಡದು. ವಿಶೇಷ ಸಂದರ್ಭಗಳು ವಿನಹಾ ಒಂದು ಗ್ರಾಮದಲ್ಲಿ ಒಂದಕ್ಕಿಂತಾ ಹೆಚ್ಚಾಗಿ ದುಕಾನ್ ಇಡಕೂಡದು. ಜಾಸ್ತೀ ದುಕಾನ್ ಕೊಡುವದಕ್ಕೂ ಯಾ ತೆಗದು ಹಾಕುವದಕ್ಕೂ ಸಂದರ್ಭಾನುಸಾರ ಡೆಪ್ಯುಟಿ ಕಮಿಷನರ್ ಸಾಹೇಬರವರು ಸ್ವತಂತ್ರವುಳ್ಳವರಾಗಿ ಇರುತ್ತಾರೆ.

5. ಎಕ್ಸೈಜ್ ಆಕ್ಟ್ 5ನೇ ಸೆಕ್ಷನ್ ಅನುಸರಿಸಿ ಪ್ರತಿ ಒಬ್ಬ ದುಕಾಣದಾರ ಮತ್ತು ಇಜಾರೆದಾರ ಸಹ ಲೈಸೆನ್ಸ್ ಹೊಂದಿ ಬಾಬನ್ನ ರೂಢಿಸಿಕೊಳ್ಳಬೇಕು.

6. ಸಂತೆ ಮತ್ತು ಜಾತ್ರೆಗಳು ಯಾವ್ಯಾವ ಗ್ರಾಮಕ್ಕೆ ಸಂಬಂಧಪಟ್ಟದ್ದೊ ಆಯಾ ಗ್ರಾಮದ ಇಜಾರೇದಾರನಿಗೆ ಸೇರಿಸಿ ಕೊಡಲ್ಪಡುತ್ತೆ. ಸಂದರ್ಭಾನುಸಾರ ಸದರೀ ಸಂತೆ ಮತ್ತು ಜಾತ್ರೆ ಬಿಕರಿಗೆ ಇತರ ಗ್ರಾಮದ ಇಜಾರೇದಾರನು ಅಪೇಕ್ಷಿಸಿದರೆ ರೂಲ್ಸ್ ಅನುಸರಿಸಿ ಸ್ಪೆಷಲ್ ಅಪ್ಪಣೆ ಚೀಟಿಯು ಕೊಡಲ್ಪಡುತ್ತೆ.

ಸರ್ 1896—97ನೇ ಸಾಲಿಗೆ ಬಗನಿ ಶೇಂದಿ ಬಾಬತು ದುಕಾನ್ ವಗೈರೆ ತಪ್ಸೀಲ್ ಪಟ್ಟಿ.

ತಾಲ್ಲೂಕು ಮಂಜರಾಬಾದು ಡಿಸ್ಟ್ರಿಕ್ಟ್ ಹಾಸನ ಸರ್ 1896ನೇ ಇಸವಿ.

ನಂಬರ್.	ಹೋಬಳಿ.	ಗ್ರಾಮ.	ತಪ್ಸೀಲ್. 95—96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆಸ್ಸ್ ವಿನಹ ಇಜಾರೇ ಮೊಬಲಗು.			ದುಕಾನ್ ಸಂಖ್ಯೆ	ಹರಾಜು ತಾರೀಖು ಮತ್ತು ಸ್ಥಳ.	ಷರಾ.
1	ಹೆತ್ತೂರು	ಬೈಕೆರೆ ..	ಮಲ್ಲೇಗವುಡ ..	15	0	0	1	ಸಕಲೇಶಪುರ ಹೋಬಳಿ ಪೂರಾ 1896ನೇ ಮೇ 18–19	ಶೇರು 1ಕ್ಕೆ 1 ಆಣೆ ಲಾಗಾಯತು ದರ 2 ಆಣೆಯಂತೆ ಬಿಕರಿ ಆಗುತ್ತಲಿದೆ ಆದರೆ ಮಳೆಕಾಲದಲ್ಲಿ ಯಲ್ಲಾ ದುಕಾನ್‌ಗಳಲ್ಲೂ 1 ಆಣೆ ಯಂತೆಯೂ ಬೇಸಿಗೆಕಾಲದಲ್ಲಿ 2 ಆಣೆ ಯಂತೆ ಇರುತ್ತೆ.
2		ಬಿರಡಹಳ್ಳಿ ..	ಕೆಂಚೇಗವುಡ ..	2	0	0	1		
3		ಅಚಂಗಿ ..	ಮರಿದಾಸಪ್ಪ ..	0	4	0	1		
4		ಜೆನ್ನಾಪುರ ..	ಚಿಕ್ಕೇರೇಗವುಡ ..	5	0	0	1		
5		ಗಾಣದಹೊಳೆ ..	ಪರವಯ್ಯ ..	20	0	0	2		
6		ಹೆನ್ನಲಿ ..	ಡಿಟೋ ..	25	0	0	2		
7		ಹೆಬ್ಸಾಲೆ ..	ಶಾಂತಮಲ್ಲಪ್ಪ ..	50	0	0	2		

383

ನಂಬರು.	ಹೋಬಳಿ.	ಗ್ರಾಮ.	ತಖ್ಸೀಲ್. 95—96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆಸ್ಸ ವಿನಹ ಇಜಾರೇ ಮೊಬಲಗು.			ಬಾಕಿಗಳ ಸಂಖ್ಯೆ.	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
8	ಸಕಲೇಶಪುರ	ಸಕಲೇಶಪುರ	ಸೋಮೇಗವುಡ	0	8	0	4		
9		ದೊಡ್ಡನಾಗರ	ಬಸವೇಗವುಡ	0	6	0	1		
10		ಕಬ್ಬಿನಗದ್ದೆ	ಮಲ್ಲೇಗವುಡ	5	8	0	2		
11		ಮಟ್ಟಸಾಗರ	ಪಟೇಲ್ ಪುಟ್ಟೇಗವುಡ	13	4	0	3		
12		ಕೊಗಡವಳ್ಳಿ	ಸೋಮೇಗವುಡ	0	8	0	1		
13		ಬಸವನಹಳ್ಳಿ	ಅಣ್ಣೇಗವುಡ	0	8	0	1		
14		ಸಿದ್ದಾಪುರ	ಸಿದ್ದವೀರಯ್ಯ	0	12	0	1		
15		[illegible]ಮನೆ	ಡಿಟೋ	0	8	0	1		
16		ಹಾಲೆಬೇಲೂರು	ಸೋಮೇಗವುಡ	5	0	0	3		
17		ರಾಮೇನಹಳ್ಳಿ	ಡಿಟೋ	5	0	0	1		
18		ಕೊಲ್ಲಹಳ್ಳಿ	ಡಿಟೋ	2	0	0	1		
19		ಮಳಲಿ	ಚನ್ನಮ್ಮಹೆಗ್ಗಡತಿ	7	12	0	2		
20		ಕೆಸಗ್ಗಾನಹಳ್ಳಿ	ಬಸವೇಗವುಡ	10	0	0	1		
21		ಕಾಡಹಳ್ಳಿ	ಬೈರೇಗವುಡ	0	8	0	1		
22		ಹಬ್ಬಿಬೈಲ್	ಡಿಟೋ	0	8	0	1		
23		ಆನೇಮಾಲ್	ಡಿಟೋ	0	8	0	1		
24		ಇರಗಲೂ	ಡಿಟೋ	0	4	0	1		
25		ಕಲ್ಲಹಣೆ	ರಾಮೇಗವುಡ	0	10	0	1		
26		ಚಿಕ್ಕಸತ್ತಿಗಾಲ	ಸುಬ್ಬೇಗವುಡ	0	8	0	1		
27		ದೋಣಿಗಾಲ	ಶಾಂತಮಲ್ಲೇಗವುಡ	7	0	0	1		
28		ದೇವೀಹಳ್ಳಿ	ಡಿಟೋ	7	0	0	1		
29		ಕೆಲಗಳಲೆ	ಸೋಮೇಗವುಡ	6	0	0	2		
30		ಮಾಗಡಿ	ದ್ಯಾವೇಗವುಡ	3	0	0	1		
31		ಕಿರಹಳ್ಳಿ	ಡಿಟೋ	5	0	0	2		
32		ಮಾಸವಳ್ಳಿ	ಪುಟ್ಟೇಗವುಡ	10	0	0	1		
33		ಹಸಡೆ	ರುದ್ರಯ್ಯ	2	8	0	1		
34		ಹಲಸಾಲಿಗೆ	ಡಿಟೋ	15	0	0	2		
35		ಹುಲ್ಲಹಳ್ಳಿ	ಮಲ್ಲೇಗವುಡ	7	0	0	1		
			ಜುಮ್ಲಾ	234	4	0	0		
36	ಬೆಳಗೋಡು	ಜಮ್ಮನಹಳ್ಳಿ	ಅಜ್ಜೇಗವುಡ	5	0	0	1	1896ನೇ ಮೇ	
37		ಹಳೇಕೆರೆ	ಮೆ॥ ವಿ. ಎ. ಕೊಯಿಲೊ	3	0	0	1	20–21ಹೋ	
38		ಹೊಸಕೆರೆ	ಡಿಟೋ	3	0	0	1	ಬಳಿಪುರ	
39		ಕುಣಿಗನಹಳ್ಳಿ	ಬಸವೇಗವುಡ	1	0	0	1		
40		ಕಾಕನಮನೆ	ಬಸಲಿಂಗಯ್ಯ	1	0	0	1		
41		ಯಡೆಹಳ್ಳಿ	ಬೋವಿಚನ್ನಬಸ್ವ	1	0	0	1		
42		ಗುಲಗಳಲೆ	ನಿರ್ವಾಣೇಗವುಡ	5	8	0	1		
43		ಬಾಗೆ	ಬಸವ	10	4	0	2		
44		ಬಾಳ್ಳು	ನಿರ್ವಾಣಿ	3	0	0	1		
45		ಬನವಾಸೆ	ಡಿಟೋ	2	0	0	1		
46		ಕೆಸಗುಲಿ	ಮಲ್ಲೇಗವುಡ	2	0	0	1		
47		ಹೆಬ್ಬನಹಳ್ಳಿ	ಡಿಟೋ	8	8	0	1		
48		ಮತ್ತಿಗಳಲೆ	ಡಿಟೋ	1	0	0	1		
49		ಬಾಳಗೋಡು	ಬೋವಿದ್ಯಾವ	4	0	0	1		
50		ವುದೇವಾರ	ಡಿಟೋ	2	0	0	2		
51		ಬೆಳಗೋಡು	ಬೇಲೂರುಈಡಿಗರ ಮೊಗ್ಗೇಗವುಡ	3	8	0	1		
52		ಕೆಂದನಮನೆ	ಡಿಟೋ	23	0	0	2		
53		ಹಸಗವಳ್ಳಿ	ಡಿಟೋ	8	0	0	1		
56		ಗೊಳಗೊಂಡೆ	ಡಿಟೋ	28	4	0	3		
			ಜುಮ್ಲಾ	115	0	0	0		

384

ನಂಬರು.	ತಾಲ್ಲೂಕು.	ಗ್ರಾಮ.	ತಪ್ಸೀಲ್. 95–96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆಸ್ಸ್ ವಿನಹ ಇಜಾರೇ ಮೊಬಲಗು.			[illegible]	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
57	ಕಂಚೆನ್ನಲ್ಲಿ ಹೊಸಕೋಟೆ	ಕಾಗನೂರು	ಸೋಮೇಗವುಡ	2	8	0	1		
58		ವಡೂರು	ಸಾಂತಮಲ್ಲೇಗವುಡ	6	0	0	2		
59		ಕಾಡ್ಲೂರು	ಸಂಗೇಗವುಡ	0	4	0	1		
60		ಹಾಡ್ಯ	ಮಲ್ಲೇಗವುಡ	0	4	0	1	ಹೊಸಕೋಟೆ	
61		ಹೆಂಮ್ಮಿಗೆ	ಷೇಕ್‌ದಾವೂದ್‌ಸಾಬಿ	4	4	0	1	ಹೋಬಳಿಪೂರ	
62		ಹೊಸಹಳ್ಳಿ	ಹನುಮೇಗವುಡ	0	4	0	1	ಮೇ 22–23	
63		ಹೈದೂರು	ಸಣ್ಣೇಗವುಡ	0	4	0	1	ಲ್ಲಿ	
64		ಮುತ್ತಿಗಿ	ನಂಜೇಗವುಡ	0	8	0	1		
65		ನೇರಗಳಲೆ	ಶ್ರೀನಿವಾಸರಾವ್‌ರಣಸವರೆ	0	4	0	1		
66		ಆವರವಳ್ಳಿ	ಬಸವೇಗವುಡ	0	4	0	1		
67		ಕಿರಹುಣಸೆ	ಡಿಟೋ	1	0	0	1		
68		ಕಿತ್ತಗಳಲೆ	ಮಲ್ಲೇಗವುಡ	1	3	0	1		
69		ಬೀಗತ್ತೂರು	ಕುಳ್ಳವಡಿಗಕೆಂಪ	0	11	0	1		
70		ಶಿರಗಾವಾರ	ಸಿದ್ದೇಗವುಡ	0	6	0	1		
71		ಸುಳಗೋಡು	ಈರೇಗವುಡ	0	4	0	1		
			ಜುಮ್ಲಾ	18	4	0	0		
72	ಯಸಳೂರು	ಮಾರ್ಕಹಳ್ಳಿ	ಕೆಂಚೇಗವುಡ	4	0	0	2	ಹೋಬಳಿಪೂರ	
73		ಹಾಡ್ಯಹಳ್ಳಿ	ರಾಮೇಗವುಡ	5	0	0	2	25—26ನೇ	
74		ಹೆತ್ತೂರು	ದ್ಯಾವೇಗಡ	7	0	0	3	ಮೇ 1896	
75		ಕೊಣಬನಹಳ್ಳಿ	ಕೆಂಚೇಗವುಡ	1	0	0	1		
76		ಅತ್ತಿಗನಹಳ್ಳಿ	ಮಹಲಿಂಗೇಗವುಡ	4	0	0	1		
77		ಯಡ್ಕೆರೆ	ತಿಮ್ಮೇಗವುಡ	1	8	0	1		
78		ಲಕ್ಕುಂದ	ಕೊಮಾರಗವುಡ	1	0	0	1		
79		ಸಂತೆಹಳ್ಳಿ	ಕರೀಗವುಡ	5	0	0	2		
80		ಜಂಗಡಹಳ್ಳಿ	ಡಿಟೋ	2	0	0	2		
81		ಹೇರೂರು	ಡಿಟೋ	4	0	0	1		
82		ಹೆಗ್ಗಡಹಳ್ಳಿ	ಶಿವಬಸವಯ್ಯ	1	0	0	1		
83		ದೊಡ್ಡಕುಂದೂರು	ಕೊಮಾರಗವುಡ	1	8	0	1		
84		ಮತ್ತೂರು	ಡಿಟೋ	1	0	0	1		
85		ನಾರೂರು	ಅಣ್ಣೇಗವುಡ	0	8	0	1		
86		ಮಂಜೂರು	ಬಸವೇಗವುಡ	0	8	0	1		
87		ಐಗೂರು	ಸುಬ್ಬೇಗವುಡ	0	4	0	1		
88		ಹಾಸ್ಯ	ಡಿಟೋ	1	0	0	1		
89		ಹೊಸ್ಕೋಟೆ	ರಾಜಗವುಡ	1	0	0	1		
90		ಹುಲಗತ್ತೂರು	ವುಟ್ಟಂಗಿ ಬಸವೇಗವುಡ	1	8	0	1		
91		ಈಚಲುಬೀಡು	ಕೆಂಚ್ಚೇಗವುಡ	1	0	0	1		
92		ಕಳಲೆ	ಸಂತೆಹಳ್ಳಿ ಕರೀಗವುಡ	4	0	0	1		
93		ತಡಕಲು	ಅತ್ತಿಹಳ್ಳಿ ದೊಡ್ಡೇಗವುಡ	1	8	0	1		
94		ಹೊಸೂರು	ದೊಡ್ಡೇಗವುಡ	2	8	0	1		
95		ಕವಕುಂಟೆ	ಅತ್ತಿಹಳ್ಳಿ ದೊಡ್ಡೇಗವುಡ	4	0	0	1		
96		ಕಾಡ್ಲೂರು	ದೊಡ್ಡೇಗವುಡ	2	8	0	1		
97		ಹುಲ್ಲತ್ತೂರು ಎಸ್ಟೇಟ	ಬಸವೇಗವುಡ	0	8	0	1		
98		ವುಟ್ಟಂಗಿ	ಡಿಟೋ	1	0	0	1		
99		ಯಸಳೂರು	ಸಿದ್ದೇಗವುಡ	1	0	0	1		
		ತೊಂತಾಪುರ	ಬಲಗೈ ಬಡವ	1	8	0	1		
100		ಸುಂಡವಳ್ಳಿ	ನಿರ್ವಾಣಿಗವುಡ	1	0	0	1		
			ಜುಮ್ಲಾ	63	12	0	0		

385

ನಂಬರು.	ಹೋಬಳಿ.	ಗ್ರಾಮ.	ತಪ್ಸೀಲ್. 95—96ನೇ ಸಾಲಿನ ಇಜಾರೇದಾರನ ಹೆರರು.	ಡಿಪೋ ಸೆಸ್ಸ್ ವಿನಹ ಇಜಾರೆ ಮೊಬಲಗು.			[illegible]	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
151		ಕೆಳಗನಮಂಚಹಳ್ಳಿ	ದೇವೇಗವುಡ	40	0	0	3	ಜೂನ್ 3—4	
152		ಬಂಗಡಹಳ್ಳಿ	ಮಲ್ಲೇಗವುಡ	6	8	0	1	1896ನೇ ಇ	
153		ಕರ್ಡಿಗಾಲ	ರಾಮೇಗವುಡ	3	0	0	1	ಸವಿ	
154		ಚಿಣ್ಣಹಳ್ಳಿ	ಡಿಟೋ	15	0	0	2		
156		ಬೊಬ್ಬನಹಳ್ಳಿ	ಜ. ಕಹಳ್ಳಿದೊಡ್ಡೇಗವುಡ	10	0	0	3		
157		ಹಿರಿಯೂರು	ಸಣ್ಣೇಗವುಡ	3	0	0	1		
158		ಹೊಸಹಳ್ಳಿ	ಸುಬ್ಬೇಗವುಡ	3	8	0	1		
159		ವಳಲಹಳ್ಳಿ	ಮಲ್ಲೇಗವುಡ	5	4	0	2		
160		ಹರಗ್ರಹಳ್ಳಿ	ಜಳ್ಳೂರು ನಂಜೇಗವುಡ	5	0	0	2		
161		ಹಾರ್ನಹಳ್ಳಿ	ದೊಡ್ಡೇಗೌಡ	3	0	0	2		
162	[illegible]	ಕಡಗ್ರಹಳ್ಳಿ	ಡಿಟೋ	3	8	0	1		
163		ಕ್ಯಾನಹಳ್ಳಿ	ಬೀರೇಗವುಡ	4	0	0	2		
164		ಕುಂಬರಡಿ	ಬಸವೇಗವುಡ	33	0	0	3		
165		ಹೆಗ್ಗದ್ದೆ	ಹಿರಿಗವುಡ	33	0	0	4		
166		ಬಿನ್ನಹಳ್ಳಿ	ಶಾ|| ಗು|| ಸೂರಪ್ಪ	1	0	0	1		
167		ಆಲಹಳ್ಳಿ	ಡಿಟೋ	2	0	0	1		
168		ವಡ್ರಹಳ್ಳಿ	ಡಿಟೋ	0	4	0	1		
169		ಕಾಡಮನೆ	ಬಸವೇಗವುಡ	16	0	0	2		
170		ನಡಹಳ್ಳಿ	ಶಾ|| ಗು|| ದಾಸಪ್ಪ	30	0	0	3		
171		ಬಮ್ಮನಕೆರೆ	ಮಲ್ಲೇಗವುಡ	0	4	0	1		
			ಜುಮ್ಲಾ.	217	4	0	0		
172		ದೇವಾಲ್ದಕರೆ	ಪ. ಶಿವೇಗವುಡ	3	0	0	1	ಜೂನ್ 6—7	ಈ ಹರಾಜು ರಿಕಾರ್ಡ್
173		ಮಕ್ಕಿಹಳ್ಳಿ	ಬಿಲ್ಲೊ ರಕರ್ಯಾ	12	8	0	1	ಹೋಬಳಿ ಪೂರ	ಹುಜೂರಿಗೆ ರವಾನೆಯಾಗಿ
174		ನಲಗಹಳ್ಳಿ	ರಾಮೇಗವುಡ	5	0	0	1		ಥೆವಾಪಸು ಬರಲಿಲ್ಲವಾಗಿ
175		ಕ್ಯಾಮ್ನಹಳ್ಳಿ	ಸೆಕ್ಲೇಶ್ಪುರದಲ್ಲಿರುವ ಅ. ಮಲ್ಲಿಶೆಟ್ಟಿ	62	0	0	3		ಹೊಸ ಪನ ಮಾಡಿಸಲು ಯತ್ನವಿಲ್ಲ.
176		ಅಚ್ಚರಡಿ	ರಾಮೇಗವುಡ	5	0	0	1		
177		ಹಾರ್ಬಾಳು	ಡಿಟೋ	20	0	0	3		
178		ಅಚ್ಚನಹಳ್ಳಿ	ಬಿಳಸರೆ ಪುಟ್ಟೇಗವುಡ	20	0	0	2		
179		ಬಾಚ್ನಹಳ್ಳಿ	ಪುಟ್ಟೇಗವುಡ	3	0	0	1		
180		ಅಗಳಹಟ್ಟಿ	ಮಾಸ್ತಾರೆ ಸೋಮೇಗವುಡ	64	0	0	2		
181		ಹುವಡಿ	ನಂಜೇಗವುಡ	5	0	0	1		
182		ಹಾಲಿಗೆ	ಶಾಂತಮಲ್ಲೇಗವುಡ	2	8	0	2		
183		ಡಿಟೋ ಎಸ್ಟೇಟ್	ಡಿಟೋ	1	0	0	1		
184		ಬಾಚ್ನಹಳ್ಳಿ ಅವರೆಕಾಡು ಎಸ್ಟೇಟ್	ರಾಮೇಗವುಡ	1	0	0	1		
185	[illegible]	ಹಂಚಿಗೊಡ್ನಹಳ್ಳಿ	ಕರೀಗವುಡ	1	12	0	1		
186		ಡಿಟೋ ಎಸ್ಟೇಟ್	ಡಿಟೋ	2	0	0	1		
187		ಮಾದ್ನಾಪುರ	ತಮ್ಮಣ್ಣಗವುಡ	5	0	0	1		
188		ಹಿರೀಮುಂದೆ	ಸೋಮೇಗವುಡ	3	0	0	1		
189		ಕೊಗ್ರಹಳ್ಳಿ	ಶಿವೇಗವುಡ	7	8	0	2		
190		ಮಾರಗಡಿ	ಸುಬ್ಬೇಗವುಡ	26	12	0	2		
191		ಮಾಗುಂದ	ಪೈರೇಗವುಡ	8	0	0	1		
192		ಕುಮರಹಳ್ಳಿ	ಪಟ್ಟೇಗವುಡ	4	8	0	1		
193		ಹೊಡ್ಡಹಳ್ಳಿ	ಮಂಚೇಗವುಡ	2	0	0	1		
195		ಮಾವಿನಕೂಲು	ರಾಮೇಗವುಡ	70	0	0	3		
196		ಮಾವಿನಹಳ್ಳಿ	ಬೈರವ	56	0	0	2		
197		ದಬ್ಬಗದ್ದೆ	ಡಿಟೋ	101	8	0	3		
198		ಸೀಕನಹಳ್ಳಿ	ಶಿವೇಗವುಡ	8	0	0	1		
199		ಅಗನಿ	ಪುಟ್ಟೇಗವುಡ	35	0	0	2		
200		ರಕ್ಸಿದ್ದಿ ಎಸ್ಟೇಟ್	ಬಸವೇಗವುಡ	1	8	0	1		
201		ಜಂಬರತಿ	ದ್ಯಾವೇಗವುಡ	20	0	0	2		
			ಜುಮ್ಲಾ	556	8	0	0		
			ಒಟ್ಟುಜುಮ್ಲಾ	1427	0	0	0		

ಕೂನ್ನಿಪ್ಪನಾಯಿಡು, ಫಾರ್ ಡಿಪ್ಯುಟಿ ಕಮಿಷನರ್.

386

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ತಾರೀಖು 30ನೇ ಏಪ್ರಿಲ್ 1896.

ನಂ. 1. ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಇಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ, ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜುಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂಚಿತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುಖ್ತೂಫ ಮಾಡಲ್ಪಡತಕ್ಕದ್ದು.

7. ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡೆಪ್ಯುಟಿ ಕಮಿಷನರವರು ಖಾಯಂ ಮಾಡಿದ ಕೂಡಲೆ ಗ್ರಾಮವು ಆತನ ಸುಪುರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರಿ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನು ಪಟ್ಟೆಂತೆ ಎಣಿಸುವ ಜನಗಳು ಹರಾಜು ಲಾದಿಂದ ವಿಧಾಯುಕವಾದ ದಿನಗಳೊಳಗಾಗಿ ಡೆಪ್ಯುಟಿಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	[illegible]	ಸ್ವತ್ತಿನ ವಿವರ. ತರಹೆ.	ಎಕರೆ.		ಅಕಾರ.			ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.			ಹರಾಜು ತಾರೀಖು [illegible]
1	2	3	4	5	6	7	8		9			10			11
							ಎಕರೆ.	ಗುಂಟೆ.	ರೂ.	ಆ.	ಪೈ.	ರೂ.	ಆ.	ಪೈ.	
ಹಾಸನ.	ಬೇಲೂರು.	ಹಗರೆ.	ಜೋಡಿ ಹನುಮನಹಳ್ಳಿ.		ವೃತ್ತಿ							ವಿಜಯಸಾಲ್ ಜೋಡಿ			15—6—1896ನೇ ಸೋಮವಾರ.
				1 ಬಾಗೀರತಮ್ಮ	$\frac{1}{14}$	ತರೀ	136	32	96	3	9				
				2 ಗುರುರಾಯಾಚಾರಿ ವಗೈರೆ	$\frac{1}{14}$	ತರೀ	25	29	119	1	6	109	3	5	
												ಜಮ			
				3 ನಾರಣಾಚಾರಿ ಕೇಷಾಚಾರಿ ವಗೈರೆ	$\frac{1}{14}$	ಬಂಜರ್	20	38	1	4	0	109	3	5	
				4 ಕೇಶವಾಚಾರ್	$\frac{1}{7}$		183	19	217	12	0	218	6	10	
				ಅನುಭವದಾರ್ ಅನಂತಾಚಾರು, ಕೇಶವಾಚಾರು ಮಕ್ಕಳು ನಾರಣಾಚಾರು		ಈ ಗ್ರಾಮದ 14ನೇ ನಂ. ವಗೈರೆ ವೃತ್ತಿ ಈ ಪೈಕಿ ನಾರಣಾಚಾರ್			11	0	0	9	1	0	
						ಫತ್ತೇವಾರಿ						227	7	10	

ಎಸ್. ಅಮೀರ್‌ಹಸನ್,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಎಕ್ಸೈಜ್ ಡಿಪಾರ್ಟ್‌ಮೆಂಟ್.

1896ನೇ ಇಸವಿ ಏಪ್ರೆಲ್ 28ನೇ ಮುಕ್ಕಾಂ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

1. ಈ ಕೆಳಗೆ ಕಂಡ ಕಡೂರು ಡಿಸ್ಟ್ರಿಕ್ಟ್ ತಾಲ್ಲೂಕುಗಳ ಬಗಣಿ ಕೇಂದಿ ಉತಾರು ಮತ್ತು ಮಾರುವ ಹಕ್ಕು ಸ ೯ 1896ನೇ ಜುಲೈ ಗುರ್‍ರೇ ಲಾಗಾಯಿತು 1897ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಯಾಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕ್ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಬಳಪಟ್ಟು ಆಯಾ ತಾಲ್ಲೂಕ್ ಕಚೇರಿ ರೂಬರೂ ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಅಥವಾ ಅಮಲ್‌ದಾರ್ರವರಿಂದಲಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ತಾಲ್ಲೂಕು.	ಹರಾಜು ತಾರೀಖು.
1. ಚಿಕ್ಕಮಗಳೂರು	ಮೇ ತಿಂಗಳ 27ರ ಲಾಗಾಯಿತು 29ರವರಿಗೆ
2. ಮೂಡಗೆರೆ	ಡಿಟೋ 25 ಮತ್ತು 26ನೇ ತಾರೀಖುಗಳು.
3. ಕೊಪ್ಪ	ಜೂನ್ ತಿಂಗಳ 3ನೇ ತಾರೀಖು ಲಾಗಾಯಿತು 5ರವರಿಗೆ
4. ಯಡೆಹಳ್ಳಿ	ಜೂನ್ 6 ಮತ್ತು 7ನೇ ತಾರೀಖುಗಳು.

2. ಪ್ರತಿ ಒಂದು ಸರ್ಕಲ್ ಗುತ್ತೆಯು ಚಡವರ ಖಾಸ್ತುದಾರನಿಗೆ ಕೊಡಲ್ಪಡುವದು. ಸದರಿ ಚಡವದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲ್ ಮೊಬಲಗ್ಯೆ ಕಮ್ಮಿ ಇರಕೂಡದು. ಈ ಹರಾಜು ಡೆಪ್ಯುಟಿ ಕಮ್ಮಿಷನರವರ ಮಂಜೂರಿಗೆ ಬಳಪಟ್ಟು ಇರತಕ್ಕದ್ದಾಗಿ ಇರುತ್ತೆ. ಅಂಥಾ ಹರಾಜಿಗೆ ಸಮ್ಮಂಧಪಟ್ಟ ರಿಕಾರ್ಡುಗಳನ್ನು ಸದರೀಯವರು ಡೆಪ್ಯುಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾವದೊಂದು ದರಖಾಸ್ತು ಅಥವಾ ಚಡ ದರಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

3. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು.

4. ಡೆಪ್ಯುಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡಿಸತಕ್ಕ ಆಫೀಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು, ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ್‌ಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೋ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಪಡನೆ ಡಿಪಾಜಿಟ್ ಮಾಡಬೇಕು. ಡೆಪ್ಯುಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಒಳಗಾಗಿ ಮೊದಲು ಇಡೋಣಾದ ಕೇವಣಿ ದೇಖೀಲ್ ಸಾಲ್ ಗುತ್ತಿಗೆ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗದಷ್ಟು ಮೊಬಲಗು ನಗದಾಗೆ ಯಾಗಲಿ ಅಥವಾ ಗವರ್ನಮೆಂಟ್ ಪತ್ರಮೂಲಕವಾಗಿ ಯಾಗಲಿ ಅಮಲ್‌ದಾರ್ರಲ್ಲಿ ಹಾಜರ್ ಮಾಡಬೇಕು. ಹಾಗೆ ಗವರ್ನಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತ್ರಿಗಾಗಿ ಹಾಜರ್ಮಾಡಿಧೆಯಂದು ಸದರೀ ಪತ್ರ ಜೈಲ್ ಡೆಪ್ಯುಟಿಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿ ಕೊಡತಕ್ಕದ್ದಾಗಿ ಇರುತ್ತೆ. ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗಿಗಾಗಿ ಅರವಾಸಿ ನಗದಾಗಿಯಾಗಲೀ ಅಥವಾ ಮೇಲ್ಕಂಡಂತೆ ಇಂಡಾರ್ಸ್‌ಮಾಡಿಕೊಟ್ಟ ಗವರ್ನಮೆಂಟ್ ಪತ್ರಮೂಲಕವಾಗಿಯಾಗಲೀ ಬಾಕಿ ಅರ್ಧಭಾಗ ಸ್ಥಿರಸ್ವತ್ತು ಮೂಲಕ ಜಾಮೀನಿಕೊಡಬಹುದು. ಹಾಗೆ ಆಧಾರ ಮಾಡುವ ಸ್ಥಿರಸ್ವತ್ತಿನ ಬೆಲೆ ಜಾಮೀನಿ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು. ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಕೇವಣಿ ಇಟ್ಟ ಮೊಬಲಗು ಆಖೈರ್ ಮೂರು ತಿಂಗಳ ಖಿಸ್ತಿನ ಬಗ್ಯೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಬಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನಂತ ಕ್ರಮವಾದ ಸ್ಟ್ಯಾಂಪು ಕಾಗದದ ಮೇಲೆ ಮಾಮೂಲ್‌ನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿರುತ್ತೆ.

5. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್‌ಮಾಡದೇ ತಪ್ಪಿದರೂ ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ ಷುರು ಹಾಜರ್ ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಡಲ್ಪಡುತ್ತಲ್ಲದೆ ಬಾಬ್ ಪುನಹ ಹರಾಜುಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿ ಯಾಗಲೀ ವಿಲೇವಾರಿ ಮಾಡಲ್‌ಪಡುತ್ತೆ. ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಏನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು (ಜಮಾನು) ಕಂದಾಯದ ಬಾಕಿಯಂತೆ ಸದರಿಯವನ ಜಿಂದಗಿ ಜಫ್ತಿ ಹರಾಜು ಮೂಲಕ ವಸೂಲ್ ಮಾಡಿಕೊಳ್ಳಲ್ಪಡುತ್ತೆ.

6. ಪ್ರತಿ ಒಬ್ಬ ಉತಾರದಾರನೂ ಎಕ್ಸೈಸ್ ಆಕ್ಟ್ 5ನೇ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮ್ಮಿಷನರವರಿಂದ ಒಂದು ಲೈಸೆನ್ಸು ಪಡಿಯತಕ್ಕದ್ದು.

7. ಸರ್ಕಾರದಿಂದ ಲೈಸೆನ್ಸು ರೂಲ್ಸ್ ಮಂಜೂರಾಗುವ ವರಿಗೂ ಗುತ್ತಿಗೆದಾರನು ತನ್ನ ಫಿರ್ಕಾಕ್ಕೆ ಸಮ್ಮಂಧಪಟ್ಟ ಅಂಗಡಿಗಳಲ್ಲಿ ಸೇಂದಿ ಬಿಕರೀ ಬಗ್ಯೆ ಎಕ್ಸೈಜ್ ಆಕ್ಟ್ 16ನೇ ಸೆಕ್ಷನ್ ಪ್ರಕಾರ ಅಪ್ಪಣೆ ಚೀಟಿ ಕೊಡಬಹುದು.

8. ಈಚಲು ಕೇಂದಿ ಕಂಟ್ರಾಕ್ಟ್ ವಿಷಯದಲ್ಲಿ ಹಾಲಿ ಜಾರೀಲಿರುವ ಷರತ್ತುಗಳು ಈ ಬಗನಿ ಕೇಂದಿ ಇಜಾರೆ ಬಗ್ಯೆ ಅನ್ವಯಿಸಲ್ಪಡುತ್ತೆ.

9. ಹಿಂದಿನ ಸಾಲ್‌ಗಳ ಬಗನಿ ಕೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕ್ ಅಮಲ್‌ದಾರ್ರು ಅಥವಾ ಸಿರಸ್ತೇದಾರಲ್ಲಿ ದರಖಾಸ್ತು ಕೊಟ್ಟು ತಿಳುಕೊಳ್ಳಬಹುದು.

10. ಕಂಟ್ರಾಕ್ಟಿಗೆ ಸಮ್ಮಂಧಪಟ್ಟ ಬಾಕಿ ಎಲ್ಲಾ ಸಂಗತಿಗಳು ಹರಾಜು ಮಾಡಿಸುವ ಆಫೀಸರಿಂದ ಹರಾಜು ಕಾಲದಲ್ಲಿ ತಿಳಿಸಲ್ಪಡುವದು.

ಎಚ್. ಎಚ್. ಸ್ಪಾರ್ಕ್ಸ್, ಡೆಪ್ಯುಟಿ ಕಮ್ಮಿಷನರ್, ಕಡೂರ್ ಡಿಸ್ಟ್ರಿಕ್ಟು.

ಸ್ವಂತ ಪ್ರಕಟನೆ.

ನೋಟಿಸ್.

ಮಂಡ್ಯದ ತಾಲ್ಲೂಕು ಆತಗೂರು ಹೋಬಳಿ ಕದಲೂರಲ್ಲಿರುವ ಯಡತೊರೇ ತಾಲ್ಲೂಕು ಮಾವತ್ತೂರು ವೆಂಕಟರಾಮಯ್ಯನವರ ಹೆಂಡತಿ ವೆಂಕಟಲಕ್ಷ್ಮಮ್ಮನು, ಇದರಿಂದ ಸಕಲರಿಗೂ ತಿಳಿಯಪಡಿಸುವದೇನಂದರೆ,—ನಾನು ಮಂಡ್ಯದ ತಾಲ್ಲೂಕು ಸರ್ವಮಾನ್ಯ ಕೆಸ್ತೂರು, ಅಲ್ಲಿರುವ ಹರಿಯಣ್ಣಯ್ಯನ ನರಸಯ್ಯನವರ ಮಕ್ಕಳು ನರಸುಬ್ಬಯ್ಯನವರಿಗೆ, ನಾನು ಬರದುಕೊಟ್ಟಿರುವ 94ನೇ ಇಸವಿ ಅಕ್ಟೋಬರ್ 21ನೇ ಮರ್ಕುಂ ಜನರಲ್ ಪವರಾಫ್ ಅಟರ್ನಿ ಪ್ರೊಟ್ಟು ಮೊಕ್ತ್ಯಾರ್‌ನಾಮೆಯನ್ನು ನಾನು ರದ್ದುಪಡಿಸಿರುವದರಿಂದ ಈ ತಾರೀಖು ಲಾಗಾಯತು ಮುಂದೆ ನನಿಗೋಸ್ಕರ ಅವರಲ್ಲಿ ಯಾವವಿಧವಾದ ಲೇವಾದೇವಿ, ಲೆಕ್ಕಾಚಾರ ಮತ್ತು ಕಾಗದ ಪತ್ರಗಳನ್ನು ಇತರರು ನಡಿಸಕೂಡದು. ಹಾಗೆ ನಡಿಸಿದರೆ ಅದಕ್ಕೆ ನಾನು ಬದ್ಧಳಾಗಲಾರೆನಾದ ವಿವರ ತಿಳಿಯುವದು. ತಾರೀಖು 12—4—96.

○ ವೆಂಕಟಲಕ್ಷ್ಮಮ್ಮನ ಗುರುತಿನ ರುಜುವಿಗೆ ಕದಲೂರು ಶಾನಭೋಗ ವೆಂಕಟಸುಬ್ಬಯ್ಯನ ಬರಹ.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಂಬಿಷ್ ಆದ್ದು.

ಬೆಂಗಳೂರು, ಗುರುವಾರ, ಫೆಬ್ರು ತಾ|| 14, ಸನ 1896.

III ನೇ ಭಾಗ.

ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್ಗಳು.

GOVERNMENT OF MYSORE.

ಮೈಸೂರ್ ಗವರ್ನಮೆಂಟ್.

LEGISLATIVE DEPARTMENT.

ಲೆಜಿಸ್ಲೇಟಿವ್ ಇಲಾಖಾ.

REGULATION No. I OF 1896.

1896ನೇ ಇಸವಿಯ 1ನೇ ನಂಬರ್ ರೆಗ್ಯುಲೇಷನ್.

(1896ನೇ ಇಸವಿ ಫೆಬ್ರುವರಿ 18ನೇ ತಾರೀಖಿನ ದಿನ ಮಂಜೂರಾದ್ದು.)

ಮೈಸೂರ ಗವರ್ನಮೆಂಟಿನ ಮೇಲೆ ಬ್ರಿಜಲಾಲ್‌ದಾಸ್ ಎಂಬುವನ ದಾವೆ ವಿಚಾರದಲ್ಲಿ ಆಖೈರ್ ಫೈಸಲನ್ನು ಕೊಡಲು ಒಂದು ಸ್ಪೆಷಲ್ ಕೋರ್ಟನ್ನು ಮೊಕರರ್ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಘನವನ್ನೈದಿದ ಶ್ರೀಮನ್ ಮಹಾರಾಜರವರಾದ IIIನೇ ಕೃಷ್ಣರಾಜವಡೆಯರವರ ಮೇಲೆ ತರಲ್ಪಟ್ಟ ದಾವೆಗಳನ್ನೆಲ್ಲ ವ್ಯವಸ್ಥೆ ಮಾಡಲು ಸುಪ್ರೀಂ ಅಂದರೆ ಇಂಡಿಯಾ ಗವರ್ನಮೆಂಟಿನವರ ಮಂಜೂರಾತಿ ಮತ್ತು ಆಜ್ಞಾನುಸಾರವಾಗಿ ಮೈಸೂರ ಕಮ್ಮಿಷನರವರು ಅಷ್ಟಗ್ರಾಮದ ಡಿವಿಜನ್ ಸೂಪರ್ರಿಂಟೆಂಡೆಂಟರಾದ ಕ್ಯಾಪ್ಟನ್ ಯಲಿಯಟ್ ಸಿ. ಬಿ. ಸಾಹೇಬರನ್ನೂ ದರಬಾರ್ ಸರ್ಜನ್ರಾದ ಜೆ. ಸಿ. ಕ್ಯಾಂಬಲ್ ಸಾಹೇಬರನ್ನೂ ಮೊಕರರ್ಮಾಡಿದರು. ಇವರಿಬ್ಬರೂ ಸೇರಿ 1864ನೇ ಇಸವಿ ಡಿಸೆಂಬರ್ 23ನೇ ತಾರೀಖಿನಲ್ಲಿ ಈ ವಿಷಯದಲ್ಲಿ ಮಾಡಿದ ತೀರ್ಪಿನ ಪ್ರಕಾರ ಘಾತಿಯಾಗಿದ್ದ ದಾಮೋದರ ದಾಸನೆಂಬುವನ ವಾರಸ್ದಾರ ಮತ್ತು ಖಾಯಿದೆಗೊಪ್ಪಿದ ಪ್ರತಿನಿಧಿಯಾದ ಘಾತಿ ಬ್ರಿಜಲಾಲ್‌ದಾಸನೆಂಬುವನಿಗೆ, ಆತನಿಗಿದ್ದ ಹಕ್ಕುಗಳೆಲ್ಲಾ ಪೂರಾ ಫೈಸಲಾಗಿ ಹೋಗುವಂತೆ, ರೂ. 5,67,338–15–1 ಮೊತ್ತವು ಕೊಡಲ್ಪಡಬೇಕಾಯಿತು. ಸದರೀ ಮೊಬಲಗನ್ನು ಈಗ ಮೈಸೂರ್ ಸರ್ಕಾರದಿಂದ ಬರಮಾಡಿಕೊಳ್ಳಲು ಖಾಯಿದೆಗೆ ಅನುಸಾರವಾಗಿ ಯಾರಿಗೂ ಹಕ್ಕಿಲ್ಲದೆ ಇದ್ದರೂ, ಸದರೀ ಬ್ರಿಜಲಾಲ್‌ದಾಸಿನ ವಾರಸದಾರರು ಮತ್ತು ಖಾಯಿದೆಗೆ ಸರಿಯಾದ ಪ್ರತಿನಿಧಿಗಳೆಂದು ತೀರ್ಮಾನಿಸಲು ಅಧಿಕಾರಹೊಂದಿದ್ದ ಕೋರ್ಟಿನಿಂದ ಗೊತ್ತು ಮಾಡಲ್ಪಡಬಹುದಾದ ಇಸಂ ಅಥವಾ ಇಸಂಗಳಿಗೆ ಸದರೀ ಮೊಬಲಗನ್ನು, ನ್ಯಾಯ, ನೀತಿ ಮತ್ತು ಸದ್ಧರ್ಮಕ್ಕೆ ಅನುಸಾರವಾಗಿ ಸೇರಿಸಬಹುದಾದ ತಕ್ಕ ಷರತ್ತುಗಳಿಗೊಳಪಡಿಸಿ, ಧಾರಾಳವಾಗಿ ಕೊಟ್ಟು ಬಿಡಬೇಕೆಂದು ಮೈಸೂರ ಗವರ್ನಮೆಂಟ

ನವರು ಇಷ್ಟಪಟ್ಟಿದಾರೆ. ಈ ಯಿಛ್ಛಾನುಸಾರವಾಗಿ ಸದರೀ ರೂ. 5,67,338—15—1 ಮೊತ್ತವನ್ನು ಬರ ಮಾಡಿಕೊಳ್ಳಲು ಅಪೇಕ್ಷಿಸುವ ಜನಗಳೆಲ್ಲ ತಮ್ಮ ದಾವೆಗಳನ್ನು ಮೈಸೂರ ಚೀಫ್ ಕೋರ್ಟಿನ ರಿಜಿಸ್ಟ್ರಾರವರ ಆಫಿಸಿನಲ್ಲಿ ದಾಖಲ್ಮಾಡಬೇಕೆಂತಲೂ, ಅಂತ ದಾವೇಗಳ ವ್ಯವಸ್ಥೆಯ ಬಗ್ಗ್ಯಾಗಿ ಒಂದು ಸ್ಪೆಷಲ್ ಕೋರ್ಟನ್ನು ಏರ್ಪ ಡಿಸುವ ಉದ್ದೇಶ ತಮಗಿರುವದಾಗಿಯೂ, ಮೈಸೂರ್ ಗವರ್ನಮೆಂಟಿನವರು 1895ನೇ ಇಸವಿ ಅಕ್ಟೋಬರ 8ನೇ ಮರ್ರುಂ ಮೈಸೂರ್ ಮೊಕ್ಕಾಮಿನ C. 42ನೇ ನಂಬರ ಇಸ್ತಿಹಾರನ್ನು ಸಾದರ್ಮಾಡಿರುತಾರೆ. ಆದ್ದರಿಂದ ಘನವನ್ನೈದಿದ ಶ್ರೀಮ‌ ಮಹಾರಾಣಿ ರೀಜಂಟರವರು ಕೆಳಗೆ ನಮೂದಿಸಿರುವಂತೆ ವಿಧಿಸಿರುತ್ತಾರೆ:—

1. (1) ಮೈಸೂರ ಗವರ್ನಮೆಂಟಿನವರು ಒಂದು ಸ್ಪೆಷಲ್ ಕೋರ್ಟನ್ನು ಸರ್ಕಾರಿ ಗೆಜೆಟಿನಲ್ಲಿ ಇಸ್ತಿಹಾರಿನ ಮೂಲಕ ಏರ್ಪಡಿಸಿ ಅಂತಾ ಸ್ಪೆಷಲ್ ಕೋರ್ಟಿನ ಜಡ್ಜಿಗಳಾಗಿ ಇಬ್ಬರು ಕಮ್ಮಿಷನರುಗಳನ್ನು ಮೊಕರರ್ಮಾಡತಕ್ಕದ್ದು.

ಸ್ಪೆಷಲ್ ಕೋರ್ಟಿನ ಏರ್ಪಾಡು.

(2) ಸದರೀ ಸ್ಪೆಷಲ್ ಕೋರ್ಟಿಗೆ, ಈ ರೆಗ್ಯುಲೇಷನಿನ ನಿಬಂಧನೆಗಳಿಗೊಳಪಟ್ಟು,

(a) ಈ ರೆಗ್ಯುಲೇಷನಿನ ಪೀಠಿಕೆಯಲ್ಲಿ ಕಂಡ 5,67,338—15—1 (ಐದುಲಕ್ಷವೂ ಅರವತ್ತೇಳುಸಾವಿರದ ಮುನ್ನೂರಮೂವತ್ತೆಂಟು ರೂಪಾಯಿಗಳು, ಹದಿನೈದು ಆಣೆ, ಒಂದುಪೈ)ನ ಮೊಬಲಗು ಸದರೀ ಬ್ರಿಜಲಾಲ್‌ದಾಸಿನ ವಾರಸುದಾರರು ಮತ್ತು ಖಾಯಿದೆಯ ಪ್ರಕಾರ ಪ್ರತಿನಿಧಿಗಳು ಯಾರಾದರೂ ಯಿದ್ದು ಅವರಿಗೆ ಸಲ್ಲಬೇಕಾದರೆ ಅಂತಾ ಮನುಷ್ಯ ಅಥವಾ ಮನುಷ್ಯರು ಯಾರೆಂಬ ವಿಷಯದಲ್ಲಿಯೂ,

(b) ಮೇಲೆ ನಮೂದಿಸಲ್ಪಟ್ಟ ಸಂದಾಯಕ್ಕೆ ನ್ಯಾಯ, ನೀತಿ ಮತ್ತು ಸದ್ಧರ್ಮಕ್ಕೆ ಅನುಸಾರವಾಗಿ ಲಗತ್ತಾಗಿರಬೇಕಾದ ಷರತ್ತುಗಳು ಮತ್ತು ಭರವಸೆಗಳೇನಾದರೂ ಇದ್ದರೆ ಅಂತವುಗಳನ್ನು ಕುರಿತೂ ವಿಚಾರಣೆಯನ್ನು ಮಾಡಿ ನಿರ್ಣೈಸಿ ಆಖೈರ್ ಫೈಸಲನ್ನು ಕೊಡುವಧಿಕಾರವಿರತಕ್ಕದ್ದು.

(3) ಈ ಪ್ರಕರಣ ಪ್ರಕಾರ ಮೊಕರರಾದ ಒಬ್ಬ ಕಮ್ಮಿಷನರಿನ ಮರಣ, ರಾಜೀನಾಮೆ, ಅಥವಾ ಅಸಮರ್ಥತೆಯ ಸಂದರ್ಭದಲ್ಲಿ, ಅಂಥಾ ಕಮ್ಮಿಷನರಿಗೆ ಬದಲಾಗಿ ಮತ್ತೊಬ್ಬರನ್ನು ಸರ್ಕಾರಿ ಗೆಜೆಟಿನಲ್ಲಿ ಇಸ್ತಿಹಾರ್ ಮೂಲಕ ಮೈಸೂರ ಗವರ್ನಮೆಂಟಿನವರು ಮೊಕರರ್ಮಾಡತಕ್ಕದ್ದು.

2. ಸದರೀ ಸ್ಪೆಷಲ್ ಕೋರ್ಟಿನವರು, ಈ ರೆಗ್ಯುಲೇಷನಿನ ಪೀಠಿಕೆಯಲ್ಲಿ ಕಂಡ ಇಸ್ತಿಹಾರಿನಲ್ಲಿ ಗೊತ್ತುಮಾಡಲ್ಪಟ್ಟಿರುವ ವಾಯಿದೆಯೊಳಗಾಗಿ ಮತ್ತು ರೀತಿಯಂತೆ ಸರಿಯಾಗಿ ದಾಖಲ್ಮಾಡಲ್ಪಡದೆ ಹೋದ ಯಾವ ದಾವೆಯನ್ನೂ ಹಿಡಿಯತಕ್ಕದ್ದಲ್ಲ, ಮತ್ತು ಹಾಗೆ ದಾಖಲ್ಮಾಡಲ್ಪಡದೆಹೋದ ಎಲ್ಲಾ ದಾವೆಗಳೂ ಎಂದೆಂದಿಗೂ ರದ್ದಾದವೆಂತಲೂ ಪುನಃ ಯಾವ ಬಗೆಯಾಗಿಯೂ ಉಜ್ಜೀವಿಸುವದಕ್ಕೆ ಅಯೋಗ್ಯವಾದವೆಂತಲೂ ಭಾವಿಸಲ್ಪಡತಕ್ಕದ್ದು.

ಪೀಠಿಕೆಯಲ್ಲಿ ನಮೂದಾಗುವ ನೋಟಿಸಿನಂತೆ ನಡಿಯದೆ ತಪ್ಪುವವರ ಫಲ.

3. ಸದರೀ ಸ್ಪೆಷಲ್ ಕೋರ್ಟಿನವರಿಗೆ, ತಮ್ಮ ರೂಬರೂ ದಾಖಲ್ಮಾಡಲ್ಪಟ್ಟಿರುವ ದಾವೆಗಳಿಗೆ ಸಂಬಂಧಿಸಿದ ಅಥವಾ ತಮ್ಮ ರೂಬರೂ ನಡಿಯುವ ವಿಚಾರಣೆಗೆ ಮುಖ್ಯವಾದ್ದೆಂದು ಭಾವಿಸಲ್ಪಡಬಹುದಾದ ಯಾವ ಆಜ್ಞಾಪತ್ರಿಕೆಗಳು, ಡಿಕ್ರಿಗಳು, ಜಡ್ಜಮೆಂಟುಗಳು, ರಿಕಾರ್ಡುಗಳು, ಪತ್ರಗಳು, ದಸ್ತಾವೇಜುಗಳು, ದಾಗೀನಾಗಳು, ಪ್ಲೀಡಿಂಗ್ಸು ಅಂದರೆ ಪ್ರತಿಪಾದನಗಳು, ಪುಸ್ತಕಗಳು, ಲೆಕ್ಕಗಳು, ಪತ್ರಿಕೆಗಳು, ಅರ್ಜಿಗಳು, ಕಾಗದಗಳು ಅಥವಾ ಬರವಣಿಗೆಗಳನ್ನೂ, ಅವು ಯಾವ ಮನುಷ್ಯನ, ಜಡ್ಜಿಯ ಅಥವಾ ಕೋರ್ಟಿನ ಸ್ವಾಧೀನದಲ್ಲಿದ್ದಾಗ್ಯೂ, ತಗಾದೆಹಚ್ಚಿ ಹಾಜರ್ಮಾಡಿಸಿಕೊಳ್ಳೋಣ ನ್ಯಾಯವಾಗಿರತಕ್ಕದ್ದು; ಮತ್ತು ಅಂತಾ ಮನುಷ್ಯ, ಜಡ್ಜಿ ಅಥವಾ ಕೋರ್ಟು ಅಥವಾ ಅದಕ್ಕ ಸಂಬಂಧಪಟ್ಟ ಯಾವ ಉದ್ಯೋಗಸ್ತ ಅಥವಾ ಮನುಷ್ಯನಿಗೆ ನೋಟಿಸ್ ಕೊಡಲ್ಪಟ್ಟ ಮೇಲೆ, ಸದರೀ ನೋಟಿಸಿನಲ್ಲಿ ಕಂಡ ಆಜ್ಞಾಪತ್ರಿಕೆಗಳು, ಡಿಕ್ರಿಗಳು, ಜಡ್ಜಮೆಂಟುಗಳು, ರಿಕಾರ್ಡುಗಳು, ಪತ್ರಗಳು, ದಸ್ತಾವೇಜುಗಳು, ದಾಗೀನಾಗಳು, ಪ್ಲೀಡಿಂಗ್ಸು ಅಂದರೆ ಪ್ರತಿಪಾದನಗಳು, ಪುಸ್ತಕಗಳು, ಲೆಕ್ಕಗಳು, ಪತ್ರಿಕೆಗಳು, ಅರ್ಜಿಗಳು, ಕಾಗದಗಳು ಅಥವಾ ಬರವಣಿಗೆಗಳನ್ನು ಸದರೀ ನೋಟಿಸಿನಲ್ಲಿ ನಿರೂಪಿಸಲ್ಪಟ್ಟಿರುವ ರೀತಿಯಲ್ಲಿ ಸದರೀ ಸ್ಪೆಷಲ್ ಕೋರ್ಟಿನವರಿಗೆ ಕೂಡಲೆ ಒಪ್ಪಿಸಿಬಿಡಲ್ಪಡತಕ್ಕದ್ದು. ಹೀಗೆ ನಡಿಸಲು ಯಾವ ವಿಧವಾಗಿ ವಿರೋಧವಾದ ಯಾವ ಆಕ್ಟ್, ರೆಗ್ಯುಲೇಷನ್, ಮಾಮೂಲ್ ಅಥವಾ ಪದ್ಧತಿ ಇದ್ದಾಗ್ಯೂ ಚಿಂತೆ ಯಿಲ್ಲ.

ದಾಖಲ್ಮಾಡಲ್ಪಟ್ಟ ದಾವೆಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಹಾಜರ್ಮಾಡಿಸಿಕೊಳ್ಳಲು ಕಮ್ಮಿಷನರುಗಳಿಗೆ ಅಧಿಕಾರ.

4. ಸದರೀ ಸ್ಪೆಷಲ್ ಕೋರ್ಟಿನವರಿಗೆ, ಸಾಕ್ಷಿಗಳಿಗೆ ಸಮ್ಮನ್ಸ್ ಮಾಡಿ ಅವರ ಸಾಕ್ಷ್ಯವನ್ನು ತೆಗಿಯೋಣವೂ, ಆ ಬಗ್ಗ್ಯಾಗಿ ಸಿವಿಲ್ ಪ್ರೊಸಿಜ್ಯೂರ್ ಕೋಡಿನಿಂದ ಒಂದು ಸಿವಿಲ್ ಕೋರ್ಟಿನ ವಿಚಾರದಲ್ಲಿ ವಿಧಿಸಲ್ಪಟ್ಟಿರುವಂತೆ ಸಾಧ್ಯವಾದ ಮಟ್ಟಿಗೂ ಅದೇ ರೀತೀಲಿ ಮತ್ತು ಅದೇ ಸಾಧನಗಳ ಮೂಲಕವಾಗಿ ಸಾಕ್ಷಿಗಳ ಮತ್ತು ಪುಸ್ತಕಗಳ, ಲೆಕ್ಕಗಳ, ಕಾಗದಗಳ, ಪತ್ರಗಳ ಅಥವಾ ಇತರ

ಸಿವಿಲ್ ಪ್ರೊಸಿಜ್ಯೂರ್ ಕೋಡಿನ ಮೇರಿಗೆ ಹ್ಯಾಗೋ ಹಾಗೆ ಸಾಕ್ಷಿಗಳು ವಗೈರೆ ಬಗ್ಗೆ ಸಮನ್ಸ್ ಮಾಡಲು ಕಮ್ಮಿಷನರುಗಳಿಗೆ ಅಧಿಕಾರ.

ದಸ್ತಾವೇಜುಗಳ ಹಾಜರಾತಿಯನ್ನು ಬಲಾತ್ಕರಿಸೋಣವೂ, ಈ ಪ್ರಕರಣ ಪ್ರಕಾರ ಮಾಡಲ್ಪಟ್ಟ ಯಾವ ಹುಕುಮಿಗಾದರೂ ಅವಿಧೇಯತ್ವ ನಡದಲ್ಲಿ ಆ ಬಗ್ಯೆ ಐಂದುನೂರು ರೂಪಾಯಿಗಳಿಗೆ ಮಿಂಚದೊಂದು ಜುರ್ಮಾನೆಯನ್ನು ವಿಧಿಸೋಣವೂ ನ್ಯಾಯವಾಗಿರತಕ್ಕದ್ದು.

ಪ್ರಮಾಣವನ್ನು ಮಾಡಿಸಲು ಕಮ್ಮಿಷನರುಗಳಿಗೆ ಅಧಿಕಾರ.

5. ಸದರೀ ಸ್ಪೆಷಲ್ ಕೋರ್ಟಿನವರು ಈ ರೆಗ್ಯುಲೇಷನ್ ಪ್ರಕಾರ ವಿಚಾರಿಸಲ್ಪಡುವ ಸಂಗತಿಗಳ ಪೈಕಿ ಯಾವದಕ್ಕೆ ಸಂಬಂಧಿಸಿಯಾದರೂ ತಮ್ಮ ರೂಬರೂ ತನಿಖೆ ಮಾಡಲ್ಪಡುವ ಯಾವ ಮನುಷ್ಯನಿಗಾದರೂ ತಮಗೆ ಯುಕ್ತವೆಂದು ತೋಚಬಹುದಾದ ಬಗೆಯಿಂದ ಪ್ರಮಾಣ ಅಥವಾ ಸತ್ಯವನ್ನು ಮಾಡಿಸಬಹುದು.

ಕಮ್ಮಿಷನರುಗಳ ರೂಬರೂ ನಡಿಸಲ್ಪಡುವ ವಿಚಾರಣೆಗಳು, ಕೊಡಲ್ಪಡುವ ವಾಜ್ಮೂಲಗಳು, ಇಂಡಿಯನ್ ಪಿನಲ್ ಕೋಡಿನ ಅರ್ಥ ವಿವರಣೆ ಪ್ರಕಾರ "ಜುಡಿಷಿಯಲ್ ಪ್ರೊಸಿಡಿಂಗ್ಸ್" ಮತ್ತು "ಎವಿಡೆನ್ಸ್" ಆಗಿರತಕ್ಕದ್ದು.

6. ಸದರೀ ಸ್ಪೆಷಲ್ ಕೋರ್ಟಿನಿಂದ, ಈ ರೆಗ್ಯುಲೇಷನ್ ಮೇರಿಗೆ ಆ ಕೋರ್ಟಿನಲ್ಲಿ ದಾಖಲಾದ ಯಾವದಾದರೂ ದಾವೆಯನ್ನು, ಅಥವಾ ಅಂತ ಯಾವ ದಾವೆಗಾದರೂ ಸಂಬಂಧಿಸಿದ ಯಾವದಾದರೂ ಸಂಗತಿಯನ್ನು ಕುರಿತು, ಮಾಡಲ್ಪಡುವ ಪ್ರತಿ ವಿಚಾರಣೆಯೂ ಇಂಡಿಯನ್ ಪೀನಲ್ ಕೋಡಿನ ಅರ್ಥ ವಿವರಣೆಯಂತೆ ಒಂದು "ಜುಡಿಷಿಯಲ್ ಪ್ರೊಸಿಡಿಂಗ್ಸ್" ಎಂಬದಾಗಿ ಎಣಿಸಲ್ಪಡತಕ್ಕದ್ದು. ಮತ್ತು ಅಂತ ವಿಚಾರಣೆಗೆ ಸಂಬಂಧವಾಗಿ, ಪ್ರಮಾಣದ ಮೇಲಾಗಲಿ ಅಥವಾ ಪ್ರಮಾಣ ವಿಲ್ಲದೆಯಾಗಲಿ, ಸದರೀ ಸ್ಪೆಷಲ್ ಕೋರ್ಟಿನಿಂದ ಅಥವಾ ಅದರ ರೂಬರೂ ವಿಚಾರಿಸಲ್ಪಡುವ ಯಾವ ಮನುಷ್ಯನಿಂದಲಾದರೂ ಕೊಡಲ್ಪಡುವ ಪ್ರತಿ ವಾಜ್ಮೂಲವೂ ಅದೇ ಕೋಡಿನ ಅರ್ಥವಿವರಣೆಯಂತೆ "ಎವಿಡೆನ್ಸ್" ಎಂಬದಾಗಿ ಎಣಿಸಲ್ಪಡತಕ್ಕದ್ದು.

ಸ್ಪೆಷಲ್ ಕೋರ್ಟಿನ ಅಡಳಿತಗಳು ಹ್ಯಾಗೆ ನಡಿಸಲ್ಪಡತಕ್ಕದ್ದು.

7. (1) ಸದರೀ ಸ್ಪೆಷಲ್ ಕೋರ್ಟಿನ ಅಡಳಿತಗಳು ಅಸಲ್ ದಾವೆಗಳ ವಿಚಾರಣೆ ವಿಷಯದಲ್ಲಿ 1884ನೇ ಇಸವಿ IIನೇ ನಂಬರ್ ರೆಗ್ಯುಲೇಷನಾದ ಸಿವಿಲ್ ಪ್ರೊಸಿಡ್ಯೂರ್ ಕೋಡಿನಲ್ಲಿರುವ ನಿಬಂಧನೆಗಳಂತೆ ನಡಿಸಲ್ಪಡತಕ್ಕದ್ದು.

(2) ಸದರೀ ಸ್ಪೆಷಲ್ ಕೋರ್ಟಿನವರು ಸಾಮಾನ್ಯವಾಗಿ ಬೆಂಗಳೂರಲ್ಲಿ ಕೂಡತಕ್ಕದ್ದು.

(3) ಸದರೀ ಸ್ಪೆಷಲ್ ಕೋರ್ಟಿಗೆ ರಿಜಿಸ್ಟ್ರಾರಾಗಿ ಒಬ್ಬ ಆಫಿಸರನ್ನು ಮೈಸೂರ್ ಗವರ್ನಮೆಂಟಿನವರು ನೌಕರರ್ಮಾಡತಕ್ಕದ್ದು, ಮತ್ತು ಅಂತ ರಿಜಿಸ್ಟ್ರಾರು, ಸದರೀ ಸ್ಪೆಷಲ್ ಕೋರ್ಟಿನವರು ಆಗಿಂದಾಗ್ಯೆ ನಿಯಮಿಸಬಹುದಾದಂತೆ, ಮಂತ್ರಿತ್ವ ಸ್ವಭಾವದ ಅಧಿಕಾರಗಳನ್ನು ಮತ್ತು ಕೆಲಸಗಳನ್ನು ನಡಿಸತಕ್ಕದ್ದು.

ದಾವೆಗಳನ್ನು ಫೈಸಲ್ಮಾಡೋಣದರಲ್ಲಿ ಸ್ಪೆಷಲ್ ಕೋರ್ಟಿನಿಂದ ಉಪಯೋಗಿಸಲ್ಪಡಬೇಕಾದ ಕಾನೂನು.

8. ಸದರೀ ಸ್ಪೆಷಲ್ ಕೋರ್ಟಿನವರು, ವಂಶಾವಳಿ, ದಾಯಬಾಧ್ಯತೆ, ಮದುವೆ, ಅಥವಾ ಜಾತಿ ಅಥವಾ ಯಾವದಾದರೂ ಮತಸಂಬಂಧವಾದ ಮಾಮೂಲ್ ಅಥವಾ ಏರ್ಪಾಡಿನ ವಿಚಾರವಾದ ಯಾವದಾದರೂ ಪ್ರಮೇಯವನ್ನು ತೀರ್ಮಾನಿಸೋಣ ಅವಶ್ಯಕವಾದಾಗ,—

(a) ಹಿಂದೂ ಲಾ, ಅಥವಾ

(b) ಕಾನೂನಿನ ಬಲೀಯುಳ್ಳದ್ದಾಗಿಯೂ ವ್ಯವಹಾರಕ್ಕೆ ಸಂಬಂಧಿಸಿದ ಕಕ್ಷಿಗಾರ್ರಿಗೆ ಅಥವಾ ಸ್ವತ್ತಿಗೆ ವ್ಯವಸ್ಥಾಪಕವಾಗಿಯೂ ಯಾವದಾದರೂ ಪದ್ಧತಿ ಇದ್ದಲ್ಲಿ ಅಂತ ಪದ್ಧತಿಯೂ,

ಅಂತಾ ಲಾ ಅಥವಾ ಪದ್ಧತಿ ಖಾಯಿದೆ ಮಾಡುವ ಇಲಾಖೆಯ ಖಾಯಿದೆ ಯಿಂದ ವೆತ್ಯಾಸ ಪಡಿಸಲ್ಪಟ್ಟ ಅಥವಾ ಮೌಖೂಫ್ ಮಾಡಲ್ಪಡದಿದ್ದರೆ, ಸದರೀ ಕೋರ್ಟಿನವರ ತೀರ್ಪಿನ ವಿಧಿಯಾಗಿರತಕ್ಕದ್ದು.

(c) ವಿಶೇಷ ವಿಧಿಯಿಲ್ಲದ ಸಂದರ್ಭಗಳಲ್ಲಿ, ಸದರೀ ಸ್ಪೆಷಲ್ ಕೋರ್ಟಿನವರು ನ್ಯಾಯ, ನೀತಿ ಮತ್ತು ಸದ್ಧರ್ಮದ ಪ್ರಕಾರ ಫೈಸಲ್ಮಾಡತಕ್ಕದ್ದು.

ಕಾಲನಿಬಂಧನೆ ಸಬಬಿನ ಮೇಲೆ ದಾವೆಗಳು ತಿರಸ್ಕರಿಸಲ್ಪಡಕೂಡದು.

9. (1) ಈ ರೆಗ್ಯುಲೇಷನ್ ಪ್ರಕಾರ ಸದರೀ ಸ್ಪೆಷಲ್ ಕೋರ್ಟಿಗೆ ದಾಖಲಾಗುವ ಯಾವ ದಾವೆಯೂ ಅದಕ್ಕೆ ಲಗಾವಾಗುವ ಸಾಧಾರಣ "ಕಾಲನಿಬಂಧನೆ ಕಾನೂನಿ"ನ ಕಾರಣದಿಂದ ತಿರಸ್ಕರಿಸಲ್ಪಡಕೂಡದು.

ಸ್ಟಾಂಪು ಡ್ಯೂಟಿಯ ಮಾಫಿ.

(2) ಸದರೀ ಸ್ಪೆಷಲ್ ಕೋರ್ಟಿನಲ್ಲಿ ದಾವೇದಾರ್ರಿಂದ ದಾಖಲ್ಮಾಡಲ್ಪಡುವ ದಾವೆಗಳ ಮೇಲಾಗಲಿ ದಸ್ತಾವೇಜುಗಳ ಮೇಲಾಗಲಿ ಸ್ಟಾಂಪುಗಳು ವಸೂಲ್ಮಾಡಲ್ಪಡತಕ್ಕದ್ದಿಲ್ಲ.

ಕಮ್ಮಿಷನರುಗಳಿಗೆ ಭಿನ್ನಾಭಿಪ್ರಾಯ ಹುಟ್ಟಿದಾಗ ಆಚರಿಸಬೇಕಾದ ನಡವಡಿಕೆ.

10. ವ್ಯವಹಾರದಲ್ಲಿರುವ ಯಾವದಾದರೂ ವಿಶೇಷಾಂಶದ ವಿಷಯದಲ್ಲಿ ಸದರೀ ಸ್ಪೆಷಲ್ ಕೋರ್ಟಿಗೇರ್ಪಡುವ ಇಬ್ಬರು ಕಮ್ಮಿಷನರುಗಳಿಗೆ ಪರಸ್ಪರ ಅಭಿಪ್ರಾಯ ಭೇದವೇನಾದರೂ ಬಂದಲ್ಲಿ, ಅಂತಾ ಸಂಗತಿಯನ್ನು ಇಂಡಿಯಾ ಗವರ್ನ‌ಮೆಂಟನವರ ತೀರ್ಮಾನಕ್ಕಾಗಿ ಮೈಸೂರ್ ಗವರ್ನ‌ಮೆಂಟನವರ ಮೂಲಕ ಅರಿಕೆ ಮಾಡತಕ್ಕದ್ದು, ಮತ್ತು ಸದರೀ ಸ್ಪೆಷಲ್ ಕೋರ್ಟಿನ ಜಡ್ಜಮೆಂಟ್ ಇಂಡಿಯಾ ಗವರ್ನ‌ಮೆಂಟನವರು ತಿಳಿಸಬಹುದಾದ ತೀರ್ಮಾನಕ್ಕೆ ಅನುಸರಿಸಿರತಕ್ಕದ್ದು.

ಸ್ಪೆಷಲ್ ಕೋರ್ಟಿನ ಖರ್ಚಿನ ಸಂದಾಯ.

11. ಸದರೀ ಸ್ಪೆಷಲ್ ಕೋರ್ಟಿನ ಖರ್ಚು ಪ್ರಥಮತಃ ಮೈಸೂರ ಗವರ್ನ‌ಮೆಂಟನವರಿಂದ ಕೊಡಲ್ಪಡತಕ್ಕದ್ದು, ಮತ್ತು ಸದರೀ ಸ್ಪೆಷಲ್ ಕೋರ್ಟಿನಿಂದ ಈ ವಿಚಾರವಲ್ಲಿ ಮಾಡಲ್ಪಡತಕ್ಕ ಸಿಫಾರಿಷಿನ ಮೇಲೆ ಇಂಡಿಯಾ ಗವರ್ನ‌ಮೆಂಟನವರು ತೀರ್ಮಾನಿಸಬಹುದಾದ ರೀತಿಯಲ್ಲಿ ಆಖೈರಿಗೆ ವಿಲೆಯಾಗತಕ್ಕದ್ದು.

ಆಖೈರ್ ಫೈಸಲಿಗೆ ಅನಂತರ ಕೋರ್ಟು ಮುಗಿಯತಕ್ಕದ್ದು.

12. ಈ ರೆಗ್ಯುಲೇಷನ ಪ್ರಕಾರ ಸದರೀ ಸ್ಪೆಷಲ್ ಕೋರ್ಟಿನವರು ಕೊಡುವ ಆಖೈರ್ ಫೈಸಲನ್ನು ಅವರು ಮೈಸೂರ್ ಗವರ್ನ‌ಮೆಂಟಿಗೆ ಒಪ್ಪಿಸತಕ್ಕದ್ದು; ಮತ್ತು ಆ ತರುವಾಯ ಈ ರೆಗ್ಯುಲೇಷನಿನಂತೆ ನಡಿಯುವ ಸದರೀ ಕೋರ್ಟಿನ ಕೆಲಸಗಳು ಅಧಿಕಾರಗಳು ಮುಗಿದಂತೆ ನಿಷ್ಕರ್ಷೆಯಾಗತಕ್ಕದ್ದು.

ಆಖೈರ್ ಫೈಸಲನ್ನು ಮೈಸೂರ ಗವರ್ನ‌ಮೆಂಟನವರು ಜಾರಿಮಾಡತಕ್ಕದ್ದು.

13. ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಫೈಸಲನ್ನು ಮೈಸೂರ ಗವರ್ನ‌ಮೆಂಟನವರು ಕ್ರಮ ಪ್ರಕಾರ ಜಾರಿಮಾಡತಕ್ಕದ್ದು, ಮತ್ತು ಅಂತ ಜಡ್ಜಮೆಂಟಿನಿಂದ ಆಜ್ಞಾಪಿಸಲ್ಪಟ್ಟ ಯಾವದಾದರೂ ಹಣ ಪಾವತಿಯನ್ನಾಗಲಿ ಅಥವಾ ಇತರ ವಿಲೇವಾರಿಯನ್ನಾಗಲಿ ಮಾಡುವದಕ್ಕೆ ಮುಂಚೆ, ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಜಡ್ಜಮೆಂಟಿನಲ್ಲಿ ನಮೂದಿಸಲ್ಪಟ್ಟಿರಬಹುದಾದ ಷರತ್ತುಗಳು ಮತ್ತು ಭರವಸೆಗಳು ಪೂರಾ ಜಾರೀಲಿ ಬರುವದಕ್ಕೋಸ್ಕರವಾಗಿ, ತಮಗೆ ಯುಕ್ತ ತೋಚಬಹುದಾದಂತೆ, ಏರ್ಪಾಡುಗಳನ್ನು ಮಾಡಿ ಜಾಮೀನುಗಳನ್ನು ಪಡಿಯತಕ್ಕದ್ದು.

ಸಿವಿಲ ದಾವೆಗಳಿಗೆ ಅಟಂಕ.

14. ಸದರೀ 5,67,338—15—1 (ಐದುಲಕ್ಷವೂ ಅರವತ್ತೇಳು ಸಾವಿರದ ಮುನ್ನೂರು ಮೂವತ್ತೆಂಟು ರೂಪಾಯಿ, ಹದಿನೈದಾಣೆ, ಒಂದುಪೈನ ಮೊಬಲಗು ಅಥವಾ ಅದರ ಪೈಕಿ ಯಾವ ಭಾಗದ ವಿಷಯದಲ್ಲಾಗಲಿ; ಅಥವಾ ಈ ರೆಗ್ಯುಲೇಷನಿನ ನಿಬಂಧನೆಗಳನ್ನು ಜಾರಿ ಮಾಡೋಣದರಲ್ಲಿ ಮಾಡಲ್ಪಟ್ಟ ಸಂದಾಯ ಅಥವಾ ನಡಿಸಲ್ಪಟ್ಟ ಕೃತ್ಯದ ವಿಷಯದಲ್ಲಾಗಲಿ; ಅಥವಾ ಸದರೀ ಸ್ಪೆಷಲ್ ಕೋರ್ಟಿನ ಆಖೈರ್ ಜಡ್ಜಮೆಂಟಿನ ಅಭಿಪ್ರಾಯಗಳ ವಿಷಯದಲ್ಲಾಗಲಿ, ಯಾವ ಸಿವಿಲ್ ಕೋರ್ಟಿನವರೂ ವ್ಯಾಜ್ಯರಿಯನ್ನು ಚಲಾಯಿಸತಕ್ಕದ್ದಲ್ಲ

ಕೆ. ಶೇಷಾದ್ರಿ ಐಯ್ಯರ್,
ಮೈಸೂರ ಸಂಸ್ಥಾನದ ದಿವಾನ.

393

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಯಿಷ್ ಆದ್ದು [ನಂ. 20.

ಬೆಂಗಳೂರು, ಗುರುವಾರ, ಮೇ ತಾ॥ 21, ಸ್ತ 1896.

ವಿ ಷ ಯ ಸೂ ಚಿ ಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷ್ವ ವ ಎಡ್ಯುಕೇಷ್ವ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ವ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನ್ನೇಟ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ವಗಳು.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜ ನ ರ ಲ್ ಮತ್ತು ರೆ ವಿ ನ್ಯೂ .

ಮೊಕ್ಕಾಂ ಮೈಸೂರು ತಾರೀಖು 9ನೇ ಮೇ 1896.

ನಂ. 12358.—ಮಿ. ಫೈ. 3—94, ಸಬ್ ಅಸಿಸ್ಟೆಂಟ ಸರ್ಜರಾದ ಮೆಸ್ಟರ್ ವಿ. ಅಬ್ಬು ಸೇನಾಯಿಡು, ಯಲ್. ಎಂ. ಮತ್ತು ಎಸ್., ಯವರು ಬೆಂಗಳೂರು ವ್ಯಾಕ್ಸಿನ್ ಇನ್ಸ್ಟಿಟ್ಯೂಟನಿಂದ ಸಕ್ಲೇಶಪುರದ ಲೋಕಲ ಫಂಡ ಡಿಸ್ಪೆನಸರಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

2. ಸಬ್ ಅಸಿಸ್ಟೆಂಟ್ ಸರ್ಜನಾದ ಮೆಸ್ಟರ ಟಿ. ವಿ. ಕುಪ್ಪುಸಾಮಿ ಮೊದಲಿಯಾರ್, ಎಲ್. ಎಂ. ಮತ್ತು ಎಸ್., ಯವರು ಸಕ್ಲೇಶಪುರದ ಲೋಕಲ್‌ಫಂಡ ಡಿಸ್ಪೆನಸರಿಯಿಂದ ಬೆಂಗಳೂರ ವ್ಯಾಕ್ಸಿನ್ ಇನ್ಸ್ಟಿಟ್ಯೂಟನಲ್ಲಿ ಕೆಲಸ ಮಾಡುವ ಬಗ್ಯೆ ವರ್ಗಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ಮೈಸೂರು ತಾರೀಖು 13ನೇ ಮೇ 1896.

ನಂ. 12444.—ಯು. 397, ಮೈಸೂರ ಸರ್ವಿಸ್ ರೆಗ್ಯುಲೇಷರ್ಷಗಳ 188ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮೆಸ್ಟರ್ ಕೆ. ರಂಗಪ್ಪನವರಿಗೆ, 1896ನೇ ಏಪ್ರೆಲ್ 12ನೇ ಮರ್‍ಕ್ತಾಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಚಿತ್ರದುರ್ಗದ ಹೈಸ್ಕೂಲ್ 1ನೇ ಅಸಿಸ್ಟೆಂಟ್ ಮಾಸ್ಟರ್ ಮೆಸ್ಟರ್ ವೀರಭದ್ರಯ್ಯ, ಬಿ. ಏ., ಯವರು ತಮ್ಮ ಕೆಲಸಗಳೊಂದಿಗೆ ಸದರೀ ಮೆಸ್ಟರ್ ಕೆ. ರಂಗಪ್ಪನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವಪರಿಯಂತ ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲಗಳ ಡೆಪ್ಯುಟಿ ಇನ್ಸ್ಪೆಕ್ಟರಾಗಿ ಆಕ್ಟಿಂಗ್‌ತರೀಕ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 12447.—ಲೋ. ಫಂ. 197—92, ಮೆಸ್ಟರ್ ಕೃಷ್ಣಸ್ವಾಮಯ್ಯರ್, ಬಿ. ಏ. ಮತ್ತು ಯಲ್. ಸಿ. ಈ. ಯವರು ಮೈಸೂರ ಷಹರ ಮ್ಯುನಿಸಿಪಾಲಿಟಿಯ ಯಗ್ಸಿಕ್ಯೂಟಿವ್ ಇಂಜನಿಯರಾಗಿ, 1896ನೇ ಏಪ್ರೆಲ್ 2ನೇ ಮರ್‍ಕ್ತಾಂ 11271—ಲೋಕಲ್ ಫಂ. 197—92ನೇನಂಬರ ಇಸ್ತಿಹಾರ ನಾಮೆಯಲ್ಲಿ ಮೊಕರರ್ಮಾಡಲ್ಪಟ್ಟು, 1896ನೇ ಏಪ್ರೆಲ್ 16ನೇ ಮರ್‍ಕ್ತುಮಿನ ಪೂರ್ವಾಹ್ನದಲ್ಲಿ ತಮ್ಮ ಉದ್ಯೋಗಕ್ಕೆ ಸೇರಿರುತ್ತಾರೆ.

ನಂ. 12479.—ಮಿ. 1807, ಮೆಸ್ಟರ್ ಸಿ. ರಾಘವಾಚಾರ್‍ಲುಯವರು, ಮೆಸ್ಟರ್ ಟಿ. ಟಿ. ಲೆನಾರ್ಡ್ಯವರಿಂದ ಗವರ್ನಮೆಂಟ್ ಪ್ರೆಸ್, ಸ್ಟೇಷನರಿ ಡಿಪೋ ವ ಸ್ಟೋರುಗಳ ಸೂಪರ್ಇಂಟೆಂಡೆಂಟ್, ಮೈಸೂರ ಗೆಜೆಟ್ ಕಂಪೈಲರ್ ಮತ್ತು ಗವರ್ನಮೆಂಟ್ ಲೈಬ್ರರಿ ಯಕ್ಸ್ ಅಫಿಷಿಯೋ ಕ್ಯೂರೇಟರ್ ಉದ್ಯೋಗಗಳ ಚಾರ್ಜನ್ನು 1896ನೇ ಮೇ 7ನೇ ಮರ್‍ಕ್ತುಮಿನ ಮಧ್ಯಾಹ್ನಾತ್ಪರ ವಹಿಸಿರುತ್ತಾರೆ.

ನಂ. 12590.—ಲೋ. ಫಂ. 372—92, ಅಡ್ವೋಕೇಟ್ ಮೆಸ್ಟರ್ ಬಿ. ಕೃಷ್ಣರಾಯರು, ರಾಜೀನಾಮೆ ಕೊಟ್ಟ ಮೆಸ್ಟರ್ ಪಿ. ಶೇಷಗಿರಿರಾಯರ ಸ್ಥಳದಲ್ಲಿ, ಚಿತ್ರದುರ್ಗ ಮ್ಯುನಿಸಿಪಾಲಿಟಿಯ ಪೊಬ್ಬ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 15ನೇ ಮೇ 1896, ಬೆಂಗಳೂರು.

ನಂ. 12535.—ಜ. 1429, ಮೆಸ್ಟರ್ ಜಿ. ಡನ್ನಿಂಗ್‌ಯವರು, ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರ್ಇಂಟೆಂಡೆಂಟ್ ಮೆಸ್ಟರ್ ಡಿ. ಏ. ಬಲ್ಲಾರ್ಡ್ ಯವರಿಂದ 1896ನೇ ಏಪ್ರೆಲ್ 30ನೇ ಮರ್‍ಕ್ತುಮಿನ ಮಧ್ಯಾಹ್ನಾತ್ಪರ ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಚಾರ್ಜನ್ನು ವಹಿಸಿರುತ್ತಾರೆ.

ತಾರೀಖು 16ನೇ ಮೇ 1896, ಮೊಕ್ಕಾಂ ಮೈಸೂರ.

ನಂ. 12574.—ಮಿ. 1827, ಶಿವಮೊಗ್ಗಾ ಸಬ್ ಅಸಿಸ್ಟೆಂಟ್ ಸರ್ಜನರಾದ ಮೆಸ್ಟರ್ ಯಸ್. ಕೆ. ಹನುಮಂತರಾಯರು, ಮೆಸ್ಟರ್ ಸಿ. ಏ. ನಂಜಪ್ಪನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಮೈಸೂರ ಸ್ಪೆಷಲ್ ಡ್ಯುಟಿಯಿಂದ ಚಿಕ್ಕಮಗಳೂರು ಸಿವಿಲ್ ಹಾಸ್ಪಿಟಲ್‌ನಲ್ಲಿ ಕೆಲಸ ಮಾಡುವ ಬಗ್ಯೆ ಹಂಗಾಮಿಯಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾರೀಖು 18ನೇ ಮೇ 1896, ಬೆಂಗಳೂರು.

ನಂ. 12599.—ಲೋ. ಫಂ. 90—92, ವರ್ತಕರಾದ ಮೆಸ್ಸರ್ಸ್ ಕಟ್ಟೆ ಸಿದ್ದಪ್ಪ ಮತ್ತು ಗುಜ್ಜಾರಿ ಮೇಸ್ತ್ರಿಯವರು, ಮೃತಪಟ್ಟ ಮೆಸ್ಸರ್ಸ್ ಸಂತೇಪೇಟೆ ಈರಣ್ಣ ಮತ್ತು ಶಿವನಗೆರೆ ಗಂಗಪ್ಪನವರ ಸ್ಥಳದಲ್ಲಿ ಸಿರಾ ಮ್ಯುನಿಸಿಪಾಲಿಟಿಯ ಮೆಂಬರುಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 12614.—ಮಿಸ್. 1843, ಮೆಸ್ಟರ್ ವಿ. ಯರ್. ನರಸಿಂಹಯ್ಯಂಗಾರ್‍ರು ಬೆಂಗಳೂರು ಷಹರಿನ ಮ್ಯುನಿಸಿಪಲ್ ಬೋರ್ಡಿನ ಚಾರ್ಜನ್ನು 1896ನೇ ಇಸವಿ ಮೇ 8ನೇ ತಾರೀಖಿನ ಪೂರ್ವಾಹ್ನ ಮೆಸ್ಟರ್ ಟಿ. ಟಿ. ಲೆನಾರ್ಡ್ ಸಾಹೇಬರವರಿಗೆ ವಪ್ಪಿಸಿರುತ್ತಾರೆ.

ತಾರೀಖು ನೇ ಮೇ 1896.

ನಂ. 12606.—ಮೈಸೂರ ಸರ್ವಿಸ್ ರೆಗ್ಯುಲೇಷರ್ಷಗಳ 171ನೇ ಆರ್ಟಿಕಲ್ ಮೇರೆ ಹಾಸನದ ಅಸಿಸ್ಟೆಂಟ್ ಸರ್ಜನ್ ಮೆಸ್ಟರ್ ಜಿ. ಯಲ್. ಲಕ್ಷ್ಮಣಸಾಮಿಯವರಿಗೆ, 1896ನೇ ಇಸವಿ ಮೇ 7ನೇ ತಾರೀಖಿನಾರಭ್ಯ 3 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೇ ಏಪ್ರೆಲ್ 1896, ಮೊಕ್ಕಾಂ ಮೈಸೂರ.

ನಂ. 9683.—ರ. 3741,—ಇದರಡಿಕಂಡ ಗ್ರಾಮಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಗ್ರಾಮದ ಹೆಸರು.	ಯಾವ ತಾಲ್ಲೂಕಿನಿಂದ.	ಯಾವ ತಾಲ್ಲೂಕಿಗೆ.
1. ಕೆಂಪನಪುರ ಗ್ರಾಮ (ಸರ್ವಮಾನ್ಯ)	ತಿರುಮಕೂಡ್ಲು ನರಸೀಪುರ	ಚಾಮರಾಜನಗರ
2. ಕನ್ನಗಾಲ್ ಗ್ರಾಮ (ಜೋಡಿ)	ಡಿಟೋ	ಡಿಟೋ

ನಂ. 9684.—ರ. 3741,—ಕಾಯಂಗುತ್ತಾ ಮಾರಗೊಂಡನಹಳ್ಳಿ ಕೃಷ್ಣಸಾಗರ ಗ್ರಾಮವನ್ನ ಹ್ಯೊಸ್‌ಕೋಟೆ ಸಬ್ ತಾಲ್ಲೂಕಿನಿಂದ ಬೆಂಗಳೂರು ತಾಲ್ಲೂಕಿಗೆ ವರ್ಗಾಯಿಸಿರುತ್ತೆ.

ತಾರೀಖು 1ನೇ ಮೇ 1896.

ನಂ. 9716.—ರೆ. 3758, ಸ್ 1894ನೇ ಇಸವಿಯ VIIನೇ ನಂಬರ ಲ್ಯಾಂಡ್ ಅಕ್ವಿಜಿಷರ್ ರೆಗ್ಯುಲೇಷನಿನ 6ನೇ ಸೆಕ್ಷರ್ ನಿಯಮಗಳನುಸರಿಸಿ, ಇದರಡಿ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಅರಕಲಗೂಡಿನಲ್ಲಿ ವೊಂದು ಮುಸಾಫರ್ ಬಂಗ್ಲೆಯನ್ನು ಕಟ್ಟುವ ಬಗ್ಗ್ಯಾಗಿ ಅವಶ್ಯಕವಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರುಗಳು.	ಜಮೀನು ತಪ್ಸೀಲುಗಳು.				ಚಕ್ಕು ಬಂದಿಗಳು.			
					ಸರ್ವೆ ನಂಬರ್.	ವಿವರಣೆ.	ಅವಶ್ಯಕವಾದ ಬೀಜವರಿ.	ಸರಿಯಾದ ಬೇರೀಜು.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಎ. ಗುಂ.	ರೂ. ಆ. ಪೈ.				
ಹಾಸನ	ಅರಕಲಗೂಡು	ಅರಕಲಗೂಡು	ಅರಕಲಗೂಡು	ದೊಡ್ಡನಾಯಿಕನ ಮರಿಹೊನ್ನ ಮತ್ತು ಸಣ್ಣ ಬಿನ್ ಹಾವಳಿ ಹೊನ್ನ	ಸರ್ವೆ ನಂ. 113ರ ಪೈಕಿ ಪೋಡ್ ನಂ. 2	ಖುಷ್ಕಿ	1 10	1 9 0	ಸರ್ವೆ ನಂ. 114	ಸರ್ವೆ ನಂ. 116	ಈ ಸರ್ವೆ ನಂ. 113ರ ಉಳಿದ ಬೀಜವರಿ	ಬಂಗ್ಲೇ ಕಂಪಾಉಂಡ್
				ದಾಸ ಬಿನ್ ವೆಂಕಟ, ಕೆಂಪ, ಸಣ್ಣ ಮತ್ತು ವೆಂಕಟದಾಸಿ ಬಿನ್ ತಿಪ್ಪದಾಸಿ	114	ಡಿಟ್ಟೋ	0 34	1 0 0	ಈ ನಂಬರಿನ ಉಳಿದ ಬೀಜವರಿ	ಸರ್ವೆ ನಂ. 113	ಸರ್ವೆ ನಂ. 114ರ ಹಿಸ್ಸೆದಾರರಿಗೆ ಸೇರಿದ ಜಮೀನು	ಹಾಲಿ ಮುಸಾಫರ್ ಬಂಗ್ಲೆಯ ಕಂಪಾಉಂಡ್
				ಮಹಮ್ಮದ್ದಿವಾನ್ ಬಿನ್ ಅಕಬರಸಾಬ್	ಸರ್ವೆ ನಂ. 116ರ ಪೈಕಿ ಪೋಡ್ ನಂ. 1	ಡಿಟ್ಟೋ	0 9	0 5 0	ಸರ್ವೆ ನಂ. 113	ಈ ಸರ್ವೆ ನಂ. 116ರ ಉಳಿದ ಬೀಜವರಿ	ರಹಿಮಾನ್ ಸಾಬರ ಜಮೀನು	ಅಕಬರಪಾಷಾಯವರಿಗೆ ಸೇರಿದ ಸರ್ವೆ ನಂ. 117ರ ಪೈಕಿ ಪೋಡ್ ನಂ. 1
				ಅಕಬರ್ ಪಾಷಾ ಇಸ್ಮಾಂಸಾಬ್ ಮತ್ತು ಕಲ್ಲೂರ್ ಪಾಷಾಸಾಬ್	ಸರ್ವೆ ನಂ. 117ರ ಪೈಕಿ ಪೋಡ್ ನಂ. 1	ಡಿಟ್ಟೋ	0 14	0 7 0	ಹಾಲಿ ಮುಸಾಫರಬಂಗ್ಲೆಯ ಬೇಲಿ	ಈ ಸರ್ವೆ ನಂ. 117ರ ಪೈಕಿ ಕಲ್ಲೂರ್ ಇಸೂಫ್‌ಸಾಬರ ಹಿಸ್ಸೆ ಜಮೀನು	ಸರ್ವೆ ನಂ. 116ರ ಪೋಡ್ ನಂ. 1	ರೋಡ್ ಪಕ್ಕದಲ್ಲಿರುವ ತೋಪು
					ಜುಮ್ಲಾ		2 27	3 5 0				

ತಾರೀಖು 9ನೇ ಮೇ 1896, ಮೊಕ್ಕಾಂ ಮೈಸೂರ್.

ನಂ. 9917.—ರೆ. ಫೈ. 104.—95, ತುಮಕೂರು ತಾಲ್ಲೂಕು ಅಮಲ್ದಾರ್ ಮಹಮ್ಮದ್ ರಜಾಯವರಿಗೆ, 1896ನೇ ಏಪ್ರೈಲ್ 2ನೇ ಮುಕ್ಕಾಂ 9037—ರೆ. ಫೈ. 104.—95ನೇ ನಂಬರ್ ಗವರ್ನಮೆಂಟ್ ಇಷ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಹದಿನೈದು ದಿನಗಳ ಕ್ಯಾಜುಯಲ್ ರಜಾವನ್ನ ಅವರು 1896ನೇ ಏಪ್ರೈಲ್ 14ನೇ ಮುಕ್ಕಾಂ ಲಾಗಾಯತು ಉಪಯೋಗಿಸಿಕೊಂಡು ಅದೇ ತಿಂಗಳ 21ನೇ ತಾರೀಖಿನ ಮಧ್ಯಾನ್ಹಾತ್ಪರ ಕೆಲಸಕ್ಕೆ ವಾಪಸ್ ಬಂದ ಸಬಬ್ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 9923.—ರೆ. 3817, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಯಸ್. ನರಸಿಂಹಯ್ಯಂಗಾರರಿಗೆ, 1896ನೇ ಮೇ 6ನೇ ಮುಕ್ಕಾಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 9948.—ರೆ. ಫೈ. 103.—95, ಮ್ಯಾಗಡೀ ತಾಲ್ಲೂಕು ಅಮಲ್ದಾರ್ ಏ. ತಿರುಮಲಾಚಾರ್ ಯವರಿಗೆ, 1896ನೇ ಏಪ್ರೈಲ್ 2ನೇ ಮುಕ್ಕಾಂ 9097.—ರೆ. ಫೈ. 103—95ನೇ ನಂಬರ್ ಗವರ್ನಮೆಂಟ್ ಇಷ್ತಿಹಾರನಾಮೆಯಲ್ಲಿ ಕೊಡಲ್ಪಟ್ಟಿದ್ದ ಮೂರು ದಿನಗಳ ಕ್ಯಾಜುಯಲ್ ರಜಾವನ್ನ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 11ನೇ ಮೇ 1896, ಮೊಕ್ಕಾಂ ಮೈಸೂರ್.

ನಂ. 9934.—ರೆ. 3824, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ ಡಿಸ್ಟ್ರಿಕ್ಟು 2ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಬಿ. ಕುಪ್ಪುಸಾಮಿನಾಯಿಡು ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 15ನೇ ಮೇ 1896, ಬೆಂಗಳೂರು.

ನಂ. 9973.—ಫಾ. ಫೈ. 123—95, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಫಾರೆಸ್ಟುಗಳ ಅಸಿಸ್ಟೆಂಟ್ ಕನ್ಸರ್ವೇಟರ್ ಮತ್ತು ಮೈಸೂರ ಫಾರೆಸ್ಟುಗಳ ಕನ್ಸರ್ವೇಟರ್ ಯವರಿಗೆ ಹೆಡ್‌ಕ್ವಾರ್ಟರ್ ಅಸಿಸ್ಟೆಂಟರಾದ ಮೆಸ್ಟರ್ ಸಿ. ಅಪ್ಪಯ್ಯನವರಿಗೆ, 1896ನೇ ಮೇ 13ನೇ ಮುಕ್ಕಾಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 8ನೇ ಮೇ 1896.

ನಂ. 12505—ಲೋ. ಫಂ. 257—92,—1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ, ಹಾಸನ ಟೌನ್ ಮ್ಯುನಿಸಿಪಾಲಿಟಿ ಬಜಾಯಿಸುವ ಬಗ್ಗೆ ಆವಶ್ಯಕವಾಗಿರುತ್ತವೆ:—

ಜಿಲ್ಲೆ	ತಾಲ್ಲೂಕು	ಹೋಬಳಿ	ಗ್ರಾಮ	ಹಿಡುವಳಿದಾರರ ಹೆಸರುಗಳು.	ಜಮೀನು ತಪ್ಶೀಲ್: ಸರ್ವೆ ನಂಬರು.	ವಿವರಣೆ.	ಅವಶ್ಯಕವಾದ ಬೀಜವರಿ.	ಸರಿಯಾದ ಬೇರೀಜು.	ಚಕ್ಕು ಬಂದಿಗಳು: ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಎ. ಗುಂ.	ರೂ. ಆ. ಪೈ.				
ಹಾಸನ	ಹಾಸನ	ಹಾಸನ	ಹಾಸನ	ಸೂಗಣ್ಣ ಬಿನ್ ನಿಜಲಿಂಗಯ್ಯ	226	ಖುಷ್ಕಿ.	4—22	7—8—0	ರೋಡ್	ಸರ್ವೆ ನಂ. 233	ಸರ್ವೆ ನಂ. 227	ಸರ್ವೆ ನಂ. 225
				ರಾಜಶೆಟ್ಟಿಯ ಮಗ ರುದ್ರಣ್ಣ	227	ಡಿಟೋ	3—6	5—0—0	ರೋಡ್	ಡಿಟೋ	ಡಿಟೋ 228	ಡಿಟೋ 226
				ರೇವಶೆಟ್ಟಿಯ ಮಗ ಸಿದ್ದಶೆಟ್ಟಿ ವಹಿವಾಟದಾರು ಈಶ್ವರಯ್ಯನ ಕೃಷ್ಣಪ್ಪ ಮತ್ತು ಗುಂಡೇಗವುಡ	228	ಡಿಟೋ	5—19	8—8—0	ರೋಡ್	ಸರ್ವೆ ನಂ. 233 ಮತ್ತು 232	ಸರ್ವೆ ನಂ. 229, 230 ಮತ್ತು 232	ಡಿಟೋ 227
				ಕೊಪ್ಪಲು ನರಸೇಗವುಡನ ಸಿಂಗ್ರಿ	229ರ ಪೈಕಿ 1	ಡಿಟೋ	2—25	4—4—0	ಸರ್ವೇ ನಂಬರ 229ರ ಪೈಕಿ ನಂಬರುಗಳು	ಸರ್ವೆ ನಂ. 228	ಸರ್ವೆ ನಂಬರ 229ರ ಪೈಕಿ ಮತ್ತು ಸರ್ವೆ ನಂ. 230	ಡಿಟೋ 228
				ಗುಂಡ ಬಿನ್ ತಿಮ್ಮೇಗವುಡ, ಕೊಂಡವರು ರೆವೆರೆಂಡ್ ರೀಸ್	229ರ ಪೈಕಿ 2	ಡಿಟೋ	1—15	2—0—0	ರೋಡ್	ಸರ್ವೆ ನಂ. 229ರ ಪೈಕಿ ನಂಬರು	ರೋಡ್	ಡಿಟೋ 228
				ಧರಣಯ್ಯ ಬಿನ್ ಜಿನ್ನಪ್ಪ	229ರ ಪೈಕಿ 3	ಡಿಟೋ	1—21	2—8—0	ಸರ್ವೇ ನಂಬರ 229ರ ಪೈಕಿ ನಂಬರ	ಸರ್ವೆ ನಂ. 230	ಡಿಟೋ	ಡಿಟೋ 229ರ ಪೈಕಿ
				ತಳವಾರ ಮೊಸ್ತಿ, ಲಕ್ಷ್ಮ ಬ್ಯಾಡರ ತಿಮ್ಮ	230	ಡಿಟೋ	4—27	7—8—0	ಸರ್ವೆ ನಂ. 229	ಡಿಟೋ 231	ಡಿಟೋ	ಸರ್ವೆ ನಂ. 228 ಮತ್ತು 229
				ಪುಟ್ಟಾಚಾರಿಮಗ ಸಿದ್ದಾಚಾರಿ	231	ಡಿಟೋ	4—28	8—0—0	ಡಿಟೋ 230	ಡಿಟೋ 233	ಸರ್ವೆ ನಂಬರ 170 ಮತ್ತು 175	ಸರ್ವೆ ನಂ. 232 ಮತ್ತು 233

				ವೆಂಕಟರಮಣ, ರಂಗ	232	ಡಿಟ್ಟೋ	2—13	3— 8—0	ಡಿಟ್ಟೋ 228	ಡಿಟ್ಟೋ 233	ಡಿಟ್ಟೋ 231	ಸರ್ವೆ ನಂ. 228
				ಮನ್ನಿ, ಮಲುಬಾಯಿ, ಮದ್ದುವಗ್ಯ, ಶಿವುಬಾಯಿ.	235	ಡಿಟ್ಟೋ	1—33	3— 0—0	ಡಿಟ್ಟೋ 234	ಜವನಹಳ್ಳಿ ಗ್ರಾಮದ ಯಲ್ಲಿ	ಡಿಟ್ಟೋ 236	ರೋಡು
				ಸಾವಿತ್ರಿಬಾಯಿ	236	ಡಿಟ್ಟೋ	5— 0	8— 0—0	ರೋಡ್	ಡಿಟ್ಟೋ	ಡಿಟ್ಟೋ 237	ಸರ್ವೆ ನಂ. 235 ಮತ್ತು 234
				ಮೀರಾಸಾಬಿ	237ರ ಪೈಕಿ 1	ಡಿಟ್ಟೋ	1—35	3— 4—0	ಡಿಟ್ಟೋ	ಡಿಟ್ಟೋ	ಸರ್ವೆ ನಂಬರ್ 237ರ ಪೈಕಿ ಜಮೀನುಗಳು	ಸರ್ವೆ ನಂ. 236
				ದಾವೂದ್‌ಸಾಬಿ	237ರ ಪೈಕಿ 2	ಡಿಟ್ಟೋ	3— 5	5— 4—0	ಡಿಟ್ಟೋ	ಡಿಟ್ಟೋ	ಸರ್ವೆ ನಂ. 238	ಡಿಟ್ಟೋ 237ರ ಪೈಕಿ
				ತಿಮ್ಮ ಬಿನ್ ಹೊನ್ನಬಸಪ್ಪ, ವಹಿವಾಟ್‌ದಾರ್ ಬಸಪ್ಪ ಮಾತ್ರ	238ರ ಪೈಕಿ 1	ಡಿಟ್ಟೋ	1—27	2—12—0	ಡಿಟ್ಟೋ	ಸರ್ವೆ ನಂ. 238ರ ಪೈಕಿ	ಗ್ರಾಮ ನಿವೇಶನ	ಡಿಟ್ಟೋ 237
				ಮನ್ನಿ, ಮಲುಬಾಯಿ, ಮದ್ದುವಗ್ಯ, ಶಿವುಬಾಯಿ.	238ರ ಪೈಕಿ 2	ಡಿಟ್ಟೋ	3— 1	5— 4—0	ಸರ್ವೆ ನಂಬರ್ 238ರ ಪೈಕಿ.	ಸರ್ವೆ ನಂ. 240 ಮತ್ತು 239	ಡಿಟ್ಟೋ	ಡಿಟ್ಟೋ
ಡಿಟ್ಟೋ	ಡಿಟ್ಟೋ	ಡಿಟ್ಟೋ	ಡಿಟ್ಟೋ	ಜಲಗೂರ್ ವೆಂಕಟನ ಮಗ ವೆಂಕಟೇಶ, ತಿಮ್ಮಯಲ್ಲಶೆಟ್ಟಿ	239ರ ಪೈಕಿ 1	ಡಿಟ್ಟೋ	1— 5	1—12—0	ಸರ್ವೆ ನಂ. 237 ಮತ್ತು 238	ಸರ್ವೆ ನಂ. 239ರ ಪೈಕಿ	ಸರ್ವೆ ನಂ. 240	ಸರ್ವೆ ನಂ. 237 ಮತ್ತು ಜವನಹಳ್ಳಿ ಗ್ರಾಮದ ಯಲ್ಲಿ
				ಕನಿಸಿದ್ದಣ್ಣ	239ರ ಪೈಕಿ 2	ಡಿಟ್ಟೋ	1— 6	1—12—0	ಸರ್ವೆ ನಂಬರ್ 239ರ ಪೈಕಿ	ಸರ್ವೆ ನಂ. 240	ಡಿಟ್ಟೋ	ಜವನಹಳ್ಳಿ ಗ್ರಾಮದ ಯಲ್ಲಿ
				ತಿಮ್ಮನಾಯಕನ ವೆಂಕಟರಮಣ, ಕೇಶವನಾಯಕ	240ರ ಪೈಕಿ 1	ಡಿಟ್ಟೋ	2—20	4— 0—0	ಸರ್ವೆ ನಂ. 239 ಮತ್ತು 240ರ ಪೈಕಿ	ರೋಡು	ಗ್ರಾಮ ನಿವೇಶನ	ಡಿಟ್ಟೋ
				ತಿಮ್ಮ, ಬಸಪ್ಪ, ವಹಿವಾಟ್‌ದಾರ್ ಬಸಪ್ಪ ಮಾತ್ರ	240ರ ಪೈಕಿ 3	ಡಿಟ್ಟೋ	0—37	1— 8—0	ಸರ್ವೆ ನಂ. 238	ಸರ್ವೆ ನಂ. 240ರ ಪೈಕಿ	ಡಿಟ್ಟೋ	ಸರ್ವೆ ನಂ. 239
				ಬಸಪ್ಪ	240ರ ಪೈಕಿ 2	ಡಿಟ್ಟೋ	2— 2	3— 8—0	ಸರ್ವೆ ನಂಬರ್ 240ರ ಪೈಕಿ	ಡಿಟ್ಟೋ	ಡಿಟ್ಟೋ	ಡಿಟ್ಟೋ
				ದಫೇದಾರ್ ಇಮಾಂಸಾಬ್	30	ಡಿಟ್ಟೋ	6—27	9— 8—0	ಹಾಸನದ ಯಲ್ಲಿ	ಸರ್ವೆ ನಂ. 29	ಹಾಸನದ ಯಲ್ಲಿ	ರೋಡು
							61—14	98— 4—0				

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ಮ ರವಿನ್ಯೂ

398

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಪಿಷ್ ಆದ್ದು. [ನಂ. 20.

ಬೆಂಗಳೂರು, ಗುರುವಾರ, ಮೇ ತಾ॥ 21, ಸನ್ 1896.

IIನೇ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಹೊರಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಷಿಯವರ ಕಾರ್ಖಾನೆ	ಒಂದಕ್ಕೆ 150
2	ಇಂಗ್ಲಾಂಡ್ ಪೋರ್ಟರು ಬ್ರದರ್ಸಿನ ಡಿಟೋ	,, 170
1	ಮದ್ರಾಸ್ ಓಕ್ಸರವರ ಡಿಟೋ	
1	ಡಿಟೋ ಡಿಟೋ ಡಿಟೋ	
1	ಡಿಟೋ ಬೋಟ್ಯಾಮರವರ ಡಿಟೋ	

ಖರೀದಿದಾರು ವ್ಯಾಪಾರ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಸೇಕಡಾ 1
ಕಳೆಯಲ್ಪಡುವದು.

ಯಲ್. ರಿಕೆಟ್

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 8ನೇ ಮೇ ಸನ್ 1896ನೇ ಇಸವಿ.

ಸನ್ 1896ನೇ ಇಸವಿ ಜುಲೈ 1ರ ಲಾಗಾಯತು ಸನ್ 1897ನೇ ಇಸವಿ ಜೂನ್ 30ರವರಿಗೆ, ಆ ಎರಡು ದಿವಸಗಳೂ ಸೇರಿ 12 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವುದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸನ್ 1896ನೇ ಇಸವಿ ಜೂನ್ 8ನೇ ಸೋಮವಾರ ಹಗಲು 1 ಘಂಟೆಯವರಿಗೆ, ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಘಂಯಿಷ್ ಮಾಡಿದೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್ಭಾಗದಲ್ಲಿ ಬರೆದಿರಬೇಕಾದ ಮೇಲ್ವಿಳಾಸವೇನಂದರೆ,

"I. ಕುರೀ ಮಾಂಸದ ಸರಬರಾಯಿ ದರಖಾಸ್ತು"

"II. ಸವದೇ ಸರಬರಾಯಿ ದರಖಾಸ್ತು."

4. ಕುರೀ ಮಾಂಸದ ಸರಬರಾಯಿಗೆ 75 ರೂಪಾಯಿ, ಸವದೇ ಸರಬರಾಯಿಗೆ 50 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವದಿಲ್ಲ.

5. ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವುದಕ್ಕೆ ಇಷ್ಟಪಟ್ಟಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಒಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಒಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಸೂಪರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಾ ಖರ್ಚು.

I. ಮೂಳೆ ಇಲ್ಲದ ಮಾಂಸ—20,000 ಪೌಂಡು.

II. ಒಣಗಿದ ಸವದೆ—ಖೈದಿಗಳ ಕೈಲಿ ಕಡಿಸತಕ್ಕದ್ದು, ತುಂಡುಗಳ ಪ್ರಮಾಣ ಒಂದು ಮೊಳವುದ್ದವೂ 1½ ಲಾಗಾಯತು 3 ಯಿಂಚು ಘಾತ್ರವಾಗಿಯೂ ಇರತಕ್ಕದ್ದು 400,000 ಪೌಂಡುಗಳು.

ಪದಾರ್ಥಗಳು ಮೇಲೆ ಕಂಡ ಪರಿಮಾಣದ ಮೇಲೆ ಇಷ್ಟಿಷ್ಟೇ ಆಗಬೇಕೆಂದು ಖಾತರಿಯಾವುದೂ ದೊರೆಯುವುದಿಲ್ಲ.

7. ಸೂಪರಿಂಟೆಂಡೆಂಟರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ವುಳಸಿಕೊಂಡಿದ್ದಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ್ದ ಠೇವಣೀ ಮೊಬಲಗು ಇಟ್ಟುಕೊಳ್ಳಲ್ಪಡುವುದು; ಮತ್ತು ಅವರ ದರಖಾಸ್ತು ಮಂಜೂರಾಗಿದೆ ಯೆಂದು ಅವರಿಗೆ ತಿಳುಹಿಸಿದ ಒಂದು ವಾರದೊಳಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರದು ಕೊಡದೇ ಹೋದರೂ ಸರಿಯೆ, ಅಥವಾ ಕುರೀ ಮಾಂಸಕ್ಕೆ 150 ರೂಪಾಯಿ, ಸವದೆಗೆ 100 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಠೇವಣೀ ಮೊಬಲಗು ಸಿವಾಯಿ ಜಮೆಯಾಗಿ ತೆಗೆದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ರೇ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಸ್ಟೋರ್ ರೂಂ ಎಂಬ ಒಂದು ಉಗ್ರಾಣವನ್ನು ಸವದೆ ಇಜಾರೆದಾರರ ವಶಕ್ಕೆ ಕೊಡಲಾದೀತು; ಆತನು ಅದರಲ್ಲಿ ಸವುದೆ ಯ... ಇಟ್ಟುಕೊಳ್ಳತಕ್ಕದ್ದು, ಮತ್ತು ಅದರಲ್ಲಿ ಯಾವಾಗ್ಯೂ ಒಂದು ತಿಂಗಳಿಗೆ ಕಡಮೆ ಇಲ್ಲದಂತೆ ಸರಬರಾಯನ್ನು ಇಟ್ಟಿರಬೇಕು. ...ಂಸನ್ನು ಪ್ರತಿ ದಿನವೂ ಬೆಳಿಗ್ಗೆ 7 ಘಂಟೆ ವಳಗಾಗಿ ಜೈಲ್‌ನಲ್ಲಿ ಸಿದ್ಧಪಡಿಸತಕ್ಕದ್ದು.

...ಂಟ್ರಾಕ್ಟನ್ನು ಷಿಕ್ಮಿ ಇಜಾರೆಯಾಗಿ ಕೊಡಕೂಡದು.

...ಷರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ...ಮ್ಮು, ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮುನಾಸಬು ಆರಿತು 50 ರೂಪಾಯಿಗೆ ...ು ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿ ಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿ...ಾಗಿ ತೆಗದುಕೊಳ್ಳಬಹುದು.

...ವಾಗಿ ನಡೆದ ಸಂಗತಿಗಳಲ್ಲೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಫೈಸಲೇ

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರ ಜೈಲ್ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

17. ಇಜಾರೆದಾರರು ತಪ್ಪಿ ಹೋಗುವುದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತಿಮಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

ಡಿ. ಎ. ಜೋಶಿ,
ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 13ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜನಿಗೆ ಸೇರಿದ ಗೌರೀಬಿದನೂರು ತಾಲ್ಲೂಕಿನಲ್ಲಿ ಅಫಿಷಿಯಲ್ ಸಾಲ್ ಅಂದರೆ 1896ನೇ ಇಸವಿ ಜುಲೈ ಲಾಗಾಯತು 1897ನೇ ಇಸವಿ ಜೂನ್ ಆಖೈರವರೆಗೆ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯನ್ನ ಸದರಿ ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಮೇ ಮಾಹೆ 28ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

II. ಸದರಿ ಹರಾಜು ಸದರಿ ತಾರೀಖು ದಿವಿ 11 ಘಂಟೆಗೆ ಅಮಲ್ದಾರ್ ಯಾ ಶಿರಸ್ತೇದಾರ್ರಿಂದಲಾಗಲಿ ಹರಾಜು ಪ್ರಾರಂಭ ಮಾಡಲ್ಪಡುವದು.

III. ಸದರಿ ಹರಾಜು ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫೀಸರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

IV. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯೋ ನಮೂದಿಸಬೇಕು ಮತ್ತೊಬ್ಬರಿಗೋಸ್ಕರವಾದರೆ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಅಂದರೆ ಅವರ ದಸ್ತಖತ್ತು ಇರತಕ್ಕ ಕಾಗದವನ್ನ ಹಾಜರ್ಮಾಡಬೇಕು ಇಲ್ಲವಾದರೆ ಅಂಥಾವರ ಸವಾಲನ್ನ ಅಂಗೀಕರಿಸುವದಿಲ್ಲ.

ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗು ಡಿಪಾಜಿಟ್ ಇಡಬೇಕು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಕ್ರಯದ ಮೊಬಲಗ್ ಮೇಲೆ ರೂಪಾಯಿ 1ಕ್ಕೆ 1 ಆಣೆ ಮೇರಿಗೆ ಆಗುವ ಲೋಕಲ್‌ಸೆಸ್ ದೇಖೀಲ್ ಬಾಕಿ ಮೊಬಲಗನ್ನ ಪಾವತಿ ಮಾಡಬೇಕು ಹಾಗೆ ಡಿಪಾಜಿಟ್ ಮೊಬಲಗೇ ಆಗಲಿ ಪೂರಾ ಮೊಬಲಗೇ ಆಗಲಿ ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ಕೊಟ್ಟು ಬಾಕಿ ಮೊಬಲಗು ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ದಂಡವಾಗಿ ಸರಕಾರಕ್ಕೆ ಸೇರಿಸಿಕೊಂಡು ಹರಾಜು ಹಕ್ಕುದಾರಿಯನ್ನು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಡಿಸಿ ಪುನಹ ಹರಾಜು ಮಾಡಲ್ಪಡುವನು.

ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳನ್ನ ಅವನ ಅನುಮತಿ ಶಿವಾಯಿ ತೆಗದುಕೊಳ್ಳಕೂಡದು ಈ ಜಮೀನಿನ ಹಿಡುವಳಿದಾರನಾದರೂ ಸ್ವಂತ ಉಪಯೋಗಕ್ಕೋಸ್ಕರವಾಗಿ ಜಮಾಯಿಸತಕ್ಕದ್ದಲ್ಲ ಆದರೆ ಜಮಾಯಿಸತಕ್ಕ ಕಲ್ಲುಗಳನ್ನ ಇಜಾರೇದಾರನಿಗೆ ಕೊಡಬೇಕೇ ಹೊರ್ತು ಮತ್ತೊಬ್ಬರಿಗೆ ಕೊಡತಕ್ಕದ್ದಲ್ಲ.

ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರನ ಖರಾಬ್ ಹಕ್ಕಿನಲ್ಲಿ ಪ್ರವೇಶಿಸಕೂಡದು ಇಜಾರೆದಾರನಿಗೆ ಇಜಾರೆ ಮಾಡಿಕೊಂಡು ಇರುವ ಪ್ರದೇಶದಲ್ಲಿ ಇರತಕ್ಕ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕು ಮಾತ್ರ ಇರತಕ್ಕದ್ದಾಗಿರುತ್ತೆ ಪರಂತು ಬಂಜರು ಜಮೀನುಗಳನ್ನ ಸಾಗುವಳಿ ಬಗ್ಯೆ ಕೊಡುವದಕ್ಕೋಸ್ಕರ ಬರುವ ದರಖಾಸ್ತುಗಳಿಗೆ ಇಜಾರೆದಾರನ ಅಭ್ಯಂತರವೇನೂ ಇಲ್ಲ.

ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನ ಅಗಿಯಕೂಡದು ಬಂದು ವ್ಯಾಳೆ ಅಗದಲ್ಲಿ ಸಾಗುವಳಿ ಲಾಯಖಾಗುವಂತೆ ಗುಣಿಗಳನ್ನ ಮುಚ್ಚಿಸಬೇಕು ಇಜಾರೆದಾರನು ಯಾವ ಪ್ರದೇಶದಲ್ಲಿ ಜಮಾಯಿಸುತ್ತಾನೆಯೋ ಗ್ರಾಮ ಕಲ್ಲಿನ ಮೊತ್ತ ಯಾವ ಸ್ಥಳಕ್ಕೆ ರವಾನೆ ಮಾಡುತ್ತಾನೋ ಈ ವಗೈರೆ ತಪ್ಸೀಲ್ ಕಂಡು ಅಮಲ್ದಾರ್ರಿಂದ ಮಾಫಿ ಲೈಸೆನ್ಸ್ ಪಡದು ರವಾನಿಸಬೇಕು ಲೈಸೆನ್ಸ್ ಇಲ್ಲದೆ ರವಾನಿಸಕೂಡದು ಈ ಮೇರಿಗೆ ತಿಳಿಯಪಡಿಸಿ ಇದೆ.

ಬಿ. ಜಿ. ಕೃಷ್ಣಯ್ಯಂಗಾರ್,
ಅ|| ಡೆಪ್ಯುಟಿ ಕಮ್ಮಿಷನರ.

ಮೈಸೂರ ಡಿಸ್ಟ್ರಿಕ್ಟು.

ಪ್ರಕಟನೆ.

ತಾರೀಖು 6ನೇ ಮೇ 1896.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿಯಲ್ಲಿ ಕಂಡ ಹೋಬಳಿಗಳಲ್ಲಿ ಸಂದಲ್ ಮರಗಳನ್ನು ಬೇರು ಸಮೇತವಾಗಿ ಕೀಳಿಸಿ ಮೊರಟು ಕೆತ್ತನೆ ಮಾಡಿ ಆಯಾ ಹೋಬಳಿಗಳಿಗೆ ಬಾಜೂದಲ್ಲಿ ತೋರಿಸಿರುವ ಕೋಠಿಗಳಿಗೆ 1896ನೇ ಇಸವಿ ಅಕ್ಟೋಬರ್ ಆಖೈರ್ ವಳ

ಗಾಗಿ ಸಾಗಿಸುವದಕ್ಕೋಸ್ಕರ ದರಖಾಸ್ತುಗಳನ್ನು ಮೈಸೂರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು 1896ನೇ ಇಸವಿ ಜೂನ್ ತಾರೀಖು 15ರ ವರಿಗೆ ತೆಗದುಕೊಳ್ಳುತ್ತಾರೆ.

ತಾಲ್ಲೂಕು.	ಹೋಬಳಿ.	ಕೋಠಿ.	ಮೊತ್ತ.
ಹುಣಸೂರು	ಬೆಟ್ಟದಪುರ	ಹುಣಸೂರ್	50 ಟನ್
ಹೆಗ್ಗಡದೇವನಕೋಟೆ	ಚಿಕ್ಕಹಳ್ಳಿ	ಡಿಟೋ	50 ಟನ್
ಗುಂಡ್ಲುಪೇಟೆ	ರಾಘವಾಪುರ	ಶ್ರೀರಂಗಪಟ್ಟಣ	25 ಟನ್
ಚಾಮರಾಜನಗರ	ಸಂತೆಮರಹಳ್ಳಿ	ಡಿಟೋ	25 ಟನ್
ಮೈಸೂರು	ಸಿಂದವಳ್ಳಿ	ಡಿಟೋ	25 ಟನ್

2. ತಮಾಂ ದರಖಾಸ್ತುಗಳೂ "ಫಲಾನಾ ಕೋಠಿಗೆ ಫಲಾನಾ ಹೋಬಳಿಯಿಂದ ಸಂಡಲ್ ಮರಗಳನ್ನು ಕೀಳಿಸಿ ಪ್ರೊರಟ ಕೆತ್ತನೆಯಿಂದ ಸಾಗಿಸಲು ದರಖಾಸ್ತು" ಯೆಂಬದಾಗಿ ಮೇಲೆ ವಿಳಾಸ ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಪ್ರತಿ ಒಂದು ಹೋಬಳಿಗೂ 100 ರೂಪಾಯಿ ಮತ್ತು ಇತರ ತಾಲ್ಲೂಕು ಪ್ರತಿ ಒಂದು ಹೋಬಳಿಗೂ 50 ರೂಪಾಯಿ ಬೆಲೆಯುಳ್ಳ ಕರೆನ್ಸೀ ನೋಟುಗಳಿ ಯಾ ಪ್ರೋನೋಟುಗಳಿ ರವಾನಿಸಬೇಕು. ದರಖಾಸ್ತುಗಳು 1896ನೇ ಇಸವಿ ಜೂನ್ 16ನೇ ತಾರೀಖಿನಲ್ಲಿ ಹಾಜರು ಇರತಕ್ಕ ದರಖಾಸ್ತುದಾರ್ರ ಯದುರಿಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ವಡೆಯಲ್ಪಟ್ಟ ಕರೆನ್ಸೀ ನೋಟುಗಳು ವಾಪಸು ಮಾಡಲ್ಪಡುವವು.

3. ಪ್ರತಿ ದರಖಾಸ್ತಿನಲ್ಲಿಯೂ ಮರಗಳನ್ನು ಕೀಳಿಸಿ ಪ್ರೊರಟು ಕೆತ್ತನೆ ಮಾಡಿಸುವದಕ್ಕೆ ಸರಮರಕ್ಕೆ ಮತ್ತು ತಲೆ ಕೊನೆಗಳಿಗೆ ಪ್ರತ್ಯೇಕವಾಗಿ ದರ ಟನ್ ಒಂದಕ್ಕೆ ಇಷ್ಟೆಂದು ದರ ನಮೂದಿಸಬೇಕು. ಮತ್ತು ಕೋಠಿಗೆ ರವಾನೆಗೆ ದರ ಟನ್ ಒಂದಕ್ಕೆ ಜಂಗಲ್ ಮೈಲಿ ಒಂದಕ್ಕೆ ಇಷ್ಟುದರ ವೆಂತಲೂ ಮತ್ತು ಹೈ ರೋಡು ಮೈಲಿ ಒಂದಕ್ಕೆ ಯಿಷ್ಟು ದರ ವೆಂತಲೂ ಪ್ರತ್ಯೇಕವಾಗಿ ನಮೂದಿಸಬೇಕು.

4. ಯೆಲ್ಲಾ ಮರಗಳೂ ತಾಯಿಬೇರು ಕಾಲುಬೇರು ಮತ್ತು ಪಕ್ಕದ ಬೇರುಗಳ ಜೊಂದಿಗೆ ಕೀಳಿಸಲ್ಪಡಬೇಕು. ಜಮೀನಿನಲ್ಲಿ ಚೇಗು ಇರತಕ್ಕ ಮರಗಳು ಯಾವದೂ ಬಿಡಲ್ಪಡಕೂಡದು. ಮರಗಳ ರೆಂಬೆಗಳು ಕೊಡ್ಲಿಯಿಂದ ಕತ್ತರಿಸಲ್ಪಡಕೂಡದು. ಗರಗಸದಿಂದ ಕೊಯ್ಯಲ್ಪಡಬೇಕು. ಬೇರಿನಲ್ಲಿ ಇರತಕ್ಕ ಮಣ್ಣು ಮತ್ತು ಕಲ್ಲು ಚನ್ನಾಗಿ ತೆಗೆಯಲ್ಪಡಬೇಕು. ಮರಗಳ ಸಿಪ್ಪೆ ಮತ್ತು ಬಿಳೀ ಚಕ್ಕೆಯನ್ನು ಬಹಳ ಹುಷಾರಿನಿಂದ ಮೊದಲು ಮಚ್ಚು ಕತ್ತಿಯಿಂದ ಕೆತ್ತಿ ನಂತರ ಒಳಗಿನ ಚೇಗು ಪೋಲಾಗದಂತೆ ಬಾಚಿಯಿಂದ ಕೆತ್ತಬೇಕು. ಮರದ ಚೇಗಿನ ಮೇಲೆ ಯಾವ ಸಂದರ್ಭದಲ್ಲೂ ಕಾಲಂಗುಲ ದಪ್ಪಕ್ಕಿಂತ ಜಾಸ್ತಿಯಾಗಿ ಬಿಳೀ ಮರ ಬಿಡಕೂಡದು. ಬುಕಣಿ ಮತ್ತು ಚೇಗು ಇರತಕ್ಕ ಚಕ್ಕೆ ಮರಗಳಜೊತೆಲೇ ಸಾಗಿಸಲ್ಪಡಬೇಕು.

5. ಒಂದು ಅಂಗುಲಕ್ಕಿಂತ ಜಾಸ್ತಿಯಾಗಿ ಚೇಗುವುಳ್ಳ ಸಿಪ್ಪೆ ತಲೆಗಳು ಜಂಗಲ್‌ಗಳಲ್ಲಿ ಬಿಡಕೂಡದು. ಪ್ರೊರಟ ಕೆತ್ತನೆ ಮಾಡದೆ ಹಾಗೆಯೇ ಕೋಠಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಚಾರ್ಜ್ ಮಾತ್ರ ಬಾಬತಿ ಮಾಡಲ್ಪಡುತ್ತೆ.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಪ್ರತಿ ಮಾಹೆಯಲ್ಲೂ ಯಿಷ್ಟು ಮೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕ ಮಾಡುತ್ತಾರೋ ಅಷ್ಟು ಮೊತ್ತವನ್ನು ಖಂಡಿತವಾಗಿ ಕೋಠಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಮೊಕರರ್ಮಾಡಲ್ಪಡುವ ಪೆನಾಲ್ಟಿಗೆ ಗುರಿಯಾಗತಕ್ಕದ್ದು.

7. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದು ಕೊಡುವ ಕರಾರು ಮೇರಿಗೆ ಕ್ರಮವಾಗಿ ನಡೆದುಕೊಳ್ಳುವ ಒಗ್ಯೆ ಜಾಮೀನ್ ತರೀಕ್ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಪ್ರತಿ ಒಂದು ಹೋಬಳಿಗೆ 200 ರೂಪಾಯಿನ ಡಿಪಾಜಿಟ್ ಮತ್ತು ಇತರ ತಾಲ್ಲೂಕುಗಳ ಪ್ರತಿ ಒಂದು ಹೋಬಳಿಗೆ 100 ರೂಪಾಯಿನ ಡಿಪಾಜಿಟ್ ಕಟ್ಟಬೇಕು. ಮೇಲ್ಕಂಡ ಶರತ್ತುಗಳ ಮೇರೆ ನಡಿಯದೆ ತಪ್ಪಿದಲ್ಲಿ ಲೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಛಾಪಾ ಕಾಗದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

9. ಸಂದಲ್ ಮರಗಳ ಚುನಾಯಿಸೋಣ, ಕೀಳುವಿಕೆ ಪ್ರೊರಟ ಕೆತ್ತನೆ ಮತ್ತು ಆದೇವಿಷಯಗಳಲ್ಲ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮಾಡುವ ರೂಲ್ಸ್ ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿ ಇರತಕ್ಕದ್ದು.

10. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ತಮ್ಮ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕನ್ಸರ್ವೇಟರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

11. ಪ್ರೊದ್ದೇಶಿಸುವ ಕಂಟ್ರಾಕ್ಟುದಾರನು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ತಾರೀಖು 5ನೇ ಮೇ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರ್ ಡಿಸ್ಟ್ರಿಕ್ಟಿಗೆ ಶೇರಿದ ಇದರಡಿ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರ್ ಜಮೀನುಗಳಲ್ಲಿಯೂ, ಅಮೃತಮಹಲ್ ಕಾವಲುಗಳಲ್ಲಿಯೂ, ಹಳೆ ಮತ್ತು ಹೊಸ ಡಿಮಾರ್ಕೇಷನ್ ಲೈನುಗಳ ಮಧ್ಯೆ ಇರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ, ಗ್ರಾಮ ಜೇಲಿಗಳ ಅಮರಾಯಿ, ಮತ್ತು ಅಮರಾಯಿ ಜೇಲಿಗಳಲ್ಲಿ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1896ನೇ ಇಸವಿ ಜುಲೈ ಮಾಹೆ 1ನೇ ತಾರೀಖು ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿಯಾಗಲಿ ಅಥವಾ ಹೋಬಳಿವಾರಾಗಿಯಾಗಲಿ ಸರಕಾರಕ್ಕೆ ಅನುಕೂಲವಾಗುವ ರೀತಿಯಾಗಿ ಈ ಕೆಳಗೆ ವಿವರಿಸಿರುವ ಆಫೀಸರವರಿಂದ ಈ ಕೆಳಗೆ ಕಂಡ ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು.

ಸೂಚನೆ:—ಫಾರೆಸ್ಟ್ ಪ್ಲಾಂಟೇಷನ್‌ಗಳೂ, ಸಂಪಲ್ ಮತ್ತು ಫಾರೆಸ್ಟು ರಿಪ್ರೊಡಕ್ಷನ್ ಬ್ಲಾಕುಗಳೂ, ಇದಕ್ಕೆ ಶೇರಿ ಇರುವದಿಲ್ಲ.

ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡುವ ಆಫೀಸರವರು.
ಮೈಸೂರು ..	10 6 96	ಮೈಸೂರ್ ಡಿಸ್ಟ್ರಿಕ್ಟು ಆಫೀಸ್ ಬಳಿ.	ಡೆಪ್ಯುಟಿ ಕಮ್ಮಿಷನರ್ ಸಾಹೆಬರವರು.
ಯಡತೊರೆ ..	ಡಿಟೋ	ಡಿಟೋ	ಡಿಟೋ
ಹುಣಸೂರು ..	ಡಿಟೋ	ಡಿಟೋ	ಡಿಟೋ
ಹೆಗ್ಗಡದೇವನಕೋಟೆ ..	ಡಿಟೋ	ಡಿಟೋ	ಡಿಟೋ
ಗುಂಡ್ಲುಪೇಟೆ ..	ಡಿಟೋ	ಡಿಟೋ	ಡಿಟೋ
ಚಾಮರಾಜನಗರ ..	ಡಿಟೋ	ಡಿಟೋ	ಡಿಟೋ
ನಂಜನಗೂಡು ..	ಡಿಟೋ	ಡಿಟೋ	ಡಿಟೋ
ತಿ|| ನರಸೀಪುರ ..	ಡಿಟೋ	ಡಿಟೋ	ಡಿಟೋ
ಮಂಡ್ಯ ..	13 6 96	ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸಿನಲ್ಲಿ.	ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರವರು.
ಮಳವಳ್ಳಿ ..	ಡಿಟೋ	ಡಿಟೋ	ಡಿಟೋ
ಶ್ರೀರಂಗಪಟ್ಟಣ ..	ಡಿಟೋ	ಡಿಟೋ	ಡಿಟೋ
ಕೃಷ್ಣರಾಜಪೇಟೆ ..	ಡಿಟೋ	ಡಿಟೋ	ಡಿಟೋ
ನಾಗಮಂಗಲ ..	ಡಿಟೋ	ಡಿಟೋ	ಡಿಟೋ

ಹುಟುವಳಿ ತಪ್ಸೀಲ್.

1. 1 ತಾರೇಕಾಯಿ, 2 ಶೀಗೇಕಾಯಿ, 3 ಅರಟವಾಳದ ಕಾಯಿ, 4 ದಿಂಡಿಗದಗೋಂದು, 5 ಕಾಡುಅರ್‍ಶಿನ, 6 ಜೇನುಮೇಣ, 7 ಜೇನುತುಪ್ಪ, 8 ಕಪಿಲಾರಂಗು, 9 ಪತಂಗ, 10 ಮಡ್ಡಿ, 11 ಚಿಲ್ಲದ ಬೀಜ, 12 ಹಾಲುಮಡ್ಡಿ, 13 ಜಗಚೀಬೀಜ, 14 ಹೊಂಗೇಬೀಜ, 15 ಗೇರುಬೀಜ, 16 ಆವರಿಕೆಗೋಂದು, 17 ಸಾರಗದಕೊಂಬು, 18 ಗುಗ್ಗಳ, 19 ಅಳಲೇಕಾಯಿ, 20 ಜೇಲದಹಣ್ಣು, 21 ಅರಗು, (ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ತಾಲ್ಲೂಕುಗಳದು ವಿನಹ) 22 ಶೀತಾಫಲದ ಹಣ್ಣು, 23 ಪಂಡೆನಾರು.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡಲೆ ಹರಾಜು ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫೆ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1896ನೇ ಜುಲೈ ತಾರೀಖು 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು. ಮತ್ತು ಕಂಟ್ರಾಕ್ಟು ಮೊಬಲಗ ಪೈಕಿ ಉಳಿದ ಮೊಬಲಗನ್ನೂ ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಮಂತೆ ಆಗುವ ಲೋಕಲ್‌ಸೆಸ್ ಮೊಬಲಗನ್ನೂ ಸಹ ಮೂರು ಸಮನಾದ ಖಿಸ್ತುಗಳಲ್ಲಿ ಅಂದರೆ—

1896ನೇ ಡಿಸೆಂಬರ್ 1ನೇ ತಾರೀಖು.

1897ನೇ ಜನವರಿ 1ನೇ ತಾರೀಖು.

1897ನೇ ಫೆಬ್ರುವರಿ 1ನೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲುಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ 6 ರೂಪಾಯಿ ಮೇರೆ ಬಡ್ಡಿ ಕಟ್ಟಲ್ಪಡುತ್ತೆ. ಮತ್ತು ಮೊಬಲಗನ್ನು ಅವನ ಆಸ್ತಿಯಿಂದ ವಿಲೇ ಮಾಡಿಕೊಳ್ಳುತ್ತೆ.

4. ಕಂಟ್ರಾಕ್ಟುದಾರನು ಯಾವ ಒಂದು ಖಿಸ್ತನ್ನು ಪಾವತಿಮಾಡದೆ ತಪ್ಪಿದರೂ, ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1897ನೇ ಜೂನ್ ಆಖೈರುವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮಾಯಿಸುವದಕ್ಕೂ ಹರಾಜು ಮಾಡಲ್ಪಡುವದು; ಅಥವಾ ಅಮಾನಿಯಲ್ಲಿ ರೂಢಿಸಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಆದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವನು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರಪಟ್ಟ ಹಕ್ಕುದಾರಿ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟ್ಮೆಂಟ್.

ನೋಟಿಫಿಕೇಷನ್.

ತಾರೀಖು 1ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರ ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟ್ ಬಾಬತು ಈ ಕೆಳಗೆ ವಿವರಿಸಿರುವ ಪಸಾರೆ ಜಿನಸಿಗಳು ಸರ್ 1896ನೇ ಇಸವಿ ಮೇ ತಾರೀಖು 25ರಲ್ಲು ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರಿಂದ ಮೈಸೂರು ವುಡಿಯಾರಡಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸೀ ತಪ್ಸೀಲ್.	ಸುಮಾರು ಮೊತ್ತ.	
	ಮಣ.	ಪಾವ್.
ಜೇನುಮೇಣ	6	7
ಜೇನುತುಪ್ಪ	3	24
ಅಳಲೇಕಾಯಿ	1,500	..
ಸಾಗನಕೊಂಬು	9	13
ದಿಂಡಿಗದಗೋಂದು	39	23
ಅರಗು	100	..
ಶೀಗೇಕಾಯಿ	20	..
ಕಾಡಮೇಕೆ ಕೊಂಬು	1	..

ಷರತ್ತು.—1887ನೇ ಇಸವಿ ಜೂನ್ 18ನೇ ಮರ್ಕುಂ ಮೈಸೂರ ಗೆಜೆಟಿ 287—288ನೇ ಪೇಜಿನಲ್ಲಿ ಛಾಯಿಷ್ ಮಾಡಿರುವ 1887ನೇ ಇಸವಿ ಜೂನ್ 11ನೇ ಮರ್ಕುಂ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ನೋಟಿಫಿಕೇಷನ್ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 18ನೇ ಏಪ್ರಿಲ್ 1896.

ಸ್ 1896–97ನೇ ಸಾಲಿಗೆ ಬಗಿನಿ ಶೇಂದಿ ಬಾಬತು ಗ್ರಾಮವಾರು ಹರಾಜು ಇಸ್ತಿಹಾರ್.

ಇದಕ್ಕೆ ಲಗ್ಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಆಯಾ ಗ್ರಾಮಗಳಲ್ಲಿ, 12 ತಿಂಗಳು ಅಂದರೆ ಸ್ 1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಬಗಿನಿ ಮರದ ಶೇಂದಿಯನ್ನು ಇಳಿಸಿ ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಹಕ್ಕು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಂದ ಯಾ ಇದಕ್ಕಾಗಿ ಸದರೀಯವರಿಂದ ನೇಮಿಸಲ್ಪಡಬಹುದಾದವರಿಂದ ಆಯಾ ಹೋಬಳಿ ಕಸಬಾ ಗ್ರಾಮಗಳಲ್ಲಿ ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ವಳಪಟ್ಟು ಹರಾಜು ಹಾಕಲ್ಪಡಲೂ ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜು ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಆ ಮಾರನೇ ದಿನಗಳಲ್ಲಿಯೂ ಹರಾಜು ಹಾಕಲ್ಪಡುವವು. ಮೇಲ್ಕಂಡ ಗ್ರಾಮವಾರಿಗೆ ದರಖಾಸ್ತುಗಳೇನೂ ಬಾರದೆ ಹೋದರೆ ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಅಂಥಾ ಗ್ರಾಮಗಳನ್ನು ಅಮಾನಿಯಾಗಿ ರೂಢಿಸುವದಕ್ಕೂ ಅಥವಾ ಬಗನಿ ಏನೂ ಇಲ್ಲವೆಂಬ ಭಾಗ ದೃಢಪಟ್ಟಲ್ಲಿ ಹರಾಜಿನಿಂದ ವಿನಾಯಿಸುವದಕ್ಕೂ ಸ್ವತಂತ್ರರಾಗಿ ಇರುತ್ತಾರೆ.

2. ಮೇಲೆ ವಿವರಿಸಲ್ಪಟ್ಟಿರುವ ಗ್ರಾಮಗಳ ಒಟ್ಟು ಸ್ವಾತಂತ್ರ್ಯದ ಹಕ್ಕು ಹರಾಜು ಚಡ ಸವಾಲ್‌ದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ವಳಪಟ್ಟು ಸದರೀ ಹಕ್ಕು ಕೊಡಲ್ಪಡುವದು. ಡೆಪ್ಯುಟಿ ಕಮಿಷನರವರು ಯಾ ಅವರ ನೇಮಿಸಬಹುದಾದವರು ತಮ್ಮ ಯುಕ್ತಾನುಸಾರ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿ ಇರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ ಮಾಡಲ್ಪಡೋಣವು ಸವಾಲನ್ನ ಅಂಗೀಕರಿಸದಂತೆ ಭಾವಿಸಲ್ಪಡತಕ್ಕದ್ದು.

3. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿ ಯಾಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲಿಕರ ಮೂಲಕವಾಗಲಿ ಹಾಜರಾಗಬೇಕು. ಯಾವದಾದರೊಂದು ಗ್ರಾಮದ ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡದ ಸವಾಲ್‌ದಾರನು 2ನೇ ಗ್ರಾಮದ ಹರಾಜು ಷುರು ಆಗುವದಕ್ಕೆ ತತ್ಪೂರ್ವವೇ ತನ್ನ ಸದರೀ ಸವಾಲಿನ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಡಿಪಾಜಿಟ್ ಕಟ್ಟಬೇಕು. ಹಾಗೆ ಕಟ್ಟದೆ ಇದ್ದರೆ ಒಡನೆ ಬಾಬನ್ನು ದುಸರೇ ಹರಾಜು ಮಾಡಿಸಿ ಈ ದುಸರೆ ಹರಾಜಿನಿಂದ ಸರ್ಕಾರಕ್ಕೆ ಉಂಟಾಗುವ ಲುಕ್ಸಾನಿಗೆ ಅವ್ವಲ್ ಹರಾಜುದಾರನನ್ನ ಗುರಿಪಡಿಸುತ್ತೆ. ಈ ಹರಾಜು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಂದ ಮಂಜೂರಾದ ಸಂಗತಿಯೂ ಹರಾಜುದಾರನಿಗೆ ತಿಳಿದ ಒಂದು ವಾರದ ವಳಗಾಗಿ ಮೇಲ್ಕಂಡ ಠೇವಣಿ ಬಾಬತು ಬಾಕಿ ಪೂರಾ ಮೊಬಲಗನ್ನು ಮತ್ತು ಆಯಾ ಗ್ರಾಮದ ಒಟ್ಟು ಇಜಾರೆ ಮೊಬಲಗಿನ ಮೇಲೆ ದರ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನು ಹಾಜರ್ಮಾಡಬೇಕಲ್ಲದೆ ಮುಚ್ಚಳಿಕೆ ಸಹ ಬರದುಕೊಡಬೇಕು. ಈ ರೀತಿ ನಡಿಯಲೂ ತಪ್ಪಿದರೆ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಂಡು ಪುನಃ ದುಸರೇ ಹರಾಜಿನಿಂದ ಸರ್ಕಾರಕ್ಕೆ ವುಂಟಾಗಬಹುದಾದ ಲುಕ್ಸಾನಿಗೆ ಅವಲ್ ಹರಾಜುದಾರನನ್ನೇ ಗುರಿಪಡಿಸುತ್ತೆ. ಶಿವಾಯಿ ಚಡದರಖಾಸ್ತುದಾರನು ಸದರೀ ಮುಚ್ಚಳಿಕೆ ಬರದುಕೊಡುವಾಗಲೆ ಎಕ್ಸೈಜ್ ರೂಲ್ಸ್ ಅನುಸರಿಸಿ ಯೋಗ್ಯರ್ಣವಾಗಬಹುದಾದ ಹುಕುಂಗಳಿಗೆ ವೊಳಪಟ್ಟು ವುತಾರ್‌ದಾರ್ರ ಹೆಸರು ನಮೂದಿಸಿ ಒಂದು ಪಟ್ಟಿಯನ್ನು ಹಾಜರ್ ಮಾಡಬೇಕು.

4. ಹಾಲೀ ಗ್ರಾಮಗಳಲ್ಲಿ ದುಕಾನ ಇರುವ ಸ್ಥಳ ಹೊರ್ತು ಬೇರೇ ಸ್ಥಳದಲ್ಲಿ ದುಕಾನ ಇಡಕೂಡದು. ವಿಶೇಷ ಸಂದರ್ಭಗಳು ವಿನಹಾ ಒಂದು ಗ್ರಾಮದಲ್ಲಿ ಒಂದಕ್ಕಿಂತಾ ಹೆಚ್ಚಾಗಿ ದುಕಾನ ಇಡಕೂಡದು. ಜಾಸ್ತೀ ದುಕಾನ ಕೊಡುವದಕ್ಕೂ ಯಾ ತೆಗದು ಹಾಕುವದಕ್ಕೂ ಸಂದರ್ಭಾನುಸಾರ ಡೆಪ್ಯುಟಿ ಕಮಿಷನರ್ ಸಾಹೆಬರವರು ಸ್ವತಂತ್ರ ವುಳ್ಳವರಾಗಿ ಇರುತ್ತಾರೆ.

5. ಎಕ್ಸೈಜ್ ಆಕ್ಟ್ 5ನೇ ಸೆಕ್‌ಷನ್ ಅನುಸರಿಸಿ ಪ್ರತಿ ಒಬ್ಬ ದುಕಾನದಾರ ಮತ್ತು ಇಜಾರೆದಾರ ಸಹ ಲೈಸೆನ್ಸ್ ಹೊಂದಿ ಬಾಬನ್ನ ರೂಢಿಸಿಕೊಳ್ಳಬೇಕು.

6. ಸಂತೆ ಮತ್ತು ಜಾತ್ರೆಗಳು ಯಾವ್ಯಾವ ಗ್ರಾಮಕ್ಕೆ ಸಂಬಂಧ ಪಟ್ಟದ್ದೊ ಆಯಾ ಗ್ರಾಮದ ಇಜಾರೇದಾರನಿಗೆ ಸೇರಿಸಿ ಕೊಡಲ್ಪಡುತ್ತೆ. ಸಂದರ್ಭಾನುಸಾರ ಸದರೀ ಸಂತೆ ಮತ್ತು ಜಾತ್ರೆ ಬಿಕರಿಗೆ ಇತರ ಗ್ರಾಮದ ಇಜಾರೇದಾರನು ಅಪೇಕ್ಷಿಸಿದರೆ ರೂಲ್ಸ್ ಅನುಸರಿಸಿ ಸ್ಪೆಷಲ್ ಅಪ್ಪಣೆ ಚೀಟಿಯು ಕೊಡಲ್ಪಡುತ್ತೆ.

ಸ್ 1896–97ನೇ ಸಾಲಿಗೆ ಬಗನಿ ಶೇಂದಿ ಬಾಬತು ದುಕಾನ ವಗೈರೆ ತಪ್ಸೀಲ್ ಪಟ್ಟಿ.

ತಾಲ್ಲೂಕು ಮಂಜರಾಬಾದು ಡಿಸ್ಟ್ರಿಕ್ಟ್ ಹಾಸನ ಸ್ 1896ನೇ ಇಸವಿ.

ನಂಬರ್.	ಹೋಬಳಿ.	ಗ್ರಾಮ.	ತಪ್ಸೀಲ್. 95–96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆಸ್ಸ್ ವಿನಹ ಇಜಾರೇ ಮೊಬಲಗು.			ದುಕಾನಗಳ ಸಂಖ್ಯೆ.	ಹರಾಜು ತಾರೀಖು ಮತ್ತು ಸ್ಥಳ.	ಷರಾ.
1	[illegible]	ಬೈಕೆರೆ	ಮಲ್ಲೇಗವುಡ	15	0	0	1	ಸಕಲೇಶಪುರ	ಶೇರು 1ಕ್ಕೆ 1 ಆಣೆ ಲಾಗಾ
2		ಬಿರಡಹಳ್ಳಿ	ಕೆಂಚೇಗವುಡ	2	0	0	1	ಹೋಬಳಿ ಪೂ	ಯತು ದರ 2 ಆಣೆಯಂ
3		ಆಚಂಗಿ	ಮರಿದಾಸಪ್ಪ	0	4	0	1	ರಾ 1896ನೇ	ತೆ ಬಿಕರಿ ಆಗುತ್ತಲಿದೆ ಆದ
4		ಚಿನ್ನಾಪುರ	ಚಿಕ್ಕೇರೇಗವುಡ	5	0	0	1	ಮೇ 18–19	ರೆ ಮಳೆಕಾಲದಲ್ಲಿ ಯಲ್ಲಾ
5		ಗಾಣದಹೊಳೆ	ಪರಮಯ್ಯ	20	0	0	2		ದುಕಾನಗಳಲ್ಲೂ 1 ಆಣೆ
6		ಹೆನ್ನಲಿ	ಡಿಟೋ	25	0	0	2		ಯಂತೆಯೂ ಬೇಸಿಗೆಕಾಲ
7		ಹೆಬ್ಸಾಲೆ	ಶಾಂತಮಲ್ಲಪ್ಪ	50	0	0	2		ದಲ್ಲಿ 2 ಆಣೆ ಯಂತೆ ಇರುತ್ತೆ.

405

ನಂಬರು.	ಹೋಬಳಿ.	ಗ್ರಾಮ.	ತಪ್ಸೀಲ್. 95—96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸೆಸ್ಸ್ ವಿನಹ ಇಜಾರೇ ಮೊಬಲಗು.			ಬಿಕಾರ್‌ಗಳ ನಂಬ್ರಿ	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
8	ಸಕಲೇಶಪುರ	ಸಕಲೇಶಪುರ	ಸೋಮೇಗವುಡ	0	8	0	4		
9		ದೊಡ್ಡನಾಗರ	ಬಸವೇಗವುಡ	0	6	0	1		
10		ಕಬ್ಬಿನಗದ್ದೆ	ಮಲ್ಲೇಗವುಡ	5	8	0	2		
11		ಮಟ್ಟಸಾಗರ	ಪಟೇಲ್ ಪುಟ್ಟೇಗವುಡ	13	4	0	3		
12		ಕೊಗಡವಳ್ಳಿ	ಸೋಮೇಗವುಡ	0	8	0	1		
13		ಬಸವನಹಳ್ಳಿ	ಅಣ್ಣೇಗವುಡ	0	8	0	1		
14		ಶಿದ್ದಾಪುರ	ಶಿದ್ದವೀರಯ್ಯ	0	12	0	1		
15		ಕಣಿಗೇಮನೆ	ಡಿಟೋ	0	8	0	1		
16		ಹಾಲೆಬೇಲೂರು	ಸೋಮೇಗವುಡ	5	0	0	3		
17		ರಾಮೇನಹಳ್ಳಿ	ಡಿಟೋ	5	0	0	1		
18		ಕೊಲ್ಲಹಳ್ಳಿ	ಡಿಟೋ	2	0	0	1		
19		ಮಳಲಿ	ಚನ್ನಮ್ಮಹೆಗ್ಗಡತಿ	7	12	0	2		
20		ಕೆಸಗಾನಹಳ್ಳಿ	ಬಸವೇಗವುಡ	10	0	0	1		
21		ಕಾಡಹಳ್ಳಿ	ಪೈರೇಗವುಡ	0	8	0	1		
22		ಹಳ್ಳಿಬೈಲ್	ಡಿಟೋ	0	8	0	1		
23		ಆನೇಮಹಲ್	ಡಿಟೋ	0	8	0	1		
24		ಇರಗಲೂ	ಡಿಟೋ	0	4	0	1		
25		ಕಲ್ಲಹಣೆ	ರಾಮೇಗವುಡ	0	10	0	1		
26		ಚಿಕ್ಕಸತ್ತಿಗಾಲ	ಸುಬ್ಬೇಗವುಡ	0	8	0	1		
27		ದೋಣಿಗಾಲ	ಶಾಂತಮಲ್ಲೇಗವುಡ	7	0	0	1		
28		ದೇವೀಹಳ್ಳಿ	ಡಿಟೋ	7	0	0	1		
29		ಕೆಲಗಳಲೆ	ಸೋಮೇಗವುಡ	6	0	0	2		
30		ಮಾಗಡಿ	ದ್ಯಾವೇಗವುಡ	3	0	0	1		
31		ಕಿರಹಳ್ಳಿ	ಡಿಟೋ	5	0	0	2		
32		ಮಾಸವಳ್ಳಿ	ಪುಟ್ಟೇಗವುಡ	10	0	0	1		
33		ಹಾಡೆ	ರುದ್ರಯ್ಯ	2	8	0	1		
34		ಹಲಸಾಲಿಗೆ	ಡಿಟೋ	15	0	0	2		
35		ಹುಲ್ಲಹಳ್ಳಿ	ಮಲ್ಲೇಗವುಡ	7	0	0	1		
			ಜುಮ್ಲಾ	234	4	0	0		
36	ಬೆಳಗೋಡು	ಜಮ್ಮನಹಳ್ಳಿ	ಅಜ್ಜೇಗವುಡ	5	0	0	1	1896ನೇ ಮೇ	
37		ಹಳೇಕೆರೆ	ಮೆ॥ ವಿ. ಎ. ಕೊಯಿಲೊ	3	0	0	1	20–21ಹೋ	
38		ಹೊಸಕೆರೆ	ಡಿಟೋ	3	0	0	1	ಬಳಿಪುರ	
39		ಕುಣಿಗನಹಳ್ಳಿ	ಬಸವೇಗವುಡ	1	0	0	1		
40		ಕಾಕನಮನೆ	ಬಸಲಿಂಗಯ್ಯ	1	0	0	1		
41		ಯಡೆಹಳ್ಳಿ	ಜೋವಿಚನ್ನಬಸ್ವ	1	0	0	1		
42		ಗುಲಗಳಲೆ	ಸಿರ್ವಾಣಿಗವುಡ	5	8	0	1		
43		ಬಾಗೆ	ಬಸವ	10	4	0	2		
44		ಬಾಳ್ಳು	ಸಿರ್ವಾಣಿ	3	0	0	1		
45		ಬನವಾಸೆ	ಡಿಟೋ	2	0	0	1		
46		ಕೆಸಗುಲಿ	ಮಲ್ಲೇಗವುಡ	2	0	0	1		
47		ಹೆಬ್ಬನಹಳ್ಳಿ	ಡಿಟೋ	8	8	0	1		
48		ಮತ್ತಿಗಳಲೆ	ಡಿಟೋ	1	0	0	1		
49		ಬಾಳಗೋಡು	ಜೋವಿದ್ಯಾವ	4	0	0	1		
50		ವುದೇವಾರ	ಡಿಟೋ	2	0	0	2		
51		ಬೆಳಗೋಡು	ಬೇಲೂರುಕಾಡಿಗರ ಮೊಗ್ಗೇಗವುಡ	3	8	0	1		
52		ಕೆಂದನಮನೆ	ಡಿಟೋ	23	0	0	2		
53		ಹಸಗವಳ್ಳಿ	ಡಿಟೋ	8	0	0	1		
56		ಗೊಳಗೊಂಡೆ	ಡಿಟೋ	28	4	0	3		
			ಜುಮ್ಲಾ	115	0	0	0		

ನಂಬರು.	ಹೋಬಳಿ.	ಗ್ರಾಮ.	ಹುಟ್ವಳಿ. 95—96ನೇ ಸಾಲಿನ ಇಜಾರೇದಾರನ ಹೆಸರು.	ಡಿಟೋ ಸನ್ನಿನ ಇಜಾರೆ ಮೊಬಲಗು.			ಬೊಂಬುಗಾರ್ ಸಂಖ್ಯೆ.	ಹರಾಜ್ ತಾರೀಖು ಮತ್ತು ಸ್ಥಳ.	ಷರಾ.
152	ಬಿಕ್ಕೋಡು	ಕೆಳಗನಮಂಚಹಳ್ಳಿ ..	ದೇವೇಗವುಡ ..	40	0	0	3	ಜೂನ್ 3—4	
153		ಬಗಡಹಳ್ಳಿ ..	ಮಲ್ಲೇಗವುಡ ...	6	8	0	1	1896ನೇ ಇ	
154		ಕರ್ಡಿಗಾಲ ..	ರಾಮೇಗವುಡ ..	3	0	0	1	ಸವಿ	
155		ಚಿಣ್ಣಹಳ್ಳಿ ..	ಡಿಟೋ ..	15	0	0	2		
156		ಬೊಪ್ಪನಹಳ್ಳಿ ..	ಜಾಕಹಳ್ಳಿ ದೊಡ್ಡೇಗವುಡ	10	0	0	3		
157		ಹಿರಿಯೂರು	ಸಣ್ಣೇಗವುಡ ..	3	0	0	1		
158		ಹೊಸಹಳ್ಳಿ ..	ಸುಬ್ಬೇಗವುಡ ..	3	8	0	1		
159		ವಳಲಹಳ್ಳಿ ..	ಮಲ್ಲೇಗವುಡ ..	5	4	0	2		
160		ಹರಗ್ರಹಳ್ಳಿ ..	ಬಳ್ಳೂರು ನಂಜೇಗವುಡ	5	0	0	2		
161		ಹಾರ್ನಹಳ್ಳಿ ..	ದೊಡ್ಡೇಗೌಡ ..	3	0	0	2		
162		ಕಡಗ್ರವಳ್ಳಿ ..	ಡಿಟೋ ..	3	8	0	1		
163		ಕ್ಯಾನಹಳ್ಳಿ ..	ಬೀರೇಗವುಡ ..	4	0	0	2		
164		ಕುಂಬರಡಿ	ಬಸವೇಗವುಡ ..	33	0	0	3		
165		ಹೆಗ್ಗದ್ದೆ ..	ಹಿರೇಗವುಡ ..	33	0	0	4		
166		ಬಿನ್ನಹಳ್ಳಿ	ಕಾ|| ಗು|| ಸೂರಪ್ಪ ..	1	0	0	1		
167		ಅಲವಳ್ಳಿ ..	ಡಿಟೋ	2	0	0	1		
168		ವಡ್ರಹಳ್ಳಿ	ಡಿಟೋ ..	0	4	0	1		
169		ಕಾಡಮನೆ ..	ಬಸವೇಗವುಡ ...	16	0	0	2		
170		ನಡಹಳ್ಳಿ ..	ಕಾ|| ಗು|| ದಾಸಪ್ಪ ..	30	0	0	3		
171		ಬಮ್ಮನಕೆರೆ ..	ಮಲ್ಲೇಗವುಡ ..	0	4	0	1		
			ಜಮ್ಲಾ ..	217	4	0	0		
172	ಹಗರೆ	ದೇವಾಲ್ದಕೆರೆ ..	ಪ. ಶಿವೇಗವುಡ ...	3	0	0	1	ಜೂನ್ 6—7	ಈ ಹರಾಜು
173		ಮಕ್ಕಿಹಳ್ಳಿ ..	ಬಿಲ್ಲೋರಕರ್ರ್ಯ ..	12	8	0	1	ಹೋಟಲಿ ಪುರ	ಹುಣಿಗೆ ರ
174		ನಲಗಹಳ್ಳಿ ..	ರಾಮೇಗವುಡ ..	5	0	0	1		ಧವಾಹನು ಅ
175		ಕ್ಯಾಮ್ನಹಳ್ಳಿ ..	ಸಕ್ಲೇಶ್ವರದಲ್ಲಿರುವ ಅ. ಮಲ್ಲಶೆಟ್ಟಿ ..	62	0	0	3		ಹೊಸ ವನ ಮಾ ಯತ್ನವಿಲ್ಲ.
176		ಅಚ್ಚರಡಿ ..	ರಾಮೇಗವುಡ ..	5	0	0	1		
177		ಹಾಗಬಾಳು ..	ಡಿಟೋ ..	20	0	0	3		
178		ಅಚ್ಚನಹಳ್ಳಿ ..	ಬಿಳಸರೆ ಪುಟ್ಟೇಗವುಡ	20	0	0	2		
179		ಬಾಚ್ನಹಳ್ಳಿ ..	ಪುಟ್ಟೇಗವುಡ ..	3	0	0	1		
180		ಅಗಳಹಟ್ಟಿ ..	ಮಸ್ತಾರೆ ಸೋಮೇಗವುಡ	64	0	0	2		
181		ಹುವಡಿ ..	ನಂಜೇಗವುಡ ..	5	0	0	1		
182		ಹಾದಿಗೆ ..	ಶಾಂತಮಲ್ಲೇಗವುಡ ...	2	8	0	2		
183		ಡಿಟೋ ಎಸ್ಟೇಟ್ ..	ಡಿಟೋ ..	1	0	0	1		
184		ಬಾಚ್ನಹಳ್ಳಿ ಅವರೆಕಾಡು ಎಸ್ಟೇಟ್ ..	ರಾಮೇಗವುಡ ..	1	0	0	1		
185		ಹಂಚಿಗೊಡ್ನಹಳ್ಳಿ ..	ಕರೇಗವುಡ ...	1	12	0	1		
186		ಡಿಟೋ ಎಸ್ಟೇಟ್ ..	ಡಿಟೋ ...	2	0	0	1		
187		ಮದ್ದಾಪುರ ..	ತಮ್ಮಣ್ಣೇಗವುಡ ...	5	0	0	1		
188		ಹಿರೇಮಿಂದೆ ...	ಸೋಮೇಗವುಡ ..	3	0	0	1		
189		ಕೊಗ್ರವಳ್ಳಿ ..	ಶಿವೇಗವುಡ ...	7	8	0	2		
190		ಮರಗಡಿ ..	ಸುಬ್ಬೇಗವುಡ ..	26	12	0	2		
191		ಮರಗುಂದ ...	ಬೈರೇಗವುಡ ..	8	0	0	1		
192		ಕುಮರಹಳ್ಳಿ ..	ಚಿಕ್ಕೇಗವುಡ ...	4	8	0	1		
193		ಹೊಡ್ಡಹಳ್ಳಿ ...	ಮಂಚೇಗವುಡ ...	2	0	0	1		
195		ಮಾವಿನಕೂಲು ...	ರಾಮೇಗವುಡ ..	70	0	0	3		
196		ಮಾವಿನಹಳ್ಳಿ ..	ಜ್ವೈರವ ..	56	0	0	2		
197		ದಬ್ಬೆಗದ್ದೆ ..	ಡಿಟೋ ..	101	8	0	3		
198		ನೀಕನಹಳ್ಳಿ ..	ಶಿವೇಗವುಡ ..	8	0	0	1		
199		ಅಗನಿ ...	ಪುಟ್ಟೇಗವುಡ ..	35	0	0	2		
200		ರಕಾಸ್ಕಿ ಎಸ್ಟೇಟ್ ...	ಬಸವೇಗವುಡ ..	1	8	0	1		
201		ಜಂಬರಡಿ ..	ದ್ಯಾವೇಗವುಡ ..	20	0	0	2		
			ಜಮ್ಲಾ ...	556	8	0	0		
			ಒಟ್ಟುಜಮ್ಲಾ ...	1427	0	0	0		

ಜೆ. ಸ್ವಾಮಿನಾಯಿಡು, ಫಾರ್ ಡೆಪ್ಯುಟಿ ಕಮಿಷನರ್.

407

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರನಾಮೆ.

ತಾರೀಖು 30ನೇ ಏಪ್ರಿಲ್ 1896.

ನಂ. 1. ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಯುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜ ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜ ಷುರುವಾಗಿ ಉಸಿಕೆಯಾವದೂ ಇಲ್ಲದೆ ಗ್ರಾಮವು ಜಾಸ್ತಿದರಖಾಸ್ತುದಾರರಿಗೆ ಹರಾಜ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯುಕ್ತ್ಯಾನುಸಾರ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನು ಬೇರೆಬೇರೆಯಾಗಿ ಹರಾಜ ಹಾಕಿಸುವರು.

3. ಕ್ರಯದಾರರು ಹರಾಜ ಕಾಲದಲ್ಲಿ ಕ್ರಯದ ಮೊಬಲಗ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕಿ ಬಾಕಿಯನ್ನು ಹರಾಜ ತಾರೀಖು ಲಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜುಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂ[illegible]ಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ ಮವುಕೂಫ಼ ಮಾಡಲ್ಪಡತಕ್ಕದ್ದು.

7. ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನ ಡೆಪ್ಯುಟಿ ಕಮಿಷನರವರು ಖಾಯಂ [illegible] ಗ್ರಾಮವು ಆತನ ಸ್ವಾಧೀನ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನ[illegible] ರುಜು ಮೊಹರ ಮಾಡೋಣಾದ ಒಂದು ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಖೀಜವರೀ[illegible]ಲ್ಲಾಗಲಿ ಇರುವ ಗಲ್ತುಗಳಿಗೆ ಸರ್ಕಾರದವರು ಜವಾಬದಾರರಲ್ಲವೆಂಬು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನು ಪಟ್ಟೆವೆಂತೆ ಎಣಿಸುವ ಜನಗಳು ಹರಾಜ ಲಾದಿಂದ ವಿಧಾಯಕವಾದ ದಿನಗಳೊ[illegible]ಗಿ ಡೆಪ್ಯುಟಿಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲನಲ್ಲಿ ಆಗುವ ಆಖೈರ ಹುಕುಮಿಗೆ [illegible] ಕ್ರಯವು ಒಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	[illegible]	ಸ್ವತ್ತಿನ ವಿವರ. ತರಹ.	ಎಕರೆ.		ಆಕಾರ.			ಯಾವ ಬಾಕಿಗೋಸ್ಕರ ಗ್ರಾಮವು ಹರಾಜ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.			[illegible]
1	2	3	4	5	6	7	8		9			10			11
							ಎಕರೆ.	ಗುಂಟೆ.	ರೂ.	ಅ.	ಪೈ.	ರೂ.	ಅ.	ಪೈ.	
ಹಾಸನ.	ಬೇಲೂರು.	ಹಗರೆ.	ಜೋಡೀ [illegible]	1 ಬಾಗೀರತಮ್ಮ	ವೃತ್ತಿ $\frac{1}{14}$	ತರೀ	136	32	96	3	9	ವಿಜಯುಸಾಲ್ ಜೋಡಿ			15—6—1896ನೇ ಸೋಮವಾರ.
				2 ಗುರ್ರಾಯಾಚಾರ ವಗೈರೆ	$\frac{1}{14}$	ತರೀ	25	29	119	1	6	109	3	5	
				3 ನಾರಣಾಚಾರಿ ಕೇಶವಾಚಾರಿ ವಗೈರೆ	$1\frac{1}{4}$	ಬಂಜರ	20	38	1	4	0	ಜಯ 109	3	5	
				4 ಕೇಶವಾಚಾರ	$\frac{1}{7}$		183	19	217	12	0	218	6	10	
				ಅನುಭವದಾರ ಅನಂತಾಚಾರ್ರು ಕೇಶವಾಚಾರ್ರು ಮಕ್ಕಳು ನಾರಣಾಚಾರ್ರು		ಈ ಗ್ರಾಮದ 14ನೇ ನಂ. ವಗೈರೆ ವೃತ್ತಿ ಈ ಪೈಕಿ ನಾರಣಾಚಾರ			11	0	0	9	1	0	
						ಖತ್ತೇಮಾಂ						227	7	10	

ಎಸ್. ಅಮಿರಹಸೇನ,
ಫಾರ ಡೆಪ್ಯುಟಿ ಕಮಿಷನರ.

408

ನಗರ ಡಿವಿಜನ್ ಡಿಸ್ಟ್ರಿಕ್ಟ ಜಡ್ಜಿಯವರ ಕೋರ್ಟಿನಲ್ಲಿ.

ಸ್ನ 1895—96ನೇ ಇಸವಿ ಮಿಸಲೇನಿಯಸ ಅರ್ಜೀ ನಂಬರ 293.

ಮೃತಪಟ್ಟ ಅಬ್ದುಲ ರಹಿಮಾನಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶಿವಮೊಗ್ಗ ಕಸಬಾದಲ್ಲಿರುವ ಕಸ್ಬಾ ಕೆಲಸದ ರಹಿಮಾನಸಾಬರ ಮಕ್ಕಳು 1ನೇ ಇಬ್ರಾಹಿಂಖಾನ ಬಾಪುಸಾಬಿ, 2ನೇ ಮಹಮ್ಮದ ಟೀಪೂಸಾಬಿ, ಮೃತಪಟ್ಟ ಸದರೀ ಅಬ್ದುಲ ರಹಿಮಾನಸಾಬರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ 1ನೇ ಇಬ್ರಾಹಿಂಖಾನ ಬಾಪುಸಾಬಿ, 2ನೇ ಮಹಮ್ಮದ ಟೀಪೂಸಾಬಿ ಎಂಬವರು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಅಬ್ದುಲ ರಹಿಮಾನಸಾಬರ ಜಿಂದಗಿ ಬಗ್ಗೆಗಿ ಬರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ ಮಾಡುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಇಬ್ರಾಹಿಂಖಾನ ಬಾಪುಸಾಬಿ, 2ನೇ ಮಹಮ್ಮದ ಟೀಪೂಸಾಬಿ ಇವರ ಅರ್ಜಿಯನ್ನು ಸ್ನ 1896ನೇ ಇಸವಿ ಜುಲೈ ತಿಂಗಳ ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ದುಲ ರಹಿಮಾನಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಅದೆ.

ಸ್ನ 1895—96ನೇ ಇಸವಿ ಮಿಸಲೇನಿಯಸ ಅರ್ಜೀ ನಂಬರ 294.

ಮೃತಪಟ್ಟ ಪಂವಾರದ ಗುಂಡೇರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶಿವಮೊಗ್ಗದಲ್ಲಿ ಇರುವ ಪಂವಾರದ ಸುಬ್ಬಾಯ್ಯ ಮೃತಪಟ್ಟ ಸದರೀ ಪಂವಾರದ ಗುಂಡೇರಾಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಪಂವಾರದ ಸುಬ್ಬಾಯರು; ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಪಂವಾರದ ಗುಂಡೇರಾಯರ ಜಿಂದಗಿ ಬಗ್ಗೆಗಿ ಮೈಸೂರು ಮಹಾರಾಜರವರ ಸ್ಪಿನ್ನಿಂಗ ಅಂಡ ಮ್ಯಾನ್ಯುಫಾಕ್ಟರಿಂಗ ಕಂಪನಿಯಿಂದಲೂ ಮತ್ತು ಹೊರಗಿನಿಂದಲೂ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ ಮಾಡುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪಂವಾರದ ಸುಬ್ಬಾಯರ ಅರ್ಜಿಯನ್ನು ಸ್ನ 1896ನೇ ಇಸವಿ ಜುಲೈ ತಿಂಗಳ ತಾರೀಖು 10ರಲ್ಲು ಕೇಳಿ ಸರಟಿಫಿಕೇಟ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಂವಾರದ ಗುಂಡೇರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಅದೆ.

ಸ್ನ 1896ನೇ ಇಸವಿ ಮೇ ತಿಂಗಳ 5ನೇ ತಾರೀಖಿನಲ್ಲಿ ಕೋರ್ಟ ಮೊಹರ ನಿಶಿ ನಮ್ಮ ದಸ್ತಖತ್ತಿನೊಡನೇ ಕೊಡೋಣಾಗಿದೆ.

ಬಿ. ತಿರುಮಲಾಚಾರ,
ಡಿಸ್ಟ್ರಿಕ್ಟ ಜಡ್ಜ.

ಕಡೂರು ಡಿಸ್ಟ್ರಿಕ್ಟ.

ಎಕ್ಸೈಜ ಡಿಪಾರ್ಟಮೆಂಟ.

1896ನೇ ಇಸವಿ ಏಪ್ರಿಲ 28ನೇ ಮುಕ್ಕಾಂ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—

1. ಈ ಕೆಳಗೆ ಕಂಡ ಕಡೂರು ಡಿಸ್ಟ್ರಿಕ್ಟು ತಾಲ್ಲೂಕುಗಳ ಬಗಣಿ ಕೇಂದಿ ಉತಾರು ಮತ್ತು ಮಾರುವ ಹಕ್ಕು ಸ್ನ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂನ 30ರವರಿಗೆ ಗ್ರಾಮವಾರಾಗಿ ಯಾಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕ ಬಾಬಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಆಯಾ ತಾಲ್ಲೂಕು ಕಚೇರಿ ರೂಬರೂ ಅಸಿಸ್ಟೆಂಟ ಕಮಿಷನರವರಿಂದಾಗಲಿ ಅಥವಾ ಅಮಲದಾರರವರಿಂದಲಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ತಾಲ್ಲೂಕು.	ಹರಾಜು ತಾರೀಖ.
1. ಚಿಕ್ಕಮಗಳೂರು	ಮೇ ತಿಂಗಳ 27ರ ಲಾಗಾಯಿತು 29ರವರಿಗೆ
2. ಮೂಡಗೆರೆ	ಡಿಟೋ 25 ಮತ್ತು 26ನೇ ತಾರೀಖುಗಳು.
3. ಕೊಪ್ಪ	ಜೂನ ತಿಂಗಳ 3ನೇ ತಾರೀಖು ಲಾಗಾಯಿತು 5ರವರಿಗೆ
4. ಯಡೆಹಳ್ಳಿ	ಜೂನ 6 ಮತ್ತು 7ನೇ ತಾರೀಖುಗಳು.

2. ಪ್ರತಿ ಒಂದು ಸರ್ಕಲ ಗುತ್ತೆಯು ಚಡಪರ ಖಾಸ್ತುದಾರನಿಗೆ ಕೊಡಲ್ಪಡುವದು. ಸದರಿ ಚಡ[illegible] [illegible]ಗೂ ಕಳದ ಸಾಲ ಮೊಬಲಗ್ಗೆ ಕಮ್ಮಿ ಇರಕೂಡದು. ಈ ಹರಾಜು ಡೆಪ್ಯುಟಿ ಕಮಿಷನರವರ ಮಂಜೂ[illegible] [illegible]ಗಿ ಇರುತ್ತೆ. ಅಂಥಾ ಹರಾಜಿಗೆ ಸಮ್ಮಂಧಪಟ್ಟ ರಿಕಾರ್ಡುಗಳನ್ನು ಸದರೀಯವರು ಡೆಪ್ಯುಟಿ ಕ[illegible] [illegible]. ಡೆಪ್ಯುಟಿ ಕಮಿಷನರವರು ಯಾವದೊಂದು ದರಖಾಸ್ತು ಅಥವಾ ಚಡ ದರಖಾಸ್ತನ್ನಾದ[illegible] ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

3. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ[...]ನುವಾಗಿ ಅಧಿಕಾರ ಹೊಂದಿದ ಮು ಖಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು.

4. ಡೆಪ್ಯುಟಿ ಕಮಿಷನರವರಿಂದ ಅಂಗೀಕರಿಸಲ್ಪಡುವ ಟೆಂಡರ್ ದರಖಾಸ್ತುದಾರನು ಸ[...] ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾ[ಜು] ಮಾಡಿಸತಕ್ಕ ಆಫೀಸರಲ್ಲಿ ಆ ಕೂ[...]ಡ್ಲೆ ಹಾಜರು ಮಾಡಬೇಕು, ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೊ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಮಡನೆ ಡಿಪಾಜಿಟ್ ಮಾ[ಡ]ಬೇಕು. ಡೆಪ್ಯುಟಿ ಕಮಿಷನರವರ ಮಂಜೂರು ತಿಳಿಯಪಡಿಸಿದ 8 ದಿವಸದ ಒಳಗಾಗಿ ಮೊದಲು ಇಡೋಣಾದ ಠೇವಣಿ ದೇಖೀಲ್ ಸಾ[...]ಲ್ ಗುತ್ತಿಗೆ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗದಷ್ಟು ಮೊಬಲಗು ನಗದಾಗಿ ಯಾಗಲಿ ಅಥವಾ ಗವರ್ನಮೆಂಟ್ ಪತ್ರಮೂಲಕವಾ[ಗಿ]ಯಾಗಲಿ ಅಮಲ್ದಾರರಲ್ಲಿ ಹಾಜರ್ ಮಾಡಬೇಕು. ಹಾಗೆ ಗವರ್ನಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರ್ಯಾಕ್ಟು ಷರ[ತ್ತು] ನೆರವೇರಿಕೆ ಖಾತ್ರಿಗಾಗಿ ಹಾಜರ್ಮಾಡಿದೆಯೆಂದು ಸದರೀ ಪತ್ರ ಜೈಲ್ ಡೆಪ್ಯುಟಿಕಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿ ಕೊಡತಕ್ಕ[...]ದ್ದಾಗಿ ಇರುತ್ತೆ. ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗಿಗಾಗಿ ಅರಮಾಸಿ ನಗದಾಗಿಯಾಗಲೀ ಅಥವಾ ಮೇಲ್ಕಂಡ[ಂ]ತೆ ಇಂಡಾರ್ಸ್ಮಾಡಿಕೊಟ್ಟ ಗವರ್ನಮೆಂಟ್ ಪತ್ರಮೂಲಕವಾಗಿಯಾಗಲೀ ಬಾಕಿ ಅರ್ಧಭಾಗ ಸ್ಥಿರಸ್ವತ್ತು ಮೂಲಕ ಜಾಮೀನಿಕೊಡ[ಬ]ಹುದು. ಹಾಗೆ ಆಧಾರ ಮಾಡುವ ಸ್ಥಿರಸ್ವತ್ತಿನ ಬೆಲೆ ಜಾಮೀನಿ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು. ಮತ್ತು ಅದ[...]ರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಠೇವಣಿ ಇಟ್ಟ ಮೊಬಲಗು ಆಖೈರ್ ಮೂರು ತಿಂಗಳ [...]ನ ಬಗ್ಗೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ನಡೆಕೊಳ್ಳಲು ಬದ್ಧನಾಗಿರುತ್ತೇನೆ[...]ತ ಕ್ರಮವಾದ ಸ್ಟಾಂಪು ಕಾಗದದ ಮೇಲೆ ಮಾಮೂಲ್ನಂತೆ ಮುಚ್ಚಳಿಕೆ ಬರೆಕೊಡತಕ್ಕದ್ದಾಗಿರುತ್ತೆ.

5. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್ಮಾಡದೇ ತಪ್ಪಿದರೂ ಅ[...]ಥವಾ ಮುಚ್ಚಳಿಕೆ ಬರೆಕೊಡದೆ ತಿರಸ್ಕರಿಸಿದರೂ ಪುರಾ ಹಾಜರ್ ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಡಲ್ಪಡುತ್ತಲ್ಲದೆ[...] ಬಾಬ್ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿ ಯಾಗಲೀ ವಿಲೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವ[...]ದರಲ್ಲಿ ಸರ್ಕಾರಕ್ಕೆ ಲುಕ್ಸಾನು ಏನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು (ಜಮೀನು) ಕಂದಾಯದ ಬಾಕಿಯಂತೆ ಸದರಿಯ[...]ವನ ಬೆಂದಗಿ ಜಫ್ತಿ ಹರಾಜು ಮೂಲಕ ವಸೂಲ್ ಮಾಡಿಕೊಳ್ಳಲ್ಪಡುತ್ತೆ.

6. ಪ್ರತಿ ಒಬ್ಬ ಉತಾರದಾರನೂ ಎಕ್ಸೈಸ ಆಕ್ಟ 5ನೇ ಸೆಕ್ಷನ್ ಅನುಸರಿಸಿ ಡೆ[ಪ್ಯು]ಟಿ ಕಮಿಷನರವರಿಂದ ಮಂದು ಲೈಸೆನ್ಸು ಪಡಿಯತಕ್ಕದ್ದು.

7. ಸರ್ಕಾರಿಂದ ಲೈಸೆನ್ಸು ರೂಲ್ಸ ಮಂಜೂರಾಗುವ ವರಿಗೂ ಗುತ್ತಿಗೆದಾರನು [...]ನ್ನ ಫಿರ್ಕಾಕ್ಕೆ ಸಮ್ಮಂಧಪಟ್ಟ ಅಂಗಡಿಗಳಲ್ಲಿ ಸೇಂದಿ ಬಿಕರೀ ಬಗ್ಗೆ ಎಕ್ಸೈಜ್ ಆಕ್ಟ 16ನೇ ಸೆಕ್ಷನ್ ಪ್ರಕಾರ ಅಪ್ಪಣೆ ಚೀಟಿ ಕೊ[...]ಡಬಹುದು.

8. ಈಚಲು ಸೇಂದಿ ಕಂಟ್ರ್ಯಾಕ್ಟ ವಿಷಯದಲ್ಲಿ ಹಾಲಿ ಜಾರೀರುವ ಷರತ್ತುಗ[...]ಳು ಈ ಬಗನಿ ಸೇಂದಿ ಇಜಾರೆ ಬಗ್ಗೆ ಅನ್ವಯಿಸಲ್ಪಡುತ್ತೆ.

9. ಹಿಂದಿನ ಸಾಲಗಳ ಬಗನಿ ಸೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ್ ತಿಳಿಯಬೇಕ[ಾ]ಗಿದ್ದರೆ ತಾಲ್ಲೂಕ ಅಮಲ್ದಾರು ಅಥವಾ ಸಿರಸ್ತೇದಾರರಲ್ಲಿ ದರಖಾಸ್ತು ಕೊಟ್ಟು ತಿಳುಕೊಳ್ಳಬಹುದು.

10. ಕಂಟ್ರ್ಯಾಕ್ಟಿಗೆ ಸಮ್ಮಂಧಪಟ್ಟ ಬಾಕಿ ಎಲ್ಲಾ ಸಂಗತಿಗಳು ಹರಾಜು ಮಾಡಿಸುವ ಆಫೀಸರಿ[ಂ]ದ ಹರಾಜು ಕಾಲದಲ್ಲಿ ತಿಳಿಸಲ್ಪಡುವದು.

ಎಚ್. ಎಚ್. ಸ್ಪರ್ಕಸ್, ಡೆಪ್ಯುಟಿ ಕಮಿಷನರ್, ಕಡೂರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 10ನೇ ಮೇ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರಡಿ ನಮೂದಿಸಿರುವ ಜವುಬೀನೆ ಮತ್ತು [...]ಂಬು ಮತ್ತು ಪಸಾರಿ ಸಾಮಾನು ಕಡೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅವುಗಳ ಬಾಬಿದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರು ಮತ್ತು ಡೆಪ್ಯುಟಿ ಕಮಿಷನರ್ ಯಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರುಗಳಿಂದ ಹರಾಜು ಮಾಡಿಸಲ್ಪಡುವದು.

ನಾಟಾಗಳ ತಪ್ಸೀಲ್.	ಲಕ್ಕುವಳ್ಳಿ ಡಿಪೋ.			ತರೀಕರೆ ಡಿಪೋ.			ಷರಾ.
	ಅದದು.	ಸಲೆ ಅಡಿ.	ಹರಾಜು ತಾರೀಖು.	ಅದದು.	ಸಲೆ ಅಡಿ.	ಹರಾಜು ತಾರೀಖು.	
[...]ನಾಟಾ ..	480	10,500	1896ನೇ ಇಸವಿ ಜೂನ್ 16ನೇ ತಾರೀಖು.	42	639	1896ನೇ ಇಸವಿ ಜೂನ್ 18ನೇ ತಾರೀಖು.	
[...]ಟಾ ..	250	6,500		13	285		
[...]ಾಟಾ ..	120	3,000		17	388		
..	150	1,200		480	1,510		
[...]ಳು ..	40	390		680	4,950		
..	25	230		..	..		
[...]ಗಳು ..	..	..		2,968	..		
	..	..		10,000	..		
	40 ಮಣ	..		..	..		

ನಾಟಾಗಳ ತಪ್ಸೀಲ್.	ಕಡೂರು ಡಿಪೋ.			ಚಿಕ್ಕಮಗಳೂರು ಡಿಪೋ.			ಷರಾ.
	ಅದದು.	ಸಲೆ ಅಡಿ.	ಹರಾಜು ತಾರೀಖು.	ಅದದು.	ಸಲೆ ಅಡಿ.	ಹರಾಜು ತಾರೀಖು.	
ಸಾಗುವಾನಿ ನಾಟಾ ..	24	783	1896ನೇ ಇಸವಿ ಜೂನ್ 25ನೇ ತಾರೀಖು.	70	1,358	1896ನೇ ಇಸವಿ ಜೂನ್ 27ನೇ ತಾರೀಖು.	[illegible]
ರಿಜರ್ವ್ಡು ನಾಟಾ ..	65	1,850		11	345		
ಅನ್ ರಿಜರ್ವ್ಡು ನಾಟಾ ..	16	470		11	320		
ಸಾಗುವಾನಿ ಜಲಗು ..	367	1,113		1	12		
ಡಿಪೋ ತುಂಡುಗಳು ..	36	380		..	..		
ಕಾಡುಜಾತಿ ಜಲಗು ..	..	..		6	25		
ಸಾಗುವಾನಿ ತುದಿ ತುಂಡುಗಳು.	..	..		..	..		
ಕಿರೀಬಿದರು ..	1,000	..		1,200	..		
ಅಳಲೇಕಾಯಿ ..	..	..		145 ಮಣ	..		

ಹರಾಜು ಷರತ್ತು.—25–4–95ನೇ ಮರ್ಕ್ಯ 15ನೇ ನಂಬರ ಮೈಸೂರ ಗೆಜೆಟ್ಟಿನಲ್ಲಿ ಪ್ರಾಯಿಷ್ ಆಗಿರುವ 15–3–95ನೇ 15229—155—92ನೇ ನಂಬರ ನೋಟಿಫಿಕೇಷನ್ ನೋಡತಕ್ಕದ್ದು. ಮತ್ತು ಸದರಿ ನೋಟಿಫಿಕೇಷನ್ ಹರಾಜು ಕಾಲದಲ್ಲಿ ಓದಲ್ಪಡುವದು.

ಬಿ. ಹೀರಾಕಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ.

ಗೈರವಿಲಾ ಆದ ಕರ್ರೆನ್ಸಿ ನೋಟು.

ಸರ್ಕಲ್.	ನಂಬರು.	ಅರ್ಧ ಅಥವಾ ಪೂರಾ.	ನೋಟಿನ ಮೊಬಲಗು. ರೂ. ಆ. ಪೈ.	ಷರಾ.
ಮದರಾಸ	ಟಿ. 65 × 89563	ಪೂರಾ	100–0–0	1896ನೇ ಇಸವಿ ಮೇ ತಾರೀಖು 4ರಲ್ಲು ದಿನ 7¼ ಘಂಟೆ ಕಾಲದಲ್ಲಿ ಮಳಿಗೆಯಿಂದ [illegible] ಹೋಗುತ್ತಿರುವಾಗ ದಾ[illegible]ಲ್ಲಿ ಬಿದ್ದು ಹೋದ ಈ ನೋಟನ್ನು ಪತ್ತೆ ಮಾಡಿ ಕೊಟ್ಟವರಿಗೆ 10 ರೂಪಾಯಿ ಇನಾಂ ಕೊಡುತ್ತೇನೆಂದು ನೋಟಿನ ಸ್ವಂತಗಾರ ಶ್ರೀರಂಗಪಟ್ಟಣದಲ್ಲಿರುವ ಮಗಿಗೆ ಶಿದ್ದಯ್ಯ ತಿಳಿಸುತ್ತಾನೆ.

ಸ್ವಂತ ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಶಿವಿಲ್ ಅಂಡ್ ಮಿಲಟರಿ ಸ್ಟೇಷನ್ನಿಗೆ ಸೇರಿದ ಸೂಳಿನಲ್ಲಿದ್ದ 1894ನೇ ಇಸವಿ ಜೂನ್ ಮಾಹೆ ಆ ಸುಮಾರಿನಲ್ಲಿ ಮೃತಪಟ್ಟ ಅಪ್ಪಾಸಾಮಿ ದಾಸರಿಯೆಂಬಾತನು ನನಗೆ ಗಂಡನಾಗಬೇಕು, ನಂ[illegible]ವನ ಮದುವೆ ಆದನಂತರ ನಾನು ಬೆಂಗಳೂರಲ್ಲಿ ಬನ್ನಿ ಅಂಡ್ ಕಂಪನಿಯ ಕಾಫಿ ಕಾರಖಾನೆಯಲ್ಲಿ ಹೆಡ್‌ಮೇಸ್ತ್ರಿ ನೌಕರಿಯಿಂದ ತ್ರಿ[illegible]ದ್ದ ನನ್ನ ಸ್ವಂತ ದ್ರವ್ಯದಿಂದ ಮೇಲ್ಕಂಡ ಸೂಳಿನಲ್ಲಿ ಪೂರ್ವಕ್ಕೆ—ಪರದ್ಪವಗೈರೇರ ಮನೆಗಳು ಪಶ್ಚಿಮಕ್ಕೆ—ರಾಜಪ್ಪನ ಮನೆ [illegible]ಟನಲ್ಲಿ—ರಸ್ತೆ ದಕ್ಷಿಣಕ್ಕೆ—ವಡ್ಡರ ಶಿದ್ದಪ್ಪನ ಮನೆ ಈ ಮಧ್ಯೆ ಯಿರುವ ಮನೆಗಳನ್ನೂ ಮತ್ತು ವೇಲೂರು ಕಂಸಾಯಪೇಟೆಯಲ್ಲಿ [illegible]ರುವ ಅಂಗಡಿಗಳು, ಮತ್ತು ಚೆಂಗಲಪೇಟೆ ಜಿಲ್ಲಾ ಸಂಟಥಾಮಸ ಮವುಂಟುನಲ್ಲಿ ಪಾಲವರಂ ರೋಡು ಪಕ್ಕದಲ್ಲಿರುವ ರಸೂಲ್ ಸ್ಥಿತಿಗಳು [illegible]ತು ತೋಟದ ಆಧಾರದ ಮೇಲೆ ಡಿಟೋ ರಸೂಲ್‌ಬಿಬಿಗೆ ಕೊಟ್ಟಿರುವ 400 ರೂಪಾಯಿಗಳ ಸಾಲ[illegible] ಮತ್ತು ಬೇರೆ ಕಾಯಿಲೆ [illegible] ನಾನು ಸಂಪಾದಿಸಿ ನನ್ನ ಗಂಡ ಅಪ್ಪಾಸಾಮಿ ದಾಸರೀ ಹೆಸರಿನಲ್ಲಿ ನೆಪಮಾತ್ರಕ್ಕೆ ಪತ್ರಬರೆಸಿರುತ್ತೇನೆ, ನನ್ನ ಗಂಡನ ಮೇಲ್ಕಂಡ [illegible]ರಸ್ತು ಬಗ್ಗೆ ಮೇಲ್ಕಂಡ ಸಂಟಥಾಮಸ ಮವುಂಟಿಗೆ ಹೋಗಿರುವ ಕಾಲದಲ್ಲಿ 1894ನೇ ಇಸವಿ ಮಾರ್ಚಿ ಆ ಸುಮಾರಿನಲ್ಲಿ ದಸ್ತಾವೇಜು ವಸ್ತ್ರವಜಾಗಳು ಗೈರುವಿಲೆಯಾಗಿರುತ್ತೆ ಈ ಸಂಗತಿಯು ಆ ಕೋರ್ಟ್ ನ್ಯಾಯಾಧಿಕಾರ ಸ್ಥಾನಕ್ಕೆ ತಿಳಿಸಿರುತ್ತೆ ಹಾಲಿ ಈ [illegible]ನ್ನು [illegible] ಬೇರೇ ಜನಗಳು ತಮ್ಮ ವಶದಲ್ಲಿರುವಂತೆಯೂ, ಇವ್ರುಗಳು ತಮ್ಮ ವಶದಲ್ಲಿರುವ ಬಲೀಯದ ಮೇಲೆ ಡಿಟೋ ಸ್ಥಿತಿಗ ಸಮಸ್ತ ಜನ[illegible] ಭೋಗ್ಯ ಆಧಾರ ವಗೈರೇ ಮಾಡುವಂತೆ ಪ್ರಯತ್ನಪಟ್ಟು ಯಿರುವದಾಗಿ ನನಗೆ ತಿಳಿಯಬಂದು ಯಿರುವದರಿಂದ ಇದರಿಂದ ಮೇಲ್ಕಂಡ [illegible]ಗೂ ತಿಳಿಯಪಡಿಸುವದೇನಂದರೆ,

ಅಂಥಾ [illegible] ಮೇಲ್ಕಂಡ ಸ್ಥಿತಿಗಳನ್ನ ನನ್ನ ವಿನಹ ಮತ್ಯಾರಿಂದಲಾದರೂ ಯಾವಾದರೂ ಕ್ರಯ ಭೋಗ್ಯ ಆಧಾರ ವಗೈರೆ ಬರೆಸಿಕೊಂಡಲ್ಲಿ [illegible]ಯ, ಭೋಗ್ಯ ಆಧಾರಗಳು ನನ್ನನ್ನು ಬಾಧಿಸಲಾರದೆಂತ ಯಿದರಿಂದ ಸಮಸ್ತ ಜನಗಳಿಗೂ ಯಚ್ಚರಿಸಿರುತ್ತೆ.

[illegible] ○ ಬಳೆ ಗುರುತು ಅಪ್ಪಾಸಾಮಿದಾಸರಿ ಹೆಂಡತಿ ಕುಪ್ಪಾಅಮ್ಮಾಳ್ ಹಾಕಿದ್ದು.

ಮೈಸೂರ ಗೆಜೆಟ ಚಂದಾ ದರ ವಗೈರೆ.

ತಾರೀಖು 26ನೇ ಜನವರಿ 1889.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಷ್ ವಾಹೀ ಯಾ ಕ್ವಾರಟರಿಗೆ			ದಾಮಾಷಾಯಿ ಪ್ರ[illegible]ಳು.	
ಚಾಲತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜ ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಶೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭೋಗಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮುಲ್‌ದಾರರಿಂದ ವಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ 21ನೇ ಮರ್ಕುಂ 24205—6—ಜಿ. 6200ನೇ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು:—		
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4
ಸಿವಿಲ್ ಪ್ರೊಸಿಡ್ಯೂರ ಕೋಡಿನ 347ನೇ ಸೆಕ್ಷನ ಅನುಸರಿಸಿ ದಿವಾಳೀ ಅಪ್ಲಿಕೇಷನಗಳ ಬಗ್ಯೆ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ ಕೋಡಿನ 354ನೇ ಸೆಕ್ಷನ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗೆರ ಚಾರ್ಜ ಪ್ರಕಟಿಸಲ್ಪಡುತವೆ.

ಸರ್ಟಿಫಿಕೇಟ ಕಾಫೀ ಪಟ್ಟಿ ವಗೈರೇ ಕೊಡುವ ಬಗ್ಯೆ ರವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—		
ಮೊದಲನೇ ಸಲಕ್ಕೆ ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿ[illegible]ಲು ಕಳ ಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರ್ಡರ ಪ್ರಕಾರ ತಮಾಂ ಚಂದಾ ವೊಬಲಗುಗಳೂ, ಪ್ರಕಟನೇ ಚಾರ್ಜಗಳೂ ಮುಂಗಡವಾಗಿ ಪಾ[illegible]ವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಆಯಾ ಇಲಾಖೇ ಸೆಕ್[illegible]ದೆಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯ[illegible] ವಾರದ ವೊಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾ[illegible] ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ[illegible]ಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರತು ಅನ್ಯಥಾ ಅದೇ ವಾರದ ಛಾಪಿಸಲ್ಪಡುತ್ತೆಂಬ ಖಾತರಿ ಯಿಲ್ಲ.

ಸಿ. ಎ. ರಾಘವಾಚಾರ್ಲು[illegible],
ಮೈಸೂರ ಗೆಜೆಟ ಕಂಪೈ[illegible]

H12

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು

ಬೆಂಗಳೂರು, ಗುರುವಾರ, ನವೆಂ ತಾ|| 21, ಸ 1896.

IIIನೇ ಭಾಗ.

ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.

ಮೈಸೂರು ಗವರ್ನಮೆಂಟ್.

ಲೆಜಿಸ್ಲೆಟಿವ್ ಇಲಾಖಾ.

REGULATION III OF 1895.

Regulation to introduce into the Territories of Mysore Act VI of 1882 as amended by Acts VI of 1887 and XII of 1895.

ಸ 1887ನೇ ಇಸವಿಯ 6ನೇ ನಂಬರ ಆಕ್ಟಿನ, ಮತ್ತು 1895ನೇ ಇಸವಿಯ 12ನೇ ನಂಬರ ಆಕ್ಟಿ... ...ಯಿಂದ ತಿದ್ದುಪಡಿಯಾಗಿರುವ ಪ್ರಕಾರ 1882ನೇ ಇಸವಿಯ 6ನೇ ನಂಬರ ಆಕ್ಟನ್ನು ಮೈಸೂರು ಸೀಮೆ... ...ಲ್ಲಿ ಜಾರಿಯಲ್ಲಿ ತರುವ ಬಗ್ಗೆ ಏರ್ಪಟ್ಟ ರೆಗ್ಯುಲೇಷನ್.

(1895ನೇ ಇಸವಿ ಅಕ್ಟೋಬರ 13ನೇ ತಾರೀಖಿನಲ್ಲಿ ಮಂಜೂರ್ಮಾಡಲ್ಪಟ್ಟಿರುತ್ತದೆ)

1895ನೇ ಇಸವಿಯ ಮೈಸೂರ ಕಂಪನಿಗಳ ರೆಗ್ಯುಲೇಷನ್.

CONTENTS.

ವಿಷಯಸೂಚಿಕೆ.

ಸೀಕಿಕೆ.

PRELIMINARY.

ಉಪಕರಣಿಕೆ.

...ಕರಣಗಳು.

1 ಚಿಕ್ಕ ಹೆಸರು.

... ಸ್ಥಳಿಕವ್ಯಾಪ್ತಿ.

...ಮುಲ್‌ಷುರು.

...66ನೇ ಇಸವಿ 10ನೇ ನಂಬರ ಆಕ್ಟನ್ನು ರದ್ದುಪಡಿಸೋಣ.

...ಥ ವಿವರಣೆಯ ಕಲಂ.

...ಕೆಲವು ಸಂಖ್ಯೆಗೆ ಮೀರಿದ ಪಾಲುಗಾರಿಕೆಗಳ ನಿಷೇಧ.

...ರೆಗ್ಯುಲೇಷನಿನ ವಿಭಾಗ.

PART I.
Iನೇ ಭಾಗ.

CONSTITUTION AND INCORPORATION OF COMPANIES AND ASSOCIATIONS UNDER THIS REGULATION.
ಈ ರೆಗ್ಯುಲೇಷನ್ ಪ್ರಕಾರ ಕಂಪೆನಿಗಳು ವ ಸಮಾಜಗಳು ಸ್ಥಾಪಿಸಲ್ಪಡೋಣ ವ ಒಗ್ಗಟ್ಟು ಅಂದರೆ ಐಕ್ಯವಾಗಲ್ಪಡೋಣ.

Memorandum of Association.
ಸಮಾಜದ ಯಾದಾಸ್ತು.

ಪ್ರಕರಣಗಳು.

6 ಕಂಪೆನಿಯನ್ನು ನಿರ್ಮಿಸುವ ರೀತಿ.

7 ಮೆಂಬರುಗಳ ಜವಾಬುದಾರಿಯನ್ನು ಕ್ಲಿಪ್ತಪಡಿಸುವ ರೀತಿ.

ಕ್ಲಿಪ್ತವಿಲ್ಲದ ವಿಷಯಂಥವುಕ್ಕೆ ಡೈರೆಕ್ಟರುಗಳು.

8 ಹಿಸ್ಸೆಗಳಿಂದ ಕ್ಲಿಪ್ತಪಡಿಸಲ್ಪಟ್ಟಿರುವ ಕಂಪೆನಿಯ ಸಮಾಜದ ಯಾದಾಸ್ತು.

9 ಜಾಮೀನಿನಿಂದ ಕ್ಲಿಪ್ತಪಡಿಸಲ್ಪಟ್ಟಿರುವ ಕಂಪೆನಿಯ ಸಮಾಜದ ಯಾದಾಸ್ತು.

10 ಕ್ಲಿಪ್ತಪಡಿಸಲ್ಪಡದಂಥ ಕಂಪೆನಿಯ ಸಮಾಜದ ಯಾದಾಸ್ತು.

11 ಸಮಾಜದ ಯಾದಾಸ್ತಿನ ದಸ್ಕತ್ತು ವ ಫಲ.

12 ಸಮಾಜದ ಯಾದಾಸ್ತನ್ನು ಬದಲಾಯಿಸಲಿಕ್ಕೆ ಕೆಲವು ಕಂಪೆನಿಗಳಿಗೆ ಉಂಟಾಗಿರುವ ಅಧಿಕಾರ.

12 A. ಚೀಫ್ ಕೋರ್ಟಿನವರ ಖಾಯಮಿಗೋಳಿಸುವದು ಸ್ಥಾಪಿಸೋಣದ ಉದ್ದೇಶ ಯಾ ರೂಪವನ್ನು ತಬ್ದಿಲ್ ಮಾಡಲಿಕ್ಕೆ ಕಂಪೆನಿಗೆ ಅಧಿಕಾರ.

12 B. ಸ್ಥಿರಪಡಿಸಲಿಕ್ಕೆ ಪೂರ್ವ ಯಾವದನ್ನು ಕುರಿತು ಕೋರ್ಟಿಗೆ ಸಮಾಧಾನ ಪಡಿಸಬೇಕೆಂಬದರ ವಿವರ.

12 C. ಖಾಯಂ ಮಾಡುವಾಗ್ಯೆ ಷರತ್ತುಗಳನ್ನು ನಮೂದಿಸಲಿಕ್ಕೂ ವ ಖರ್ಚಿನ ವಿಷಯದಲ್ಲಿ ಹುಕುಂ ಕೊಡಲಿಕ್ಕೂ ಕೋರ್ಟಿನವರ ಅಧಿಕಾರ.

12 D. ಕೋರ್ಟಿನವರಿಗೆ ಕೊಡಲ್ಪಟ್ಟ ಯಖ್ತ್ಯಾರಿ.

12 E. ಆಲೋಚನೆಯಲ್ಲಿರುವ ತಬ್ದಿಲನ್ನು ಕೋರ್ಟಿನವರು ಖಾಯಂ ಮಾಡುವದಕ್ಕೆ ಕಾರಣಗಳು.

12 F. ತಬ್ದಿಲಾದ ಯಾದಾಸ್ತಿನ ಯಾ ಬದಲಾಗಿಸೋಣದ ಯಾದಾಸ್ತಿನ ಮತ್ತು ನಿಬಂಧನೆಗಳ ಸಮೇತ ಹುಕುಮನ್ನು ರಿಜಿಸ್ಟರ್ ಮಾಡೋಣ ಮತ್ತು ಅದರ ಫಲ.

12 G. ಮೂರು ತಿಂಗಳೊಳಗೆ ರಿಜಿಸ್ಟರ್ ಮಾಡಲಿಕ್ಕೆ ತಪ್ಪಿಹೋಗುವದರ ಫಲ.

Reduction of Capital and Shares.
ಮೂಲಧನವನ್ನೂ ಹಿಸ್ಸೆಗಳನ್ನೂ ತಗ್ಗಿಸೋಣ.

13 ಮೂಲಧನವನ್ನು ತಗ್ಗಿಸುವದಕ್ಕೆ ಕಂಪೆನಿಗೆ ಅಧಿಕಾರ.

14 ಕ್ಲಿಪ್ತವಾದ ವಾಯಿದೆವರಿಗೆ "ಅಂಡ್ ರಿಡ್ಯೂಸ್ಡ್" ಅಂದರೆ "ಮತ್ತು ತಗ್ಗಿಸೋಣದ" ಎಂಬ ಮಾತುಗಳನ್ನು ಕಂಪೆನಿಯು ಅದರ ಹೆಸರಿಗೆ ಸೇರಿಸಿಕೊಳ್ಳತಕ್ಕದ್ದು.

15 ತಗ್ಗಿಸುವದರ ಮಂಜೂರಾತಿಯ ಹುಕುಮನ್ನು ಕೊಡಬೇಕೆಂದು ಕಂಪೆನಿಯು ಕೋರ್ಟನ್ನು ಕೇಳಿಕೊಳ್ಳತಕ್ಕದ್ದು.

16 ಲೇಣೇದಾರರು ತಗ್ಗಿಸುವದನ್ನು ಆಕ್ಷೇಪಿಸಬಹುದು, ಮತ್ತು ಆಕ್ಷೇಪಿಸುವ ಲೇಣೇದಾರರ ಜಾಬಿತೆಯನ್ನು ಕೋರ್ಟಿನವರು ಗೊತ್ತು ಮಾಡತಕ್ಕದ್ದು.

17 ಲೇಣೇದಾರನ ಸಾಲಕ್ಕಾಗಿ ಜಾಮೀನು ಕೊಡಲ್ಪಟ್ಟ ಮೇಲೆ ಅವನ ಅನುಮತಿ ಅವಶ್ಯಕವಿಲ್ಲವೆಂದು ಕೋರ್ಟಿನವರು ಬಿಟ್ಟುಬಿಡಬಹುದು.

18 ಹುಕುಮನ್ನೂ ಮಿನಿಟೆಂಬ ಅಭಿಪ್ರಾಯ ಪತ್ರಿಕೆಯನ್ನೂ ರಿಜಿಸ್ಟರ್ ಮಾಡಬೇಕು.

19 ಮಿನಿಟೆಂಬ ಅಭಿಪ್ರಾಯಪತ್ರಿಕೆಯು ಸಮಾಜದ ಯಾದಾಸ್ತಿನ ಭಾಗವಾಗತಕ್ಕದ್ದು.

20 ಪ್ರೊಸೀಡಿಂಗ್ಸ್ ವಿಷಯ ತಿಳಿಯದ ಲೇಣೇದಾರರ ಹಕ್ಕುಗಳ ವಿನಾಯಿತಿ.

21 ರಿಜಿಸ್ಟರಾದ ಮಿನಿಟೆಂಬ ಅಭಿಪ್ರಾಯವು ಸಮಾಜದ ಯಾದಾಸ್ತಿನಲ್ಲಿ ಅಡಗಿರಬೇಕು.

22 ಲೇಣೇದಾರನ ಹೆಸರನ್ನು ಮರೆಮಾಡಿದರೆ ದಂಡನೆ.

23 ತೆಗೆದುಕೊಳ್ಳಲ್ಪಡದ ಹಿಸ್ಸೆಗಳನ್ನು ರದ್ದುಮಾಡುವದರಿಂದ ಮೂಲಧನವನ್ನು ತಗ್ಗಿಸಲಿಕ್ಕೆ ಅಧಿಕಾರ.

Subdivision of Shares.
ಹಿಸ್ಸೆಗಳ ಒಳ ವಿಭಾಗ.

24 ಹಿಸ್ಸೆಗಳನ್ನು ಇನ್ನೂ ಕೊಂಚ ಮೊಬಲಗಿನ ಹಿಸ್ಸೆಗಳಾಗಿ ವಿಭಾಗಿಸಬಹುದು.

25 ವಿಶೇಷ ನಿರ್ಣಯವು ಸಮಾಜದ ಯಾದಾಸ್ತಿನಲ್ಲಿ ಅಡಗಿಸಲ್ಪಟ್ಟಿರಬೇಕು.

Associations not for Profit.
ಲಾಭಾರ್ಥವಲ್ಲದ ಸಮಾಜಗಳು.

ಪ್ರಕರಣಗಳು.

26 ಲಾಭಾರ್ಥವಲ್ಲದ ಉದ್ದೇಶಗಳ ಬಗ್ಯೆ ಏರ್ಪಾಡಾದ ಸಮಾಜಗಳ ವಿಷಯಗಳಲ್ಲಿ ವಿಶೇಷ ನಿಬಂಧನೆಗಳು.

Calls upon Shares.
ಹಿಸ್ಸೆಗಳ ಮೇಲೆ ತಗಾದೆ.

27 ಹಿಸ್ಸೆಗಳ ಪೈಕಿ ಕೆಲವನ್ನು ಪೂರಾ ಪಾವತಿ ಮಾಡಿಸಿಕೊಂಡೂ ಇತರ ಹಿಸ್ಸೆಗಳು ಹಾಗೆ ಅಲ್ಲದೆಯೂ ಕಂಪೆನಿಯವ ಮಾಡಿಕೊಳ್ಳಬಹುದು.

28 ಹಿಸ್ಸೆಗಳು ಯಾವ ರೀತಿಯಲ್ಲಿ ಕೊಡೋಣಾಗಬೇಕು ವ ಇಟ್ಟುಕೊಳ್ಳಬೇಕು.

Transfer of Shares.
ಹಿಸ್ಸೆಗಳ ಪರಭಾರೆಯು.

29 ಪರಭಾರೆ ಮಾಡುವವನು ಕೇಳಿಕೊಂಡರೆ ಪರಭಾರೆಯನ್ನು ರಜಿಸ್ಟರ ಮಾಡಬಹುದು.

Share-warrants to Bearer.
ಕೊಂಡುಬರುವವನಿಗೆ ಷೇರ ವಾರಂಟುಗಳು ಅಂದರೆ ಹಿಸ್ಸೆಯ ಖಾತರೀ ಪತ್ರಗಳು

30 ತರುವವನ ಹೆಸರಿನಲ್ಲಿ ಪೂರ್ತಿಯಾಗಿ ಸಂದಾಯವಾದ ಕ್ಲಿಪ್ತ ಪಡಿಸಲ್ಪಟ್ಟ ಹಿಸ್ಸೆಗಳ ವಾರಂಟನ್ನು ಕೊಡಬಹುದು ಕಂಪೆನಿಗಳು.

31 ಷೇರ ವಾರಂಟಿನ ಫಲ.

32 ಷೇರವಾರಂಟು ತರುವವನ ಹೆಸರು ರಜಿಸ್ಟರ ಪುಸ್ತಕದಲ್ಲಿ ಪ್ರವೇಶ ರಜಿಸ್ಟರ ಮಾಡೋಣ.

33 ಕಂಪೆನಿಯ ಕಾಯಿದೆಗಳು ಬಂದು ಷೇರ ವಾರಂಟನ್ನು ತರುವವನನ್ನು ಒಬ್ಬ ಮೆಂಬರಾಗಿ ಮಾಡಬಹುದು.

34 ಷೇರ ವಾರಂಟನ್ನು ಕೊಟ್ಟರೆ ರಜಿಸ್ಟರಿನಲ್ಲಿರಬೇಕಾದ ಖತಾಯಿತಿಗಳು.

35 ಷೇರ ವಾರಂಟುಗಳ ಮೇಲೆ ಸ್ಟಾಂಪು ಹಾಸಲುಗಳು.
ಕ್ರಮವಾಗಿ ಸ್ಟಾಂಪಿಲ್ಲದೆ ಷೇರ ವಾರಂಟು ಕೊಟ್ಟರೆ ದಂಡನೆ.

Change of Name.
ಹೆಸರನ್ನು ಬದಲಾಯಿಸುವಿಕೆ.

36 ಹೆಸರನ್ನು ಬದಲಾಯಿಸಲಿಕ್ಕೆ ಕಂಪೆನಿಗಳಿಗೆ ಉಂಟಾಗಿರುವ ಅಧಿಕಾರ.

Articles of Association.
ಸಮಾಜದ ನಿಬಂಧನೆಗಳು.

37 ರೆಗ್ಯುಲೇಷನುಗಳು ಸಮಾಜದ ನಿಬಂಧನೆಗಳಿಂದ ನಿರ್ದೇಶಿಸಲ್ಪಡಬೇಕು.

38 A ಪಂತಿಯನ್ನು ಉಪಯೋಗಪಡಿಸಿಕೊಳ್ಳೋಣ.

39 ಸಮಾಜದ ನಿಬಂಧನೆಗಳ ದಸ್ತಕತ್ತಿನ ಫಲ.

General Provisions.
ಸಾಮಾನ್ಯ ನಿಬಂಧನೆಗಳು.

40 ಸಮಾಜದ ಯಾದಾಸ್ತನ್ನು ಮತ್ತು ಸಮಾಜದ ನಿಬಂಧನೆಗಳನ್ನು B ಪಂತಿಯಲ್ಲಿರುವಹಾಗೆ ರುಸುಂಗಳನಿ ರಜಿಸ್ಟರ್ಮಾಡಿಸೋಣ.

41 ರಜಿಸ್ಟ್ರೇಷನಿನ ಫಲ.

42 ಯಾದಾಸ್ತಿನ ವ ನಿಬಂಧನೆಗಳ ನಕಲುಗಳು ಮೆಂಬರುಗಳಿಗೆ ಕೊಡಲ್ಪಡಬೇಕು.

43 ಕಂಪೆನಿಗಳ ಹೆಸರುಗಳು ಒಂದರಂತೆ ಮತ್ತೊಂದು ಇರಕೂಡದೆಂಬ ನಿಷೇಧ.

PART II.
2ನೇ ಭಾಗ.

DISTRIBUTION OF CAPITAL AND LIABILITY OF MEMBERS OF COMPANIES AND ASSOCIATIONS UNDER THIS REGULATION.
ಈ ರೆಗ್ಯುಲೇಷನಿನ ಪ್ರಕಾರ ಕಂಪೆನಿಗಳ ವ ಸಮಾಜಗಳ ಮೂಲದ್ರವ್ಯದ ವಿಭಾಗ ಮತ್ತು ಮೆಂಬರುಗಳ ಜವಾಬ್ದಾರಿ.

Distribution of Capital.
ಮೂಲದ್ರವ್ಯದ ವಿಭಾಗ.

44 ಕಂಪೆನಿಯಲ್ಲಿನ ಸಂಬಂಧದ ಸ್ವಭಾವ.

45 "ಮೆಂಬರ" ಎಂಬ ಪದದ ವಿವರಣೆ.

ಪ್ರಕರಣಗಳು.

46 ಸ್ವಂತ ವಾರಸುದಾರನಿಂದ ಪರಿಹಾರ ಮಾಡಲ್ಪಡೋಣ.

47 ಮೆಂಬರುಗಳ ರಿಜಿಸ್ಟರ.

48 ಮೆಂಬರುಗಳ ಸಾಲಿಯಾನಾ ಫೇರೀಸ್ತು.

49 ಸಾಲಿಯಾನಾ ಸಮ್ಮರಿ(ಗೋಷ್ವಾರೆ)ಯಲ್ಲಿರಬೇಕಾದ ತಪ್ಸೀಲುಗಳು.

50 ಸರಿಯಾದ ರಿಜಿಸ್ಟರು ಇಡದಂತ ಕಂಪನಿ ವಗೈರೆಗಳಿಗೆ ದಂಡನೆ.

51 ಮೂಲಧನವನ್ನು ಬಿಟ್ಟುಬಿಡಿಸೋಣವನ್ನುಯಾ ಸ್ಟಾಕಿಗೆ ಸೇರಿಸೋಣವನ್ನು ಕುರಿತು ಕಂಪೆನಿಯವರು ನೋಟಿಸ ಕೊಡತಕ್ಕದ್ದು.

52 ಹಿಸ್ಸೆಗಳನ್ನು ಸ್ಟಾಕಿಗೆ ಪರಿವರ್ತಿಸೋಣದರಿಂದ ಉಂಟಾಗುವ ಫಲ.

53 ಸೂತ್ತನ್ನು ನಂಬಿಕೆಮೇಲೆ ಇಡೋಣವನ್ನು ರಿಜಿಸ್ಟರಿನಲ್ಲಿ ದಾಖಲುಮಾಡಿಸೋಣ.

54 ಹಿಸ್ಸೆಗಳ ಯಾ ಸ್ಟಾಕಿನ ಸರ್ಟಿಫಿಕೇಟ.

55 ರಿಜಿಸ್ಟರನ್ನು ನೋಡೋಣ.

56 ರಿಜಿಸ್ಟರನ್ನು ಮುಚ್ಚುವುದುಮಾಡಲಿಕ್ಕೆ ಅಧಿಕಾರ.

57 ಮೂಲಧನದ ವ ಮೆಂಬರುಗಳ ಹೆಚ್ಚಿಗೆ ವಿಷಯದಲ್ಲಿ ರಿಜಿಸ್ಟ್ರಾರವರಿಗೆ ನೋಟಿಸ ಕೊಡಲ್ಪಡಬೇಕು.

58 ರಿಜಿಸ್ಟರಿನಲ್ಲಿ ಸರಿಯಲ್ಲದ ಖಿತಾಯಿತಿ ಮಾಡಲ್ಪಟ್ಟರೆ ಅಥವಾ ಮಾಡಲ್ಪಡಬೇಕಾದ್ದು ಬಿಟ್ಟುಬಿಡಲ್ಪಟ್ಟರೆ ಅದನ್ನು ಸರಿಮಾಡಿಸಲಿಕ್ಕೆ ಉಪಾಯ.

59 ರಿಜಿಸ್ಟರಿನಲ್ಲಿ ತಿದ್ದುಪಡಿ ಮಾಡಲ್ಪಟ್ಟದ್ದಕ್ಕಾಗಿ ರಿಜಿಸ್ಟ್ರಾರವರಿಗೆ ನೋಟಿಸ.

60 ರಿಜಿಸ್ಟರು ಸಾಕ್ಷ್ಯವಾಗಿರಬೇಕು.

Liability of Members.
ಮೆಂಬರುಗಳ ಜವಾಬ್‌ದಾರಿ.

61 ಕಂಪೆನಿಯ ಹಾಲಿ ವ ಮಾಜಿ ಮೆಂಬರುಗಳ ಜವಾಬ್‌ದಾರಿ.

62 ಅಪರಿಮಿತವಾದ ಜವಾಬ್ದಾರಿಯುಳ್ಳ ಡೈರೆಕ್ಟರ ವಿಲ್ಲಂಘವು ಅಂದರೆ ಜವಾಬ್ದಾರಿಯು.

PART III.
3ನೇ ಭಾಗ.

MANAGEMENT AND ADMINISTRATION OF COMPANIES AND ASSOCIATIONS UNDER THIS REGULATION.

ಈ ರೆಗ್ಯುಲೇಷನಿನ ಪ್ರಕಾರ ಕಂಪೆನಿಗಳ ವ ಸಮಾಜಗಳ ಬಾಬಿತು ಮೇಲ್ವಿಚಾರಣೆ ವ ಕಾರುಭಾರು ನಡಿಸೋಣ

Provisions for Protection of Creditors.
ಲೇಣೇದಾರರ ರಕ್ಷಣೆಯ ಬಗ್ಯೆ ನಿಬಂಧನೆಗಳು.

63 ಕಂಪೆನಿಯ ರಿಜಿಸ್ಟರಮಾಡಲ್ಪಟ್ಟ ಆಫಿಸು.

64 ರಿಜಿಸ್ಟರಮಾಡಲ್ಪಟ್ಟ ಆಫಿಸ ಇರತಕ್ಕ ಸ್ಥಳವನ್ನು ಕುರಿತು ನೋಟೀಸ.

65 ಲಿಮಿಟೆಡ ಮಾಡಲ್ಪಟ್ಟ ಕಂಪೆನಿಯಿಂದ ಹೆಸರು ಪ್ರಕಟಿಸಲ್ಪಡೋಣ.

66 ಹೆಸರು ಪ್ರಕಟಿಸಲ್ಪಡದ ಸಬಬ್ ದಂಡನೆಗಳು.

Contracts.
ಕರಾರುಗಳು.

67 ಕರಾರುಗಳು ಹ್ಯಾಗೆ ಮಾಡಲ್ಪಡಬೇಕು.

68 ಒತ್ತೆಗಳ ಅಂದರೆ ಅಡಮಾನಗಳ ರಿಜಿಸ್ಟರು.

69 ಕೆಲವು ಕಂಪೆನಿಗಳು ಪಟ್ಟಿಯಲ್ಲಿ ನಮೂದಿಸಿರುವ ತಖ್ತೆಯನ್ನು ಪ್ರಕಟಿಸಬೇಕು.

70 ಡೈರೆಕ್ಟರುಗಳು ಫೇರೀಸ್ತು ರಿಜಿಸ್ಟ್ರಾರವರ ಬಳಿಗೆ ಕಳುಹಿಸಲ್ಪಡಬೇಕು.

71 ಡೈರೆಕ್ಟರುಗಳ ರಿಜಿಸ್ಟರನ್ನು ಇಡದಂತ ಕಂಪೆನಿಗೆ ದಂಡನೆ.

72 ಪ್ರಾಮಿಸರಿ ನೋಟುಗಳು ಬಿಲ ಆಫ್ ಎಕ್ಸ್‌ಚೇಂಜಗಳು ವ ಹುಂಡಿಗಳು.

73 ಮೆಂಬರುಗಳು ಏಳುಮಂದಿಗಿಂತ ಕಮ್ಮಿಯಾದರೆ ಕೆಲಸ ನಡಿಸಕೂಡದಂತ ಆತಂಕ.

Provisions for Protection of Members.
ಮೆಂಬರುಗಳ ರಕ್ಷಣೆಯಬಗ್ಯೆ ನಿಬಂಧನೆಗಳು.

74 ಕಂಪೆನಿಯ ಸಾಧಾರಣ ಅಂದರೆ ಮಹಾಸಭೆ; ಬಾಲೆನ್ಸ್‌ಷೀಟ ಅಂದರೆ ಬಾಕೀಪಟ್ಟಿ ಲೆಕ್ಕದ ತನಿಖೆ.

Meetings.
ಮೀಟಿಂಗುಗಳು.

75 ಕಂಪೆನಿಯವರು ರಿಜಿಸ್ಟರಾದ ಆರುತಿಂಗಳೊಳಗಾಗಿ ಮೀಟಿಂಗ ಕೇರಬೇಕು.

ಸ್ಪೆಷಲ ರೆಜಲ್ಯೂಷನ ಎಂಬ ವಿಶೇಷ ನಿರ್ಣಯದಿಂದ ನಿಬಂಧನೆಗಳನ್ನು ತಿದ್ದಲಿಕ್ಕೆ ಅಧಿಕಾರ

ಡೈರೆಕ್ಟರರ ಜವಾಬ್ದಾರಿಯನ್ನು ಅಪರಿಮಿತಪಡಿಸುವದಕ್ಕೆ ಅಧಿಕಾರ.

ಪ್ರಕರಣಗಳು.

77 ಸ್ಪೆಷಲ್ ರೆಜಲ್ಯೂಷನ್ ಅಂದರೆ ವಿಶೇಷ ನಿರ್ಣಯದ ಅರ್ಥವಿವರಣೆ.

78 ಸಭೆ ಸೇರುವ ವಿಷಯದಲ್ಲಿ ವಿಧಿಗಳು ಇಲ್ಲದೇ ಇದ್ದರೆ ನಿಬಂಧನೆ,

79 ವಿಶೇಷ ನಿರ್ಣಯಗಳು ರಿಜಿಸ್ಟರ್ಮಾಡಲ್ಪಡೋಣ.

80 ಸಮಾಜದ ನಿಬಂಧನೆಗಳಲ್ಲಿ ಸೇರಿಸಬೇಕಾದ ವಿಶೇಷ ನಿರ್ಣಯಗಳ ನಕಲುಗಳು.

81 ಹೊರದೇಶಗಳಲ್ಲಿ ಪತ್ರಗಳನ್ನು ಬರಕೊಡೋಣ.

82 ಕಂಪೆನಿಯ ಆಡಳಿತಗಳು ಇನ್ಸ್ಪೆಕ್ಟರುಗಳಿಂದ ಪರೀಕ್ಷಿಸಲ್ಪಡೋಣ.

83 ಪರಿಶೋಧನೆ ಬಗ್ಗೆ ಮಾಡಲ್ಪಡುವ ಮನವಿಯು ಸಾಕ್ಷ್ಯದಿಂದ ಆಧರಿಸಲ್ಪಟ್ಟಿರಬೇಕು.

84 ಪುಸ್ತಕಗಳ ಪರಿಶೋಧನೆ.

85 ಪರಿಶೋಧನೆಯ ಫಲದ ವಿಷಯದಲ್ಲಿ ಹ್ಯಾಗೆ ವರ್ತಿಸಬೇಕೆಂಬುದು.

86 ಇನ್ಸ್ಪೆಕ್ಟರುಗಳನ್ನು ಮೊಕರರುಮಾಡಲಿಕ್ಕೆ ಕಂಪೆನಿಯವರಿಗುಂಟಾಗಿರುವ ಅಧಿಕಾರ.

87 ಇನ್ಸ್ಪೆಕ್ಟರುಗಳ ರಿಪೋರ್ಟು ಸಾಕ್ಷ್ಯವಾಗಿರಬೇಕು.

88 ಕೆಲವು ಮುಂಚಿನ ಕರಾರುಗಳಿಗೆ ಸೇರಿದ ಪಕ್ಷಗಾರರ ಹೆಸರುಗಳನ್ನು ವ ತಾರೀಖುಗಳನ್ನು ಪ್ರಾಸ್ಪೆಕ್ಟಸ್ ವಗೈರೆಗಳಲ್ಲಿ ನಮೂದಿಸಿರತಕ್ಕದ್ದು.

Notices.
ನೋಟೀಸುಗಳು.

89 ನೋಟೀಸುಗಳನ್ನು ಕಂಪೆನಿಗಳ ಮೇಲೆ ಜಾರಿ ಮಾಡೋಣ.

90 ಲಿಖಿತಮೂಲಕವಾದ ನೋಟೀಸುಗಳ ವಿಷಯದಲ್ಲಿ ಖಾಯಿದೆಗಳು.

91 ಕಂಪೆನಿಯಿಂದ ನೋಟೀಸುಗಳು ಯಥಾರ್ಥ ಮಾಡಲ್ಪಡೋಣ.

Legal Proceedings.
ನ್ಯಾಯ ಸಂಬಂಧವಾದ ನಡವಳಿಕೆಗಳು.

92 ಸಭೆ ಸೇರಿದಾಗ್ಯೆಲ್ಲಾ ಬರೆದಿಡೋಣಾಗುವ ನಡವಳಿಕೆಗಳ ಸಾಕ್ಷ್ಯ.

93 ಕೆಲವು ಕ್ಲಿಪ್ತ ಪಡಿಸಲ್ಪಟ್ಟ ಕಂಪೆನಿಗಳಿಂದ ತರಲ್ಪಡುವ ವ್ಯವಹರಣೆಗಳ ಖರ್ಚುಗಳ ಬಗ್ಗೆ ನಿಬಂಧನೆ.

94 ಮೆಂಬರುಗಳ ಮೇಲೆ ತರಲ್ಪಡುವ ವ್ಯವಹರಣೆಗಳ ವಿಷಯದಲ್ಲಿ ದಾವಾ ಅರ್ಜಿ.

Alteration of Forms.
ನಮೂನೆಗಳ ಬದಲಾವಣೆ.

95 ಉಪಯೋಗಿಸಬೇಕಾದ ನಮೂನೆಗಳು.

ನಮೂನೆಗಳನ್ನು ಮೈಸೂರ ಗವರ್ನಮೆಂಟಿನವರು ಬದಲಾಯಿಸಬಹುದು

Arbitrations.
ಪಂಚಾಯಿತಿಗಳು.

96 ಯಾವ ಕಾರ್ಯಗಳನ್ನಾಗಲಿ (arbitration) ಆರ ಬಿಟ್ರೇಷನ್ ಎಂಬ ಪಂಚಾಯಿ… ಗಳಿಗೆ ಉಂಟಾಗಿರುವ ಅಧಿಕಾರ.

97 ದಾಖಲೆ ಬಗ್ಗೆ ಕರಾರುಗಳನ್ನು ಬದಲಾಯಿಸಲಿಕ್ಕೆ ಯಾ ರದ್ದುಮಾಡಲಿಕ್ಕೆ ಉಂಟಾ…

98 ಕರಾರುಗಳು ಜಾರೀಲಿ ತರಲ್ಪಡತಕ್ಕದ್ದು.

99 ಅರ್ಬಿಟ್ರೇಟರ ಎಂಬ ಪಂಚಾಯಿತಿದಾರನಿಗೆ ರೆಫರ ಮಾಡೋಣ.

100 ಇಬ್ಬರು ಯಾ ಹೆಚ್ಚುಮಂದಿ ಪಂಚಾಯಿತಿದಾರರಿಗೆ ರೆಫರ ಮಾಡೋಣ…

101 ಪಂಚಾಯಿತಿದಾರರು ಕಂಪೆನಿಗಳಿಂದ ಮೊಕರರ್ಮಾಡಲ್ಪಡೋಣ.

102 ಪಂಚಾಯಿತಿದಾರರು ವ… …ದಿಂದ ವ…

103 ಖಾಲಿಯಾಗುವ ಇಸಮು… …ಕ…

104 ಖಾಲಿಯಾಗುವ ಇಸ…

ಪ್ರಕರಣಗಳು.

112 ಪುಸ್ತಕ ವಗೈರೆಗಳನ್ನು ತರಿಸುವದಕ್ಕೂ ಸಾಕ್ಷಿಗಾರರನ್ನು ಪ್ರಮಾಣದ ಮೇಲೆ ವಿಚಾರಣೆ ಮಾಡುವದಕ್ಕೂ ಪಂಚಾಯಿತಿದಾರ್ ವಗೈರೇರಿಗೆ ಉಂಟಾಗಿರುವ ಅಧಿಕಾರ.

113 ಪಂಚಾಯಿತಿ ವಿಷಯದಲ್ಲಿ ಅನುಸರಿಸಬೇಕಾದ ಕ್ರಮ.

114 ಕಂಪೆನಿಗಳವರ ಗೈರ ಹಾಜರಿಯಲ್ಲಿ ಪಂಚಾಯಿತಿದಾರರು ಕೆಲಸ ನೋಡಬಹುದು.

115 ಅನೇಕ ತೀರ್ಪುಗಳು ಮಾಡಲ್ಪಡಬಹುದು.

116 ತಕ್ಕ ಕಾಲದಲ್ಲಿ ಮಾಡೋಣಾದ ತೀರ್ಪುಗಳು ಸಮಸ್ತ ಕಕ್ಷಿಗಾರರನ್ನೂ ಬದ್ಧಪಡಿಸತಕ್ಕದ್ದೆಂಬುದು.

117 ತೀರ್ಪು ಕೊಡತಕ್ಕ ಮಾಯಿದೆಯನ್ನು ಹೆಚ್ಚಿಸಲಿಕ್ಕೆ ಮಧ್ಯಸ್ಥಗಾರನಿಗೆ ಉಂಟಾಗಿರುವ ಅಧಿಕಾರ.

118 ತೀರ್ಪುಗಳು ಪದ್ಧತಿ ಪ್ರಕಾರ ಕೊಡಲ್ಪಡಲಿಲ್ಲವೆಂಬ ಸಬಬಿನಮೇಲೆ ತಿರಸ್ಕರಿಸಲ್ಪಡಕೂಡದು.

119 ತೀರ್ಪುಗಳಿಗೆ ವಿಧೇಯರಾಗತಕ್ಕದ್ದು.

120 ಕರಾರುಗಳು—ಪಂಚಾಯಿತಿಗಳು ಮ ತೀರ್ಪುಗಳು ಸಲುವಳಿಯಾಗುವವುಗಳಾಗಿರತಕ್ಕದ್ದು.

121 ಪಂಚಾಯಿತಿಯ ಮ ತೀರ್ಪಿನ ಖರ್ಚುಗಳು.

122 ಖರ್ಚುಗಳ ಸಂದಾಯ.

123 ಪಂಚಾಯಿತರ ಬಳಿ ಕಳುಹಿಸೋಣವಾದದ್ದನ್ನು ಕೋರ್ಟಿನಲ್ಲಿ ದಾಖಲ್ ಮಾಡಬಹುದು.

PART IV.
4ನೇ ಭಾಗ.

WINDING-UP OF COMPANIES AND ASSOCIATIONS UNDER THIS REGULATION.
ಈ ರೆಗ್ಯುಲೇಷನಿನ ಪ್ರಕಾರ ಕಂಪೆನಿಗಳನ್ನೂ ಸಮಾಜಗಳನ್ನೂ ಮುಚ್ಚಿ ಬಿಡೋಣ

Preliminary.
ಅವತರಣಿಕೆ.

124 ಕಾಂಟ್ರಿಬ್ಯುಟರಿ ಅಂದರೆ "ಸಹಾಯಕನು" ಎಂಬದರ ಅರ್ಥ.

125 ಸಹಾಯಕನ ಜವಾಬ್ದಾರಿಯ ಸ್ವಭಾವ.

126 ಮರಣದ ಸಂಗತಿಯಲ್ಲಿ ಸಹಾಯಕರು.

...ವಾಳಿಯಾಗುವ ಸಂಗತಿಯಲ್ಲಿ ಸಹಾಯಕರು.

Winding-up by Court.
ಕೋರ್ಟಿನವರಿಂದ ಮುಚ್ಚಿ ಬಿಡಲ್ಪಡೋಣ.

...ರ್ಥಗಳಲ್ಲಿ ಕಂಪೆನಿಯು ಕೋರ್ಟಿನವರಿಂದ ಮುಚ್ಚಲ್ಪಡಬಹುದು ಎಂಬದು.

...ತನ್ನ ಸಾಲಗಳನ್ನು ತೀರಿಸಲಿಕ್ಕೆ ಶಕ್ತನಲ್ಲವೆಂದು ಯಾವಾಗ ಗ್ರಹಿಸಲ್ಪಡಬೇಕು.

... ಎಂಬದರ ಅರ್ಥವಿವರಣೆ.

...ಎಂಬದರ ಅರ್ಥವಿವರಣೆ.

... ವಿಷಯದಲ್ಲಿ ಮನವಿಯು ಅರ್ಜಿಯದ್ವಾರಾ ಮಾಡಲ್ಪಡಬೇಕು.

...ಯುವ ಅರ್ಜಿಯನ್ನು ಕೊಡುವದಕ್ಕೆ ಕಾಂಟ್ರಿಬ್ಯುಟರಿ ಅಂದರೆ ಸಹಾಯಕನು ಯಾವಾಗ ...

... ಮುಚ್ಚಲ್ಪಡುವಿಕೆಯ ಪ್ರಾರಂಭ.

... ಕೊಡಬಹುದು.

...ಕೋರ್ಟಿನವರಿಂದ ನಡಿಸಲ್ಪಡಬೇಕಾದ ಕ್ರಮ.

...ನಾಯ ವ್ಯವಹಾರಗಳು ನಿಲ್ಲಿಸಲ್ಪಡಬೇಕು.

... ಕಳುಹಿಸಲ್ಪಡಬೇಕು.

...ರಿಗೆ ...

...ನಿಯ ... ಮೇಲೆ ಹುಕುಮಿನ ಫಲ.

...ಹುದು

Ordinary Powers of Court.
ಕೋರ್ಟಿನವರ ಸಾಧಾರಣ ಅಧಿಕಾರಗಳು.

ಪ್ರಕರಣಗಳು.

147 ಸೊತ್ತುಗಳನ್ನೆಲ್ಲಾ ಜಮಾಯಿಸೋಣ ವ ವಿನಿಯೋಗಿಸೋಣ.
148 ಸಹಾಯಕರ ಪ್ರತಿನಿಧಿಗಳ ವಿಷಯದಲ್ಲಿ ನಿಬಂಧನೆ.
149 ಸೊತ್ತುಗಳನ್ನು ಒಪ್ಪಿಸಿಬಿಡುವಂತೆ ಹೇಳಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.
150 ಸಾಲಗಳನ್ನು ತೀರಿಸುವಂತೆ ಸಹಾಯಕನಿಗೆ ಹುಕುಂ ಮಾಡಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.
151 ವರಾತಗಳನ್ನು ಕಳುಹಿಸಲಿಕ್ಕೆ ಕೋರ್ಟಿನವರಿಗುಂಟಾಗಿರುವ ಅಧಿಕಾರ.
152 ಬ್ಯಾಂಕಿಗೆ ಹಣ ಸಂದಾಯಮಾಡುವಂತೆ ಹುಕುಂಮಾಡಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.
153 ಕೋರ್ಟಿನೊಂದಿಗೆ ಲೆಕ್ಕ ಕ್ರಮಪಡಿಸೋಣ.
154 ಪ್ರತಿನಿಧಿಯಾದ ಸಹಾಯಕನು ಹುಕುಂ ಮಾಡೋಣವಾದ ಹಣಗಳನ್ನು ಸಂದಾಯಮಾಡದೆ ಹೋಗುವ ಸಂಗತಿಯಲ್ಲಿ ನಿಬಂಧನೆ.
155 ಹುಕುಂ ಅಖೈರು ಸಾಕ್ಷ್ಯವಾಗಿರೋಣ.
156 ಕ್ಲಿಪ್ತಕಾಲದ ಒಳಗಾಗಿ ರುಜುಪಡಿಸಿಕೊಡದೇ ಹೋಗುವ ಋಣೀದಾರರನ್ನು ಕೋರ್ಟಿನವರು ಬಿಟ್ಟು ಬಿಡಬಹುದು.
157 ಸಹಾಯಕರ ಹಕ್ಕುಗಳನ್ನು ಕೋರ್ಟಿನವರು ಫೈಸಲುಮಾಡಬೇಕು.
158 ಕೋರ್ಟಿನವರು ಖರ್ಚುಗಳ ಬಗ್ಗೆ ಹುಕುಂ ಮಾಡಬಹುದು.
159 ಕಂಪೆನಿಯು ಅಗಲಿಸಲ್ಪಡೋಣ.
160 ಕಂಪೆನಿಯ ಅಗಲಿಕೆಯನ್ನು ಕುರಿತು ರಿಜಿಸ್ಟ್ರಾರ್‌ರವರು ಪತ್ರ ಬರೆದು ಇಟ್ಟುಕೊಳ್ಳತಕ್ಕದ್ದು.
161 ಕಂಪೆನಿಯ ಅಗಲಿಕೆಯನ್ನು ಕುರಿತು ರಿಪೋರ್ಟು ಮಾಡದೆ ಇದ್ದರೆ ದಂಡನೆ.

Extraordinary Powers of Court.
ಕೋರ್ಟಿನವರ ವಿಶೇಷ ಅಧಿಕಾರಗಳು.

162 ಕಂಪೆನಿಯ ಸೊತ್ತನ್ನು ಇಟ್ಟುಕೊಂಡಿರುವಂತೆ ಗುಮಾನಿಯಾಗುವ ಮನುಷ್ಯರನ್ನು ತಮ್ಮ ಮುಂದೆ ಹಾಜರಾಗಹೇಳಿ ಸಮ್ಮರ್ ಮಾಡಲಿಕ್ಕೆ ಕೋರ್ಟಿನವರಿಗುಂಟಾಗಿರುವ ಅಧಿಕಾರ.
163 ಕೋರ್ಟಿನವರಿಂದ ಕಕ್ಷಿಗಾರರ ವಿಚಾರಣೆ.
164 ಓಡಿಹೋಗಲಿಕ್ಕಿರುವ ಅಥವಾ ತನ್ನ ಸೊತ್ತನ್ನು ಯಾವದನ್ನಾದರೂ ... ಬಚ್ಚಿಡಲಿಕ್ಕಿರುವ ಕನನ್ನು ದಸ್ತಗಿರಿ ಮಾಡುವದಕ್ಕೆ ಅಧಿಕಾರ
165 ಕೋರ್ಟಿನವರ ಅಧಿಕಾರಗಳು ವಿಶೇಷವಾಗಿ

Enforcement of
ಹುಕುಮುಗಳ ಅಮಲ್‌ಜ...

166 ಹುಕುಮುಗಳನ್ನು ಅಮಲ್‌ಜಾರಿ ಮಾಡಲಿಕ್ಕೆ ಅ...
167 ಯಾವ ಕೋರ್ಟಿನಲ್ಲಾದರೂ ಕೊಡೋಣವಾದ ಹುಕು...
168 ಇತರ ಕೋರ್ಟುಗಳವರಿಂದ ಅಮಲ್‌ಜಾರಿ ಮಾಡಲ್ಪಡ...
169 ಹುಕುಮುಗಳ ಮೇಲೆ ಅಪೀಲುಗಳು.
170 ಆಫೀಸರುಗಳ ದಸ್ತಕತ್ತಿನ ವಿಷಯದಲ್ಲಿ ಜುಡಿಷಿಯಲ್ ನೋಟೀಸ್ ತೆಗೆದು...
171 ಸಾಕ್ಷ್ಯವನ್ನು ತೆಗೆದುಕೊಳ್ಳಲಿಕ್ಕೆ ಸ್ಪೆಷಲ್ ಕಮ್ಮಿಷನರುಗಳು.
172 ಮೈಸೂರ್, ಬ್ರಿಟಿಷ್ ಇಂಡ್ಯಾ ಗ್ರೇಟ್‌ಬ್ರಿಟನ್ ಯಾ ಐರ್ಲ್ಯಾಂಡ್ ಈ ದೇಶಗ... ಗಳಿ ಯಾವ ಯುಕ್ತವಾದ ಕೋರ್ಟಿನ ಯಾ ಮನುಷ್ಯನ ಎದುರಿಗಾದರೂ ಪ್ರಮಾಣ ಮಾಡಿಸಲ್ಪಡಬಹುದು.

Voluntary Winding-up of Company.
ಕಂಪೆನಿಯನ್ನು ಮನಃಪೂರ್ವಕವಾಗಿ ಮುಚ್ಚಿಬಿಡ...

173 ಯಾವ ಸಂದರ್ಭಗಳಲ್ಲಿ ಕಂಪೆನಿಯನ್ನು ಮನಃಪೂರ್ವಕವಾಗಿ ಮುಚ್ಚಿಬಿಡ...
174 ಮನಃಪೂರ್ವಕವಾಗಿ ಮುಚ್ಚಿಬಿಡಲಿಕ್ಕೆ ಪ್ರಾರಂಭ.
175 ಕಂಪೆನಿಯು ಯಾವ ಸ್ಥಿತಿಯಲ್ಲಿರುತ್ತದೋ ಅದೇ ಸ್ಥಿತಿಯಲ್ಲಿ ಮನಃಪೂರ್...
176 ಮನಃಪೂರ್ವಕವಾಗಿ ಮುಚ್ಚಿಬಿಡಬೇಕೆಂಬ ನಿರ್ಣಯದ ನೋಟೀಸ್.
177 ಮನಃಪೂರ್ವಕವಾಗಿ ಮುಚ್ಚಿಬಿಡೋಣದರಿಂದ ಉಂಟಾಗುವ ಫಲ.
178 ಜವಾಬಿನಿಂದ ಕ್ಲಿಪ್ತಪಡಿಸಲ್ಪಟ್ಟ ಕಂಪೆನಿಯ ಹಿಸ್ಸೆ—ಮೂಲಧನದ ಮೇಲ...

ಪ್ರಕರಣಗಳು.

179 ಲಿಕ್ವಿಡೇಟರುಗಳನ್ನು ನೇಮಕಮಾಡುವ ವಿಷಯದಲ್ಲಿ (ಇತರರಿಗೆ) ಅಧಿಕಾರ ಕೊಡಲಿಕ್ಕೆ ಕಂಪೆನಿಯವರಿಗೆ ಉಂಟಾಗಿರುವ ಅಧಿಕಾರ.

180 ವಿಲೇವಾರಿ ಲೇಣೇದಾರರಿಗೆ ಯಾವಾಗ ಬದ್ಧಪಡಿಸುತ್ತದೆಂಬುದು.

181 ಲೇಣೇದಾರರಿಗೆ ಯಾ ಸಹಾಯಕನಿಗೆ ಅಪೀಲ್ ಮಾಡುವದಕ್ಕೆ ಉಂಟಾಗಿರುವ ಅಧಿಕಾರ.

182 ಮನಃಪೂರ್ವಕವಾಗಿ ಮುಕ್ತಿ ಬಿಡುವ ವಿಷಯದಲ್ಲಿ ಲಿಕ್ವಿಡೇಟರುಗಳು ಯಾ ಸಹಾಯಕರು ಕೋರ್ಟಿಗೆ ಮನವಿಮಾಡಿಕೊಳ್ಳಲಿಕ್ಕೆ ಅವರಿಗುಂಟಾಗಿರುವ ಅಧಿಕಾರ.

183 ಸಾಧಾರಣ ಸಭೆ ಕರೆಯಲಿಕ್ಕೆ ಲಿಕ್ವಿಡೇಟರುಗಳಿಗೆ ಉಂಟಾಗಿರುವ ಅಧಿಕಾರ.

184 ಲಿಕ್ವಿಡೇಟರುಗಳ ಕೆಲಸ ಖಾಲಿಯಾದಾಗ ಅದನ್ನು ಭರ್ತಿ ಮಾಡಲಿಕ್ಕೆ ಅಧಿಕಾರ.

185 ಲಿಕ್ವಿಡೇಟರುಗಳನ್ನು ನೇಮಕಮಾಡುವದಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

186 ಮುಕ್ತಿ ಬಿಡೋಣಾದ ತರುವಾಯ ಆಖೈರಿನಲ್ಲಿ ಲಿಕ್ವಿಡೇಟರುಗಳು ಒಂದು ಲೆಕ್ಕವನ್ನು ತಯಾರುಮಾಡಬೇಕು.

187 ಸಭೆ ಕರೆದದ್ದನ್ನು ಕುರಿತು ಲಿಕ್ವಿಡೇಟರುಗಳು ರಜಿಸ್ಟ್ರಾರರವರಿಗೆ ರಿಪೋರ್ಟು ಮಾಡಬೇಕು.

188 ಮನಃಪೂರ್ವಕವಾಗಿ ಸಾಲ ತೀರಿಸೋಣದರ ಖರ್ಚುಗಳು.

189 ಲೇಣೇದಾರರ ಹಕ್ಕುಗಳ ವಿನಾಯಿತಿ.

190 ಮನಃಪೂರ್ವಕವಾಗಿ ಮುಕ್ತಿ ಬಿಡೋಣದರ ನಡವಳಿಕೆಗಳನ್ನು ಅಂಗೀಕರಿಸಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

Winding-up subject to the supervision of the Court.

ಮುಕ್ತಿ ಬಿಡೋಣವು ಕೋರ್ಟಿನವರ ಪರಿಶೋಧನೆಗೆ ಒಳಪಟ್ಟಿರತಕ್ಕದ್ದು.

191 ಮನವಿ ಮಾಡಲ್ಪಟ್ಟಮೇಲೆ, ಮುಕ್ತಿ ಬಿಡೋಣವು ಪರಿಶೋಧನೆಗೆ ಒಳಪಟ್ಟಿರಬೇಕು ಎಂದು ಹುಕುಂ ಮಾಡಲಿಕ್ಕೆ ಕೋರ್ಟಿನವರ ಅಧಿಕಾರ.

192 ಮುಕ್ತಿ ಬಿಡಬೇಕೆಂದು ಬರಕೊಳ್ಳಲ್ಪಟ್ಟ ಅರ್ಜಿ ಪರಿಶೋಧನೆಗೆ ಒಳಪಟ್ಟಿರುತ್ತದೆ.

193 ಕೋರ್ಟಿನವರು ಲೇಣೇದಾರರ ಕೋರಿಕೆಗಳನ್ನು ಆಲೋಚಿಸಬಹುದು.

194 ಮುಕ್ತಿ ಬಿಡೋಣವು ಪರಿಶೋಧನೆಗೆ ಒಳಪಟ್ಟಿದ್ದಲ್ಲಿ ಅಧಿಕ ಲಿಕ್ವಿಡೇಟರನ್ನು ನೇಮಕಮಾಡಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

195 ಪರಿಶೋಧನೆಗೆ ಒಳಪಡಿಸಿ ಮುಕ್ತಿ ಬಿಡಬೇಕು ಎಂದು ಕೋರ್ಟಿನವರಿಂದ ಕೊಡಲ್ಪಡುವ ಹುಕುಮಿನ ಫಲ.

196 ಕೆಲವು ಸಂಗತಿಗಳಲ್ಲಿ ವಾಲಂಟರಿ ಲಿಕ್ವಿಡೇಟರುಗಳನ್ನು ಅಫಿಷಿಯಲ್ ಲಿಕ್ವಿಡೇಟರುಗಳಾಗಿ ಉದ್ಯೋಗಕ್ಕೆ ನೇಮಿಸೋಣ.

Supplemental Provisions.

ಉಪನಿಬಂಧನೆಗಳು.

… ಬಿಡೋಣವು ಪೂರಾವಾದಮೇಲೆ ವಿನಿಯೋಗಗಳು ರದ್ದಾಗುತ್ತವೆಂಬುದು.

… ಪುಸ್ತಕಗಳು ಸಾಕ್ಷ್ಯವಾಗಿರಬೇಕು.

… ಪುಸ್ತಕಗಳನ್ನು ಲೆಕ್ಕಗಳನ್ನು ವ ದಸ್ತಾವೇಜುಗಳನ್ನು ವಿಲೆ ಮಾಡುವ ವಿಷಯದಲ್ಲಿ.

… ಶೋಧನೆ.

… ಪಾವತಿ ಮಾಡಬೇಕಾದ ಸಾಲಗಳು

… ಬಗ್ಗೆ ಸಾಮಾನ್ಯೇರ್ಪಾಡು ಸ್ವೀಕಾರ ಮಾಡಲ್ಪಡಬಹುದು.

… ಅಧಿಕಾರ.

… ಯೋಚಿಸಲ್ಪಟ್ಟರೆ, ಅಂಥಾ ರಾಜಿಯನ್ನು ಕುರಿತು ತೀರ್ಮಾನಿಸಲಿಕ್ಕೆ ಲೇಣೇದಾರ ಮುಂತಾ … ವರಿಗೆ ಕೋರ್ಟಿನವರು ಹುಕುಂ ಮಾಡಬಹುದು.

… ವ್ಯಯದ ಬಗ್ಗೆ ಐವಜಾಗಿ ಹಿಸ್ಸೆ ವಗೈರೆಗಳನ್ನು ಅಂಗೀಕರಿಸಲಿಕ್ಕೆ ಲಿಕ್ವಿಡೇಟರುಗಳಿಗೆ ಉಂಟಾಗಿ …

… ಮಾಡುವ ರೀತಿ.

… ಯಿಂದ ತೀರ್ಮಾನ ಮಾಡಲ್ಪಡಬೇಕಾದಾಗ ಪಂಚಾಯಿತಿದಾರರನ್ನು ನೇಮಕಮಾಡೋಣ.

… ಖಾಲಿಯಾದರೆ ಭರ್ತಿಮಾಡಲ್ಪಡಬೇಕು.

… ಮಾಡೋಣ.

… ಲಿಕ್ಕೆ ಪಂಚಾಯಿತಿದಾರರಿಗುಂಟಾಗಿರುವ ಅಧಿಕಾರ.

… ರ ಅಭಿಪ್ರಾಯಾನುಸಾರವಾಗಿ ತೀರ್ಮಾನಿಸಬೇಕು.

… ಕಾದ ಸಂಗತಿಗಳು ಕೋರ್ಟಿನಲ್ಲಿ ದಾಖಲ್ ಮಾಡಲ್ಪಡಬಹುದು.

… ಸಾಲಗಳು ವ ಅಮಲ್‌ಜಾರಿಗಳು ಸಲುವಳಿಯಾಗತಕ್ಕದ್ದು.

ಪ್ರಕರಣಗಳು.

214 ಕಾರ್ಯದಾರರಾದ ಡೈರೆಕ್ಟರುಗಳ ಮ ಅಧಿಕಾರಿಗಳ ಮೇಲೆ ಲುಕ್ಸಾನುಗಳನ್ನು ಹೊರಿಸುವುದಕ್ಕೆ ಕೋರ್ಟಿನವರಿಗುಂಟಾಗಿರುವ ಅಧಿಕಾರ.

215 ಪುಸ್ತಕಗಳ ವಿಷಯದಲ್ಲಿ ಬನಾವಣಿ ನಡಿಸಿದ್ದರೆ ದಂಡನೆ.

216 ಕೋರ್ಟಿನವರದ್ವಾರಾ ಮುಕ್ತಿಬಿಡೋಣಾಗುವ ಸಂಗತಿಯಲ್ಲಿ ಕಾರ್ಯದಾರರಾದ ಡೈರೆಕ್ಟರುಗಳ ಮೇಲೆ ಫಿರ್ಯಾದು ಮಾಡೋಣ.

217 ಸುಳ್ಳು ಸಾಕ್ಷ್ಯಕ್ಕೆ ದಂಡನೆ.

218 ಮುಕ್ತಿಬಿಡಬೇಕೆಂಬ ಅಂಶವನ್ನು ಡಿಸ್ಟ್ರಿಕ್ಟು ಕೋರ್ಟಿಗೆ ರಿಫರ್ಮಾಡಬಹುದು.

219 ಮುಕ್ತಿಬಿಡುವ ಕೆಲಸವನ್ನು ಒಂದು ಡಿಸ್ಟ್ರಿಕ್ಟು ಕೋರ್ಟಿನಿಂದ ಮತ್ತೊಂದಕ್ಕೆ ವರ್ಗಮಾಡೋಣ.

PART V.

5ನೇ ಭಾಗ.

Registration Office.

ರಿಜಿಸ್ಟ್ರೇಷ‌ನ್ ಆಫೀಸು.

220 ರಿಜಿಸ್ಟ್ರೇಷನ್ ಆಫೀಸಿನ ಏರ್ಪಾಡು.

PART VI.

6ನೇ ಭಾಗ.

Application of Regulation to Companies registered under the Joint Stock Companies Acts.

ಜಾಯಿಂಟ್ ಸ್ಟಾಕ್ ಕಂಪೆನೀಸ್ ಆಕ್ಟುಗಳ ಪ್ರಕಾರ ರಿಜಿಸ್ಟರ ಮಾಡಲ್ಪಟ್ಟ ಕಂಪೆನಿಗಳ ವಿಷಯದಲ್ಲಿ ರೆಗ್ಯುಲೇಷನ್ ಉಪಯೋಗಿಸಲ್ಪಡೋಣ.

221 1857ನೇ ಇಸವಿ 19ನೇ ಆಕ್ಟಿನ ಅಥವಾ 1860ನೇ ಇಸವಿ 7ನೇ ಆಕ್ಟಿನ ಪ್ರಕಾರ ಏರ್ಪಾಡು ಮಾಡಲ್ಪಟ್ಟ ಕಂಪೆನಿಗಳ ವಿಷಯದಲ್ಲಿ ರೆಗ್ಯುಲೇಷನ್ ಉಪಯೋಗಿಸಲ್ಪಡೋಣ.

222 1857ನೇ ಇಸವಿ 19ನೇ ಆಕ್ಟಿನ ಅಥವಾ 1860ನೇ ಇಸವಿ 7ನೇ ಆಕ್ಟಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಕಂಪೆನಿಗಳ ವಿಷಯದಲ್ಲಿ ರೆಗ್ಯುಲೇಷನ್ ಉಪಯೋಗಿಸಲ್ಪಡೋಣ.

223 ಹಿಸ್ಸೆಗಳನ್ನು ವರ್ಗಾವಣೆ ಮಾಡುವ ರೀತಿ.

PART VII.

7ನೇ ಭಾಗ.

Companies authorized to register under this Regulation.

ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲಿಕ್ಕೆ ಅಧಿಕಾರಹೊಂದಿದ ಕಂಪೆನಿಗಳು.

224 ರಿಜಿಸ್ಟರ್ ಆಗಲಿಕ್ಕೆ ಲಾಯಕಾದ ಕಂಪೆನಿಗಳು.

225 ಹಾಲಿ ಇರತಕ್ಕ ಕಂಪೆನಿಗಳು ರಿಜಿಸ್ಟರ್ಮಾಡಲ್ಪಡುವ ವಿಷಯದಲ್ಲಿ ನಿಬಂಧನೆಗಳು.

226 ಜಾಯಿಂಟ್ ಸ್ಟಾಕ್ ಕಂಪೆನಿಯೆಂಬುದರ ಅರ್ಥವಿವರಣೆ.

227 ರಿಜಿಸ್ಟರ್ಮಾಡಲ್ಪಡಲಿಕ್ಕೆ ಕಂಪೆನಿಗಳಿಂದ ಆಗಬೇಕಾದ ಕರ್ತವ್ಯಗಳು.

228 ರಿಜಿಸ್ಟರ್ಮಾಡಲ್ಪಡಲಿಕ್ಕೆ ಜಾಯಿಂಟ್ ಸ್ಟಾಕ್ ಕಂಪೆನಿ ಅಲ್ಲದೆ ಹಾಲಿ ಇರುವ ಕಂಪೆನಿಯಿಂದ ಆಗಬೇಕಾದ ಕರ್ತವ್ಯ.

229 ಹಿಸ್ಸೆಗಳಿಗೆ ಬದಲಾಗಿ ಸ್ಟಾಕ್ ಮೊಬಲಗನ್ನು ರಿಜಿಸ್ಟರ್ಮಾಡಿಸಲಿಕ್ಕೆ ಹಾಲಿ ಇರತಕ್ಕ ಕಂಪೆನಿಗೆ ಉಂಟಾಗಿರುವ ಅಧಿಕಾರ.

230 ಹಾಲಿ ಇರತಕ್ಕ ಕಂಪೆನಿಗಳ ಹೇಳಿಕೆಗಳನ್ನು ಯಥಾರ್ಥ ಪಡಿಸೋಣ.

231 ಕಂಪೆನಿಯ ಸ್ವಭಾವವನ್ನು ಕುರಿತು ರಿಜಿಸ್ಟ್ರಾರವರು ಸಾಕ್ಷ್ಯ ಅಪೇಕ್ಷಿಸಬಹುದು.

232 ಕ್ಲಿಪ್ತ ಪಡಿಸಲ್ಪಟ್ಟ ಜವಾಬ್ದಾರಿಯುಳ್ಳ ಬ್ಯಾಂಕಿಂಗ್ ಕಂಪೆನಿಯು ರಿಜಿಸ್ಟರ್ಮಾಡಲ್ಪಟ್ಟ ಮೇಲೆ ತನ್ನ ಗಿರಾಕಿದಾರರಿಗೆ ನೋಟಿಸ್ ಕೊಡಬೇಕು.

233 ರುಸುಮುಗಳ ಪಾವತಿ ವಿಷಯದಲ್ಲಿ ಕೆಲವು ಕಂಪೆನಿಗಳ ವಿನಾಯಿತಿ.

234 ಕಂಪೆನಿಹೆಸರು ಬದಲಾಯಿಸಬೇಕು.

235 ಹಾಲಿ ಇರುವ ಕಂಪೆನಿಗಳ ರಿಜಿಸ್ಟ್ರೇಷನ್ ಬಾಬತು ಸರ್ಟಿಫಿಕೇಟು.

236 ಈ ರೆಗ್ಯುಲೇಷನಿನ ಪ್ರಕಾರ ನಡಿಸಲ್ಪಟ್ಟಿತೆಂಬ ವಿಷಯದಲ್ಲಿ ಸರ್ಟಿಫಿಕೇಟು ಸಾಕ್ಷ್ಯವಾಗಿರಬೇಕು.

237 ಕಂಪೆನಿಗೆ ಸೊತ್ತನ್ನು ವರ್ಗಾವಣೆ ಮಾಡೋಣ.

238 ಈ ರೆಗ್ಯುಲೇಷನಿಗನುಸಾರವಾದ ರಿಜಿಸ್ಟರ್ ಮಾಡೋಣವು ಅದಕ್ಕೆ ಮುಂಚಿತವಾಗಿ ಮಾಡಲ್ಪಟ್ಟಿರಬಹುದಾದ ಸಾಲಗಳ ವಿಷಯದಲ್ಲಿ ಬಾಧಕವನ್ನು ಉಂಟುಮಾಡತಕ್ಕದ್ದು.

239 ಹಾಲಿ ಇರತಕ್ಕ ವ್ಯವಹರಣೆಗಳು ನಡಿಯುತ್ತಿರಬೇಕು.

ಪ್ರಕರಣಗಳು.

240 ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡುವದರ ಫಲ.

241 ನಡವಳತೆಗಳನ್ನು ಇನ್ನು ನಡಿಸದಂತೆ ನಿಲ್ಲಿಸಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

242 ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ.

PART VIII.
8ನೇ ಭಾಗ.

Application of Regulation to unregistered Companies
ರಿಜಿಸ್ಟರ್ಮಾಡಲ್ಪಡದ ಕಂಪೆನಿಗಳ ವಿಷಯದಲ್ಲಿ ರೆಗ್ಯುಲೇಷನ್ ಪ್ರಯೋಗಿಸಲ್ಪಡೋಣ.

243 ರಿಜಿಸ್ಟರ್ಮಾಡಲ್ಪಡದ ಕಂಪೆನಿಗಳನ್ನು ಮುಚ್ಚಿ ಬಿಡೋಣ.

244 ಕಂಪೆನಿಯನ್ನು ಮುಚ್ಚಿ ಬಿಡುವ ವಿಷಯದಲ್ಲಿ ಯಾರು ಸಹಾಯಕರಂದು ಗ್ರಹಿಸಲ್ಪಡಬೇಕು.

245 ನಡವಳತೆಗಳನ್ನು ಇನ್ನು ನಡಿಸದಂತೆ ನಿಲ್ಲಿಸಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

246 ಕಂಪೆನಿಯನ್ನು ಮುಚ್ಚಿ ಬಿಡುವದರ ಬಾಬತು ಹುಕುಮಿನ ಫಲ.

247 ರಿಜಿಸ್ಟರ್ಮಾಡಲ್ಪಡದ ಕಂಪೆನಿಯ ವಿಷಯದಲ್ಲಿ ನಿಬಂಧನೆ.

248 ಈ ರೆಗ್ಯುಲೇಷನಿನ ಈ ಭಾಗದ ನಿಬಂಧನೆಗಳು ಅಧಿಕವಾಗಿ ಕೇರಿಸಲ್ಪಟ್ಟಿರತಕ್ಕವು.

PART IX.
9ನೇ ಭಾಗ.

Miscellaneous Provisions.
ವಿವಿಧ ನಿಬಂಧನೆಗಳು.

249 ಕಂಪೆನಿಯವರು ತಮ್ಮ ಸ್ವಂತ ಹಿಸ್ಸೆಗಳನ್ನೇ ಕೊಂಡು ಕೊಳ್ಳಕೂಡದು.

250 ಮುಚ್ಚಿ ಬಿಡಲಿಕ್ಕೆ ಹಾಲಿ ಇರುವ ನಡವಳತೆಗಳ ವಿನಾಯಿತಿ.

251 ಸಾಧನಗಳ ವಿನಾಯಿತಿ.

252 ತಕ್ರೀರುಗಳನ್ನು ವಿಚಾರಿಸೋಣ.

253 ಖರ್ಚುಗಳನ್ನು ಕುರಿತು ಹುಕುಮುಗಳನ್ನು ಕೊಡುವದಕ್ಕೆ ಅಧಿಕಾರ.

254 ಕಾಯಿದೆಗಳನ್ನು ಮಾಡುವದಕ್ಕೆ ಚೀಫ್ ಕೋರ್ಟಿನವರ ಅಧಿಕಾರ.

FIRST SCHEDULE.
1ನೇ ಷೆಡ್ಯೂಲ್.

SECOND SCHEDULE.
2ನೇ ಷೆಡ್ಯೂಲ್.

A REGULATION FOR THE INCORPORATION, REGULATION AND WINDING-UP OF TRADING COMPANIES AND OTHER ASSOCIATIONS.

ವ್ಯಾಪಾರದ ಕಂಪೆನಿಗಳನ್ನೂ, ಇತರ ಸಮಾಜಗಳನ್ನೂ ಏರ್ಪಟ್ಟು ಪಡಿಸತಕ್ಕ ಬಗ್ಯೆ, ಕ್ರಮಪಡಿಸತಕ್ಕ ಬಗ್ಯೆ, ಮುಚ್ಚಿ ಬಿಡತಕ್ಕ ಬಗ್ಯೆ, ಏರ್ಪಟ್ಟ ರೆಗ್ಯುಲೇಷನ್.

ಪೀಠಿಕೆ. ವ್ಯಾಪಾರದ ಕಂಪೆನಿಗಳನ್ನೂ ಇತರ ಸಮಾಜಗಳನ್ನೂ ಏರ್ಪಟ್ಟು ಪಡಿಸತಕ್ಕ ಬಗ್ಯೆ, ಕ್ರಮಪಡಿಸತಕ್ಕ ಬಗ್ಯೆ, ಮತ್ತು ಮುಚ್ಚಿ ಬಿಡತಕ್ಕ ಬಗ್ಯೆ, ಇರತಕ್ಕ ಕಾನೂನನ್ನು ತಿದ್ದುಪಾಟು ಮಾಡುವದು ಯುಕ್ತವಾಗಿ ಇರುವದರಿಂದ ಘನವನ್ನೈದಿದ ಶ್ರೀಮನ್ ಮಹಾ ರಾಣೀ ರೀಜೆಂಟರವರು ಇದರಡಿ ಕಂಡ ಪ್ರಕಾರ ನಿಶ್ಕರ್ಷಿಸಿರುತ್ತಾರೇನಂದರೆ :—

Preliminary.
ಅವತರಣಿಕೆ.

ಚಿಕ್ಕ ಹೆಸರು. 1. ಈ ರೆಗ್ಯುಲೇಷನ್ "1895ನೇ ಇಸವಿಯ ಮೈಸೂರ ಕಂಪೆನೀಸ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು:

ಸ್ಥಳೀಕ ವ್ಯಾಪ್ತಿ. ಇದು ಮೈಸೂರ ಶೀಮೆಯೊಳಗೆಲ್ಲ ವ್ಯಾಪಿಸುತ್ತದೆ:

ಈ ರೆಗ್ಯುಲೇಷನ್ 1896ನೇ ಇಸವಿಯ ನವೆಂಬರ ಗುರ್ರ್ನೇ ಲಾಗಾಯತು ಜಾರೀಲಿ ಬರತಕ್ಕದ್ದು. ಮತ್ತು ಅದು ಹಾಗೆ ಜಾರೀಲಿ ಬರುವ ಕಾಲ ಈ ರೆಗ್ಯುಲೇಷನಿನ ಅಮಲ್ ಷುರು ಎಂದು ಇನ್ನು ಮೇಲೆ ನಮೂದಿಸೋಣಾಗಿರುತ್ತದೆ.

ಅಮಲ್ ಷುರು.

2. ಈ ರೆಗ್ಯುಲೇಷನ್ ಷುರುವಾದಾಗ ಮತ್ತು ಆ ಲಾಗಾಯತು 1866ನೇ ಇಸವಿಯ ಇಂಡ್ಯನ್ ಕಂಪೆನೀಸ್ ಆಕ್ಟು ರದ್ದಾಗತಕ್ಕದ್ದು. ಆದರೆ ಅಂತ ರದ್ದಿಯಾತಿಯು—

1866ನೇ ಇಸವಿಯ 10ನೇ ನಂಬರ ಆಕ್ಟನ್ನು ರದ್ದುಪಡಿಸೋಣ.

(a) ಸದರಿ ಆಕ್ಟಿಗನುಗುಣವಾಗಾಗಲಿ ಅದರಿಂದ ರದ್ದಾದ ಯಾವ ಆಕ್ಟಿಗನುಗುಣವಾಗಾಗಲಿ ಯಾವ ಕಂಪೆನಿಯಾದರೂ ರಿಜಿಸ್ಟರಾಗಿದ್ದರೆ ಅಂಥಾ ಕಂಪೆನಿಯ ಇನಕಾರ್ಪೊರೇಷನ್ ಯಾನೆ ಬಗ್ಗಟ್ಟನ್ನು;

(b) ಸದರಿ ಆಕ್ಟಿಗನುಗುಣವಾಗಾಗಲಿ ಅದರಿಂದ ರದ್ದಾದ ಯಾವ ಆಕ್ಟಿಗನುಗುಣವಾಗಾಗಲಿ ಹುಟ್ಟಿದ ಯಾವ ಹಕ್ಕನ್ನಾದರೂ ಸ್ವಾತಂತ್ರ್ಯವನ್ನಾದರೂ ಸಂಭವಿಸಿದ ವಿಲ್ಲಂಘವನ್ನಾದರೂ;

(c) ಈ ರೆಗ್ಯುಲೇಷನ್ ಷುರುವಾಗುವ ಕಾಲದಲ್ಲಿರುತ್ತಿರುವ ಯಾವ ಕಂಪೆನಿಗಾದರೂ ಲಗಾವಾಗುವ ವ್ಯತರ ಮಟ್ಟಿಗೆ 1857ನೇ ಇಸವಿಯ 19ನೇ ನಂಬರ ಆಕ್ಟಿಗೆ ಸೇರಿಸಿರುವ ಷೆಡ್ಯೂಲಿನಲ್ಲಿರುವ B ಜಂತ್ರಿಯನ್ನು ಯಾ ಅದರ ಭಾಗವನ್ನು;

ಬಾಧಕ ಪಡಿಸುವದಿಲ್ಲವು.

ಮತ್ತು ಈ ರೆಗ್ಯುಲೇಷನಿನ ಅಮಲ್ ಷುರುವಾಗುವದಕ್ಕೆ ಮುಂಚೆ ನಿರ್ಣಯವಾದ ಆಕ್ಟುಗಳಲ್ಲಾಗಲಿ ರೆಗ್ಯುಲೇಷನುಗಳಲ್ಲಾಗಲಿ ಸದರಿ 1866ನೇ ಇಸವಿಯ ಇಂಡಿಯನ್ ಕಂಪೆನೀಸ್ ಆಕ್ಟಿಗೆ ಮಾಡಿರುವ ಸೂಚನೆಗಳನ್ನೆಲ್ಲ ಈ ರೆಗ್ಯುಲೇಷನಿಗೆ ಮಾಡಲ್ಪಟ್ಟಿರುವಂತೆ ಓದತಕ್ಕದ್ದು, ಮತ್ತು ಅದೇ ಆಕ್ಟಿಗನುಸ್ತುಣವಾಗಿ ಮಾಡಲ್ಪಟ್ಟ ಸಮಸ್ತ ಕಾಯಿದೆಗಳನ್ನೂ ನಿರ್ದೇಶಿಸಲ್ಪಟ್ಟ ರುಸುಮುಗಳನ್ನೂ ನಿರ್ಣಯವಾದ ತೀರ್ಮಾನಗಳನ್ನೂ ಕ್ರಮವಾಗಿ ನಡಿಸಲ್ಪಟ್ಟ ಇತರ ಸಂಗತಿಗಳನ್ನೂ ಈ ರೆಗ್ಯುಲೇಷನಿನನುಗುಣವಾಗಿ ಮಾಡಲ್ಪಟ್ಟ ಹಾಗೆ ನಿರ್ದೇಶಿಸಲ್ಪಟ್ಟ ಹಾಗೆ ನಿರ್ಣಯಿಸಲ್ಪಟ್ಟ ಹಾಗೆ ನಡಿಸಲ್ಪಟ್ಟ ಹಾಗೆ ಭಾವಿಸತಕ್ಕದ್ದು; ಮತ್ತು ಅದೇ ಆಕ್ಟಿಗನುಗುಣವಾಗಿರುವ ಸಮಸ್ತ ಕಂಪೆನಿಗಳೂ ಈ ರೆಗ್ಯುಲೇಷನಿಗನುಗುಣವಾದ ಕಂಪೆನಿಗಳ ಹಾಗೆ ಭಾವವಾಗತಕ್ಕದ್ದು.

3. ಈ ರೆಗ್ಯುಲೇಷನಿನಲ್ಲಿ, ಪ್ರಮೇಯದಲ್ಲಿ ಅಥವಾ ಸಂದರ್ಭದಲ್ಲಿ ವಿರೋಧವಾಗಿ ಏನೂ ಇಲ್ಲದೇ ಇದ್ದ ಪಕ್ಷದಲ್ಲಿ—

ಅರ್ಥವಿವರಣೆಯ ಕಲಂ.

"ಇನಷುರೆನ್ಸ ಕಂಪೆನಿ" ಎಂಬ ಮಾತು ಇನಷುರೆನ್ಸ ಕೆಲಸವನ್ನು ಇತರ ಕೆಲಸದೊಂದಿಗೆ ಯಾ ಕೆಲಸಗಳೊಂದಿಗೆಯಾಗಲಿ ಅಥವಾ ಇನಷುರೆನ್ಸ ಕೆಲಸವನ್ನು ಮಾತ್ರವೇ ಯಾಗಲಿ ನಡಿಸುವಂತಾ ಕಂಪೆನಿ ಎಂದು ಅರ್ಥವಾಗುತ್ತದೆ;

"ಇನಷುರೆನ್ಸ ಕಂಪೆನಿ."

"ಕೋರ್ಟು ಯಾ ಡಿಸ್ಟ್ರಿಕ್ಟು ಕೋರ್ಟು" ಎಂಬ ಮಾತು ಒಂದು ಡಿಸ್ಟ್ರಿಕ್ಟಿನಲ್ಲಿರತಕ್ಕ ಮೂಲ ವ್ಯವಹರಣೆ ಅಧಿಕಾರದ ಬಾಬತು ಪ್ರಧಾನ ಸಿವಿಲ್ ಕೋರ್ಟು ಎಂದು ಅರ್ಥವಾಗುತ್ತದೆ.

"ಕೋರ್ಟು ಯಾ ಡಿಸ್ಟ್ರಿಕ್ಟು ಕೋರ್ಟು."

"ಡೀಡಾಫ್ ಸೆಟಲ್‌ಮೆಂಟ" ಯಾನೆ ವ್ಯವಸ್ಥಾಪತ್ರವೆಂಬದು, ಮೈಸೂರ ಗವರ್ನಮೆಂಟಿನ ಒಂದು ರೆಗ್ಯುಲೇಷನ್ ಅಲ್ಲದೆ ಇದ್ದ [illegible] ವರೂ ಪಾಲುಗಾರಿಕೆಯ ಕಂಪ ರನ್ನು ಯಾ ಒಂದು ಕಂಪೆನಿಯನ್ನು ಸ್ಥಾಪಿಸುವ ಯಾ ನೇಮದಿಂದ ನಡಿಸುವ ಯಾದಾಸ್ತನ್ನು ಅಡಗಿಸಿಕೊಂಡಿರುತ್ತದೆ.

"ಡೀಡ್ ಆಫ್ ಸೆಟಲ್‌ಮೆಂಟ."

4. ನಗದಿಮಾತ್ ಕೆಲಸಕ್ಕೋಸ್ಕರ ಹತ್ತುಮಂದಿಗಿಂತ ಹೆಚ್ಚು ಜನಗಳನ್ನುಂಟಾಗಿರುವ ಯಾವ ಕಂಪೆನಿಯಾಗಲಿ ಸಮಾಜವಾಗಲಿ ಪಾಲುಗಾರಿಕೆಯಾಗಲಿ ಒಂದು ಕಂಪೆನಿ ಎಂಬದಾಗಿ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟರೇನೇ ಹೊರ್ತು, ಅಥವಾ ಮೈಸೂರ ಗವರ್ನಮೆಂಟಿನವರ ಯಾವದಾದರೊಂದು

[illegible]ಲವು ಸಂಖ್ಯೆಗೆ ಮೀರಿದ ಪಾಲುಗಾರಿಕೆ [illegible]ಷೇಧ.

ರೆಗ್ಯುಲೇಷನಿಗೆ ಅನುಗುಣವಾಗಿ ಸ್ಥಾಪಿಸಲ್ಪಟ್ಟರೇನೇ ಹೊರ್ತು, ಸ್ಥಾಪಿಸಲ್ಪಡಕೂಡದು.— ಒಂದು ಕಂಪೆನಿ ಎಂಬದಾಗಿ ಈ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟರೇನೇ ಹೊರ್ತು, ಅಥವಾ ಮೈಸೂರು ಗವರ್ನಮೆಂಟಿನ ಯಾವದಾದರೊಂದು ಇತರ ರೆಗ್ಯುಲೇಷನ್ಸಿಗೆ ಅನುಗುಣವಾಗಿ ಸ್ಥಾಪಿಸಲ್ಪಟ್ಟರೇನೇ ಹೊರ್ತು, ಕಂಪೆನಿಗೆ, ಸಮಾಜಕ್ಕೆ ಯಾ ಪಾಲುಗಾರಿಕೆಗೆ ಅಥವಾ ಅವರ ಮೆಂಬರುಗಳಪೈಕಿ ಒಬ್ಬೊಬ್ಬರಿಂದ ಲಾಭವನ್ನು ಸಂಪಾದಿಸುವ ಉದ್ದೇಶದಿಂದ ಯಾವದಾದರೂ ಇತರ ಕೆಲಸವನ್ನು ನಡಿಸುವದಕ್ಕೋಸ್ಕರ ಇಪ್ಪತ್ತು ಮಂದಿಗಿಂತ ಹೆಚ್ಚು ಜನಗಳನ್ನೊಳಗೊಂಡಿರುವ ಯಾವ ಕಂಪೆನಿಯಾಗಲಿ, ಸಮಾಜವಾಗಲಿ, ಪಾಲುಗಾರಿಕೆಯಾಗಲಿ, ಸ್ಥಾಪಿಸಲ್ಪಡಕೂಡದು.

ರೆಗ್ಯುಲೇಷನಿನ ವಿಭಾಗ.

5. ಈ ರೆಗ್ಯುಲೇಷನ್ ಒಂಭತ್ತು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ, ಅವು ಇದರಡೀಲಿ ಕಂಡಿರುವ ಸಂಗತಿಗಳಿಗೆ ಸಂಬಂಧಪಟ್ಟದ್ದಾಗಿವೆ:—

ಮೊದಲನೇ ಭಾಗ—ಈ ರೆಗ್ಯುಲೇಷನ್ ಪ್ರಕಾರ ಕಂಪೆನಿಗಳು ವ ಸಮಾಜಗಳು ಸ್ಥಾಪಿಸಲ್ಪಡೋಣ ವ ಒಗ್ಗಟ್ಟು ಮಾಡಲ್ಪಡೋಣ ;

ಎರಡನೇ ಭಾಗ—ಈ ರೆಗ್ಯುಲೇಷನ್ ಪ್ರಕಾರ ಮೂಲದ್ರವ್ಯದ ವಿಭಾಗ, ಮತ್ತು ಕಂಪೆನಿ ವ ಸಮಾಜಗಳ ಮೆಂಬರುಗಳ ಜವಾಬುದಾರಿ ;

ಮೂರನೇ ಭಾಗ—ಈ ರೆಗ್ಯುಲೇಷನ್ ಪ್ರಕಾರ ಕಂಪೆನಿಗಳ ವ ಸಮಾಜಗಳ ಮೇಲ್ ವಿಚಾರಣೆ ವ ಕಾರಬಾರ್ ನಡಿಸೋಣ ;

ನಾಲ್ಕನೇ ಭಾಗ—ಈ ರೆಗ್ಯುಲೇಷನ್ ಪ್ರಕಾರ ಕಂಪೆನಿಗಳನ್ನೂ ಸಮಾಜಗಳನ್ನೂ ಮುಕ್ತಿ-ಬಿಡೋಣ;

ಐದನೇ ಭಾಗ—ರಿಜಿಸ್ಟ್ರೇಷನ್ ಆಫಿಸ ;

ಆರನೇ ಭಾಗ—(ಮೆಂಬರುಗಳ ಜವಾಬುದಾರಿಯು ಕ್ಲಿಪ್ತ ಪಡಿಸಲ್ಪಟ್ಟಂತಾ ಯಾ ಕ್ಲಿಪ್ತ ಪಡಿಸಲ್ಪಡದಂತಾ ಜಾಯಿಂಟ್ ಸ್ಟಾಕ್ ಕಂಪೆನಿಗಳನ್ನು ವ ಇತರ ಸಮಾಜಗಳನ್ನು ಐಕ್ಯ ಮಾಡತಕ್ಕ ಬಗ್ಯೆ ವ ಕ್ರಮಪಡಿಸತಕ್ಕ ಬಗ್ಯೆ ಉಂಟಾದ) 1857ನೇ ಇಸವಿಯ 19ನೇ ಆಕ್ಟಿನ ಪ್ರಕಾರ ಮತ್ತು (ಕ್ಲಿಪ್ತ ಪಡಿಸಲ್ಪಟ್ಟ ಜವಾಬುದಾರಿಯ ನಿಯಮದ ಪ್ರಕಾರ ಜಾಯಿಂಟ್ ಸ್ಟಾಕ್ ಬ್ಯಾಂಕಿಂಗ್ ಕಂಪೆನಿಗಳು ಏರ್ಪಾಟಾಗುವಂತೆ ಮಾಡತಕ್ಕ ಬಗ್ಯೆ ಉಂಟಾದ) 1860ನೇ ಇಸವಿಯ 7ನೇ ನಂಬರ ಆಕ್ಟಿನ ಪ್ರಕಾರ, ಅಥವಾ ಈ ಎರಡಕಲ್ಲೊಂದರ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ಕಂಪೆನಿಗಳ ವಿಷಯದಲ್ಲಿ ಈ ರೆಗ್ಯುಲೇಷನ್ ಉಪಯೋಗಿಸಲ್ಪಡೋಣ;

ಏಳನೇ ಭಾಗ—ಈ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರ್ ಮಾಡಿಸಲಿಕ್ಕೆ ಅಧಿಕಾರ ಹೊಂದಿ ಇರುವ ಕಂಪೆನಿಗಳು;

ಎಂಟನೇ ಭಾಗ—ರಿಜಿಸ್ಟರ್ ಮಾಡಲ್ಪಡದ ಕಂಪೆನಿಗಳ ವಿಷಯದಲ್ಲಿ ಈ ರೆಗ್ಯುಲೇಷನ್ ಉಪಯೋಗಿಸಲ್ಪಡೋಣ ;

ಒಂಭತ್ತನೇ ಭಾಗ—ವಿವಿಧ ನಿಬಂಧನೆಗಳು.

PART I.

1ನೇ ಭಾಗ.

CONSTITUTION AND INCORPORATION OF COMPANIES AND ASSOCIATIONS UNDER THIS REGULATION.

ಈ ರೆಗ್ಯುಲೇಷನ್ ಪ್ರಕಾರ ಕಂಪೆನಿಗಳು ವ ಸಮಾಜಗಳು ಸ್ಥಾಪಿಸಲ್ಪಡೋಣ ವ ಒಗ್ಗಟ್ಟು ಅಂದರೆ ಐಕ್ಯಮಾಡಲ್ಪಡೋಣ.

Memorandum of Association.

ಸಮಾಜದ ಯಾದಾಸ್ತು.

ಕಂಪೆನಿಯನ್ನು ಏರ್ಪಾಡಿಸುವ ರೀತಿ.

6. ಯಾವದಾದರೊಂದು ನ್ಯಾಯವಾದ ಕಾರ್ಯಕ್ಕೋಸ್ಕರ ಒಂದಾಗಿ ಸೇರಿದ ಏಳು ಯಾ ಹೆಚ್ಚು ಮಂ[illegible] ಮನುಷ್ಯರು, ಒಂದು ಸಮಾಜದ ಯಾದಾಸ್ತಿನ ಕೆಳಗಡೆ ಅವರ ಹೆಸ[illegible] ಗಳನ್ನು ದಸ್ಕತ್ತು ಮಾಡುವದರಿಂದ ಮತ್ತು ರಿಜಿಸ್ಟ್ರೇಷನ್ ವಿಷ[illegible]

ಈ ರೆಗ್ಯುಲೇಷನಿಗೆ ಅನುಗುಣವಾಗಿ ಮಾಡಬೇಕಾದ್ದನ್ನು ಅನ್ಯಥಾ ಮಾಡುವದ್ದರಿಂದ, ಕ್ಲಿಪ್ತ ಪಡಿಸಲ್ಪಟ್ಟ ಜವಾಬುದಾರಿಯೊಂದಿಗೆ ಯಾ ಇಲ್ಲದೆ, ಒಂದು ಜಗ್ಗಟ್ಟು ಮಾಡಲ್ಪಟ್ಟ ಕಂಪೆನಿಯಾಗಬಹುದು.

ಟಿಪ್ಪಣಿ—ಪರಾಯಿ ದೇಶಸ್ಥರು ಈ ಪ್ರಕರಣದ ಅರ್ಥಕ್ಕೆ ಒಳಪಟ್ಟರುತ್ತಾರೆ. ಉದ್ದೇಶಿಸೋಣಾದ ಕಂಪೆನಿಯು ತನ್ನಾ ಕೆಲಸವನ್ನಾಗಲಿ ಅದರ ಯಾವ ಭಾಗವನ್ನಾಗಲಿ ಮೈಸೂರ ಶೀಮೆಯ ಹೊರಗೆ ನೆರವೇರಿಸುವಂತೆ ಅಭಿಪ್ರಾಯಪಟ್ಟದ್ದಾಗ್ಯೂ ಚಿಂತೆ ಇಲ್ಲ.

ಮೆಂಬರುಗಳ ಯಾನೆ ಸಭಿಕರ ಜವಾಬುದಾರಿಯನ್ನು ಕ್ಲುಪ್ತ ಪಡಿಸುವ ರೀತಿ.

7. ಈ ರೆಗ್ಯುಲೇಷನ್ ಪ್ರಕಾರ ಏರ್ಪಾಡಾದ ಕಂಪೆನಿಯ ಮೆಂಬರುಗಳ ಜವಾಬುದಾರಿಯು, ಸಮಾಜದ ಯಾದಾಸ್ತಿನ ಪ್ರಕಾರ, ಅವರವರಿಂದ ಪಡೆಕೊಳ್ಳಲ್ಪಟ್ಟಿರುವ ಹಿಸ್ಸೆಗಳ ಬಾಬತು ಸಂದಾಯವಾಗದ ಹಣ ಏನಾದರೂ ಇದ್ದರೆ, ಆ ಮೊಬಲಗಿಗಾದರೂ, ಅಥವಾ ಕಂಪೆನಿಯನ್ನು ಮುಚ್ಚಿ ಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ ಅವರ ಸಾಲಗಳ ಬಗ್ಗೆ ಕೊಡುವದಾಗಿ ಮೆಂಬರುಗಳು ಸಮಾಜದ ಯಾದಾಸ್ತಿನಿಂದ ಅವರವರು ಏಕರಾರು ಮಾಡಿ ಒಪ್ಪಿಕೊಳ್ಳುವ ಮೊಬಲಗಿಗಾದರೂ, ಕ್ಲುಪ್ತ ಪಡಿಸಲ್ಪಡಬಹುದು.

ಕ್ಲಿಪ್ತವಿಲ್ಲದ ಜವಾಬ್ದಾರಿಯುಳ್ಳ ಡೈರೆಕ್ಟರರು.

ಒಂದು ಕಂಪೆನಿಯು ಒಂದು ಲಿಮಿಟೆಡ್ ಅಂದರೆ ಕ್ಲಿಪ್ತ ಪಡಿಸಲ್ಪಟ್ಟ ಕಂಪೆನಿಯಾದರೆ ಆಂತ ಕಂಪೆನಿಯ ಡೈರೆಕ್ಟರರ ಯಾ ಮಾನೇಜರರ ಯಾ ಕಾರಬಾರ ನಡಿಸುವ ಡೈರೆಕ್ಟರಿನ ಜವಾಬ್ದಾರಿಯು ಸಮಾಜದ ಯಾದಾಸ್ತಿನಿಂದ ಏರ್ಪಾಡಾಗಿದ್ದರೆ ಕ್ಲಿಪ್ತವಿಲ್ಲದ್ದಾಗಿ ಇರಬಹುದು.

ಹಿಸ್ಸೆಗಳಿಂದ ಕ್ಲಿಪ್ತಪಡಿಸಲ್ಪಟ್ಟಿರುವ ಕಂಪೆನಿಯ ಸಮಾಜದ ಯಾದಾಸ್ತು.

8. ಹಿಸ್ಸೆಗಳಿಂದ ಕ್ಲಿಪ್ತಪಡಿಸಲ್ಪಟ್ಟ ಕಂಪೆನಿ ಎಂದು ಇನ್ನು ಮೇಲೆ ನಮೂದಿಸೋಣಾಗುವಂತ ಒಂದು ಕಂಪೆನಿಯು ಹಿಸ್ಸೆಗಳ ಬಾಬತು ಸಂದಾಯವಾಗದ ಹಣದ ಮೊಬಲಗಿಗೆ ಮೆಂಬರುಗಳ ಜವಾಬುದಾರಿಯನ್ನುಳ್ಳದ್ದಾಗಿ ಏರ್ಪಾಡು ಮಾಡಲ್ಪಟ್ಟರೆ, ಸಮಾಜದ ಯಾದಾಸ್ತಿನಲ್ಲಿ ಈ ಕೆಳಗಿನ ಸಂಗತಿಗಳು ಇರತಕ್ಕದ್ದು (ಯಾವವಂದರೆ) ;—

(a) ಯೋಚಿಸಲ್ಪಟ್ಟಿರುವ ಕಂಪೆನಿಯ ಹೆಸರು. ಆ ಹೆಸರಿನ ಕಡೆಯಲ್ಲಿ ಕ್ಲಿಪ್ತ ಪಡಿಸಲ್ಪಟ್ಟದ್ದು ಯೆಂಬಿದಾಗಿ ಅರ್ಥಕೊಡುವ "ಲಿಮಿಟೆಡ್" ಎಂಬಮಾತು ಸೇರಿಸಲ್ಪಡಬೇಕು ;

(b) ಮೈಸೂರ ಶೀಮೆಯಲ್ಲಿ ಕಂಪೆನಿಯ ರಿಜಿಸ್ಟರ್ರಾತ್ರಿಡಲ್ಪಟ್ಟ ಆಫೀಸು ಎಲ್ಲಿ ಇರುವಂತೆ ಯೋಚಿಸೋಣಾಗಿದೆಯೋ ಆ ಪ್ರದೇಶ ;

(c) ಯೋಚಿಸಲ್ಪಟ್ಟ ಕಂಪೆನಿಯು ಯಾತಕ್ಕೋಸ್ಕರ ಸ್ಥಾಪಿಸಲ್ಪಡುತ್ತದೆಯೋ ಅದರ ಉದ್ದೇಶಗಳು ;

(d) ಮೆಂಬರುಗಳ ಜವಾಬ್ದಾರಿಯು ಕ್ಲಿಪ್ತ ಪಡಿಸಲ್ಪಟ್ಟದೆ ಎಂಬ ಪ್ರಕಟನೆ ;

(e) ಕಂಪೆನಿಯು ರಿಜಿಸ್ಟರ್ರಾತ್ರಿಡಿಸಲಿಕ್ಕೆ ಯೋಚಿಸಿ ಇರುವಂತ ಮೂಲಧನದ ಮೊಬಲಗು ಬಂದು ಗೊತ್ತುಮಾಡಲ್ಪಟ್ಟ ಮೊಬಲಗಿನ ಹಿಸ್ಸೆಗಳಾಗಿ ಭಾಗಿಸಲ್ಪಟ್ಟದೆ ಎಂಬದು ;

ಅದು ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು :—

(f) ಯಾವ ಚಂದಾದಾರನಾಗಲಿ ಬಂದಕ್ಕಿಂತ ಕಮ್ಮಿ ಹಿಸ್ಸೆಯನ್ನು ತೆಗದುಕೊಳ್ಳಕೂಡದು ;

(g) ಸಮಾಜದ ಯಾದಾಸ್ತಿಗೆ ದಸ್ಕತ್ತುಹಾಕುವ ಪ್ರತಿ ಚಂದಾದಾರನೂ ತನ್ನ ಹೆಸರಿಗೆ ಎದುರಾಗಿ ತಾನು ತೆಗದುಕೊಳ್ಳುವಂತ ಹಿಸ್ಸೆಗಳ ಸಂಖ್ಯೆಯನ್ನು ಬರಿಯತಕ್ಕದ್ದು.

ಜಾಮಿನಿನಿಂದ ಕ್ಲಿಪ್ತಪಡಿಸಲ್ಪಟ್ಟಿರುವ ಕಂಪೆನಿಯ ಸಮಾಜದ ಯಾದಾಸ್ತು.

9. (ಜಾಮೀನಿನಿಂದ ಕ್ಲಿಪ್ತಪಡಿಸಲ್ಪಟ್ಟ ಕಂಪೆನಿ ಎಂದು ಇನ್ನು ಮೇಲೆ ನಮೂದಿಸೋಣಾಗುವಂತ, ಬಂದು ಕಂಪೆನಿಯು) ಅದನ್ನು ಮುಚ್ಚಿ ಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ ಅದರ ಸಾಲಗಳ ಬಗ್ಗೆ ಕೊಡುವದಾಗಿ ಮೆಂಬರುಗಳು ಕ್ರಮ ಪ್ರಕಾರ ಏಕರಾರು ಮಾಡಿಕೊಳ್ಳುವ ಮೊಬಲಗಿಗೆ ಮೆಂಬರುಗಳ ಜವಾಬುದಾರಿಯನ್ನುಳ್ಳದ್ದಾಗಿ ಏರ್ಪಾಡು ಮಾಡಲ್ಪಟ್ಟರೆ, ಸಮಾಜದ ಯಾದಾಸ್ತಿನಲ್ಲಿ ಈ ಕೆಳಗಿನ ಸಂಗತಿಗಳು ಇರತಕ್ಕದ್ದು (ಯಾವವಂದರೆ) ;—

(a) ಉದ್ದೇಶಿಸಲ್ಪಟ್ಟಿರುವ ಕಂಪೆನಿಯ ಹೆಸರು, ಆ ಹೆಸರಿನ ಕಡೇಯಲ್ಲಿ ಕ್ಲಿಪ್ತಪಡಿಸಲ್ಪಟ್ಟದ್ದು ಎಂದು ಅರ್ಥಕೊಡುವ "ಲಿಮಿಟೆಡ್" ಎಂಬ ಮಾತು ಸೇರಿಸಲ್ಪಡಬೇಕು ;

(b) ಮೈಸೂರ ಸೀಮೆಯಲ್ಲಿ ಕಂಪೆನಿಯ ರಿಜಿಸ್ಟ್ರಾಡಲ್ಪಟ್ಟ ಆಫೀಸು ಎಲ್ಲಿ ಇರುವಂತೆ ಯೋಚಿಸಲಾಗಿದೆಯೋ ಆ ಪ್ರದೇಶ ;

(c) ಯೋಚಿಸಲ್ಪಟ್ಟ ಕಂಪೆನಿಯು ಯಾತಕ್ಕೋಸ್ಕರ ಸ್ಥಾಪಿಸಲ್ಪಡುತ್ತದೆಯೋ ಅದರ ಉದ್ದೇಶಗಳು ;

(d) ಕಂಪೆನಿಯನ್ನು ಮುಚ್ಚಿಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ ತಾನು ಮೆಂಬರಾಗಿರುವಾಗ್ಯೆಯೂ ಆ ತರುವಾಯ ಒಂದು ವರುಷದ ಒಳಗಾಗಿ, ಸದರಿ ಕಂಪೆನಿಯಿಂದ ತನ್ನ ಸಂಬಂಧವನ್ನು ನಿವರ್ತಿಮಾಡಿಕೊಳ್ಳುವದಕ್ಕಿಂತ ಮುಂಚೆ ಮಾಡಲ್ಪಟ್ಟಿರಬಹುದಾದ ಸಾಲಗಳ ವ ವಿಲ್ಲಂಘಗಳ ಪಾವತಿಬಗ್ಯೂ, ಮತ್ತು ಕಂಪೆನಿಯನ್ನು ಮುಚ್ಚಿಬಿಡುವ ವಿಷಯದಲ್ಲಿ ತಗಲುವ ಖರ್ಚುಗಳ ವ ಲಾಗವಡಿನ ವ ವೆಚ್ಚಗಳ ಪಾವತಿಬಗ್ಯೂ, ಮತ್ತು ಅವರೊಳಗೆ ಸಹಾಯಕರ ಹಕ್ಕುದಾರಿಗಳನ್ನು ವ್ಯವಸ್ಥೆ ಪಡಿಸುವದಕ್ಕೋಸ್ಕರ ಅವಶ್ಯವಾಗುವಂತ ಒಂದು ಗೊತ್ತಾದ ಮೊಬಲಗಿಗೆ ಮೀರದಂತ ಮೊಬಲಗಿನಬಗ್ಯೂ, ಕಂಪೆನಿಯ ಆಸ್ತಿಗಳೆಲ್ಲಾ ಹೋಗಲಿಕ್ಕಾಗಿ ಎಷ್ಟು ಕಡಿಮೆಯಾಗುತ್ತದೋ, ಅದನ್ನು ಕೊಡುವದಕ್ಕೆ ಪ್ರತಿ ಮೆಂಬರೂ ಉದ್ಯುಕ್ತನಾಗುತ್ತಾನೆ ಎಂಬ ಪ್ರಕಟನೆ.

ಕ್ಲಿಪ್ತ ಪಡಿಸಲ್ಪಡದಂತಾ ಕಂಪೆನಿಯ ಸಮಾಜದ ಯಾದಾಸ್ತು.

10. ಅನ್ ಲಿಮಿಟೆಡ್ ಅಂದರೆ ಕ್ಲಿಪ್ತಪಡಿಸಲ್ಪಡದ ಕಂಪೆನಿ ಎಂದು ಇನ್ನು ಮೇಲೆ ನಮೂದಿಸಲಾಗುವಂತ ಒಂದು ಕಂಪೆನಿಯು ಮೆಂಬರುಗಳ ಜವಾಬುದಾರಿ ವಿಷಯದಲ್ಲಿ ಕ್ಲಿಪ್ತ ಇಲ್ಲದ್ದಾಗಿ ಏರ್ಪಾಡು ಮಾಡಲ್ಪಟ್ಟರೆ, ಸಮಾಜದ ಯಾದಾಸ್ತಿನಲ್ಲಿ ಈ ಕೆಳಗಿನ ಸಂಗತಿಗಳು ಇರತಕ್ಕದ್ದು (ಯಾವವೆಂದರೆ):—

(a) ಯೋಚಿಸಲ್ಪಟ್ಟಿರುವ ಕಂಪೆನಿಯ ಹೆಸರು ;

(b) ಮೈಸೂರ ಸೀಮೆಯಲ್ಲಿ ಕಂಪೆನಿಯ ರಿಜಿಸ್ಟ್ರಾಡಲ್ಪಟ್ಟ ಆಫೀಸು ಎಲ್ಲಿ ಇರುವಂತೆ ಯೋಚಿಸಲಾಗಿದೆಯೋ ಆ ಪ್ರದೇಶ ;

(c) ಏರ್ಪಡಬೇಕೆಂಬ ಕಂಪೆನಿಯು ಯಾತಕ್ಕೋಸ್ಕರ ಸ್ಥಾಪಿಸಲ್ಪಡುತ್ತದೆಯೋ ಅದರ ಉದ್ದೇಶಗಳು.

ಸಮಾಜದ ಯಾದಾಸ್ತಿನ ದಸ್ಕತ್ತು ವ ಫಲ.

11. ಸಮಾಜದ ಯಾದಾಸ್ತು ಪ್ರತಿ ಚಂದಾದಾರನಿಂದ ಕನಿಷ್ಟಪಕ್ಷ ಒಬ್ಬ ಸಾಕ್ಷಿಯ ರೂಬರೂಬ್ ದಸ್ಕತ್ತು ಮಾಡಲ್ಪಟ್ಟು, ಆ ಸಾಕ್ಷಿಯಿಂದ ದಸ್ಕತ್ತು ಮಾಡಲ್ಪಡಬೇಕು. ಅದು ರಿಜಿಸ್ಟರ್ ಮಾಡಲ್ಪಟ್ಟಮೇಲೆ, ಪ್ರತಿ ಮೆಂಬರೂ ಅದಕ್ಕೆ ದಸ್ಕತ್ತು ಮಾಡಿದಂತೆಯೂ ಮತ್ತು ತಾನೂ, ತನ್ನ ವಾರಸದಾರರೂ, ಎಗ್ಸಿಕ್ಯೂಟ[illegible]ಗಳೂ ಅಡ್ಮಿನಿಸ್ಟ್ರೇಟರುಗಳೂ ಈ ರೆಗ್ಯುಲೇಷನಿನ ನಿಬಂಧನೆಗಳಿಗೊಳಪಟ್ಟು, ಸದರಿ ಯಾದಾಸ್ತಿನ ಷರತ್ತು[illegible]ನ್ನೆಲ್ಲಾ ಅನುಸರಿಸಿ ನಡಿಯುವ ಹಾಗೆ ಒಂದು ಎಕರಾರು ಆ ಯಾದಾಸ್ತಿನಲ್ಲಿರುವಂತೆಯೂ, ಅದು ಕಂಪೆನಿಯನ್ನೂ ಮೆಂಬರುಗಳನ್ನೂ ಬದ್ಧರನ್ನಾಗಿ ಮಾಡತಕ್ಕದ್ದು.

ಸಮಾಜದ ಯಾದಾಸ್ತನ್ನು ಬದಲಾಯಿಸಲಿಕ್ಕೆ ಕೆಲವು ಕಂಪೆನಿಗಳಿಗೆ ಉಂಟಾಗಿರುವ ಅಧಿಕಾರ.

12. ಹಿಸ್ಸೆಗಳಿಂದ ಕ್ಲಿಪ್ತ ಪಡಿಸಲ್ಪಟ್ಟ ಯಾವ ಕಂಪೆನಿಯಾದರೂ ಅದರ ಸಮಾಜದ ಯಾದಾಸ್ತಿನಲ್ಲಿಯ ಷರತ್ತುಗಳನ್ನು ಬದಲಾಯಿಸಲಿಕ್ಕೆ ಪ್ರಥಮತಃ ಮಾಡಲ್ಪಟ್ಟ ನಿಬಂಧನೆಗಳಿಂದ ಅಧಿಕಾರ ಹೊಂದಿದ್ದರೆ, ಅಥವಾ ಇನ್ನು ಮೇಲೆ ನಮೂದಿಸಲಾಗುವ ವಿಶೇಷ ನಿರ್ಣಯದಿಂದ ತಿದ್ದುಪಡಿ ಮಾಡುವದಾಗಿದ್ದರೆ, ಕಂಪೆನಿಯವರಿಗೆ ಯುಕ್ತವಾಗಿ ತೋರುವಷ್ಟು ಮೊಬಲಗಿನ ಹೊಸ ಹಿಸ್ಸೆಗಳನ್ನು ಕೊಟ್ಟು ತದ್ವಾರಾ ಮೂಲಧನವನ್ನು ವೃದ್ಧಿ ಪಡಿಸುವದಕ್ಕಾಗಲಿ, ಅಥವಾ ಮೂಲ ಧನವನ್ನು ಒಟ್ಟು ಪಡಿಸಿ ಹಾಲಿ ಇರತಕ್ಕದ್ದಕ್ಕಿಂತ ಹೆಚ್ಚು ಮೊಬಲಗಿನ ಹಿಸ್ಸೆಗಳಾಗಿ ಭಾಗಿಸುವದಕ್ಕಾಗಲಿ, ಅಥವಾ ಪಾವತಿ ಮಾಡಲ್ಪಟ್ಟ ಹಿಸ್ಸೆಗಳನ್ನು ಸ್ಟಾಕಿಗೆ ಮಾರ್ಪಡಿಸುವದಕ್ಕಾಗಲಿ, ಸಮಾಜದ ಯಾದಾಸ್ತಿನಲ್ಲಿನ ಷರತ್ತುಗಳನ್ನು ಬದಲಾಯಿಸಬಹುದು ; ಆದರೆ ಮೇಲೆ ಹೇಳಲ್ಪಟ್ಟಿರುವದು ಹೊರ್ತು, ಮತ್ತು ಹೆಸರನ್ನು ಬದಲಾಯಿಸುವ ವಿಷಯದಲ್ಲಿ ಇನ್ನು ಮೇಲೆ ನಿರ್ಬಂಧಿಸಲ್ಪಡುವದು ಹೊರ್ತು, ಯಾವ ಕಂಪೆನಿಯಿಂದಲಾದರೂ ಸಮಾಜದ ಯಾದಾಸ್ತಿನಲ್ಲಿನ ಷರತ್ತುಗಳಲ್ಲಿ ಯಾವ ಬದಲಾವಣೆಯೂ ಮಾಡಲ್ಪಡಕೂಡದು.

ಚೀಫ್ ಕೋರ್ಟಿನವರ ಖಾಯಂ ಮಾಡೋಣಕ್ಕೊಳಪಟ್ಟು, ಸ್ಥಾಪಿಸೋಣದರ ಉದ್ದೇಶ ಯಾ ರೂಪವನ್ನು ತಬ್ದಿಲ್ ಮಾಡಲಿಕ್ಕೆ ಕಂಪನಿಗೆ ಅಧಿಕಾರ.

12 A. ಈ ರೆಗ್ಯುಲೇಷನಿನ ನಿಬಂಧನೆಗಳಿಗನುಗುಣವಾಗಿ, ಇದರ ಪ್ರಕಾರ ರಿಜಿಸ್ಟರಾದ ಒಂದು ಕಂಪೆನಿಯು, ವಿಶೇಷ ನಿರ್ಣಯದ ಮೇಲೆ, ಕಂಪೆನಿಯ ಉದ್ದೇಶಗಳ ವಿಷಯವಾಗಿ ಮುಂದೆ ನಮೂದಿಸಲ್ಪಟ್ಟ ಯಾವದಾದರೂ ಉದ್ದಿಶ್ಯದ ಬಗ್ಯೆ ಅಗತ್ಯವಿರುವಷ್ಟರಮಟ್ಟಿಗೆ ಸಂಘದ ಯಾದಾಸ್ತಿನ ಯಾ ವ್ಯವಸ್ಥಾ ಪತ್ರದ ಷರತ್ತುಗಳನ್ನು ತಬ್ದಿಲ್ ಮಾಡಬಹುದು; ಅಥವಾ ವ್ಯವಸ್ಥಾ ಪತ್ರದ ಬದಲಿಗೆ, ಕಂಪೆನಿಯ ಉದ್ದೇಶಗಳ ವಿಷಯವಾಗಿ ಹಿಂದೆ ಹೇಳೋಣಾದ ಯಾವದಾದರೂ ತಬ್ದಿಲ್ ಇದ್ದು ಯಾ ಇಲ್ಲದೆ ಒಂದು ಯಾದಾಸ್ತನ್ನೂ ಸಂಘದ ನಿಬಂಧನೆಗಳನ್ನೂ ಇಟ್ಟು ಅದರ (ಕಂಪೆನಿಯ) ಸ್ಥಾಪಿಸೋಣದರ ರೂಪವನ್ನು ತಬ್ದಿಲ್ ಮಾಡಬಹುದು; ಆದರೆ ಚೀಫ್ ಕೋರ್ಟಿಗೆ ಅರ್ಜಿಮಾಡಿ ಅವರು ಖಾಯಂಮಾಡಿದ ಶಿವಾಯಿ ಅಂತ ಯಾವದಾದರೂ ತಬ್ದಿಲಿಯು ಜಾರೀಗೆ ಬರಕೂಡದು.

ಸ್ಥಿರ ಪಡಲಿಕ್ಕೆ ಪೂರ್ವ ಯಾವದನ್ನು ಕುರಿತು ಕೋರ್ಟಿಗೆ ಸಮಾಧಾನ ಪಡಿಸಬೇಕೆಂಬದರ ವಿವರ.

12 B. ಅಂತ ಯಾವದಾದರೂ ತಬ್ದಿಲಿಯನ್ನು ಖಾಯಂ ಮಾಡುವದಕ್ಕೆ ಮೊದಲು ಚೀಫ್ ಕೋರ್ಟಿನವರು ಈ ಕೆಳಗಣ ಸಂಗಳಲ್ಲಿ ಸಮಾಧಾನ ಪಟ್ಟಿರಬೇಕು—

(a) ಕಂಪೆನಿಯ ಡಿಬೆಂಚರುಗಳೆಂಬ ಸಾಲಪತ್ರಗಳನ್ನು ಅಥವಾ ಡಿಬೆಂಚರ ಶಿಲಕನ್ನು ಇಟ್ಟುಕೊಂಡ ಪ್ರತಿ ಒಬ್ಬನಿಗೆ ಮತ್ತು ಕೋರ್ಟಿನವರು ಆ ತಬ್ದಿಲಿಯಿಂದ ಯಾರ ಯಾರ ಪ್ರಯೋಜನಕ್ಕೆ ವ್ಯತ್ಯಾಸ ಬರುವದೆಂಬು ಅಭಿಪ್ರಾಯ ಪಡುತ್ತಾರೋ ಆ ಪ್ರತಿ ಒಬ್ಬ ಮನುಷ್ಯನಿಗೆ ಯಾ ಮನುಷ್ಯರ ವರ್ಗಕ್ಕೆ ಸಾಕಾದಷ್ಟು ನೋಟಿಸು ಕೊಟ್ಟಿರುತ್ತದೊ; ಮತ್ತು

(b) ಕೋರ್ಟಿನವರು ಅಭಿಪ್ರಾಯ ಪಡುವ ಮೇರೆಗೆ ಆಕ್ಷೇಪ ತೆಗೆಯಲಿಕ್ಕೆ ಹಕ್ಕುಳ್ಳ ವ ಕೋರ್ಟಿನವರು ಅಪ್ಪಣೆ ಕೊಟ್ಟ ರೀತಿಯಲ್ಲಿ ತನ್ನ ಆಕ್ಷೇಪಗಳನ್ನು ಹೇಳುವ ಪ್ರತಿ ಒಬ್ಬ ಸಾಲಗಾರನ ವಿಷಯದಲ್ಲಿ, ತಬ್ದಿಲಿಗೆ ಆತನ ಸಮ್ಮತಿ ಸಿಕ್ಕಿದೆಯೋ ಅಥವಾ ಆತನ ಸಾಲ ಯಾ ದಾವೆ ತೀರಿದೆಯೋ ನಿಶ್ಚಯಿಸಲ್ಪಟ್ಟಿತ್ತೋ ಯಾ ಕೋರ್ಟಿನವರು ಸಮಾಧಾನ ಪಡುವ ಹಾಗೆ ಭದ್ರಪಡಿಸೋಣಾಗಿದೆಯೋ:

ಪರಂತು ಯಾವ ಒಬ್ಬ ಮನುಷ್ಯ ಯಾ ಯಾವದೊಂದು ಮನುಷ್ಯರ ವರ್ಗದ ಸಂಗತಿಯಲ್ಲಿ, ಕೋರ್ಟಿನವರು ವಿಶೇಷ ಕಾರಣಗಳ ಮೇಲೆ ಈ ಪ್ರಕರಣ ಪ್ರಕಾರ ಅಗತ್ಯವುಳ್ಳ ನೋಟಿಸನ್ನು ಕೊಡದೆ ಇರಬಹುದು.

ಖಾಯಂ ಮಾಡುವಾಗ್ಯೆ ಷರತ್ತುಗಳನ್ನು ನಮೂದಿಸಲಿಕ್ಕೆ ವ ಖರ್ಚಿನ ವಿಷಯದಲ್ಲಿ ಹುಕುಮುಕೊಡಲಿಕ್ಕೂ ಕೋರ್ಟಿನವರ ಅಧಿಕಾರ.

12 C. ಕೋರ್ಟಿನವರು ತಮಗೆ ಯೋಗ್ಯವೆಂತ ಕಂಡುಬರುವ ಷರತ್ತುಗಳಿಗೆ ವ ವಿದ್ಯಮಾನಗಳಿಗೆ ಒಳಪಡಿಸಿ ಅಂತ ತಬ್ದಿಲಿಗಳನ್ನು ಖಾಯಂ ಮಾಡುವ ಹುಕುಮನ್ನು ಕೊಡಬಹುದು, ಮತ್ತು ಖರ್ಚಿನ ವಿಷಯದಲ್ಲಿ ಅವರು ನ್ಯಾಯವೆಂದೆಣಿಸುವ ಹುಕುಮನ್ನು ಕೊಡಬಹುದು.

ಕೋರ್ಟಿನವರಿಗೆ ಕೊಡಲ್ಪಟ್ಟ ಯಖ್ತ್ಯಾರಿ.

12 D. ಚೀಫ್ ಕೋರ್ಟಿನವರು ಈ ರೆಗ್ಯುಲೇಷನಿಗನುಗುಣವಾಗಿ ತಮ್ಮ ಮುನಾಸಬು ಮೇರೆಗೆ ನಡಿಸುವಲ್ಲಿ ಕಂಪೆನಿಯ ಮೆಂಬರರ ಯಾ ಆ ಮೆಂಬರರ ಯಾವದಾದರೂ ವರ್ಗದವರ ಹಕ್ಕು ವ ಪ್ರಯೋಜನಗಳಿಗೆ ಮತ್ತು ಸಾಲಗಾರರ ಹಕ್ಕು ಯಾ ಪ್ರಯೋಜನಗಳಿಗೆ ಲಕ್ಷ್ಯವಿಡತಕ್ಕದ್ದು, ಮತ್ತು ಅವರು ಯೋಗ್ಯವೆಂತ ಎಣಿಸುವದಾದರೆ ಸಮ್ಮತಿಸದಿರುವ ಮೆಂಬರರ ಪ್ರಯೋಜನವನ್ನು ಕೊಂಡುಕೊಳ್ಳುವಬಗ್ಯೆ ವಿಲೇವಾರಿ ಮಾಡುವ ಹಾಗೆ ತಮ್ಮ ವ್ಯವಹರಣೆಯನ್ನು ಮುಂದರಿಸಬಹುದು: ಮತ್ತು ಅಂತ ವಿಲೇವಾರಿಯನ್ನು ಸುಲಭಪಡಿಸುವಬಗ್ಯೆ ಯಾ ಅದನ್ನು ಜಾರಿಯಲ್ಲಿ ತರುವಬಗ್ಯೆ ಕೋರ್ಟಿನವರು ತಮಗೆ ಯುಕ್ತವೆಂತ ತೋರುವ ಅನುಜ್ಞೆಗಳನ್ನೂ ಹುಕುಮುಗಳನ್ನೂ ಕೊಡಬಹುದು:

ಪರಂತು ಹೀಗೆ ಕೊಂಡುಕೊಳ್ಳುವಲ್ಲಿ ಕಂಪೆನಿಯ ಬಂಡವಾಳದ ಎಷ್ಟು ಅಂಶವನ್ನಾಗಲಿ ಖರ್ಚು ಮಾಡುವದು ನ್ಯಾಯವಲ್ಲ.

ಆಲೋಚನೆಯಲ್ಲಿರುವ ತಬ್ದಿಲಿಯನ್ನು ಕೋರ್ಟಿನವರು ಖಾಯಂ ಮಾಡುವದಕ್ಕೆ ಕಾರಣಗಳು.

12 E. ಕಂಪೆನಿಯ ಉದ್ದೇಶಗಳ ವಿಷಯವಾಗಿ ಹಿಂದೆ ಹೇಳೋಣಾದ ಯಾವದಾದರೂ ತಬ್ದಿಲಿಯು—

(a) ಕಂಪೆನಿಯ ಆಫೀಸೆಂದು ರಿಜಿಸ್ಟರ ಆದ ಸ್ಥಳವನ್ನು ಮೈಸೂರ ಶೀಮೆಯ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ತಬ್ದಿಲ್ ಮಾಡಲಿಕ್ಕೆ ; ಅಥವಾ

(b) ಮಿತಿಯಿಂದ ಖರ್ಚುಮಾಡಿ ಯಾ ಸಾರ್ಥಕವಾಗಿ ವ್ಯಾಪಾರವನ್ನು ನಡಿಸುವದಕ್ಕೆ ; ಅಥವಾ

(c) ವೃದ್ಧಿಮಾಡಿದ ಯಾ ಹೊಸದಾದ ಉಪಾಯಗಳಿಂದ ಅದರ ಮುಖ್ಯ ಉದ್ದಿಶ್ಯವನ್ನು ಸಾಧಿಸುವದಕ್ಕೆ; ಅಥವಾ

(d) ಅದರ ವ್ಯಾಪಾರ ನಡಿಸುವ ಸ್ಥಳಕ ಪ್ರದೇಶವನ್ನು ವಿಸ್ತಾರಮಾಡುವದಕ್ಕೆ ಯಾ ಬದಲಾಯಿಸಲಿಕ್ಕೆ ; ಅಥವಾ

(e) ಪ್ರಕೃತದ ವಿದ್ಯಮಾನಗಳ ಮೇರಿಗೆ ಯೋಗ್ಯರೀತಿಯಿಂದ ಯಾ ಅನುಕೂಲತೆಯಿಂದ ಕಂಪೆನಿಯ ಕೆಲಸಕ್ಕೆ ಸೇರಿಸಬಹುದಾದ ಯಾವದಾದರೂ ಕೆಲಸ ಯಾ ಕೆಲಸಗಳನ್ನು ನಡಿಸುವದಕ್ಕೆ; ಅಥವಾ

(f) ಸಂಘದ ಯಾದಾಸ್ತಿನಲ್ಲಿ ಯಾ ವ್ಯವಸ್ಥಾಪತ್ರದಲ್ಲಿ ನಮೂದಿಸೋಣಾದ ಯಾವದಾದರೂ ಉದ್ದೇಶವನ್ನು ಮಿತಪಡಿಸಲಿಕ್ಕೆ ಯಾ ಬಿಟ್ಟು ಬಿಡಲಿಕ್ಕೆ,

ಅನುಕೂಲವಾಗುವ ಹಾಗೆ ಅಗತ್ಯಉಂಟೆಂತ ತೋರುವದಾದರೆ, ಚೀಫ್ ಕೋರ್ಟಿನವರು ಅಂತ ತಬ್ದಿಲಿಯನ್ನು ಪೂರ್ಣವಾಗಿಯಾಗಲಿ ಅದರ ಸ್ವಲ್ಪ ಅಂಶವನ್ನಾಗಲಿ ಖಾಯಂ ಮಾಡಬಹುದು.

ತಬ್ದಿಲಾದ ಯಾದಾಸ್ತಿನ ಯಾ ಬದಲಿಗೆ ಇಡೋಣಾದ ಯಾದಾಸ್ತಿನ ಮತ್ತು ನಿಬಂಧನೆಗಳ ಸಮೇತ ಹುಕುಮನ್ನು ರಿಜಿಸ್ಟರ ಮಾಡೋಣ ಮತ್ತು ಅದರ ಫಲ.

12 F. (1) ಒಂದು ಕಂಪೆನಿಯು, ಅದರ ಆಫೀಸೆಂದು ರಿಜಿಸ್ಟರ್ ಆದ ಸ್ಥಳದವಿಷಯವಾಗಿ ಅಥವಾ ಉದ್ದೇಶಗಳ ವಿಷಯವಾಗಿ ಸಂಘದ ಯಾದಾಸ್ತಿನ ಯಾ ವ್ಯವಸ್ಥಾ ಪತ್ರದ ನಿಬಂಧನೆಗಳನ್ನು ತಬ್ದಿಲ್ ಮಾಡಿದ, ಅಥವಾ ವ್ಯವಸ್ಥಾ ಪತ್ರದ ಬದಲಿಗೆ ಒಂದು ಯಾದಾಸ್ತನ್ನೂ ಸಂಘದ ನಿಬಂಧನೆಗಳನ್ನೂ ಇಟ್ಟು ಅದರ ಸ್ಥಾಪಿಸೋಣದರ ರೂಪವನ್ನು ತಬ್ದಿಲ್ ಮಾಡಿದ ಮತ್ತು ಅಂತ ತಬ್ದಿಲಿಯು ಕೋರ್ಟಿನವರಿಂದ ಖಾಯಂ ಮಾಡೋಣಾದ ಸಂಗತಿಯಲ್ಲಿ; ಕಂಪೆನಿಯು ಹುಕುಮು ಆದ ತಾರೀಖಿನಿಂದ ಮೂರು ತಿಂಗಳೊಳಗೆ ಸಂಗತ್ಯಾನುಸಾರವಾಗಿ ಹಾಗೆ ತಬ್ದಿಲಾದ ಸಂಘದ ಯಾದಾಸ್ತಿನ ಯಾ ವ್ಯವಸ್ಥಾಪತ್ರದ ಒಂದು ಛಾಪಾ ನಕಲಿನ ಅಥವಾ ಬದಲಾಗಿ ಇಡೋಣಾದ ಯಾದಾಸ್ತಿನ ವ ಸಂಘದ ನಿಬಂಧನೆಗಳ ಛಾಪಾ ನಕಲಿನ ಸಮೇತ ಅಂತ ತಬ್ದಿಲನ್ನು ಖಾಯಂ ಮಾಡಿದ ಹುಕುಮಿನ ಮಂಜೂರ ನಕಲನ್ನು, ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರರಿಗೆ ಕಳುಹಿಸತಕ್ಕದ್ದು. ರಿಜಿಸ್ಟ್ರಾರ ಅದನ್ನು ರಿಜಿಸ್ಟರಮಾಡಿಕೊಂಡು ಹಾಗೆ ರಿಜಿಸ್ಟರ ಮಾಡಿದ್ದನ್ನು ತನ್ನ ದಸ್ಕತ್ತು ನಿಶಿ ದೃಢಪಡಿಸತಕ್ಕದ್ದು. ಅಂತ ತಬ್ದಿಲನ್ನು ಖಾಯಂ ಮಾಡುವಿಕೆಯ ವಿಷಯವಾಗಿ ಈ ರೆಗ್ಯುಲೇಷನ ಪ್ರಕಾರ ಅಗತ್ಯವುಳ್ಳಂತಾದ್ದೆಲ್ಲಾ ಅನುಸರಿಸೋಣಾಗಿದೆ ಎಂಬದಕ್ಕೆ ರಿಜಿಸ್ಟ್ರಾರರ ದೃಢಪತ್ರಿಕೆಯು ಸಂಪೂರ್ಣವಾದ ರುಜುವಾತಾಗಿರತಕ್ಕದ್ದು.

(2) ಹಿಂದೆ ಹೇಳಿದ ಅಂತ ತಬ್ದಿಲಿಯ ದೆಸೆಯಿಂದ ರಿಜಿಸ್ಟರ ಆದ ಆಫೀಸು, ಕಂಪೆನಿಯು ರಿಜಿಸ್ಟರ ಮಾಡಲ್ಪಟ್ಟ ಆಫೀಸಿರುವ ಪ್ರಾಂತ್ಯ ಅಲ್ಲದೆ ಮೈಸೂರು ಶೀಮೆಯ ಬೇರೆ ಪ್ರಾಂತ್ಯಕ್ಕೆ ತಬ್ದಿಲ್ ಮಾಡಲ್ಪಡುವಲ್ಲಿ, ಕಂಪೆನಿಯು ಅಂತ ತಬ್ದಿಲ್ ಖಾಯಂಮಾಡೋಣಾದ ಹುಕುಮಿನ ಮಂಜೂರ ನಕಲನ್ನು ಅಂತ ಪ್ರತಿ ಒಂದು ಪ್ರಾಂತ್ಯದಲ್ಲಿಯ ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರರಿಗೆ ಕಳುಹಿಸತಕ್ಕದ್ದು, ಮತ್ತು ಅಂತ ಪ್ರತಿ ಒಬ್ಬ ರಿಜಿಸ್ಟ್ರಾರ ಅದನ್ನು ರಿಜಿಸ್ಟರಮಾಡಿ ಸದರಿ ರಿಜಿಸ್ಟ್ರಿಯನ್ನು ತನ್ನ ದಸ್ಕತ್ತು ನಿಶಿ ಮಂಜೂರ ಮಾಡತಕ್ಕದ್ದು; ಅಂತ ಆಫೀಸು ಯಾವ ಸ್ಥಳದಿಂದ ತಬ್ದಿಲ್ ಮಾಡೋಣಾಗಿರುತ್ತದೋ ಆ ಪ್ರಾಂತದ ರಿಜಿಸ್ಟ್ರಾರ ತನ್ನ ಆಫೀಸಿನಲ್ಲಿ ರಿಜಿಸ್ಟರ ಆದ ವ ಕಂಪೆನಿಗೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನೂ ಬೇರೆ ಪ್ರಾಂತದ ರಿಜಿಸ್ಟ್ರಾರರಿಗೆ ಕಳುಹಿಸತಕ್ಕದ್ದು.

(3) ಹಾಗೆ ರಿಜಿಸ್ಟರಾದ ತಾರೀಖ್ ಲಾಗಾಯಿತು (ಆದರೆ ಈ ರೆಗ್ಯುಲೇಷನಿನ ನಿಬಂಧನೆಗಳಿಗೊಳಪಟ್ಟು) ಹಾಗೆ ತಬ್ದಿಲಾದ ಯಾದಾಸ್ತು ಯಾ ವ್ಯವಸ್ಥಾ ಪತ್ರವು ಸಂಘದ ಯಾದಾಸ್ತು ಯಾ ವ್ಯವಸ್ಥಾಪತ್ರವಾಗಿರತಕ್ಕದ್ದು; ಅಥವಾ ಸಂಗತ್ಯಾನುಸಾರವಾಗಿ ಹಾಗೆ ಬದಲಿಗೆ ಇಡೋಣಾದ ಯಾದಾಸ್ತು ವ ಸಂಘದ ನಿಬಂಧನೆಗಳು, ಆ ಕಂಪೆನಿಯು ಅಂತ ಯಾದಾಸ್ತಿನ ವ ಸಂಘದ ನಿಬಂಧನೆಗಳೊಡನೆ ಈ ರೆಗ್ಯುಲೇಷನಿನ 1ನೇ ಭಾಗದ ಪ್ರಕಾರ ರಿಜಿಸ್ಟರಾಗಿದ್ದರೆ ಯಾವರೀತಿಯಲ್ಲಿ ಲಾಗೂವಾಗುತ್ತಿದ್ದವೋ ಅದೇರೀತಿಯಲ್ಲಿ ಲಾಗೂವಾಗತಕ್ಕದ್ದು. ಕಂಪೆನಿಯ ವ್ಯವಸ್ಥಾಪತ್ರವು ಕಂಪೆನಿಗೆ ಲಾಗೂವಾಗುವಂತಾದ್ದು ನಿಂತು ಹೋಗತಕ್ಕದ್ದು.

(4) ಈ ಪ್ರಕರಣಕ್ಕನುಗುಣವಾದ ಪ್ರತಿ ಒಂದು ರಿಜಿಸ್ಟ್ರೇಷನ್ಗೆ ಜಾಯಿಂಟ ಸ್ಟಾಕ ಕಂಪೆನಿಯ ರಿ... ರರಿಗೆ ಐದು ರೂಪಾಯಿ ಫೀಸನ್ನು ಪಾವತಿ ಮಾಡಬೇಕಾಗಿರುತ್ತದೆ.

ಮೂರು ತಿಂಗಳೊಳಗೆ ರಿಜಿಸ್ಟರ ಮಾಡಲಿಕ್ಕೆ ತಪ್ಪಿ ಹೋಗುವದರ ಫಲ.

12 G. ಹಿಂದೆ ಹೇಳಿದ್ದ ಅಂತ ತಖ್ತಿಲಿಯು ಹಿಂದಿನ ಕಡೇ ಪ್ರಕರಣಕ್ಕನುಗುಣವಾಗಿ ಕ್ರಮ... ರಿಜಿಸ್ಟರಾಗುವ ವಿನಹ ಜಾರಿಯಲ್ಲಿ ಬರಕೂಡದು, ಮತ್ತು ಕೋ... ತಖ್ತಿಲಿಯನ್ನು ಖಾಯಂ ಮಾಡಿ ಕೊಟ್ಟ ಹುಕುಮಿನ ತಾರೀಖಿನ ನ... ಮೂರು ತಿಂಗಳೊಳಗೆ ರಿಜಿಸ್ಟರು ಮಾಡೋಣಾಗದೆ ಇದ್ದರೆ ಅಂತ ತಖ್ತಿಲಿ ಮತ್ತು ಅದಕ್ಕೆ ಸಂಬಂಧಪಟ್ಟ ಹುಕುಮಿನ ವಿಶಿಷ್ಟ ವ್ಯವಹರಣೆಗಳು ಆ ಮೂರು ತಿಂಗಳ ವಾಯಿದೆ ಮಾಗಿಯುತ್ತಲೇ ಪೂರ್ಣವಾಗಿ ರದ್ದಾಗತಕ್ಕದ್ದು:

ಪರಂತು ತಕ್ಕವಾದ ಸಬಬು ತೋರಿಸೋಣಾದಲ್ಲಿ, ಹೆಚ್ಚಿಗೆ ಒಂದು ತಿಂಗಳ ವಾಯಿದೆಯೊಳಗಾಗಿ ಅರ್ಜಿ ಮಾಡಿದಲ್ಲಿ, ಕೋರ್ಟಿನವರು ಹುಕುಮನ್ನು ಪುನಃ ಜಾರಿ ಮಾಡಬಹುದು.

Reduction of Capital and Shares.
ಮೂಲಧನವನ್ನೂ ಹಿಸ್ಸೆಗಳನ್ನೂ ತಗ್ಗಿಸೋಣ.

ಮೂಲಧನವನ್ನು ತಗ್ಗಿಸುವದಕ್ಕೆ ಕಂಪೆನಿಗೆ ಅಧಿಕಾರ.

13. ಹಿಸ್ಸೆಗಳಿಂದ ಕ್ಲುಪ್ತಪಡಿಸಲ್ಪಟ್ಟ ಯಾವ ಕಂಪೆನಿಯಾದರೂ ಅದರ ಸಮಾಜದ ಯಾದಾಸ್ತಿನಲ್ಲಿನ ಷರತ್ತುಗಳನ್ನು ಬದಲಾಯಿಸಲಿಕ್ಕೆ ಪ್ರಥಮತಃ ಮಾಡಲ್ಪಟ್ಟ ನಿಬಂಧನೆಗಳಿಂದ ಅಧಿಕಾರ ಹೊಂದಿದ್ದರೆ ವಿಶೇಷ ನಿರ್ಣಯದಿಂದ ತಿದ್ದುಪಡಿ ಮಾಡಬಹುದು, ಅಥವಾ ಅದರ ಮೂಲಧನವನ್ನು ತಗ್ಗಿಸುವದಕ್ಕೆ ವಿಶೇಷ ನಿರ್ಣಯದಿಂದ ಬದಲಾಯಿಸ ಬಹುದು; ಆದರೆ ಒಂದು ಕಂಪೆನಿಯ ಮೂಲಧನವನ್ನು ತಗ್ಗಿಸುವದಕ್ಕಾಗಿ ಅಂತ ಯಾವ ನಿರ್ಣಯವು ಕೆಳಗೆ ನಮೂದಿಸೋಣಾಗಿರುವ ಮೇರಿಗೆ ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರಿಂದ ಕೋರ್ಟಿನ ಅಪ್ಪಣೆ ರಿಜಿಸ್ಟರಾಗುವವರಿವಿಗೆ ಜಾರೀಲಿ ಬರಕೂಡದು:

ಟಿಪ್ಪಣಿ I.—“ಮೂಲಧನ”ವೆಂಬ ಮಾತು ಸೇರಿಕೆಯಾಗಿ ಹೋದ ಮೂಲ ಧನವನ್ನು ಅಡಗಿಸಿಕೊಂಡಿರುತ್ತದೆ.

ಟಿಪ್ಪಣಿ II.—ಮೂಲ ಧನವನ್ನು ತಗ್ಗಿಸುವದಕ್ಕಾಗಿ ಈ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರವು ಹೋಗಲಾಡಿಸಿಕೊಂಡ ಯಾವ ಮೂಲ ಧನವನ್ನಾಗಲಿ ಯಾ ಸಿಕ್ಕ ಬಹುದಾದ ಆಸ್ತಿಯಿಂದ ತೋರ್ಪಡಿಸದ ಯಾವ ಮೂಲಧನವನ್ನಾಗಲಿ ರದ್ದುಮಾಡುವದಕ್ಕೆ ಅಥವಾ ಕಂಪೆನಿಗೆ ಬೇಕಾಗಿರುವವುಗಳಿಗಿಂತಲೂ ಹೆಚ್ಚಾಗಿ ಇರಬಹುದಾದ ಯಾವ ಮೂಲಧನವನ್ನಾಗಲಿ ಕೊಟ್ಟುಬಿಡುವದಕ್ಕೆ ಅಧಿಕಾರವನ್ನು ಅಡಗಿಸಿಕೊಂಡಿರುತ್ತದೆ; ಮತ್ತು ಸಂದಾಯವಾಗಿ ಹೋದ ಮೂಲಧನವನ್ನು ಕಂಪೆನಿಯು ಹಿಸ್ಸೆಗಳ ಮೇಲೆ ಯಾವ ವಿಲ್ಲಂಘವಾಗಲಿ (ಇದ್ದರೆ) ಇದನ್ನು ರದ್ದುಮಾಡಿಯಾಗಲಿ ರದ್ದುಮಾಡದೆಯಾಗಲಿ ಇದನ್ನು ಕಮ್ಮಿಮಾಡಿಯಾಗಲಿ ಕಮ್ಮಿಮಾಡದೆಯಾಗಲಿ ತಗ್ಗಿಸಬಹುದು; ಮತ್ತು ಅಂತ ವಿಲ್ಲಂಘವು ಎದುವರಿವಿಗೆ ರದ್ದಾಗದೆಯಾಗಲಿ ಕಮ್ಮಿಯಾಗದೆಯಾಗಲಿ ಇದೆಯೋ ಅದುವರಿವಿಗೆ ನಿಲ್ಲಿಸಿ ಇಟ್ಟುಕೊಂಡಿರುವಂತೆ ಭಾವವಾಗತಕ್ಕದ್ದು, ಇದನ್ನು ಕುರಿತು ಮುಂದೆ ಏನಹಾಗಿದ್ದಾಗ್ಯೂ ಚಿಂತೆ ಇಲ್ಲ.

ಕ್ಲುಪ್ತವಾದ ವಾಯಿದೆವರಿವಿಗೆ “ಅಂಡ್ ರಿಡ್ಯೂಸ್ಡ್” ಎಂಬ ಮಾತುಗಳನ್ನು ಕಂಪೆನಿಯು ಅದರ ಹೆಸರಿಗೆ ಸೇರಿಸಿಕೊಳ್ಳತಕ್ಕದ್ದು.

14. ಒಂದು ಕಂಪೆನಿಯು ಅದರ ಮೂಲಧನವನ್ನು ತಗ್ಗಿಸುವದಕ್ಕೋಸ್ಕರ ಯಾವ ವಿಶೇಷ ನಿರ್ಣಯವಾಗಲಿ ಏರ್ಪಡಿಸಿದ ತಾರೀಖಿನ ನಂತರ, ಕೋರ್ಟಿನವರು ಗೊತ್ತುಮಾಡಬಹುದಾದ ತಾರೀಖಿನವರಿವಿಗೆ, ಸದರಿ ಕಂಪೆನಿಯ ಹೆಸರಿನ ಕಡೇಲಿ “ಅನ್ಡ ರಿಡ್ಯೂಸ್ಡ” ಎಂಬ ಮಾತುಗಳನ್ನು ಸದರಿ ಕಂಪೆನಿಯವರು ಸೇರಿಸತಕ್ಕದ್ದು, ಮತ್ತು ಆ ಮಾತುಗಳು ಅಂತ ತಾರೀಖಿನ ವರಿವಿಗೆ ಕಂಪೆನಿಯ ಹೆಸರಿನ ಭಾಗವಾಗಿರುವಂತೆ ಭಾವವಾಗತಕ್ಕದ್ದು.

ತಗ್ಗಿಸುವದಕ್ಕೆ ಮಂಜೂರಾತಿಯ ಹುಕುಮನ್ನು ಕೊಡಹೇಳಿ ಕಂಪೆನಿಯು ಕೋರ್ಟಿಗೆ ಮನವಿ ಮಾಡಿಕೊಳ್ಳತಕ್ಕದ್ದು.

15. ಮೂಲ ಧನವನ್ನು ತಗ್ಗಿಸುವದಕ್ಕೆ ಒಂದು ವಿಶೇಷ ನಿರ್ಣಯವನ್ನು ಏರ್ಪಡಿಸಿದ ಒಂದು ಕಂಪೆನಿಯವರು—ಹೀಗೆ ತಗ್ಗಿಸಿರುವದನ್ನು ಮಂಜೂರ್ಮಾಡಿ ಅಪ್ಪಣೆ ಕೊಡುವಂತೆ ಅರ್ಜಿಯ ಮೂಲಕವಾಗಿ ಕೋರ್ಟಿನವರಿಗೆ ಮನವಿ ಮಾಡಿಕೊಳ್ಳಬಹುದು, ಮತ್ತು, ಅರ್ಜಿಯನ್ನು ಕೇಳಿದ ಮೇಲೆ, ಸದರಿ ಕೋರ್ಟಿನವರು — ತಗ್ಗಿಸುವದನ್ನು ಆಕ್ಷೇಪಿಸುವದಕ್ಕೆ ಈ ರೆಗ್ಯುಲೇಷನಿನ ಸೆಕ್ಷ...

...ಗೆ ಅನುಗುಣವಾಗಿ ಅರ್ಹನಾಗಿರುವ ಪ್ರತಿ ಲೇಣೇದಾರನ ಅನುಮತಿಯನ್ನು ಹಾಗೆ ತಗ್ಗಿಸುವದರ ವಿಷಯ ... ಹೊಂದಿರುವಂತೆಯಾಗಲಿ ಅಥವಾ ಅವನ ಸಾಲವನ್ನು ಯಾ ಬಾಧ್ಯತೆಯನ್ನು ತೀರಿಸಿ ಬಿಟ್ಟಿರುವಂತೆ ...ಯಿಸಿರುವಂತೆ ಅಥವಾ ಮುಂದೆ ನಿಬಂಧನೆಯಾದ ರೀತೀಲಿ ಭದ್ರಪಡಿಸಿರುವಂತೆ—ಸಮಾಧಾನ ಪಟ್ಟರೆ, ...ಯುಕ್ತವಾಗಿ. ತೋರುವಂತ ಷರತ್ತುಗಳ ಮೇಲೆ ಮತ್ತು ಅದೇಮೇರಿಗೆ ತೋರುವಂತ ಯೇರ್ಪಾಡು ...ಳಪಟ್ಟು ತಗ್ಗಿಸುವ ಬಗ್ಯೆ ಮಂಜೂರ್ಮಾಡಿ ಅಪ್ಪಣೆಯನ್ನು ಕೊಡಬಹುದು.

ಹೀಗೆ ತಗ್ಗಿಸಿದ್ದು ಸಂದಾಯವಾಗದ ಮೂಲಧನವನ್ನು ಕುರಿತಾಗಲಿ ಇರುವ ವಿಲ್ಲಂಘವನ್ನು ಕಮ್ಮಿಯಾಗುವಂತೆ ಮಾಡದೆ ಹೋದರೆ ಅಥವಾ ಸಂದಾಯವಾಗಿ ಹೋದ ಯಾವ ಮೂಲಧನವನ್ನಾಗಲಿ ಯಾವ ಹಿಸ್ಸೇದಾರನಿಗಾದರೂ ಸಂದಾಯ ಮಾಡುವದಾಗಿ ಮಾಡದೆಹೋದರೆ, ಕಂಪೆನಿಯ ಲೇಣೇದಾರರು — ಕೋರ್ಟನವರು ಅನ್ಯಥಾ ನಿರ್ದೇಶಿಸದ ಪಕ್ಷದಲ್ಲಿ — ಸದರಿ ತಗ್ಗಿಸೋಣವನ್ನು ಆಕ್ಷೇಪಿಸಲೂ ಕೂಡದು ಅಥವಾ ಅನುಮತಿ ಕೊಡುವಂತೆ ಕೋರಲ್ಪಡಲೂ ಕೂಡದು ; ಮತ್ತು ಈ ಪ್ರಕರಣಕ್ಕನುಗುಣವಾಗಿ ಯಾವ ಅರ್ಜಿಯನ್ನಾಗಲಿ ಜಾಹಿರ್ಮಾಡುವದಕ್ಕಿಂತ ಮುಂಚೆ ಹದಿನಾಲ್ಕನೇ ಪ್ರಕರಣದಲ್ಲಿ ನಮೂದಿಸಿರುವ ಮೇರಿಗೆ "ಅಂಡ್ ರಿಡ್ಯೂಸ್ಡ್" ಎಂಬ ಮಾತುಗಳನ್ನು ಸೇರಿಸಬೇಕಾದ ಆವಶ್ಯಕವಿಲ್ಲ, ಮತ್ತು ಹಾಗೆ ಸೇರಿಸಬೇಕಾದ್ದು ಅಗತ್ಯವಿಲ್ಲವೆಂಬದಾಗಿ ಕೋರ್ಟನವರಿಗೆ ತೋರಿದರೆ ಅದನ್ನು ತೆಗಿಸಿ ಹಾಕಬಹುದು.

ಯಾವ ಸಂಗತಿಯಲ್ಲಾಗಲಿ ಕೋರ್ಟನವರಿಗೆ ಅವಶ್ಯಕವಾಗಿ ತೋರಿದರೆ, ತಮಗೆ ಯುಕ್ತವಾಗಿ ತೋರುವ ರೀತೀಲಿ ಹಾಗೆ ತಗ್ಗಿಸುವದಕ್ಕಾಗಿ ಕಾರಣಗಳನ್ನು ಅಥವಾ ಸದರಿ ತಗ್ಗಿಸೋಣವನ್ನು ಕುರಿತು ಜನರಿಗೆ ಸರಿಯಾದ ಸಮಾಚಾರವನ್ನು ಕೊಡಬೇಕೆಂಬ ಇರಾದೆಯಿಂದ ಸದರಿ ತಗ್ಗಿಸೋಣವನ್ನು ಕುರಿತ ಇತರ ಸಮಾಚಾರವನ್ನು, ಮತ್ತು ಕೋರ್ಟನವರಿಗೆ ಯುಕ್ತವಾಗಿ ತೋರಿದರೆ, ಹೀಗೆ ಮಾಡುವದಕ್ಕೆ ಕಾರಣವನ್ನು ಪ್ರಾಯಿಷ್ಮಾಡುವಂತೆ ಸದರಿ ಕೋರ್ಟನವರು ಕಂಪೆನಿಯವರನ್ನು ಕೋರಬಹುದು.

ಲೇಣೇದಾರರು ತಗ್ಗಿಸುವದನ್ನು ಆಕ್ಷೇಪಿಸಬಹುದು ಮತ್ತು ಆಕ್ಷೇಪಿಸುವ ಲೇಣೇದಾರರ ಜಾಬಿತೆಯನ್ನು ಕೋರ್ಟನವರು ಗೊತ್ತು ಮಾಡತಕ್ಕದ್ದು.

16. ಒಂದು ಕಂಪೆನಿಯವರು ತಮ್ಮ ಮೂಲಧನವನ್ನು ತಗ್ಗಿಸುವದಕ್ಕೆ ಇರಾದೆಪಟ್ಟರೆ, ಕೋರ್ಟನವರು ಗೊತ್ತುಮಾಡುವ ತಾರೀಖಿನಲ್ಲಿ, ಯಾವ ಸಾಲಕ್ಕಾಗಲಿ ಯಾ ಬಾಧ್ಯತೆಗಾಗಲಿ ಸದರಿ ಸಾಲವು ಯಾ ಬಾಧ್ಯತೆಯು ಸದರಿ ತಾರೀಖು ಕಂಪೆನಿಯನ್ನು ಮುಟ್ಟಿಬಿಡುವ ಕಾಲದ ಆರಂಭವಾಗಿದ್ದ ಪಕ್ಷದಲ್ಲಿ, ಸದರಿ ಕಂಪೆನಿಗೆ ಅನುಗುಣವಾಗಿ ರುಜುವಾತಿನಲ್ಲಿ ಅಂಗೀಕಾರವಿಡಬಹುದಾದಂತಾದ್ದಾಗಿದ್ದರೆ, ಅದಕ್ಕೆ ಅರ್ಹನಾಗಿರುವಂತಾ ಸದರಿ ಕಂಪೆನಿಯ ಪ್ರತಿ ಲೇಣೇದಾರನಿಗೆ ಇರಾದೆಕೊಟ್ಟಿರುವ ತಗ್ಗಿಸೋಣವನ್ನು ಆಕ್ಷೇಪಿಸುವದಕ್ಕೂ ಹಾಗೆ ಆಕ್ಷೇಪಿಸುವದಕ್ಕೆ ಅರ್ಹರಾಗಿರುವ ಲೇಣೇದಾರರ ಜಾಬಿತೆಯಲ್ಲಿ ತಮ್ಮ ಹೆಸರುಗಳನ್ನು ದಾಖಲ್ಮಾಡಿಸಿಕೊಳ್ಳುವದಕ್ಕೂ ಅರ್ಹರಾಗಿರತಕ್ಕದ್ದು.

ಕೋರ್ಟನವರು ಅಂತ ಲೇಣೇದಾರರ ಜಾಬಿತೆಯನ್ನು ತೀರ್ಮಾನಿಸತಕ್ಕದ್ದು, ಮತ್ತು ಈ ಬಗ್ಯೆ ಜಾಹಿರಪಟ್ಟಿಗೆ, ಯಾವ ಲೇಣೇದಾರನಿಂದಲಾದರೂ ಅರ್ಜಿಯನ್ನು ಕೋರದೇನೇ, ಅಂತಾ ಲೇಣೇದಾರರ ಹೆಸರುಗಳನ್ನೂ ವ ತಮ್ಮ ಸಾಲಗಳ ಯಾ ಬಾಧ್ಯತೆಗಳ ಸ್ವಭಾವವನ್ನೂ ಮೊಬಲಗನ್ನೂ ಗೊತ್ತು ಮಾಡತಕ್ಕದ್ದು, ಮತ್ತು ಫಲಾನ ದಿನ ಯಾ ದಿನಗಳನ್ನು ಗೊತ್ತು ಮಾಡಿ ಈ ದಿನಗಳೊಳಗಾಗಿ ಜಾಬಿತೆಯಲ್ಲಿ ದಾಖಲಾಗದಂತಾ ಕಂಪೆನಿಯ ಲೇಣೇದಾರರು ಹಾಗೆ ದಾಖಲಾಗುವದಕ್ಕಾಗಿ ದಾವಾ ಮಾಡತಕ್ಕದ್ದೆಂತ, ಅಥವಾ ಇರಾದೆಕೊಟ್ಟ ತಗ್ಗಿಸೋಣವನ್ನು ಆಕ್ಷೇಪಿಸುವದಕ್ಕೆ ಇರುವಂತಾ ಹಕ್ಕಿನಿಂದ ತಳ್ಳಲ್ಪಡಿಯಾಗತಕ್ಕದ್ದೆಂದು ನೋಟೀಸುಗಳನ್ನು ಪ್ರಾಯಿಷ್ಮಾಡತಕ್ಕದ್ದು:

ಪರಂತು, ತಗ್ಗಿಸೋಣದರಿಂದ ಸಂದಾಯವಾಗದ ಮೂಲಧನವನ್ನು ಕುರಿತು ಯಾವ ವಿಲ್ಲಂಘವಾಗಲಿ ಕಮ್ಮಿಯಾಗುವಂತೆ ಯಾದರೂ ಸಂದಾಯವಾಗಿ ಹೋದ ಯಾವ ಮೂಲಧನವಾಗಲಿ ಯಾವ ಹಿಸ್ಸೆದಾರನಿಗಾದರೂ ಸಂದಾಯವಾಗುವಂತೆಯಾದರೂ ಆಗದೆ ಹೋದರೆ, ಕಂಪೆನಿಯ ಲೇಣೇದಾರರು — ಕೋರ್ಟನವರಿಂದ ಅನ್ಯಥಾ ನಿರ್ದೇಶವಾದರೇನೇ ಹೊರ್ತು — ತಗ್ಗಿಸೋಣವನ್ನು ಆಕ್ಷೇಪಿಸುವದಕ್ಕೆ ಅರ್ಹರಾಗಿರುವದಿಲ್ಲ ಅಥವಾ ಹಾಗೆ ಮೇಲೆ ಅದಕ್ಕೆ ಅನುಮತಿ ಕೊಡುವದಕ್ಕೂ ಕೋರಲ್ಪಡುವದಿಲ್ಲ.

ಲೇಣೇದಾರನ ಸಾಲಕ್ಕಾಗಿ ಜಾಮೀನು ಕೊಡಲ್ಪಟ್ಟ ಮೇಲೆ ಅವನ ಅನುಮತಿ ಅವಶ್ಯಕವಿಲ್ಲವೆಂದು ಕೋರ್ಟಿನವರು ಬಿಟ್ಟು ಬಿಡಬಹುದು.

17. ಯಾರ ಹೆಸರು ಲೇಣೇದಾರರ ಜಾಬಿತೆಯಲ್ಲಿ ದಾಖಲಾಗಿದೆಯೋ ಮತ್ತು ಯಾರ ಸಾಲ ಯಾ ಬಾಧ್ಯತೆ ಸಂದಾಯವಾಗದೆ ಯಾ ಗೊತ್ತಾಗದೆ ಇದೆಯೋ ಅಂತ ಲೇಣೇದಾರನು ಇರಾದೆಕೊಟ್ಟು ತಗ್ಗಿಸೋಣಕ್ಕೆ ಅನುಮತಿ ಕೊಡದೆ ಹೋದರೆ, ಕೋರ್ಟಿನವರು (ತಮಗೆ ಯುಕ್ತವಾಗಿ ತೋರಿದರೆ) ಅಂತ ಲೇಣೇದಾರನ ಸಾಲವನ್ನು ಯಾ ಬಾಧ್ಯತೆಯನ್ನು ಬೇರೆ ತೆಗದಿಟ್ಟು ಮತ್ತು ಅದರೊಳಗಿಂದ ಕೆಳಗೆ ನಮೂದಿಸೋಣಾಗಿರುವಂತಾ ಮೊಬಲಗನ್ನು ಕೋರ್ಟಿನವರು ನಿರ್ದೇಶಿಸುವಂತಾ ರೀತಿಯಲ್ಲಿ ವಿನಿಯೋಗಿಸುವದರಿಂದ ಸದರಿ ಲೇಣೇದಾರನ ಸಾಲವನ್ನ ಯಾ ಬಾಧ್ಯತೆಯನ್ನ ಸಂದಾಯ ಮಾಡುವದನ್ನು ಭದ್ರಪಡಿಸಿ—ಕಂಪೆನಿಯವರ ಅನುಮತಿ ಬೇಕಾದ್ದಿಲ್ಲವೆಂದು ಬಿಟ್ಟುಬಿಡಬಹುದು, (ಹ್ಯಾಗಂದರೆ):—

(a) ಲೇಣೇದಾರನ ಸಾಲದ ಯಾ ಬಾಧ್ಯತೆಯ ಪೂರಾ ಮೊಬಲಗನ್ನು ಕಂಪೆನಿಯವರು ಒಪ್ಪಿಕೊಂಡರೂ ಅಥವಾ, ಒಪ್ಪಿಕೊಳ್ಳದೆಹೋದಾಗ್ಯೂ, ಬೇರೆ ತೆಗೆದಿಟ್ಟು ವಿನಿಯೋಗಿಸುವದು ಕಂಪೆನಿಯವರಿಗೆ ಇಷ್ಟವುಳ್ಳದ್ದಾಗಿದ್ದರೆ, ಆಗ ಸಾಲದ ಯಾ ಬಾಧ್ಯತೆಯ ಪೂರಾ ಮೊಬಲಗು ಬೇರೆ ತೆಗೆದಿಡಲ್ಪಟ್ಟು ವಿನಿಯೋಗಿಸಲ್ಪಡತಕ್ಕದ್ದು.

(b) ಲೇಣೇದಾರನ ಸಾಲದ ಯಾ ಬಾಧ್ಯತೆಯ ಪೂರಾ ಮೊಬಲಗನ್ನು ಕಂಪೆನಿಯವರು ಒಪ್ಪಿಕೊಳ್ಳದೆ ಹೋದರೆ, ಮತ್ತು ಬೇರೆ ತೆಗೆದಿಟ್ಟು ವಿನಿಯೋಗಿಸುವದಕ್ಕೆ ಕಂಪೆನಿಯವರಿಗೆ ಇಷ್ಟವಿಲ್ಲದಿದ್ದರೆ, ಅಥವಾ ಮೊಬಲಗು ಷರತ್ತುಬಂದಿಯಾಗಿದ್ದರೆ ಯಾ ಗೊತ್ತಾಗದ್ದಾಗಿದ್ದರೆ, ಆಗ ಕೋರ್ಟಿನವರು, ತಮಗೆ ಯುಕ್ತಕರವಾಗಿ ತೋರಿದರೆ, ಅಂತಾ ಸಾಲ ಯಾ ಬಾಧ್ಯತೆ ನ್ಯಾಯವಾದ್ದೋ ಅಲ್ಲವೋ ಎಂಬದನ್ನೂ, ಮತ್ತು ಈ ಬಗ್ಯೆ ಕಂಪೆನಿಯವರು ಗುರಿಯಾಗಬಹುದಾದ ಮೊಬಲಗನ್ನೂ ಕಂಪೆನಿಯು ಕೋರ್ಟಿನವರಿಂದ ಮುಕ್ತಿ ಬಿಡಲ್ಪಡುವದಾಗಿದ್ದರೆ ಹ್ಯಾಗೋ ಹಾಗೆಯೇ ವಿಚಾರಿಸಿ ಫೈಸಲ್ಮಾಡಬಹುದು; ಮತ್ತು ಕೋರ್ಟಿನವರು ಹಾಗೆ ವಿಚಾರಿಸಿ ಫೈಸಲ್ಮಾಡುವ ಮೊಬಲಗು ಬೇರೇ ಇಡಲ್ಪಟ್ಟು ವಿನಿಯೋಗಿಸಲ್ಪಡತಕ್ಕದ್ದು.

ಹುಕುಮನ್ನೂ ಮಿನಿಟೆಂಬ ಅಭಿಪ್ರಾಯ ಪತ್ರಿಕೆಯನ್ನೂ ರಿಜಿಸ್ಟರ್ಮಾಡಬೇಕು.

18. ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರು, ತನ್ನ ಮುಂದೆ ಕಂಪೆನಿಯ ಮೂಲಧನವನ್ನು ತಗ್ಗಿಸೋಣವನ್ನು ಮಂಜೂರ್ಮಾಡುವ ಕೋರ್ಟಿನ ಹುಕುಮನ್ನು ಹಾಜರಾದಮೇಲೆ, ಮತ್ತು ತನಗೆ ಹುಕುಮಿನ ನಕಲನ್ನೂ—ಕಂಪೆನಿಯ ಮೂಲಧನದ ವಿಷಯದಲ್ಲಿ ಹುಕುಮಿನಿಂದ ಬದಲಾಯಿಸಲ್ಪಟ್ಟ ಮೇರಿಗೆ ಅಂಥಾ ಮೂಲಧನದ ಮೊಬಲಗನ್ನೂ ಅದು ವಿಭಾಗಿಸಲ್ಪಟ್ಟಿರುವ ಹಿಸ್ಸೆಗಳ ಸಂಖ್ಯೆಯನ್ನೂ, ಒಂದೊಂದು ಹಿಸ್ಸೆಯ ಮೊಬಲಗನ್ನೂ, ಮಿನಿಟೆಂಬ ಅಭಿಪ್ರಾಯ ಪತ್ರಿಕೆಯನ್ನೂ ರಿಜಿಸ್ಟರ್ಮಾಡುವ ಕಾಲದಲ್ಲಿ ಒಂದೊಂದು ಹಿಸ್ಸೆಯ ಮೇಲೆ ಸಂದಾಯವಾಗಿಹೋದಹಾಗೆ ಭಾವವಾಗತಕ್ಕದ್ದೆಂದು ಇರಾದೆ ಕೊಡೋಣಾದ ಮೊಬಲಗು (ಏನಾದರೂ ಇದ್ದರೆ) ಅದನ್ನೂ ತೋರ್ಪಡಿಸುವ (ಕೋರ್ಟಿನವರಿಂದ ಅಂಗೀಕಾರ ಹೊಂದಿದ) ಒಂದು ಮಿನಿಟೆಂಬ ಅಭಿಪ್ರಾಯ ಪತ್ರಿಕೆಯ ನಕಲನ್ನು ಕೊಡೋಣಾದಮೇಲೆ, ಆತನು ಸದರಿ ಹುಕುಮನ್ನೂ, ಮಿನಿಟನ್ನೂ ರಿಜಿಸ್ಟರ್ಮಾಡತಕ್ಕದ್ದು; ಮತ್ತು ರಿಜಿಸ್ಟರಾದಮೇಲೆ, ಹಾಗೆ ರಿಜಿಸ್ಟರಾದ ಹುಕುಮಿನಿಂದ ಮಂಜೂರಾದ ವಿಶೇಷ ನಿರ್ಣಯದ ಅಮಲು ಷುರುವಾಗುತ್ತದೆ.

ಅಂತಾ ರಿಜಿಸ್ಟ್ರೇಷನಿನ ನೋಟೀಸು ಕೋರ್ಟಿನವರು ನಿರ್ದೇಶಿಸಬಹುದಾದಂತಾ ರೀತೀಲಿ ಪ್ರಾಯಿಷಾಗತಕ್ಕದ್ದು.

ರಿಜಿಸ್ಟ್ರಾರ ತಾನು ಹುಕುಮನ್ನೂ ಮಿನಿಟನ್ನೂ ರಿಜಿಸ್ಟರ್ಮಾಡಿದ ಹಾಗೆ ಸರ್ಟಿಫೈಮಾಡಿ ದಸ್ಕತ ಮಾಡತಕ್ಕದ್ದು; ಮತ್ತು ಈತನ ಸರ್ಟಿಫಿಕೆಟ ಮೂಲಧನವನ್ನು ತಗ್ಗಿಸೋಣವನ್ನು ಕುರಿತು ಈ ರೆಗ್ಯುಲೇಷನ್ನಲ್ಲಿ ಕೋರಿ ಇರುವವುಗಳನ್ನೆಲ್ಲ ಅನುಸರಿಸೋಣಾಗಿವೆ ಎಂಬುವದಕ್ಕೆ ಮತ್ತು ಕಂಪೆನಿಯ ಮೂಲಧನವು ಮಿನಿಟೆಂಬ ಅಭಿಪ್ರಾಯಪತ್ರಿಕೆಯಲ್ಲಿ ನಮೂದಿಸಿರುವಂತಾ ಮೂಲಧನವೆಂಬುವದಕ್ಕೆ ಪರಿಷ್ಕಾರವಾದ ರುಜುವಾತಾಗಿದೆ.

ಮಿನಿಟೆಂಬ ಅಭಿಪ್ರಾಯ ಪತ್ರಿಕೆಯು ಸಮಾಜದ ಯಾದಾಸ್ತಿನ ಭಾಗವಾಗತಕ್ಕದ್ದು.

19. ಮಿನಿಟೆಂಬ ಅಭಿಪ್ರಾಯ ಪತ್ರಿಕೆಯು ರಿಜಿಸ್ಟರಾದಾಗ, ಕಂಪೆನಿಯ ಸಮಾಜದ ಯಾದಾಸ್ತಿನಲ್ಲಿ ಇರುವ ಇದರಂತಾ ಭಾಗಕ್ಕೆ ಬದಲಾಗಿ ಇರುವಂತೆ ಭಾವವಾಗತಕ್ಕದ್ದು, ಮತ್ತು ಇದು ಮೊದಲೇ ಸಮಾಜದ ಯಾದಾಸ್ತಿನಲ್ಲಿ ಇದ್ದ ಪಕ್ಷದಲ್ಲಿ ಯಾವ ಸಲುವಳಿಯುಳ್ಳದ್ದಾಗಿರುವದೋ—ಯಾವ ಬದಲಾವಣೆಗಳಿಗೆ ಒಳ

ಪಟ್ಟಿರುವದೋ, ಅದೇ ಸಲುವಳಿಯುಳ್ಳದ್ದಾಗಿ ಅದೇ ಬದಲಾವಣೆಗಳಿಗೊಳಪಟ್ಟು ಇರತಕ್ಕದ್ದು; ಮತ್ತು ಈ ರೆಗ್ಯುಲೇಷನಿನಲ್ಲಿ ನಮೂದಿಸಿರುವಂತೆ ಒಳಪಟ್ಟು ಕಂಪೆನಿಯ, ಯಾವ ಮೆಂಬರಾಗಲಿ, ಒಂದು ಹಿಸ್ಸೆಯನ್ನು ಕುರಿತು ಸದರಿ ಹಿಸ್ಸೆಯಮೇಲೆ ಸಂದಾಯವಾದ ಮೊಬಲಗಿಗೂ ಮಿನಿಟೆಂಬ ಅಭಿಪ್ರಾಯ ಪತ್ರಿಕೆಯಿಂದ ಗೊತ್ತಾದ ಹಿಸ್ಸೆಯ ಮೊಬಲಗಿಗೂ ಏನಾದರೂ ವ್ಯತ್ಯಾಸವಿದ್ದರೆ ಇದಕ್ಕಿಂತ ಹೆಚ್ಚಾಗಿ ಕೊಡಹೇಳಿ ಕೇಳಲ್ಪಡುವದಕ್ಕೆ ಯಾ ಕೊಡುವದಕ್ಕೆ ಗುರಿಯಾಗುವದಿಲ್ಲ, ಆ ಮೆಂಬರುಗಳು ಹಾಜಿ ಯಾ ಹಾಲಿ ಮೆಂಬರುಗಳಾಗಿದ್ದಾಗ್ಯೂ ಚಿಂತೆ ಇಲ್ಲ.

ಪ್ರೊಸೀಡಿಂಗ್ಸ್ ವಿಷಯ ತಿಳಿಯದ ಲೇಣೇದಾರರ ಹಕ್ಕುಗಳ ಏನಾಯಿತಿ.

20. ಒಂದು ಸಾಲವನ್ನು ಕುರಿತು ಯಾ ಬಾಧ್ಯತೆಯನ್ನು ಕುರಿತು ಈ ರೆಗ್ಯುಲೇಷನಿಗನುಗುಣವಾಗಿ ಒಂದು ಕಂಪೆನಿಯ ಮೂಲಧನವನ್ನು ತಗ್ಗಿಸುವದನ್ನು ಆಕ್ಷೇಪಿಸುವದಕ್ಕೆ ಅರ್ಹನಾಗಿರುವ ಯಾವ ಲೇಣೇದಾರನಾಗಲಿ, ಹಾಗೆ ತಗ್ಗಿಸಬೇಕೆಂಬುವ ಅಭಿಪ್ರಾಯದಿಂದ ನಡೆದ ಪ್ರೊಸೀಡಿಂಗ್ಸನ್ನು ತಿಳಿಯದ ಕಾರಣದಿಂದ—ಅಥವಾ ತನ್ನ ಬಾಧ್ಯತೆಯ ವಿಷಯವಾಗಿ ಸದರಿ ಪ್ರೊಸೀಡಿಂಗ್ಸಿನ ಸ್ವಭಾವವನ್ನೂ ಅವುಗಳ ಫಲವನ್ನೂ ತಿಳಿಯದ ಕಾರಣದಿಂದ—ಲೇಣೇದಾರರ ಜಾಬಿತೆಯಲ್ಲಿ ದಾಖಲಾಗದೆಇದ್ದರೆ, ಮತ್ತು ಹಾಗೆ ತಗ್ಗಿಸಿದಮೇಲೆ ಕಂಪೆನಿಯು ಈ ರೆಗ್ಯುಲೇಷನಿನ ಅರ್ಥದೊಳಗಾಗಿ ಸದರಿ ಸಾಲದ ಯಾ ಬಾಧ್ಯತೆಯ ಮೊಬಲಗನ್ನು ಲೇಣೇದಾರನಿಗೆ ಕೊಡುವದಕ್ಕೆ ಶಕ್ತಿಯಿಲ್ಲದ್ದಾಗಿದ್ದರೆ, ಸದರಿ ಕಂಪೆನಿಯು ಮೂಲಧನವನ್ನು ತಗ್ಗಿಸುವದನ್ನು ಕುರಿತ ಹುಕುಮನ್ನೂ ಮಿನಿಟೆಂಬ ಅಭಿಪ್ರಾಯ ಪತ್ರಿಕೆಯನ್ನೂ ರಿಜಿಸ್ಟರ್ಮಾಡಿದ ತಾರೀಖಿನಲ್ಲಿ ಸದರಿ ಕಂಪೆನಿಯಲ್ಲಿ ಮೆಂಬರಾಗಿದ್ದ ಪ್ರತಿಯೊಬ್ಬನೂ—ಹಾಗೆ ರಿಜಿಸ್ಟರ್ಮಾಡಿದ ದಿನದ ಮುಂಚಿನ ದಿನದಲ್ಲಿ ಕಂಪೆನಿಯನ್ನು ಮುಚ್ಚೋಣವು ಆರಂಭವಾಗಿದ್ದರೆ ಎಷ್ಟು ಕೊಡುವದಕ್ಕೆ ಗುರಿಯಾಗಿರುವನೋ ಆ ಮೊಬಲಗಿಗೆ ಮೀರದೆ ಸದರಿ ಸಾಲವನ್ನು ಯಾ ಬಾಧ್ಯತೆಯ ಮೊಬಲಗನ್ನು ಸಂದಾಯಮಾಡುವದರಲ್ಲಿ ಚಂದಾಹಾಕುವದಕ್ಕೆ ಗುರಿಯಾಗತಕ್ಕದ್ದು;

ಮತ್ತು, ಕಂಪೆನಿಯು ಮುಚ್ಚಿ ಬಿಡಲ್ಪಟ್ಟಾಗ, ಕೋರ್ಟಿನವರು, ಅಂತಾ ಲೇಣೇದಾರನ ಅರ್ಜಿ ಬಂದಮೇಲೆ, ಮತ್ತು ಸದರಿ ತಗ್ಗಿಸುವದಕ್ಕಾಗಿ ನಡೆದ ಪ್ರೊಸೀಡಿಂಗ್ಸೂ ಅಥವಾ ಅವನ ಬಾಧ್ಯತೆಯ ವಿಷಯದಲ್ಲಿ ಸದರಿ ಪ್ರೊಸೀಡಿಂಗ್ಸಿನ ಸ್ವಭಾವವೂ ಅದರ ಫಲವೂ ಅವನಿಗೆ ತಿಳಿದಿರಲಿಲ್ಲವೆಂಬದಾಗಿ ರುಜುವಾದಮೇಲೆ, ತಮಗೆ ಯುಕ್ತವಾಗಿ ತೋರಿದರೆ, ಆದೇಪ್ರಕಾರವಾಗಿ ಅಂತ ಚಂದಾದಾರರ ಜಾಬಿತೆಯನ್ನು ತೀರ್ಮಾನಿಸಬಹುದು, ಮತ್ತು ಸದರಿ ಚಂದಾದಾರರು ಮುಚ್ಚಿ ಬಿಡೋಣದರಲ್ಲಿ ಸಾಧಾರಣ ಚಂದಾದಾರರಾಗಿದ್ದರೆ ಹ್ಯಾಗೋ ಹಾಗೆ ಎಲ್ಲಾ ಸಂಗತಿಗಳಲ್ಲೂ ಅದೇ ರೀತಿಯಾಗಿ ಅಂತಾ ಜಾಬಿತೆಯಮೇಲೆ ತೀರ್ಮಾನಿಸಿದ ಚಂದಾದಾರರನ್ನು ಚಂದಾ ಕೊಡಹೇಳಿ ಕೇಳಬಹುದು ಮತ್ತು ಕೇಳುವಂತೆ ಮಾಡಿಸಬಹುದು ಮತ್ತು ಹುಕುಮುಗಳನ್ನು ಚಲಾಯಿಸಬಹುದು.

ಈ ಪ್ರಕರಣದಲ್ಲಿ ಇರುವಂತಾದ್ದು ಯಾವದೂ ಕಂಪೆನಿಯ ಚಂದಾದಾರರೊಳಗೆ ಒಬ್ಬರಿಗೊಬ್ಬರ ಹಕ್ಕುಗಳನ್ನು ಬಾಧಕಪಡಿಸುವದಿಲ್ಲ.

ರಿಜಿಸ್ಟರಾದ ಮಿನಿಟೆಂಬ ಅಭಿಪ್ರಾಯವು ಸಮಾಜದ ಯಾದಾಸ್ತಿನಲ್ಲಿ ಅಡಗಿರಬೇಕು.

21. ಒಂದು ಮಿನಿಟೆಂಬ ಅಭಿಪ್ರಾಯ ಪತ್ರಿಕೆಯು, ರಿಜಿಸ್ಟರಾದಾಗ್ಗೆ, ಅದು ರಿಜಿಸ್ಟರಾದಮೇಲೆ ಹುಟ್ಟಿದ ಸಮಾಜದ ಯಾದಾಸ್ತಿನ ಒಂದೊಂದು ನಕಲಿನಲ್ಲಿಯೂ ಅಡಗಿರತಕ್ಕದ್ದು; ಮತ್ತು, ಯಾವ ಕಂಪೆನಿಯುವರಾಗಲಿ ಈ ಪ್ರಕರಣದ ನಿಬಂಧನೆಗಳ ಪ್ರಕಾರ ನಡೆಸಿಕೊಳ್ಳದೆ ತಪ್ಪಿದರೆ, ಯಾವದನ್ನು ಕುರಿತು ತಪ್ಪಿತ ಜರಗಿತೋ ಅಂತಾ ಒಂದೊಂದು ನಕಲಿನ ಸಂಗತಿಯಲ್ಲಿ ಹತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ತಿಳಿದೂ ಬೇಕೆಂತ ಅಂತ ತಪ್ಪನ್ನು ಜರಿಗಿಸುತ್ತಾನೋ ಜರಗುವಂತೆ ಬಿಡುತ್ತಾನೋ ಅಂತಾ ಕಂಪೆನಿಯ ಒಬ್ಬೊಬ್ಬ ಡೈರೆಕ್ಟರೂ ಮನೇಜರೂ ಅದೇ ಜುರ್ಮಾನೆಗೆ ಗುರಿಯಾಗುತ್ತಾನೆ.

ಲೇಣೇದಾರನ ಹೆಸರನ್ನು ಮರೆಮಾಡಿದರೆ ದಂಡನೆ.

22. ಕಂಪೆನಿಯ ಯಾವ ಡೈರೆಕ್ಟರಾಗಲಿ, ಮ್ಯಾನೇಜರಾಗಲಿ ಯಾ ಆಫಿಸರಾಗಲಿ ಇರಾದೆ ಪ್ರಕಾರ ತಗ್ಗಿಸೋಣವನ್ನು ಆಕ್ಷೇಪಣೆ ಮಾಡುವದಕ್ಕೆ ಅರ್ಹನಾಗಿರುವ ಕಂಪೆನಿಯ ಯಾವ ಲೇಣೇದಾರನ ಹೆಸರನ್ನಾಗಲಿ ಮನಃಪೂರ್ತಿಯಾಗಿ ಬಚ್ಚಿಟ್ಟರೆ, ಅಥವಾ ಕಂಪೆನಿಯ ಯಾವ ಲೇಣೇದಾರನ ಸಾಲದ ಯಾ ಬಾಧ್ಯತೆಯ ಸ್ವಭಾವವನ್ನಾಗಲಿ ಮೊಬಲಗನ್ನಾಗಲಿ ಮನಃಪೂರ್ತಿಯಾಗಿ ತಪ್ಪಿತವಾಗಿ ಹೇಳಿದರೆ, ಅಥವಾ ಕಂಪೆನಿಯ ಯಾವ ಡೈರೆಕ್ಟರಾಗಲಿ ಮ್ಯಾನೇಜರಾಗಲಿ ಮೇಲೆ ಹೇಳಿದ ಹಾಗೆ ಬಚ್ಚಿಡೋದಕ್ಕೆ ಯಾ ತಪ್ಪಿತ ಹೇಳೋದಕ್ಕೆ ಇಂಡ್ಯನ್ ಪೀನಲ್‌ಕೋಡಿನ ಅರ್ಥದಮೇರಿಗೆ ಸಹಕರಿಸಿದರೆ, ಅಂತಾ ಪ್ರತಿ ಡೈರೆಕ್ಟರೂ, ಮ್ಯಾನೇಜರು ಯಾ ಆಫಿಸರು

ಒಂದು ವರುಷದ ತನಕ ಯಿದೆ ವರಿಗಿನ ಮೈದಿನಾಗಲಿ ಯಾ ಜುರ್ಮಾನೆಗಾಗಲಿ ಯಾ ಇವೆರಡಕ್ಕಾಗಲಿ ಗುರಿಯಾ ಗತಕ್ಕದ್ದು.

23. ಹಿಸ್ಸೆಗಳಿಂದ ಕ್ಲುಪ್ತ ಪಡಿಸಲ್ಪಟ್ಟ ಯಾವ ಕಂಪೆನಿಯಾದರೂ ಅದರ ಸಮಾಜದ ಯಾದಾಸ್ತಿನಲ್ಲಿನ ಷರತ್ತುಗಳನ್ನು ಬದಲಾಯಿಸುವದಕ್ಕೆ ಪ್ರಥಮತಃ ಮಾಡಲ್ಪಟ್ಟ ನಿಬಂಧನೆಗಳಿಂದ ಅಥವಾ ವಿಶೇಷ ನಿರ್ಣಯದಿಂದ ತಿದ್ದುಪಡಿ ಮಾಡೋಣಾಗಿದ್ದ ಮೇರೆಗೆ ಅಧಿಕಾರ ಹೊಂದಿದ್ದರೆ, ಹಾಗೆ ನಿರ್ಣಯವಾದ ತಾರೀಖಿನಲ್ಲಿ ಯಾರಾದರೂ ...ದೆಹೋದ ಅಥವಾ ತೆಗೆದುಕೊಳ್ಳುವದಾಗಿ ಒಪ್ಪಿಕೊಳ್ಳದೆ ಹೋದ ಯಾವ ಹಿಸ್ಸೆಗಳ ... ಕಂಪೆನಿಯ ಮೂಲಧನವನ್ನು ತಗ್ಗಿಸುವಂತೆ ಯಾದಾಸ್ತಿನ ಷರತ್ತುಗಳನ್ನು ತಿದ್ದುಪಡಿ ... ಈ ರೆಗ್ಯುಲೇಷನಿನ ಬೇರೆ ಪ್ರಕರಣಗಳಲ್ಲಿ ಮೂಲಧನವನ್ನು ತಗ್ಗಿಸುವದನ್ನು ಕುರಿ... ಗಳು ಈ ಪ್ರಕರಣಕ್ಕನುಗುಣವಾಗಿ ಮಾಡಲ್ಪಟ್ಟ ಯಾವ ತಗ್ಗಿಸೋಣಕ್ಕಾಗಲಿ ಅಗಾವಾ...

ತೆಗೆದುಕೊಳ್ಳಲ್ಪಡದ ಹಿಸ್ಸೆಗಳನ್ನು ರದ್ದು ಮಾಡುವದರಿಂದ ಮೂಲಧನವನ್ನು ... ಕ್ಕೆ ಅಧಿಕಾರ.

Subdivision of Shares.

ಹಿಸ್ಸೆಗಳ ಒಳ ವಿಭಾಗೆ.

24. ಹಿಸ್ಸೆಗಳಿಂದ ಕ್ಲುಪ್ತಪಡಿಸಲ್ಪಟ್ಟ ಯಾವ ಕಂಪೆನಿಯಾದರೂ, ಅದರ ಸಮಾಜದ ಯಾದಾಸ್ತಿನಲ್ಲಿನ ಷರತ್ತುಗಳನ್ನು ಬದಲಾಯಿಸುವದಕ್ಕೆ ಪ್ರಥಮತಃ ಮಾಡಲ್ಪಟ್ಟ ನಿಬಂಧನೆಗಳಿಂದ ಅಥವಾ ವಿಶೇಷ ನಿರ್ಣಯದಿಂದ ತಿದ್ದುಪಡಿ ಮಾಡೋಣಾಗಿದ್ದ ಮೇರೆಗೆ ಅಧಿಕಾರಹೊಂದಿದ್ದರೆ, ಹಾಲಿ ಹಿಸ್ಸೆಗಳನ್ನಾಗಲಿ ಯಾ ಅವುಗಳಲ್ಲಿ ಯಾವದನ್ನಾಗಲಿ ಒಳ ವಿಭಾಗ ಮಾಡಿ, ಕಂಪೆನಿಯ ಮೂಲಧನವನ್ನು ಯಾ ಅದರ ಭಾಗವನ್ನು ಕಂಪೆನಿಯ ಸಮಾಜದ ಯಾದಾಸ್ತಿನಿಂದ ಗೊತ್ತಾಗಿರುವ ಮೊಬಲಗಿಗಿಂತಲೂ ಕಮ್ಮಿಯಾಗಿ ಹಿಸ್ಸೆಗಳಾಗಿ ವಿಭಾಗಿಸುವದಕ್ಕೆ, ಸಮಾಜದ ಯಾದಾಸ್ತಿನಲ್ಲಿನ ಷರತ್ತುಗಳನ್ನು ಒಂದು ವಿಶೇಷ ನಿರ್ಣಯದಿಂದ ತಿದ್ದುಪಡಿ ಮಾಡಬಹುದು:

ಹಿಸ್ಸೆಗಳನ್ನು ಇನ್ನೂ ಕೊಂಚ ಮೊಬಲಗಿನ ಹಿಸ್ಸೆಗಳಾಗಿ ವಿಭಾಗಿಸಬಹುದು.

ಪರಂತು, ಹಾಲಿ ಹಿಸ್ಸೆಗಳ ಒಳವಿಭಾಗದಲ್ಲಿ, ತಗ್ಗಿಸೋಣಾದ ಮೊಬಲಗಿನ ಒಂದೊಂದು ಹಿಸ್ಸೆಯ ಬಾಬತು ಸಂದಾಯವಾದ ಮೊಬಲಗಿಗೂ ಸಂದಾಯವಾಗದಿರುವ ಮೊಬಲಗಿಗೂ (ಇದ್ದರೆ) ಇರುವ ದಾಮಾಷಾಯಿಯು ಯಾವದರೊಳಗಿಂದ ತಗ್ಗಿಸೋಣಾದ ಮೊಬಲಗು ಬಾಬತು ಹಿಸ್ಸೆಯು ಬಂತೋ ಅಂಥಾ ಹಾಲಿ ಹಿಸ್ಸೆ ಯಾ ಹಿಸ್ಸೆಗಳ ಸಂಗತಿಯಲ್ಲಿ ಏನು ಇತ್ತೋ ಅದೇಯಾಗಿ ಇರತಕ್ಕದ್ದು.

25. ಕಂಪೆನಿಯ ಮೂಲಧನವು ವಿಭಾಗವಾದ ಹಿಸ್ಸೆಗಳ ಸಂಖ್ಯೆ ಮತ್ತು ಮೊಬಲಗಿನ ವಿವರವು—ಅಂತಾ ಯಾವದಾದರೂ ವಿಶೇಷ ನಿರ್ಣಯವಾದ ತರುವಾಯ ಹುಟ್ಟಿದ ಸಮಾಜದ ಯಾದಾಸ್ತಿನ ಪ್ರತಿ ನಕಲಿನಲ್ಲಿಯೂ ಇರತಕ್ಕದ್ದು; ಈ ವಿವರವು ಅಂತಾ ನಿರ್ಣಯಕ್ಕನುಗುಣವಾಗಿ ಇರತಕ್ಕದ್ದು; ಮತ್ತು ಈ ಪ್ರಕರಣದ ನಿಬಂಧನೆಗಳಿಗನುಗುಣವಾಗಿ ಯಾವ ಕಂಪೆನಿಯಾಗಲಿ ನಡದುಕೊಳ್ಳದೆ ತಪ್ಪಿದರೆ ... ಜರಿಗಿಸಿದ ಒಂದೊಂದು ನಕಲಿಗಾಗಿ ಇಪ್ಪತ್ತು ರೂಪಾಯಿಗಳಿಗೆಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು; ... ಕಂಪೆನಿಯ ಪ್ರತಿ ಡೈರೆಕ್ಟರೂ ವ ಮಾನೇಜರೂ ತಿಳಿದು ಮನಃಪೂರ್ತಿಯಾಗಿ ಅಂತಾ ತಪ್ಪನ್ನು ಮಾಡು... ಗಳನ್ನು ಅಧಿಕಾರಕೊಟ್ಟರೂ ಜರಗುವಂತೆ ಬಿಟ್ಟರೂ ಅವನು ಅದೇ ಜುರ್ಮಾನೆಗೆ ಗುರಿಯಾಗತಕ್ಕದ್ದು.

ವಿಶೇಷ ನಿರ್ಣಯವು ಸಮಾಜದ ಯಾದಾಸ್ತಿನಲ್ಲಿ ಅಡಗಿರಬೇಕು.

Associations, not for Profit.

ಲಾಭಾರ್ಥವಲ್ಲದ ಸಮಾಜಗಳು.

26. ಒಂದು ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಂತೆ ಈ ರೆಗ್ಯುಲೇಷನಿಗನುಗು... ದಾದ ಯಾವ ಸಮಾಜವಾಗಲಿ, ವ್ಯಾಪಾರವ... ವನ್ನು ... ಧರ್ಮವನ್ನು, ಯಾ ಉಪಯೋಗಕ... ದು ಉದ್ದೇಶ್ಯವನ್ನು, ಅಭಿವೃದ್ಧಿ ಪಡಿಸುವ ... ದಾಗಿದ್ದಂತಲೂ, ಮತ್ತು ಅಂತಾ ಸಮಾಜದಿಂ... ತರ ಆದಾಯ ಬಂದಲ್ಲಿ, ಅವುಗಳನ್ನು ಸಮಾಜದ ಉದ್ದೇಶ್ಯಗಳನ್ನು ಅಭಿವೃದ್ಧಿ ಪಡಿಸ... ಗಳ ... ಡೈರೆಕ್ಟರುಗ... ಗಬಹು... ಇರುವ ... ಇಸ್ಸೆ... ಅಂ... ಸತಕ್ಕದ್ದು.

ಲಾಭಾರ್ಥವಲ್ಲದ ಉದ್ದೇಶಗಳುಳ್ಳ ಸಮಾಜಗಳ ವಿಷಯಗಳಲ್ಲಿ ವಿಶೇಷ ನಿಬಂಧನೆಗಳು.

ಬೇಕೆಂಬುವದೂ ವ ಯಾವ ಭಾಜ್ಯವಾಗಲಿ ಸಮಾಜದ ಮೆಂಬರುಗಳಿಗೆ ಕೊಡುವದನ್ನು ನಿಷೇಧಿಸುವದೂ, ಸದರಿ ಸಮಾಜದ ಅಭಿಪ್ರಾಯವೆಂತಲೂ, ಮೈಸೂರ ಗವರ್ನಮೆಂಟಿನವರಿಗೆ ರುಜುಪಡಿಸಿದರೆ, ಸದರಿ ಮೈಸೂರ್ ಗವರ್ನಮೆಂಟಿನವರು, ತಮ್ಮ ಸೆಕ್ರೆಟರಿಗಳಲ್ಲೈಕಿ ಒಬ್ಬರ ಸ್ವಹಸ್ತೂರಿನಲ್ಲಿ ಒಂದು ಲೈಸೆನ್ಸಿನಮೂಲಕ, ಹೆಸರಿನ ತುದಿಯಲ್ಲಿ "ಲಿಮಿಟೆಡ" ಎಂಬಮಾತು ಇಲ್ಲದೇನೆ, ಕ್ಲುಪ್ತ ಪಡಿಸಲ್ಪಟ್ಟ ವಿಲ್ಲಂಘನಿಶಿ ಅಂತಾ ಸಮಾಜವನ್ನು ರಿಜಿಸ್ಟರ್ ಮಾಡಬೇಕೆಂಬದಾಗಿ ನಿರ್ದೇಶಿಸಬಹುದು; ಮತ್ತು ಅಂತಾ ಸಮಾಜವ... ದೇಶ ಕಾರವಾಗಿ ರಿಜಿಸ್ಟರು ಮಾಡಬಹುದು, ಸದರಿ ಸಮಾಜವು ಹಾಗೆ ರಿಜಿಸ್ಟರಾದಮೇಲೆ ಎಲ್ಲ ಸ್ವಾತಂತ್ರ್ಯ... ಬದ್ಧಾಗಿರತಕ್ಕದ್ದಲ್ಲದೆ ... ು ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಗಳ ಮೇಲೆ ಈ ರೆಗ್ಯುಲೇಷನ್ನಿಂದ ವಿಧಿಸಲ್ಪಟ್ಟ ಹಂಗುಗ... ಕ್ಲುಪ್ತವಾದ ಕಂಪೆನಿಯವರು ಕಂಪೆನಿಯ ಹೆಸರಿನ ಭಾಗವಾಗಿ "ಲಿಮಿಟೆಡ" ಎಂಬ ಮಾತನ್ನು ಉ... ತಲೂ ಅಥವಾ ಕಂಪೆನಿಯ ಹೆಸರನ್ನು ಫ್ರಾಯಿಷ ಮಾಡಬೇಕೆಂತಲೂ ಯಾ ಕಂಪೆನಿಯ ಮೆಂಬರು... ಯಾ ಮಾನೇಜರರ ಜಾಬಿತೆಯನ್ನು ರಿಜಿಸ್ಟ್ರಾರಿಗೆ ಕಳುಹಿಸಬೇಕೆಂತಲೂ ಈ ರೆಗ್ಯುಲೇಷನ್ನಲ್ಲಿ... ಹೊರತು, ಒಳ... ನೆಗಳಲ್ಲೈಕಿ ಯಾವದೂ ಹಾಗೆ ರಿಜಿಸ್ಟರಾದ ಸಮಾಜಕ್ಕೆ ಲಾಗೂವಾಗಕೂಡದೆಂಬುವದು

ಮೈಸೂರ ಗವರ್ನಮೆಂಟಿನವರಿಂದ ಕೊಡಲ್ಪಡುವ ಲೈಸೆನ್ಸು ಸದರಿ ಮೈಸೂರ ಗವರ್ನಮೆಂಟಿನವರಿ... ಷರತ್ತುಗಳಮೇಲೆ ಮತ್ತು ಅಂತಾ ನಿಬಂಧನೆಗಳಿಗೊಳಪಟ್ಟು ಕೊ... ಗೆ ಯುಕ್ತವೆಂದು ತೋರಿ ವಿಧಿಸುವಂತಾ ಷರತ್ತುಗಳ ವ ನಿಬಂಧನೆಗಳು ಸದರಿ ಸಮಾಜದಮೇಲೆ ಬದ್ಧವಾಗಿರ... ಡಲ್ಪಡಬಹುದು ; ಮತ್ತು ಅಂತಾ ಷರತ್ತುಗಳು ವ ನಿಬಂಧನೆಗಳು ... ತಕ್ಕದ್ದು ಮತ್ತು ಮೈಸೂರ ಗವರ್ನಮೆಂಟಿನವರಿಗೆ ಇಷ್ಟವಿದ್ದರೆ ಅವುಗಳನ್ನು ಸಮಾಜದ ಯಾದಾಸ್ತು ಪ... ಯಾ ಈ ದಸ್ತಾವೇಜುಗಳಲ್ಲೈಕಿ ಯಾವದೊಂದರಲ್ಲಾಗಲಿ ತ್ತು ನಿಬಂಧನಪತ್ರಗಳಲ್ಲಿ ಆಗಲಿ ಯಾ ಇವೆರಡರಲ್ಲಾಗಲಿ ದಾಖಲ್ ಮಾಡಬಹುದು.

Calls upon Shares.

ಹಿಸ್ಸೆಗಳಮೇಲೆ ತಗಾದೆ.

ಹಿಸ್ಸೆಗಳಲ್ಲೈಕಿ ಕೆಲವು ಪೂರಾ ಪಾವತಿ ಮಾಡಿಸಿಕೊಂಡು ಇತರಗಳು ಹಾಗೆ ಅಲ್ಲದ ಕಂಪೆನಿಯವರು ಪಡಕೊಳ್ಳಬಹುದು.

27. ಈ ರೆಗ್ಯುಲೇಷನಿನ ಪ್ರಕಾರ ಏರ್ಪಾಡಾದ ಯಾವದೊಂದು ಕಂಪೆನಿಯವರು, ಪ್ರಥಮತಃ ಮಾಡ... ಲ್ಪಟ್ಟ ನಿಬಂಧನೆಗಳಿಂದ ಅಥವಾ ತಿದ್ದುಪಡಿಮಾಡಿದ ವಿಶೇಷ ನಿರ್ಣಯದಿಂದ ಅಧಿಕಾರ ಹೊಂದಿದ್ದರೆ, ಕೆಳಗೆ ಕಾಣಿಸಿದ ಪೈಕಿ ಯಾವದಾದರೂ ಒಂದು ಯಾ ಹೆಚ್ಚು ಕೆಲಸಗಳನ್ನು ಮಾಡುವದಕ್ಕೆ ಅತಂಕಪಡಿಸುವಂತಾದ್ದು ಈ ರೆಗ್ಯುಲೇಷನಿನ್ನಲ್ಲಿಯೇನೂ ಇರುವದಿಲ್ಲ, ಅವುಗಳು ಯಾವದಂದರೆ:—

(a) ಹಿಸ್ಸೆಗಳನ್ನು ಕೊಡುವ ಕಾಲದಲ್ಲಿ ಅಂತಾ ಹಿಸ್ಸೇದಾರನು ಕೊಡಬೇಕಾದ ಮತ್ತು ಅಂತಾ ತಗಾದೆಗಳು ಪಾವತಿಯಾಗಬೇಕಾದ ಕಾಲದಲ್ಲಿ ಮಾಡಬೇಕಾದ ಮೊಬಲಗಿನ ವ್ಯತ್ಯಾಸವನ್ನು ಕುರಿತು ವಿಲೇವಾರಿ ಮಾ...;

(b) ಒಂದು ಕಂಪೆನಿಯ ಯಾವನೊಬ್ಬ ಮೆಂಬರಾಗಲಿ ತಾನು ಪಡಕೊಂಡಿರುವ ಹಿಸ್ಸೆ ಅಥವಾ ಹಿಸ್ಸೆಗಳ ಮೇಲೆ ಪಾ... ಗದೆ ಬಾಕಿ ಉಳಿದ ಮೊಬಲಗು ಪೂರ್ತಿಯಾಗಿಯಾಗಲಿ ಅಥವಾ ಭಾಗವಾಗಿಯಾಗಲಿ, ಆತನ... ಸಿಕೊಂಡಿರುವ ಬೇರೆ ಹಿಸ್ಸೆ ಯಾ ಬೇರೆ ಹಿಸ್ಸೆಗಳ ಸಲುವಾಗಿ ತಗಾದಾ ಮೊಬಲಗಿನ ಸ... ರ್ವಾಗಿಯಾಗಲಿ ಅಥವಾ ತಗಾದಾ ಪಾವತಿಯಾಗಬೇಕಾದ ಮೊಬಲಗು ಯಾವನೊಬ್ಬನ... ಕೊಡುವಂತೆ ಒಪ್ಪಿದಲ್ಲಿ ಆತನಿಂದ ತೆಗೆದುಕೊಂಡು ;

(c) ಕೆ ತಗದು... ಮೇಲೆ ಬೇರೆಯಾದದಕ್ಕಿಂತ ಹೆಚ್ಚಿನ ಮೊಬಲಗು ಪಾವತಿಯಾದ ಸಂಗತಿಗಳಲ್ಲಿ ... ಗಳಮೇಲೆ ಪಾವತಿಯಾದ ಮೊಬಲಗಿನ ದಾಮಾಷಾಯಿ ಮೇಲೆ ಭಾಜ್ಯವನ್ನು ... ದು.

...ಲಿ ರದ್ದು ಮಾಡಿ ಕ... ಮಾಡಬಹುದು; ಪ್ರತಿ... ತು ಇದ್ದ ಸ್ಥಳದಲ್ಲಿ... ಗುವದಿಲ್ಲ.

ಕೊಡಲ್ಪಡಬೇಕು.

... ಕಂಪೆನಿಯು ಪ್ರತಿ ಒಂದು ಹಿಸ್ಸೆಯೂ ಅಂಥಾ ಹಿಸ್ಸೆಗಳು ಕೊಡಲ್ಪಡುವಾಗ್ಯ... ಯಾ ಆ ಕಾಲದಲ್ಲಿ ಬರಹ... ಮೂಲಕ ಕ್ರಮವಾದ ಕರಾರು ಮೂಲಕ ಅನ್ಯಥಾ ನಿರ್ಣಯಿಸಿ ಅಂತ... ಕರಾರು ಜಾಯಿಂಟಸ್ಟಾಕ್ ಕಂಪೆನಿಯ... ಸ್ಟ್ರಾರಲ್ಲಿ ದಾಖಲ್ಮಾಡಲ್ಪಟ್ಟ ಹೊರತು, ಅಂತಾ ಪ್ರತಿಒಂದು ಹಿಸ್ಸೆಯು ... ಮೊಬಲಗನ್ನು ಪಾವತಿ ಮಾಡುವದಕ್ಕೆ ಒಳಗಾಗಿ ಕೊಡಲ್ಪಟ್ಟು ತೆಗೆದುಕೊಳ್ಳಲ್ಪಟ್ಟಂತೆ

ವಾರಂಟಿನಲ್ಲಿ ನಮೂದಿಸಿರುವ ಹಿಸ್ಸೆಗಳ ಯಾ ಸ್ಟಾಕಿನ ವಿಷಯದಲ್ಲಿ ಹಾಗೆ ಡೈರೆಕ್ಟರಾಗಿಯಾಗಲಿ ಯಾ ಮಾನೇಜರಾಗಿಯಾಗಲಿ ಇರುವದಕ್ಕೆ ಯೋಗ್ಯತೆ ಯುಳ್ಳವನಾಗಿರುವದಿಲ್ಲ.

ಷೇರ್ ವಾರಂಟನ್ನು ಕೊಟ್ಟರೆ ರಿಜಿಸ್ಟರಿನಲ್ಲಿ ಆಗಬೇಕಾದ ಖತಾಯಿತಿಗಳು.

34. ಯಾವದೊಂದು ಹಿಸ್ಸೆಯು ಯಾ ಸ್ಟಾಕಿನ ವಿಷಯದಲ್ಲಿ ಒಂದು ಷೇರ್ ವಾರಂಟು ಹುಟ್ಟಿದ ಮೇಲೆ, ಕಂಪೆನಿಯವರು ತಮ್ಮ ಮೆಂಬರುಗಳ ರಿಜಿಸ್ಟರಿನೊಳಗಿಂದ ಅಂತಾ ಹಿಸ್ಸೆಯನ್ನು ಯಾ ಸ್ಟಾಕನ್ನು ಹೊಂದಿರುವಂತೆ ರಿಜಿಸ್ಟರಿನಲ್ಲಿ ಆಗ ದಾಖಲಾಗಿದ್ದ ಮೆಂಬರಿನ ಹೆಸರನ್ನು, ಅವನು ಮುಂದೆ ಮೆಂಬರಾಗಿಲ್ಲದ ಹಾಗೆ, ಹೊಡೆದು ಹಾಕಿ ಬಿಡತಕ್ಕದ್ದು, ಮತ್ತು ಕೆಳಗಣ ಸಂಗತಿಗಳನ್ನು ಸದರಿ ರಿಜಿಸ್ಟರಿನಲ್ಲಿ ದಾಖಲ್ಮಾಡತಕ್ಕದ್ದು :—

(a) ವಾರಂಟು ಕೊಟ್ಟ ಸಂಗತಿ.

(b) ಒಂದೊಂದು ಹಿಸ್ಸೆಗೆ ಬೇರೆ ಬೇರೆ ನಂಬರು ಹಾಕಿ ವಾರಂಟಿನಲ್ಲಿ ದಾಖಲಾದ ಹಿಸ್ಸೆಗಳ ಯಾ ಸ್ಟಾಕಿನ ತಖ್ತೆ.

(c) ವಾರಂಟು ಕೊಟ್ಟ ತಾರೀಖು.

ಷೇರ್ ವಾರಂಟುಗಳ ಮೇಲೆ ಸ್ಟಾಂಪು ಹಾಸಲುಗಳು.

35. ಪ್ರತಿ ಷೇರ್ ವಾರಂಟಿನಮೇಲೂ ಛಾಪಾ ಹಾಸಲ್ ವಸೂಲ್ಮಾಡತಕ್ಕದ್ದು. ಪರಭಾರೆ ಮಾಡಿದ್ದಕ್ಕಾಗಿ ಮೌಲ್ಯವು ಅಂತಾ ಹಿಸ್ಸೆಗಳ ಯಾ ಸ್ಟಾಕಿನ ನಾಮಿನಲ್ ಮೌಲ್ಯ ಅಂದರೆ ನಮೂದು ಕಿಮ್ಮತಾಗಿದ್ದರೆ ಈ ಹಾಸಲ್ ವಾರಂಟಿನಲ್ಲಿ ನಮೂದಾದ ಹಿಸ್ಸೆಗಳನ್ನು ಯಾ ಸ್ಟಾಕನ್ನು ಪರಭಾರೆ ಮಾಡುವ ಪತ್ರವು ಗುರಿಯಾಗುವ ಕಿಮ್ಮತ್ತು ಪ್ರಕಾರವಾದ ಛಾಪಾ ಹಾಸಲ್ ಎಷ್ಟಾಗುತ್ತದೋ ಆ ಮೊಬಲಗಿಗೆ ತ್ರಿಗುಣವಾಗಿರತಕ್ಕದ್ದು.

ಕ್ರಮವಾಗಿ ಸ್ಟಾಂಪಿಲ್ಲದ ಷೇರ್ ವಾರಂಟು ಕೊಟ್ಟರೆ ದಂಡನೆ.

ಒಂದು ಷೇರ್ ವಾರಂಟು ಕ್ರಮವಾಗಿ ಛಾಪಾ ತಸ್ಸೆ ಇಲ್ಲದೆ ಕೊಡೋಣಾದರೆ, ಅದನ್ನು ಕೊಡುವ ಕಂಪೆನಿಯವರೂ, ಅದನ್ನು ಕೊಡುವ ಕಾಲದಲ್ಲಿ, ಕಂಪೆನಿಯ ನಿರ್ವಾಹಕ ಡೈರೆಕ್ಟರಾಗಿಯಾಗಲಿ ಯಾ ಸೆಕ್ರೆಟರಿಯಾಗಿಯಾಗಲಿ ಯಾ ಇತರ ಮುಖ್ಯ ಆಫೀಸರಾಗಿಯಾಗಲಿ ಇರುವ ಒಬ್ಬೊಬ್ಬನು ಸಹ ಐನೂರು ರೂಪಾಯಿಗಳ ದಂಡ ತೆರತಕ್ಕದ್ದು.

Change of Name.

ಹೆಸರನ್ನು ಬದಲಾಯಿಸುವಿಕೆ.

ಹೆಸರನ್ನು ಬದಲಾಯಿಸಲಿಕ್ಕೆ ಕಂಪೆನಿಗಳಿಗೆ ಉಂಟಾಗಿರುವ ಅಧಿಕಾರ.

36. ಇನ್ನುಮೇಲೆ ನಮೂದಿಸೋಣಾಗುವ ಪದ್ಧತಿಯ ಪ್ರಕಾರ ಕಂಪೆನಿಯಿಂದ ಮಾಡಲ್ಪಟ್ಟ ವಿಶೇಷ ನಿರ್ಣಯದಿಂದ ಸ್ಯಾಂಕ್ಷನ್ ಹೊಂದಿ, ಮತ್ತು ಮೈಸೂರ್ ಗವರ್ನಮೆಂಟಿನವರ ಸೆಕ್ರೆಟರಿಗಳ ಪೈಕಿ ಒಬ್ಬರಿಂದ ದಸ್ತಕತ್ತು ಮಾಡಲ್ಪಟ್ಟಂತಾ ಸದರಿ ಗವರ್ನಮೆಂಟಿನವರ ಬರಹ ಮೂಲಕ ಮಂಜೂರಾತಿಯನ್ನು ಪಡೆಕೊಂಡು, ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಾದಾಗ್ಯೂ, ತಮ್ಮ ಹೆಸರನ್ನು ಬದಲಾಯಿಸಬಹುದು; ಮತ್ತು ಅಂತಾ ಬದಲಾವಣೆ ಮಾಡಲ್ಪಟ್ಟ ಮೇಲೆ, ರಿಜಿಸ್ಟ್ರಾರವರು ಹಳೇ ಹೆಸರಿಗೆ ಬದಲಾಗಿ ರಿಜಿಸ್ಟರಿನಲ್ಲಿ ಹೊಸ ಹೆಸರನ್ನು ದಾಖಲ್ಮಾಡಿಕೊಂಡು, ಸಂಗತ್ಯಾನುಗುಣವಾದ ತಿದ್ದುಪಡಿಯೊಡನೆ ಒಂದು ಒಗ್ಗಟ್ಟು ಸರ್ಟಿಫಿಕೇಟನ್ನು ಕೊಡತಕ್ಕದ್ದು ; ಆದರೆ ಸದರಿ ಹೆಸರಿನ ಅಂತಾ ಬದಲಾವಣೆಯು ಕಂಪೆನಿಯ ಯಾವ ಹಕ್ಕುಗಳಿಗಾಗಲಿ ಯಾ ಸಾಲಗಳಿಗಾಗಲಿ ಬಾಧಕವಾಗಕೂಡದು, ಅಥವಾ ಸದರಿ ಕಂಪೆನಿಯಿಂದ ಯಾ ಕಂಪೆನಿಮೇಲೆ ದಾಖಲ್ಮಾಡಲ್ಪಟ್ಟ ಯಾ ದಾಖಲ್ಮಾಡಲ್ಪಡುವ ಯಾವ ನ್ಯಾಯ ವ್ಯವಹರಣೆಗಳ ವಿಷಯದಲ್ಲಾಗಲಿ ಯಾವ ಕೊರತೆಯನ್ನೂ ಉಂಟುಮಾಡಕೂಡದು ; ಮತ್ತು ಕಂಪೆನಿಯು ಹಳೇ ಹೆಸರನ್ನು ವಹಿಸಿರುವಾಗ್ಯೆ ದಾಖಲ್ಮಾಡಲ್ಪಟ್ಟು ನಡೆದು ಬಂದ ಅಥವಾ ಶುರೂ ಮಾಡಲ್ಪಟ್ಟ ಯಾವ ನ್ಯಾಯ ವ್ಯವಹರಣೆಗಳಾಗಲಿ ಅದು ಹೊಸ ಹೆಸರನ್ನು ವಹಿಸಿದ ತರುವಾಯ ಇದ್ದುಕೊಂಡು ಇರಬಹುದು ಯಾ ಶುರು ಮಾಡಲ್ಪಡಬಹುದು.

ಟಿಪ್ಪಣಿ.—ಹೆಸರಿನ ಬದಲಾವಣೆಯನ್ನು ಪೂರ್ತಿ ಮಾಡುವದಕ್ಕೆ ಒಗ್ಗಟ್ಟು ಸರ್ಟಿಫಿಕೇಟು ಕೊಡೋಣವು ಅವಶ್ಯಕವಾಗಿದೆ.

Transfer of Shares.
ಹಿಸ್ಸೆಗಳ ಪರಭಾರೆಯು.

ಪರಭಾರೆ ಮಾಡುವವನು ಕೇಳಿಕೊಂಡರೆ ಪರಭಾರೆಯನ್ನು ರಿಜಿಸ್ಟರ ಮಾಡಿಸ ಬಹುದು.

29. ಒಂದು ಕಂಪೆನಿಯವರು, ಸದರಿ ಕಂಪೆನಿಯ ಯಾವ ಹಿಸ್ಸೆಯನ್ನಾಗಲಿ ಯಾ ಬಾಧ್ಯತೆಯನ್ನಾಗಲಿ ಪರಭಾರೆ ಮಾಡುವವನು ಕೇಳಿಕೊಂಡ ಮೇಲೆ, ಅಂತಾ ಹಿಸ್ಸೆಯನ್ನು ಯಾ ಬಾಧ್ಯತೆಯನ್ನು ಪರಭಾರೆ ಮಾಡಿಸಿಕೊಂಡವನ ಹೆಸರನ್ನ ತಮ್ಮ ಮೆಂಬರುಗಳ ರಿಜಿಷ್ಟರಿನಲ್ಲಿ ದಾಖಲ್ಮಾಡಿಕೊಳ್ಳತಕ್ಕದ್ದು. ಹಾಗೆ ಪರಭಾರೆ ಮಾಡಿಸಿ ಕೊಂಡವನು ಅಂತಾ ದಾಖಲಾತಿಯ ಬಗ್ಯೆ ಕೇಳಿಕೊಂಡರೆ ಯಾವ ರೀತಿಯಾಗಿ ಮತ್ತು ಯಾವ ಷರತ್ತುಗಳಿಗೊಳಪಟ್ಟು ದಾಖಲಾಗಿವೆಯೋ ಅದೇ ರೀತಿಯಲ್ಲಿ ಮತ್ತು ಅದೇ ಷರತ್ತುಗಳಿಗೊಳಪಟ್ಟು ದಾಖಲ್ಮಾಡಲ್ಪಡತಕ್ಕದ್ದು.

Share-warrants to Bearer.
ತೆಗೆದು ಕೊಂಡು ಬರುವವನಿಗೆ ಷೇರ್ ವಾರಂಟುಗಳು ಅಂದರೆ ಹಿಸ್ಸೆಯ ಖಾತರಿ ಪತ್ರಗಳು.

ತರುವವನ ಹೆಸರಿನಲ್ಲಿ ಪೂರ್ತಿಯಾಗಿ ಸಂದಾಯವಾದ ಕ್ಲುಪ್ತಪಡಿಸಲ್ಪಟ್ಟ ಹಿಸ್ಸೆಗಳ ವಾರಂಟನ್ನು ಕೊಡಬಹುದು.

30. ಒಂದು ಕಂಪೆನಿಯು ಹಿಸ್ಸೆಗಳಿಂದ ಕ್ಲುಪ್ತಪಡಿಸಲ್ಪಟ್ಟ ಸಂಗತಿಯಲ್ಲಿ, ಸದರಿ ಕಂಪೆನಿಯವರು ಮೊದಲು ಏರ್ಪಾಡಾದಂತೆ ಯಾ ವಿಶೇಷ ತೀರ್ಮಾನದಿಂದ ಬದಲಾಯಿಸಿದಂತೆ ಅದರ ಖಾಯಿದೆಗಳಿಂದ ಹಾಗೆ ಮಾಡುವದಕ್ಕೆ ಅಧಿಕಾರ ಹೊಂದಿದ್ದರೆ, ಮತ್ತು ಅಂತಾ ಖಾಯಿದೆಗಳ ನಿಬಂಧನೆಗಳಿಗೊಳಪಟ್ಟು, ಪೂರ್ತಿಯಾಗಿ ಸಂದಾಯವಾಗಿ ಹೋಗಿರುವ ಒಂದು ಹಿಸ್ಸೆಯ ವಿಷಯದಲ್ಲಿ, ಅಥವಾ ಸ್ಟಾಕಿನ ವಿಷಯದಲ್ಲಿ, ತಮ್ಮ ಸಾಮಾನ್ಯ ಮೊಹರನಿಂದ ಒಂದು ವಾರಂಟ್ ಅಂದರೆ ಖಾತರಿ ಪತ್ರವನ್ನು ಕೊಡಬಹುದು. (ಇನ್ನು ಮುಂದೆ ಇದು ಷೇರವಾರಂಟು ಅಂದರೆ ಖಾತರಿ ವಾರಂಟೆಂಬದಾಗಿ ಕರೆಯಲ್ಪಡುವದು) ಅದನ್ನು ತರುವವನಿಗೆ ಅದರಲ್ಲಿ ನಮೂದಾಗಿರುವ ಹಿಸ್ಸೆಗಳಿಗಾಗಲಿ ಯಾ ಸ್ಟಾಕಿಗಾಗಲಿ ಬಾಧ್ಯತೆ ಇರುವದಾಗಿ ನಮೂದಾಗಿರತಕ್ಕದ್ದು, ಮತ್ತು ಸದರಿ ಕಂಪೆನಿಯವರು ಅಂತಾ ಹಿಸ್ಸೆಗಳ ಯಾ ಸ್ಟಾಕಿನ ಬಾಬತು ಮುಂದೆ ಇರುವ ಡಿವಿಡೆಂಡ್ ಅಂದರೆ ಭಾಗ್ಯಗಳನ್ನು ಸಂದಾಯ ಮಾಡುವದಕ್ಕೋಸ್ಕರ ಕೌಪಾಂಗಳಿಂದಾಗಲಿ ಯಾ ಬೇರೆ ವಿಧವಾಗಿಯಾಗಲಿ ಏರ್ಪಾಡು ಮಾಡಬಹುದು.

ಕೌಪಾಂಗಳು.

ಷೇರ ವಾರಂಟಿನ ಫಲ.

31. ಒಂದು ಷೇರ್ ವಾರಂಟು ಅದನ್ನು ತರುವವನಿಗೆ ಅದರಲ್ಲಿ ನಮೂದಾಗುವ ಹಿಸ್ಸೆಗಳಿಗಾಗಲಿ ಯಾ ಸ್ಟಾಕಿಗಾಗಲಿ ಅರ್ಹತೆಯನ್ನುಂಟುಮಾಡುವದಾಗಿರತಕ್ಕದ್ದು; ಸದರಿ ಷೇರ್ ವಾರಂಟನ್ನ ಒಪ್ಪಿಸಿ ಬಿಡುವದರ ಮೂಲಕವಾಗಿ ಅಂತಾ ಹಿಸ್ಸೆಗಳನ್ನಾಗಲಿ ಸ್ಟಾಕನ್ನಾಗಲಿ ಪರಭಾರೆ ಮಾಡಬಹುದು.

ಷೇರವಾರಂಟು ತರುವವನ ಹೆಸರನ್ನು ರಿಜಿಸ್ಟರ್ ಪುಸ್ತಕದಲ್ಲಿ ಪುನಃ ರಿಜಿಸ್ಟರ್ ಮಾಡೋಣ.

32. ಒಂದು ಷೇರ್ ವಾರಂಟನ್ನು ತರುವವನು, ಕಂಪೆನಿಯ ಖಾಯಿದೆಗಳಿಗೊಳಪಟ್ಟು, ರದ್ದಿಯಾತಿಯ ಬಗ್ಯೆ ಅಂತಾ ವಾರಂಟನ್ನು ಕೊಟ್ಟುಬಿಟ್ಟಮೇಲೆ, ಮೆಂಬರುಗಳ ರಿಜಿಷ್ಟರಿನಲ್ಲಿ ಒಬ್ಬ ಮೆಂಬರಾಗಿ ತನ್ನ ಹೆಸರನ್ನು ದಾಖಲ್ಮಾಡಿಸಿಕೊಳ್ಳತಕ್ಕ ಬಗ್ಯೆ ಅರ್ಹನಾಗಿರತಕ್ಕದ್ದು ; ಮತ್ತು ಸದರಿ ಷೇರ್ ವಾರಂಟ್ ಕೊಡಲ್ಪಡದೆ ಯಾ ರದ್ದುಮಾಡಲ್ಪಡದೆ ಒಂದು ಷೇರ್ ವಾರಂಟನ್ನು ತರುವವನ ಹೆಸರನ್ನು ಮೆಂಬರುಗಳ ರಿಜಿಷ್ಟರಿನಲ್ಲಿ ಕಂಪೆನಿಯವರು ದಾಖಲ್ಮಾಡಿಕೊಂಡಕಾರಣದಿಂದ ಈ ವಾರಂಟಿನಲ್ಲಿ ನಮೂದಿಸಿರುವ ಹಿಸ್ಸೆಗಳ ಯಾ ಸ್ಟಾಕಿನ ವಿಷಯದಲ್ಲಿ ಯಾರಿಗಾದರೂ ನಷ್ಟ ಸಂಭವಿಸಿದರೆ ಅದಕ್ಕೆ ಸದರಿ ಕಂಪೆನಿಯವರು ಜವಾಬ್ದಾರರಾಗಿರತಕ್ಕದ್ದು.

ಕಂಪೆನಿಯ ಖಾಯಿದೆಗಳು ಒಂದು ಷೇರ್ ವಾರಂಟನ್ನು ತರುವವನನ್ನು ಒಬ್ಬ ಮೆಂಬರಾಗಿ ಮಾಡಬಹುದು.

33. ಒಂದು ಷೇರ್ ವಾರಂಟನ್ನು ತರುವವನು, ಕಂಪೆನಿಯ ಖಾಯಿದೆಗಳಲ್ಲಿ ಹಾಗೆ ನಿಬಂಧಿಸಿದ್ದರೆ, ಈ ರೆಗ್ಯುಲೇಷನಿನ ಅರ್ಥದೊಳಗಾಗಿ ಪೂರ್ತಿಯಾಗಿಯಾಗಲಿ ಯಾ ಸದರಿ ಖಾಯಿದೆಗಳಿಂದ ನಿರ್ದೇಶಿಸಲ್ಪಡಬಹುದಾದಂತಾ ಉದ್ದೇಶಾರ್ಥಗಳಬಗ್ಯಾಗಲಿ ಸದರಿ ಕಂಪೆನಿಯ ಒಬ್ಬ ಮೆಂಬರಾಗಿರುವಂತೆ ಭಾವವಾಗತಕ್ಕದ್ದು : ಪರಂತು ಕಂಪೆನಿಯ ಒಬ್ಬ ಡೈರೆಕ್ಟರಾಗಿಯಾಗಲಿ ಯಾ ಮ್ಯಾನೇಜರಾಗಿಯಾಗಲಿ ಇರುವದಕ್ಕೆ ಕಂಪೆನಿಯ ಖಾಯಿದೆಗಳಲ್ಲಿ ಯೋಗ್ಯತೆ ನಿರ್ದೇಶವಾಗಿದ್ದ ಸಂಗತಿಗಳಲ್ಲಿ ಒಂದು ಷೇರ್ ವಾರಂಟನ್ನು ತರುವವನು ಅಂತಾ

ವಾರಂಟಿನಲ್ಲಿ ನಮೂದಿಸಿರುವ ಹಿಸ್ಸೆಗಳ ಯಾ ಸ್ಟಾಕಿನ ವಿಷಯದಲ್ಲಿ ಹಾಗೆ ಡೈರೆಕ್ಟರಾಗಿಯಾಗಲಿ ಯಾ ಮಾನೇಜರಾಗಿಯಾಗಲಿ ಇರುವದಕ್ಕೆ ಯೋಗ್ಯತೆ ಯುಳ್ಳವನಾಗಿರುವದಿಲ್ಲ.

ಷೇರ ವಾರಂಟನ್ನು ಕೊಟ್ಟರೆ ರಿಜಿಸ್ಟರಿನಲ್ಲಿ ರಬೇಕಾದ ಖತಾಯಿತಿಗಳು.

34. ಯಾವದೊಂದು ಹಿಸ್ಸೆಯ ಯಾ ಸ್ಟಾಕಿನ ವಿಷಯದಲ್ಲಿ ಒಂದು ಷೇರ ವಾರಂಟು ಹುಟ್ಟಿದ ಮೇಲೆ ಕಂಪೆನಿಯವರು ತಮ್ಮ ಮೆಂಬರುಗಳ ರಿಜಿಸ್ಟರಿನೊಳಗಿಂದ ಅಂತಾ ಹಿಸ್ಸೆಯನ್ನು ಯಾ ಸ್ಟಾಕನ್ನು ಹೊಂದಿರುವಂತೆ ರಿಜಿಸ್ಟರಿನಲ್ಲಿ ಆಗ ದಾಖಲಾಗಿದ್ದ ಮೆಂಬರಿನ ಹೆಸರನ್ನು, ಅವನು ಮುಂದೆ ಮೆಂಬರಾಗಿಲ್ಲದ ಹಾಗೆ, ಹೊಡದು ಹಾಕಿ ಬಿಡತಕ್ಕದ್ದು, ಮತ್ತು ಕೆಳಗಣ ಸಂಗತಿಗಳನ್ನು ಸದರಿ ರಿಜಿಸ್ಟರಿನಲ್ಲಿ ದಾಖಲ್ಮಾಡತಕ್ಕದ್ದು :—

(a) ವಾರಂಟು ಕೊಟ್ಟ ಸಂಗತಿ.

(b) ಒಂದೊಂದು ಹಿಸ್ಸೆಗೆ ಬೇರೆ ಬೇರೆ ನಂಬರು ಹಾಕಿ ವಾರಂಟಿನಲ್ಲಿ ದಾಖಲಾದ ಹಿಸ್ಸೆಗಳ ಯಾ ಸ್ಟಾಕಿನ ತಖ್ತೆ.

(c) ವಾರಂಟು ಕೊಟ್ಟ ತಾರೀಖು.

ಷೇರ ವಾರಂಟುಗಳ ಮೇಲೆ ಸ್ಟಾಂಪು ಹಾಸಲುಗಳು.

35. ಪ್ರತಿ ಷೇರ ವಾರಂಟಿನಮೇಲೂ ಛಾಪಾ ಹಾಸಲ್ ವಸೂಲ್ಮಾಡತಕ್ಕದ್ದು. ಪರಭಾರೆ ಮಾಡಿದ್ದಕ್ಕಾಗಿ ಮೌಲ್ಯವು ಅಂತಾ ಹಿಸ್ಸೆಗಳ ಯಾ ಸ್ಟಾಕಿನ ನಾಮಿನಲ್ ಮೌಲ್ಯ ಅಂದರೆ ನಮೂದು ಕಿಮ್ಮತಾಗಿದ್ದರೆ ಈ ಹಾಸಲ್ ವಾರಂಟಿನಲ್ಲಿ ನಮೂದಾದ ಹಿಸ್ಸೆಗಳನ್ನು ಯಾ ಸ್ಟಾಕನ್ನು ಪರಭಾರೆ ಮಾಡುವ ಪತ್ರವು ಗುರಿಯಾಗುವ ಕಿಮ್ಮತ್ತಿಕು ಪ್ರಕಾರವಾದ ಛಾಪಾ ಹಾಸಲ್ ಎಷ್ಟಾಗುತ್ತದೋ ಆ ಮೊಬಲಗಿಗೆ ತ್ರಿಗುಣವಾಗಿರತಕ್ಕದ್ದು.

ಕ್ರಮವಾಗಿ ಸ್ಟಾಂಪಿಲ್ಲದೆ ಷೇರ ವಾರಂಟು ಕೊಟ್ಟರೆ ದಂಡನೆ.

ಒಂದು ಷೇರ ವಾರಂಟು ಕ್ರಮವಾಗಿ ಛಾಪಾ ಹಸ್ಸೆ ಇಲ್ಲದೆ ಕೊಡೋಣಾದರೆ, ಅದನ್ನು ಕೊಡುವ ಕಂಪೆನಿಯವರೂ, ಅದನ್ನು ಕೊಡುವ ಕಾಲದಲ್ಲಿ, ಕಂಪೆನಿಯ ನಿರ್ವಾಹಕ ಡೈರೆಕ್ಟರಾಗಿಯಾಗಲಿ ಯಾ ಸೆಕ್ರೆಟರಿಯಾಗಿಯಾಗಲಿ ಯಾ ಇತರ ಮುಖ್ಯ ಆಫಿಸರಾಗಿಯಾಗಲಿ ಇರುವ ಒಬ್ಬೊಬ್ಬನು ಸಹ ಐನೂರು ರೂಪಾಯಿಗಳ ದಂಡ ತೆರತಕ್ಕದ್ದು.

Change of Name.
ಹೆಸರನ್ನು ಬದಲಾಯಿಸುವಿಕೆ.

ಹೆಸರನ್ನು ಬದಲಾಯಿಸಲಿಕ್ಕೆ ಕಂಪೆನಿಗಳಿಗೆ ಉಂಟಾಗಿರುವ ಅಧಿಕಾರ.

36. ಇನ್ನುಮೇಲೆ ನಮೂದಿಸೋಣಾಗುವ ಪದ್ಧತಿಯ ಪ್ರಕಾರ ಕಂಪೆನಿಯಿಂದ ಮಾಡಲ್ಪಟ್ಟ ವಿಶೇಷ ನಿರ್ಣಯದಿಂದ ಸ್ಯಾಂಕ್ಷನ್ ಹೊಂದಿ, ಮತ್ತು ಮೈಸೂರ್ ಗವರ್ನಮೆಂಟನವರ ಸೆಕ್ರೆಟರಿಗಳ ಪೈಕಿ ಒಬ್ಬರಿಂದ ದಸ್ಕತ್ತು ಮಾಡಲ್ಪಟ್ಟಂತಾ ಸದರಿ ಗವರ್ನಮೆಂಟಿನವರ ಬರಹ ಮೂಲಕ ಮಂಜೂರಾತಿಯನ್ನು ಪಡೆಕೊಂಡು, ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಾದಗೂ, ತಮ್ಮ ಹೆಸರನ್ನು ಬದಲಾಯಿಸಬಹುದು; ಮತ್ತು ಅಂತಾ ಬದಲಾವಣೆ ಮಾಡಲ್ಪಟ್ಟ ಮೇಲೆ, ರಿಜಿಸ್ಟ್ರಾರರವರು ಹಳೇ ಹೆಸರಿಗೆ ಬದಲಾಗಿ ರಿಜಿಸ್ಟರಿನಲ್ಲಿ ಹೊಸ ಹೆಸರನ್ನು ದಾಖಲ್ಮಾಡಿಕೊಂಡು, ಸಂಗತ್ಯಾನುಗುಣವಾದ ತಿದ್ದುಪಡಿಯೊಡನೆ ಒಂದು ಒಗ್ಗಟ್ಟು ಸರ್ಟಿಫಿಕೇಟನ್ನು ಕೊಡತಕ್ಕದ್ದು ; ಆದರೆ ಸದರಿ ಹೆಸರಿನ ಅಂತಾ ಬದಲಾವಣೆಯು ಕಂಪೆನಿಯ ಯಾವ ಹಕ್ಕುಗಳಿಗಾಗಲಿ ಯಾ ಸಾಲಗಳಿಗಾಗಲಿ ಬಾಧಕವಾಗಕೂಡದು, ಅಥವಾ ಸದರಿ ಕಂಪೆನಿಯಿಂದ ಯಾ ಕಂಪೆನಿಮೇಲೆ ದಾಖಲ್ಮಾಡಲ್ಪಟ್ಟ ಯಾ ದಾಖಲ್ಮಾಡಲ್ಪಡುವ ಯಾವ ನ್ಯಾಯ ವ್ಯವಹರಣೆಗಳ ವಿಷಯದಲ್ಲಾಗಲಿ ಯಾವ ಕೊರತೆಯನ್ನೂ ಉಂಟುಮಾಡಕೂಡದು ; ಮತ್ತು ಕಂಪೆನಿಯು ಹಳೇ ಹೆಸರನ್ನು ವಹಿಸಿರುವಾಗ್ಯೆ ದಾಖಲ್ಮಾಡಲ್ಪಟ್ಟು ನಡೆದು ಬಂದ ಅಥವಾ ಶುರೂ ಮಾಡಲ್ಪಟ್ಟ ಯಾವ ನ್ಯಾಯ ವ್ಯವಹರಣೆಗಳಾಗಲಿ ಅದು ಹೊಸ ಹೆಸರನ್ನು ವಹಿಸಿದ ತರುವಾಯ ಇದ್ದುಕೊಂಡು ಇರಬಹುದು ಯಾ ಶುರು ಮಾಡಲ್ಪಡಬಹುದು.

ಟಿಪ್ಪಣಿ.—ಹೆಸರಿನ ಬದಲಾವಣೆಯನ್ನು ಪೂರ್ತಿ ಮಾಡುವದಕ್ಕೆ ಒಗ್ಗಟ್ಟು ಸರ್ಟಿಫಿಕೇಟು ಕೊಡೋಣವು ಅವಶ್ಯಕವಾಗಿದೆ.

Articles of Association.

ಸಮಾಜದ ನಿಬಂಧನೆಗಳು.

ನೇಮಕಗಳು ಸಮಾಜದ ನಿಬಂಧನೆಗಳಿಂದ ನಿರ್ದೇಶಿಸಲ್ಪಡಬೇಕು.

37. ಹಿಸ್ಸೆಗಳಿಂದ ಕ್ಲಿಪ್ತ ಪಡಿಸಲ್ಪಟ್ಟ ಕಂಪೆನಿಯ ವಿಷಯದಲ್ಲಿ, ಅದು ರಿಜಿಸ್ಟರು ಮಾಡಲ್ಪಟ್ಟಾಗ, ಸಮಾಜದ ಯಾದಾಸ್ತು ಅದರ ಚಂದಾದಾರರಿಂದ ದಸ್ಕತ್ತು ಮಾಡಲ್ಪಟ್ಟ ಸಮಾಜದ ನಿಬಂಧನೆಗಳನ್ನು ಅದರೊಂದಿಗೆ ಉಳ್ಳದ್ದಾಗಿ ಇರಬಹುದು, ಮತ್ತು ಜಾಮೀನಿನಿಂದ ಕ್ಲಿಪ್ತ ಪಡಿಸಲ್ಪಟ್ಟ ಯಾ ಕ್ಲಿಪ್ತ ಪಡಿಸಲ್ಪಡದ ಕಂಪೆನಿಯ ವಿಷಯದಲ್ಲಿ ಸಮಾಜದ ಯಾದಾಸ್ತು ಸದರಿ ಸಮಾಜದ ನಿಬಂಧನೆಗಳನ್ನು ಅದರೊಂದಿಗೆ ಉಳ್ಳದ್ದಾಗಿರತಕ್ಕದ್ದು, ಮತ್ತು ಆ ಸಮಾಜದ ವಿಧಿಗಳಲ್ಲಿ ಸಮಾಜದ ಯಾದಾಸ್ತಿಗೆ ದಸ್ಕತ್ತು ಹಾಕಿದಂಥವರಿಗೆ ಯುಕ್ತವಾಗಿ ತೋರಿದಂತಾ ನಿಬಂಧನೆಗಳು ನಿರ್ದೇಶಿಸಲ್ಪಟ್ಟಿರಬೇಕು.

ನಿಬಂಧನೆಗಳು ಪ್ರತ್ಯೇಕ ಪ್ರತ್ಯೇಕವಾದ ಕಲಮುಗಳಾಗಿ ಬರಿಯಲ್ಪಟ್ಟು, ಕಲಮುವಾರ ಸಂಖ್ಯೆ ಹಾಕಲ್ಪಟ್ಟಿರಬೇಕು. ಇದಕ್ಕೆ ಶೇರಿಸಲ್ಪಟ್ಟಿರುವ ಪಟ್ಟಿಯಲ್ಲಿ A ಗುರ್ತುಳ್ಳ ಜಂತ್ರಿಯಲ್ಲಿರತಕ್ಕ ನಿಬಂಧನೆಗಳನ್ನೆಲ್ಲವನ್ನಾಗಲಿ ಯಾ ಅವುಗಳ ಪೈಕಿ ಕೆಲವನ್ನಾಗಲಿ ಇಟ್ಟುಕೊಳ್ಳಬಹುದು. ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳದ್ದಾಗಿ ಜಾಮೀನಿನಿಂದ ಕ್ಲಿಪ್ತಪಡಿಸಲ್ಪಟ್ಟ ಯಾ ಕ್ಲಿಪ್ತಪಡಿಸಲ್ಪಡದ ಕಂಪೆನಿಯ ವಿಷಯದಲ್ಲಿ, ಕಂಪೆನಿಯವರು ರಿಜಿಸ್ಟರ್ಮಾಡಿಸಲಿಕ್ಕೆ ಯೋಚಿಸಿ ಇರುವ ಮೂಲಧನದ ಮೊತ್ತವನ್ನು ನಮೂದು ಮಾಡತಕ್ಕದ್ದು, ಮತ್ತು ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನಿಲ್ಲದ್ದಾಗಿ ಜಾಮೀನಿನಿಂದ ಕ್ಲಿಪ್ತ ಪಡಿಸಲ್ಪಟ್ಟ ಯಾ ಕ್ಲಿಪ್ತ ಪಡಿಸಲ್ಪಡದ ಕಂಪೆನಿಯ ವಿಷಯದಲ್ಲಿ, ರಿಜಿಸ್ಟ್ರೇಷನ್ ಬಗ್ಯೆ ಎಷ್ಟು ರುಸುಂ ವಸೂಲ್ಮಾಡಬೇಕೋ ಅದು ರಿಜಿಸ್ಟ್ರಾರವರಿಗೆ ತಿಳಿಯತಕ್ಕ ಬಗ್ಯೆ ರಿಜಿಸ್ಟರ್ಮಾಡಿಸಲಿಕ್ಕೆ ಯೋಚಿಸಿರುವ ಕಂಪೆನಿಗೆ ಶೇರಿರುವ ಮೆಂಬರುಗಳ ಸಂಖ್ಯೆಯನ್ನು ನಮೂದಿಸತಕ್ಕದ್ದು.

ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳದ್ದಾಗಿ, ಜಾಮೀನಿನಿಂದ ಕ್ಲಿಪ್ತ ಪಡಿಸಲ್ಪಟ್ಟ ಯಾ ಕ್ಲಿಪ್ತ ಪಡಿಸಲ್ಪಡದ ಕಂಪೆನಿಯಲ್ಲಿ ಪ್ರತಿ ಚಂದಾದಾರನೂ ಕನಿಷ್ಟಪಕ್ಷ ಒಂದು ಹಿಸ್ಸೆಯನ್ನು ತೆಗೆದುಕೊಳ್ಳತಕ್ಕದ್ದು, ಮತ್ತು ಅವನು ತೆಗೆದುಕೊಳ್ಳುವ ಹಿಸ್ಸೆಗಳ ಸಂಖ್ಯೆಯನ್ನು ಸಮಾಜದ ಯಾದಾಸ್ತಿನಲ್ಲಿ ತನ್ನ ಹೆಸರಿಗೆ ಎದುರಾಗಿ ಬರಿಯತಕ್ಕದ್ದು.

A ಜಂತ್ರಿಯನ್ನು ಉಪಯೋಗ ಪಡಿಸಿಕೊಳ್ಳುವಿಕೆ.

38. ಹಿಸ್ಸೆಗಳಿಂದ ಕ್ಲಿಪ್ತ ಪಡಿಸಲ್ಪಟ್ಟ ಕಂಪೆನಿಯ ವಿಷಯದಲ್ಲಿ, ಸಮಾಜದ ಯಾದಾಸ್ತು ಸಮಾಜದ ನಿಬಂಧನೆಗಳನ್ನು ಅದರೊಂದಿಗೆ ಉಳ್ಳದ್ದಾಗಿ ಇಲ್ಲದೆ ಇದ್ದರೆ, ಅಥವಾ ಅದಕ್ಕೆ ಶೇರಿಸಿರುವ ಪ್ರಥಮ ಪಟ್ಟಿಯಲ್ಲಿ A ಗುರ್ತುಳ್ಳ ಜಂತ್ರಿಯಲ್ಲಿರತಕ್ಕ ವಿಧಿಗಳನ್ನು ಸದರಿ ನಿಬಂಧನೆಗಳು ತೊಲಗಿಸದೆ ಯಾ ಬದಲಾಯಿಸದೆ ಇರುವಷ್ಟರಮಟ್ಟಿಗೆ, ಸದರಿ ಕಡೇಲಿ ನಮೂದಾದ ವಿಧಿಗಳು, ಅವು ಉಪಯೋಗಿಸಲಿಕ್ಕಾಗುವಷ್ಟರ ಮಟ್ಟಿಗೆ, ಸಮಾಜದ ನಿಬಂಧನೆಗಳಲ್ಲಿ ಶೇರಿಸಲ್ಪಟ್ಟ ಸದರಿ ನಿಬಂಧನೆಗಳು ಕ್ರಮಪ್ರಕಾರ ರಿಜಿಸ್ಟರ್ಮಾಡಲ್ಪಟ್ಟಿದ್ದರೆ ಹ್ಯಾಗೋ ಅದೇಪ್ರಕಾರ ಅಷ್ಟರ ಮಟ್ಟಿಗೆ, ಕಂಪೆನಿಯ ವಿಧಿಗಳೆಂದು ಗ್ರಹಿಸಲ್ಪಡತಕ್ಕದ್ದು.

ಸಮಾಜದ ನಿಬಂಧನೆಗಳ ದಸ್ಕತ್ತು ವಗೈರೆ.

39. ಸಮಾಜದ ನಿಬಂಧನೆಗಳು ಛಾಪಿಸಲ್ಪಟ್ಟಿರತಕ್ಕದ್ದು, ಮತ್ತು ಪ್ರತಿ ಚಂದಾಧಾರರಿಂದ ಸಾಕ್ಷಿಗಳ ರೂಬರೂಬ್ ದಸ್ಕತ್ತು ಮಾಡಲ್ಪಟ್ಟಿರಬೇಕು. ಕನಿಷ್ಟಪಕ್ಷ ಒಬ್ಬನಿಂದಲಾದರೂ ಸಾಕ್ಷಿ ದಸ್ಕತ್ತು ಮಾಡಲ್ಪಡಬೇಕು.

ಅದು ರಿಜಿಸ್ಟರ್ಮಾಡಲ್ಪಟ್ಟ ಮೇಲೆ, ಪ್ರತಿ ಮೆಂಬರೂ ಅದಕ್ಕೆ ದಸ್ಕತ್ತು ಮಾಡಿದಂತೆಯೂ ಮತ್ತು ತಾನು ತನ್ನ ವಾರಸುದಾರರೂ ಎಗ್ಸಿಕ್ಯೂಟರುಗಳೂ ವ ಅಡ್ಮಿನಿಸ್ಟ್ರೇಟರುಗಳೂ ಸದರಿ ನಿಬಂಧನೆಗಳಲ್ಲಿನ ವಿಧಿಗಳನ್ನೆಲ್ಲಾ, ಈ ರೆಗ್ಯುಲೇಷನಿನ ನಿಬಂಧನೆಗಳಿಗೊಳಪಟ್ಟು, ಅನುಸರಿಸಿ ನಡಿಯುವ ಹಾಗೆ ಒಂದು ಕರಾರು ಸದರಿ ನಿಬಂಧನೆಯಲ್ಲಿ ಇರುವಂತೆ, ಅವು ಕಂಪೆನಿಯನ್ನೂ ವ ಅದರ ಮೆಂಬರುಗಳನ್ನೂ ಬದ್ಧರನ್ನಾಗಿ ಮಾಡತಕ್ಕದ್ದು.

ಕಂಪೆನಿಯ ಷರತ್ತುಗಳಿಗೂ ವ ನಿಬಂಧನೆಗಳಿಗೂ ಅನುಗುಣವಾಗಿ ಅಥವಾ ಸದರಿ ಷರತ್ತುಗಳ ಯಾ ನಿಬಂಧನೆಗಳ ಪೈಕಿ ಯಾವದಕ್ಕಾದರೂ ಅನುಗುಣವಾಗಿ ಕಂಪೆನಿಗೆ ಯಾವ ಮೆಂಬರಿಂದಲಾದರೂ

458

ಪಾವತಿಯಾಗಬೇಕಾದ ಸಮಸ್ತ ಹಣಗಳೂ ಸದರಿ ಮೆಂಬರಿಂದ ಕಂಪೆನಿಗೆ ಸಲ್ಲಬೇಕಾದ ಸಾಲವೆಂದು ಗ್ರಹಿಸಲ್ಪಡತಕ್ಕದ್ದು.

General Provisions.

ಸಾಮಾನ್ಯ ನಿಬಂಧನೆಗಳು.

40. ಸಮಾಜದ ಯಾದಾಸ್ತು ವ ಸಮಾಜದ ನಿಬಂಧನೆಗಳು, ಏನಾದರೂ ಇದ್ದರೆ, ಅವು ಇನ್ನು ಮೇಲೆ ನಮೂದಿಸೋಣಾಗುವ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರವರ ಬಳಿ ಕೊಡಲ್ಪಡಬೇಕು, ಅವರು ಅವುಗಳನ್ನು ಇಟ್ಟುಕೊಂಡು ರಿಜಿಸ್ಟರ್ಮಾಡಿಸತಕ್ಕದ್ದು. ಹಾಗೆ ಕೊಡಲ್ಪಟ್ಟ ಒಂದು ಸಮಾಜದ ಯಾದಾಸ್ತಿಗೆ ದಸ್ಕತ್ತು ಹಾಕಿರುವವರು ಸದರಿ ನಿಬಂಧನೆಗಳನ್ನು ಮಾಡಿಕೊಳ್ಳಲು ಅರ್ಹರೆ ಎಂಬದನ್ನು ಕುರಿತು ಸಾಕ್ಷ್ಯ ಕೊಡಹೇಳುವದು ಆತನ ಕೆಲಸವಲ್ಲ.

> ಸಮಾಜದ ಯಾದಾಸ್ತನ್ನೂ ಮತ್ತು ಸಮಾಜದ ನಿಬಂಧನೆಗಳನ್ನೂ B ಜಂತ್ರಿಯಲ್ಲಿರುವ ಹಾಗೆ ರುಸುಂಗಳಸಹಿ ರಿಜಿಸ್ಟರ್ಮಾಡಿಸೋಣ.

ಇದಕ್ಕೆ ಸೇರಿಸಲ್ಪಟ್ಟಿರುವ ಮೊದಲನೇ ಷೆಡ್ಯೂಲ್ ಪಟ್ಟಿಯಲ್ಲಿ B ಗುರ್ತುಳ್ಳ ಜಂತ್ರಿಯಲ್ಲಿ ನಮೂದಿಸಿರುವಂತಾ ಹಲವು ಬಾಬುಗಳ ವಿಷಯದಲ್ಲಿ ಅದರಲ್ಲಿ ದಾಖಲ್ಮಾಡೋಣಾಗಿರುವ ಬಗೆ ಬಗೆ ರುಸುಮುಗಳನ್ನಾಗಲಿ, ಅಥವಾ ಮೈಸೂರ ಗವರ್ನಮೆಂಟನವರು ಆಗಿಂದಾಗ್ಯೆ ನಿರ್ಣಯಿಸಬಹುದಾದಂತಾ ಅಲ್ಪ ರುಸುಮುಗಳನ್ನಾಗಲಿ, ಹಿಸ್ಸೆಗಳಾಗಿ ಭಾಗಿಸಲ್ಪಟ್ಟಿರುವ ಮೂಲಧನವನ್ನುಳ್ಳ ಕಂಪೆನಿಯವರು ರಿಜಿಸ್ಟ್ರಾರವರಿಗೆ ಪಾವತಿ ಮಾಡಬೇಕು, ಮತ್ತು ಅದೇ ಷೆಡ್ಯೂಲ್ ಪಟ್ಟಿಯ C ಗುರ್ತುಳ್ಳ ಜಂತ್ರಿಯಲ್ಲಿ ನಮೂದಿಸಿರುವಂತಾ ಹಲವು ಬಾಬುಗಳ ವಿಷಯದಲ್ಲಿ ಅದರಲ್ಲಿ ದಾಖಲ್ಮಾಡೋಣಾಗಿರುವ ಬಗೆ ಬಗೆ ರುಸುಮುಗಳನ್ನಾಗಲಿ ಅಥವಾ ಮೈಸೂರ ಗವರ್ನಮೆಂಟನವರು ಆಗಿಂದಾಗ್ಯೆ ನಿರ್ಣಯಿಸಬಹುದಾದಂತಾ ಅಲ್ಪ ರುಸುಮುಗಳನ್ನಾಗಲಿ ಹಿಸ್ಸೆಗಳಾಗಿ ಭಾಗಿಸಲ್ಪಟ್ಟಿರುವ ಬಂಡವಾಳವನ್ನುಂಟಾಗಿಲ್ಲದ ಕಂಪೆನಿಯವರು ರಿಜಿಸ್ಟ್ರಾರವರಿಗೆ ಪಾವತಿ ಮಾಡಬೇಕು.

ಈ ರೆಗ್ಯುಲೇಷನಿಗನುಗುಣವಾಗಿ ಸದರಿ ರಿಜಿಸ್ಟ್ರಾರಿಗೆ ಪಾವತಿ ಮಾಡೋಣಾದ ಸಮಸ್ತ ರುಸುಮುಗಳೂ ಗವರ್ನಮೆಂಟನವರ ಲೆಕ್ಕದಲ್ಲಿ ಜಮಾ ಕಟ್ಟಿಕೊಳ್ಳಲ್ಪಡಬೇಕು.

41. ಈ ರೆಗ್ಯುಲೇಷನಿನ ಪ್ರಕಾರ ಅಥವಾ ಅಸಾಮಿಗಳ ಅಪೇಕ್ಷೆ ಪ್ರಕಾರ ಸಮಾಜದ ನಿಬಂಧನೆಗಳು ರಿಜಿಸ್ಟರ್ಮಾಡಲ್ಪಡಬೇಕಾದ ಅವಶ್ಯಕ ಉಂಟಾಗುವಸಂಗತಿಗಳಲ್ಲಿ, ಸಮಾಜದ ಯಾದಾಸ್ತು ವ ಸಮಾಜದ ನಿಬಂಧನೆಗಳು ರಿಜಿಸ್ಟರ್ಮಾಡಲ್ಪಟ್ಟ ತರುವಾಯ, ಆ ಕಂಪೆನಿ ಬಗ್ಗಟ್ಟಾದದ್ದೆಂತಲೂ, ಮತ್ತು ಕ್ಲಿಪ್ತ ಪಡಿಸಲ್ಪಟ್ಟ ಕಂಪೆನಿಯ ಸಂಗತಿಯಲ್ಲಿ ಆ ಕಂಪೆನಿ ಕ್ಲಿಪ್ತ ಪಡಿಸಲ್ಪಟ್ಟದೆಯೆಂತಲೂ, ರಿಜಿಸ್ಟ್ರಾರವರು ಬರೆದು ದಸ್ಕತ್ತು ಹಾಕತಕ್ಕದ್ದು: ಸಮಾಜದ ಯಾದಾಸ್ತಿಗೆ ರುಜು ಹಾಕಿದವರ ಮತ್ತು ಆಗಿಂದಾಗ್ಯೆ ಕಂಪೆನಿಗೆ ಮೆಂಬರುಗಳಾಗಿ ಸೇರಬಹುದಾದಂತಾ ಇತರ ಮನುಷ್ಯರ ಸಮೇತ ಒಂದು ಬಗ್ಗಟ್ಟಾದ ಕಂಪೆನಿಯ ಕೆಲಸಗಳನ್ನು ಒಡನೇ ನಡಿಸಲಿಕ್ಕೆ ಲಾಯಖರಾಗಿ, ಶಾಶ್ವತವಾದ ಉತ್ತರಾಧಿಕಾರವನ್ನೂ ಮುದ್ದಿಗದ್ದ ಮೊಹರನ್ನೂ ಉಳ್ಳದ್ದಾಗಿ, ಆ ತರುವಾಯ, ಸಮಾಜದ ಯಾದಾಸ್ತಿನಲ್ಲಿ ನಮೂದಿಸಿರುವ ಹೆಸರನ್ನು ವಹಿಸಿ ಬಗ್ಗಟ್ಟಾದ ಸಂಘದವರಾಗತಕ್ಕದ್ದು. ಆದರೆ ಇನ್ನುಮೇಲೆ ನಮೂದಿಸೋಣಾಗುವ ಪ್ರಕಾರ, ಕಂಪೆನಿಯನ್ನು ಮುಚ್ಚಿಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ, ಅದರ ಸಾಲಗಳ ಬಗ್ಯೆ ಸೊತ್ತುಗಳು ಹೋಗಲಿಕ್ಕಾಗಿ ಎಷ್ಟು ಬಾಕಿಯಾಗುತ್ತದೋ ಆ ಪೈಕಿ ಇಷ್ಟುಮಾತ್ರ ಕೊಡುತ್ತೇನೆಂಬದಾಗಿ ಒಪ್ಪಿಕೊಳ್ಳುವಂತಾ ಮೆಂಬರುಗಳು ಆ ಬಾಬತು ಜವಾಬುದಾರಿಯನ್ನುಳ್ಳವರಾಗಿರತಕ್ಕದ್ದು.

> ರಿಜಿಸ್ಟ್ರೇಷನಿನ ಫಲ.

ರಿಜಿಸ್ಟ್ರಾರವರಿಂದ ಕೊಡಲ್ಪಟ್ಟ ಯಾವದಾದರೊಂದು ಕಂಪೆನಿಯ ಬಗ್ಗಟ್ಟಿನ ಬಾಬತು ಒಂದು ಸರ್ಟಿಫಿಕೇಟು ರಿಜಿಸ್ಟ್ರೇಷನ್ ವಿಷಯದಲ್ಲಿ ಈ ರೆಗ್ಯುಲೇಷನ್ ಪ್ರಕಾರ ಮಾಡಬೇಕಾದ್ದೆಲ್ಲಾ ಮಾಡೋಣಾಯಿತೆಂಬದಕ್ಕೆ ಅಖೈರ ಸಾಕ್ಷ್ಯವಾಗಿರತಕ್ಕದ್ದು.

42. ಸಮಾಜದ ಯಾದಾಸ್ತಿನ ನಕಲಿನ ಜೊತೆಗೆ ಸಮಾಜದ ನಿಬಂಧನೆಗಳೇನಾದರೂ ಇದ್ದರೆ ಅವುಗಳನ್ನು ಸೇರಿಸಿ, ಸದರಿ ನಕಲನ್ನು ಅಪೇಕ್ಷಿಸುವ ಪ್ರತಿ ಮೆಂಬರಿಗೆ, ಒಂದೊಂದು ನಕಲಿನಬಗ್ಯೆ ಒಂದು ರೂಪಾಯಿಗೆ ಮೀರದೆ ಕಂಪೆನಿಯವರಿಂದ ನಿರ್ದೇಶಿಸಲ್ಪಡಬಹುದಾದಂತಾ ಮೊಬಲಗನ್ನ ಪಾವತಿ ಮಾಡಿದ ಮೇಲೆ, ಕಳುಹಿಸಿಕೊಡತಕ್ಕದ್ದು; ಮತ್ತು ಈ ಪ್ರಕರಣಕ್ಕನುಗುಣವಾಗಿ ಸಮಾಜದ ಯಾದಾಸ್ತಿನ ನಕಲನ್ನೂ ಸಮಾ

> ಯಾದಾಸ್ತಿನ ವ ನಿಬಂಧನೆಗಳ ನಕಲುಗಳು ಮೆಂಬರುಗಳಿಗೆ ಕೊಡಲ್ಪಡಬೇಕು.

ಜದ ನಿಬಂಧನೆಗಳೇನಾದರಿದ್ದರೆ ಅವನ್ನೂ ಬಿಟ್ಟು ಮೆಂಬರಿಗೆ ಕಳುಹಿಸಿಕೊಡಲಿಕ್ಕೆ ಯಾವ ಕಂಪೆನಿಯವರಾದರೂ ತಪ್ಪಿದರೆ, ಹಾಗೆ ತಪ್ಪುವ ಕಂಪೆನಿಯು ಅಂತಾ ಪ್ರತಿ ತಕ್ಸೀರಿನಬಗ್ಯೆ ಇಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆ ತೆರಲಿಕ್ಕೊಳಗಾಗತಕ್ಕದ್ದು.

ಕಂಪೆನಿಗಳ ಹೆಸರುಗಳು ಒಂದರಂತೆ ಮತ್ತೊಂದು ಇರಕೂಡದೆಂಬ ನಿಷೇಧ.

43. ಮೊದಲೇ ರಿಜಿಸ್ಟರ್ಮಾಡಲ್ಪಟ್ಟದ್ದಾಗಿರುವ ಒಂದು ಕಂಪೆನಿಯು ಮುಚ್ಚಿ ಬಿಡಲ್ಪಡುವ ಪ್ರಯತ್ನದಲ್ಲಿದ್ದು ಆ ಬಗ್ಯೆ ರಿಜಿಸ್ಟ್ರಾರವರು ಅಪೇಕ್ಷಿಸುವ ಪ್ರಕಾರ ತಮ್ಮ ಸಮ್ಮತ ಸಾಕ್ಷ್ಯ ಕೊಟ್ಟರೇನೇ ಹೊರ್ತು, ಅಂತಾ ಕಂಪೆನಿಯ ಹೆಸರಿನಿಂದಲಾಗಲಿ ಅಥವಾ ಮೋಸಮಾಡಬೇಕೆಂಬ ಎಣಿಕೆಯಿಂದ ಕೂಡಿದಮಟ್ಟಿಗೆ ಅದರ ಹೋಲ್ವಿಕೆಯ ಹೆಸರಿನಿಂದಲಾಗಲಿ ಯಾವ ಕಂಪೆನಿಯೂ ರಿಜಿಸ್ಟರ್ಮಾಡಲ್ಪಡಕೂಡದು.

ಯಾವ ಕಂಪೆನಿಯಾದರೂ ಅಶ್ರದ್ಧೆಯಿಂದ ಯಾ ಇತರ ಸಬಬಿನಿಂದ, ಮೇಲೆ ಹೇಳೋಣಾದಂತಾ ಸಮ್ಮತವನ್ನು ಪಡಕೊಳ್ಳದೆ, ರಿಜಿಸ್ಟರ್ಮಾಡಲ್ಪಟ್ಟದ್ದಾಗಿ ಇರುವಂತಾ ಒಂದು ಕಂಪೆನಿಯ ಹೆಸರಿನಿಂದಲಾಗಲಿ ಅಥವಾ ಮೋಸ ಮಾಡಬೇಕೆಂಬ ಎಣಿಕೆಯಿಂದ ಕೂಡಿದ ಮಟ್ಟಿಗೆ ಅದರ ಹೋಲ್ವಿಕೆಯುಳ್ಳ ಹೆಸರಿನಿಂದಲಾಗಲಿ ರಿಜಿಸ್ಟರ್ಮಾಡಲ್ಪಟ್ಟರೆ, ಸದರಿ ಮೊದಲು ನಮೂದಿಸೋಣಾಗಿರುವ ಕಂಪೆನಿಯು, ರಿಜಿಸ್ಟ್ರಾರವರ ಸ್ಯಾಂಕ್ಷನ್ ಪಡಕೊಂಡು, ಅದರ ಹೆಸರನ್ನು ಬದಲಾಯಿಸಬಹುದು; ಮತ್ತು, ಅಂತಾ ಬದಲಾವಣೆ ಮಾಡಲ್ಪಟ್ಟ ಮೇಲೆ, ಸದರಿ ರಿಜಿಸ್ಟ್ರಾರವರು ಪೂರ್ವದ ಹೆಸರಿಗೆ ಬದಲಾಗಿ ರಿಜಿಸ್ಟರಿನಲ್ಲಿ ಹೊಸ ಹೆಸರನ್ನು ದಾಖಲ್ಮಾಡತಕ್ಕದ್ದು, ಮತ್ತು ಸಂಗತ್ಯಾನುಗುಣವಾಗಿ ತಿದ್ದುಪಡಿ ಮಾಡಲ್ಪಟ್ಟ ಬಗ್ಗಟ್ಟಿನ ಬಾಬತು ಒಂದು ಸರ್ಟಿಫಿಕೇಟನ್ನು ಕೊಡತಕ್ಕದ್ದು, ಆದರೆ ಅಂತಾ ಹೆಸರಿನ ಬದಲಾವಣೆಯು ಕಂಪೆನಿಯ ಸಾಲಗಳಿಗೂ ಅಥವಾ ಯಾವ ಹಕ್ಕುಗಳಿಗೂ ಬಾಧಕವಾಗಕೂಡದು, ಅಥವಾ ಕಂಪೆನಿಯಿಂದ ಯಾ ಕಂಪೆನಿಯಮೇಲೆ ದಾಖಲ್ಮಾಡಲ್ಪಟ್ಟ ಯಾ ದಾಖಲ್ಮಾಡಲ್ಪಡುವ ಯಾವ ನ್ಯಾಯಶಾಸ್ತ್ರ ಸಂಬಂಧವಾದ ನಡವಳಿತೆಗಳನ್ನೂ ಕೊರತೆಯಾಗಿ ಭಾವಿಸಕೂಡದು, ಮತ್ತು ಒಂದು ಕಂಪೆನಿಯ ಮೇಲೆ ಅದರ ಪೂರ್ವದ ಹೆಸರಿನಿಂದ ಊರ್ಜಿತ ಪಡಿಸಲ್ಪಟ್ಟ ಯಾ ಷುರೂ ಮಾಡಲ್ಪಟ್ಟ ಯಾವ ನ್ಯಾಯ ಸಂಬಂಧವಾದ ನಡವಳಿತೆಗಳಾಗಲಿ ಆ ಕಂಪೆನಿಯ ಮೇಲೆ ಅದರ ಹೊಸ ಹೆಸರಿನಿಂದ ಊರ್ಜಿತ ಪಡಿಸಲ್ಪಡಬಹುದು, ಯಾ ಷುರೂ ಮಾಡಲ್ಪಡಬಹುದು.

PART II.

IIನೇ ಭಾಗ.

Distribution of Capital and Liability of Members of Companies and Associations under this Regulation.

ಈ ರೆಗ್ಯುಲೇಷನಿನ ಪ್ರಕಾರ ಕಂಪೆನಿಗಳ ವ ಸಮಾಜಗಳ ಮೂಲದ್ರವ್ಯದ ವಿಭಾಗ ಮತ್ತು ಮೆಂಬರುಗಳ ಜವಾಬ್ದಾರಿ.

Distribution of Capital.

ಮೂಲದ್ರವ್ಯದ ವಿಭಾಗ.

ಕಂಪೆನಿಯೊಳಗಣ ಸಂಬಂಧದ ಸ್ವಭಾವ.

44. ಈ ರೆಗ್ಯುಲೇಷನ್ ಪ್ರಕಾರ ಒಂದು ಕಂಪೆನಿಯಲ್ಲಿ ಯಾವ ಮೆಂಬರಿಗಾದರೂ ಉಂಟಾಗಿರಬಹುದಾದ ಹಿಸ್ಸೆಗಳು ಯಾ ಇತರ ಸಂಬಂಧವು ಕಂಪೆನಿಯ ನಿಬಂಧನೆಗಳಿಂದ ನಿರ್ದೇಶಿಸಲ್ಪಟ್ಟಿರುವ ರೀತೀಲಿ ಪರಭಾರೆ ಮಾಡಲ್ಪಡಲಿಕ್ಕೆ ಅರ್ಹವಾದ ಚರಸೊತ್ತಾಗಿರತಕ್ಕದ್ದು, ಮತ್ತು ಸ್ಥಾವರಸ್ಥಿತಿಯ ಯಾ ಸ್ಥಿರಸೊತ್ತಿನ ಸ್ವಭಾವವುಳ್ಳದ್ದಾಗಿರಕೂಡದು; ಮತ್ತು ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳ ಕಂಪೆನಿಯ ಸ್ಸಂಗತಿಯಲ್ಲಿ, ಪ್ರತಿ ಹಿಸ್ಸೆಯೂ ಅದರ ಯುಕ್ತವಾದ ನಂಬರಿನಿಂದ ಪ್ರತ್ಯೇಕಿಸಲ್ಪಟ್ಟಿರತಕ್ಕದ್ದು.

"ಮೆಂಬರ್" ಎಂಬ ಪದದ ವಿವರಣೆ.

45. ಈ ರೆಗ್ಯುಲೇಷನ್ ಪ್ರಕಾರ ಯಾವ ಕಂಪೆನಿಯ ಸಮಾಜದ ಯಾದಾಸ್ತಿಗಾದರೂ ರುಜು ಹಾಕಿದವರು ಯಾವ ಕಂಪೆನಿಯ ಯಾದಾಸ್ತಿಗೆ ಅವರು ರುಜು ಹಾಕಿದರೋ ಆ ಕಂಪೆನಿಯಲ್ಲಿ ಮೆಂಬರುಗಳಾಗಲಿಕ್ಕೆ ಸಮ್ಮತಿಸಿದ್ದಾರೆಂದು ಗ್ರಹಿಸಲ್ಪಡತಕ್ಕದ್ದು, ಮತ್ತು ಕಂಪೆನಿಯು ರಿಜಿಸ್ಟರ್ಮಾಡಲ್ಪಟ್ಟ ತರುವಾಯ ಇನ್ನುಮೇಲೆ ನಮೂದಿಸೋಣಾಗುವ ಮೆಂಬರುಗಳ ರಿಜಿಸ್ಟರಿನಲ್ಲಿ ಮೆಂಬರುಗಳೆಂದು ದಾಖಲ್ಮಾಡಲ್ಪಡತಕ್ಕದ್ದು; ಮತ್ತು ಈ ರೆಗ್ಯುಲೇಷನಿಗನುಗುಣವಾಗಿ

ಒಂದು ಕಂಪೆನಿಯೊಂದಿಗೆ ಅಂತಾ ಕಂಪೆನಿಯ ಮೆಂಬರಾಗಲಿಕ್ಕೆ ಸಮ್ಮತಿಸಿದ ಪ್ರತಿ ಇತರ ಮನುಷ್ಯನೂ, ಆತನ ಹೆಸರು ಮೆಂಬರುಗಳ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಟ್ಟದ್ದಲ್ಲಿ, ಕಂಪೆನಿಯ ಮೆಂಬರೆಂದು ಗ್ರಹಿಸಲ್ಪಡತಕ್ಕದ್ದು.

ಸ್ವಂತ ವಾರಸುದಾರನಿಂದ ಪರಭಾರೆ ಮಾಡಲ್ಪಡೋಣ.

46. ಈ ರೆಗ್ಯುಲೇಷನಿಗನುಗುಣವಾದ ಒಂದು ಕಂಪೆನಿಯ ಮೃತಪಟ್ಟ ಮೆಂಬರಿನ ಹಿಸ್ಸೆ ಯಾ ಇತರ ಸಂಬಂಧ ಅವನ ಸ್ವಂತ ವಾರಸುದಾರನಿಂದ ಪರಭಾರೆ ಮಾಡಲ್ಪಟ್ಟರೆ, ಆದು ಸದರಿ ವಾರಸುದಾರನು ತಾನು ಸ್ವತಃ ಮೆಂಬರಲ್ಲದೆ ಇದ್ದರೂ ಆ ಪರಭಾರೆ ಸಾಧನಹುಟ್ಟಿದಕಾಲದಲ್ಲಿ ಅವನು ಮೆಂಬರಾಗಿದ್ದಂತೆಯೇ ಸಲುವಳಿಯಾಗತಕ್ಕದ್ದು.

ಮೆಂಬರುಗಳ ರಿಜಿಸ್ಟರ್.

47. ಈ ರೆಗ್ಯುಲೇಷನಿಗನುಗುಣವಾದ ಪ್ರತಿ ಕಂಪೆನಿಯೂ ಒಂದು ಯಾ ಹೆಚ್ಚು ಪುಸ್ತಕಗಳಲ್ಲಿ ತನ್ನ ಮೆಂಬರುಗಳ ಹೆಸರುಗಳನ್ನು ದಾಖಲ್ಮಾಡಿ ಇಡಿಸತಕ್ಕದ್ದು, ಮತ್ತು ಆದರಲ್ಲಿ ಈ ಕೆಳಗಿನ ತಪಶೀಲುಗಳನ್ನು ದಾಖಲ್ಮಾಡತಕ್ಕದು :—

(a) ಕಂಪೆನಿಯ ಮೆಂಬರುಗಳ ಹೆಸರುಗಳನ್ನೂ ವಿಳಾಸಗಳನ್ನೂ ಮ ಕಸಬುಗಳೇನಾದರೂ ಇದ್ದರೆ ಅವುಗಳನ್ನೂ, ಮತ್ತು ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳ ಕಂಪೆನಿಯ ಸಂಗತಿಯಲ್ಲಿ ಪ್ರತಿ ಹಿಸ್ಸೆಯನ್ನೂ ಅದರ ಸಂಖ್ಯೆಯಿಂದ ತಿಳಿಯುವಂತೆ ಮಾಡಿ, ಪ್ರತಿ ಮೆಂಬರಿಂದ ಪಡೆಕೊಳ್ಳಲ್ಪಟ್ಟಿರುವ ಹಿಸ್ಸೆಗಳ ಸ್ಟೇಟ್ಮೆಂಟನ್ನೂ, ಮತ್ತು ಪ್ರತಿ ಮೆಂಬರಿನ ಹಿಸ್ಸೆಗಳ ಬಗ್ಯೆ ಪಾವತಿ ಮಾಡಲ್ಪಟ್ಟ ಅಥವಾ ಪಾವತಿಯಾದಂತೆ ಗ್ರಹಿಸಲ್ಪಡುವದಾಗಿ ಸಮ್ಮತಿಸಲ್ಪಟ್ಟಿರುವ ಮೊಬಲಗನ್ನೂ ;

(b) ಯಾವ ಮನುಷ್ಯನ ಹೆಸರಾಗಲಿ ಮೆಂಬರೆಂದು ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಟ್ಟ ತಾರೀಖನ್ನೂ ;

(c) ಯಾವ ಮನುಷ್ಯನಾದರೂ ತಾನು ಮೆಂಬರಾಗಿರುವದಿಲ್ಲವೆಂದು ಹೇಳಿ ನಿಂತುಹೋಗುವ ತಾರೀಖನ್ನೂ.

ಮುವ್ವತ್ತನೇ ಪ್ರಕರಣಕ್ಕನುಗುಣವಾಗಿ ಒಂದು ಹಿಸ್ಸೆ ವಾರಂಟು ಕೊಡೋಣಾಗಿದ್ದರೆ, ಸದರಿ ವಾರಂಟು ಕೊಟ್ಟು ಬಿಡಲ್ಪಡುವ ತನಕ, ಮುವ್ವತ್ತನಾಲ್ಕನೇ ಪ್ರಕರಣದಲ್ಲಿ ನಮೂದಿಸಿರುವ ತಪಸೀಲುಗಳು ಒಂದು ಕಂಪೆನಿಯ ಮೆಂಬರುಗಳ ರಿಜಿಸ್ಟರಿನಲ್ಲಿ, ದಾಖಲಾಗಬೇಕೆಂದು ಈ ಪ್ರಕರಣದಿಂದ ಕೋರೋಣಾದ ತಪಸೀಲುಗಳಾಗಿರುವಂತೆ ಭಾವವಾಗತಕ್ಕದ್ದು ; ಮತ್ತು, ಒಂದು ವಾರಂಟನ್ನು ಕೊಟ್ಟಮೇಲೆ, ಹಾಗೆ ಕೊಟ್ಟ ತಾರೀಖನ್ನು ಈ ತಾರೀಖಿನಲ್ಲಿ ಒಬ್ಬನು ಮೆಂಬರಾಗಿಲ್ಲದೆ ಬಿಟ್ಟುಬಿಟ್ಟದ್ದ ತಾರೀಖಿನಂತೆ ದಾಖಲ್ಮಾಡತಕ್ಕದ್ದು.

ಈ ಪ್ರಕರಣಕ್ಕೆ ವಿರೋಧವಾಗಿ ನಡೆಯುವ ಯಾವ ಕಂಪೆನಿಯಾದರೂ ಈ ಪ್ರಕರಣದ ನಿಬಂಧನೆಗಳಿಗೆ ಅನನುಗುಣವಾಗಿ ನಡೆಯಡೆ ತಪ್ಪಿದ ಕಾಲದಲ್ಲಿ ದಿನ ಒಂದಕ್ಕೆ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ತೆರತಕ್ಕದ್ದು, ಮತ್ತು ಹಾಗೆ ವಿರೋಧವಾಗಿ ನಡೆಯಲಿಕ್ಕೆ ತಿಳಿದಿದ್ದೂ ಮನಃಪೂರ್ವಕವಾಗಿ ಅಧಿಕಾರ ಕೊಡುವ ಯಾ ಅಪ್ಪಣೆ ಕೊಡುವ ಕಂಪೆನಿಯ ಪ್ರತಿ ಡೈರೆಕ್ಟರಾಗಲಿ ಯಾ ಮಾನೇಜರಾಗಲಿ ಒದಸ್ತೂರ ಜುರ್ಮಾನೆಯನ್ನು ತೆರತಕ್ಕದ್ದು.

ಮೆಂಬರುಗಳ ಸಾಲಿಯಾನಾ ಫೇರೀಸ್ತು.

48. ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳ ಈ ರೆಗ್ಯುಲೇಷನಿಗೆ ಅನುಗುಣವಾದ ಪ್ರತಿ ಕಂಪೆನಿಯು ಕನಿಷ್ಟಪಕ್ಷ ವರ್ಷಕ್ಕೊಂದಾವರ್ತಿ, ಸದರಿ ಕಂಪೆನಿಗೆ ಮೆಂಬರುಗಳಾಗಿರುವ ಸಮಸ್ತ ಮನುಷ್ಯರ ಫೇರೀಸ್ತನ್ನು ತಯಾರ್ಮಾಡತಕ್ಕದ್ದು. ಸಾಧಾರಣವಾದ ಸಾಮಾನ್ಯ ಸಭೆ ಕೇರಿದನಂತರ ಹದಿನಾಲ್ಕನೇ ದಿವಸದಲ್ಲಿ, ಅಥವಾ, ಪ್ರತಿ ಒಂದು ವರ್ಷಕ್ಕೆ ಒಂದ ಕ್ಕಿಂತ ಹೆಚ್ಚು ಸಲ ಸಾಧಾರಣ ಸಾಮಾನ್ಯ ಸಭೆ ಕೇರುವದಾಗಿದ್ದರೆ, ಅಂತಾ ಸಾಧಾರಣವಾದ ಸಾಮಾನ್ಯ ಸಭೆಗಳ ಪೈಕಿ ಮೊದಲನೇ ಸಭೆ ಕೇರಿದನಂತರ ಹದಿನಾಲ್ಕನೇ ದಿವಸದಲ್ಲಿ, ಸದರಿ ಫೇರೀಸ್ತನ್ನು ತಯಾರ್ಮಾಡತಕ್ಕದ್ದು. ಅಂತಾ ಫೇರೀಸ್ತು ಅದರಲ್ಲಿ ನಮೂದಿಸಿರುವ ಮೆಂಬರುಗಳ ಹೆಸರುಗಳನ್ನೂ ವಿಳಾಸಗಳನ್ನೂ ಮ ಕಸಬುಗಳನ್ನೂ, ಮತ್ತು ಅವರಪೈಕಿ ಒಬ್ಬೊಬ್ಬನಿಂದ ಪಡೆಕೊಳ್ಳೋಣಾಗಿರುವ ಹಿಸ್ಸೆಗಳ ಸಂಖ್ಯೆಯನ್ನೂ ನಮೂದುಳ್ಳದ್ದಾಗಿರತಕ್ಕದ್ದು, ಮತ್ತು ಅದು ಈ ಕೆಳಗಿನ ತಪಸೀಲುಗಳನ್ನುಳ್ಳ ಒಂದು ಸಮ್ಮರಿಯನ್ನು ಅಡಗಿಸಿಕೊಂಡಿರತಕ್ಕದ್ದು.—

(a) ಕಂಪೆನಿಯ ಮೂಲಧನದ ಮೊಬಲಗು ಮತ್ತು ಅದು ಭಾಗಿಸಲ್ಪಟ್ಟಿರುವ ಹಿಸ್ಸೆಗಳ ಸಂಖ್ಯೆ ;

(b) ಕಂಪೆನಿಯ ಶುರುವಾರಭ್ಯ ಸಮ್ಮರಿ ತಾರೀಖಿನವರಿಗೆ ತೆಗೆದುಕೊಳ್ಳೋಣಾಗಿರುವ ಹಿಸ್ಸೆಗಳ ಸಂಖ್ಯೆ ;

(c) ಪ್ರತಿ ಹಿಸ್ಸೆಯಬಗ್ಗೆ ಮಾಡೋಣಾದ ಕಾಲ್ಸ್ ಎಂಬ ವರಾತಗಳ ಮೊಬಲಗು ;

(d) ತೆಗೆದುಕೊಳ್ಳಲ್ಪಟ್ಟ ವರಾತಗಳ ಕುಲ್ಲು ಮೊಬಲಗು ;

(e) ಸಂದಾಯವಾಗದ ವರಾತಗಳ ಕುಲ್ಲು ಮೊಬಲಗು ;

(f) ಅಪರಾಧವಾಗಿ ಹೋಗಲಾಡಿಸಿಕೊಂಡ ಹಿಸ್ಸೆಗಳ ಕುಲ್ಲು ಮೊಬಲಗು ;

(g) ಆಖೈರ ಫೇರಿಸ್ತು ತಯಾರಾದ ತರುವಾಯ ಈಚೆಗೆ ಕಂಪೆನಿಯನ್ನು ಬಿಟ್ಟು ಬಿಟ್ಟ ಮೆಂಬರುಗಳ ಹೆಸರುಗಳು ವಿಲಾಸಗಳು ವ ಕಸಬುಗಳು, ಮತ್ತು ಅವರಪೈಕಿ ಒಬ್ಬೊಬ್ಬನಿಂದ ಪಡಕೊಳ್ಳಲ್ಪಟ್ಟಿದ್ದ ಹಿಸ್ಸೆಗಳ ಸಂಖ್ಯೆ.

ಸದರಿ ಫೇರೀಸ್ತು ವ ಸಮ್ಮರಿಯು ರಿಜಿಸ್ಟರಿನ ಪ್ರತ್ಯೇಕ ಭಾಗದಲ್ಲಿ ಬರಿಯಲ್ಪಡತಕ್ಕದ್ದು, ಮತ್ತು ಈ ಪ್ರಕರಣದಲ್ಲಿ ನಮೂದಿಸಿರುವಂತಾ ಹದಿನಾಲ್ಕು ದಿವಸಗಳಾದ ತರುವಾದು ಏಳು ದಿವಸಗಳೊಳಗಾಗಿ ಮುಗಿಸಲ್ಪಟ್ಟು, ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರರವರ ಬಳಗೆ ಒಂದು ನಕಲು ಒಡನೇ ಕಳುಹಿಸಲ್ಪಡತಕ್ಕದ್ದು.

ಸಾಲಿಯಾನಾ ಸಮ್ಮರಿ (ಗೋಷ್ವಾರೆ) ಯಲ್ಲಿರಬೇಕಾದ ತಪ್ಶೀಲುಗಳು.

49. ಕಂಪೆನಿಯಿಂದ ಒಂದು ಹಿಸ್ಸೆ ವಾರೆಂಟು ಕೊಡಲ್ಪಟ್ಟ ಮೇಲೆ, ನಾಲ್ವತ್ತೆಂಟನೇ ಪ್ರಕರಣದಿಂದ ಕೋರಲ್ಪಟ್ಟ ಸಾಲಿಯಾನಾ ಸಮ್ಮರಿಯಲ್ಲಿ ಈ ಕೆಳಗಣ ತಪಶೀಲ್‌ಗಳು ಇರತಕ್ಕದ್ದು (ಯಾವವೆಂದರೆ):—ಯಾವ ಹಿಸ್ಸೆಗಳಿಗಾಗಿ ಯಾ ಸ್ಟಾಕಿಗಾಗಿ ಹಿಸ್ಸೆ ವಾರೆಂಟುಗಳು ಸದರಿ ಸಮ್ಮರಿಯ ತಾರೀಖಿನಲ್ಲಿ ಹೊರಗೆ ನಿಂತಿವೆಯೋ ಅವುಗಳ ಕುಲ್ಲು ಮೊಬಲಗು; ಮತ್ತು ಕಡೇಸಲ ಸಮ್ಮರಿ ಮಾಡಲ್ಪಟ್ಟ ತಾರೀಖಿನಿಂದ ಕೊಡೋಣಾದ ಹಿಸ್ಸೆ ವಾರೆಂಟುಗಳ ಮತ್ತು ಕೊಟ್ಟುಬಿಡಲ್ಪಟ್ಟ ಹಿಸ್ಸೆ ವಾರೆಂಟುಗಳ ಕುಲ್ಲು ಮೊಬಲಗು, ಮತ್ತು ಒಂದೊಂದು ವಾರೆಂಟಿನಲ್ಲಿ ಇರುವ ಹಿಸ್ಸೆಗಳ ಸಂಖ್ಯೆ ಅಥವಾ ಸ್ಟಾಕಿನ ಮೊಬಲಗು.

ಸರಿಯಾದ ರಿಜಿಸ್ಟರು ಇಡದಂತಾ ಕಂಪೆನಿಗಳಿಗೆ ದಂಡನೆ.

50. ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳ ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಾದರೂ ರಿಜಿಸ್ಟ್ರರವರ ಬಳಗೆ ಮೇಲೆ ನಮೂದಿಸಿರುವ ಪ್ರಕಾರ ಮೆಂಬರುಗಳ ಫೇರೀಸ್ತನ್ನು ಯಾ ಸಮ್ಮರಿಯನ್ನು ಕಳುಹಿಸಿಕೊಡುವ ವಿಷಯದಲ್ಲಿ ಈ ರೆಗ್ಯುಲೇಷನಿನ ನಿಬಂಧನೆಗಳನ್ನನುಸರಿಸಿ ನಡಿಯಲಿಕ್ಕೆ ತಪ್ಪಿದರೆ, ಅಂತಾ ಕಂಪೆನಿಯು ಹಾಗೆ ತಪ್ಪಿ ನಡೆದಷ್ಟು ದಿವಸಗಳಿಗೆ ದಿನ ಒಂದಕ್ಕೆ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಒಳಗಾಗತಕ್ಕದ್ದು ; ಮತ್ತು ಹಾಗೆ ತಪ್ಪಿ ನಡೆಯಲಿಕ್ಕೆ ತಿಳಿದಿದ್ದೂ ಮನಃಪೂರ್ವಕವಾಗಿ ಅಧಿಕಾರ ಕೊಡುವ ಯಾ ಅಪ್ಪಣೆ ಕೊಡುವ ಕಂಪೆನಿಯ ಪ್ರತಿ ಡೈರೆಕ್ಟರಾಗಲಿ ಮಾನೇಜರಾಗಲಿ ಅದೇಸೂತ್ರ ಜುರ್ಮಾನೆಗೆ ಒಳಗಾಗತಕ್ಕದ್ದು.

ಮೂಲಧನವನ್ನು ಒಟ್ಟುಪಡಿಸೋಣವನ್ನು ಯಾ ಸ್ಟಾಕಿಗೆ ಕೇರಿಸೋಣವನ್ನು ಕುರಿತು ಕಂಪೆನಿಯವರು ನೋಟೀಸ ಕೊಡತಕ್ಕದ್ದು.

51. ಹಾಲಿ ಇರತಕ್ಕ ಹಿಸ್ಸೆಗಳಿಗಿಂತಾ ಹೆಚ್ಚು ಮೊಬಲಗಿನ ಹಿಸ್ಸೆಗಳಾಗಿ ಮೂಲಧನವನ್ನು ಒಟ್ಟುಪಡಿಸಿ, ಭಾಗಿಸಿದಂತಾ ಅಥವಾ ಅದರ ಮೂಲಧನದ ಪೈಕಿ ಯಾವ ಭಾಗವನ್ನಾದರೂ ಸ್ಟಾಕ ಎಂಬ ಧನಕ್ಕೆ ಮಾರ್ಪಡಿಸಿದಂತಾ ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳ ಈ ರೆಗ್ಯುಲೇಷನಿಗನುಗುಣವಾದ ಪ್ರತಿ ಕಂಪೆನಿಯೂ, ಹಾಗೆ ಒಟ್ಟುಪಡಿಸಿ ಭಾಗಿಸಿದ ಯಾ ಮಾರ್ಪಡಿಸಿದ ತಾರೀಖು ಮೊದಲು ಹದಿನೈದು ದಿವಸಗಳೊಳಗಾಗಿ, ಹಾಗೆ ಒಟ್ಟುಪಡಿಸಲ್ಪಟ್ಟ ಭಾಗಿಸಲ್ಪಟ್ಟ ಯಾ ಮಾರ್ಪಡಿಸಲ್ಪಟ್ಟ ಹಿಸ್ಸೆಗಳನ್ನು ನಮೂದಿಸಿ, ಈ ವಿಷಯವನ್ನು ಕುರಿತು ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರರವರಿಗೆ ನೋಟೀಸ ಕೊಡತಕ್ಕದ್ದು.

ಹಿಸ್ಸೆಗಳನ್ನು ಸ್ಟಾಕಿಗೆ ಮಾರ್ಪಡಿಸೋಣದಿಂದ ಉಂಟಾಗುವ ಫಲ.

52. ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳ ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಾದರೂ ಅದರ ಮೂಲಧನದ ಯಾವ ಭಾಗವನ್ನಾಗಲಿ ಸ್ಟಾಕಿಗೆ ಮಾರ್ಪಡಿಸಿ, ಅಂತಾ ಮಾರ್ಪಡಿಸೋಣವನ್ನು ಕುರಿತು ರಿಜಿಸ್ಟ್ರರವರಿಗೆ ನೋಟೀಸ ಕೊಟ್ಟಿದ್ದ ಪಕ್ಷದಲ್ಲಿ, ಹಿಸ್ಸೆಗಳಿಗೆ ಮಾತ್ರ ಲಗಾವಾಗುವ ಈ ರೆಗ್ಯುಲೇಷನಿನ ನಿಬಂಧನೆಗಳೆಲ್ಲಾ, ಸ್ಟಾಕಿಗೆ ಮಾರ್ಪಡಿಸೋಣಾಗಿರುವಷ್ಟು ಮೂಲಧನದ ವಿಷಯದಲ್ಲಿ ನಿಂತು ಹೋಗತಕ್ಕದ್ದು; ಮತ್ತು ಕಂಪೆನಿಯಿಂದ ಇಡಲ್ಪಡಬೇಕೆಂದು ಇದರಿಂದ ಅಪೇಕ್ಷಿಸೋಣಾಗಿರುವ ಮೆಂಬರುಗಳ ರಿಜಿಸ್ಟರಿನಲ್ಲೂ ಮತ್ತು ರಿಜಿಸ್ಟ್ರರವರಬಳಿಗೆ ಕಳುಹಿಸಿ ಕೊಡಬೇಕಾದ ಮೆಂಬರುಗಳ ಫೇರೀಸ್ತಿನಲ್ಲೂ

ಹಿಸ್ಸೆಗಳ ಮೊಬಲಗಿಗೆ ಮತ್ತು ಮೇಲೆ ಅಪೇಕ್ಷಿಸೋಣಾಗಿರುವ ಹಿಸ್ಸೆಗಳಬಾಬತು ತಪಶೀಲಗಳಿಗೆ ಬದಲಾಗಿ, ಫೇರಿಸ್ತಿನಲ್ಲಿನ ಪ್ರತಿ ಮೆಂಬರಿಂದ ಹೊಂದಲ್ಪಟ್ಟಿರುವ ಸ್ಟಾಕಿನ ಮೊಬಲಗನ್ನು ನಮೂದಿಸತಕ್ಕದ್ದು.

ಸೊತ್ತನ್ನು ನಂಬಿಕೆಮೇಲೆ ಇಡೋಣವನ್ನು ರಿಜಿಸ್ಟರಿನಲ್ಲಿ ದಾಖಲ್ಮಾಡಿಕೋಣ.

53. ಮೈಸೂರ ಶೀಮೆಯಲ್ಲಿ ರಿಜಿಸ್ಟರ್ಮಾಡಲ್ಪಟ್ಟ ಮತ್ತು ಈ ರೆಗ್ಯುಲೇಷನಿಗನುಗುಣವಾದ ಕಂಪೆನಿಗಳ ಸಂಗತಿಯಲ್ಲಿ ಕಂತೋಕ್ತ ರೂಪವಾಗಿಯಾಗಲಿ ಗೂಢವಾಗಿಯಾಗಲಿ ಯಾ ಅರ್ಥರಚನಾನುಸಾರವಾಗಿಯಾಗಲಿ ತಿಳಿಸಲ್ಪಟ್ಟ ಯಾವ ನಂಬಿಕೆ ಬಾಬತು ನೋಟಿಸಾದರೂ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಡಕೂಡದು, ಅಥವಾ ರಿಜಿಸ್ಟ್ರಾರವರಿಂದ ಅಂಗೀಕರಿಸಲ್ಪಡಕೂಡದು.

ಹಿಸ್ಸೆಗಳ ಯಾ ಸ್ಟಾಕಿನ ಸರ್ಟಿಫಿಕೇಟ.

54. ಒಂದು ಕಂಪೆನಿಯು ಯಾವ ಮೆಂಬರಿಂದಲಾದರೂ ಪಡೆಕೊಳ್ಳಲ್ಪಟ್ಟಿರುವ ಯಾವ ಹಿಸ್ಸೆಯನ್ನಾಗಲಿ ಸ್ಟಾಕನ್ನಾಗಲಿ ನಮೂದಿಸಿ ಕಂಪೆನಿಯ ಮುದ್ದಿಗದ ಮೊಹರನಿಶಿ ಕೊಡೋಣಾದ ಒಂದು ಸರ್ಟಿಫಿಕೇಟ್, ಅದರಲ್ಲಿ ನಮೂದಿಸಿರುವ ಹಿಸ್ಸೆಯ ಯಾ ಹಿಸ್ಸೆಗಳ ಯಾ ಸ್ಟಾಕ ಧನ ಇವುಗಳಿಗಾಗಿ ಸದರಿ ಮೆಂಬರಿನ ಬಾಧ್ಯತೆ ವಿಷಯದಲ್ಲಿ ಸ್ವತಸ್ಸಿದ್ಧವಾದ ಸಾಕ್ಷ್ಯವಾಗಿರತಕ್ಕದ್ದು.

ರಿಜಿಸ್ಟರನ್ನು ನೋಡೋಣ.

55. ಕಂಪೆನಿ ರಿಜಿಸ್ಟರ್ಮಾಡಲ್ಪಟ್ಟ ತಾರೀಖಿನಿಂದ ಶುರುವಾದ, ಮೆಂಬರುಗಳ ರಿಜಿಸ್ಟರನ್ನು, ಇನ್ನು ಮೇಲೆ ನಮೂದಿಸೋಣಾಗುವ ಕಂಪೆನಿಯು ರಿಜಿಸ್ಟರ್ಮಾಡಲ್ಪಟ್ಟ ಆಫೀಸಿನಲ್ಲಿ ಇಡತಕ್ಕದ್ದು. ಇನ್ನುಮೇಲೆ ನಮೂದಿಸೋಣಾಗುವ ಪ್ರಕಾರ ಮುಚ್ಚಲ್ಪಟ್ಟಿರೇನೇ ಹೊರ್ತು, ಅದು ಕೆಲಸದ ಹೊತ್ತಿನಲ್ಲಿ, ಯಾವ ಮೆಂಬರಾದರೂ ಏನೂ ಕೊಡದೆ ಸುಮ್ಮನೆ ನೋಡಲಿಕ್ಕಾಗುವಂತೆಯೂ, ಮತ್ತು ಯಾವ ಮನುಷ್ಯನಾದರೂ ಒಂದು ರೂಪಾಯಿಯನ್ನು ಅಥವಾ ಕಂಪೆನಿಯು ಅನ್ಯರ ಪ್ರತಿ ನೋಟಕ್ಕಾಗಿ ನಿರ್ದೇಶಿಸಬಹುದಾದ ಅದಕ್ಕಿಂತ ಕಮ್ಮಿ ಮೊಬಲಗನ್ನು ಪಾವತಿ ಮಾಡಿದಮೇಲೆ ನೋಡಲಿಕ್ಕಾಗುವಂತೆಯೂ, ಇಡಲ್ಪಟ್ಟಿರತಕ್ಕದ್ದು. ಆದರೆ ಹಾಗೆ ನೋಡೋಣವು ದಿನ ಒಂದಕ್ಕೆ ಆ ಬಗ್ಗೆ ಎರಡು ಘಂಟೆಗಳ ಹೊತ್ತಿಗಿಂತ ಕಮ್ಮಿ ಇಲ್ಲದಂತೆ ಗೊತ್ತು ಮಾಡಲ್ಪಟ್ಟದ್ದಾಗಿ ಕಂಪೆನಿಯವರಿಂದ ಸಾಧಾರಣ ಸಭೆಯಲ್ಲಿ ವಿಧಿಸಲ್ಪಡಬಹುದಾದಂತಾ ಯುಕ್ತವಾದ ಆತಂಕಗಳಿಗೆ ಒಳಪಟ್ಟಿರತಕ್ಕದ್ದು.

ನಕಲ್ ಬರಿಯಬೇಕಾದ ಪ್ರತಿ ನೂರು ಮಾತುಗಳಿಗೆ ಎರಡಾಣೆ ಪ್ರಕಾರ ಸಂದಾಯವಾದ ಮೇಲೆ, ಅಂತಾ ಪ್ರತಿ ಮೆಂಬರೂ ಯಾ ಇತರ ಮನುಷ್ಯನೂ ಅಂತಾ ರಿಜಿಸ್ಟರಿನ ಯಾ ಅದರ ಯಾವ ಭಾಗದ ಯಾ ಇದಕ್ಕೆ ಪೂರ್ವ ನಮೂದಿಸೋಣಾಗಿರುವಂತಾ ಮೆಂಬರುಗಳ ಫೇರಿಸ್ತಿನ ಯಾ ಸಮ್ಮರಿಯ ನಕಲನ್ನು ಕೊಡಹೇಳಿ ಅಪೇಕ್ಷಿಸಬಹುದು.

ಹಾಗೆ ನೋಡಬೇಕೆಂತ ಅಪೇಕ್ಷಿಸುವವರಿಗೆ ತೋರಿಸುವದಿಲ್ಲವೆಂದು ಯಾ ನಕಲು ಕೇಳಿದವರಿಗೆ ಕೊಡುವದಿಲ್ಲವೆಂದು ನಿರಾಕರಿಸಿದರೆ, ಸದರಿ ಕಂಪೆನಿಯವರು ಅಂತಾ ಪ್ರತಿ ನಿರಾಕರಣೆಗಾಗಿ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೊಳಗಾಗುವದಲ್ಲದೆ ಹಾಗೆ ನಿರಾಕರಿಸಿರುವಷ್ಟು ದಿವಸಗಳ ಪರ್ಯಂತ ದಿನ ಒಂದಕ್ಕೆ ಇಪ್ಪತ್ತು ರೂಪಾಯಿಗಳಿಗೆ ಮೀರದ್ದ ಜುರ್ಮಾನೆಗೆ ಸಹ ಒಳಗಾಗತಕ್ಕದ್ದು.

ಅಂತಾ ನಿರಾಕರಣೆ ಬಗ್ಗೆ ತಿಳಿದಿದ್ದು ಅಧಿಕಾರ ಕೊಡುವ ಯಾ ಅಪ್ಪಣೆಕೊಡುವ ಪ್ರತಿ ಕಂಪೆನಿಯ ಡೈರೆಕ್ಟರ್ ವ ಮಾನೇಜರ್ ಬದಸ್ತೂರ್ ಜುರ್ಮಾನೆಯನ್ನು ತೆರತಕ್ಕದ್ದು.

ಸದರಿ ಜುರ್ಮಾನೆಯನ್ನು ವಿಧಿಸುವದಲ್ಲದೆ ಚೀಫ್ ಕೋರ್ಟಿನ ಯಾ ಯಾವ ಜಡ್ಜಿಯಾದರೂ ರಿಜಿಸ್ಟರನ್ನು ಆ ತಕ್ಷಣವೇ ತೋರಿಸಬೇಕೆಂದು ಹುಕುಂ ಮಾಡಬಹುದು.

ರಿಜಿಸ್ಟರನ್ನು ಮುಚ್ಚಿದವಾಗಿ ಬಿಡಲಿಕ್ಕೆ ಅಧಿಕಾರ.

56. ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಾದರೂ, ಕಂಪೆನಿಯ ರಿಜಿಸ್ಟರ್ಮಾಡಲ್ಪಟ್ಟ ಆಫೀಸು ಇರತಕ್ಕ ಡಿಸ್ಟ್ರಿಕ್ಟಿನಲ್ಲಿ ಪ್ರಚಾರದಲ್ಲಿರುವ ಯಾವದಾದರೂ ನ್ಯೂಸ್ ಪೇಪರಿನಲ್ಲಿ ಮತ್ತು ಅಫಿಷಿಯಲ್ ಗೆಜೆಟ್ಟಿನಲ್ಲಿ ಒಂದು ಪ್ರಕಟಣೆಯನ್ನು ಪ್ರಕಟಿಸಿ, ತದ್ದ್ವಾರಾ ನೋಟೀಸ ಕೊಟ್ಟು, ಆ ತರುವಾಯ ಪ್ರತಿ ಸಂವತ್ಸರದಲ್ಲಿ ಮುವ್ವತ್ತು ದಿವಸಗಳಿಗೆ ಮೀರದಂತಾ ಯಾವ ಕಾಲದಲ್ಲಾಗಲಿ ಯಾ ಕಾಲಗಳಲ್ಲಾಗಲಿ ಮೆಂಬರುಗಳ ರಿಜಿಸ್ಟರನ್ನು ಮುಚ್ಚಿದ ಮಾಡಿ ಬಿಡಬಹುದು.

57. ಒಂದು ಕಂಪೆನಿಯು ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಂಟಾಗಿದ್ದಲ್ಲಿ, ಸದರಿ ಹಿಸ್ಸೆಗಳು ಸ್ಟಾಕಿಗೆ ಮಾರ್ಪಡಿಸಲ್ಪಟ್ಟಿರಬಹುದಾದಾಗ್ಯೂ ಯಾ ಹಾಗೆ ಮಾರ್ಪಡಿಸಲ್ಪಡದಿರಬಹುದಾದಾಗ್ಯೂ, ರಿಜಿಸ್ಟರ್ಮಾಡಲ್ಪಟ್ಟದ್ದಕ್ಕಿಂತ ಹೆಚ್ಚಾಗಿ ಮೂಲಧನ ವೃದ್ಧಿಪಡಿಸಲ್ಪಟ್ಟರೆ ಆ ಬಗ್ಗೆ ನೋಟೀಸನ್ನೂ, ಮತ್ತು ಒಂದು ಕಂಪೆನಿಯು ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಂಟಾಗಿಲ್ಲವ ಪಕ್ಷದಲ್ಲಿ, ರಿಜಿಸ್ಟರ್ಮಾಡಲ್ಪಟ್ಟದ್ದಕ್ಕಿಂತ ಹೆಚ್ಚಾಗಿ ಮೆಂಬರುಗಳ ಸಂಖ್ಯೆ ವೃದ್ಧಿಪಡಿಸಲ್ಪಟ್ಟರೆ ಆ ಬಗ್ಗೆ ನೋಟೀಸನ್ನೂ, ರಿಜಿಸ್ಟ್ರಾರವರಿಗೆ ಕೊಡತಕ್ಕದ್ದು. ಮೂಲಧನದ ವೃದ್ಧಿಯ ಸಂಗತಿಯಲ್ಲಿ, ಅಂತಾ ವೃದ್ಧಿಯ ಬಗ್ಗೆ ಅಧಿಕಾರಕೊಟ್ಟ ನಿರ್ಣಯಮಾಡಲ್ಪಟ್ಟ ತಾರೀಖು ಲಾಗಾಯಿತು ಹದಿನೈದು ದಿವಸಗಳೊಳಗಾಗಿಯೂ ಮತ್ತು ಮೆಂಬರುಗಳ ವೃದ್ಧಿಯ ಸಂಗತಿಯಲ್ಲಿ, ಸದರಿ ಮೆಂಬರುಗಳ ವೃದ್ಧಿ ನಿರ್ಣಯಿಸಲ್ಪಟ್ಟ ಯಾ ಪೂರೈಸಲ್ಪಟ್ಟ ತಾರೀಖು ಮೊದಲು ಹದಿನೈದು ದಿವಸಗಳೊಳಗಾಗಿಯೂ ಸದರಿ ನೋಟೀಸ ಕೊಡಲ್ಪಡತಕ್ಕದ್ದು; ಮತ್ತು ಸದರಿ ರಿಜಿಸ್ಟ್ರಾರವರು ಅಂತಾ ಮೂಲಧನದ ಯಾ ಮೆಂಬರುಗಳ ಬಾಬತು ವೃದ್ಧಿಯ ಮೊಬಲಗನ್ನು ಒಡನೇ ಬರೆದಿಟ್ಟುಕೊಳ್ಳತಕ್ಕದ್ದು.

ಮೂಲಧನದ ವ ಮೆಂಬರುಗಳ ಹೆಚ್ಚಿಕೆ ವಿಷಯದಲ್ಲಿ ರಿಜಿಸ್ಟ್ರಾರವರಿಗೆ ನೋಟೀಸು ಕೊಡಲ್ಪಡಬೇಕು.

ಮೇಲೆ ಹೇಳೋಣಾದ ವಾಯಿದೆಯ ಒಳಗಾಗಿ ಸದರಿ ನೋಟೀಸ ಕೊಡಲ್ಪಡದೆ ಹೋದರೆ, ಹಾಗೆ ತಪ್ಪಿದ ಕಂಪೆನಿಯು ನೋಟೀಸ ಕೊಡಲಿಕ್ಕೆ ಉಪೇಕ್ಷೆ ಮಾಡಿದಷ್ಟು ದಿವಸಗಳವರೆಗೆ ದಿನ ಒಂದಕ್ಕೆ ನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಒಳಗಾಗತಕ್ಕದ್ದು; ಮತ್ತು ತಿಳಿದಿದ್ದೂ ಮನಃಪೂರ್ವಕವಾಗಿ ಹಾಗೆ ತಪ್ಪಿನಡಿಯಲಿಕ್ಕೆ ಅಧಿಕಾರಕೊಡುವ ಯಾ ಅಪ್ಪಣೆ ಕೊಡುವ ಕಂಪೆನಿಯ ಪ್ರತಿ ಡೈರೆಕ್ಟರೂ ವ ಮಾನೇಜರೂ ಒದಸ್ತೂರ ಜುರ್ಮಾನೆಗೆ ಒಳಗಾಗತಕ್ಕದ್ದು.

58. ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಿಂದಲಾಗಲಿ ಇಟ್ಟ ಮೆಂಬರುಗಳ ರಿಜಿಸ್ಟರಿನಲ್ಲಿ ಯಾವ ಮನುಷ್ಯನ ಹೆಸರಾಗಲಿ ಮೋಸಕರವಾಗಿ ಯಾ ಸ್ವಾಕಾದ ಸಬಬಿಲ್ಲದೆ ದಾಖಲ್ಮಾಡಲ್ಪಟ್ಟರೆ ಯಾ ದಾಖಲ್ಮಾಡಲ್ಪಡಬೇಕಾದ್ದು ಬಿಟ್ಟುಬಿಡಲ್ಪಟ್ಟರೆ, ಅಥವಾ ಮೆಂಬರಾಗಿದ್ದ ಯಾವ ಮನುಷ್ಯನಾದರೂ ಕಂಪೆನಿಯನ್ನು ಬಿಟ್ಟುಬಿಟ್ಟ ಸಂಗತಿ ರಿಜಿಸ್ಟರಿನಲ್ಲಿ ದಾಖಲ್ಮಾಡಲ್ಪಡಲಿಕ್ಕೆ ತಪ್ಪಿದರೆ ಯಾ ಅನಾವಶ್ಯಕವಾದ ದೇರಿ ಸಂಭವಿಸಿದರೆ, ಸಂಕಟಕ್ಕೊಳಗಾದ ಮನುಷ್ಯನಾಗಲಿ ಯಾ ಮೆಂಬರಾಗಲಿ, ಕಂಪೆನಿಯ ಯಾವ ಮೆಂಬರಾಗಲಿ ಅಥವಾ ಕಂಪೆನಿಯೇ ಆಗಲಿ ರಿಜಿಸ್ಟರನ್ನು ತಿದ್ದಲಿಕ್ಕೆ ಕೋರ್ಟು ಹುಕುಂ ಆಗಬೇಕೆಂದು ಕಂಪೆನಿಯ ರಿಜಿಸ್ಟರ ಮಾಡಲ್ಪಟ್ಟ ಆಫೀಸು ಇರುವ ಸ್ಥಳದ ಯಾ ಡಿಸ್ಟ್ರಿಕ್ಟಿನ ಮೂಲ ಅಧಿಕಾರವುಳ್ಳ ಪ್ರಧಾನ ಸಿವಿಲ ಕೋರ್ಟಿಗೆ ಅರ್ಜಿ ಬರೆದುಕೊಳ್ಳಬಹುದು; ಮತ್ತು ಆ ಕೋರ್ಟಿನವರು ಅರ್ಜಿದಾರನಿಂದ ಕೊಡಲ್ಪಡಬೇಕಾದ ಖರ್ಚುಗಳೊಂದಿಗೆ ಯಾ ಖರ್ಚುಗಳಿಲ್ಲದೆ ಅಂತಾ ಅರ್ಜಿಯನ್ನು ತಿರಸ್ಕರಿಸಲೂ ಬಹುದು. ಅಥವಾ ಅದರೊಳಗಣ ಸಂಗತಿ ವಾಜಬಿಯಾದ್ದೆಂದು ಸಮರ್ಪಕವಾಗಿ ತಿಳಿಯಬಂದರೆ, ರಿಜಿಸ್ಟರನ್ನು ತಿದ್ದಬೇಕೆಂದು ಹುಕುಂ ಮಾಡುವದಲ್ಲದೆ, ಅಂತಾ ಅರ್ಜಿಯ ಬಾಬತು, ಸಮಸ್ತ ಖರ್ಚುಗಳನ್ನೂ ಮತ್ತು ಲುಕ್ಸಾನಿಗೊಳಗಾದ ಮನುಷ್ಯನಿಗೆ ಸಂಭವಿಸಿದ ಲುಕ್ಸಾನುಗಳನ್ನೂ ಕಂಪೆನಿಯವರು ಕೊಡಬೇಕೆಂದು ಸಹ ಹುಕುಂ ಮಾಡಬಹುದು.

ರಿಜಿಸ್ಟರಿನಲ್ಲಿ ಸರಿಯಲ್ಲದ ಖತಾಯಿತಿ ಮಾಡಲ್ಪಟ್ಟರೆ ಅಥವಾ ಮಾಡಲ್ಪಡಬೇಕಾದ್ದು ಬಿಟ್ಟುಬಿಡಲ್ಪಟ್ಟರೆ ಅದನ್ನು ಸರಿಮಾಡಲಿಕ್ಕೆ ಉಪಾಯ.

ಈ ಪ್ರಕರಣಕ್ಕನುಗುಣವಾದ ಯಾವ ಪ್ರೊಸೀಡಿಂಗ್ಸ್ ಅಂದರೆ ನಡವಳಿಕೆಗಳ ಮಧ್ಯದಲ್ಲಾದರೂ ಕೋರ್ಟಿನವರು ಅಂತಾ ನಡವಳಿಕದಲ್ಲಿ ಕಕ್ಷಿಗಾರನಾಗಿರುವ ಯಾವ ಮನುಷ್ಯನ ಹೆಸರನ್ನಾಗಲಿ ರಿಜಿಸ್ಟರಿನಲ್ಲಿ ದಾಖಲ್ಮಾಡದೆ ಬಿಟ್ಟುಬಿಡಲಿಕ್ಕ ಯಾ ದಾಖಲ್ಮಾಡಲಿಕ್ಕೆ ಅವನಿಗುಂಟಾಗಿರುವ ಯಾವ ಬಾಧ್ಯತೆಯನ್ನು ಕುರಿತ ತಕರಾರನ್ನಾದರೂ ಫೈಸಲ ಮಾಡಬಹುದು. ಸದರಿ ತಕರಾರು ಇಬ್ಬರು ಯಾ ಹೆಚ್ಚು ಮಂದಿ ಮೆಂಬರುಗಳ ಯಾ ಮೆಂಬರುಗಳೆನ್ನಿಸಿಕೊಳ್ಳುವವರ ಮಧ್ಯೆ ಉಂಟಾದ್ದಾದಾಗ್ಯೂ, ಅಥವಾ ಯಾವ ಮೆಂಬರುಗಳ ಯಾ ಮೆಂಬರುಗಳೆನ್ನಿಸಿಕೊಳ್ಳುವ ಯಾವ ಮನುಷ್ಯರ ವ ಕಂಪೆನಿಯ ಮಧ್ಯೆ ಉಂಟಾದ್ದಾದಾಗ್ಯೂ, ಮತ್ತು ಕಂಪೆನಿಯವರ ತಪ್ಪಿತ ವುಂಟಾಗಿದ್ದಾಗ್ಯೂ ಯಾ ಇಲ್ಲದೆ ಇದ್ದಾಗ್ಯೂ, ಕೋರ್ಟಿನವರು ಫೈಸಲ ಮಾಡಬಹುದು; ಮತ್ತು ಅಂತಾ ಯಾವ ನಡವಳಿಕದಲ್ಲಾದರೂ ರಿಜಿಸ್ಟರಿನ ತಿದ್ದುಪಡಿಗೋಸ್ಕರ ಫೈಸಲ್ಮಾಡಬೇಕಾದ್ದು ಅವಶ್ಯಕವೆಂದು ಯಾ ಯುಕ್ತವೆಂದು ತೋರುವ ಯಾವ ತಕರಾರನ್ನಾದರೂ ಕೋರ್ಟಿನವರು ಸಾಧಾರಣ

ವಾಗಿ ಫೈಸಲ್ಮಾಡಬಹುದು : ಪರಂತು ಕಾನೂನಿಗೆ ಸಂಬಂಧಪಟ್ಟ ಯಾವ ತಕರಾರಾದರೂ ಉಟ್ಟಾಗಿದ್ದಲ್ಲಿ ವಿವಾದಾಂಶವು ದರ್‍ಯಾಫ್ತಿ ಮಾಡಲ್ಪಡಬೇಕೆಂತಲೂ, ಆ ಸಿವಿಲ್ ಪ್ರೊಸೀಡ್ಯೂರ್ ಕೋಡಿನಲ್ಲಿ ವಿಧಿಸಿರುವ ರೀತ್ಯಾ ಅಪೀಲ್ ದಾಖಲ್ಮಾಡಲ್ಪಡತಕ್ಕದ್ದೆಂತಲೂ ಕೋರ್ಟಿನವರು ಹುಕುಂ ಮಾಡಬಹುದು.

ರಿಜಿಸ್ಟರಿನಲ್ಲಿ ತಿದ್ದುಪಡಿ ಮಾಡಲ್ಪಟ್ಟದ್ದಕ್ಕಾಗಿ ರಿಜಿಸ್ಟ್ರಾರವರಿಗೆ ನೋಟೀಸು.

59. ಮೆಂಬರುಗಳ ಫೇರೀಸ್ತನ್ನು ರಿಜಿಸ್ಟ್ರಾರವರ ಬಳಿಗೆ ಕಳುಹಿಸಿಕೊಡಬೇಕೆಂದು ಇದರಿಂದ ಅಪೇಕ್ಷಿಸೋಣಾಗಿರುವ ಕಂಪೆನಿಯ ಸಂಗತಿಯಲ್ಲಿ ರಿಜಿಸ್ಟರನ್ನು ತಿದ್ದತಕ್ಕ ಬಗ್ಗೆ ಯಾವಾಗಲಾದರೂ ಹುಕುಂ ಕೊಡಲ್ಪಟ್ಟದ್ದ ಪಕ್ಷದಲ್ಲಿ ಹಾಗೆ ತಿದ್ದಲ್ಪಟ್ಟದ್ದನ್ನು ಕುರಿತು ರಿಜಿಸ್ಟ್ರಾರವರಿಗೆ ಸರಿಯಾದ ನೋಟೀಸು ಕೊಡಬೇಕೆಂದು ಕೋರ್ಟಿನವರು ಆಜ್ಞಾಪಿಸಬಹುದು.

ರಿಜಿಸ್ಟರು ಸಾಕ್ಷ್ಯವಾಗಿರತಕ್ಕದ್ದು.

60. ರಿಜಿಸ್ಟರಿನಲ್ಲಿ ದಾಖಲ್ಮಾಡಬೇಕೆಂದು ಈ ರೆಗ್ಯುಲೇಷನಿನಿಂದ ವಿಧಾಯಕವಾಗಿರುವ ಯಾ ಅಧಿಕಾರ ಕೊಡಲ್ಪಟ್ಟಿರುವ ಯಾವ ಸಂಗತಿಗಳನ್ನು ಕುರಿತಾಗಲಿ ಮೆಂಬರುಗಳ ರಿಜಿಸ್ಟರ ಸ್ವತಸ್ಸಿದ್ಧವಾದ ಸಾಕ್ಷ್ಯವಾಗಿರತಕ್ಕದ್ದು.

Liability of Members.
ಮೆಂಬರುಗಳ ಜವಾಬ್ದಾರಿ.

ಕಂಪೆನಿಯ ಹಾಲಿ ಆ ಮಾಜಿ ಮೆಂಬರುಗಳ ಜವಾಬ್ದಾರಿ.

61. ಈ ರೆಗ್ಯುಲೇಷನಿಗನುಗುಣವಾಗಿ ಏರ್ಪಾಡುಮಾಡಲ್ಪಟ್ಟ ಯಾವ ಕಂಪೆನಿಯನ್ನಾದರೂ ಮುಚ್ಚಿಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ, ಕಂಪೆನಿಯ ವಿಲ್ಲಂಘಗಳ ಆ ಸಾಲಗಳ ಪಾವತಿ ಬಗ್ಗೆ ಕಂಪೆನಿಯ ಆಸ್ತಿ ಹೋಗಲಿಕ್ಕಾಗಿ ಕಮ್ಮಿಯಾಗುವ ಮೊಬಲಗನ್ನೂ, ಮುಚ್ಚಿ ಬಿಡುವದಕ್ಕಾಗಿ ತಗಲುವ ಲಾಗವಡನ್ನೂ ಖರ್ಚುಗಳನ್ನೂ ಆ ವೆಚ್ಚಗಳನ್ನೂ ಕೊಡತಕ್ಕದ್ದಕ್ಕೂ, ಮತ್ತು ಸಹಾಯಕರ ಹಕ್ಕುದಾರರುಗಳನ್ನು ತಮ್ಮೊಳಗೆ ತಾವೇ ವ್ಯವಸ್ಥೆ ಪಡಿಸಿಕೊಳ್ಳಲಿಕ್ಕೆ ಈ ಕೆಳಗಿನ ನಿಬಂಧನೆಗಳ ಪ್ರಕಾರ ಅವಶ್ಯವಾಗುವ ಮೊಬಲಗುಗಳನ್ನು ಪಾವತಿ ಮಾಡತಕ್ಕದ್ದಕ್ಕೂ, ಅಂಥಾ ಕಂಪೆನಿಯ ಪ್ರತಿ ಹಾಲಿ ಆ ಮಾಜಿ ಮೆಂಬರು ಜವಾಬ್ದಾರನಾಗಿರತಕ್ಕದ್ದು. ಸದರಿ (ನಿಬಂಧನೆಗಳ್ಯಾವವಂದರೆ)—

(a) ಮುಚ್ಚಿ ಬಿಡುವದಕ್ಕೆ ಪೂರ್ವ ಮಾಡುವದಕ್ಕಿಂತ ಒಂದು ವರ್ಷ ಯಾ ಅದಕ್ಕಿಂತ ಹೆಚ್ಚು ಕಾಲ ಮುಂಚಿತವಾಗಿಯೇ ಕಂಪೆನಿಯನ್ನು ಬಿಟ್ಟುಬಿಟ್ಟ ಯಾವ ಮಾಜಿ ಮೆಂಬರಾಗಲಿ ಸದರಿ ಕಂಪೆನಿಯ ಸಾಲಗಳಬಗ್ಗೆ ಸಹಾಯ ಮಾಡಲಿಕ್ಕೆ ಜವಾಬ್ದಾರನಾಗುವದಿಲ್ಲ :

(b) ಒಬ್ಬನು ಕಂಪೆನಿಯನ್ನು ಬಿಟ್ಟುಬಿಟ್ಟ ತರುವಾಯ ಸದರಿ ಕಂಪೆನಿಯವರಿಂದ ಮಾಡಲ್ಪಟ್ಟ ಸಾಲಗಳ ಯಾ ವಿಲ್ಲಂಘದ ವಿಷಯದಲ್ಲಿ ಸಹಾಯ ಮಾಡಲಿಕ್ಕೆ ಅಂಥಾ ಯಾವ ಮಾಜಿ ಮೆಂಬರಾಗಲಿ ಜವಾಬ್ದಾರನಾಗುವದಿಲ್ಲ :

(c) ಈ ರೆಗ್ಯುಲೇಷನಿಗನುಗುಣವಾಗಿ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟಷ್ಟು ಸಹಾಯವನ್ನು ಮಾಡಲಿಕ್ಕೆ ಹಾಲಿ ಇರತಕ್ಕ ಮೆಂಬರುಗಳಿಂದ ಆಗಲಾರದೆಂದು ಕೋರ್ಟಿನವರಿಗೆ ಕಾಣಬಂದರೇನೇ ಹೊರ್ತು, ಯಾವ ಮಾಜಿ ಮೆಂಬರಾಗಲಿ ಕಂಪೆನಿಯ ಸಾಲಗಳಬಗ್ಗೆ ಸಹಾಯಮಾಡಲಿಕ್ಕೆ ಜವಾಬ್ದಾರನಾಗುವದಿಲ್ಲ :

(d) ಹಿಸ್ಸೆಗಳಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯ ಸಂಗತಿಯಲ್ಲಿ ಒಬ್ಬನು ಹಾಲಿ ಯಾ ಮಾಜಿ ಮೆಂಬರಾಗಿ ಸಂಬಂಧಪಟ್ಟಿರುವಂತಾ ಹಿಸ್ಸೆಗಳಬಾಬತು ಪಾವತಿಯಾಗದಂತಾ ಮೊಬಲಗೇನಾದರೂ ಇದ್ದರೆ ಅದಕ್ಕಿಂತ ಹೆಚ್ಚಾದ ಮೊಬಲಗು ಯಾವ ಮೆಂಬರಿಂದಲೂ ಅಪೇಕ್ಷಿಸಲ್ಪಡಕೂಡದು.

(e) ಜಾಮೀನಿನಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯ ಸಂಗತಿಯಲ್ಲಿ, ಸಮಾಜದ ಯಾದಾಸ್ತಿನಿಂದ ಒಬ್ಬನ ತರಫಿನಲ್ಲಿ ಮಾಡಿಕೊಳ್ಳಲ್ಪಟ್ಟ ಏಕರಾರಿಗಿಂತ ಹೆಚ್ಚಾದ ಮೊಬಲಗು ಯಾವ ಮೆಂಬರಿಂದಲೂ ಅಪೇಕ್ಷಿಸಲ್ಪಡಕೂಡದು :

(f) ಯಾವದಾದರೊಂದು ಇನ್ಷ್ಯೂರೆನ್ಸು ಪಾಲಿಸಿಯ ಯಾ ಇತರ ಕರಾರಿನ ವಿಷಯದಲ್ಲಿ ಹರಯೇಕ ಮೆಂಬರಿನ ಜವಾಬ್ದಾರಿಯ ಮಟ್ಟು ಪಡಿಸಲ್ಪಟ್ಟಂಥಾ ಅಥವಾ ಅಂಥಾ ಪಾಲಿಸಿಯ ಯಾ ಕರಾರಿನ ವಿಷಯದಲ್ಲಿ ಕಂಪೆನಿಯ ಫಂಡುಗಳು ಮಾತ್ರವೇ ಜವಾಬ್ದಾರಿಯಾಗಿ ಮಾಡಲ್ಪಟ್ಟಂಥಾ ನಿಬಂ

ಧನೆ ಏನಾದರೂ ಯಾವ ಇನ್ಷೂರೆನ್ಸು ಪಾಲಿಸಿಯಲ್ಲಾದರೂ ಯಾ ಇತರ ಕರಾರಿನಲ್ಲಾದರೂ ಇದ್ದರೆ, ಅಂತಾ ನಿಬಂಧನೆಯನ್ನು ಈ ರೆಗ್ಯುಲೇಷನಿನಲ್ಲಿರುವದು ಯಾವನೂ ನಿಷ್ಪ್ರಯೋಜನವಾದ್ದಾಗಿ ಮಾಡಲಾರದು:

(g) ಒಬ್ಬನು ಕಂಪೆನಿಯ ಮೆಂಬರಾಗಿದ್ದದ್ದರಿಂದ ಅವನಿಗೆ ಡಿವಿಡೆಂಡು, ನಫೆ, ವಗೈರೆ ಸಲ್ಲಬೇಕಾಗಿತ್ತು, ಮೆಂಬರಲ್ಲದ ಮತ್ತೊಬ್ಬನು ಕಂಪೆನಿಯು ಲೇಣೇದಾರನಾಗಿದ್ದ ಇವರಿಬ್ಬರಿಗೆ ಪ್ರೋಟಾಪ್ರೋಟ ಉಂಟಾಗುವ ಸಂಗತಿಯಲ್ಲಿ, ಸದರಿ ಮೆಂಬರಾದಂತವನಿಗೆ ಸಲ್ಲಬೇಕಾದ ಡಿವಿಡೆಂಡು, ನಫೆ, ವಗೈರೆಯು ಕಂಪೆನಿಯ ಸಾಲವಾಗಿ ಗ್ರಹಿಸಲ್ಪಡಕೂಡದು ; ಆದರೆ ಅಂತಾ ಮೊಬಲಗೇನಾದರೂ ಇದ್ದರೆ ಅದು ಸಹಾಯಕರ ಹಕ್ಕುದಾರರಿಗಳು ಆಖೈರಿನಲ್ಲಿ ಫೈಸಲಾಗುವ ಕಾಲದಲ್ಲಿ ಗಣನೆಗೆ ತೆಗೆದುಕೊಳ್ಳಲ್ಪಡಬಹುದು :

ಟಿಪ್ಪಣಿ I.—ಮಾಜಿ ಮೆಂಬರುಗಳ ವಿಲ್ಲಂಘವು ಕಂಪೆನಿಯ ಸಾಮಾನ್ಯ ಆಸ್ತಿಗಳಿಗೆ ಚಂದಾಕೊಡುವದಕ್ಕೆ ಒಂದು ವಿಲ್ಲಂಘವಾಗಿಧೆ, ಈ ಆಸ್ತಿಗಳ ಮೇಲೆ ಲೇಣೇದಾರರಿಗೆ ಸಮಹಕ್ಕು ಉಂಟು (ಅವರ ಸಾಲಗಳು ಯಾವಕಾಲದಲ್ಲಿ ಮಾಡೋಣಾಗಿದ್ದಾಗ್ಯೂ ಚಿಂತೆಇಲ್ಲ)

ಟಿಪ್ಪಣಿ II.—ಒಬ್ಬ ಮಾಜಿ ಮೆಂಬರು ಗುರಿಯಾಗುವ ಸಾಲಗಳನ್ನು ಲೆಕ್ಕಮಾಡುವಾಗ, ಕಂಪೆನಿಯನ್ನು ಮುಚ್ಚಿಬಿಡುವವರೆಗ್ಯೂ ಈ ಸಾಲಗಳ ಮೇಲೆ ಸಂದಾಯವಾದ ಡಿವಿಡೆಂಡ್ಸ್ ಅಂದರೆ ಭಾಜ್ಯಗಳೆಲ್ಲವನ್ನೂ ತಳ್ಳಬೇಕು.

62. ಒಂದು ಕ್ಲುಪ್ತಪಡಿಸಲ್ಪಟ್ಟ ಕಂಪೆನಿಯನ್ನು ಮುಚ್ಚಿಬಿಡುವ ಸಂಗತಿಯಲ್ಲಿ ಜವಾಬ್ದಾರಿಯು ಕ್ಲುಪ್ತವಾಗದ ಯಾವ ಡೈರೆಕ್ಟರಿಂದಾಗಲಿ ಯಾ ಮ್ಯಾನೇಜರಿಂದಾಗಲಿ ಕೊಡಲ್ಪಡಬೇಕೆಂದು ಕೋರೋಣಾದ ಚಂದಾಗಳನ್ನು ಕುರಿತು, ಮೇಲೆ ಅವ್ಯವಹಿತವಾಗಿರುವ ಪ್ರಕರಣದಲ್ಲಿ ಕೆಳಗಣ ತಿದ್ದುಪಾಡುಮಾಡತಕ್ಕದ್ದು:—

ಕ್ಲುಪ್ತವಿಲ್ಲದ ವಿಲ್ಲಂಘವುಳ್ಳ ಡೈರೆಕ್ಟರ ಜವಾಬ್ದಾರಿಯು.

(a) ಮುಂದೆಬರುವ ನಿಬಂಧನೆಗಳಿಗೊಳಪಟ್ಟು, ಅಂತಾ ಯಾವ ಡೈರೆಕ್ಟರಾಗಲಿ ಯಾ ಮ್ಯಾನೇಜರಾಗಲಿ ಒಬ್ಬ ಸಾಧಾರಣ ಮೆಂಬರಾಗಿರುವದರಿಂದ ಕೊಡಬೇಕಾಗಿರುವ ತನ್ನ ವಿಲ್ಲಂಘ ಯಾನೆ ಜವಾಬ್ದಾರಿ (ಯೇನಾದರೂ ಇದ್ದರೆ) ಅದು ಅಲ್ಲದೆ, ಹಾಗೆ ಮುಚ್ಚಿಬಿಡುವದಕ್ಕೆ ಷುರೂ ಮಾಡುವ ಕಾಲದಲ್ಲಿ ಒಂದು ಅಕ್ಲುಪ್ತವಾದ ಕಂಪೆನಿಯಲ್ಲಿ ಒಬ್ಬ ಮೆಂಬರಾಗಿದ್ದರೆ ಏನು ಕೊಡಬೇಕಾಗಿರುವದೋ ಅದಕ್ಕೂ ಗುರಿಯಾಗತಕ್ಕದ್ದು, ಅತನು ಮಾಜಿ ಡೈರೆಕ್ಟರಾಗಿಯಾಗಲಿ ಯಾ ಮ್ಯಾನೇಜರಾಗಿಯಾಗಲಿ ಇದ್ದಾಗ್ಯೂ ಚಿಂತೆಯಿಲ್ಲ :

(b) ಮುಚ್ಚಿಬಿಡುವದಕ್ಕೆ ಷುರೂ ಮಾಡುವದಕ್ಕೆ ಒಂದು ವರುಷಕ್ಕೆ ಮುಂಚೆ ಯಾ ಅದಕ್ಕೆ ಪೂರ್ವವೇ ಅಂಥಾ ಉದ್ಯೋಗವನ್ನು ಬಿಟ್ಟುಬಿಟ್ಟ ಯಾವ ಮಾಜಿ ಡೈರೆಕ್ಟರಾಗಲಿ ಯಾ ಮ್ಯಾನೇಜರಾಗಲಿ ತಾನು ಕಂಪೆನಿಯ ಸಾಧಾರಣ ಮೆಂಬರಾಗಿದ್ದರೆ ಏನು ಚಂದಾ ಹಾಕಬೇಕಾಗಿಬರುವದೋ ಅದಕ್ಕಿಂತಲೂ (ಇದ್ದರೆ) ಹೆಚ್ಚಾಗಿ ಕೊಡಬೇಕೆಂದು ಕೋರಲ್ಪಡಕೂಡದು:

(c) ಯಾವ ಮಾಜಿ ಡೈರೆಕ್ಟರಾಗಲಿ ಯಾ ಮ್ಯಾನೇಜರಾಗಲಿ ಅಂಥಾ ಉದ್ಯೋಗವನ್ನು ಬಿಟ್ಟುಬಿಟ್ಟ ತರುವಾಯ ಕಂಪೆನಿಯವರು ಮಾಡಿದ ಯಾವ ಸಾಲವನ್ನು ಕುರಿತಾಗಲಿ ಯಾ ವಿಲ್ಲಂಘವನ್ನು ಕುರಿತಾಗಲಿ ತಾನು ಕಂಪೆನಿಯ ಸಾಧಾರಣ ಮೆಂಬರಾಗಿದ್ದರೆ ಏನು ಚಂದಾ ಹಾಕಬೇಕಾಗಿಬರುವದೋ ಅದಕ್ಕಿಂತಲೂ (ಇದ್ದರೆ) ಹೆಚ್ಚಾಗಿ ಕೊಡಬೇಕೆಂದು ಕೋರಲ್ಪಡಕೂಡದು:

(d) ಕಂಪೆನಿಯ ರೆಗ್ಯುಲೇಷನ್ಗಳಲ್ಲಿ ಅಡಗಿರುವ ನಿಬಂಧನೆಗಳಿಗೊಳಪಟ್ಟು, ಯಾವ ಡೈರೆಕ್ಟರಿಂದಾಗಲಿ ಯಾ ಮ್ಯಾನೇಜರಿಂದಾಗಲಿ ಕೊಡೋಣಾದ ಚಂದಾ ತಾನು ಒಬ್ಬ ಸಾಧಾರಣ ಮೆಂಬರಾಗಿದ್ದರೆ ಏನು ಕೊಡಬೇಕಾಗಿರುವದೋ ಅದಕ್ಕಿಂತಲೂ (ಇದ್ದರೆ) ಮೀರಕೂಡದು. ಆದರೆ ಹೀಗೆ ಕೊಡಬೇಕಾದ್ದು ಕಂಪೆನಿಯ ಸಾಲಗಳನ್ನೂ ವ ವಿಲ್ಲಂಘಗಳನ್ನೂ ಅಥವಾ ಮುಚ್ಚಿಬಿಡುವದಕ್ಕಿಂತ ಖರ್ಚು ವೆಚ್ಚಲಾಗವಡುಗಳನ್ನೂ ಕೊಡಬೇಕಾದ್ದು ಅವಶ್ಯಕವೆಂದು ಕೋರ್ಟಿನವರಿಗೆ ತೋರಿದರೆ ಹಾಗೆ ಕೊಡತಕ್ಕದ್ದು.

446

PART III.

3ನೇ ಭಾಗ.

Management and Administration of Companies and Associations under this Regulation.

ಈ ರೆಗ್ಯುಲೇಷನ್ ಪ್ರಕಾರ ಕಂಪೆನಿಗಳ ವ ಸಮಾಜಗಳ ಬಾಬತು ಮೇಲ್‌ವಿಚಾರಣೆ ವ ಕಾರುಬಾರ್ ನಡಿಸೋಣ.

Provisions for Protection of Creditors.

ಲೇಣೇದಾರರ ರಕ್ಷಣೆಯಬಗ್ಗೆ ನಿಬಂಧನೆಗಳು.

ಕಂಪೆನಿಯ ರಿಜಿಸ್ಟರ್ಮಾಡಲ್ಪಟ್ಟ ಆಫೀಸು.

63. ಈ ರೆಗ್ಯುಲೇಷನಿಗನುಗುಣವಾದ ಪ್ರತಿ ಕಂಪೆನಿಯೂ ಒಂದು ರಿಜಿಸ್ಟರ್ಮಾಡಲ್ಪಟ್ಟ ಆಫೀಸನ್ನು ಉಳ್ಳದ್ದಾಗಿರತಕ್ಕದ್ದು, ಅಲ್ಲಿಗೆ ಸಮಸ್ತ ಕಾಗದ ಪತ್ರಗಳೂ ವ ನೋಟೀಸುಗಳೂ ಕಳುಹಿಸಲ್ಪಡಬಹುದು. ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯವರಾದರೂ ಅಂತಾ ಆಫೀಸು ಇಲ್ಲದೇನೇ ಕೆಲಸ ನಡಿಸಿದರೆ, ಅವರು ಹಾಗೆ ಕೆಲಸ ನಡಿಸಿದಷ್ಟು ಕಾಲದವರಿಗೆ ದಿನ ಒಂದಕ್ಕೆ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೊಳಗಾಗತಕ್ಕದ್ದು.

ರಿಜಿಸ್ಟರ್ಮಾಡಲ್ಪಟ್ಟ ಆಫೀಸು ಇರತಕ್ಕ ಸ್ಥಲವನ್ನು ಕುರಿತು ನೋಟೀಸು.

64. ಅಂತಾ ರಿಜಿಸ್ಟರ್ಮಾಡಲ್ಪಟ್ಟ ಆಫೀಸು ಇರತಕ್ಕ ಸ್ಥಳವನ್ನು ಕುರಿತು ಮತ್ತು ಅದರ ಬದಲಾವಣೆಯನ್ನು ಕುರಿತು ರಿಜಿಸ್ಟ್ರಾರವರಿಗೆ ನೋಟೀಸು ಕೊಡಲ್ಪಡಬೇಕು, ಅವರದನ್ನು ಬರೆದಿಟ್ಟುಕೊಳ್ಳತಕ್ಕದ್ದು. ಅಂತಾ ನೋಟೀಸು ಕೊಡಲ್ಪಡುವ ಪರ್ಯಂತ, ಆ ಕಂಪೆನಿಯು ರಿಜಿಸ್ಟರ್ಮಾಡಲ್ಪಟ್ಟ ಆಫೀಸ್ ಉಂಟಾಗಿರುವ ವಿಷಯದಲ್ಲಿ ಈ ರೆಗ್ಯುಲೇಷನಿನ ನಿಬಂಧನೆಗಳನ್ನನುಸರಿಸಿ ನಡಿಯಿತೆಂದು ಗ್ರಹಿಸಲ್ಪಡಕೂಡದು.

ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಿಂದ ಅದರ ಹೆಸರು ಪ್ರಕಟಿಸಲ್ಪಡೋಣ.

65. ಹಿಸ್ಸೆಗಳಿಂದ ಯಾ ಜಾಮೀನಿನಿಂದ ಕ್ಲುಪ್ತ ಪಡಿಸಲ್ಪಟ್ಟಂತಾ ಈ ರೆಗ್ಯುಲೇಷನಿಗನುಗುಣವಾದ ಪ್ರತಿ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯು, ಸದರಿ ಕಂಪೆನಿಯ ಕೆಲಸ ಎಲ್ಲಿ ನಡೆಯುತ್ತದೋ ಆ ಪ್ರತಿ ಆಫೀಸಿನ ಯಾ ಸ್ಥಳದ ಹೊರಗಡೆ ಅದರ ಹೆಸರನ್ನು ಬಣ್ಣದಿಂದ ಒಂದು ಬೋರ್ಡಿನಮೇಲೆ ಬರೆಯಲ್ಪಟ್ಟು ತಗಲಹಾಕಲ್ಪಟ್ಟಿರತಕ್ಕದ್ದು. ಅದನ್ನು ಬಹಿರಂಗವಾಗಿ ಕಾಣುವಂತೆಯೂ ಸುಲಭವಾಗಿ ಓದಲಿಕ್ಕಾಗುವಂತೆಯೂ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳೆರಡರಿಂದಲೂ ಬರೆಯತಕ್ಕದ್ದು. ಮತ್ತು ಅಂತಾ ಭಾಷೆಗಳ ಅಕ್ಷರಗಳಿಂದ ಅದರ ಹೆಸರು ಸ್ಪಷ್ಟವಾಗಿ ಅದರ ಮೊಹರಿನ ಮೇಲೆ ಖಚಿತಪಡಿಸಲ್ಪಡಬೇಕು. ಮತ್ತು ಸದರಿ ಕಂಪೆನಿಯ ದರೋಬಸ್ತು ನೋಟೀಸುಗಳಲ್ಲೂ, ಪ್ರಸಿದ್ಧಪತ್ರಿಕೆಗಳಲ್ಲೂ, ಮತ್ತು ಇತರ ಅಫಿಷಿಯಲ್ ಪ್ರಕಟನೆಗಳಲ್ಲೂ, ಸದರಿ ಕಂಪೆನಿಯಿಂದ ಯಾ ಕಂಪೆನಿಯ ತರಫಿನಲ್ಲಿ ದಸ್ಕತ್ತುಮಾಡಲ್ಪಟ್ಟಂತೆ ಅಭಿಪ್ರಾಯವಾಗುವ ಸಮಸ್ತ ಬಿಲ್ ಆಫ್ ಎಕ್ಸ್‌ಚೇಂಜ್‌ಗಳಲ್ಲೂ, ಹುಂಡಿಗಳಲ್ಲೂ, ಪ್ರಾಮಿಸರಿ ನೋಟುಗಳಲ್ಲೂ, ಇಂಡಾರ್ಸ್‌ಮೆಂಟುಗಳಲ್ಲೂ, ಚೆಕ್ಕುಗಳಲ್ಲೂ ವ ಹಣದ ಯಾ ಸಾಮಾನುಗಳ ಬಾಬತು ಹುಕುಂಗಳಲ್ಲೂ, ಮತ್ತು ಆ ಕಂಪೆನಿಯ ಸಮಸ್ತ ಪಾರ್ಸೆಲ್ ಬಿಲ್ಲುಗಳಲ್ಲೂ, ಇನ್‌ವಾಯಿಸಗಳಲ್ಲೂ, ರಶೀದಿಗಳಲ್ಲೂ ವ ಕ್ರೆಡಿಟ್ ಖತ್ತುಗಳಲ್ಲೂ, ಅದರ ಹೆಸರು ಸ್ಪಷ್ಟವಾದ ಅಕ್ಷರಗಳಿಂದ ಬರಿಯಲ್ಪಟ್ಟಿರಬೇಕು.

ಹೆಸರು ಪ್ರಕಟಿಸಲ್ಪಡದಬಗ್ಗೆ ದಂಡನೆ.

66. ಈ ರೆಗ್ಯುಲೇಷನಿಗನುಗುಣವಾದ ಯಾವ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಾದರೂ ಈ ರೆಗ್ಯುಲೇಷನಿನಲ್ಲಿ ವಿಧಿಸಿರುವ ರೀತೀಲಿ ಅದರ ಹೆಸರನ್ನು ಬಣ್ಣದಿಂದ ಬರೆದು ಯಾ ತಗಲಹಾಕಿ ಇಡದೇ ಹೋದರೆ ಹಾಗೆ ಹೆಸರನ್ನು ಬಣ್ಣದಿಂದ ಬರೆದು ಯಾ ತಗಲಹಾಕಿ ಇಡದೆ ಹೋಗುವಷ್ಟು ದಿವಸಗಳವರಿಗೆ ದಿನ ಒಂದಕ್ಕೆ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗಿರತಕ್ಕದ್ದು.

ಹಾಗೆ ತಪ್ಪಲಿಕ್ಕೆ—ತಿಳಿದಿದ್ದೂ ಮನಃಪೂರ್ವಕವಾಗಿ ಅಧಿಕಾರ ಕೊಡುವ ಯಾ ಅಪ್ಪಣೆಕೊಡುವ ಕಂಪೆನಿಯ ಪ್ರತಿ ಡೈರೆಕ್ಟರ್ ವ ಮಾನೇಜರ್ ಬದಸ್ತೂರ್ ಜುರ್ಮಾನೆಗೆ ಗುರಿಯಾಗಿರತಕ್ಕದ್ದು.

ಅಂತಾ ಕಂಪೆನಿಯ ಯಾವ ಡೈರೆಕ್ಟರಾಗಲಿ ಮಾನೇಜರಾಗಲಿ ಯಾ ಆಫೀಸರಾಗಲಿ ಅಥವಾ ಅದರ ತರಫಿನ ಯಾವ ಮನುಷ್ಯನಾಗಲಿ, ಮೇಲೆ ಹೇಳೋಣಾದ ಪ್ರಕಾರ ಹೆಸರು ಖಚಿತ ಪಡಿಸಲ್ಪಡದ್ದಾಗಿ ಕಂಪೆನಿಯ ಮೊಹರೆಂದು ಅಭಿಪ್ರಾಯವಾಗುವ ಯಾವ ಮೊಹರನ್ನಾದರೂ ಬಳಸಿದರೆ ಯಾ ಬಳಸಲಿಕ್ಕೆ ಅಧಿಕಾರ ಕೊಟ್ಟರೆ, ಅಥವಾ ಕಂಪೆನಿಯ ಹೆಸರನ್ನು ಮೇಲೆ ಹೇಳೋಣಾದ ರೀತಿಯಾಗಿ ನಮೂದಿಸದೆ, ಅಂತಾ ಕಂಪೆನಿಯ

ಯಾವ ನೋಟಿಸನ್ನಾದರೂ ಪ್ರಕಟನೆಯನ್ನಾದರೂ ಯಾ ಇತರ ಅಫಿಷಿಯಲ್ ಪ್ರಸಿದ್ಧ ಪತ್ರಿಕೆಯನ್ನಾದರೂ ಹೊರಪಡಿಸಿದರೆ, ಯಾ ಹೊರಪಡಿಸಲಿಕ್ಕೆ ಅಧಿಕಾರ ಕೊಟ್ಟರೆ, ಅಥವಾ ಯಾವ ಬಿಲ್ ಆಫ್ ಎಕ್ಸಚೇಂಜಿಗಾದರೂ ಹುಂಡಿಗಾದರೂ ಪ್ರಾಮಿಸೊರಿ ನೋಟಿಗಾದರೂ ಇಂಡಾರ್ಸ್ಮೆಂಟಿಗಾದರೂ ಚೆಕ್ಕಿಗಾದರೂ ಹಣದ ಬಾಬತು ಯಾ ಸರಕುಗಳ ಬಾಬತು ಹುಕುಮಿಗಾದರೂ ಅಂಥಾ ಕಂಪೆನಿಯ ತರಫಿನಲ್ಲಿ ದಸ್ಕತ್ತು ಮಾಡಿದರೆ ಯಾ ದಸ್ಕತ್ತಿನ ಬಗ್ಯೆ ಅಧಿಕಾರ ಕೊಟ್ಟರೆ, ಅಥವಾ ಕಂಪೆನಿಯ ಯಾವ ಪಾರ್ಸೆಲ್ ಬಿಲ್ಲನ್ನಾದರೂ, ಇನ್ವಾಯಿಸನ್ನಾದರೂ ರಶೀದಿಯನ್ನಾದರೂ ಲೆಟ್ಟರ್ಸ್ ಆಫ್ ಕ್ರೆಡಿಟನ್ನಾದರೂ ಬರಕೊಟ್ಟರೆ, ಯಾ ಬರಕೊಡಲಿಕ್ಕೆ ಅಧಿಕಾರ ಕೊಟ್ಟರೆ, ಆತನು ಸಾವಿರ ರೂಪಾಯಿಗಳ ಜುರ್ಮಾನೆಗೆ ಗುರಿಯಾಗತಕ್ಕದ್ದು. ಶಿವಾಯಿ, ಅಂಥಾ ಯಾವ ಬಿಲ್ ಆಫ್ ಎಕ್ಸಚೇಂಜಿಗಾದರೂ ಹುಂಡಿಗಾದರೂ ಪ್ರಾಮಿಸೊರಿ ನೋಟಿಗಾದರೂ ಚೆಕ್ಕಿಗಾದರೂ ಯಾ ಹಣದ ಬಾಬತು ಯಾ ಸರಕುಗಳ ಬಾಬತು ಹುಕುಮಿಗಾದರೂ, ಕಂಪೆನಿಯಿಂದ ವಾಜಬಿಯಾಗಿ ಹಣ ಸಂದಾಯವಾಗದೆ ಹೋದರೆ, ಅದನ್ನು ಪಡಕೊಂಡಿರುವಂಥಾವನಿಗೆ ಆ ಬಾಬತು ಮೊಬಲಗಿಗಾಗಿ ಆತನು ಸ್ವತಃ ಜವಾಬ್ದಾರನಾಗಿರತಕ್ಕದ್ದು.

Contracts.

ಕರಾರುಗಳು.

ಕರಾರುಗಳು ಹ್ಯಾಗೆ ಮಾಡಲ್ಪಡಬೇಕು.

67. ಈ ರೆಗ್ಯುಲೇಷನ್ ಪ್ರಕಾರ ಯಾವದಾದರೊಂದು ಕಂಪೆನಿಯ ತರಫಿನ ಕರಾರುಗಳು ಈ ಕೆಳಗಿನ ರೀತ್ಯಾ ಮಾಡಲ್ಪಡಬಹುದು; (ಯಾವವೆಂದರೆ):—

(a) ಖಾಸಗಿ ಮನುಷ್ಯರೊಂದಿಗೆ ಕರಾರು ಮಾಡೋಣವರಲ್ಲಿ ಕಾನೂನಿನ ಪ್ರಕಾರ ಬರಹ ಮೂಲಕವಾಗಿರಬೇಕಾದಂಥಾ ಮತ್ತು, ಇಂಗ್ಲಿಷ್ ಕಾನೂನಿನ ಪ್ರಕಾರ ಮೊಹರ್ಮಾಡಲ್ಪಡಬೇಕಾದಂಥಾ ಯಾವ ಕರಾರಾದರೂ ಕಂಪೆನಿಯ ತರಫಿನಲ್ಲಿ ಸದರಿ ಕಂಪೆನಿಯ ಮುದ್ರಿಗದ ಮೊಹರನಿಶಿ ಬರಹ ಮೂಲಕವಾಗಿ ಮಾಡಲ್ಪಡಬಹುದು; ಮತ್ತು ಅಂಥಾ ಕರಾರು ಅದೇರೀತಿಯಾಗಿ ಬದಲಾಯಿಸಲ್ಪಡಬಹುದು:

(b) ಖಾಸಗಿ ಮನುಷ್ಯರೊಂದಿಗೆ ಕರಾರು ಮಾಡೋಣದರಲ್ಲಿ ಕಾನೂನಿನ ಪ್ರಕಾರ ಬರಹ ಮೂಲಕವಾಗಿದ್ದು ಅದಕ್ಕೊಳಪಡುವ ಕಕ್ಷಿಗಾರರಿಂದ ದಸ್ಕತ್ತು ಮಾಡಲ್ಪಡಬೇಕಾದಂಥಾ ಯಾವ ಕರಾರಾದರೂ ಕಂಪೆನಿಯ ತರಫಿನಲ್ಲಿ ಸದರಿ ಕಂಪೆನಿಯಿಂದ ಕಂಠೋಕ್ತವಾಗಿ ಯಾ ಗೂಢವಾಗಿ ಅಧಿಕಾರ ಹೊಂದಿ, ಕೆಲಸ ನೋಡುವ ಯಾವ ಮನುಷ್ಯನಿಂದಲಾದರೂ ದಸ್ಕತ್ತು ಮಾಡಲ್ಪಟ್ಟು ಬರಹ ಮೂಲವಾಗಿ ಮಾಡಲ್ಪಡಬಹುದು; ಮತ್ತು ಅಂಥಾ ಕರಾರು ಅದೇರೀತಿಯಾಗಿ ಬದಲಾಯಿಸಲ್ಪಡಬಹುದು ಯಾ ತೀರಿ ಹೋಗಬಹುದು:

(c) ಖಾಸಗಿ ಮನುಷ್ಯರೊಂದಿಗೆ ಕರಾರು ಮಾಡೋಣದರಲ್ಲಿ ಲಿಖಿತರೂಪವಾಗಿಲ್ಲದೆ ಜಬಾನಿ ಮಾತ್ರದ್ದಾದಾಗ್ಯೂ ಕಾನೂನಿನ ಪ್ರಕಾರ ಸಲುವಳಿಯಾಗತಕ್ಕದ್ದಾಗಿರುವಂಥಾ ಯಾವ ಕರಾರಾದರೂ ಕಂಪೆನಿಯ ತರಫಿನಲ್ಲಿ ಸದರಿ ಕಂಪೆನಿಯಿಂದ ಕಂಠೋಕ್ತವಾಗಿ ಯಾ ಗೂಢವಾಗಿ ಅಧಿಕಾರ ಹೊಂದಿ, ಕೆಲಸನೋಡುವ ಯಾವಮನುಷ್ಯನಿಂದಲಾದರೂ ಜಬಾನಿಯಾಗಿ ಮಾಡಲ್ಪಡಬಹುದು; ಮತ್ತು ಅಂಥಾ ಕರಾರು ಅದೇರೀತಿಯಾಗಿ ಬದಲಾಯಿಸಲ್ಪಡಬಹುದು ಯಾ ತೀರಿಹೋಗಬಹುದು. ಇದರಲ್ಲಿ ಅಡಗಿ ಇರುವ ನಿಬಂಧನೆಗಳ ಪ್ರಕಾರ ಮಾಡೋಣಾದ ಸಮಸ್ತ ಕರಾರುಗಳೂ ನ್ಯಾಯಸ್ಥಾನಗಳಲ್ಲಿ ಸಲುವಳಿಯಾಗತಕ್ಕದ್ದು, ಮತ್ತು ಆ ಕಂಪೆನಿಯವರಿಗೂ ಸಂಗತ್ಯಾನುಗುಣವಾಗಿ ಅವರ ಉತ್ತರಾಧಿಕಾರಿಗಳಿಗೂ ವ ಅದಕ್ಕೆ ಸಂಬಂಧಪಟ್ಟ ಸಮಸ್ತ ಇತರ ಕಕ್ಷಿಗಾರರಿಗೂ ಅವರ ವಾರಸುದಾರರಿಗೂ ಎಗ್ಜಿಕ್ಯೂಟರಗಳಿಗೂ ಯಾ ಅಡ್ಮಿನಿಸ್ಟ್ರೇಟರಗಳಿಗೂ ಬದ್ಧಪಡಿಸತಕ್ಕದ್ದಾಗಿರತಕ್ಕದ್ದು.

[illegible] ಡವಾಣಗಳ ರಜಿಸ್ಟರ.

[illegible] ಈ ರೆಗ್ಯುಲೇಷನಿಗನುಗುಣವಾದ ಕ್ಲುಪ್ತಪಡಿಸಲ್ಪಟ್ಟ ಪ್ರತಿ ಕಂಪೆನಿಯೂ ಅದರ ಸೊತ್ತಿಗೆ ಸ್ವೈಜವಾಗಿ ಸಂಬಂಧಪಡುವಂಥಾ ಸಮಸ್ತ ಬತ್ತೆಗಳ ವ ವಿನಿಯೋಗಗಳ ಬಾಬತು ಒಂದು ರಿಜಿಸ್ಟರನ್ನು ಇಡತಕ್ಕದ್ದು, ಮತ್ತು ಪ್ರತಿ ಬತ್ತೆಯ ಯಾ ವಿನಿಯೋಗದ ವಿಷಯವಾಗಿ ಅಂಥಾ ರಿಜಿಸ್ಟರಿನಲ್ಲಿ ಬತ್ತೆ ಇಡಲ್ಪಟ್ಟ [illegible] ಮಾಡಲ್ಪಟ್ಟ ಸೊತ್ತಿನ, ಅದರಿಂದ ಉಂಟಾವ ವಿನಿಯೋಗದ ಮೊಬಲಗಿನ ಮತ್ತು ಬತ್ತೆ ಇಟ್ಟ [illegible] ಅಂಥಾ ವಿನಿಯೋಗಕ್ಕೆ ಅರ್ಹರಾದ ಮನುಷ್ಯರ ಹೆಸರುಗಳ ಸಂಗ್ರಹವಾದ ವಿವರಣೆಯನ್ನು [illegible]ದ್ದು.

ಮೇಲೆ ಹೇಳೋಣಾದಪ್ರಕಾರ ಅಂತಾ ಖತಾಯಿತಿಯನ್ನು ಮಾಡದೆ ಕಂಪೆನಿಯ ಯಾವ ಸೊತ್ತನ್ನಾದರೂ ಒತ್ತೆ ಇಟ್ಟರೆ ಯಾ ವಿನಿಯೋಗಿಸಿದರೆ, ಹಾಗೆ ಮಾಡಬೇಕಾದ ಖತಾಯಿತಿಯನ್ನು ಮಾಡದೆ ಇರಲಿಕ್ಕೆ ತಿಳದಿದ್ದೂ ಮನಃಪೂರ್ವಕವಾಗಿ ಅಧಿಕಾರ ಕೊಡುವ ಯಾ ಅಪ್ಪಣೆ ಕೊಡುವ ಕಂಪೆನಿಯ ಪ್ರತಿ ಡೈರೆಕ್ಟರಾಗಲಿ ಮಾನೇಜರಾಗಲಿ ಯಾ ಇತರ ಆಫೀಸರಾಗಲಿ ಐನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಈ ಪ್ರಕರಣದ ಪ್ರಕಾರ ಇಡಲ್ಪಡುವ ಒತ್ತೆಯ ರಿಜಿಸ್ಟರು ಯಾವ ಲೇಣೇದಾರನಿಂದಲಾದರೂ ಯಾ ಕಂಪೆನಿಯ ಮೆಂಬರಿಂದಲಾದರೂ ಸಮಸ್ತ ವಾಜಬಿಕಾಲಗಳಲ್ಲಿ ನೋಡಲ್ಪಡಲಿಕ್ಕೆ ಖುಲ್ಲಾ ಇರತಕ್ಕದ್ದು. ಅದನ್ನು ನೋಡಲಿಕ್ಕೆ ಕೋರಿಸುವದಿಲ್ಲವೆಂದು ನಿರಾಕರಿಸಿದರೆ, ಹಾಗೆ ನಿರಾಕರಿಸುವ ಕಂಪೆನಿಯ ಯಾವ ಆಫೀಸರಾದರೂ, ಮತ್ತು ಅಂತಾ ನಿರಾಕರಣೆಯ ಬಗ್ಯೆ ಅಧಿಕಾರಕೊಡುವ ಅಥವಾ ತಿಳದಿದ್ದೂ ಮನಃಪೂರ್ವಕವಾಗಿ ಅಪ್ಪಣೆ ಕೊಡುವ ಕಂಪೆನಿಯ ಪ್ರತಿ ಡೈರೆಕ್ಟರೂ ವ ಮಾನೇಜರೂ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗುವದು ಶಿವಾಯಿ, ಅಂತಾ ನಿರಾಕರಣೆ ನಡೆದಷ್ಟು ದಿವಸಗಳಿಗೂ ದಿನ ಒಂದಕ್ಕೆ ಇಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಚೀಫ್‌ಕೋರ್ಟಿನವರಾಗಲಿ ಅದರ ಯಾವ ಜಡ್ಜಿಯವರಾಗಲಿ ಒಂದು ಹುಕುಂಕೊಟ್ಟು ತದ್ವಾರಾ ಅಂತಾ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಮೇಲೆ ಈ ಪ್ರಕರಣದಿಂದ ವಿಧಿಸಲ್ಪಟ್ಟ ಕೆಲಸವನ್ನು ಜರಗಿಸಬಹುದು, ಮತ್ತು ಮೇಲೆಹೇಳಿದ ದಂಡನೆಯೂ ಅಲ್ಲದೆ ಒಂದು ಹುಕುಮನ್ನು ಕೊಟ್ಟು ತದ್ವಾರಾ ರಿಜಿಸ್ಟರನ್ನು ತಕ್ಷಣವೇ ನೋಡಿಸಬಹುದು.

ಟಿಪ್ಪಣಿ—ಒಂದು ಅಡಮಾನವನ್ನಾಗಲಿ ಯಾ ಚಾರ್ಜನ್ನಾಗಲಿ ಈ ಪ್ರಕರಣಕ್ಕನುಗುಣವಾಗಿ ರಿಜಿಸ್ಟರ್ಮಾಡದೆ ತಪ್ಪೋಣವು ಅದನ್ನ ಅಸಿದ್ಧ ಪಡಿಸುವದಿಲ್ಲ—ಆದರೆ ಕಂಪೆನಿಯ ಸೊತ್ತಿಗೆ ನ್ಯಾಯವಾಗಿ ಸಂಬಂಧಪಡುವಂತಾ ವ ಆ ಪ್ರಕಾರ ರಿಜಿಸ್ಟರ್ ಆಗದಂತಾ ಒತ್ತೆ ಯಾ ವಿನಿಯೋಗವನ್ನ ಕಂಪೆನಿಯ ಆಫೀಸರು ಸ್ವತಃ ಉಪಯೋಗಮಾಡಿಕೊಳ್ಳಕೂಡದು.

ಕೆಲವು ಕಂಪೆನಿಗಳು ಪಟ್ಟಿಯಲ್ಲಿ ನಮೂದಿಸಿರುವ ತಖ್ತೆಯನ್ನು ಪ್ರಕಟಿಸಬೇಕು.

69. ಈ ರೆಗ್ಯುಲೇಷನಿಗೆನುಗುಣವಾದ ಪ್ರತಿ ಕ್ಲುಪ್ತ ಪಡಿಸಲ್ಪಟ್ಟ-ಬ್ಯಾಂಕಿಂಗ್ ಕಂಪೆನಿಯೂ, ಪ್ರತಿ ಇನ್ಷೂರೆನ್ಸ ಕಂಪೆನಿಯೂ, ಮತ್ತು ಡಿಪಾಜಿಟ, ಪ್ರಾವಿಡೆಂಟ [illegible] ಬೆನಿಫಿಟ ಸೊಸೈಟಿಯೂ, ಕೆಲಸ ಷುರು ಮಾಡುವದಕ್ಕೆ ಮುಂಚಿತವಾಗಿ ಮತ್ತು ಕೆಲಸ ನಡಿಯುತ್ತಿರುವಷ್ಟುಕಾಲ ಸಂವತ್ಸರ ಸಂವತ್ಸರ ಫೆಬ್ರವರಿ ತಿಂಗಳ ಮೊದಲನೇ ಸೋಮವಾರ ಮತ್ತು ಆಗಸ್ಟು ತಿಂಗಳ ಮೊದಲನೇ ಸೋಮವಾರ ಸಹ, ಇದಕ್ಕೆ ಶೇರಿಸಲ್ಪಟ್ಟಿರುವ ಷೆಡ್ಯೂಲ್ ಪಟ್ಟಿಯಲ್ಲಿರತಕ್ಕ D ಗುರ್ತುಳ್ಳ ನಮೂನೆಯಂತೆಯಾಗಲಿ ಯಾ ಸಂದರ್ಭಾನುಸಾರವಾಗಿ ಕೂಡಿದಮಟ್ಟಿಗೆ ಅದರಂತೆಯಾಗಲಿ ಒಂದು ಸ್ಟೇಟ್ಮೆಂಟನ್ನು ತಯಾರ್ಮಾಡತಕ್ಕದ್ದು; ಮತ್ತು ಅಂತಾ ಸ್ಟೇಟ್ಮೆಂಟಿನ ಒಂದು ನಕಲನ್ನು ಕಂಪೆನಿಯ ರಿಜಿಸ್ಟರ್ಮಾಡಲ್ಪಟ್ಟ ಆಫೀಸಿನಲ್ಲಿ ಮತ್ತು ಸದರಿ ಕಂಪೆನಿಯ ಕೆಲಸ ನಡಿಯುತ್ತಿರುವ ಪ್ರತಿ ಷಾಖಾ ಆಫೀಸಿನಲ್ಲಿ ಯಾ ಸ್ಥಳದಲ್ಲಿ ಬಹಿರಂಗವಾಗಿ ಎಲ್ಲರಿಗೂ ತಿಳಿಯುವಂತೆ ಇಡತಕ್ಕದ್ದು.

ಈ ಪ್ರಕರಣದ ನಿಬಂಧನೆಗಳ ಪ್ರಕಾರ ನಡಿಯಲಿಕ್ಕೆ ತಪ್ಪಿದರೆ, ಆ ಕಂಪೆನಿಯು ಹಾಗೆ ತಪ್ಪಿ ನಡಿಯುವಷ್ಟು ದಿವಸಗಳವರಿಗೆ ದಿನ ಒಂದಕ್ಕೆ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು; ಮತ್ತು ಹಾಗೆ ತಪ್ಪಿ ನಡೆಯಲಿಕ್ಕೆ ತಿಳದಿದ್ದೂ ಮನಃಪೂರ್ವಕವಾಗಿ ಅಧಿಕಾರ ಕೊಡುವ ಯಾ ಅಪ್ಪಣೆಕೊಡುವ ಕಂಪೆನಿಯ ಪ್ರತಿ ಡೈರೆಕ್ಟರೂ ವ ಮಾನೇಜರೂ ಬದಸ್ತೂರ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಈ ಪ್ರಕರಣದಲ್ಲಿ ನಮೂದಿಸಿರುವ ಯಾವದಾದರೊಂದು ಕಂಪೆನಿಯ ಪ್ರತಿಮೆಂಬರೂ ವ ಪ್ರತಿ ಲೇಣೇದಾರನೂ ಎಂಟಾಣೆಗೆ ಮೀರದೆ ಒಂದು ಮೊಬಲಗನ್ನು ಕೊಟ್ಟರೆ ಮೇಲ್ಕಂಡಂತಾ ಸ್ಟೇಟ್ಮೆಂಟಿನ ಒಂದು [illegible] ಪಡೆಯಲಿಕ್ಕೆ ಅರ್ಹನಾಗಿರತಕ್ಕದ್ದು.

ಡೈರೆಕ್ಟರುಗಳ ಫೇರಿಸ್ತು ರಿಜಿಸ್ಟ್ರಾರವರ ಬಳಿಗೆ ಕಳುಹಿಸಲ್ಪಡಬೇಕು.

70. ಈ ರೆಗ್ಯುಲೇಷನಿಗನುಗುಣವಾದಮತ್ತು ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೊ[illegible] ಕಂಪೆನಿಯೂ ಅದು ರಿಜಿಸ್ಟರ್ಮಾಡಲ್ಪಟ್ಟ ಆಫೀಸಿನಲ್ಲಿ [illegible] ಯಾ ಮಾನೇಜರುಗಳ ಹೆಸರುಗಳನ್ನೂ ವ ವಿಲಾ[illegible] ಳನ್ನೂ ಅಡಗಿಸಿಕೊಂಡಿರುವ ಒಂದು ರಿಜಿಸ್ಟರನ್ನು [illegible] ತ್ತು ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರವರಬಳಿಗೆ ಅಂತಾ ರಿಜಿಸ್ಟರಿನ ನಕಲೊಂ[illegible]

ತಕ್ಕದ್ದು, ಮತ್ತು ಅಂತಾ ಡೈರೆಕ್ಟರುಗಳ ಒಳಗೆ ಯಾ ಮಾನೇಜರುಗಳ ಒಳಗೆ ಯಾವ ಬದಲಾವಣೆಯಾದರೂ ಮಾಡಲ್ಪಟ್ಟರೆ, ಅವನ್ನು ರಿಜಿಸ್ಟ್ರಾರವರಿಗೆ ಆಗಿಂದಾಗ್ಯೆ ತಿಳಿಯಪಡಿಸತಕ್ಕದ್ದು.

ಡೈರೆಕ್ಟರುಗಳ ರಜಿಸ್ಟರನ್ನು ಇಡದಂತಾ ಕಂಪೆನಿಗೆ ದಂಡನೆ.

71. ಈ ರೆಗ್ಯುಲೇಷನಿಗನುಗುಣವಾದ ವ ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವಿಲ್ಲದ ಯಾವ ಕಂಪೆನಿಯಾದರೂ ಮೇಲಿನ ವಿಧಿಗಳಿಗನುಸಾರವಾಗಿ ಅದರ ಡೈರೆಕ್ಟರುಗಳ ಯಾ ಮಾನೇಜರುಗಳ ರಿಜಿಸ್ಟರನ್ನಿಡಲಿಕ್ಕೆ ಅಥವಾ ಅಂತಾ ರಿಜಿಸ್ಟರಿನ ನಕಲೊಂದನ್ನು ರಿಜಿಸ್ಟ್ರಾರವರ ಬಳಿಗೆ ಕಳುಹಿಸಿಕೊಡಲಿಕ್ಕೆ ಅಥವಾ ಅಂತಾ ಡೈರೆಕ್ಟರುಗಳ ಒಳಗೆ ಯಾ ಮಾನೇಜರುಗಳ ಒಳಗೆ ನಡಿಯುವ ಬದಲಾವಣೆಯನ್ನು ರಿಜಿಸ್ಟ್ರಾರವರಿಗೆ ತಿಳಿಸಲಿಕ್ಕೆ ತಪ್ಪಿದರೆ, ಅಂಥಾ ತಕ್ಸೀರಿಗೊಳಗಾದ ಕಂಪೆನಿಯು ಹಾಗೆ ತಪ್ಪಿ ನಡಿಯುವಷ್ಟು ದಿವಸಗಳವರೆಗೆ ದಿನ ಒಂದಕ್ಕೆ ನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು; ಮತ್ತು ತಿಳಿದಿದ್ದು ಮನಃಪೂರ್ವಕವಾಗಿ ಹಾಗೆ ತಪ್ಪಿ ನಡಿಯಲಿಕ್ಕೆ ಅಧಿಕಾರಕೊಡುವ ಯಾ ಅಪ್ಪಣೆಕೊಡುವ ಕಂಪೆನಿಯ ಪ್ರತಿ ಡೈರೆಕ್ಟರೂ ಯಾ ಮಾನೇಜರೂ ಬದಸೂರ್ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರಾಮಿಸರಿ ನೋಟುಗಳು, ಬಿಲ್ ಆಫ್ ಎಕ್ಸ್‌ಚೇಂಜುಗಳು ವ ಹುಂಡಿಗಳು.

72. ಒಂದು ಪ್ರಾಮಿಸರಿನೋಟು, ಬಿಲ್ ಆಫ್ ಎಕ್ಸ್‌ಚೇಂಜ್ ಯಾ ಹುಂಡಿಯು, ಕಂಪೆನಿಯ ಅಧಿಕಾರ ಕೊಳ್ಳಪಟ್ಟು ಕೆಲಸ ನೋಡುವ ಯಾವ ಮನುಷ್ಯನಿಂದಲಾದರೂ ಆ ಕಂಪೆನಿಯ ಹೆಸರಿನಲ್ಲಿ ಉಂಟುಮಾಡಲ್ಪಟ್ಟರೆ, ಬರೆಯಲ್ಪಟ್ಟರೆ, ಅಕ್ಸೆಪ್ಟ್ ಮಾಡಲ್ಪಟ್ಟರೆ ಯಾ ಇಂಡಾರ್ಸ್ ಮಾಡಲ್ಪಟ್ಟರೆ, ಅಥವಾ ಕಂಪೆನಿಯ ಅಧಿಕಾರಕೊಳ್ಳಪಟ್ಟು ಕೆಲಸನೋಡುವ ಯಾವ ಮನುಷ್ಯನಿಂದಲಾದರೂ ಆ ಕಂಪೆನಿಯಿಂದ ಯಾ ಆ ಕಂಪೆನಿಯ ತರಫಿನಲ್ಲಿ ಯಾ ಆ ಕಂಪೆನಿಗೋಸ್ಕರ ಉಂಟುಮಾಡಲ್ಪಟ್ಟರೆ—ಬರೆಯಲ್ಪಟ್ಟರೆ—ಅಕ್ಸೆಪ್ಟ್ ಮಾಡಲ್ಪಟ್ಟರೆ—ಯಾ ಇಂಡಾರ್ಸ್‌ಮಾಡಲ್ಪಟ್ಟರೆ ಅದು ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯ ತರಫಿನಲ್ಲಾದರೂ ಉಂಟುಮಾಡಿದ ಹಾಗೆ ಬರೆಯಲ್ಪಟ್ಟಹಾಗೆ ಅಕ್ಸೆಪ್ಟ್‌ಮಾಡಿದಹಾಗೆ ಯಾ ಇಂಡಾರ್ಸ್‌ಮಾಡಿದಹಾಗೆ ಗ್ರಹಿಸಲ್ಪಡತಕ್ಕದ್ದು.

ಮೆಂಬರುಗಳು ಏಳುಮಂದಿಗಿಂತ ಕಮ್ಮಿಯಾದರೆ ಕೆಲಸ ನಡಿಸಕೂಡದೆಂಬ ಆತಂಕ.

73. ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಾದರೂ ಅದರ ಮೆಂಬರುಗಳ ಸಂಖ್ಯೆ ಏಳು ಮಂದಿಗಿಂತ ಕಮ್ಮಿಯಾಗಿರುವಲ್ಲಿ, ಹಾಗೆ ಕಮ್ಮಿಯಾದ ತರುವಾಯ ಆರು ತಿಂಗಳಕಾಲದ ವರೆಗೆ ಹಾಗೆ ಕೆಲಸ ನಡಿಸಿದರೆ, ಅಂತಾ ಆರುತಿಂಗಳ ಕಾಲದ ತರುವಾಯ ಹಾಗೆ ಕೆಲಸ ನಡಿಸುತ್ತಿರುವಲ್ಲಿ ಸದರಿ ಕಂಪೆನಿಯ ಮೆಂಬರಾಗಿರುವಂತ ಮತ್ತು ಏಳುಮಂದಿಗಿಂತ ಕಮ್ಮಿ ಜನರೊಂದಿಗೆ ಕೆಲಸ ನಡಿಸುವದಾಗಿ ತಿಳಿದವನಾಗಿರುವಂತ ಪ್ರತಿ ಮನುಷ್ಯನೂ ಅಂತಾ ಕಾಲದಲ್ಲಿ ಸದರಿ ಕಂಪೆನಿಯಿಂದ ಮಾಡಲ್ಪಟ್ಟ ಕುಲ್ಲು ಸಾಲದ ಫಾವತಿ ಬಗ್ಯೆ ಪ್ರತ್ಯೇಕವಾಗಿ ಜವಾಬ್ದಾರನಾಗಿರತಕ್ಕದ್ದು, ಮತ್ತು ವ್ಯವಹರಣೆಯಲ್ಲಿ ಇತರ ಯಾವ ಮೆಂಬರನ್ನಾದರೂ ಸೇರಿಸಿಕೊಳ್ಳದೇ ಆ ಬಗ್ಯಾಗಿ ಅವನ ಮೇಲೆಯೇ ವ್ಯಾಜ್ಯ ತರಬಹುದು.

Provisions for Protection of Members.

ಮೆಂಬರುಗಳ ರಕ್ಷಣೆಯ ಬಗ್ಯೆ ನಿಬಂಧನೆಗಳು.

ಕಂಪೆನಿಯ ಸಾಧಾರಣ ಅಂದರ ಮಹಾಸಭೆ.

74. ಈ ರೆಗ್ಯುಲೇಷನಿಗನುಗುಣವಾದ ಪ್ರತಿ ಕಂಪೆನಿಯ ಮಹಾಸಭೆಯು ಕನಿಷ್ಠ ಪಕ್ಷ ಸಂವತ್ಸರಕ್ಕೆ ಒಂದಾವರ್ತಿ ಸೇರತಕ್ಕದ್ದು.

ಬ್ಯಾಲೆನ್ಸ ಷೀಟ ಅಂದರ ಬಾಕಿ ಪಟ್ಟಿ.

ಕಂಪೆನಿಯು ರಿಜಿಸ್ಟರಾದ ಹನ್ನೆರಡು ತಿಂಗಳುಗಳ ಒಳಗಾಗಿ ಒಂದು ಬ್ಯಾಲೆನ್ಸ ಷೀಟನ್ನು ಅಂದರೆ ಖಾತಾ ಬಾಕಿ ಪಟ್ಟಿಯನ್ನು ತಯಾರ್ಮಾಡಿ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರವರ ಬಳಿ ಫೈಲಿಗೆ ದಾಖಲ್ಮಾಡತಕ್ಕದ್ದು. ಆ ಮೇಲೆ ಬ್ಯಾಲೆನ್ಸ ಷೀಟು ದಾಖಲಾದ ತಾರೀಖಿನಿಂದ ಹನ್ನೆರಡು ತಿಂಗಳುಗಳ ಒಳಗಾಗಿ ವರುಷಕ್ಕೆ ಕನಿಷ್ಠ ಪಕ್ಷ ಒಂದುಸಲ ಸದರಿ ಪಟ್ಟಿಯನ್ನು ತಯಾರ್ಮಾಡಿ ಸದರಿ ರಿಜಿಸ್ಟ್ರಾರಬಳಿ ದಾಖಲ್ಮಾಡತಕ್ಕದ್ದು; ಸದರಿ ಬಾಕಿ ಪಟ್ಟಿಯು ಕಂಪೆನಿಯ ಸ್ವತ್ತಿನ ವ ದಿಲ್ಲಂಫಗಳ ಗೋಷ್ವಾರೆಯು ಇದರ ಮೊದಲನೇ ಷೆಡ್ಯೂಲ್ ಪಟ್ಟಿಯಲ್ಲಿನ A ಗುರ್ತು ಜಂತ್ರಿಗೆ ಸೇರಿಸಲ್ಪಟ್ಟಿರುವ ನಮೂನೆಯಲ್ಲಿ ಕಾಣುವ ಶಿರಸ್ಸುಗಳನ್ನುಳ್ಳದ್ದಾಗಿಯಾಗಲಿ, ಅಥವಾ ಸಂದರ್ಭಾನುಸಾರವಾಗಿ ಕೂಡಿದಮಟ್ಟಿಗೆ ಅದರ ಪ್ರಕಾರವಾಗಲಿ ತಯಾರ್ಮಾಡಲ್ಪಟ್ಟ ಕಂಪೆನಿಯ ಸ್ವತ್ತಿನ ವ ದಿಲ್ಲಂಫಗಳ ಗೋಷ್ವಾರೆಯನ್ನು ಅಡಗಿಸಿಕೊಂಡು ಇರತಕ್ಕದ್ದು.

ಲೆಕ್ಕದ ತನಿಖೆ.

ಮತ್ತು ಕನಿಷ್ಠಪಕ್ಷ ವರ್ಷಕ್ಕೊಂದಾವರ್ತಿ ಒಬ್ಬ ಆಡಿಟರಿಂದ ಅಂದರೆ ತನಿಖೇದಾರನಿಂದ ಯಾ ಹೆಚ್ಚು ಮಂದಿ ಆಡಿಟರರಿಂದ ಕಂಪೆನಿಯಲೆಕ್ಕಗಳು ಅಜಮಾಯಿಷಿ ಮಾಡಲ್ಪಟ್ಟು ಬಾಕೀಪಟ್ಟಿಯ ವಾಸ್ತವ್ಯತೆಯೂ ವ ಅದರ ಕಾನೂನಿನ ಅನುಗುಣ್ಯತೆಯೂ ನಿಶ್ಚಯಿಸಲ್ಪಟ್ಟು ಸರ್ಟಿಫೈ ಆಗಬೇಕು.

ಯಾವ ಬ್ಯಾಲೆನ್ಸ ಷೀಟಾಗಲಿ ಅದರ ಯಾಥಾರ್ಥ್ಯವೂ ವ ಕಾನೂನಿಗನುಸರಣೆಯೂ ಗೊತ್ತಾಗಿ ಸರ್ಟಿಫೈಯಾಗಿ ಸದರಿ ಷೀಟು ಜನರಲ ಮೀಟಿಂಗಿನಲ್ಲಿ ಇಷ್ಟೋಣಾಗಿ ಕಂಪೆನಿಯಿಂದ ಅಂಗೀಕಾರವಾದರೇನೇ ಹೊರ್ತು ಯಾ ಹಾಗೆ ಆಗುವವರಿಗೆ ರಿಜಿಸ್ಟ್ರಾರ ಬಳಿ ದಾಖಲೆಬಗ್ಯೆ ಕಳುಹಿಸಲ್ಪಡಕೂಡದು.

ಈ ಪ್ರಕರಣದ ಯಾವ ನಿಬಂಧನೆಗಳಿಗನುಸಾರವಾಗಿಯಾದರೂ ನಡಿಯದೇ ತಪ್ಪಿದರೆ, ಹಾಗೆ ತಪ್ಪಿ ನಡಿಯಲಿಕ್ಕೆ ತಿಳಿದಿದ್ದೂ ಮನಃಪೂರ್ವಕವಾಗಿ ಅಧಿಕಾರ ಕೊಡುವ ಯಾ ಅಪ್ಪಣೆ ಕೊಡುವ ಕಂಪೆನಿಯ ಪ್ರತಿ ಡೈರೆಕ್ಟರೂ ವ ಮಾನೇಜರೂ ಸಾವಿರ ರೂಪಾಯಿಗಳ ಜುರ್ಮಾನೆಗೆ ಗುರಿಯಾಗತಕ್ಕದ್ದು.

Meetings.

ಮೀಟಿಂಗುಗಳು.

ಕಂಪೆನಿಯವರು ರಿಜಿಸ್ಟರಾದ ಆರು ತಿಂಗಳೊಳಗಾಗಿ ಮೀಟಿಂಗ್ ಸೇರಬೇಕು.

75. ಈ ರೆಗ್ಯುಲೇಷನ್ಸ ಜಾರಿಗೆ ಬಂದ ತರುವಾಯ ಈ ರೆಗ್ಯುಲೇಷನಿಗನುಗುಣವಾಗಿ ನಿ[illegible] ಪ್ರತಿ ಕಂಪೆನಿಯವರೂ ತಮ್ಮ ಸಮಾಜದ ಯಾದಾಸ್ತು ರಿಜಿ[illegible] ತಿಂಗಳೊಳಗಾಗಿ ಒಂದು ಜನರಲ್ ಮೀಟಿಂಗ್ ಅಂದರೆ ಒಂದು ಮಹಾ ಸಭೆಯನ್ನು ಸೇರಿಸತಕ್ಕದ್ದು; ಮತ್ತು ಅಂತಾ ಮೀಟಿಂಗನ್ನು ಸೇರಿಸದೇ ಹೋದರೆ, ಆ ಆರುತಿಂಗಳು ಕಳೆದಮೇಲೆ, ಅಂತಾ ಮೀಟಿಂಗನ್ನು ಸೇರಿಸುವವರಿವಿಗೂ ದಿನ ಒಂದಕ್ಕೆ ಐವತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಸದರಿ ಕಂಪೆನಿಯವರು ಗುರಿಯಾಗತಕ್ಕದ್ದು; ಮತ್ತು ತಿಳಿದಿದ್ದೂ ಮನಃಪೂರ್ವಕವಾಗಿ ಹಾಗೆ ತಪ್ಪಿ ನಡಿಯುವದಕ್ಕೆ ಅಧಿಕಾರ ಕೊಡುವ ಯಾ ಅಪ್ಪಣೆ ಕೊಡುವ ಕಂಪೆನಿಯ ಪ್ರತಿ ಡೈರೆಕ್ಟರೂ ಯಾ ಮಾನೇಜರೂ ಮತ್ತು ಸಮಾಜದ ಯಾದಾಸ್ತಿಗೆ ದಸ್ತಕತ್ತು ಹಾಕಿರುವ ಪ್ರತಿಮನುಷ್ಯನೂ ಅ[illegible] ಜುರ್ಮಾನೆಗೆ ಗುರಿಯಾಗತಕ್ಕದ್ದು.

ಸ್ಪೆಷಲ್ ರೆಜಲ್ಯೂಷನ್ ಅಂದರೆ ವಿಶೇಷ ನಿರ್ಣಯದಿಂದ ನಿಬಂಧನೆಗಳನ್ನು ತಿದ್ದಲಿಕ್ಕೆ ಅಧಿಕಾರ.

76. ಈ ರೆಗ್ಯುಲೇಷನ್ ಪ್ರಕಾರ ಯಾ 1866ನೇ ಇಸವಿ ಇಂಡಿಯನ್ ಕಂಪೆನೀಸ್ ಆಕ್ಟಿನ ಪ್ರಕಾರ ಏರ್ಪಾಡಾದ ಯಾವ ಕಂಪೆನಿಯಾದರೂ ಈ ರೆಗ್ಯುಲೇಷನಿನ ನಿಬಂಧನೆಗಳಿಗೂ ವ ಸಮಾಜದ ಯಾದಾಸ್ತಿನ ಷರತ್ತುಗಳಿಗೂ ಒಳಪಟ್ಟು ಮಹಾ ಸಭೆಯಲ್ಲಿ, ಆಗಿಂದಾಗ್ಯೆ, ಇನ್ನುಮೇಲೆ ನಮೂದಿಸೋಣಾಗುವ ರೀತಿಯಾಗಿ ವಿಶೇಷ ನಿರ್ಣಯಗಳನ್ನು ಮಾಡಿ, ತದ್ವಾರಾ, ಸಮಾಜದ ನಿಬಂಧನೆಗಳಲ್ಲಿರತಕ್ಕ ಅಥವಾ ಮೊದಲನೇ ಷೆಡ್ಯೂಲ್‌ಪಟ್ಟಿಯ A ಗುರ್ತು ಜಂತ್ರಿ ಕಂಪೆನಿಗೆ ಲಾಗಾವಾಗುವದಾದರೆ ಅಂತಾ ಜಂತ್ರಿಯಲ್ಲಿರತಕ್ಕ ಕಂಪೆನಿಯ ಸಮಸ್ತ ನಿಬಂಧನೆಗಳನ್ನಾದರೂ ಯಾ ಯಾವ ನಿಬಂಧನೆಯನ್ನಾದರೂ ಬದಲಾಯಿಸಬಹುದು, ಅಥವಾ ಕಂಪೆನಿಯ ಸಮಸ್ತ ನಿಬಂಧನೆಗಳಿಗಾದರೂ ಯಾ ಯಾವ ನಿಬಂಧನೆಗಳಿಗಾದರೂ ಬದಲಾಗಿ ಯಾ ಹೆಚ್ಚಾಗಿ ಹೊಸ ನಿಬಂಧನೆಗಳನ್ನು ಮಾಡಬಹುದು.

ಹಾಗೆ ವಿಶೇಷ ನಿರ್ಣಯದಿಂದ ಮಾಡೋಣಾದ ಯಾವ ನಿಬಂಧನೆಗಳಾದರೂ ಸಮಾಜದ ನಿಬಂಧನೆಗಳಲ್ಲಿ ಪ್ರಥಮತಃ ಸೇರಿ ಇದ್ದರೆ ಹ್ಯಾಗೋ ಹಾಗೆ ಅಷ್ಟು ಬಲೀಯವಾದವುಗಳಾಗಿ ಕಂಪೆನಿಯ ನಿಬಂಧನೆಗಳೆಂದು ಗ್ರಹಿಸಲ್ಪಡತಕ್ಕದ್ದು, ಮತ್ತು ಆ ತರುವಾಯ ಮಾಡೋಣಾಗುವ ಯಾವ ವಿಶೇಷ ನಿರ್ಣಯದಿಂದಲಾದರೂ ಅದೇ ರೀತಿಯಾಗಿ ಬದಲಾಯಿಸಲ್ಪಡಲಿಕ್ಕೆ ಯಾ ತಿದ್ದಲ್ಪಡಲಿಕ್ಕೆ ಒಳಪಟ್ಟಿರತಕ್ಕದ್ದು.

ಡೈರೆಕ್ಟರರ ಜವಾಬ್ದಾರಿಯನ್ನು ಪಡಿಸುವದಕ್ಕೆ ಅಧಿಕಾರ.

ಈ ರೆಗ್ಯುಲೇಷನಿಗನುಗುಣವಾ[illegible] ಯಾ 1866ನೇ ಇಸವಿ ಇಂಡಿಯನ್ ಕಂಪೆನೀಸ್ ಆಕ್ಟಿಗನುಗುಣವಾ[illegible]ಗಲಿ ಏರ್ಪಾಡಾದ ಕ್ಲಿಪ್ತ ಪಡಿಸಲ್ಪಟ್ಟ ಯಾವ ಕಂಪೆನಿಯವರಾಗಲಿ ಒಂದು ವಿಶೇಷ ನಿರ್ಣಯ ಮಾಡಿ ತದ್ವಾರಾ ಇಂತಾ ನಿರ್ಣಯದ ತಾರೀಖಿನಿಂದ ಮತ್ತು ಆ ತರುವಾಯ ತಮ್ಮ ಡೈರೆಕ್ಟರ ಯಾ ಮಾನೇಜರ ಯಾ ಮ್ಯಾನೇಜಿಂಗ ಡೈರೆಕ್ಟರ ಜವಾಬ್ದಾರಿಯನ್ನು ಅಕ್ಲಿಪ್ತ ಪಡಿಸುವಷ್ಟರ ಮಟ್ಟಿಗೆ ತಮ್ಮ ಸಮಾಜದ ಯಾದಾಸ್ತಿನಲ್ಲಿ ಇರುವ ಷರತ್ತುಗಳನ್ನು ಆಗಿಂದಾಗ್ಯೆ ದುರಸ್ತು ಮಾಡಬಹುದು. ಆದರೆ ಹೀಗೆ ಮಾಡುವದಕ್ಕೆ ಮೊದಲೇ

ನಿರ್ಣಯವಾದ ಅಥವಾ ವಿಶೇಷ ನಿರ್ಣಯದಿಂದ ತಿದ್ದಲ್ಪಟ್ಟ ತನ್ನ ನಿಬಂಧನೆಗಳಿಂದ ಅಧಿಕಾರ ಹೊಂದಿರಬೇಕು. ಸದರಿ ಜವಾಬ್ದಾರಿಯನ್ನು ಕುರಿತ ವಿಶೇಷ ನಿರ್ಣಯಕ್ಕೆ ಇದು ಮೊದಲೇ ಸಮಾಜದ ಯಾದಾಸ್ತಿನಲ್ಲಿ ಇದ್ದರೆ ಎಷ್ಟು ಸಲುವಳಿಯುಳ್ಳದ್ದಾಗಿರುವದೋ ಅಷ್ಟು ಸಲುವಳಿಯುಳ್ಳದ್ದಾಗಿರತಕ್ಕದ್ದು. ಮತ್ತು ಇದರ ನಕಲನ್ನು ಸದರಿ ನಿರ್ಣಯವಾದ ತರುವಾಯ ಹೊರಗೆ ಬರುವ ಸಮಾಜದ ಯಾದಾಸ್ತಿನ ಪ್ರತಿ ನಕಲಿನ ಸಂಗಡ ಸೇರಿಸಲ್ಪಡತಕ್ಕದ್ದು ಯಾ ಅದರಲ್ಲಿ ಮಿಳಿತ ಮಾಡಲ್ಪಡತಕ್ಕದ್ದು.

ಸ್ಪೆಷಲ್ ರಜಲ್ಯೂಷನ್ ಅಂದರೆ ವಿಶೇಷ ನಿರ್ಣಯದ ಅರ್ಥ ವಿವರಣೆ.

77. ಈ ರೆಗ್ಯುಲೇಷನಿಗನುಗುಣವಾಗಿ ಒಂದು ಕಂಪೆನಿಯಿಂದ ಮಾಡೋಣಾದ ನಿರ್ಣಯವು ಮಹಾಸಭೆಯಲ್ಲಿ ಕಂಪೆನಿಯ ನಿಬಂಧನೆಗಳ ಪ್ರಕಾರ ಖುದ್ದಾಗಿಯಾಗಲಿ (ಕಂಪೆನಿಯ ನಿಬಂಧನೆಗಳ ಪ್ರಕಾರ ಅಧಿಕಾರ ಪತ್ರಗಳು ಮಂಜೂರಾಗುವ ಸಂಗತಿಯಲ್ಲಿ) ಅಧಿಕಾರ ಪತ್ರಗಳ ಮೂಲಕವಾಗಿಯಾಗಲಿ ವಾಕ್ಕುಗಳನ್ನು ಕೊಡಲಿಕ್ಕೆ ತತ್ಕಾಲದಲ್ಲಿ ಅರ್ಹರಾಗಿರುವಂತಾ ಕಂಪೆನಿಯ ಮೆಂಬರುಗಳ ಪೈಕಿ ಮುಕ್ಕಾಲುವಾಸಿಗಿಂತ ಕಮ್ಮಿ ಇಲ್ಲದಷ್ಟು ಮಂದಿಯ ಬಹುವಾಕ್ಕಿನಿಂದ ಯಾವಾಗಲಾದರೂ ನಿರ್ಣಯ ಮಾಡಲ್ಪಟ್ಟರೆ ಅದು ವಿಶೇಷ ನಿರ್ಣಯವೆಂದು ಗ್ರಹಿಸಲ್ಪಡತಕ್ಕದ್ದು. ಆ ಸಾಧಾರಣ ಸಭೆಯನ್ನು ಇಂತಾ ನಿರ್ಣಯವನ್ನು ಮಾಡುವ ಯೋಚನೆಯಿಂದ ಸೇರಿಸೋಣಾಗುತ್ತಿದು ಕ್ರಮಪ್ರಕಾರ ನೋಟಿಸು ಕೊಡಲ್ಪಟ್ಟರಬೇಕು. ಮತ್ತು ಸಭೆ ಸೇರಿ ಸದರಿ ನಿರ್ಣಯ ಮಾಡಲ್ಪಟ್ಟ ತಾರೀಖು ಲಾಗಾಯಿತು ಹದಿನಾಲ್ಕು ದಿವಸಗಳಿಗೆ ಕಮ್ಮಿಯಾಗದ, ಒಂದು ತಿಂಗಳಿಗೆ ಮೀರದ ವಾಯಿದೆಯ ತರುವಾಯ ಕ್ರಮ ಪ್ರಕಾರ ಕೊಡಲ್ಪಟ್ಟ ನೋಟೀಸಿನಿಂದ ಸೇರೋಣಾಗುವ ಸಾಧಾರಣ ಸಭೆಯಲ್ಲಿ ಕಂಪೆನಿಯ ನಿಬಂಧನೆಗಳ ಪ್ರಕಾರ, ಖುದ್ದಾಗಿ ಯಾಗಲಿ, ಅಧಿಕಾರಪತ್ರಗಳ ಮೂಲಕವಾಗಿಯಾಗಲಿ ವಾಕ್ಕುಗಳನ್ನು ಕೊಡಲಿಕ್ಕೆ ತತ್ಕಾಲದಲ್ಲಿ ಅರ್ಹರಾಗಿರುವಂತಾ ಮೆಂಬರುಗಳ ಬಹುವಾಕ್ಕಿನಿಂದ ಸದರಿ ನಿರ್ಣಯವು ಖಾಯಂ ಮಾಡಲ್ಪಡಬೇಕು.

ಈ ಪ್ರಕರಣದಲ್ಲಿ ನಮೂದಿಸಿರುವ ಯಾವ ಸಭೆಯಲ್ಲಾದರೂ, ಕನಿಷ್ಠ ಪಕ್ಷ ಐದುಮಂದಿ ಮೆಂಬರುಗಳು ಪೋಲಯಾನೆ ಅಭಿಪ್ರಾಯವನ್ನು ಕೇಳಬೇಕೆಂದು ಅಪೇಕ್ಷಿಸದಿದ್ದರೆ, ಅದರ ಪಕ್ಷವಾಗಿ ಯಾ ಅದಕ್ಕೆ ವಿರೋಧವಾಗಿ ದಾಖಲಾದ ವಾಕ್ಕುಗಳ ಸಂಖ್ಯೆಯ ಯಾ ಪರಿಮಾಣದ ಅಜಮಾಯಿಷಿ ಇಲ್ಲದೇನೇ, ನಿರ್ಣಯ ಮಂಜೂರಾಯಿತೆಂಬ ಸಭಾನಾಯಕನ ಹೇಳಿಕೆಯು ಆ ವಿಷಯದಲ್ಲಿ ಅಖೈರಾದ ಸಾಕ್ಷ್ಯವಾಗಿರತಕ್ಕದ್ದು.

ಕಂಪೆನಿಯ ನಿಬಂಧನೆಗಳಿಂದ ನಿರ್ದೇಶಿಸಲ್ಪಟ್ಟಿರುವ ರೀತಿಯಂತೆ ನೋಟೀಸು ಕೊಡೋಣಾಗಿ ಸಭೆ ಸೇರೋಣಾದರೆ ಈ ಪ್ರಕರಣದ ಕಾರ್ಯಗಳಿಗೋಸ್ಕರ ಕ್ರಮಪ್ರಕಾರ ನೋಟೀಸು ಕೊಡೋಣಾದಂತೆಯೂ ಕ್ರಮ ಪ್ರಕಾರ ಸಭೆ ಸೇರಿದಂತೆಯೂ ಗ್ರಹಿಸಲ್ಪಡತಕ್ಕದ್ದು.

ಪೋಲ್ ಎಂಬ ಅಭಿಪ್ರಾಯ ಕೇಳಲ್ಪಟ್ಟಾಗ. ಈ ಪ್ರಕರಣದ ಪ್ರಕಾರ ಮೆಜಾರಿಟಿಯಾನೆ ಬಹು ಭಾಗದ ವಾಕ್ಕುಗಳನ್ನು ಲೆಕ್ಕ ಮಾಡುವಲ್ಲಿ, ಕಂಪೆನಿಯ ನಿಬಂಧನೆಗಳ ಪ್ರಕಾರ ಒಬ್ಬೊಬ್ಬ ಮೆಂಬರು ಎಷ್ಟೆಷ್ಟು ವಾಕ್ಕುಗಳನ್ನು ನುಡಿಯಲಿಕ್ಕೆ ಅರ್ಹನಾಗಿದ್ದಾನೋ ಆ ಸಂಖ್ಯೆಗೆ ದಾಖಲೆ ನೋಡತಕ್ಕದ್ದು.

ಸಭೆ ಸೇರುವ ವಿಷಯದಲ್ಲಿ ನಿಬಂಧನೆಗಳು ಇಲ್ಲದೇ ಇದ್ದರೆ ವಿಧಿ.

78. ವಾಕ್ಕು ನುಡಿಯುವ ವಿಷಯದಲ್ಲಿ ನಿಬಂಧನೆಗಳೇನೂ ಇಲ್ಲದಿದ್ದರೆ, ಒಬ್ಬೊಬ್ಬ ಮೆಂಬರು ಒಂದೊಂದು ವಾಕ್ಕು ನುಡಿಯತಕ್ಕದ್ದು. ಮತ್ತು ಮಹಾ ಸಭೆಗಳನ್ನು ಕೂಡಿಸುವ ವಿಷಯದಲ್ಲಿ ನಿಬಂಧನೆಗಳೇನೂ ಇಲ್ಲದಿದ್ದರೆ, ಇದಕ್ಕೆ ಸೇರಿಸಲ್ಪಟ್ಟಿರುವ ಮೊದಲನೇ ಷೆಡ್ಯೂಲ್‌ಪಟ್ಟಿಯಲ್ಲಿನ A ಗುರ್ತು ಜಂತ್ರಿಯಲ್ಲಿ ಹ್ಯಾಗೆ ಇದೆಯೋ ಅದೇ ರೀತಿಯಾಗಿ ಏಳು ದಿವಸಗಳ ನೋಟೀಸು ಲಿಖಿತರೂಪವಾಗಿ ಕೊಡಲ್ಪಟ್ಟು, ಪ್ರತಿ ಮೆಂಬರಿಗೆ ಜಾರಿಮಾಡಲ್ಪಟ್ಟ ಮೇಲೆ ಸೇರುವ ಸಭೆಯು ಕ್ರಮ ಪ್ರಕಾರ ಕೂಡಿಸಲ್ಪಟ್ಟದ್ದೆಂದು ಗ್ರಹಿಸಲ್ಪಡತಕ್ಕದ್ದು.

ಸಭೆಗಳನ್ನು ಫಲಾನೇ ಮನುಷ್ಯರು ಕೂಡಿಸಬೇಕೆಂಬ ವಿಷಯದಲ್ಲಿ ನಿಬಂಧನೆಗಳೇನೂ ಇಲ್ಲದಿದ್ದರೆ, ಐದುಮಂದಿ ಮೆಂಬರುಗಳು ಸಭಿಕರನ್ನು ಕರಸಲಿಕ್ಕೆ ಅರ್ಹರಾಗಿರತಕ್ಕದ್ದು. ಮತ್ತು ಅಂತಾ ಸಭೆಯಲ್ಲಿ ಫಲಾನೆಯವನು ಸಭಾನಾಯಕನಾಗಿರಬೇಕೆಂಬ ವಿಷಯದಲ್ಲಿ ನಿಬಂಧನೆಗಳೇನೂ ಇಲ್ಲದಿದ್ದರೆ, ಹಾಜರಾಗಿರುವ ಮೆಂಬರುಗಳು ಯಾರನ್ನು ನೇಮಕ ಮಾಡುತ್ತಾರೋ ಆತನು ಅಗ್ರಾಸನಾಧಿಪತ್ಯವನ್ನು ವಹಿಸಲಿಕ್ಕೆ ಅರ್ಹನಾಗಿರತಕ್ಕದ್ದು.

79. ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯವರಿಂದಲಾದರೂ ಮಾಡೋಣಾದ ಪ್ರತಿ ವಿಶೇಷ ನಿರ್ಣಯದ ನಕಲು ಛಾಪಿಸಲ್ಪಟ್ಟು ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರವರ ಬಳಿಗೆ ಕಳುಹಿಸಲ್ಪಡತಕ್ಕದ್ದು. ಅತನದನ್ನು ಬರೆದಿಟ್ಟುಕೊಳ್ಳತಕ್ಕದ್ದು.

ವಿಶೇಷ ನಿರ್ಣಯಗಳನ್ನು ರಿಜಿಸ್ಟರು ಮಾಡ ಲ್ಪಡೋಣ.

ಆ ನಿರ್ಣಯವು ಖಾಯಂ ಮಾಡಲ್ಪಟ್ಟ ತಾರೀಖು ಮೊದಲು ಹದಿನೈದು ದಿವಸಗಳೊಳಗಾಗಿ ಅಂತಾ ನಕಲು ಹಾಗೆ ಕಳುಹಿಸಲ್ಪಡದೆ ಹೋದರೆ, ಸದರಿ ಕಂಪೆನಿಯು ಸದರಿ ಹದಿನೈದು ದಿವಸಗಳು ಕಳೆದುಹೋದ ತರುವಾಯ ಎಷ್ಟು ದಿವಸಗಳವರೆಗೆ ಅಂತಾ ನಕಲು ಕಳುಹಿಸಲ್ಪಡದೆ ಇರುತ್ತದೋ ಅಷ್ಟು ದಿವಸಗಳ ವರೆಗೆ ದಿನ ಒಂದಕ್ಕೆ ಇಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು; ಮತ್ತು ಹಾಗೆ ಕಳುಹಿಸದೆ ತಪ್ಪಲಿಕ್ಕೆ ತಿಳಿದಿದ್ದೂ ಮನಃಪೂರ್ವಕವಾಗಿ ಅಧಿಕಾರ ಕೊಡುವ ಯಾ ಅಪ್ಪಣೆ ಕೊಡುವ ಕಂಪೆನಿಯ ಪ್ರತಿ ಡೈರೆಕ್ಟರೂ ವ ಮಾನೇಜರೂ ಬದಸ್ತೂರ ಜುರ್ಮಾನೆಗೆ ಗುರಿಯಾಗತಕ್ಕದ್ದು.

80. ಸಮಾಜದ ನಿಬಂಧನೆಗಳು ರಿಜಿಸ್ಟರ್ಮಾಡಲ್ಪಟ್ಟಿದ್ದಲ್ಲಿ, ತತ್ಕಾಲದಲ್ಲಿ ಜಾರೀಲಿರುವ ಪ್ರತಿ ವಿಶೇಷ ನಿರ್ಣಯದ ಒಂದು ನಕಲು ಅಂತಾ ವಿಶೇಷ ನಿರ್ಣಯ ಮಾಡಲ್ಪಟ್ಟ ತರುವಾಯ ಹುಟ್ಟಿದ ಸಮಾಜದ ನಿಬಂಧನೆಗಳ ಪ್ರತಿ ನಕಲಿನೊಂದಿಗೆ ಸೇರಿಸಲ್ಪಡತಕ್ಕದ್ದು, ಯಾ ಅದರಲ್ಲಿ ಮಿಳಿತ ಮಾಡಲ್ಪಡತಕ್ಕದ್ದು. ಸಮಾಜದ ನಿಬಂಧನೆಗಳು ರಿಜಿಸ್ಟರ್ಮಾಡಲ್ಪಡದೆ ಇದ್ದಲ್ಲಿ, ಪ್ರತಿ ವಿಶೇಷ ನಿರ್ಣಯದ ಒಂದು ನಕಲು ಛಾಪಿಸಲ್ಪಟ್ಟು ಒಂದು ರೂಪಾಯಿಯನ್ನು ಯಾ ಕಂಪೆನಿಯವರು ಅಪ್ಪಣೆ ಮಾಡಬಹುದಾದ ಅದಕ್ಕಿಂತ ಕಮ್ಮಿ ಮೊಬಲಗನ್ನು ಕೊಟ್ಟು ಯಾವನು ಅಪೇಕ್ಷಿಸುತ್ತಾನೋ ಅಂತಾ ಯಾವ ಮೆಂಬರಿಗಾದರೂ ಕಳುಹಿಸಲ್ಪಡತಕ್ಕದ್ದು.

ಸಮಾಜದ ನಿಬಂಧನೆಗಳಲ್ಲಿ ಸೇರಿಸಪೇಕಾದ ವಿಶೇಷ ನಿರ್ಣಯಗಳ ನಕಲುಗಳು.

ಈ ಪ್ರಕರಣದ ಯಾ ಎಪ್ಪತ್ತಾರನೇ ಪ್ರಕರಣದ ನಿಬಂಧನೆಗಳಿಗನುಸಾರವಾಗಿ ನಡೆಯಲಿಕ್ಕೆ ಯಾವ ಕಂಪೆನಿಯಾದರೂ ತಪ್ಪಿದರೆ, ಹಾಗೆ ತಪ್ಪುವ ಪ್ರತಿ ನಕಲಿನ ವಿಷಯಕ್ಕೂ ಇಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು; ಮತ್ತು ಹಾಗೆ ತಪ್ಪಲಿಕ್ಕೆ ತಿಳಿದಿದ್ದೂ ಮನಃಪೂರ್ವಕವಾಗಿ ಅಧಿಕಾರ ಕೊಡುವ ಯಾ ಅಪ್ಪಣೆ ಕೊಡುವ ಪ್ರತಿ ಕಂಪೆನಿಯ ಡೈರೆಕ್ಟರೂ ವ ಮಾನೇಜರೂ ಬದಸ್ತೂರ ಜುರ್ಮಾನೆಗೆ ಗುರಿಯಾಗತಕ್ಕದ್ದು.

81. ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಾದರೂ ಸಾಮಾನ್ಯವಾದ ಅಥವಾ ವಿಶೇಷವಾದ ವಿಷಯಗಳಲ್ಲಿ ಸದರಿ ಕಂಪೆನಿಯ ಅಟರ್ನಿಯನ್ನಾಗಿಮಾಡಿಕೊಂಡು, ಮೈಸೂರು ಶೀಮೆಯೊಳಗೆ ಇಲ್ಲದಂತಾ ಯಾವ ಸ್ಥಳದಲ್ಲಾದರೂ ಅದರ ತರಫಿನಲ್ಲಿ ದಸ್ತಾವೇಜುಗಳನ್ನು ಬರೆದುಕೊಡುವಂತೆ, ಯಾವ ಮನುಷ್ಯನನ್ನಾದರೂ ಅದರ ಮುದ್ರಿಗೆದ ಮೊಹರು ಹಾಕಲ್ಪಟ್ಟ ಲಿಖಿತ ರೂಪವಾದ ಸಾಧನದ ಮೂಲವಾಗಿ, ಅಧಿಕಾರ ಕೊಡಬಹುದು; ಮತ್ತು ಆ ಕಂಪೆನಿಯ ತರಫಿನಲ್ಲಿ ಅಂತಾ ಅಟರ್ನಿಯಿಂದ ಅವನ ಮೊಹರು ಹಾಕಿ ಬರೆದುಕೊಡೋಣಾದ ಪ್ರತಿ ದಸ್ತಾವೇಜು ಸದರಿ ಕಂಪೆನಿಯ ಮುದ್ರಿಗೆದ ಮೊಹರಿನಿಂ ಬರೆದುಕೊಡೋಣಾದರೆ ಹ್ಯಾಗೋ ಹಾಗೆ ಅದೇ ಪ್ರಯೋಜನವನ್ನುಳ್ಳದ್ದಾಗಿ ಸದರಿ ಕಂಪೆನಿಗೆ ಬದ್ಧವಾಗಿರತಕ್ಕದ್ದು.

ಹೊರದೇಶಗಳಲ್ಲಿ ಪತ್ರಗಳನ್ನು ಬರೆದುಕೊಡೋಣ.

82. ಈ ರೆಗ್ಯುಲೇಷನಿಗನುಗುಣವಾದ ಯಾವದಾದರೂ ಕಂಪೆನಿಯ ಆಡಳಿತವನ್ನು ಪರಿಶೋಧಿಸಿ ಮಾಡುವದಕ್ಕೂ ವ ಈ ಕೆಳಗಿನಪ್ರಕಾರ ಅರ್ಜಿಗಳು ಬರೆದುಕೊಳ್ಳಲ್ಪಟ್ಟಲ್ಲಿ ಆ ವಿಷಯವನ್ನು ಕುರಿತು ಮೈಸೂರ ಗವರ್ನಮೆಂಟಿನವರು ಹುಕುಂ ಮಾಡುವ ರೀತಿಯಾಗಿ ರಿಪೋರ್ಟ ಮಾಡುವದಕ್ಕೂ ಒಬ್ಬ ಯಾ ಹೆಚ್ಚು ಮಂದಿ ಯೋಗ್ಯರಾದ ಇನ್ಸ್ಪೆಕ್ಟರುಗಳನ್ನು ಸದರಿ ಗವರ್ನಮೆಂಟಿನವರು ನೇಮಕಮಾಡಬಹುದು; (ಯಾವವೆಂದರೆ)

ಕಂಪೆನಿಯ ಆಡಳಿತಗಳು ಇನ್ಸ್ಪೆಕ್ಟರುಗಳಿಂದ ಪರೀಕ್ಷಿಸಲ್ಪಡೋಣ.

(a) ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳ ಬ್ಯಾಂಕಿಂಗ್ ಯಾ ಇತರ ಯಾವ ಕಂಪೆನಿಯ ವಿಷದಲ್ಲಿ, ತತ್ಕಾಲದಲ್ಲಿ ಇಷ್ಯೂ ಮಾಡಲ್ಪಟ್ಟಿರುವ ಕಂಪೆನಿಯ ಪೂರಾ ಹಿಸ್ಸೆಗಳ ಪೈಕಿ ಐದರಲ್ಲಿ ಒಂದು ಪಾಲಿಗಿಂತ ಕಮ್ಮಿ ಇಲ್ಲದಷ್ಟು ಹಿಸ್ಸೆಗಳನ್ನು ಪಡಕೊಂಡಿರುವ ಮೆಂಬರುಗಳಿಂದ ಅರ್ಜಿ ಬರೆದುಕೊಳ್ಳಲ್ಪಟ್ಟಲ್ಲಿ:

(b) ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವಿಲ್ಲದ ಯಾವ ಕಂಪೆನಿಯ ಸಂಗತಿಯಲ್ಲಾದರೂ, ತತ್ಕಾಲದಲ್ಲಿ ಮೆಂಬರುಗಳೆಂದು ಕಂಪೆನಿಯ ರಿಜಿಸ್ಟರಿನಲ್ಲಿ ದಾಖಲಾಗಿರುವ ಎಲ್ಲಾ ಮನುಷ್ಯರ ಪೈಕಿ ಐದರಲ್ಲಿ ಒಂದು ಪಾಲಿಗೆ ಕಮ್ಮಿ ಇಲ್ಲದಷ್ಟು ಮಂದಿ ಮೆಂಬರುಗಳಿಂದ ಅರ್ಜಿ ಬರೆದುಕೊಳ್ಳಲ್ಪಟ್ಟಲ್ಲಿ:

83. ಅಂತಾ ದರ್ಖಾಸ್ತಿ ... ಮನವಿ ... ಬೇಕು.

...ನ್ನು ಮಾಡಬೇಕೆಂದು ಅಪೇಕ್ಷಿಸಲಿಕ್ಕೆ ಅರ್ಜಿದಾರರು ಸಾಕಾದ ಸಬಬುಳ್ಳವರಾಗಿದ್ದಾರೆಂತಲೂ, ಮತ್ತು ಕ್ರೋಧಾಭಿಪ್ರಾಯಗಳಿಂದ ಪ್ರೇರೇಪಿಸಲ್ಪಟ್ಟವರಲ್ಲವೆಂತಲೂ, ವ್ಯಕ್ತಪಡಿಸುವದಕ್ಕಾಗಿ ಮೈಸೂರ ಗವರ್ನಮೆಂಟಿನವರು ಅಪೇಕ್ಷಿಸುವಂತಾ ಸಾಕ್ಷ್ಯದಿಂದ ಸದರಿ ಅರ್ಜಿಯು ಆದರಿಸಲ್ಪಟ್ಟಿರಬೇಕು.

ಪರಿಶೋಧನೆಬಗ್ಗೆ ವಚ್ಚ ... ಯ ಸಾಕ್ಷ್ಯದಿಂದ ...

...ಕ್ಟರನ್ನಾಗಲಿ, ಯಾ ಇನ್ಸ್ಪೆಕ್ಟರುಗಳನ್ನಾಗಲಿ ಮೊಕರರ್ಮಾಡುವದಕ್ಕೆ ಮುಂಚಿತವಾಗಿ ...ಖರ್ಚುಗಳ ಪಾವತಿ ಬಗ್ಗೆ ಅರ್ಜಿದಾರರು ಜಾಮೀನ್ ಕೊಡಬೇಕೆಂದು ಸಹ ಮೈಸೂರ ಗವ... ಅಪೇಕ್ಷಿಸಬಹುದು.

...ಗಳ ಪರಿಶೋಧನೆ.

...ಇನ್ಸ್ಪೆಕ್ಟರುಗಳ ಪರಿಶೋಧನೆಬಗ್ಗೆ ಅವರವರ ವಶದಲ್ಲಿರುವ ಯಾ ಅಧೀನದಲ್ಲಿರುವ ಎಲ್ಲಾ ಪುಸ್ತಕಗಳನ್ನೂ, ದಸ್ತಾವೇಜುಗಳನ್ನೂ ಹಾಜರ್ಮಾಡಬೇಕಾದ್ದು ಕಂಪೆನಿಯ ಸಮಸ್ತ ಆಫಿಸರುಗಳ ವ ಏಜಂಟುಗಳ ಕೆಲಸವಾಗಿರತಕ್ಕದ್ದು.

ಯಾವ ಇನ್ಸ್ಪೆಕ್ಟರಾದರೂ ಕಂಪೆನಿಯ ಕೆಲಸಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಅದರ ಆಫಿಸರುಗಳನ್ನೂ, ಏಜಂಟುಗಳನ್ನೂ ಪ್ರಮಾಣದಮೇಲೆ ವಿಚಾರಣೆ ಮಾಡಬಹುದು.

ಅಂತಾ ಯಾವ ಆಫಿಸರಾಗಲಿ, ಏಜಂಟಾಗಲಿ ಹಾಜರ್ಮಾಡಬೇಕೆಂದು ಇದರಿಂದ ಆಜ್ಞಾಪಿಸಲ್ಪಟ್ಟಿರುವ ಯಾವ ಪುಸ್ತಕವನ್ನಾದರೂ, ದಸ್ತಾವೇಜನ್ನಾದರೂ ಹಾಜರ್ಮಾಡಲಿಕ್ಕೆ ಅಥವಾ ಕಂಪೆನಿಯ ಆಡಳಿತಗಳಿಗೆ ಸಂಬಂಧಪಟ್ಟ ಯಾವ ಪ್ರಶ್ನೆಗಾದರೂ ಜವಾಬು ಕೊಡಲಿಕ್ಕೆ ನಿರಾಕರಿಸಿದರೆ ಆತನು ಅಂತಾ ಪ್ರತಿ ತಕ್ಸೀರಿನ ವಿಷಯದಲ್ಲಿ ನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

85. ಪರಿಶೋಧನೆಯ ಫಲವು ಹ್ಯಾಗೆ ವರ್ತಿಸಲ್ಪಡಬೇಕೆಂಬುದು.

85. ಪರಿಶೋಧನೆಯು ಮುಗಿದನಂತರ ಇನ್ಸ್ಪೆಕ್ಟರುಗಳು ತಮ್ಮ ಅಭಿಪ್ರಾಯಗಳನ್ನು ಮೈಸೂರ ಗವರ್ನಮೆಂಟಿನವರಿಗೆ ರಿಪೋರ್ಟು ಮಾಡತಕ್ಕದ್ದು. ಅಂತಾ ರಿಪೋರ್ಟು ಮೈಸೂರ ಗವರ್ನಮೆಂಟಿನವರು ಆಜ್ಞಾಪಿಸುವ ಪ್ರಕಾರ ಬರೆಯಲ್ಪಡತಕ್ಕದ್ದು, ಯಾ ಛಾಪಿಸಲ್ಪಡತಕ್ಕದ್ದು.

ಒಂದು ನಕಲು ಮೈಸೂರ ಗವರ್ನಮೆಂಟಿನವರಿಂದ ಕಂಪೆನಿಯ ರಿಜಿಸ್ಟರಾದ ಆಫಿಸಿಗೆ ಕಳುಹಿಸಲ್ಪಡತಕ್ಕದ್ದು, ಮತ್ತೊಂದು ನಕಲು ಯಾವ ಮೆಂಬರುಗಳ ಅರ್ಜಿಯಮೇಲೆ ತನಿಖೆ ಮಾಡಲ್ಪಟ್ಟಿತೋ ಅವರ ಅಪೇಕ್ಷೆಯ ಪ್ರಕಾರ ಅವರಿಗೆಯಾಗಲಿ ಅಥವಾ ಅವರ ಪೈಕಿ ಒಬ್ಬರಿಗಾಗಲಿ ಅಥವಾ ಹೆಚ್ಚು ಮಂದಿಗಾಗಲಿ ಕಳುಹಿಸಲ್ಪಡತಕ್ಕದ್ದು.

ಮೇಲೆ ಹೇಳಲ್ಪಟ್ಟಂತಾ ಯಾವ ಅಜಮಾಯಿಷಿಯ ಬಗ್ಗಾಗಲಿ ಸಂಭವಿಸುವ ಖರ್ಚುಗಳನ್ನೆಲ್ಲಾ ಕಂಪೆನಿಯ ಆಸ್ತಿಗಳಿಂದ ಕೊಡಬೇಕೆಂದು ಮೈಸೂರ ಗವರ್ನಮೆಂಟಿನವರು ಆಜ್ಞಾಪಿಸದೆ ಹೋದರೆ, ಯಾವ ಮೆಂಬರುಗಳ ಅರ್ಜಿಯ ಮೇಲೆ ಇನ್ಸ್ಪೆಕ್ಟರುಗಳು ಮೊಕರರ್ಮಾಡಲ್ಪಟ್ಟರೋ ಆ ಮೆಂಬರುಗಳು ಭರಿಸತಕ್ಕದ್ದು; ಕಂಪೆನಿಯ ಆಸ್ತಿಗಳಿಂದ ಕೊಡಬೇಕೆಂದು ಆಜ್ಞಾಪಿಸಲಿಕ್ಕೆ ಮೈಸೂರ ಗವರ್ನಮೆಂಟಿನವರು ಇದರಿಂದ ಅಧಿಕಾರ ಹೊಂದಿದ್ದಾರೆ.

86. ಇನ್ಸ್ಪೆಕ್ಟರುಗಳನ್ನು ಮೊಕರರ್ಮಾಡಲಿಕ್ಕೆ ಕಂಪೆನಿಯವರಿಗುಂಟಾಗಿರುವ ಅಧಿಕಾರ.

86. ಈ ರೆಗ್ಯುಲೇಷನಿಗನುಗುಣವಾದ ಯಾವ ಕಂಪೆನಿಯಾದರೂ, ಒಂದು ವಿಶೇಷ ನಿರ್ಣಯದ ಮೂಲವಾಗಿ, ಕಂಪೆನಿಯ ಆಡಳಿತಗಳನ್ನು ಅಜಮಾಯಿಷಿಮಾಡತಕ್ಕ ಬಗ್ಗೆ ಇನ್ಸ್ಪೆಕ್ಟರುಗಳನ್ನು ಮೊಕರರ್ಮಾಡಬಹುದು.

ಹಾಗೆ ಮೊಕರರ್ಮಾಡಲ್ಪಟ್ಟ ಇನ್ಸ್ಪೆಕ್ಟರುಗಳು ಮೈಸೂರ ಗವರ್ನಮೆಂಟಿನವರಿಂದ ಮೊಕರರ್ಮಾಡಲ್ಪಟ್ಟ ಇನ್ಸ್ಪೆಕ್ಟರುಗಳ ಹಾಗೆ ಅದೇ ಅಧಿಕಾರಗಳನ್ನುಳ್ಳವರಾಗಿ ಅದೇ ಕೆಲಸಗಳನ್ನು ನಡಿಸತಕ್ಕದ್ದು. ಆದರೆ ಇವರಿಗೂ ಅವರಿಗೂ ಇರತಕ್ಕ ವ್ಯತ್ಯಾಸವೇನಂದರೆ, ತಮ್ಮ ರಿಪೋರ್ಟನ್ನು ಮೈಸೂರ ಗವರ್ನಮೆಂಟಿನವರಿಗೆ ಕಳುಹಿಸುವದಕ್ಕೆ ಬದಲಾಗಿ, ಸಾಧಾರಣ ಸಭೆಯಲ್ಲಿ ಕಂಪೆನಿಯವರು ಆಜ್ಞಾಪಿಸುವ ರೀತಿಯಾಗಿ ಅವರು ಗೊತ್ತುಮಾಡುವಂತಾ ಮನುಷ್ಯರಿಗೆ ರಿಪೋರ್ಟು ಮಾಡತಕ್ಕದ್ದು.

ಕಂಪೆನಿಯ ಆಫಿಸರುಗಳೂ ಏಜಂಟುಗಳೂ ಹಾಜರುಮಾಡಬೇಕೆಂದು ಇದರಿಂದ ಅಪೇಕ್ಷಿಸಲ್ಪಟ್ಟಿರುವ ಯಾವ ಪುಸ್ತಕವನ್ನಾಗಲಿ ಯಾ ದಸ್ತಾವೇಜನ್ನಾಗಲಿ ಅಂತಾ ಇನ್ಸ್ಪೆಕ್ಟರುಗಳಬಳಿ ಹಾಜರ್ಮಾಡಲಿಕ್ಕೆ, ಅಥವಾ

[೪ನೇ ಭಾಗ

ಯಾವ ಪ್ರಶ್ನೆಗಾದರೂ ಜವಾಬು ಕೊಡಲಿಕ್ಕೆ, ನಿರಾಕರಿಸಿದ ವಿಷಯದಲ್ಲಿ, ಸ... ಗವರ್ನಮೆಂಟಿನವರಿಂದ ನೌಕರರ್ಮಾಡಲ್ಪಟ್ಟಿದ್ದರೆ ಅವರು ಯಾವ ದಂಡನೆಗೆ ಗುರಿ... ನೆಗೆ ಗುರಿಯಾಗತಕ್ಕದ್ದು.

ಇನ್ಸ್ಪೆಕ್ಟರುಗಳ ರಿಪೋರ್ಟು ಸಾಕ್ಷ್ಯವಾಗಿರಬೇಕು.

87. ಈ ರೆಗ್ಯುಲೇಷನ್ಸ ಪ್ರಕಾರ ನೌಕರರ್ಮಾಡಲ್ಪಟ್ಟ ಇನ್ಸ್ಪೆಕ್ಟರುಗಳ ರಿಪೋರ್ಟು ಕಂಪೆನಿಯ ಆಡಳಿತವನ್ನು ತನಿಖೆ ಮಾಡೋಣಾಯಿತೆಂ... ಮೊಹರ ನಿಶಿ ದೃಢಪಡಿಸಲ್ಪಟ್ಟಿದ್ದ ಪಕ್ಷದಲ್ಲಿ, ಅದು ಸದರಿ ರಿ... ನ ಯಾವ ವಿಷಯವನ್ನು ಕುರಿತಾಗಲಿ, ಇನ್ಸ್ಪೆಕ್ಟರುಗಳ ಅಭಿ... ದಬಗ್ಗೆ ನ್ಯಾಯಶಾಸ್ತ್ರ ಸಂಬಂಧವಾದ ಯಾವ ನಡವಳಿತದಲ್ಲಾದರೂ ಸಾಕ್ಷ್ಯವಾಗಿ ಅಂಗೀಕರಿಸಲ್ಪಡತಕ್ಕದ್ದು.

ಕೆಲವು ಮುಂಚಿನ ಕರಾರುಗಳಿಗೆ ಸೇರಿದ ಕಕ್ಷಿಗಾರರ ಹೆಸರುಗಳನ್ನೂ ತಾರೀಖುಗಳನ್ನೂ ಪ್ರಾಸ್ಪೆಕ್ಟಸ ವಗೈರೆಗಳಲ್ಲಿ ನಮೂದಿಸ್ಸಾತಕ್ಕದ್ದು.

88. ಒಂದು ಕಂಪೆನಿಯ ಪ್ರತಿ ಪ್ರಾಸ್ಪೆಕ್ಟಸ ಅಂದರೆ ಪ್ರಸಿದ್ಧ ಪತ್ರಿಕೆಯಲ್ಲಿಯೂ, ಒಂದು ಜಾಯಿಂಟು ಸ್ಟಾಕ ಕಂಪೆನಿಯಲ್ಲಿ ಹಿಸ್ಸೆಗಳಬಗ್ಗೆ ದರಖಾಸ್ತು ಮಾಡಹೇಳಿ ಜನರನ್ನು ಕೋರುವಂತ ಪ್ರತಿ ನೋಟಿಸಿನಲ್ಲಿಯೂ, ಇಂತಾ ಪ್ರಾಸ್ಪೆಕ್ಟಸ್ಸನ್ನಾಗಲಿ ನೋಟಿಸನ್ನಾಗಲಿ ಹುಟ್ಟಿಸುವದಕ್ಕಿಂತ ಮುಂಚೆ, ಸದರಿ ಕಂಪೆನಿಯವರಿಂದಾಗಲಿ ಯಾ ಕಂಪೆನಿಯ ಉದ್ಧಾರಕರಿಂದಾಗಲಿ ಡೈರೆಕ್ಟರರಿಂದಾಗಲಿ ಯಾ ಟ್ರಸ್ಟಿಗಳಿಂದಾಗಲಿ ಕಾನೂನಿನಿಂದ ಜಾರೀಲಿ ತರಲುಳ್ಳ ಮತ್ತು ಒಬ್ಬನು ಸದರಿ ಕಂಪೆನಿಯಲ್ಲಿ ಶೇರಬಹುದೋ ಯಾ ಶೇರಬಾರದೋ ಯೆಂಬದನ್ನು ತೀರ್ಮಾನಿಸುವದರಲ್ಲಿ ಆತನನ್ನು ನ್ಯಾಯವಾಗಿ ಪ್ರೇರೇಪಿಸಬಹುದಾದ ಯಾವ ಒಡಂಬಡಿಕೆಗಾಗಲಿ ಶೇರಿದ ಕಕ್ಷಿಗಾರರ ಹೆಸರುಗಳನ್ನೂ ತಾರೀಖುಗಳನ್ನೂ ನಮೂದಿಸಿರತಕ್ಕದ್ದು. (ಸದರಿ ಪ್ರಾಸ್ಪೆಕ್ಟಸಾಗಲಿ ಯಾ ನೋಟಿಸಾಗಲಿ ಡೈರೆಕ್ಟರುಗಳಿಂದಾಗಲಿ ಅಥವಾ ಕಂಪೆನಿಯವರಿಂದಾಗಲಿ ಅನುಸರಿಸಲ್ಪಡುವದಕ್ಕೆ ಒಳಪಟ್ಟಿದ್ದಾಗ್ಯೂ ಇಲ್ಲದೆ ಇದ್ದಾಗ್ಯೂ ಚಿಂತೆಇಲ್ಲ.) ಮತ್ತು ಈ ಸಂಗತಿಗಳು ನಮೂದಾಗದೆ ಇರುವ ಯಾವ ಪ್ರಾಸ್ಪೆಕ್ಟಸನ್ನಾಗಲಿ ಯಾ ನೋಟಿಸನ್ನಾಗಲಿ, ಇದರ ನಂಬಿಕೆಯಮೇಲೆ ಕಂಪೆನಿಯಲ್ಲಿ ಹಿಸ್ಸೆಗಳನ್ನು ತೆಕ್ಕೊಳ್ಳುವವನ ಸಂಗತಿಯಲ್ಲಿ, ಅಂತಾ ಕರಾರನ್ನು ಕುರಿತು ಅವನು ತಿಳಿದವನಾಗಿದ್ದರೇನೇ ಹೊರ್ತು ಅದನ್ನು ಪ್ರತಿ ಳಿದುಕೊಟ್ಟ ಕಂಪೆನಿಯ ಉದ್ಧಾರಕರೂ ಡೈರೆಕ್ಟರರೂ ವ ಆಫಿಸರರೂ ಮಾಡಿದ ಮೋಸವೆಂಬದಾಗಿ ಎಣಿಸಲ್ಪಡತಕ್ಕದ್ದು.

Notices.

ನೋಟಿಸುಗಳು.

ನೋಟಿಸುಗಳನ್ನು ಕಂಪೆನಿಯ ಮೇಲೆ ಜಾರಿಮಾಡೋಣ.

89. ಕಂಪೆನಿಯಮೇಲೆ ಜಾರಿಮಾಡಲ್ಪಡಬೇಕಾದ ಯಾವ ಸಮ್ಮನಾಗಲಿ ನೋಟಿಸಾಗಲಿ ಹುಕುಮಾಗಲಿ ಯಾ ಇತರ ದಸ್ತಾವೇಜಾಗಲಿ ಅವುಗಳನ್ನು ರಿಜಿಸ್ಟರ್ಮಾಡಲ್ಪಟ್ಟ ಆಫಿಸಿನಲ್ಲಿ ಕೊಟ್ಟುಬಿಟ್ಟು ಹೋಗುವದರಮೂಲಕ ಯಾ ಕಂಪೆನಿಯ ಹೆಸರಿಗೆ ರಿಜಿಸ್ಟರ್ಮಾಡಿದ ಲಕೋಟೆಯಲ್ಲಿ ಟಪ್ಪಾಲಿನ ದ್ವಾರಾ ಕಳುಹಿಸುವದರ ಮೂಲಕ ಜಾರಿಮಾಡಲ್ಪಡಬಹುದು; ಮತ್ತು ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರರವರಿಗೆ ಯಾವ ನೋಟಿಸಾದರೂ ರಿಜಿಸ್ಟರ್ಮಾಡಿದ ಲಕೋಟೆಯಲ್ಲಿ ಟಪ್ಪಾಲಿನ ದ್ವಾರಾ ಆತನ ಬಳಿಗೆ ಕಳುಹಿಸೋಣಾದರಮೂಲಕವಾಗಲಿ, ಅಥವಾ ಆತನಿಗೆ ಪಾವತಿಮಾಡೋಣದರಮೂಲಕವಾಗಲಿ, ಯಾ ಆತನ ಬಗ್ಯೆ ಆತನ ಆಫಿಸಿನಲ್ಲಿಕೊಡೋಣದರ ಮೂಲಕವಾಗಲಿ ಜಾರಿಮಾಡಲ್ಪಡಬಹುದು.

ಲಿಖಿತಮೂಲಕವಾದ ನೋಟಿಸುಗಳ ವಿಷಯದಲ್ಲಿ ಕಾಯಿದೆಗಳು.

90. ಟಪ್ಪಾಲಿನ ದ್ವಾರಾ ಕಂಪೆನಿಯ ಮೇಲೆ ಜಾರಿಮಾಡಲ್ಪಡಬೇಕಾದ ಪ್ರತಿ ದಸ್ತಾವೇಜು, ಅದರ ಜಾರಿಯಬಗ್ಗೆ ನಿರ್ದೇಶಿಸೋಣಾದ ವಾಯಿದೆ (ಏನಾದರೂ ಇದ್ದರೆ) ಅದ್ದರೊಳಗಾಗಿ ತಪ್ಪದೆ ತಲಪಲಿಕ್ಕೆ ಅವಕಾಶವಿರುವಷ್ಟು ಕಾಲಕ್ಕೆ ಸರಿಯಾಗಿ ಟಪ್ಪಾಲಿನಲ್ಲಿ ಹಾಕಲ್ಪಡತಕ್ಕದ್ದು; ಮತ್ತು ಅಂತಾ ದಸ್ತಾವೇಜಿನ ಜಾರಿಯನ್ನು ರುಜು ಮಾಡಬೇಕಾದ ವಿಷಯದಲ್ಲಿ, ಸದರಿ ದಸ್ತಾವೇಜಿನ ಮೇಲ್ವಿಲಾಸ ಸರಿಯಾಗಿ ಬರಿಯಲ್ಪಟ್ಟಿತೆಂತಲೂ, ವ ಟಪ್ಪಾಲ ಆಫಿಸಿನಲ್ಲಿ ರಿಜಿಸ್ಟರ್ಮಾಡಿಸಿ ಹಾಕಲ್ಪಟ್ಟಿತೆಂತಲೂ, ರುಜುಮಾಡಿಕೊಟ್ಟರೆ ಸಾಕಾದ್ದಾಗಿರತ್ತದೆ.

ಕಂಪೆನಿಯಿಂದ ನೋಟಿಸುಗಳು ಯಥಾರ್ಥವಾಗಲ್ಪಡೋಣ.

91. ಕಂಪೆನಿಯಿಂದ ದೃಢಪಡಿಸಿ ಕೊಡಲ್ಪಡಬೇಕಾದ ಯಾವ ಸಮ್ಮರ್ಗಳಾಗಲಿ, ನೋಟಿಸುಗಳಾಗಲಿ, ಹುಕುಮಾಗಲಿ ಯಾ ನಡವಳಿತವಾಗಲಿ ಯಾವ ಡೈರೆಕ್ಟರಿಂದಾದರೂ, ಸೆಕ್ರೆಟರಿಯಿಂದಾದರೂ ಅಥವಾ ಕಂಪೆನಿಯಿಂದ ಅಧಿಕಾರ ಹೊಂದಿದ ಇತರ ಆಫಿಸರಿಂದಲಾದರೂ ದಸ್ಕತ್ತು ಮಾಡಲ್ಪಡಬಹುದು, ಮತ್ತು ಕಂಪೆನಿಯ ಮುದ್ರೆಗದ ಮೊಹರ್ ನಿಶಿ ಇರಬೇಕೆಂಬ ಅಗತ್ಯವಿಲ್ಲ ; ಮತ್ತು ಅದು ಬರೆಯಲ್ಪಟ್ಟದ್ದಾಗಿಯಾಗಲಿ, ಯಾ ಛಾಪಿಸಲ್ಪಟ್ಟದ್ದಾಗಿಯಾಗಲಿ ಇರಬಹುದು, ಅಥವಾ ಸ್ವಲ್ಪ ಬರೆಯಲ್ಪಟ್ಟದ್ದಾಗಿ ವ ಸ್ವಲ್ಪ ಛಾಪಿಸಲ್ಪಟ್ಟದ್ದಾಗಿಯಾಗಲಿ ಇರಬಹುದು.

Legal Proceedings.
ನ್ಯಾಯಸಂಬಂಧವಾದ ನಡವಳಿತಗಳು.

ಸಭೆ ಸೇರಿದಾಗ್ಯೆಲ್ಲಾ ಬರೆದಿಡೋಣಾಗುವ ನಡವಳಿತಗಳ ಸಾಕ್ಷ್ಯ.

92. ಈ ರೆಗ್ಯುಲೇಷನಿಗನುಗುಣವಾದ ಪ್ರತಿ ಕಂಪೆನಿಯೂ, ಕಂಪೆನಿಯ ಸಾಧಾರಣ ಸಭೆಗಳ ಮತ್ತು ಡೈರೆಕ್ಟರುಗಳಾಗಲಿ ಯಾ ಮಾನೇಜರುಗಳಾಗಲಿ ಇರುವ ಸಂಗತಿಯಲ್ಲಿ ಕಂಪೆನಿಯ ಡೈರೆಕ್ಟರುಗಳ ಯಾ ಮಾನೇಜರುಗಳ ಸಮಸ್ತ ನಿರ್ಣಯಗಳ ಬಾಬತು ವ ನಡವಳಿತಗಳಬಾಬತು ಮಿನಿಟ್ಸ್ಎಂಬ ಹೆಗ್ಗುರುತುಗಳನ್ನು, ಆ ಬಗ್ಯೆ ಆಗಿಂದಾಗ್ಯೆ ಪುಸ್ತಕಗಳನ್ನು ಒದಗಿಸಿಕೊಂಡು ಅವುಗಳಲ್ಲಿ ಕ್ರಮಪ್ರಕಾರ ದಾಖಲ್ಮಾಡಿಸತಕ್ಕದ್ದು ; ಮತ್ತು ಮೇಲೆ ಹೇಳೋಣಾದಂತಾ ಯಾವ ಮಿನಿಟ್ಸಾದರೂ ಅಂತಾ ನಿರ್ಣಯಗಳು ಮಾಡಲ್ಪಟ್ಟ ಯಾ ನಡವಳಿತಗಳು ನಡಿಸಲ್ಪಟ್ಟ ಸಭೆಯ ಅಗ್ರಾಸನಾಧಿಪತಿಯಿಂದಾಗಲಿ ಯಾ ಆ ತರುವಾಯ ಸೇರೋಣಾದ ಎರಡನೇ ಸಭೆಯ ಅಗ್ರಾಸನಾಧಿಪತಿಯಿಂದಾಗಲಿ ದಸ್ಕತು ಮಾಡಲ್ಪಟ್ಟಂತೆ ಅಭಿಪ್ರಾಯವಾದರೆ, ಅದು ನ್ಯಾಯಸಂಬಂಧವಾದ ಸಮಸ್ತ ನಡವಳಿತಗಳಲ್ಲಿ ಸಾಕ್ಷ್ಯವಾಗಿ ಅಂಗೀಕರಿಸಲ್ಪಡತಕ್ಕದ್ದು.

ವಿರೋಧವಾಗಿ ನಡಿಸೋಣಾಯಿತೆಂದು ರುಜು ಮಾಡಲ್ಪಡುವ ತನಕ, ಯಾವ ಸಭೆಯ ನಡವಳಿತಗಳ ವಿಷಯದಲ್ಲಿ ಮಿನಿಟ್ಸ್ಎಂಬ ಹೆಗ್ಗುರುತುಗಳು ಹಾಗೆ ತೆಗೆದುಕೊಳ್ಳಲ್ಪಟ್ಟವೋ ಆ ಕಂಪೆನಿಯ ಪ್ರತಿ ಸಾಧಾರಣ ಸಭೆಯಾಗಲಿ ಯಾ ಡೈರೆಕ್ಟರುಗಳ ಯಾ ಮಾನೇಜರುಗಳ ಸಭೆಯಾಗಲಿ ಕ್ರಮಪ್ರಕಾರ ಕೇರಿಸಲ್ಪಟ್ಟಿತೆಂತಲೂ ವ ಅಲ್ಲಿ ಮಾಡೋಣಾದ ಸಮಸ್ತ ನಿರ್ಣಯಗಳೂ ಯಾ ನಡಿಸಲ್ಪಟ್ಟ ನಡವಳಿತಗಳೂ ಕ್ರಮಪ್ರಕಾರ ಮಾಡಲ್ಪಟ್ಟವು ಯಾ ನಡಿಸಲ್ಪಟ್ಟವು ಎಂತಲೂ, ಗ್ರಹಿಸಲ್ಪಡತಕ್ಕದ್ದು, ಮತ್ತು ಡೈರೆಕ್ಟರುಗಳ, ಮಾನೇಜರುಗಳ ಯಾ ಲಿಕ್ವಿಡೇಟರುಗಳ ಸಮಸ್ತ ಬಹಲುಗಳೂ ಸಲುವಳಿಯಾಗತಕ್ಕದ್ದಾಗಿಗ್ರಹಿಸಲ್ಪಡತಕ್ಕದ್ದು, ಮತ್ತು ಅಂತಾ ಡೈರೆಕ್ಟರುಗಳಿಂದ, ಮಾನೇಜರುಗಳಿಂದ ಯಾ ಲಿಕ್ವಿಡೇಟರುಗಳಿಂದ ಮಾಡಲ್ಪಟ್ಟ ಸಮಸ್ತ ಕೃತ್ಯಗಳೂ ಸಲುವಳಿಯಾಗತಕ್ಕದ್ದು, ಅವರ ಬಹಲುಗಳ ಯಾ ಯೋಗ್ಯತೆಯ ವಿಷಯದಲ್ಲಿ ಆಮೇಲೆ ಕಂಡು ಹಿಡಿಯಲ್ಪಡಬಹುದಾದ ಕೊರತೆ ಏನಿದ್ದಾಗ್ಯೂ ಚಿಂತೆ ಇಲ್ಲ.

ಟಿಪ್ಪಣಿ.—ಒಬ್ಬ ಲಿಕ್ವಿಡೇಟರು ತನ್ನ ಉದ್ಯೋಗ ಸಲುವಳಿ ಯಿಲ್ಲದ್ದೆಂಬದಾಗಿ ತೋರಿಸಲ್ಪಟ್ಟ ತರುವಾಯ ಮಾಡಿದ ಕೃತ್ಯಗಳಿಗೆ ಈ ಪ್ರಕರಣದಲ್ಲಿ ಇರುವಂತಾದ್ದು ಯಾವದೂ ಸಲುವಳಿಕೊಡುವಂತೆ ಭಾವವಾಗಕೂಡದು.

ಕ್ಲುಪ್ತಪಡಿಸಲ್ಪಟ್ಟ ಕಂಪೆನಿಗಳಿಂದ ತರಲ್ಪಡುವ ವ್ಯವಹರಣೆಗಳ ಖರ್ಚುಗಳ ಬಗ್ಯೆ ನಿಬಂಧನೆ.

93. ಒಂದು ವ್ಯವಹರಣೆಯಲ್ಲಿ ಯಾವ ಕ್ಲುಪ್ತಪಡಿಸಲ್ಪಟ್ಟ ಕಂಪೆನಿಯಾದರೂ ವಾದಿಯಾಗಿರುವಲ್ಲಿ, ಒಂದು ವೇಳೆ ಪ್ರತಿವಾದಿತರಫ್ ಫೈಸಲಾದರೆ, ಅವನಿಗೆ ತಗಲುವ ಖರ್ಚುಗಳನ್ನು ಕೊಡಲಿಕ್ಕೆ ಕಂಪೆನಿಯ ಸೊತ್ತುಗಳು ಸಾಕಾದ್ದಾಗಿರಲಾರದೆಂದು ನಂಬಲಿಕ್ಕೆ ಕಾರಣ ಇದೆ ಎಂದು ಹೊರಪಟ್ಟ ಸಾಕ್ಷ್ಯದಿಂದ ತಿಳಿಯಬಂದರೆ, ಆ ವಿಷಯದಲ್ಲಿ ಅಧಿಕಾರವುಳ್ಳ ಯಾವ ಜಡ್ಜಿಯಾದರೂ ಅಂತಾ ಖರ್ಚುಗಳ ಬಗ್ಯೆ ತಕ್ಕ ಜಾಮೀನು ಕೊಡಬೇಕೆಂದು ಅಪೇಕ್ಷಿಸಬಹುದು, ಮತ್ತು ಅಂತಾ ಜಾಮೀನು ಕೊಡಲ್ಪಡುವವರಿಗೂ ಸಮಸ್ತನಡವಳಿತಗಳನ್ನೂ ನಿಲ್ಲಿಸಿಡಬಹುದು.

ಮೆಂಬರುಗಳ ಮೇಲೆ ತರಲ್ಪಡುವ ವ್ಯವಹರಣೆಗಳ ವಿಷಯದಲ್ಲಿ ದಾವಾಅರ್ಜಿ.

94. ಒಬ್ಬನು ಮೆಂಬರಾಗಿದ್ದದ್ದರಿಂದ ವಸೂಲ್ಮಾಡಲ್ಪಡಬೇಕಾದ ಯಾವ ವರಾತದ ಮೊಬಲಗಾದರೂ ಅಥವಾ ಸದರಿ ಮೆಂಬರಿಂದ ಬಾಕಿಯಾಗುವ ಇತರ ಹಣಗಳಗಾದರೂ ಯಾವ ಮೆಂಬರ ಮೇಲಾಗಲಿ ಕಂಪೆನಿಯಿಂದ ತರಲ್ಪಟ್ಟ ಯಾವದಾದರೂ ವ್ಯವಹರಣೆಯಲ್ಲಿ, ಪ್ರತಿವಾದಿಯು ಕಂಪೆನಿಯ ಮೆಂಬರೆಂತಲೂ ವ ಕಂಪೆನಿಯವರು ವ್ಯಾಜ್ಯ ತರಲಿಕ್ಕೆ ಅವಶ್ಯಕವಾದ ಒಂದು ವರಾತದ ಯಾ ಬಾಕಿಯಾಗುವ ಇತರಹಣಗಳ ವಿಷಯದಲ್ಲಿ ಬಾಕಿದಾರನಾಗಿದಾನೆಂತಲೂ ರುಜು ಮಾಡಿಕೊಡತಕ್ಕದ್ದು ಸಾಕಾದ್ದಾಗಿರತಕ್ಕದ್ದು.

Alteration of Forms.
ನಮೂನೆಗಳ ಬದಲಾವಣೆ.

ಉಪಯೋಗಿಸಬೇಕಾದ ನಮೂನೆಗಳು.

95. ಇದಕ್ಕೆ ಶೇರಿಸಲ್ಪಟ್ಟಿರುವ ಎರಡನೇ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಿಸಿರುವ ನಮೂನೆಗಳನ್ನು ಅಥವಾ ಸಂದರ್ಭಾನುಸಾರವಾಗಿ ಕೂಡಿದ ಮಟ್ಟಿಗೆ ಅವುಗಳ ಹಾಗೆ ಇರುವ ನಮೂನೆಗಳನ್ನು, ಅಂತಾ ನಮೂನೆಗಳು ಯಾವ ಯಾವ ವಿಷಯಗಳಿಗೆ ಸಂಬಂಧ ಪಡುತ್ತವೋ ಅಂತಾ ವಿಷಯಗಳಲ್ಲೆಲ್ಲಾ ಉಪಯೋಗಿಸತಕ್ಕದ್ದು.

ಷೆಡ್ಯೂಲ್ ಪಟ್ಟಿಯಲ್ಲಿನ ನಮೂನೆಗಳನ್ನು ಮೈಸೂರ ಗವರ್ನಮೆಂಟಿನವರು ಬದಲಾಯಿಸಬಹುದು.

ಮೈಸೂರ ಗವರ್ನಮೆಂಟಿನವರು ಇದಕ್ಕೆ ಶೇರಿಸಲ್ಪಟ್ಟಿರುವ ಮೊದಲನೇ ಷೆಡ್ಯೂಲ್ ಪಟ್ಟಿಯಲ್ಲಿ ಅಡಗಿರುವ ಜಂತ್ರಿಗಳಲ್ಲೂ ನಮೂನೆಗಳಲ್ಲೂ ಆಗಿಂದಾಗ್ಯೆ ಬದಲಾವಣೆಗಳನ್ನು ಮಾಡಬಹುದು, ಅಂತಾ ಬದಲಾವಣೆಗಳೆಂದರೆ ಸದರಿ ಷೆಡ್ಯೂಲ್ ಪಟ್ಟಿಯಲ್ಲಿಯೂ ಎರಡನೇ ಷೆಡ್ಯೂಲ್ ಪಟ್ಟಿಯಲ್ಲಿನ ನಮೂನೆಗಳಲ್ಲಿಯೂ ದಾಖಲ್ಮಾಡಲ್ಪಟ್ಟಿರುವ ಪ್ರಕಾರ ರಿಜಿಸ್ಟ್ರಾರವರಿಗೆ ಕೊಡಬೇಕಾದ ರುಸುಮುಗಳ ಮೊಬಲಗನ್ನು ಹೆಚ್ಚಿಸದೆ ಯಾವ ಬದಲಾವಣೆಯಾದರೂ ಮಾಡಬಹುದು, ಅಥವಾ ಸದರಿ ನಮೂನೆಗಳೊಂದಿಗೆ ಅವರಿಗೆ ಅವಶ್ಯಕವಾಗಿ ತೋರುವಂತಾ ಯಾವ ನಮೂನೆಗಳನ್ನಾದರೂ ಹೆಚ್ಚಾಗಿ ಶೇರಿಸಬಹುದು.

ಅಂತಾ ಯಾವ ಜಂತ್ರಿಯಾಗಲಿ ಯಾ ನಮೂನೆಯಾಗಲಿ ಬದಲಾವಣೆ ಮಾಡಲ್ಪಟ್ಟಾಗ್ಯೆ, ಸರ್ಕಾರಿ ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು, ಮತ್ತು ಹಾಗೆ ಪ್ರಕಟಿಸಲ್ಪಟ್ಟ ತರುವಾಯ ಅಂತಾ ಜಂತ್ರಿ ಯಾ ನಮೂನೆ ಈ ರೆಗ್ಯುಲೇಷನಿನ ಪಟ್ಟಿಗೆ ಶೇರಿಸಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಅದೇ ಪ್ರಯೋಜನಗಳನ್ನುಳ್ಳದ್ದಾಗಿರತಕ್ಕದ್ದು; ಆದರೆ ಮೊದಲನೇ ಪಟ್ಟಿಯಲ್ಲಿ ಅಡಗಿರುವ A ಗುರ್ತುಳ್ಳ ಜಂತ್ರಿಯಲ್ಲಿ ಮೈಸೂರ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ಯಾವ ಬದಲಾವಣೆಯಾದರೂ ಅಂತಾ ಬದಲಾವಣೆಯ ತಾರೀಖಿಗೆ ಮುಂಚಿತವಾಗಿ ರಿಜಿಸ್ಟರ್ಮಾಡಲ್ಪಟ್ಟ ಯಾವ ಕಂಪೆನಿಗಾಗಲಿ ಲಗಾವಾಗಕೂಡದು, ಅಥವಾ ಅಂತಾ ಕಂಪೆನಿಯ ವಿಷಯದಲ್ಲಿ ಅಂತಾ ಜಂತ್ರಿಯ ಯಾವ ಭಾಗವನ್ನಾಗಲಿ ರದ್ದು ಮಾಡಕೂಡದು.

Arbitrations.
ಪಂಚಾಯಿತಿಗಳು.

ಯಾವಕಾರ್ಯಗಳನ್ನಾಗಲಿ (*arbitration*) ಆರಬಿಟ್ರೇಷನ್ ಎಂಬ ಪಂಚಾಯಿತಿಗೆ ರಿಫರ ಮಾಡಲಿಕ್ಕೆ ಕಂಪೆನಿಗಳಿಗೆ ಉಂಟಾಗಿರುವ ಅಧಿಕಾರ.

96. ಈ ರೆಗ್ಯುಲೇಷನಿಗನನುಗುಣವಾದ ಯಾವ ಕಂಪೆನಿಯಾದರೂ, ಅದರ ಮುದ್ರಿಗಢ ಮೊಹರು ಹಾಕಲ್ಪಟ್ಟು, ಲಿಖಿತ ಮೂಲಕವಾಗಿ, ಆಗಿಂದಾಗ್ಯೆ, ಅದಕ್ಕೂ ಇತರ ಕಂಪೆನಿಯೊಂದಿಗೆ ಯಾ ಇತರ ಮನುಷ್ಯನೊಂದಿಗೆ ಉಂಟಾಗಿರುವ ಯಾವ ತಕರಾರನ್ನಾದರೂ ಪಂಚಾಯಿತಿಗೆ ಒಪ್ಪಿಸಲು ಒಪ್ಪಿಕೊಳ್ಳಬಹುದು, ಮತ್ತು ಪಂಚಾಯಿತಿಗೆ ಒಪ್ಪಿಸ ಬಹುದು; ವ ಪಂಚಾಯಿತಿಗೆ ಶೇರಿದ ಕಂಪೆನಿಗಳು ಯಾರಿಗೆ ತಕರಾರನ್ನು ಒಪ್ಪಿಸೋಣಾಯಿತೋ ಆ ಮನುಷ್ಯನಿಗೆ ಯಾ ಮನುಷ್ಯರಿಗೆ ಯಾವ ಷರತ್ತುಗಳನ್ನಾದರೂ ವ್ಯವಸ್ಥೆ ಪಡಿಸುವದಕ್ಕಾಗಲಿ ಅಥವಾ ನ್ಯಾಯ ಪ್ರಕಾರ ವ್ಯವಸ್ಥೆ ಪಡಿಸಲ್ಪಡತಕ್ಕದ್ದಾದ ಅಥವಾ ಕಂಪೆನಿಗಳಿಂದಲೇ ಆಗಲಿ ಯಾ ಡೈರೆಕ್ಟರುಗಳಿಂದಾಗಲಿ ಅಥವಾ ಅಂತಾ ಕಂಪೆನಿಗಳ ಇತರ ಮುಖ್ಯಸ್ಥರಿಂದಾಗಲಿ ಗೊತ್ತು ಮಾಡಲ್ಪಡತಕ್ಕವುಗಳಾದ ಯಾವ ವಿಷಯಗಳನ್ನಾಗಲಿ ಫೈಸಲ್ಮಾಡಲಿಕ್ಕೆ ಅಧಿಕಾರ ಕೊಡಬಹುದು.

ದಾಖಲೆ ಬಗ್ಯೆ ಕರಾರುಗಳನ್ನು ಬದಲಾಯಿಸಲಿಕ್ಕೆ ಯಾ ರದ್ದು ಮಾಡಲಿಕ್ಕೆ ಉಂಟಾಗಿರುವ ಅಧಿಕಾರ.

97. ಕಂಪೆನಿಗಳು ಬೇರೆ ಬೇರೆಯಾಗಿ ಅಲ್ಲದೆ ಒಂದಾಗಿ ಶೇರಿ ಆಗಿಂದಾಗ್ಯೆ ಅವರವರ ಮುದ್ರಿಗಢ ಮೊಹರನಿಕಿ ಬರಿಯೋಣದರಿಂದ, ಈ ರೆಗ್ಯುಲೇಷನಿನ ಪ್ರಕಾರ ಅದಕ್ಕೆ ಮುಂದೆ ದಾಖಲೆ ಬಗ್ಯೆ ಕಂಪೆನಿಗಳ ಮಧ್ಯೆ ಮಾಡಿಕೊಳ್ಳೋಣಾಗಿರುವ ಯಾವ ಕರಾರನ್ನಾಗಲಿ ಯಾ ಅದರ ವಾಯಿದೆಗಳನ್ನಾಗಲಿ ಷರತ್ತುಗಳನ್ನಾಗಲಿ ಯಾ ಒಪ್ಪಂದಗಳನ್ನಾಗಲಿ ಹೆಚ್ಚಿಸಬಹುದು, ಬದಲಾಯಿಸಬಹುದು ಯಾ ರದ್ದು ಮಾಡಬಹುದು.

ಕರಾರುಗಳು ಜಾರೀಲಿ ತರಲ್ಪಡತಕ್ಕದ್ದು.

98. ಈ ರೆಗ್ಯುಲೇಷನಿಗನನುಗುಣವಾದ ಪ್ರತಿ ದಾಖಲೆ ಯಾ ಕರಾರು, ಈ ರೆಗ್ಯುಲೇಷನಿಗನನುಗುಣವಾಗಿ ಎಷ್ಟರ ಮಟ್ಟಿಗೆ ಆಗಿಂದಾಗ್ಯೆ ರದ್ದು ಮಾಡಲ್ಪಡುತ್ತದೋ ಯಾ ಬದಲಾಯಿಸಲ್ಪಡುತ್ತದೋ ಅಷ್ಟು ಹೊರ್ತು, ಕಡವೇದೆಲ್ಲಾ ಕಂಪೆನಿಗಳಿಗೆ ಬದ್ಧಕವಾಗಿರತಕ್ಕದ್ದು, ಮತ್ತು ಪೂರಾ ಜಾರೀಗೆ ತರಲ್ಪಡಬಹುದು ಯಾ ಪೂರಾ ಜಾರೀಗೆ ತರಲ್ಪಡತಕ್ಕದ್ದು.

ಆರ್ಬಿಟ್ರೇಟರ ಎಂಬ ಪಂಚಾಯಿತಿ ದಾರನಿಗೆ ರಿಫರ ಮಾಡೋಣ.

99. ಕಂಪೆನಿಗಳು ಸಮ್ಮತಿಸಿದ್ದಲ್ಲಿ ಒಬ್ಬನೇ ಪಂಚಾಯಿತಿದಾರನಿಗೆ ರಿಫರ ಮಾಡಲ್ಪಡತಕ್ಕದ್ದು.

ಇಬ್ಬರು—ಯಾ—ಹೆಚ್ಚು ಮಂದಿ ಪಂಚಾಯಿತಿ ದಾರರಿಗೆ ರಿಫರ ಮಾಡೋಣ;

100. ಒಬ್ಬನೇಪಂಚಾಯಿತಿದಾರನಿಗೆ ರಿಫರ ಮಾಡಬೇಕೆಂದು ಕಂಪೆನಿಗಳು ಸಮ್ಮತಿಸುವಲ್ಲಿ ಹೊರ್ತು, ಅನ್ಯತ್ರ ಈ ಕೆಳಗಿನ ಪ್ರಕಾರ ರಿಫರ ಮಾಡತಕ್ಕದ್ದು, ಹ್ಯಾಗಂದರೆ:—

ಎರಡು ಕಂಪೆನಿಗಳು ಇದ್ದಲ್ಲಿ, ಇಬ್ಬರು ಪಂಚಾಯಿತಿದಾರರಿಗೆರಿಫರ ಮಾಡತಕ್ಕದ್ದು.

ಮೂರು ಯಾ ಹೆಚ್ಚು ಕಂಪೆನಿಗಳು ಇದ್ದಲ್ಲಿ, ಎಷ್ಟು ಕಂಪೆನಿಗಳು ಇರುತ್ತವೋ ಅಷ್ಟು ಮಂದಿ ಪಂಚಾಯಿತಿದಾರರಿಗೆ ರಿಫರ ಮಾಡತಕ್ಕದ್ದು.

ಪಂಚಾಯಿತಿದಾರರು ಕಂಪೆನಿಗಳಿಂದ ನೊಕರರ್ರಾಮಾಡಲ್ಪಡೋಣ.

101. ಇಬ್ಬರು ಯಾ ಹೆಚ್ಚು ಮಂದಿ ಪಂಚಾಯಿತಿದಾರರು ಇರಬೇಕಾಗುವಲ್ಲಿ, ಪ್ರತಿ ಕಂಪೆನಿಯು, ಅದರ ಮದ್ರಿಗದ ಮೊಹರನಿಶಿ ಬರಹಮೂಲಕವಾಗಿ ಪಂಚಾಯಿತಿದಾರರಲ್ಲಿ ಒಬ್ಬೊಬ್ಬನನ್ನು ನೊಕರರ್ರಾಮಾಡಿ ಆ ವಿಷಯವಾಗಿ ಇತರ ಕಂಪೆನಿಗೆ ಯಾ ಕಂಪೆನಿಗಳಿಗೆ ಬರಹ ಮೂಲಕವಾಗಿ ನೋಟಿಸ ಕೊಡತಕ್ಕದ್ದು.

ಪಂಚಾಯಿತಿದಾರರು ಮೈಸೂರ ಗವರ್ನಮೆಂಟಿನವರಿಂದ ನೊಕರರ್ರಾಮಾಡಲ್ಪಡೋಣ.

102. ಇಬ್ಬರು ಯಾ ಹೆಚ್ಚು ಮಂದಿ ಪಂಚಾಯಿತಿದಾರರು ಇರಬೇಕಾಗುವಲ್ಲಿ, ಯಾವ ಕಂಪೆನಿಗಳಾದರೂ ಇತರ ಕಂಪೆನಿಯಿಂದಾಗಲಿ ಯಾ ಕಂಪೆನಿಗಳಿಂದಾಗಲಿ ಯಾ ಅವುಗಳ ಪೈಕಿ ಯಾವವುಗಳಿಂದಾಗಲಿ ಬರಹ ಮೂಲಕವಾಗಿ ಅಪೇಕ್ಷಿಸಲ್ಪಟ್ಟ ತರುವಾಯು ಹದಿನಾಲ್ಕು ದಿವಸಗಳಒಳಗಾಗಿ ಒಬ್ಬ ಪಂಚಾಯಿತಿದಾರನನ್ನು ನೊಕರರ್ರಾಮಾಡಲಿಕ್ಕೆ ತಪ್ಪಿದರೆ, ಆಗ ಸದರಿ ಕಂಪೆನಿಗಳಿಂದಾಗಲಿ ಯಾ ಅವುಗಳ ಪೈಕಿ ಯಾವವುಗಳಿಂದಾಗಲಿ ಅರ್ಜಿ ಬರೆದುಕೊಳ್ಳಲ್ಪಟ್ಟ ಮೇಲೆ ಪಂಚಾಯಿತಿದಾರನನ್ನು ನೊಕರರ್ರಾಮಾಡಲಿಕ್ಕೆ ಹಾಗೆ ತಪ್ಪಿದಂತಾ ಕಂಪೆನಿಗೆ ಬದುಲಾಗಿ, ಮೈಸೂರ ಗವರ್ನಮೆಂಟಿನವರು ಒಬ್ಬ ಪಂಚಾಯಿತಿದಾರನನ್ನು ನೊಕರರ್ರಾಮಾಡಬಹುದು. ಈ ಪ್ರಕಾರ ನೊಕರರ್ರಾಮಾಡಲ್ಪಟ್ಟ ಪಂಚಾಯಿತಿದಾರನು ಈ ರೆಗ್ಯುಲೇಷನಿನ ಕಾರ್ಯಗಳಿಗಾಗಿ ಹಾಗೆ ತಪ್ಪಿದಂತಾ ಕಂಪೆನಿಯಿಂದ ನೊಕರರ್ರಾಮಾಡಲ್ಪಟ್ಟಂತೆ ಗ್ರಹಿಸಲ್ಪಡತಕ್ಕದ್ದು.

ಪಂಚಾಯಿತಿದಾರರ ಪೈಕಿ ಖಾಲಿಯಾಗುವ ಇಸಮುಗಳು ಕಂಪೆನಿಗಳಿಂದ ನೊಕರರ್ರಾಮಾಡಲ್ಪಡೋಣ.

103. ಒಂದು ವಿಷಯ ಇಬ್ಬರು ಯಾ ಹೆಚ್ಚು ಮಂದಿ ಪಂಚಾಯಿತಿದಾರರಿಗೆ ರಿಫರ ಮಾಡಲ್ಪಟ್ಟಿರುವಲ್ಲಿ, ಸದರಿ ವಿಷಯ ವ್ಯವಸ್ಥೆ ಹೊಂದುವವಕ್ಕೆ ಮುಂಚಿತವಾಗಿ ಯಾವ ಪಂಚಾಯಿತಿದಾರನಾದರೂ ಮೃತಪಟ್ಟರೆ, ಅಥವಾ ಅಸಮರ್ಥನಾದರೆ ಯಾ ನಾಲಾಯಖಾದರೆ, ಅಥವಾ ಎಡಬಿಡದೆ ಏಳುದಿವಸಗಳವರಿವಿಗೆ ಪಂಚಾಯಿತಿದಾರನಾಗಿ ಕೆಲಸ ನೋಡಲಿಕ್ಕೆ ತಪ್ಪಿದರೆ, ಅವನನ್ನು ನೊಕರರ್ರಾಮಾಡಿದಂತಾ ಕಂಪೆನಿಯವರು ಅವರ ಮದ್ರಿಗದ ಮೊಹರನಿಶಿ ಬರಹ ಮೂಲಕವಾಗಿ ಮತ್ತೊಬ್ಬ ಪಂಚಾಯಿತಿದಾರನನ್ನು ಅವನ ಸ್ಥಾನದಲ್ಲಿ ನೊಕರರ್ರಾಮಾಡತಕ್ಕದ್ದು.

ಪಂಚಾಯಿತರ ಪೈಕಿ ಖಾಲಿಯಾಗುವ ಇಸಮುಗಳು ಮೈಸೂರ ಗವರ್ನಮೆಂಟಿನವರಿಂದ ನೊಕರರ್ರಾಮಾಡಲ್ಪಡೋಣ.

104. ಹಾಗೆ ಮೃತಪಟ್ಟ ಅಸಮರ್ಥನಾದ ನಾಲಾಯಖಾದ ಯಾ ಕೆಲಸ ನೋಡಲಿಕ್ಕೆ ತಪ್ಪಿದ ಪಂಚಾಯಿತಿದಾರನ ಸ್ಥಾನಕ್ಕೆ ಮತ್ತೊಬ್ಬನನ್ನು ನೊಕರರ್ರಾಮಾಡಬೇಕಾದ ಕಂಪೆನಿಯು ಇತರ ಕಂಪೆನಿಯಿಂದಾಗಲಿ, ಕಂಪೆನಿಗಳಿಂದಾಗಲಿ, ಕಂಪೆನಿಗಳ ಪೈಕಿ ಯಾವವುಗಳಿಂದಾಗಲಿ ಬರಹಮೂಲಕವಾಗಿ ಅಪೇಕ್ಷಿಸಲ್ಪಟ್ಟ ತರುವಾಯ ಹದಿನಾಲ್ಕು ದಿವಸಗಳಒಳಗಾಗಿ ನೊಕರರ್ರಾಮಾಡದೆ ಹೋದರೆ, ಆಗ, ಸದರಿ ಕಂಪೆನಿಗಳಿಂದಾಗಲಿ ಅವುಗಳ ಪೈಕಿ ಯಾವವುಗಳಿಂದಾಗಲಿ ಅರ್ಜಿ ಬರೆದುಕೊಳ್ಳಲ್ಪಟ್ಟಲ್ಲಿ; ಮೈಸೂರ ಗವರ್ನಮೆಂಟಿನವರು ಒಬ್ಬ ಪಂಚಾಯಿತಿದಾರನನ್ನು ನೊಕರರ್ರಾಮಾಡಬಹುದು.

ಈ ಪ್ರಕಾರ ನೊಕರರ್ರಾಮಾಡಲ್ಪಟ್ಟಂತಾ ಪಂಚಾಯಿತಿದಾರನು ಈ ರೆಗ್ಯುಲೇಷನಿನ ಕಾರ್ಯಗಳಿಗಾಗಿ ಹಾಗೆ ತಪ್ಪಿದಂತಾ ಕಂಪೆನಿಯಿಂದ ನೊಕರರಾದಂತೆ ಗ್ರಹಿಸಲ್ಪಡತಕ್ಕದ್ದು.

ಪಂಚಾಯಿತಿದಾರರನ್ನು ನೊಕರರ್ರಾಮಾಡಿದ ಮೇಲೆ ತೆಗದು ಬಿಡಲಿಕ್ಕಾಗದು.

105. ಯಾವನಾದರೊಬ್ಬನು ಪಂಚಾಯಿತಿದಾರನಾಗಿ ನೊಕರರ್ರಾಮಾಡಲ್ಪಟ್ಟರೆ, ಅವನನ್ನು ನೊಕರರ್ರಾಮಾಡಿದಂತಾ ಕಂಪೆನಿಯು ಇತರ ಕಂಪೆನಿಯ ಸಮ್ಮತಿಯನ್ನು ಬರಹಮೂಲಕವಾಗಿ ಅಥವಾ ಪ್ರತಿ ಇತರ ಕಂಪೆನಿಯ ಸಮ್ಮತಿಯನ್ನು ಅದರ ಮದ್ರಿಗದ ಮೊಹರನಿಶಿ ಬರಹಮೂಲಕವಾಗಿ ಮುಚಿಂತವಾಗಿ ಪಡಕೊಂಡರೇನೇ ಹೊರ್ತು ಮೊದಲು ನೊಕರರಾದ ಮನುಷ್ಯನನ್ನು ತೆಗದು ಹಾಕಲಿಕ್ಕೆ ಅಧಿಕಾರ ಉಳ್ಳದ್ದಾಗಿರಕೂಡದು.

ಪಂಚಾಯಿತಿದಾರರಿಂದ ಮಧ್ಯಸ್ಥಗಾರನು ಮೊಕರರ್ಮಾಡಲ್ಪಡೋಣ.

106. ಇಬ್ಬರು ಯಾ ಹೆಚ್ಚು ಮಂದಿ ಪಂಚಾಯಿತಿದಾರರು ಮೊಕರರ್ಮಾಡಲ್ಪಟ್ಟಾಗ, ಅವರು ತಮಗೆ ರಿಫರ್ ಮಾಡಲ್ಪಟ್ಟ ಕೆಲಸದಲ್ಲಿ ಪ್ರವೇಶಿಸುವದಕ್ಕೆ ಮುಂಚಿತವಾಗಿ, ಅವರ ಅಂಪೈರ ಯಾನೆ ಮಧ್ಯಸ್ಥಗಾರನಾಗಿ ಇರಲಿಕ್ಕೆ ಒಬ್ಬ ನಿಷ್ಪಕ್ಷಪಾತಿಯಾದ ಮತ್ತು ಯೋಗ್ಯತೆವುಳ್ಳವನಾದ ಮನುಷ್ಯನನ್ನು ಬರಹ ಮೂಲಕವಾಗಿ, ಅವರದಸ್ಕತ್ತುನಿಶಿ ಮೊಕರರ್ಮಾಡತಕ್ಕದ್ದು.

ಮೈಸೂರ ಗವರರ್ನಮೆಂಟಿನವರಿಂದ ಮಧ್ಯಸ್ಥಗಾರನು ಮೊಕರರ್ಮಾಡಲ್ಪಡೋಣ.

107. ಒಂದು ವಿಷಯವು ಪಂಚಾಯಿತಿದಾರರಿಗೆ ರಿಫರ್ ಮಾಡಲ್ಪಟ್ಟ ತರುವಾಯ ಏಳು ದಿವಸಗಳ ಒಳಗಾಗಿ ಅವರು ಒಬ್ಬ ಮಧ್ಯಸ್ಥಗಾರನನ್ನು ಮೊಕರರ್ಮಾಡದೆ ಹೋದರೆ, ಆಗ, ಸದರಿ ಕಂಪೆನಿಗಳಿಂದಾಗಲಿ ಅವುಗಳ ಪೈಕಿ ಯಾವವುಗಳಿಂದಾಗಲಿ, ಅರ್ಜಿ ಬರದುಕೊಳ್ಳಲ್ಪಟ್ಟಲ್ಲಿ, ಮೈಸೂರಗವರರ್ನಮೆಂಟಿನವರು ಒಬ್ಬ ಅಂಪೈರನ್ನು ಮೊಕರರ್ಮಾಡಬಹುದು; ಮತ್ತು ಹಾಗೆ ಮೊಕರರಾದ ಅಂಪೈರು ಈ ರೆಗ್ಯುಲೇಷನಿನ ಕಾರ್ಯಗಳಿಗಾಗಿ ಪಂಚಾಯಿತಿದಾರರಿಂದ ಮೊಕರರಾದಂತೆಯೇ ಗ್ರಹಿಸಲ್ಪಡತಕ್ಕದ್ದು.

ಖಾಲಿಯಾದ ಇಸಮಿನ ಭರ್ತಿಬಗ್ಗೆ ಪಂಚಾಯಿತಿದಾರರಿಂದ ಮಧ್ಯಸ್ಥಗಾರನು ಮೊಕರರ್ಮಾಡಲ್ಪಡೋಣ.

108. ಇಬ್ಬರು ಯಾ ಹೆಚ್ಚು ಮಂದಿ ಪಂಚಾಯಿತಿದಾರರು ಮೊಕರರ್ಮಾಡಲ್ಪಟ್ಟಾಗ, ಅವರಿಗೆ ರಿಫರ್ ಮಾಡಲ್ಪಟ್ಟಂತಾ ವಿಷಯಗಳು ವ್ಯವಸ್ಥೆ ಹೊಂದುವದಕ್ಕೆ ಮುಂಚಿತವಾಗಿ ಅಂಪೈರು ಮೃತಪಟ್ಟರೆ, ಅಥವಾ ಅಸಮರ್ಥನಾದರೆ ಯಾ ನಾಲಾಖಾದರೆ, ಅಥವಾ ಎಡೆಬಿಡದೆ ಏಳುದಿನಗಳವರಿವಿಗೆ ಅಂಪೈರಾಗಿ ಕೆಲಸ ನೋಡಲಿಕ್ಕೆ ತಪ್ಪಿದರೆ, ಪಂಚಾಯಿತಿದಾರರು ಆತನಿಗೆ ಬದಲಾಗಿ ಅಂಪೈರಾಗಿ ಇರಲಿಕ್ಕೆ ನಿಷ್ಪಕ್ಷಪಾತಿಯಾಗಿಯೂ ಯೋಗ್ಯತೆ ಯುಳ್ಳವನಾಗಿಯೂ ಇರುವ ಮತ್ತೊಬ್ಬ ಮನುಷ್ಯನನ್ನು ಬರಹ ಮೂಲಕವಾಗಿ ಅವರ ದಸ್ಕತ್ತುನಿಶಿ ಮೊಕರರ್ಮಾಡತಕ್ಕದ್ದು.

ಖಾಲಿಯಾದ ಇಸಮಿನ ಭರ್ತಿಬಗ್ಗೆ ಮೈಸೂರ ಗವರರ್ನಮೆಂಟಿನವರಿಂದ ಮಧ್ಯಸ್ಥಗಾರನು ಮೊಕರರ್ಮಾಡಲ್ಪಡೋಣ..

109. ಒಬ್ಬ ಅಂಪೈರಿನ ಕಾಹಿಲೆ ಪ್ರಯುಕ್ತವಾದ ಅಶಕ್ತತೆಯಿಂದ ನಾಲಾಯಖ್ ಎನಿಸಿದರೆ ಅಥವಾ ಕೆಲಸ ನೋಡಲಿಕ್ಕೆ ತಪ್ಪಿದ ವಿಷಯದಲ್ಲಿ ಲಿಖಿತರೂಪವಾದ ನೋಟೀಸು ಕೊಡಲ್ಪಟ್ಟ ತರುವಾಯ ಏಳುದಿನಗಳ ಒಳಗಾಗಿ ಪಂಚಾಯಿತಿದಾರರು ಒಬ್ಬ ಅಂಪೈರನ್ನು ಮೊಕರರ್ಮಾಡದೇ ಹೋದರೆ, ಆಗ, ಸದರಿ ಕಂಪೆನಿಗಳಿಂದಾಗಲಿ ಅಥವಾ ಅವುಗಳ ಪೈಕಿ ಯಾವವುಗಳಿಂದಾಗಲಿ ಅರ್ಜಿ ಬರದು ಕೊಳ್ಳಲ್ಪಟ್ಟಲ್ಲಿ, ಮೈಸೂರ್ ಗವರರ್ನಮೆಂಟಿನವರು ಒಬ್ಬ ಅಂಪೈರನ್ನು ಮೊಕರರ್ಮಾಡಬಹುದು.

ಈ ಪ್ರಕಾರ ಮೊಕರರಾದ ಅಂಪೈರು ಈ ರೆಗ್ಯುಲೇಷನಿನ ಕಾರ್ಯಗಳಿಗಾಗಿ ಹಾಗೆ ತಪ್ಪುವಂಥಾ ಪಂಚಾಯಿತಿದಾರರಿಂದ ಮೊಕರರಾದಂತೆಯೇ ಗ್ರಹಿಸಲ್ಪಡತಕ್ಕದ್ದು.

ಒಬ್ಬರ ತರುವಾಯ ಮೊಕರರ್ಮಾಡಲ್ಪಡುವ ಪಂಚಾಯಿತಿದಾರರು ವ ಮಧ್ಯಸ್ಥಗಾರರು ಅವರಿಗೆ ಮೊದಲು ಇದ್ದಂತವರ ಅಧಿಕಾರಗಳನ್ನು ಉಳ್ಳವರಾಗಿರತಕ್ಕದ್ದು

110. ಒಬ್ಬ ಮುಂಚಿನ ಪಂಚಾಯಿತಿದಾರನ ಸ್ಥಾನಕ್ಕೆ ಮೊಕರರ್ಮಾಡಲ್ಪಡುವಂತಾ ಪ್ರತಿ ಪಂಚಾಯಿತಿದಾರನೂ, ಮತ್ತು ಒಬ್ಬ ಮುಂಚಿನ ಅಂಪೈರಿನ ಸ್ಥಾನಕ್ಕೆ ಮೊಕರರ್ಮಾಡಲ್ಪಡುವಂತಾ ಪ್ರತಿ ಅಂಪೈರೂ, ಅವರವರ ಪೂರ್ವಾಧಿಕಾರಿಗಳು ಎಷ್ಟು ಅಧಿಕಾರಗಳನ್ನೂ ಆಧಿಪತ್ಯಗಳನ್ನೂ ಉಳ್ಳವರಾಗಿದ್ದರೋ ಅಷ್ಟೇ ಅಧಿಕಾರಗಳನ್ನೂ ಆಧಿಪತ್ಯಗಳನ್ನೂ ಉಳ್ಳವರಾಗಿರತಕ್ಕದ್ದು.

ಮಧ್ಯಸ್ಥಗಾರನಿಗೆ ರಿಫರ್ ಮಾಡೋಣ.

111. ಇಬ್ಬರು ಯಾ ಹೆಚ್ಚು ಮಂದಿ ಪಂಚಾಯಿತಿದಾರರು ಇರುವಲ್ಲಿ ಅವರು ಕಂಪೆನಿಗಳು ಒಪ್ಪಂದ ಮಾಡಿಕೊಳ್ಳುವ ವಾಯಿದೆಯ ಒಳಗಾಗಿಯಾಗಲಿ ಅಥವಾ ಸದರಿ ವಾಯಿದೆ ತಪ್ಪಿ ಹೋದ ಪಕ್ಷದಲ್ಲಿ ಪಂಚಾಯಿತಿದಾರರಿಗೆ ರಿಫರ್ ಮಾಡಲ್ಪಟ್ಟದ್ದು ಮೊದಲು ಮೂವತ್ತು ದಿವಸಗಳೊಳಗಾಗಿ ಯಾಗಲಿ ತೀರ್ಪು ಕೊಡಲಿಕ್ಕೆ ಏಕೀಭವಿಸದೆ ಹೋದರೆ, ಆಗೆ ಅವರಿಗೆ ರಿಫರ್ ಮಾಡಲ್ಪಟ್ಟಿರುವಂತಾ ವಿಷಯಗಳು ಅಥವಾ ಅವುಗಳ ಪೈಕಿ ಅದುವರಿಗೆ ವ್ಯವಸ್ಥೆಯಾಗದೆ ಇರುವ ವಿಷಯಗಳು ಅವರ ಅಂಪೈರಿಗೆ ರಿಫರ್ ಮಾಡಲ್ಪಟ್ಟದ್ದಾಗಿರತಕ್ಕದ್ದು.

ಪುಸ್ತಕ ವಗೈರೆಗಳನ್ನು ತರಿಸುವದಕ್ಕೂ ಸಾಕ್ಷಿಗಾರರನ್ನು ಪ್ರಮಾಣದಮೇಲೆ ದರ್ಯಾಪ್ತು ಮಾಡುವದಕ್ಕೂ ಪಂಚಾಯಿತಿದಾರ್ ವಗೈರೆಗೆ ಉಂಟಾಗಿರುವ ಅಧಿಕಾರ.

112. ಪಂಚಾಯಿತಿದಾರನೂ ಪಂಚಾಯಿತಿದಾರರೂ, ಅಂಪೈರೂ ಅವರವರು ಆಯಾ ಕಂಪೆನಿಗಳ ಸ್ವಾಧೀನದಲ್ಲಿ ಯಾ ವಶದಲ್ಲಿರುವ ಅಥವಾ ಅವರವರು ಹಾಜರ್ಮಾಡಲಿಕ್ಕೆ ಶಕ್ತರಾಗಿರುವ ಮತ್ತು ಪಂಚಾಯಿತಿದಾರನಿಗೆ ಯಾ ಪಂಚಾಯಿತಿದಾರರಿಗೆ ಯಾ ಅಂಪೈರಿಗೆ ರಿಫರ್ ಮಾಡಲ್ಪಟ್ಟಂತಾ ವಿಷಯಗಳನ್ನು ಫೈಸಲ್ಮಾಡಲಿಕ್ಕೆ ಆವಶ್ಯಕವೆಂದು ತೋರುವ ಯಾವ ದಸ್ತಾವೇಜುಗಳನ್ನಾಗಲಿ ಸಾಕ್ಷಿ

ವನ್ನಾಗಲಿ ಹಾಜರ್ಮಾಡಿಸಿಕೊಳ್ಳ ಬಹುದು, ಮತ್ತು ಆಯಾ ಕಂಪೆನಿಗಳ ಸಾಕ್ಷಿಗಾರರನ್ನು ಪ್ರಮಾಣದ ಮೇಲೆ ದರ್ಯಾಫ್ತು ಮಾಡ ಬಹುದು.

ಪಂಚಾಯಿತಿ ವಿಷಯದಲ್ಲಿ ಅನುಸರಿಸಬೇಕಾದ ಕ್ರಮ.

113. ಕಂಪೆನಿಗಳು ಬೇರೆ ಬಗೆಯಾಗಿ ಎಕರಾರು ಮಾಡಿಕೊಂಡಲ್ಲಿ ಹೊರ್ತು ಅನ್ಯಥಾ, ಆಯಾ ಪಂಚಾಯಿತಿದಾರನೂ ಪಂಚಾಯಿತಿದಾರರೂ ಅಂಪೈರೂ ಅವರಿಗೆ ರಿಫರ್ ಮಾಡಲ್ಪಟ್ಟಿರುವಂತಾ ಕೆಲಸದಲ್ಲಿ ಅವನಿಗೆ ಯಾ ಅವರಿಗೆ ಯುಕ್ತವಾಗಿ ತೋರುವ ರೀತಿಯಾಗಿ ಪ್ರವರ್ತಿಸ ಬಹುದು

ಕಂಪೆನಿಗಳವರ ಗೈರುಹಾಜರಿಯಲ್ಲಿ ಪಂಚಾಯಿತಿದಾರರು ಕೆಲಸ ನೋಡಬಹುದು.

114. ಆಯಾ ಪಂಚಾಯಿತಿದಾರನೂ ಪಂಚಾಯಿತಿದಾರರೂ ಅಂಪೈರೂ ಎಲ್ಲಾ ಯಾ ಯಾವದಾದರೂ ಕಂಪೆನಿಯ ಗೈರ್ ಹಾಜರಿಯ ಪ್ರತಿಸಂಗತಿಯಲ್ಲಿ ಆ ಬಗ್ಯೆ ಆಯಾ ಕಂಪೆನಿಗಳಿಗೆ ನೋಟೀಸು ಕೊಟ್ಟು, ಆ ತರುವಾಯ ಪಂಚಾಯಿತಿದಾರನಿಗೆ ಯಾ ಪಂಚಾಯಿತಿದಾರರಿಗೆ ಯಾ ಅಂಪೈರಿಗೆ ಯುಕ್ತವಾಗಿ ತೋರುವ ಪ್ರಕಾರ ಕೆಲಸದಲ್ಲಿ ಪ್ರವರ್ತಿಸಬಹುದು,

ಅನೇಕ ತೀರ್ಪುಗಳನ್ನು ಮಾಡಬಹುದು.

115. ಆಯಾ ಪಂಚಾಯಿತಿದಾರನೂ ಪಂಚಾಯಿತಿದಾರರೂ ಅಂಪೈರೂ ಅವನಿಗೆ ವ ಅವರಿಗೆ ಯುಕ್ತವಾಗಿ ತೋರಿದರೆ ರಿಫರ್ ಮಾಡಲ್ಪಟ್ಟಂತಾ ಎಲ್ಲಾ ವಿಷಯಗಳಿಗೆ ಒಂದೇ ತೀರ್ಪನ್ನು ಕೊಡುವದಕ್ಕೆ ಬದಲಾಗಿ ಒಂದೊಂದು ವಿಷಯಕ್ಕೆ ಒಂದೊಂದು ತೀರ್ಪಿನ ಪ್ರಕಾರ ಅನೇಕ ತೀರ್ಪುಗಳನ್ನು ಕೊಡಬಹುದು.

ಆ ವಿಷಯಗಳನ್ನು ಕುರಿತು ಅಂತ ಪ್ರತಿ ತೀರ್ಪು ಸದರಿ ತೀರ್ಪಿನಲ್ಲಿ ನಮೂದಿಸಿರುವಷ್ಟು ಅಂದರೆ ಪಂಚಾಯಿತಿ ಬಾಬತು ಕರಾರಿನಲ್ಲಿ ದಾಖಲಾಗಿರುವಷ್ಟು ಕಾಲದವರಿಗೆ ಅಥವಾ ಹಾಗೆ ಕಾಲ ದಾಖಲಾಗದೇ ಇದ್ದರೆ, ಪಂಚಾಯಿತಿದಾರನಿಗೆ ಗೊತ್ತುಮಾಡಲಿಕ್ಕೆ ಎಷ್ಟು ಅಧಿಕಾರ ಉಂಟೋ ಅವರಿಗೆ ಅದು ವ್ಯಾಪಿಸುವ ಸಮಸ್ತ ವಿಷಯಗಳಿಗೆ ಬದ್ಧವಾಗಿರತಕ್ಕದ್ದು, ಮತ್ತು ತೀರ್ಪು ಮಾಡಲ್ಪಟ್ಟಂತಾ ವಿಷಯಗಳೆಲ್ಲಾ ರಿಫರ್ ಮಾಡಲ್ಪಟ್ಟಂತೆಯೇ ಗ್ರಹಿಸಲ್ಪಡತಕ್ಕದ್ದು, ಮತ್ತು ಇತರ ವಿಷಯಗಳನ್ನು ಕುರಿತು ಯಾ ಯಾವ ವಿಷಯಗಳನ್ನಾದರೂ ಕುರಿತು ಆಗಲೇಯಾಗಲಿ ಆ ತರುವಾಯವಾಗಲಿ ತೀರ್ಪು ಮಾಡಲ್ಪಡದೆ ಇದ್ದರೂ ಚಿಂತೆಯಿಲ್ಲ.

ತಕ್ಕ ಕಾಲದಲ್ಲಿ ಮಾಡೋಣಾದ ತೀರ್ಪುಗಳು ಸಮಸ್ತ ಕಕ್ಷಿಗಾರರನ್ನೂ ಬದ್ಧರನ್ನಾಗಿ ಮಾಡಬೇಕು.

116. ಪಂಚಾಯಿತಿದಾರನ ಯಾ ಪಂಚಾಯಿತಿದಾರರ ಯಾ ಅಂಪೈರಿನ ತೀರ್ಪು ಬರಿಯಲ್ಪಟ್ಟದ್ದಾಗಿ ಅವನಿಂದ ಯಾ ಅವರಿಂದ ದಸ್ಕತ್ತು ಹಾಕಲ್ಪಟ್ಟು ಕಂಪೆನಿಗಳಿಂದ ಎಕರಾರು ಮಾಡಲ್ಪಟ್ಟಿರುವ ಕಾಲದವೊಳಗಾಗಿ ಅಥವಾ, ಅಂತಾ ಎಕರಾರು ತಪ್ಪಿದ ಪಕ್ಷದಲ್ಲಿ ಸದರಿ ತಕರಾರಿನಲ್ಲಿರುವ ವಿಷಯಗಳು (ಸಂಗತ್ಯಾನುಗುಣವಾಗಿ) ಪಂಚಾಯಿತಿದಾರನಿಗೆ ಯಾ ಪಂಚಾಯಿತಿದಾರರಿಗೆ ಯಾ ಅಂಪೈರಿಗೆ ರಿಫರ್ ಮಾಡಲ್ಪಟ್ಟ ತಾರೀಖ್ ಲಾಗಾಯಿತು ಮೂವತ್ತು ದಿವಸಗಳ ಒಳಗಾಗಿ ಕಂಪೆನಿಗಳಿಗೆ ಕೊಡಲಿಕ್ಕೆ ಸಿದ್ಧವಾದರೆ ಅದು ಕಂಪೆನಿಗಳಿಗೆ ಬದ್ಧವಾಗಿಯೂ ಆಖೈರ ಫೈಸಲಾಗಿಯೂ ಇರತಕ್ಕದ್ದು.

ತೀರ್ಪುಕೊಡತಕ್ಕ ವಾಯಿದೆಯನ್ನು ಹೆಚ್ಚಿಸಲಿಕ್ಕೆ ಮಧ್ಯಸ್ಥಗಾರನಿಗೆ ಉಂಟಾಗಿರುವ ಅಧಿಕಾರ.

117. ಪರಂತು ಯಾವಾಗಲೂ (ಕಂಪೆನಿಗಳು ಬೇರೆ ಬಗೆಯಾಗಿ ಎಕರಾರು ಮಾಡಿಕೊಂಡಲ್ಲಿ ಹೊರ್ತು ಅನ್ಯಥಾ) ಅಂಪೈರು ಆಗಿಂದಾಗ್ಯೆ ಬರೆದು ದಸ್ಕತು ಮಾಡಿ ತದ್ದ್ವಾರಾ ತೀರ್ಪುಕೊಡತಕ್ಕ ವಾಯಿದೆಯನ್ನು ಹೆಚ್ಚಿಸಬಹುದು. ಹೆಚ್ಚಿಸೋಣಾದ ವಾಯಿದೆಯೊಳಗಾಗಿ ಕೊಡಲಿಕ್ಕೆ ಅದು ಮಾಡಲ್ಪಟ್ಟು ಸಿದ್ಧವಾದರೆ ನಿರ್ದೇಶಿಸೋಣಾದ ಕಾಲದೊಳಗಾಗಿ ಸಿದ್ಧಮಾಡಲ್ಪಟ್ಟಂತೆ ಪ್ರಯೋಜನವನ್ನುಳ್ಳದ್ದಾಗಿ ಸಲುವಳಿಯಾಗತಕ್ಕದ್ದು.

ತೀರ್ಪುಗಳು ಪದ್ಧತಿ ಪ್ರಕಾರ ಕೊಡಲ್ಪಡಲಿಲ್ಲವೆಂಬ ಸಬಬಿನಮೇಲೆ ತಿರಸ್ಕರಿಸಲ್ಪಡಕೂಡದು.

118. ಈ ರೆಗ್ಯುಲೇಷನಿಗನುಗುಣವಾಗಿ ಪಂಚಾಯಿತಿಯ ಮೂಲಕ ಮಾಡೋಣಾದ ಯಾವ ತೀರ್ಪಾಗಲಿ ಅಕ್ರಮವಾಗಿ ಮಾಡಲ್ಪಟ್ಟಿತು ಯಾ ಪದ್ಧತಿಗೆ ವಿರೋಧವಾಗಿ ಮಾಡಲ್ಪಟ್ಟಿತು ಎಂಬ ಸಬಬಿನ ಮೇಲೆ ತಿರಸ್ಕರಿಸಲ್ಪಡಕೂಡದು.

ತೀರ್ಪುಗಳಿಗೆ ವಿಧೇಯರಾಗತಕ್ಕದ್ದು.

119. ಈ ರೆಗ್ಯುಲೇಷನಿಗನುಗುಣವಾಗಿ ಯಾವ ತೀರ್ಪಿನಿಂದಲಾದರೂ ಕಂಪೆನಿಗಳು ಎಷ್ಟು ಮಟ್ಟಿಗೆ ಬದ್ಧರಾಗಿರುತ್ತಾರೋ ಅಷ್ಟರಮಟ್ಟಿಗೆ ಮಾತ್ರ ಆಗಿಂದಾಗ್ಯೆ ಅವರು ಅನ್ಯಥಾ ಒಪ್ಪಿಕೊಳ್ಳುವಲ್ಲಿ ಹೊರ್ತು ಈ ರೆಗ್ಯುಲೇಷನಿಗನುಗುಣವಾದ

ಪ್ರತಿ ತೀರ್ಪಿನ ಪ್ರಕಾರ ನ್ಯಾಯವಾಗಿ ಮಾಡಬೇಕಾದ ಮಾಡದೆ ಬಿಡಬೇಕಾದ ಯಾ ಮಾಡಗೊಡಿಸಬೇಕಾದ ಸಮಸ್ತ ವಿಷಯುಗಳನ್ನು ಹಾಗೆಯೇ ಮಾಡತಕ್ಕದ್ದು, ಮಾಡದೆ ಬಿಡತಕ್ಕದ್ದು ಯಾ ಮಾಡಗೊಡಿಸತಕ್ಕದ್ದು.

ಕರಾರುಗಳು, ಪಂಚಾಯಿತಿಗಳು ವ ತೀರ್ಪುಗಳು ಸಲುವಳಿಯಾಗುವವುಗಳಾಗಿರತಕ್ಕದ್ದು.

120. ಈ ರೆಗ್ಯುಲೇಷನಿಗನುಗುಣವಾದ ಸಮಸ್ತ ಕರಾರುಗಳೂ, ದಾಖಲೆಗಳೂ, ಪಂಚಾಯಿತಿಗಳೂ, ತೀರ್ಪುಗಳೂ, ಆಯಾ ಕಂಪೆನಿಗಳವರಿಂದಲೂ ಅನ್ಯಥಾ ಅವರವರ ಅಧಿಕಾರದವರುಗಳಾಗಿ ಆಯಾ ಕೋರ್ಟುಗಳವರಿಂದಲೂ ಪೂರಾ ಜಾರಿಲಿ ತರಲ್ಪಡತಕ್ಕದ್ದು ; ಮತ್ತು ಕೋರ್ಟುಗಳವರಿಗೆ ಯುಕ್ತವಾಗಿ ತೋರಿದಲ್ಲಿ, ಅವುಗಳನ್ನು ಮಾಡಬೇಕು ಯಾ ಅನುಸರಿಸಿ ನಡಿಯಬೇಕೆಂದು ಆಯಾ ಕಂಪೆನಿಗಳ ಮೇಲೆ ಯಾ ಅವರ ಸೊತ್ತಿನಮೇಲೆ ಯಾವ ಕೋರ್ಟಿನವರಾದರೂ ಜಡ್ಜಿಯಾದರೂ ಯಾವ ಪ್ರೊಸೆಸ್ಸನ್ನಾದರೂ ಕೊಟ್ಟು ತದ್ವಾರಾ ಹುಕುಂ ಮಾಡಬಹುದು, ಮತ್ತು ಅವಶ್ಯವಾದಲ್ಲಿ, ಅವುಗಳನ್ನು ಆ ಬಗ್ಗೆ ಉಂಟುಮಾಡಬಹುದು.

ಪಂಚಾಯಿತಿಯ ವ ತೀರ್ಪಿನ ಖರ್ಚುಗಳು.

121. ಕಂಪೆನಿಗಳವರು ಬೇರೆ ಬಗೆಯಾಗಿ ಏಕರಾರ ಮಾಡಿಕೊಂಡಲ್ಲಿ ಹೊರ್ತು, ಅನ್ಯತ್ರ ಪಂಚಾಯಿತಿಗೆ ಹಾಜರಾಗುವದರಮೂಲಕ ಮತ್ತು ತೀರ್ಪಿನಬಾಬತು ಖರ್ಚುಗಳು ಪಂಚಾಯಿತಿದಾರರಿಂದ ವ ಪಂಚಾಯಿತಿದಾರರಿಂದ ವ ಅಂಪೈರಿನಿಂದ ಅವರವರ ಇಷ್ಟಾನುಸಾರವಾಗಿ ನಡಿಸತಕ್ಕವಾಗಿರತಕ್ಕದ್ದು.

ಖರ್ಚುಗಳ ಸಂದಾಯ.

122. ಕಂಪೆನಿಗಳು ಬೇರೆ ಬಗೆಯಾಗಿ ಏಕರಾರು ಮಾಡಿಕೊಂಡಲ್ಲಿ ಹೊರ್ತು ಅನ್ಯತ್ರ, ತೀರ್ಪಿನಲ್ಲಿ ಅನ್ಯಥಾ ಗೊತ್ತು ಮಾಡಲ್ಪಡದೆ ಇದ್ದರೆ, ಅಷ್ಟರ ಮಟ್ಟಿಗೆ ಪಂಚಾಯಿತಿಗೆ ಹಾಜರಾಗುವದರ ಮತ್ತು ತೀರ್ಪಿನ ಬಾಬತು ಖರ್ಚುಗಳು ಸದರಿ ಕಂಪೆನಿಗಳಿಂದ ಸಮಭಾಗಗಳಾಗಿ ಭರಿಸಲ್ಪಟ್ಟು ಪಾವತಿ ಮಾಡಲ್ಪಡತಕ್ಕದ್ದು, ಮತ್ತು ಇತರ ವಿಷಯಗಳಲ್ಲಿ ಆಯಾ ಕಂಪೆನಿಗಳ ಖರ್ಚುಗಳನ್ನು ಆಯಾ ಕಂಪೆನಿಗಳೇ ಭರಿಸತಕ್ಕದ್ದು.

ಪಂಚಾಯಿತರ ಬಳಿ ಕಳಹಿಸೋಣವಾದ್ದನ್ನು ಕೋರ್ಟಿನಲ್ಲಿ ಫೈಲ್ ಮಾಡಬಹುದು.

123. ಆ ವಿಷಯದಲ್ಲಿ ಸಂಬಂಧಪಟ್ಟವನಾಗಿರುವ ಯಾವ ಕಕ್ಷಿಗಾರನಾದರೂ ಅರ್ಜಿ ಬರದುಕೊಂಡಲ್ಲಿ ಹಾಗೆ ಪಂಚಾಯಿತರಬಳಿ ಕಳುಹಿಸೋಣವಾದ್ದು ಚೀಫ್ ಕೋರ್ಟಿನಲ್ಲಿ ದಾಖಲ್ಮಾಡಲ್ಪಡಬಹುದು, ಮತ್ತು ದಾಖಲೆಬಗ್ಗೆ ಕೋರ್ಟಿನವರು ತಮಗೆ ಯುಕ್ತವಾಗಿ ತೋರುವ ವಿಧಿಗಳೊಂದಿಗೆ ಅದರಮೇಲೆ ಹುಕುಂ ಮಾಡಬಹುದು; ಮತ್ತು ಅಂಥಾ ಪ್ರತಿ ಹುಕುಮಿನ ವಿಷಯವಲ್ಲೂ ತತ್ಸಂಬಂಧವಾದ ಸಮಸ್ತ ನಡವಳಿತೆಗಳ ವಿಷಯದಲ್ಲೂ ಸಾಧ್ಯವಾದಷ್ಟು ಮಟ್ಟಿಗೆ, ಸಿವಿಲ್ ಪ್ರೊಸಿಡ್ಯೂರ್ ಕೋಡಿನ ನಿಬಂಧನೆಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು.

PART IV.

4ನೇ ಭಾಗ.

Winding-up of Companies and Associations under this Regulation.

ಈ ರೆಗ್ಯುಲೇಷನ್ ಪ್ರಕಾರ ಕಂಪೆನಿಗಳನ್ನೂ ಸಮಾಜಗಳನ್ನೂ ಮುಚ್ಚಿ ಬಿಡೋಣ.

Preliminary.

ಅವತರಣಿಕೆ.

ಕಂಟ್ರಿಬ್ಯೂಟರಿ ಅಂದರೆ "ಸಹಾಯಕನು" ಎಂಬದರ ಅರ್ಥ.

124. ಕಂಟ್ರಿಬ್ಯೂಟರಿ ಯಾನೆ "ಸಹಾಯಕನು" ಎಂಬ ಮಾತು ಈ ರೆಗ್ಯುಲೇಷನಿಗನುಗುಣವಾದ ಕಂಪೆನಿಯನ್ನು ಮುಚ್ಚಿ ಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ ಅದರ ಸಾಲಗಳಬಗ್ಗೆ ಕೊಡಲಿಕ್ಕೆ ಜವಾಬುದಾರನಾಗಿರುವ ಪ್ರತಿ ಮನುಷ್ಯನು ಎಂದು ಅರ್ಥವಾಗತಕ್ಕದ್ದು; ಅದು ಸಹಾಯಕರನ್ನಾಗಿ ಯಾರನ್ನು ಗ್ರಹಿಸಬೇಕೋ ಅವರನ್ನು ಗೊತ್ತು ಮಾಡುವದರಬಾಬತು ಸಮಸ್ತ ನಡವಳಿತೆಗಳಲ್ಲೂ ಅಂತಾ ಮನುಷ್ಯರನ್ನು ಗೊತ್ತು ಮಾಡುವದಕ್ಕೆ ಮುಂಚಿತವಾಗಿ ನಡಿಯುವ ಸಮಸ್ತ ನಡವಳಿತೆಗಳಲ್ಲೂ ಸಹಾಯಕನಾಗಿ ಭಾವಿಸಲ್ಪಟ್ಟಿರುವ ಯಾವ ಮನುಷ್ಯನನ್ನಾದರೂ ಸೇರಿಸಿಕೊಂಡಿರತಕ್ಕದ್ದು.

461

125. ಈ ರೆಗ್ಯುಲೇಷನಿಗನುಗುಣವಾದ ಕಂಪೆನಿಯನ್ನು ಮುಚ್ಚಿ ಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ ಅದರ ಸಾಲಗಳಬಗ್ಯೆ ಕೊಡಲಿಕ್ಕಿರುವ ಮನುಷ್ಯನ ಜವಾಬುದಾರಿಯು ಅಂತಾ ಮನುಷ್ಯನ ಜವಾಬುದಾರಿ ಷುರುವಾದ ಕಾಲದಲ್ಲಿ ಆವ ...ಪಟ್ಟಿ. ಅಂತಾ ಜವಾಬುದಾರಿಯನ್ನು ಜಾರೀಲಿ ತರತಕ್ಕಬಗ್ಯೆ ಇಸ್ನು ...ಕಾರ ಕಾಲ್ಸ ಎಂಬ ವಹಾತಗಳು ಮಾಡಲ್ಪಟ್ಟ ಕಾಲದಲ್ಲಿಯಾ ಆಯಾ ಕಾಲ ಮತ್ತು ಇನ್ಸಾಲ್ವೆಂಟ ಅಂದರೆ ದಿವಾಳಿಯಾದ ಸಹಾಯಕನ ವಿಷ...ತಗಳ ಶಿವಾಯ ಆತನ ಜವಾಬುದಾರಿಬಗ್ಯೆ ಇಸ್ನು ಮೇಲೆ ಮಾಡಲ್ಪಡುವ ...ಗು ಅವನ ಆಸ್ತಿಯಿಂದ ಬರಬೇಕೆಂದು ರುಜುಪಡಿಸಿ ಕೊಡಬೇಕಾದ್ದು ನ್ಯಾಯ...

ಸಹಾಯಕನ ಜವಾಬುದಾರಿಯ ಸ್ವಭಾ... ನಿಂದ ಮಾಡಲ್ಪಟ್ಟ ಸಾಲದಂತೆ ಗ್ರ... ಮೇಲೆ ನಮೂದಿಸೋಣಾಗು... ...ಲ್ಲಿ ಪಾವತಿ ಮಾಡಲ್ಪ... ...

...ಸಹಾಯ...ನ ಜವಾಬುದಾರಿಯಮೇಲೆ ಆಧಾರವಾದ ಯಾವ ದಾವೆಯನ್ನು ಯಾವ ಸ್ಮಾಲ್‌ಕಾಜ್ ...ರ್ಟನವರು ಹಿಡೆಯಕೊಡದು.

126. ಇಸ್ನು ಮೇಲೆ ನಮೂದಿಸೋಣಾಗುವ ಸಹಾಯಕರ ಫೇರೀಸ್ತಿನಲ್ಲಿ ತನ್ನ ಹೆಸರು ದಾಖಲಾಗುವದಕ್ಕೆ ಮುಂಚಿತವಾಗಿ ಯಾ ಆ ತರುವಾಯ ಯಾವ ಸಹಾಯಕನಾದರೂ ಮೃತಪಟ್ಟರೆ, ಹಾಗೆ ಮೃತಪಟ್ಟ ಸಹಾಯಕನ ಜವಾಬುದಾರಿ ತಪ್ಪಿ ಹೋಗುವಂತೆ ಅವನ ಸ್ವಂತ ವಾರಸುದಾರರೂ ಬಾಧ್ಯಸ್ತರೂ ಉಯಿಲಿನ ಮುಖಾಂತ್ರ ಸೊತ್ತು ಪಡೆಕೊಂಡವರೂ ಕ್ರಮಪ್ರಕಾರ ನ್ಯಾಯ ವಿಮರ್ಶೆಯಾಗುವ ಕಾಲದಲ್ಲಿ ಸದರಿ ಕಂಪೆನಿಯ ಸಾಲಗಳಬಗ್ಯೆ ಕೊಡಲಿಕ್ಕೆ ಅರ್ಹರಾಗಿರತಕ್ಕದ್ದು; ಮತ್ತು ಹಾಗೆಯೇ ಅಂತಾ ಸ್ವಂತ ವಾರಸುದಾರರೂ ಬಾಧ್ಯಸ್ತರೂ ಉಯಿಲಿನ ಮುಖಾಂತ್ರ ಸೊತ್ತು ಪಡೆಕೊಂಡವರೂ ಸಹಾಯಕರೆಂದು ಗ್ರಹಿಸಲ್ಪಡತಕ್ಕದ್ದು.

ಸಹಾಯಕನ ಮರಣದ ಸಂದರ್ಭದಲ್ಲಿ ಅ... ನಂತರದ ಸಹಾಯಕರು ಯಾರಾಗತಕ್ಕದ್ದು.

127. ಸಹಾಯಕರ ಫೇರೀಸ್ತಿನಲ್ಲಿ ತನ್ನ ಹೆಸರು ದಾಖಲಾಗುವದಕ್ಕೆ ಮುಂಚಿತವಾಗಿ ಯಾ ಆ ತರುವಾಯ, ಯಾವ ಸಹಾಯಕನಾದರೂ ಇನ್ಸಾಲ್ವೆಂಟ ಅಂದರೆ ದಿವಾಳಿ...ಯಾದರೆ, ಮುಚ್ಚಿ ಬಿಡಲಿಕ್ಕೆ ಸಂಬಂಧಪಟ್ಟ ಸಮಸ್ತ ಕಾರ್ಯ...ಗಳ ಬಗ್ಯೆ ಅಂತಾ ಇನ್ಸಾಲ್ವೆಂಟಿನ ಅಸ್ಸೈನೀಸ್ ಯಾನೆ ನಿಯಾ...ಕರು ...ಡತಕ್ಕ ಅವನಿಗೆ ಬದಲಾಗಿರುವಂತೆ ಗ್ರಹಿಸಲ್ಪಡತಕ್ಕದ್ದು, ಹಾಗೆಯೇ ಸಹಾಯಕರಾಗಿರುವಂತೆಯೂ ಗ್ರಹಿಸ...ತಾ ಇನ್ಸಾ...ದ್ದು, ಮತ್ತು ಕಂಪೆನಿಯನ್ನು ಮುಚ್ಚಿ ಬಿಡೋಣಾಗುವಲ್ಲಿ ಅದರ ಸಾಲಗಳಬಗ್ಯೆ ಕೊಡಲಿಕ್ಕೆ ಅ...ಸಾಲ್ವೆಂಟಿನ ಸೊಲ್ವೆಂಟ ಅರ್ಹನಾಗಿದ್ದದ್ದರಿಂದ ಅವನಿಂದ ಬಾಕಿಯಾಗುವ ಯಾವ ಹಣಗಳಾದರೂ ಅಂತಾ ಇ...ಗೆಯಾಗಿ ನ್ಯಾಯರೀತ್ತಿನಿಂದ ಬರಬೇಕೆಂದು ರುಜು ಮಾಡಿಕೊಡತಕ್ಕ ಒಪ್ಪಿಕೊಳ್ಳುವದಕ್ಕೂ ಅಥವಾ ಫೇರೆ ...ಕೊಳ್ಳಲ್ಪಡಬಹುದು. ...ತ್ಯಾ ಅವನ ಸೊತ್ತುಗಳಿಂದ ಪಾವತಿ ಮಾಡಲ್ಪಡೋಣವನ್ನು ಒಪ್ಪಿಕೊಳ್ಳುವದಕ್ಕೂ ಕ...

. ಸಹಾಯಕನು ದಿವಾಳಿಯಾಗುವ ಸಂದರ್ಭದಲ್ಲಿ ಮಕ್ಯಾರು ಸಹಾಯಕರು ಆಗತಕ್ಕದ್ದು.

Winding-up by Court.

ಕೋರ್ಟನವರಿಂದ ಮುಚ್ಚಿ ಬಿಡಲ್ಪಡೋಣ.

128. ಈ ರೆಗ್ಯುಲೇಷನಿಗನುಗುಣವಾದ ಈ ಕೆಳಗಿನ ಸಂದರ್ಭ...ಗಳಲ್ಲಿ ಇಸ್ನು ಮೇಲೆ ವಿವರಿಸೋಣಾಗುವಂತೆ ಕೋರ್ಟನವರಿಂದ ಮು...ಚ್ಚಿ ಬಿಡಲ್ಪಡಬಹುದು ಅವು (ಯಾವವೆಂದರೆ) :—

ಯಾವ ಸಂದರ್ಭಗಳಲ್ಲಿ ಕಂಪೆನಿಯು ಕೋರ್ಟನವರಿಂದ ಮುಚ್ಚಲ್ಪಡಬಹುದು ಎಂಬದು.

(a) ಕಂಪೆನಿಯು ಕೋರ್ಟನವರಿಂ...ದ ಮುಚ್ಚಿ ಬಿಡಲ್ಪಡಬೇಕೆಂದು ಸದರಿ ಕಂಪೆನಿಯು ವಿಶೇಷ ನಿರ್ಣಯವನ್ನು ಮಾಡಿದರೆ;

(b) ಕಂಪೆನಿ...ಯು ಚ... ಟಗ್ಗಟ್ಟಾದ್ದು ಮೊದಲು ಒ...ದು ವರ್ಷದ ಒಳಗಾಗಿ ಕೆಲಸ ಷುರು ಮಾಡದಿದ್ದರೆ, ಅಥ...ವಾ ಪೂರಾ ಒಂದು ಸಂವತ್ಸರ ಕಾಲದವರಿಗೆ ಅದರ ಕೆಲಸವನ್ನು ಮೋಕೂಫ್ ಮಾಡಿ ಇಟ್ಟರೆ;

(c) ...ಮೆಂಬರುಗಳ ಸಂಖ್ಯೆಯು ಏಳುಮಂದಿಗಿಂತ ಕಮ್ಮಿಯಾಗಿ ಹೋದರೆ;

(d) ...ಕಂಪೆನಿಯು ಅದರ ಸಾಲಗಳನ್ನು ತೀರಿಸಲಿಕ್ಕೆ ಶಕ್ತಿಯಿಲ್ಲದ್ದಾದರೆ;

ಅಂತಾ ಒಂದು ಇತರ ಕಾರಣದಿಂದ ಕಂಪೆನಿಯು ಮುಚ್ಚಿ ಬಿಡಲ್ಪಡತಕ್ಕದ್ದು ನ್ಯಾಯ ವ ವಿಹಿತವಾ...

463

ಯವರಿಗೆ ತೃಪ್ತಿ ಕರವಾಗಿ ಮೋಕದ್ದಮೆಯು ಸ್ಥಾಪಿತವಾಗುವವರಿವಿಗೂ ಕ್ಷಣ ಪ್ರತಿ ಅರ್ಜಿಯನ್ನು ಕೋರ್ಟಿನವರು ಕೇಳಕೂಡದ್ದು; ಮತ್ತು ಅಂಥಾ ಜಾರಿ ಹಾಕಲ್ಪಟ್ಟ ವಿಲ್ಲಂಗಳ ಮೊಬಲಗಿಗೆ ಸಮವಾಗಿ ಕಂಪನಿಯವರಿಂದ ಬರವಮಾಡಿಕೊಳ್ಳಲ್ಪಡಬಹುದಾದ ಮುಂದಿನ ಪ್ರಿಮಿಯಂಗಳನ್ನು ಕೇರಿಸಿಕೊಂಡು, ವಾಸ್ತವ್ಯವಾಗಿ ಬಂದರ ಮೇಲೆ ಹಾಕಿರುವ ಆಸ್ತಿಗಳು ಬರುವದಕ್ಕೆ ಸಾಕಾದಷ್ಟು ಮೊಬಲಗಿನ ಕಾಲಿನ ಮಾಡಲ್ಪಡದ ಅಂದರೆ ವರಾತ ಮಾಡಲ್ಪಡದ ಮೂಲದ್ರವ್ಯವು ಸದರಿ ಕಂಪೆನಿಗೆ ಇದ್ದರೆ ಸದರಿ ಕೋರ್ಟಿನವರು ಆ ಅರ್ಜಿಯ ಬಾಬತು ಮುಂದಿನ ವ್ಯವಹರಣೆಗಳನ್ನು, ಸದರಿ ವರಾತ ಮಾಡಲ್ಪಡದ ಮೂಲದ್ರವ್ಯವಾಗಲಿ ತಕ್ಕಷ್ಟು ಮಟ್ಟಿಗೆ ಅದರ ಭಾಗವಾಗಲಿ ವರಾತ ಮಾಡಲ್ಪಡುವ ಹಾಗೆ ತಕ್ಕ ಕಾಲದವರಿಗೆ ನಿಲ್ಲಿಸತಕ್ಕದ್ದು; ಮತ್ತು ಯಾವ ಕಾಲದವರಿವಿಗೆ ವ್ಯವಹರಣೆಗಳು ನಿಲ್ಲಿಸಲ್ಪಟ್ಟಿದ್ದವೋ ಆ ಮೊದಲಿನ ವಾಯಿದೆಯ ಅಥವಾ ನಿಲ್ಲಿಸಿರುವ ವಾಯಿದೆಯ ಆಖೈರಿನಲ್ಲಿ ಸದರಿ ವಿಲ್ಲಂಗಳಿಗೆ ಸಮವಾಗಿ ಮೊದಲೇ ಬಂದರ ಮೇಲೆ ಹಾಕೋಣಾಗಿರುವ ಆಸ್ತಿಗಳಂತೆ ಕಾಲ್ಸ ಗಳ (ವರಾತಗಳ) ದ್ವಾರಾ ಅಂತಾ ಮೊಬಲಗು ವಸೂಲಾಗದೆ ಇರುವ ಪಕ್ಷದಲ್ಲಿ, ಸದರಿ ಕಂಪೆನಿಯವರು ತಮ್ಮ ಸಾಲಗಳನ್ನು ತೀರಿಸುವದಕ್ಕೆ ಅಶಕ್ತರಾಗಿರುವ ಹಾಗೆ ರುಜವಾಗಿದ್ದಂತೆ ಸದರಿ ಅರ್ಜಿಯ ಮೇಲೆ ಒಂದು ಹುಕುಂ ಕೊಡಲ್ಪಡತಕ್ಕದ್ದು.

ಟಿಪ್ಪಣಿ.—ಈ ಪ್ರಕರಣದಲ್ಲಿ ಇರುವಂತಾದ್ದು ಯಾವದೂ ಮಾಡಲ್ಪಟ್ಟಿರುವ ಒಂದು ಕಾಲ್ಸಿನ (ವರಾತದ) ವಿಷಯದಲ್ಲಿ ಯಾ ಕೊಡಬೇಕಾಗಿರುವ ಇತರ ಹಣಗಳ ವಿಷಯದಲ್ಲಿ ಸದರಿ ಕಂಪೆನಿಯವರಿಗೆ ಬಾಕಿ ಇರುವ ಆ ಕಂಪೆನಿಯ ಮೆಂಬರು ಒಂದು ಅರ್ಜಿ ಕೊಡುವಂತೆ ಅಧಿಕಾರ ಕೊಡುವದಿಲ್ಲ.

ಮುಕ್ತಿ ಬಿಡಬೇಕೆಂಬುವ ಅರ್ಜಿಯನ್ನು ಕೊಡುವದಕ್ಕೆ ಕಾಂಟ್ರಿಬ್ಯೂಟರಿ ಅಂದರೆ ಸಹಾಯಕನು ಯಾವಾಗ ಅರ್ಹನಾಗಿರುವದಿಲ್ಲ.

132. ಈ ರೆಗ್ಯುಲೇಷನಿಗನುಗುಣವಾಗಿ ಒಂದು ಕಂಪೆನಿಯ ಯಾವ ಕಾಂಟ್ರಿಬ್ಯೂಟರಿ ಅಂದರೆ ಸಹಾಯಕನಾಗಲಿ ಅಂತಾ ಕಂಪೆನಿಯನ್ನು ಮುಕ್ತಿ ಬಿಡುವದಕ್ಕೋಸ್ಕರ ಒಂದು ಅರ್ಜಿ ಕೊಡಕೂಡದು. ಆದರೆ ಸದರಿ ಕಂಪೆನಿಯ ಮೆಂಬರುಗಳು ಏಳುಮಂದಿಗಿಂತಲೂ ಕಡಮೆಯಾದರೂ, ಯಾವದನ್ನು ಕುರಿತು ತಾನು ಶೇರದಾರನಾಗಿದ್ದಾನೋ ಆ ಹಿಸ್ಸೆಗಳಾಗಲಿ ಅವುಗಳಲ್ಲಿ ಕೆಲವಾಗಲಿ ... ವೆರಡರೊಳಗೆ ಯಾವದಾಗಲಿ ಮೊದಲೇ ತನಗೆ ವಿಧಿಸೋಣಾಗಿ ಅಥವಾ ತಾನು ಇಟ್ಟುಕೊಂಡಿದ್ದು ಕಂಪೆನಿಯು ...ನ್ನು ಮುಚ್ಚುವದಕ್ಕೆ ಷುರು ಮಾಡುವದಕ್ಕೆ ಮೊದಲೇ ಹದಿನೆಂಟು ತಿಂಗಳೊಳಗಾಗಿ ಕನಿಷ್ಟಪಕ್ಷ ಆರು ತಿಂಗಳ ...ಂದು ವಾಯಿದೆವರಿವಿಗೆ, ತನ್ನ ಹೆಸರಿನಲ್ಲಿ ರಿಜಿಸ್ಟರಾಗಿದ್ದರೂ ಅಥವಾ ಮೊದಲನೇಹೋಲ್ಡರಿನ ಮರಣದಿಂದ ತನಗೆ ...ಂದಿದ್ದರೂ ಸದರಿ ಕಾಂಟ್ರಿಬ್ಯೂಟರು ಅರ್ಜಿ ಕೊಡಬಹುದು.

ಪರಂತು, ಸದರಿ ಪೂರಾ ಆರುತಿಂಗಳ ಯಾ ಆ ಕಾಲದ ಪೈಕಿ ಯಾವ ಅಂಶದೊಳಗೆ ಆಗಲಿ ಒಂದು ಹಿಸ್ಸೆ ...ಯು ಕಾಂಟ್ರಿಬ್ಯೂಟರಿ ಅಂದರೆ ಸಹಾಯಕನ ಹೆಂಡತಿಯ ಹೆಸರಿನಲ್ಲಿ ಅವಳ ಮದುವೆಯು ಮುಂಚೆ ಯಾ ತರುವಾ... ಅಥವಾ ಅಂತಾ ಹೆಂಡತಿಯ ಬಗ್ಗೆ ಯಾ ಆ ಸಹಾಯಕನ ಬಗ್ಗಾಗಿ ಯಾವನೊಬ್ಬ ಟ್ರಸ್ಟಿಯ ಹೆಸರಿನಲ್ಲಿ ರಿಜಿಸ್ಟರ ...ಗಿದ್ದರೆ ಯಾ ಇಟ್ಟುಕೊಂಡಿದ್ದರೆ, ಸದರಿ ಹಿಸ್ಸೆಯು ಈ ಪ್ರಕರಣದ ಉದ್ದಿಶ್ಯಗಳ ಬಗ್ಗಾಗಿ ಸಹಾಯಕನ ಹೆಸರಿ...ಲ್ಲಿ ರಿಜಿಸ್ಟರ ಆದ್ದಾಗಿಯೂ ಅವನಿಂದ ಇಟ್ಟುಕೊಳ್ಳಲ್ಪಟ್ಟದ್ದಾಗಿಯೂ ಎಣಿಸಲ್ಪಡತಕ್ಕದ್ದು.

ಕೋರ್ಟಿನವರಿಂದ ಮುಚ್ಚಲ್ಪಡುವಿಕೆಯ ಪ್ರಾರಂಭ.

133. ಒಂದು ಕಂಪೆನಿಯು ಕೋರ್ಟಿನವರಿಂದ ಮುಚ್ಚಿ ಬಿಡಲ್ಪಡೋಣವು ಮುಚ್ಚಿ ಬಿಡಬೇಕೆಂಬ ಅರ್ಜಿ ಹಾಜರ್ಮಾಡಿದ ಕಾಲದ ಮೊದಲು ಷುರುವಾದಂತೆ ಗ್ರಹಿಸಲ್ಪಡತಕ್ಕದ್ದು.

ಕೋರ್ಟಿನವರು ಇಂಜಂಕ್ಷನ್ ಹಾಕಿ... ...ಬಹುದು.

134. ಈ ರೆಗ್ಯುಲೇಷನಿಗನುಗುಣವಾದ ಕಂಪೆನಿಯನ್ನು ಮುಚ್ಚಿ ಬಿಡಬೇಕೆಂಬ ಅರ್ಜಿ ಹಾಜರ್ಮಾಡಲ್ಪಟ್ಟ ತರುವಾಯ ಆ ಕಂಪೆನಿ ತನ್ನನ್ನು ಮುಚ್ಚಿ ಬಿಡುವಂತೆ ಹುಕುಂ ಕೊಡುವದಕ್ಕೆ ಮುಂಚಿತವಾಗಿ ಕೋರ್ಟಿನವರು ಯಾವಾಗಲಾದರೂ ಕಂಪೆನಿಯಿಂದ ಯಾ ಕಂಪೆನಿಯ ಬಗ್ಗೆ ಲೇಣೇದಾರನಿಂದ ಯಾ ಸಹಾ...ಕನಿಂದ ಅರ್ಜಿ ಕೊಡಲ್ಪಟ್ಟಲ್ಲಿ ಸದರಿ ಕಂಪೆನಿಯ ಮೇಲೆ ನಡೆಯುತ್ತಿರುವ ಹಕ್ಕಿಗೆ ಯಾವ ವ್ಯವಹರಣೆಯ ...ವರೂ ನಡವಳಿಕೆಗಳನ್ನಾದರೂ ಕೋರ್ಟಿನವರಿಗೆ ಯುಕ್ತವಾಗಿ ತೋರುವ ಷರತ್ತುಗಳ ಮೇಲೆ ನಿಲ್ಲಿಸ...ಬಹುದು.

ಅಂತಾ ಅರ್ಜಿ ಹಾಜರ್ಮಾಡಲ್ಪಟ್ಟ ತರುವಾಯ ಲಿಕ್ವಿಡೇಟರುಗಳು ಪ್ರಥಮತಃ ನೇಮಕರ್ಮಾಡಲ್ಪಡುವ... ಮುಂಚಿತವಾಗಿ ಕೋರ್ಟಿನವರು ಯಾವಾಗಲಾದರೂ ಸದರಿ ಕಂಪೆನಿಯ ಸ್ಥಿತಿಗಳಿಗೆ ಬಗ್ಗೆ ಅಫಿಷಿಯಲ್ ...ಡೇಟರನ್ನು ತಾತ್ಕಾಲಿಕವಾಗಿ ನೇಮಕರ್ಮಾಡಲೂ ಬಹುದು.

135. ಸದರಿ ಅರ್ಜಿಯನ್ನು ಓದಿಸಿ ಕೇಳಿದಮೇಲೆ, ಕೋರ್ಟಿನವರು ಅದನ್ನು ಖರ್ಚು ಸಹಿತಾಗಿಯಾಗಲಿ ಖರ್ಚುಗಳಿಲ್ಲದೆ ಡಿಸಮಿಸ್ ಮಾಡಬಹುದು, ದರ್ಖಾಸ್ತಿಯನ್ನು ಷರತ್ತಿನಮೇಲೆ ಯಾ ಯಾವ ಷರತ್ತೂ ಇಲ್ಲದೆ ನಿಲ್ಲಿಸಬಹುದು, ಮತ್ತು ಯಾವ ತಾತ್ಕಾಲಿಕ ಹುಕುಮನ್ನಾದರೂ ಅಥವಾ ಅವರಿಗೆ ನ್ಯಾಯವಾಗಿ ತೋರುವ ಯಾವ ಇತರ ಹುಕುಮನ್ನಾದರೂ ಮಾಡಬಹುದು.

ಅರ್ಜಿಯನ್ನು ಓದಿಸಿ ಕೇಳಿದಮೇಲೆ ಕೋರ್ಟಿನವರಿಂದ ನಡಿಸಲ್ಪಡಬೇಕಾದ ಕ್ರಮ.

136. ಈ ರೆಗ್ಯುಲೇಷನಿಗನುಗುಣವಾಗಿ ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಒಂದು ಹುಕುಂ ಕೊಡಲ್ಪಟ್ಟಾಗ, ಸದರಿ ಕೋರ್ಟಿನವರು ವಿಧಿಸಬಹುದಾದಂಥಾ ಷರತ್ತುಗಳಿಗೆ ಒಳಪಟ್ಟು ಕೋರ್ಟಿನವರ ಹುಕುಂ ಪಡಕೊಂಡರೇನೆ ಹೊರ್ತು ಸದರಿ ಕಂಪೆನಿಯ ಮೇಲೆ ಯಾವ ವ್ಯವಹರಣೆಯಾಗಲಿ ಇತರ ನಡವಳತೆಯಾಗಲಿ ನಡಿಸಲ್ಪಡಕೂಡದು ಯಾ ಷುರು ಮಾಡಲ್ಪಡಕೂಡದು.

ಮುಚ್ಚಿಬಿಡಲಿಕ್ಕೆ ಹುಕುಂ ಆದ ತರುವಾಯ ವ್ಯವಹರಣೆಗಳು ನಿಲ್ಲಿಸಲ್ಪಡಬೇಕು.

137. ಈ ರೆಗ್ಯುಲೇಷನಿಗನುಸಾರವಾದ ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಒಂದು ಹುಕುಂ ಮಾಡಲ್ಪಟ್ಟಾಗ, ಸದರಿ ಹುಕುಮಿನ ನಕಲು ಕಂಪೆನಿಯವರಿಂದ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರವರ ಬಳಿಗೆ ಒಡನೇ ಕಳುಹಿಸಿ ಕೊಡಲ್ಪಡತಕ್ಕದ್ದು. ಅವರು ಸದರಿ ಕಂಪೆನಿಗೆ ಸಂಬಂಧಪಟ್ಟ ತಮ್ಮ ಪುಸ್ತಕಗಳಲ್ಲಿ ಈ ವಿಷಯವಾಗಿ ಷರಾ ಬರೆದು ಇಡತಕ್ಕದ್ದು.

ಹುಕುಮಿನ ನಕಲು ರಿಜಿಸ್ಟ್ರಾರವರ ಬಳಿಗೆ ಕಳುಹಿಸಲ್ಪಡಬೇಕು.

ಕಂಪೆನಿಯ ಕೆಲಸ ಜರುಗುತ್ತಿರುವಾಗ ಶಿವಾಯಿ ಅಂಥಾ ಹುಕುಮು ಸದರಿ ಕಂಪೆನಿಯ ನೌಕರರಿಗೆ ಡಿಸ್‌ಚಾರ್ಜ್ ನೋಟೀಸಾಗಿ ಭಾವಿಸಲ್ಪಡತಕ್ಕದ್ದು.

138. ಒಂದು ಕಂಪೆನಿಯನ್ನು ಮುಚ್ಚಿಬಿಡಬೇಕೆಂದು ಹುಕುಂ ಮಾಡಲ್ಪಟ್ಟ ತರುವಾಯ ಯಾವ ಲೇಣೇದಾರನಿಂದಾಗಲಿ ಕಂಪೆನಿಯ ಸಹಾಯಕನಿಂದಾಗಲಿ ಅರ್ಜಿ ಮಾಡಿಕೊಳ್ಳಲ್ಪಟ್ಟ ಮೇಲೆ, ಮತ್ತು ಹಾಗೆ ಮುಚ್ಚಿಬಿಡೋಣಕ್ಕೆ ಸಂಬಂಧಪಟ್ಟ ಸಮಸ್ತ ನಡವಳತೆಗಳನ್ನೂ ನಿಲ್ಲಿಸಿ ಇಡಬೇಕೆಂದು ಅಂಥಾ ಕೋರ್ಟಿನವರಿಗೆ ತೃಪ್ತಿಕರವಾಗಿ ರುಜುವಾತು ಕೊಡಲ್ಪಟ್ಟಮೇಲೆ, ಆ ಕೋರ್ಟಿನವರು ಯಾವಾಗಲಾದರೂ ಅವುಗಳನ್ನು ಒಟ್ಟಿಗೆಯಾಗಲಿ ಕ್ಲುಪ್ತಕಾಲದವರಿಗಾಗಲಿ ಅವರಿಗೆ ಯುಕ್ತವಾಗಿ ತೋರುವ ಒಡಂಬಡಿಕೆ ಪ್ರಕಾರ ವ ಷರತ್ತುಗಳಿಗೆ ಒಳಪಟ್ಟು ನಿಲ್ಲಿಸಿ ಇಡುವಂತೆ ಒಂದು ಹುಕುಂ ಮಾಡಬಹುದು.

ನಡವಳತೆಗಳನ್ನು ನಿಲ್ಲಿಸಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

139. ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನು ಹೃದ್ದಾಗಿ ಜಾಮೀನಿನಿಂದ ಕ್ಲುಪ್ತ ಪಡಿಸಲ್ಪಟ್ಟಿರುವ ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಹುಕುಂ ಮಾಡಲ್ಪಟ್ಟಾಗ, ವಸೂಲಾಗದೆ ಇರಬಹುದಾದ ಯಾವ ಹಿಸ್ಸೆ ಮೂಲಧನವಾಗಲಿ ಕಂಪೆನಿಯ ಸೊತ್ತಾಗಿ ಗ್ರಹಿಸಲ್ಪಡತಕ್ಕದ್ದು. ಮತ್ತು ಪ್ರತಿ ಮೆಂಬರೂ ತಾನು ಪಡಕೊಂಡಿರುವ ಹಿಸ್ಸೆಗಳ ಬಾಬತ್ತು ಹಣ ಎಷ್ಟು ಪಾವತಿ ಮಾಡದೆ ಇರುತ್ತಾನೋ ಅಷ್ಟು ಅವನಿಂದ ಕಂಪೆನಿಗೆ ಬರಬೇಕಾದ ಸಾಲವಾಗಿ ಭಾವಿಸಲ್ಪಟ್ಟು, ಕೋರ್ಟಿನವರಿಂದ ಗೊತ್ತು ಮಾಡಲ್ಪಡುವ ಕಾಲದ ಒಳಗಾಗಿ ಪಾವತಿ ಮಾಡಲ್ಪಡತಕ್ಕದ್ದು.

ಜಾಮೀನಿನಿಂದ ಮಿತ್ತು ಪಡಿಸಲ್ಪಟ್ಟಿರುವ ಕಂಪೆನಿಯ ಹಿಸ್ಸೆ ಮೂಲಧನದ ಮೇಲಣ ಹುಕುಮಿನ ಫಲ.

140. ಕೋರ್ಟಿನವರು ಮುಚ್ಚಿಬಿಡುವದಕ್ಕೆ ಸಂಬಂಧಪಟ್ಟ ಸಮಸ್ತ ವಿಷಯಗಳನ್ನು ಮನಸ್ಸಿಗೆ ತೆಗದುಕೊಳ್ಳುವಂತೆಯೇ ಲೇಣೇದಾರರ ಯಾ ಸಹಾಯಕರ ಕೋರಿಕೆಗಳನ್ನು ಅವು ಸಕಾರಣ ಸಾಕ್ಷ್ಯದಿಂದ ರುಜು ಮಾಡಲ್ಪಟ್ಟರೆ ಮನಸ್ಸಿಗೆ ತೆಗೆದುಕೊಂಡು ಗೌರವಿಸಬಹುದು. ಮತ್ತು ಅವರಿಗೆ ಯುಕ್ತವಾಗಿ ತೋರಿದರೆ, ಲೇಣೇದಾರರ ಯಾ ಸಹಾಯಕರ ಕೋರಿಕೆಗಳನ್ನು ತಿಳುಕೊಳ್ಳುವ ಉದ್ದೇಶ್ಯ, ಅವರ ಸಭೆ ಸೇರಿಸಬೇಕೆಂತಲೂ ಸದರಿ ಸಭೆ ಕೋರ್ಟಿನ ಆಜ್ಞಾನುಸಾರವಾಗಿ ಕೇರಿ ಫಲಾನೆ ಪ್ರಕಾರ ನಡಿಯಬೇಕೆಂತಲೂ ಹುಕುಂ ಮಾಡಬಹುದು. ಮತ್ತು ಅಂಥಾ ಸಭೆಯ ಫಲವನ್ನು ಕೋರ್ಟಿಗೆ ರಿಪೋರ್ಟು ಮಾಡತಕ್ಕ ಬಗ್ಯೂ, ಅದಕ್ಕೆ ಸಭಾನಾಯಕನಾಗಿ ಕೆಲಸ ನೋಡತಕ್ಕ ಬಗ್ಯೂ, ಒಬ್ಬ ಮನುಷ್ಯನನ್ನು ನೌಕರನ್ನಾಗಿ ನೇಮಿಸಬಹುದು.

ಕೋರ್ಟಿನವರು ಲೇಣೇದಾರರ ಯಾ ಸಹಾಯಕರ ಕೋರಿಕೆಗಳಿಗೆ ಗೌರವ ಕೊಡಬಹುದು.

ಲೇಖೇದಾರರ ಸಂಗತಿಯಲ್ಲಿ, ಪ್ರತಿ ಲೇಖೇದಾರನಿಗೆ ಬಾಕಿಯಾಗಿರುವ ಸಾಲದ ಮೊಬಲಗನ್ನು ಕುರಿತು ಮತ್ತು ಸಹಾಯಕರ ಸಂಗತಿಯಲ್ಲಿ, ಪ್ರತಿ ಸಹಾಯಕನಿಗೆ ಕಂಪೆನಿಯ ನಿಬಂಧನೆಗಳಿಂದ ಅಧಿಕಾರ ಉಂಟಾಗಿರುವ ವಾಕ್ಕುಗಳ ಸಂಖ್ಯೆಯನ್ನು ಕುರಿತು ಆಲೋಚಿಸತಕ್ಕದ್ದು.

Official Liquidators.

ಅಫಿಷಿಯಲ್ ಲಿಕ್ವಿಡೇಟರುಗಳು.

ಅಫಿಷಿಯಲ್ ಲಿಕ್ವಿಡೇಟರನ ಬಹಲು.

141. ಒಂದು ಕಂಪೆನಿಯನ್ನು ಮುಚ್ಚಿ ಬಿಡುವಲ್ಲಿ ನಡವಳತೆಗಳನ್ನು ನಡಿಸತಕ್ಕಬಗ್ಗ್ಯೆ ಆ ವಿಷಯದಲ್ಲಿ ಕೋರ್ಟನವರಿಗೆ ಸಹಾಯ ಮಾಡತಕ್ಕಬಗ್ಗ್ಯೆ, ಅಫಿಷಿಯಲ್ ಲಿಕ್ವಿಡೇಟರು ಯಾ ಅಫಿಷಿಯಲ್ ಲಿಕ್ವಿಡೇಟರುಗಳು ಎಂದು ಕರೆಯಲ್ಪಡುವ ಮನುಷ್ಯನು ಯಾ ಮನುಷ್ಯರು ಮೊಕರರ್ಮಾಡಲ್ಪಡಬಹುದು.

ಅಫಿಷಿಯಲ್ ಲಿಕ್ವಿಡೇಟರಿನ ಯಾ ಅಫಿಷಿಯಲ್ ಲಿಕ್ವಿಡೇಟರುಗಳ ಕೆಲಸಕ್ಕೆ ಕೋರ್ಟನವರು ತಮಗೆ ಯುಕ್ತವಾಗಿ ತೋರುವಂತಾ ಮನುಷ್ಯನನ್ನು ಯಾ ಮನುಷ್ಯರನ್ನು ಹಂಗಾಮಿಯಾಗಿ ಆಗಲಿ ಅನ್ಯಥಾ ಆಗಲಿ ಮೊಕರರ್ಮಾಡಬಹುದು.

ಅಫಿಷಿಯಲ್ ಲಿಕ್ವಿಡೇಟರ ಕೆಲಸಕ್ಕೆ ಒಬ್ಬನಿಗಿಂತಾ ಹೆಚ್ಚು ಮಂದಿ ಮೊಕರರ್ಮಾಡಲ್ಪಟ್ಟರೆ, ಸಮಸ್ತ ವಿಷಯಗಳಲ್ಲೂ, ಅಫಿಷಿಯಲ್ ಲಿಕ್ವಿಡೇಟರಿಂದ ಮಾಡಬೇಕಾದ್ದಾಗಿ ಇದರಿಂದ ಅಪೇಕ್ಷಿಸಲ್ಪಟ್ಟಿರುವ ಯಾ ಅಧಿಕಾರ ಕೊಟ್ಟಿರುವ ಯಾವ ಕೃತ್ಯವಾಗಲಿ ಸದರಿ ಮನುಷ್ಯರ ಪೈಕಿ ಸಮಸ್ತರಿಂದ ಯಾವನಾದರೊಬ್ಬನಿಂದ ಯಾ ಹೆಚ್ಚು ಮಂದಿಯಿಂದ ಮಾಡಲ್ಪಡ ಬೇಕೆಂಬದನ್ನು ಕೋರ್ಟನವರು ತಿಳಿಸತಕ್ಕದ್ದು.

ಯಾವ ಅಫಿಷಿಯಲ್ ಲಿಕ್ವಿಡೇಟರಾದರೂ ಮೊಕರರ್ಮಾಡಲ್ಪಟ್ಟ ಮೇಲೆ ಅವನು ಏನಾದರೂ ಜಾಮೀನು ಕೊಡಬೇಕೆ ಮತ್ತು ಎಂತಾ ಜಾಮೀನು ಕೊಡಬೇಕು ಎಂಬದನ್ನು ಸಹಾ ಕೋರ್ಟನವರೇ ಗೊತ್ತು ಮಾಡಬಹುದು.

ಅಫಿಷಿಯಲ್ ಲಿಕ್ವಿಡೇಟರು ಮೊಕರರ್ಮಾಡಲ್ಪಡದಿದ್ದರೆ, ಅಥವಾ ಸದರಿ ಕೆಲಸ ಖಾಲಿಯಾಗಿರುವಾಗ್ಯೆ, ಕಂಪೆನಿಯವರ ಸೊತ್ತೆಲ್ಲಾ ಕೋರ್ಟನವರ ಸ್ವಾಧೀನದಲ್ಲಿರುವಂತೆ ಗ್ರಹಿಸಲ್ಪಡತಕ್ಕದ್ದು.

ಒಬ್ಬ ಅಫಿಷಿಯಲ್ ಲಿಕ್ವಿಡೇಟರಿನ ಸ್ವಾಧೀನದಲ್ಲಿ ಇರುವ ಆಸ್ತಿಗಳ ವಿಷಯದಲ್ಲಿ ಒಬ್ಬ ರಿಸೀವರನ್ನು ಮೊಕರರ್ಮಾಡ ಕೂಡದು.

ರಾಜೀನಾಮೆಗಳು, ಬರತರ್ಫಗಳು, ಖಾಲಿಯಾದರೆ ಭರ್ತಿ ಮಾಡೋಣ, ಮತ್ತು ಮೆಹನತಾನ.

142. ಯಾವ ಅಫಿಷಿಯಲ್ ಲಿಕ್ವಿಡೇಟರಾದರೂ ರಾಜೀನಾಮೆ ಕೊಡಬಹುದು, ಅಥವಾ ತಕ್ಕ ಸಬಬು ತೋರಿಸಲ್ಪಟ್ಟಲ್ಲಿ ಕೋರ್ಟನವರಿಂದ ಬರ್ತರಫ್ ಮಾಡಲ್ಪಡಬಹುದು. ಕೋರ್ಟನವರಿಂದ ಮೊಕರರ್ಮಾಡಲ್ಪಟ್ಟ ಅಫಿಷಿಯಲ್ ಲಿಕ್ವಿಡೇಟರಿನ ಕೆಲಸ ಖಾಲಿಯಾದರೆ ಅದನ್ನು ಕೋರ್ಟನವರೇ ಭರ್ತಿ ಮಾಡಬೇಕು, ಅಫಿಷಿಯಲ್ ಲಿಕ್ವಿಡೇಟರಿಗೆ ನೂರಕ್ಕಿಷ್ಟೆಂತಾಗಲಿ ಅನ್ಯಥಾ ಆಗಲಿ ಕೋರ್ಟನವರು ಹುಕುಂ ಮಾಡಬಹುದಾದ ಪ್ರಕಾರ ಸಂಬಳ ಯಾ ಮೆಹನತಾನಾ ಸಲ್ಲತಕ್ಕದ್ದು; ಮತ್ತು ಒಬ್ಬನಿಗಿಂತಾ ಹೆಚ್ಚು ಮಂದಿ ಲಿಕ್ವಿಡೇಟರುಗಳು ಮೊಕರರ್ಮಾಡಲ್ಪಟ್ಟಲ್ಲಿ, ಅಂತಾ ಮೆಹನತಾನಾವನ್ನು ಕೋರ್ಟನವರು ಹುಕುಂ ಮಾಡುವ ರೀತಿಯಾಗಿ ಅವರೊಳಗೆ ಹಂಚಿಕೊಳ್ಳತಕ್ಕದ್ದು.

ಅಫಿಷಿಯಲ್ ಲಿಕ್ವಿಡೇಟರನ ಹೆಸರು ವ ಕೆಲಸಗಳು.

143. ಅಫಿಷಿಯಲ್ ಲಿಕ್ವಿಡೇಟರ ಯಾವ ಕಂಪೆನಿಗೋಸ್ಕರ ಮೊಕರರ್ಮಾಡಲ್ಪಟ್ಟನೋ ಆ ಕಂಪೆನಿಯ ಅಫಿಷಿಯಲ್ ಲಿಕ್ವಿಡೇಟರು ಎಂದು ಕರೆಯಲ್ಪಡತಕ್ಕದ್ದೇ ಹೊರ್ತು ಅವನ ಸ್ವಂತ ಹೆಸರಿನಿಂದ ಕರೆಯಲ್ಪಡತಕ್ಕದ್ದಲ್ಲ. ಕಂಪೆನಿಗೆ ಸೇರಿರುವ ಯಾ ಕಂಪೆನಿಗೆ ಸೇರಿದ್ದಾಗಿ ತೋರುವಂತಾ ತಕರಾರಿನಲ್ಲಿರುವ ಸಮಸ್ತ ಸೊತ್ತನ್ನೂ ಸ್ಥಿತಿಗಳನ್ನೂ ದಾವಾ ಮಾಡಬಹುದಾದ ಹಕ್ಕುಗಳನ್ನೂ ಅವನು ತನ್ನ ವಶಕ್ಕೆ ಯಾ ಕೈ ಕೆಳಗೆ ತೆಗೆದುಕೊಳ್ಳತಕ್ಕದ್ದು, ಮತ್ತು ಕಂಪೆನಿಯನ್ನು ಮುಚ್ಚಿಬಿಡಬೇಕಾದ ವಿಷಯದಲ್ಲಿ ಕೋರ್ಟನವರಿಂದ ವಿಧಿಸಬಹುದಾದಂತಾ ಕೆಲಸಗಳನ್ನು ಮಾಡತಕ್ಕದ್ದು.

ಅಫಿಷಿಯಲ್ ಲಿಕ್ವಿಡೇಟರನ ಅಧಿಕಾರಗಳು.

144. ಅಫಿಷಿಯಲ್ ಲಿಕ್ವಿಡೇಟರು ಕೋರ್ಟನವರ ಅನುಮತಿಯಿಂದ ಈ ಕೆಳಗಿನ ಕೆಲಸಗಳನ್ನು ಮಾಡಲಿಕ್ಕೆ ಅಧಿಕಾರವುಳ್ಳವನಾಗಿರತಕ್ಕದ್ದು:—

(a) ಕಂಪೆನಿಯ ಹೆಸರಿನಲ್ಲಿ ವ ತರಫಿನಲ್ಲಿ, ಸಿವಿಲ್ ಯಾ ಕ್ರಿಮಿನಲ್ ಬಾಬತು ಯಾವ ವ್ಯಾಜ್ಯವನ್ನಾಗಲಿ ಫಿರ್ಯಾದನ್ನಾಗಲಿ ಇತರ ನ್ಯಾಯ ಶಾಸ್ತ್ರ ಸಂಬಂಧವಾದ ನಡವಳಿತವನ್ನಾಗಲಿ ನಡಿಸೋಣ ಅಥವಾ ಪ್ರತಿವಾದ ಮಾಡೋಣ ;

(b) ಕಂಪೆನಿಯನ್ನು ಪ್ರಯೋಜನಕರವಾಗಿ ಮುಚ್ಚಿ ಬಿಡುವದಕ್ಕೋಸ್ಕರ ಎಷ್ಟುಮಟ್ಟಿಗೆ ಅವಶ್ಯವಾಗಿರುತ್ತದೊ ಅಷ್ಟರ ಮಟ್ಟಿಗೆ ಸದರಿ ಕಂಪೆನಿಯ ಕೆಲಸವನ್ನು ನಡಿಸೋಣ ;

(c) ಕಂಪೆನಿಗೆ ಸೇರಿದ ಸ್ಥಿರಸೊತ್ತನ್ನೂ ಚರಸೊತ್ತನ್ನೂ ಬಹಿರಂಗವಾದ ಹರಾಜಿನ ಮೂಲಕವಾಗಿ ಯಾ ಖಾಸಗೀ ಕರಾರಿನ ಮೂಲಕವಾಗಿ ಮಾರೋಣ, ಇವುಗಳನ್ನೆಲ್ಲಾ ಒಟ್ಟಿಗಿ ಯಾವ ಮನುಷ್ಯನಿಗಾದರೂ ಕಂಪೆನಿಗಾದರೂ ಪರಭಾರೆ ಮಾಡೋಣ ಅಥವಾ ಅವುಗಳನ್ನು ಚಿಲ್ಲರೆ ಚಿಲ್ಲರೆಯಾಗಿ ಮಾರೋಣ ;

(d) ಕಂಪೆನಿಯ ಹೆಸರಿನಲ್ಲಿ ವ ಅದರ ತರಫಿನಲ್ಲಿ ಸಮಸ್ತ ಕೆಲಸಗಳನ್ನು ಮಾಡೋಣ ಮತ್ತು ಸಮಸ್ತ ಪತ್ರಗಳನ್ನೂ ರಶೀದಿಗಳನ್ನೂ ಇತರ ದಸ್ತಾವೇಜುಗಳನ್ನೂ ಬರಕೊಡೋಣ, ಮತ್ತು ಆ ಬಗ್ಗೆ ಆವಶ್ಯಕವಾದಲ್ಲಿ ಕಂಪೆನಿಯ ಮೊಹರನ್ನು ಉಪಯೋಗಿಸೋಣ ;

(e) ಯಾವನಾದರೊಬ್ಬ ಸಹಾಯಕನು ದಿವಾಳಿಯಾಗಿದ್ದ ಸಂಗತಿಯಲ್ಲಿ, ಅಂತಾ ಸಹಾಯಕನ ಆಸ್ತಿಯಿಂದ ಬರಬೇಕಾದ ಬಾಕಿಯ ಬಗ್ಗೆ, ಹುದ್ದೆಯನ್ನೂ ಬಾಧ್ಯತೆಯನ್ನೂ ರುಜು ಮಾಡಿಕೊಟ್ಟು ಡಿವಿಡೆಂಡ್ ಎಂಬ ಲಾಭವನ್ನು ವಸೂಲ್ ಮಾಡೋಣ, ಮತ್ತು ದಿವಾಳಿಆಸಾಮಿ ಸಂಗತಿಯಲ್ಲಿ, ಅಂತಾ ದಿವಾಳಿಯಿಂದ ಬರಬೇಕಾದ ಪ್ರತ್ಯೇಕ ಸಾಲದಂತೆ, ಇತರ ಅಲಾಹಿದಾ ಲೇಣೇದಾರರ ಹಾಗೆಯೇ ಅಂತಾ ಬಾಕಿಯ ವಿಷಯದಲ್ಲಿ ಡಿವಿಡೆಂಡುಗಳನ್ನು ತೆಕ್ಕೊಂಡು ಬರಮಾಡಿಕೊಳ್ಳೋಣ ;

(f) ಕಂಪೆನಿಯ ಹೆಸರಿನಲ್ಲಿ ವ ಅದರ ತರಫಿನಲ್ಲಿ ಯಾವ ಬಿಲ್ ಆಫ್ ಎಕ್ಸ್‌ಚೇಂಜನ್ನಾಗಲಿ ಹುಂಡಿಯನ್ನಾಗಲಿ ಪ್ರಾಮಿಸ್ಸರಿ ನೋಟನ್ನಾಗಲಿ ಬರಿಯೋಣ, ಅಕ್ಸೆಪ್ಟ್ ಮಾಡೋಣ, ಉಂಟುಮಾಡೋಣ ವ ಇಂಡಾರ್ಸು ಮಾಡೋಣ ; ಆಗಿಂದಾಗ್ಯೆ, ಕಂಪೆನಿಯ ಆಸ್ತಿಗಳ ಆಧಾರದಮೇಲೆ, ಬೇಕಾದ ಹಣದ ಮೊಬಲಗನ್ನು ಯಾ ಮೊಬಲಗುಗಳನ್ನು ತೆಗೆಯೋಣ ; ಮತ್ತು ಮೇಲೆ ಹೇಳಲ್ಪಟ್ಟ ಪ್ರಕಾರ ಕಂಪೆನಿಯ ತರಫಿನಲ್ಲಿ ಅಂತಾ ಪ್ರತಿ ಬಿಲ್ಲನ್ನು ಹುಂಡಿಯನ್ನು ಯಾ ನೋಟನ್ನು ಬರಿಯೋಣ, ಅಕ್ಸೆಪ್ಟ್ ಮಾಡೋಣ, ಉಂಟುಮಾಡೋಣ ಯಾ ಇಂಡಾರ್ಸು ಮಾಡೋಣ, ಅಂತಾ ಕಂಪೆನಿಯ ಜವಾಬುದಾರಿಯ ವಿಷಯದಲ್ಲಿ ಸದರಿ ಕಂಪೆನಿಯು ಅದರ ಕೆಲಸವನ್ನು ನಡಿಸುತ್ತಿರುವಾಗ ಅದರಿಂದ ಯಾ ಅದರ ತರಫಿನಲ್ಲಿ ಅಂತಾ ಬಿಲ್ಲು ಯಾ ನೋಟು ಬರೆಯಲ್ಪಟ್ಟಿದ್ದರೆ, ಅಕ್ಸೆಪ್ಟ್ ಮಾಡಲ್ಪಟ್ಟಿದ್ದರೆ, ಉಂಟುಮಾಡಲ್ಪಟ್ಟಿದ್ದರೆ ಯಾ ಇಂಡಾರ್ಸುಮಾಡಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಅದೇ ಪ್ರಯೋಜನ ಉಳ್ಳದ್ದಾಗಿರಬೇಕು ;

(g) ಆವಶ್ಯಕವಾದರೆ, ಯಾವ ಮೃತಪಟ್ಟ ಸಹಾಯಕನ ಆಸ್ತಿಯ ಬಗ್ಗ್ಯಾದರೂ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷ್ಣ ಎಂಬ ಖತ್ತುಗಳನ್ನು ಅವನ ಅಫಿಷಿಯಲ್ ಹೆಸರಿನಲ್ಲಿ, ತೆಗೆದುಕೊಳ್ಳಲಿಕ್ಕೂ ಮತ್ತು ಯಾವ ಸಹಾಯಕನಿಂದಾದರೂ ಅಥವಾ ಅವನಸ್ಥಿತಿಯಿಂದಾದರೂ ಹಣ ಬರಬೇಕಾಗಿದ್ದಲ್ಲಿ ಅದರ ವಸೂಲಾತಿಬಗ್ಯೆ ಕಂಪೆನಿಯ ಹೆಸರಿನಲ್ಲಿ ಅನುಕೂಲ್ಯತೆಯೊಡನೆ ಮಾಡಲಿಕ್ಕಾಗದಂತಾ ಆವಶ್ಯಕವಾದ ಯಾವ ಇತರ ಕೆಲಸವನ್ನಾದರೂ ಅವನ ಅಫಿಷಿಯಲ್ ಹೆಸರಿನಲ್ಲಿ ಮಾಡಲಿಕ್ಕೂ ಮತ್ತು ಒಬ್ಬ ಸಹಾಯಕನಿಂದ ಬರಬೇಕಾದ ಹಣದ ವಸೂಲಾತಿಬಗ್ಯೆ ಅವನು ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷ್ಣ ಎಂಬ ಖತ್ತುಗಳನ್ನು ಪಡಕೊಳ್ಳುವಂತಾ ಅಥವಾ ಅವನ ಅಫಿಷಿಯಲ್ ಹೆಸರನ್ನು ಅನ್ಯಥಾ ಉಪಯೋಗಿಸುವಂತಾ ಸಮಸ್ತ ಸಂಗತಿಗಳಲ್ಲೂ, ಸದರೀ ಹಣ ಅಂತಾ ಖತ್ತುಗಳನ್ನು ಪಡೆಯಲಿಕ್ಕೆ ಯಾ ಅಂತಾ ಹಣವನ್ನು ವಸೂಲ್ಮಾಡಲಿಕ್ಕೆ ಅವನಿಗೆ ಶಕ್ತಿ ಉಂಟುಮಾಡುವದಕ್ಕೋಸ್ಕರ, ಅಫಿಷಿಯಲ್ ಲಿಕ್ವಿಡೇಟರಿಗೇನೇ ಸಲ್ಲತಕ್ಕದ್ದಾಗಿರುವಂತೆ ಗ್ರಹಿಸಲ್ಪಡತಕ್ಕದ್ದು :

(h) ಕಂಪೆನಿಯ ಆಡಳಿತಗಳನ್ನು ನಿಲ್ಲಿಸಿ ಅದನ್ನು ಮುಚ್ಚಿಬಿಟ್ಟು ಅದರ ಆಸ್ತಿಗಳನ್ನು ಹಂಚತಕ್ಕ ಬಗ್ಯೆ ಆವಶ್ಯಕವಾಗಿರಬಹುದಾದಂತಾ ಸಮಸ್ತ ಇತರ ಕೆಲಸಗಳನ್ನು ಮಾಡೋಣ ವ ನಿರ್ವಹಿಸೋಣ.

H67

145. ಕೋರ್ಟಿನವರ ಅನುಮತಿ ಯಾ ಅಭ್ಯಂತರ ಇಲ್ಲದೇನೇ ಮೇಲ್ಕಂಡ ಅಧಿಕಾರಗಳಪೈಕಿ ಯಾವದನ್ನಾದರೂ ಆಫಿಷಿಯಲ್ ಲಿಕ್ವಿಡೇಟರು ನಡಿಸಬಹುದೆಂಬು ಕೋರ್ಟಿನವರು ಯಾವ ಹುಕುಮಿನ ಮೂಲಕವಾಗಿಯಾಗಲಿ ನಿಬಂಧನೆ ಏರ್ಪಡಿಸಬಹುದು, ಮತ್ತು ಒಬ್ಬ ಅಫಿಷಿಯಲ್ ಲಿಕ್ವಿಡೇಟರು ಹಂಗಾಮಿಯಾಗಿ ಮೋಕರರ್ ಮಾಡಲ್ಪಟ್ಟಲ್ಲಿ, ಅವನನ್ನು ಮೋಕರರ್ ಮಾಡಿದ ಹುಕುಮಿನಿಂದಲೇ ಅವನ ಅಧಿಕಾರಗಳನ್ನು ತಗ್ಗಿಸಿಡಬಹುದು ಮತ್ತು ನಿರ್ಬಂಧ ಪಡಿಸಿ ಇಡಬಹುದು.

ಅಫಿಷಿಯಲ್ ಲಿಕ್ವಿಡೇಟರ್ ತನ್ನ ಚಿತ್ತಾನುಸಾರವಾಗಿ ನಡಿಸೋಣ.

146. ಅಫಿಷಿಯಲ್ ಲಿಕ್ವಿಡೇಟರು, ಕೋರ್ಟಿನವರ ಅನುಮತಿಯನ್ನು ಪಡಕೊಂಡು, ತನ್ನ ಕೆಲಸಗಳನ್ನು ನಡಿಸೋಣವರಲ್ಲಿ ತನಗೆ ಕುಮ್ಮಕ್ಕಾಗಿರಲಿಕ್ಕೆ ಲೀಗಲ್ ಪ್ರಾಕ್ಟಿಷನರಗಳಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರತಕ್ಕ ಕಾನೂ ಅನುಸರಿಸಿ ಏರ್ಪಲಾಗಿರುವಂತ ಒಬ್ಬ ಲೀಗಲ್ ಪ್ರಾಕ್ಟಿಷನರನ್ನು ಮೋಕರರ್ ಮಾಡಬಹುದು: ಪರಂತು, ಅಫಿಷಿಯಲ್ ಲಿಕ್ವಿಡೇಟರು ಒಬ್ಬ ಲೀಗಲ್ ಪ್ರಾಕ್ಟಿಷನರಾಗಿದ್ದರೆ, ತನ್ನ ಪಾರ್ಟ್ನರ ಅಂದರೆ ಹಿಸ್ಸೇದಾರನನ್ನು ಆತನು ಮೆಹನತಾನಾವಿಲ್ಲದೇನೇ ಕೆಲಸ ನೋಡುವದಕ್ಕೆ ಒಪ್ಪಿಕೊಂಡರೇನೇಹೊರ್ತು ಮೋರರ್ ಮಾಡಕೂಡದು.

ಅಫಿಷಿಯಲ್ ಲಿಕ್ವಿಡೇಟರಗೆ ಆಟರ್ನಿಯು ವಕೀಲ ಮೋಕರರ್ ಮಾಡಲ್ಪಡೋಣ.

Ordinary Powers of Court.
ಕೋರ್ಟಿನವರ ಸಾಧಾರಣ ಅಧಿಕಾರಗಳು.

147. ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ ಮಾಡಿದತರುವಾಯ ಕೂಡಿದಷ್ಟು ತ್ವರೇಲಿ, ಕೋರ್ಟಿನವರು ಸಹಾಯಕರ ಫೇರೀಸ್ತನ್ನು ವ್ಯವಸ್ಥೆ ಪಡಿಸತಕ್ಕದ್ದಲ್ಲದೆ, ಇಪ್ಪತ್ತೆಂಟನೇ ಪ್ರಕರಣಕ್ಕನುಗುಣವಾಗಿ ಮೆಂಬರುಗಳ ರಿಜಿಸ್ಟರಿನಲ್ಲಿ ತಿದ್ದುಪಡಿ ಮಾಡಬೇಕಾದ ಅವಶ್ಯಕವಿದ್ದರೆ ಅಂತಾ ತಿದ್ದುಪಡಿಗಳನ್ನೆಲ್ಲಾ ಮಾಡುವದಕ್ಕೂ ಅಧಿಕಾರವುಳ್ಳವರಾಗಿರತಕ್ಕದ್ದು, ಮತ್ತು ಕಂಪೆನಿಯ ಆಸ್ತಿಗಳನ್ನೆಲ್ಲಾ ಜೋತೆಮಾಡಿ ಸದರಿ ಹುಕುಮಿನ ತಾರೀಖಿನಲ್ಲಿ ಇರುವ ಸಾಲಗಳಬಗ್ಯೆ ಕೊಡಿಸತಕ್ಕದ್ದು.

ಸೊತ್ತುಗಳನ್ನೆಲ್ಲಾ ಜಮಾಯಿಸೋಣ ವ ವಿನಿಯೋಗಿಸೋಣ.

148. ಸಹಾಯಕರ ಫೇರೀಸ್ತನ್ನು ವ್ಯವಸ್ಥೆ ಪಡಿಸುವಲ್ಲಿ, ತಮ್ಮ ಸ್ವಂತ ಹಕ್ಕಿನಲ್ಲಿ ಸಹಾಯಕರಾಗಿರುವ ಮನುಷ್ಯರನ್ನೂ ಇತರರ ವಾರಸುದಾರರಾಗಿ ಯಾ ಇತರರ ಸಾಲಗಳಿಗೆ ಜವಾಬುದಾರರಾಗಿ ಇರುವಸಬಬ ಸಹಾಯಕರಾಗಿರುವ ಮನುಷ್ಯರನ್ನೂ ಬೇರೆ ಬೇರೆಯಾಗಿ ಪ್ರತ್ಯೇಕಿಸತಕ್ಕದ್ದು.

ಸಹಾಯಕರ ಪ್ರತಿ ನಿಧಿಗಳ ವಿಷಯದಲ್ಲಿ ನಿಬಂಧನೆ.

149. ಒಂದು ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ ಮಾಡಿದ ತರುವಾಯ ಯಾವಾಗಲಾದರೂ, ಕೋರ್ಟಿನವರು, ತತ್ಕಾಲಕ್ಕೆ ಸಹಾಯಕರ ಫೇರೀಸ್ತಿನಲ್ಲಿ ವ್ಯವಸ್ಥೆ ಹೊಂದಿರುವ ಯಾವ ಸಹಾಯಕನಾಗಲಿ ಟ್ರಸ್ಟಿಯಾಗಲಿ ರಿಸೀವರ ಆಗಲಿ ಬ್ಯಾಂಕರ ಆಗಲಿ ಮುತಾಲೀಕನಾಗಲಿ ಅಥವಾ ಸದರಿ ಕಂಪೆನಿಯ ಆಫಿಸರಾಗಲಿ ಒಡನೆ ಅಥವಾ ಕೋರ್ಟಿನವರು ಹುಕುಂ ಮಾಡುವಂತಾ ಕಾಲದ ಒಳಗಾಗಿ ತತ್ಕಾಲದಲ್ಲಿ ಅವನ ಕೈಯಲ್ಲಿ ಇರಬಹುದಾದಂತಾ ಮತ್ತು ಅದಕ್ಕಾಗಿ ಕಂಪೆನಿಯವರು ಸ್ವತಸಿದ್ಧವಾದ ಬಾಧ್ಯತೆ ಯುಳ್ಳವರಾಗಿರುವಂತಾ ಯಾವ ಮೊಬಲಗನ್ನಾದರೂ ಬಾಕಿಯನ್ನಾದರೂ ಪುಸ್ತಕಗಳನ್ನಾದರೂ ಕಾಗದಗಳನ್ನಾದರೂ ಸ್ಥಿತಿಯನ್ನಾದರೂ ಚರ ಸೊತ್ತನ್ನಾದರೂ ಅಫಿಷಿಯಲ್ ಲಿಕ್ವಿಡೇಟರಿನ ಕೈಗೆ ಪಾವತಿ ಮಾಡಬೇಕು ಒಪ್ಪಿಸಬೇಕು ಮೇಜೋರ ಮಾಡಬೇಕು ಕೊಟ್ಟು ಬಿಡಬೇಕು ಯಾ ಪರಭಾರೆ ಮಾಡಬೇಕು ಎಂದು ಕೋರ್ಟಿನವರು ಅಪೇಕ್ಷಿಸಬಹುದು.

ಸೊತ್ತುಗಳನ್ನು ಒಪ್ಪಿಸಿಬಿಡುವಂತೆ ಹೇಳಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

150. ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ ಮಾಡಿದ ತರುವಾಯ ಯಾವಾಗಲಾದರೂ, ತಾತ್ಕಾಲಿಕ ಸಹಾಯಕರ ಫೇರೀಸ್ತಿನಲ್ಲಿ ವ್ಯವಸ್ಥೆಯಾಗಿರುವಂತವನಿಗೆ ಅವನಿಂದ ಅಥವಾ ಅವನು ಯಾವ ಮನುಷ್ಯನಬಗ್ಯೆ ಕಂಪೆನಿಗೆ ವಾರಸುದಾರನಾಗಿರುತ್ತಾನೋ ಅವನ ಸ್ಥಿತಿಯಿಂದ ಬರಬೇಕಾಗುವ ಹಣವನ್ನು ಪಾವತಿ ಮಾಡಿಬಿಡಬೇಕೆಂದು ಕೋರ್ಟಿನವರು ಹುಕುಂ ಕೊಡಬಹುದು, ಪಾವತಿ ಮಾಡಬೇಕಾದ ರೀತಿಯನ್ನು ಸಹಾ ಅದರಲ್ಲಿ ನಮೂದಿಸಬಹುದು, ಅವನಾಗಲಿ ಅವನು ಯಾವ ಮನುಷ್ಯನಿಗೆ ವಾರಸುದಾರನಾಗಿರುತ್ತಾನೋ ಅಂತವನ ಸ್ಥಿತಿಯಾಗಲಿ ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ಕೋರ್ಟಿನವರಿಂದ ಮಾಡಲ್ಪಟ್ಟ ಯಾ

ಸಾಲಗಳನ್ನು ತೀರಿಸುವಂತೆ ಸಹಾಯಕನಿಗೆ ಹುಕುಂ ಮಾಡಲಿಕ್ಕೆ ಕೋರ್ಟಿನವರಿಗೆ ಉಂಟಾದಿಸುವ ಅಧಿಕಾರ.

ಮಾಡಲ್ಪಡುವ ಕಾಲ್ ಎಂಬ ವರಾತದ ಪ್ರಕಾರ ಕೊಡಲಿಕ್ಕೆ ಜವಾಬುದಾರರಾಗಿರುವ ಹಣ ಶಿವಾಯಿ, ಮೇಲ್ಕಂಡ ಹಣದ ವಿಷಯದಲ್ಲಿ, ಆ ಪ್ರಕಾರ ಹುಕುಂ ಕೊಡಬಹುದು.

ಕಂಪೆನಿಯು ಕ್ಲುಪ್ತಪಡಿಸಲ್ಪಡದಾಗಿದ್ದರೆ, ಕೋರ್ಟನವರು, ಅಂತಾ ಹುಕುಂ ಕೊಡುವಲ್ಲಿ, ಸದರಿ ಸಹಾಯಕನು ಆ ಕಂಪೆನಿಯೊಂದಿಗೆ ನಡಿಸಿದ ಪ್ರತ್ಯೇಕವಾದ ವ್ಯಾಪಾರದ ಯಾ ಕರಾರಿನ ಸಂಬಂಧ ಅವನಿಗೆ ಯಾ ಅವನು ಯಾವಸ್ಥಿತಿಗೆ ವಾರಸುದಾರನಾಗಿದ್ದಾನೋ ಅದಕ್ಕೆ ಸಲ್ಲಬೇಕಾಗಿರುವ ಹಣವನ್ನು ಉತ್ತಾರ ಕೊಡಲಿಕ್ಕೆ ಅಪ್ಪಣೆ ಮಾಡಬಹುದು, ಆದರೆ ಯಾವ ಡಿವಿಡೆಂಡಿನ ಯಾ ನಫೆಯ ವಿಷಯದಲ್ಲಾದರೂ ಕಂಪೆನಿಯ ಮೆಂಬರಾಗಿರುವ ಸಬಬ ಅವನಿಗೆ ಸಲ್ಲಬೇಕಾದ ಹಣಗಳಿಗಾಗಿ ಹಾಗೆ ಉತ್ತಾರ ಕೊಡಿಸಕೂಡದು.

ಪರಂತು, ಕ್ಲುಪ್ತಪಡಿಸಲ್ಪಟ್ಟ ಯಾ ಕ್ಲುಪ್ತಪಡಿಸಲ್ಪಡದ ಯಾವದಾದರೊಂದು ಕಂಪೆನಿಯ ಲೇಣೇದಾರರಿಗೆಲ್ಲಾ ಪೂರಾ ಪಾವತಿ ಮಾಡಲ್ಪಟ್ಟಲ್ಲಿ, ಯಾವ ಸಹಾಯಕನಿಗಾದರೂ ಕಂಪೆನಿಯಿಂದ ಯಾವ ಲೆಕ್ಕ ಸಂಬಂಧವಾಗಿಯಾಗಲಿ ಸಲ್ಲಬೇಕಾದ ಹಣಕ್ಕಾಗಿ ಆ ತರುವಾಯ ಮಾಡಲ್ಪಡುವ ಕಾಲ್ಸ ಎಂಬ ವರಾತ ಯಾ ವರಾತಗಳನ್ನು ಉತ್ತಾರಾ ಕೊಡಬಹುದು.

ಒಂದು ಕ್ಲುಪ್ತಪಡಿಸಲ್ಪಟ್ಟ ಕಂಪೆನಿಯನ್ನು ಮುಚ್ಚಿಬಿಡುವ ಸಂಗತಿಯಲ್ಲಿ, ಕೋರ್ಟನವರು, ತಮಗೆ ಯುಕ್ತವೆಂದು ತೋರಿದರೆ, ಜವಾಬ್ದಾರಿಯು ಕ್ಲುಪ್ತಪಡಿಸಲ್ಪಡದ ಕಂಪೆನಿಯ ಯಾವ ಡೈರೆಕ್ಟರಾಗಲಿ ಮಾನೇಜರಾಗಲಿ, ಕಂಪೆನಿಯು ಕ್ಲುಪ್ತ ಪಡದಾಗಿದ್ದರೆ, ಸಹಾಯಕನಿಗೆ ಈ ಪ್ರಕರಣಕ್ಕನುಗುಣವಾಗಿ ಏನು ಕೊಡಲ್ಪಡುವದೋ ಆ ಹಣವನ್ನು ಉತ್ತಾರ ಮೂಲಕವಾಗಿ ಕೊಡಬಹುದು.

151. ಒಂದು ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಹುಕುಂ ಮಾಡಿದ ತರುವಾಯ ಕಂಪೆನಿಯ ಸೊತ್ತುಗಳು ಅದರ ಸಾಲಗಳಬಗ್ಯೆ ಸಾಕಾಗಿದೆಯೋ ಇಲ್ಲವೋ ಎಂಬದನ್ನು ನಿಶ್ಚಯಿಸುವದಕ್ಕೆ ಮುಂಚೆ ಯಾ ಆ ಮೇಲೆ ಯಾವಾಗಲಾದರೂ, ಕಂಪೆನಿಯ ಸಾಲಗಳನ್ನೂ ವಿಲ್ಲಂಘಗಳನ್ನೂ ತೀರಿಸುವದಕ್ಕೂ, ಅದನ್ನು ಮುಚ್ಚಿಬಿಡುವದಕ್ಕೆ ಮತ್ತು ಸಹಾಯಕರ ಹಕ್ಕುದಾರಿಗಳನ್ನು ಅವರೊಳಗೇನೇ ವ್ಯವಸ್ಥೆ ಪಡಿಸುವದಕ್ಕೆ ತಗಲುವ ಖರ್ಚುಗಳನ್ನೂ ಲಾಗವಾಡುಗಳನ್ನೂ ವೆಚ್ಚಗಳನ್ನೂ ಕೊಡುವದಕ್ಕೂ ಆವಶ್ಯಕವೆಂದು ತೋರುವ ಎಲ್ಲಾ ಯಾ ಯಾವದಾದರೂ ಮೊಬಲಗಿನ ಪಾವತಿಬಗ್ಯೆ, ಸಹಾಯಕರ ಫೇರೀಸ್ತಿನಲ್ಲಿ ತತ್ಕಾಲಕ್ಕೆ ವ್ಯವಸ್ಥೆ ಹೊಂದಿರುವಂತಾ ಎಲ್ಲಾ ಯಾ ಯಾರಾದರೂ ಸಹಾಯಕರು ಅವರವರ ಜವಾಬುದಾರಿಯ ಮಟ್ಟಿಗೆ ಹಣ ಕೊಟ್ಟುಬಿಡಬೇಕೆಂದು ಕೋರ್ಟನವರು ಹುಕುಂ ಮಾಡಿ ಅವರಿಗೆ ಕಾಲ್ಸ ಎಂಬ ವರಾತಗಳನ್ನು ಕಳುಹಿಸಬಹುದು.

ವರಾತಗಳನ್ನು ಕಳುಹಿಸಲಿಕ್ಕೆ ಕೋರ್ಟನವರಿಗುಂಟಾಗಿರುವ ಅಧಿಕಾರ.

ಯಾರಿಗೆ ವರಾತಗಳನ್ನು ಕಳುಹಿಸೋಣಾಗುತ್ತದೋ ಆ ಸಹಾಯಕರ ಪೈಕಿ ಕೆಲವರು ಅವರವರ ಭಾಗಗಳಲ್ಲಿ ಸ್ವಲ್ಪವಾಗಲಿ ಎಲ್ಲಾ ಆಗಲಿ ಕೊಡಲಿಕ್ಕೆ ಬಹುಶಃ ತಪ್ಪುವರು ಎಂಬದನ್ನು ಕುರಿತು ವರಾತಗಳನ್ನು ಕಳುಹಿಸುವ ಕಾಲದಲ್ಲಿ ಕೋರ್ಟನವರು ಆಲೋಚನೆಗೆ ತೆಗೆದುಕೊಳ್ಳಬಹುದು.

152. ಯಾವ ಸಹಾಯಕನಿಂದಾದರೂ ಕ್ರಯಕ್ಕೆ ಕೊಂಡುಕೊಂಡವನಿಂದಾದರೂ ಇತರ ಮನುಷ್ಯನಿಂದಾದರೂ ಕಂಪೆನಿಗೆ ಹಣ ಏನಾದರೂ ಬರಬೇಕಾಗಿದ್ದರೆ ಅದನ್ನು ಅಫಿಷಿಯಲ್ ಲಿಕ್ವಿಡೇಟರಿಗೆ ಪಾವತಿ ಮಾಡುವದಕ್ಕೆ ಬದಲಾಗಿ ಸದರಿ ಅಫಿಷಿಯಲ್ ಲಿಕ್ವಿಡೇಟರನ ಲೆಕ್ಕದಲ್ಲಿ ಸಂದರ್ಭಾನುಸಾರ ಮೈಸೂರ್ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟಂತಾ ಯಾವದಾದರೂ ಬ್ಯಾಂಕಿಗೆ ಪಾವತಿ ಮಾಡುವಂತೆ ಕೋರ್ಟನವರು ಹುಕುಂ ಮಾಡಬಹುದು; ಮತ್ತು ಸದರಿ ಹುಕುಂ ಅಫಿಷಿಯಲ್ ಲಿಕ್ವಿಡೇಟರಿಗೆ ಹಣ ಕೊಡುವದಾಗಿ ಮಾಡಲ್ಪಡುವ ಹುಕುಮಿನಂತೆಯೇ ಜಾರೀಲಿ ತರಲ್ಪಡಬಹುದು.

ಬ್ಯಾಂಕಿಗೆ ಹಣ ಸಂದಾಯಮಾಡುವಂತೆ ಹುಕುಂ ಮಾಡಲಿಕ್ಕೆ ಕೋರ್ಟನವರಿಗೆ ಉಂಟಾಗಿರುವ ಅಧಿಕಾರ.

153. ಒಂದು ಕಂಪೆನಿಯು ಕೋರ್ಟನವರಿಂದ ಮುಚ್ಚಿಬಿಡಲ್ಪಡುವ ಪ್ರಮೇಯ ಸಂಭವಿಸಿದಲ್ಲಿ, ಮೈಸೂರ್ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟಂತ ಯಾವದಾದರೂ ಬ್ಯಾಂಕಿಗೆ ಪಾವತಿ ಮಾಡಲ್ಪಟ್ಟಂತಾ ವ ಒಪ್ಪಿಸಲ್ಪಟ್ಟಂತಾ ಸಮಸ್ತ ಹಣಗಳು ಬಿಲ್ಲುಗಳು ಹುಂಡಿಗಳು ನೋಟುಗಳು ಮತ್ತು ಇತರ ಜಾಮೀನುಗಳು, ಕೋರ್ಟನವರು ಹುಕುಂ ಮಾಡುವ ಪ್ರಕಾರ ಅದಕ್ಕೆ ಪಾವತಿಮಾಡಿ ಒಪ್ಪಿಸಲ್ಪಡಲಿಕ್ಕೂ ಆದರ ಹೊರಗೆ

ಕೋರ್ಟನೊಂದಿಗೆ ಲೆಕ್ಕಕ್ರಮ ಪಡಿಸೋಣ.

ಕೇನೋ ಇಡಲ್ಪಡಲಿಕ್ಕೂ, ಪಾವತಿ ಮಾಡಲ್ಪಡಲಿಕ್ಕೂ, ಒಪ್ಪಿಸಲ್ಪಡಲಿಕ್ಕೂ, ಅಂತಾ ಹಣಗಳನ್ನು ವ ಇತರ ಚರ ಸೊತ್ತುಗಳನ್ನು ಲೆಕ್ಕವಿಡಬೇಕಾದ್ದನ್ನು ಕುರಿತ ಹುಕುಮಿಗೆ ವ ನಿಬಂಧನೆಗೆ ಗುರಿಯಾಗಿರತಕ್ಕದ್ದು.

ಪ್ರತಿನಿಧಿಯಾದ ಸಹಾಯಕನು ಹುಕುಂ ಮಾಡೋಣಾದ ಹಣಗಳನ್ನು ಸಂದಾಯಮಾಡದೆ ಹೋಗುವ ಸಂಗತಿಯಲ್ಲಿ ನಿಬಂಧನೆ.

154. ಒಬ್ಬ ಮೃತಪಟ್ಟ ಸಹಾಯಕನ ಸ್ವಂತ ವಾರಸುದಾರನಾಗಿದ್ದದ್ದರಿಂದ ಸಹಾಯಕನಾಗಿ ಮಾಡಲ್ಪಟ್ಟಂತಾ ಯಾವ ಮನುಷ್ಯನಾದರೂ ಅವನಿಂದ ಕೊಡಲ್ಪಡಬೇಕೆಂದು ಹುಕುಂಮಾಡಿದ ಯಾವ ಮೊಬಲಗನ್ನಾಗಲಿ ಕೊಡಲಿಕ್ಕೆ ತಪ್ಪಿದರೆ, ಸದರಿ ಬಾಕಿಯಾಗಿರುವ ಹಣದ ವಸೂಲಾತಿಗೋಸ್ಕರ ಸದರಿ ಮೃತಪಟ್ಟ ಸಹಾಯಕನದಾಗಿರುವ ಚರಸೊತ್ತಿನ ಮೇಲಾಗಲಿ ಸ್ಥಿರಸೊತ್ತಿನ ಮೇಲಾಗಲಿ ಯಾ ಎರಡು ತರದ ಸೊತ್ತುಗಳ ಮೇಲಾಗಲಿ ಅಮಲ್ದಾರೀಬಗ್ಗೆ ನಡವಳಿಕೆಗಳನ್ನು ಶುರು ಮಾಡಬಹುದು.

ಹುಕುಂ, ಆಖೈರು ಸಾಕ್ಷ್ಯ.

155. ಯಾವ ಸಹಾಯಕನಿಗಾದರೂ ಈ ರೆಗ್ಯುಲೇಷನಿಗನುಗುಣವಾಗಿ ಕೋರ್ಟಿನವರಿಂದ ಕೊಡಲ್ಪಟ್ಟ ಯಾವ ಹುಕುಮಾದರೂ, ಅಂತಾ ಹುಕುಮಿನ ಮೇಲೆ ಅಪೀಲ್ ಮಾಡಲಿಕ್ಕೆ ಇದರಲ್ಲಿ ಅಡಗಿ ಇರುವ ನಿಬಂಧನೆಗಳಿಗೆ ಒಳಪಟ್ಟು, ಅದರಿಂದ ಯಾವದಾದರೂ ಬಾಕಿಯಾಗಿ ತೋರುವ ಅಥವಾ ಪಾವತಿ ಮಾಡುವಂತೆ ಹುಕುಂ ಮಾಡಲ್ಪಟ್ಟ ಹಣ, ಇದ್ದರೆ, ಬಾಕಿಯಾಗಿದೆ ಎಂಬದಕ್ಕೆ ಆಖೈರು ಸಾಕ್ಷ್ಯವಾಗಿರತಕ್ಕದ್ದು; ಮತ್ತು ಅಂತಾ ಹುಕುಮಿನಲ್ಲಿ ನಮೂದಿಸಿರುವ ಇತರ ಮುಖ್ಯ ವಿಷಯಗಳೆಲ್ಲಾ ಎಲ್ಲಾ ಮನುಷ್ಯರ ಮೇಲೆ ವ ಸಮಸ್ತ ನಡವಳಿಕೆಗಳ ಮೇಲೆ ಯಥಾರ್ಥವಾಗಿ ನಮೂದು ಮಾಡಲ್ಪಟ್ಟದ್ದಾಗಿ ಗ್ರಹಿಸಲ್ಪಡತಕ್ಕದ್ದು.

ನಿಬಂಧಿಸಿದ ಕಾಲದ ಒಳಗಾಗಿ ರುಜು ಮಾಡಿ ಕೊಡದೆ ಹೋಗುವ ಲೇಣೆದಾರರನ್ನು ಕೋರ್ಟಿನವರು ತೊಲಗಿಸಿ ಬಿಡಬಹುದು.

156. ಕೋರ್ಟಿನವರು ಒಂದು ದಿವಸವನ್ನು ಯಾ ದಿವಸಗಳನ್ನು ಗೊತ್ತುಮಾಡಿ, ಆ ಹೊತ್ತು ಯಾ ಅದರ ಒಳಗಾಗಿ ಕಂಪೆನಿಯ ಲೇಣೇದಾರರು ತಮ್ಮ ಸಾಲಗಳನ್ನು ಯಾ ದಾವೆಗಳನ್ನು ರುಜುಮಾಡಿ ಕೊಡಬೇಕೆಂತಲೂ ಇಲ್ಲದಿದ್ದರೆ ಅಂತಾ ಸಾಲಗಳು ರುಜು ಮಾಡಿಕೊಡಲ್ಪಡುವದಕ್ಕೆ ಮುಂಚಿತವಾಗಿ ಏನಾದರೂ ಹಂಚಲ್ಪಟ್ಟರೆ, ಅದರ ಪ್ರಯೋಜನದಿಂದ ತೊಲಗಿಸಲ್ಪಡುವರೆಂತಲೂ ಹುಕುಂ ಮಾಡಬಹುದು.

ಸಹಾಯಕರ ಹಕ್ಕುದಾರಿಗಳನ್ನು ಕೋರ್ಟಿನವರು ಫಡಿಚಾ ಮಾಡಬೇಕು.

157. ಕೋರ್ಟಿನವರು ಸಾಹಾಯಕರ ಹಕ್ಕುದಾರಿಗಳನ್ನು ಅವರೊಳಗೇನೇ ಫೈಸಲ್ಮಾಡಿ, ಬಾಕಿ ಏನಾದರೂ ಉಳಿದರೆ ಅದಕ್ಕೆ ಬಾಧ್ಯರು ಯಾರ್ಯಾರು ಇದ್ದಾರೋ ಅವರಿಗೆ ಅದನ್ನು ಹಂಚಿಬಿಡತಕ್ಕದ್ದು.

ಕೋರ್ಟಿನವರು ಖರ್ಚುಗಳ ಬಗ್ಗೆ ಹುಕುಂ ಮಾಡಬಹುದು.

158. ಜವಾಬುದಾರಿಗಳನ್ನು ತೊಲಗಿಸಲಿಕ್ಕೆ (ಸಾಲಗಳನ್ನು ತೀರಿಸಲಿಕ್ಕೆ) ಆಸ್ತಿಗಳು ಸಾಕಾದ್ದಲ್ಲವಾಗಿದ್ದರೆ, ಕೋರ್ಟಿನವರು ತಮಗೆ ಯುಕ್ತವಾಗಿ ತೋರುವಷ್ಟು ಮುಂಚಿತವಾಗಿ ಸದರಿ ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಮುಟ್ಟಿದ ಖರ್ಚುಗಳನ್ನೂ, ಲಾಗವಾಡುಗಳನ್ನೂ, ವೆಚ್ಚಗಳನ್ನೂ ಕಂಪೆನಿಯ ಸ್ಥಿರ ಜಿಂದಿಗಿಯಿಂದ ಕೊಡಬೇಕೆಂದು ಹುಕುಂಮಾಡಬಹುದು.

ಕಂಪೆನಿಯು ಅಗಲಿಸಲ್ಪಡೋಣ.

159. ಕಂಪೆನಿಯ ಆಡಳಿತಗಳೆಲ್ಲಾ ಸಂಪೂರ್ಣವಾಗಿ ಮುಗಿದು ಅದು ಮುಚ್ಚಿಬಿಡಲ್ಪಟ್ಟ ತರುವಾಯ, ಕೋರ್ಟಿನವರು ಈ ಹುಕುಮಿನ ತಾರೀಖಿನ ಮೊದಲು ಕಂಪೆನಿಯು ಅಗಲಿಸಲ್ಪಡಬೇಕೆಂದು ಒಂದು ಹುಕುಂ ಕೊಡತಕ್ಕದ್ದು. ಮತ್ತು ಕಂಪೆನಿಯು ಅದೇ ಪ್ರಕಾರ ಅಗಲಿಸಲ್ಪಡಬೇಕು.

ಕಂಪೆನಿಯ ಅಗಲಿಕೆಯನ್ನು ಕುರಿತು ರಜಿಸ್ಟ್ರಾರವರು ಷರಾ ಬರೆದು ಇಟ್ಟುಕೊಳ್ಳತಕ್ಕದ್ದು.

160. ಹೀಗೆ ಮಾಡೋಣಾದ ಹುಕುಮನ್ನು ಕುರಿತು ಅಫಿಷಿಯಲ್ ಲಿಕ್ವಿಡೇಟರು ರಜಿಸ್ಟ್ರಾರವರಿಗೆ ರಿಪೋರ್ಟು ಮಾಡಬೇಕು. ಆತನು ತನ್ನ ಪುಸ್ತಕಗಳಲ್ಲಿ ಸದರಿ ಕಂಪೆನಿಯ ಅಗಲಿಕೆಯನ್ನು ಕುರಿತು ಗುರುತು ಮಾಡಿಕೊಳ್ಳತಕ್ಕದ್ದು.

ಕಂಪೆನಿಯ ಅಗಲಿಕೆಯನ್ನು ಕುರಿತು ರಿಪೋರ್ಟು ಮಾಡದೆ ಇದ್ದರೆ ದಂಡನೆ.

161. ಕಂಪೆನಿಯು ಕೋರ್ಟಿನವರಿಂದ ಮುಚ್ಚಿಬಿಡಲ್ಪಟ್ಟ ಸಂಗತಿಯಲ್ಲಿ, ಅದರ ಅಗಲಿಕೆಯ ಬಾಬತ್ತು ಹುಕುಮನ್ನು ಕುರಿತು ಅಫಿಷಿಯಲ್ ಲಿಕ್ವಿಡೇಟರು ರಜಿಸ್ಟ್ರಾರವರಿಗೆ ರಿಪೋರ್ಟು ಮಾಡಲಿಕ್ಕೆ ತಪ್ಪಿದರೆ, ಅವನು ಹಾಗೆ ರಿಪೋರ್ಟು ಮಾಡದೆ ಇರುವಷ್ಟು ದಿವಸಗಳ ವರೆಗೆ ದಿನ ಒಂದಕ್ಕೆ ನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

Extraordinary Powers of Court.

ಕೋರ್ಟಿನವರ ಅಸಾಧಾರಣ ಅಧಿಕಾರಗಳು.

ಕಂಪೆನಿಯ ಸ್ವತ್ತನ್ನು ಇಟ್ಟುಕೊಂಡಿರುವಂತೆ ಗುಮಾನಿಯಾಗುವ ಮನುಷ್ಯರನ್ನು ತಮ್ಮ ಮುಂದೆ ಹಾಜರಾಗಹೇಳಿ ಸಮ್ಮನ್ಸ ಮಾಡಲಿಕ್ಕೆ ಕೋರ್ಟಿನವರಿಗುಂಟಾಗಿರುವ ಅಧಿಕಾರ.

162. ಕೋರ್ಟಿನವರು ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ ಕೊಟ್ಟ ತರುವಾಯ, ಕಂಪೆನಿಯ ಯಾವ ಆಫೀಸರಾಗಲಿ, ಕಂಪೆನಿಯ ಸ್ಥಿತಿಯನ್ನು ಯಾ ಚರಸ್ವತ್ತನ್ನು ತನ್ನ ವಶದಲ್ಲಿ ಇಟ್ಟುಕೊಂಡಿರುವದಾಗಿ ತಿಳಿಯಬರುವ ಯಾ ಗುಮಾನಿಯಾಗುವ ಮನುಷ್ಯನನ್ನಾಗಲಿ, ಕಂಪೆನಿಗೆ ಸಾಲಗಾರನಾಗಿರುವಂತವನನ್ನಾಗಲಿ, ಕಂಪೆನಿಯ ವ್ಯಾಪಾರದ ಲೇವಾದೇವಿಯು, ಸ್ಥಿತಿಯು ಯಾ ಚರಸ್ವತ್ತಿನ ವಿಷಯದಲ್ಲಿ ವರ್ತಮಾನಕೊಡುವದಕ್ಕೆ ಶಕ್ತನಾಗಿದ್ದಾನೆಂದು ಕೋರ್ಟಿನವರಿಗೆ ತೋರುವ ಯಾವ ಮನುಷ್ಯನನ್ನಾಗಲಿ ತಮ್ಮ ಮುಂದೆ ಹಾಜರಾಗುವಂತೆ ಸಮ್ಮನ್ಸ ಮಾಡಬಹುದು.

ಹಾಗೆ ಸಮ್ಮನ್ಸ ಮಾಡಲ್ಪಟ್ಟಂತಾ ಯಾವ ಮನುಷ್ಯನಾದರೂ, ಅವನ ಖರ್ಚುಗಳ ಬಗ್ಗೆ ಯುಕ್ತವಾದ ಮೊಬಲಗು ಕೊಡೋಣಾದಮೇಲೆ, ನ್ಯಾಯವಾದ ಅಭ್ಯಂತರವೇನೂ ಇಲ್ಲದೇ ಇದ್ದು, ಗೊತ್ತಾದ ಕಾಲಕ್ಕೆ ಸರಿಯಾಗಿ ಕೋರ್ಟಿಗೆ ಬರುವದಕ್ಕೆ ನಿರಾಕರಿಸಿದರೆ, ಅಂತಾ ಮನುಷ್ಯನನ್ನು (ಹಾಜರಾಗಲಿಕ್ಕೆ ಅಭ್ಯಂತರವೇನಾದರಿದ್ದಲ್ಲಿ ಕೋರ್ಟು ಕುಳಿತಿರುವ ಕಾಲದಲ್ಲಿ ತಿಳಿಸಿ, ಅಪ್ಪಣೆ ಪಡಕೊಂಡಿದ್ದರೇನೇ ಹೊರ್ತು) ದರ್ಯಾಫ್ತಿ ಬಗ್ಗೆ ಕೋರ್ಟಿನವರು ತಮ್ಮ ಮುಂದೆ ಹಿಡತರಿಸಬಹುದು.

ಕಂಪೆನಿಗೆ ಸಂಬಂಧಪಟ್ಟ ಅಂತಾ ಯಾವ ಆಫೀಸರನ್ನಾಗಲಿ, ಇತರ ಮನುಷ್ಯನನ್ನಾಗಲಿ ಅವನ ವಶದಲ್ಲಿ ಯಾ ಅಧೀನದಲ್ಲಿ ಇರುವ ಯಾವ ದಸ್ತಾವೇಜುಗಳನ್ನಾದರೂ ಹಾಜರ್ಮಾಡಬೇಕೆಂದು ಕೋರ್ಟಿನವರು ಅಪೇಕ್ಷಿಸಬಹುದು. ಏವಂಚ, ಯಾವ ಮನುಷ್ಯನಾದರೂ ತಾನು ಹಾಜರ್ಮಾಡಿದ ದಸ್ತಾವೇಜುಗಳ ಮೇಲೆ ತನಗೆ ಏನಾದರೂ ಬಾಕಿ ಬರಬೇಕಾಗಿದೆ ಎಂದು ಹೇಳುವ ಸಂಗತಿಗಳಲ್ಲಿ, ಹಾಗೆ ಹಾಜರ್ಮಾಡೋಣವು ಅಂತಾ ಬಾಕಿ ಸಂಬಂಧದ ಬಾಧ್ಯತೆಗೆ ಬಾಧಕವಾಗಕೂಡದು, ಮತ್ತು ಕೋರ್ಟಿನವರು ಕಂಪೆನಿಯನ್ನು ಮುಚ್ಚಿ ಬಿಡುವ ಸಂದರ್ಭದಲ್ಲಿ ಅಂತಾ ಬಾಕಿ ಸಂಬಂಧದ ಬಾಧ್ಯತೆ ಬಾಬತು ತಕರಾರುಗಳನ್ನೆಲ್ಲಾ ಫೈಸಲ್ಮಾಡಲಿಕ್ಕೆ ಅಧಿಕಾರವುಳ್ಳವರಾಗಿರತಕ್ಕದ್ದು.

ಕೋರ್ಟಿನವರಿಂದ ಸಾಕ್ಷಿಗಾರರ ದರ್ಯಾಫ್ತಿ.

163. ಮೇಲೆ ಹೇಳೋಣಾದ ರೀತೀಲಿ ಕೋರ್ಟಿಗೆ ಹಾಜರಾದ ಯಾ ಹಾಜರ್ಮಾಡಿಕೊಳ್ಳಲ್ಪಟ್ಟ ಯಾವ ಮನುಷ್ಯನನ್ನಾದರೂ ಕೋರ್ಟಿನವರು ಪ್ರಮಾಣ ಮಾಡಿಸಿದ ಮೇಲೆ ಕಂಪೆನಿಯ ಆಡಳಿತದ ಲೇವಾದೇವಿಯು, ಸ್ಥಿತಿಯು ಯಾ ಚರ ಸ್ವತ್ತುಗಳ ವಿಷಯದಲ್ಲಿ ಜಬಾನಿಯಾದ ಯಾ ಬರಹ ಮೂಲಕವಾದ ಸವಾಲುಗಳಿಂದ ದರ್ಯಾಫ್ತಿ ಮಾಡಬಹುದು, ಮತ್ತು ಅಂತಾ ಪ್ರತಿ ಮನುಷ್ಯನ ಜವಾಬುಗಳನ್ನು ಬರಕೊಂಡು, ಅದಕ್ಕೆ ಅವನನ್ನು ರುಜು ಹಾಕಹೇಳಿ ಕೇಳಬಹುದು.

ಫರಾರಿಯಾಗಲಿಕ್ಕಿರುವ, ಅಥವಾ ತನ್ನ ಸ್ವತ್ತಿನ ಪೈಕಿ ಯಾವದನ್ನಾದರೂ ಬಯ್ಯಲಿಕ್ಕೆ ಯಾ ಬಚ್ಚಿಡಲಿಕ್ಕಿರುವ ಸಹಾಯಕನನ್ನು ದಸ್ತಗಿರಿ ಮಾಡುವದಕ್ಕೆ ಅಧಿಕಾರ.

164. ಕಂಪೆನಿಯನ್ನು ಮುಚ್ಚಿ ಬಿಡತಕ್ಕ ಬಗ್ಗೆ ಹುಕುಂ ಕೊಡುವದಕ್ಕೆ ಮುಂಚಿತವಾಗಿ ಯಾ ಆ ತರುವಾಯ ಯಾವಾಗಲಾದರೂ ಸದರಿ ಕಂಪೆನಿಯ ಯಾವನಾದರೊಬ್ಬ ಸಹಾಯಕನು ಕಾಲ್ಸ ಎಂಬ ವರಾತಗಳಿಗೆ ಹಣ ಕೊಡದೆ ತಪ್ಪಿಸಿಕೊಳ್ಳುವ ನಿಮಿತ್ಯ ಅಥವಾ ಕಂಪೆನಿಯ ಆಡಳಿತದ ಬಾಬತು ದರ್ಯಾಫ್ತಿಯಿಂದ ತಪ್ಪಿಸಿಕೊಳ್ಳುವ ನಿಮಿತ್ಯ ಮೈಸೂರ ಸೀಮೆಯನ್ನು ಬಿಟ್ಟು ಹೊರಡುತ್ತಾನೆ ಅಥವಾ ಅನ್ಯಥಾ ಫರಾರಿಯಾಗುತ್ತಾನೆ ಯಾ ಅವನ ಸಾಮಾನುಗಳನ್ನು ಯಾ ಚರಸ್ವತ್ತುಗಳನ್ನು ಸಾಗಿಸುತ್ತಾನೆ ಯಾ ಬಚ್ಚಿಡುತ್ತಾನೆ ಎಂದು ನಂಬಲಿಕ್ಕೆ ಸಾಕಾದ ಸಬಬುಇದೆ ಎಂದು ರುಜು ಪಡಿಸೋಣಾದಲ್ಲಿ, ಕೋರ್ಟಿನವರು ಅಂತಾ ಸಹಾಯಕನನ್ನು ದಸ್ತಗಿರಿ ಮಾಡಿಸಿ, ಅವನ ಪುಸ್ತಕಗಳನ್ನೂ ಕಾಗದಗಳನ್ನೂ ಹಣಗಳನ್ನೂ ಹಣಗಳ ಬಾಬತು ಜಾಮೀನುಗಳನ್ನೂ ಸಾಮಾನುಗಳನ್ನೂ ಚರಸ್ವತ್ತುಗಳನ್ನೂ ಜಫ್ತಿ ಮಾಡಿಸಿ, ಅವನನ್ನೂ ಅವುಗಳನ್ನೂ ಕೋರ್ಟಿನವರು ಹುಕುಂ ಮಾಡುವ ಕಾಲದವರೆಗೆ ಭದ್ರವಾಗಿ ಇಡಿಸಬಹುದು.

ಕೋರ್ಟಿನವರ ಅಧಿಕಾರಗಳು ಹೆಚ್ಚಿಗೆಯಾಗಿ ಸೇರಿಸೋಣಾದ್ದಾಗಿರಬೇಕು.

165. ಬಚ್ಚಿ ಸಹಾಯಕನಿಂದ ಯಾ ದೇಣೇದಾರನಿಂದ ಯಾ ಅವನ ಸ್ಥಿತಿಯಿಂದ ಬರಬೇಕಾದ ಕಾಲ್ಸ ಎಂಬ ವರಾತದ ಬಾಬತಿನ ಯಾ ಇತರ ಹಣದ ವಸೂಲಾತಿ ಬಗ್ಗೆ ಕಂಪೆನಿಯ ಸಹಾಯಕನ ಮೇಲೆ ಯಾ ಸಹಾಯಕನ ಸ್ಥಿತಿಯ ಮೇಲೆ ಯಾ ದೇಣೇದಾರನಮೇಲೆ ವ್ಯಾಜ್ಯ ಹಾಕುವ ವಿಷಯದಲ್ಲಿ ಕೋರ್ಟಿನವರಿಗೆ

ಉಂಟಾಗಿರಬಹುದಾದ ಅಧಿಕಾರಗಳನ್ನು ಈ ರೆಗ್ಯುಲೇಷನಿನಿಂದ ಕೋರ್ಟಿನವರಿಗೆ ಕೊಡೋಣಾದ ಅಧಿಕಾರಗಳು ಹೆಚ್ಚಿಸುತ್ತದೆಯೇ ಹೊರ್ತು, ತಗ್ಗಿಸುವದಾಗಿ ಗ್ರಹಿಸಲ್ಪಡಕೂಡದು; ಮತ್ತು ಅಂತಾ ವ್ಯಾಜ್ಯಗಳು ಅದೇ ಪ್ರಕಾರ ತರಲ್ಪಡಬಹುದು.

Enforcement of and Appeal from Orders.

ಹುಕುಮುಗಳ ಅಮಲ್ದಾರಿ ವ ಅವುಗಳ ಮೇಲೆ ಅಪೀಲ್.

ಹುಕುಮುಗಳನ್ನು ಅಮಲ್ದಾರಿ ಮಾಡಲಿಕ್ಕೆ ಅಧಿಕಾರ.

166. ಒಂದು ಕೋರ್ಟಿನವರಿಂದ ಈ ರೆಗ್ಯುಲೇಷನಿಗನುಗುಣವಾಗಿ ಕೊಡೋಣಾದ ಸಮಸ್ತ ಹುಕುಮುಗಳನ್ನೂ ಸದರಿ ಕೋರ್ಟಿನಲ್ಲಿದಾಖಲಾದ ದಾವೆಯ ಬಾಬತು ಡಿಕ್ರಿಗಳನ್ನು ಹ್ಯಾಗೆ ಅಮಲ್ದಾರಿ ಮಾಡುತ್ತಾರೋ ಅದೇಪ್ರಕಾರ ಅಮಲ್ದಾರಿ ಮಾಡತಕ್ಕದ್ದು.

ಯಾವ ಕೋರ್ಟಿನಲ್ಲಾದರೂ ಕೊಡೋಣಾದ ಹುಕುಂ ಇತರ ಕೋರ್ಟುಗಳವರಿಂದ ಅಮಲ್ದಾರಿ ಮಾಡಲ್ಪಡಬೇಕು.

167. ಈ ರೆಗ್ಯುಲೇಷನಿಗನುಗುಣವಾದ ಕಂಪೆನಿಯನ್ನು ಮುಚ್ಚಿ ಬಿಡತಕ್ಕ ಬಗ್ಗೆ ಯಾ ಮುಚ್ಚುತ್ತಿರುವ ಕಾಲದಲ್ಲಿ ಕೋರ್ಟಿನವರಿಂದ ಮಾಡೋಣಾದ ಯಾವ ಹುಕುಮಾಗಲಿ ಸದರಿ ಕೋರ್ಟು ಇರತಕ್ಕ ಕಡೆಯಲ್ಲದೆ ಮೈಸೂರ ಸೀಮೆಯ ಪೈಕಿ ಯಾವ ಪ್ರಾಂತದಲ್ಲಾದರೂ ಕಂಪೆನಿಯ ರಿಜಿಸ್ಟರ್ಡಾಫೀಸು ಇರುವುದೋ, ಅಂತಾ ಇತರ ಪ್ರಾಂತದಲ್ಲಿದ್ದಲ್ಲಿ ಸದರಿ ಕಂಪೆನಿಯ ವಿಷಯದಲ್ಲಿ ಅಧಿಕಾರ ಉಂಟಾಗಿರಬಹುದಾದಂತಾ ಕೋರ್ಟಿನಲ್ಲಿ ಅಮಲ್ದಾರಿ ಮಾಡಲ್ಪಡತಕ್ಕದ್ದು. ಮತ್ತು ಸದರಿ ಹುಕುಂ ಇದರಿಂದ ಅಮಲ್ದಾರಿಬಗ್ಗೆ ಅಪೇಕ್ಷಿಸಲ್ಪಟ್ಟಿರುವ ಕೋರ್ಟಿನವರಿಂದ ಕೊಡಲ್ಪಟ್ಟಂತೆ ಸಮಸ್ತ ವಿಷಯಗಳಲ್ಲೂ ಭಾವಿಸಲ್ಪಟ್ಟು ಅದೇಪ್ರಕಾರ ಅಮಲ್ದಾರಿ ಮಾಡಲ್ಪಡತಕ್ಕದ್ದು.

ಇತರಕೋರ್ಟುಗಳವರಿಂದ ಅಮಲ್ದಾರಿ ಮಾಡಲ್ಪಡಬೇಕಾದ ಹುಕುಮುಗಳ ವಿಷಯದಲ್ಲಿ ನಡಿಸಬೇಕಾದ ಪದ್ಧತಿ.

168. ಇದಕ್ಕೆ ಮೇಲ್ಗಡೆ ನಿಬಂಧಿಸಿರುವಪ್ರಕಾರ ಒಂದು ಕೋರ್ಟಿನವರಿಂದ ಮಾಡೋಣಾದ ಹುಕುಮಾಗಲಿ ಡಿಕ್ರಿಯಾಗಲಿ ಮತ್ತೊಂದು ಕೋರ್ಟಿನವರಿಂದ ಅಮಲ್ದಾರಿ ಮಾಡಲ್ಪಡಬೇಕಾದರೆ, ಸದರಿ ಕೋರ್ಟಿನವರಿಂದ ಸರ್ಟಿಫೈ ಮಾಡಿಕೊಡೋಣಾದ ಅಂತಾ ಹುಕುಮಿನ ಯಾ ಡಿಕ್ರಿಯ ನಕಲನ್ನು ಯಾವ ಕೋರ್ಟಿನವರಿಂದ ಅಮಲ್ದಾರಿ ಮಾಡಲ್ಪಡಬೇಕಾಗಿದೆಯೋ ಆ ಕೋರ್ಟಿನ ತಕ್ಕ ಆಫಿಸರನ ಬಳಿ ಹಾಜರ್ಮಾಡತಕ್ಕದ್ದು, ಮತ್ತು ಅಂತಾ ಹುಕುಂ ಯಾ ಡಿಕ್ರಿ ಹುಟ್ಟಿತೆಂಬ ವಿಷಯದಲ್ಲಿ ಹಾಗೆ ಸರ್ಟಿಫೈಮಾಡಿ ಕೊಡೋಣಾದ ನಕಲನ್ನು ಹಾಜರ್ಮಾಡೋಣವೇ ಸಾಕಾದ ಸಾಕ್ಷ್ಯವಾಗಿರತಕ್ಕದ್ದು; ವ ಆ ತರುವಾಯ ಸದರಿ ಕಡೇಲಿ ನಮೂದಿಸಿದ ಕೋರ್ಟಿನವರು ಸದರಿ ಹುಕುಂ ಯಾ ಡಿಕ್ರಿ ತಮ್ಮ ಸ್ವಂತಕೋರ್ಟಿನಲ್ಲಿ ಹುಟ್ಟಿದ ಹುಕುಂ ಯಾ ಡಿಕ್ರಿಯಾಗಿದ್ದರೆ ಅದನ್ನು ಯಾವ ಪ್ರಕಾರ ಅಮಲ್ದಾರಿ ಮಾಡುವರೋ ಅದೇ ರೀತೀಲಿ ಅಮಲ್ದಾರಿ ಮಾಡಲಿಕ್ಕೆ ಆ ಬಾಬಿನಲ್ಲಿ ಅವಶ್ಯವಾಗಿರಬಹುದಾದಂತಾ ತರದೂದುಗಳನ್ನು ನಡಿಸತಕ್ಕದ್ದು.

ಹುಕುಮುಗಳ ಮೇಲೆ ಅಪೀಲುಗಳು.

169. ಒಂದು ಕಂಪೆನಿಯು ಕೋರ್ಟಿನವರಿಂದ ಮುಚ್ಚಿ ಬಿಡಲ್ಪಡುವ ವಿಷಯದಲ್ಲಿ ಮಾಡೋಣಾದ ಯಾ ಕೊಡೋಣಾದ ಹುಕುಮಿನ ಯಾ ತೀರ್ಪಿನ ಮೇಲೆ ಪುನರ್ವಿಚಾರಣೆಗಳೂ ಅಪೀಲುಗಳೂ, ಸದರಿ ಕೋರ್ಟಿನ ಸಾಧಾರಣ ಅಧಿಕಾರಕ್ಕೆ ಒಳಪಟ್ಟು ವ್ಯೋಕದ್ದಮೆಗಳಬಾಬತು ಹುಕುಮಿನ ಯಾ ಫೈಸಲಿನ ಮೇಲೆ ಅಪೀಲುಗಳು ಯಾವ ರೀತೀಲಿ ಯಾವ ಷರತ್ತುಗಳಿಗೊಳಪಟ್ಟು ದೊರೆಯುತ್ತವೋ ಅದೇರೀತೀಲಿ ಅದೇ ಷರತ್ತುಗಳಿಗೊಳಪಟ್ಟು ದೊರೆಯತಕ್ಕದ್ದು; ಅಪೀಲ್ ವಾಯಿದೆಯು ಅಪೀಲ್ ಕೋರ್ಟಿನವರಿಂದ ವಿಸ್ತರಿಸಲ್ಪಟ್ಟು ಇರದೆ ಹೋದರೆ ಯಾವ ಹುಕುಮಿನ ಮೇಲೆ ಅಪೀಲ್ಮಾಡಬೇಕೋ, ಅದು ಕೊಡಲ್ಪಟ್ಟ ತಾರೀಖು ಲಗಾಯಿತು ಮೂರು ವಾರಗಳ ಒಳಗಾಗಿ ಸಿವಿಲ್ ಪ್ರೊಸಿಜ್ಯೂರಕೋಡಿನ ಪ್ರಕಾರ ಸಾಧಾರಣವಾಗಿ ಅಪೀಲ್ ಬಾಬತು ನೋಟೀಸು ಕೊಡಲ್ಪಡುವ ರೀತೀಲಿ ನೋಟೀಸು ಕೊಡಲ್ಪಡದೇ ಹೋದರೆ, ಅಂತಾ ಪುನರ್ವಿಮರ್ಶೆ ಯಾ ಅಪೀಲು ದೊರೆಯಲಾರದು ಎಂಬ ನಿರ್ಬಂಧಕ್ಕೆ ಒಳಪಟ್ಟಿರತಕ್ಕದ್ದು.

ಆಫೀಸರುಗಳ ದಸ್ತತ್ತಿನ ವಿಷಯದಲ್ಲಿ ಜುಡಿಷಿಯಲ್ ನೋಟೀಸು ತಗದುಕೊಳ್ಳಲ್ಪಡತಕ್ಕದ್ದು.

170. ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾದ ಸಮಸ್ತ ನಡವಳಿತಗಳಲ್ಲಿ, ಪ್ರತಿ ಕೋರ್ಟಿನವರೂ, ಜಡ್ಜಿಯೂ ಜುಡಿಷಿಯಲ್ ಕೆಲಸ ನೋಡುವ ಮನುಷ್ಯನೂ ಯಾವದಾದರೊಂದು ಕೋರ್ಟಿನ ಜುಡಿಷಿಯಲ್ ಯಾ ಮಿನಿಸ್ಟೀರಿಯಲ್ ಕೆಲಸ ನೋಡುವಂತಾ ಅಥವಾ ಯಾವದಾದರೊಂದು ಕೋರ್ಟಿನ ಪ್ರೊಸೆಸ್ಸನ್ನು ಅಮಲ್ದಾರಿ ಮಾಡತಕ್ಕಬಗ್ಗೆ ಉದ್ಯೋಗಿಸಲ್ಪಟ್ಟಿರುವ

ಸಮಸ್ತ ಇತರ ಆಫೀಸರುಗಳೂ ಯಾವದಾದರೊಂದು ಇತರ ಕೋರ್ಟಿನ ಯಾವನಾದರೊಬ್ಬ ಆಫೀಸರನ್ನ ದಸ್ಕತ್ತಿನ ವಿಷಯದಲ್ಲೂ ಮತ್ತು ಈ ರೆಗ್ಯುಲೇಷನಿನ ಈ ಭಾಗದ ನಿಬಂಧನೆಗಳಿಗನುಗುಣವಾಗಿ ಮಾಡಲ್ಪಟ್ಟ, ಕೊಡಲ್ಪಟ್ಟ ಯಾ ದಸ್ಕತ್ತು ಮಾಡಲ್ಪಟ್ಟ ಯಾವ ದಸ್ತಾವೇಜಿಗಾದರೂ ಅದರ ಬಾಬತು ನಕಲಿಗಾದರೂ ಇತರ ಕೋರ್ಟಿನ ಸರ್ಕಾರಿ ಮೊಹರ ಹಾಕಲ್ಪಟ್ಟಿದ್ದಲ್ಲಿ ಅಂತಾ ಮೊಹರಿನ ವಿಷಯದಲ್ಲೂ ಸಹ ಜುಡಿಷಿಯಲ ನೋಟಿಸು ತೆಗೆದು ಕೊಳ್ಳತಕ್ಕದ್ದು.

ಸಾಕ್ಷ್ಯವನ್ನು ತೆಗೆಯಲಿಕ್ಕೆ ವಿಶೇಷ ಕಮಿಷನರುಗಳು.

171. ಯಾವ ಕಂಪೆನಿಯಾದರೂ ಚೀಫ ಕೋರ್ಟಿನವರಿಂದ ಮುಚ್ಚಿ ಬಿಡಲ್ಪಡುವ ಸಂಗತಿಗಳಲ್ಲಿ ಚೀಫ್ ಕೋರ್ಟಿನವರು ಮಾಮೂಲಾಗಿ ಕಚ್ಚೇರಿ ಮಾಡುವ ಸ್ಥಳದಿಂದ ಇಪ್ಪತ್ತು ಇಂಗ್ಲಿಷ ಮೈಲುಗಳಿಗಿಂತಾ ಹೆಚ್ಚು ದೂರವಾದ ಸ್ಥಳಗಳಲ್ಲಿರತಕ್ಕ ಡಿಸ್ಟ್ರಿಕ್ಟು ಕೋರ್ಟುಗಳ ಜಡ್ಜಿಗಳು ಈ ರೆಗ್ಯುಲೇಷನಿಗನುಗುಣವಾಗಿ ಸಾಕ್ಷ್ಯವನ್ನು ತೆಗೆಯತಕ್ಕಬಗ್ಗೆ ಕಮಿಷನರುಗಳಾಗಿರತಕ್ಕದ್ದು; ಮತ್ತು ಈ ರೆಗ್ಯುಲೇಷನಿಗನುಗುಣವಾದ ಯಾವ ಸಾಕ್ಷಿಗಳ ದರ್ಯಾಪ್ತಿಯನ್ನಾದರೂ ಪೂರಾ ಆಗಲಿ ಒಂದುಭಾಗವನ್ನಾಗಲಿ ಇದರಿಂದ ಕಮಿಷನರಾಗಿ ಮೊಕರರ್ ಮಾಡಲ್ಪಟ್ಟ ಯಾವ ಮನುಷ್ಯನಿಗಾದರೂ ರಿಫರ ಮಾಡಲಿಕ್ಕೆ ಚೀಫ್ ಕೋರ್ಟಿನವರು ಅರ್ಹರಾಗಿರತಕ್ಕದ್ದು, ಅಂತಹ ಕಮಿಷನರು ಕಂಪೆನಿಯನ್ನು ಮುಚ್ಚಿ ಬಿಡತಕ್ಕಬಗ್ಗೆ ಹುಕುಂ ಯಾ ಡಿಕ್ರಿ ಮಾಡಿದ ಕೋರ್ಟಿನವರ ಅಧಿಕಾರದ ಸರಹದ್ದಿನ ಹೊರಗೆ ಇದ್ದಾಗ್ಯೂ ಚಿಂತೆಯಿಲ್ಲ.

ಅಂತಾ ಪ್ರತಿ ಕಮಿಷನರೂ, ತಾನು ಡಿಸ್ಟ್ರಿಕ್ಟು ಕೋರ್ಟಿನ ಜಡ್ಜಿಯಾಗಿರುವ ಸಬಬು ನ್ಯಾಯಪ್ರಕಾರ ನಡಿಸಬಹುದಾದ, ಸಾಕ್ಷಿಗಳಿಗೆ ಸಮ್ಮನ್ ಕೊಟ್ಟು ದರ್ಯಾಪ್ತಿ ಮಾಡುವಂತಾ, ದಸ್ತಾವೇಜುಗಳನ್ನು ಹಾಜರ್ ಮಾಡಹೇಳಿ ಯಾ ಒಪ್ಪಿಸಿಬಿಡಹೇಳಿ ಹುಕುಂ ಮಾಡುವಂತಾ ಮತ್ತು ದಸ್ಕತ್ತು ಮಾಡುವಂತಾ ಯಾ ತಪ್ಪಿದ ಸಾಕ್ಷಿಗಳನ್ನು ಶಿಕ್ಷಿಸುವಂತಾ ಅಧಿಕಾರಗಳು ಶಿವಾಯಿ, ಹೆಚ್ಚಾಗಿ ಅವನಿಗೆ ಹಾಗೆ ರಿಫರ ಮಾಡಲ್ಪಟ್ಟ ವಿಷಯದಲ್ಲಿ ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಹುಕುಂ ಕೊಟ್ಟ ಕೋರ್ಟಿನವರಿಗೆ ಸಾಕ್ಷಿಗಳನ್ನು ಸಮ್ಮನ್ ಮಾಡಿ ದರ್ಯಾಪ್ತಿ ಮಾಡುವಂತಾ ದಸ್ತಾವೇಜುಗಳನ್ನು ಹಾಜರ್ ಮಾಡಹೇಳಿ ಯಾ ಒಪ್ಪಿಸಹೇಳಿ ಹುಕುಂ ಮಾಡುವಂತಾ ಮತ್ತು ತಪ್ಪಿದ ಸಾಕ್ಷಿಗಳನ್ನು ಶಿಕ್ಷಿಸುವಂತಾ ವ ಸಾಕ್ಷಿಗಳಿಗೆ ಖರ್ಚುಗಳನ್ನೂ ಲಾಗವಾಡುಗಳನ್ನೂ ವೆಚ್ಚಗಳನ್ನೂ ಕೊಡಿಸುವಂತಾ ವಿಷಯಗಳಲ್ಲಿ ಎಷ್ಟು ಅಧಿಕಾರಗಳುವೆಯೋ ಅಷ್ಟು ಅಧಿಕಾರಗಳನ್ನೆಲ್ಲಾ ಸದರಿ ಕಮಿಷನರು ವುಳ್ಳವರಾಗಿರತಕ್ಕದ್ದು, ಮತ್ತು ಹಾಗೆ ಮಾಡೋಣಾದ ದರ್ಯಾಪ್ತಿಯನ್ನು ಸದರಿ ಕಡೇಲಿ ನಮೂದಿಸಿದ ಕೋರ್ಟಿನವರಿಗೆ ಅವರು ಹುಕುಂ ಮಾಡುವರೀತೀಲಿ ವಾಪಸು ಮಾಡತಕ್ಕದ್ದು ಯಾ ರಿಪೋರ್ಟು ಮಾಡತಕ್ಕದ್ದು.

ಮೈಸೂರ್, ಬ್ರಿಟಿಷ್ ಇಂಡ್ಯಾ, ಗ್ರೇಟ ಬ್ರಿಟನ್ ಯಾ ಐರ್ಲಾಂಡ ಈ ದೇಶಗಳಲ್ಲಾಗಲಿ ಅಥವಾ ಇನ್ನ್ಯಾವ ಪರಾಯಿ ದೇಶದಲ್ಲಾಗಲಿ ಯಾವ ಯುಕ್ತವಾದ ಕೋರ್ಟಿನ ಯಾ ಮನುಷ್ಯನ ಎದುರಿಗಾದರೂ ಅಫಿಡಾವಿಟುಗಳು ವಗೈರೆ ಬಗ್ಗೆ ಪ್ರಮಾಣಮಾಡಿಸಲ್ಪಡಬಹುದು.

172. ಈ ರೆಗ್ಯುಲೇಷನಿನ ಈ ಭಾಗದ ಕಾರ್ಯಗಳಬಗ್ಗೆ ಯಾ ನಿಬಂಧನೆಗಳಿಗನುಗುಣವಾಗಿ ಪ್ರಮಾಣ ಮಾಡಲ್ಪಡಬೇಕಾದ ಯಾ ಮಾಡಲ್ಪಟ್ಟ ಯಾವ (ಅಫಿಡಾವಿಟ) ಪ್ರಮಾಣಗಳಾಗಲಿ (ಅಫರ್ಮೆಷನ್) ಸತ್ಯವಾದ ಹೇಳಿಕೆಯಾಗಲಿ ಯಥಾರ್ಥ ಡಿಕ್ಲರೇಷನ್, ನುಡಿಯಾಗಲಿ ಮೈಸೂರ ಶೀಮೆಯಲ್ಲಾಗಲಿ ಬ್ರಿಟಿಷ ಇಂಡ್ಯಾ ದೇಶದಲ್ಲಾಗಲಿ ಗ್ರೇಟ ಬ್ರಿಟನ್ ಯಾ ಐರ್ಲಾಂಡ ದೇಶಗಳಲ್ಲಾಗಲಿ ಪರಾಯಿ ದೇಶಗಳಲ್ಲಾಗಲಿ ಹರ್ಮೆಜೆಸ್ಟಿರಾಣಿಯವರ ಅಧಿಪತ್ಯದ ಕೆಳಗೆ ಇರುವ ಯಾವ ಕಂಪೆನಿಯಲ್ಲಾಗಲಿ ದ್ವೀಪದಲ್ಲಾಗಲಿ ಪ್ಲಾಂಟೇಷನ್ ಎಂಬ ತೋಟದಲ್ಲಾಗಲಿ ಸ್ಥಳದಲ್ಲಾಗಲಿ ಪ್ರಮಾಣಪತ್ರಿಕೆಗಳನ್ನೂ ಸತ್ಯವಾದ ಹೇಳಿಕೆಯ ಯಾ ಯಥಾರ್ಥವಾದ ನುಡಿಯ ಪತ್ರಿಕೆಗಳನ್ನೂ ತಕ್ಕೊಂಡು ಬರಮಾಡಿಕೊಳ್ಳುವದಕ್ಕೆ, ನ್ಯಾಯಪ್ರಕಾರ ಅಧಿಕಾರಹೊಂದಿರುವ ಯಾವ ಕೋರ್ಟಿನ, ಜಡ್ಜಿಯ ಯಾ ಮನುಷ್ಯನ ಎದುರಿಗಾದರೂ, ಅಥವಾ ಹರಮೆಜೆಸ್ಟಿರಾಣಿಯವರ ಅಧಿಪತ್ಯದ ಹೊರಗೆ ಪರಾಯಿ ಪ್ರಾಂತ್ಯದಲ್ಲಿರುವ ಹರಮೆಜೆಸ್ಟಿಯವರ ಕಾನ್ಸಲಿನ ಯಾ ವೈಸ ಕಾನ್ಸಲಿನ ಎದುರಿಗಾದರೂ, ನ್ಯಾಯಪ್ರಕಾರ ಪ್ರಮಾಣ ಮಾಡಿಸಲ್ಪಟ್ಟರೆ ಮೈಸೂರ ಶೀಮೆಯಲ್ಲಿರುವ ಸಮಸ್ತ ಕೋರ್ಟುಗಳೂ ಜಡ್ಜಿಗಳೂ ಜಸ್ಟಿಸುಗಳೂ ಕಮಿಷನರುಗಳೂ ಜುಡಿಷಿಯಲ ಕೆಲಸ ನೋಡುವ ಮನುಷ್ಯರೂ ಅಂತಾ ಯಾವ ಪ್ರಮಾಣ ಪತ್ರಿಕೆಗಾದರೂ ಸತ್ಯವಾದ ಹೇಳಿಕೆಯ ಯಾ ಯಥಾರ್ಥವಾದ ನುಡಿಯ ಬಾಬತು ಪತ್ರಿಕೆಗಳಿಗಾದರೂ ಅಥವಾ ಈ ರೆಗ್ಯುಲೇಷನಿನ ಈ ಭಾಗದ ಕಾರ್ಯಗಳಬಗ್ಗೆ ಉಪಯೋಗಿಸಲ್ಪಡುವ ಯಾವ ಇತರ ದಸ್ತಾವೇಜಿಗಾದರೂ (ಸಂಗತ್ಯಾನುಗುಣವಾಗಿ) ಹಾಕಲ್ಪಟ್ಟ ಹಚ್ಚಲ್ಪಟ್ಟ ಯಾ ದಸ್ಕತ್ತು ಮಾಡಲ್ಪಟ್ಟ ಅಂತಾ ಯಾವ ಕೋರ್ಟಿನ ಜಡ್ಜಿಯ ಮನುಷ್ಯನ ಕಾನ್ಸಲಿನ ಯಾ ವೈಸ ಕಾನ್ಸಲಿನ ಮೊಹರು ಯಾ ಛಾಪಾ ಯಾ ದಸ್ಕತ್ತು ಇವುಗಳ ವಿಷಯದಲ್ಲಿ ಜ್ಯುಡಿಷಿಯಲ ನೋಟಿಸು ತೆಗೆದುಕೊಳ್ಳತಕ್ಕದ್ದು, ಅಂದರೆ, ಸರಿಯಾಗಿದೆಯೋ ಇಲ್ಲವೋ ಎಂಬದನ್ನು ಅವರವರು ನೋಡಿಕೊಳ್ಳತಕ್ಕದ್ದು.

Voluntary Winding of Company

ಕಂಪೆನಿಯನ್ನು ಮನಃಪೂರ್ವಕವಾಗಿ ಮುಚ್ಚಿ ಬಿಡೋಣ.

ಎಂಥಾ ಸಂದರ್ಭಗಳಲ್ಲಿ ಕಂಪೆನಿಯನ್ನು ಮನಃಪೂರ್ವಕವಾಗಿ ಮುಚ್ಚಿ ಬಿಡಬಹುದು.

173. ಈ ರೆಗ್ಯುಲೇಷನಿಗನುಗುಣವಾದ ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡಬಹುದು. ಅಂದರೆ—

(a) ಸಮಾಜದ ನಿಬಂಧನೆಗಳಲ್ಲಿ ಕಂಪೆನಿ ಇರಬೇಕಾದ ಕಾಲ ಇಷ್ಟೆಂತ ಏನಾದರೂ ಗೊತ್ತು ಮಾಡಲ್ಪಟ್ಟಿದ್ದು ಆ ವಾಯಿದೆ ಕಳೆದರೆ, ಅಥವಾ ಯಾವದಾದರೊಂದು ಕಾರ್ಯ ಸಂಭವಿಸಿದಲ್ಲಿ ಕಂಪೆನಿ ಅಗಲಿಸಲ್ಪಡತಕ್ಕದ್ದೆಂದು ಸಮಾಜದ ನಿಬಂಧನೆಗಳಲ್ಲಿ ನಮೂದಿದ್ದು ಅಂತಾ ಕಾರ್ಯ ಸಂಭವಿಸಿದರೆ ಮತ್ತು ಕಂಪೆನಿಯು ಸಾಧಾರಣ ಸಭೆಯಲ್ಲಿ ಮನಃಪೂರ್ವಕವಾಗಿ ಕಂಪೆನಿ ಮುಚ್ಚಿ ಬಿಡಲ್ಪಡಬೇಕೆಂದು ಒಂದು ನಿರ್ಣಯವನ್ನು ಮಾಡಿದರೆ ಆಗ;

(b) ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡಬೇಕೆಂದು ಕಂಪೆನಿಯವರು ವಿಶೇಷ ನಿರ್ಣಯವನ್ನು ಮಾಡಿದರೆ ಆಗ;

(c) ಕಂಪೆನಿಗೆ ಸಾಲಗಳು ಹೆಚ್ಚಿದ್ದರಿಂದ ಕೆಲಸ ನಡಿಸಲಿಕ್ಕಾಗಲಾರದೆಂಧು ತೃಪ್ತಿಕರವಾಗಿ ರುಜುವಾತು ಪಡಿಸಲ್ಪಟ್ಟಿತೆಂತಲೂ ಅದನ್ನು ಮುಚ್ಚಿ ಬಿಡತಕ್ಕದ್ದು ಯುಕ್ತವೆಂತಲೂ ಕಂಪೆನಿಯವರು ವಿಶೇಷ ನಿರ್ಣಯವನ್ನು ಮಾಡಿದರೆ ಆಗ; ಮುಚ್ಚಿ ಬಿಡಲ್ಪಡಬಹುದು.

ಇದಕ್ಕೆ ಮೇಲ್ಗಡೆ ವಿವರಿಸಿರುವಪ್ರಕಾರ ವಿಶೇಷ ನಿರ್ಣಯವೆನ್ನಿಸುವಂತೆ ಈ ರೆಗ್ಯುಲೇಷನಿನ ಕಾರ್ಯಗಳಿಗೆ ಮಾಡೋಣಾದ ಯಾವ ನಿರ್ಣಯವಾಗಲಿ ಆ ತರುವಾಯ ಕೂಡುವ ಎರಡನೇ ಸಭೆಯಲ್ಲಿ ಕಾಯಂ ಮಾಡಲ್ಪಟ್ಟರೆ ಅದು ವಿಶೇಷ ನಿರ್ಣಯವೆಂದು ಗ್ರಹಿಸಲ್ಪಡತಕ್ಕದ್ದು.

ಮನಃಪೂರ್ವಕವಾಗಿ ಮುಚ್ಚಿ ಬಿಡಲಿಕ್ಕೆ ಪ್ರಾರಂಭ.

174. ಮನಃಪೂರ್ವಕವಾಗಿ ಮುಚ್ಚಲ್ಪಡೋಣವು ಹಾಗೆ ಮುಚ್ಚಿ ಬಿಡಲಿಕ್ಕೆ ಅಧಿಕಾರಕೊಟ್ಟ ನಿರ್ಣಯ ಯಾವಾಗ ಹುಟ್ಟಿತೋ ಆಗಲೆ ಷುರುವಾದಂತೆ ಗ್ರಹಿಸಲ್ಪಡತಕ್ಕದ್ದು. ಮುಚ್ಚಿ ಬಿಡೋಣವು ಒಂದು ವಿಶೇಷ ನಿರ್ಣಯಕ್ಕನುಗುಣವಾಗಿದ್ದರೆ ಎಪ್ಪತ್ತೇಳನೇ ಪ್ರಕರಣಕ್ಕನುಗುಣವಾಗಿ ಮಂಜೂರಾದ ನಿರ್ಣಯವು ನಿರ್ಣಯವಾದಾಗ ಷುರುವಾಗುವಂತೆ ಭಾವಿಸಬೇಕು.

ಕಂಪೆನಿಯು ಯಾವ ಸ್ಥಿತಿಯಲ್ಲಿರುತ್ತದೋ ಅದೇ ಸ್ಥಿತಿಯಲ್ಲಿ ಮನಃಪೂರ್ವಕವಾಗಿ ಮುಚ್ಚಿ ಬಿಡೋಣದರ ಫಲ.

175. ಯಾವಾಗಲಾದರೊಂದು ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಟ್ಟರೆ, ಹಾಗೆ ಮುಚ್ಚಿ ಬಿಡಲಿಕ್ಕೆ ಷುರುವಾಗುವ ತಾರೀಖ್ ಲಾಗಾಯಿತು, ಸದರಿ ಕಂಪೆನಿಯು, ಅದನ್ನು ಪ್ರಯೋಜನಕರವಾಗಿ ಮುಚ್ಚಲಿಕ್ಕೆ ಎಷ್ಟು ಆವಶ್ಯಕವೋ ಅಷ್ಟುಮಾತ್ರ ಹೊರ್ತು ಕಡಮೆ ಕೆಲಸಗಳನ್ನೆಲ್ಲಾ ಮೋಕೂಫ್ ಮಾಡಿ ಬಿಡತಕ್ಕದ್ದು; ಮತ್ತು ಹಾಗೆ ಮುಚ್ಚಿ ಬಿಡಲ್ಪಡೋಣ ಷುರುವಾದ ತರುವಾಯ, ಲಿಕ್ವಿಡೇಟರುಗಳಿಗೆ ಯಾ ಅವರ ಅನುಮತಿಯಿಂದ ಮಾಡಲ್ಪಡುವ ಹಿಸ್ಸೆಗಳ ವರ್ಗಾವಣೆ ಹೊರ್ತು, ಸಮಸ್ತ ವರ್ಗಾವಣೆಗಳೂ—ಅಥವಾ—ಕಂಪೆನಿಯ ಮೆಂಬರುಗಳ ಸ್ಥಿತಿಯಲ್ಲಿ ಮಾಡಲ್ಪಡುವ ತಿದ್ದುಪಡಿ ನಿಷ್ಪ್ರಯೋಜನವಾದ್ದಾಗಿರತಕ್ಕದ್ದು; ಆದರೆ ಅದರ ಸಮಾಜಾನುಗುಣವಾದ ಸ್ಥಿತಿಯೂ ಅದರ ಸಮಾಜಾನುಗುಣವಾದ ಸಮಸ್ತ ಅಧಿಕಾರಗಳೂ ಕಂಪೆನಿಯ ಆಹಳತುಗಳೆಲ್ಲಾ ಸಂಪೂರ್ಣವಾಗಿ ಮುಚ್ಚಿ ಬಿಡಲ್ಪಡುವ ಪರ್ಯಂತ ಉದ್ದಕ್ಕೂ ಇರತಕ್ಕದ್ದು, ಆದರೆ ನಿಬಂಧನೆಗಳು ಅನ್ಯಥಾ ನಿಬಂಧಿಸಿದ್ದಾಗ್ಯೂ ಚಿಂತೆ ಇಲ್ಲಾ.

ಮನಃಪೂರ್ವಕವಾಗಿ ಮುಚ್ಚಿ ಬಿಡಬೇಕೆಂಬ ನಿರ್ಣಯದ ನೋಟೀಸು.

176 ಕಂಪೆನಿಯನ್ನು ಮನಃಪೂರ್ವಕವಾಗಿ ಮುಚ್ಚಿ ಬಿಡಬೇಕೆಂದು ಮಾಡಲ್ಪಟ್ಟ ವಿಶೇಷ ನಿರ್ಣಯದ ಯಾ ಅಸಾಧಾರಣ ನಿರ್ಣಯದ ಬಾಬತು ನೋಟೀಸು ಅಫಿಷಿಯಲ್ ಗೆಜೆಟಿನಲ್ಲಿಯೂ—ಕಂಪೆನಿಯ ರಿಜಿಸ್ಟರಾದ ಆಫೀಸು ಎಲ್ಲಿದೆಯೋ ಅಲ್ಲಿ ವರ್ತಮಾನ ಪತ್ರಿಕೆ (ಏನಾದರೂ) ಪ್ರಚಾರದಲ್ಲಿ ಇದ್ದರೆ ಅದರಲ್ಲಿಯೂ ಪ್ರಕಟನೆಯ ಮುಖಾಂತ್ರ ಜಾಯಿಷ್ ಮಾಡಲ್ಪಡತಕ್ಕದ್ದು.

ಮನಃಪೂರ್ವಕವಾಗಿ ಮುಚ್ಚಿ ಬಿಡೋಣದಿಂದ ಉಂಟಾಗುವ ಫಲ.

177. ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಟ್ಟ ವೇಳೆ ಈ ಕೆಳಗಿನ ಫಲಗಳು ಉಂಟಾಗತಕ್ಕದ್ದು:—

(a) ಕಂಪೆನಿಯ ಆಸ್ತಿ, ಕಂಪೆನಿಯನ್ನು ಮುಚ್ಚಿಬಿಡುವದಕ್ಕೆ ಶುರುಮಾಡುವಾಗ್ಯೆ ಇರುವ ಅದರ ಎಲ್ಲಾ ಜವಾಬುದಾರಿಗಳ (ಸಾಲಗಳ) ಪಾವತಿ ಬಗ್ಯೆ ದಾಮಾಷಾಯ ಸಂಖ್ಯೆಯ ಪ್ರಕಾರ ಉಪಯೋಗಿಸಲ್ಪಡತಕ್ಕದ್ದು, ಮತ್ತು ಕಂಪೆನಿಯ ನಿಬಂಧನೆಗಳು ಅನ್ಯಥಾ ನಿಬಂಧಿಸದೆ ಇದ್ದರೆ, ಅದೇ ಕ್ರಮಕ್ಕೊಳಪಟ್ಟಂತೆ ಕಂಪೆನಿಯ ಆಯಾ ಮೆಂಬರುಗಳ ಬಾಧ್ಯತೆ ವ ಸಂಬಂಧದ ಪ್ರಕಾರ ಅವರೊಳಗೆ ಹಂಚಿಕೊಳ್ಳಲ್ಪಡತಕ್ಕದ್ದು;

(b) ಕಂಪೆನಿಯ ಅಡಳಿತಗಳನ್ನು ನಿಲ್ಲಿಸಿ ಅದನ್ನು ಮುಚ್ಚಿಬಿಡತಕ್ಕ ಬಗ್ಯೆ ಆಸ್ತಿ ಹಂಚತಕ್ಕ ಬಗ್ಯೆ ಲಿಕ್ವಿಡೇಟರುಗಳು ನೌಕರರಾಗಿ ಮಾಡಲ್ಪಡತಕ್ಕದ್ದು;

(c) ಕಂಪೆನಿಯವರು ಅವರ ಸಾಧಾರಣ ಸಭೆಯಲ್ಲಿ ಅವರಿಗೆ ಯುಕ್ತವಾಗಿ ತೋರುವಂತಾ ಮನುಷ್ಯರನ್ನು ಲಿಕ್ವಿಡೇಟರುಗಳಾಗಿ ನೌಕರರ್ಮಾಡತಕ್ಕದ್ದು, ಮತ್ತು ಅವರಿಗೆ ಕೊಡಬೇಕಾದ ಮೆಹನತಾನಾವನ್ನು ಗೊತ್ತು ಮಾಡಬಹುದು;

(d) ಒಬ್ಬ ಮನುಷ್ಯನುಮಾತ್ರವೇ ನೌಕರರ್ಮಾಡಲ್ಪಟ್ಟಲ್ಲಿ, ಅನೇಕ ಮಂದಿ ಲಿಕ್ವಿಡೇಟರುಗಳ ವಿಷಯವಾಗಿ ಇವರಲ್ಲಿ ಅಡಗಿ ಇರುವ ನಿಬಂಧನೆಗಳೆಲ್ಲಾ ಅವನಿಗೆ ಅನ್ವಯವಾಗತಕ್ಕದ್ದು;

(e) ಲಿಕ್ವಿಡೇಟರುಗಳು ನೌಕರರಾದ ಮೇಲೆ, ಸಾಧಾರಣ ಸಭೆಯಲ್ಲಿ ಕಂಪೆನಿಯವರು ಅಥವಾ ಲಿಕ್ವಿಡೇಟರುಗಳು ಡೈರೆಕ್ಟರುಗಳಿಗೆ ಎಷ್ಟರಮಟ್ಟಿಗೆ ಯಾವ್ಯಾವ ಅಧಿಕಾರಗಳು ಇದ್ದುಕೊಂಡು ಇರಬಹುದೆಂದು ಸ್ಯಾಂಕ್ಷನ್ ಮಾಡುತ್ತಾರೋ ಅವು ಹೊರ್ತು, ಕಡಮೆ ಅಧಿಕಾರಗಳೆಲ್ಲಾ ವಜಾ ಆಗಿ ಹೋಗತಕ್ಕದ್ದು;

(f) ಅನೇಕಮಂದಿ ಲಿಕ್ವಿಡೇಟರುಗಳು ನೌಕರರ್ಮಾಡಲ್ಪಟ್ಟಾಗ, ಇದರಿಂದ ಕೊಡೋಣಾಗಿರುವ ಪ್ರತಿ ಅಧಿಕಾರವನ್ನೂ ಅವರು ನೌಕರರಾದಾಗ ಗೊತ್ತು ಮಾಡಲ್ಪಟ್ಟಿರಬಹುದಾದ ಪ್ರಕಾರ ಅವರ ಪೈಕಿ ಒಬ್ಬನಾಗಲಿ ಹೆಚ್ಚುಮಂದಿಯಾಗಲಿ ಚಲಾಯಿಸಬಹುದು, ಅಥವಾ ಹಾಗೆ ಗೊತ್ತು ಮಾಡಲ್ಪಟ್ಟಿರದೇ ಇದ್ದಪಕ್ಷದಲ್ಲಿ, ಇಬ್ಬರಿಗೆ ಕಮ್ಮಿಇಲ್ಲದೆ ಎಷ್ಟುಮಂದಿಯಾದರೂ ಚಲಾಯಿಸಬಹುದು;

(g) ಲಿಕ್ವಿಡೇಟರುಗಳು, ಕೋರ್ಟಿನವರ ಅನುಮತಿಯಿಲ್ಲದೇನೇ, ಈ ರೆಗ್ಯುಲೇಷನಿನಿಂದ ಅಫಿಷಿಯಲ್ ಲಿಕ್ವಿಡೇಟರುಗಳಿಗೆ ಕೊಡೋಣಾಗಿರುವ ಅಧಿಕಾರಗಳನ್ನೆಲ್ಲಾ ಚಲಾಯಿಸಬಹುದು;

(h) ಕಂಪೆನಿಯ ಸಹಾಯಕರ ಫೇರೀಸ್ತನ್ನು ವ್ಯವಸ್ಥೆ ಪಡಿಸುವದಕ್ಕೆ ಕೋರ್ಟಿನವರಿಗೆ ಇದಕ್ಕೆ ಮುಂಚೆಯೇ ಕೊಡಲ್ಪಟ್ಟಿರುವ ಅಧಿಕಾರಗಳನ್ನು ಲಿಕ್ವಿಡೇಟರುಗಳು ಚಲಾಯಿಸಬಹುದು, ಮತ್ತು ಹಾಗೆ ವ್ಯವಸ್ಥೆ ಪಡಿಸಲ್ಪಟ್ಟ ಯಾವ ಫೇರೀಸ್ತಾದರೂ ಸಹಾಯಕರೆಂದು ಅದರಲ್ಲಿ ನಮೂದಿಸಲ್ಪಟ್ಟಿರುವ ಮನುಷ್ಯರ ಜವಾಬುದಾರಿಯ ವಿಷಯದಲ್ಲಿ ಸ್ವತಸ್ಸಿದ್ಧವಾದ ಸಾಕ್ಷ್ಯವಾಗಿರತಕ್ಕದ್ದು;

(i) ಲಿಕ್ವಿಡೇಟರುಗಳು, ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ನಿರ್ಣಯವನ್ನು ಮಾಡಿದ ತರುವಾಯ ಮತ್ತು ಕಂಪೆನಿಯ ಆಸ್ತಿಗಳು (ಸಾಲದ ಬಗ್ಯೆ) ಸಾಕಾದ್ದೇ ಎಂಬದನ್ನು ನಿಶ್ಚಯಿಸುವದಕ್ಕೆ ಮುಂಚಿತವಾಗಿ ಯಾವಾಗಲಾದರೂ, ಕಂಪೆನಿಯ ಸಾಲಗಳನ್ನು ವ ಜವಾಬ್ದಾರಿಗಳನ್ನು ತೀರಿಸಲಿಕ್ಕೆ ಆವಶ್ಯವಾಗಿ ತೋರುವ ಎಲ್ಲಾ ಯಾ ಯಾವದಾದರೂ ಮೊಬಲಗುಗಳನ್ನು ಮತ್ತು ಅದನ್ನು ಮುಚ್ಚಿಬಿಡಲಿಕ್ಕೂ ಸಹಾಯಕರ ಹಕ್ಕುದಾರಿಗಳನ್ನು ಅವರೊಳಗಾಗಿ ವ್ಯವಸ್ಥೆಪಡಿಸುವದಕ್ಕೆ ತಗಲುವ ಖರ್ಚುಗಳನ್ನೂ, ಲಾಗವತುಗಳನ್ನೂ, ವೆಚ್ಚಗಳನ್ನೂ ತತ್ಕಾಲಕ್ಕೆ ಸಹಾಯಕರ ಫೇರೀಸ್ತಿನಲ್ಲಿ ವ್ಯವಸ್ಥೆ ಹೊಂದಿರುವ ಎಲ್ಲಾ ಯಾ ಯಾರಾವರೂ ಸಹಾಯಕರು ಅವರವರ ಜವಾಬುದಾರಿಯಮಟ್ಟಿಗೆ ಕೊಡಬೇಕೆಂದು ಹುಕುಂ ಮಾಡಬಹುದು; ಮತ್ತು ಯಾವ ಸಹಾಯಕರಿಗೆ ವರಾತಗಳನ್ನು ಕಳುಹಿಸೋಣಾಗುತ್ತದೋ ಅವರು ಅಬಾಬತು ತಮ್ಮತಮ್ಮ ಹಿಸ್ಸೆಗಳಪೈಕಿ ಒಂದು ಭಾಗವನ್ನಾಗಲಿ ಎಲ್ಲವನ್ನಾಗಲಿ ಕೊಡಲಿಕ್ಕೆ ತಪ್ಪುವರೆಂಬುವ ಊಹೆಯನ್ನು ಲಿಕ್ವಿಡೇಟರುಗಳು ವರಾತಗಳನ್ನು ಕಳುಹಿಸುವ ಕಾಲದಲ್ಲಿ ತಮ್ಮ ಆಲೋಚನೆಗೆ ತೆಗದುಕೊಳ್ಳತಕ್ಕದ್ದು:

(j) ಲಿಕ್ವಿಡೇಟರುಗಳು ಕಂಪೆನಿಯ ಸಾಲಗಳನ್ನು ಪಾವತಿ ಮಾಡತಕ್ಕದ್ದು, ಮತ್ತು ಸಹಾಯಕರ ಹಕ್ಕುದಾರಿಗಳನ್ನು ಅವರೊಳಗೆ ವ್ಯವಸ್ಥೆಪಡಿಸತಕ್ಕದ್ದು.—

ಜಾಮೀನಿನಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯು ಹಿಸ್ಸೇ ಮೂಲಧನದಮೇಲೆ ಕಂಪೆನಿಯನ್ನು ಮುಚ್ಚಿಬಿಡೋಣದರ ಫಲ.

178. ಜಾಮೀನಿನಿಂದ ಕ್ಲುಪ್ತ ಪಡಿಸಲ್ಪಟ್ಟು ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಮೂಲಧನವನ್ನುಳ್ಳ ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿಡಲ್ಪಡುವ ಸಂಗತಿಯಲ್ಲಿ, ತರಿಸಿಕೊಳ್ಳೋಣಾಗದಂಥಾ ವಿಭಾವ (ಷೇರಕ್ಯಾಪಿಟಲ್) ಹಿಸ್ಸೆ ಬಾಬತು ಮೂಲಧನವಾಗಲಿ ಕಂಪೆನಿಯ (ಅಸ್ಸೆಟ್ಸ ಎಂಬ) ಆಸ್ತಿಯಾಗಿ ಭಾವಿಸಲ್ಪಡತಕ್ಕದ್ದು, ಮತ್ತು ಹಿಸ್ಸೆಗಳನ್ನು ಪಡಕೊಂಡಿರುವ ಮೆಂಬರುಗಳು ಅವರವರ ಹಿಸ್ಸೆಗಳ ಬಾಬತು ಮೊಬಲಗುಗಳ ಪೈಕಿ ಎಷ್ಟು ಪಾವತಿ ಮಾಡಬೇಕಾಗಿ ಇರುತ್ತಾರೋ ಅಷ್ಟು ಸದರಿ ಮೆಂಬರುಗಳಿಂದ ಕಂಪೆನಿಗೆ ಬರಬೇಕಾದ ಸಾಲವಾಗಿ ಗ್ರಹಿಸಲ್ಪಟ್ಟು ಲಿಕ್ವಿಡೇಟರುಗಳು ಗೊತ್ತುಮಾಡುವ ಕಾಲದೊಳಗಾಗಿ ಪಾವತಿಮಾಡಿಬಿಡಲ್ಪಡುವದಾಗಿರತಕ್ಕದ್ದು.

ಲಿಕ್ವಿಡೇಟರುಗಳನ್ನು ಮೊಕರರ್ ಮಾಡುವ ವಿಷಯದಲ್ಲಿ (ಇತರೆ) ಅಧಿಕಾರ ಕೊಡಲಿಕ್ಕೆ ಕಂಪೆನಿಯವರಿಗೆ ಉಂಟಾಗಿರುವ ಅಧಿಕಾರ.

179. ಮನಃಪೂರ್ವಕವಾಗಿ ಮುಚ್ಚಿಬಿಡಲ್ಪಡುವದಾಗಿರುವ ಅಥವಾ ಮನಃಪೂರ್ವಕವಾಗಿ ಮುಚ್ಚಿಬಿಡಲ್ಪಡುತ್ತಲಿರುವ ಕಂಪೆನಿಯು, ಒಂದು ಅಸಾಧಾರಣ ನಿರ್ಣಯದ ಮೂಲವಾಗಿ, ಲಿಕ್ವಿಡೇಟರುಗಳನ್ನಾಗಲಿ, ಅವರ ಪೈಕಿ ಯಾರನ್ನಾಗಲಿ, ಮೊಕರರ್ ಮಾಡುವಂಥಾ ಮತ್ತು ಲಿಕ್ವಿಡೇಟರುಗಳ ಪೈಕಿ ಯಾವದಾದರೂ ಖಾಲಿಯಾದಾಗ ಅದನ್ನು ಭರ್ತಿ ಮಾಡುವಂಥಾ ಅಧಿಕಾರವನ್ನು ಅದರ ಲೇಣೇದಾರರಿಗೆ ಅಥವಾ ಅದರ ಲೇಣೇದಾರರ ಒಂದು ಕಮಿಟಿಯವರಿಗೆ ಕೊಡಬಹುದು. ಅಥವಾ ಲಿಕ್ವಿಡೇಟರುಗಳಿಂದ ಚಲಾಯಿಸಲ್ಪಡಬೇಕಾದ ಅಧಿಕಾರಗಳನ್ನು ಕುರಿತು, ಮತ್ತು ಅವುಗಳು ಚಲಾಯಿಸಲ್ಪಡಬೇಕಾದ ವಿಧಾನವನ್ನು ಕುರಿತು ಯಾವ ಏರ್ಪಾಡನ್ನಾದರೂ ಬದಸ್ತೂರ ನಿರ್ಣಯದ ಮೂಲಕವಾಗಿ ಮಾಡಬಹುದು.

ಹಾಗೆ ಕೊಡಲ್ಪಟ್ಟ ಅಧಿಕಾರಕ್ಕನುಗುಣವಾಗಿ ಲೇಣೇದಾರರಿಂದ ಮಾಡೋಣಾದ ಯಾವ ಕೃತ್ಯವಾಗಲಿ, ಕಂಪೆನಿಯಿಂದಲೇ ಮಾಡೋಣಾದರೆ ಹ್ಯಾಗೋ ಹಾಗೆ ಅದೇ ಪ್ರಯೋಜನವನ್ನುಳ್ಳದ್ದಾಗಿರತಕ್ಕದ್ದು.

ಸಾಹುಕಾರು ಲೇಣೇದಾರರಿಗೆ ಯಾವಾಗ ಬದ್ಧವಾಗಿರತಕ್ಕದ್ದು.

180. ಮನಃಪೂರ್ವಕವಾಗಿ ಮುಚ್ಚಿಬಿಡಲ್ಪಡುವದಾಗಿರುವ ಅಥವಾ ಮನಃಪೂರ್ವಕವಾಗಿ ಮುಚ್ಚಿಬಿಡಲ್ಪಡುತ್ತಿರುವ ಕಂಪೆನಿಯು ಅದರ ಲೇಣೇದಾರರೊಂದಿಗೆ ಮಾಡಿಕೊಂಡಿರಬಹುದಾದ ಯಾವ ಏರ್ಪಾಡಾದರೂ ಅಸಾಧಾರಣ ನಿರ್ಣಯದಿಂದ ಸ್ಯಾಂಗ್ಷನ್ ಮಾಡಲ್ಪಟ್ಟರೆ ಕಂಪೆನಿಗೂ, ಲೇಣೇದಾರರ ಪೈಕಿ ಮುಕ್ಕಾಲು ವಾಸಿ ಜನಗಳಿಂದ ಕುತ್ತು ಮುಪ್ಪಾಗಪಾಲು ಕಿಮ್ಮತ್ತಿನವರಿಂದ ಸಮ್ಮತಿಸಲ್ಪಟ್ಟರೆ, ಲೇಣೇದಾರರಿಗೂ ಬದ್ಧವಾಗಿರತಕ್ಕದ್ದು; ಹಾಗೆ ಬದ್ಧಪಡಿಸಿರೋಣವು ಇದರಡಿ ನಮೂದಿಸಲ್ಪಟ್ಟಿರುವ ಪ್ರಕಾರ ಅಪೀಲ್ ಮಾಡಲ್ಪಡಲಿಕ್ಕೆ ಒಳಪಟ್ಟಿರತಕ್ಕದ್ದು.

ಲೇಣೇದಾರರಿಗೆ ಯಾ ಸಹಾಯಕನಿಗೆ ಅಪೀಲ್ ಮಾಡುವದಕ್ಕೆ ಉಂಟಾಗಿರುವ ಅಧಿಕಾರ.

181. ಮೇಲ್ಕಂಡ ರೀತಿಯಾಗಿ ಒಂದು ಕಂಪೆನಿಯು ಲೇಣೇದಾರರೊಂದಿಗೆ ಯಾವ ಏರ್ಪಾಡನ್ನಾದರೂ ಮಾಡಿಕೊಳ್ಳುವ ಲೇಣೇದಾರನು ಯಾ ಸಹಾಯಕನು ಅಂಥಾ ಏರ್ಪಾಡು ಪೂರೈಸಿದ ತಾರೀಖ್ ಮೊದಲು ಮೂರು ವಾರಗಳೊಳಗಾಗಿ ಅಂಥಾ ಏರ್ಪಾಡಿನ ಮೇಲೆ ಕೋರ್ಟಿಗೆ ಅಪೀಲ್ ಮಾಡಬಹುದು. ಆ ತರುವಾಯ ಕೋರ್ಟಿನವರು ಅವರಿಗೆ ನ್ಯಾಯವಾಗಿ ತೋರುವ ಪ್ರಕಾರ ಅದನ್ನು ದುರಸ್ತು ಮಾಡಬಹುದು, ಬದಲಾಯಿಸಬಹುದು ಯಾ ಖಾಯಂ ಮಾಡಬಹುದು.

ಮನಃಪೂರ್ವಕವಾಗಿ ಮುಚ್ಚಿಬಿಡುವ ವಿಷಯದಲ್ಲಿ ಲಿಕ್ವಿಡೇಟರುಗಳಿಗೆ ಯಾ ಸಹಾಯಕರಿಗೆ ಉಂಟಾಗಿರುವ ಅಧಿಕಾರ ಕೋರ್ಟಿನಲ್ಲಿ ಉಪಯೋಗವಾಗತಕ್ಕದ್ದು.

182. ಒಂದು ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿಬಿಡಲ್ಪಡುವಲ್ಲಿ ಹಾಗೆ ಮುಚ್ಚಿಬಿಡಲ್ಪಡುವ ವಿಷಯದಲ್ಲಿ ಹುಟ್ಟುವ ಯಾವ ತಕರಾರನ್ನಾದರೂ ಫೈಸಲ್ ಮಾಡಬೇಕಾದರೆ, ಅಥವಾ ಕಂಪೆನಿಯು ಕೋರ್ಟಿನವರಿಂದ ಮುಚ್ಚಲ್ಪಡೋಣಾಗುವಲ್ಲಿ ಕೋರ್ಟಿನವರು ಯಾವ್ಯಾವ ಅಧಿಕಾರಗಳನ್ನು ಚಲಾಯಿಸುವರೋ ಆ ಪೈಕಿ ಎಲ್ಲವನ್ನಾಗಲಿ, ಯಾವದನ್ನಾಗಲಿ ಕಾಲ್ಸ ಎಂಬ ವರಾತಗಳನ್ನು ಅವುಗಳ ಸಂಬಂಧ ಮಾಡುವ ವಿಷಯದಲ್ಲಿ ಯಾ ಇತರ ವಿಷಯದಲ್ಲಿ ಚಲಾಯಿಸಬೇಕಾದರೆ ಕಂಪೆನಿಯ ಲಿಕ್ವಿಡೇಟರುಗಳಾದರೂ ಯಾವ ಸಹಾಯಕನಾದರೂ ಕೋರ್ಟಿನವರಿಗೆ ಮನವಿ ಮಾಡಿಕೊಳ್ಳಬಹುದು. ಇಂಥಾ ಯಾವ ಮನವಿಯನ್ನು ಅರ್ಜಿ ಮೋಷನ್ ಮೂಲಕವಾಗಿ ಮಾಡಬಹುದು; ಸದರಿ ತಕರಾರಿನ ಫೈಸಲು ಅಥವಾ ಅಪೇಕ್ಷಿಸಲ್ಪಟ್ಟ ಅಧಿಕಾರ ಚಲಾಯಿಸುವಿಕೆ ನ್ಯಾಯವಾದ್ದೆಂತಲೂ, ಪ್ರಯೋಜನಕರವಾದ್ದೆಂತಲೂ, ಕೋರ್ಟಿನವರಿಗೆ ಸಮರ್ಪಕವಾಗಿ ತಿಳಿಯಬಂದರೆ, ಅವರು ತಮಗೆ ಯುಕ್ತವಾಗಿ ತೋರುವ ಒಡಂಬಡಿಕೆಗಳನ್ನೂ, ಷರತ್ತುಗಳನ್ನೂ ಉಂಟುಮಾಡಿ, ಅರ್ಜಿ ಪ್ರಕಾರ ಹಾಗೆ ಕೇಳಿಕೊಳ್ಳಲ್ಪಟ್ಟದರ ಪೈಕಿ ಒಂದು ಭಾಗವನ್ನಾಗಲಿ, ಎಲ್ಲವನ್ನಾಗಲಿ ನಡಿಸಿಕೊಡಬಹುದು;

ಅಥವಾ ಹಾಗೆ ಕೇಳಿಕೊಳ್ಳಲ್ಪಟ್ಟದರ ಮೇಲೆ ಕೋರ್ಟಿನವರಿಗೆ ನ್ಯಾಯವಾಗಿ ತೋರುವ ಪ್ರಕಾರ ಇತರ ಹುಕುಮನ್ನಾಗಲಿ ಡಿಕ್ರಿಯನ್ನಾಗಲಿ ಕೊಡಬಹುದು.

ಸಾಧಾರಣ ಸಭೆ ಸೇರಿಸಲಿಕ್ಕೆ ಲಿಕ್ವಿಡೇಟರುಗಳಿಗೆ ಉಂಟಾಗಿರುವ ಅಧಿಕಾರ.

183. ಒಂದು ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡುತ್ತಿರುವಾಗ, ಲಿಕ್ವಿಡೇಟರುಗಳು, ಸದರಿ ಮುಚ್ಚಿ ಬಿಡಲ್ಪಡುವಿಕೆಯ ಕೆಲಸಗಳು ನಡಿಯುತ್ತಿರುವ ಕಾಲವಲ್ಲಿ, ಆಗಿಂದಾಗ್ಯೆ, ವಿಶೇಷ ನಿರ್ಣಯದ ಯಾ ಅಸಾಧಾರಣ ನಿರ್ಣಯದ ಮೂಲಕವಾಗಿ ಕಂಪೆನಿಯ ಸ್ವಾಂಗೀಕಾರ ಪಡಕೊಳ್ಳತಕ್ಕ ಬಗ್ಯೆ ಅಥವಾ ಅವರಿಗೆ ಯುಕ್ತವಾಗಿ ತೋರುವ ಇತರ ಕಾರ್ಯಗಳ ಬಗ್ಯೆ ಕಂಪೆನಿಯ ಸಾಧಾರಣ ಸಭೆಗಳನ್ನು ಸೇರಿಸಬಹುದು.

ಮುಚ್ಚಿ ಬಿಡುವಿಕೆಯ ಕೆಲಸಗಳು ಒಂದು ಸಂವತ್ಸರಕ್ಕಿಂತ ಹೆಚ್ಚು ಕಾಲ ನಡದುಬರುವ ಪಕ್ಷದಲ್ಲಿ, ಲಿಕ್ವಿಡೇಟರುಗಳು ಮೊದಲನೇ ಸಂವತ್ಸರದ ಅಂತ್ಯದಲ್ಲಿಯೂ ಮುಚ್ಚಿ ಬಿಡುವಿಕೆ ಶುರುವಾದ್ದು ಮೊದಲು ಆ ತರುವಾಯ ಬರುವ ಪ್ರತಿ ಸಂವತ್ಸರದ ಅಂತ್ಯದಲ್ಲಿಯೂ ಅಥವಾ ಆ ಮೇಲೆ ಒಡನೆ ಅನುಕೂಲವಾಗಬಹುದಾದಾಗ್ಯೆ, ಕಂಪೆನಿಯ ಸಾಧಾರಣ ಸಭೆಯನ್ನು ಸೇರಿಸಿ, ಸದರಿ ಸಭೆಯ ಎದುರಿಗೆ ಅವರ ಕೃತ್ಯಗಳನ್ನೂ ವ್ಯಾಪಾರ ಸಮಾಚಾರಗಳನ್ನೂ ಗತಿಸಿದ ಒಂದು ಸಂವತ್ಸರ ಕಾಲದ ವರಿಗೆ ಮುಚ್ಚಿ ಬಿಡುವಿಕೆಯ ಕೆಲಸಗಳು ನಡಿಸಲ್ಪಟ್ಟ ವಿಧಾನವನ್ನೂ ತೋರಿಸುವಂತಾ ಒಂದು ಲೆಕ್ಕವನ್ನು ಹಾಜರ್ಮಾಡತಕ್ಕದ್ದು.

ಲಿಕ್ವಿಡೇಟರುಗಳ ಕೆಲಸ ಖಾಲಿಯಾದಾಗ ಅದನ್ನು ಭರ್ತಿ ಮಾಡಲಿಕ್ಕೆ ಅಧಿಕಾರ.

184. ಕಂಪೆನಿಯಿಂದ ಮೊಕರರ್ಮಾಡಲ್ಪಟ್ಟ ಲಿಕ್ವಿಡೇಟರುಗಳ ಪೈಕಿ ಯಾರ ಕೆಲಸವಾದರೂ ಮೃತಪಟ್ಟದ್ದರಿಂದ, ರಾಜೀನಾಮೆ ಕೊಟ್ಟದ್ದರಿಂದ ಯಾ ಅನ್ಯಥಾ ಖಾಲಿಯಾದರೆ, ಕಂಪೆನಿಯವರು, ಅವರ ಲೇಣೇದಾರರೊಂದಿಗೆ ಮಾಡಿಕೊಂಡಿರಬಹುದಾದ ಯಾವ ಏಕರಾರಿಗಾದರೂ ಒಳಪಟ್ಟು, ಸದರಿ ಖಾಲಿಯಾದ ಕೆಲಸವನ್ನು ಸಾಧಾರಣ ಸಭೆಯಲ್ಲಿ ಭರ್ತಿ ಮಾಡಬಹುದು; ಮತ್ತು ಸದರಿ ಖಾಲಿಯಾದ ಕೆಲಸವನ್ನು ಭರ್ತಿ ಮಾಡತಕ್ಕ ಬಗ್ಯೆ ಇತರ ಲಿಕ್ವಿಡೇಟರುಗಳು ಯಾರಾದರೂ ಇದ್ದುಕೊಂಡಿದ್ದರೆ ಅವರಿಂದಾಗಲಿ ಕಂಪೆನಿಯ ಯಾವ ಸಹಾಯಕರಿಂದಾಗಲಿ ಒಂದು ಸಾಧಾರಣ ಸಭೆ ಸೇರಿಸಲ್ಪಡತಕ್ಕದ್ದು. ಮತ್ತು ಅದು ಕಂಪೆನಿಯ ನಿಬಂಧನೆಗಳಿಂದ ನಿರ್ದೇಶಿಸಲ್ಪಟ್ಟಿರುವ ರೀತಿಯಾಗಲಿ ಅಥವಾ ಇತರ ಲಿಕ್ವಿಡೇಟರು ಯಾರಾದರೂ ಇದ್ದುಕೊಂಡಿದ್ದರೆ ಅವರಿಂದಾದರೂ ಕಂಪೆನಿಯ ಯಾವ ಸಹಾಯಕನಿಂದಾದರೂ ಕೇಳಿಕೊಳ್ಳಲ್ಪಟ್ಟ ಮೇಲೆ, ಕೋರ್ಟಿನವರಿಂದ ಗೊತ್ತುಮಾಡಲ್ಪಡುವ ರೀತಿಯಾಗಿ ಆಗಲಿ ಸೇರಬೇಕಾದರೆ ಕ್ರಮಪ್ರಕಾರ ಸೇರಿಸಲ್ಪಟ್ಟಂತೆ ಗ್ರಹಿಸಲ್ಪಡತಕ್ಕದ್ದು.

ಲಿಕ್ವಿಡೇಟರುಗಳನ್ನು ಮೊಕರರ್ಮಾಡುವದಕ್ಕೆ ಉಂಟಾಗಿರುವ ಕೋರ್ಟಿನವರ ಅಧಿಕಾರ.

185. ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡುವ ಸಂಗತಿಯಲ್ಲಿ ಯಾವ ಸಬಬಿನಿಂದಾದರೂ ಕೆಲಸ ನೋಡಲಿಕ್ಕೆ ಲಿಕ್ವಿಡೇಟರು ಇಲ್ಲದೆ ಇದ್ದರೆ, ಕೋರ್ಟಿನವರು, ಸಹಾಯಕನಿಂದ ಕೇಳಿಕೊಳ್ಳಲ್ಪಟ್ಟಲ್ಲಿ, ಲಿಕ್ವಿಡೇಟರನ್ನು, ಯಾ ಲಿಕ್ವಿಡೇಟರುಗಳನ್ನು ಮೊಕರರ್ಮಾಡಬಹುದು. ಮತ್ತು ಕೋರ್ಟಿನವರು, ತಕ್ಕ ಸಬಬು ತೋರಿಸಲ್ಪಟ್ಟಲ್ಲಿ ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡುವಿಕೆಯಲ್ಲಿ ಕೆಲಸ ನಡಿಸತಕ್ಕ ಬಗ್ಯೆ ಒಬ್ಬ ಲಿಕ್ವಿಡೇಟರನ್ನು ತೆಗದುಹಾಕಿ ಮತ್ತೊಬ್ಬ ಲಿಕ್ವಿಡೇಟರನ್ನು ಮೊಕರರ್ಮಾಡಬಹುದು.

ಮುಚ್ಚಿಬಿಡೋಣಾದ ತರುವಾಯ ಅಷ್ಟರಲ್ಲಿ ಲಿಕ್ವಿಡೇಟರುಗಳು ಒಂದು ಲೆಕ್ಕವನ್ನು ತಯಾರ್ಮಾಡಲೇಕು.

186. ಕಂಪೆನಿಯ ಅಹಿತಗಳೆಲ್ಲಾ ಮುಗಿದು ಅದನ್ನು ಮುಚ್ಚಿ ಬಿಟ್ಟ ಒಡನೆ, ಲಿಕ್ವಿಡೇಟರುಗಳು ಸದರಿ ಮುಚ್ಚಿ ಬಿಡಲಿಕ್ಕೆ ಹ್ಯಾಗೆ ನಡಿಸಲ್ಪಟ್ಟಿತು, ಮತ್ತು ಕಂಪೆನಿಯ ಸ್ವತ್ತು ಹ್ಯಾಗೆ ವಿನಿಯೋಗಮಾಡಲ್ಪಟ್ಟಿತು ಎಂಬುವದನ್ನು ತೋರಿಸುವಂತಾ ಒಂದು ಲೆಕ್ಕವನ್ನು ತಯಾರ್ಮಾಡತಕ್ಕದ್ದು: ಆ ತರುವಾಯ ಅವರು ಸದರಿ ಲೆಕ್ಕವನ್ನು ಎದುರಿಗೆ ಇಡತಕ್ಕ ಬಗ್ಯೆ ಲಿಕ್ವಿಡೇಟರುಗಳಿಂದ ಮಾಡಲ್ಪಡಬಹುದಾದ ವಿವರಣೆಗಳನ್ನು ಅಂದರೆ, ಸಮಜಾಯಿಷಿಗಳನ್ನು ಕೇಳತಕ್ಕ ಬಗ್ಯೆ ಕಂಪೆನಿಯ ಸಾಧಾರಣ ಸಭೆಯನ್ನು ಸೇರಿಸಬಹುದು.

ಅಂತಾ ಸಭೆಯ ಉದ್ದೇಶ್ಯವನ್ನೂ, ಕಾಲವನ್ನೂ, ಸ್ಥಳವನ್ನೂ ನಮೂದು ಮಾಡೋಣಾದ ಇಸ್ತಿಹಾರಿನ ಮೂಲಕವಾಗಿ ಸದರಿ ಸಭೆ ಸೇರಿಸಲ್ಪಡಬೇಕು; ಮತ್ತು ಆ ಸಭೆ ಸೇರುವದಕ್ಕಿಂತ ಅಧಮ ಪಕ್ಷ ಒಂದು ತಿಂಗಳು ಮುಂಚಿತವಾಗಿ ನೂರೆಪ್ಪತ್ತಾರನೆ ಪ್ರಕರಣದಲ್ಲಿ ನಮೂದಿಸಿರುವ ರೀತ್ಯಾ ಸದರಿ ಇಸ್ತಿಹಾರು ಪ್ರಕಟಿಸಲ್ಪಡತಕ್ಕದ್ದು.

187. ಲಿಕ್ವಿಡೇಟರುಗಳು ಅಂತಾ ಸಭೆ ಸೇರಿಸಲ್ಪಟ್ಟದ್ದನ್ನು ಕುರಿತು, ಅದು ಸೇರಲ್ಪಟ್ಟ ತಾರೀಕನ್ನು ಕುರಿತೂ ರಿಜಿಸ್ಟ್ರಾರವರಿಗೆ ರಿಪೋರ್ಟು ಮಾಡತಕ್ಕದ್ದು; ಮತ್ತು ಅಂತಾ ರಿಪೋರ್ಟು ರಿಜಿಸ್ಟರ್ಮಾಡಲ್ಪಟ್ಟ ತಾರೀಕು ಮೊದಲು ಮೂರು ತಿಂಗಳು ಕಳೆದು ಹೋದನಂತರ, ಕಂಪೆನಿಯು ಅಗಲಿಸಲ್ಪಟ್ಟಿತೆಂದು ಗ್ರಹಿಸಲ್ಪಡತಕ್ಕದ್ದು.

ಸಭೆ ಸೇರಿದ್ದನ್ನು ಕುರಿತು ಲಿಕ್ವಿಡೇಟರುಗಳು ರಿಜಿಸ್ಟ್ರಾರವರಿಗೆ ರಿಪೋರ್ಟು ಮಾಡಬೇಕು.

ಲಿಕ್ವಿಡೇಟರುಗಳು ರಿಜಿಸ್ಟ್ರಾರವರಿಗೆ ಅಂತಾ ರಿಪೋರ್ಟು ಕಳುಹಿಸಿಕೊಡಲಿಕ್ಕೆ ತಪ್ಪಿದರೆ, ಅವರು ಎಷ್ಟು ದಿವಸಗಳವರಿಗೆ ಹಾಗೆ ತಪ್ಪಿ ನಡೆಯುತ್ತಾರೋ ಅಷ್ಟು ದಿವಸಗಳ ವರಿಗೆ ದಿನ ಒಂದಕ್ಕೆ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

188. ಒಂದು ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡುವಲ್ಲಿ ಲಿಕ್ವಿಡೇಟರುಗಳ ಮೆಹನತಾನಾವಿನೊಂದಿಗೆ ತಗಲತಕ್ಕ ಸರಿಯಾದ ಸಮಸ್ತ ಖರ್ಚುಗಳೂ ಆಗವಡುಗಳೂ ವೆಚ್ಚಗಳೂ ಕಂಪೆನಿಯ ಅಸ್ಸೆಟ್ಸ್ ಎಂಬ ಆಸ್ತಿಯಿಂದ ಇತರ ಸಮಸ್ತ ದಾವೇದಾರರಿಗೆ ಕೊಡುವದಕ್ಕಿಂತ ಮುಂಚಿತವಾಗಿ ಕೊಡಲ್ಪಡತಕ್ಕದ್ದು.

ಮನಃಪೂರ್ವಕವಾಗಿ ಸಾಲ ತೀರಿಸೋಣದ ಖರ್ಚುಗಳು.

189. ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡುವದರಿಂದ ಸದರಿ ಕಂಪೆನಿಯ ಯಾವ ಲೇಣೇದಾರನ ಹಕ್ಕುಗಳಿಗಾದರೂ ಬಾಧಕ ಉಂಟಾದೀತೆಂದು ಕೋರ್ಟಿನವರು ಅಭಿಪ್ರಾಯಪಟ್ಟರೆ, ಆದನ್ನು ಸದರಿ ಲೇಣೇದಾರನು ಕೋರ್ಟಿನವರಿಂದ ಮುಚ್ಚಿಸಬಹುದಾದ ಹಕ್ಕಿಗೆ ಬಾಧು ಕಂಪೆನಿಯ ಮನಃಪೂರ್ವಕವಾದ ಮುಚ್ಚಲ್ಪಡೋಣವು ಅಡ್ಡಿಯಾಗಕೂಡದು.

ಲೇಣೇದಾರರ ಹಕ್ಕುಗಳ ವಿನಾಯತಿ.

190. ಒಂದು ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡುತ್ತಿರುವಲ್ಲಿ, ಅದನ್ನು ಕೋರ್ಟಿನವರಿಂದ ಮುಚ್ಚಿಸತಕ್ಕಬಗ್ಗೆ ನಡವಳಿಕೆಗಳನ್ನು ನಡಿಸೋಣಾದರೆ, ಸದರಿ ಕೋರ್ಟಿನವರು, ಅವರಿಗೆಯುಕ್ತವಾಗಿ ತೋರಿದಲ್ಲಿ, ಕಂಪೆನಿಯು ಕೋರ್ಟಿನವರಿಂದ ಮುಚ್ಚಿಸಲ್ಪಡಬೇಕೆಂದು ಹುಕುಂ ಮಾಡಿದಾಗ್ಯೂನ್ನೂ ಸದರಿ ಹುಕುಮಿನಲ್ಲಿ ಯಾಗಲಿ ಇತರ ಯಾವ ಹುಕುಮಿನಲ್ಲಿ ಯಾಗಲಿ ಮನಃಪೂರ್ವಕವಾಗಿ ಮುಚ್ಚಿ ಬಿಡುತ್ತಿರುವಲ್ಲಿ ನಡಿಸೋಣಾದ ನಡವಳಿಕೆಗಳ ಪೈಕಿ ಯಾವವನ್ನಾದರೂ ಎಲ್ಲವನ್ನಾದರೂ ಹಾಗೆಯೇ ಇಡತಕ್ಕಬಗ್ಗೆ ನಿಬಂಧನೆ ಏರ್ಪಡಿಸಬಹುದು.

ಮನಃಪೂರ್ವಕವಾಗಿ ಮುಚ್ಚಿಬಿಡೋಣದ ನಡವಳಿಕೆಗಳನ್ನು ಅಂಗೀಕರಿಸಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

Winding-up subject to the supervision of the Court.

ಮುಚ್ಚಿ ಬಿಡಲ್ಪಡೋಣವು ಕೋರ್ಟಿನವರ ನಿಗೆವಾನಿಗೆ ಒಳಪಟ್ಟಿರತಕ್ಕದ್ದು.

191. ಮನಃಪೂರ್ವಕವಾಗಿ ಮುಚ್ಚಿ ಬಿಡತಕ್ಕದ್ದೆಂದು ಒಂದು ಕಂಪೆನಿಯಿಂದ ನಿರ್ಣಯ ಮಾಡಲ್ಪಟ್ಟಲ್ಲಿ, ಕೋರ್ಟಿನವರು ಸದರಿ ಮನಃಪೂರ್ವಕವಾಗಿ ಮುಚ್ಚಿ ಬಿಡುವ ಕೆಲಸ ನಡಿಯಬೇಕೆಂತಲೂ ಆದರೆ ಅದು ಲೇಣೇದಾರರು ಸಹಾಯಕರು ಯಾ ಇತರರು ಕೋರ್ಟಿನವರನ್ನು ಕೇಳಿಕೊಳ್ಳುವ ಸ್ವಾತಂತ್ರ್ಯವನ್ನುಳ್ಳವರಾಗಿರುವಂತೆ ಕೋರ್ಟಿನವರ ನಿಗೆವಾನಿಗೆ ಒಳಪಟ್ಟದ್ದಾಗಿರಬೇಕೆಂತಲೂ ಸಾಧಾರಣವಾಗಿ ಕೋರ್ಟಿನವರಿಗೆ ಯುಕ್ತವಾಗಿ ಕೋರುವ ಒಡಂಬಡಿಕೆಗಳ ಪ್ರಕಾರ ವ ಅಂತಾ ಷರತ್ತುಗಳಿಗೊಳಪಟ್ಟದ್ದಾಗಿ ನಡಿಸಲ್ಪಡಬೇಕೆಂತಲೂ ಹುಕುಂ ಮಾಡಬಹುದು.

ಅರ್ಜಿ ಕೊಡಲ್ಪಟ್ಟ ಮೇಲೆ ಮುಚ್ಚಿ ಬಿಡೋಣವು ತಮ್ಮ ನಿಗೆವಾನಿಗೆ ಒಳಪಟ್ಟಿರಬೇಕು ಎಂದು ಹುಕುಂ ಮಾಡಲಿಕ್ಕೆ ಉಂಟಾಗಿರುವ ಕೋರ್ಟಿನವರ ಅಧಿಕಾರ.

192. ಮನಃಪೂರ್ವಕವಾಗಿ ಮುಚ್ಚಿ ಬಿಡುವದರ ಪೈಕಿ ಒಂದುಭಾಗ ಯಾ ಎಲ್ಲಾಕೆಲಸವೂ ಹಾಗೆಯೇ ನಡಿಸಲ್ಪಡಬೇಕೆಂತಲೂ ಆದರೆ ಅದು ಕೋರ್ಟಿನವರ ನಿಗೆವಾನಿಗೆ ಒಳಪಟ್ಟಿರಬೇಕೆಂತಲೂ ಕೊಡೋಣಾಗುವ ಅರ್ಜಿಯು, ವ್ಯವಹರಣೆಗಳ ಮೇಲೆ ಕೋರ್ಟಿನವರಿಗೆ ಅಧಿಕಾರವನ್ನುಂಟುಮಾಡತಕ್ಕ ಬಗ್ಗೆ, ಕೋರ್ಟಿನವರಿಂದ ಕಂಪೆನಿಯನ್ನು ಮುಚ್ಚಿಸಬೇಕೆಂದು ಕೊಡೋಣಾದ ಅರ್ಜಿಯಂತೆ ಗ್ರಹಿಸಲ್ಪಡತಕ್ಕದ್ದು. ಸದರಿ ಪ್ರಕಾರ ಮುಚ್ಚಲ್ಪಡೋಣವನ್ನು ಕೋರ್ಟಿನವರ ನಿಗೆವಾನಿಗೆ ಒಳಪಟ್ಟು ಮುಚ್ಚಲ್ಪಡುವಿಕೆ ಎಂದು ಇನ್ನು ಮೇಲೆ ನಮೂದಿಸೋಣಾಗುತ್ತದೆ.

ಮುಚ್ಚಿಬಿಡಬೇಕೆಂದು ಬರಕೊಳ್ಳೋಣದ ಅರ್ಜಿ ನಿಗೆವಾನಿಗೆ ಒಳಪಟ್ಟಿರುತ್ತದೆ.

193. ಒಂದು ಕಂಪೆನಿ ಸಂಪೂರ್ಣವಾಗಿ ಕೋರ್ಟನವರಿಂದಲೇ ಮುಚ್ಚಲ್ಪಡಬೇಕೇ ಅಥವಾ ಕೋರ್ಟ ನವರ ನಿಗವಾನಿಗೆ ಒಳಪಟ್ಟು ಮುಚ್ಚಲ್ಪಡಬೇಕೇ ಎಂಬದನ್ನು ಗೊತ್ತು ಮಾಡುವದರಲ್ಲಿಯೂ, ಲಿಕ್ವಿಡೇಟರನ್ನು ಯಾ ಲಿಕ್ವಿಡೇಟರುಗಳನ್ನು ಮೊಕರರ್ ಮಾಡುವದರಲ್ಲಿಯೂ ನಿಗವಾನಿಗೆ ಒಳಪಟ್ಟು ಮುಚ್ಚಲ್ಪಡುವದಕ್ಕೆ ಸಂಬಂಧಪಟ್ಟ ಸಮಸ್ತ ಇತರ ವಿಷಯಗಳಲ್ಲಿಯೂ ಕೋರ್ಟನವರು ಸಾಕಾದ ಸಾಕ್ಷ್ಯದಿಂದ ರುಜುಪಡಿಸಿಕೊಟ್ಟ ಲೇಣೇದಾರರ ಯಾ ಸಹಾಯಕರ ಕೋರಿಕೆಗಳನ್ನು ಗೌರವಿಸಬಹುದು, ಮತ್ತು ಅವರ ಕೋರಿಕೆಗಳನ್ನು ತಿಳಿದುಕೊಳ್ಳತಕ್ಕ ಉದ್ದೇಶ್ಯ ಕೋರ್ಟನವರು ಬೇಕಾದ ಮೇರೆ ರೀತಿಯಲ್ಲಿ ಲೇಣೇದಾರರ ಯಾ ಸಹಾಯಕರ ಸಭೆ ಸೇರಿಸಲ್ಪಡಬೇಕು ಮತ್ತು ಕ್ರಮಪಡಿಸಲ್ಪಡಬೇಕು ಎಂದು ಹುಕುಂ ಮಾಡಬಹುದು, ಮತ್ತು ಅಂಥಾ ಯಾವ ಸಭೆಯಲ್ಲಾದರೂ ಅಗ್ರಾಸನಾಧಿಪತಿಯಾಗಿರುವದಕ್ಕೂ, ಸದರಿ ಸಭೆ ಸೇರಿದ್ದರ ಫಲವನ್ನು ಕೋರ್ಟನವರಿಗೆ ರಿಪೋರ್ಟು ಮಾಡುವದಕ್ಕೂ ಒಬ್ಬ ಮನುಷ್ಯನನ್ನು ಮೊಕರರ್ ಮಾಡಬಹುದು.

ಕೋರ್ಟನವರು ಲೇಣೇದಾರರ ಕೋರಿಕೆಗಳನ್ನು ಆಲೋಚಿಸಬಹುದು.

ಲೇಣೇದಾರರ ಸಂಗತಿಯಲ್ಲಿ ಪ್ರತೊಬ್ಬ ಲೇಣೇದಾರನಿಗೆ ಸಲ್ಲಬೇಕಾದ ಸಾಲದ ಮೊಬಲಗು ಇಷ್ಟೆಂಬದನ್ನೂ, ಸಹಾಯಕರ ಸಂಗತಿಯಲ್ಲಿ, ಕಂಪೆನಿಯ ನಿಬಂಧನೆಗಳ ಪ್ರಕಾರ ಒಬ್ಬೊಬ್ಬ ಸಹಾಯಕನಿಗೆ ಉಂಟಾಗಿರುವ ಅಧಿಕಾರದ ಓಟುಗಳ ಸಂಖ್ಯೆ ಇಷ್ಟೆಂಬದನ್ನೂ ಆಲೋಚನೆಗೆ ತೆಗೆದುಕೊಳ್ಳತಕ್ಕದ್ದು.

194. ಕೋರ್ಟನವರ ನಿಗವಾನಿಗೆ ಒಳಪಟ್ಟು ಮುಚ್ಚಿ ಬಿಡಲ್ಪಡತಕ್ಕ ಬಗ್ಯೆ ಕೋರ್ಟನವರಿಂದ ಯಾವ ಹುಕುಮಾದರೂ ಮಾಡಲ್ಪಟ್ಟಲ್ಲಿ, ಕೋರ್ಟನವರು, ಅದೇ ಹುಕುಮಿನಲ್ಲಾಗಲಿ ಆ ತರುವಾಯ ಕೊಡುವ ಯಾವ ಹುಕುಮಿನಲ್ಲಾಗಲಿ, ಯಾವ ಲಿಕ್ವಿಡೇಟರನ್ನಾದರೂ ಹೆಚ್ಚಾಗಿ ಮೊಕರರ್ ಮಾಡಬಹುದು.

ಮುಚ್ಚಿ ಬಿಡೋಣವು ನಿಗವಾನಿಗೆ ಒಳಪಟ್ಟದ್ದಲ್ಲಿ ಹೆಚ್ಚು ಮಂದಿ ಲಿಕ್ವಿಡೇಟರುಗಳನ್ನು ಮೊಕರರ್ ಮಾಡಲಿಕ್ಕೆ ಕೋರ್ಟನವರಿಗೆ ಉಂಟಾಗಿರುವ ಅಧಿಕಾರ.

ಕೋರ್ಟನವರಿಂದ ಹಾಗೆ ಮೊಕರರ್ ಮಾಡಲ್ಪಟ್ಟ ಯಾವ ಲಿಕ್ವಿಡೇಟರಾದರೂ ಕಂಪೆನಿಯಿಂದ ಮೊಕರರ್ ಮಾಡಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಅದೇ ಅಧಿಕಾರಗಳನ್ನುಳ್ಳವನಾಗಿರತಕ್ಕದ್ದು, ಅದೇ ಹಂಗುಗಳಿಗೆ ಒಳಪಟ್ಟಿರತಕ್ಕದ್ದು, ಮತ್ತು ಸಮಸ್ತ ವಿಷಯಗಳಲ್ಲಿ ಅದೇ ಸ್ಥಾನದಲ್ಲಿರುವವನಾಗಿರತಕ್ಕದ್ದು.

ಕೋರ್ಟನವರಿಂದ ಹಾಗೆ ಮೊಕರರ್ ಮಾಡಲ್ಪಟ್ಟ ಯಾವ ಲಿಕ್ವಿಡೇಟರುಗಳನ್ನಾಗಲಿ, ಅಗಿಂದಾಗ್ಯೆ ಕೋರ್ಟನವರು ಕೆಲಸದಿಂದ ತೊಲಗಿಸಬಹುದು, ಮತ್ತು ಹಾಗೆ ತೊಲಗಿಸಲ್ಪಟ್ಟದ್ದರಿಂದ ಯಾ ಲಿಕ್ವಿಡೇಟರು ಮೃತಪಟ್ಟದ್ದರಿಂದ ಯಾ ರಾಜೀನಾಮೆ ಕೊಟ್ಟದ್ದರಿಂದ ಖಾಲಿಯಾದ ಕೆಲಸವನ್ನು ಭರ್ತಿ ಮಾಡಬಹುದು.

195. ಕೋರ್ಟನವರ ನಿಗವಾನಿಗೆ ಒಳಪಟ್ಟು ಮುಚ್ಚಿ ಬಿಡತಕ್ಕ ಬಗ್ಯೆ ಯಾವ ಹುಕುಮಾದರೂ ಮಾಡಲ್ಪಟ್ಟಲ್ಲಿ, ಅಂಥಾ ಮುಚ್ಚಿ ಬಿಡೋಣವನ್ನು ನಡಿಸಲಿಕ್ಕೆ ಮೊಕರರ್ ಮಾಡಲ್ಪಟ್ಟ ಲಿಕ್ವಿಡೇಟರು ಕೋರ್ಟನವರಿಂದ ವಿಧಿಸೋಣಾದ ನಿರ್ಬಂಧಗಳಿಗೆ ಒಳಪಟ್ಟವನಾಗಿ, ಕಂಪೆನಿಯು ತೀರಾ ಮನಃಪೂರ್ವಕವಾಗಿ ಮುಚ್ಚಲ್ಪಡುವದಾದರೆ ಹ್ಯಾಗೋ ಹಾಗೆ ಅದೇ ರೀತಿಯಲ್ಲಿ, ಕೋರ್ಟನವರ ಅನುಮತಿ ಯಾ ಅಭ್ಯಂತರವೇನೂ ಇಲ್ಲದೆ, ತನ್ನ ಅಧಿಕಾರಗಳನ್ನೆಲ್ಲಾ ಚಲಾಯಿಸಬಹುದು.

ನಿಗವಾನಿಗೆ ಒಳಪಡಿಸಿ ಮುಚ್ಚಿ ಬಿಡಬೇಕು ಎಂದು ಕೋರ್ಟನವರಿಂದ ಕೊಡಲ್ಪಡುವ ಹುಕುಮಿನ ಫಲ.

ಕೋರ್ಟನವರ ನಿಗವಾನಿಗೆ ಒಳಪಟ್ಟು ಮುಚ್ಚಿ ಬಿಡಲ್ಪಡತಕ್ಕ ಬಗ್ಯೆ ಕೋರ್ಟನವರಿಂದ ಮಾಡೋಣಾದ ಯಾವ ಹುಕುಮಾಗಲಿ ಮೇಲೆ ಹೇಳಲ್ಪಟ್ಟದ್ದು ಹೊರ್ತು, ವ್ಯವಹರಣೆಗಳನ್ನೂ, ಇತರ ನಡವಳಿತೆಗಳನ್ನೂ ನಿಲ್ಲಿಸುವದರೊಂದಿಗೆ ಸಮಸ್ತ ಕಾರ್ಯಗಳ ಬಗ್ಯೆ ಕೋರ್ಟನವರಿಂದ ಕಂಪೆನಿಯನ್ನು ಮುಚ್ಚಿ ಸತಕ್ಕ ಬಗ್ಯೆ, ಕೋರ್ಟನವರಿಂದ ಕೊಡಲ್ಪಟ್ಟ ಹುಕುಮಿನಂತೆ ಗಣಿಸಲ್ಪಡತಕ್ಕದ್ದು. ಮತ್ತು ಕಾಲ್ಸ್ ಎಂಬ ವಸೂಲುಗಳನ್ನು ಮಾಡಲಿಕ್ಕೂ, ಅಥವಾ ಲಿಕ್ವಿಡೇಟರುಗಳಿಂದ ಮಾಡಲ್ಪಟ್ಟ ಕರಾರುಗಳನ್ನು ಅಮಲ್ದಾರಿ ಮಾಡಿಸಲಿಕ್ಕೂ, ಕೋರ್ಟನವರಿಂದಲೇ ಸಂಪೂರ್ಣವಾಗಿ ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ ಮಾಡಲ್ಪಟ್ಟದ್ದಲ್ಲಿ ಚಲಾಯಿಸಬಹುದಾಗಿದ್ದ ಸಮಸ್ತ ಇತರ ಅಧಿಕಾರಗಳನ್ನು ಚಲಾಯಿಸಲಿಕ್ಕೂ ಕೋರ್ಟನವರಿಗೆ ಪೂರಾ ಅಧಿಕಾರವನ್ನು ಉಂಟು ಮಾಡತಕ್ಕದ್ದು.

ಅಫಿಷಿಯಲ್ ಲಿಕ್ವಿಡೇಟರುಗಳಿಗೆ ಯಾ ಅವರ ಪಕ್ಷವಾಗಿ ಯಾವ ಕೃತ್ಯವಾಗಲಿ, ಕೆಲಸವಾಗಲಿ, ಮಾಡಲ್ಪಡುವಂತೆ ಹುಕುಂ ಮಾಡಲಿಕ್ಕೆ ಕೋರ್ಟನವರಿಗೆ ಯಾವತರಿಂದ ಅಧಿಕಾರ ಉಂಟಾಗಿದೆಯೋ ಆ ನಿಬಂಧನೆಗಳನ್ನು ಅರ್ಥ ಮಾಡುವಲ್ಲಿ, "ಅಫಿಷಿಯಲ್ ಲಿಕ್ವಿಡೇಟರು" ಎಂಬ ಮಾತು ಕೋರ್ಟನವರ ನಿಗವಾನಿಗೆ

ಬಿಳಪಟ್ಟು ಮುಚ್ಚಿ ಬಿಡಲ್ಪಡುವ ಕೆಲಸವನ್ನು ನಡಿಸುವ ಲಿಕ್ವಿಡೇಟರು ಎಂತು ಅರ್ಥವಾಗುವಂತೆ ಗ್ರಹಿಸಲ್ಪಡ ತಕ್ಕದ್ದು.

196. ಕೋರ್ಟನವರ ನಿಗವಾನಿಗೆ ಬಿಳಪಟ್ಟು ಒಂದು ಕಂಪೆನಿ ಮುಚ್ಚಿ ಬಿಡಲ್ಪಡತಕ್ಕಬಗ್ಗೆ ಹುಕುಂ ಮಾಡಲ್ಪಟ್ಟಿರುವಲ್ಲಿ, ಸದರಿ ಕಂಪೆನಿ ಬಲಾತ್ಕಾರವಾಗಿ ಮುಚ್ಚಿ ಬಿಡಲ್ಪಡಬೇಕೆಂದು ಮುಂತೊಂದು ಹುಕುಂ ಕೊಡಲ್ಪಟ್ಟಾವರೆ, ಸದರಿ ಕೋರ್ಟನವರು, ಸದರಿ ಎರಡನೇ ಹುಕುಮಿನಲ್ಲಾಗಲಿ ಆ ತರುವಾಯದ ಬೇರೆ ಯಾವ ಹುಕುಮಿನಲ್ಲಾಗಲಿ ವಾಲಂಟರಿಯಾನ ಸ್ವೇಚ್ಛೆಯಾಗಿ ಬರುವ ಲಿಕ್ವಿಡೇಟರುಗಳನ್ನಾದರೂ ಅವರ ಪೈಕಿ ಯಾರನ್ನಾದರೂ ಮೊಕರರ್ರು ಮಾಡಬಹುದು. ಇವರನ್ನು ಹಂಗಾಮಿಯಾಗಿ ಯಾ ಖಾಯಮಾಗಿ, ಮತ್ತು ಅಫಿಷಿಯಲ್ ಲಿಕ್ವಿಡೇಟರುಗಳಾಗಿರುವ ಯಾರಾದರೂ ಹೆಚ್ಚಿಗೆ ಮನುಷ್ಯನು ಅವರೊಂದಿಗೆ ಇರುವಂತೆಯೂ ಯಾ ಇಲ್ಲದಂತೆಯೂ ಮೊಕರರ್ರು ಮಾಡಬಹುದು.

ಕೆಲವು ಸಂಗತಿಗಳಲ್ಲಿ ವಾಲಂಟರಿ ಲಿಕ್ವಿಡೇಟರುಗಳು ಅಫಿಷಿಯಲ್ ಲಿಕ್ವಿಡೇಟರುಗಳಾಗಿ ಮೊಕರರ್ರು ಮಾಡಲ್ಪಡಬಹುದು.

Supplemental Provisions.

ಉಪ ನಿಬಂಧನೆಗಳು.

197. ಯಾವ ಕಂಪೆನಿಯಾದರೂ ಕೋರ್ಟನವರಿಂದ ಮುಚ್ಚಿ ಬಿಡಲ್ಪಡುತ್ತಿರುವಲ್ಲಿ ಅಥವಾ ಕೋರ್ಟನವರ ನಿಗವಾನಿಗೆ ಬಿಳಪಟ್ಟಿರುವಲ್ಲಿ, ಮುಚ್ಚಿ ಬಿಡೋಣ ಶುರುವಾದ್ದಕ್ಕೂ ಮುಚ್ಚಿ ಬಿಡಲಿಕ್ಕೆ ಹುಕುಂ ಕೊಡಲ್ಪಟ್ಟದ್ದಕ್ಕೂ ಮಧ್ಯೆ ಮಾಡಲ್ಪಟ್ಟ ಕಂಪೆನಿಯ ಬಾಬತ್ತು ಸ್ವತ್ತಿನ ಸಮಸ್ತ ವಿನಿಯೋಗಗಳೂ, ವ ಹಿಸ್ಸೆಗಳ ಪ್ರತಿ ಪರಭಾರೆಯೂ ಅಥವಾ ಕಂಪೆನಿಯ ಮೆಂಬರುಗಳ ಸ್ಥಿತಿಯಲ್ಲಿ ಮಾಡಲ್ಪಟ್ಟ ತಿದ್ದುಪಡಿಗಳು, ಕೋರ್ಟನವರು ಅನ್ಯಥಾ ಹುಕುಂ ಮಾಡದೆ ಹೋದಲ್ಲಿ, ರದ್ದಾಗಿ ಹೋಗತಕ್ಕದ್ದು.

ಮುಚ್ಚಿ ಬಿಡೋಣವು ಶುರುವಾದ ಮೇಲೆ ಮಾಡೋಣಾದ ಏರ್ಪಾಟುಗಳು ಸಲುವಳಿಯಾಗಕೂಡದು.

198. ಯಾವ ಕಂಪೆನಿಯಾದರೂ ಮುಚ್ಚಿ ಬಿಡಲ್ಪಡುತ್ತಿರುವಲ್ಲಿ, ಕಂಪೆನಿಯ ವ ಲಿಕ್ವಿಡೇಟರುಗಳ ಸಮಸ್ತ ಪುಸ್ತಕಗಳೂ, ಲೆಕ್ಕಗಳೂ, ದಸ್ತಾವೇಜುಗಳೂ, ಕಂಪೆನಿಯ ಸಹಾಯಕರ ಮಧ್ಯೆ ಇರುವಂತೆ, ಅವುಗಳಲ್ಲಿ ಬರೆಯಲ್ಪಟ್ಟಿರುವ ಸಮಸ್ತ ಸಂಗತಿಗಳ ವಾಸ್ತವ್ಯದ ವಿಷಯದಲ್ಲಿ ಸ್ವತಸ್ಸಿದ್ಧವಾದ ಸಾಕ್ಷ್ಯವಾಗಿರತಕ್ಕದ್ದು.

ಕಂಪೆನಿಯ ಪುಸ್ತಕಗಳು ಸಾಕ್ಷ್ಯವಾಗಿ ಬೇಕು.

199. ಈ ರೆಗ್ಯುಲೇಷನಿಗನುಗುಣವಾಗಿ ಯಾವ ಕಂಪೆನಿಯಾದರೂ ಮುಚ್ಚಿ ಬಿಡಲ್ಪಟ್ಟು ಅಗಲಿಸಲ್ಪಡಲಿಕ್ಕಿರುವಲ್ಲಿ, ಕಂಪೆನಿಯ ವ ಲಿಕ್ವಿಡೇಟರುಗಳ ಪುಸ್ತಕಗಳೂ, ಲೆಕ್ಕಗಳೂ, ದಸ್ತಾವೇಜುಗಳೂ ಈ ಕೆಳಗಿನ ರೀತ್ಯಾ ವಿನಿಯೋಗಿಸಲ್ಪಡಬಹುದು; ಹ್ಯಾಗೆಂದರೆ:—ಕಂಪೆನಿಯು ಕೋರ್ಟನವರಿಂದ ಯಾ ಅವರ ನಿಗವಾನಿಗೆ ಬಿಳಪಟ್ಟು ಮುಚ್ಚಿ ಬಿಡಲ್ಪಟ್ಟಾಗ, ಕೋರ್ಟನವರು ಹುಕುಂ ಮಾಡುವ ರೀತಿಯಾಗಿಯೂ ವ ಕಂಪೆನಿಯು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಟ್ಟಾಗ, ಕಂಪೆನಿಯವರು ವಿಶೇಷ ನಿರ್ಣಯದ ಮೂಲಕವಾಗಿ ಆಜ್ಞಾಪಿಸುವ ರೀತಿಯಾಗಿಯೂ, ವಿನಿಯೋಗಿಸಲ್ಪಡಬಹುದು.

ಕಂಪೆನಿಯ ಪುಸ್ತಕಗಳನ್ನೂ ಲೆಕ್ಕಗಳನ್ನೂ ವ ದಸ್ತಾವೇಜುಗಳನ್ನೂ ವಿಲೆ ಮಾಡುವ ವಿಷಯದಲ್ಲಿ.

ಆದರೆ, ಹಾಗೆ ಅಗಲಿಸಲ್ಪಟ್ಟ ತಾರೀಖ್ ಮೊದಲು ಐದು ಸಂವತ್ಸರಗಳು ಕಳೆದುಹೋದ ನಂತರ, ಕಂಪೆನಿಯ ಮೇಲಾಗಲಿ ಲಿಕ್ವಿಡೇಟರುಗಳ ಮೇಲಾಗಲಿ, ಸದರಿ ಪುಸ್ತಕಗಳು, ಲೆಕ್ಕಗಳು ವ ದಸ್ತಾವೇಜುಗಳು ಯಾರ ವಶದಲ್ಲಿಡಲ್ಪಟ್ಟವೋ ಅಂತಾ ಯಾವ ಮನುಷ್ಯನ ಮೇಲಾಗಲಿ, ಅವುಗಳು ಯಾ ಅವುಗಳ ಪೈಕಿ ಯಾವದಾದರೊಂದು ಅವುಗಳಲ್ಲಿ ಬಾಧ್ಯತೆಯನ್ನು ನಮೂದಿಸುವ ಕಕ್ಷಿಗಾರನಿಗೆ ಯಾ ಕಕ್ಷಿಗಾರರಿಗೆ ಹಾಜರ್ರು ಮಾಡಲ್ಪಡಲಿಲ್ಲವೆಂಬ ಸಬಬಿನ ಮೇಲೆ ಯಾವ ಜವಾಬುದಾರಿಯೂ ಇರುವದಿಲ್ಲ.

200. ಒಂದು ಕಂಪೆನಿಯು ಕೋರ್ಟನವರಿಂದ ಮುಚ್ಚಲ್ಪಡಲಿಕ್ಕೆ ಯಾ ಕೋರ್ಟನವರ ನಿಗವಾನಿಗೆ ಬಿಳಪಟ್ಟು ಮುಚ್ಚಲ್ಪಡಲಿಕ್ಕೆ ಹುಕುಂ ಮಾಡೋಣಾಗಿರುವಲ್ಲಿ, ಸದರಿ ಕಂಪೆನಿಯ ಪುಸ್ತಕಗಳನ್ನೂ, ಕಾಗದಗಳನ್ನೂ, ಅದರ ಲೇಣೆದಾರರು ವ ಸಹಾಯಕರು ನೋಡತಕ್ಕಬಗ್ಗೆ ಕೋರ್ಟನವರು ತಮಗೆ ನ್ಯಾಯವೆಂದು ತೋರುವಂತಾ ಹುಕುಮನ್ನು ಮಾಡಬಹುದು, ಮತ್ತು ಕಂಪೆನಿಯ ಸ್ವಾಧೀನದಲ್ಲಿರುವ ಯಾವ ಪುಸ್ತಕಗಳಾದರೂ, ಕಾಗದಗಳಾದರೂ, ಲೇಣೇದಾರರಿಂದ ಯಾ ಸಹಾಯಕರಿಂದ ಕೋರ್ಟನವರ ಹುಕುಮಿಗೆ ಅನುಸಾರವಾಗಿ ನೋಡಲ್ಪಡಬಹುದೇ ಹೊರ್ತು, ಹೊರ್ತಾಗಿ ಯಾ ಅನ್ಯಥಾ ನೋಡಲ್ಪಡಲಿಕ್ಕಾಗದು.

ಪುಸ್ತಕಗಳ ಪರಿಶೋಧನೆ.

"200A. (1) ಈ ರೆಗ್ಯುಲೇಷನ್ ಮೇರಿಗೆ ಮುಚ್ಚಲ್ಪಡುವ ಯಾವದಾದರೂ ಕಂಪೆನಿಯ ಬಾಬತು ಬಾಕಿ ಉಳದಿರುವ ಸ್ವತ್ತನ್ನು ಸಾಲಗಳ ಪಾವತಿ ಬಗ್ಯೆ ಹಂಚಿ ಹಾಕುವಾಗ್ಯೆ ಇತರ ಎಲ್ಲಾ ಸಾಲಗಳಿಗಿಂತ ಮುಂಚಿತವಾಗಿ ಈ ಕೆಳಗಿನವುಗಳು ಪ್ರಥಮತಃ ಸಲ್ಲಿಸಲ್ಪಡತಕ್ಕದ್ದಾಗಿರುತ್ತವೆ.

ಪ್ರಥಮತಃ ಪಾವತಿ ಮಾಡತಕ್ಕದ ಸಾಲಗಳು.

"(a) ಮುಚ್ಚಲ್ಪಡುವ ಷುರು ತಾರೀಖಿನಲ್ಲಿ ಮತ್ತು ಆ ತಾರೀಖಿಗೆ ಮೊದಲ್ಗೊಂಡು ಹಿಂದಿನ ಹನ್ನೆರಡು ತಿಂಗಳೊಳಗಾಗಿ ಸದರಿ ಕಂಪೆನಿಯವರಿಂದ ಮೈಸೂರು ಗವರ್ನಮೆಂಟಿಗೆ ಪಾವತಿಯಾಗತಕ್ಕದ್ದಾಗಿ ಬಾಕಿ ಬಿದ್ದ ಸಮಸ್ತ ಕಂದಾಯ, ತೆರಿಗೆಗಳು, ತೀರ್ವೆಗಳು ವ ದರಗಳು ;

"(b) ಮುಚ್ಚಲ್ಪಡುವ ಷುರು ತಾರೀಖಿಗೆ ಮುಂದಿನ ಎರಡು ತಿಂಗಳ ಒಳಗಾಗಿ ಕಂಪೆನಿಯ ಬಗ್ಯಾಗಿ ಮಾಡೋಣಾದ ನೌಕರಿ ಯಾ ಕೆಲಸದ ಉದ್ದಿಶ್ಯವಾಗಿ ಪ್ರತಿಯೊಬ್ಬ ಕ್ಲಾರ್ಕ ಯಾ ನೌಕರನಿಗೆ 1,000 ರೂಪಾಯಿಗೆ ಮೀರದ ಸಮಸ್ತ ಮಜೂರಿ ಯಾ ತಲಬು ; ಮತ್ತು

"(c) ಮುಚ್ಚಲ್ಪಡುವ ಷುರು ತಾರೀಖಿಗೆ ಮುಂದಿನ ಎರಡು ತಿಂಗಳೊಳಗಾಗಿ, ಕಂಪೆನಿ ಬಗ್ಯಾಗಿ ಮಾಡೋಣಾದ ವ ಕಾಲದ ಮೇರಿಗೆ ಯಾ ಪ್ರತಿ ಕೆಲಸದ ಬಗ್ಯಾಗಿ ಸಂದಾಯವಾಗಬೇಕಾದ ಯಾವದಾದರೂ ಕೂಲಿಯವನ ಯಾ ಕೆಲಸದವನ ಬಾಬಿನಲ್ಲಿ 500 ರೂಪಾಯಿಗಳಿಗೆ ಮೀರದಂತ ಎಲ್ಲಾ ಮಜೂರಿ ;

"(2) ಮೇಲೆ ಹೇಳೋಣಾದ ಸಾಲಗಳು ಪಾವತಿ ಆಗುವ ವಿಷಯದಲ್ಲಿ ಒಂದಕ್ಕಿಂತ ಮುಂಚಿತವಾಗಿ ಮತ್ತೊಂದು ಪ್ರಥಮತ್ವವಂ ಪಡೆಯಬೇಕೆಂಬ ಭೇದವಿಲ್ಲದೆ ಏಕಪ್ರಕಾರವಾಗಿ ಎಣಿಸಲ್ಪಟ್ಟ ಕಂಪೆನಿಯ ಬಾಬತು ಬಾಕಿ ಉಳದಿರುವ ಸ್ವತ್ತು ಸದರಿ ಸಾಲಗಳು ಪೂರಾಗಿ ಪಾವತಿ ಮಾಡುವ ಬಗ್ಯೆ ಸಾಕಾದಷ್ಟು ಇಲ್ಲದೇ ಇರುವ ಸಂಗತಿಯಲ್ಲಿ ಅಲ್ಲದೆ, ಅನ್ಯಥಾ ಪೂರಾಗಿ ಪಾವತಿ ಮಾಡಲ್ಪಡತಕ್ಕದ್ದು; ಹಾಗೆ ಸಾಕಾದಷ್ಟು ಇಲ್ಲದೆ ಇರುವಲ್ಲಿ ಅವುಗಳೆಲ್ಲವುಗಳ ಬಾಬಿನಲ್ಲಿಯೂ ಒಂದೇ ದಾಮಾಷಾಯಿ ಮೇರೆ ತಗ್ಗಿಸಲ್ಪಡತಕ್ಕದ್ದು.

"(3) ಆಡಳಿತ ಯಾ ಇತರ ಖರ್ಚಿಗೆ ಅವಶ್ಯಕವಿರುವ ಮೊಬಲಗು ಇಟ್ಟುಕೊಳ್ಳುವದಕ್ಕೆ ಒಳಪಟ್ಟು ಕಂಪೆನಿಯ ಸ್ವತ್ತು ಲಿಕ್ವಿಡೇಟರ ಯಾ ಆಫಿಷಿಯಲ್ ಲಿಕ್ವಿಡೇಟರ ಸ್ವಾಧೀನಕ್ಕೆ ಬಂದಾಗ, ಸದರಿ ಸಾಲಗಳನ್ನು ಪಾವತಿ ಮಾಡುವ ಬಗ್ಯೆ ಸಾಕಾಗುವ ಮತ್ತು ಸಾಕಾಗಬಹುದಾದಷ್ಟರವಟ್ಟಿಗೆ ಮೇಲೆ ಹೇಳಿದ ಸಾಲಗಳನ್ನು ಕೂಡಲೆ ಸದರಿ ಲಿಕ್ವಿಡೇಟರು ಯಾ ಆಫಿಷಿಯಲ್ ಲಿಕ್ವಿಡೇಟರು ಪಾವತಿಮಾಡಿಬಿಡತಕ್ಕದ್ದು."

201. ಲಿಕ್ವಿಡೇಟರುಗಳು, ಕೋರ್ಟನವರಿಂದ ಯಾ ಕೋರ್ಟನವರ ನಿಗವಾನಿಗೆ ಒಳಪಟ್ಟು ಕಂಪೆನಿ ಮುಚ್ಚಿ ಬಿಡಲ್ಪಡುತ್ತಿರುವಾಗ ಕೋರ್ಟನವರ ಅನುಮತಿಯಿಂದಲೂ ವ ತೀರಾ ಮನಃಪೂರ್ವಕವಾಗಿ ಕಂಪೆನಿ ಮುಚ್ಚಿ ಬಿಡಲ್ಪಡುತ್ತಿರುವಾಗ ಕಂಪೆನಿಯ ಅಸಾಧಾರಣ ನಿರ್ಣಯದ ಅನುಮತಿಯಿಂದಲೂ, ಯಾವ ತರಹದ ಲೇಣೇದಾರರಿಗಾದರೂ ಪೂರಾ ಬಾಕಿಯನ್ನು ಸಲ್ಲಿಸಿಬಿಡಬಹುದು, ಅಥವಾ ಲೇಣೇದಾರರೊಂದಿಗೆ ಯಾ ಲೇಣೇದಾರರೆಂದು ಬಾಧ್ಯತೆಯನ್ನು ನಮೂದಿಸುವ ಮನುಷ್ಯರೊಂದಿಗೆ ಯಾ ಕಂಪೆನಿಯನ್ನು ಜವಾಬುದಾರಿಯಾಗಿ ಮಾಡಬಹುದಾದಂತಾ ತತ್ಕಾಲದ ಯಾ ಭವಿಷ್ಯತ್ಕಾಲದ ಯಾವ ಬಾಧ್ಯತೆಯನ್ನಾದರೂ ಉಂಟಾಗಿರುವ ಮನುಷ್ಯರೊಂದಿಗೆ ಯಾ ಅಂತಾ ಬಾಧ್ಯತೆಯನ್ನುಂಟಾಗಿರುವವರೆಂದು ಹೇಳಿಕೊಳ್ಳುವ ಮನುಷ್ಯರೊಂದಿಗೆ ಲಿಕ್ವಿಡೇಟರುಗಳು ತಮಗೆ ಯುಕ್ತವಾಗಿ ತೋರುವ ಪ್ರಕಾರ ರಾಜಿ ಮಾಡಿಕೊಳ್ಳಬಹುದು, ಯಾ ಇತರ ಏಕರಾರನ್ನು ಮಾಡಿಕೊಳ್ಳಬಹುದು.

ಸಾಲ ತೀರಿಸತಕ್ಕ ಬಗ್ಯೆ ಸಾಮಾನ್ಯವಿದ್ದಾಡು ಸ್ಯಾಂಕ್ಷನ್ ಮಾಡಲ್ಪಡಬಹುದು.

202. ಲಿಕ್ವಿಡೇಟರುಗಳು, ಕೋರ್ಟನವರಿಂದ ಯಾ ಕೋರ್ಟನವರ ನಿಗವಾನಿಗೆ ಒಳಪಟ್ಟು ಕಂಪೆನಿ ಮುಚ್ಚಿ ಬಿಡಲ್ಪಡುತ್ತಿರುವಾಗ ಕೋರ್ಟನವರ ಅನುಮತಿಯಿಂದಲೂ ವ ತೀರಾ ಮನಃಪೂರ್ವಕವಾಗಿ ಕಂಪೆನಿ ಮುಚ್ಚಿ ಬಿಡಲ್ಪಡುತ್ತಿರುವಾಗ ಕಂಪೆನಿಯ ಅಸಾಧಾರಣ ನಿರ್ಣಯದ ಅನುಮತಿಯಿಂದಲೂ, ಸಮಸ್ತ ವರಾತಗಳನ್ನೂ, ವರಾತಗಳ ಬಾಬತು ಜವಾಬುದಾರಿಗಳನ್ನೂ, ಸಾಲಗಳನ್ನೂ, ಸಾಲಗಳ ಉತ್ಪತ್ತಿಯಾಗತಕ್ಕದ್ದಾಗಿರುವ ಜವಾಬುದಾರಿಗಳನ್ನೂ, ಕಂಪೆನಿಗೆ ಮತ್ತು ಯಾವನಾದರೂ ಸಹಾಯಕನಿಗೆ ಯಾ ಸಹಾಯಕನೆಂದು ಹೇಳಿಕೊಳ್ಳುವವನಿಗೆ ಯಾ ಕಂಪೆನಿಯು ಜವಾಬುದಾರಿಯನ್ನು ಪಡಕೊಂಡಿರುವ ಇತರ ಮನುಷ್ಯನಿಗೆ ಯಾ ಸಾಲಗಾರನಿಗೆ ಮಧ್ಯೆ ಉಂಟಾಗಿರಬಹುದಾದ ಯಾ ಉಂಟಾಗಿನಬಹುದಾಗಿ ಊಹಿಸಲ್ಪಟ್ಟ ತತ್ಕಾಲದ ಯಾ ಭವಿಷ್ಯತ್ಕಾಲದ ಸಮಸ್ತ ಬಾಧ್ಯತೆಗಳನ್ನೂ, ಕಂಪೆನಿಯು

ರಾಜೀ ಮಾಡುವಬಗ್ಯೆ ಅಧಿಕಾರ.

481

ಆಸ್ತಿಗೆ ಯಾ ಕಂಪೆನಿಯು ಮುಚ್ಚಿಬಿಡೋಣಕ್ಕೆ ಯಾವ ವಿಧವಾಗಿಯಾಗಲಿ ಸಂಬಂಧಪಡುವ ಯಾ ಬಾಧಕವಾಗುವ ಸಮಸ್ತ ತಕರಾರುಗಳನ್ನೂ, ಸಾಧಾರಣವಾಗಿ ಎಕರಾರು ಮಾಡಿಕೊಳ್ಳಬಹುದಾದ ಷರತ್ತುಗಳಮೇಲೆ ರಾಜಿ ಮಾಡಿಕೊಳ್ಳಬಹುದು. ಅಂತಾ ಸಾಲಗಳು, ಯಾ ಜವಾಬುದಾರಿಗಳು ತೀರಿಸಲ್ಪಡುವಿಕೆಗೆ ಜಾಮೀನ್ ತೆಗೆದುಕೊಳ್ಳುವದಕ್ಕೂ, ಅಂತಾ ಸಮಸ್ತ ಯಾ ಯಾವದಾದರೂ ವರಾತಗಳ, ಸಾಲಗಳ ಯಾ ಜವಾಬುದಾರಿಗಳ ವಿಷಯದಲ್ಲಿ ಬಿಟ್ಟು ರಶೀಧಿಗಳನ್ನು ಕೊಡುವದಕ್ಕೂ, ಲಿಕ್ವಿಡೇಟರು ಅಧಿಕಾರವುಳ್ಳವರಾಗಿರತಕ್ಕದ್ದು.

ರಾಜೀ ಬಗ್ಯೆ ಯೋಚಿಸಲ್ಪಟ್ಟಾಗ, ಅಂತಾ ರಾಜಿ ವಿಷಯ ತೀರ್ಮಾನಿಸಲಿಕ್ಕೆ ಲೇಣೇದಾರ ವಗೈರೆಯರನ್ನ ಸಭೆ ಕೂಡಹೇಳಿ ಕೋರ್ಟಿನವರು ಅಪ್ಪಣೆ ಮಾಡಬಹುದು.

203. ಈ ರೆಗ್ಯುಲೇಷನ್ ಷುರು ಆಗುವ ಕಾಲದಲ್ಲಿ ಯಾ ಆ ತರುವಾಯ ಮನಃಪೂರ್ವಕವಾಗಿ ಆಗಲಿ, ಯಾ ಕೋರ್ಟಿನವರ ಮೇಲ್ವಿಚಾರಣೆಯಿಂದ ಯಾ ಮೇಲ್ ವಿಚಾರಣೆಗೆ ಅನುಗುಣವಾಗಿ ಮುಚ್ಚಿ ಬಿಡಲ್ಪಡುತ್ತಿರುವ ಒಂದು ಕಂಪೆನಿಯು ಮತ್ತು ಅಂತಾ ಕಂಪೆನಿಯ ಲೇಣೇದಾರರ ಯಾ ಸದರಿ ಲೇಣೇದಾರರ ಯಾವ ತರಗತಿಯವರ ಮಧ್ಯೆ ಯಾವ ರಾಜಿಯಾದರೂ, ಯಾ ಎಕರಾರಾದರೂ ಯೋಚಿಸಲ್ಪಟ್ಟಿರುವಲ್ಲಿ, ಲೇಣೇದಾರರು ಯಾ ಲಿಕ್ವಿಡೇಟರು ಫ್ರೌಟಾದ ರೀತಿಯಲ್ಲಿ ಅರ್ಜಿ ಬರೆಕೊಂಡಲ್ಲಿ, ತಮಗಿರುವ-ಇತರ ಯಾವ ಅಧಿಕಾರಕ್ಕೆ ಹೆಚ್ಚಿಗೆಯಾಗಿ, ಕೋರ್ಟಿನವರು ತಾವು ಅಜ್ಞಾಪಿಸುವಂತಾ ರೀತಿಯಲ್ಲಿ ಸದರಿ ಲೇಣೇದಾರರು ಯಾ ಅವರ ತರಗತಿಯವರು ಸಭೆ ಸೇರುವಂತೆ ಸಮನ್ ಕೊಡತಕ್ಕದ್ದಾಗಿ ಹುಕುಂ ಕೊಡುವದು ಅವರಿಗೆ ನ್ಯಾಯವಾಗಿರುವದು. ಮತ್ತು ಅಂತಾ ಸಭೆಯಲ್ಲಿ ಖುದ್ದಾಗಿಯಾಗಲಿ, ಯಾ ಅಧಿಕಾರ ಪತ್ರ ಮೂಲಕವಾಗಿಯಾಗಲಿ, ಹಾಜರು ಇರುವ ಅಂತಾ ಲೇಣೇದಾರರ ಯಾ ಅವರ ತರಗತಿಯಲ್ಲಿ ಅಂತಾ ಮೊಬಲಗಿನ ಮುಕ್ಕಾಲು ಅಂಶದ ಮೌಲ್ಯವನ್ನು ತೋರಿಸುವಷ್ಟು ಬಹುಭಾಗದವರು ಯಾರಾದರೂ ಎಕರಾರು ಯಾ ರಾಜಿಗೆ ಸಮ್ಮತಿಸುವದಾದರೆ, ಅಂತಾ ಎಕರಾರು ಯಾ ರಾಜಿಯು, ಕೋರ್ಟಿನವರ ಒಂದು ಹುಕುಂ ಮೂಲಕ ಮಂಜೂರಾಗಿದ್ದ ಪಕ್ಷದಲ್ಲಿ, ಅದು ಅಂತಾ ಎಲ್ಲಾ ಲೇಣೇದಾರರ ಮೇಲೂ ಯಾ ಸಂಗತ್ಯಾನುಸಾರ ಲೇಣೇದಾರರ ತರಗತಿಯವರ ಮೇಲೂ ವ ಸದರಿ ಕಂಪೆನಿಯ ಲಿಕ್ವಿಡೇಟರುಗಳ ವ ಸಹಾಯಕರಮೇಲೂ ಸಹ ಬದ್ಧವಾಗಿರತಕ್ಕದ್ದು.

ಕಂಪೆನಿ ಸೊತ್ತಿನ ವಿಕ್ರಯದ ಬಾಬತು ಖರೀದಿ ಬಗ್ಯೆ ಹಿಸ್ಸೆ ವಗೈರೆಗಳನ್ನು ಅಂಗೀಕರಿಸಲಿಕ್ಕೆ ಲಿಕ್ವಿಡೇಟರುಗಳಿಗೆ ಉಂಟಾಗಿರುವ ಅಧಿಕಾರ.

204. ಯಾವ ಕಂಪೆನಿಯಾದರೂ ತೀರಾ ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡುತ್ತಿರುವಲ್ಲಿ ಯಾ ಹಾಗೆ ಮುಚ್ಚಿ ಬಿಡಲ್ಪಡಲಿಕ್ಕೆ ಯೋಚಿಸಲ್ಪಟ್ಟಿರುವಲ್ಲಿ, ಅದರ ಕೆಲಸದ ಯಾ ಸೊತ್ತಿನ ಪೈಕಿ ಒಂದು ಭಾಗವನ್ನು ಯಾ ಎಲ್ಲವನ್ನು ಮತ್ತೊಂದು ಕಂಪೆನಿಗೆ ಪರಭಾರೆ ಮಾಡುವದಾಗಿ ಯಾ ಮಾರುವದಾಗಿ ಉದ್ದೇಶಿಸಲ್ಪಟ್ಟರೆ, ಮೊದಲನೆ ಸಲ ನೆಮೂದಿಸಿರುವ ಕಂಪೆನಿಯ ಲಿಕ್ವಿಡೇಟರುಗಳು, ಅವರು ಸಾಧಾರಣ ಅಧಿಕಾರ ಉಳ್ಳವರಾಗಿಯಾಗಲಿ ಒಂದು ಮುಖ್ಯ ಏರ್ಪಾಡಿನ ವಿಷಯದಲ್ಲಿ ಅಧಿಕಾರವುಳ್ಳವರಾಗಿಯಾಗಲಿ ಯಾರಿಂದ ಮೊಕರರ್ಮಾಡಲ್ಪಟ್ಟರೋ ಆ ಕಂಪೆನಿಯ ವಿಶೇಷ ನಿರ್ಣಯದ ಅನುಮತಿಯನ್ನು ಪಡೆಕೊಂಡು ಅಂತಾ ಪರಭಾರೆಗೆ ಯಾ ವಿಕ್ರಯಕ್ಕೆ ಪೂರಾ ಯಾ ಒಂದು ಭಾಗದ ಮಟ್ಟಿಗೆ ಈಡಾಗಿ, ಮುಚ್ಚಿ ಬಿಡಲ್ಪಡುತ್ತಿರುವ ಕಂಪೆನಿಯ ಮೆಂಬರುಗಳೊಳಗೆ ಹಂಚಿಕೊಳ್ಳಲ್ಪಡತಕ್ಕ ಬಗ್ಯೆ, ಅಂತಾ ಇತರ ಕಂಪೆನಿಯ ಹಿಸ್ಸೆಗಳನ್ನಾಗಲಿ ಡಿಬೆಂಚರ್ಸ್ (debentures) ಎಂಬ ಪತ್ರಗಳನ್ನಾಗಲಿ ಪಾಲಿಸೀಸ್ (Policies) ಎಂಬ ಕರಾರುಪತ್ರಗಳನ್ನಾಗಲಿ ತದನುಸಾರವಾದ ಇತರ ಸಂಬಂಧಗಳನ್ನಾಗಲಿ ತೆಗೆದುಕೊಳ್ಳಬಹುದು, ಅಥವಾ ಮುಚ್ಚಿ ಬಿಡಲ್ಪಡುತ್ತಿರುವ ಕಂಪೆನಿಯ ಮೆಂಬರುಗಳು ಕ್ರಯಕ್ಕೆ ಕೊಂಡುಕೊಳ್ಳುವ ಕಂಪೆನಿಯಿಂದ ನಗದು ಹಣವನ್ನಾಗಲಿ ಹಿಸ್ಸೆಗಳನ್ನಾಗಲಿ ಡಿಬೆಂಚರ್ಸ್‌ಗಳನ್ನಾಗಲಿ ಪಾಲಿಸ್ಸಿಗಳನ್ನಾಗಲಿ ತದನುಸಾರವಾದ ಇತರ ಸಂಬಂಧಗಳನ್ನಾಗಲಿ ತೆಗೆದುಕೊಳ್ಳುವದಕ್ಕೆ ಬದಲಾಗಿ ಯಾ ಅದಕ್ಕಿಂತ ಹೆಚ್ಚಾಗಿ ಸದರಿ ಕಂಪೆನಿಯ ಬಾಬತು ಲಾಭಗಳಲ್ಲಿ ಭಾಗವುಂಟಾಗುವಂತೆ ಯಾ ಇತರ ಪ್ರಯೋಜನವನ್ನು ಹೊಂದುವಂತೆ ಯಾವ ಎಕರಾರನ್ನಾದರೂ ಮಾಡಿಕೊಳ್ಳಬಹುದು.

ಈ ಪ್ರಕರಣಕ್ಕನುಗುಣವಾಗಿ ಲಿಕ್ವಿಡೇಟರುಗಳಿಂದ ಮಾಡಲ್ಪಟ್ಟ ವಿಕ್ರಯವಾಗಲಿ ಎಕರಾರಾಗಲಿ ಮುಚ್ಚಿ ಬಿಡಲ್ಪಡುತ್ತಿರುವ ಕಂಪೆನಿಯ ಮೆಂಬರುಗಳಿಗೆ ಬದ್ಧವಾಗಿರತಕ್ಕದ್ದು. ಈ ನಿಯಮಕ್ಕೊಳಪಟ್ಟಿರತಕ್ಕದ್ದು, ಏನಂದರೆ, ಮುಚ್ಚಿ ಬಿಡಲ್ಪಡುತ್ತಿರುವ ಕಂಪೆನಿಯು ವಿಶೇಷ ನಿರ್ಣಯವನ್ನು ಮಾಡಿದ್ದಾಗ ಅದರ ಪಕ್ಷವಾಗಿ ವಾಕ್ಯ ನಡಿಯದೆ ಇರುವ ಸದರಿ ಕಂಪೆನಿಯ ಮೆಂಬರಾಗಿರುವ ಯಾವನಾದರೂ ಸದರಿ ನಿರ್ಣಯವನ್ನು ಮಾಡಲಿಕ್ಕೆ ಕೂಡಿದ ಎರಡು ಸಭೆಗಳ ಪೈಕಿ ಯಾವದರಲ್ಲಾದರೂ ಮೆಂಬರಾಗಿದ್ದುಕೊಂಡು, ಅವನು ಸದರಿ ವಿಶೇಷ ನಿರ್ಣಯ ತನಗೆ ಸಮಾಧಾನವಿಲ್ಲವೆಂದು ಲಿಕ್ವಿಡೇಟರುಗಳ ಹೆಸರಿಗೆ ಯಾ ಅವರ ಪೈಕಿ ಒಬ್ಬರ ಹೆಸರಿಗೆ ಬರೆದು, ಅದನ್ನು ಕಂಪೆನಿಯ ರಿಜಿಸ್ಟರ್ಮಾಡಲ್ಪಟ್ಟ ಆಫಿಸಿನಲ್ಲಿ ಸದರಿ ವಿಶೇಷ ನಿರ್ಣಯ ಸಭೆ ಸೇರಿ ಮಾಡಲ್ಪಟ್ಟದ್ದು ಮೊದಲು ಏಳು ದಿವಸಗಳೊಳಗಾಗಿ ಇಟ್ಟು, ಆ ಭಿನ್ನಾಭಿಪ್ರಾಯಪಟ್ಟ ಮೆಂಬರು, ಈ ಕೆಳಗಿನ ಕೆಲಸಗಳ ಪೈಕಿ ಲಿಕ್ವಿಡೇಟರಿಗೆ ಯಾವದು ಇಷ್ಟವಾಗುತ್ತದೋ ಅದನ್ನು ಲಿಕ್ವಿಡೇಟರು ಮಾಡ

ಬೇಕೆಂಧು—ಬರಹ ಮೂಲಕವಾಗಿ ದರಖಾಸ್ತು ಬರೆದು, ಕಚೇರಿ ಮೇಲೆ ಹೇಳಿದಹಾಗೆ ಇಟ್ಟು ಅಪೇಕ್ಷಿಸಬಹುದು (ಯಾವವಂದರೆ,—ಸದರಿ ನಿರ್ಣಯವನ್ನು ಜಾರೀಲಿ ತಾರದೆ ನಿಲ್ಲಿಸಿದರೂ ನಿಲ್ಲಿಸಬಹುದು—ಅಥವಾ—ಸದರಿ ಭಿನ್ನಾಭಿಪ್ರಾಯಪಟ್ಟ ಮೆಂಬರಿನ ಬಾಧ್ಯತೆಯನ್ನು ಇನ್ನು ಮೇಲೆ ನಮೂದಿಸೋಣಾಗುವ ರೀತೀಲಿ ಕ್ರಯ ಗೊತ್ತು ಮಾಡಿಕೊಂಡು ಕೊಂಡುಕೊಳ್ಳಬಹುದು ; ಸದರಿ ವಿಕ್ರಯದ ಹಣವನ್ನು ಕಂಪೆನಿ ಅಗಲಿಸಲ್ಪಡುವದಕ್ಕಿಂತ ಮುಂಚಿತವಾಗಿ ಪಾವತಿ ಮಾಡಬೇಕು, ಮತ್ತು ವಿಶೇಷ ನಿರ್ಣಯದಿಂದ ಗೊತ್ತು ಮಾಡಲ್ಪಡುವ ರೀತೀಲಿ ಲಿಕ್ವಿಡೇಟರು ಅದನ್ನು ವಸೂಲ್ಮಾಡತಕ್ಕದ್ದು.

ಈ ಪ್ರಕರಣದ ಕಾರ್ಯಗಳ ಬಗ್ಯೆ ಯಾವ ವಿಶೇಷ ನಿರ್ಣಯವಾಗಲಿ ಕಂಪೆನಿಯನ್ನು ಮುಚ್ಚಿ ಬಿಡಬೇಕೆಂಬ ಯಾ ಲಿಕ್ವಿಡೇಟರುಗಳನ್ನು ನೊಕರರ್ಮಾಡಬೇಕೆಂಬ ಇತರ ನಿರ್ಣಯಕ್ಕೆ ಮುಂಚಿತವಾಗಿ ಯಾ ಅದೇ ಕಾಲದಲ್ಲಿ ಮಾಡಲ್ಪಟ್ಟಿತೆಂಬ ಸಬಬಿನ ಮೇಲೆ ನಿಷ್ಪ್ರಯೋಜನವಾದ್ದಾಗಿ ಎಣಿಸಲ್ಪಡಕೂಡದು, ಆದರೆ, ಕಂಪೆನಿಯು ಕೋರ್ಟಿನವರಿಂದ ಯಾ ಕೋರ್ಟಿನವರ ನಿಗಿವಾನಿಗೆ ಒಳಪಟ್ಟು ಮುಚ್ಚಲ್ಪಡಬೇಕೆಂದು ಒಂದು ಸಂವತ್ಸರದೊಳಗಾಗಿ ಹುಕುಂ ಮಾಡಲ್ಪಟ್ಟರೆ ಸದರಿ ನಿರ್ಣಯವು ಕೋರ್ಟಿನವರಿಂದ ಸ್ಯಾಂಕ್ಷನ್ ಮಾಡಲ್ಪಡದೇ ಹೋದರೆ ಯಾವ ಪ್ರಯೋಜನವನ್ನೂ ಉಳ್ಳದ್ದಾಗಿರಕೂಡದು.

205. ಭಿನ್ನಾಭಿಪ್ರಾಯಪಡುವ ಯಾವನಾದರೊಬ್ಬ ಮೆಂಬರಿನ ಸಂಬಂಧವನ್ನು ಕೊಂ... ತಕ್ಕ ಬಗ್ಯೆ ಕೊಡಬೇಕಾದ ಖರೀದಿ ಕರಾರಿನಿಂದ ಗೊತ್ತು ... ಡಬಹುದು. ಅದನ್ನು ಕುರಿತು ಕಕ್ಷಿಗಾರರು ತಕರಾರು ... ಇದರ ಕೆಳಗೆ ಅವ್ಯವಹಿತವಾಗಿ ನಮೂದಿಸಿರುವ ನಿಬಂಧನೆಗಳ ಪ್ರಕಾರ ಪಂಚಾಯಿತಿಯ ಮೂಲಕ ... ತಕರಾರನ್ನು ಫೈಸಲ್ಮಾಡತಕ್ಕದ್ದು.

...ಕ್ರಯವನ್ನು ಗೊತ್ತು ಮಾಡುವರೀತಿ.

206. ಹಾಗೆ ಪಂಚಾಯಿತಿಯಿಂದ ಫೈಸಲಾಗತಕ್ಕದ್ದಾಗಿ ಹುಕುಂ ಮಾಡಲ್ಪಟ್ಟ ಯಾವ ತಕರಾರಾದರೂ ಸಂಭವಿಸಿದಲ್ಲಿ, ಆಗ, ಒಬ್ಬ ಪಂಚಾಯಿತಿದಾರನನ್ನು ನೊಕರರ್ಮಾಡೋಣದರಲ್ಲಿ ಉಭಯ ಕಕ್ಷಿಗಾರರೂ ಸಮ್ಮತಿಸದೆ ಹೋದರೆ, ಪ್ರತಿಕಕ್ಷಿಗಾರನೂ—ಇತರಕಕ್ಷಿಗಾರನ ವಿಜ್ಞಾಪನೆಯ ಮೇಲೆ—ತನ್ನಿಂದ ದಸ್ಕತ್ತು ಮಾಡಲ್ಪಟ್ಟ ಬರಹದ ಮೂಲಕವಾಗಿ ಒಬ್ಬ ಪಂಚಾಯಿತಿದಾರನನ್ನು ನೇಮಿಸಿ ನೊಕರರ್ಮಾಡತಕ್ಕದ್ದು. ಸದರಿ ತಕರಾರು ಅವನಿಗೆ ರಿಫರ ಮಾಡಲ್ಪಡತಕ್ಕದ್ದು.

ಪಂಚಾಯಿತಿಯಿಂದ ತೀರ್ಮಾನ ಮಾಡಲ್ಪಡಬೇಕಾದ ಸಂಗತಿಗಳಿಗಾಗಿ ಪಂಚಾಯಿತಿದಾರರನ್ನು ನೊಕರರ್ಮಾಡೋಣ.

ಯಾರನ್ನಾದರೂ ಹಾಗೆ ನೊಕರರ್ಮಾಡಿದ ತರುವಾಯ, ಉಭಯ ಕಕ್ಷಿಗಾರರ ಪೈಕಿ ಯಾರಾದರೂ ಮತ್ತೊಬ್ಬನ ಸಮ್ಮತಿ ಇಲ್ಲದೆ ಆತನನ್ನು ತೆಗದು ಹಾಕಲಿಕ್ಕೆ ಅಧಿಕಾರವುಳ್ಳವನಾಗಿರಕೂಡದು, ಅಥವಾ ಆ ಇಬ್ಬರು ಕಕ್ಷಿಗಾರರ ಪೈಕಿ ಒಬ್ಬನು ಮೃತಪಟ್ಟರೆ ಅದು ಹಾಗೆ ತೆಗದುಹಾಕುವ ವಿಷಯದಲ್ಲಿ ಕಾರಣವಾಗಕೂಡದು.

ಅಂತಾ ಯಾವ ತಕರಾರಾದರೂ ಹುಟ್ಟಿದ ತರುವಾಯ ಹದಿನಾಲ್ಕು ದಿವಸಗಳೊಳಗಾಗಿ ಮತ್ತು ಒಬ್ಬ ಪಂಚಾಯಿತಿದಾರನನ್ನು ನೊಕರರ್ಮಾಡ ಹೇಳಿ ಒಬ್ಬ ಕಕ್ಷಿಗಾರನು ಮತ್ತೊಬ್ಬ ಕಕ್ಷಿಗಾರನಿಗೆ ಲಿಖಿತ ರೂಪವಾಗಿ ತಿಳಿಯಪಡಿಸಿದ ತರುವಾಯ—ಸದರಿ ಎರಡನೆ ಸಲ ನಮೂದಿಸಿದ ಕಕ್ಷಿಗಾರನು ಅಂತಾ ಪಂಚಾಯಿತಿದಾರನನ್ನು ನೊಕರರ್ಮಾಡಲಿಕ್ಕೆ ತಪ್ಪಿದರೆ, ಹಾಗೆ ತಪ್ಪಿದಮೇಲೆ ಬರದು ಕಳುಹಿಸಿದ ಕಕ್ಷಿಗಾರನು —ಒಬ್ಬ ಪಂಚಾಯಿತಿದಾರನನ್ನು ತಾನೇ ನೇಮಿಸಿ, ಸದರಿ ಪಂಚಾಯಿತಿದಾರನನ್ನು ಉಭಯ ಕಕ್ಷಿಗಾರರ ತರಫಿನಲ್ಲಿ ಕೆಲಸ ನೋಡುವಂತೆ ನೊಕರರ್ಮಾಡಬಹುದು, ಮತ್ತು ಸದರಿ ಪಂಚಾಯಿತಿದಾರನು ತಕರಾರಿನಲ್ಲಿರುವಂತಾ ವಿಷಯಗಳನ್ನು ವಿಚಾರಿಸಿ ಫೈಸಲ್ ಮಾಡಲಿಕ್ಕೆ ಪ್ರವರ್ತಿಸಬಹುದು, ವ ಅಂತಾ ಸಂಗತಿಯಲ್ಲಿ ಸದರಿ ಒಬ್ಬ ಪಂಚಾಯಿತಿದಾರನ ತೀರ್ಪು ಯಾ ತೀರ್ಮಾನ ಆಖೈರಾದ್ದಾಗಿರತಕ್ಕದ್ದು.

207. ಹಾಗೆ ರಿಫರ ಮಾಡಲ್ಪಟ್ಟಂತಾ ವಿಷಯಗಳು ಫೈಸಲಾಗುವದಕ್ಕೆ ಮುಂಚಿತವಾಗಿ, ಉಭಯ ಕಕ್ಷಿಗಾರರ ಪೈಕಿ ಒಬ್ಬನಿಂದ ನೊಕರರ್ಮಾಡಲ್ಪಟ್ಟ ಯಾವ ಪಂಚಾಯಿತಿದಾರನಾದಾಗ್ಯೂ ಮೃತಪಟ್ಟರೂ ಅಥವಾ ಅಶಕ್ತನಾದರೂ ಯಾ ನಿರಾಕರಿಸಿದರೂ ಅಥವಾ ಏಳು ದಿವಸಗಳವರಿಗೆ ಪಂಚಾಯಿತಿದಾರನಾಗಿ ಕೆಲಸ ನೋಡಲಿಕ್ಕೆ ಅಶ್ರದ್ಧೆ ಮಾಡಿದರೂ ಸದರಿ ಪಂಚಾಯಿತಿದಾರನನ್ನು ನೊಕರರ್ಮಾಡಿದಂತಾ ಕಕ್ಷಿಗಾರನು ಅವನ ಸ್ಥಾನದಲ್ಲಿ ಕೆಲಸ ನೋಡಲಿಕ್ಕೆ ಮತ್ತೊಬ್ಬ ಮನುಷ್ಯನನ್ನು ಬರಹ ಮೂಲಕವಾಗಿ ನೇಮಿಸಿ ನೊಕರರ್ಮಾಡ

ಪಂಚಾಯಿತಿದಾರರ ಇಸಂ ಖಾಲಿಯಾದರೆ ಭರ್ತಿಮಾಡಲ್ಪಡಬೇಕು.

ಬಹುದು, ವ ಆ ಬಗ್ಗೆ ಇತರ ಕಕ್ಷಿಗಾರನಿಂದ ಬರಹ ಮೂಲಕವಾದ ನೋಟೀಸು ಕೊಡಲ್ಪಟ್ಟ ಏಳು ದಿವಸಗಳೊಳಗಾಗಿ ಮೊಕರ್ರಾಡಲಿಕ್ಕೆ ತಪ್ಪಿದರೆ; ಉಳಿದಿರುವ ಯಾ ಇತರ ಪಂಚಾಯಿತಿದಾರನು ಏಕ ಪಕ್ಷವಾಗಿ ಫೈಸಲ್ ಮಾಡಲಿಕ್ಕೆ ಪ್ರವರ್ತಿಸಬಹುದು ; ಮತ್ತು ಮೇಲೆ ಹೇಳಿರುವ ಪ್ರಕಾರ ಹಾಗೆ ಬದಲಿಯಾಗಿ ಬಂದಂಥಾ ಪ್ರತಿ ಪಂಚಾಯಿತಿದಾರನೂ ಅವನಿಗೆ ಮುಂಚೆ ಇದ್ದ ಪಂಚಾಯಿತಿದಾರನು ಸಾಯುವಾಗ ಯಾ ನಿರಾಕರಿಸಿದಾಗ ಯಾ ಅಶಕ್ತನಾದಾಗ ಯಾವಯಾವ ಪವರುಗಳನ್ನೂ, ಅಧಿಕಾರಗಳನ್ನೂ, ಉಳ್ಳವನಾಗಿದ್ದನೋ ಅದೇ ಪವರುಗಳನ್ನೂ, ಅಧಿಕಾರಗಳನ್ನೂ, ಉಳ್ಳವನಾಗಿರತಕ್ಕದ್ದು.

ಮಧ್ಯಸ್ಥಗಾರನನ್ನು ಮೊಕರರ್ರಾಡೋಣ.

208. ಒಬ್ಬನಿಗಿಂತ ಹೆಚ್ಚು ಮಂದಿ ಪಂಚಾಯಿತಿದಾರರು ಮೊಕರ್ರಾಡಲ್ಪಟ್ಟಿರಬಹುದಾದ ಸಂಗತಿಯಲ್ಲಿ, ಅವರು ಅವರಿಗೆ ರಿಫರ್ರಾಡಲ್ಪಟ್ಟಂಥಾ ವಿಷಯಗಳಲ್ಲಿ ಪ್ರವರ್ತಿಸುವದಕ್ಕೆ ಮುಂಚಿತವಾಗಿ, ಯಾವ ವಿಷಯದಲ್ಲಾದರೂ ಭಿನ್ನಾಭಿಪ್ರಾಯಪಟ್ಟರೆ, ಅದನ್ನು ಫೈಸಲ್ ಮಾಡತಕ್ಕ ಬಗ್ಗೆ ತಮ್ಮ ದಸ್ಕತ್ತುಗಳನ್ನು ಹಾಕಿ, ಬರಹ ಮೂಲಕವಾಗಿ ಒಬ್ಬ ಅಂಪೈರ ಯಾನೆ ಮಧ್ಯಸ್ಥಗಾರನನ್ನು ನೇಮಿಸಿ ಮೊಕರ್ರಾಡತಕ್ಕದ್ದು.

ಅಂಥಾ ಅಂಪೈರು ಮೃತಪಟ್ಟರೆ ಯಾ ನಿರಾಕರಿಸಿದರೆ ಯಾ ಏಳು ದಿವಸಗಳ ವರೆಗೆ ಕೆಲಸ ನೋಡಲಿಕ್ಕೆ ಅಶಕ್ತಿ ಮಾಡಿದರೆ, ಹಾಗೆ ಮೃತಪಟ್ಟ ನಿರಾಕರಿಸಿದ ಯಾ ಅಶಕ್ತಿ ಮಾಡಿದ ತರುವಾಯ ಒಡನೆ ಅವರು ಅವನಿಗೆ ಬದಲಾಗಿ ಮತ್ತೊಬ್ಬ ಅಂಪೈರನ್ನು ಮೊಕರ್ರಾಡತಕ್ಕದ್ದು ; ಹಾಗೆ ರಿಫರ ಮಾಡಲ್ಪಟ್ಟಂಥಾ ವಿಷಯಗಳಲ್ಲಿ ಅಂಥಾ ಪ್ರತಿ ಅಂಪೈರಿನ ಫೈಸಲು ಅಖೈರಾದ್ದಾಗಿರತಕ್ಕದ್ದು.

ಪುಸ್ತಕ ವಗೈರೆಗಳನ್ನು ತರಿಸಲಿಕ್ಕೆ ಪಂಚಾಯಿತಿದಾರರಿಗುಂಟಾಗಿರುವ ಅಧಿಕಾರ.

209. ಸದರಿ ಪಂಚಾಯಿತಿದಾರರಿಗೆ ಯಾ ಅವರ ಅಂಪೈರಿಗೆ, ಯಾವ ಕಕ್ಷಿಗಾರನ ಸ್ವಾಧೀನದಲ್ಲಾದರೂ, ವಶದಲ್ಲಾದರೂ ಇರುವ ಯಾವ ದಸ್ತಾವೇಜುಗಳಾದಾಗ್ಯೂ ತಕರಾರಿನಲ್ಲಿರುವ ವಿಷಯವನ್ನು ಫೈಸಲ್ ಮಾಡಲಿಕ್ಕೆ ಆವಶ್ಯಕವೆಂದು ತೋರಿದರೆ ಅವರು ಯಾ ಅವನು ಅವುಗಳನ್ನು ಹಾಜರ್ರಾಪಡಿಸೋಣ ಮಾಡಬಹುದು, ಮತ್ತು ಕಕ್ಷಿಗಾರರನ್ನು ಯಾ ಅವರ ಸಾಕ್ಷಿಗಳನ್ನು ಪ್ರಮಾಣದ ಮೇಲೆ ದರ್ಯಾಫ್ತು ಮಾಡಬಹುದು.

ಖರ್ಚುಗಳು ಪಂಚಾಯಿತಿದಾರರ ಅಭಿಪ್ರಾಯಾನುಸಾರವಾಗಿರಬೇಕು.

210. ಅಂಥಾ ಪ್ರತಿ ಪಂಚಾಯಿತಿಯ ಬಾಬತು ವ ಅದಕ್ಕೆ ಹಾಜರಾಗುವದರ ಬಾಬತು ಖರ್ಚುಗಳು ಪಂಚಾಯಿತಿದಾರರಿಂದ ಗೊತ್ತು ಮಾಡಲ್ಪಡೋಣವು ಸಂಗತ್ಯಾನುಸಾರವಾಗಿ ಪಂಚಾಯಿತಿದಾರರ ಯಾ ಅವರ ಅಂಪೈರಿನ ಇಷ್ಟಾನುಸಾರವಾಗಿ ಗೊತ್ತು ಮಾಡಲ್ಪಡತಕ್ಕದ್ದಾಗಿರತಕ್ಕದ್ದು.

ಪಂಚಾಯಿತಿಗೆ ಕಳುಹಿಸಲ್ಪಡೋಣಾದ್ದನ್ನು ಕೋರ್ಟಿನಲ್ಲಿ ಫೈಲಮಾಡಲ್ಪಡಬಹುದು.

211. ಇಬ್ಬರ ಪೈಕಿ ಯಾವ ಕಕ್ಷಿಗಾರನಿಂದಾದರೂ ಕೇಳಿಕೊಳ್ಳಲ್ಪಟ್ಟ ಮೇಲೆ, ಹಾಗೆ ಪಂಚಾಯಿತಿಗೆ ಒಪ್ಪಿಸೋಣಾದ್ದನ್ನು ಕೋರ್ಟಿನಲ್ಲಿ ಫೈಲ್ ಮಾಡಬಹುದು, ಮತ್ತು ಅದರ ಮೇಲೆ ದಾಖಲೆ ಬಾಬತು ಹುಕುಂ ಕೊಡಲ್ಪಡಬಹುದು ; ಮತ್ತು ಅಂಥಾ ಪ್ರತಿಹುಕುಮಿನ ಯಾ ಅದನ್ನನುಸರಿಸಿದ ಸಮಸ್ತ ನಡವಳಿಕೆಗಳ ವಿಷಯದಲ್ಲಿಯೂ, ಕೂಡಿದ ಮಟ್ಟಿಗೆ, ಸಿವಿಲ ಪ್ರೊಸೆಡ್ಯೂರ ಕೋಡಿನ ನಿಬಂಧನೆಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು.

ಕೆಲವು ಜಪ್ತಿಗಳು, ಜಪ್ತಿಮಾಲುಗಳು ವ ಅಮಲ್ಜಾರಿಗಳು ಸಲುವಳಿಯಾಗಕೂಡದು.

212. ಯಾವ ಕಂಪೆನಿಯಾದರೂ ಕೋರ್ಟಿನವರಿಂದ ಯಾ ಕೋರ್ಟಿನವರ ನಿಗವಾನಿಗೆ ಒಳಪಟ್ಟು ಮುಕ್ತಾಯಿಸಲ್ಪಡುವದಾಗಿದ್ದರೆ, ಸದರಿ ಕಂಪೆನಿಯ ಮುಕ್ತಾಯಿಸೋಣ ಶುರುವಾದ ಮೇಲೆ ಅದರ ಸ್ಥಿತಿಯ ಮೇಲೆ ಯಾ ಚರಸೊತ್ತುಗಳ ಮೇಲೆ ಸದರಿ ಕೋರ್ಟಿನವರ ಅಪ್ಪಣೆ ಇಲ್ಲದೆ ಜಾರೀಲಿ ತರಲ್ಪಟ್ಟಂಥಾ ಯಾವ ಜಪ್ತಿಯಾಗಲಿ ಜಪ್ತಿಮಾಲಾಗಲಿ ಅಮಲ್ಜಾರಿಯಾಗಲಿ ರದ್ದಾಗತಕ್ಕದ್ದು.

ಈ ಪ್ರಕರಣದಲ್ಲಿ ಇರುವಂಥಾದ್ದು ಯಾವದೂ ಗವರ್ನಮೆಂಟಿನವರ ನಡವಳಿಕೆಗಳಿಗೆ ಲಾಗುವಾಗುವದಿಲ್ಲ.

ಮೋಸಕರವಾಗಿ ಇಷ್ಟ ಪ್ರಕಾರ ಮಾಡಿಸೋಣ.

213. ಒಬ್ಬ ವರ್ತಕನು ದಿವಾಳಿಯಾಗುವ ಸಂಗತಿಯಲ್ಲಿ, ಅವನ ಲೇಣೇದಾರರಿಗೆ ಅಕ್ರಮವಾದ ಯಾ ಮೋಸಕರವಾದ ನಿಯಮವನ್ನುಂಟುಮಾಡತಕ್ಕ ಬಗ್ಗೆ ಮಾಡಲ್ಪಟ್ಟದ್ದಾಗಿ ಸದರಿ ವ್ಯಾಪಾರಸ್ಥನಿಂದ ಯಾ ಅವನಿಗೆ ವಿರೋಧವಾಗಿ ಮಾಡಲ್ಪಟ್ಟಂತೆ ಭಾವವಾಗುವಂಥಾ ಸೊತ್ತಿನ ಬಾಬತು ಪ್ರತಿ ಪರಭಾರೆ,

H85

ಭೋಗ್ಯ, ಸರಕುಗಳ ಪಾವತಿ, ಹಣದ ಸಂದಾಯ, ಅಮಲ್ದಾರಿ ಯಾ ಇತರ ಕೆಲಸ, ಈ ರೆಗ್ಯುಲೇಷನಿನ ಪ್ರಕಾರ ಅಂತಾ ಕಂಪೆನಿಯನ್ನು ಮುಚ್ಚಿ ಬಿಡುವ ವಿಷಯದಲ್ಲಿ ಅದರಿಂದ ಯಾ ಅದಕ್ಕೆ ವಿರೋಧವಾಗಿ ಮಾಡಲ್ಪಟ್ಟರೆ ಅಂತಾ ಕಂಪೆನಿಯ ಲೇಣೇದಾರರಿಗೆ ಅಕ್ರಮವಾಗಿ ಯಾ ಮೋಸಕರವಾಗಿ ದಗಾಮಾಡತಕ್ಕ ಬಗ್ಗೆ ಮಾಡಲ್ಪಟ್ಟದ್ದೆಂದು ಗ್ರಹಿಸಲ್ಪಟ್ಟು ಆ ಪ್ರಕಾರ ನಿಷ್ಪ್ರಯೋಜನವಾದ್ದಾಗ ತಕ್ಕದ್ದು.

ಈ ಪ್ರಕರಣದ ಕಾರ್ಯಗಳ ಬಗ್ಗೆ, ಕಂಪೆನಿಯು ಕೋರ್ಟಿನವರಿಂದ ಯಾ ಕೋರ್ಟಿನವರ ನಿಗವಾನಿಗೆ ಒಳಪಟ್ಟು ಮುಚ್ಚಿ ಬಿಡಲ್ಪಡುವ ಸಂಗತಿಯಲ್ಲಿ, ಕಂಪೆನಿಯನ್ನು ಮುಚ್ಚುವದಕ್ಕೆ ದರಖಾಸ್ತು ಮಾಡೋಣವು ಮನಃಪೂರ್ವಕವಾಗಿ ಮುಚ್ಚಿ ಬಿಡಲ್ಪಡುವ ಸಂಗತಿಯಲ್ಲಿ ಕಂಪೆನಿಯನ್ನು ಮುಚ್ಚುವ ಬಾಬತು ನಿರ್ಣಯವು ಒಬ್ಬ ಒಂಟಿಗನಾದ ವ್ಯಾಪಾರಸ್ಥನ ವಿಷಯದಲ್ಲಿ ದಿವಾಳಿತನದ ಕೆಲಸಕ್ಕೆ ಹೋಲಿಕೆಯಾಗಿರುವಂತೆ ಗ್ರಹಿಸಲ್ಪಡತಕ್ಕದ್ದು; ಮತ್ತು ಈ ರೆಗ್ಯುಲೇಷನಿನ ಪ್ರಕಾರ ಏರ್ಪಾಡಾದ ಯಾವ ಕಂಪೆನಿಯಾದರೂ, ಅದರ ಸಮಸ್ತ ಲೇಣೇದಾರರ ಪ್ರಯೋಜನದ ಬಗ್ಗೆ, ಅದರ ಸಮಸ್ತ ಸ್ಥಿತಿಯನ್ನೂ ಚರಸೊತ್ತುಗಳನ್ನೂ ಟ್ರಸ್ಟೀಸ ಎಂಬ ವಿಚಾರಣೆ ಕರ್ತರಿಗೆ ಪರಭಾರೆ ಮಾಡಿದರೂ ಹವಾಲ್ತು ಮಾಡಿದರೂ ಅದು ರದ್ದಾಗತಕ್ಕದ್ದು.

ತಕ್ಸೀರುದಾರರಾದ ಡೈರೆಕ್ಟರುಗಳ ವ ಆಫಿಸರುಗಳ ಮೇಲೆ ಲುಕ್ಸಾನುಗಳನ್ನು ಹೊರಿಸಲಿಕ್ಕೆ ಕೋರ್ಟಿನವರಿಗುಂಟಾಗಿರುವ ಅಧಿಕಾರ.

214. ಈ ರೆಗ್ಯುಲೇಷನ ಪ್ರಕಾರ ಯಾವ ಕಂಪೆನಿಯಾದರೂ ಮುಚ್ಚಲ್ಪಡುತ್ತಿರುವಾಗ, ಯಾವ ಮಾಜಿ ಯಾ ಹಾಲಿ ಡೈರೆಕ್ಟರಾದರೂ, ಮಾನೇಜರಾದರೂ, ಅಫಿಷಿಯಲ್ ಯಾ ಇತರ ಲಿಕ್ವಿಡೇಟರಾದರೂ ಯಾ ಅಂತಾ ಕಂಪೆನಿಯ ಯಾವ ಆಫಿಸರಾದರೂ ಕಂಪೆನಿಯ ಯಾವ ಹಣಗಳನ್ನಾದರೂ ಸ್ವಾ ದುರುಪಯೋಗಪಡಿಸಿದರೆ ಯಾ ತನ್ನ ಕೈಯಲ್ಲಿ ನಿಲ್ಲಿಸಿ ಇಟ್ಟು ಕೊಂಡರೆ ಯಾ ಜವಾಬುದಾರನಾದರೆ ಯಾ ಉತ್ತರವಾದ ಮಾಡುವವನಾದರೆ, ಅಥವಾ ಕಂಪೆನಿಯ ವಿಷಯದಲ್ಲಿ ಆಕ್ರಮಿಸುವಿಕೆಯ ಯಾ ವಿಶ್ವಾಸ ಘಾತಕದ ತಕ್ಸೀರುದಾರನಾದರೆ, ಕೋರ್ಟಿನವರು ಕಂಪೆನಿಯ ಯಾವನಾದರೊಬ್ಬ ಲಿಕ್ವಿಡೇಟರನಿಂದ ಯಾ ಲೇಣೇದಾರನಿಂದ ಯಾ ಸಹಾಯಕನಿಂದ ಕೇಳಿಕೊಳ್ಳಲ್ಪಟ್ಟಲ್ಲಿ ಸದರಿ ತಕ್ಸೀರು ತಕ್ಸೀರುದಾರನನ್ನು ಕ್ರಿಮಿನಲ್ ತರಫಿನಲ್ಲಿ ಜವಾಬುದಾರನಾಗಿ ಮಾಡುವದಾದಾಗ್ಯೂ ಅಂತಾ ಡೈರೆಕ್ಟರನ ಮಾನೇಜರನ ಯಾ ಇತರ ಆಫಿಸರನ ನಡತೆಯ ವಿಷಯವಾಗಿ ದರ್ಯಾಫ್ತು ಮಾಡಬಹುದು. ಮತ್ತು ಹಾಗೆ ದುರುಪಯೋಗ ಪಡಿಸಿಕೊಂಡಂತಾ ಯಾ ನಿಲ್ಲಿಸಿ ಇಟ್ಟು ಕೊಂಡಂತಾ ಯಾ ಅವನು ಜವಾಬುದಾರನಾದಂತಾ ಯಾ ಉತ್ತರವಾದ ಮಾಡುವವನಾದಂತಾ ಯಾವ ಹಣಗಳನ್ನಾದರೂ ಕೋರ್ಟಿನವರಿಗೆ ನ್ಯಾಯವಾಗಿ ತೋರುವ ದರದ ಪ್ರಕಾರ ಲೆಕ್ಕ ಮಾಡಲ್ಪಟ್ಟ ಬಡ್ಡಿಯೊಂದಿಗೆ ವಾಪಸು ಕೊಡಬೇಕೆಂದು ಅವನನ್ನು ಬಲಾತ್ಕಾರ ಮಾಡಬಹುದು, ಅಥವಾ ಕೋರ್ಟಿನವರಿಗೆ ನ್ಯಾಯವೆಂದು ತೋರುವ ಪ್ರಕಾರ ಅಂತಾ ದುರುಪಯೋಗವಾದ, ನಿಲ್ಲಿಸಿ ಇಟ್ಟುಕೊಂಡಂತಾ, ಆಕ್ರಮಿಸುವಿಕೆಯ ಯಾ ವಿಶ್ವಾಸ ಘಾತಕದ ವಿಷಯದಲ್ಲಿ ಈಡಾಗಿ ಸದರಿ ಕಂಪೆನಿಯ ಅಸ್ಸೆಟ್ಸ್ ಎಂಬ ಆಸ್ತಿಯೊಂದಿಗೆ ಸೇರಿಸಲಿಕ್ಕೆ ಸದರಿ ಮೊಬಲಗುಗಳನ್ನು ಕೊಡಬೇಕೆಂದು ಹುಕುಂ ಮಾಡಬಹುದು.

ಟಿಪ್ಪಣಿ I.—ಒಂದು ಕಂಪೆನಿಯ ಬ್ಯಾಂಕರು ಹಾಗೆ ಬ್ಯಾಂಕರಾಗಿರುವಾಗ ಈ ಪ್ರಕರಣದ ಅರ್ಥಕ್ಕೊಳಪಡುವ ಆಫಿಸರನಾಗಿರುವದಿಲ್ಲ.

ಟಿಪ್ಪಣಿ II.—ಮೃತಪಟ್ಟ ಒಬ್ಬ ಆಫಿಸರನ ಪ್ರತಿನಿಧಿಗಳ ಮೇಲೆ ಈ ಪ್ರಕರಣಕ್ಕನುಗುಣವಾಗಿ ವ್ಯವಹರಣೆಗಳನ್ನು ನಡಿಸಕೂಡದು.

ಪುಸ್ತಕಗಳ ವಿಷಯದಲ್ಲಿ ತಗಲುಫು ನಡಿಸಿದರ ದಂಡನೆ.

215. ಈ ರೆಗ್ಯುಲೇಷನಿಗನುಗುಣವಾಗಿ ಮುಚ್ಚಿ ಬಿಡಲ್ಪಟ್ಟ ಯಾವದಾದರೊಂದು ಕಂಪೆನಿಯ ಯಾವ ಡೈರೆಕ್ಟರಾಗಲಿ ಆಫಿಸರಾಗಲಿ ಸಹಾಯಕನಾಗಲಿ ಯಾವ ಮನುಷ್ಯನನ್ನಾದರೂ ದಗಾ ಯಾ ಮೋಸ ಮಾಡುವ ಅಭಿಪ್ರಾಯದಿಂದ ಸದರಿ ಕಂಪೆನಿಗೆ ಸೇರಿದ ಯಾವ ಪುಸ್ತಕಗಳನ್ನಾದರೂ ಕಾಗದಗಳನ್ನಾದರೂ ಲೇಖನಗಳನ್ನಾದರೂ ಜಾಮೀನುಗಳನ್ನಾದರೂ ನಾಶ ಮಾಡಿದರೆ, ಛಾಯಾ ಮಾಡಿದರೆ, ಮತ್ತೊಂದನ್ನು ಬದಲಾಯಿಸಿದರೆ, ತಗಲುಫು ಮಾಡಿದರೆ, ಮೋಸಕರವಾಗಿ ಬಚ್ಚಿಟ್ಟರೆ, ಅಥವಾ ಯಾವ ರಿಜಿಸ್ಟರಿನಲ್ಲಾದರೂ ಲೆಕ್ಕದ ಬುಕ್ಕಿನಲ್ಲಾದರೂ ಇತರ ದಸ್ತಾವೇಜಿನಲ್ಲಾದರೂ ಸುಳ್ಳು ಯಾ ಮೋಸಕರವಾದ ಖತಾಯಿತಿ ಮಾಡಿದರೆ ಯಾ ರಹಸ್ಯವಾಗಿ ಮಾಡುವದಾಗಿದ್ದರೆ, ಅಂತಾ ತಕ್ಸೀರು ನಡಿಸುವ ಪ್ರತಿ ಮನುಷ್ಯನೂ ಎರಡು ಸಂವತ್ಸರಗಳಿಗೆ ಮೀರದ ಒಂದು ವಾಯಿದೆಯ ಪರ್ಯಂತ ಕೈದ ಮೂಲಕ ಶಿಕ್ಷಿಸಲ್ಪಡತಕ್ಕದ್ದು, ಮತ್ತು ಐನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ತೆರಲಿಕ್ಕೆ ಸಹ ಗುರಿಯಾಗಿರತಕ್ಕದ್ದು.

216. ಒಂದು ಕಂಪೆನಿಯು ಕೋರ್ಟ್‌ನವರಿಂದ ಯಾ ಕೋರ್ಟ್‌ನವರ ನಿಗೆವಾನಿಗೆ ಒಳಪಟ್ಟು ಮುಕ್ತಿ ಬಿಡಲ್ಪಡಬೇಕೆಂದು ಹುಕುಂ ಮಾಡೋಣಾಗಿರುವಲ್ಲಿ, ಹಾಗೆ ಮುಗಿಸುವ ಸಂಗತಿಯಲ್ಲಿ ತಕ್ಕೀರುದಾರರಾಕ್ಷಪ್ಪಲ್ಪಡುತ್ತಿರುವಾಗ್ಯೆ ಅಂತಾ ಕಂಪೆನಿಯ ಮಾಜಿ ಯಾ ಹಾಲಿ ಡೈರೆಕ್ಟರಾಗಲಿ ಮ್ಯಾನೇಜರ್ರಾಗಲಿ ಆಫೀಸರಾಗಲಿ ಮೆಂಬರ್ರಾಗಲಿ ಸದರಿ ಕಂಪೆನಿಯ ವಿಷಯದಲ್ಲಿ ಕ್ರಿಮಿನಲ್ ತರಫಿನಲ್ಲಿ ಜವಾಬುದ್ದಾರನಾಗುವಂತಾ ಯಾವ ತಕ್ಕೀರನ್ನಾದರೂ ನಡಿಸಿದವನಾಗಿ ಕಾಣಬಂದರೆ, ಕೋರ್ಟ್‌ನವರು, ಸದರಿ ಮುಕ್ತಿ ಬಿಡೋಣದರಲ್ಲಿ ಸಂಬಂಧವುಳ್ಳ ಯಾವ ಮನುಷ್ಯನಿಂದಾದರೂ ಕೇಳಿಕೊಳ್ಳಲ್ಪಟ್ಟ ಮೇಲೆ ಅಥವಾ ಅವರ ಸ್ವಾಂತ ಅಭಿಪ್ರಾಯದ ಮೇರೆಗೆ (ಸಂಗತ್ಯಾನುಗುಣವಾಗಿ) ಅಫಿಷಿಯಲ್ ಲಿಕ್ವಿಡೇಟರಿಗೆ ಯಾ ಲಿಕ್ವಿಡೇಟರುಗಳಿಗೆ ಅಂತಾ ತಕ್ಕೀರಿನ ಬಗ್ಗೆ ಫಿರ್ಯಾದು ದಾಖಲ್ಮಾಡಬೇಕೆಂದು ಹುಕುಂ ಮಾಡಬಹುದು; ಮತ್ತು ಸದರಿ ಫಿರ್ಯಾದು ದಾಖಲ್ಮಾಡಿದ ಬಾಬತು ಖರ್ಚುಗಳನ್ನೂ ಲಾಗೇವಡುಗಳನ್ನೂ ಕಂಪೆನಿಯ ಆಸ್ತಿಗಳಿಂದ ಕೊಡಬೇಕೆಂದು ಹುಕುಂ ಮಾಡಬಹುದು.

ಕೋರ್ಟ್‌ನವರ ದ್ವಾರಾ ಮುಕ್ತಿ ಬಿಡೋಣ ಮಾಡುವಲ್ಲಿ ಡೈರೆಕ್ಟರುಗಳ ಮೇಲೆ ಫಿರ್ಯಾದು ಮಾಡೋಣ.

217. ಯಾವ ಮನುಷ್ಯನಾದರೂ ಈ ರೆಗ್ಯುಲೇಷನ್ನಿಂದ ಅಧಿಕಾರ ಕೊಡಲ್ಪಟ್ಟ ಪ್ರಮಾಣದ ಮೇಲಿನ ಯಾವ ದರ್ಯಾಫ್ತಿಯ ಮೇಲಾದರೂ ಅಥವಾ ಈ ರೆಗ್ಯುಲೇಷನಿಗನುಗುಣವಾಗಿ ಯಾವ ಕಂಪೆನಿಯನ್ನಾದರೂ ಮುಕ್ತಿ ಬಿಡುವಲ್ಲಿ ಅದನ್ನು ಕುರಿತ ಯಾವ ಪ್ರಮಾಣ ಪತ್ರಿಕೆಯಲ್ಲಾಗಲಿ ಕೈಫೇಯತ್ತಿನಲ್ಲಾಗಲಿ ಸತ್ಯವಾದ ಹೇಳಿಕೆಯಲ್ಲಾಗಲಿ ಅಥವಾ ಅನ್ಯಥಾ ಈ ರೆಗ್ಯುಲೇಷನ್ನಿಂದ ಹುಟ್ಟಿದ ಯಾವ ವಿಷಯದಲ್ಲಾಗಲಿ ಅದನ್ನು ಕುರಿತಾಗಲಿ ಮನಃಪೂರ್ವಕವಾಗಿ ಸುಳ್ಳು ಸಾಕ್ಷ್ಯ ಕೊಟ್ಟರೆ, ಅವನು ಸುಳ್ಳು ಸಾಕ್ಷ್ಯಕ್ಕಾಗಿ ವಿಧಿಸಲ್ಪಟ್ಟ ದಂಡನೆಗೆ ಒಳಪಡುವದಲ್ಲದೆ...ತೆರಲಿಕ್ಕೆ ಸಹ ಗುರಿಯಾಗಿರತಕ್ಕದ್ದು.

ಸುಳ್ಳು ಸಾಕ್ಷ್ಯಕ್ಕೆ ದಂಡನೆ.

218. ಈ ರೆಗ್ಯುಲೇಷನಿಗನುಗುಣವಾಗಿ ಒಂದು ಕಂಪೆನಿಯನ್ನು ಮುಕ್ತಿ ಬಿಡುವದಕ್ಕೆ ಚೀಫ್ ಕೋರ್ಟ್‌ನವರು ಹುಕುಂ ಮಾಡಿದರೆ, ಸದರಿ ಚೀಫ್ ಕೋರ್ಟ್‌ನವರು, ತಮಗೆ ಯುಕ್ತವಾಗಿ ತೋರಿದರೆ, ಆಮೇಲೆ ವ್ಯವಹಾರಣೆಗಳೆಲ್ಲವನ್ನೂ ಒಂದು ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ನಡಿಸಬೇಕೆಂತಾದಾಗಿ ನಿರ್ದೇಶಿಸಬಹುದು; ಆ ಮೇಲೆ ಸದರಿ ಡಿಸ್ಟ್ರಿಕ್ಟ್ ಕೋರ್ಟ್‌ನವರು ಸದರಿ ಕಂಪೆನಿಯನ್ನು ಮುಕ್ತಿ ಬಿಡುವದರ ಬಗ್ಗೆ ಈ ರೆಗ್ಯುಲೇಷನಿನ ಅರ್ಥದೊಳಗಣ "ಕೋರ್ಟು" ಎಂಬದಾಗಿ ಭಾವವಾಗತಕ್ಕದ್ದಲ್ಲದೆ ಹಾಗೆ ಮುಕ್ತಿ ಬಿಡುವದರ ಬಗ್ಗೆ ಚೀಫ್ ಕೋರ್ಟ್‌ನವರ ಅಧಿಕಾರ ಸ್ವಾತಂತ್ರ್ಯಗಳೆಲ್ಲವನ್ನೂ ಉಂಟಾಗಿರತಕ್ಕದ್ದು.

ಮುಕ್ತಿ ಬಿಡೋಣವನ್ನು ಡಿಸ್ಟ್ರಿಕ್ಟ್ ಕೋರ್ಟಿಗೆ ರವಾನಾ ಮಾಡಬಹುದು.

219. ಒಂದು ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಮುಕ್ತಿ ಬಿಡುವ ಕೆಲಸ ಜರಗುತ್ತಿರುವಾಗ್ಯೆ ಈ ಕೆಲಸವು ಇನ್ನೂ ಅನುಕೂಲವಾಗಿ ಅಂತಾ ಮತ್ತೊಂದು ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಜರಗಿಸಲ್ಪಡಬಹುದೆಂದು ಚೀಫ್ ಕೋರ್ಟ್‌ನವರಿಗೆ ತೋರ್ಪಡಿಸಲ್ಪಟ್ಟರೆ, ಸದರಿ ಚೀಫ್ ಕೋರ್ಟ್‌ನವರು ಅದನ್ನು ಅಂತಾ ಮತ್ತೊಂದು ಕೋರ್ಟಿಗೆ ವರ್ಗ ಮಾಡಬಹುದು; ಆ ಮೇಲೆ ಮುಕ್ತಿ ಬಿಡೋಣವು ಅಂತಾ ಮತ್ತೊಂದು ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಮುಂದಕ್ಕೆ ಜರಗಿಸಲ್ಪಡತಕ್ಕದ್ದು.

ಮುಕ್ತಿ ಬಿಡುವ ಕೆಲಸವನ್ನು ಒಂದು ಡಿಸ್ಟ್ರಿಕ್ಟ್ ಕೋರ್ಟಿನಿಂದ ಮತ್ತೊಂದಕ್ಕೆ ವರ್ಗ ಮಾಡೋಣ.

PART V.

5ನೇ ಭಾಗ.

REGISTRATION-OFFICE.

ರಿಜಿಸ್ಟ್ರೇಷನ್ ಆಫೀಸು.

220. ಈ ರೆಗ್ಯುಲೇಷನಿಗನುಗುಣವಾಗಿ ಕಂಪೆನಿಗಳನ್ನು ರಿಜಿಸ್ಟರ್ಮಾಡೋಣವು ಈ ಕೆಳಗಿನ ರೀತಿಯಾಗಿ ನಡಿಸಲ್ಪಡತಕ್ಕದ್ದು (ಯಾವವೆಂದರೆ):—

ರಿಜಿಸ್ಟ್ರೇಷನ್ ಆಫೀಸಿನ ಏರ್ಪಾಡು.

(a) ಮೈಸೂರ ಗವರ್ನಮೆಂಟಿನವರು, ಈ ರೆಗ್ಯುಲೇಷನಿಗನುಗುಣವಾಗಿ ಕಂಪೆನಿಗಳನ್ನು ರಿಜಿಸ್ಟರ್ಮಾಡತಕ್ಕ ಬಗ್ಗೆ ಅವರಿಗೆ ಆವಶ್ಯವಾಗಿ ತೋರುವಂತಾ ರಿಜಿಸ್ಟ್ರಾರುಗಳನ್ನೂ, ಅಸಿಸ್ಟೆಂಟ ರಿಜಿಸ್ಟ್ರಾರು

487

ಗಳನ್ನೂ, ಕ್ಲಾರ್ಕುಗಳನ್ನೂ, ನವುಕರರನ್ನೂ ಆಗಿಂದಾಗ್ಯೆ ನೌಕರರ್ರಾಗಿ ಮಾಡಬಹುದು, ಮತ್ತು ಇಷ್ಟಾನುಸಾರವಾಗಿ ಅವರನ್ನು ಕೆಲಸದಿಂದ ತೊಲಗಿಸಬಹುದು:

(b) ಮೇಲ್ಕಂಡಂತಾ ರಿಜಿಸ್ಟ್ರಾರುಗಳಿಂದ ಅಸಿಸ್ಟೆಂಟ ರಿಜಿಸ್ಟ್ರಾರುಗಳಿಂದ ಕ್ಲಾರ್ಕುಗಳಿಂದ ವ ನವುಕರರಿಂದ ಮಾಡಲ್ಪಡಬೇಕಾದ ಕೆಲಸಗಳ ವಿಷಯದಲ್ಲಿ ಮೈಸೂರ ಗವರ್ನಮೆಂಟಿನವರು ತಮಗೆ ಯುಕ್ತವಾಗಿ ತೋರುವಂತಾ ರೆಗ್ಯುಲೇಷನ್ನುಗಳನ್ನು ಮಾಡಬಹುದು:

(c) ಕಂಪೆನಿಗಳ ರಿಜಿಸ್ಟ್ರೇಷನ್ನು ಬಗ್ಯೆ ಆಫೀಸುಗಳು ಸ್ಥಾಪಿಸಲ್ಪಡಬೇಕಾದ ಸ್ಥಳಗಳನ್ನು ಆಗಿಂದಾಗ್ಯೆ ಮೈಸೂರ ಗವರ್ನಮೆಂಟಿನವರು ಗೊತ್ತು ಮಾಡಬಹುದು, ಮತ್ತು ಕಂಪೆನಿಯ ರಿಜಿಸ್ಟರ್ರಾಗಿ ಮಾಡಲ್ಪಟ್ಟ ಆಫೀಸು ಮೈಸೂರ ಸೀಮೆಯ ಯಾವ ಭಾಗದಲ್ಲಿ ಸ್ಥಾಪಿಸಲ್ಪಡತಕ್ಕದಾಗಿರುವದಾಗಿ ಸಮಾಜದ ಮೆಮೊರಾಂಡಮಿನಿಂದ ತಿಳಿಯಪಡಿಸಲ್ಪಡತಕ್ಕದಾಗಿದೆಯೋ ಅಲ್ಲಿ ಹೊರ್ತು; ಇನ್ನ್ಯಾವ ಆಫೀಸಿನಲ್ಲಿಯೂ ಸದರಿ ಕಂಪೆನಿಯು ರಿಜಿಸ್ಟರ್ರಾಗಿ ಮಾಡಲ್ಪಡಕೂಡದು:

(d) ಕಂಪೆನಿಗಳ ರಿಜಿಸ್ಟ್ರೇಷನ್ನಿಗೆ ಅವಶ್ಯವಾದ ಯಾ ಅದಕ್ಕೆ ಸಂಬಂಧಪಟ್ಟ ಯಾವ ದಸ್ತಾವೇಜುಗಳನ್ನಾದರೂ ಯಥಾರ್ಥ ಪಡಿಸತಕ್ಕ ಬಗ್ಯೆ ಮೋಹರನ್ನು ಯಾ ಮೋಹರುಗಳನ್ನು ತಯಾರು ಮಾಡುವಂತೆ ಮೈಸೂರ ಗವರ್ನಮೆಂಟಿನವರು ಆಗಿಂದಾಗ್ಯೆ ಹುಕುಂ ಮಾಡಬಹುದು:

(e) ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರಿಂದ ಇಡಲ್ಪಡುವ ದಸ್ತಾವೇಜುಗಳನ್ನು ಪ್ರತಿ ಮನುಷ್ಯನೂ ನೋಡಬಹುದು. ಒಂದೊಂದು ಸಲ ನೋಡಲಿಕ್ಕೆ ಒಂದು ರೂಪಾಯಿಗೆ ಮೀರದಂತೆ ಮೈಸೂರ ಗವರ್ನಮೆಂಟಿನವರಿಂದ ನಿರ್ದೇಶ ಮಾಡಲ್ಪಟ್ಟಿರಬಹುದಾದಂತಾ ರುಸುಂಗಳನ್ನು ಹಾಗೆ ನೋಡತಕ್ಕ ಬಗ್ಯೆ ಪಾವತಿಮಾಡತಕ್ಕದ್ದು. ಯಾವ ಕಂಪೆನಿಯಾದರೂ ಬಗ್ಗಟ್ಟು ಮಾಡಲ್ಪಟ್ಟದ್ದರ ಬಾಬತು ಸರ್ಟಿಫಿಕೇಟು ಯಾ ಯಾವದಾದರೊಂದು ಇತರ ದಸ್ತಾವೇಜಿನ ನಕಲು ಯಾ ಎಕಸ್ಟ್ರಾಕ್ಟು ಅಥವಾ ಯಾವದಾದರೊಂದು ಇತರ ದಸ್ತಾವೇಜಿನ ಯಾವದಾದರೊಂದು ಭಾಗ ರಿಜಿಸ್ಟ್ರಾರಿಂದ ಸರ್ಟಿಫೈ ಮಾಡಲ್ಪಡಬೇಕೆಂದು ಯಾವ ಮನುಷ್ಯನಾದರೂ ಅಪೇಕ್ಷಿಸಬಹುದು. ಬಗ್ಗಟ್ಟಿನ ಬಾಬತು ಸರ್ಟಿಫಿಕೇಟಿನ ಬಗ್ಯೆ ಮೂರು ರೂಪಾಯಿಗಳಿಗೆ ಮೀರದಂತೆಯೂ, ಅಂತಾ ನಕಲಿನ ಯಾ ಎಕಸ್ಟ್ರಾಕ್ಟಿನ ಪ್ರತಿ ನೂರು ಪದಗಳಬಗ್ಯೆ ಎರಡಾಣೆಗಳಿಗೆ ಮೀರದಂತೆಯೂ, ಮೈಸೂರ ಗವರ್ನಮೆಂಟಿನವರು ನಿರ್ದೇಶಮಾಡಲ್ಪಡಬಹುದಾದಂತಾ ರುಸುಂಗಳನ್ನು ಅಂತಾ ಬಗ್ಗಟ್ಟಿನ ಬಾಬತು ಸರ್ಟಿಫಿಕೇಟಿನ ಸರ್ಟಿಫೈ ಮಾಡಲ್ಪಟ್ಟ ನಕಲಿಗಾಗಿ ಯಾ ಎಕಸ್ಟ್ರಾಕ್ಟಿಗಾಗಿ ಪಾವತಿ ಮಾಡತಕ್ಕದ್ದು:

(f) ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರೇಷನ್ನು ಬಗ್ಯೆ ಈಗ ಉದ್ಯೋಗದಲ್ಲಿರುವಂತಾ ರಿಜಿಸ್ಟ್ರಾರೂ ಅಸಿಸ್ಟೆಂಟ ರಿಜಿಸ್ಟ್ರಾರುಗಳೂ ಕ್ಲಾರ್ಕುಗಳೂ ಇತರ ಆಫೀಸರುಗಳೂ ನವುಕರರೂ ಮೈಸೂರ ಗವರ್ನಮೆಂಟಿನವರಿಗೆ ಇಷ್ಟವಿರುವ ತನಕ ಸದರಿ ಕೆಲಸಗಳಲ್ಲಿ ಇದ್ದುಕೊಂಡು ಅವರು ಇದುವರಿಗೂ ಪಡಕೊಳ್ಳುತ್ತಿದ್ದಂತಾ ಸಂಬಳಗಳನ್ನು ಪಡಕೊಳ್ಳುತ ಬರತಕ್ಕದ್ದು, ಆದರೆ ಅವರು ತಮ್ಮ ಕೆಲಸಗಳನ್ನು ನಡಿಸುವ ವಿಷಯದಲ್ಲಿ ಮೈಸೂರ ಗವರ್ನಮೆಂಟಿನವರಿಂದ ಮಾಡಲ್ಪಡಬಹುದಾದ ನಿಬಂಧನೆಗಳನ್ನನುಸರಿಸಿ ನಡೆಯತಕ್ಕದ್ದು:

(g) ಜಾಯಿಂಟ ಸ್ಟಾಕ ಕಂಪೆನಿಗಳನ್ನು ರಿಜಿಸ್ಟರ್ರಾಗಿ ಮಾಡುವ ಉದ್ಯೋಗದಲ್ಲಿ ಇನ್ನುಮೇಲೆ ನೌಕರರ್ರಾಗಿ ಮಾಡಲ್ಪಡುವಂತಾ ಯಾವ ರಿಜಿಸ್ಟ್ರಾರಿಗೆ, ಅಸಿಸ್ಟೆಂಟ ರಿಜಿಸ್ಟ್ರಾರಿಗೆ ಕ್ಲಾರ್ಕಿಗೆ ಯಾ ನವುಕರನಿಗೆ, ಮೈಸೂರ ಗವರ್ನಮೆಂಟಿನವರು ಹುಕುಂ ಮಾಡುವಂತಾ ಸಂಬಳ ಪಾವತಿಮಾಡಲ್ಪಡತಕ್ಕದ್ದು:

(h) ಯಾವ ಕೃತ್ಯವಾಗಲಿ ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರಿಗೆ ಯಾ ಅಂತಾ ರಿಜಿಸ್ಟ್ರಾರಿಂದ ಮಾಡಲ್ಪಡಬೇಕೆಂದು ಇದರಲ್ಲಿ ಹುಕುಂ ಮಾಡಲ್ಪಟ್ಟಿದ್ದರೆ, ಸದರಿ ಕೃತ್ಯ ಮೈಸೂರ ಗವರ್ನಮೆಂಟಿನವರು ಅನ್ಯಥಾ ಹುಕುಂ ಮಾಡುವವರಿಗೆ ಈಗ ಇರುವ ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರವರಿಂದ ಮಾಡಲ್ಪಡತಕ್ಕದ್ದು, ಅಥವಾ ಆತನ ಗೈರ ಹಾಜರಾತಿಯಲ್ಲಿ ಮೈಸೂರ ಗವರ್ನಮೆಂಟಿನವರು ತಾತ್ಕಾಲಿಕವಾದ ಅಧಿಕಾರಕೊಡಬಹುದಾದಂತಾ ಮನುಷ್ಯನಿಂದ ಮಾಡಲ್ಪಡತಕ್ಕದ್ದು. ಆದರೆ, ಮೈಸೂರ ಗವರ್ನಮೆಂಟಿನವರು ಈಗ ಇರುವಂತಾ ರಿಜಿಸ್ಟ್ರಿ ಆಫೀಸಿನ ಏರ್ಪಾಟನ್ನು ಬದಲಾಯಿಸುವ ಪಕ್ಷದಲ್ಲಿ, ಸದರಿ ಕೃತ್ಯ ರಿಜಿಸ್ಟರ್ರಾಗಿ ಮಾಡಬೇಕಾದ ಕಂಪೆನಿಗಳ ಬಾಬತು

ರಿಜಿಸ್ಟರ್ಮಾಡಲ್ಪಟ್ಟ ಆಫಿಸುಗಳು ಇರುವ ಸ್ಥಳಗಳ ದಾಖಲೆಯಿಂದ ಮೈಸೂರ ಗವರ್ನಮೆಂಟಿನವರು ಮೊಕರರ್ಮಾಡಬಹುದಾದಂತಾ ಸ್ಥಳದಲ್ಲಿ ಯಾ ಸ್ಥಳಗಳಲ್ಲಿ ಅಂತಾ ಆಫಿಸರಿಂದ ಯಾ ಆಫಿಸರುಗಳಿಂದ ಮಾಡಲ್ಪಡತಕ್ಕದ್ದು.

PART VI.

6ನೇ ಭಾಗ.

Application of Regulation to Companies registered under the Joint Stock Companies Acts.

ಜಾಯಿಂಟ ಸ್ಟಾಕ ಕಂಪೆನೀಸ ಆಕ್ಟುಗಳ ಪ್ರಕಾರ ರಿಜಿಸ್ಟರ ಮಾಡಲ್ಪಟ್ಟ ಕಂಪೆನಿಗಳ ವಿಷಯದಲ್ಲಿ ರೆಗ್ಯುಲೇಷನ್ ಉಪಯೋಗಿಸಲ್ಪಡೋಣ.

1857ನೇ ಇಸವಿ 19ನೇ ನಂ. ಆಕ್ಟಿನ ಅಥವಾ 1860ನೇ ಇಸವಿ 7ನೇ ನಂ. ಆಕ್ಟಿನ ಪ್ರಕಾರ ಏರ್ಪಾಡಾದ ಕಂಪೆನಿಗಳ ವಿಷಯದಲ್ಲಿ ರೆಗ್ಯುಲೇಷನ್ ಉಪಯೋಗಿಸಲ್ಪಡೋಣ.

221. ಈ ರೆಗ್ಯುಲೇಷನ್ ಇನ್ನು ಮೇಲೆ ನಮೂದಿಸೋಣಾಗುವದಕ್ಕೆ ಒಳಪಟ್ಟದ್ದಾಗಿ ಮೊದಲನೆ ಪಟ್ಟಿಯಲ್ಲಿಯ A ಜಂತ್ರಿ ವಿನಹ, 1857ನೇ ಇಸವಿ 19ನೇ ನಂ. ಆಕ್ಟಿನ ಪ್ರಕಾರ ಮತ್ತು 1860ನೇ ಇಸವಿ 7ನೇ ನಂ. ಆಕ್ಟಿನ ಪ್ರಕಾರ, ಅಥವಾ ಈ ಎರಡರ ಪೈಕಿ ಒಂದರ ಪ್ರಕಾರ ಏರ್ಪಾಡಾಗಿ ರಿಜಿಸ್ಟರ್ಮಾಡಲ್ಪಟ್ಟಂತಾ ಕಂಪೆನಿಗಳ ವಿಷಯದಲ್ಲಿ ಉಪಯೋಗಿಸಲ್ಪಡತಕ್ಕದ್ದು, ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯ ಸಂಗತಿಯಲ್ಲಿ, ಸದರಿ ಕಂಪೆನಿ ಹಿಸ್ಸೆಗಳಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯೆಂದು ಈ ರೆಗ್ಯುಲೇಷನ್ ಪ್ರಕಾರ ಏರ್ಪಾಡಾಗಿ ರಿಜಿಸ್ಟರ್ಮಾಡಲ್ಪಟ್ಟದ್ದರೆ ಹ್ಯಾಗೋ ಹಾಗೆಯೂ, ಕ್ಲುಪ್ತ ಪಡಿಸಲ್ಪಟ್ಟದ್ದಲ್ಲದ ಇತರ ಕಂಪೆನಿಯ ಸಂಗತಿಯಲ್ಲಿ, ಸದರಿ ಕಂಪೆನಿ ಈ ರೆಗ್ಯುಲೇಷನ್‌ಪ್ರಕಾರ ಕ್ಲುಪ್ತ ಪಡಿಸಲ್ಪಡದ ಕಂಪೆನಿಯೆಂದು ಏರ್ಪಾಡಾಗಿ ರಿಜಿಸ್ಟರ್ಮಾಡಲ್ಪಟ್ಟದ್ದರೆ ಹ್ಯಾಗೋ ಹಾಗೆಯೂ ಉಪಯೋಗಿಸಲ್ಪಡತಕ್ಕದ್ದು; ಈ ವಿವರಣೆಯೊಂದಿಗೆ ಅಂದರೆ ಸ್ಪಷ್ಟವಾಗಿ ಯಾ ಗೂಢವಾಗಿ ರಿಜಿಸ್ಟ್ರೇಷನ್ ತಾರೀಖಿಗೆ ದಾಖಲೆ ಕೊಡೋಣಾಗಿರುವಾಗಲೆಲ್ಲಾ, ಅಂತಾ ತಾರೀಖ ಸದರಿ ಕಂಪೆನಿಗಳು ಸದರಿ ಆಕ್ಟುಗಳ ಪ್ರಕಾರ ಯಾ ಅವುಗಳ ಪೈಕಿ ಯಾವದಾದರೊಂದರ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ತಾರೀಖಿಗೆ ದಾಖಲೆಯಾಗುವಂತೆ ಗ್ರಹಿಸಲ್ಪಡತಕ್ಕದ್ದು, ಮತ್ತು ನಿಬಂಧನೆಗಳನ್ನು ವಿಶೇಷ ನಿರ್ಣಯದ ಮೂಲಕವಾಗಿ ತಿದ್ದಲಿಕ್ಕೆ ಈ ರೆಗ್ಯುಲೇಷನ್ನಿಂದ ಕೊಡೋಣಾಗಿರುವ ಅಧಿಕಾರವು, ಸದರಿ ಆಕ್ಟುಗಳಪ್ರಕಾರ ಯಾ ಅವುಗಳಪೈಕಿ ಯಾವದಾದರೊಂದರ ಪ್ರಕಾರ ಏರ್ಪಾಡಾಗಿ ರಿಜಿಸ್ಟರ್ಮಾಡಲ್ಪಟ್ಟ ಕಂಪೆನಿಯ ಸಂಗತಿಯಲ್ಲಿ, 1857 ನೇ ಇಸವಿ 19ನೇ ನಂ. ಆಕ್ಟಿಗೆ ಸೇರಿದ B ಗುರ್ತುಳ್ಳ ಜಂತ್ರಿಯಲ್ಲಿ ಅಡಗಿ ಇರುವ ಯಾವ ನಿಬಂಧನೆಗಳನ್ನಾದರೂ ತಿದ್ದುವಷ್ಟರ ಮಟ್ಟಿಗೆ ವ್ಯಾಪಿಸತಕ್ಕದ್ದು, ಮತ್ತು ಸದರಿ ಪ್ರಕಾರ ಏರ್ಪಾಡಾಗಿ ರಿಜಿಸ್ಟರ್ಮಾಡಲ್ಪಟ್ಟ ಕ್ಲುಪ್ತ ಪಡಿಸಲ್ಪಡದ ಕಂಪೆನಿಯ ಸಂಗತಿಯಲ್ಲಿ ಸಹ ಮೂಲಧನದ ಮೊಬಲಗಿಗೆ ಯಾ ಅದು ಹಿಸ್ಸೆಗಳಾಗಿ ಭಾಗಿಸಲ್ಪಟ್ಟದ್ದಕ್ಕೆ ಸಂಬಂಧಪಟ್ಟ ಯಾವ ನಿಬಂಧನೆಗಳನ್ನಾದರೂ ತಿದ್ದುವಷ್ಟರ ಮಟ್ಟಿಗೆ ವ್ಯಾಪಿಸತಕ್ಕದ್ದು, ಅಂತಾ ನಿಬಂಧನೆಗಳು ಸಮಾಜದ ಯಾದಾಸ್ತಿನಲ್ಲಿ ಅಡಗಿಯಿದ್ದಾಗ್ಯೂ ಚಿಂತೆಯಿಲ್ಲ.

1857ನೇ ಇಸವಿ 19 ನೇ ನಂ. ಆಕ್ಟಿನ ಅಥವಾ 1860ನೇ ಇಸವಿ 7ನೇ ನಂ. ಆಕ್ಟಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಕಂಪೆನಿಗಳ ವಿಷಯದಲ್ಲಿ ರೆಗ್ಯುಲೇಷನ್ ಉಪಯೋಗಿಸಲ್ಪಡೋಣ.

222. ಈ ರೆಗ್ಯುಲೇಷನ್ ಸದರಿ ಆಕ್ಟುಗಳ ಪ್ರಕಾರ ಯಾ ಅವುಗಳಪೈಕಿ ಯಾವದಾದರೊಂದರಪ್ರಕಾರ ಏರ್ಪಾಡು ಮಾಡಲ್ಪಡದೆ ರಿಜಿಸ್ಟರುಮಾತ್ರ ಮಾಡಲ್ಪಟ್ಟಿರುವ ಕಂಪೆನಿಗಳ ಸಂಗತಿಯಲ್ಲಿ, ಈ ರೆಗ್ಯುಲೇಷನಿನಪ್ರಕಾರ ಏರ್ಪಾಡು ಮಾಡಲ್ಪಡದೆ ರಿಜಿಸ್ಟರು ಮಾತ್ರ ಮಾಡಲ್ಪಟ್ಟಿರುವ ಕಂಪೆನಿಗಳ ವಿಷಯದಲ್ಲಿ ಈ ರೆಗ್ಯುಲೇಷನನ್ನು ಯಾವಪ್ರಕಾರ ಉಪಯೋಗಿಸಿ ಕೊಳ್ಳತಕ್ಕದ್ದೆಂದು ಇನ್ನು ಮೇಲೆ ತಿಳಿಯಪಡಿಸೋಣಾಗುತ್ತದೋ ಅದೇಪ್ರಕಾರ ಉಪಯೋಗಿಸಿ ಕೊಳ್ಳತಕ್ಕದ್ದು; ಈ ವಿವರಣೆಯೊಂದಿಗೆ ಅಂದರೆ ಸ್ಪಷ್ಟವಾಗಿ ಯಾ ಗೂಢವಾಗಿ ರಿಜಿಸ್ಟ್ರೇಷನ್ ತಾರೀಖಿಗೆ ದಾಖಲೆ ಕೊಡೋಣಾಗಿರುವಾಗಲೆಲ್ಲಾ, ಅಂತಾ ತಾರೀಖು ಸದರಿ ಕಂಪೆನಿಗಳು ಸದರಿ ಆಕ್ಟುಗಳಪ್ರಕಾರ ಯಾ ಅವುಗಳಪೈಕಿ ಯಾವದಾದರೊಂದರಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ತಾರೀಖಿಗೆ ದಾಖಲೆಯಾಗುವಂತೆ ಗ್ರಹಿಸಲ್ಪಡತಕ್ಕದ್ದು.

223. ಸದರಿ ಆಕ್ಟುಗಳ ಪ್ರಕಾರ ಯಾ ಅವುಗಳ ಪೈಕಿ ಯಾವುದಾದರೊಂದರಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಕಂಪೆನಿಯಾದರೂ ಇದುವರೆಗೂ ರೂಢಿಯಲ್ಲಿದ್ದ ರೀತಿ ಯಾಗಿ, ಅಥವಾ ಕಂಪೆನಿಯವರು ಹುಕುಂ ಮಾಡುವ ಇತರ ರೀತಿ ಯಾಗಿ, ಅದರ ಹಿಸ್ಸೆಗಳನ್ನು ಪರಭಾರೆ ಮಾಡಿಸಬಹುದು.

ಹಿಸ್ಸೆಗಳನ್ನು ಪರಭಾರೆ ಮಾಡುವ ರೀತಿ.

PART VII.

7ನೇ ಭಾಗ.

Companies authorized to Register under this Regulation.

ಈ ರೆಗ್ಯುಲೇಷನ್ ಪ್ರಕಾರ ರಿಜಿಸ್ಟರ್ಮಾಡಲಿಕ್ಕೆ ಅಧಿಕಾರ ಹೊಂದಿದ ಕಂಪೆನಿಗಳು.

224. ಇದಕ್ಕೆ ಅವ್ಯವಹಿತವಾಗಿರುವ ಏರಡನೇ ಪ್ರಕರಣದಲ್ಲಿ ನಮೂದಿಸಿರುವ ವಿನಾಯಿತಿಗಳು ಹೊರ್ತು, ಅವುಗಳಲ್ಲದೆ ಆಗಿಯಿರುವ ನಿಬಂಧನೆಗಳಿಗೆ ಬಾಧ್ಯಪಟ್ಟಿದ್ದು, ಈ ರೆಗ್ಯುಲೇಷನ್ ಜಾರಿಯಲ್ಲಿ ಬರುವ ಕಾಲದಲ್ಲಿ ಏಳು ಯಾ ಹೆಚ್ಚು ಮಂದಿ ಮೆಂಬರುಗಳನ್ನುಳ್ಳದ್ದಾಗಿರುವ ಯಾವ ಕಂಪೆನಿಯಾದರೂ ಮೈಸೂರ ಗವರ್ಣಮೆಂಟಿನವರ ಯಾವತ್ತು ರೆಗ್ಯುಲೇಷನಿಗನುಗುಣವಾಗಿಯಾಗಲಿ ಇನ್ನು ಮೇಲೆ ಸ್ಥಾಪಿಸಲ್ಪಡುವಂತಾ ಅಥವಾ ಕಾನೂನಿನ ಪ್ರಕಾರ ಅನ್ಯಥಾ ಕ್ರಮವಾಗಿ ಸ್ಥಾಪಿಸಲ್ಪಡುತ್ತಿರುವಂಥ ಏಳು ಯಾ ಹೆಚ್ಚು ಮಂದಿ ಮೆಂಬರುಗಳನ್ನುಳ್ಳದ್ದಾಗಿರುವ ಯಾವ ಕಂಪೆನಿಯಾದರೂ ಕ್ಲುಪ್ತ ಪಡಿಸಲ್ಪಡದ ಕಂಪೆನಿಯಂತಲಾಗಲಿ ಹಿಸ್ಸೆಗಳಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಂತಲಾಗಲಿ ಜಾಮೀನಿನಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಂತಲಾಗಲಿ ಇನ್ನು ಮೇಲೆ ಯಾವಾಗ ಆದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡಬಹುದು ಮತ್ತು ಅಂಥಾ ಯಾವ ರಿಜಿಸ್ಟ್ರೇಷನಾಗಲಿ ಕಂಪೆನಿಯನ್ನು ಮುಚ್ಚುವ ಉದ್ದೇಶಕ್ಕೆ ಇರಾದೆಯಿಂದ ಮಾಡಲ್ಪಟ್ಟಿತೆಂಬ ಸಬಬಿನಮೇಲೆ ಸಲುವಳಿಯಾಗದೆ ಇರಕೂಡದು.

ರಿಜಿಸ್ಟರ್ಮಾಡಲಿಕ್ಕೆ ಲಾಯಖಾದ ಕಂಪೆನಿಗಳು.

225. ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ಕಂಪೆನಿಗಳನ್ನು ರಿಜಿಸ್ಟರ್ಮಾಡುವ ವಿಷಯದಲ್ಲಿ ಈ ಕೆಳಗಿನ ನಿಬಂಧನೆಗಳನ್ನನುಸರಿಸಿ ನಡೆಯತಕ್ಕದ್ದು; (ಯಾವವೆಂದರೆ):—

ಹಾಲಿ ಇರತಕ್ಕ ಕಂಪೆನಿಗಳು ರಿಜಿಸ್ಟರ್ಮಾಡಲ್ಪಡುವ ವಿಷಯದಲ್ಲಿ ನಿಬಂಧನೆಗಳು.

(a) ಮೈಸೂರ ಗವರ್ಣಮೆಂಟಿನವರ ಯಾವ ರೆಗ್ಯುಲೇಷನ್ನಿಂದಲಾಗಲಿ ಅದರ ಮೆಂಬರುಗಳ ಜವಾಬುದಾರಿಕೆ ಕ್ಲುಪ್ತ ಪಡಿಸಲ್ಪಟ್ಟಿರುವ ಮತ್ತು ಇನ್ನು ಮೇಲೆ ವಿವರಿಸಲ್ಪಡುವ ಪ್ರಕಾರ ಜಾಯಿಂಟ್ ಸ್ಟಾಕ್ ಕಂಪೆನಿಯಲ್ಲದೆ ಇರುವ ಯಾವ ಕಂಪೆನಿಯಾದರೂ ಈ ರೆಗ್ಯುಲೇಷನಿನನುಗುಣವಾಗಿ ಅದರ ಈ ಭಾಗದ ಪ್ರಕಾರ ರಿಜಿಸ್ಟರ್ಮಾಡಲ್ಪಡಕೂಡದು.

(b) ಮೈಸೂರ ಗವರ್ಣಮೆಂಟಿನವರ ಯಾವ ರೆಗ್ಯುಲೇಷನ್ನಿಂದಲಾಗಲಿ ಅದರ ಮೆಂಬರುಗಳ ಜವಾಬುದಾರಿ ಕ್ಲುಪ್ತ ಪಡಿಸಲ್ಪಟ್ಟಿರುವ ಯಾವ ಕಂಪೆನಿಯಾದರೂ ಕ್ಲುಪ್ತ ಪಡಿಸಲ್ಪಡದ ಕಂಪೆನಿಯಂತೆ ಅಥವಾ ಜಾಮೀನಿನಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಂತೆ ಈ ರೆಗ್ಯುಲೇಷನಿನ ಪ್ರಕಾರ ಅದರ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ಮಾಡಲ್ಪಡಕೂಡದು.

(c) ಈ ರೆಗ್ಯುಲೇಷನ್ ಅಮಲ ಶುರುವಾಗತಕ್ಕ ಕಾಲದಲ್ಲಿ ಇರುವಂಥ ಯಾವ ಇನ್ಷ್ಯೂರೆನ್ಸ್ ಕಂಪೆನಿಯಾದರೂ, ಮತ್ತು ಇನ್ನು ಮೇಲೆ ವಿಧಿಸೋಣಾಗುವ ಪ್ರಕಾರ ಜಾಯಿಂಟ್ ಸ್ಟಾಕ್ ಕಂಪೆನಿಯಲ್ಲದೆ ಇರುವ ಇತರ ಕಂಪೆನಿಯಾದರೂ ಹಿಸ್ಸೆಗಳಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಂತೆ ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡಕೂಡದು.

(d) ಆ ಬಗ್ಗೆ ಕರೆಯಲ್ಪಟ್ಟ ಸಾಧಾರಣ ಸಭೆಯಲ್ಲಿ ಖುದ್ದಾಗಿ ಅಥವಾ ಕಂಪೆನಿಯ ನಿಬಂಧನೆಗಳ ಪ್ರಕಾರ ಮುಖ್ತಾರೀಕರು ವೋಟು ಮಾಡುವದಾಗಿದ್ದರೆ ಮುಖ್ತಾರೀಕರ ಮೂಲಕವಾಗಿ ಹಾಜರಾಗಿದ್ದು ಬಹುದಾದ ಅದರ ಮೆಂಬರುಗಳ ಪೈಕಿ ಬಹುಭಾಗದವರು ಹಾಗೆ ರಿಜಿಸ್ಟರ್ಮಾಡಿಸಲಿಕ್ಕೆ ಸಮ್ಮತಿಸದೆಹೋದರೆ ಯಾವ ಕಂಪೆನಿಯಾದರೂ ಈ ರೆಗ್ಯುಲೇಷನ್ ಪ್ರಕಾರ ಅದರ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ಮಾಡಲ್ಪಡಕೂಡದು.

(e) ಮೆಂಬರುಗಳ ಜವಾಬುದಾರಿ ಕ್ಲುಪ್ತ ಪಡಿಸಲ್ಪಡದೆ ಇರುವ ಯಾವ ಕಂಪೆನಿಯಾದರೂ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯಂತೆ ರಿಜಿಸ್ಟರ್ಮಾಡಲ್ಪಡುವದಾಗಿದ್ದರೆ, ಸದರಿ ಪ್ರಕಾರ ಸಮ್ಮತಿಸಬೇಕಾದಂಥಾ ಬಹು

ಭಾಗದವರು ಮೇಲ್ಕಂಡಂತಾ ಸಾಧಾರಣ ಸಭೆಗೆ ಖುದ್ದಾಗಿ ಯಾ ಮುತಾಲೀಕರ ಮುಖಾಂತರವಾಗಿ ಹಾಜರಾದ ಮೆಂಬರುಗಳಪೈಕಿ ಮುಕ್ಕಾಲುಪಾಲು ಜನರ್ ಳಗಿಂತ ಕಮ್ಮಿಯಾದವರಾಗಿರಕೂಡದು:

(f) ಯಾವ ಕಂಪೆನಿಯಾದರೂ ಜಾಮೀನಿನಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯೆಂತ ರಿಜಿಸ್ಟರ್ಮಾಡಲ್ಪಡು ವದಾಗಿದ್ದರೆ, ಹಾಗೆ ರಿಜಿಸ್ಟರ್ಮಾಡಿಸಬೇಕೆಂಬುವ ಸಪ್ಪ್ಯತಿಯೊಂದಿಗೆ ಪ್ರತಿ ಮೆಂಬರೂ ತಾನು ಮೆಂಬ ರಾಗಿರುವ ಕಾಲದಲ್ಲಿ ಅಥವಾ ಆ ತರುವಾಯ ಒಂದು ಸಂವತ್ಸರದ ಒಳಗಾಗಿ ಅದನ್ನು ಮುಚ್ಚಿ ಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ ತಾನು ಸದರಿ ಕಂಪೆನಿಯ ಮೆಂಬರಾಗಿರುವದಿಲ್ಲವೆಂದು ತನ್ನ ಸಂಬಂಧವನ್ನು ನಿವೃತ್ತಿಮಾಡಿಕೊಳ್ಳುವದಕ್ಕಿಂತ ಮುಂಚಿತವಾಗಿ ಮಾಡೋಣಾದ ಕಂಪೆನಿಯ ಸಾಲಗಳ ವ ಜವಾಬುದಾರಿಗಳ ಪಾವತಿ ಬಗ್ಯೆ ಮತ್ತು ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ವ ಸಹಾಯಕರ ಹಕ್ಕುದಾರಿಗಳನ್ನು ಅವರೊಳಗೆ ವ್ಯವಸ್ಥೆಪಡಿಸುವದಕ್ಕೆ ತಗಲುವ ಖರ್ಚು ಗಳ ಲಾಗವಾಡುಗಳ ವ ವೆಚ್ಚಗಳ ಪಾವತಿಬಗ್ಯೆ ಅವಶ್ಯಕವಾಗಬಹುದಾದ ಗೊತ್ತು ಮಾಡಲ್ಪ ಟ್ಟಂತ ಮೊಬಲಗಿಗೆ ಮೀರದ ಮೊಬಲಗನ್ನು ಕಂಪೆನಿಯ ಅಸ್ಸೆಟ್ಸ್ಎಂಬ ಆಸ್ತಿಗಳೊಂದಿಗೆ ಸೇರು ವದಕ್ಕಾಗಿ ಕೊಡಲು ಪ್ರತಿ ಮೆಂಬರೂ ಉದ್ಯುಕ್ತನಾಗಿದ್ದಾನೆಂಬುವ ನಿರ್ಣಯವನ್ನು ಕಳುಹಿಸಿ ಕೊಡಬೇಕು.

ಫೋಲ್ ಎಂಬ ಅಭಿಪ್ರಾಯ ಕೇಳಲ್ಪಟ್ಟಾಗ, ಈ ರೆಗ್ಯುಲೇಷನಿನಪ್ರಕಾರ ಯಾವ ಒಹು ಭಾಗದವರನ್ನಾದರೂ ಲೆಕ್ಕಮಾಡುವಲ್ಲಿ, ಪ್ರತಿ ಮೆಂಬರೂ ತಾನು ಯಾವ ಕಂಪೆನಿಗೆ ಮೆಂಬರಾಗಿದ್ದಾನೋ ಆ ಕಂಪೆನಿಯ ನಿಬಂಧನೆಗಳಪ್ರಕಾರ ಎಷ್ಟು ವೋಟುಗಳನ್ನು ನಡಿಯಲಿಕ್ಕೆ ಅರ್ಹನಾಗಿದ್ದಾನೋ ಆ ಸಂಖ್ಯೆಯು ಮನಸ್ಕರಿಸಲ್ಪಡತಕ್ಕದ್ದು.

ಜಾಯಿಂಟ ಸ್ಟಾಕ ಕಂಪೆನಿಯೆಂಬದರ ಅರ್ಥವಿವರಣೆ.	226. ಹಿಸ್ಸೆಗಳಿಂದ ಕ್ಲುಪ್ತಪಡಿಸಲ್ಪಟ್ಟ ಕಂಪೆನಿಯೆಂತ ರಿಜಿಸ್ಟರ್ಮಾಡಿಸಲಿಕ್ಕೆ ಅಧಿಕಾರ ಪಡೆದಿರುವಂತ ಕಂಪೆನಿಗಳ ವಿಷಯದಲ್ಲಿ ಈ ರೆಗ್ಯುಲೇಷನಿಗೆ ಸಂಬಂಧಪಡುವಷ್ಟರಮಟ್ಟಿಗೆ, ಈ ರೆಗ್ಯುಲೇಷನಿನ ಈ ಭಾಗದ ಕಾರ್ಯಗಳಿಗೋಸ್ಕರ, ಒಂದು ಜಾಯಿಂಟ ಸ್ಟಾಕ ಕಂಪೆನಿಯು, ಹಿಸ್ಸೆಗಳಾಗಿ ಭಾಗಿಸಲ್ಪಟ್ಟ ಕಾಯ

ಮಾಗಿ ಪಾವತಿ ಮಾಡಿಬಿಡಲ್ಪಟ್ಟಂತಾ ಯಾ ಗೊತ್ತುಮಾಡಲ್ಪಟ್ಟ ಮೊಬಲಗಿನ ಬಾಬತು ಹೆಸರು ಮಾತ್ರದ್ದಾದಂತಾ ಮೂಲಧನವನ್ನುಳ್ಳ ಕಂಪೆನಿಯೆಂತ ಗ್ರಹಿಸಲ್ಪಡತಕ್ಕದ್ದು, ಅದು ಗೊತ್ತು ಮಾಡಲ್ಪಟ್ಟ ಮೊಬಲಗಾಗಿಯಾಗಲಿ ಸ್ಟಾಕ ಧನದಂತೆ ಪಡೆಕೊಳ್ಳಲ್ಪಟ್ಟ ಪರಭಾರೆ ಮಾಡಲ್ಪಡುವದಾಗಿಯಾಗಲಿ ಭಾಗಿಸಲ್ಪಟ್ಟ ಒಂದು ಭಾಗ ಈರೀತಿ ಮತ್ತೊಂದು ಭಾಗ ಆ ರೀತಿಯಾಗಿ ಪಡೆಕೊಳ್ಳಲ್ಪಟ್ಟದ್ದಾಗಿಯಾಗಲಿ ಮತ್ತು ಇತರ ಮನುಷ್ಯರನ್ನು ಸೇರಿಸದೆ ಅಂತಾ ಮೂಲಧನದಲ್ಲಿ ಹಿಸ್ಸೆಗಳನ್ನು ಪಡೆಕೊಂಡವರು ಅಥವಾ ಅಂತಾ ಸ್ಟಾಕ ಧನದಲ್ಲಿ ಹಿಸ್ಸೆಗಳನ್ನು ಪಡೆಕೊಂಡವರು ಮಾತ್ರ ಅದರ ಮೆಂಬರುಗಳಾಗಿರತಕ್ಕದ್ದೆಂಬುವ ಇರಾದೆಯಿಂದ ಏರ್ಪಾಡು ಮಾಡಲ್ಪಡತಕ್ಕದ್ದು; ಮತ್ತು ಅಂತಾ ಯಾವ ಕಂಪೆನಿಯಾಗಲಿ ಈ ರೆಗ್ಯುಲೇಷನಪ್ರಕಾರ ಕ್ಲುಪ್ತಪಡಿಸಲ್ಪಟ್ಟ ಜವಾಬುದಾರಿಯೊಂದಿಗೆ ರಿಜಿಸ್ಟರು ಮಾಡಲ್ಪಟ್ಟರೆ ಹಿಸ್ಸೆಗಳಿಂದ ಕ್ಲುಪ್ತಪಡಿಸಲ್ಪಟ್ಟ ಕಂಪೆನಿ ಎಂದು ಗ್ರಹಿಸಲ್ಪಡತಕ್ಕದ್ದು.

ಕಂಪೆನಿಗಳಿಂದ ಆಗಬೇಕಾದ ಕರ್ತವ್ಯಗಳು.	227. ಯಾವ ಜಾಯಿಂಟ ಸ್ಟಾಕ ಕಂಪೆನಿಯಾದರೂ ಈ ರೆಗ್ಯುಷನಿನ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ಮಾಡಿಸುವದಕ್ಕೆ ಮುಂಚಿತವಾಗಿ ಈ ಕೆಳಗಿನ ದಸ್ತಾವೇಜುಗಳನ್ನು ರಿಜಿಸ್ಟ್ರಾರವರಿಗೆ ಒಪ್ಪಿಸತಕ್ಕದ್ದು (ಯಾವವೆಂದರೆ):—

(a) ಕಂಪೆನಿಯನ್ನು ರಿಜಿಸ್ಟರ್ಮಾಡಿಸಿದ ಸಂಪೂರ್ಣವಾದ ಆರುದಿವಸಗಳಿಗಿಂತ ಹೆಚ್ಚಾಗದಷ್ಟು ದಿವಸಗಳ ಮುಂಚೆ, ಯಾರ್ಯಾರು ಸದರಿ ಕಂಪೆನಿಯ ಮೆಂಬರುಗಳಾಗಿದ್ದರೋ, ಅಂತಾ ಸಮಸ್ತ ಮನುಷ್ಯರ ಹೆಸರುಗಳನ್ನೂ ವಿಲಾಸಗಳನ್ನೂ ಕಸಬುಗಳನ್ನೂ ತೋರಿಸುವಂತಾ ಒಂದು ಫೇರೀಸ್ತು ಅದರಲ್ಲಿ ಅಂತಾ ಒಬ್ಬೊಬ್ಬ ಮನುಷ್ಯನಿಂದ ಪಡೆಕೊಳ್ಳಲ್ಪಟ್ಟಿರುವ ಹಿಸ್ಸೆಗಳು ಇಷ್ಟಿಷ್ಟೆಂತಲೂ, ಸದರಿ ಹಿಸ್ಸೆಗಳಿಗೆ ನಂಬರು ಹಾಕಿದ್ದರೆ, ಫಲಾನೆ ಫಲಾನೆ ನಂಬರಿನದೆಂತಲೂ, ನಮೂದಿಸತಕ್ಕದ್ದು:

(b) ಆ ಕಂಪೆನಿಯನ್ನು ಸ್ಥಾಪಿಸಿದಂತಾ ಯಾ ಕ್ರಮಪಡಿಸಿದಂತಾ ಮೈಸೂರ ಗವರ್ನಮೆಂಟಿನವರ ಯಾವದಾದರೂ ರೆಗ್ಯುಲೇಷನಿನ ಡೀಡ ಆಫ್ ಸೆಟಲ್‌ಮೆಂಟ ಎಂಬ ಪತ್ರದ ಪಾಲುಗಾರಿಕೆಯ ಕರಾರಿನ ಅಥವಾ ಇತರ ದಸ್ತಾವೇಜಿನ ನಕಲು:

(೦) ಅಂತಾ ಯಾವ ಜಾಯಿಂಟ ಸ್ಟಾಕ ಕಂಪೆನಿಯಷಗೆಲಿ ಕ್ಲುಪ್ತಪಡಿಸಲ್ಪಟ್ಟ ಕಂಪೆನಿ ಎಂತ ರಿಜಿಸ್ಟರ್ಮಾಡಲ್ಪಡುವಂತೆ ಯೋಚಿಸೋಣಾಗಿದ್ದರೆ, ಸದರಿ ಫೇರೀಸ್ತುವ ನಕಲಿನೊಂದಿಗೆ ಈ ಕೆಳಗಿನ ತಪಶೀಲುಗಳನ್ನು ತೋರಿಸುವಂತಾ ಒಂದು ತಃಖ್ತೆಯನ್ನು ಕಳುಹಿಸಿ ಕೊಡಬೇಕು (ಯಾವನಂದರೆ):—

ಕಂಪೆನಿಯ ಹೆಸರು ಮಾತ್ರದ ಮೂಲಧನ ಮತ್ತು ಅದು ಭಾಗಿಸಲ್ಪಟ್ಟಿರುವ ಹಿಸ್ಸೆಗಳ ಸಂಖ್ಯೆ;

ತೆಗೆದುಕೊಳ್ಳಲ್ಪಟ್ಟಿರುವ ಹಿಸ್ಸೆಗಳ ಸಂಖ್ಯೆ ಮತ್ತು ಪ್ರತಿಹಿಸ್ಸೆಗಾಗಿ ಪಾವತಿ ಮಾಡಲ್ಪಟ್ಟ ಮೊಬಲಗು;

"ಕ್ಲುಪ್ತಪಡಿಸಲ್ಪಟ್ಟ" ಎಂಬ ಪದದೊಂದಿಗೆ ಕಂಪೆನಿಯ ಹೆಸರು.

ಜಾಮೀನಿನಿಂದ ಕ್ಲುಪ್ತಪಡಿಸಲ್ಪಟ್ಟ ಕಂಪೆನಿಯೆಂತ ರಿಜಿಸ್ಟರ್ಮಾಡಲ್ಪಡಲಿಕ್ಕೆ ಯೋಚಿಸೋಣಾಗಿರುವ ಕಂಪೆನಿಯ ಸಂಗತಿಯಲ್ಲಿ, ಜಾಮೀನಿನ ಮೊಬಲಗನ್ನು ತಿಳಿಯಪಡಿಸುವ ನಿರ್ಣಯದೊಂದಿಗೆ.

ಜಾಯಿಂಟ ಸ್ಟಾಕ ಕಂಪೆನಿ ಅಲ್ಲದೆ ಇರುವ ಕಂಪೆನಿಯಿಂದ ಆಗಬೇಕಾದ ಕರ್ತವ್ಯ.

228. ಜಾಯಿಂಟ ಸ್ಟಾಕ ಕಂಪೆನಿಯಲ್ಲದೆ ಇರುವ ಯಾವ ಕಂಪೆನಿಯನ್ನಾದರೂ ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ಮಾಡಿಸುವದಕ್ಕೆ ಮುಂಚಿತವಾಗಿ, ಆ ಕಂಪೆನಿಯ ಡೈರೆಕ್ಟರುಗಳು ಯಾ ಇತರ ಮಾನೇಜರುಗಳು (ಯಾರಾದರಿದ್ದರೆ) ಅವರ ಹೆಸರುಗಳನ್ನೂ ವಿಲಾಸಗಳನ್ನೂ ಕಸಬುಗಳನ್ನೂ ತೋರಿಸುವಂತ ಒಂದು ಫೇರೀಸ್ತು ಮತ್ತು ಜಾಮೀನಿನಿಂದ ಕ್ಲುಪ್ತಪಡಿಸಲ್ಪಟ್ಟ ಕಂಪೆನಿ ಎಂತ ರಿಜಿಸ್ಟರ್ಮಾಡಲ್ಪಡಲಿಕ್ಕೆ ಯೋಚಿಸೋಣಾಗಿರುವ ಕಂಪೆನಿಯ ಸಂಗತಿಯಲ್ಲಿ, ಜಾಮೀನಿನ ಮೊಬಲಗನ್ನು ತಿಳಿಯಪಡಿಸುವ ನಿರ್ಣಯದೊಂದಿಗೆ, ಸದರಿ ಕಂಪೆನಿಯನ್ನು ಸ್ಥಾಪಿಸಿವಂತಾ ಯಾ ಕ್ರಮಪಡಿಸಿದಂತಾ ಮೈಸೂರ ಗವರ್ನಮೆಂಟಿನವರ ಯಾವದಾದರೂ ರೆಗ್ಯುಲೇಷನಿನ ಡೀಡ ಆಫ ಸೆಟಲಮೆಂಟ ಎಂಬ ಪತ್ರದ, ಪಾಲುಗಾರಿಕೆಯ ಕರಾರಿನ ಅಥವಾ ಇತರ ದಸ್ತಾವೇಜಿನ ನಕಲು ಸಹ ರಿಜಿಸ್ಟ್ರಾರವರಿಗೆ ಒಪ್ಪಿಸಲ್ಪಡತಕ್ಕದ್ದು.

ಹಿಸ್ಸೆಗಳಿಗೆ ಬದಲಾಗಿ ಸ್ಟಾಕ ಮೊಬಲಗನ್ನು ರಿಜಿಸ್ಟರ್ಮಾಡಿಸಲಿಕ್ಕೆ ಹಾಲಿ ಇರತಕ್ಕ ಕಂಪೆನಿಗೆ ಉಂಟಾಗಿರುವ ಅಧಿಕಾರ.

229. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಿಸಲಿಕ್ಕೆ ಅಧಿಕಾರ ಪಡೆದಿರುವ ಯಾವ ಜಾಯಿಂಟ ಸ್ಟಾಕ ಕಂಪೆನಿಯಾದರೂ ಅದರ ಎಲ್ಲಾ ಮೂಲಧನವನ್ನು ಯಾ ಒಂದು ಭಾಗವನ್ನು ಸ್ಟಾಕ ಧನಕ್ಕೆ ಮಾರ್ಪಡಿಸಿ ಇದ್ದರೆ ಅಂತಾ ಕಂಪೆನಿಯು ಹಾಗೆ ಮಾರ್ಪಡಿಸಲ್ಪಟ್ಟ ಮೂಲಧನದ ವಿಷಯದಲ್ಲಿ, ರಿಜಿಸ್ಟ್ರಾರವರಿಗೆ ಹಿಸ್ಸೆಗಳ ಸ್ಟೇಟಮೆಂಟನ್ನು ಒಪ್ಪಿಸುವದಕ್ಕೆ ಬದಲಾಗಿ, ಕಂಪೆನಿಗೆ ಸೇರಿದ ಸ್ಟಾಕ ಧನದ ಮೊಬಲಗಿನ ಮತ್ತು ಸದರಿ ಸ್ಟಾಕಧನವನ್ನು ಪಡೆಕೊಂಡಿರುವ ಮನುಷ್ಯರ ಹೆಸರುಗಳ ಸ್ಟೇಟ್ಮೆಂಟನ್ನು ಅದರಲ್ಲಿ ನಮೂದಿಸಿದ ರಿಜಿಸ್ಟರ್ಮಾಡಿಸಿದ ಸಂಪೂರ್ಣವಾದ ಆರು ದಿವಸಗಳಿಗಿಂತ ಹೆಚ್ಚಾಗದಷ್ಟು ದಿವಸಗಳ ಮುಂಚೆ ಒಂದು ದಿವಸ ರಿಜಿಸ್ಟ್ರಾರವರಿಗೆ ಒಪ್ಪಿಸತಕ್ಕದ್ದು.

ಹಾಲಿ ಇರತಕ್ಕ ಕಂಪೆನಿಗಳ ಹೇಳಿಕೆಗಳನ್ನು ಯಥಾರ್ಥಪಡಿಸೋಣ.

230. ರಿಜಿಸ್ಟ್ರಾರವರಿಗೆ ಒಪ್ಪಿಸಬೇಕೆಂದು ಇದರಿಂದ ಅಪೇಕ್ಷಿಸಲ್ಪಟ್ಟಿರುವ ಮೆಂಬರುಗಳ ವ ಡೈರೆಕ್ಟರುಗಳ ವ ಕಂಪೆನಿಗೆ ಸಂಬಂಧಪಟ್ಟ ಇತರ ತಪ್ಸೀಲುಗಳ ಫೇರೀಸ್ತುಗಳನ್ನು ಅವುಗಳನ್ನು ಯಾ ಆ ಎರಡರ ಪೈಕಿ ಒಂದನ್ನು ಒಪ್ಪಿಸುವಂತಾ ಕಂಪೆನಿಯ ಡೈರೆಕ್ಟರುಗಳು ಅಥವಾ ಕಂಪೆನಿಯ ಇಬ್ಬರು ಇತರ ಮುಖ್ಯ ಆಫೀಸರುಗಳು ಜಸ್ಟಿಸ್ ಆಫ ದಿ ಪೀಸ ಎಂಬ ಅಧಿಕಾರಿಯ ಯಾ ಡಿಸ್ಟ್ರಿಕ್ಟ ಜಡ್ಜಿಯ ಎದುರಿಗೆ ಪ್ರಮಾಣಮಾಡಿ ದೃಢಪಡಿಸಬೇಕು.

ಕಂಪೆನಿಯ ಸ್ವಭಾವವನ್ನು ಕುರಿತು ರಿಜಿಸ್ಟ್ರಾರವರು ಸಾಕ್ಷ್ಯ ಅಪೇಕ್ಷಿಸಬಹುದು.

231. ಇದ್ದುಕೊಂಡು ಇರುವ ಕಂಪೆನಿಯು ಇದಕ್ಕೆ ಪೂರ್ವ ವಿವರಿಸೋಣಾಗಿರುವ ಪ್ರಕಾರ ಜಾಯಿಂಟ ಸ್ಟಾಕ ಕಂಪೆನಿಯೇ ಅಹುದೋ ಅಲ್ಲವೋ ಎಂಬದನ್ನು ತೃಪ್ತಿಕರವಾಗಿ ತಿಳಕೊಳ್ಳತಕ್ಕ ಬಗ್ಯೆ ರಿಜಿಸ್ಟ್ರಾರವರು ತಮಗೆ ಅವಶ್ಯವೆಂದು ತೋರುವ ಸಾಕ್ಷ್ಯವನ್ನು ಅಪೇಕ್ಷಿಸಬಹುದು.

ಕ್ಲುಪ್ತಪಡಿಸಲ್ಪಟ್ಟ ಜವಾಬುದಾರಿಯುಳ್ಳ ಬ್ಯಾಂಕಿಂಗ ಕಂಪೆನಿಯು ರಿಜಿಸ್ಟರ್ಮಾಡಲ್ಪಟ್ಟ ಮೇಲೆ ಅದರ ಗಿರಾಕಿದಾರರಿಗೆ ನೋಟಿಸು ಕೊಡಬೇಕು.

232. ಕ್ಲುಪ್ತಪಡಿಸಲ್ಪಟ್ಟ ಕಂಪೆನಿ ಎಂದು ರಿಜಿಸ್ಟರ್ಮಾಡಲ್ಪಡುವಂತಾ ಈ ರೆಗ್ಯುಲೇಷನ ಮಂಜೂರಾಗುವ ತಾರೀಖಿನಲ್ಲಿ ಇರುವ ಪ್ರತಿಬ್ಯಾಂಕಿಂಗ ಕಂಪೆನಿಯೂ, ಕ್ಲುಪ್ತಪಡಿಸಲ್ಪಟ್ಟ ಜವಾಬುದಾರಿಯೊಂದಿಗೆ ರಿಜಿಸ್ಟ್ರೇಷನ ಸರ್ಟಿಫಿಕೇಟನ್ನು ಪಡೆಯುವದಕ್ಕೆ ಕನಿಷ್ಟಪಕ್ಷ ಮುವ್ವತ್ತು ದಿವಸಗಳು ಮುಂಚಿತವಾಗಿ, ಕಂಪೆನಿಯೊಂದಿಗೆ ಬ್ಯಾಂಕಿಂಗ ಲೆಕ್ಕ ಉಂಟಾಗಿರುವ ಪ್ರತಿ ಮನುಷ್ಯನಿಗೆ

492

ವೆ ಪಾಲುಗಾರಿಕೆಯು ಫರ್ಮ್ಮಿಗೆ ಅದನ್ನು ರಿಜಿಸ್ಟರ್ರ್ಮಾಡಲಿಕ್ಕೆ ಯೋಚಿಸೋಣಾಗಿದೆಯೆಂದು ನೋಟಿಸು ಕೊಡತಕ್ಕದ್ದು.

ಸದರಿ ನೋಟಿಸು ಅಂತಾ ಮನುಷ್ಯನಿಗೆ ಯಾ ಫರ್ಮ್ಮಿಗೆ ಕೊಡುವದರಿಂದಾಗಲಿ ಅವನ ಯಾ ಅವರ ಮೇಲ್ವಿಲಾಸ ಬರೆದು ಟಪ್ಪಾಲು ಆಫೀಸಿನಲ್ಲಿ ಕೊಡುವದರಿಂದಾಗಲಿ ರವಾನಿಸುವದರಿಂದಾಗಲಿ ತಲಪಿಸಲ್ಪಡತಕ್ಕದ್ದು, ಮೇಲ್ವಿಲಾಸ ಬರೆಯುವ ಸಂಗತಿಯಲ್ಲಿ ಅವನ ಯಾ ಅವರ ಮೇಲ್ವಿಲಾಸ ಕಂಪೆನಿಗೆ ಯಾ ಕಂಪೆನಿಯಿಂದ ಕಾಗದ ಲ ಬರೆಯಲ್ಪಟ್ಟಪ್ರಕಾರ ಯಾ ಅನ್ಯಥಾ ತಿಳಿಯಬಂದ ಪ್ರಕಾರ ಬರೆಯತಕ್ಕದ್ದು.

ಕಂಪೆನಿಯವರು ಇದಕ್ಕೆ ಪೂರ್ವ ಅಪೇಕ್ಷಿಸೋಣಾಗಿರುವ ಪ್ರಕಾರ ಯಾವ ನೋಟಿಸನ್ನಾದರೂ ಕೊಡಲಿಕ್ಕೆ ತಪ್ಪುವ ಸಂಗತಿಯಲ್ಲಿ, ಆಗ, ಆ ಕಂಪೆನಿಯವರಿಗೂ ಸದರಿ ನೋಟಿಸು ಕೊಡಲ್ಪಡಬೇಕಾಗಿದ್ದ ವಿಷಯದ ಲೆಕ್ಕದಲ್ಲಿ ತತ್ಕಾಲಕ್ಕೆ ಸಂಬಂಧ ಉಂಟಾಗಿರುವ ಮನುಷ್ಯನಿಗೂ ಯಾ ಮನುಷ್ಯರಿಗೂ ಮಧ್ಯೆ ಮಾತ್ರ ಅಂತಾ ಲೆಕ್ಕದ ವಿಷಯದಲ್ಲಿಯೂ ಹೆಚ್ಚುಕಡಿಮೆಗಳ ವಿಷಯದಲ್ಲಿಯೂ ಹೊರ್ತಾಗಿ ಯಾ ಅನ್ಯಥಾ ಅಲ್ಲದೆ ಸದರಿ ನೋಟಿಸು ಕೊಡಲ್ಪಡುವ ಕಾಲದವರೆಗೆ ಮಾತ್ರ, ಕ್ಲುಪ್ತಪಡಿಸಲ್ಪಟ್ಟ ಜವಾಬುದಾರಿಯ ಬಾಬತು ರಿಜಿಸ್ಟ್ರೇಷನ್ ಸರ್ಟಿಫಿಕೇಟು ಜಾರಿಯಾಗತಕ್ಕದ್ದಾಗಿರಕೂಡದು.

ರುಸುಮುಗಳ ಪಾವತಿ ವಿಷಯದಲ್ಲಿ ಕೆಲವು ಕಂಪೆನಿಗಳ ವಿನಾಯಿತಿ.

233. ಯಾವ ಕಂಪೆನಿಯಾದರೂ ಕ್ಲುಪ್ತಪಡಿಸಲ್ಪಟ್ಟ ಕಂಪೆನಿಯಂತೆ ರಿಜಿಸ್ಟರ್ರ್ಮಾಡಲ್ಪಡದೇ ಇರುವ ಸಂಗತಿಯಲ್ಲೂ ಅಥವಾ ಅದು ಕ್ಲುಪ್ತಪಡಿಸಲ್ಪಟ್ಟ ಕಂಪೆನಿ ಎಂದು ರಿಜಿಸ್ಟರ್ರ್ಮಾಡಲ್ಪಡುವದಕ್ಕಿಂತ ಮುಂಚೆ, ಹಿಸ್ಸೇದಾರರ ಜವಾಬುದಾರಿಯು ಮೈಸೂರ್ ಗವರ್ನಮೆಂಟಿನವರ ಯಾವದಾದರೊಂದು ರೆಗ್ಯುಲೇಷನ್ನಿಂದ ಕ್ಲುಪ್ತಪಡಿಸಲ್ಪಟ್ಟದ್ದ ಸಂಗತಿಯಲ್ಲಿಯೂ, ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ರ್ಮಾಡಿಸುವ ವಿಷಯದಲ್ಲಿ ರುಸುಮುಗಳೇನೂ ತೆಗೆದುಕೊಳ್ಳಲ್ಪಡಕೂಡದು.

ಕಂಪೆನಿ ಹೆಸರು ಬದಲಾಯಿಸಬೇಕು.

234. ಕ್ಲುಪ್ತಪಡಿಸಲ್ಪಟ್ಟ ಜವಾಬುದಾರಿಯೊಂದಿಗೆ ರಿಜಿಸ್ಟರ್ರ್ಮಾಡಿಸಲಿಕ್ಕೆ ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ಅಧಿಕಾರ ಹೊಂದಿರುವ ಯಾವ ಕಂಪೆನಿಯಾದರೂ, ಕ್ಲುಪ್ತ ಪಡಿಸಲ್ಪಟ್ಟ ಜವಾಬ್ದಾರಿಯೊಂದಿಗೆ ರಿಜಿಸ್ಟ್ರೇಷನ್ ಪಡಿಯುತಕ್ಕ ಬಗ್ಗೆ "ಕ್ಲುಪ್ತಪಡಿಸಲ್ಪಟ್ಟ" (ಲಿಮಿಟೆಡ್) ಎಂಬ ಪದವನ್ನು ಶೇರಿಸುವದರಿಂದ ಅದರ ಹೆಸರನ್ನು ಬದಲಾಯಿಸತಕ್ಕದ್ದು.

ಹಾಲಿ ಇರುವ ಕಂಪೆನಿಗಳ ರಿಜಿಸ್ಟ್ರೇಷನ್ ಬಾಬತು ಸರ್ಟಿಫಿಕೇಟು.

235. ರಿಜಿಸ್ಟ್ರೇಷನ್ ವಿಷಯದಲ್ಲಿ ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ಮಾಡಬೇಕಾದ್ದನ್ನೆಲ್ಲಾ ಮಾಡಿದ ತರುವಾಯ, ಮತ್ತು ಇದಕ್ಕೆ ಶೇರಿಸಲ್ಪಟ್ಟಿರುವ ಮೊದಲನೆ ಷೆಡ್ಯೂಲ್ ಪಟ್ಟಿಯ ಬಾಬತು B—ವ—C ಗುರ್ತುಗಳ ಜಂತ್ರಿಗಳ ಪ್ರಕಾರ ರುಸುಮುಗಳೇನಾದರೂ ಕೊಡಬೇಕಾಗಿದ್ದಲ್ಲಿ, ಅವುಗಳನ್ನ ಪಾವತಿ ಮಾಡಿದ ತರುವಾಯ, ರಿಜಿಸ್ಟ್ರೇಷನ್ ಬಗ್ಗೆ ಹಾಗೆ ದರಖಾಸ್ತು ಮಾಡಿಕೊಳ್ಳುವ ಕಂಪೆನಿಯು ಈ ರೆಗ್ಯುಲೇಷನಿಗನುಗುಣವಾಗಿ ಒಗ್ಗಟ್ಟು ಮಾಡಲ್ಪಟ್ಟ ಕಂಪೆನಿಯಂತಲೂ ವ ಕ್ಲುಪ್ತಮಾಡಲ್ಪಟ್ಟ ಕಂಪೆನಿಯ ಸಂಗತಿಯಲ್ಲಿ, ಅದು ಕ್ಲುಪ್ತಪಡಿಸಲ್ಪಟ್ಟದ್ದೆಂತಲೂ, ರಿಜಿಸ್ಟ್ರಾರವರು ಸರ್ಟಿಫೈ ಮಾಡತಕ್ಕದ್ದು ; ಆ ಮೇಲೆ ಸದರಿ ಕಂಪೆನಿಯು ಒಗ್ಗಟ್ಟು ಮಾಡಲ್ಪಟ್ಟದ್ದಾಗತಕ್ಕದ್ದು, ಮತ್ತು ಶಾಶ್ವತವಾದ ಉತ್ತರಾಧಿಕಾರತ್ವವನ್ನೂ ಮುದ್ರಿಗದ ಮೊಹರನ್ನೂ ಉಳ್ಳದ್ದಾಗತಕ್ಕದ್ದು.

ಈ ರೆಗ್ಯುಲೇಷನ್ ಪ್ರಕಾರ ಪಡಿಸಲ್ಪಟ್ಟ ಕಂಪೆನಿ ವಿಷಯದಲ್ಲಿ ಸರ್ಟಿಫಿಕೇಟು ಸಾಕ್ಷ್ಯವಾಗಿರಬೇಕು.

236. ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ರ್ಮಾಡಲ್ಪಟ್ಟ ಯಾವ ಕಂಪೆನಿಯಾದರೂ ಯಾವಾಗಲಾದರೂ ಕೊಡಲ್ಪಟ್ಟ ಒಗ್ಗಟ್ಟಿನ ಬಾಬತು ಸರ್ಟಿಫಿಕೇಟು, ರಿಜಿಸ್ಟ್ರೇಷನ್ ವಿಷಯದಲ್ಲಿ ಈ ರೆಗ್ಯುಲೇಷನ್ ಪ್ರಕಾರ ಇದರಲ್ಲಡಗಿರುವಂತೆ ಮಾಡಬೇಕಾದ್ದೆಲ್ಲಾ ಮಾಡೋಣಾಯಿತೆಂಬದಕ್ಕೂ, ಕಂಪೆನಿಯು ಈ ರೆಗ್ಯುಲೇಷನ್ ಪ್ರಕಾರ ಸಂಗತ್ಯಾನುಗುಣವಾಗಿ ಕ್ಲುಪ್ತಪಡಿಸಲ್ಪಟ್ಟ ಯಾ ಕ್ಲುಪ್ತಪಡಿಸಲ್ಪಡದ ಕಂಪೆನಿಯೆಂತ ರಿಜಿಸ್ಟರ್ರ್ಮಾಡಲ್ಪಡಲಿಕ್ಕೆ ಅಧಿಕಾರ ಹೊಂದಿದೆ ಯೆಂಬದಕ್ಕೂ ಅಖೈರ ಸಾಕ್ಷ್ಯವಾಗಿರತಕ್ಕದ್ದು ; ಮತ್ತು ಸದರಿ ಸರ್ಟಿಫಿಕೇಟಿನಲ್ಲಿ ನಮೂದಿಸಿರುವ ಒಗ್ಗಟ್ಟಿನ ತಾರೀಖು ಈ ರೆಗ್ಯುಲೇಷನ್ ಪ್ರಕಾರ ಕಂಪೆನಿ ಒಗ್ಗಟ್ಟು ಮಾಡಲ್ಪಟ್ಟ ತಾರೀಖೆಂದು ಗ್ರಹಿಸಲ್ಪಡತಕ್ಕದ್ದು.

ಕಂಪೆನಿಗೆ ಸೊತ್ತಿನ ವರ್ಗ.

237. ಈ ರೆಗ್ಯುಲೇಷನ್ ಪ್ರಕಾರ ಕಂಪೆನಿಯು ರಿಜಿಸ್ಟರ್ರ್ಮಾಡಲ್ಪಟ್ಟ ತಾರೀಖಿನಲ್ಲಿ ಅದಕ್ಕೆ ಶೇರಿರಬಹುದಾದ ಯಾ ಅದರಲ್ಲಿಡಲ್ಪಟ್ಟಿರಬಹುದಾದ ಚರ ವ ಸ್ಥಿರ ಸ್ವಭಾವದ್ದಾದ ಸೊತ್ತಿನಲ್ಲಿ ಸೊತ್ತಿಗೆ ವ ಸ್ವತ್ತಿನ ಬಾಬತು ಸಮಸ್ತ ಬಾಧ್ಯತೆಗಳೂ ವ

ಹಕ್ಕುದಾರಿಗಳೊಂದಿಗೆ ಚರ ವ ಸ್ಥಿರ ಸ್ವಭಾವದ್ದಾದಂತಾ ಸಮಸ್ತ ಸೊತ್ತು ಮತ್ತು ಹಂಗುಗಳೂ ವ್ಯಾಜ್ಯಯೋಗ್ಯ ಬಾಧ್ಯತೆಗಳೂ ಶೇರಿ ಸದರಿ ಕಂಪೆನಿಯು ಸಮಸ್ತ ಸ್ಥಿತಿಯ ವ ಸಬಂಧದ ಬಗ್ಯೆ, ಅದು ರಿಜಿಸ್ಟರಾದ ಮೇಲೆ, ಈ ರೆಗ್ಯುಲೇಷನಿನ ಪ್ರಕಾರ ಬಗ್ಗಟ್ಟು ಮಾಡಲ್ಪಟ್ಟಂತಾ ಕಂಪೆನಿಗೆ ಶೇರಿ ಹೋಗತಕ್ಕದ್ದು ವ ಅದರ ಸೊತ್ತಾಗಿ ಇಡಲ್ಪಡತಕ್ಕದ್ದು.

ರಿಜಿಸ್ಟರಾಗುವದಕ್ಕೆ ಮುಂಚಿತವಾಗಿ ಮಾಡಲ್ಪಟ್ಟಿರಬಹುದಾದ ಸಾಲಗಳ ವಿಷಯದಲ್ಲಿ ಈ ರೆಗ್ಯುಲೇಷನಿಗನುಗುಣವಾದ ರಿಜಿಸ್ಟ್ರೇಷ ಯಾವ ಬಾಧಕವನ್ನೂ ಉಂಟು ಮಾಡಕೂಡದು:

238. ಯಾವ ಕಂಪೆನಿಯಾದರೂ ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ಮಾಡಲ್ಪಟ್ಟರೆ ಅದು ಸದರಿ ಕಂಪೆನಿಯು ರಿಜಿಸ್ಟರ್ಮಾಡಲ್ಪಡುವದಕ್ಕೆ ಮುಂಚಿತವಾಗಿ ಅದರಿಂದ, ಅದಕ್ಕೆ, ಅದರೊಂದಿಗೆ ಯಾ ಅದರ ತರಫಿನಲ್ಲಿ ಮಾಡಲ್ಪಟ್ಟ ಸಾಲದ ಯಾ ಋಣದ ಯಾ ಕರಾರಿನ ವಿಷಯದಲ್ಲಿ ಅಮಲ್ದಾರಿ ಮಾಡಲ್ಪಡಲಿಕ್ಕೆ ಅದಕ್ಕೆ ಉಂಟಾಗಿರುವ ಜವಾಬುದಾರಿಗೂ ಅಥವಾ ಅಮಲ್ದಾರಿಮಾಡಲಿಕ್ಕೆ ಅದಕ್ಕೆ ಉಂಟಾಗಿರುವ ಹಕ್ಕುದಾರಿಗೂ ಬಾಧಕವಾಗಕೂಡದು ಯಾ ವಿರೋಧವಾಗಕೂಡದು.

ಹಾಲಿ ಇರತಕ್ಕ ವ್ಯವಹರಣೆಗಳು ಇದ್ದುಕೊಂಡು ಇರಬೇಕು.

239. ಯಾವ ಕಂಪೆನಿಯಾದರೂ ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ಮಾಡಲ್ಪಡತಕ್ಕ ಕಾಲದಲ್ಲಿ ಸದರಿ ಕಂಪೆನಿಯಿಂದ ಯಾ ಪಬ್ಲಿಕ್ ಆಫಿಸರಿಂದ ಯಾ ಅದರ ಯಾವನಾದರೊಬ್ಬ ಮೆಂಬರಿಂದ ಯಾ ಅವರ ಮೇಲೆ ಷುರು ಮಾಡಲ್ಪಟ್ಟಿರಬಹುದಾದಂತಾ ಸಮಸ್ತ ವ್ಯಾಜ್ಯಗಳೂ ಇತರ ನ್ಯಾಯ ಸಂಬಂಧವಾದ ನಡವಳಿಕೆಗಳೂ, ಅಂತಾ ರಿಜಿಸ್ಟ್ರೇಷ ಮಾಡಲ್ಪಡದಿದ್ದರೆ ಹ್ಯಾಗೋ ಹಾಗೆಯೇ ನಡಿಸಲ್ಪಡಬಹುದು. ಆದಾಗ್ಯೂ ಮೇಲ್ಕಂಡಂತೆ ಷುರು ಮಾಡಲ್ಪಟ್ಟ ಯಾವ ವ್ಯಾಜ್ಯದಲ್ಲಾದರು ನಡವಳಿಕೆಯಲ್ಲಾದರೂ ಪಡಕೊಳ್ಳಲ್ಪಟ್ಟಿದ್ದ ಯಾವ ಡಿಕ್ರಿಯಾಗಲಿ ಹುಕುಮಾಗಲಿ ಅಂತಾ ಕಂಪೆನಿಯ ಖಾಸಗಿ ಆಸ್ತಿಗಳ ಮೇಲೆ ಅಮಲ್ದಾರಿ ಇಷ್ಯೂ ಮಾಡಲ್ಪಡಕೂಡದು; ಆದರೆ, ಅಂತಾ ಡಿಕ್ರಿಯು ಯಾ ಹುಕುಮಿನ ಬಾಬತು ಐವಜಿನ ಪಾವತಿ ಬಗ್ಯೆ ಕಂಪೆನಿಯ ಸೊತ್ತೂ ಚರ ಆಸ್ತಿಗಳೂ ಸಾಕಾಗಿಲ್ಲದೇ ಇದ್ದಪಕ್ಷದಲ್ಲಿ, ಸದರಿ ಕಂಪೆನಿಯನ್ನು ಮುಚ್ಚಿಬಿಡತಕ್ಕ ಬಗ್ಯೆ ಒಂದು ಹುಕುಂ ಪಡಕೊಳಬಹುದು.

ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡುವದರ ಫಲ.

240. ಯಾವದಾದರೊಂದು ಕಂಪೆನಿ ಈ ರೆಗ್ಯುಲೇಷ ಪ್ರಕಾರ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ಮಾಡಲ್ಪಟ್ಟರೆ, ಆ ಕಂಪೆನಿಯನ್ನು ಸ್ಥಾಪಿಸಿದಂತಾ ಯಾ ಕ್ರಮಪಡಿಸಿದಂತಾ ಮೈಸೂರ ಗವರ್ನಮೆಂಟಿನವರ ಯಾವದಾದರೊಂದು ರೆಗ್ಯುಲೇಷನಿನಲ್ಲಿ ಯಾ ಡೀಡ್ ಆಫ್ ಸೆಟಲ್‌ಮೆಂಟ್ ಎಂಬ ಪತ್ರದಲ್ಲಿ ಯಾ ಪಾಲುಗಾರಿಕೆಯ ಕರಾರಿನಲ್ಲಿ ಯಾ ಇತರ ದಸ್ತಾವೇಜಿನಲ್ಲಿ ಅಡಗಿರುವ ಸಮಸ್ತ ನಿಬಂಧನೆಗಳೂ, ಮತ್ತು ಜಾಮೀನಿನಿಂದ ಕ್ಲುಪ್ತಪಡಿಸಲ್ಪಟ್ಟ ಕಂಪೆನಿ ಎಂತ ರಿಜಿಸ್ಟರ್ಮಾಡಲ್ಪಟ್ಟ ಕಂಪೆನಿಯ ಸಂಗತಿಯಲ್ಲಿ, ಜಾಮೀನಿನ ಮೊಬಲಗನ್ನು ತಿಳಿಯ ಪಡಿಸುವ ನಿರ್ಣಯವೂ ಸಹ, ಕಂಪೆನಿಯ ಷರತ್ತುಗಳು ವ ನಿಬಂಧನೆಗಳು ಎಂದು ಗ್ರಹಿಸಲ್ಪಡತಕ್ಕದ್ದು. ಇವು ರಿಜಿಸ್ಟರಾದ ಸಮಾಜದ ಯಾದಾಸ್ತಿನಲ್ಲಿ ವ ಸಮಾಜದ ನಿಬಂಧನೆಗಳಲ್ಲಿ ಅಡಗಿ ಇದ್ದರೆ ಹ್ಯಾಗೋ ಹಾಗೆ ಅದೇ ರೀತೀಲಿ ಅದೇ ಸಂಭವಗಳೊಂದಿಗೆ ಭಾವಿಸಲ್ಪಡತಕ್ಕದ್ದು. ಮತ್ತು ಈ ರೆಗ್ಯುಲೇಷನಿನಲ್ಲಿನ ಸಮಸ್ತ ನಿಬಂಧನೆಗಳೂ ಅಂತಾ ಕಂಪೆನಿಗೆ ವ ಮೆಂಬರುಗಳಿಗೆ ಸಹಾಯಕರಿಗೆ ವ ಲೇಣೇದಾರರಿಗೆ, ಅದು ಸಮಸ್ತ ವಿಷಯಗಳಲ್ಲೂ ಈ ರೆಗ್ಯುಲೇಷನಿನ ಪ್ರಕಾರ ಸ್ಥಾಪಿಸಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಅದೇ ರೀತೀಲಿ ಲಾಗುವಾಗತಕ್ಕದ್ದು, ಆದರೆ ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟಿರಬೇಕು (ಯಾವವೆಂದರೆ):—

(a) ಈ ರೆಗ್ಯುಲೇಷನಿನ ಮೊದಲನೇ ಷೆಡ್ಯೂಲ್ ಪಟ್ಟಿಯಲ್ಲಿನ A ಗುರ್ತು ಪಂಕ್ತಿಯೂ, ವಿಶೇಷ ನಿರ್ಣಯದಿಂದ ಸ್ವೀಕರಿಸಲ್ಪಟ್ಟಿಲ್ಲದೇನೇ ಹೋರ್ತು, ಈ ರೆಗ್ಯುಲೇಷನಿನ ಪ್ರಕಾರ ಅದರ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ಮಾಡಲ್ಪಟ್ಟ ಯಾವ ಕಂಪೆನಿಗಾದರೂ ಉಪಯೋಗಿಸಲ್ಪಡಕೂಡದು :

(b) ಹಿಸ್ಸೆಗಳಿಗೆ ನಂಬರು ಹಾಕಲಿಕ್ಕೆ ಸಂಬಂಧಪಟ್ಟಂತಾ ಈ ರೆಗ್ಯುಲೇಷನಿನಲ್ಲಿನ ನಿಬಂಧನೆಗಳು, ನಂಬರು ಹಾಕಲ್ಪಡದಂತಾ ಹಿಸ್ಸೆಗಳನ್ನುಂಟುಮಾಡಿರುವ ಯಾವ ಜಾಯಿಂಟ್ ಸ್ಟಾಕ್ ಕಂಪೆನಿಗಾದರೂ ಉಪಯೋಗಿಸಲ್ಪಡಕೂಡದು:

(c) ಮೈಸೂರ ಗವರ್ನಮೆಂಟಿನ ಯಾವದಾದರೂ ರೆಗ್ಯುಲೇಷನಿನಲ್ಲಿ ಅಡಗಿರುವ ಕಂಪೆನಿಗೆ ಸಂಬಂಧಪಟ್ಟ ಯಾವ ನಿಬಂಧನೆಗಳನ್ನಾದರೂ ಬದಲಾಯಿಸಲಿಕ್ಕೆ ಯಾವ ಕಂಪೆನಿಗೂ ಅಧಿಕಾರವಿರಕೂಡದು:

(d) * * * * *

(e) ಕಂಪೆನಿಯನ್ನು ಮುಚ್ಚಿಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ, ರಿಜಿಸ್ಟ್ರೇಷನಿಗೆ ಮುಂಚಿತವಾಗಿ ಮಾಡಲ್ಪಟ್ಟಂತಾ ಕಂಪೆನಿಯ ಸಾಲಕ್ಕಾಗಿ ಯಾ ಜವಾಬುದಾರಿಗಾಗಿ ಕೊಡಲಿಕ್ಕೆ ಯಾ ಸಹಾಯ ಮಾಡಲಿಕ್ಕೆ ಅರ್ಹನಾಗಿರುವಂತಾ, ಅಥವಾ ಅಂತಾ ಯಾವದಾದರೂ ಸಾಲದ ಯಾ ಜವಾಬುದಾರಿಯ ವಿಷಯದಲ್ಲಿ ಮೆಂಬರುಗಳ ಹಕ್ಕುದಾರಿಗಳನ್ನು ಅವರೊಳಗೆ ವ್ಯವಸ್ಥೆಪಡಿಸತಕ್ಕ ಬಗ್ಯೆ ತಗಲುವ ಯಾವ ಮೊಬಲಗಿನ ಪಾವತಿ ಬಗ್ಯಾದರೂ ಕೊಡಲಿಕ್ಕೆ ಯಾ ಸಹಾಯ ಮಾಡಲಿಕ್ಕೆ ಅರ್ಹನಾಗಿರುವಂತಾ, ಅಥವಾ ಮೇಲ್ಕಂಡಂತಾ ಸಾಲಗಳಿಗೆ ಯಾ ಜವಾಬುದಾರಿಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಕಂಪೆನಿಯನ್ನು ಮುಚ್ಚಿಬಿಡುವದರ ಬಾಬತು ಖರ್ಚುಗಳ ಲಾಗವಡುಗಳ ವ ವೆಚ್ಚಗಳ ಪಾವತಿಗಾಗಿ ಕೊಡಲಿಕ್ಕೆ ಯಾ ಸಹಾಯ ಮಾಡಲಿಕ್ಕೆ ಅರ್ಹನಾಗಿರುವಂತಾ ಪ್ರತಿ ಮನುಷ್ಯನು, ರಿಜಿಸ್ಟ್ರೇಷನಿಗೆ ಮುಂಚಿತವಾಗಿ ಕಂಪೆನಿಯಿಂದ ಮಾಡಲ್ಪಟ್ಟ ಸಾಲಗಳ ವ ಜವಾಬುದಾರಿಗಳ ವಿಷಯದಲ್ಲಿ ಸಹಾಯಕನಾಗಿರತಕ್ಕದ್ದು. ಅಂತಾ ಪ್ರತಿ ಸಹಾಯಕನು ಕಂಪೆನಿಯನ್ನು ಮುಚ್ಚಿಬಿಡುವಾಗ್ಯೆ ಮೇಲ್ಕಂಡಂತೆ ಜವಾಬುದಾರಿಯ ವಿಷಯದಲ್ಲಿ ಅವನಿಂದ ಬರಬೇಕಾದ ಹಣಗಳನ್ನೆಲ್ಲಾ ಕಂಪೆನಿಯ ಅಸ್ಸೆಟ್ಸ್‌ಯೆಂಬ ಆಸ್ತಿಗಳೊಂದಿಗೆ ಶೇರಿಸಲಿಕ್ಕೆ ಅರ್ಹನಾಗಿರತಕ್ಕದ್ದು. ಮೇಲ್ಕಂಡ ಸಹಾಯಕನು ಮೃತಪಟ್ಟರೆ ಯಾ ದಿವಾಳಿಯಾದರೆ, ಮೃತಪಟ್ಟ ಸಹಾಯಕರ ವಾರಸುದಾರರ ಬಾಧ್ಯಸ್ತರ ವ ಉಯಿಲಿನ ಮೂಲಕವಾಗಿ ಆಸ್ತಿ ಪಡಕೊಂಡವರ ವಿಷಯದಲ್ಲೂ, ದಿವಾಳಿಯಾದ ಸಹಾಯಕರ ಹವಾಲ್ತಿದಾರರ ವಿಷಯದಲ್ಲೂ, ಇದರ ಮೇಲೆ ಅಡಗಿ ಇರುವ ನಿಬಂಧನೆಗಳು ಉಪಯೋಗಿಸಲ್ಪಡತಕ್ಕದು ;

(f) ಈ ರೆಗ್ಯುಲೇಷನಿನ ಪ್ರಕಾರ ಕಂಪೆನಿಯು ಮೊದಲು ಸ್ಥಾಪಿಸಲ್ಪಟ್ಟಾಗಲೇ ಸಮಾಜದ ಯಾದಾಸ್ತಿನಲ್ಲಿ ಅಡಗಿರಬಹುದಾದ ಮತ್ತು ಬದಲಾಯಿಸಲಿಕ್ಕೆ ಈ ರೆಗ್ಯುಲೇಷನ್ನಿಂದ ಅಧಿಕಾರ ಕೊಡಲ್ಪಡದಂತಾ ಯಾವ ಡೀಡ್ ಆಫ್ ಸೆಟ್ಲಮೆಂಟಯೆಂಬ ಪತ್ರದಲ್ಲಾಗಲಿ, ಪಾಲುಗಾರಿಕೆಯ ಕರಾರಿನಲ್ಲಾಗಲಿ, ಕಂಪೆನಿಯನ್ನು ಸ್ಥಾಪಿಸಿದಂತಾ ಯಾ ಕ್ರಮಪಡಿಸಿದಂತ ಇತರ ದಸ್ತಾವೇಜಿನಲ್ಲಾಗಲಿ ಅಡಗಿರುವ ಯಾವ ನಿಬಂಧನೆಗಳನ್ನಾದರೂ ಬದಲಾಯಿಸಲಿಕ್ಕೆ ಯಾವ ಕಂಪೆನಿಗಾದರೂ ಇದರಲ್ಲಡಗಿರುವ ಯಾವದೂ ಅಧಿಕಾರ ಕೊಡುವದಿಲ್ಲಾ ;

ಕಂಪೆನಿಯನ್ನು ಸ್ಥಾಪಿಸಿದಂತೆ ಯಾ ಕ್ರಮಪಡಿಸಿದಂತ ಡೀಡ ಆಫ್ ಸೆಟ್ಲಮೆಂಟ ಪತ್ರದಿಂದ, ಪಾಲುಗಾರಿಕೆಯ ಕರಾರಿನಿಂದ, ಯಾ ಇತರ ದಸ್ತಾವೇಜಿನಿಂದ, ಈ ರೆಗ್ಯುಲೇಷನಿನ ಪ್ರಕಾರ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ ಮಾಡಲ್ಪಡುವ ಯಾವ ಕಂಪೆನಿಗಾದರೂ ಕೊಡಲ್ಪಟ್ಟಿರಬಹುದಾದ ಏರ್ಪಾಟನ್ನು ಯಾ ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರಕ್ಕೆ ಇದರಲ್ಲಿ ಅಡಗಿ ಇರುವ ಯಾವದೂ ಬಾಧಕವಾಗಿರುವದಿಲ್ಲ.

ನಡವಳಿಕೆಗಳನ್ನು ಮುಂದಕ್ಕೆ ನಡಿಸದಂತೆ ನಿಲ್ಲಿಸಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರಗಳು.

241. ಕೋರ್ಟಿನವರು, ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ ಮಾಡಲ್ಪಟ್ಟಂತ ಕಂಪೆನಿಯನ್ನು ಮುಚ್ಚಿಬಿಡತಕ್ಕ ಬಗ್ಯೆ ಅರ್ಜಿ ಹಾಜರ್ ಮಾಡಲ್ಪಟ್ಟ ತರುವಾಯ; ಸದರಿ ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಹುಕುಂ ಮಾಡಲ್ಪಡುವದಕ್ಕೆ ಮುಂಚಿತವಾಗಿ ಯಾವಾಗಲಾದರೂ, ಕಂಪೆನಿಯ ಯಾವ ಲೇಣೇದಾರನಿಂದಾದರೂ ಕೇಳಿಕೊಳ್ಳಲ್ಪಟ್ಟ ಮೇಲೆ, ಇದಕ್ಕೆ ತತ್ಪೂರ್ವ ನಿಬಂಧನೆ ಏರ್ಪಡಿಸಲ್ಪಟ್ಟಿರುವ ಪ್ರಕಾರ ಕಂಪೆನಿಯ ಯಾವ ಸಹಾಯಕನ ಮೇಲಾದರೂ ವ ಕಂಪೆನಿಯ ಮೇಲಾದರೂ ನಡೆಯುತ್ತಿರುವ ಯಾವ ವ್ಯಾಜ್ಯವನ್ನಾಗಲಿ ನ್ಯಾಯ ಸಂಬಂಧವಾದ ನಡವಳಿಕೆಗಳನ್ನಾಗಲಿ ಮುಂದಕ್ಕೆ ನಡೆಯುವಂತೆ ಕೋರ್ಟಿನವರಿಗೆ ಯುಕ್ತವಾಗಿ ತೋರುವ ಷರತ್ತುಗಳ ಮೇಲೆ ನಿಲ್ಲಿಸಬಹುದು.

ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಹುಕುಂ.

242. ಈ ರೆಗ್ಯುಲೇಷನಿನ ಈ ಭಾಗಕ್ಕನುಗುಣವಾಗಿ ರಿಜಿಸ್ಟರ್ ಮಾಡಲ್ಪಟ್ಟಂತ ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಹುಕುಂ ಮಾಡೋಣಾದಾಗ್ಯೆ, ಕಂಪೆನಿಯ ಯಾವ ಸಾಲದ ವಿಷಯದಲ್ಲಾಗಲಿ ಕಂಪೆನಿಯ ಯಾವ ಸಹಾಯಕನ ಮೇಲಾದರೂ ಕೋರ್ಟಿನವರ ಅನುಮತಿ ಇಲ್ಲದೆ ಮತ್ತು ಕೋರ್ಟಿನವರು ವಿಧಿಸಬಹುದಾದ ಷರತ್ತುಗಳಿಗೆ ಒಳಪಟ್ಟಲ್ಲದೆ ಯಾವ ವ್ಯಾಜ್ಯವಾಗಲಿ ನ್ಯಾಯಸಂಬಂಧವಾದ ಇತರ ನಡವಳಿಕೆಯಾಗಲಿ

ಷುರು ಮಾಡಲ್ಪಡಕೂಡದು ಮ್ಯಾತರೆಲ್ಪಡಕೂಡದು ಎಂದು ಇದಕ್ಕೆ ಮೇಲೆ ಆಗಿ ಇರುವ ನಿಬಂಧನೆಗಳಗಿಂತಾ
ಹೆಚ್ಚಾಗಿ ಇದರಿಂದ ನಿಬಂಧಿಸೋಣಾಗಿದೆ.

PART VIII.

8ನೇ ಭಾಗ.

APPLICATION OF REGULATION TO UNREGISTERED COMPANIES.

ರಿಜಿಸ್ಟರ ಮಾಡಲ್ಪಡದ ಕಂಪೆನಿಗಳ ವಿಷಯದಲ್ಲಿ ರೆಗ್ಯುಲೇಷನ ಉಪಯೋಗಿಸಲ್ಪಡೋಣ.

ರಿಜಿಸ್ಟರ್ಮಾಡಲ್ಪಡದ ಕಂಪೆನಿಗಳನ್ನು ಮುಚ್ಚಿಬಿಡೋಣ.

243. ಏಳುಮಂದಿ ಮೆಂಬರುಗಳಗಿಂತ ಹೆಚ್ಚು ಜನಗಳನ್ನುಳ್ಳದ್ದಾಗಿ ಈ ರೆಗ್ಯುಲೇಷನಿನ ಪ್ರಕಾರ
ರಿಜಿಸ್ಟರ್ಮಾಡಲ್ಪಡದಂತಾ ಮತ್ತು "ರಿಜಿಸ್ಟರಾಗದ ಕಂಪೆನಿ" ಎಂಬ ಪದ
ದಲ್ಲಿ ಇನ್ನು ಮೇಲೆ ಶೇರಿಸಲ್ಪಡುವಂತ, ಮೈಸೂರ ಗವರ್ನಮೆಂಟಿನವರ
ರೆಗ್ಯುಲೇಷನಿನಿಂದ ಬಗ್ಗಟ್ಟು ಮಾಡಲ್ಪಟ್ಟ ರೈಲವೇ ಕಂಪೆನಿಗಳ
ಹಾ, ಯಾವ ಪಾಲುಗಾರಿಕೆಯಾಗಲಿ, ಸಮಾಜವಾಗಲಿ, ಕಂಪೆನಿಯಾಗಲಿ, ಇನ್ನು ಮೇಲೆ ನಮೂದಿಸೋಣಾಗುವಂ
ತಾದ್ದಕ್ಕೆ ಒಳಪಟ್ಟದ್ದಾಗಿ, ಈ ರೆಗ್ಯುಲೇಷನಿನ ಪ್ರಕಾರ ಮುಚ್ಚಿ ಬಿಡಲ್ಪಡಬಹುದು, ಮತ್ತು ಮುಚ್ಚಿ ಬಿಡೋ
ಣಕ್ಕೆ ಸಂಬಂಧಪಟ್ಟ ಈ ರೆಗ್ಯುಲೇಷನಿನ ಸಮಸ್ತ ನಿಬಂಧನೆಗಳು ಈ ಕೆಳಗಿನ ವಿನಾಯಿತಿಗಳಗೂ ಹೆಚ್ಚಾಗಿ
ಶೇರಿಸಲ್ಪಟ್ಟವುಗಳಗೂ ಒಳಪಟ್ಟವುಗಳಾಗಿ ಅಂತಾ ಕಂಪೆನಿಗೆ ಉಪಯೋಗಿಸಲ್ಪಡತಕ್ಕದ್ದು:—

(1) ಒಂದು ರಿಜಿಸ್ಟರಾಗದ ಕಂಪೆನಿಯನ್ನು ಮುಚ್ಚಿಬಿಡತಕ್ಕ ವಿಷಯದಲ್ಲಿ ಯಾವ ಕೋರ್ಟನವರಿಗೆ
ಅಧಿಕಾರವಿದೆ ಎಂಬದನ್ನು ತೀರ್ಮಾನಿಸತಕ್ಕಬಗ್ಗೆ, ಅದು ಅದರ ಕೆಲಸ ನಡಿಯುವ ಮುಖ್ಯ
ಸ್ಥಳ ಮೈಸೂರ ಶೀಮೆಯಲ್ಲಿ ಎಲ್ಲಿದೆಯೋ ಆ ಪ್ರಾಂತ್ಯದಲ್ಲಿ ರಿಜಿಸ್ಟರ್ಮಾಡಲ್ಪಡುವದಾಗಿ ಗ್ರಹಿಸ
ಲ್ಪಡತಕ್ಕದ್ದು, ಅಥವಾ, ಅದರ ಕೆಲಸ ನಡೆಯುವ ಮುಖ್ಯಸ್ಥಳ ಮೈಸೂರ ಶೀಮೆಯಲ್ಲಿ ಒಂದ
ಕ್ಕಿಂತಾ ಹೆಚ್ಚು ಕಡೆಗಳಲ್ಲಿದ್ದಲ್ಲಿ, ಆಗ ಅದರ ಕೆಲಸ ನಡೆಯುವ ಮುಖ್ಯ ಸ್ಥಳವಿರು[illegible]
ಸೂರ ಶೀಮೆಯ ಪ್ರತಿ ಕಡೆಯಲ್ಲೂ ರಿಜಿಸ್ಟರ್ಮಾಡಲ್ಪಡುವದಾಗಿ ಗ್ರಹಿಸಲ್ಪಡತಕ್ಕದ್ದು.
ತ್ತು, ರಿಜಿಸ್ಟರಾಗದ ಕಂಪೆನಿಯನ್ನು ಮುಚ್ಚಿಬಿಡಬೇಕಾದ ಸಮಸ್ತ ಕಾರ್ಯಗಳಬಗ್ಗೆ, ಅಂತಾ
ಕಂಪೆನಿಯು ಕೆಲಸ ನಡಿಯುವ ಮುಖ್ಯಸ್ಥಳ, ಅಥವಾ (ಅದರ ಕೆಲಸ ನಡಿಯುವ ಮುಖ್ಯಸ್ಥಳ
ಮೈಸೂರ ಶೀಮೆಯಲ್ಲಿ ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿದ್ದಲ್ಲಿ) ಮೈಸೂರ ಶೀಮೆಯಲ್ಲಿ ಯಾವ
ಕಡೆಯಲ್ಲಿ ಕೆಲಸ ನಡಿಯುವಮುಖ್ಯ ಸ್ಥಳದಲ್ಲಿ ನಡವಳಿಕೆಗಳು ದಾಖಲಾದವೋ ಆ ಸ್ಥಳ ಸದ
ರಿ ಕಂಪೆನಿಯ ರಿಜಿಸ್ಟರ್ಮಾಡಲ್ಪಟ್ಟ ಆಫೀಸು ಎಂದು ಗ್ರಹಿಸಲ್ಪಡತಕ್ಕದ್ದು:

(2) ರಿಜಿಸ್ಟರಾಗದ ಯಾವ ಕಂಪೆನಿಯಾಗಲಿ ಮನಃಪೂರ್ವಕವಾಗಿ ಯಾ ಕೋರ್ಟನವರ ನಿಗೆ ವಾನಿಗೆ
ಒಳಪಟ್ಟು ಈ ರೆಗ್ಯುಲೇಷನಿನ ಪ್ರಕಾರ ಮುಚ್ಚಿಬಿಡಲ್ಪಡಕೂಡದು ;

(3) ರಿಜಿಸ್ಟರಾಗದ ಕಂಪೆನಿ ಈ ಕೆಳಗಿನ ಸಂದರ್ಭಗಳಲ್ಲಿ ಮುಚ್ಚಿಬಿಡಲ್ಪಡಬಹುದು (ಯಾವ
ವೆಂದರೆ;:—

(a) ಕಂಪೆನಿ ಅಗಲಿಸಲ್ಪಟ್ಟಾಗ, ಅಥವಾ ಕೆಲಸ ನಡಿಸುವಿಕೆಯನ್ನು ಮೋಕೂಫ್ ಮಾಡಿದಾಗ, ಅಥವಾ
ಅದರ ಆಡಳಿತವನ್ನು ಮುಗಿಸಿಬಿಡತಕ್ಕಬಗ್ಗೆ ಮಾತ್ರ ಕೆಲಸ ನಡಿಸುತ್ತಿರುವಾಗ ;

(b) ಸಾಲಗಳನ್ನು ತೀರಿಸಲಿಕ್ಕೆ ಕಂಪೆನಿಗೆ ಸಾಮರ್ಥ್ಯವಿಲ್ಲದೆ ಹೋದಾಗ ;

(c) ಕಂಪೆನಿಯು ಮುಚ್ಚಿಬಿಡಲ್ಪಡತಕ್ಕದ್ದು ನ್ಯಾಯ ವ ವಿಹಿತವೆಂದು ಕೋರ್ಟನವರು ಅಭಿಪ್ರಾಯ
ಪಟ್ಟಾಗ ;

(4) ಈ ರೆಗ್ಯುಲೇಷನಿನ ಕಾರ್ಯಗಳ ಬಗ್ಗೆ, ರಿಜಿಸ್ಟರಾಗದ ಕಂಪೆನಿಯು, ಅದರ ಸಾಲಗಳನ್ನು ತೀರಿಸ
ಲಿಕ್ಕೆ ಸಾಮರ್ಥ್ಯವಿಲ್ಲದ್ದು ಯೆಂದು ಗ್ರಹಿಸಲ್ಪಡತಕ್ಕದ್ದು.

(a) ಕಂಪೆನಿಯವರು ಹವಾಲ್ತಿಯಿಂದ ಯಾ ಅನ್ಯಥಾ ಒಬ್ಬ ಲೇಣೇದಾರನಿಗೆ ಐನೂರು ರೂಪಾಯಿಗಳಗಿಂ
ತ ಮೇಲ್ಪಟ್ಟ ಒಂದು ಮೊಬಲಗನ್ನು ಕೊಡಬೇಕಾಗಿದ್ದಲ್ಲಿ, ಆ ಲೇಣೇದಾರನು ಹಾಗೆ ಬಾಕಿ
ಯಾಗಿರುವ ಹಣವನ್ನು ಸದರಿ ಕಂಪೆನಿಯವರು ಕೊಟ್ಟುಬಿಡಬೇಕೆಂದು ತನ್ನ ದಸ್ಕತ್ತು ನಿಶಿ ಒಂದು

ತಗಾದೆ ಚೀಟು ಬರೆದು, ಅದನ್ನು ಕಂಪೆನಿಯು ಕೆಲಸ ನಡಿಯುವ ಮುಖ್ಯ ಸ್ಥಳದಲ್ಲಿ ಇಡುವದ್ದರಿಂದ ಅಥವಾ ಕಂಪೆನಿಯ ಸೆಕ್ರೆಟರಿಗೆ ಯಾ ಡೈರೆಕ್ಟರಿಗೆ ಯಾ ಮುಖ್ಯ ಆಫೀಸರಿಗೆ ಕೊಡುವದ್ದರಿಂದ, ಅಥವಾ ಕೋರ್ಟನವರು ಸಮ್ಮತಿಸಬಹುದಾದ ಯಾ ಹುಕುಂ ಮಾಡಬಹುದಾದ ಇತರ ರೀತೀಲಿ ಅನ್ಯಥಾ ಸಾದರ್ಮಾಡುವದ್ದರಿಂದ, ಕಂಪೆನಿಯವರಿಗೆ ಸಾದರ್ಮಾಡಿದ ಮೇಲೆ, ಸದರಿ ತಗಾದೆ ಚೀಟು ಸಾದರ್ಮಾಡಲ್ಪಟ್ಟ ಮೂರುವಾರಗಳ ಕಾಲದೊಳಗಾಗಿ ಕಂಪೆನಿಯವರು ಸದರಿ ಮೊಬಲಗನ್ನು ಪಾವತಿ ಮಾಡಲಿಕ್ಕೆ ಅಥವಾ ಲೇಣೇದಾರನಿಗೆ ಆ ಬಗ್ಗೆ ತೃಪ್ತಿಕರವಾಗಿ ಜಾಮೀನ ಕೊಡಲಿಕ್ಕೆ ಯಾ ರಾಜೀಮಾಡಿಕೊಳ್ಳಲಿಕ್ಕೆ ಅಶ್ರದ್ಧೆ ಮಾಡಿದರೆ, ಆಗ;

(b) ಕಂಪೆನಿಯಿಂದ ಯಾ ಕಂಪೆನಿಗೆ ಮೆಂಬರಾಗಿರುವ ಸಬಬ ಒಬ್ಬನಿಂದ ಬರಬೇಕಾದ ಯಾ ಬರಬೇಕಾದ್ದಾಗಿ ದಾವೆಮಾಡಲ್ಪಟ್ಟ ಯಾವ ಸಾಲದ ಬಗ್ಗೆ ಆಗಲಿ ಯಾ ತಗಾದೆ ಬಗ್ಗೆ ಆಗಲಿ ಕಂಪೆನಿಯ ಯಾವ ಮೆಂಬರಿನ ಮೇಲಾದಾಗ್ಯೂ ಯಾವ ವ್ಯಾಜ್ಯವಾಗಲಿ ಇತರ ನಡವಳಿತೆಯಾಗಲಿ ದಾಖಲ್ಮಾಡಲ್ಪಟ್ಟಲ್ಲಿ, ಸದರಿ ಕಂಪೆನಿಯ ಮೇಲೆ ಹಾಗೆ ದಾಖಲ್ಮಾಡೋಣಾದ ವ್ಯಾಜ್ಯದ ಯಾ ಇತರ ನ್ಯಾಯ ಸಂಬಂಧವಾದ ನಡವಳಿತೆಯ ಬಾಬತ್ತು ಲಿಖಿತ ರೂಪವಾದ ನೋಟೀಸನ್ನು ಕಂಪೆನಿಯ ಕೆಲಸ ನಡೆಯುವ ಮುಖ್ಯಸ್ಥಳದಲ್ಲಿ ಇಡುವದ್ದರಿಂದ, ಅಥವಾ ಕಂಪೆನಿಯ ಸೆಕ್ರೆಟರಿಗೆ ಯಾ ಡೈರೆಕ್ಟರಿಗೆ ಯಾ ಮೇನೇಜರಿಗೆ ಯಾ ಮುಖ್ಯ ಆಫೀಸರಿಗೆ ಕೊಡುವದ್ದರಿಂದ, ಅಥವಾ ಕೋರ್ಟನವರು ಸಮ್ಮತಿಸಬಹುದಾದ ಯಾ ಹುಕುಂ ಮಾಡಬಹುದಾದ ಇತರ ರೀತೀಲಿ ಅನ್ಯಥಾ ಸಾದರ್ಮಾಡುವದ್ದರಿಂದ ಕಂಪೆನಿಯವರಿಗೆ ಸಾದರ್ಮಾಡಿದ ಮೇಲೆ, ಸದರಿ ನೋಟೀಸು ಸಾದರ್ಮಾಡಲ್ಪಟ್ಟ ಹತ್ತು ದಿವಸಗಳೊಳಗಾಗಿ ಕಂಪೆನಿಯವರು, ಸದರಿ ಸಾಲವನ್ನು ಯಾ ತಗಾದೆ ಮೊಬಲಗನ್ನು ಪಾವತಿ ಮಾಡದೆ ಯಾ ಆ ಬಗ್ಗೆ ಜಾಮೀನ ಕೊಡದೆ ಯಾ ರಾಜೀ ಮಾಡಿಕೊಳ್ಳದೆ ಹೋದರೆ, ಅಥವಾ ಸದರಿ ವ್ಯಾಜ್ಯವನ್ನು ಯಾ ಇತರ ನ್ಯಾಯ ಸಂಬಂಧವಾದ ನಡವಳಿತೆಯನ್ನು ನಿಲ್ಲಿಸಿ ಇಡುವಂತೆ ಮಾಡದೆ ಹೋದರೆ, ಅಥವಾ ಅಂತಾ ವ್ಯಾಜ್ಯಕ್ಕಾಗಿ ಯಾ ಇತರ ನ್ಯಾಯ ಸಂಬಂಧವಾದ ನಡವಳಿತೆಗಾಗಿ ಮತ್ತು ಪ್ರತಿವಾದಿಗೆ ಆ ಬಗ್ಗೆ ತಗಲಿರಬಹುದಾದ ಸಮಸ್ತ ಖರ್ಚುಗಳಿಗಾಗಿ ಮುಟ್ಟುವಳಿಗಳಿಗಾಗಿ ವ ಲಾಗುವಹುಗಳಿಗಾಗಿ ಅವನಿಗೆ ನ್ಯಾಯವಾಗಿ ಸಮರ್ಪಕವಾಗುವಂತೆ ಲುಕ್ಸಾನು ಕಟ್ಟಿಕೊಡದೆ ಹೋದರೆ, ಆಗ;

(c) ಒಬ್ಬ ಲೇಣೇದಾರನಿಂದ ಕಂಪೆನಿಯ ಮೇಲೆ ಯಾ ಅದರ ಯಾವನಾದರೊಬ್ಬ ಮೆಂಬರಿನ ಮೇಲೆ ಯಾ ಕಂಪೆನಿಯ ತರಫಿನಲ್ಲಿ ಹೆಸರು ಮಾತ್ರದ ಪ್ರತಿವಾದಿಯಾಗಿ ವ್ಯಾಜ್ಯ ಹಾಕಲ್ಪಡಲಿಕ್ಕೆ ಅಧಿಕಾರ ಹೊಂದಿರುವಂತಾ ಮನುಷ್ಯನ ಮೇಲೆ ದಾಖಲ್ಮಾಡೋಣಾದ ನಡವಳಿತೆಯಲ್ಲಿ ಸದರಿ ಲೇಣೇದಾರನ ಪಕ್ಷವಾಗಿ ಕೋರ್ಟನಲ್ಲಿ ಪಡಕೊಳ್ಳೋಣಾದ ಡಿಕ್ರಿಯ ಯಾ ಹುಕುಮಿನ ಬಾಬತ್ತು ಅಮಲ್ಜಾರಿ ಹುಕುಂ ಯಾ ಇತರ ಪ್ರೊಸೆಸ್ಸು ಪಾವತಿ ಯಾಗದೆ ವಾಪಸು ಮಾಡಲ್ಪಟ್ಟರೆ, ಆಗ;

(d) ಕಂಪೆನಿಯು ಅದರ ಸಾಲಗಳನ್ನು ತೀರಿಸಲಿಕ್ಕೆ ಶಕ್ತಿಯಿಲ್ಲದ್ದಾಗಿವೆ ಎಂದು ಕೋರ್ಟನವರಿಗೆ ತೃಪ್ತಿಕರವಾಗಿ ಅನ್ಯಥಾ ರುಜುಮಾಡಿಕೊಡಲ್ಪಟ್ಟರೆ; ಆಗ

ಕಂಪೆನಿಯನ್ನು ಮುಚ್ಚಿ ಬಿಡುವ ವಿಷಯದಲ್ಲಿ ಯಾರು ಸಹಾಯಕರೆಂದು ಗ್ರಹಿಸಲ್ಪಡಬೇಕು.

244. ರಿಜಿಸ್ಟರಾಗದ ಕಂಪೆನಿಯನ್ನು ಮುಚ್ಚಿ ಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ, ಕಂಪೆನಿಯ ಸಾಲಕ್ಕಾಗಿ ಯಾ ಜವಾಬುದಾರಿಗಾಗಿ ಪಾವತಿಯಾಗಿ ಕೊಡಲಿಕ್ಕೆ ಯಾ ಸಹಾಯ ಮಾಡಲಿಕ್ಕೆ ಅರ್ಹನಾಗಿರುವಂತ ಅಥವಾ ಮೆಂಬರುಗಳ ಹಕ್ಕುದಾರಿಗಳನ್ನು ಅವರೊಳಗೆ ವ್ಯವಸ್ಥೆ ಪಡಿಸತಕ್ಕ ಬಗ್ಗೆ ತಗಲುವ ಯಾವ ಮೊಬಲಗಿನ ಪಾವತಿ ಬಗ್ಗ್ಯಾದರೂ ಕೊಡಲಿಕ್ಕೆ ಯಾ ಸಹಾಯ ಮಾಡಲಿಕ್ಕೆ ಅರ್ಹನಾಗಿರುವಂತ ಅಥವಾ ಕಂಪೆನಿಯನ್ನು ಮುಚ್ಚಿ ಬಿಡುವದರಬಾಬತು ಖರ್ಚುಗಳ ಲಾಗುವಹುಗಳ ವೆಚ್ಚಗಳ ಪಾವತಿಗಾಗಿ ಕೊಡಲಿಕ್ಕೆಯಾ ಸಹಾಯ ಮಾಡಲಿಕ್ಕೆ ಅರ್ಹನಾಗಿರುವಂತ ಪ್ರತಿ ಮನುಷ್ಯನು ಸಹಾಯಕನೆಂದು ಗ್ರಹಿಸಲ್ಪಡತಕ್ಕದ್ದು.

ಅಂತಾ ಪ್ರತಿ ಸಹಾಯಕನು ಕಂಪೆನಿಯನ್ನು ಮುಚ್ಚಿ ಬಿಡುವಾಗ್ಯೆ ಮೇಲ್ಕಂಡಂತೆ ಜವಾಬುದಾರಿಯ ವಿಷಯದಲ್ಲಿ ಅವನಿಂದ ಬರಬೇಕಾದ ಹಣಗಳನ್ನೆಲ್ಲಾ ಕಂಪೆನಿಯ ಅಸ್ಸೆಟ್ಸ್ಎಂಬ ಸಾಲಾರ್ಹವಾದ ಆಸ್ತಿಯೊಂದಿಗೆ ಸೇರಿಸಲಿಕ್ಕೆ ಅರ್ಹನಾಗಿರತಕ್ಕದ್ದು.

ಮೇಲ್ಕಂಡ ಸಹಾಯಕನು ಮೃತಪಟ್ಟರೆ ಯಾ ದಿವಾಳಿಯಾದರೆ, ಮೃತಪಟ್ಟಂತೆ ಸಹಾಯಕನ ವಾರಸುದಾರರ ಬಾಧ್ಯಸ್ತರ ವ ಉಯಿಲ್ ಮುಖಾಂತ್ರ ಆಸ್ತಿ ಪಡಕೊಂಡಂತವರ ವಿಷಯದಲ್ಲೂ, ದಿವಾಳಿಯಾದ ಸಹಾಯಕನ ಹವಾಲ್ತಿದಾರರ ಸಂಗತಿಯಲ್ಲೂ, ಇದರ ಮೇಲೆ ಅಡಗಿರುವ ನಿಬಂಧನೆಗಳು ಉಪಯೋಗಿಸಲ್ಪಡತಕ್ಕದ್ದು.

ನಡವಳಿಕೆಗಳನ್ನು ಮುಂದಕ್ಕೆ ನಡಿಸದಂತೆ ನಿಲ್ಲಿಸಲಿಕ್ಕೆ ಕೋರ್ಟಿನವರಿಗೆ ಉಂಟಾಗಿರುವ ಅಧಿಕಾರ.

245. ಕೋರ್ಟಿನವರು, ರಿಜಿಸ್ಟರಾಗದ ಕಂಪೆನಿಯನ್ನು ಮುಚ್ಚಿ ಬಿಡತಕ್ಕ ಬಗ್ಯೆ ಅರ್ಜಿ ಹಾಜರ್ಮಾಡಲ್ಪಟ್ಟ ತರುವಾಯ, ಸದರಿ ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ ಮಾಡಲ್ಪಡುವದಕ್ಕೆ ಮುಂಚಿತವಾಗಿ ಯಾವಾಗಲಾದರೂ, ಕಂಪೆನಿಯ ಯಾವ ಲೇಣೇದಾರನಿಂದಾದರೂ ಕೇಳಿಕೊಳ್ಳಲ್ಪಟ್ಟಮೇಲೆ, ಇದಕ್ಕೆ ಪೂರ್ವ ನಿಬಂಧನೆ ಏರ್ಪಾಡಿಸಲ್ಪಟ್ಟಿರುವ ಪ್ರಕಾರ ಕಂಪೆನಿಯ ಯಾವ ಸಹಾಯಕನ ಮೇಲಾದರೂ ಯಾ ಕಂಪೆನಿಯ ಮೇಲಾದರೂ ನಡೆಯುತ್ತಿರುವ ಯಾ ವ್ಯಾಜ್ಯವನ್ನಾಗಲಿ ನಡವಳಿಕೆಗಳನ್ನಾಗಲಿ ಮುಂದಕ್ಕೆ ನಡೆಯದಂತೆ ಕೋರ್ಟಿನವರಿಗೆ ಯುಕ್ತವಾಗಿ ತೋರುವ ಷರತ್ತುಗಳ ಮೇಲೆ ನಿಲ್ಲಿಸಬಹುದು.

ಕಂಪೆನಿಯನ್ನು ಮುಚ್ಚಿ ಬಿಡುವದರ ಬಾಬತು ಹುಕುಮಿನ ಫಲ.

246. ರಿಜಿಸ್ಟರಾಗದ ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ ಮಾಡೋಣಾದಾಗ್ಯೆ, ಕಂಪೆನಿಯು ಯಾವ ಸಾಲದ ವಿಷಯದಲ್ಲಾಗಲಿ ಕಂಪೆನಿಯ ಯಾವ ಸಹಾಯಕನ ಮೇಲಾದರೂ, ಕೋರ್ಟಿನವರ ಅನುಮತಿಯಿಲ್ಲದೆ ಮತ್ತು ಕೋರ್ಟಿನವರು ವಿಧಿಸಬಹುದಾದ ಷರತ್ತುಗಳಿಗೆ ಒಳಪಟ್ಟಲ್ಲದೆ, ಯಾವ ವ್ಯಾಜ್ಯವಾಗಲಿ ಷುರು ಮಾಡಲ್ಪಡಕೂಡದು ಯಾ ತರಲ್ಪಡಕ್ಕೂಡದು ಎಂದು ಈ ರೆಗ್ಯುಲೇಷನಿನ ಪ್ರಕಾರ ಸ್ಥಾಪಿಸಲ್ಪಟ್ಟ ಕಂಪೆನಿಗಳ ಸಂಗತಿಯಲ್ಲಿ ಇದರ ಮೇಲೆ ಅಡಗಿರುವ ನಿಬಂಧನೆಗಳಿಗಿಂತ ಹೆಚ್ಚಾಗಿ ಇದರಿಂದ ನಿಬಂಧಿಸೋಣಾಗಿದೆ.

ರಿಜಿಸ್ಟರ್ಮಾಡಲ್ಪಡದ ಕಂಪೆನಿಯ ವಿಷಯದಲ್ಲಿ ನಿಬಂಧನೆ.

247. ಯಾವ ರಿಜಿಸ್ಟರಾಗದ ಕಂಪೆನಿಯಾದರೂ ಒಂದು ಮುದ್ರೆಗದ ಹೆಸರಿನಲ್ಲಿ ವ್ಯಾಜ್ಯ ಹಾಕಲಿಕ್ಕೆ ಯಾ ವ್ಯಾಜ್ಯ ಹಾಕಲ್ಪಡಲಿಕ್ಕೆ ಅಧಿಕಾರವಿಲ್ಲದ್ದಾಗಿ ಇದ್ದರೆ, ಅಥವಾ ಇನ್ನಾವ ಸಬಬಿನಿಂದಾದರೂ ಯುಕ್ತವಾಗಿ ತೋರಿದರೆ, ಕೋರ್ಟಿನವರು, ಸದರಿ ಕಂಪೆನಿಯನ್ನು ಮುಚ್ಚಿಬಿಡಲಿಕ್ಕೆ ಮಾಡಿದ ಹುಕುಮಿನ ಮೂಲಕವಾಗಿಯಾಗಲಿ, ಆ ತರುವಾಯ ಕೊಡೋಣಾದ ಮತ್ತೊಂದು ಹುಕುಮಿನ ಮೂಲಕವಾಗಿಯಾಗಲಿ, ಕಂಪೆನಿಗೆ ಸೇರಿರಬಹುದಾದ ಯಾ ಅದರಲ್ಲಿಡಲ್ಪಟ್ಟಿರಬಹುದಾದ ಅಥವಾ ಕಂಪೆನಿಯ ತರಫಿನಲ್ಲಿ ಯಾ ಅದಕ್ಕೋಸ್ಕರ ಯಾವ ಮನುಷ್ಯನಿಗಾಗಲಿ ಮನುಷ್ಯರಿಂದಾಗಲಿ ಸೇರಿರಬಹುದಾದ ಯಾ ಇಡಲ್ಪಟ್ಟಿರಬಹುದಾದ ಚರ ವ ಸ್ಥಿರ ಸ್ವಭಾವದ್ದಾದ ಸೊತ್ತಿನಲ್ಲಿ ಸೊತ್ತಿಗೆ ವ ಸೊತ್ತಿನಬಾಬತು ಸಮಸ್ತ ಬಾಧ್ಯತೆಗಳು ದಾವೆಗಳು ವ ಹಕ್ಕುದಾರಿಗಳೊಂದಿಗೆ ಮತ್ತು ವ್ಯಾಜ್ಯ ಯೋಗ್ಯವಾದ ಬಾಧ್ಯತೆಗಳೊಂದಿಗೆ ಚರ ವ ಸ್ಥಿರ ಸ್ವಭಾವದ್ದಾದ ಸಮಸ್ತ ಸೊತ್ತಾಗಲಿ ಅಂತಾ ಸೊತ್ತಿನ ಯಾವ ಭಾಗವಾಗಲಿ ಅಫಿಷಿಯಲ್ ಲಿಕ್ವಿಡೇಟರಿನ ಯಾ ಅಫಿಷಿಯಲ್ ಲಿಕ್ವಿಡೇಟರ ವಳ್ಳಿ ಅವನ ಯಾ ಅವರ ಅಫಿಷಿಯಲ್ ಹೆಸರಿನಲ್ಲಿ ಯಾ ಹೆಸರುಗಳಲ್ಲಿ ಇಡಲ್ಪಡತಕ್ಕದ್ದು ಯೆಂದು ಆಜ್ಞಾಪಿಸಬಹುದು. ತರುವಾಯ ಸದರಿ ಹುಕುಮಿನಲ್ಲಿ ನಮೂದಿಸಲ್ಪಟ್ಟಿರಬಹುದಾದ ಸೊತ್ತು ಯಾ ಸೊತ್ತಿನ ಭಾಗ ಅದೇ ಪ್ರಕಾರ ಇಡಲ್ಪಡತಕ್ಕದ್ದು, ಮತ್ತು ಅಫಿಷಿಯಲ್ ಲಿಕ್ವಿಡೇಟರು ಯಾ ಅಫಿಷಿಯಲ್ ಲಿಕ್ವಿಡೇಟರುಗಳು, ಅವನ ಯಾ ಅವರ ಅಫಿಷಿಯಲ್ ಹೆಸರಿನಲ್ಲಿ ಯಾ ಹೆಸರುಗಳಲ್ಲಿ ಯಾಗಲಿ ಅಥವಾ ಕೋರ್ಟಿನವರು ಹುಕುಂ ಮಾಡುವ ಪ್ರಕಾರ, ಈಡುಕಟ್ಟಿದ ಮೇಲೆ ಅವರು ಹುಕುಂ ಮಾಡುವ ಹೆಸರಿನಲ್ಲಿ ಯಾ ಹೆಸರುಗಳಲ್ಲಿ ಯಾಗಲಿ ಅವನಲ್ಲಿ ಯಾ ಅವರಲ್ಲಿ ಇಡೋಣಾದಂತ ಸೊತ್ತಿಗೆ ಸಂಬಂಧಪಟ್ಟ ಯಾವ ವ್ಯಾಜ್ಯಗಳನ್ನಾದರೂ ಇತರ ನ್ಯಾಯ ಸಂಬಂಧವಾದ ನಡವಳಿಕೆಗಳನ್ನಾದರೂ ತರಬಹುದು, ಯಾ ಪ್ರತಿವಾದ ಮಾಡಬಹುದು. ಅಥವಾ ಕಂಪೆನಿಯನ್ನು ಸಂಪೂರ್ಣವಾಗಿ ಮುಚ್ಚಿಬಿಡತಕ್ಕ ವ ಅದರ ಸೊತ್ತನ್ನು ವಸೂಲ್ಮಾಡತಕ್ಕ ಕಾರ್ಯಗಳ ಬಗ್ಯೆ ಅವಶ್ಯವಾಗಿ ತರಲ್ಪಡಬೇಕಾದ ಯಾ ಪ್ರತಿವಾದ ಮಾಡಲ್ಪಡಬೇಕಾದ ಯಾವ ವ್ಯಾಜ್ಯಗಳನ್ನಾದರೂ ಇತರ ನ್ಯಾಯ ಸಂಬಂಧವಾದ ನಡವಳಿಕೆಗಳನ್ನಾದರೂ ತರಬಹುದು ಯಾ ಪ್ರತಿವಾದ ಮಾಡಬಹುದು.

ಈ ರೆಗ್ಯುಲೇಷನಿನ ಈ ಭಾಗದ ನಿಬಂಧನೆಗಳು ಅಧಿಕವಾಗಿ ಸೇರಿಸಲ್ಪಟ್ಟವುಗಳು.

248. ರಿಜಿಸ್ಟರಾಗದ ಕಂಪೆನಿಗಳ ವಿಷಯದಲ್ಲಿ ಈ ರೆಗ್ಯುಲೇಷನಿನ ಈ ಭಾಗದಿಂದ ಮಾಡೋಣಾದ ನಿಬಂಧನೆಗಳು, ಕಂಪೆನಿಗಳು ಕೋರ್ಟಿನವರಿಂದ ಮುಚ್ಚಲ್ಪಡುವ ವಿಷಯದಲ್ಲಿ ಇದರಮೇಲೆ ಅಡಗಿ ಇರುವ ನಿಬಂಧನೆಗಳಿಗಿಂತ ಹೆಚ್ಚಾಗಿ ಮಾಡೋಣಾದಂತೆ ಗ್ರಹಿಸಲ್ಪಡತಕ್ಕದ್ದೇ ಹೊರ್ತು, ಅವುಗಳನ್ನು ನಿರ್ಬಂಧಪಡಿಸಲಿಕ್ಕೆ ಮಾಡೋಣಾದ್ದಾಗಿ ಗ್ರಹಿಸಲ್ಪಡಕೂಡದು.

ಕೋರ್ಟಿನವರು ಯಾ ಅಫಿಷಿಯಲ್ ಲಿಕ್ವಿಡೇಟರು, ಈ ರೆಗ್ಯುಲೇಷನಿನ ಈ ಭಾಗದಲ್ಲಿರುವದಕ್ಕಿಂತ ಹೆಚ್ಚಾಗಿ, ಈ ರೆಗ್ಯುಲೇಷನ್ ಪ್ರಕಾರ ಸ್ಥಾಪಿಸಲ್ಪಟ್ಟ ಕಂಪೆನಿಗಳನ್ನು ಮುಚ್ಚಿ ಬಿಡುವದರಲ್ಲಿ ಅವರಿಂದ ಯಾ ಅವನಿಂದ ಚಲಾಯಿಸಲ್ಪಡಬಹುದಾದ ಯಾವ ಅಧಿಕಾರವನ್ನಾದರೂ ನಡಿಸಲ್ಪಡಬಹುದಾದ ಯಾವ ಕೆಲಸವನ್ನಾದರೂ ರಿಜಿಸ್ಟರಾಗದ ಕಂಪೆನಿಗಳ ವಿಷಯದಲ್ಲಿ ಚಲಾಯಿಸಬಹುದು ಯಾ ನಡಿಸಬಹುದು; ಆದ್ದರೆ ರಿಜಿಸ್ಟರಾಗದ ಕಂಪೆನಿಯು ಅದನ್ನು, ಮುಚ್ಚಿ ಬಿಡಬೇಕಾದ ಪ್ರಮೇಯ ಸಂಭವಿಸಿದಲ್ಲಿ ಹೊರ್ತು, ಈ ರೆಗ್ಯುಲೇಷನಿಗನುಗುಣವಾದ ಕಂಪೆನಿ ಎಂದು ಗ್ರಹಿಸಲ್ಪಡಕೂಡದು, ಮತ್ತು ಆವಾಗಲಾದಾಗ್ಯೂನ್ನೂ ಈ ರೆಗ್ಯುಲೇಷನಿನ ಈ ಭಾಗದಿಂದ ನಿಬಂಧಿಸಿರುವಷ್ಟರ ಮಟ್ಟಿಗೆ ಮಾತ್ರ ಹಾಗೆ ಗ್ರಹಿಸಲ್ಪಡತಕ್ಕದ್ದು.

PART IX.

9 ನೇ ಭಾಗ.

MISCELLANEOUS PROVISIONS.

ವಿವಿಧ ನಿಬಂಧನೆಗಳು.

ಕಂಪೆನಿಯವರು ತಮ್ಮ ಸ್ವಂತ ಹಿಸ್ಸೆಗಳನ್ನೇ ಕೊಂಡುಕೊಳ್ಳಕೂಡದು.

249. ಈ ರೆಗ್ಯುಲೇಷನಿಗನುಗುಣವಾಗಿ ಯಾವ ಕಂಪೆನಿಯವರಿಗೂ ತಮ್ಮ ಹಿಸ್ಸೆಗಳನ್ನೇ ಕೊಂಡುಕೊಳ್ಳುವದಕ್ಕೆ ಸ್ವಾತಂತ್ರ್ಯ ಇರುವದಿಲ್ಲ.

ಮುಚ್ಚಿ ಬಿಡಲಿಕ್ಕೆ ಜಾರೀಲಿರುವ ನಡವಳಿಗಳ ವಿನಾಯಿತಿ.

250. ಈ ರೆಗ್ಯುಲೇಷನ್ ಷುರುವಾಗುವದಕ್ಕೆ ಮುಂಚಿತವಾಗಿ, 1866ನೇ ಇಸವಿಯ ಇಂಡ್ಯನ್ ಕಂಪೆನೀಸ್ ಆಕ್ಟಿನ ಪ್ರಕಾರವಾಗಿ ಒಂದು ಕಂಪೆನಿಯನ್ನು ಮುಚ್ಚಿ ಬಿಡಲಿಕ್ಕೆ ಹುಕುಂ ಮಾಡಲ್ಪಟ್ಟದ್ದರೆ, ಅಥವಾ ಕಂಪೆನಿಯನ್ನು ಮನಃಪೂರ್ವಕವಾಗಿ ಮುಚ್ಚಿ ಬಿಡಲಿಕ್ಕೆ ನಿರ್ಣಯ ಮಾಡಲ್ಪಟ್ಟದ್ದರೆ, ಅಂತಾ ಕಂಪೆನಿಯು ಈ ರೆಗ್ಯುಲೇಷನ್ ಉಂಟಾಗಿದ್ದರೆ ಯಾವ ಪ್ರಕಾರವೋ ಅದೇ ಪ್ರಕಾರ ಅದೇ ಸಂಭವಗಳೊಂದಿಗೆ ಮುಚ್ಚಿ ಬಿಡಲ್ಪಡತಕ್ಕದ್ದು; ಮತ್ತು ಹಾಗೆ ಮುಚ್ಚಿ ಬಿಡಲ್ಪಡತಕ್ಕ ಕಾರ್ಯಗಳಬಗ್ಯೆ 1866ನೇ ಇಸವಿ ಇಂಡ್ಯನ್ ಕಂಪೆನೀಸ್ ಆಕ್ಟು ಪೂರಾ ಜಾರೀಲಿರುವಂತೆ ಗ್ರಹಿಸಲ್ಪಡತಕ್ಕದ್ದು.

ಮೇಹೋಲ್ ಪತ್ರಗಳ ವಿನಾಯಿತಿ.

251. ಈ ರೆಗ್ಯುಲೇಷನ್ ಷುರುವಾಗುವದಕ್ಕೆ ಮುಂಚಿತವಾಗಿ, 1866ನೇ ಇಸವಿ ಇಂಡ್ಯನ್ ಕಂಪೆನೀಸ್ ಆಕ್ಟಿಗನುಗುಣವಾಗಿ ಯಾವ ಪರಭಾರೆ ಸಾಧನವಾದರೂ ಭೋಗ್ಯಪತ್ರವಾದರೂ ಇತರ ಸಾಧನವಾದರೂ ಹುಟ್ಟಿ ಇದ್ದರೆ, ಸದರಿ ಸಾಧನವು ಈ ರೆಗ್ಯುಲೇಷನ್ ಉಂಟಾಗದಿದ್ದರೆ ಯಾವ ಪ್ರಕಾರವೋ ಅದೇ ಪ್ರಕಾರ ಜಾರೀಲಿರತಕ್ಕದ್ದು; ಮತ್ತು ಅಂತಾ ಸಾಧನದ ಕಾರ್ಯಗಳಬಗ್ಯೆ, 1866ನೇ ಇಸವಿ ಇಂಡ್ಯನ್ ಕಂಪೆನೀಸ್ ಆಕ್ಟು ಪೂರಾ ಜಾರೀಲಿರುವಂತೆ ಗ್ರಹಿಸಲ್ಪಡತಕ್ಕದ್ದು.

ತಕ್ಸೀರುಗಳ ದರ್ಯಾಫ್ತು.

252. ಫಸ್ಟ್‌ಕ್ಲಾಸ ಮಾಜಿಸ್ಟ್ರೇಟರಿರುವಂತಾ ಸ್ಥಳದಲ್ಲಿ ತತ್ಕಾಲದಲ್ಲಿ ಜಾರೀಲಿರುವ ಕಾನೂನಿನ ಪ್ರಕಾರ ಅವನು ಶಿಕ್ಷೆ ವಿಧಿಸಲಿಕ್ಕೆ ತಕ್ಕವನಾಗಿರುವದಕ್ಕಿಂತ ತಕ್ಸೀರುದಾರನು ಅರ್ಹನಾಗಿರುವ ಕೈದಿನ ವಾಯಿದೆ ಹೆಚ್ಚಾದ್ದಾಗಿಲ್ಲದೆ ಇದ್ದರೆ, ಈ ರೆಗ್ಯುಲೇಷನಿಗನುಗುಣವಾದ ಸಮಸ್ತ ತಕ್ಸೀರುಗಳನ್ನು ಆ ಮಾಜಿಸ್ಟ್ರೇಟು ದರ್ಯಾಫ್ತು ಮಾಡಬಹುದು. ಈ ರೆಗ್ಯುಲೇಷನಿನಿಂದ ನಿಬಂಧಿಸೋಣಾಗಿರುವ ಕೈದಿನ ವಾಯಿದೆ ಸದರಿ ಆಫಿಸರಿಂದ ವಿಧಿಸಲ್ಪಡಬಹುದಾದ್ದಕ್ಕಿಂತ ಹೆಚ್ಚಾದ್ದಾಗಿ ಇದ್ದರೆ, ತಕ್ಸೀರುದಾರನು ದರ್ಯಾಫ್ತು ಬಗ್ಯೆ ಸೆಷನ್ ಕೋರ್ಟಿಗೆ ಕಮ್ಮಿಟ ಮಾಡಲ್ಪಡತಕ್ಕದ್ದು.

ಖರ್ಚುಗಳನ್ನು ಕುರಿತು ಹುಕುಮುಗಳನ್ನು ಕೊಡುವದಕ್ಕೆ ಅಧಿಕಾರ.

253. ಹಿಂದೆ ಅಡಗಿದ ನಿಬಂಧನೆಗಳಗೊಳಪಟ್ಟು, ಕೋರ್ಟಿನವರು, ಈ ರೆಗ್ಯುಲೇಷನಿನ ಯಾವ ವ್ಯವಹಾರಗಳಲ್ಲಾದರೂ ಖರ್ಚುಗಳನ್ನು ಕುರಿತು ತಮಗೆ ಯುಕ್ತವಾಗಿ ತೋರುವಂತ ಹುಕುಮನ್ನು ಕೊಡಬಹುದು.

ಕಾಯಿದೆಗಳನ್ನು ಮಾಡುವದಕ್ಕೆ ಚೀಫ್ ಕೋರ್ಟಿನವರ ಅಧಿಕಾರ.

254. ಚೀಫ್ ಕೋರ್ಟಿನವರು ತಮ್ಮ ಕೋರ್ಟಿನಲ್ಲಿಯೂ ತಮ್ಮ ತಾಬೇದಾರಿ ಕೋರ್ಟುಗಳಲ್ಲಿಯೂ ಒಂದು ಕಂಪೆನಿಯನ್ನು ಮುಚ್ಚಿ ಬಿಡುವದಕ್ಕೋಸ್ಕರ ಮತ್ತು ಒಂದು ಕಂಪೆನಿಯ ಮೂಲಧನವನ್ನು ತಗ್ಗಿಸುವದನ್ನು ಕುರಿತು ಮತ್ತು ಒಂದು ಕಂಪೆನಿಯ ಹಿಸ್ಸೆಗಳ ಒಳವಿಭಾಗವನ್ನು ಕುರಿತು ಇದರಲ್ಲಿ ಹಿಂದೆ ಅಡಗಿದ ನಿಬಂಧನೆಗಳನ್ನು ಜಾರಿಯಲ್ಲಿ ತರುವದಕ್ಕೋಸ್ಕರ ನಡಿಸಬೇಕಾದ ವಿಧಾನದ ವಿಷಯದಲ್ಲಿ, ಈ ರೆಗ್ಯುಲೇಷನಿಗನುಗುಣವಾಗಿಯೂ ಸಿವಿಲ್ ಪ್ರೊಸಿಜ್ಯೂರ ಕೋಡಿಗನುಗುಣವಾಗಿಯೂ ಅಗಿಂದಾಗ್ಯೆ ನಿಬಂಧನೆಗಳನ್ನು ಮಾಡಬಹುದು.

FIRST SCHEDULE.
ಮೊದಲನೇ ಷೆಡ್ಯೂಲ್ ಪಟ್ಟಿ.

TABLE A.
A ಪಂಕ್ತಿ.

REGULATIONS FOR MANAGEMENT OF COMPANY LIMITED BY SHARES.
ಹಿಸ್ಸೆಗಳಿಂದ ಕ್ಲುಪ್ತ ಪಡಿಸಲ್ಪಟ್ಟ ಕಂಪೆನಿಯ ಮೇಲ್ವಿಚಾರಣೆ ಬಗ್ಯೆ ನಿಬಂಧನೆಗಳು.

Shares.
ಹಿಸ್ಸೆಗಳು.

(1.) ಅನೇಕ ಮನುಷ್ಯರು ಯಾವದಾದರೊಂದು ಹಿಸ್ಸೆಯನ್ನು ಜಂಟಾಗಿ ಸೇರಿ ಪಡಕೊಂಡವರೆಂತ ರಿಜಿಸ್ಟರ್ಮಾಡಲ್ಪಟ್ಟರೆ, ಅಂಥ ಹಿಸ್ಸೆಯ ವಿಷಯದಲ್ಲಿ ಪಾವತಿಯಾಗತಕ್ಕ ಡಿವಿಡೆಂಡಿನ ಬಗ್ಯೆ ಸದರಿ ಮನುಷ್ಯರ ಪೈಕಿ ಯಾವನಾದರೊಬ್ಬನು ಪ್ರಯೋಜನಕರವಾಗುವಂಥ ರಶೀದಿಗಳನ್ನು ಕೊಡಬಹುದು.

(2.) ಪ್ರತಿ ಮೆಂಬರೂ, ಎಂಟ್ರೂಣೆಯನ್ನು ಅಥವಾ ಸಾಧಾರಣ ಸಭೆಯಲ್ಲಿ ಕಂಪೆನಿಯವರಿಂದ ನಿರ್ದೇಶಿಸಲ್ಪಡಬಹುದಾದ ಅದಕ್ಕಿಂತ ಕಮ್ಮಿ ಮೊಬಲಗನ್ನು ಕೊಟ್ಟರೆ, ಅವನಿಂದ ಪಡಕೊಳ್ಳೋಣಾಗಿರುವ ಹಿಸ್ಸೆಯನ್ನೂ ಯಾ ಹಿಸ್ಸೆಗಳನ್ನೂ ಮತ್ತು ಅವುಗಳ ಮೇಲೆ ಪಾವತಿ ಮಾಡಿರುವ ಮೊಬಲಗನ್ನೂ ತೋರಿಸುವಂಥ ಕಂಪೆನಿಯ ಮುದ್ದೆಗಡ ಮೊಹರು ಹಾಕಲ್ಪಟ್ಟ ಸರ್ಟಿಫಿಕೇಟನ್ನು ಹೊಂದಲಿಕ್ಕೆ ಅರ್ಹನಾಗಿರತಕ್ಕದ್ದು.

(3.) ಅಂಥಾ ಸರ್ಟಿಫಿಕೇಟು ಹರಿದು ಹೋದರೆ ಯಾ ಕಾಣದೇ ಹೋದರೆ, ಎಂಟ್ರೂಣೆಯನ್ನು ಯಾ ಸಾಧಾರಣ ಸಭೆಯಲ್ಲಿ ಕಂಪೆನಿಯವರಿಂದ ನಿರ್ಧರಿಸಲ್ಪಡಬಹುದಾದ ಅದಕ್ಕಿಂತ ಕಮ್ಮಿ ಮೊಬಲಗನ್ನು ಕೊಟ್ಟಲ್ಲಿ, ಹೊಸ ಸರ್ಟಿಫಿಕೇಟು ಕೊಡಲ್ಪಡಬಹುದು.

Calls on Shares.
ಹಿಸ್ಸೆಗಳ ಬಗ್ಯೆ ವರಾತಗಳು.

(4.) ಮೆಂಬರುಗಳಿಂದ ಪಾವತಿ ಮಾಡಲ್ಪಡದೆ ಇರುವ ಅವರ ಹಿಸ್ಸೆಗಳ ಬಾಬತು ಸಮಸ್ತ ಹಣಗಳ ವಿಷಯದಲ್ಲಿ ಡೈರೆಕ್ಟರುಗಳು ತಮಗೆಯುಕ್ತವಾಗಿ ತೋರುವ ಪ್ರಕಾರ ಆಗಿಂದಾಗ್ಯೆ ಕಾಲ್ಸೆಯೆಂಬ ವರಾತಗಳನ್ನು ಕಳುಹಿಸಬಹುದು; ಪರಂತು ಪ್ರತಿ ವರಾತದ ವಿಷಯದಲ್ಲಿ ಕನಿಷ್ಠಪಕ್ಷ ಇಪ್ಪತ್ತೊಂದು ದಿವಸಗಳ ಮುಂಚೆ ನೋಟೀಸು ಕೊಡತಕ್ಕದ್ದು; ಮತ್ತು ಹಾಗೆ ಮಾಡೋಣಾದ ವರಾತಗಳ ಮೊಬಲಗನ್ನು ಫಲಾನೆ ಮನುಷ್ಯರಿಗೆ ಫಲಾನೆ ಕಾಲಗಳಲ್ಲಿ ಫಲಾನೆ ಸ್ಥಳಗಳಲ್ಲಿ ಸಂದಾಯ ಮಾಡಬೇಕೆಂದು ಡೈರೆಕ್ಟರುಗಳಿಂದ ಗೊತ್ತು ಮಾಡಲ್ಪಡುವ ಪ್ರಕಾರ ಸಲ್ಲಿಸಲಿಕ್ಕೆ ಪ್ರತಿಮೆಂಬರೂ ಅರ್ಹನಾಗಿರತಕ್ಕದ್ದು.

(5.) ಒಂದು ಕಾಲ್ಸೆಯೆಂಬ ವರಾತವು ಆ ಬಗ್ಯೆ ಅಧಿಕಾರ ಕೊಡುವ ನಿರ್ಣಯದ ಡೈರೆಕ್ಟರುಗಳಿಂದ ಯಾವಾಗ ಮಾಡಲ್ಪಟ್ಟಿತೋ ಅದೇ ಕಾಲದಲ್ಲಿ ಮಾಡಲ್ಪಟ್ಟದ್ದೆಂದು ಗ್ರಹಿಸಲ್ಪಡತಕ್ಕದ್ದು.

(6.) ಯಾವ ಹಿಸ್ಸೆಯ ವಿಷಯದಲ್ಲಾದರೂ ಕೊಡಬೇಕಾದ ವರಾತದ ಮೊಬಲಗನ್ನು, ಅದರ ಪಾವತಿ ಬಗ್ಯೆ ಗೊತ್ತು ಮಾಡೋಣಾದ ದಿವಸ ಯಾ ಅದಕ್ಕೆ ಮುಂಚಿತವಾಗಿ ಪಾವತಿ ಮಾಡದೆ ಹೋದರೆ ಆ ಕಾಲದಲ್ಲಿ ಸದರಿ ಹಿಸ್ಸೆಯನ್ನು ಪಡಕೊಂಡಿರುವಂಥ ಮನುಷ್ಯನು, ಅದರ ಪಾವತಿ ಬಗ್ಯೆ ಗೊತ್ತು ಮಾಡೋಣಾದ ದಿವಸದ ಮೊದಲು ನಿಜವಾಗಿ ಪಾವತಿ ಮಾಡುವದಕ್ಕೆ ಎಷ್ಟು ದಿವಸಗಳು ಗುತ್ತವೋ ಅದುವರೆಗೆ ಸಂವತ್ಸರಕ್ಕೆ ಶೇಕಡಾ ಐದರ ಪ್ರಕಾರ ಬಡ್ಡಿ ತೆರಲಿಕ್ಕೆ ಅರ್ಹನಾಗಿರತಕ್ಕದ್ದು.

(7.) ಯಾವ ಮೆಂಬರಾದರೂ ತಾನು ಪಡಕೊಂಡಿರುವ ಹಿಸ್ಸೆಗಳ ಮೇಲೆ ಬಾಕಿಯಾಗುವ ಸಮಸ್ತ ಹಣವನ್ನಾಗಲೀ ಯಾ ಅದರ ಒಂದು ಭಾಗವನ್ನು ವರಾತ ಮೂಲಕವಾಗಿ ಕೇಳಲ್ಪಟ್ಟದ್ದಕ್ಕಿಂತ ಹೆಚ್ಚಾಗಿ ಅಡ್ವಾನ್ಸ್ ಕೊಡಲಿಕ್ಕೆ ಇಷ್ಟವುಳ್ಳವನಾಗಿದ್ದರೆ, ಡೈರೆಕ್ಟರುಗಳು, ತಮಗೆ ಯುಕ್ತವೆಂದು ತೋರಿದಲ್ಲಿ, ಸದರಿ ಮೊಬಲಗನ್ನು ಅವನಿಂದ ತೆಗೆದುಕೊಳ್ಳಬಹುದು; ಮತ್ತು ಹಾಗೆ ಅಡ್ವಾನ್ಸ್ ಕೊಟ್ಟ ಹಣದ ಬಗ್ಯೆ, ಅಥವಾ ಯಾವ ಹಿಸ್ಸೆಗಳ ವಿಷಯದಲ್ಲಿ ಅಂಥಾ ಅಡ್ವಾನ್ಸ್ ಕೊಡಲ್ಪಟ್ಟಿತೋ ಅದು ಆಗ ಮಾಡಲ್ಪಟ್ಟಿರುವ ವರಾತಗಳ ಮೊಬಲಗಿಗಿಂತ ಆಗಿಂದಾಗ್ಯೆ ಎಷ್ಟು ಹೆಚ್ಚಾಗಿರುತ್ತದೋ ಅಷ್ಟರ ಬಗ್ಯೆ, ಹಾಗೆ ಅಡ್ವಾನ್ಸಾಗಿ ಕೊಡುವ ಮೆಂಬರೂ ಡೈರೆಕ್ಟರುಗಳೂ ಏಕರಾರು ಮಾಡಿ ಕೊಳ್ಳುವ ದರದ ಪ್ರಕಾರ ಕಂಪೆನಿಯವರು ಬಡ್ಡಿ ಕೊಡಬಹುದು.

Transfers of Shares.
ಹಿಸ್ಸೆಗಳ ಪರಭಾರೆ.

(8.) ಕಂಪೆನಿಯ ಯಾವದಾದರೊಂದು ಹಿಸ್ಸೆಯ ಪರಭಾರೆ ಸಾಧನ ಇಬ್ಬರಿಂದಲೂ ಅಂದರೆ, ಪರಭಾರೆ ಮಾಡುವವನಿಂದಲೂ ಪರಭಾರೆ ಮಾಡಿಸಿ ಕೊಳ್ಳುವವನಿಂದಲೂ, ಬರಕೊಡಲ್ಪಡತಕ್ಕದ್ದು. ಮತ್ತು ಆ ವಿಷಯವನ್ನು ಒಂದು ರಿಜಿಸ್ಟರ್ ಪುಸ್ತಕದಲ್ಲಿ ಪರಭಾರೆ ಮಾಡಿಸಿ ಕೊಳ್ಳುವವನ ಹೆಸರು ದಾಖಲಾಗುವ ವರೆಗೆ ಪರಭಾರೆ ಮಾಡುವವನೇ ಸದರಿ ಹಿಸ್ಸೆಯನ್ನು ಪಡಕೊಂಡವನಾಗಿದ್ದಾನೆಂದು ಗ್ರಹಿಸಲ್ಪಡತಕ್ಕದ್ದು.

(9.) ಕಂಪೆನಿಯ ಹಿಸ್ಸೆಗಳು ಈ ಕೆಳಗಣ ರೀತಿಲಿ ಪರಭಾರೆ ಮಾಡಲ್ಪಡತಕ್ಕದ್ದು:—

ದ A. B. ಎಂಬ ನಾನು ... ದ C. D. ಎಂಬ ... ವನಿಂದ ತೆಗೆದುಕೊಂಡ ... ರೂಪಾಯಿಗಳ ಮೊಬಲಗಿನ ಬಗ್ಗೆ ... ಕಂಪೆನಿಯ ಪುಸ್ತಕಗಳಲ್ಲಿ ನನ್ನ ಹೆಸರಿನಲ್ಲಿರುವ ... ನೇ ನಂಬರಿನ ಹಿಸ್ಸೆಯನ್ನು (ಅಥವಾ ಹಿಸ್ಸೆಗಳನ್ನು) ಸದರಿ C. D. ಎಂಬವನಿಗೆ ಈ ಮೂಲಕವಾಗಿ ಪರಭಾರೆ ಮಾಡುತ್ತೇನೆ; ಅದಕಾರಣ ಇದನ್ನು ನಾನು ಬರಕೊಡುವ ಕಾಲದಲ್ಲಿ ಸದರಿ ಹಿಸ್ಸೆಯನ್ನು (ಅಥವಾ ಹಿಸ್ಸೆಗಳನ್ನು) ಯಾವ್ಯಾವ ಷರತ್ತುಗಳ ಮೇಲೆ ಅನುಭವಿಸುತ್ತಾ ಇದ್ದೆನೋ, ಅದೇ ಷರತ್ತಿನ ಮೇಲೆ ಅದನ್ನು ಸದರಿ C. D. ಎಂಬವನೂ ಅವನ ಎಗ್ಜಿಕ್ಯೂಟರುಗಳೂ ಅಥವಾ ಅಡ್ಮಿನಿಸ್ಟ್ರೇಟರುಗಳೂ, ಅಥವಾ ಹವಾಲ್ತಿದಾರರೂ ಅನುಭವಿಸಿ ಕೊಳ್ಳಲುಳ್ಳವರು. ಮತ್ತು C. D. ಎಂಬ ನಾನು ಅದೇ ಷರತ್ತುಗಳಿಗೊಳಪಟ್ಟವನಾಗಿ ಸದರಿ ಹಿಸ್ಸೆಯನ್ನು (ಅಥವಾ ಹಿಸ್ಸೆಗಳನ್ನು) ತೆಗೆದುಕೊಳ್ಳಲಿಕ್ಕೆ ಈ ಮೂಲಕವಾಗಿ ಸಮ್ಮತಿಸಿದ್ದೇನೆ. ಇದಕ್ಕೆ ದಸ್ತಖತ್ತುಗಳು. ಬತಾರೀಖು.

(10.) ಕಂಪೆನಿಗೆ ಸಾಲಗಾರನಾಗಿರುವ ಯಾವ ಮೆಂಬರಿಂದಲಾದರೂ ಮಾಡೋಣಾದ ಹಿಸ್ಸೆಗಳ ಪರಭಾರೆಯನ್ನು ರಿಜಿಸ್ಟ್ರ್ ಮಾಡುವದಿಲ್ಲವೆಂದು ಕಂಪೆನಿಯವರು ನಿರಾಕರಿಸಬಹುದು.

(11.) ಪ್ರತಿ ಸಂವತ್ಸರ ಸಾಮಾನ್ಯ ಸಾಧಾರಣ ಸಭೆ ಸೇರುವದಕ್ಕೆ ಅವ್ಯವಹಿತವಾಗಿ ಹದಿನಾಲ್ಕು ದಿವಸ ಮುಂಚಿತವಾಗಿ ಪರಭಾರೆ ಪುಸ್ತಕಗಳು ಮುಚ್ಚಿದು ಮಾಡಲ್ಪಡತಕ್ಕದ್ದು.

Transmission of Shares.

ಹಿಸ್ಸೆಗಳ ಟ್ರಾನ್ಸ್ಮಿಷನ್ ಯಾನೆ ಭವಿಷ್ಯದನುಭವ.

(12.) ಮೃತಪಟ್ಟ ಮೆಂಬರಿನ ಎಗ್ಜಿಕ್ಯೂಟರುಗಳು ಯಾ ಅಡ್ಮಿನಿಸ್ಟ್ರೇಟರುಗಳು ಮಾತ್ರವೇ ಅವನ ಹಿಸ್ಸೆಗೆ ಯಾವ ಬಾಧ್ಯತೆಯನ್ನಾದರೂ ಉಳ್ಳವರೆಂದು ಕಂಪೆನಿಯಿಂದ ಅಂಗೀಕರಿಸಲ್ಪಡುವ ಮನುಷ್ಯರಾಗಿರತಕ್ಕದ್ದು.

(13.) ಯಾವ ಮೆಂಬರಾದರೂ ಮೃತಪಟ್ಟ ಯಾ ದಿವಾಳಿಯಾದ ಸಬಬ್ ಅಥವಾ ಯಾವ ಸ್ತ್ರೀ ಮೆಂಬರನ್ನಾದರೂ ಮದುವೆ ಮಾಡಿಕೊಂಡ ಸಬಬ್ ಹಿಸ್ಸೆಗೆ ಬಾಧ್ಯಸ್ತನಾಗುವ ಯಾವ ಮನುಷ್ಯನಾಗಲಿ ಕಂಪೆನಿಯಿಂದ ಆಗಿಂದಾಗ್ಯೆ ಅಪೇಕ್ಷಿಸಲ್ಪಡುವ ಸಾಕ್ಷ್ಯವನ್ನು ಹಾಜರ್ಮಾಡಿದ ಮೇಲೆ ಬಟ್ಟು ಮೆಂಬರೆಂದು ರಿಜಿಸ್ಟರ್ಮಾಡಲ್ಪಡಬಹುದು.

(14.) ಯಾವ ಮೆಂಬರಾದರೂ ಮೃತಪಟ್ಟ ಯಾ ದಿವಾಳಿಯಾದ ಸಬಬ್ ಅಥವಾ ಯಾವ ಸ್ತ್ರೀ ಮೆಂಬರನ್ನಾದರೂ ಮದುವೆ ಮಾಡಿಕೊಂಡ ಸಬಬ್ ಹಿಸ್ಸೆಗೆ ಬಾಧ್ಯಸ್ತನಾಗುವ ಯಾವ ಮನುಷ್ಯನಾಗಲಿ, ತಾನೇ ರಿಜಿಸ್ಟರ್ಮಾಡಲ್ಪಡುವದಕ್ಕೆ ಬದಲಾಗಿ ತನ್ನಿಂದ ನೇಮಿಸಲ್ಪಡುವ ಮನುಷ್ಯನನ್ನು ಸದರಿ ಹಿಸ್ಸೆಯನ್ನು ಪರಭಾರೆ ಮಾಡಿಸಿಕೊಂಡವನಾಗಿ ರಿಜಿಸ್ಟರ ಮಾಡಬೇಕೆಂದು ಏರ್ಪಡಿಸಬಹುದು.

(15.) ಹಾಗೆ ಬಾಧ್ಯಸ್ತನಾಗುವ ಮನುಷ್ಯನು ತನ್ನನ್ನು ನೇಮಿಸಿದಂಥವನಿಗೆ ಸದರಿ ಹಿಸ್ಸೆಯ ಪರಭಾರೆ ಸಾಧನವನ್ನು ಬರದುಕೊಡುವದ್ದರಿಂದ ಅಂಥಾ ಏರ್ಪಾಟನ್ನು ರುಜು ಪಡಿಸತಕ್ಕದ್ದು.

(16.) ಪರಭಾರೆ ಸಾಧನ, ಸದರಿ ಪರಭಾರೆ ಮಾಡಿಕೊಳ್ಳುವವನ ಬಾಧ್ಯತೆಯನ್ನು ರುಜು ಪಡಿಸತಕ್ಕ ಬಗ್ಗೆ ಡೈರೆಕ್ಟರುಗಳು ಅಪೇಕ್ಷಿಸಬಹುದಾದಂಥಾ ಸಾಕ್ಷ್ಯದೊಂದಿಗೆ ಕಂಪೆನಿಗೆ, ಹಾಜರ್ಮಾಡಲ್ಪಡತಕ್ಕದ್ದು; ಆ ತರುವಾಯ ಕಂಪೆನಿಯವರು ಪರಭಾರೆ ಮಾಡಿಕೊಂಡವನನ್ನು ಮೆಂಬರೆಂದು ರಿಜಿಸ್ಟರ್ಮಾಡತಕ್ಕದ್ದು.

Forfeiture of Shares.

ಹಿಸ್ಸೆಗಳನ್ನು ಕಳಕೊಳ್ಳೋಣ.

(17.) ಯಾವ ಮೆಂಬರಾದರೂ ವರಾತದ ಮೊಬಲಗಿನ ಪಾವತಿ ಬಗ್ಗೆ ಗೊತ್ತು ಮಾಡೋಣಾದ ದಿವಸ ಅದನ್ನು ಪಾವತಿ ಮಾಡಲಿಕ್ಕೆ ತಪ್ಪಿದರೆ, ಡೈರೆಕ್ಟರುಗಳು, ಆ ತರುವಾಯ ವರಾತ ಪಾವತಿ ಯಾಗದೆ ಇರುವ ಕಾಲದಲ್ಲಿ ಯಾವಾಗಲಾದರೂ, ಹಾಗೆ ಪಾವತಿ ಮಾಡದೆ ಹೋದ ಸಬಬ್ ಸಂಭವಿಸಿರಬಹುದಾದ ಖರ್ಚುಗಳು ವ ಬಡ್ಡಿಯೊಂದಿಗೆ ಸದರಿ ವರಾತದ ಮೊಬಲಗನ್ನು ಸಲ್ಲಿಸ ಹೇಳಿ ಅವನಿಗೆ ನೋಟೀಸು ಸಾದರ್ಮಾಡಬಹುದು.

(18.) ಸದರಿ ವರಾತದ ಮೊಬಲಗನ್ನೂ ಹಾಗೆ ಪಾವತಿ ಮಾಡದೆ ಹೋದ ಸಬಬ್ ಸಂಭವಿಸಿರಬಹುದಾದ ಸಮಸ್ತ ಬಡ್ಡಿಯನ್ನೂ ಖರ್ಚುಗಳನ್ನೂ ಫಲಾನೆ ದಿವಸ ಯಾ ಅದಕ್ಕೆ ಮುಂಚಿತವಾಗಿ ಸಲ್ಲಿಸ ಹೇಳಿ ನೋಟೀಸಿನದ್ವಾರಾ ಹುಕ್ಮುವಾಯಿದೆ ಕೊಡಲ್ಪಡತಕ್ಕದ್ದು. ಹಣ ಎಲ್ಲಿ ಪಾವತಿ ಮಾಡಬೇಕೋ ಆ ಸ್ಥಳ ಸಹ ಅದರಲ್ಲಿ ನಮೂದಿಸಲ್ಪಡತಕ್ಕದ್ದು. ಹಾಗೆ ನಮೂದಿಸೋಣಾದ ಸ್ಥಳ ಕಂಪೆನಿಯ ರಿಜಿಸ್ಟರಾದ ಆಫೀಸಾಗಿಯಾಗಲಿ ಕಂಪೆನಿಯ ವರಾತ ಮೊಬಲಗುಗಳು ಮಾಮೂಲಾಗಿ ಪಾವತಿ ಮಾಡಲ್ಪಡುವ ಇತರ ಸ್ಥಳವಾಗಿಯಾಗಲಿ ಇರತಕ್ಕದ್ದು. ಗೊತ್ತು ಮಾಡೋಣಾದ ದಿವಸ ಯಾ ಅದಕ್ಕೆ ಮುಂಚಿತವಾಗಿ ಅಂಥಾ ಸ್ಥಳದಲ್ಲಿ ಪಾವತಿ ಮಾಡಲ್ಪಡದೆ ಹೋದ ಪಕ್ಷದಲ್ಲಿ, ಯಾವ ಹಿಸ್ಸೆಗಳ ವಿಷಯದಲ್ಲಿ ಅಂಥಾ ವರಾತ ಮಾಡಲ್ಪಟ್ಟಿತ್ತೋ ಆ ಹಿಸ್ಸೆಗಳು ಕಳಕೊಳ್ಳಲ್ಪಡಲಿಕ್ಕೆ ಗುರಿಯಾಗುವವೆಂದು ಸಹ ಆ ನೋಟೀಸಿನಲ್ಲಿ ನಮೂದಿಸಿರತಕ್ಕದ್ದು.

(19.) ಮೇಲ್ಕಂಡಂತೆ ನೋಟೀಸಿನ ಪ್ರಕಾರ ಮಾಡಬೇಕಾದ್ದನ್ನೆಲ್ಲಾ ಮಾಡದೆ ಹೋದರೆ, ಯಾವ ಹಿಸ್ಸೆಯ ವಿಷಯದಲ್ಲಿ ಅಂಥಾ ನೋಟೀಸು ಕೊಡೋಣಾಯಿತೋ ಆ ಹಿಸ್ಸೆ, ಆ ತರುವಾಯ ಅದರ ಬಾಬತು ಬಾಕಿಯಾಗುವ ವರಾತಗಳೂ ಬಡ್ಡಿಯೂ ಖರ್ಚುಗ...

502

ಳೂ ಪಾವತಿ ಮಾಡಲ್ಪಡುವದಕ್ಕೆ ಮುಂಚಿತವಾಗಿ ಯಾವಾಗಲಾದರೂ, ಆ ಬಗ್ಗೆ ಡೈರೆಕ್ಟರುಗಳ ನಿರ್ಣಯದಿಂದ ತಳ್ಳಿಕೊಳ್ಳಲ್ಪಡಬಹುದು.

(20.) ಹಾಗೆ ತಳ್ಳಿಕೊಳ್ಳಲಾದ ಯಾವ ಹಿಸ್ಸೆಯಾದಾಗ್ಯೂ ಕಂಪೆನಿಯ ಸೊತ್ತೆಂದು ಗ್ರಹಿಸಲ್ಪಡತಕ್ಕದ್ದು, ಮತ್ತು ಸಾಧಾರಣ ಸಭೆಯಲ್ಲಿ ಕಂಪೆನಿಯವರಿಗೆ ಯುಕ್ತವಾಗಿ ತೋರುವ ರೀತಿಯಲ್ಲಿ ವಿನಿಯೋಗಿಸಲ್ಪಡಬಹುದು.

(21.) ಯಾರ ಹಿಸ್ಸೆಗಳು ಆ ಪ್ರಕಾರ ಕಂಪೆನಿಗೆ ಸೇರಿಸಿಕೊಳ್ಳಲ್ಪಟ್ಟವೋ ಆ ಮೆಂಬರು, ಆವಾಗಲು ಸಹ ಹಾಗೆ ತಳ್ಳಿಕೊಳ್ಳಲ್ಪಟ್ಟ ಹಿಸ್ಸೆಗಳ ಬಾಬತು ಬಾಕಿಯಾಗುವ ವರಾತಗಳನ್ನು ಕಂಪೆನಿಯವರಿಗೆ ಪಾವತಿ ಮಾಡಲಿಕ್ಕೆ ಅರ್ಹನಾಗಿರತಕ್ಕದ್ದು.

(22.) ಹಿಸ್ಸೆಯ ವಿಷಯದಲ್ಲಿ ವರಾತ ಮಾಡಲ್ಪಟ್ಟಿತೆಂತಲೂ ಆ ಬಗ್ಗೆ ನೋಟಿಸು ಕೊಡಲ್ಪಟ್ಟಿತೆಂತಲೂ, ವರಾತದ ಬಾಬತು ಹಣ ಪಾವತಿ ಯಾಗದೆ ಹೋದ್ದರಿಂದ ಡೈರೆಕ್ಟರುಗಳ ನಿರ್ಣಯದ ಪ್ರಕಾರ ಸದರಿ ಹಿಸ್ಸೆ ಕಂಪೆನಿಗೆ ಸೇರಿಸಿಕೊಳ್ಳಲ್ಪಟ್ಟಿತೆಂತಲೂ, ಒಬ್ಬ ಮ್ಯಾಜಿಸ್ಟ್ರೇಟನ ಎದುರಿಗೆ [illegible] ಲಿಖಿತರೂಪವಾದ ಸತ್ಯವಾದ ಹೇಳಿಕೆಯು ಅಂತ ಹಿಸ್ಸೆಗೆ ಬಾಧ್ಯರಾದ ಸಮಸ್ತ ಮನುಷ್ಯರಿಗೆ ಅವಗುಣವಾಗಿ ಅದರಲ್ಲಿ ನಮೂದಿಸಿರುವ ಸಂಗತಿಗಳ ವಿಷಯದಲ್ಲಿ ಸಾಕಾದ ಸಾಕ್ಷ್ಯವಾಗಿರತಕ್ಕದ್ದು, ಮತ್ತು ಅಂತ ಹೇಳಿಕೆಯೂ ಸದರಿ ಹಿಸ್ಸೆಯ ಖರೀದಿಯ ಬಗ್ಗೆ ಕಂಪೆನಿಯವರ ರಶೀದಿಯೂ ಸದರಿ ಹಿಸ್ಸೆಗೆ ಒಳ್ಳೇಬಾಧ್ಯತೆಯನ್ನು ಉಂಟು ಮಾಡತಕ್ಕದ್ದು, ಮತ್ತು ಅದನ್ನು ಕೊಂಡುಕೊಂಡವನಿಗೆ ಮಾಲಿಕನೆಂಬ ಅಧಿಕಾರದ ಬಾಬತು ಸರ್ಟಿಫಿಕೇಟು ಕೊಡಲ್ಪಡತಕ್ಕದ್ದು. ಆ ತರುವಾಯ ಅವನು ಹಾಗೆ ಕೊಂಡು ಕೊಳ್ಳುವದಕ್ಕೆ ಮುಂಚೆ ಬಾಕಿಯಿದ್ದ ಸಮಸ್ತ ವರಾತಗಳ ತಕರಾರಿಲ್ಲದಂತೆ ಸದರಿ ಹಿಸ್ಸೆಯನ್ನು ಪಡೆಕೊಂಡಿರುವವನಾಗಿ ಗ್ರಹಿಸಲ್ಪಡತಕ್ಕದ್ದು. ಅವನು ವಿಕ್ರಯದ ಹಣದ ಬಾಬತು ದರಖಾಸ್ತನ್ನು ನೋಡಲಿಕ್ಕೆ ಬದ್ಧನಾಗಿರಕೂಡದು, ಅಥವಾ ಅದನ್ನು ಕೊಂಡುಕೊಂಡ ವಿಷಯದಲ್ಲಿ ನಡೆದಿರಬಹುದಾದ ಯಾವ ನಡವಳಿಕೆಯು ಅಕ್ರಮವಾದರೂ, ಅವನಿಗೆ ಆ ಹಿಸ್ಸೆಯಲ್ಲಿ ಉಂಟಾಗಿರುವ ಬಾಧ್ಯತೆಗೆ ಬಾಧಕವಾಗಕೂಡದು.

Conversion of Shares into Stock.
ಹಿಸ್ಸೆಗಳನ್ನು ಸ್ಟಾಕ್ ಧನಕ್ಕೆ ಮಾರ್ಪಡಿಸೋಣ.

(23.) ಡೈರೆಕ್ಟರುಗಳು, ಕಂಪೆನಿಯವರ ಸ್ಯಾಂಕ್ಷನನ್ನು ಸಾಧಾರಣಸಭೆಯಲ್ಲಿ ಮುಂಚಿತವಾಗಿ ಪಡೆಕೊಂಡು, ಯಾವ ಪಾವತಿ ಮಾಡಿಬಿಟ್ಟಿದ್ದ ಹಿಸ್ಸೆಗಳನ್ನಾದರೂ ಸ್ಟಾಕ್ ಧನಕ್ಕೆ ಮಾರ್ಪಡಿಸಬಹುದು.

(24.) ಯಾವ ಹಿಸ್ಸೆಗಳಾದರೂ ಸ್ಟಾಕ್ ಧನಕ್ಕೆ ಮಾರ್ಪಡಿಸಲ್ಪಟ್ಟಾಗ, ಸದರಿ ಸ್ಟಾಕ್ ಧನವನ್ನು ಪಡೆಕೊಂಡಿರುವಂತವರು ಅದರಲ್ಲಿನ ಅವರವರ ಸಂಬಂಧಗಳನ್ನಾಗಲಿ ಸದರಿ ಸಂಬಂಧಗಳ ಯಾವ ಭಾಗವನ್ನಾಗಲಿ, ಅದು ಮೊದಲು ಪರಭಾರೆ ಮಾಡಬಹುದು; ಹ್ಯಾಗಂದರೆ ಕಂಪೆನಿಯ ಮೂಲಧನದ ಬಾಬತು ಹಿಸ್ಸೆಗಳು ಯಾವ ನಿಬಂಧನೆಗಳ ಪ್ರಕಾರ ಪರಭಾರೆ ಮಾಡಲ್ಪಡಬಹುದೋ ಅದೇ ನಿಬಂಧನೆಗಳ ಪ್ರಕಾರ ಅವುಗಳಿಗೊಳಪಟ್ಟು ಅಥವಾ ಸಂದರ್ಭಾನುಸಾರವಾಗಿ ಕೂಡಿದಮಟ್ಟಿಗೆ ಅವುಗಳ ಪ್ರಕಾರ ಪರಭಾರೆ ಮಾಡಬಹುದು.

(25.) ಸ್ಟಾಕ್ ಧನವನ್ನು ಪಡೆಕೊಂಡಿರುವಂತ ಆಯಾ ಮನುಷ್ಯರು ಸದರಿ ಸ್ಟಾಕ್ ಧನದಲ್ಲುಂಟಾಗಿರುವ ಅವರವರ ಸಂಬಂಧಗಳ ಬಾಬತು ಮೊಬಲಗಿನ ಪ್ರಕಾರ ಕಂಪೆನಿಯ ಡಿವಿಡೆಂಡುಗಳಲ್ಲೂ ಸಭೆಗಳಲ್ಲೂ ಭಾಗಸ್ಥರಾಗಲಿಕ್ಕೆ ಅರ್ಹರಾಗಿರತಕ್ಕದ್ದು; ಸದರಿ ಸಂಬಂಧಗಳ ಮೊಬಲಗಿನ ದಾಮಾಷಾಯಿ ಪ್ರಕಾರ ಅವುಗಳಿಗೆ ಸಮನಾದ ಮೊಬಲಗಿನ ಬಾಬತು ಕಂಪೆನಿಯ ಮೂಲಧನದಲ್ಲಿನ ಹಿಸ್ಸೆಗಳಿಂದ ಕಂಪೆನಿಯ ಸಭೆಗಳಲ್ಲಿ ವಾಕ್ಕುನುಡಿಯತಕ್ಕ ಬಗ್ಗೆ ಮತ್ತು ಇತರ ಕಾರ್ಯಗಳ ಬಗ್ಗೆ ಯಾವ್ಯಾವ ಸ್ವಾತಂತ್ರ್ಯಗಳೂ ಪ್ರಯೋಜನಗಳೂ ಉಂಟಾಗಬಹುದಾಗಿತ್ತೋ ಅದೇ ಸ್ವಾತಂತ್ರ್ಯಗಳನ್ನೂ ಪ್ರಯೋಜನಗಳನ್ನೂ ಸದರಿ ಸ್ಟಾಕ್ ಧನದ ಬಾಬತು ಸಂಬಂಧಗಳು ಅವುಗಳನ್ನು ಪಡೆಕೊಂಡಿರುವಂತವರಿಗೆ ಉಂಟುಮಾಡತಕ್ಕದ್ದು; ಆದರೆ ಕಂಪೆನಿಯ ಡಿವಿಡೆಂಡುಗಳನ್ನೂ, ನಫೆಯನ್ನೂ, ಹಂಚಿಕೊಳ್ಳುವದು ಹೊರ್ತು, ಅಂತಾ ಒಟ್ಟುಪಡಿಸಲ್ಪಟ್ಟ ಸ್ಟಾಕ್ ಧನದ ಯಾವ ಸಮಭಾಗವಾದರೂ, ಹಿಸ್ಸೆಗಳ ರೂಪವಾಗಿದ್ದರೆ ಯಾವ್ಯಾವ ಸ್ವಾತಂತ್ರ್ಯಗಳೂ, ಪ್ರಯೋಜನಗಳೂ, ಉಂಟಾಗದೆ ಇದ್ದವೋ ಅಂತಾ ಯಾವ ಸ್ವಾತಂತ್ರ್ಯಗಳಾಗಲಿ ಪ್ರಯೋಜನಗಳಾಗಲಿ ಉಂಟಾಗಕೂಡದು.

Increase in Capital.
ಮೂಲಧನದ ವೃದ್ಧಿ.

(26.) ಡೈರೆಕ್ಟರುಗಳು, ಕಂಪೆನಿಯವರ ಸ್ಯಾಂಕ್ಷನನ್ನು ಸಾಧಾರಣ ಸಭೆಯಲ್ಲಿ ವಿಶೇಷ ನಿರ್ಣಯದ ಮೂಲಕವಾಗಿ ಮುಂಚಿತವಾಗಿ ಪಡೆಕೊಂಡು, ಅದರ ಮೂಲಧನವನ್ನು ಹೊಸ ಹಿಸ್ಸೆಗಳನ್ನು ಇಷ್ಯೂ ಮಾಡಿ ತದ್ದ್ವಾರಾ ವೃದ್ಧಿ ಮಾಡಬಹುದು; ಸದರಿ ಒಟ್ಟು ವೃದ್ಧಿಯು ಇಷ್ಟು ಮಾತ್ರ ಮೊಬಲಗಿನದೆಂತಲೂ ಇಂತಿಷ್ಟು ಮೊಬಲಗಿನ ಬಾಬತು ಇಷ್ಟು ಹಿಸ್ಸೆಗಳನ್ನುಳ್ಳದ್ದೆಂತಲೂ, ಕಂಪೆನಿಯವರು ಸಾಧಾರಣ ಸಭೆಯಲ್ಲಿ ಹುಕುಂ ಮಾಡುವಂತೆ ಇರತಕ್ಕದ್ದು, ಅಥವಾ ಅಂತ ಹುಕುಂ ಕೊಡಲ್ಪಡದಿದ್ದರೆ ಡೈರೆಕ್ಟರುಗಳಿಗೆ ಯುಕ್ತವಾಗಿ ತೋರುವ ಪ್ರಕಾರ ಇರತಕ್ಕದ್ದು.

(27.) ಮೂಲಧನದ ವೃದ್ಧಿಯನ್ನು ಸ್ಯಾಂಕ್ಷನ್ ಮಾಡುವಂತೆ ಸಭೆಯಿಂದ ಕೊಡಲ್ಪಡಬಹುದಾದ ಇದಕ್ಕೆ ವ್ಯತಿರಿಕ್ತವಾದ ಯಾವ ಹುಕುಮಿಗಾದರೂ ಒಳಪಟ್ಟು, ಎಲ್ಲಾ ಹೊಸ ಹಿಸ್ಸೆಗಳನ್ನೂ ಮೆಂಬರುಗಳಿಗೆ ಅವರು ಪಡೆಕೊಂಡಿರುವ ಹಿಸ್ಸೆಗಳಿಗೆ ಸರಿಯಾಗಿ ಅರ್ಪಿಸತಕ್ಕದ್ದು, ಮತ್ತು ಎಷ್ಟು ಹಿಸ್ಸೆಗಳಿಗೆ ಮೆಂಬರು ಅರ್ಹನಾಗಿದ್ದಾನೋ ಅದನ್ನು ನಮೂದಿಸಿ, ಹೊಸ ಹಿಸ್ಸೆಗಳನ್ನು ತೆಕ್ಕೊಳ್ಳಲಿಕ್ಕೆ ಒಂದು ವಾಯಿದೆ ಗೊತ್ತುಮಾಡಿ, ಅದರ ಒಳಗಾಗಿ ತೆಕ್ಕೊಳ್ಳದಿದ್ದರೆ, ಅವುಗಳನ್ನು ನಿರಾಕರಿಸಿದಂತೆ ಗ್ರಹಿಸಲ್ಪಡುವದೆಂದು ಬರೆದು ನೋಟಿಸ್ ಕೊಡತಕ್ಕದ್ದು, ಮತ್ತು ಅಂತ ವಾಯಿದೆ ಮುಗಿದ ತರುವಾಯು ಅಥವಾ ಯಾವ ಮೆಂಬರಿಗೆ ಅಂತ ನೋಟಿಸ್ ಕೊಡ

ಲ್ಪಟ್ಟಹೋ, ಅವನು ಅರ್ಪಿಸೋಣಾದ ಹಿಸ್ಸೆಗಳು ತನಗೆ ಜರೂರಿಲ್ಲವೆಂದು ಹೇಳುತ್ತಾನೆಂಬ ವರ್ತಮಾನ ಅವನ ಬಳಿಯಿಂದ ಬಂದ ಮೇಲೆ, ಡೈರೆಕ್ಟರುಗಳು ಅವುಗಳನ್ನು ಕಂಪೆನಿಗೆ ಬಹಳ ಪ್ರಯೋಜನಕರವಾಗಿ ತೋರುವ ರೀತಿಯಲಿ ವಿನಿಯೋಗಿಸತಕ್ಕದ್ದು.

(28.) ಹೊಸ ಹಿಸ್ಸೆಗಳನ್ನು ಉಂಟುಮಾಡಿದ್ದರಿಂದ ವಸೂಲ್ಮಾಡೋಣಾದ ಯಾವ ಮೂಲಧನವಾಗಲಿ ಪ್ರಥಮ ಮೂಲಧನದ ಒಂದು ಭಾಗವಾಗಿ ಗ್ರಹಿಸಲ್ಪಡತಕ್ಕದ್ದು, ಮತ್ತು ವರಾತಗಳ ಪಾವತಿ ವಿಷಯದಲ್ಲೂ, ವರಾತಗಳನ್ನು ಪಾವತಿ ಮಾಡದ ಸಬಬ್ ಹಿಸ್ಸೆಗಳನ್ನು ಕಳಕೊಳ್ಳುವ ವಿಷಯದಲ್ಲೂ, ಇತರ ವಿಷಯದಲ್ಲೂ, ಅದು ಪ್ರಥಮ ಮೂಲಧನದ ಒಂದು ಭಾಗವಾಗಿದ್ದರೆ ಹ್ಯಾಗೋ ಅದೇ ಪ್ರಕಾರ ಅದೇ ನಿಬಂಧನೆಗಳಿಗೆ ಒಳಪಟ್ಟಿರತಕ್ಕದ್ದು.

General Meetings.
ಸಾಧಾರಣ ಸಭೆಗಳು.

(29.) ಮೊದಲನೆ ಸಾಧಾರಣ ಸಭೆಯು ಕಂಪೆನಿ ರಿಜಿಸ್ಟರಾದ ತರುವಾಯ ಆರು ತಿಂಗಳಿಗೆ ಮೀರದ ಒಂದು ಕಾಲದ ಒಳಗಾಗಿ ಡೈರೆಕ್ಟರುಗಳು ಗೊತ್ತುಮಾಡಬಹುದಾದ ಸ್ಥಳದಲ್ಲಿ ಸೇರತಕ್ಕದ್ದು.

(30.) ಆ ಮೇಲಿನ ಸಾಧಾರಣ ಸಭೆಗಳು ಸಾಧಾರಣ ಸಭೆಯಲ್ಲಿ ಕಂಪೆನಿಯವರಿಂದ ನಿರ್ದೇಶಿಸಲ್ಪಡಬಹುದಾದ ಸ್ಥಳದಲ್ಲಿ ವ ಕಾಲದಲ್ಲಿ ವರುಷದಲ್ಲಿ ಒಂದು ಸಲವಾದರೂ ಸೇರತಕ್ಕದ್ದು; ಮತ್ತು ಸ್ಥಳವೂ ಕಾಲವೂ ನಿರ್ದೇಶಿಸಲ್ಪಡದಿದ್ದರೆ ಡೈರೆಕ್ಟರುಗಳು ಗೊತ್ತುಮಾಡಬಹುದಾದ ಸ್ಥಳದಲ್ಲಿ, ಪ್ರತಿ ವರುಷ ಫೆಬ್ರವರಿ ತಿಂಗಳ ಮೊದಲನೇ ಸೋಮವಾರ ಒಂದು ಸಾಧಾರಣ ಸಭೆ ಸೇರತಕ್ಕದ್ದು.

(31.) ಮೇಲ್ಕಂಡ ಸಾಧಾರಣ ಸಭೆಗಳು ಸಾಮಾನ್ಯ ಸಭೆಗಳೆಂದು ಕರೆಯಲ್ಪಡತಕ್ಕದ್ದು; ಇತರ ಸಭೆಗಳೆಲ್ಲಾ ವಿಶೇಷಯಾನೇ ಅಸಾಧಾರಣ ಸಭೆಗಳೆಂದು ಕರೆಯಲ್ಪಡತಕ್ಕದ್ದು.

(32.) ಡೈರೆಕ್ಟರುಗಳು, ತಮಗೆ ಯುಕ್ತವಾಗಿ ತೋರಿದಾಗ, ಒಂದು ಅಸಾಧಾರಣ ಸಭೆಯನ್ನು ಸೇರಿಸಬಹುದು, ಮತ್ತು ಕಂಪೆನಿಯ ಮೆಂಬರುಗಳ ಪೈಕಿ ಐದರಲ್ಲಿ ಒಂದು ಪಾಲಿಗಿಂತ ಕಮ್ಮಿಯಾಗದಷ್ಟು ಮಂದಿಯಿಂದ ಬರಹ ಮೂಲಕವಾಗಿ ವಿಜ್ಞಾಪನೆ ಮಾಡಿಕೊಳ್ಳಲ್ಪಟ್ಟರೆ ಡೈರೆಕ್ಟರುಗಳು ಅಂತಾ ಅಸಾಧಾರಣ ಸಭೆಯನ್ನು ಸೇರಿಸತಕ್ಕದ್ದು.

(33.) ಮೆಂಬರುಗಳ ವಿಜ್ಞಾಪನೆಯಲ್ಲಿ ಸೇರಬೇಕಾಗಿರುವ ಸಭೆಯ ಉದ್ದೇಶವನ್ನು ನಮೂದಿಸಿ, ಅದನ್ನು ಕಂಪೆನಿಯ ರಿಜಿಸ್ಟರು ಮಾಡಲ್ಪಟ್ಟ ಆಫೀಸಿನಲ್ಲಿ ಇಟ್ಟುಬಿಡತಕ್ಕದ್ದು.

(34.) ಅಂತಾ ವಿಜ್ಞಾಪನೆ ತಲುಪಿದ ಮೇಲೆ ಡೈರೆಕ್ಟರುಗಳು ಒಡನೆ ಒಂದು ಅಸಾಧಾರಣ ಸಭೆಯನ್ನು ಸೇರಿಸಲಿಕ್ಕೆ ಪ್ರವರ್ತಿಸತಕ್ಕದ್ದು. ಅವರು ಸದರಿ ವಿಜ್ಞಾಪನೆಯ ತಾರೀಖು ಲಾಗಾಯತು ಇಪ್ಪತ್ತೊಂದು ದಿವಸಗಳ ಒಳಗಾಗಿ ಅದನ್ನು ಸೇರಿಸಲಿಕ್ಕೆ ಪ್ರವರ್ತಿಸದಿದ್ದರೆ, ಐದರಲ್ಲಿ ಒಂದು ಪಾಲಿಗಿಂತ ಕಮ್ಮಿಯಿಲ್ಲದ ವಿಜ್ಞಾಪನೆಗಾರರು ಯಾ ಇತರ ಮೆಂಬರುಗಳು ತಾವೇ ಒಂದು ಅಸಾಧಾರಣ ಸಭೆಯನ್ನು ಸೇರಿಸಬಹುದು.

Proceedings at General Meeting.
ಸಾಧಾರಣ ಸಭೆಗಳಲ್ಲಿನ ನಡವಳಿತೆಗಳು.

(35.) ಸಭೆ ಸೇರಬೇಕಾದ ಸ್ಥಳವನ್ನೂ ದಿನವನ್ನೂ ಹೊತ್ತನ್ನೂ ಮತ್ತು ವಿಶೇಷ ಕೆಲಸದ ಸಂಗತಿಯಲ್ಲಿ ಅಂತಾ ಕೆಲಸದ ಸಾಮಾನ್ಯ ಸ್ವಭಾವವನ್ನೂ ನಮೂದಿಸಿ, ಇನ್ನು ಮೇಲೆ ನಮೂದಿಸೋಣಾಗುವ ರೀತಿಯಲಿ ಅಥವಾ ಸಾಧಾರಣ ಸಭೆಯಲ್ಲಿ ಕಂಪೆನಿಯವರಿಂದ ನಿರ್ದೇಶಿಸಲ್ಪಡಬಹುದಾದ ಯಾವದಾದರೂ ಇತರ ರೀತಿಯಲಿ, ಮೆಂಬರುಗಳಿಗೆ ಕನಿಷ್ಠ ಪಕ್ಷ ಏಳು ದಿವಸಗಳ ನೋಟೀಸ್ ಕೊಡಲ್ಪಡತಕ್ಕದ್ದು; ಆದರೆ ಯಾವ ಮೆಂಬರಿಗಾದರೂ ಅಂತಾ ನೋಟೀಸ ತಲುಪದೆ ಹೋದ ಸಬಬಿನ ಮೇಲೆ ಯಾವ ಸಾಧಾರಣ ಸಭೆಯ ನಡವಳಿತೆಗಳಾದರೂ ನಿಷ್ಪ್ರಯೋಜನವಾಗ್ಗಕೂಡದು.

(36.) ಅಸಾಧಾರಣ ಸಭೆಯಲ್ಲಿ ನಡಿಸೋಣಾದ ಸಮಸ್ತ ಕೆಲಸವೂ, ಡಿವಿಡೆಂಡನ್ನು ಸ್ಯಾಂಕ್ಷನ್ ಮಾಡುವಿಕೆ ಲೆಕ್ಕಗಳನ್ನೂ ಜಮಾ ಬಾಕಿ ಪಟ್ಟಿಗಳನ್ನೂ ಡೈರೆಕ್ಟರುಗಳ ಸಾಧಾರಣ ರಿಪೋರ್ಟನ್ನೂ ಆಲೋಚನೆಗೆ ತೆಗದುಕೊಳ್ಳುವಿಕೆ ವಿನಹ, ಸಾಧಾರಣ ಸಭೆಯಲ್ಲಿ ನಡಿಸೋಣಾದ ಸಮಸ್ತ ಕೆಲಸವೂ, ವಿಶೇಷವಾದ್ದೆಂದು ಗ್ರಹಿಸಲ್ಪಡತಕ್ಕದ್ದು.

(37.) ಸಾಧಾರಣ ಸಭೆಯವರು ಕೆಲಸಕ್ಕೆ ಪ್ರವರ್ತಿಸುವಾಗ (Quorum) ಕೋರಂ ಸಂಖ್ಯೆಯ ಮೆಂಬರುಗಳು ಹಾಜರಾಗಿರದಿದ್ದರೆ, ಸದರಿ ಸಭೆಯಲ್ಲಿ ಡಿವಿಡೆಂಡಿಗಳ ತೀರ್ಮಾನ ವಿನಹ, ಇನ್ಯಾವ ಕೆಲಸವೂ ನಡಿಸಲ್ಪಡಕೂಡದು. ಸದರಿ ಕೋರಂ ಸಂಖ್ಯೆಯನ್ನು ಈ ಕೆಳಗಿನ ರೀತಿಯಾಗಿ ನಿಶ್ಚೈಸತಕ್ಕದ್ದು, ಹ್ಯಾಗಂದರೆ:—ಸಭೆ ಸೇರುವ ಕಾಲದಲ್ಲಿ ಕಂಪೆನಿಯಲ್ಲಿ ಹಿಸ್ಸೆಗಳನ್ನು ಪಡಕೊಂಡಿರುವವರು ಹತ್ತುಮಂದಿಗೆ ಮೀರದಿದ್ದರೆ, ಕೋರಂ ಆಗಲಿಕ್ಕೆ ಐದುಮಂದಿಸೇರತಕ್ಕದ್ದು; ಹತ್ತುಮಂದಿಗಿಂತ ಹೆಚ್ಚಾಗಿದ್ದರೆ, ಐವತ್ತರವರಿಗೆ ಪ್ರತಿ ಐದುಮಂದಿ ಹೆಚ್ಚು ಮೆಂಬರುಗಳಿಗೆ ಒಬ್ಬನ ಪ್ರಕಾರವೂ, ಐವತ್ತರ ಮೇಲೆ ಪ್ರತಿ ಹತ್ತುಮಂದಿ ಹೆಚ್ಚು ಮೆಂಬರುಗಳಿಗೆ ಒಬ್ಬನ ಪ್ರಕಾರವೂ, ಸದರಿ ಕೋರಂ ಸಂಖ್ಯೆಗೆ ಸೇರಿಸಲ್ಪಡತಕ್ಕದ್ದು, ಆದರೆ ಈ ನಿರ್ಬಂಧಕ್ಕೊಳಗಾಗಿರತಕ್ಕದ್ದು ಏನಂದರೆ—ಯಾವ ಕೋರಂ ಆಗಲಿ ಇಪ್ಪತ್ತು ಮಂದಿಗಿಂತ ಯಾವಾಗಲೂ ಹೆಚ್ಚಾಗಿರಕೂಡದು.

(38.) ಸಭೆ ಸೇರತಕ್ಕ ಬಗ್ಗೆ ಗೊತ್ತು ಮಾಡೋಣಾದ ಕಾಲಕ್ಕಿಂತ ಹೆಚ್ಚಾಗಿ ಒಂದು ಘಂಟೆ ಹೊತ್ತಿನ ಒಳಗಾಗಿ ಕೋರಂ ಆಗಲಿಕ್ಕೆ ಎಷ್ಟುಮಂದಿ ಬೇಕೋ ಅಷ್ಟು ಮಂದಿ ಹಾಜರಾಗದೆ ಹೋದರೆ, ಸದರಿ ಸಭೆಯು, ಮೆಂಬರುಗಳ ವಿಜ್ಞಾಪನೆಯ ಮೇಲೆ ಸೇರಿ

ಸೋಣಾದ್ದಾದಲ್ಲಿ ಅಗಲಿಸಬಿಡಲ್ಪಡತಕ್ಕದ್ದು. ಯಾವಧಾದರೂ ಇತರ ಸಂಗತಿಯಲ್ಲಿ ಅದು ಮೂರನೇ ವಾರದ ಅದೇ ದಿವಸ ಅದೇ ಸ್ಥಳದಲ್ಲಿ ಅದೇ ಹೊತ್ತಿನಲ್ಲಿ ಕೇರುವಂತ ನಿಲ್ಲಿಸಿ ಇಡಲ್ಪಡತಕ್ಕದ್ದು; ಹಾಗೆ ನಿಲ್ಲಿಸಿ ಇಡಲ್ಪಟ್ಟು ಪುನಹ ಕೇರೋಣಾದ ಸಭೆಯಲ್ಲಿ ಸಹ ಕೋರಂ ಹಾಜರಾಗದಿದ್ದರೆ, ಅದು ಗಡುವಿಲ್ಲದ್ದಾಗಿ ನಿಲ್ಲಿಸಿ ಇಡಲ್ಪಡತಕ್ಕದ್ದು.

(39.) ಡೈರೆಕ್ಟರುಗಳ ಬೋರ್ಡಿನ ಅಂದರೆ ಡೈರೆಕ್ಟರುಗಳ ಸಂಘದ ಅಗ್ರಾಸನಾಧಿಪತಿ (ಒಬ್ಬನಿದ್ದರೆ - ಅವನು) ಕಂಪೆನಿಯ ಪ್ರತಿ ಸಾಧಾರಣ ಸಭೆಯಲ್ಲಿಯೂ ಸಭಾನಾಯಕನಾಗಿರತಕ್ಕದ್ದು.

(40.) ಅಂತಾ ಸಭಾನಾಯಕನಿಲ್ಲದಿದ್ದರೆ, ಅಥವಾ ಯಾವ ಸಭೆಯಲ್ಲಾದರೂ ಸಭೆ ಕೇರಲಿಕ್ಕೆ ಗೊತ್ತು ಮಾಡೋಣಾದ ಕಾಲಕ್ಕಿಂತ ಹೆಚ್ಚಾಗಿ ಹದಿನೈದು ನಿಮಿಷಗಳೊಳಗಾಗಿ ಹಾಜರಾಗದಿದ್ದರೆ, ಆಗ ಅಲ್ಲಿ ಬಂದಿರುವ ಮೆಂಬರುಗಳು ತಮ್ಮ ಪೈಕಿ ಯಾವನಾದರೂ ಒಬ್ಬನನ್ನು ಸಭಾನಾಯಕನ್ನಾಗಿ ನೇಮಿಸತಕ್ಕದ್ದು.

(41.) ಸಭೆಯವರ ಸಮ್ಮತಿಯೊಂದಿಗೆ, ಸಭಾನಾಯಕನು, ಯಾವ ಸಭೆಯನ್ನಾದರೂ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬದಲಾಯಿಸಬಹುದು, ಮತ್ತು ಆಗಿಂದಾಗ್ಯೆ ನಿಲ್ಲಿಸಿ ಇಡಬಹುದು; ಆದರೆ ಹಾಗೆ ಪುನಹ ಕೇರುವ ಸಭೆಯಲ್ಲಿ ಅದಕ್ಕೆ ಮೊದಲು ಸಭೆ ಕೇರಿದಾಗ ಯಾವ ಕೆಲಸ ಪೂರೈಸಲ್ಪಡದೆ ಬಿಡಲ್ಪಟ್ಟಿತೋ ಅದನ್ನು ಮಾಡಬೇಕೇ ಹೊರ್ತು ಇನ್ನ್ಯಾವ ಕೆಲಸವನ್ನೂ ಮಾಡಕೂಡದು.

(42.) ಯಾವ ಸಾಧಾರಣ ಸಭೆಯಲ್ಲಾದರೂ, ಕನಿಷ್ಟಪಕ್ಷ ಐದುಮಂದಿ ಮೆಂಬರುಗಳಿಂದ ಪೋಲ್‌ಯೆಂಬ ಅಭಿಪ್ರಾಯ ಕೇಳಲ್ಪಡದಿದ್ದರೆ, ಒಂದು ನಿರ್ಣಯದ ಪಕ್ಷವಾಗಿ ಯಾ ಅದಕ್ಕೆ ವಿರೋಧವಾಗಿ ಇಷ್ಟಿಷ್ಟು ಮಂದಿ ಅಭಿಪ್ರಾಯ ಕೊಟ್ಟರೆಂಬ ಸಂಖ್ಯೆಯು ರುಜುವಾತಿಲ್ಲದೇನೇ, ಸದರಿ ನಿರ್ಣಯ ಮಂಜೂರಾಯಿತೆಂಬ ವಿಷಯದಲ್ಲಿ ಸಭಾನಾಯಕನ ಹೇಳಿಕೆಯೂ ಕಂಪೆನಿಯ ನಡವಳಿಕೆಗಳ ಪುಸ್ತಕದಲ್ಲಿ ಆ ಬಗ್ಯೆ ಮಾಡಲ್ಪಟ್ಟಿರುವ ಖಿತಾಯಿತಿಯೂ ಸಾಕಾದ ಸಾಕ್ಷ್ಯವಾಗಿರತಕ್ಕದ್ದು.

(43.) ಐದು ಯಾ ಹೆಚ್ಚುಮಂದಿ ಮೆಂಬರುಗಳಿಂದ ಪೋಲ್ ಕೇಳಲ್ಪಟ್ಟರೆ, ಅದು ಸಭಾನಾಯಕನು ಹುಕುಂ ಮಾಡುವ ರೀತಿಲಿ ತೆಗೆಯಲ್ಪಡತಕ್ಕದ್ದು, ಮತ್ತು ಅಂತಾ ಪೋಲಿನ ಫಲವೇ ಸಾಧಾರಣ ಸಭೆಯಲ್ಲಿ ಕಂಪೆನಿಯವರಿಂದ ಮಾಡೋಣಾದ ನಿರ್ಣಯವೆಂದು ಗ್ರಹಿಸಲ್ಪಡತಕ್ಕದ್ದು. ಯಾವ ಸಾಧಾರಣ ಸಭೆಯಲ್ಲಾದರೂ ಉಭಯಪಕ್ಷದ ವಾಕ್ಕುಗಳೂ ಸಮವಾಗಿದ್ದಲ್ಲಿ, ಸಭಾನಾಯಕನು ಸೆಕೆಂಡ್ ಯಾ ಕ್ಯಾಸ್ಟಿಂಗ್ ವೋಟ್ ಎಂಬ ಪ್ರಧಾನ ವಾಕ್ಕು ನುಡಿಯಲಿಕ್ಕೆ ಅರ್ಹನಾಗಿರತಕ್ಕದ್ದು.

Votes of Members.

ಮೆಂಬರುಗಳ ವಾಕ್ಕುಗಳು.

(44.) ಪ್ರತಿ ಮೆಂಬರೂ ಹತ್ತು ಹಿಸ್ಸೆಗಳ ವರೆಗೆ ಪ್ರತಿ ಹಿಸ್ಸೆಯ ಬಗ್ಯೆ ಒಂದು ವಾಕ್ಕಿಗೆ ಹಕ್ಕು ಉಂಟಾಗಿರತಕ್ಕದ್ದು. ಪ್ರಥಮ ಹತ್ತು ಹಿಸ್ಸೆಗಳಿಗೆ ಮೇಲೆ ನೂರರವರೆಗೆ ಪ್ರತಿ ಐದು ಹಿಸ್ಸೆಗಳಿಗೆ ಒಂದು ಹೆಚ್ಚುವಾಕ್ಕು ನುಡಿಯುವದಕ್ಕೂ, ಪ್ರಥಮ ನೂರು ಹಿಸ್ಸೆಗಳ ಮೇಲೆ ಪ್ರತಿ ಹತ್ತು ಹಿಸ್ಸೆಗಳಿಗೆ ಒಂದು ಹೆಚ್ಚುವಾಕ್ಕು ನುಡಿಯುವದಕ್ಕೂ ಹಕ್ಕುಳ್ಳವನಾಗಿರತಕ್ಕದ್ದು.

(45.) ಯಾವ ಮೆಂಬರಾದರೂ ಚಿತ್ತಭ್ರಮೆರೋಗಿಯಾಗಿ ಯಾ ಮೂಢನಾಗಿ ಇದ್ದರೆ, ಅವನು ತನ್ನ ಕಮ್ಮಿಟಿಯ ಮೂಲಕವಾಗಿ ಯಾ ಇತರ ನ್ಯಾಯಶಾಸ್ತ್ರಾನುಗುಣವಾದ ಕ್ಯೂರೇಟರನ ಮೂಲವಾಗಿ ವಾಕ್ಕುನುಡಿಯಬಹುದು; ಮತ್ತು ಯಾವ ಮೆಂಬರಾದರೂ ಮೈನರ್ ಅಂದರೆ, ಚಿಕ್ಕಪ್ರಾಯದವನಾಗಿದ್ದರೆ, ಅವನು ತನ್ನ ಗಾರ್ಡಿಯನ್ ಯಾನೆ ಪೋಷಕನ ಮೂಲಕವಾಗಿ ಅಥವಾ ಒಬ್ಬನಿಗಿಂತ ಹೆಚ್ಚು ಮಂದಿ ಗಾರ್ಡಿಯನ್‌ಗಳಿದ್ದಲ್ಲಿ ಅವರ ಪೈಕಿ ಒಬ್ಬನ ಮೂಲಕವಾಗಿ ವಾಕ್ಕು ನುಡಿಯಬಹುದು.

(46.) ಒಂದು ಹಿಸ್ಸೆಗೆ ಯಾ ಹಿಸ್ಸೆಗಳಿಗೆ ಒಬ್ಬನಿಗಿಂತ ಹೆಚ್ಚುಮಂದಿ ಕೇರಿ ಬಾಧ್ಯರಾಗಿದ್ದರೆ, ಸದರಿ ಹಿಸ್ಸೆಯನ್ನು ಯಾ ಹಿಸ್ಸೆಗಳನ್ನು ಪಡಕೊಂಡಿರುವವರ ಪೈಕಿ ಮೆಂಬರುಗಳ ರಿಜಿಸ್ಟರಿನಲ್ಲಿ ಯಾವನ ಹೆಸರು ಮೊದಲಲ್ಲಿ ಇದೆಯೋ, ಅವನು ವಿನಹ ಆ ವಿಷಯದಲ್ಲಿ ವಾಕ್ಕು ನುಡಿಯಲಿಕ್ಕೆ ಇನ್ನ್ಯಾವನೂ ಅರ್ಹನಾಗಿರಕೂಡದು.

(47.) ಯಾವ ಮೆಂಬರಾದರೂ ತಾನು ಕೊಡಬೇಕಾದ ಕಾಲ್ಸ್ ಎಂಬ ವರಾತಗಳ ಬಾಬತು ಹಣವನ್ನೆಲ್ಲಾ ಪಾವತಿ ಮಾಡದೆ ಇದ್ದರೆ, ಯಾವ ಸಾಧಾರಣ ಸಭೆಯಲ್ಲಾದರೂ ಅವನು ವಾಕ್ಕು ನುಡಿಯಲಿಕ್ಕೆ ಅರ್ಹನಾಗಿರಕೂಡದು, ಮತ್ತು ಯಾವ ಮೆಂಬರಾದರೂ, ಕಂಪೆನಿ ರಿಜಿಸ್ಟರಾಗಲ್ಪಟ್ಟು ಮೂರು ತಿಂಗಳು ಕಳೆದ ತರುವಾಯ ಕೇರುವ ಸಭೆಯಲ್ಲಿ ತಾನು ಪರಭಾರೆ ಮೂಲಕ ಪಡಕೊಂಡ ಹಿಸ್ಸೆಯ ವಿಷಯವಾಗಿ ವಾಕ್ಕುನುಡಿಯಲಿಕ್ಕೆ ಅರ್ಹನಾಗಿರಕೂಡದು, ಯಾವ ಪಕ್ಷದಲ್ಲೆಂದರೆ, ಯಾವ ಹಿಸ್ಸೆಯ ಬಾಧ್ಯತೆಯ ಮೇಲೆ ವಾಕ್ಕು ನುಡಿಯಬೇಕೆನ್ನುತ್ತಾನೋ ಅದನ್ನು ಸದರಿ ಸಭೆ ಕೇರುವದಕ್ಕಿಂತ ಕನಿಷ್ಟಪಕ್ಷ ಮೂರು ತಿಂಗಳು ಮುಂಚಿತವಾಗಿ ಪಡಕೊಳ್ಳದೆ ಇದ್ದರೆ ಹಾಗೆ ವಾಕ್ಕು ನುಡಿಯಲಿಕ್ಕೆ ಅರ್ಹನಾಗಿರಕೂಡದು.

(48.) ವಾಕ್ಕುಗಳನ್ನು ಖುದ್ದಾಗಿ ಯಾ ಮುಖ್ತಾಲೀಕನ ಮೂಲಕವಾಗಿ ನುಡಿಯಬಹುದು.

(49.) ಮುಖ್ತಾಲೀಕನನ್ನು ನೇಮಿಸುವ ದಸ್ತಾವೇಜು ಬರಿಯಲ್ಪಟ್ಟದ್ದಾಗಿ, ನೇಮಿಸಿದವನ ದಸ್ಕತ್ತು ಉಳ್ಳದ್ದಾಗಿರತಕ್ಕದ್ದು. ಅಥವಾ, ನೇಮಿಸಿದವರು ಒಂದು ಸಮಾಜದವರಾಗಿದ್ದರೆ, ಅವರ ಮುದ್ರಿಗದ ಮೊಹರು ಹಾಕಲ್ಪಟ್ಟು, ಒಬ್ಬ ಯಾ ಹೆಚ್ಚು ಮಂದಿ ಸಾಕ್ಷಿಗಾರನಿಂದ ಯಾ ಸಾಕ್ಷಿಗಾರರಿಂದ ಸಾಕ್ಷಿ ದಸ್ಕತ್ತು ಮಾಡಲ್ಪಡತಕ್ಕದ್ದು. ಕಂಪೆನಿಯ ಮೆಂಬರಲ್ಲದ ಯಾವ ಮನುಷ್ಯನಾದರೂ ಮುಖ್ತಾಲೀಕನಾಗಿ ನೇಮಿಸಲ್ಪಡಕೂಡದು.

(50.) ಮುಖ್ತಾಲೀಕನನ್ನು ನೇಮಿಸುವ ದಸ್ತಾವೇಜು, ಅದರಲ್ಲಿ ನಮೂದಿಸಲ್ಪಟ್ಟಿರುವ ಮನುಷ್ಯನು ಯಾವ ಸಭೆಯಲ್ಲಿ ವಾಕ್ಯ ನುಡಿಯಲಿಕ್ಕಿದ್ದಾನೋ ಅಂತಾ ಸಭೆ ಕೇರುವದಕ್ಕಿಂತ ಇಪ್ಪತ್ತೆರಡು ಘಂಟೆಗಳಿಗೆ ಕಮ್ಮಿಯಿಲ್ಲದ ಕಾಲಕ್ಕೆ ಮುಂಚಿತವಾಗಿ ಕಂಪೆನಿಯ ರಿಜಿಸ್ಟರ್ಮಾಡಲ್ಪಟ್ಟಿರುವ ಆಫೀಸಿನಲ್ಲಿ ಇಡಲ್ಪಡತಕ್ಕದ್ದು; ಆದರೆ ಮುಖ್ತಾಲೀಕನನ್ನು ನೇಮಿಸಿದ ಯಾವ ದಸ್ತಾವೇಜಾಗಲಿ ಬರಕೊಡಲ್ಪಟ್ಟ ತಾರೀಖು ಲಾಗಾಯಿತು ಹನ್ನೆರಡು ತಿಂಗಳು ಕಳೆದ ತರುವಾಯ ಸಲುವಳಿಯಾಗಕೂಡದು.

(51.) ಮುಖ್ತಾಲೀಕನನ್ನು ನೇಮಿಸುವ ಯಾವ ದಸ್ತಾವೇಜಾಗಲಿ ಈ ಕೆಳಗಿನ ನಮೂನೆ ಪ್ರಕಾರ ಇರತಕ್ಕದ್ದು :—

ಕ್ಲುಪ್ತಪಡಿಸಲ್ಪಟ್ಟ   ಕಂಪನಿ

ಕ್ಲುಪ್ತಪಡಿಸಲ್ಪಟ್ಟ   ಕಂಪೆನಿಯ ಮೆಂಬರಾಗಿ

ವಾಕ್ಯ ಯಾ   ವಾಕ್ಯಗಳು ನುಡಿಯಲಿ

ಕ್ಕೆ ಅರ್ಹನಾಗಿರುವಂತಾ   ದ

ಎಂಬ ನಾನು,   ದಿವಸ ಕೇರುವ ಸಾಧಾ

ರಣ (ಸಂಗತ್ಯಾನುಗುಣವಾಗಿ ಸಾಮಾನ್ಯ ಯಾ ಅಸಾಧಾರಣ) ಸಭೆಯಲ್ಲಿಯೂ, ಅದು ನಿಲ್ಲಿಸಿ ಇಡಲ್ಪಟ್ಟು ಪುನಃ ಕೇರುವ ಸಭೆಯಲ್ಲಿಯೂ (ಅಥವಾ   ಸಂವತ್ಸರದಲ್ಲಿ ಕೇರಬಹುದಾದ ಯಾವ ಸಭೆಯಲ್ಲಾದರೂ) ನನಗೋಸ್ಕರ ವ ನನ್ನ ತರಫಿನಲ್ಲಿ ವಾಕ್ಯ

ನುಡಿಯಲಿಕ್ಕೆ ನನ್ನ ಮುಖ್ತಾಲೀಕನಾಗಿ   ದ   ಎಂಬುವನನ್ನು

ಈ ಮೂಲಕವಾಗಿ ನೇಮಿಸುತ್ತೇನೆ.

ಖತಾರೀಖು   ದಸ್ಕತ

ನಮ್ಮ ಸಮಕ್ಷಮದಲ್ಲಿ ಸದರಿ   ಎಂಬವರಿಂದ ದಸ್ಕತ್ತು ಹಾಕಲ್ಪಟ್ಟಿತು.

Directors.
ಡೈರೆಕ್ಟರುಗಳು.

(52.) ಡೈರೆಕ್ಟರುಗಳ ಸಂಖ್ಯೆಯೂ, ಪ್ರಥಮ ಡೈರೆಕ್ಟರುಗಳ ಹೆಸರುಗಳೂ, ಸಮಾಜದ ಯಾದಾಸ್ತಿಗೆ ರುಜು ಹಾಕಿದವರಿಂದ ಗೊತ್ತುಮಾಡಲ್ಪಡತಕ್ಕದ್ದು.

(53.) ಡೈರೆಕ್ಟರುಗಳು ನೇಮಕರಾಗುವವರೆಗೂ, ಸಮಾಜದ ಯಾದಾಸ್ತಿಗೆ ರುಜು ಹಾಕಿದವರೇ ಡೈರೆಕ್ಟರುಗಳೆಂದು ಗ್ರಹಿಸಲ್ಪಡತಕ್ಕದ್ದು.

(54.) ಡೈರೆಕ್ಟರುಗಳ ಭವಿಷ್ಯತ್ ಮೆಹನತಾನಾವನ್ನೂ, ಪ್ರಥಮ ಸಾಧಾರಣ ಸಭೆಗೆ ಮುಂಚಿತವಾಗಿ ಅವರಿಂದ ನಡಿಸಲ್ಪಟ್ಟ ಕೆಲಸಗಳಿಗಾಗಿ ಮೆಹನತಾನಾವನ್ನೂ ಕಂಪೆನಿಯವರ ಸಾಧಾರಣ ಸಭೆಯಲ್ಲಿ ಗೊತ್ತುಮಾಡತಕ್ಕದ್ದು.

Powers of Directors.
ಡೈರೆಕ್ಟರುಗಳ ಪವರ್ಸ್ ಯಾನೆ ಅಧಿಕಾರಗಳು.

ಮುಳಬಾಗಲು	21	ಕಾಸಿಪುರ	351	ಉತ್ತರಕ್ಕೆ—ಕುಮುದೇನಹಳ್ಳಿಯ ಸರ್ವೆ ನಂ. 44. ಪೂರ್ವಕ್ಕೆ—ಶೃಂಗೇರಿ ಜಡಮಾನಹಳ್ಳಿಯ ಸರ್ವೆ ನಂ. 110, 111, 114 ವ 115, ಬನಕನಹಳ್ಳಿಯ ನಂ. 60, 72, 83, 70, 79, 78, 77 ಮತ್ತು 4. ದಕ್ಷಿಣಕ್ಕೆ—ಕಾಸಿಪುರದ ಸರ್ವೆ ನಂ. 53, 54 ವ 59 ಮತ್ತು ಕೊಂಡೇನಹಳ್ಳಿಯ ನಂ. 100. ಪಶ್ಚಿಮಕ್ಕೆ—22ನೇ ಮೈಲಿಯ 2ನೇ ಫರ್ಲಾಂಗಿನಿಂದ 23ನೇ ಮೈಲಿಯ 1ನೇ ಫರ್ಲಾಂಗಿನ ವರೆವಿಗೆ ಬೌರಿಂಗ್‌ಪೇಟೆ, ಮುಳಬಾಗಲ್ ರಸ್ತೆ ಮತ್ತು ಅತ್ತಿಕುಂಟೆಯ ಸರ್ವೆ ನಂ. 47.
ಬೌರಿಂಗ್‌ಪೇಟೆ.	22	ಕಾರಬೆಲೆ.	260	ಉತ್ತರಕ್ಕೆ—ಕುಪ್ಪನಹಳ್ಳಿಯ ಸರ್ವೆ ನಂ. 23. ಪೂರ್ವಕ್ಕೆ—2ನೇ ಮೈಲಿನ 5ನೇ ಫರ್ಲಾಂಗಿನಿಂದ 3ನೇ ಮೈಲಿನ 7ನೇ ಫರ್ಲಾಂಗ್ ವರೆವಿಗೆ ಬೌರಿಂಗ್‌ಪೇಟೆ, ಕೋಲಾರ ರಸ್ತೆ. ದಕ್ಷಿಣಕ್ಕೆ—ದೊಡ್ಡ ಅಂಕೊಂಡಹಳ್ಳಿಯ ಸರ್ವೆ ನಂ. 18, 19, 20 ವ 31 ಮತ್ತು ಜೋಡಿ ಕಣ್ಣಂಬೆಲೆಯ ಜಮೀನುಗಳು. ಪಶ್ಚಿಮಕ್ಕೆ—ಜೋಡಿ ಕಣ್ಣಂಬೆಲೆಯ ಜಮೀನುಗಳು ಮತ್ತು ಬೈದವೆಲೆಯ ಸರ್ವೆ ನಂ. 21.
ಬೆಂಗಳೂರು.	23	ಪೀಣ್ಯ	599	ಉತ್ತರಕ್ಕೆ—ಕಾಲಿವೆಯು ಜೋಡಿಮಲ್ಲಸಂದ್ರ ಮತ್ತು ಜಾರಕಬಂಡೆ ಕಾವಲ್‌ಗಳ ಸರಹದ್ದು ಬಾಂದುಗಳಿಂದ ಹೊರಟು, ಜಾರಕಬಂಡೆ ಕಾವಲಿನ ಸರ್ವೆ ನಂಬರ್ 54 ವ 97ರ ಅಂಚಿನಲ್ಲಿ ಹಾದು, ಬೆಂಗಳೂರು ಹರಿಹರ ರೈಲ್ವೆ ಲೈನಿನ 205ನೇ ಮೈಲಿಯ 18ನೇ ಟೆಲಿಗ್ರಾಫ್ ಕಂಭದಬಳಿ ಬೇಲಿಯನ್ನು ಸಂಧಿಸುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ 206ನೇ ಮೈಲಿನ 10ನೇ ಟೆಲಿಗ್ರಾಫ್ ಕಂಭದವರೆವಿಗೆ ಹರಿದು, ಜಾಲಹಳ್ಳಿಯ ಸರ್ವೆ ನಂಬರ್ 18, 20, 64, 72, 71 ವ 70, ತಣ್ಣೀರನಹಳ್ಳಿಯ ನಂ. 9, 26 ವ 8ರ ಅಂಚಿನಲ್ಲಿ ಹಾದು, ಪೀಣ್ಯದ ಸರ್ವೆ ನಂ. 74ರ ಬಳಿ ತಣ್ಣೀರನಹಳ್ಳಿ ಮತ್ತು ಪೀಣ್ಯಗಳ ಸರಹದ್ದು ಬಾಂದುಗಳನ್ನು ಸೇರಿ ಹರಿಯುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು, ಪೀಣ್ಯದ ಸರ್ವೆ ನಂ. 74, 75, 126, 43, 44, 51, 50, 49, 131, 55, 130, 127, 128, 18, 19 ವ 20ರ ಅಂಚಿನಲ್ಲಿ ಹಾದು ದಾಸರಹಳ್ಳಿಯ ಸರ್ವೆ ನಂ. 5ರಬಳಿ ಪೀಣ್ಯ ಮತ್ತು ದಾಸರಹಳ್ಳಿಯ ಸರಹದ್ದು ಬಾಂದುಗಳನ್ನು ಸೇರಿ ಹರಿಯುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು, ದಾಸರಹಳ್ಳಿಯ ಸರ್ವೆ ನಂ. 5 ಮತ್ತು ಜೋಡಿ ಮಲ್ಲಸಂದ್ರದ ಸರಹದ್ದಿನ ಉದ್ದಕ್ಕೆ ಅಂಚಿನಲ್ಲಿ ಹಾದು, ಹೊರಟ ಸ್ಥಳವನ್ನು ಸಂಧಿಸುತ್ತದೆ.
		ಜಾಲಹಳ್ಳಿ		ಉತ್ತರಕ್ಕೆ—ಸದರೀ ಕಾಲಿವೆಯು ಬೆಂಗಳೂರು ಹರಿಹರ ರೈಲ್ವೆ ಲೈನಿನ 205ನೇ ಮೈಲಿಯ 18ನೇ ಟೆಲಿಗ್ರಾಫ್ ಕಂಭದಿಂದ ಜಾರಕಬಂಡೆ ಕಾವಲಿನ ಸರ್ವೆ ನಂ. 53, 52, 46, 45 ವ 43ರ ಉದ್ದಕ್ಕೆ ಹೊರಟು, ದೊಡ್ಡ ಬೊಮ್ಮಸಂದ್ರದ ಸರ್ವೆ ನಂ. 23ರ ಬಳಿ ಜಾರಕಬಂಡೆ ಕಾವಲ್ ಮತ್ತು ದೊಡ್ಡಬೊಮ್ಮಸಂದ್ರಗಳ ಸರಹದ್ದು ಬಾಂದುಗಳನ್ನು ಸೇರಿ ಹರಿಯುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ದೊಡ್ಡ ಬೊಮ್ಮಸಂದ್ರದ ಸರ್ವೆ ನಂ. 23 ಜಾಲಹಳ್ಳಿಯ ನಂ. 13ರ ಅಂಚಿನಲ್ಲಿ ಹೊರಟು ಸದರೀ ಕಾಲಿವೆ ದಕ್ಷಿಣಕ್ಕೆ ತಿರುಗುವ ಸ್ಥಳದವರೆವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ, ಜಾಲಹಳ್ಳಿಯ ಸರ್ವೆ ನಂ. 13, 12 ವ 4 ಮತ್ತು ಮೈಕಲ್ ಚಿಕ್ಕೇನಹಳ್ಳಿಯ ನಂ. 5, 9, 8 ವ 11ರ ಅಂಚಿನಲ್ಲಿ ಹೊರಟು, ಮೇಲ್ಕಂಡ ರೈಲ್ವೆ ಲೈನಿನ 205ನೇ ಮೈಲಿಯ 23ನೇ ಕಂಭದ ಬಳಿ ಬೇಲಿಯನ್ನು ಸೇರಿ ಹರಿಯುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಅದೇ ರೈಲ್ವೆ ಲೈನಿನ 205ನೇ ಮೈಲಿಯ 18ನೇ ಕಂಭದವರೆವಿಗೆ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ಹಿರೋ	24	ಕೆಂಚೇನಹಳ್ಳಿ	77	ಉತ್ತರಕ್ಕೆ—ಸದರೀ ಕಾಲಿವೆಯು ವಲಗೀರಹಳ್ಳಿ, ನಾಗದೇನಹಳ್ಳಿ ಮತ್ತು ಕೆಂಚೇನಹಳ್ಳಿಗಳ ಸರಹದ್ದು ಬಾಂದುಗಳಿಂದ ಹೊರಟು, ಕೆಂಚೇನಹಳ್ಳಿಯ ಸರ್ವೆ ನಂ. 19ರ ಅಂಚಿನಲ್ಲಿ ಹಾದು ಅದು ಪೂರ್ವಕ್ಕೆ ತಿರುಗುವ ಸ್ಥಳದವರೆವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಕೆಂಚೇನಹಳ್ಳಿಯ ಸರ್ವೆ ನಂ. 19 ರ ಉದ್ದಕ್ಕೂ ಹೊರಟು ಹರಿಹರ ಮೈಸೂರು ರೈಲ್ವೆ ಲೈನಿನ 217ನೇ ಮೈಲಿಯ 5ನೇ ಟೆಲಿಗ್ರಾಫ್ ಕಂಭದವರೆವಿಗೆ ಹೋಗುತ್ತದೆ.

ತಾಲ್ಲೂಕು.	ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ ಎಕರೆ.	ಚೆಕ್ಕುಬಂದಿ.
				ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಅದೇ ರೈಲ್ವೆ ಲೈನಿನ ಅದೇ ಮೈಲಿಯ 15ನೇ ಕಂಭದವರಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಕಾಲಿವೆಯು ಪಟ್ಟಣಗೆರೆಯ ಸರ್ವೆ ನಂ. 31 ಮತ್ತು ವಲಗೇರಹಳ್ಳಿಯ ನಂ. 40ರ ಉದ್ದಕ್ಕೂ ಹೊರಟು ಹೊರಟ ಸ್ಥಳವನ್ನು ಸಂಧಿಸುತ್ತದೆ.
ಬೆಂಗಳೂರು.	25	ಮಲ್ಲತ್ತಹಳ್ಳಿ	285	ಉತ್ತರಕ್ಕೆ—ಕಾಲಿವೆಯು ಜೋಡಿ ಹುಲ್ಲಾಳ್ ಮತ್ತು ಮಲ್ಲತ್ತಹಳ್ಳಿಗಳ ಸರಹದ್ದು ಬಾಂದುಗಳಿಂದ ಹೊರಟು, ಮಲ್ಲತ್ತಹಳ್ಳಿಯ ಸರ್ವೆ ನಂ. 68, 91, 61, 90, 62, 56, 36, 37 ವ 38ರ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಮಲ್ಲತ್ತಹಳ್ಳಿಯ ಸರ್ವೆ ನಂ. 32 ವ 33 ಮತ್ತು ನಾಗದೇವನಹಳ್ಳಿಯ ನಂ. 28 ವ 26ರ ಉದ್ದಕ್ಕೂ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ನಾಗದೇವನಹಳ್ಳಿಯ ಸರ್ವೆ ನಂ. 7, 12, 20 ವ 21ರ ಉದ್ದಕ್ಕೂ ಹೊರಟು ನಾಗದೇವನಹಳ್ಳಿ ಮತ್ತು ಜೋಡಿ ಹುಲ್ಲಾಳಗಳ ಸರಹದ್ದಿನ ಬಾಂದುಗಳನ್ನು ಸೇರಿ ಹಾದುಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಜೋಡಿ ಹುಲ್ಲಾಳಿನ ಸರಹದ್ದಿನ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ಡಿಟೋ	26	ನಾಗರಭಾವಿ	250	ಉತ್ತರಕ್ಕೆ—ಕಾಲಿವೆಯು ಮಲ್ಲತ್ತಹಳ್ಳಿ ಮತ್ತು ನಾಗರಭಾವಿಗಳ ಸರಹದ್ದು ಬಾಂದುಗಳಿಂದ ಹೊರಟು, ನಾಗರಭಾವಿಯ ಸರ್ವೆ ನಂ. 11, 8, 13, 14, 55, 3, 2, 1 ಮತ್ತು 52ರ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ನಾಗರಭಾವಿಯ ಸರ್ವೆ ನಂ. 51ರ ಉದ್ದಕ್ಕೂ ಹೊರಟು ನಾಯಂಡಹಳ್ಳಿಯ ಸರ್ವೆ ನಂ. 41ರ ಬಳಿ ನಾಗರಭಾವಿ ಮತ್ತು ನಾಯಂಡಹಳ್ಳಿಯ ಸರಹದ್ದು ಬಾಂದುಗಳನ್ನು ಸೇರಿ ಹಾಯುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಕಾಲಿವೆಯು ನಾಯಂಡಹಳ್ಳಿಯ ಸರ್ವೆ ನಂ. 41, 46, 47 ವ 48ರ ಉದ್ದಕ್ಕೂ ಹೊರಟು, ನಾಯಂಡಹಳ್ಳಿ ಮತ್ತು ಮಲ್ಲತ್ತಹಳ್ಳಿಗಳ ಸರಹದ್ದು ಬಾಂದುಗಳನ್ನು ಸೇರಿ ಹಾಯುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಮಲ್ಲತ್ತಹಳ್ಳಿಯ ಸರ್ವೆ ನಂ. 33 ವ 32ರ ಅಂಚಿನಲ್ಲಿ ಹೊರಟು ಹೊರಟ ಸ್ಥಳವನ್ನು ಸಂಧಿಸುತ್ತೆ.
ಡಿಟೋ	27	ಹೆಬ್ಬಾಳ	100	ಉತ್ತರಕ್ಕೆ—ಕಾಲಿವೆಯು ಸರ್ವೆ ನಂ. 31ರ ಕಡೆವರಿಗೂ ಹೋಗಿ ಹೆಬ್ಬಾಳದ ಸರ್ವೆ ನಂ. 33 ವ 23ರ ಉದ್ದಕ್ಕೂ ಹೊರಟು, ಬೆಂಗಳೂರು ನಂದೀದುರ್ಗದ ರಸ್ತೆಯ 5ನೇ ಮೈಲಿನ 1ನೇ ಫರ್ಲಾಂಗನ್ನು ಸಂಧಿಸಿ ಹರಿಯುತ್ತದೆ. ಪೂರ್ವಕ್ಕೆ—ಬೆಂಗಳೂರು ನಂದೀದುರ್ಗದ ರಸ್ತೆಯ ಮೇಲ್ಕಂಡ ಸ್ಥಳದಿಂದ 4ನೇ ಮೈಲಿನ 4ನೇ ಫರ್ಲಾಂಗವರಿಗೆ ಹೋಗುತ್ತದೆ. ದಕ್ಷಿಣಕ್ಕೆ—ಐದು ಗಜಗಳ ಅಗಲವುಳ್ಳ ಭಂಡು ಮ. ಕಮಾಷಲ್ಲಪ್ಪ ಲೈನು ಮೇಲ್ಕಂಡ ಸ್ಥಳದಿಂದ ಸಪ್ಲೈಯುವರ ವಾಟರ್‌ವರ್ಕ್ಸ್ ನಾಲೆಯ 2ನೇ ಮೈಲಿ 3ನೇ ಫರ್ಲಾಂಗ ವರಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೆಬ್ಬಾಳದ ಸರ್ವೆ ನಂ. 27 ವ 28ರ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ಡಿಟೋ	28	ಕಾಡುಗುಡಿ	711	ಉತ್ತರಕ್ಕೆ—ಬೆಂಗಳೂರು ಮದ್ರಾಸ್ ರೈಲ್ವೆ ಲೈನು 207ನೇ ಮೈಲಿನ 14ನೇ ಟೆಲಿಗ್ರಾಫ್ ಕಂಭದಿಂದ 205ನೇ ಮೈಲಿನ 18ನೇ ಕಂಭದವರಿಗೆ ಹೋಗಿ ಕಾಡುಗುಡಿ, ಸರ್ಜಾಪುರದ ರಸ್ತೆಯ 1ನೇ ಮೈಲಿನ 1ನೇ ಫರ್ಲಾಂಗನ್ನು ಸಂಧಿಸುತ್ತದೆ. ಪೂರ್ವಕ್ಕೆ—ಕಾಡುಗುಡಿ, ಸರ್ಜಾಪುರದ ರಸ್ತೆಯ ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ 1ನೇ ಮೈಲಿಯ 6ನೇ ಫರ್ಲಾಂಗವರಿಗೆ ಹೋಗಿ ಕಾಡುಗುಡಿ ಮತ್ತು ಜೋಡಿ ಪತ್ತಂಡೂರ ಸರಹದ್ದು ಬಾಂದುಗಳನ್ನು ಸೇರುತ್ತದೆ. ದಕ್ಷಿಣಕ್ಕೆ—ಕಾಲಿವೆಯು ಮೇಲ್ಕಂಡ ಸ್ಥಳದಿಂದ ಜೋಡಿ ಪತ್ತಂಡೂರ ಸರಹದ್ದಿನ ಉದ್ದಕ್ಕೂ ಹೋಗಿ ಸದರಮಂಗಲದ ಸರ್ವೆ ನಂ. 65 ವ 64ರ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಸದರಮಂಗಲದ ಸರ್ವೆ ನಂ. 60 ವ 59ರ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.

ತಾಲ್ಲೂಕು.	ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ ಎಕರೆಗಳು.	ಚಕ್ಕುಬಂದಿ.
ಬೆಂಗಳೂರು.	29	ಕೊಡಗಿಹಳ್ಳಿ	353	ಉತ್ತರಕ್ಕೆ—ಸರಹದ್ದಿನ ಕಾಲಿವೆಯು ಚಿಕ್ಕ ಬೊಮ್ಮಸಂದ್ರದ ಸರ್ವೆ ನಂ. 37ರ ಬಾಂದುಗಳಿಂದ ಹೊರಟು ಚಿಕ್ಕಬೊಮ್ಮಸಂದ್ರದ ಸರ್ವೆ ನಂ. 37, 53 ವ 28ರ ಅಂಚಿನಲ್ಲಿ ಹಾದು ಅಲ್ಲಾಳಸಂದ್ರದ ಸರ್ವೆ ನಂ. 76ರ ಬಾಂದಿನವರಿವಿಗೆ ಹೋಗುತ್ತದೆ. ಪೂರ್ವಕ್ಕೆ—ಸರಹದ್ದಿನ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಅಲ್ಲಾಳ ಸಂದ್ರದ ಸರ್ವೆ ನಂ. 76, 77, 72, 73, 66 ಮತ್ತು 64ರ ಅಂಚಿನಲ್ಲಿ ಹಾದು ಕೊಡಗಿಹಳ್ಳಿಯ ಸರಹದ್ದು ಬಾಂದುಗಳ ವರಿವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸರಹದ್ದಿನ ಲೈನು ಮೇಲ್ಕಂಡ ಸ್ಥಳದಿಂದ ಹೊರಟು ಕೊಡಗಿಹಳ್ಳಿಯ ಸರ್ವೆ ನಂ 155, 154, 157, 158 ವ 15ರ ಅಂಚಿನಲ್ಲಿ ಹಾದು ತಿಂಡಲಿನ ಸರಹದ್ದು ಬಾಂದುಗಳವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸರಹದ್ದಿನ ಲೈನು ಮೇಲ್ಕಂಡ ಸ್ಥಳದಿಂದ ಹೊರಟು ತಿಂಡಲಿನ ಸರ್ವೆ ನಂ. 78, 37, 21 ವ 34 ಚಿಕ್ಕಬೊಮ್ಮಸಂದ್ರದ 36ರ ಅಂಚಿನಲ್ಲಿ ಹಾದು ಮತ್ತು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ	30	ಬೆಟ್ಟಹಳ್ಳಿ ಎ.	304	ಉತ್ತರಕ್ಕೆ—ಕಾಲಿವೆಯು ದೊಡ್ಡಬೆಟ್ಟಹಳ್ಳಿಯ ಸರಹದ್ದು ಬಾಂದುಗಳಿಂದ ಹೊರಟು [illegible]ರ ಸರ್ವೆ ನಂಬರ 26, 31 ವ 34ರ ಅಂಚಿನಲ್ಲಿ ಹಾದು ಮರಳಕುಂಟೆ ಜೋಡಿ ಗ್ರಾಮದ ಸರಹದ್ದು ಬಾಂದುಗಳ ವರಿವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಮರಳಕುಂಟೆ ಜೋಡಿಗ್ರಾಮದ ಜಮೀನುಗಳು, ಚಿಕ್ಕಬೊಮ್ಮಸಂದ್ರದ ಸರ್ವೆ ನಂ. 36, ತಿಂಡಲಿನ 34 ವ 33ರ ಅಂಚಿನಲ್ಲಿ ಹಾದು ತಿಂಡಲಿನ ಸರ್ವೇ ನಂ. 33ರ ಬಾಂದಿನ ವರಿವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ತಿಂಡಲಿನ ಸರ್ವೆ ನಂ. 24, 29, 30ರ ಅಂಚಿನಲ್ಲಿ ಹಾದು ದೊಡ್ಡಬೆಟ್ಟಹಳ್ಳಿಯ ಸರಹದ್ದು ಬಾಂದುಗಳವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ದೊಡ್ಡಬೆಟ್ಟಹಳ್ಳಿಯ ಸರ್ವೆ ನಂ. 56, 59, 60 ವ 47ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ	31	ಬೆಟ್ಟಹಳ್ಳಿ ಬಿ.	48	ಉತ್ತರಕ್ಕೆ—ಕಾಲಿವೆಯು ಚಿಕ್ಕ ಬೊಮ್ಮಸಂದ್ರದ ಸರ್ವೆ ನಂ. 4ರ ಉದ್ದಕ್ಕೂ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಚಿಕ್ಕಬೊಮ್ಮಸಂದ್ರದ ಸರ್ವೆ ನಂ. 47 ಮತ್ತು 39ರ ಉದ್ದಕ್ಕೂ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಚಿಕ್ಕಬೊಮ್ಮಸಂದ್ರದ ಸರ್ವೆ ನಂ. 37 ಮತ್ತು 36 ಉದ್ದಕ್ಕೂ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮರಳಕುಂಟೆ ಜೋಡಿ ಗ್ರಾಮದ ಜಮೀನುಗಳ ಉದ್ದಕ್ಕೂ ಹಾದು ಹೋಗುತ್ತದೆ.
ಡಿಟೋ	32	ಜಾರಕಬಂಡೆ ಎ.	371	ಉತ್ತರಕ್ಕೆ—ಸರಹದ್ದಿನ ಲೈನು ಮಾವಳ್ಳೀಪುರದ ಸರಹದ್ದು ಬಾಂದುಗಳಿಂದ ಹೊರಟು, ಜಾರಕಬಂಡೆಯ ಸರ್ವೆ ನಂ. 81, 89, 90, 91, 92, 93, 96, 94 ಮತ್ತು 95ರ ಅಂಚಿನಲ್ಲಿ ಹಾದು ಜಾರಕಬಂಡೆಯ ಸರ್ವೇ ನಂ. 95ರ ಬಾಂದಿನ ವರಿವಿಗೆ ಹೋಗುತ್ತದೆ. ಪೂರ್ವಕ್ಕೆ—ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಜಾರಕಬಂಡೆಯ ಸರ್ವೆ ನಂ. 67ರ ಕಡೆವರಿವಿಗೂ ಹೊರಟು ವೀರಸಾಗರದ ಸರ್ವೆ ನಂ. 34 ಮತ್ತು 32ರ ಅಂಚಿನಲ್ಲಿ ಹಾದು ಜೋಡಿ ಹಾವುರಾಜಪುರದ ಸರಹದ್ದು ಬಾಂದುಗಳ ವರಿವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಹಾವುರಾಜಪುರ ಜೋಡಿಗ್ರಾಮದ ಜಮೀನುಗಳ ಅಂಚಿನಲ್ಲಿ ಹಾದು ಜೋಡಿ ಪೈಲಗೆರೆ ಸರಹದ್ದು ಬಾಂದುಗಳವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸರಹದ್ದಿನ ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು, ಪೈಲಗೆರೆ ಮತ್ತು ಮಾವಳ್ಳೀಪುರ ಜೋಡಿಗ್ರಾಮಗಳ ಜಮೀನುಗಳ ಅಂಚಿನಲ್ಲಿ ಹಾದು ಮತ್ತು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ	33	ಜಾರಕಬಂಡೆ ಬಿ.	123	ಉತ್ತರಕ್ಕೆ—ಸರಹದ್ದಿನ ಕಾಲಿವೆಯು ಜಾರಕಬಂಡೆಯ ಸರಹದ್ದು ಬಾಂದುಗಳಿಂದ ಹೊರಟು ಅವಲಹಳ್ಳಿಯ ಸರ್ವೆ ನಂ. 57ರ ಅಂಚಿನಲ್ಲಿ ಹಾದು ರಾಮಗೊಂಡಹಳ್ಳಿಯ ಸರಹದ್ದು ಬಾಂದುಗಳವರಿವಿಗೆ ಹೋಗುತದೆ. ಪೂರ್ವಕ್ಕೆ—ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ರಾಮಗೊಂಡಹಳ್ಳಿಯ ಸ. ನಂ. 13ರ ಅಂಚಿನಲ್ಲಿ ಹಾದು ಜಾರಕಬಂಡೆಯ ಸರಹದ್ದು ಬಾಂದುಗಳ ವರಿವಿಗೆ ಹೋಗುತ್ತದೆ.

ತಾಲ್ಲೂಕು.	ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ ಎಕರೆಗಳು.	ಚಕ್ಕುಬಂದಿ.
				ದಕ್ಷಿಣಕ್ಕೆ ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಚಾರಕಬಂಡೆಯ ಸ. ನಂ. 91 ವ 92ರ ಅಂಚಿನಲ್ಲಿ ಹಾದು ಚಾರಕಬಂಡೆಯ ಸ. ನಂ. 92ರ ಅಂಚಿನ ಮಧ್ಯದ ವರೆವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಚಾರಕಬಂಡೆಯ ಸ. ನಂ. 89 ವ 88ರ ಕಡೆ ವರೆವಿಗೂ ಹಾದು ಮತ್ತು ಹೊರಟ ಸ್ಥಳವನ್ನು ಸೇರುತ್ತದೆ.
ನೆಲಮಂಗಲ.	34	ಚಿಕ್ಕಸಂದ್ರ	330	ಉತ್ತರಕ್ಕೆ—ಕಾಲಿವೆಯು ಅಪ್ಪಗೊಂಡನಹಳ್ಳಿಯ ಸರಹದ್ದು ಬಾಂದುಗಳಿಂದ ಹೊರಟು ಸೋಮಸಾಗರದ ಸ. ನಂ. 5, 49, 48, ವ 47, ಚಿಕ್ಕಸಂದ್ರದ 8, 5, 4, ವ 6, ಅಪ್ಪಕೆರೇನಹಳ್ಳಿಯ 24 ವ 23ರ ಅಂಚಿನಲ್ಲಿ ಹಾದು ಚಿಕ್ಕಸಂದ್ರದ ಸರಹದ್ದು ಬಾಂದುಗಳ ವರೆವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಚಿಕ್ಕಸಂದ್ರದ ಸರ್ವೆ ನಂ. 12, 14, 17, 18, 16 ವ 15ರ ಅಂಚಿನಲ್ಲಿ ಹಾದು ಪೋಬ್ಬಾಪುರದ ಸರಹದ್ದು ಬಾಂದುಗಳ ವರೆವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಕೋಲಾರ, ಸೋಮಪುರದ ರಸ್ತೆಯ (62ನೇ ಮೈಲಿಯ 6ನೇ ಫರ್ಲಾಂಗಿನಿಂದ 63ನೇ ಮೈಲಿಯ 5ನೇ ಫರ್ಲಾಂಗಿನ ವರೆವಿಗೆ) ಉದ್ದಕ್ಕೂ ಹೊರಟು ಅಲ್ಲಿಂದ ಆದಿ ಹೊಸಹಳ್ಳಿಯ ಸರ್ವೆ ನಂ. 6 ಮತ್ತು 7ರ ಅಂಚಿನಲ್ಲಿ ಹಾದು ಅಪ್ಪಗೊಂಡನಹಳ್ಳಿಯ ಸರಹದ್ದು ಬಾಂದುಗಳ ವರೆವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು, ಅಪ್ಪಗೊಂಡನಹಳ್ಳಿಯ ಸರ್ವೆ ನಂ. 17, 18 ವ 19ರ ಅಂಚಿನಲ್ಲಿ ಹಾದು ಮತ್ತು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ	35	ಕೃಷ್ಣರಾಜಪುರ	423	ಉತ್ತರಕ್ಕೆ—ಕಾಲಿವೆಯು ಕೋಲಾರ, ಸೋಮಪುರದ ರಸ್ತೆಯ ಉದ್ದಕ್ಕೂ (62ನೇ ಮೈಲಿಯ 6ನೇ ಫರ್ಲಾಂಗಿನಿಂದ 63ನೇ ಮೈಲಿಯ 5ನೇ ಫರ್ಲಾಂಗ್ ವರೆವಿಗೆ) ಹೊರಟು ಹುಲ್ಕುಂಟೆ ಸರಹದ್ದು ಬಾಂದುಗಳ ವರೆವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಹುಲ್ಕುಂಟೆಯ ಸರ್ವೆ ನಂ. 132ರ ಅಂಚಿನಲ್ಲಿ ಹಾದು ಪೋಬ್ಬಾಪುರದ ಸರಹದ್ದು ಬಾಂದುಗಳ ವರೆವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಪೋಬ್ಬಾಪುರದ ಸರ್ವೆ ನಂ. 31, 32, 33 ವ 12ರ ಅಂಚಿನಲ್ಲಿ ಹಾದು ಕೃಷ್ಣರಾಜಪುರದ ಸರ್ವೆ ನಂ. 19ರ ಬಾಂದಿನ ವರೆವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಪೋಬ್ಬಾಪುರದ ಸರ್ವೆ ನಂ. 15 ಮತ್ತು ಆದಿ ಹೊಸಹಳ್ಳಿಯ ಸರ್ವೆ ನಂ. 8ರ ಅಂಚಿನಲ್ಲಿ ಹಾದು ಮತ್ತು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ	36	ಮಾವಿನಕೊಮ್ಮನಹಳ್ಳಿ	435	ಉತ್ತರಕ್ಕೆ—ಕಾಲಿವೆಯು ಪೋಬ್ಬಾಪುರದ ಸರ್ವೆ ನಂ. 37ರ ಬಾಂದಿನಿಂದ ಹೊರಟು ಪೋಬ್ಬಾಪುರದ ಸರ್ವೆ ನಂ. 37, 17 ವ 34ರ ಅಂಚಿನಲ್ಲಿ ಹಾದು ಕೊಡಗಿಹಳ್ಳಿಯ ಸರಹದ್ದು ಬಾಂದುಗಳ ವರೆವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು, ಕೊಡಗಿಹಳ್ಳಿಯ ಸರ್ವೆ ನಂ. 12, 13 ವ 14 ತಡಸಗಟ್ಟದ 95, 94ರ ಅಂಚಿನಲ್ಲಿ ಹಾದು ಮಾವಿನಕೊಮ್ಮನಹಳ್ಳಿಯ ಸರಹದ್ದು ಬಾಂದುಗಳ ವರೆವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಮಾವಿನಕೊಮ್ಮನಹಳ್ಳಿಯ ಸರ್ವೆ ನಂ. 8, 20, 22, 23 ವ 29ರ ಅಂಚಿನಲ್ಲಿ ಹಾದು ಕೆರೆಹಳ್ಳಿಯ ಸರಹದ್ದು ಬಾಂದುಗಳ ವರೆವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಸದರೀ ಕಾಲಿವೆಯು ಹೊರಟು ಕೆರೆಹಳ್ಳಿಯ ಸರ್ವೆ ನಂ. 57 ವ 43, ಪೋಬ್ಬಾಪುರದ 54 ಮತ್ತು 38ರ ಕಡೆವರೆವಿಗೂ ವ 42ರ ಅಂಚಿನಲ್ಲಿ ಹಾದು ಮತ್ತು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ	37	ಕೆಂಚನಪುರ	535	ಉತ್ತರಕ್ಕೆ—ಕಾಲಿವೆಯು ಬಿಲಗೆರೆಯ ಸರ್ವೆ ನಂ. 49ರ ಬಾಂದಿನಿಂದ "ಸೆಂಟ್ರಲ್ ಪ್ಲಾಂಟೇಷನಿನ" ಉದ್ದಕ್ಕೂ ಹೊರಟು ಅಂಚುಗೆರೆಯ ಬಾಂದುಗಳ ವರೆವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಅಂಚುಗೆರೆಯ ಸರ್ವೆ ನಂ. 53 ಮತ್ತು ಜೋಡಿ ಭದ್ರಾಪುರದ ಜಮೀನುಗಳ ಅಂಚಿನಲ್ಲಿ ಹಾದು ಹೋಗುತ್ತದೆ.

ತಾಲ್ಲೂಕು.	ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ ಎಕರೆಗಳು.	ಚೆಕ್ಕುಬಂದಿ.
				ದಕ್ಷಿಣಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ವಡಕಾಟದ ಸರ್ವೆ ನಂ. 66, 65, 64 ವ 62, ಛಡನಗಟ್ಟದ ನಂ. 6 ವ 5ರ ಅಂಚಿನಲ್ಲಿ ಹಾದು ಕೆಂಚಿನಪುರದ ಸರಹದ್ದು ಬಾಂದುಗಳ ವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಕೆಂಚಿನಪುರದ ಸರ್ವೆ ನಂ. 27 ವ 9, ಬಿಳಗೆರೆಯ ನಂ. 75, 74, 65, 67, 47, 51, 50 ವ 49ರ ಅಂಚಿನಲ್ಲಿ ಹಾದು ಮತ್ತು ಹೊರಟ ಸ್ಥಳವನ್ನು ಸೇರುತ್ತದೆ.
ನೆಲಮಂಗಲ.	38	ಮಾಚೋಹಳ್ಳಿ		ಉತ್ತರಕ್ಕೆ—ಕಾಲಿವೆಯು ಮಾಚೋಹಳ್ಳಿಯ ಸರ್ವೆ ನಂ. 70, 69, 59 ವ 56ರ ಉದ್ದಕ್ಕೂ ಹೊರಟು ಕಾಚೋಹಳ್ಳಿಯ ಸರ್ವೆ ನಂ. 44ರ ಬಳಿ ಮಾಚೋಹಳ್ಳಿ ಮತ್ತು ಕಾಚೋಹಳ್ಳಿಗಳ ಸರಹದ್ದು ಬಾಂದುಗಳನ್ನು ಸೇರುತ್ತವೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಕಾಚೋಹಳ್ಳಿಯ ಸರ್ವೆ ನಂ. 44 ವ 42ರ ಉದ್ದಕ್ಕೂ ಹೊರಟು ಬೆಂಗಳೂರು ಮಾಗಡಿ ರಸ್ತೆಯ 10ನೇ ಮೈಲಿಯ 7ನೇ ಫರ್ಲಾಂಗನ್ನು ಸಂಧಿಸುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸರಹದ್ದು 11ನೇ ಮೈಲಿಯ 8ನೇ ಫರ್ಲಾಂಗ್ ವರಿವಿಗೆ ರಸ್ತೆಯ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ—ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಮಾಚೋಹಳ್ಳಿಯ ಸರ್ವೆ ನಂ. 49, 51, 52, 81, ವ 80ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸಂಧಿಸುತ್ತದೆ.
ಡಿಟೋ	..	ಡಿಟೋ ಡಿಟೋ ಎ	270	ಉತ್ತರಕ್ಕೆ—11ನೇ ಮೈಲಿಯ 8ನೇ ಫರ್ಲಾಂಗಿನಿಂದ 10ನೇ ಮೈಲಿಯ 7ನೇ ಫರ್ಲಾಂಗ್ ವರಿವಿಗೆ ಬೆಂಗಳೂರು ಮಾಗಡಿ ರಸ್ತೆ. ಪೂರ್ವಕ್ಕೆ—ಲೈನು ಮೇಲ್ಕಂಡ ಸ್ಥಳದಿಂದ ಕಾಚೋಹಳ್ಳಿಯ ಸರ್ವೆ ನಂ. 88ರ ಉದ್ದಕ್ಕೂ ಹೊರಟು ಕೊಡಗಿಹಳ್ಳಿಯ ಸರ್ವೆ ನಂ. 47ರ ಬಳಿ ಕಾಚೋಹಳ್ಳಿ, ಮಾಚೋಹಳ್ಳಿ ಮತ್ತು ಕೊಡಗಿಹಳ್ಳಿಗಳ ಸರಹದ್ದು ಬಾಂದುಗಳನ್ನು ಸೇರುತ್ತದೆ. ದಕ್ಷಿಣಕ್ಕೆ—ಸದರೀ ಲೈನು ಮೇಲ್ಕಂಡ ಸ್ಥಳದಿಂದ ಕೊಡಗಿಹಳ್ಳಿಯ ಸರ್ವೆ ನಂ. 47ರ ಉದ್ದಕ್ಕೂ ಹೊರಟು ಕೊಡಗಿಹಳ್ಳಿ ಮತ್ತು ಜೋಡಿ ಸೀಗೆಹಳ್ಳಿಗಳ ಸರಹದ್ದು ಬಾಂದುಗಳನ್ನು ಸೇರುತ್ತದೆ. ಪಶ್ಚಿಮಕ್ಕೆ—ಸದರೀ ಲೈನು ಮೇಲ್ಕಂಡ ಸ್ಥಳದಿಂದ ಜೋಡಿ ಸೀಗೆಹಳ್ಳಿಯ ಸರ[illegible]ನ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ	39	ಕಲ್ಲುಪಾಳ್ಯ	1·6	ಉತ್ತರಕ್ಕೆ—ಕಾಲಿವೆಯು ಮುನಿಯನಪಾಳ್ಯ, ಜೋಡಿ ನರಸೀಪುರ ಮತ್ತು ಜೋಡಿ ಕೋರೇನಾಗಸಂದ್ರಗಳ ಸರಹದ್ದು ಬಾಂದುಗಳಿಂದ ಹೊರಟು, ಜೋಡಿ ಕೋರೇನಾಗಸಂದ್ರದ ಸರಹದ್ದಿನ ಉದ್ದಕ್ಕೂ ಹೋಗಿ, 199ನೇ ಮೈಲಿಯ 16ನೇ ಟೆಲಿಗ್ರಾಫ್ ಕಂಭದ ಬಳಿ ಬೆಂಗಳೂರು ಹರಿಹರದ ರೈಲ್ವೆ ಲೈನು ದಾಟಿ ಮತ್ತು ಹೆಸರಗಟ್ಟದ ಸರ್ವೆ ನಂ. 252ರ ಕಡೆವರಿವಿಗೂ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೆಸರಘಟ್ಟದ ಸರ್ವೆ ನಂ. 251ರ ಒಂದು ಭಾಗದ ಉದ್ದಕ್ಕೂ ಹೊರಟು, ಜೋಡಿ ಕೋರೇನಾಗಸಂದ್ರದ ಅರ್ಕಾವತಿ ನದಿಗಳ ಸರಹದ್ದಿನ ಉದ್ದಕ್ಕೂ ಹೋಗಿ, ಮೇಲ್ಕಂಡ ರೈಲ್ವೆ ಲೈನು 200ನೇ ಮೈಲಿಯ 5ನೇ ಟೆಲಿಗ್ರಾಫ್ ಕಂಭದ ಬಳಿ ದಾಟಿ ಮತ್ತು ಹೆಸರಘಟ್ಟದ ಸರ್ವೆ ನಂ. 254ರ ಸರಹದ್ದು ಬಾಂದುಗಳನ್ನು ಸೇರುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೆಸರಘಟ್ಟದ ಸರ್ವೆ ನಂ. 254, ಮುನಿಯನಪಾಳ್ಯದ ಸರ್ವೆ ನಂ. 7 ವ 8 ಮತ್ತು 13ರ ಕಡೆ ವರಿಗೂ ಉದ್ದಕ್ಕೆ ಹಾದು, ಮುನಿಯನಪಾಳ್ಯ ಮತ್ತು ಜೋಡಿ ನರಸೀಪುರಗಳ ಸರಹದ್ದಿನ ಬಾಂದುಗಳನ್ನು ಸೇರುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಜೋಡಿ ನರಸೀಪುರದ ಸರಹದ್ದಿನ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ಡಿಟೋ	40	ಗೋವಿಂದಪುರ	48	ಉತ್ತರಕ್ಕೆ—ಕಾಲಿವೆಯು ಗೋವಿಂದಪುರದ ಸರ್ವೆ ನಂ. 9ರ ಉದ್ದಕ್ಕೂ ಅದು ಪೂರ್ವಕ್ಕೆ ತಿರುಗುವ ವರಿವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಗೋವಿಂದಪುರದ ಸರ್ವೆ ನಂ. 9ರ ಉದ್ದಕ್ಕೂ ಹೊರಟು, ಬೆಂಗಳೂರು ರೈಲ್ವೆ ಲೈನನ್ನು 198ನೇ ಮೈಲಿಯ 23ನೇ ಟೆಲಿಗ್ರಾಫ್ ಕಂಭದ ಬಳಿ ಸೇರುತ್ತದೆ. ದಕ್ಷಿಣಕ್ಕೆ—ಬೆಂಗಳೂರು, ಹರಿಹರ ರೈಲ್ವೆ ಲೈನು ಮೇಲ್ಕಂಡ ಸ್ಥಳದಿಂದ ಅದೇ ಮೈಲಿಯ 20ನೇ ಕಂಭದ ವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಕಾಲಿವೆಯು ಮೇಲ್ಕಂಡ ಸ್ಥಳದಿಂದ ಗೋವಿಂದಪುರದ ಸರ್ವೆ ನಂ. 25, 18, 10 ಮತ್ತು 9ರ ಒಂದು ಭಾಗದ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.

ತಾಲ್ಲೂಕು.	ನಂಬರು	ಪ್ರಾಗ್ರೇಷನಿನ ಹೆಸರು.	ವಿಸ್ತೀರ್ಣ ಎಕರೆಗಳು	ಚೆಕ್ಕುಬಂದಿ.
ನೆಲಮಂಗಲ.		ಅಗ್ರಹಾರ	9½	ಉತ್ತರಕ್ಕೆ—ಕಾಲಿವೆಯು ಅಗ್ರಹಾರ ಮತ್ತು ಜೋಡಿ ಹೊಸಹಳ್ಳಿಗಳ ಸರಹದ್ದು ಬಾಂದುಗಳಿಂದ ಹೊರಟು ಜೋಡಿ ಹೊಸಹಳ್ಳಿಯ ಸರಹದ್ದಿನ ಉದ್ದಕ್ಕೂ ಹೋಗುತ್ತದೆ. ಪೂರ್ವಕ್ಕೆ—ಅಗ್ರಹಾರದ ಸರ್ವೆ ನಂ. 4 ಅದೇ ಗ್ರಾಮದ ಸರ್ವೆ ನಂ. 7ರ ಬಾಂದುಗಳು ಸೇರುತ್ತದೆ. ದಕ್ಷಿಣಕ್ಕೆ—ಕಾಲಿವೆಯು ಅಗ್ರಹಾರದ ಸರ್ವೆ ನಂ. 7ರ ಒಂದು ಭಾಗದ ಉದ್ದಕ್ಕೂ ಮತ್ತು ನಂ. 6ರ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ—ಅಗ್ರಹಾರದ ಸರ್ವೆ ನಂ. 12 ಹೊರಟ ಸ್ಥಳವನ್ನು ಸಂಧಿಸುತ್ತದೆ.
ಡಿಟೋ		ಹುಸ್ಕೂರು	13	ಉತ್ತರಕ್ಕೆ—ಕಾಲಿವೆಯು ತೋಟಗೆರೆಯ ಸರ್ವೆ ನಂ. 29ರ ಬಳಿ ಹುಸ್ಕೂರು ಮತ್ತು ತೋಟಗೆರೆಗಳ ಸರಹದ್ದು ಬಾಂದುಗಳಿಂದ ಹೊರಟು ಅದೇ ಸರ್ವೆ ನಂಬರಿನ ಉದ್ದಕ್ಕೂ ಹೋಗಿ ಅಗ್ರಹಾರದ ನಂ. 13ರ ಬಳಿ ತೋಟಗೆರೆ ಮತ್ತು ಅಗ್ರಹಾರಗಳ ಸರಹದ್ದು ಬಾಂದುಗಳನ್ನು ಸೇರುತ್ತದೆ. ಪೂರ್ವಕ್ಕೆ—ಸದರೀ ಕಾಲುವೆಯು ಮೇಲ್ಕಂಡ ಸ್ಥಳದಿಂದ ಅಗ್ರಹಾರದ ಸರ್ವೆ ನಂ. 13 ವ 16ರ ಉದ್ದಕ್ಕೂ ಹೊರಟು ಹುಸ್ಕೂರಿನ ನಂ. 146ರ ಬಳಿ ಅಗ್ರಹಾರ ಮತ್ತು ಹುಸ್ಕೂರುಗಳ ಸರಹದ್ದು ಬಾಂದುಗಳನ್ನು ಸೇರುತ್ತದೆ. ದಕ್ಷಿಣಕ್ಕೆ—ಹುಸ್ಕೂರು ಸರ್ವೆ ನಂ. 146. ಪಶ್ಚಿಮಕ್ಕೆ—ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹುಸ್ಕೂರು ಸರ್ವೆ ನಂ 110ರ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
		ಸ್ಯಾಪನಹಳ್ಳಿ	25½	ಉತ್ತರಕ್ಕೆ—196ನೇ ಮೈಲಿಯ 16ರಿಂದ 10ನೇ ಟೆಲಿಗ್ರಾಫ್ ಕಂಭದ ವರಿವಿಗೆ ಮತ್ತು ಸ್ಯಾಪನಹಳ್ಳಿಯ ಸರ್ವೆ ನಂ. 19ರ ಉದ್ದಕ್ಕೂ ಬೆಂಗಳೂರು ಹರಿಹರದ ರೈಲ್ವೆ ಲೈನು. ಪೂರ್ವಕ್ಕೆ—ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಸ್ಯಾಪನಹಳ್ಳಿಯ ಸರ್ವೆ ನಂ. 135ರ ಅಂಚಿನಲ್ಲಿ ಹಾದು ಹುಸ್ಕೂರ ನಂ. 130ರ ಬಳಿ ಸ್ಯಾಪನಹಳ್ಳಿ ಮತ್ತು ಹುಸ್ಕೂರುಗಳ ಸರಹದ್ದು ಬಾಂದುಗಳನ್ನು ಸೇರುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಕಾಲಿವೆಯು ಹುಸ್ಕೂರ ಸರ್ವೆ ನಂ. 130, 7 ವ 10ರ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಸರ್ವೆ ನಂ. 25, 30, 31 ವ 35ರ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ಹೊಸಕೋಟೆ.	41	ದೊಡ್ಡಹಾರಡಿ	973	ಉತ್ತರಕ್ಕೆ—19ನೇ ಮೈಲಿಯ 7ನೇ ಫರ್ಲಾಂಗಿನಿಂದ 18ನೇ ಮೈಲಿಯ 8ನೇ ಫರ್ಲಾಂಗ ವರಿವಿಗೆ ಕೋಲಾರ ಸೋಮೇಶ್ವರದ ರಸ್ತೆ. ಪೂರ್ವಕ್ಕೆ—ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊಸಹಾರಡಿಯ ಸರ್ವೆ ನಂ. 4, ಕುಂಬಾನಹಳ್ಳಿಯ 71 ವ 73ರ ಉದ್ದಕ್ಕೂ ಹೊರಟು ಮತ್ತು ಜೋಡಿ ಅಂಬಿಗನಹಳ್ಳಿಯ ಸರಹದ್ದಿನ ಉದ್ದಕ್ಕೂ ಹೋಗಿ ಜೋಡಿ ಅಂಬಿಗನಹಳ್ಳಿ ಮತ್ತು ಇತ್ತಂಡ್ರ ಗ್ರಾಮಗಳ ಸರಹದ್ದು ಬಾಂದುಗಳನ್ನು ಸೇರುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಜೋಡಿ ಇತ್ತಂಡ್ರ, ಇಸ್ತೂರ ಸರ್ವೆ ನಂ. 7ರ ಸರಹದ್ದಿನ ಉದ್ದಕ್ಕೂ ಹೊರಟು ಇಸ್ತೂರ ಮತ್ತು ಕಾಳೇಶ್ವರ ಜೋಡಿ ಗ್ರಾಮಗಳ ಸರಹದ್ದು ಬಾಂದುಗಳನ್ನು ಸೇರುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಜೋಡಿ ಕಾಳೇಶ್ವರದ, ರಾಮ್ಮಂಟೆಯ ಸರ್ವೆ ನಂ. 15, 34, 42, 35, 38, 39, 40 ವ 41ರ ಮತ್ತು ಗಂಜೀರನಹಳ್ಳಿಯ ನಂ. 1ರ ಸರಹದ್ದಿನ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ಚಿಕ್ಕಬಳ್ಳಾಪುರ.	42	ಜಂಗಮಕೋಟೆ	783	ಉತ್ತರಕ್ಕೆ—ಕಾಲಿವೆಯು ಯಣ್ಣಂಗೂರು ಮತ್ತು ಜೋಡಿ ನಡಪನಾಯಕನಹಳ್ಳಿಗಳ ಗಡಿ ಬಾಂದುಗಳಿಂದ ಹೊರಟು ಜೋಡಿ ನಡಪನಾಯಕನಹಳ್ಳಿ ಮತ್ತು ಅತ್ತಿಗಾನಹಳ್ಳಿಯ ಸರ್ವೆ ನಂ. 1ರ ಸರಹದ್ದಿನ ಉದ್ದಕ್ಕೂ ಹಾದು ಪೂರ್ವಕ್ಕೆ ತಿರುಗುವ ಸ್ಥಳದ ವರಿವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಅತ್ತಿಗಾನಹಳ್ಳಿಯ ಸರ್ವೆ ನಂ. 1ರ ಉದ್ದಕ್ಕೂ, ಜೋಡಿ ಕೃಷ್ಣಹಳ್ಳಿಯ ಮತ್ತು ವಲ್ಲಪ್ಪನಹಳ್ಳಿಯ ಸರ್ವೆ ನಂ. 45ರ ಸರಹದ್ದಿನ ಉದ್ದಕ್ಕೂ ಹೊರಟು ಬಲ್ಲದ ಸರ್ವೆ ನಂ. 16ರ ಬಳಿ ವಲ್ಲಪ್ಪನಹಳ್ಳಿ ಮತ್ತು ಬಲ್ಲಗಳ ಗಡಿ ಬಾಂದುಗಳನ್ನು ಸೇರುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಬಲ್ಲದ ಸರ್ವೆ ನಂ. 16ರ ಉದ್ದಕ್ಕೂ, ಜೋಡಿ ಗೊಲ್ಲಹಳ್ಳಿ ಮತ್ತು ಯಣ್ಣಂಗೂರ ಸರ್ವೆ ನಂ. 89 ವ 88ರ ಸರಹದ್ದಿನ ಉದ್ದಕ್ಕೂ ಹೋಗುತ್ತದೆ.

ತಾಲ್ಲೂಕು.	ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ ಎಕರೆಗಳು.	ಚೆಕ್ಕು ಬಂದಿ.
				ಪಶ್ಚಿಮಕ್ಕೆ—ಸದರೀ ಕಾಲಿವೆಯು ಯಣ್ಣಂಗೂರ ಸರ್ವೆ ನಂ. 88 ವ 90ರ ಬಾಂದುಗಳಿಂದ ಹೊರಟು ಅದೇ ಗ್ರಾಮದ ಸರ್ವೆ ನಂ. 90 ವ 129ರ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ಸಿದ್ಧಘಟ್ಟ.	43	ಚಿಕ್ಕಹಾರಡಿ	291	ಉತ್ತರಕ್ಕೆ—21ನೇ ಮೈಲಿಯ 1ನೇ ಫರ್ಲಾಂಗಿನಿಂದ 20ನೇ ಮೈಲಿಯ 7ನೇ ಫರ್ಲಾಂಗ ವರಿವಿಗೆ ಕೋಲಾರ, ಸೋಮಪುರದ ರಸ್ತೆ. ಪೂರ್ವಕ್ಕೆ—ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಮಲ್ಲೇನಹಳ್ಳಿಯ ಸರ್ವೆ ನಂ. 1ರ ಉದ್ದಕ್ಕೂ ಹೋಗಿ ಮಲ್ಲೇನಹಳ್ಳಿಯ ಮತ್ತು ಜೋಡಿ ಕಲ್ಲೇಪುರದ ಗಡಿಬಾಂದುಗಳನ್ನು ಸೇರುತ್ತದೆ ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಜೋಡಿ ಕಲ್ಲೇಪುರದ ಸರಹದ್ದಿನ ಉದ್ದಕ್ಕೂ ಹೋಗಿ ಜೋಡಿ ಕಲ್ಲೇಪುರ ಮತ್ತು ಸುಂದ್ರಹಳ್ಳಿಗಳ ಗಡಿಬಾಂದುಗಳನ್ನು ಸೇರುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಸುಂದ್ರಹಳ್ಳಿಯ ಸರ್ವೆ 1, ಪ್ರಭಾಪುರದ ನಂ. 3ರ ಉದ್ದಕ್ಕೂ ಮತ್ತು ಜೋಡಿ ಚಿಕ್ಕಬಲ್ಲದ ಸರಹದ್ದಿನ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ಚಿಕ್ಕಬಳ್ಳಾಪುರ.	44	ಕಾಮಶೆಟ್ಟಿಹಳ್ಳಿ.	1265	ಉತ್ತರಕ್ಕೆ—ಕಾಲಿವೆಯು ಕಾಡದಿಬ್ಬೂರ ಸರ್ವೆ ನಂ. 22, 30, 18, 17 ಮತ್ತು 14ರ ಕಡೆವರಿವಿಗೂ ಅದು ಪೂರ್ವಕ್ಕೆ ತಿರುಗುವ ಸ್ಥಳದವರಿವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಕಾಡದಿಬ್ಬೂರ ಸರ್ವೆ ನಂ. 14 ವ 15ರ ಕಡೆ ವರಿವಿಗೂ, ಮರಳಕುಂಟೆಯ ಸರ್ವೆ ನಂ. 185 ವ 10ರ ಕಡೆ ವರಿವಿಗೂ ಮತ್ತು ಅಡವಿ ಗೊಲ್ಲವಾರಹಳ್ಳಿಯ ಸರ್ವೆ ನಂ. 16ರ ಕಡೆ ವರಿವಿಗೂ ಅದು ದಕ್ಷಿಣಕ್ಕೆ ತಿರುಗುವ ವರಿವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಅಡವಿ ಗೊಲ್ಲವಾರಹಳ್ಳಿಯ ಸರ್ವೆ ನಂ. 16, 15, 14, 13 ವ 12ರ ಕಡೆ ವರಿವಿಗೂ, ಜೋಡಿ ಪುಟ್ಟತಿಮ್ಮನಹಳ್ಳಿಯ ಸರಹದ್ದಿನ ಉದ್ದಕ್ಕೂ ಮತ್ತು ಕಾಮಶೆಟ್ಟಿಹಳ್ಳಿಯ ... ನಂ. 24ರ ಕಡೆವರಿವಿಗೂ ಅದು ಪಶ್ಚಿಮಕ್ಕೆ ತಿರುಗುವ ವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಕಾಲಿವೆಯು ಮೇಲ್ಕಂಡ ಸ್ಥಳದಿಂದ ಹೊರಟು ಸರ್ವೆ ನಂ. 2... ಕಡೆವರಿವಿಗೂ, ನಂ. 25ರ ಉದ್ದಕ್ಕೂ ಮತ್ತು ಪುನಹ ಕಾಮಶೆಟ್ಟಿ ಹಳ್ಳಿಯ ನಂ. 24ರ ಕಡೆವರಿವಿಗೂ ಗುಂಡ್ಲಗುರ್ಕಿಯ ನಂ. 61ರ ಉದ್ದಕ್ಕೂ ಮತ್ತು ಕಾಮಶೆಟ್ಟಿಹಳ್ಳಿಯ ನಂ 92, 91 ವ 97ರ ಕಡೆ ವರಿವಿಗೂ ಹಾದು ಹೊರಟ ಸ್ಥಳವನ್ನು ಸಂಧಿಸುತ್ತದೆ.
ಡಿಟೋ	45	ಸಂಬಾರಗಿಡಕಾವಲ್	530	ಉತ್ತರಕ್ಕೆ—ಲೈನು ಸಂಬಾರಗಿಡಕಾವಲ್, ಉಜ್ಜವಾರ ಮತ್ತು ನಾಗತಿಹಳ್ಳಿಗಳ ಗಡಿಬಾಂದುಗಳಿಂದ ಹೊರಟು ನಾಗತಿಹಳ್ಳಿಯ ಸರ್ವೆ ನಂ. 37, ಜೋಡಿ ಹಿರಿಸಡ್ಡೆಯ ಸರಹದ್ದು ದೊಡ್ಡಕಿರುಗುಂಬಿಯ ಸರ್ವೆ ನಂ. 32, 31, 30, 29 ವ 28 ಇವುಗಳ ಉದ್ದಕ್ಕೂ ಹೋಗಿ ದೊಡ್ಡ ಕಿರುಗುಂಬಿ ಮತ್ತು ಕೆಂಚೇನಹಳ್ಳಿಯ ಗಡಿಬಾಂದುಗಳನ್ನು ಸೇರುತ್ತದೆ. ಪೂರ್ವಕ್ಕೆ—ಮೇಲ್ಕಂಡ ಸ್ಥಳದಿಂದ ಲೈನು ಕೆಂಚೇನಹಳ್ಳಿಯ ಸರ್ವೆ ನಂ. 1, ಯಲ್ಲೇಹಳ್ಳಿಯ 30 ಮತ್ತು ಕಶವಾರದ 59ರ ಉದ್ದಕ್ಕೂ ಹೊರಟು ಕಶವಾರ ಮತ್ತು ಜೋಡಿ ಕೊಂಡೇನಹಳ್ಳಿ ಇವುಗಳ ಗಡಿಬಾಂದುಗಳನ್ನು ಸೇರುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಲೈನು ಕೊಂಡೇನಹಳ್ಳಿಯ, ಕಾಡಸೀಗೇನಹಳ್ಳಿಯ ಸರ್ವೆ ನಂ. 48ರ ಸರಹದ್ದಿನ ಉದ್ದಕ್ಕೂ ಹೊರಟು ಕಾಡಸೀಗೇನಹಳ್ಳಿ ಮತ್ತು ಜೋಡಿ ಗೊಲ್ಲಪಡ್ಡೆ ಇವುಗಳಗಡಿಬಾಂದುಗಳನ್ನು ಸೇರುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಲೈನು ಜೋಡಿ ಗೊಲ್ಲಪಡ್ಡೆಯ ಮತ್ತು ಸಂಬಾರಗಿಡಕಾವಲಿನ ಸರ್ವೆ ನಂ. 13 ಇವುಗಳ ಸರಹದ್ದಿನ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ದೇವನಹಳ್ಳಿ		ಡಿಟೋ	592	ಉತ್ತರಕ್ಕೆ—ಲೈನು ದೊಮ್ಮನಹಳ್ಳಿ ಮತ್ತು ಕನತಹಳ್ಳಿ ಗಡಿಬಾಂದುಗಳಿಂದ ಹೊರಟು ಕನತಹಳ್ಳಿಯ ಸರ್ವೆ ನಂ. 160 ಜೋಡಿ ಸುಕ್ಕನ ಬಾಚೇಹಳ್ಳಿಯ ಸರಹದ್ದು ಮತ್ತು ಕನತಹಳ್ಳಿಯ ಸರ್ವೆ. ನಂ. 107 ಇವುಗಳ ಉದ್ದಕ್ಕೂ ಸಂಬಾರಗಿಡಕಾವಲಿನ ಸರ್ವೆ ನಂ. 49ರ ಬಾಂದುಗಳನ್ನು ಸಂಧಿಸುವ ಸ್ಥಳದವರಿವಿಗೆ ಹೋಗುತ್ತದೆ. ಪೂರ್ವಕ್ಕೆ—ಮೇಲ್ಕಂಡ ಸ್ಥಳದಿಂದ ಲೈನು ಸಂಬಾರಗಿಡಕಾವಲಿನ ಸರ್ವೆ ನಂ. 49 ವ 53ರ ಉದ್ದಕ್ಕೂ ಜೋಡಿ ನಾರಾಯಣಪುರದ ಬಾಂದುಗಳನ್ನು ಸಂಧಿಸುವ ಸ್ಥಳದ ವರಿವಿಗೆ ಹೋಗುತ್ತದೆ.

ತಾಲ್ಲೂಕು.	ನಂಬರು.	ಪ್ಲಾಟೇಷನಿನ ಹೆಸರು.	ವಿಸ್ತೀರ್ಣ ಎಕರೆಗಳು.	ಚಕ್ಕುಬಂದಿ.
				ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಲೈನು ಜೋಡಿ ನಾರಾಯಣಪುರ, ಸಂಬಾರಗಿಡ ಕಾವಲಿನ ಸರ್ವೆ ನಂ. 44 ಮತ್ತು ಗೊಲ್ಲಹಳ್ಳಿಯ ಸರ್ವೆ ನಂ. 8 ಇವುಗಳ ಸರಹದ್ದಿನ ಉತ್ತರಕ್ಕೆ ಹೋಗಿ ಗೊಲ್ಲಹಳ್ಳಿಯ ಮತ್ತು ದೊಡ್ಡಮರಳೆಯ ಗಡಿ ಬಾಂದುಗಳನ್ನು ಸಂಧಿಸುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಲೈನು ದೊಡ್ಡಮರಳೆಯ ಸರ್ವೆ ನಂ. 58 ವ 56 ಮತ್ತು ಕೊಮ್ಮನಹಳ್ಳಿಯ ಸರ್ವೆ ನಂ. 81 ಇವುಗಳ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸಂಧಿಸುತ್ತದೆ.
ದೊಡ್ಡಬಳ್ಳಾಪುರ	46	ಗಂಡ್ರಗೊಲಿಪುರ	550	ಉತ್ತರಕ್ಕೆ—ಸರಹದ್ದು ಕಾಲಿವೆಯು ಕುಂಟನಹಳ್ಳಿಯ ಸರ್ವೆ ನಂ. 59ರ ಬಾಂದುಗಳಿಂದ ಹೊರಟು, ಅದೇ ಸರ್ವೆ ನಂಬರಿನ ಕಡೆವರಿವಿಗೂ ಅರಳಮಲ್ಲಿಗೆಯ ಸರಹದ್ದು ಬಾಂದುಗಳ ವರಿವಿಗೆ ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಅರಳಮಲ್ಲಿಗೆಯ ಸರ್ವೆ ನಂ. 93ರ ಮತ್ತು ಜೋಡಿ ಗೊಲ್ಲಹಳ್ಳಿ ಗ್ರಾಮದ ಜಮೀನುಗಳ ಅಂಚಿನಲ್ಲಿ ಹಾದು ಗಜ್ಜಿಗದಹಳ್ಳಿಯ ಸರಹದ್ದು ಬಾಂದುಗಳವರಿವಿಗೆ ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಗಜ್ಜಿಗದಹಳ್ಳಿಯ ಸರ್ವೆ ನಂ. 53, ಮಾದಗೊಂಡಹಳ್ಳಿಯ 14 ಮಾದಗೊಂಡಹಳ್ಳಿಯ ಸರ್ವೆ ನಂ. 14ರ ಅಂಚಿನಮಧ್ಯದ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಕುಂಟನಹಳ್ಳಿಯ ಸರ್ವೆ ನಂ. 65, 70, 71, 72, 57 ವ 59ರ ಕಡೆ ವರಿವಿಗೂ ಹೋಗಿ ಹೊರಟ ಸ್ಥಳವನ್ನು ಸೇರುತದೆ.
ಡಿಟೋ	47	ಜಾಸಂದ್ರ	216	ಉತ್ತರಕ್ಕೆ—ಸರಹದ್ದು ಕಾಲಿವೆಯು ಮಧುರೆಯ ಸರಹದ್ದು ಬಾಂದುಗಳಿಂದ ಹೊರಟು ಜಾಸಂದ್ರದ ಸರ್ವೆ ನಂ. 39, 44 ವ 45 ಜಾಸಂದ್ರದ ಸರ್ವೆ ನಂ. 46ರ ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಸಿರೇಸಂದ್ರದ ಸರ್ವೆ ನಂ. 46, 24 ವ 26 ಜಾಸಂದ್ರದ 48, ಸಿರೇಸಂದ್ರದ ಸರ್ವೆ ನಂ. 27ರ ಬಾಂದಿನ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಸರ್ವೆ ನಂ. 15, 14, 54, 1, ವ 33 ಮತ್ತು ಜಾಸಂದ್ರದ 53 ವ 49ರ ಕಡೆವರಿವಿಗೂ ಮಧುರೆಯ ಸರ್ವೆ ನಂ. 60ರ ಬಾಂದಿನ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಮಧುರೆಯ ಸರ್ವೆ ನಂ. 59 ವ 60ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ತುಮಕೂರು	48	ಪಂಡಿತನಹಳ್ಳಿ	495	ಉತ್ತರಕ್ಕೆ—ಸರಹದ್ದು ಲೈನು ಬೆಳಗುಂಬದ ಸರಹದ್ದು ಬಾಂದುಗಳಿಂದ ಹೊರಟು ಬೆಳಗುಂಬದ ಸರ್ವೆ ನಂ. 34 ಮತ್ತು ದೇವರಾಯದುರ್ಗ ಸ್ಟೇಟ್ ಫಾರೆಸ್ಟು ಜಿನ್ನಪ್ಪನಹಳ್ಳಿಯ ಸರಹದ್ದು ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಜಿನ್ನಪ್ಪನಹಳ್ಳಿಯ ಸರ್ವೆ ನಂ. 22 ವ 19 ಮೈದಲದ ಸರಹದ್ದು ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಮೈದಲದ ಸರ್ವೆ ನಂ. 32, ಪಂಡಿತನಹಳ್ಳಿಯ 1 ವ 8, ಪಂಡಿತನಹಳ್ಳಿಯ ಸರ್ವೆ ನಂ. 4ರ ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಪಂಡಿತನಹಳ್ಳಿಯ ಸರ್ವೆ ನಂ. 9, 25 ವ 28 ಕುಂದೂರ 104 ಇವುಗಳ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸಂಧಿಸುತ್ತದೆ.
ಗುಬ್ಬಿ	49	ಗೊರವಿಪುರ	247	ಉತ್ತರಕ್ಕೆ—ಸರಹದ್ದು ಕಾಲಿವೆಯು ಸರ್ವೆ ನಂ. 56ರ ಪಶ್ಚಿಮದ ಬಾಂದುಗಳಿಂದ ಹೊರಟು ಗೊರವಿಪುರದ ಸರ್ವೆ ನಂ. 56, 67, 54, 55, 52, 63, 64 ವ 71 ಕೋಣನಕಲ್ಲಿನ ನಂ. 27, 26 ವ 24 ಕೋಣನಕಲ್ಲಿನ ಸರ್ವೆ ನಂ. 140ರ ಪಶ್ಚಿಮದ ಬಾಂದಿನ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಕೋಣನ ಕಲ್ಲಿನ ಸರ್ವೆ ನಂ. 14, 17 ವ 18, ಲಕ್ಕೇನಹಳ್ಳಿಯ 157, ಲಕ್ಕೇನಹಳ್ಳಿಯ ಸರ್ವೆ ನಂ. 151ರ ಉತ್ತರದ ಬಾಂದಿನವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ.

ತಾಲ್ಲೂಕು.	ನಂಬರು	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ ಎಕರೆ.	ಚೆಕ್ಕುಬಂದಿ.
				ದಕ್ಷಿಣಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಲಕ್ಕೇನಹಳ್ಳಿಯ ಸರ್ವೆ ನಂ. 151 ವ 161 ಮತ್ತು ಬಿದರೇ ಅಮೃತ ಮಹಲ್ ಕಾವಲಿನ ಜಮೀನುಗಳು ಬಿದರೇ ಅಮೃತಮಹಲ್ ಕಾವಲಿನ ಸರಹದ್ದು ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಗೋರವಿಪುರದ ಸರ್ವೆ ನಂ. 87, 73, 86, 85, 82 ವ 78ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ಗುಬ್ಬಿ.	50	ಗುಬ್ಬಿಪ್ಲಾಂಟೇಷನ್ (ಚನ್ನಶೆಟ್ಟಿಹಳ್ಳಿ ಹೊನ್ನವಳ್ಳಿ ಮತ್ತು ಸೆಟಿಗುಂಟೆ ಬ್ಲಾಕುಗಳು)	700	ಉತ್ತರಕ್ಕೆ—ಹಾಕು ಮಾಡಲ್ಪಟ್ಟ ಸರಹದ್ದು ಲೈನು ಹೊನ್ನವಳ್ಳಿಯ ಸರ್ವೆ ನಂ. 28ರ ಪಶ್ಚಿಮದ ಬಾಂದಿನಿಂದ ಹೊರಟು ಹೊನ್ನವಳ್ಳಿಯ ಸರ್ವೆ ನಂ. 28, 19, 21, 15, 14 (2), 13, 9 (1 ವ 2), 11, 38 ವ 39, ಲಕ್ಕೇನಹಳ್ಳಿಯ 111, ಚಿಕ್ಕಸೆಟ್ಟಿಗುಂಟೆಯ 43, 44, 49, 51 ವ 52 ಚಿಕ್ಕಸೆಟ್ಟಿಗುಂಟೆಯ ಸರ್ವೆ ನಂ. 52ರ ಪೂರ್ವದ ಬಾಂದಿನವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಹಾಕುಮಾಡಲ್ಪಟ್ಟ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಚಿಕ್ಕಸೆಟ್ಟಿಗುಂಟೆಯ ಸರ್ವೆ ನಂ. 29 ವ 32 ಮತ್ತು 35ರ ಕಡೆವರಿವಿಗೂ ಅಂಚಿನಲ್ಲಿ ಹಾದು ಮತ್ತು ಮುದಿಗೆರೆಯ ಸರ್ವೆ ನಂ. 85, 86, 90 ವ 91 ಮುದಿಗೆರೆಯ ಬಾಂದುಗಳವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಹಾಕುಮಾಡಲ್ಪಟ್ಟ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಮುದಿಗೆರೆಯ ಸರ್ವೆ ನಂ. 91, 93 ವ 94, ರಾಯವಾರದ 20 ವ 21, ಚನ್ನಶೆಟ್ಟಿಹಳ್ಳಿಯ 49, 33, 34, 31, 93, 36, 79, 28, 27, 17 ವ 95 ಚನ್ನಶೆಟ್ಟಿಹಳ್ಳಿಯ ಸರಹದ್ದು ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಹಾಕುಮಾಡಲ್ಪಟ್ಟ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಹರವೇಸಂದ್ರದ ಸರ್ವೆ ನಂ. 17, ಅಮ್ಮನಗಟ್ಟದ 29, 34, 35, 36, 43 ವ 44ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ.	51	ಅಮ್ಮನಗಟ್ಟ	412	ಉತ್ತರಕ್ಕೆ—ಸರಹದ್ದು ಕಾಲಿವೆಯು ಅಮ್ಮನಗಟ್ಟದ ಸರ್ವೆ ನಂ. 153ರ ಬಾಂದಿನಿಂದ ಹೊರಟು ಅಮ್ಮನಗಟ್ಟದ ಸರ್ವೆ ನಂ. 153, 156, 163 ವ 181 ಅಮ್ಮನಗಟ್ಟದ ಸರ್ವೆ ನಂ. 187ರ ಪಶ್ಚಿಮ ಬಾಂದಿನವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಹಾಕುಮಾಡಲ್ಪಟ್ಟ ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಅಮ್ಮನಗಟ್ಟದ ಸರ್ವೆ ನಂ. 181, 180, 166, 167, 126, 169, 124, 119, 120, 116, 109, 108 53, 49, 54, 50 ವ 51 ಮತ್ತು ಹರವೇಸಂದ್ರದ 51 ವ 10 ಹರವೇಸಂದ್ರದ ಸರ್ವೆ ನಂ 10ರ ಉತ್ತರದ ಬಾಂದಿನವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸರಹದ್ದು ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಅಮ್ಮನಗಟ್ಟದ ಸರ್ವೆ ನಂ. 12 ವ 4 ಅಮ್ಮನಗಟ್ಟದ ಸರ್ವೆ ನಂ. 134ರ ಪಶ್ಚಿಮ ಬಾಂದಿನವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದಿನ ಕಾಲಿವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಅಮ್ಮನಗಟ್ಟದ ಸರ್ವೆ ನಂ. 134 ವ 133, ಮತ್ತಿಗಟ್ಟದ 52 ವ 55 ಇವುಗಳ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟೋ.	52	ಉದ್ದೀಹೊಸಕೆರೆ	502	ಉತ್ತರಕ್ಕೆ—ಸರಹದ್ದು ಲೈನು ಉದ್ದೀಹೊಸಕೆರೆಯ ಸರ್ವೆ ನಂ. 14ರ ಬಾಂದಿನಿಂದ ಹೊರಟು ಉದ್ದೀ ಹೊಸಕೆರೆಯ ಸರ್ವೆ ನಂ. 17 ವ 18 ತಿಪ್ಪೂರಿನ ಸರಹದ್ದು ಬಾಂದುಗಳವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ತಿಪ್ಪೂರ ಸರ್ವೆ ನಂ. 64, 63, 62, 61, 57, 56, 48, 47, 46, 45 44 ವ 43 ಮದನಗಟ್ಟದ ಸರಹದ್ದು ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಮದನಗಟ್ಟದ ಸರ್ವೆ ನಂ. 12, 13, 14 ವ 15 ಮತ್ತು ಕೋಡಿ ನಾಗೇನಹಳ್ಳಿಯ ಸರ್ವೆ ನಂ. 14ರ ಕಡೆವರಿವಿಗೂ ಸಿರಾ ರಸ್ತೆಯುವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಸಿರ, ಮೈಸೂರು ರಸ್ತೆಯ ಉದ್ದಕ್ಕೂ (32ನೇ ಮೈಲಿಯ 4ನೇ ಫರ್ಲಾಂಗಿನಿಂದ 32ನೇ ಮೈಲಿಯ ಕಲ್ಲಿನ ವರಿವಿಗೆ) ಹೊರಟು ತರುವಾಯ ಉದ್ದೀ ಹೊಸಕೆರೆಯ ಸರ್ವೆ

679

ತಾಲ್ಲೂಕು.	ನಂಬರು	ಗ್ರಾಮಗಳ ಹೆಸರು.	ವಿಸ್ತೀರ್ಣ ಎಕರೆ	ಮೇರೆಗಳು
				ನಂ. 45, 44, 43, 36, 38, 32, 31, 23, 22 ವ 14ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ಗುಬ್ಬಿ	53	ಅಂಕಾಪುರ	336	ಉತ್ತರಕ್ಕೆ—ಸರಹದ್ದು ಲೈನು ಅಂಕಾಪುರದ ಸರ್ವೆ ನಂ. 17ರ ಬಾಂದಿನಿಂದ ಹೊರಟು ಅಂಕಾಪುರದ ಸರ್ವೆ ನಂಬರ 8, 22, 29 ವ 26 ಬೊಮ್ಮೇನಹಳ್ಳಿಯ ಸರ್ವೆ ನಂ. 15ರ ಬಾಂದಿನವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಬೊಮ್ಮೇನಹಳ್ಳಿಯ ಸರ್ವೆ ನಂ. 15, 44, 45, 46 ವ 44, ಬಾಬಿಗನಹಳ್ಳಿಯ 4, 5 ವ 11 ಬೆಂಗಳೂರು ಹೊನ್ನಾವಾರ ರಸ್ತೆಯವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಬೆಂಗಳೂರು ಹೊನ್ನಾವಾರ ರಸ್ತೆಯ 62ನೇ ಮೈಲಿಯ 7ನೇ ಫರ್ಲಾಂಗಿನಿಂದ 63ನೇ ಮೈಲಿಯ 4ನೇ ಫರ್ಲಾಂಗಿನವರಿಗೆ ಅಂಚಿನಲ್ಲಿ ಹಾದುಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಕಾಗೆರನಹಳ್ಳಿಯ ಸರ್ವೆ ನಂ. 55, ಅಂಕಾಪುರದ 18 ವ 17ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟ್ಟೋ	54	ಮಾರಶೆಟ್ಟಿಹಳ್ಳಿ	327	ಉತ್ತರಕ್ಕೆ—ಸರಹದ್ದು ಲೈನು ಮಾರಶೆಟ್ಟಿಹಳ್ಳಿಯ ಸರ್ವೆ ನಂ. 17ರ ಬಾಂದಿನಿಂದ ಹೊರಟು ಮಾರಶೆಟ್ಟಿಹಳ್ಳಿಯ ಸರ್ವೆ ನಂ. 17 ಮತ್ತು ಬಿದರಹಳ್ಳದ ಅಮೃತಮಹಲ್ ಕಾವಲಿನ ಜಮೀನುಗಳು ಅಮ್ಮನಹಳ್ಳಿಯ ಸರಹದ್ದು ಬಾಂದುಗಳ ವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸರಹದ್ದು ಕಾಲುವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಕಂಚೇನಹಳ್ಳಿಯ ಸರ್ವೆ ನಂ. 16, 15, 14, 10 9 ವ 6ರ ದೊಡ್ಡೇರಿಯ ಸರಹದ್ದು ಬಾಂದುಗಳ ವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಕಾಲುವೆಯು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ದೊಡ್ಡೇರಿಯ ಸರ್ವೆ ನಂ. 4, 3, 2 ವ 25ರ ದೊಡ್ಡೇರಿಯ ಸರಹದ್ದು ಬಾಂದುಗಳ ವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಮಾರಶೆಟ್ಟಿಹಳ್ಳಿಯ ಸರ್ವೇ ನಂ. 131, 151, 168, 167, 154, 152, 11, 12, 16 ವ 17ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟ್ಟೋ	55	ಹರ್ರೇನಹಳ್ಳಿ	476	ಉತ್ತರಕ್ಕೆ—ಸರಹದ್ದು ಲೈನು ಕರೇ ಕುರ್ಚದ ಸರಹದ್ದು ಬಾಂದುಗಳಿಂದ ಹೊರಟು ಹರ್ರೇನಹಳ್ಳಿಯ ಸರ್ವೇ ನಂ. 16 11, 10, 9 ವ 8ರ ಹೊಸಹಳ್ಳಿಯ ಸರಹದ್ದು ಬಾಂದುಗಳ ವರಿಗೆ ಅಂಚಿನಲ್ಲಿ ಹಾದು ಹೋ[illegible] ಪೂರ್ವಕ್ಕೆ—ಸದರಿ ಸರಹದ್ದು ಲೈನು ಕೊ[illegible] ಹೇಳಲ್ಪಟ್ಟ ಸ್ಥಳದಿಂದ ಹೊರಟು ಹೊಸಹಳ್ಳಿಯ ಸರ್ವೆ ನಂ. 20, 21 ವ 22, ಹಿಂಡಗನಹಳ್ಳಿಯ 10 ಹಿಂಡಗನಹಳ್ಳಿಯ ಸರ್ವೆ ನಂ. 1ರ ಬಾಂದಿನವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಲೈನು ಬೆಂಗಳೂರು ಹೊನ್ನಾವಾರ ರಸ್ತೆಯ 72ನೇ ಮೈಲಿಯ 5ನೇ ಫರ್ಲಾಂಗಿನಿಂದ 71ನೇ ಮೈಲಿಯ 5ನೇ ಫರ್ಲಾಂಗಿನವರಿಗೆ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಹರ್ರೇನಹಳ್ಳಿಯ ಸರ್ವೆ ನಂ. 31, 30, 29, 15, 16 ವ 25 ಮತ್ತು ಕರೇ ಕುರ್ಚದ 6 ಇವುಗಳ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ಡಿಟ್ಟೋ	56	ಬಿಕ್ಕೇಹಳ್ಳದ ಕಾವಲ್	793	ಉತ್ತರಕ್ಕೆ—ಸರಹದ್ದು ಲೈನು ಬೆಂಗಳೂರು ಹೊನ್ನಾವಾರ ರಸ್ತೆಯ 72ನೇ ಮೈಲಿಯ 5ನೇ ಫರ್ಲಾಂಗಿನಿಂದ 71ನೇ ಮೈಲಿಯ 5ನೇ ಫರ್ಲಾಂಗ್ ವರಿಗೆ ಉದ್ದಕ್ಕೂ ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಹಿಂಡಗನಹಳ್ಳಿಯ ಸರ್ವೆ ನಂ. 12, 13, ನೇರಳಕೆರೆಯ 22 ವ 23 ಹೊನ್ನೇನಹಳ್ಳಿಯ ಸರಹದ್ದು ಬಾಂದುಗಳ ವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಹೊನ್ನೇನಹಳ್ಳಿಯ ಸರ್ವೆ ನಂ. 10, 11, 12, 23, 24, 25 ವ 26, ಯಡಚಿಕಟ್ಟೆಯ 17, 18, 16 ವ 14 ಹರ್ರೇನಹಳ್ಳಿಯ ಸರಹದ್ದು ಬಾಂದುಗಳ ವರಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಹರ್ರೇನಹಳ್ಳಿಯ ಸರ್ವೆ ನಂ. 50, 51, 49 ವ 34ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.

ತಾಲ್ಲೂಕು.	ನಂಬರು.	ಪ್ಲಾಂಟೇಷನಿನ ಹೆಸರು.	ವಿಸ್ತೀರ್ಣ ಎಕರೆಗಳು.	ಚೆಕ್ಕುಬಂದಿ.
ಗುಬ್ಬಿ.	57	ಕಾಶೀಮಠ	126	ಉತ್ತರಕ್ಕೆ—ಸರಹದ್ದು ಲೈನು ಕೊಡಿಯಾಲದ ಸರ್ವೆ ನಂ. 87ರ ಬಾಂದಿನಿಂದ ಹೊರಟು ಕೊಡಿಯಾಲದ ಸರ್ವೆ ನಂ. 87, ನಿಂಬೇಕಟ್ಟೆಯ 26, 27, 28, 35, 39 ವ 42 ನಿಂಬೇಕಟ್ಟೆಯ ಸರ್ವೆ ನಂ. 26ರ ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ನಿಂಬೇಕಟ್ಟೆಯ ಸರ್ವೆ ನಂ. 26 ವ 25 ಬಿದರೆಯ 82, ಕಾಶಿಮಠದ 1, 2, 3, 4, 6 ವ 8 ಆರಾಧ್ಯಹಳ್ಳಿಯ ಸರಹದ್ದು ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಆರಾಧ್ಯಹಳ್ಳಿಯ ಸರ್ವೆ ನಂ. 16, 17 ವ 19 ಬಿದರೆ ಅಮೃತಮಹಲ್ ಕಾವಲಿನ ಜಮೀನುಗಳು ಮತ್ತು ಬಸವಾಪಟ್ಟದ ಸರ್ವೆ ನಂ. 6 ಕೊಡಿಯಾಲದ ಸರಹದ್ದು ಬಾಂದುಗಳ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ಕೊಡಿಯಾಲದ ಸರ್ವೆ ನಂ. 107 ವ 108ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.
ತಿಪಟೂರು.	58	ವೇಲಾಪುರ	151	ಉತ್ತರಕ್ಕೆ—ಸರಹದ್ದು ಲೈನು ಶಿವರದ ಸರಹದ್ದು ಬಾಂದುಗಳಿಂದ ಹೊರಟು ವೇಲಾಪುರದ ಸರ್ವೆ ನಂ. 36, 35, 34, 46, 31, 47, 1, 2, 3 ವ 18 ತಿಪ್ಟೂರು, ಹಾಸನ ರಸ್ತೆ ವರಿವಿಗೆ ಅಂಚಿನಲ್ಲಿ ಹಾದು ಹೋಗುತ್ತದೆ. ಪೂರ್ವಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು ತಿಪ್ಟೂರು, ಹಾಸನ ರಸ್ತೆಯ 26ನೇ ಮೈಲಿಯ 8ನೇ ಫರ್ಲಾಂಗಿನಿಂದ ಅದೇ ಮೈಲಿಯ 6ನೇ ಫರ್ಲಾಂಗಿನ ವರಿವಿಗೆ ಉದ್ದಕ್ಕೂ ಹಾದು ಹೋಗುತ್ತದೆ. ದಕ್ಷಿಣಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರಟು [illegible] ಹಳ್ಳಿಯ ಸರ್ವೆ ನಂ. 31 ಶಿವರದ ಸರಹದ್ದು ಬಾಂದುಗಳ ವರಿವಿಗೆ ಅಂಚಿನಲ್ಲಿ [illegible]ದು ಹೋಗುತ್ತದೆ. ಪಶ್ಚಿಮಕ್ಕೆ—ಸದರೀ ಸರಹದ್ದು ಲೈನು ಕೊನೆಗೆ ಹೇಳಲ್ಪಟ್ಟ ಸ್ಥಳದಿಂದ ಹೊರ[illegible] ಶಿವರದ ಸರ್ವೆ ನಂ. 36ರ ಅಂಚಿನಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮುಜರಾಯಿ ಇಲಾಖಾ.

ನೋಟಿಫಿಕೇಷನ್.

ನಂ. 1411 ತಾರೀಖು 3ನೇ ಜೂನ್ 1896. ಬೆಂಗಳೂರು.

ಮಾಗಡಿ ತಾಲ್ಲೂಕು ದೊಡ್ಡಮುದಗೆರೆಯಲ್ಲಿರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ರಂಗನಾಥ ದೇವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನು ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ದೊಡ್ಡಮುದಗೆರೆಯಲ್ಲಿರುವ ಶಾನುಭೋಗ ಮರಿಗೋಪಾಲಯ್ಯನವರು.
(2) ದೊಡ್ಡಮುದಗೆರೆ ಶಾನುಭೋಗ ಸಂಜಪ್ಪನವರು.
(3) ಕೆಂಪಾಪುರದ ಶಾನುಭೋಗ ಸೂರನಾರಣಪ್ಪನವರು.
(4) ಸೋಮನಹಳ್ಳಿ, ಮುದಗೆರೆ ಗವುಡರು.
(5) ದೊಡ್ಡ ಮುದಗೆರೆ ಗ್ರಾಮದ ಪಟೇಲ್ ರಂಗೇಗವುಡರು.
(6) ಕುದೂರು ಹೋಬಳಿ ಬಿಸ್ಕೂರಿಗೆ ಸೇರಿದ ಹೊಸಪಾಳ್ಯದ ಚೆನ್ನೇಗವುಡರು.
(7) ಮುದಗೆರೆಗವುಡನ ಮಗ ರಂಗೇಗವುಡ

ಪಿ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೆಕ್ರೆಟರಿ.

ಪಬ್ಲಿಕ್ ವರಕ್ಸ್.

ತಾರೀಖು 28ನೇ ಮೇ 1896.

ನಂ. 270—2412 ಸ್ಯಾನಿಟರಿ ಇಂಜನೀಯರ ಸರ್ಕಲಿಗೆ ಸೇರಿದ ಅಸಿಸ್ಟೆಂಟ್ ಇಂಜನೀಯರ್ ಮಿ. ಜೆ. ಈ. ಪಿ. ಡಿಕ್ರೂಜ್ ಯವರಿಗೆ, ಅವರು ಹೊರಟ ತಾರೀಖು ಲಾಗಾಯತು ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಸಿ. ಬರ್ನ, ಕರ್ನಲ್,
ಮೈಸೂರ ಪಬ್ಲಿಕ್ ವರ್ಕ್ಸ್ ಇಲಾಖಾ,
ಗವರ್ನಮೆಂಟ್ ಸೆಕ್ರೆಟರಿ.

681

ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ನಂ. 23.

ಬೆಂಗಳೂರು, ಗುರುವಾರ, ಜೂನ್ ತಾ॥ 11, ಸ್ನ 1896.

IIನೇ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ.

ತಾರೀಖು 29ನೇ ಆಗಸ್ಟ 1894

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿರುವ 12 ಕಬ್ಬಿಣದ ಅಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್ಸ್‌ಪೆಕ್ಟರ ಜನರಲ್ ಸಾಹೇಬರವರ ಆಫೀಸಿನಲ್ಲಿ ಖರೀದಿಗೆ ದೊರೆಯುತ್ತೆ.

ನಂಬರ.	ತಯಾರ್ ಮಾಡಿದ ಕಾರ್‌ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ)
7	ಬೆಂಗಳೂರು ರಿಕ್ಕಿಯವರ ಕಾರ್‌ಖಾನೆ	ಬೆದಕ್ಕೆ 150
2	ಇಂಗ್ಲಾಂಡ ಪೋರ್ಟರು ಬ್ರದರಸರ ಡಿಟೋ	„ 170
1	ಮದ್ರಾಸ್ ಓಕ್ಸರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಮೋರ್ಯ್ಯಾಮರವರ ಡಿಟೋ	„ 85

ಖರೀದೀದಾರರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಸೇಕಡಾ $10\frac{1}{4}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್, ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂದೀದುರ್ಗದ ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ರಾಜಾಪಟಾಲಂನಲ್ಲಿರುವ ಖಾಜಾ ಅಬ್ದುಲ್‌ರಹಿಂಸಾಬಿ ವಿಷಯದಲ್ಲಿ—

ಸ್ 1895—96ನೇ ಇಸವಿ ದಿವಾಳಿ ಕೇಸ್ ನಂಬರು 39.

ಹುಕುಂ,

ಮೇಲ್ಕಂಡ ಖಾಜಾ ಅಬ್ದುಲ್‌ರಹಿಂಸಾಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟ್ ರೂಬರೂ ಅರ್ಜೀದಾರನನ್ನು ದರ್ಯಾಫ್ತೀ ಮಾಡಲ್ಪಟ್ಟಿತು. ಈ ಕೆಳಗೆ ನಮೂದು ಮಾಡಲ್ಪಡುವ ದೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—ಇದಕ್ಕೆ ಹಚ್ಚಿಯಿರುವ ಪಟ್ಟಿಯಲ್ಲಿ ಬರೆದಿದೆ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಖಾಜಾ ಅಬ್ದುಲ್‌ರಹಿಂಸಾಬಿಯು ಹೊಂ[illegible]ದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ 1895ನೇ ಇಸವಿ ನವೆಂಬರ್ ತಿಂಗಳ 7ನೇ ತಾರೀಖಿನಲ್ಲಿ ಕೋರ್ಟ್ ಮೊಹರಿನಿಂ ನಮ್ಮ ದಸ್ತಖತ್ತಿನ ಕೊಡಲ್ಪಟ್ಟಿತು.

ರುಜುವಾತಾದ ಸಾಲದಪಟ್ಟಿ.

ನಂಬರು.	ದೇಣೇದಾರರು ಅಥವಾ ದಾವಾದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ರುಜುವಾತಾದ ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರವಿ ಯೇನಾದರೂ ಇದ್ದರೆ.	ಷರಾ.
		ರೂ. ಅ. ಪೈ.			
1	ಬೆಂಗಳೂರು ಶೀಗೇಪೇಟೆಯಲ್ಲಿರುವ ಮಾಲೂರು ಯಲ್ಲಪ್ಪ. ..	58 12 0		ಬೆಂಗಳೂರು ಮುನ್ಸಫ್ ಕೋರ್ಟ್ 1894-95ನೇ ಇಸವಿ ಜಾರಿ 2897ನೇ ನಂ. ವಾರಂಟಿನಲ್ಲಿ ಕಂಡ ಮೊಬಲಗು ಡಿಕ್ರಿ ಮೊಬಲಗು	
2	ಹಾಜಿ ಹೈದರ್‌ಖಾನ್ ಅಂಡ್ ಕೋ. ..	500 0 0		ಲೆಖ್ಖದ ಬಗೆ	
3	ಹಾಜಿಹಾರೂನ್ ಅಬುಬಾಕರ್‌ಸೇಟ್ ..	1600 0 0		ಡಿಕ್ರಿ ಮೊಬಲಗು	
4	ಸಾಲೆಮಹಮ್ಮದ್‌ಅಲ್ಲಿ ಮಹಮ್ಮದ್‌ಸೇಟ್ ..	500 0 0		ಡಿಟೋ	
5	ಹಾಜಿ ಜಾನ್‌ಮಹಮ್ಮದ್‌ಸೇಟ್ ..	900 0 0		ಲೆಖ್ಖದ ಬಗೆ	
6	ಕೋಟಿ ಮರಿಶಾಮಣ್ಣ ..	2000 0 0		..	

ಸ್ 1895ನೇ ಇಸವಿ ನವೆಂಬರ್ ತಿಂಗಳ 29ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್ತಿನಿಂ ಕೊಡಲ್ಪಟ್ಟಿತು.

1ನೇ ಬೆಂಗಳೂರು ಶೀಗೇಪೇಟೆಯಲ್ಲಿರುವ ಮಾಲೂರು ಯಲ್ಲಪ್ಪ 2ನೇ ಮದರಾಸಿನಲ್ಲಿ ವರದಮುತ್ತಪ್ಪ ಸ್ಟ್ರೀಟಿನಲ್ಲಿರುವ ಹಾಜಿ ಹೈದರ್‌ಖಾನ್ ಅಂಡ್ ಕಂಪೆನಿ, 3ನೇ ಡಿಟೋ ಸ್ಥಳದಲ್ಲಿರುವ ಹಾಜಿ ಹಾರೂನ್ ಅಬೂಬಾಕರ್‌ಸೇಟ್ 4ನೇ ಬೆಂಗಳೂರು ದಂಡು ಇಬ್ರಾಹಿಂ ಸ್ಟ್ರೀಟಿನಲ್ಲಿರುವ ಸಾಲೆಮಹಮ್ಮದ್‌ಅಲ್ಲಿ ಮಹಮ್ಮದ್‌ಸೇಟ್, 5ನೇ ಡಿಟೋ ಜನರಲ್‌ಬಜಾರಿನಲ್ಲಿರುವ ಹಾಜಿ ಜಾನ್‌ಮಹಮ್ಮದ್‌ಸೇಟ್, 6ನೇ ಬೆಂಗಳೂರು ಕುಂಬಾರಪೇಟೆಯಲ್ಲಿರುವ ಕೋಟಿ ಮರಿಶಾಮಣ್ಣ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜಿ.

ಬೆಂಗಳೂರು ಡಿಸ್ಟ್ರಿಕ್ಟು.
ಇಸ್ತಿಹಾರ್‌ನಾಮೆ.

ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫೀಸಿನಿಂದ.

ಮಾಗಡಿ ತಾಲ್ಲೂಕು ಖಾಯಂಗುತ್ತಾ ಕೆಂಪಾಪುರದ ಗ್ರಾಮದ ರೈತರಿಗೆ, ಖಾಯಂಗುತ್ತಿಗೆದಾರಿಗೆ ಸಹಿತ ತಿಳಿಯಪಡಿಸುವದೇನಂದರೆ, ಮಾಗಡಿ ತಾಲ್ಲೂಕು ಕೆಂಪಾಪುರದ ಗ್ರಾಮ ಸರ್ವೆ ಸೆಟ್ಲಮೆಂಟ್ ಬಗ್ಯೆ 1896ನೇ ಇಸವಿ ಜೂನ್ ತಾರೀಖು 15ರಲ್ಲು ಸೋಲೂರು ಮೊಕ್ಕಾಂನಲ್ಲಿ ಗೊತ್ತುಮಾಡಿ ಯಿರುವದರಿಂದ ಸದರೀ ತಾರೀಖಿನಲ್ಲಿ ಈ ಗ್ರಾಮದ ರೈತರು ಮತ್ತು ತಕರಾರುದಾರರು, ಗುತ್ತಿಗೆದಾರರು ಮತ್ತು ಯಿರತಕ್ಕ ಸಂಬಂಧಪಟ್ಟ ವಿಸಿಷ್ಟರೂ ನಮ್ಮ ರೂಬರೂ ಹಾಜರಾಗಿ ಅವರವರ ತಕರಾರುಗಳನ್ನ ತಿಳಿಸಿಕೊಳ್ಳಬೇಕು. ಹಾಗೆ ಹಾಜರು ಆಗದೆ ತಪ್ಪಿದರೆ ಸದರೀ ವ್ಯಾಳೆ ಹಾಜರಿದ್ದ ಪ್ರೆಸ್ತಿದರ ಹ್ಯಾಗೋ ಅದೇರೀತಿಲಿ ಫೈಸಲ್ಮಾಡುವದು. ನಂತರ ಬರುವ ತಕರಾರುಗಳು ಅಂಗೀಕರಿಸಲಾಗದು.

ಬತಾರೀಖು 18ನೇ ಮೇ 1896ನೇ ಇಸವಿ.

ಕೆ. ಬಿ. ಪುಟ್ಟಣಶೆಟ್ಟಿ,
ಸಬ್ ಡಿವಿಜನ್ ಆಫೀಸರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇಸ್ತಿಹಾರ್‌ನಾಮಾ.

ತಾರೀಖು 26ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸನ್ 1896ನೇ ಇಸವಿ ಜುಲೈ 7ನೇ ತಾರೀಖು ಲಾಗಾಯತು 1898ನೇ ಇಸವಿ ಜುಲೈ 6ರ ವರೆಗೆ ಯರಡು ವರುಷಗಳ ವಾಟ್ಟಿಗೆ ಸಿಟಿ ಮಜಕೂರಿನಲ್ಲಿ ಮ್ಯುನಿಸಿಪಲ್ ಲಾಂದ್ರಗಳಿಗೆ ದೀಪಾ ಹತ್ತಿಸತಕ್ಕ ಬಗ್ಗೆ ಮೊಹರುಮಾಡಿದ ದರಖಾಸ್ತುಗಳನ್ನ ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ, 1896ನೇ ಜೂನ್ 15ನೇ ತಾರೀಖು ಸೋಮವಾರದೊಳಗಾಗಿ ಕೊಡಬಹುದು.

ದರಖಾಸ್ತು ಲಕೋಟೆಗಳ ಮೇಲ್ಭಾಗದಲ್ಲಿ "ಬೆಂಗಳೂರು ಸಿಟಿಯಲ್ಲಿ ದೀಪಾ ಹತ್ತಿಸತಕ್ಕ ಬಗ್ಗೆ ಟೆಂಡರ್" ಯಂದು ಬರದು ಸಿಟಿ ಮ್ಯುನಿಸಿಪಾಲಿಟಿ ಪ್ರಸಿಡೆಂಟರವರಿಗೆ ಅಡ್ರಸ್ ಮಾಡಲ್ಪಡತಕ್ಕದ್ದು. ಮತ್ತು ದರಖಾಸ್ತುಗಳ ಸಂಗಡ ನಗದಾಗಲಿ, ಯಾ ಕರೆನ್ಸಿ ನೋಟುಗಲಿ 250 ರೂಪಾಯಿ ಹಾಜರುಮಾಡತಕ್ಕದ್ದು. (ಟೆಂಡರ್ ಮಂಜೂರಾಗದೆ ಇರುವ ಪಕ್ಷಕ್ಕೆ ಈ ಮೊಬಲಗು ವಾಪಸ್ ಮಾಡಲ್ಪಡುತ್ತೆ.) ಮತ್ತು ದರಖಾಸ್ತುಗಳಲ್ಲಿ ಮಾಹೆವಾರು ಪ್ರತಿ ವೊಂದು ಲ್ಯಾಂಪಿಗೂ ತಗಲುವ ರೇಟನ್ನ ನಮೂದಿಸತಕ್ಕದ್ದು.

ಈಗ ಸುಮಾರು 850 ಲಾಂದ್ರಗಳು ಇರುತ್ತವೆ ಇವು ಮುಂದೆ 1,000 ಲಾಂದ್ರಗಳ ವರಿಗೂ ಜಾಸ್ತಿ ಆಗಬಹುದು. ಪ್ರತಿ ದಿನದಲ್ಲಿಯೂ ಸಾಯಂಕಾಲ 6 ಘಂಟೆ ಲಾಗಾಯತು ಬೆಳಗಿನಝಾಮದ 4 ಘಂಟೆ ವರಿಗೂ ದೀಪಗಳು ವುರಿಯುತ್ತಿರಬೇಕು. ಬತ್ತಿ ಆಗಲಾ 1 ಇಂಚ್ ಇರತಕ್ಕದ್ದು, ಮತ್ತು ಕೆರೋಸೀನ್ ಆಯಿಲ್ ಯಂಬ 125 ಡಿಗ್ರಿಗಳ ಪ್ರಕಾಶ ವುಳ್ಳದ್ದನ್ನ ಉಪಯೋಗಿಸತಕ್ಕದ್ದು. 18 ಮೋಂಬತ್ತಿ ಬೆಳಕಿಗೆ ಸಮನಾದ ಬೆಳಕು ಕೊಡತಕ್ಕ ಬರನರ್ ಯಿಡತಕ್ಕದ್ದು.

ಕಂಟ್ರಾಕ್ಟಿಗೆ ಸಂಬಂಧಪಟ್ಟ ಇತರೇ ಷರತ್ತುಗಳನ್ನ ಮ್ಯುನಿಸಿಪಲ್ ಆಫೀಸಿನಲ್ಲಿ ಬರಹ ಮೂಲಕವಾಗಿಯಾಗಲಿ, ರೂಬರೂ ಹಾಜರಾಗಿಯಾಗಲಿ ತಿಳದುಕೊಳ್ಳಬಹುದು.

ತಾರೀಖು 8ನೇ ಜೂನ್ 1896.

ಮ್ಯುನಿಸಿಪಲ್ ಕಮ್ಮಿಷನರಾಗಲಿಕ್ಕೆ ಅರಹರೆಂತ 1896ನೇ ಇಸವಿ ಮೇ 28 ಮತ್ತು ಜೂನ್ 4ನೇ ಮರ್ಕ್ಯುಮಿನ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುವ ಜನಗಳ ಪೈಕಿ ಯಾರ್ಯಾರಿಗೆ ಈ ಕೆಲಸಕ್ಕೆ ಸೇರಲೂ ಯಿಷ್ಟವಿರುತ್ತೋ ಅಂಥಾವರು 1891ನೇ ಇಸವಿ ಡಿಸೆಂಬರ 3ನೇ ಮರ್ಕ್ಯುಮಿನ ಯಲೆಕ್ಷನ್ ರೂಲ್ಸ್ 11ನೇ ಪ್ಯಾರಾ ಅನುಸರಿಸಿ, 1896ನೇ ಇಸವಿ ಜೂನ್ 22ನೇ ತಾರೀಖಿನ ವೊಳಗಾಗಿ ಪ್ರಸಿಡೆಂಟರಿಗೆ ಬರದುಕೊಳ್ಳಬೇಕೆಂತ ಅಪೇಕ್ಷಿಸೋಣಾಗಿ ಇದೆ.

ಟ. ಟಿ. ಲೆನಾರಡ್,
ಪ್ರಸಿಡೆಂಟ್,

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರನಾಮೆ.

ತಾರೀಖು 21ನೇ ಮೇ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕಿದಾರರಾದ ನರಸಿಂಗರಾಯನಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಫಾರಫೀಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಅಮಲ್ದಾರ ಕಚೇರೀಲಿ 1896ನೇ ಜೂನ್ 29ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

ಹರಾಜ್ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಸ್ತಿ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜದಾರನು 1895—96ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 135—2—0 ರೂಪಾಯಿ ಆಗಿರುತ್ತೆ.

3. ಹರಾಜ್ ಕಾಲದಲ್ಲಿ ಹರಾಜದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲೂ ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜ್ ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜ್ ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡು ತ್ತಾರೆಯೋ ಯಾ ಏಜಂಟ ಯಾ ಮುಖಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕಂ ತಲೂ, ಇತರರಿಗೋಸ್ಕರ ಮುಖಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾ ಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿ ಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನ ವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರು ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಗಾ ಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕು ಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ಜಿಲ್ಲೆ.	ತಾಲ್ಲೂಕು.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಖ್ಸೀಲ. ಕಟ್ಟಡಗಳು. ಸ್ವತ್ತಿನ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ನಂಬರ್ ಅಥವಾ ಗದ್ದೆ ಹೆಸರು.	ಜಮೀನು. ಭೂಮಿಯ ಕ್ಲಾಸು ಅಥವಾ ರೀತಿ.	ಜಮೀನು. ವಿಸ್ತೀರ್ಣ.		ಜಮೀನು. ಕಂದಾಯ.			ಸರಕಾರಕ್ಕೆ ಬರತಕ್ಕ ಬಾಕಿ ಮೊಬಲಗು.		
1	2	3	4	5	6	7	8	9		10			11		
					ರೂ.ಆ.ಪೈ.			ಎ.	ಕೆ.	ರೂ.	ಆ.	ಪೈ.	ರೂ.	ಆ.	ಪೈ.
ಕೋಲಾರು.	ಸಿಡ್ಲಘಟ್ಟ.	ಬಚ್ಚಹಳ್ಳಿ ಜೋಡಿ ಗ್ರಾಮ.	ನರಸಿಂಗರಾವ.		0	ಪೂರಾ ಗ್ರಾಮ.	ಖುಷ್ಕಿ	145	71	195	13	7	135	2	0
							ತರಿ	20	92						
							ಬಾಗಾಯಿತು	1	23						
							ಟೋಟಲ್.	167	86						
							ಸಾಲಿಯಾನಾ ಸರ್ಕಾರಕ್ಕೆ ಬರಬೇಕಾದ್ದು			135	2	0			

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 25ನೇ ಮೇ 1896.

1. ಕಂದಾಯದ ಬಾಕಿದಾರರಾದ ಪೂರ್ಣಪ್ಪ ವಗೈರೆರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಫಾರಫಿಟ್ಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಅಮಲ್‌ದಾರ್ರ ಕಚೇರಿಯಲ್ಲಿ 1896ನೇ ಜುಲೈ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ದಿವಾ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಸ್ತಿ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರಿ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರೆಗೆ 64—7—11 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ರೂಪಾಯಿಯನ್ನು ಡಿಪಾಜಿಟ್ ಹಾಜರ್‌ಮಾಡಬೇಕಾಗಿರುತ್ತೆ. ಅದುಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್‌ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ ಮೊಬಲಗು ಹಾಜರ್‌ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜ್ ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುಖ್ತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್‌ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‌ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್‌ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ ಮಾಡಲ್ಪಟ್ಟ ಕೂಡ್ಲೇ ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿ ಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.			ಜಮೀನು. ಸಂಬಂಧ ಜಮೀನಿನ ವಿವರ.	ಖುಷ್ಕಿ ತರಿ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಖಂಡಿ.	ಕೊ.	ರೂ.	ಆ.	ಪೈ.	ರೂ.	ಆ.	ಪೈ.
ಕೋಲಾರ.	ಸುಗಟೂರು.	ಬೆಳಗಾನಹಳ್ಳಿ ಹೋಬಳಿ ಗ್ರಾಮ.	ಪೂಜಪ್ಪ	..	..	..	..	ಗ್ರಾಮದಲ್ಲಿ ಬಾಕಿದಾರನಿಗೆ ಇರುವ ಪೂರಾ ಹಿಸ್ಸೆ	ಖುಷ್ಕೀ ತರೀ ಬಾಗಾಯತು	4	18¼	43	5	4	24	1	11
									ಸಾಲೀನಾ ಸರ್ಕಾರಕ್ಕೆ ಕೊಡತಕ್ಕದ್ದು			23	13	11			
	ವೇಮಗಲ್.	ಲಿಂಗಾಪುರ ಕಾಡುಗಾನಹಳ್ಳಿ	ನರಸಾವಧಾನಿ	..	...	..	..	ಪೂರಾ ಗ್ರಾಮ	ಖುಷ್ಕೀ ತರೀ ಬಾಗಾಯತು	10	11	48	0	0	40	6	0
									ಸಾಲೀನಾ ಸರ್ಕಾರಕ್ಕೆ ಕೊಡತಕ್ಕದ್ದು			55	6	0			
												ಜುಮ್ಲಾ			64	7	[illegible]

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 19ನೇ ಮೇ 1896.

1\. ಕಂದಾಯದ ಬಾಕೀದಾರನಾದ ಶೀನಪ್ಪ ವಗೈರೇರಿಂದ ಬರಬೇಕಾದಜಮಿಾ ಕಂದಾಯದ ಬಾಕಿಗಾಗಿ ಫಾರಫಿಟ್ಟಾಗಿದರುವ ಅಡಿಯಲ್ಲಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಅಮಲ್‌ದಾರ್ರ ಕಚೇರಿ 1896 ಜೂನ್ 29ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಾ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜೆಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2\. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಅಡಿಯಲ್ಲಿ ಕಾಣಿಸಿರುವ ತಖ್ತೇಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 204—11—0 ರೂಪಾಯಿ ಆಗಿರುತ್ತೆ.

3\. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿ ರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು ದಿವಸಗಳಲ್ಲಿ ಪಾವತಿ ಮಾಡ ಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದು ಕೊಳ್ಳಲು ಗುರಿಯಾಗುತ್ತಾನೆ.

4\. ಅಂತಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5\. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲ್‌ಗಳು ತಿರಸ್ಕರಿಸಲ್ಪಡಬಹುದು.

6\. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕೀಯಲ್ಲಿ ಖಂಡಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜ್ ನಿಲ್ಲಿಸಲ್ಪಡುತ್ತೆ.

7. ಹರಾಜ್ ಡೆಪ್ಯುಟಿ ಕಮಿಷ್ನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದ ಮೇಲೆ ಡೆಪ್ಯುಟಿ ಕಮಿಷ್ನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜ್‌ದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜ್‌ದಾರನ ಹೆಸರಿನಲ್ಲಿ ರಜಿಸ್ಟರ ಮಾಡಲ್ಪಟ್ಟು ಡೆಪ್ಯುಟಿ ಕಮಿಷ್ನರವರಿಂದ ಸೈನ್ ಮೊಹರ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯ್ತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷ್ನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್‌ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.			ಜಮೀನು. ನಂಬರು ಅಥವಾ ಜಮೀನಿನ ಹೆಸರು.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.		
1	2	3	4	5	6			7	8	9		10			11		
					ರೂ.	ಆ.	ಪೈ.			ಎ.	ಗುಂ.	ರೂ.	ಆ.	ಪೈ.	ರೂ.	ಆ.	ಪೈ.
ಕೋಲಾರ.	ವೇಮಗಲ್.	ಗರಿಜಂಪೇಟೆ ಕಾಯಂಗುತ್ತಾ	ಶೀನಪ್ಪ ಮತ್ತು ರುಕ್ಮಿಣಿ ಅಮ್ಮ.					ಪೂರಾ ಗ್ರಾಮ.	ಖುಷ್ಕಿ ತರಿ ಬಾಗಾಯತು	14	18½	80	9	8	76	0	1
									ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ್ದು.			76	0	1			
		ಬಾಲನಾಗನಹಳ್ಳಿ ಕಾಯಂಗುತ್ತಾ						ಪೂರಾ ಗ್ರಾಮ.	ಖುಷ್ಕಿ ತರಿ ಬಾಗಾಯತು	10	3½	71	13	0	61	7	10
									ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ್ದು.			61	7	10			
	ಸುಗಟೂರು.	ಸೋಮಾಂಬುಧಿ ಅಗ್ರಹಾರ.	1 ಶ್ರೀಕಂಠಭಟ್ಟ. 2 ನಂಜುಂಡಭಟ್ಟ. 3 ಮ. ಸುಬ್ಬಾಭಟ್ಟ.					ಗ್ರಾಮದಲ್ಲಿ ಬಾಕೀದಾರರಿಗೆ ಇರುವ ಹಿಸ್ಸೆ.	ಖುಷ್ಕಿ ತರಿ ಬಾಗಾಯತು	55	2½	350	3	9	67	3	1
									ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ್ದು.			67	3	1			
															204	11	0

ಬಿ. ಜೆ. ಕೃಷ್ಣಯ್ಯಂಗಾರ್,
ಆ|| ಡೆಪ್ಯುಟಿ ಕಮಿಷ್ನರ.

ತುಮಕೂರು ಡಿಸ್ಟ್ರಿಕ್ಟ್.

1896ನೇ ಇಸವಿ ಮೇ ತಾರೀಖು ರಲ್ಲಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಮತ್ತು ಮದ್ದಗಿರಿ ಡಿಪೋದಲ್ಲಿರುವ ಈ ಕೆಳಗೆ ನಮೂದಾಗುವ ಸಾಮಾನುಗಳನ್ನು 1896ನೇ ಇಸವಿ ಜೂನ್ 15ರಲ್ಲು ತುಮಕೂರು ಡಿಪೋದಲ್ಲಿಯೂ 19ರಲ್ಲಿ ಮದ್ದಗಿರಿ ಡಿಪೋದಲ್ಲೂ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜ ಮಾಡಲ್ಪಡುತ್ತೆ.

ತುಮಕೂರು ಡಿಪೋ.

ತರಹೆ.	ಸಂಖೆ.	ಸಲೆ. ಅಡಿ.	ಅಂಗುಲ.	ಸೆಂಟ್ಸ್.	ಷರಾ.
ತ್ಯಾಗ	226	159	5	..	ಹೆಚ್ಚು ಕಡಮೆ.
ಅಳಲೇಕಾಯಿ	32 ಮಣ	...	...	...	ಡಿಟೋ

ಮದ್ದಗಿರಿ ಡಿಪೋ.

ತ್ಯಾಗ	365	320	3	3	ಡಿಟೋ
ಹುಲವೆ	1	..	8	0	

ಹರಾಜ ಮೊಬಲಗು ಮವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜದಾರನ್ನೇ ಹೊಂದಿರುತ್ತೆ.

ಷರತ್ತುಗಳು.—ಹರಾಜ ಖೈದಾದ ಕೂಡಲೆ ಕಾಲುಹಿಸ್ಸೆ ಮೊಬಲಗು ಕೇವಣಿ ತಲೆಕ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಹರಾಜ ತಾರೀಖು ಲಾಗಾಯತು 1 ವಾರದ ವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರ ಹರಾಜ ಮಾಡಲ್ಪಡುವದಲ್ಲದೆ ಲುಕಸಾನಿಗೆ ಮೊದಲು ಹರಾಜದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳನ್ನೆಲ್ಲಾ ಹರಾಜ ತಾರೀಖು ಲಾಗಾಯತು 10 ದಿವಸದ ವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಪ್ಶೀಲಗಳಿಗೆ 1895ನೇ ಇಸವಿ ಏಪ್ರಿಲ್ 25ನೇ ಮರ್ಕುಂ ಮೈಸೂರ ಗೆಜೆಟ್ 1ನೇ ಭಾಗದಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್ಕುಂ 15229ನೇ ನಂಬರ ಗವರ್ನಮೆಂಟ್ ನೋಟಿಫಿಕೇಷನ್ ನೋಡಿ.

ನೋಟಿಫಿಕೇಷನ್.

1896ನೇ ಇಸವಿ ಮೇ ಮಾಹೆ 24ನೇ ತಾರೀಖು.

ಮೈಸೂರು ದೇಶದ ಫಾರೆಸ್ಟು ಇಲಾಖಾ ಕನಸರವೇಟರ ಸಾಹೇಬರವರ 1896ನೇ ಇಸವಿ ಮೇ ಮಾಹೆ 16ನೇ ತಾರೀಖಿನ 3845—153ನೇ ನಂಬರ ಡಾಕಿಟ ಅನುಸರಿಸಿ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮದ್ದಗಿರಿ ತಾಲ್ಲೂಕಿನಲ್ಲಿರುವ ಈ ಕೆಳಗೆ ನಮೂದು ಆಗಿರುವ ಡಿಸ್ಟ್ರಿಕ್ಟ್ ಜಂಗಲ್‌ಗಳು ಇನ್ನೊಂದು ಹುಕುಂ ಕೊಡುವ ಪರಿಯಂತ್ರ ನಾದ್ಯೆ ಮರ ಮುಟ್ಟು ಮುಂತಾದ ಸಾಮಾನುಗಳನ್ನ ಇವುಗಳಲ್ಲಿ ಯಾರೊಬ್ಬರೂ ಕಡಿಯದಂತೆ ಬಂದು ಮಾಡಲ್ಪಟ್ಟಿವೆ.

ಡಿಸ್ಟ್ರಿಕ್ಟ್ ಜಂಗಲ್ ಇರುವ ಹೋಬಳಿ ಹೆಸರು.	ಡಿಸ್ಟ್ರಿಕ್ಟ್ ಜಂಗಲ್ ಹೆಸರು.
ಮದ್ದಗಿರಿ.	(1) ಕಟ್ಟಹಳ್ಳಿ
	(2) ಬಿಗ್ಗಬೆಟ್ಟ
	(3) ಕನಗೊಂಡಬೆಟ್ಟ
	(4) ಹೊಸಹಳ್ಳಿ
	(5) ತಾಯಿಗೊಂಡನಹಳ್ಳಿ
	(6) ಗುರ್ರಮ್ಮನಹಳ್ಳಿ
	(7) ಚಿನಕವಜ್ರ

ಎಂ. ವೆಂಕಟನಾರಣಪ್ಪ,
ಡಿ| ಫಾರೆಸ್ಟು ಆಫಿಸರ್.

ತಾರೀಖು 2ನೇ ಜೂ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

